# ಹಂಪಿ ಸಂಪುಟ

## ಕುಲಪತಿಗಳ ಮಾತು

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ ಗಟ್ಟಿಗೊಳಿಸುವ ಹರಡುವ ಕಾಯಕವನ್ನು ಕಳೆದ ಹದಿನಾಲ್ಕು ವರುಷಗಳಲ್ಲಿ ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಕರ್ನಾಟಕ ಸರ್ಕಾರವು ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ನಡೆಸುತ್ತಿರುವ ಹಂಪಿ ಉತ್ಸವದಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ತನ್ನ ಸಾಂಸ್ಕೃತಿಕ ಶರೀರದ ಭಾಗವನ್ನಾಗಿಸಿ ಹಂಪಿಗೆ ಸಂಬಂಧಿಸಿದ ಸಾಹಿತ್ಯ ಕೃತಿಯೊಂದನ್ನು ಪ್ರಕಟಿಸುವ ಸತ್ಪರಂಪರೆಯಲ್ಲಿ ಈಗಾಗಲೇ ಬೃಹದ್ದೇಶಿ, ಹರಿಹರನ ರಗಳೆಗಳು, ಸಾವಿರ ಕೀರ್ತನೆಗಳು, ರಾಘವಾಂಕನ ಸಮಗ್ರಕಾವ್ಯ ಮತ್ತು ಕಳೆದ ವರ್ಷ ಪ್ರಕಟಿಸಿದ ಪ್ರವಾಸಿ ಕಂಡ ವಿಜಯನಗರ ಕೃತಿಗಳು ಪ್ರಕಟವಾಗಿವೆ. ಈ ವರ್ಷದ ಹಂಪಿ ಉತ್ಸವದಲ್ಲಿ ಹಂಪಿಗೆ ಸಂಬಂಧಿಸಿದ ಕಲೆ, ಕ್ರೀಡೆ ಮತ್ತು ಕೌಶಲ ಕ್ಷೇತ್ರಗಳಲ್ಲಿ ಈಗಾಗಲೇ ಪ್ರಕಟಗೊಂಡಿರುವ ಆಯ್ದ ಲೇಖನಗಳ ಒಂದು ಮಹಾ ಸಂಪುಟವನ್ನು ಹೊರತರಲಾಗುತ್ತಿದೆ.

ಹಂಪಿಗೆ ಸಂಬಂಧಿಸಿದ ಕಲೆ, ಕ್ರೀಡೆ ಮತ್ತು ಕೌಶಲಗಳನ್ನು ಒಳಗೊಂಡ ಇಂಥ ಮಹಾ ಸಂಪುಟವೊಂದು ಪ್ರಕಟವಾಗುತ್ತಿರುವುದು ಕನ್ನಡ ವಿಶ್ವ ವಿದ್ಯಾಲಯಕ್ಕೆ ಗೌರವದ ಸಂಗತಿ. ಇಂಥದೊಂದು ಗ್ರಂಥದ ಅಗತ್ಯವಿದೆಯೆಂದು ಸೂಚಿಸಿದವರು ಸನ್ಮಾನ್ಯರಾದ ಶ್ರೀ ಎಂ.ಪಿ. ಪ್ರಕಾಶ ಅವರೇ. ಅವರ ಸೂಚನೆಯನ್ನು ಅನುಸರಿಸಿ ಈ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಇಂಥದೊಂದು ಮಹತ್ವದ ಸಾರ್ವಕಾಲೀನ ಪ್ರಕಟಣೆಗೆ ಅವಕಾಶ ಕಲ್ಪಿಸಿದ ಮತ್ತು ಸಂಪೂರ್ಣ ಆರ್ಥಿಕ ನೆರವು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ವಿಶೇಷವಾಗಿ ಹಂಪಿ ಉತ್ಸವ ಸಮಿತಿಯ ಅಧ್ಯಕ್ಷರೂ ಸಾಹಿತಿಗಳು ಸಂಸ್ಕೃತಿಪ್ರಿಯರೂ ಆಗಿರುವ ನಮ್ಮ ನೆಚ್ಚಿನ ಸನ್ಮಾನ್ಯ ಗೃಹ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್ ಅವರಿಗೆ ನಮ್ಮ ವಿಶೇಷ ಕೃತಜ್ಞತೆಗಳು. ಈ ಪ್ರಕಟಣೆಗೆ ನೆರವು ದೊರೆಯಲು ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಯುಕ್ತರಾದ ಶ್ರೀ ನಿರಂಜನ್, ನಿರ್ದೇಶಕರಾದ ಶ್ರೀ ವೆಂ. ಶ್ರೀನಿವಾಸ್ ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಇವರೆಲ್ಲರಿಗೆ ನಮ್ಮ ವಂದನೆಗಳು.

ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸುತ್ತಿರುವ ಹಂಪಿ ಸಂಪುಟವು ಹಂಪಿಗೆ ಸಂಬಂಧಿಸಿದ ಕಲೆ, ಕ್ರೀಡೆ ಮತ್ತು ಕೌಶಲ ಕ್ಷೇತ್ರಗಳಲ್ಲಿ ಈಗಾಗಲೇ ಪ್ರಕಟಗೊಂಡಿರುವ ಆಯ್ದ ಲೇಖನಗಳ ಸಂಕಲನವಾಗಿದೆ. ಹಂಪಿಯು ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರವಾಗಿ ಇತಿಹಾಸದಲ್ಲಿ ಮತ್ತು ವರ್ತಮಾನದಲ್ಲಿ ಬಹುರೂಪಿ ಆಯಾಮಗಳನ್ನು ಹೊಂದಿದೆ. ಹೀಗಾಗಿ 'ಕಲೆ' ಎನ್ನುವುದು ಪರಂಪರಾಗತ ಕಟ್ಟಡ ನಿರ್ಮಾಣದಿಂದ ತೊಡಗಿ ದೇಸಿ ತಂತ್ರಜ್ಞಾನವನ್ನು ಒಳಗೊಂಡ ತಾಂತ್ರಿಕ ಪರಿಣತಿಯ ನೀರಾವರಿ ಕಾಲುವೆಗಳು, ವಸತಿಗೃಹಗಳು, ಸ್ನಾನಗೃಹಗಳು, ದಿಬ್ಬಗಳು ಮುಂತಾದ ಅನೇಕ ರಚನೆಗಳನ್ನು ಒಳಗೊಂಡಿದೆ. ಚಿತ್ರಕಲೆಗೆ ಸಂಬಂಧಿಸಿದಂತೆ ಪ್ರಾಗೈತಿಹಾಸಿಕ ರೇಖಾಚಿತ್ರಗಳು ದೊರೆಯುವ ಒಂದು ಅಪೂರ್ವ ಕೇಂದ್ರವಾಗಿ ಹಂಪಿಗೆ ವಿಶೇಷ ಮಹತ್ವವಿದೆ. ವಿಜಯನಗರ ಕಾಲದ ಭಿತ್ತಿಚಿತ್ರಗಳವರೆಗೆ ಕರ್ನಾಟಕದ ಚಿತ್ರಕಲೆಯ ಇತಿಹಾಸದ ಅನೇಕ ನೆಲೆಗಳಿಗೆ ಇಲ್ಲಿ ಸಾಕ್ಷಿಗಳು ದೊರೆಯುತ್ತವೆ. ದೇಸಿತಂತ್ರಜ್ಞಾನ ಎಂದು ಕರೆಯಲಾಗುವ ಸ್ಥಳೀಯ

ಕೌಶಲಗಳಿಗೆ ಸಂಬಂಧಿಸಿದ ಅಧ್ಯಯನಾತ್ಮಕ ಲೇಖನಗಳು ಇಲ್ಲಿ ಸೇರ್ಪಡೆಯಾಗಿವೆ ನೀರಾವರಿ, ನಗರರಚನೆ, ಸಾರಿಗೆ ವ್ಯವಸ್ಥೆ, ರಕ್ಷಣಾವಾಸ್ತು ಹೀಗೆ ಆಧುನಿಕ ತಾಂತ್ರಿಕ ಪರಿಣತಿಗೆ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಕ್ರಿಯಾಶೀಲವಾಗಿದ್ದ ಕೌಶಲಗಳು ಇಲ್ಲಿಯ ಲೇಖನಗಳಲ್ಲಿ ಅನಾವರಣಗೊಂಡಿವೆ. ವಿಜಯನಗರ ಪೂರ್ವದಲ್ಲಿ ಮತ್ತು ಸಮಕಾಲೀನ ಸಂದರ್ಭದ ಹಂಪಿ ಪರಿಸರದಲ್ಲಿ ಕ್ರಿಯಾತ್ಮಕವಾಗಿದ್ದ ಅನೇಕ ಜನಪದ ಕ್ರೀಡೆಗಳಿಗೆ ಸಂಬಂಧಿಸಿದ ಲೇಖನಗಳು ಇಲ್ಲಿ ಸಂಕಲನಗೊಂಡಿವೆ. ಇಂತಹ ಸಂಪುಟವು ಅತಿವ್ಯಾಪ್ತಿಯ ಅವಕಾಶಗಳು ಹೊಂದುವುದರಿಂದಾಗಿ ಇದಕ್ಕೆ ಒಂದು ಮಿತಿಯನ್ನು ಕಲ್ಪಿಸಿಕೊಂಡು ಪ್ರಸ್ತುತ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಸಾವಿರಾರು ಪುಟಗಳ ಹರಹುಳ್ಳ ಇಂತಹ ವಿಷಯಕ್ಕೆ ಸಂಬಂಧಿಸಿದ ಬರೆಹಗಳೆಲ್ಲವನ್ನು ಇಲ್ಲಿ ಸೇರಿಸುವುದು ಅಸಾಧ್ಯವಾದ ಸಂಗತಿ. ಆದರೆ, ಇಲ್ಲಿ ಸಂಕಲನಗೊಂಡಿರುವ ಲೇಖನಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾತಿನಿಧಿಕವಾಗಿವೆ ಎಂಬ ವಿಶ್ವಾಸ ನಮ್ಮದು. ಹಂಪಿಯನ್ನು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ನಮ್ಮ ಮಾನಸಿಕ ರಾಜಧಾನಿಯನ್ನಾಗಿ ಕಲ್ಪಿಸಿಕೊಳ್ಳಲು ಇಲ್ಲಿಯ ಲೇಖನಗಳು ಆಕರ ಪರಿಕರಗಳಾಗುತ್ತವೆ ಎಂದು ನಾವು ನಂಬಿದ್ದೇವೆ.

ಇಂಥ ಮಹಾ ಸಂಪುಟವೊಂದನ್ನು ಸಿದ್ಧಪಡಿಸಿದ ಸಂಪಾದಕ ಸಮಿತಿಗೆ ಈ ಸಮಿತಿಯ ಸಂಪಾದಕರಾದ ಡಾ. ದೇವರಕೊಂಡಾರೆಡ್ಡಿ ಅವರ ಪರಿಶ್ರಮ ಹಾಗೂ ವಿದ್ವತ್ತನ್ನು ಈ ಸಂದರ್ಭದಲ್ಲಿ ತುಂಬು ಹೃದಯದಿಂದ ನೆನೆಯುತ್ತೇನೆ. ಸಂಪಾದಕ ಸಮಿತಿಯ ಸದಸ್ಯರಾದ ಡಾ. ಸಿ.ಎಸ್. ವಾಸುದೇವನ್, ಡಾ. ಚಲುವರಾಜು, ಡಾ. ಎಸ್.ವೈ.ಸೋಮಶೇಖರ್, ಡಾ. ಎಂ. ಕೊಟ್ರೇಶ್ ಇವರೆಲ್ಲರು ಲೇಖನಗಳನ್ನು ಆಯುವಲ್ಲಿ, ಕರಡಚ್ಚನ್ನು ತಿದ್ದುವಲ್ಲಿ ಸಂಪಾದಕರೊಡನೆ ಅವಿರತವಾಗಿ ದುಡಿದಿದ್ದಾರೆ. ಈ ಸಂಪುಟದಲ್ಲಿ ಪ್ರಕಟವಾಗಿರುವ ಛಾಯಾಚಿತ್ರಗಳನ್ನು ಡಾ. ಎಸ್.ವೈ. ಸೋಮಶೇಖರ್ ಮತ್ತು ಶ್ರೀ ಗಣೇಶ ಯಾಜಿ ಇವರು ತೆಗೆದುಕೊಟ್ಟಿದ್ದಾರೆ. ಇವರು ಪುಸ್ತಕದ ಅಂದಕ್ಕೆ ಹಾಗೂ ಗ್ರಂಥದ ಮೌಲ್ಯವನ್ನು ತಮ್ಮ ಛಾಯಾಚಿತ್ರಗಳಿಂದ ಹೆಚ್ಚಿಸಿದ್ದಾರೆ. ಕರಡಚ್ಚನ್ನು ತಿದ್ದುವಲ್ಲಿ ಸಹಕರಿಸಿದ ನಮ್ಮ ವಿಶ್ವವಿದ್ಯಾಲಯದ ಡಾ. ಶ್ರೀಧರರಾವ್ ಪಿಸ್ಸೆ- ಇವರೆಲ್ಲರ ಸಲಹೆ-ಸಹಕಾರಗಳಿಗೆ ಕೃತಜ್ಞತೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಪ್ರಸಾರಾಂಗದ ವತಿಯಿಂದ ಆದಷ್ಟು ಬೇಗನೆ ಪ್ರಕಟಿಸಲು ವಿಶೇಷವಾಗಿ ಶ್ರಮಿಸಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಇವರ ಸಹಕಾರವನ್ನು ನಾನು ವಿಶೇಷವಾಗಿ ನೆನೆಯುತ್ತೇನೆ.

**ಬಿ.ಎ.ವಿವೇಕ ರೈ**
ಕುಲಪತಿ

## ಭಾಗ ೧ – ಕಲೆ:

## ೧. ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ (೧)

ಹಂಪಿ ಪ್ರದೇಶವು (ವಿಶೇಷವಾಗಿ ಕೊಪ್ಪಳ, ಗಂಗಾವತಿ ಮತ್ತು ಹೊಸಪೇಟೆ ತಾ.) ಬೆಟ್ಟ ಸಾಲುಗಳಿಂದ ತುಂಬಿದೆ. ತುಂಗಭದ್ರಾನದಿ ತೀರದ ಈ ಪ್ರದೇಶದಲ್ಲಿ ಆಸಾಮಾನ್ಯ ಕಂದು ಇಲ್ಲವೇ ಬೂದು ವರ್ಣದ ಗ್ರಾನೈಟ್ ಶಿಲೆಯ ಬೆಟ್ಟಗಳಿವೆ. ವಿಪರೀತ ಉಷ್ಣ-ಶೀತಗಳ ವೈಪರೀತ್ಯದಿಂದ ಸಾಮಾನ್ಯವಾಗಿ ಈ ಶಿಲೆಯ ದೊಡ್ಡ ಬಂಡೆಗಳು ತಾನಾಗಿಯೇ ಸೀಳಿ ಹೋಗುವುದರಿಂದ ಮತ್ತು ಸವಕಳಿಯಿಂದ ಗವಿ ಕಲ್ಲಾಸರೆಗಳು ಉಂಟಾಗಿವೆ. ಇಂತಹ ಕಲ್ಲಾಸರೆ, ಗವಿಗಳಲ್ಲಿ ವಿರಳವಾಗಿ ವರ್ಣಚಿತ್ರಗಳಿವೆ. ಈ ಪ್ರದೇಶದಲ್ಲಿ ಶಿಲಾ-ತಾಮ್ರಯುಗ (ಕ್ರಿ.ಪೂ.ಸು. ೨೦೦೦-೯೦೦) ಕಬ್ಬಿಣಯುಗದ ಬೃಹತ್ ಶಿಲಾಯುಗ (ಕ್ರಿ.ಪೂ.ಸು. ೧,೨೦೦-೨೦೦) ಮತ್ತು ಇತಿಹಾಸ ಆರಂಭ ಕಾಲ

(ಕ್ರಿ.ಪೂ.ಸು. ೨೦೦ ಕ್ರಿ.ಶ. ೨ನೇ ಶತಮಾನ)ದ ಸಾಂಸ್ಕೃತಿಕ ಅವಶೇಷಗಳುಳ್ಳ ನೆಲೆಗಳು, ಕೊಪ್ಪಳ, ಹಿರೇಬೆಣಕಲ್ ಮೊದಲಾದೆಡೆ ಬೆಳಕಿಗೆ ಬಂದಿದ್ದವು. ಆದರೆ ಇಲ್ಲಿಯ ಬೆಟ್ಟ ಗುಡ್ಡಗಳಲ್ಲಿ ಪ್ರಾಗಿತಿಹಾಸ ಕಾಲದ ಕಲಾಸಂಪತ್ತು ಅಜ್ಞಾತವಾಗಿ ಉಳಿದಿತ್ತು. ೧೯೩೫ರಲ್ಲಿ ಆಂಗ್ಲ ಭೂಗರ್ಭ ತಜ್ಞರಾದ ಲಿಯೊನಾರ್ಡ್ ಮನ್ ರವರು ಪ್ರಥಮವಾಗಿ ಹಿರೇಬೆಣಕಲ್ಲ್‌ನಲ್ಲಿ ಮೂರು ಚಿತ್ರಿತ ಗವಿಗಳನ್ನು ಬೆಳಕಿಗೆ ತಂದರು. ನಂತರ ಪುರಾತತ್ವಜ್ಞ ಡಾ. ಅ. ಸುಂದರರವರು ಮತ್ತಷ್ಟು ಚಿತ್ರಿತ ಗವಿಗಳನ್ನು ಶೋಧಿಸಿದರು ಹಾಗೂ ಲಕ್ಷ್ಮಣ್ ತೆಲಗಾವಿಯವರು, ಆರ್. ಎಂ. ಷಡಕ್ಷರಯ್ಯ, ಬಿ.ಸಿ. ಪಾಟೀಲ್, ಶಂಭುಲಿಂಗಪ್ಪನವರು ಕೆಲವು ನೆಲೆಗಳನ್ನು ಶೋಧಿಸಿದ್ದಾರೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕೈಗೊಂಡ ಅನ್ವೇಷಣೆಯಲ್ಲಿ ಮತ್ತೇ ೭೨ ಗವಿ ಕಲ್ಲಾಸರೆ / ಬಂಡೆ ಚಿತ್ರ ನೆಲೆಗಳು ಶೋಧವಾದವು. ಅವುಗಳಲ್ಲಿ ಗವಿವರ್ಣ ಚಿತ್ರಗಳು ಅಧಿಕವಾಗಿದ್ದರೆ, ಬಯಲು ಬಂಡೆ ಚಿತ್ರಗಳು ವಿರಳವಾಗಿವೆ. ಮತ್ತು ವರ್ಣಚಿತ್ರಗಳಲ್ಲಿ ಕೆಲವು ಇತಿಹಾಸ ಕಾಲದ ನೆಲೆಗಳು ಕಂಡುಬಂದಿದ್ದು, ಚಿತ್ರಗಳ ಪರಂಪರೆಯ ಅಧ್ಯಯನ ಹಿನ್ನೆಲೆಯಲ್ಲಿ ಅವನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪೂರ್ವಶೋಧಿತ ಮತ್ತು ಪ್ರಸ್ತುತ ಶೋಧಿತ ಗವಿ ಕಲ್ಲಾಸರೆಗಳ ವಿವರ ಈ ಕೆಳಗಿನಂತಿವೆ.

## ಕಮಲಾಪುರ

**ನೆಲೆ : ಒಂದು**

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಮುಂದೆ ಈ ನೆಲೆ ಇದೆ. ಇಲ್ಲಿ ವಿಶಾಲ ಬಂಡೆಯ ಪಶ್ಚಿಮ ಇಳಿಜಾರಿನ ಮೇಲೆ ರೇಖಾಚಿತ್ರಗಳನ್ನು ಕೊರೆಯಲಾಗಿದೆ. ಒಟ್ಟು ಎಂಟು ಚಿತ್ರಗಳು ಕಂಡು ಬರುತ್ತವೆ. ಅವುಗಳಲ್ಲಿ ಆರು ಎತ್ತಿನ ಚಿತ್ರಗಳಿವೆ. ಎರಡು ಎತ್ತು ಮತ್ತು ಅವುಗಳ ಮೇಲೆ ಕುಳಿತ ಮನುಷ್ಯನ ಚಿತ್ರಗಳಾಗಿವೆ. ಕೆಳಗಿನ ಎತ್ತುಗಳ ರಚನೆ ವಿಶಿಷ್ಟವಾಗಿದೆ. ಒಂದೇ ದೊಡ್ಡ ಕೋಡು, ದೊಡ್ಡದಾದ ಇಣಿ, ಉದ್ದವಾದ ಬಾಲ, ಕಣ್ಣುಗಳಿದ್ದು, ಚಿತ್ರದಲ್ಲಿ ಪೂರ್ಣತೆ ಇದೆ. ಕೇವಲ ಮೂರು ಸರಳ ರೇಖೆಯಲ್ಲಿ ಎತ್ತಿನ ಚಿತ್ರವನ್ನು ಕೊರೆಯಲಾಗಿದೆ. ಒಂದೇ ರೇಖೆಯಲ್ಲಿ ಮುಂದಿನ ಮೊದಲ ಕಾಲು, ಕತ್ತು, ಬಾಯಿ, ಮುಖ, ಕೋಡು, ಇಣಿ, ಬೆನ್ನುಗಳನ್ನು ಮೂಡಿಸಲಾಗಿದೆ. ಹಿಂದಿನ ಮೊದಲ ಕಾಲನ್ನು ಎರಡನೇ ರೇಖೆಯಲ್ಲಿ ಚಿತ್ರಿಸಲಾಗಿದೆ. ಮೂರನೆಯದು ಬಾಲ ಅದು ಕಾಲಿನಷ್ಟೆ ಉದ್ದವಾಗಿದೆ. ತೀರ ಕೆಳಗೆ ಇರುವ ಎರಡು ಎತ್ತುಗಳು ಉಳಿದವುಗಳಿಗಿಂತ ಆಳತೆಯಲ್ಲಿ ಸ್ವಲ್ಪ ದೊಡ್ಡ ಪ್ರಮಾಣದಲ್ಲಿವೆ (೦.೬೭ ಮೀ ಅಗಲ x೦.೫೩ ಎತ್ತರ ಮತ್ತು ೦.೩೫ ೦.೫೮ ಮೀ). ಮೇಲಿನ ಚಿತ್ರಗಳು ಸ್ವಲ್ಪ ಅಸ್ಪಷ್ಟವಾಗಿವೆ.

**ನೆಲೆ : ಎರಡು**

ಕನ್ನಡ ವಿಶ್ವವಿದ್ಯಾಲಯದ ಪೂರ್ವಬದಿಯ ಬಯಲಿನ ಒಂಟಿಕಲ್ಲು ಗುಂಡಿನಲ್ಲಿದೆ ಒಂಟಿಕಲ್ಲು ಗುಂಡಿನ ಕಲ್ಲಾಸರೆಯಲ್ಲಿ ಕಡವೆಯ ವರ್ಣಚಿತ್ರವಿದೆ. ಆ ಗುಂಡಿನ ಕೆಳಗಿನ ಬಂಡೆಗಲ್ಲಿನಲ್ಲಿ ಒಂದು ಆಕೃತಿ ಮತ್ತು ಎರಡು ಎತ್ತು ಒಟ್ಟು ಮೂರು ಚಿತ್ರಗಳು ಕೊರೆಯಲ್ಪಟ್ಟಿವೆ. ಒಂದರ ಹಿಂದೆ ಒಂದರಂತೆ ಸಾಲಾಗಿ ನಿಂತಿರುವ ಎರಡು ಎತ್ತುಗಳ ಮುಂಭಾಗದಲ್ಲಿ ಒಂದು ವಿಶಿಷ್ಟ ಚಿತ್ರವನ್ನು ಕೊರೆಯಲಾಗಿದೆ. ಒಂದು ವೃತ್ತವಿದ್ದು, ಅದರ ಸರಿ ಸಮ ಅರ್ಧಭಾಗದಲ್ಲಿ ಮೇಲಿನಿಂದ ಒಂದು ಸರಳ ರೇಖೆ ಎಳೆಯಲಾಗಿದೆ. ಆ ರೇಖೆ ವೃತ್ತವನ್ನು ದಾಟಿ ಸು. ೧೦ ಸೆ.ಮೀ. ಕೆಳಗಿನವರೆಗೆ ಇದೆ. ವೃತ್ತದ ಮೇಲಿನ ಬಲ ಮೂಲೆಯ ರೇಖೆಗೆ ತಾಗಿ ಅರೆ ವೃತ್ತಾಕಾರ ಇದೆ.

ಎತ್ತಿನ ಚಿತ್ರಗಳು ಸರಳ ರೇಖೆಯಲ್ಲಿವೆ. ಮುಖ ತ್ರಿಕೋನಾಕಾರದಲ್ಲಿದೆ. ಅದರ ಮೇಲ್ಗಡೆ ಕೋಡುಗಳನ್ನು ತೋರಿಸಲಾಗಿದೆ. ಇಣಿ ಬಾಲ ಸಹಜವಾಗಿವೆ. ಕಾಲುಗಳು ರಚನೆ ವಿಶೇಷವಾಗಿದೆ. ಮುಮದಿನ ಮೊದಲ ಕಾಲು ಕತ್ತಿನಿಂದ ಒಂದು ನೇರ ರೇಖೆಯನ್ನು ಎಳೆದು ತೋರಿಸಿದ್ದಾರೆ. ಹಿಂದಿನ ಕಾಲು ಬೆನ್ನಿನ ರೇಖೆಯ ಮುಂದುವರಿದ ಕಾಲಾಗಿದೆ. ಮುಂದಿನ ಎರಡನೆಯ ಮತ್ತು ಹಿಂದಿನ ಮೊದಲನೆಯ ಕಾಲನ್ನು ಒಂದೇ ರೇಖೆಯಲ್ಲಿ ಮೂಡಿಸಲಾಗಿದೆ. ಅದೇ ಕೆಳಹೊಟ್ಟೆಯನ್ನೂ ಕೂಡ ಸಂಕೇತಿಸುತ್ತದೆ.

## ನಾಗೇನಹಳ್ಳಿ

**ನೆಲೆ : ಒಂದು**

ಇಲ್ಲಿಯ ದರಮರ ಗುಡ್ಡದಲ್ಲಿ ವರ್ಣಚಿತ್ರಗಳು, ಕುಳಿ ಆಕೃತಿಗಳು ಮತ್ತು ಒಂದು ಕೆತ್ತಿ ಮಾಡಿದ ದೊಡ್ಡ ಕುಳಿ ಇದೆ. ಚಿತ್ರಿತ ಕಲ್ಲಾಸರೆಯ ಪಶ್ಚಿಮಕ್ಕಿರುವ ಕಲ್ಲಾಸರೆಯಲ್ಲಿ ನೆಲಬಂಡೆಯ ಮೇಲೆ ೨ ಸ್ಥಳದಲ್ಲಿ ಕುಳಿ ಆಕೃತಿಗಳಿವೆ. ಅವು ಹಿರೇಬೆಣಕಲ್ಲಿನ ಕುಳಿ ಆಕೃತಿಗಳಂತೆ ಇವೆ. ಬೆಟ್ಟದ ದಕ್ಷಿಣದ ಇಳಿಜಾರಿನ ಒಂದು ಬಂಡೆಯ ಮೇಲೆ ಒಂದು ವೃತ್ತಾಕಾರದ ದೊಡ್ಡ ಕುಳಿ ಇದೆ. ಇದು ಸುಮಾರು ೧೦ ಸೆಂ.ಮೀ. ವ್ಯಾಸದ ಆಳತೆಯನ್ನು, ೧ ಸೆಂ.ಮೀ. ಆಳವನ್ನು ಹೊಂದಿದೆ. ಕೊರೆದು ಇವನ್ನು ಮಾಡಲಾಗಿದೆ.

**ನೆಲೆಯ ಆಯ್ಕೆ (ಗವಿ / ಕಲ್ಲಾ ಸರೆಗಳ ಸ್ವರೂಪ)**

ಪ್ರಾಗಿತಿಹಾಸ ಕಾಲದ ಕಲೆಯ ಒಂದು ಪ್ರಕಾರವಾದ ವರ್ಣ, ಕೊರೆದ ಮತ್ತು ಕುಟ್ಟಿದ ಚಿತ್ರಗಳು ನಿರ್ದಿಷ್ಟವಾದ ನೆಲೆಗಳಲ್ಲಿರುತ್ತವೆ. ಅಂದರೆ ಸಾಮಾನ್ಯವಾಗಿ ವರ್ಣಚಿತ್ರಗಳು ಗವಿ ಮತ್ತು ಕಲ್ಲಾಸರೆಗಳಲ್ಲಿ ಹಾಗೂ ಕೊರೆದ/ಕುಟ್ಟಿದ ಚಿತ್ರಗಳು ಬಯಲು ಬಂಡೆಗಳಲ್ಲಿ ಇರುತ್ತವೆ. ಈ ಗವಿ ಮತ್ತು ಕಲ್ಲಾಸರೆಗಳನ್ನು ಅಲ್ಲಿಯ ಚಿತ್ರಿತ ಭಾಗಗಳನ್ನು ಗಮನಿಸಲಾಗಿ ಚಿತ್ರಕ್ಕಾಗಿಯೇ ಅವುಗಳನ್ನು ಆಯ್ದುಕೊಂಡಿರುವುದು ಸ್ಪಷ್ಟವಾಗುತ್ತದೆ. ಕೊರೆದ/ಕುಟ್ಟು ಚಿತ್ರಗಳನ್ನು ಕೂಡ ಆಯ್ದ ಬಂಡೆಗಳಲ್ಲಿ ಮೂಡಿಸಲಾಗಿದೆ.

ಗವಿ/ಕಲ್ಲಾ ಸರೆಗಳು ನೈಸರ್ಗಿಕ ರಚನೆಗಳಾಗಿರುತ್ತವೆ. ಮಳೆಗಾಳಿಯಿಂದ ರಕ್ಷಿಸಿಕೊಳ್ಳಲು ಉತ್ತಮ ಆಶ್ರಯ ತಾಣಗಳಾಗಿದ್ದು, ಶಿಲಾಯುಗದ ಜನರು ಗವಿಗಳನ್ನು ಖಾಯಂ ವಾಸಕ್ಕಾಗಿ ಕಲ್ಲಾಸರೆಗಳನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಇಂಥ ಗವಿ/ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಚಿತ್ರಕ್ಕಾಗಿ ಅವರು ಎಲ್ಲಾ ರೀತಿಯ ಗವಿ/ಕಲ್ಲಾಸರೆಗಳನ್ನು ಬಳಸಿಕೊಂಡಿಲ್ಲ. ಯಾವ ಗವಿ/ಕಲ್ಲಾಸರೆಗಳ ಒಳಗೋಡೆಗಳೋ ಛಾವಣಿಯೋ ಒರಟಲ್ಲದೇ ತಕ್ಕಮಟ್ಟಿಗೆ ನುಣುಪಾಗಿದ್ದು ಮಳೆ ನೀರಿನಿಂದ ತೋಯಲ್ಪಡುವುದಿಲ್ಲವೋ ಅಂಥ ಗವಿ/ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ತೀರ ಆಳವಲ್ಲದ ಕಲ್ಲಾಸರೆಗಳು ಇದಕ್ಕೆ ಅಪವಾದ ಎನ್ನಬಹುದು. ಇಂಥ ಕಲ್ಲಾಸರೆಯ ಚಿತ್ರಗಳು ಮಳೆ, ಗಾಳಿ, ಬಿಸಿಲಿಗೆ ಸಿಲುಕಿ ತೀರಾ ಮಾಸಿ ಹೋಗಿವೆ. ಪ್ರಾಗಿತಿಹಾಸ ಕಾಲದ ಜನ ತಾವು ವಾಸಿಸಿದ ಎಲ್ಲಾ ಗವಿಗಳಲ್ಲಿ ಚಿತ್ರಗಳನ್ನು ಬಿಡಿಸಿಲ್ಲ. ಚಿತ್ರಕ್ಕೆ ಸೂಕ್ತವಾದ ಭಾಗವಿದ್ದಲ್ಲಿ ಮಾತ್ರ ಬಿಡಿಸಿದ್ದಾರೆ. ಸಂಗಾಪುರದ ಕರಡಿವಟ್ಲ ಬೆಟ್ಟದಲ್ಲಿ ಅನೇಕ ಚಿಕ್ಕ ದೊಡ್ಡ ಗವಿಗಳಿವೆ. ಅವುಗಳಲ್ಲಿ ಪ್ರಾಗಿತಿಹಾಸ ಕಾಲದ ಮಡಕೆ ಚೂರುಗಳು, ಶಿಲಾಯುಧಗಳು ದೊರೆತಿವೆ. ಆದರೆ ಅವುಗಳಲ್ಲಿ ಒಂದೆರಡು ಗವಿಗಳಲ್ಲಿ ಮಾತ್ರ ಚಿತ್ರಗಳಿವೆ. ಚಿತ್ರತ ಭಾಗವು ಬಹಿರಂಗವಾಗಿ ಕಾಣುವಂತಿದ್ದರೂ ಮಳೆ, ಗಾಳಿ, ಬಿಸಿಲಿನಿಂದ ಸಂಪೂರ್ಣ ರಕ್ಷಿತಗೊಂಡು ಉತ್ತಮ ಸ್ಥಿತಿಯಲ್ಲಿವೆ.

ದೊಡ್ಡ ದೊಡ್ಡ ಗವಿಗಳ ನುಣುಪಾದ ಛಾವಣಿಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಉದಾಹರಣೆಗೆ ಮಲ್ಲಾಪುರದ ಮೂರನೇ ಗವಿ (ಖಾನಾಸಾಬನ ಗವಿ) ಹಿರೇಬೆನಕಲ್ಲಿನ ಎರಡನೇ ಗವಿ (ರಕ್ಕಸ ಗವಿ) ಮತ್ತು ಆಗೋಲಿಯ ಮೂರನೆಯ ಗವಿಗಳ ವಿಶಾಲವಾದ ಛಾವಣಿಗಳಲ್ಲಿ ದೊಡ್ಡ ಮತ್ತು ಚಿಕ್ಕ ಪ್ರಮಾಣದ ಚಿತ್ರಗಳಿವೆ. ಈ ಛಾವಣಿಗಳು ನೆಲದಿಂದ ಸುಮಾರು ೬ ರಿಂದ ೮ ಮೀ. ಎತ್ತರದಲ್ಲಿವೆ. ಕೆಲವು ಗವಿಗಳ ಮುಖಭಾಗ ಒಳಗೋಡೆ ಭಾಗ, ಛಾವಣಿಗಳಲ್ಲಿ ಚಿತ್ರಗಳಿರುತ್ತವೆ. ಚಿಕ್ಕರಾಂಪುರದ ೧ನೇ ಗವಿಯು ಇದಕ್ಕೆ ಉತ್ತಮ ಉದಾಹರಣೆ.

ಕೆಲವು ಕಲ್ಲಾಸರೆಗಳು ಚಿತ್ರಫಲಕದಂತಿದ್ದು, ಬಹಿರಂಗವಾಗಿ ಕಾಣುವಂತಿವೆ. ಕೆಲವು ಚಿತ್ರಗಳನ್ನು ಗುರುತಿಸುವುದೇ ಕಠಿಣ. ಬಂಡೆ ಮೇಲಿನ ಆಸರೆ ಕಲ್ಲಿನ ಛಾವಣಿಯಲ್ಲೊ, ಬೃಹತ್ ಬಂಡೆಯ ಸವೆದ/ಒಡೆದ ಆಸರೆಯಲ್ಲೊ, ಬೆಟ್ಟದ ಬುಡದ ಶಿಲಾ ಪೊಟರೆಗಳಲ್ಲೊ, ಇಂಥ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಕೆಲವು ಕಲ್ಲಾಸರೆಗಳು ಕೂಡ ಕೈಗೆ ನಿಲುಕದಷ್ಟು ಎತ್ತರದಲ್ಲಿದ್ದು ಅದರಲ್ಲಿ ಚಿತ್ರಗಳನ್ನು ಬಿಡಿಸಿರುವುದು ವಿಶೇಷ. ಕೊರೆದ ಮತ್ತು ಕುಟ್ಟು ಚಿತ್ರಗಳಿಗಾಗಿ ಸಾಮಾನ್ಯವಾಗಿ ಕಪ್ಪುಶಿಲೆಯ ಬಂಡೆಗಳನ್ನು ಬಳಸಿಕೊಳ್ಳಲಾಗಿದೆ. ಬೆಟ್ಟದ ನಿರ್ದಿಷ್ಟ

ಭಾಗದಲ್ಲಿ ಕಪ್ಪು ಶಿಲೆಯ ಬಂಡೆಗಳಿರುತ್ತವೆ. ಸುತ್ತಲೂ ಬಯಲು ಪ್ರದೇಶವಿದ್ದು ಒಂದು ರೀತಿ ಅನುಕೂಲವಿರುವ ಬಂಡೆಗಳಲ್ಲಿ ಮಾತ್ರ ಚಿತ್ರಗಳನ್ನು ಕೊರೆದು/ಕುಟ್ಟಲಾಗಿದೆ. ಬಿಳಿ ಕಣಶಿಲೆಯಲ್ಲೂ ಕುಳಿ, ತಿರುಗುಳಿಗಳನ್ನು ಕಾಣಬಹುದು.

ಕೊಪ್ಪಳ ಹಂಪಿ ಪ್ರದೇಶದ ಚಿತ್ರಿತ ಗವಿ ಕಲ್ಲಾಸರೆಗಳ ರಚನೆ ಮತ್ತು ವಿಧಗಳನ್ನು ಪರಿಶೀಲಿಸುವ ಮೂಲಕ ಈ ಪ್ರದೇಶದ ಶಿಲಾಯುಗದ ಮಾನವ ಚಿತ್ರ ರಚನೆಗಾಗಿ ಎಂಥ ನೆಲೆಗಳನ್ನು ಆಯ್ದುಕೊಂಡ ಎನ್ನುವುದನ್ನು ಇಲ್ಲಿ ಗಮನಿಸಬಹುದು.

**ಗವಿಗಳು**

ಹಂಪಿ ಪ್ರದೇಶದಲ್ಲಿ ಚಿತ್ರಿತ ಗವಿಗಳು ಕಲ್ಲಾ ಸರೆಯಂತೆ ಅಧಿಕ ಪ್ರಮಾನದಲ್ಲಿಲ್ಲ. ಆಗೋಲಿ (೩) ಆನೆಗುಂದಿ (೭), ಮಲ್ಲಾಪುರ (೩,೬,೮) ಚಿಕ್ಕರಾಂಪುರ (೧) ಮತ್ತು ಹಿರೇಬೆಣಕಲ್ (೯,೧೨,೧೭)ಗಳಲ್ಲಿ ಮಾತ್ರ ಕೆಲವು ಗವಿಗಳಿವೆ. ಇವುಗಳಲ್ಲಿ ಆಗೋಲಿ ಮಲ್ಲಾಪುರ (೩) ಮತ್ಉತ ಹಿರೇಬೆಣಕಲ್ಲಿನ ಗವಿಗಳು ದೊಡ್ಡ ಪ್ರಮಾಣದಲ್ಲಿವೆ.

ಮಲ್ಲಾಪುರದ ೩ನೇ ಗವಿ (ಖಾನಾಸಾಬ ಗವಿ) ಬೃಹತ್ ಪ್ರಮಾಣದಲ್ಲಿದೆ. ಇಡೀ ಗವಿಗೆ ಒಂದೇ ವಿಶಾಲವಾದ ಛಾವಣಿ ಬಂಡೆ ಇದ್ದು, ಒಳಭಾಗದಲ್ಲಿ ನುಣುಪಾಗಿದೆ. ಆ ಬಂಡೆಗೆ ಅನುಗುಣವಾಗಿ ಅದರ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ೬ನೇ ಮತ್ತು ೮ನೇ ಗವಿಗಳು ಬೃಹತ್ ಬಂಡೆಗಳು ಸೀಳಿ ಮಧ್ಯದಲ್ಲಿ ಉಂಟಾಗಿದ್ದು, ಇವು ಕ್ರಮವಾಗಿ ೭ ಮತ್ತು ೫ ಮೀಟರ್ ಉದ್ದವಾಗಿವೆ. ೬ನೇ ಗವಿಯ ಎಡಗೋಡೆಯ ಹೊರಭಾಗದಲ್ಲಿ ಚಿತ್ರಗಳಿವೆ. ಆ ಭಾಗ ಹೊರಗೆ ಎದ್ದು ಕಾಣುವುದರ ಜೊತೆಗೆ ಸೂಕ್ತ ರಕ್ಷಿತ ಭಾಗವಾಗಿದೆ. ೮ನೆಯದು ಅರ್ಧವೃತ್ತಾಕಾರದಲ್ಲದಿ ಪೊಳ್ಳಾದ ಗವಿ ಅದರ ಒಳಗೋಡೆಗಳು ಅತ್ಯಂತ ನುಣುಪಗಿದ್ದು ಅಲ್ಲಿ ಚಿತ್ರಗಳಿವೆ. ಗವಿ ನೆಲದಿಂದ ಸುಮಾರು ೧೦ ಮೀಟರ್ ಎತ್ತರದಲ್ಲಿದ್ದು ವಾಸಕ್ಕೆ ಯೋಗ್ಯವಾಗಿಲ್ಲ.

ಚಿಕ್ಕರಾಂಪುರದ ಗವಿಯೂ ಬೃಹತ್ ಬಂಡೆಕಲ್ಲೊಂದರ ಕೆಳಭಾಗದಲ್ಲಿ ಉಂಟಾಗಿದೆ. ಈ ಗವಿಯ ಪ್ರವೇಶದಲ್ಲಿ ಛಾವಣಿ ಬಂಡೆಯ ಕೆಳಭಾಗ ತುಂಡಾಗಿ ಒಂದು ಸೊಗಸಾದ ಆಸರೆ ಉಂಟಾಗಿದೆ. ಆ ಭಾಗದಲ್ಲಿ ಮತ್ತು ಒಳಗೆ ಗೋಡೆಯ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಅಗೋಲಿ ಗವಿ ಕೂಡ ಮಲ್ಲಾಪುರದ ೩ನೇ ಗವಿಗಿಂತ ಸ್ವಲ್ಪ ಚಿಕ್ಕದಾಗಿದ್ದು ಛಾವಣಿಯ ಒಂದು ಭಾಗದಲ್ಲಿ ಮಾತ್ರ ಚಿತ್ರಗಳಿವೆ.

ಹಿರೇಬೆನಕಲ್ಲಿನ ೯ ಮತ್ತು ೧೭ನೇ ಗವಿಗಳನ್ನು ಎರಡನೆಯ ಪ್ರಕಾರದವೆಂದು ಗುರುತಿಸಬಹುದು. ಇವುಗಳಿಗೆ ಎರಡೂ ಬದಿ ಪ್ರವೇಶಗಳುಂಟು. ಇವುಗಳಲ್ಲಿ ೧೭ನೇ ಗವಿ ಗಮನಾರ್ಹವಾಗಿದೆ. ಅಡ್ಡವಾಗಿರುವ ಭಾರೀ ಬಂಡೆಯ ಕೆಳಭಾಗದಲ್ಲಿ ಈ ಬೃಹತ್ ಗವಿ ಉಂಟಾಗಿದೆ. ಇದಕ್ಕೆ ರಕ್ಕಸ ಗವಿ ಎಂದು ಹೆಸರು. ಛಾವಣಿ ತಕ್ಕಮಟ್ಟಿಗೆ ನುಣುಪಾಗಿದೆ. ಇಲ್ಲಿ ಕೇವಲ ಎರಡೇ ಚಿತ್ರಗಳಿದ್ದರೂ ಅವು ಒಂದು ೫ ಮೀಟರ್ ಮತ್ತೊಂದು ೭ ಮೀಟರ್ ಉದ್ದವಾಗಿದ್ದು ಗವಿಗೆ ತಕ್ಕ ಪ್ರಮಾಣದಲ್ಲಿವೆ. ಗವಿ ನೆಲಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲದಿದು ವಿಶಾಲವಾದ ಸಭಾಂಗಣ (ಹಾಲ್) ದಂತಿದೆ. ಈ ಗವಿಗಳ ಚಿತ್ರಗಳು ಸಂಖ್ಯೆ ಮತ್ತು ವೈವಿಧ್ಯತೆ ದೃಷ್ಟಿಯಿಂದ ಶ್ರೀಮಂತವಾಗಿದೆ.

**ಕಲ್ಲಾಸರೆಗಳು**

ಗವಿಗಳಿಗಿಂತ ಕಲ್ಲಾಸರೆಗಳು ಹೆಚ್ಚಿನ ಪ್ರಮಾಣದಲ್ಲಿವೆ. ಮೇಲೆ ಉಲ್ಲೇಖಿಸಿದ ಕೆಲವು ಗವಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಚಿತ್ರಿತ ನೆಲೆಗಳು ಕಲ್ಲಾಸರೆಗಳೆನ್ನಬಹುದು. ಕೊಪ್ಪಳ ಹಂಪಿ ಪ್ರದೇಶದ ಚಿತ್ರಿತ ಕಲ್ಲಾಸರೆಗಳನ್ನು ಅವುಗಳ ನೈಸರ್ಗಿಕ ರಚನೆಯ ದೃಷ್ಟಿಯಿಂದ ಈ ರೀತಿಯಲ್ಲಿ ವರ್ಗೀಕರಿಸಬಹುದು.

**೧. ಮುಂಚಾಚಿದ ತಲೆಬಂಡೆ ಆಸರೆ**

ಕೆಳಗೆ ದೊಡ್ಡ ಬಂಡೆಯಿದ್ದು ಅದರ ತಲೆಯ ಮೇಲೆ ಕೆಳಗಿನ ಬಂಡೆಯಿಂದ ಮುಂಚಾಚಿದ ಮತ್ತೊಂದು ಬಂಡೆ ಇರುತ್ತದೆ. ಮುಂಚಾಚಿದ ಬಂಡೆಯ ಭಾವಣಿಯಲ್ಲಾಗಲಿ (ಹಿರೇಬೆಣಕಲ್ ೧೬, ಚಿಕ್ಕರಾಂಪುರ ೪, ನಾರಾಯಣಪೇಟೆ ೧) ಇಲ್ಲವೇ ಮುಂಚಾಚಿದ ಬಂಡೆಯ ಆಶ್ರಯ ಪಡೆದ ಕೆಳಗಿನ ಕಲ್ಲಿನ ಮುಖಭಾಗದಲಲ್ಇ (ಗಡ್ಡಿ ೪, ಹೊಸಬಂಡಿ ಹರ್ಲಾಪುರ ೧) ಚಿತ್ರಗಳಿರುತ್ತವೆ. ಹಿರೇಬೆಣಕಲ್ಲಿನ ೨ನೇ ಕಲ್ಲಾಸರೆಯು ಈ ಪ್ರಕಾರದಲ್ಲಿ ಒಂದು ಅಪರೂಪವಾದ ಕಲ್ಲಾಸರೆಯಾಗಿದೆ. ಒಂದೇ ಬೃಹತ್ ಬಂಡೆಯೊಂದರಲ್ಲಿ ಮೇಲಿನ ಸುಮಾರು ೨ ಮೀಟರ್ ಭಾಗ ಆಸರೆಯಾಗಿ ಉಳಿದಂತೆ ಸುಮಾರು ೧೦ ಮೀಟರ್ ಭಾಗ ಒಳಸರಿದ ಚಿತ್ರ ಫಲಕವಾಗಿದೆ. ಇದು ಸುಮಾರು ೧೩ ಮೀಟರ್ ಅಗಲ ಮತ್ತು ೧೦ ಮೀಟರ್ ಎತ್ತರವಾಗಿದೆ. ಇಡೀ ಫಲಕದ ಅಳತೆಗೆ ತಕ್ಕಂತೆ ಅಲ್ಲಿ ದೊಡ್ಡ ಚಿತ್ರವನ್ನು ಬಿಡಿಸಲಾಗಿದೆ. ಕಲ್ಲಾಸರೆ ಆಳವಾಗಿಲ್ಲದಿರುವುದರಿಂದ ಚಿತ್ರಗಳು ಬಹಳಷ್ಟು ಮಾಸಿವೆ.

ಚಿಕ್ಕರಾಂಪುರ (೪) ಮತ್ತು ನಾರಾಯಣಪೇಟೆ (೧) ಕಲ್ಲಾಸರೆಗಳಲ್ಲಿ ಭಾವಣಿ ಕಲ್ಲಿನಲ್ಲಿ ಚಿತ್ರಗಳಿದ್ದು ನೆಲದಿಂದ ಸುಮಾರು ೫ ಮೀಟರ್ ಎತ್ತರದಲ್ಲಿವೆ. ಆಸರೆಯ ಕೆಳಗಿನ ನೆಲ ನಿಲ್ಲಲು ಕೂಡ ಸಾಧ್ಯವಾಗದಷ್ಟು ಇಳಿಜಾರಾಗಿದೆ. ಮಲ್ಲಾಪುರದ ೨ನೇ ಕಲ್ಲಾಸರೆ ಕೂಡ ಇದೇ ರೀತಿಯದು. ಆದರೆ ಇಲ್ಲಿ ಭಾವಣಿ ಕೈಗೆ ನಿಲುಕುವಷ್ಟು ಹತ್ತಿರದಲ್ಲಿದೆ.

**೨. ಸೀಳು ಬಂಡೆ ಆಸರೆ**

ಸಾಮಾನ್ಯವಾಗಿ ಈ ಪ್ರಕಾರದ ಕಲ್ಲಾಸರೆಗಳು ಅಧಿಕವಾಗಿವೆ. ಬೃಹತ್ ಅಥವಾ ಮಧ್ಯಮ ಗಾತ್ರದ ಬಂಡೆಗಳಲ್ಲಿ ಮೂಲೆಭಾಗದಲ್ಲೊ ಬದಿಯಲ್ಲೊ ಒಂದು ಭಾಗ ಸೀಳಿ ತುಂಡು ಕೆಳಬಿದ್ದು ಆಸರೆ ಉಂಟಾಗಿರುತ್ತದೆ. ಈ ಆಸರೆ ಭಾಗದಲ್ಲಿ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಇಂದರಗಿ (೧), ಚಿಕ್ಕ ಬೆಣಕಲ್ (೧), ಆಗೋಲಿ (೨), ನಾಗೇನಹಳ್ಳಿ (೧), ಕೊಪ್ಪಳ (೪), ಹೊಸಬಂಡಿಹರ್ಲಾಪುರ (೧) ಗಳಲ್ಲಿ ಮೂಲೆ ಕಲ್ಲಾಸರೆಗಳು ಎಮ್ಮಿಗುಡ್ಡ (೨), ತೆಂಬಾ (೪) ಗಡ್ಡಿ (೪), ಹಿರೇಬೆಣಕಲ್ (೧), ಹಂಪಿ (೫) ಕಮಲಾಪುರ (೧) ಹಾಗೂ ಇತರ ನೆಲೆಗಳಲ್ಲಿ ಬದಿಯ ಕಲ್ಲಾಸರೆಗಳಿವೆ. ಮೂಲೆ ಆಸರೆಗಳಿಗಿಂತ ಬದಿಯ ಆಸರೆಗಳು ಚಿತ್ರ ರಚನೆಗೆ ಪ್ರಶಸ್ತವಾಗಿವೆ. ಆನೆಗುಂದಿಯ ೬ನೇ ನೆಲೆಯಲ್ಲಿ ೩ ಸ್ವತಂತ್ರ ಗುಂಡುಗಳಿವೆ. ಅವುಗಳ ಮೂಲೆ ಭಾಗದಲ್ಲಿ ಒಡೆದ ಸಣ್ಣ ಕಲ್ಲಾಸರೆಗಳಿದ್ದು ಅದರಲ್ಲೂ ಚಿಕ್ಕ ಪ್ರಮಾಣದ ಚಿತ್ರಗಳಿವೆ.

**೩. ವಾರೆ ಸವಕಳಿ ಬಂಡೆ ಆಸರೆ**

ಸಾಮಾನ್ಯವಾಗಿ ಇವು ಸ್ವತಂತ್ರವಾಗಿರುವ ಬೃಹತ್ ಬಂಡೆಗಳೂ ಈ ಬಂಡೆಗಳು ತುದಿಯಲ್ಲಿ ಒಂದೆರಡು ಮೀಟರ್ ಹೊರತುಪಡಿಸಿ ಉಳಿದಂತೆ ಭಾಗವು ಮೆಲಿನಿಂದ ಕೆಳಕ್ಕೆ ವಾರೆಯಾಗಿ ಸವೆದಂತಿರುತ್ತದೆ. ಈ ವಾರೆ ಸವೆದ ಭಾಗವು ನುಣುಪಾಗಿದ್ದರೂ ಚಿತ್ರಗಳಿಗೆ ಹೆಚ್ಚು ರಕ್ಷಿತವಲ್ಲ. ಈ ರೀತಿಯ ಕಲ್ಲಾಸರೆಗಳೂ ಹೊಸ ಬಂಡಿಹರ್ಲಾಪುರ (೫) ತೆಂಬಾ (೬) ಚಿಕ್ಕಬೆಣಕಲ್ (೨) ಮತ್ತು ಹಂಪಸದುರ್ಗ (೨) ಗಳಲ್ಲಿವೆ. ಈ ನಾಲ್ಕರಲ್ಲಿ ರೇಖಾ ಸಂಕೇತ ಚಿತ್ರಗಳಿರುವುದು ಕುತೂಹಲದಾಯಕ.

**೪. ಹಾಸಲು ಬಂಡೆ ಆಸರೆ**

ಬೃಹತ ಬಂಡೆ(ಗುಂಡು)ಗಳು ಚಿಕ್ಕ ಗುಂಡುಗಳ ಮೇಲೆ ಉದ್ದವಾಗಿ ಹಸಿದಂತಿರುತ್ತದೆ. ಈ ಹಾಸಲು ಬಂಡೆಯ ಕೆಳಭಾಗದಲ್ಲಿ (ಭಾವಣಿಯಲ್ಲಿ) ಚಿತ್ರಗಳಿರುತ್ತವೆ. ಮಲ್ಲಾಪುರ (೫) ತೆಂಬಾ (೭) ಮತ್ತು ಅಗೋಲಿ (೨) ಗಳಲ್ಲಿ ಈ ರೀತಿಯ ಕಲ್ಲಾಸರೆಗಳಿವೆ. ಇಲ್ಲಿಯ ಚಿತ್ರಿತ ಭಾಗವು ಅಷ್ಟು ನುಣುಪಾಗಿರುವುದಿಲ್ಲ. ಮತ್ತು ಚಿತ್ರಗಳ ಸಂಖ್ಯೆಯೂ ಕಡಿಮೆ ಇರತುತ್ತದೆ.

**೫. ವಾರೆ ಬಂಡೆ ಆಸರೆ**

ಎರಡು ಬಂಡೆಗಳ ಪರಸ್ಪರ ಒಂದಕ್ಕೊಂದು ವಾರೆಯಾಗಿ ನಿಂತು ಜೋಪಡಿ ಆಕಾರದಲ್ಲಿ ಆಸರೆ ಉಂಟಾಗಿರುತ್ತದೆ. ಎರಡೂ ಬಂಡೆಗಳ ಒಳ ಭಾಗದ ಮುಖದಲ್ಲಿ ಚಿತ್ರಗಳಿರುತ್ತವೆ. ಅಥವಾ ಒಂದು ಎತ್ತರವಾದ ಗುಂಡಿನ ಮೇಲೆ ಬೃಹತ್ ಬಂಡೆಯೊಂದು ವಾರೆಯಾಗಿ ಮಲಗಿದಂತಿರುತ್ತದೆ. ವಾರೆ ಬಂಡೆಯ ಆಸರೆಯಲ್ಲಿ ಚಿತ್ರಗಳಿರುತ್ತವೆ. ಚಿಕ್ಕ ಬೆಣಕಲ್ (೩) ಹಂಪಿ (೪), ಸಂಗಾಪುರ (೭) ಬೃಹತ್ ವಾರೆ ಬಂಡೆ ಆಸರೆಗಳು ಇವೆ. ಕಾಲಕ್ರಮೇಣ ತುದಿಯಲ್ಲಿ ಸೀಳುಗಳುಂಟಾಗಿ ಮಳೆಯ ನೀರು ಇಳಿದಿರುವುದರಿಂದ ಇಂಥ ಆಸರೆಗಳ ಚಿತ್ರಗಳು ಸಾಕಷ್ಟು ಮಾಸಿವೆ. ಚಿಕ್ಕ ಬೆಣಕಲ್ಲಿನ ಕಲ್ಲಾಸರೆಯಲ್ಲಿ ಕೈಗೆ ನಿಲುಕದಷ್ಟು ಎತ್ತರದಲ್ಲಿ ಚಿತ್ರಗಳಿವೆ.

**೬. ಬೆಟ್ಟದ ಪೊಟರೆ ಆಸರೆ**

ಇವು ಬೆಟ್ಟದ ಬುಡದಲ್ಲಿ ಇರುತ್ತವೆ. ಕೊರಕಲಿನಂತೆ ಸುಮಾರು ೪೦ ಮೀಟರ್‌ವರೆಗೂ ಬೆಟ್ಟದಲ್ಲಿ ಪೊಟರೆಗಳುಂಟಾಗಿರುತ್ತವೆ. ಇದು ಉದ್ದಕ್ಕೂ ಮುಂಬದಿಯಲ್ಲಿ ತೆರೆದಿರುತ್ತದೆ. ಈ ಪೊಟರೆಗಳಲ್ಲಿ ಚಿತ್ರಗಳಿರುತ್ತವೆ. ತಿರುಮಲಾಪುರ (೧) ಆನೆಗುಂದಿ (೫) ಹೊಸ ಬಂಡಿಹರ್ಲಾಪುರ (೩) ಮತ್ತು ನಾರಾಯಣಪೇಟೆಗಳಲ್ಲಿ (೨) ಇಂಥ ಕಲ್ಲಾಸರೆಗಳಿವೆ. ತಿರುಮಲಾಪುರದಲ್ಲಿ ಬೇರೆ ಬೇರೆ ಕಾಲದಲ್ಲಿ ರಚಿತವಾದ ಹೆಚ್ಚು ಚಿತ್ರಗಳಿದ್ದರೆ ಉಳಿದೆರಡು ಕಡೆ ಒಂದೆರಡು ಚಿತ್ರಗಳು ಮಾತ್ರ ಇವೆ.

**೭. ಪೊಳ್ಳು ಬಂಡೆ ಆಸರೆ**

ಇವು ಕೂಡ ವಿಶಿಷ್ಟವಾದ ರಚನೆಗಳು ಬೆಟ್ಟದ ಮೇಲಿರುವ ಬೃಹತ್ ಬಂಡೆಗಳು ಬಳಭಾಗ ಪೊಳ್ಳಾಗಿ ಸೊಗಸಾದ ಆಸರೆ ಉಂಟಾಗಿರುತ್ತದೆ. ಇದಕ್ಕೆ ಒಂದು ಅಥವಾ ಎರಡು ಕಡೆ ಅರೆ ವೃತ್ತಾಕಾರದ ಭಾಗಿಲುಗಳಿರುತ್ತವೆ. ಈ ಪೊಳ್ಳಿನ ಒಳ ಗೋಡೆಗಳ ಮೇಲೆ ಚಿತ್ರಗಳಿರುತ್ತವೆ. ರಾಂಪುರ (೨) ಕಳ್ಳರ ಗವಿ ಮತ್ತು ತೆಂಬಾದ (೮) ಚಿತ್ರ ಪಡಿ ಇಂಥ ಕಲ್ಲಾಸರೆಗಳು ಚಿತ್ರಪಡಿಯ ಇಡೀ ಭಾಗದಲ್ಲಿ ಪಕ್ಷಿಗಳು ಮಣ್ಣಿನ ಗೂಡು ಕಟ್ಟಿರುವುದರಿಂದ ಚಿತ್ರಗಳು ಗೋಚರಿಸುವುದಿಲ್ಲ. ನಾರಾಯಣಪೇಟೆಯ ಈ ರೀತಿಯ ಬಂಡೆಯ ಪೊಳ್ಳು ಎತ್ತರದಲ್ಲಿಲ್ಲ. ಮಲಗಿಕೊಂಡೇ ಮಾತ್ರ ಚಿತ್ರಗಳನ್ನು ನೋಡಬಹುದು.

**೮. ಅರೆ ವೃತ್ತಾಕಾರ (ಕಮಾನಿನಾಕಾರ) ಬಾಗಿದ ಬಂಡೆ ಆಸರೆ**

ಬಂಡೆಯೊಂದರ ಎರಡು ತುದಿಗಳು ನೆಲಕ್ಕೆ ತಾಗಿ ಮಧ್ಯ ಭಾಗದಲ್ಲಿ ಅರೆ ವೃತ್ತಾಕಾರದಲ್ಲಿ ಮೇಲೆದ್ದಿರುತ್ತದೆ. ಆದರ ಒಳಭಾಗದಲ್ಲಿ ಚಿತ್ರಗಳನ್ನು ಇಂಥ ಕಲ್ಲಾಸರೆಗಳು ಕೊಪ್ಪಳ(೨) ಬಿಳಿಭಾವಿ (೧) ಹಿರೇಬೆಣಕಲ್ (೮ ಮತ್ತು ೧೩) ಗಳಲ್ಲಿವೆ. ಬಿಳಿಭಾವಿಯಲ್ಲಿ ಹೆಚ್ಚು ಚಿತ್ರಗಳಿದ್ದರೆ, ಹಿರೇಬೆಣಕಲ್ಲಿನ (೧೩)ಲ್ಲಿ ಕೇವಲ ಮೂರು ಚಿತ್ರಗಳಿವೆ.

**ಬಯಲು ಬಂಡೆ ಚಿತ್ರ ನೆಲೆಗಳು**

ಬಯಲು ಬಂಡೆ ಚಿತ್ರಗಳು ಮುಖ್ಯವಾಗಿ ಪಶುಪಾಲಕರ ರಚನೆಗಳೆಂದು ಹೇಳಬಹುದು. ಅವು ಪಶುಪಾಲನೆಯ ಸಂದರ್ಭದಲ್ಲಿ ರಚಿತವಾಗಿರುವ ಸಾಧ್ಯತೆಯನ್ನು ಚಿತ್ರನೆಲೆಗಳ ಹಿನ್ನೆಲೆಯಲ್ಲಿ ತರ್ಕಿಸಬಹುದು.

ಕೊಪ್ಪಳ-ಹಂಪಿ ಪ್ರದೇಶಕ್ಕೆ ಸಂಬಂಧಿಸಿದಂತೆ ಬಂಡೆ ಚಿತ್ರಗಳು ಎರಡು ರೀತಿಯ ನೆಲೆಗಳಲ್ಲಿ ರಚಿತವಾಗಿರುವುದನ್ನು ಗುರುತಿಸಬಹುದು. ಅವುಗಳೆಂದರೆ ಮೊದಲನೆಯ ನೆಲೆ ನೀರು ಸಂಗ್ರಹಣೆಯ ಕೆರೆಗಳು (ನೈಸರ್ಗಿಕ) ಬದಿಯ ಬಂಡೆಗಳಲ್ಲಿ ಇರುವುದು. ಉದಾಹರಣೆಗೆ ಕಮಲಾಪುರ (ವಿದ್ಯಾರಣ್ಯ) ಮತ್ತು ಬಸಾಪಟ್ಟಣ. ವಿಶೇಷವೆಂದರೆ ಈ ಎರಡೂ ನೆಲೆಗಳ ಚಿತ್ರಗಳು ಒಂದೇ ಬಗೆಯಾಗಿರುವುದು (ಎತ್ತರ ಇಣಿಯ ಎತ್ತುಗಳು ಮತ್ತು ಅಶ್ವಸವಾರರ ಚಿತ್ರಗಳು).

ಎರಡನೇ ನೆಲೆಗಳು ಸುತ್ತಲೂ ಹಲ್ಲುಗಾವಲಿದ್ದು ಮಧ್ಯದಲ್ಲಿ ಬಂಡೆಗಳ ಮೇಲೆ ರಚಿತವಾಗಿರುವುದು. ಉದಾಹರಣೆಗೆ ಮಲ್ಲಾಪುರ ೧ ಮತ್ತು ೨ನೇ ನೆಲೆಗಳು. ಇಲ್ಲಿ ಕೊರೆದ ಮತ್ತು ಕುಟ್ಟು ಚಿತ್ರಗಳು ಎರಡೂ ಇವೆ. ಇವು ಕಪ್ಪುಬಂಡೆಗಳು. ಕಮಲಾಪುರದ ೨ನೇ ನೆಲೆಯಲ್ಲಿ (ಒಂಟಿಕಲ್ಲು ಗುಂಡು) ವರ್ಣಚಿತ್ರದ ಜೊತೆಗೆ ಕೊರೆದ ಚಿತ್ರಗಳಿರುವುದು ವಿಶೇಷ. ಇದು ಕಣಶಿಲೆಯ ಬಂಡೆಯಾಗಿದೆ.

**ಚಿತ್ರರಚನಾ ಸಾಮಗ್ರಿಗಳು ಮತ್ತು ವಿಧಾನ**

ಪ್ರಾಚೀನ ಜನರ ಚಿತ್ರ ರಚನಾ ತಂತ್ರ ಸಾಮಗ್ರಿಗಳು ಕುತೂಹಲದಾಯಕವಾಗಿದೆ. ಗವಿವರ್ಣ ಮತ್ತು ಬಂಡೆ ಚಿತ್ರಗಳ ರಚನೆಯಲ್ಲಿ ಬಳಕೆಯಾದ ಸಾಮಗ್ರಿಗಳನ್ನು ಆಯಾ ಚಿತ್ರ ಪ್ರಕಾರಗಳು ಸ್ವರೂಪಕ್ಕನುಗುಣವಾಗಿ ತರ್ಕಿಸಬಹುದು.

**ವರ್ಣಚಿತ್ರಗಳು**

**ಬಣ್ಣಗಳು**

ಗವಿ ಮತ್ತು ಕಲ್ಲಾಸರೆಗಳ ಚಿತ್ರಗಳನ್ನು ಬಣ್ಣಗಳಿಂದ ರಚಿಸಲಾಗಿದೆ. ವಿಶ್ವದಾದ್ಯಂತ ಪ್ರಧಾನವಾಗಿ ಕೆಮ್ಮಣ್ಣು ವರ್ಣ (Red ochre) ವನ್ನು ಬಳಸಲಾಗಿದೆ. ಫ್ರಾನ್ಸ್ ಮತ್ತು ಸ್ಪೇನಿನ ಮೂರ್ ಸಾಲಾಸ್, ಅಲ್ ಮೀರಾ ನ್ಸೌಕ್ಸ್, ಲಾಸ್ಕಾಕ್ಸ್, ಇಟಲಿಯ ಲಾಪಿಲೇಟಾ, ಎಲೆಕ್ಯಾಸ್ಟಿಲೋ ಲಾ ರೋಶೆ ಬೋರ್ತಿಯಾಕ್ಸ್, ಬ್ಲಾಂಚಾರ್ಡ್ ಮುಂತಾದ ಗವಿಗಳ ಚಿತ್ರಗಳನ್ನು ಕೆಂಪು ಕಪ್ಪು ಹಳದಿ ಕಂದು ಮುಂತಾದ ಬಣ್ಣಗಳಿಂದ ಚಿತ್ರಿಸಲಾಗಿದೆ. ಭಾರತದ ಗವಿ, ಕಲ್ಲಾಸರೆಗಳಲ್ಲಿ ಬೇರೆ ಬೇರೆ ಬಣ್ಣಗಳ ಬಳಕೆಯನ್ನು ಕಾಣಬಹುದು. ತಿಳಿಕೆಂಪು (ಹೊಸಂಗಾಬಾದ್, ಭೂಪಾಲ್, ರೈಸಿನ್) ಕೆಂಪು (ಸಾಗರ್, ಫನ್ನಾ, ಮಿರ್ಜಾಪುರ, ಆಗ್ರಾ), ಕಡುಕೆಂಪು (ಸಿಂಗನ್ ಪುರ) ಭಿಂಬೇಟ್ಕಾ IIA.೧. IIA. ೨, ಕಾನ್ವಮದಕಲ್ ಬುಗ್ಗ (ಅ.ಪ್ರ.ಪಿಕ್ಲಿಹಾಳ, ಮಸ್ಕಿ) ಕಂದು (ಭೂಪಾಲ್ ೧೭), ಕರಿಗಂದು (ಹೊಸಂಗಾಬಾದ್ VI, ವಾರಾಣಾಸಿ) ಕಪ್ಪು (ರೈಸಿನ್, ಭೂಪಾಲ-೧೭, ಕರ್ನೂಲ್ನ ಬಿಲ್ಲಾಸುರಗಾಂ, ಆಗ್ರಾ), ಹಳದಿ (ಫನ್ನಾ-ಬೃಹಸ್ಪತೀಕುಂಡ, ಭೂಪಾಲ-೧೭), ಕಿತ್ತಳೆ (ಸಿಂಗನ್ ಪುರ, ಭೂಪಾಲ-೨), ರೈಸಿನ್, ಫತಾನಿ ಕಿ ಪಹಾರಿ, ಭಿಂಬೇಟ್ಕಾ IIA.೫. ಮಿರ್ಜಾಪುರ), ತಿಳಿಗಂಪಿನ ಕಿತ್ತಳೆ (ಕಾನ್ವಮದಕಲ್ ಬುಗ್ಗ (ಆ.ಪ್ರ) ನೇರಳೆ (ರಾಯಘರ್, ಪಾಚಮಾರಿ ಮಿರ್ಜಾಪುರ) ಹಸಿರು (ಭೂಪಾಲ್ ೨ ಸಾಗರ್, ಫನ್ನಾ, ಭಿಂಬೇಟ್ಕಾ) ಬಣ್ಣಗಳು ಬಳಕೆಯಾಗಿವೆ. ಮತ್ತು ಬಹುಮಟ್ಟಿಗೆ ಎಲ್ಲೆಡೆ ಬಿಳಿ ಬಣ್ಣದ ಚಿತ್ರಗಳನ್ನು ಕಾಣಬಹುದು.[1]

ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಬಣ್ಣಗಳು ಬಳಕೆಯಾಗಿರುವುದು ಕಂಡುಬರುತ್ತದೆ. ಸೂಕ್ಷ್ಮ ಶಿಲಾಯುಗದಲ್ಲಿ ಕೆಂಪು, ಕಂದು, ಕಪ್ಪು ಬಣ್ಣಗಳು, ನವಶಿಲಾಯುಗ ಶಿಲಾತಾಮ್ರಗದಲ್ಲಿ ಕೆಂಪು ಅಥವಾ ಅಥವಾ ಕಂದು, ಕೆಂಪು, ಬಿಳುಪು, ತಿಳಿಹಳದಿ, ಹಳದಿಮಿಶ್ರಿತ ಬಿಳುಪು ಬಣ್ಣದ ಚಿತ್ರಗಳು ಇತಿಹಾಸ ಆರಂಭಕಾಲದಲ್ಲಿ ಕೆಂಪು ಬಿಳುಪು ಅಪರೂಪಕ್ಕೆ ಹಸಿರು ಅಥವಾ ಹಳದಿ ಬಣ್ಣಗಳು ಮಧ್ಯಕಾಲೀನ ಯುಗದಲ್ಲಿ ಬುಡಕಟ್ಟು ಚಿತ್ರಗಳು ಕೆಂಪು ಬಿಳುಪು ಕಿತ್ತಳೆ ನಂತರದಲ್ಲಿ ಕೆಂಪು ಕಂದು ಬಳಪದ ಬಣ್ಣಗಳಲ್ಲಿ ರಚಿತವಾಗಿವೆ.

ಕರ್ನಾಟಕದಲ್ಲಿ ಬಾದಾಮಿ ಹತ್ತಿರದ ಹಿರೇಗುಡ್ಡ ಮತ್ತು ಅರೆಗುಡ್ಡದ ಪ್ರಾಯಶಃ ಸೂಕ್ಷ್ಮ ಶಿಲಾಯುಗದ ಚಿತ್ರಗಳಿಂದ ಹಿಡಿದು ನವಶಿಲಾ-ಶಿಲಾತಾಮ್ರಯುಗದ ಮಸ್ಕಿ, ಪಿಕ್ಲಿಹಾಳದ ಚಿತ್ರಗಳಿಂದ ಹಿಡಿದು ನವಶಿಲಾ-ಶಿಲಾತಾಮ್ರಯುಗದ ಮಸ್ಕಿ, ಪಿಕ್ಲಿಹಾಳದ ಚಿತ್ರಗಳು ಕಬ್ಬಿಣ ಹುಗ ಬೃಹತ್ ಶಿಲಾಯುಗದ ಹಿರೇಬೆಣಕಲ್ ನ ಚಿತ್ರಗಳು ಹಾಗೂ ಇತಿಹಾಸ ಆರಂಭಕಾಲ ಮತ್ತು ಇತಿಹಾಸ ಕಾಲದಲ್ಲಿ ಪ್ರಧಾನವಾಗಿ ಕೆಮ್ಮಣ್ಣಿನ ಬಣ್ಣವನ್ನು ಬಳಸಲಾಗಿದೆ. ಬಣ್ಣದ ಛಾಯೆಯ ಕಾಲಮಾನದ ವೈಪರೀತ್ಯದಿಂದಾಗಿ ಹಾಗೂ ಇತರ ಕಾರಣಗಳಿಂದಾಗಿ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆ, ಕಪ್ಪು ಹಾಗೂ ಮಿಶ್ರಿತಹಳದಿ ಮುಸುಕು ಬಿಳಿಯ ದ್ವಿವರ್ಣಗಳನ್ನು ಬಳಸಲಾಗಿದೆ. ಬಾದಾಮಿಯ ೩ನೇ ಗವಿಯ ಚಿತ್ರಗಳು ದ್ವಿವರ್ಣದಲ್ಲಿವೆ. ಮಧ್ಯಯುಗೀನ ಕಾಲದ ಚಿತ್ರಗಳು ಸುಣ್ಣದಂತಹ ಬಿಳಿಯ ಬಣ್ಣದಲ್ಲಿವೆ. ಬ್ರಹ್ಮಗಿರಿ ಮತ್ತು ಚಿತ್ರದುರ್ಗದ ಹಲವಾರು ಚಿತ್ರಗಳೂ ಬಿಳಿಯ ಬಣ್ಣದಲ್ಲಿವೆ.[2]

ಕೊಪ್ಪಳ-ಹಂಪಿ ಪ್ರದೇಶದಲ್ಲಿ ಮುಖ್ಯವಾಗಿ ಕೆಮ್ಮಣ್ಣು ಬಣ್ಣದ ಚಿತ್ರಗಳು ಸಾಮಾನ್ಯವಾಗಿವೆ. ಜೊತೆಗೆ ದಟ್ಟಕೆಂಪು, ನೇರಳೆ ಕೆಂಪು ಮತ್ತು ಕಿತ್ತಳೆಗಂಪಿನ ಚಿತ್ರಗಳೂ ಇವೆ. ವಿರಳವಾಗಿ ಬಿಳಿಬಣ್ಣಗಳನ್ನು ಅಲ್ಲಲ್ಲಿ ಬಳಸಲಾಗಿದೆ.

**ಕೆಂಪುಬಣ್ಣ**

ಕೆಂಪುವರ್ಣ ಸಾಮಾನ್ಯವಾಗಿದ್ದು ಅದರಲ್ಲಿ ನೇರಳೆಗಂಪಿನ ಬಣ್ಣವನ್ನು ಹಿರೇಬೆಣಕಲ್ಲಿನ ೧೭ನೇ ಗವಿ ಚಿಕ್ಕಬೆಣಕಲ್ಲಿನ ಮೂರನೇ ಕಲ್ಲಾಸರೆ, ಮಲ್ಲಾಪುರದ ೬ನೇ ಕಲ್ಲಾಸರೆಗಳ (ಮಂಡಲ ಚಿತ್ರ ಮಾತ್ರ) ಚಿತ್ರ ರಚನೆಯಲ್ಲಿ ಬಳಸಲಾಗಿದೆ. ಕುಂಕುಮದಂತಹ ದಟ್ಟ ಕೆಂಪುವರ್ಣವನ್ನು ಚಿಕ್ಕರಾಂಪುರದ ೫ನೇ ಕಲ್ಲಾಸರೆ ನಾಗೇನಹಳ್ಳಿ ಮತ್ತು ತಿರುಮಲಾಪುರದ ಕಲ್ಲಾಸರೆಗಳಲ್ಲಿ ಕಿತ್ತಳೆ ಕೆಂಪುವರ್ಣವನ್ನು ಸಂಗಾಪುರದ ೮ನೇ ಕಲ್ಲಾಸರೆ ಬಿಳೇಭಾವಿಯ ೨ನೇ ಕಲ್ಲಾಸರೆ ಮತ್ತು ಆನೆಗುಂದಿಯ ೭ನೇ ಗವಿ (ಆನೆ ಚಿತ್ರ)ಗಳಲ್ಲಿ ಚಿತ್ರಕ್ಕಾಗಿ ಬಳಸಲಾಗಿದೆ.

**ಬಿಳಿಬಣ್ಣ**

ಸುಣ್ಣದಂತಹ ಬಿಳಿ ಬಣ್ಣವನ್ನು ಚಿತ್ರಗಳಿಗೆ ಬಳಸಲಾಗಿದೆ. ಆದರೆ ಇದು ಕೆಂಪು ಬಣ್ಣದಷ್ಟು ವ್ಯಾಪಕವಾಗಿ ಬಳಕೆಯಾಗಿಲ್ಲ. ಇತಿಹಾಸ ಕಾಲದಲ್ಲಿ ಇದರ ಬಳಕೆಯಾಗಿದೆ. ಹಂಪಸದುರ್ಗ (೧), ಅಗೋಲಿ (೧), ತೆಂಬಾ (೧,೨), ಕೊಪ್ಪಳ (೮), ಬಂಡಿಹರ್ಲಾಪುರ (೧, ಸಮಕಾಲೀನ)ಗಳಲ್ಲಿ ಬಿಳಿಬಣ್ಣದ ಚಿತ್ರಗಳಿವೆ. ತಿರುಮಲಾಪುರ (೧), ಎಮ್ಮಿಗುಡ್ಡ (೨), ಆನೆಗುಂದಿ (೪,೫) ಮತ್ತು ಚಿಕ್ಕರಾಂಪುರ (೩)ಗಳಲ್ಲಿ ಬಿಳಿ ಮತ್ತು ಕೆಂಪು ಬಣ್ಣದ ಚಿತ್ರಗಳು ಇವೆ.

**ದ್ವಿವರ್ಣ**

ತೀರ ವಿರಳವಾಗಿ ದ್ವಿವರ್ಣದ ಚಿತ್ರಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಕೆಂಪು-ಬಿಳಿ ಮಿಶ್ರದ ಮನುಷ್ಯ ಚಿತ್ರಗಳು ಆನೆಗುಂದಿಯ ೪ನೇ ಮತ್ತು ೮ನೇ ಕಲ್ಲಾಸರೆ ಮತ್ತು ಕೊಪ್ಪಳದ ೯ನೇ ಕಲ್ಲಾಸರೆ (ಸ್ತ್ರೀ ಚಿತ್ರ?)ಗಳಲ್ಲಿ ಇವೆ. ಇದೇ ರೀತಿ ಹಳದಿ ಮಿಶ್ರೀತ ತಿಳಿ ಬಣ್ಣದ ಗಂಡು ಹೆಣ್ಣಿನ ಚಿತ್ರ ಕೊಪ್ಪಳದ ೫ನೇ ಕಲ್ಲಾಸರೆಯಲ್ಲಿದೆ.

**ಬೂದಿ ಬಣ್ಣ**

ಮಲ್ಲಾಪುರದ ೧೩ನೇ ಕಲ್ಲಾಸರೆಯಲ್ಲಿ ಬೂದಿಬಣ್ಣದಲ್ಲಿ ಅದ್ದಿ ಮೂಡಿಸಿದ ಹಸ್ತಮುದ್ರೆಗಳಿವೆ.

**ಬಣ್ಣದ ತಯಾರಿಕೆ**

ಪ್ರಾಚೀನ ಜನರ ಬಣ್ಣಗಳನ್ನು ನೈಸರ್ಗಿಕವಾಗಿ ದೊರೆಯುವ ವಸ್ತುಗಳಿಂದ ವಿಶೇಷವಾಗಿ ಖನಿಜ ಶಿಲೆಗಳಿಂದ ತಯಾರಿಸಿಕೊಳ್ಳುತ್ತಿದ್ದರು. ನೇರಳೆ ಬಣ್ಣಕ್ಕಾಗಿ ಮ್ಯಾಂಗನೀಸ್ ಆಕ್ಸೈಡ್ ನ್ನು ಕಪ್ಪುಬಣ್ಣಕ್ಕೆ ಪ್ರಾಣಿಗಳ ಎಲುಬಿನ ಮರದ ಕಾಂಡದ ಇದ್ದಿಲುಗಳನ್ನು ಹಾಗೂ ಕಲ್ಲಿದ್ದಲುಗಳನ್ನು, ಕಂದು, ಕೆಂಪು, ಹಳದಿ, ಕಿತ್ತಳೆ ಬಣ್ಣಗಳಿಗೆ ಕಬ್ಬಿಣದ ಆಕ್ಸೈಡನ್ನು ಬಳಸುತ್ತಿದ್ದರೆಂದು ಹೇಳಲಾಗಿದೆ.[3]

ಈ ಖನಿಜಗಳಿಗೆ ಪ್ರಾಣಿಗಳ ರಕ್ತ ಕೊಬ್ಬು ಮತ್ತು ಮೂತ್ರಗಳನ್ನು ಕೆಲವು ಸಸ್ಯರಸಗಳನ್ನು ಕಲಸಿ ಬಣ್ಣಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ.[4] ಕೊಪ್ಪಳ ಹಂಪಿ ಪ್ರದೇಶದ ಗವಿ ಚಿತ್ರಗಳನ್ನು (ಕೆಂಪುವರ್ಣದ) ಸ್ಥಳೀಯ ಗ್ರಾಮಾಂತರ ಜನತೆ ಸುರಮದ ಚಿತ್ರಗಳೆಂದು ಹೇಳುತ್ತಾರೆ. ಸುರಮ ಎಂಬುದು ಒಂದು ಖನಿಜ ಅದಕ್ಕೆ ವೈಜ್ಞಾನಿಕವಾಗಿ ಆಂಟಿಮನಿ ಎಂದು ಕರೆಯುತ್ತಾರೆ. ಸ್ಟಿಬೆನ್ಯಟ್ ಎನ್ನುವುದು ಆಂಟಿಮನಿಯ ಒಂದು ಅದುರು. ಇದು ಉಕ್ಕಿನ ಅಥವಾ ಬೂದು ಬಣ್ಣದಲ್ಲಿರುವ ಮೆದುವಿನ ಖನಿಜ. ಇದು ತ್ರಿಜ್ಯಾಕಾರದ ಎಳಸುಗಳಂತೆ ದೊರೆಯುತ್ತದೆ.

ಇದನ್ನು ಈಗಲೂ ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಈ ಸುರಮವನ್ನು ಕೆಂಪುವರ್ಣಕ್ಕಾಗಿ ಬಳಸಿರಬಹುದು. ಆಂಟಿಮನಿ ಸಲ್ಫೈಡ್ ಅದುರಿನ ಕಣಗಳು ಬಳ್ಳಾರಿ ಜಿಲ್ಲೆಯ ರಾಮನದುರ್ಗ ಪ್ರದೇಶದಲ್ಲಿ ಇರುವುದಾಗಿ ವರದಿಯಾಗಿದೆ.[5] ಇದರ ಒಂದು ಎಳಸು ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ತೆಂಬಾದ ಲನೇ ಕಲ್ಲಾ ಸರೆಯಲ್ಲಿ ಮಡಕೆಚೂರುಗಳು ಮತ್ತು ಚರ್ಟಶಿಲೆಯ ಚಕ್ಕೆಗಳೊಂದಿಗೆ ದೊರೆತಿದೆ. ಇದು ತ್ರಿಜ್ಯಾಕಾರದಲ್ಲಿದ್ದು ೨ ಸೆಂ.ಮೀ. ಆಳತೆಯಲ್ಲಿದೆ. ಆದರೆ ಆ ಕಲ್ಲಾಸರೆಯಲ್ಲಿ ಯಾವುದೇ ಚಿತ್ರಗಳಿಲ್ಲವಾದರೂ ಈ ಪ್ರದೇಶದ ಚಿತ್ರಗಳಿಗಾಗಿ ಸುರಮವನ್ನು ಬಳಸಿರುವ ಸಾಧ್ಯತೆ ಇದೆ. ಅಲ್ಲದೇ ಬೆಟ್ಟಗಳಲ್ಲಿ ಅಲ್ಲಲ್ಲಿ ಕೆಮ್ಮಣ್ಣಿನ ಹಳದಿ ಬಣ್ಣದ ಮಟ್ಟಿಗಳಿವೆ. ಈಗಲೂ ಹಳ್ಳಿಯ ಜನ ಹಬ್ಬ ಉತ್ಸವಗಳ ಸಂದರ್ಭದಲ್ಲಿ ಮನೆ ಗುಡಿಸಲುಗಳನ್ನು ಸಾರಿಸಿ ಅಲಂಕರಿಸಲು ಇಂಥ ಮಟ್ಟಿಯ ಮಣ್ಣನ್ನು ಬಳಸುತ್ತಾರೆ. ಪ್ರಾಚೀನ ಕಾಲದಲ್ಲೂ ಈ ಮಣ್ಣುಗಳನ್ನು ಬಣ್ಣಕ್ಕಾಗಿ ಬಳಸಿದ್ದಾರೆಂದು ತರ್ಕಿಸಬಹುದು. ಕೆಲವು ಹಳ್ಳಿಯ ಜನ ಈ ಚಿತ್ರಗಳನ್ನು ಹೆಣ್ಣಿನ ಹೆರಿಗೆ ಸಮಯದ ರಕ್ತವನ್ನು ಕೆಮ್ಮಣ್ಣಿಗೆ ಬೆರೆಸಿ ತಯಾರಿಸಿ ಕೆಂಬಣ್ಣದಿಂದ ಬರೆಯಲಾಗಿದೆ ಎಂದು ಹೇಳುತ್ತಾರೆ. ಹಂಪಿ ಮಲ್ಲಾಪುರಗಳಲ್ಲಿ ಮೈ ಮೇಲೆ ಗೆರೆಗಳಿರುವ ವ್ಯಕ್ತಿಗಳ ನಗ್ನ ಚಿತ್ರಗಳಿವೆ. ಇವರಲ್ಲಿ ಗರ್ಭಿಣಿ ಸ್ತ್ರೀಯರು ಇರುವುದುಂಟು. ಇವು ಒಂದು ರೀತಿಯ ಮಾಂತ್ರಿಕ ಕಟ್ಟಳೆಗೆ ಸಂಬಂಧಿಸಿದ ಚಿತ್ರಗಳೆಂದು ತೋರುತ್ತವೆ. ಇಂಥ ಚಿತ್ರಗಳನ್ನು ಮೇಲೆ ಹೇಳಿದ ರಕ್ತ ಬಳಸಿ ಬಿಡಿಸಿರಬಹುದಾದ ಸಾಧ್ಯತೆ ಇದೆ. ಬಿಳಿ ಬಣ್ಣಕ್ಕಾಗಿ ಸುಣ್ಣವನ್ನು (ಸುಣ್ಣದ ಕಲ್ಲು) ಬಳಸಲಗಿದೆ. ಸುಣ್ಣದಲ್ಲಿ ಬೂದಿಯನ್ನು ಬೆರೆಸಿ ಕೆಲವು ಚಿತ್ರಗಳನ್ನು ಬಿಡಿಸಲಾಗಿದೆ. ಟಾಲ್ಕ್ ಎಂದು ಕರೆಯುವ ಒಂದು ರೀತಿಯ ಮೆದು ಬಿಳಿ ಶಿಲೆಯು ಈ ಪ್ರದೇಶದಲ್ಲಿ ಅಲ್ಲಲ್ಲಿ ದೊರೆಯುತ್ತದೆ. ಅದನ್ನು ಬಿಳಿ ಬಣ್ಣಕ್ಕಾಗಿ ಬಳಸಿರುವ ಸಾಧ್ಯತೆಯು ಇದೆ.

[1] ಮಟಪಲ್, ವಾಯ್, ೧೯೮೪, ಪೂರ್ವೋಕ್ತ.

[2] ಸುಂದರ ಅ.ಸಂ. ೧೧೯೭, ಪೂರ್ವೋಕ್ತ,

[3] ಸುಬ್ರಮಣ್ಯಂ ಕೆ.ವಿ., ೧೯೯೨, ಪೂರ್ವಕ್ತ, ಪು. ೬.

[4] *ದಿ ಗ್ರ್ಯಾಂಡ್ ಕ್ಯನನ್ಸ್, ಹಿಡನ್ ಆರ್ಟ್ ಗ್ಯಾಲರೀಸ್,* ೨೦೦೦, ಎನ್.ಜಿ., ಸಂ. ೧೬೭, ನಂ.೪.

[5] ಗವಿಶೆಟ್ಟಿ, ಕೆ., ೧೯೯೫, ಅದೇ.

## ೨. ಎರಡನೆಯ ಶತಮಾನದ ಎರಡು ಅಪೂರ್ವ ಬಿಳಿಯ ಜೇಡಿಮಣ್ಣಿನ ಗೊಂಬೆಗಳು

ಸುಮಾರು ೧೯೮೭ರ ಫೆಬ್ರವರಿಯಲ್ಲಿ ಹಂಪೆಯ ಬಳಿ ಇರುವ ಕಮಲಾಪುರದಲ್ಲಿ ಚಿತ್ರದುರ್ಗದ ಶ್ರೀ ವೆಂಕಟೇಶ ಐತಾಳ ಅವರು ಸಂಗ್ರಹಿಸಿದ ಎರಡು ಬಿಳಿಯ ಜೇಡಿಮಣ್ಣಿನ ಗೊಂಬೆಗಳು ಪ್ರಾಚೀನ ಇತಿಹಾಸ ದೃಷ್ಟಿಯಿಂದ ಗಮನೀಯವಾಗಿವೆ. ಅವುಗಳನ್ನು ಶ್ರೀ ಐತಾಳ ಅವರು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ವಸ್ತುಸಂಗ್ರಹಾಲಯಕ್ಕೆ ಅರ್ಪಿಸಿರುವರು. ನಾನು ಈ ಹಿಂದೆ, ಅಂದರೆ ೧೯೮೮ರ ಮೇ ತಿಂಗಳಲ್ಲಿ, ಧರ್ಮಸ್ಥಳಕ್ಕೆ ಶ್ರೀ ಹೆಗ್ಗಡೆಯವರ ಆಹ್ವಾನದ ಮೇಲೆ ಹೋಗಿದ್ದೆ. ಅಲ್ಲಿ ಪ್ರದರ್ಶಿತವಾದ ಎಲ್ಲ ಶಿಲ್ಪಗಳ, ಅವಶೇಷಗಳ ಪರಿಶೀಲನೆ ನಡೆಸುತ್ತಿದ್ದಾಗ ಕಮಲಾಪುರದ ಎರಡು ಬಿಳಿಯ ಜೇಡಿಮಣ್ಣಿನ (Stucco) ಗೊಂಬೆಗಳು ನನ್ನ ಗಮನವನ್ನು ವಿಶೇಷವಾಗಿ ಸೆಳೆದವು. ಇವೆರಡೂ ಗೊಂಬೆಗಳಲ್ಲಿ ಪ್ರಾಚೀನ ವೈಶಿಷ್ಟ್ಯತೆಗೆ ಪ್ರಸಿದ್ಧವಾದ ಗಾಂಧಾರ ಶೈಲಿಯ ಲಕ್ಷಣಗಳು ಕಂಡುಬಂದವು ಕ್ರಿಸ್ತಶಕ ಸುಮಾರು ಒಂದು ಮತ್ತು ಎರಡನೆಯ ಶತಮಾನದಲ್ಲಿ ಇಂದಿನ ವಾಯವ್ಯ ಗಡಿಪ್ರದೇಶದ ಭಾಗವಾಗಿದ್ದ ಗಾಂಧಾರದ ಕಲೆಯ ಬಗೆಗೆ

ಈಗಾಗಲೇ ಸಾಕಷ್ಟು ಪರಿಚಯವಾಗಿದೆ. ಆದರೆ ದಕ್ಷಿಣಭಾರತದ ಹಂಪೆಯ ಪ್ರದೇಶದಲ್ಲಿ ದೊರೆತಿರುವ ಗಾಂಧಾರ ಲಕ್ಷಣವೆತ್ತಿರುವ ಬಿಳಿಯ ಜೇಡಿಮಣ್ಣಿನ ಗೊಂಬೆಗಳು ಅತ್ಯಂತ ಪ್ರಮುಖವಾದುವಾಗಿವೆ. ಈ ಗೊಂಬೆಗಳು ಗುರುತಿಸಲಾಗದಷ್ಟು ಮುರಿದು ಸವೆದಿದ್ದು, ಈ ಪ್ರಬಂಧದಲ್ಲಿ ಅವುಗಳ ಸಂಶೋಧನಾತ್ಮಕ ಅಧ್ಯಯನವನ್ನು ಮಾಡಲಾಗಿದೆ.

**ಒಂದನೆಯ ಬಿಳಿಯ ಜೇಡಿಮಣ್ಣಿನ ಗೊಂಬೆ**

ಇದು ಬಹುಮಟ್ಟಿಗೆ ಬುದ್ಧ ಅಥವಾ ಬೋಧಿಸತ್ವ (ಅಥವಾ ಸೈನಿಕ?)ನ ಅಭಿವ್ಯಕ್ತತೆ ಎನ್ನಬಹುದು. ಆದರೆ ಈ ವಿಗ್ರಹವು ತಲೆ, ಕೈ-ಕಾಲುಗಳನ್ನು ಕಳೆದುಕೊಂಡು ಭಿನ್ನವಾಗಿದೆ. ಇದರ ಈಗಿನ ಗಾತ್ರವು ೯.೦ ಸೆ.ಮೀ. ಎತ್ತರ, ೪.೦೭ ಸೆಂ.ಮೀ. ಅಗಲ ಹಾಗೂ ೨.೦೩ ಸೆಂ.ಮೀ. ದಪ್ಪವಾಗಿದೆ. ಈ ಗೊಂಬೆಯ ಅಧೋವಸ್ತ್ರದ ಸರಳ ನೆರಿಗೆಗಳು ಮಂಡಿಯ ಕೆಳಭಾಗದವರೆಗೂ ಜೋತು ಬಿದ್ದಿದ್ದು, ಎಡಭುಜದ ಮೇಲಿನಿಂದ ಹೊದೆಯಲಾಗಿರುವ ಹಾಗೂ ಕೆಳಕ್ಕೆ ಜೋಲಾಡುತ್ತಿರುವ ಉತ್ತರೀಯವು ನವಿರಾದ ನೆರಿಗೆಗಳಿಂದ ಕೂಡಿ ಆ ಕಾಲದ ವಸ್ತ್ರನೈಜತನೆಯನ್ನು ವ್ಯಕ್ತಪಡಿಸುತ್ತವೆ. ಈ ಗೊಂಬೆಯ ಸೊಂಟದ ಬಲಭಾಗದಲ್ಲಿ ಕತ್ತಿಯನ್ನು ತೂಗು ಹಾಕಿಕೊಳ್ಳಲು ಒರೆಯ ಹಿಡಿಯನ್ನು ಅಲವಡಿಸಿರುವಂತೆ ತೋರುತ್ತದೆ. ಈ ಅಭಿಪ್ರಾಯವು ಪೂರಕವಾಗುವುದಾದರೆ, ಇದು ಯಾವುದೋ ಯೋಧನ ಪ್ರತಿಕೃತಿಯಾಗಿದೆ ಎನ್ನಬಹುದು. ಆದರೆ ಅದರ ವಸ್ತ್ರಾಲಂಕಾರವು ಯೋಧನದಾಗಿರದೆ ಬುದ್ಧ ಅಥವಾ ಬೋಧಿಸತ್ವನ ಗಾಂಧಾರ ವಿಗ್ರಹಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂತಹದಾಗಿದೆ. ಪ್ರಸ್ತುತ ಮಣ್ಣಿನ ಬೊಂಬೆಯ ಬಗೆಗೆ ಈಗ ನಮಗೆ ದೊರೆತಿರುವ ಸ್ಥಿತಿಯಲ್ಲಿಯೇ ಸ್ಪಷ್ಟವಾಗಿ ಹೇಳಬರುವಂತಿಲ್ಲ. ಅತ್ಯಂತ ಸೂಕ್ಷ್ಮ ಮತ್ತು ಶುದ್ಧವಾದ ಹಾಗೂ ಮುರಿಯುವಂತಹ ಬಿಳಿ ಜೇಡಿಮಣ್ಣಿನಲ್ಲಿ ದಂತಕಪ್ಪು ವರ್ಣದ ಲೇಪನದೊಡನೆ ಈ ಗೊಂಬೆಯನ್ನು ತಯಾರಿಸಿರುವುದು ಗಮನೀಯವಾಗಿದೆ.

ಇಲ್ಲಿ ಚರ್ಚಿಸಲಾಗಿರುವ ಮಣ್ಣಿನ ಗೊಂಬೆಗಳಲ್ಲಿ ಕಂಡುಬರುವ ವೈವಿಧ್ಯಮಯ ನೆರಿಗೆಗಳುಳ್ಳ ಗ್ರೀಕೋ-ರೋಮನ್ನರ ಶಿಲ್ಪಗಳಲ್ಲಿಯ ವಸ್ತ್ರಾಲಂಕಾರದ ಲಕ್ಷಣಗಳು, ಈಗ ಪಾಕಿಸ್ತಾನದಲ್ಲಿರುವ ಗಾಂಧಾರ ಪ್ರದೇಶದ ಪ್ರಾಚೀನ ಬೌದ್ಧ ನಿವೇಶನಗಳಲ್ಲಿ ದೊರೆತ ಕ್ರಿ.ಶ. ೧-೨ನೆಯ ಶತಮಾನಗಳ ಶಿಲ್ಪಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಹಂಪೆಯ ಗೊಂಬೆಗಳನ್ನು ಗಾಂಧಾರ ಶೈಲಿಯ ಶಿಲ್ಪಗಳೊಂದಿಗೆ ತುಲನಾತ್ಮಕವಾಗಿ ನೋಡಿದಾಗ, ಇವುಗಳು ನಿಸ್ಸಂದೇಹವಾಗಿಯೂ ಎರಡನೆಯ ಶತಮಾನಕ್ಕೆ ಸೇರುತ್ತವೆನ್ನಬಹುದು. ಅತ್ಯಂತ ನುಣುಪಾದ ಜೇಡಿಮಣ್ಣಿನಿಂದ ಸಿದ್ಧಗೊಂಡ ಸೂಕ್ಷ್ಮ ನೆರಿಗೆಗಳೊಡನೆ ಕೂಡಿದ ಈ ಗೊಂಬೆಗಳನ್ನು ಹಂಪೆಯ ಪ್ರಾಗಿತಿಹಾಸ ಕಾಲದ ಕಲಾವಂತಿಕೆ ರಹಿತ ಗೊಂಬೆಗಳೊಡನೆ ಹೋಲಿಸಿದಾಗ, ಇವು ಸ್ಥಳೀಯವಾಗಿ ತಯಾರಾದುವಲ್ಲವೆಂಬುದು ವ್ಯಕ್ತಪಡುತ್ತದೆ. ಪ್ರಾಯಶಃ ಈ ಗೊಂಬೆಗಳು ವ್ಯಾಪಾರ-ವಾಣಿಜ್ಯ ಸಂಬಂಧದಲ್ಲಿ ಗಾಂಧಾರ ಪ್ರದೇಶದಿಂದ ಹಂಪೆಯ ಪ್ರದೇಶಕ್ಕೆ ರವಾನೆಯಾಗಿದ್ದಿರಬೇಕು.

**ಗೊಂಬೆಯ ಪೀಠ**

ಇನ್ನೊಂದು ಗೊಂಬೆಯ ಮುಖ್ಯ ಭಾಗವೆನ್ನಬಹುದಾದ ನಾಜೂಕಾದ ಆಯಾತಾಕಾರದ ಚಿಕ್ಕ ಪೀಠದ ಅಳತೆಯು ೮.೨. ಸೆಂ.ಮೀ. ಉದ್ದ, ೩.೦.ಸೆಂ.ಮೀ. ಎತ್ತರವಿದೆ. ಇದರ ಮುಂಭಾಗದಲ್ಲಿ ಎರಡು ಸಮಾನಾಂತರ ರೇಖೆಗಳನ್ನು ಕೊರೆಯಲಾಗಿದೆ ಹಾಗೂ ಇದರಲ್ಲಿ ಮೂರು ಉಬ್ಬು ವಿನ್ಯಾಸಗಳು ಅತ್ಯಂತ ಸುಂದರವಾಗಿ ಮೂಡಿ ಬಂದಿವೆ. ಇದರ ಮೇಲ್ಭಾಗವನ್ನು ನಸು ಕಂದುಬಣ್ಣದಿಂದ ಲೇಪಿಸಲಾಗಿದೆ.

ಹಂಪೆಯ ಮಹಾನವಮಿ ದಿಬ್ಬದ ಪರಿಸರದಲ್ಲಿ ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾಲಯವು ಕಾರ್ಯ ರೂಪಗೊಳಿಸಿದ ಉತ್ಖನನದಿಂದ ಒಂದು ಬಿಳಿಯ ಜೇಡಿಮಣ್ಣಿನ ಮನುಷ್ಯನ ಶಿರಭಾರವೊಂದು ಬೆಳಕಿಗೆ ಬಂದಿದೆ.[1] ಈ ಮಣ್ಣಿನ ಗೊಂಬೆಯ ತಲೆಯುಡಿಗೆಯ ವಿನ್ಯಾಸವು ಗಾಂಧಾರಶೈಲಿಯನ್ನು ಹೋಲುತ್ತದೆ. ಗಾರೆ ಹಾಗೂ ಮಣ್ಣಿನ ಶಿಲ್ಪಗಳು ವಿಜಯನಗರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಉತ್ಖನನದಿಂದ ಬೆಳಕಿಗೆ ಬಂದಿರುವ ಈ ಗೊಂಬೆಯ ಭಾಗವು ವಿಜಯನಗರದ ಗಾರೆ ಶಿಲ್ಪಗಳಿಗಿಂತಲೂ

ಉನ್ನತಮಟ್ಟದ್ದೆಂದು ಹೇಳಬಹುದಾಗಿದೆ. ಆದುದರಿಂದ ಇಲ್ಲಿ ದೊರೆತಿರುವ ಶಿರದ ಭಾಗವು ಅತ್ಯಂತ ಮುಖ್ಯವಾದುದಾಗಿದೆ. ಬೆಳಗಾವಿ ನಗರದ ಭಾಗವಾಗಿರುವ ವಡಗಾಂವ್-ಮಾಧವ ಪುರದ ಉತ್ಖನನ ಕಾಲದಲ್ಲಿ ದೊರೆತ ಕಪ್ಪು ಜೇಡಿಮಣ್ಣಿಗೆ ಗೊಂಬೆಯ ಶಿರಭಾಗವು ಬಹುಶಃ ಬುದ್ಧನನ್ನು ಪ್ರತಿನಿಧಿಸುತ್ತದೆ.[2] ಇದು ಸಹಾ ಗಾಂಧಾರಶೈಲಿಯನ್ನು ಹೋಲುತ್ತದೆ.

ಹಂಪೆಯ ಉತ್ಖನನ ಕಾರ್ಯದಲ್ಲಿ ಸಿಕ್ಕಿರುವ ಕ್ರಿ.ಶ. ೧ ಮತ್ತು ೨ನೆಯ ಶತಮಾನದ ಸುಣ್ಣದ ಹಲಗೆಯ ಮೇಲಿರುವ ಬ್ರಾಹ್ಮಿ ಶಾಸನವನ್ನು "ತರಸಾ ಪುತಸಾ ದಾನಮ್" ಎಂದು ಅರ್ಥೈಸಲಾಗಿದೆ.[3] ಹಜಾರರಾಮಸ್ವಾಮಿ ದೇವಾಲಯದ ಸಮೀಪದಲ್ಲಿ ಉತ್ಖನನ ನಡೆಸಿದಾಗ ದೊರೆತ ಅವಶೇಷಗಳಲ್ಲಿ ಶಾಸನ ಬರಹವುಳ್ಳ ಬೌದ್ಧ ಜಾತಕ ಕಥೆಗಳನ್ನು ಪ್ರತಿನಿಧಿಸುವ ಕೆತ್ತನೆಯುಳ್ಳ ಫಲಕಗಳು ಮತ್ತು 'ಆಯಕ' ಸ್ತಂಭವು (ಎಲ್ಲವೂ ಸುಣ್ಣ ಕಲ್ಲಿನಲ್ಲಿ ತಯಾರಿಸಲ್ಪಟ್ಟಿವೆ.) ಅತ್ಯಂತ ಗಮನೀಯವಾಗಿವೆ. ವಿಜಯವಿಠ್ಠಲಸ್ವಾಮಿ ದೇವಾಲಯ ಪರಿಸರದ ಪುರಾತನ ನಿವೇಶನವೆಂದು ತೀರ್ಮಾನಿಸಲಾಗಿರುವ ಮೊಸಳಯ್ಯನ ಗುಡ್ಡದ ಮೇಲ್ಭಾಗದ ಮತ್ತು ೧೯೮೨ರಲ್ಲಿ ನಾನೇ ಪರಿಶೋಧಿಸಿದಾಗ ಮಾತಂಗ ಪರ್ವತದ ತಪ್ಪಲಲ್ಲಿ ದೊರೆತ ಅವಶೇಷಗಳು ಹೊಸ ಶಿಲಾಯುಗ (ಕ್ರಿ.ಪೂ.ಸು. ೨೦೦೦-೧೦೦೦) ಮತ್ತು ಪ್ರಾಗ್ ಇತಿಹಾಸಯುಗ (ಕ್ರಿ.ಪೂ. ೩೦೦-ಕ್ರಿ.ಶ. ೨೦೦) ಸಂಸ್ಕೃತಿಗಳ ಪ್ರತೀಕಗಳಾಗಿವೆ. ಈ ಉದಾಹರಣೆಗಳಿಂದ ಹಂಪೆಯ ಪರಿಸರವು ಹೊಸ ಶಿಲಾಯುಗದಲ್ಲಿಯೇ ಜನನಿಬಿಡ ಪ್ರದೇಶವಾಗಿದ್ದುದಲ್ಲದೆ ಮಾನವನ ಚಟುವಟಿಕೆಗಳ ಕೇಂದ್ರವಾಗಿ ವಿಕಾಸ ಪಡೆಯುತ್ತಿದ್ದಿತೆಂದು ವ್ಯಕ್ತಪಡುತ್ತದೆ.

ಈ ಪ್ರಾಗ್ಇತಿಹಾಸ ಕಾಲದಲ್ಲೆ ಬೌದ್ಧಸ್ತೂಪವೊಂದು ಇಲ್ಲಿ ನಿರ್ಮಾಣಗೊಂಡು, ನಂತರ ಮಧ್ಯಕಾಲದ ವೇಳೆಗೆ ಅಲಕ್ಷ್ಯಕ್ಕೊಳಪಟ್ಟು ಅದು ನಿರುಪಯುಕ್ತವಾಯಿತು. ಅನಂತರವೂ ಈ ಪ್ರದೇಶದಲ್ಲಿ ಚುರುಕಾಗಿ ನಡೆದ ರಾಜಧಾನಿಯ ನಿರ್ಮಾಣದಲ್ಲಿ, ಸಹಜವಾಗಿಯೇ ಅಲಕ್ಷಿಸಲ್ಪಟ್ಟಿದ್ದ ಬೌದ್ಧಸ್ತೂಪದ ಇಂತಹ ಅವಶೇಷಗಳನ್ನೂ ಬಳಸಿರಬಹುದಾಗಿದೆ. ಇಲ್ಲಿರುವ ಅತಿ ಉಬ್ಬು ಶಿಲ್ಪಗಳುಳ್ಳ ಫಲಕಗಳು ಅನಂತರದ ಅಮರಾವತಿ ಅಥವಾ ಇಕ್ಷ್ವಾಕು ಶೈಲಿಯನ್ನು ಹೋಲುತ್ತವೆ. ಉಡೆ ಗೋಲಮ್ ಮತ್ತು ನಿಟ್ಟೂರುಗಳಲ್ಲಿ ದೊರೆತಿರುವ ಅಶೋಕ ಸಾಮ್ರಾಟನ ವೈಯಕ್ತಿಕ ಹೆಸರನ್ನು ಸೂಚಿಸುವ ಬಂಡೆಶಾಸನಗಳು ಮತ್ತು ಅಲ್ಲಿಯ ಇತರೆ ಪ್ರಾಚ್ಯ ನಿವೇಶನಗಳು ಹಂಪೆಯಿಂದ ಸ್ವಲ್ಪ ಅಂತರದಲ್ಲಿ ಇವೆ.

ಆದ್ದರಿಂದ ಇದುವರೆಗೆ ಚರ್ಚಿಸಲಾಗಿರುವ ಆಧಾರದ ಮೇಲೆ, ಹಂಪೆಯು ಕೂಡಾ ಉತ್ತರದಲ್ಲಿಯ ತೇರ್ ಮತ್ತು ಸನ್ನತಿ, ದಕ್ಷಿಣದಲ್ಲಿಯ ಚಂದ್ರವಳ್ಳಿ, ಪಶ್ಚಿಮದಲ್ಲಿಯ ವಡಗಾಂವ್-ಮಾಧವಪುರ ಮತ್ತು ಕೊಲ್ಲಾಪುರ ಮುಂತಾದ ಪ್ರಸಿದ್ಧ ಪ್ರಾಚೀನ ವ್ಯಾಪಾರ ವಾಣಿಜ್ಯ ಕೇಂದ್ರಗಳಂತೆಯೇ ಒಂದು ಪ್ರಮುಖ ಕೇಂದ್ರವಾಗಿದ್ದು, ದೂರ ಪ್ರದೇಶಗಳ ವರ್ತಕರನ್ನು ಆಕರ್ಷಿಸುತ್ತಿದ್ದಿತು. ಈ ವಿವರಗಳೇ ಪ್ರಸ್ತುತ ಗಾಂಧಾರಶೈಲಿಯ ಬಿಳಿಯ ಮಣ್ಣಿನ ಗೊಂಬೆಗಳ ಇರುವಿಕೆಗೆ ಕಾರಣವೆಂಬುದನ್ನು ಸ್ಪಷ್ಟಪಡಿಸುತ್ತವೆ.*

**(ಕನ್ನಡಾನುವಾದ/ಎನ್.ಎ. ಜಗನ್ನಾಥ್)**

**ಆಕರ : ಇತಿಹಾಸ ದರ್ಶನ, ಸಂ. ೪, ೧೯೮೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ಪು. ೨೯-೩೦.**

[1] Indian archaeology, A Review, An annual Report of the Archaeological survey of India, New Delhi, 1978-79 : 45, Plate XIV.

[2] A. Sudara : ‘A Two Thousand Year Old Town and its Architecture in Vadgaon-Madhavapur (Belgaum)’, Madhu (Shri M.N. Deshpande Festschrift), Delhi, 1981, pp. 87-89, Plate XXIII.

[3] **I.A.R.,** 1975-76, p. 20.

* ಎರಡು ಬಿಳಿಯ ಜೇಡಿಮಣ್ಣಿನ ಗೊಂಬೆಗಳ ಅಧ್ಯಯನಕ್ಕೆ ಅನುಮತಿ ನೀಡಿ ಈ ಪ್ರಬಂಧವನ್ನು ಪೂರೈಸಲು ಅವಕಾಶ ಕಲ್ಪಿಸಿಕೊಟ್ಟುದಕ್ಕೆ ನಾನು ಧರ್ಮಸ್ಥಳ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಆಭಾರಿಯಾಗಿದ್ದೇನೆ.

## ೩. ಉತ್ಖನನದಲ್ಲಿ ದೊರೆತ ಮುದ್ರೆಗಳು

ಮುದ್ರೆಗಳು ಸಿಂಧೂಕಂದರ ನಾಗರೀಕತೆಗಳ ಕಾಲದಷ್ಟು ಪ್ರಾಚೀನ. ಈ ಮುದ್ರೆಗಳ ಉಪಯೋಗ ಮತ್ತು ಅದರ ಮೇಲಿನ ಲಿಪಿಯ ಬಗ್ಗೆ ಅನೇಕ ವಾದ-ವಿವಾದಗಳಿದ್ದರೂ ಇವು ಆ ಕಾಲದ ಇತಿಹಾಸದ ಪುನರ್ರಚನೆಯಲ್ಲಿ ತಮ್ಮದೇ ಆದ ಕೀಲಕ ಪಾತ್ರವನ್ನು ನಿರ್ವಹಿಸಿದ್ದು, ಮುಖ್ಯ ಆಕರ ಸಾಮಗ್ರಿಗಳೆನ್ನುವ ಅಂಶ ಮಾತ್ರ ನಿರ್ವಿವಾದದ್ದು. ಉತ್ತರ ಭಾರತದಲ್ಲಿ ಇತಿಹಾಸ ಯುಗದ ಆರಂಭ ಕಾಲದಿಂದ ಸುಮಾರು ಹತ್ತನೆಯ ಶತಮಾನದವರೆಗೆ ವಿವಿಧ ರೀತಿಯಲ್ಲಿ ಉಪಯೋಗಿಸಲಾಗಿರುವ ಮುದ್ರೆಗಳು ಬೆಳಕಿಗೆ ಬಂದಿದ್ದರೂ, ದಕ್ಷಿಣ ಭಾರತದಲ್ಲಿ ಇವು ತೀರ ಕಡಿಮೆ. ಪ್ರಾಮಾಣ್ಯದ ಖಾತರಿಗಾಗಿ ವಿವಿಧ ರೀತಿಯಲ್ಲಿ ಉಪಯೋಗಿಸಲಾಗಿರುವ ಮುದ್ರೆಗಳು ಬಹುಮುಖ್ಯವಾಗಿದ್ದರೂ, ವಿಜಯನಗರದ ಕಾಲಕ್ಕೆ ಸಂಬಂಧಿಸಿದಂತೆ ಇವುಗಳ ಲಭ್ಯ ಬೆರಳೆಣಿಕೆಯಷ್ಟು.

ಹಂಪಿ ರಾಷ್ಟ್ರೀಯ ಯೋಜನೆಯ ಅಂಗವಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು, ಹಂಪಿಯ ’ರಾಜಾಂಗಣ’ ಪ್ರದೇಶದಲ್ಲಿ ನಡೆಸಲಾದ ಸುಮಾರು ಒಂದು ದಶಕಕ್ಕೂ ಹೆಚ್ಚಿನ ಕಾಲದ ಉತ್ಖನನದಲ್ಲಿ ಇದುವರೆವಿಗೂ ೫೯,೦೦೦ ಚ.ಮೀ.ಗಳ ಸ್ಥಳವನ್ನು ವೈಜ್ಞಾನಿಕ ರೀತ್ಯ ಪರಿಶೋಧಿಸಲಾಗಿದೆ. ಈ ಉತ್ಖನನದಿಂದಾಗಿ ಅನೇಕ ರೀತಿಯ ಕಟ್ಟಡಗಳ ತಲವಿನ್ಯಾಸವು ತಿಳಿಯುವಂತಿದ್ದು ನಿಖರವಾಗಿ ಗುರುತಿಸಬಹುದಾದ ಅರಮನೆಯ ಸಂಕೀರ್ಣ, ಕಾವಲುಗಾರರ ಮನೆ, ಉಗ್ರಾಣಗಳಲ್ಲದೇ ಜಲ ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಕುರಿತಂತೆ ಸೂಕ್ತ ಮಾಹಿತಿ ದೊರೆತಿದೆ. ಜೊತೆಗೆ ವಿವಿಧ ರೀತಿಯ ಶಿಲೆ, ಸುಟ್ಟ ಮಣ್ಣು, ಗಚ್ಚು-ಗಾರೆ ಮುಂತಾದ ಮಾಧ್ಯಮಗಳಲ್ಲಿ ರೂಪಿಸಲಾದ ನೂರಾರು ಪ್ರಾಚ್ಯ ಅವಶೇಷಗಳು ಬಗೆ ಬಗೆಯ ನಾಣ್ಯಗಳು, ಒಡವೆ ಮತ್ತು ವೈವಿಧ್ಯಮಯವಾದ ಮಣ್ಣಿನ ಪಾತ್ರೆಗಳೂ ದೊರೆತಿವೆ. ಇಂತಹ ಅನೇಕ ಪ್ರಾಚ್ಯವಸ್ತ್ರ ವಿಶೇಷಗಳಲ್ಲಿ ಸುಟ್ಟ ಮಣ್ಣಿನ ಹಾಗೂ ಕಲ್ಲಿನ ಮುದ್ರೆಗಳು ಮಹತ್ವದ್ದಾಗಿವೆ.

ಈಗಾಗಲೇ ನಮಗೆ ತಿಳಿದಿರುವಂತೆ ಮುದ್ರೆಯು ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ರಚನೆಗೆ ಪ್ರಾಥಮಿಕ ಆಕರಗಳಾಗಿ ಕಲೆ, ಪ್ರತಿಮಾ ಲಕ್ಷಣ, ವ್ಯಾಪಾರ ಮತ್ತು ವಾಣಿಜ್ಯ, ಅರಸರ ಕಾಲ ಹಗೂ ಆಡಳಿತಗಳ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದೆ. ‘ರಾಜಾಂಗಣ’. ಮತ್ತು ರಾಜಾಂಗಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿಶೇಷ ಉತ್ತರದ ಕಡೆ ನಡೆಸಿದ ಉತ್ಖನನದಲ್ಲಿ ಮೂರು ಮುದ್ರೆಗಳು ದೊರೆತಿವೆ. ಈ ಮುದ್ರೆಗಳು ಶಂಖುವಿನಾಕಾರದಲ್ಲಿದ್ದು, ಕಪ್ಪು ಮತ್ತು ಬೂದು ಬಣ್ಣಗಳ ಮಿಶ್ರಣದವಾಗಿದ್ದು, ಅಧಿಕ ಉಷ್ಣೋಗ್ರತೆಯಲ್ಲಿ ಸುಡಲಾಗಿದೆ. ಇವುಗಳು ೧೦ ಸೆಂ. ಮೀ. ನಿಂದ ೧ ೧/೨ ಮೀಟರಿನ ಆಳದಲ್ಲಿ ದೊರೆತಿದ್ದು ಮುದ್ರೆಗಳ ತಳಭಾಗದಲ್ಲಿ ೧ ಸೆಂ.ಮೀ.ನಿಂದ ೪ ಸೆಂ.ಮೀ.ಗಳ ವ್ಯಾಸವನ್ನು ಹೊಂದಿವೆ. ಸಾಮಾನ್ಯವಾಗಿ ಮುದ್ರೆಗಳ ತಳಭಾಗವು ಸಮತಟ್ಟಾಗಿದ್ದು ಅದರ ಹಿಡಿಯು ಮೇಲ್ತುದಿಯಲ್ಲಿದೆ. ಈ ಕಠಾರಿಯ ಇಕ್ಕೆಲಗಳಲ್ಲಿ ಸೂರ್ಯ ಮತ್ತು ಚಂದ್ರರ ಕೆತ್ತನೆಯಿದ್ದು ವಿಜಯನಗರದ ಅರಸರ ರಾಜ ಲಾಂಛನವನ್ನು ಹೋಲುತ್ತದೆ. ಎರಡನೆಯ ಅಥವಾ ಮಧ್ಯಭಾಗವು ‘ಶ್ರೀವಿರಬು’ ಎಂಬ ಅಕ್ಷರಗಳನ್ನು ಹೊಂದಿದ್ದು ತಳಭಾಗವು ಅಥವಾ ಕೊನೆಯ ‘ಕರಾಯ’ ಎಂಬ ಅಕ್ಷರಗಳನ್ನು ಹೊಂದಿದ್ದು; ಕೂಡಿಸಿದಾಗ ‘ಶ್ರೀವಿರಬುಕರಾಯ’ ಎಂಬುದಾಗಿ ಓದಬಹುದಾಗಿದ್ದು ವಿಜಯನಗರದ ಅರಸರ ಕಾಲದ ನಾಣ್ಯಗಳ ಒಂದು ಮುಖವನ್ನು ಹೋಲುತ್ತವೆ. ಆದರೆ ವಿಜಯನಗರದ ಕಾಲದ ನಾಣ್ಯಗಳಂತೆ ಮುದ್ರೆಗಳು ಕಲಾತ್ಮಕ ಅಂಚನ್ನು ಹೊಂದಿರುವುದಿಲ್ಲ. ಅಕ್ಷರಗಳು ನಾಗರ

ಲಿಪಿಯಲ್ಲಿದ್ದು ಶೈಲಿಯ ದೃಷ್ಟಿಯಿಂದ ಕ್ರಿ.ಶ. ೧೪ನೆಯ ಶತಮಾನದ ಲಿಪಿಯಂತಿದ್ದು ಒಂದನೇ ಬುಕ್ಕರಾಯನ ಕಾಲದ ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲ್ಮುಖದಲ್ಲಿ ಕಾಣುವ ಆಖ್ಯಾಯಿಕೆಯನ್ನು ಹೋಲುತ್ತದೆ.

ಅಂದಿನ ದಿನಗಳಲ್ಲಿ ಅರಮನೆಯ ಪ್ರವೇಶ ಅಥವಾ ಕಾರ್ಯಸದನದ ಪ್ರವೇಶ ಬಹಳ ಪ್ರಯಾಸಕರವಾಗಿತ್ತೆಂದು ನಮ್ಮ ದೇಶದ ಮಹಾಕಾವ್ಯಗಳಲ್ಲೊಂದಾದ ಮಹಾಭಾರತದಲ್ಲಿಯೂ ಮತ್ತು ಕೌಟಿಲನ್ಯ ಅರ್ಥಶಾಸ್ತ್ರದಲ್ಲೂ ಉಲ್ಲೇಖಿಸಲಾಗಿದೆ. ಅದರಲ್ಲೂ ದ್ವಿತೀಯ ಆಯಾಮದಲ್ಲಿ ಪ್ರವೇಶ ಬಯಸುವುದು ಇನ್ನೂ ಕಷ್ಟಕರವಾಗಿತ್ತು. ಆಡಳಿತಾತ್ಮಕ ದೃಷ್ಟಿಯಿಂದಲೂ ಮತ್ತು ರಕ್ಷಾಣಾತ್ಮಕ ದೃಷ್ಟಿಯಿಂದಲೂ ಅಂತಹ ಪ್ರವೇಶ ಬಯಸುವ ಯಾರನ್ನೇ ಆಗಲಿ ಕಟ್ಟುನಿಟ್ಟಿನ ತಪಾಸಣೆಗೆ ಒಳಪಡಿಸುತ್ತಿದ್ದರು. ತುರ್ತು ಪರಿಸ್ಥಿತಿಯಲ್ಲಂತೂ ಈ ತಪಾಸಣೆಯು ಮತ್ತಷ್ಟು ಬಿಗಿಯಿಂದ ಕೂಡಿರುತ್ತಿತ್ತು. ಈ ಬಗ್ಗೆ ವಿದೇಶಿ ಯಾತ್ರಿಕರಾದ ನ್ಯೂನಿಜ್, ಅಬ್ದುಲ್ ರಜಾಕ್, ಡಾಮಿಂಗೊ ಪಾಯೆಶ್ ಮುಂತಾದವರ ಬರವಣಿಗೆಗಳಲ್ಲಿ ಉಲ್ಲೇಖವಿದ್ದು, (ತಡೆಗೋಡೆ) ಪರದೆ ಗೋಡೆಗಳ ವಂಕಿಯಾದ ಪ್ರವೇಶದ್ವಾರದಿಂದ ಈ ವಿಷಯಕ್ಕೆ ಉತ್ತಷ್ಟು ಪುಷ್ಟಿ ದೊರೆತಿದೆ.

ಅರಸನ ಕಾರ್ಯಕಾರಿ ಸದನದಲ್ಲಿ ರಾಜಾಜ್ಞೆಗಳನ್ನು ಅಥವಾ ಶಾಸನಗಳನ್ನು ಅಧಿಕೃತವಾಗಿ ವಿಧಿವತ್ತಾಗಿ ಹೊರಡಿಸಲು ಮುದ್ರೆಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಉತ್ಖನನದಲ್ಲಿ ದೊರೆತ ಅಪಾರ ಸಂಖ್ಯೆಯ ಬಳಪದ ಕಲ್ಲಿನ ಕಡ್ಡಿಗಳನ್ನು 'ಕಡಿತ'ಗಳನ್ನು ಬರೆಯಲು ಉಪಯೋಗಿಸುತ್ತಿದ್ದರು. ಸಹಜವಾಗಿಯೇ ಪ್ರತಿಯೊಂದು ಕಡಿತವು 'ದೊರೆ' ಅಥವಾ ಆತನ ಪ್ರತಿನಿಧಿ ಅಧಿಕಾರಿಗೂ ಪರಿಶೀಲನೆಗೊಳಪಟ್ಟಿದ್ದುದರ ಕುರುಹಾಗಿ ರಾಜಮುದ್ರೆಯನ್ನು ಹೊಂದಿರುತ್ತಿದ್ದುವು.

ಈ ಮುದ್ರೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಶೇಷವಾಗಿ ಶಂಖುವಿನಾಕಾರದ ಮುದ್ರೆಗಳ ಹಿಡಿಯು ಮರದ ಅಥವಾ ದಂತದ ಕೈಪಿಡಿಯನ್ನು ಹೊಂದಿತ್ತೆಂಬುದಾಗಿ ತಿಳಿಯಬಹುದಾಗಿದೆ. ಬಳೆಗಳು, ಮಣಿಗಳು, ಬೊಟ್ಟುಗಳು, ಮೂಗುತಿ ಇತ್ಯಾದಿಗಳು ಚಿನ್ನದ ಹಾಳೆಗಳ ಹೊದಿಕೆಯಿರುವ ಆಭರಣಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿರುವುದರಿಂದ ಮುದ್ರೆಗಳ ಕೈಪಿಡಿಗೆ ತೆಳುವಾದ ಚಿನ್ನದ ಹೊದಿಕೆಯೊಂದಿಗೆ ಉಪಯೋಗಿಸುತ್ತಿದ್ದರೆಂಬ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಈ ರಾಜ ಮುದ್ರೆಗಳು ಮೇಲೆ ತಿಳಿಸಿದ ಸ್ಥಳದಲ್ಲಿ ದೊರೆತಿವೆಯಾದ್ದರಿಂದ ಅಲ್ಲಿದ್ದಂತಹ ಆಡಳಿತಾತ್ಮಕ ಹಾಗೂ ರಕ್ಷಣಾತ್ಮಕ ಕಟ್ಟಡಗಳ ಕಲ್ಪನೆಯನ್ನು ಸ್ಪಷ್ಟ ಪುರಾವೆಯೊಂದಿಗೆ ಪಡೆಯಬಹುದಾಗಿದೆ.

**ಆಕರ**

ಇತಿಹಾಸ ದರ್ಶನ, ಸಂ. ೮, ೧೯೯೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೧-೨

## ೪. ವಿರೂಪಾಕ್ಷ ದೇವಾಲಯದ ವರ್ಣಚಿತ್ರಗಳು

**ಪೀಠಿಕೆ**

ಶತ-ಶತಮಾನ ಪ್ರಾಚೀನ ವರ್ಣಚಿತ್ರಗಳು ಈಗೀಗ ಹೆಚ್ಚಾಗಿ ಬೆಳಕಿಗೆ ಬರುತ್ತಲಿರುವುದು ಅಭಿಮಾನದ ವಿಷಯ, ಹಾಗೆಯೇ ಪುರಾತತ್ವಾನ್ವೇಷಕರು, ಚರಿತ್ರಕಾರರು, ಕಲಾಭ್ಯಾಸಿಗಳು, ಕಲಾವಿಮರ್ಶಕರು ಈ ವರ್ಣರಂಜಿತ ಕಲಾ ಸಂಪತ್ತನ್ನು ವಿವಿಧ ದೃಷ್ಟಿಕೋನಗಳಿಂದ ನೋಡಿ, ತುಲನೆ ಮಾಡಿ, ಅಭ್ಯಸಿಸಿ, ಅವುಗಳ ಹಿರಿಮೆಗಳನ್ನು ಪ್ರಕಟಿಸುತ್ತಿರುವುದು ಮತ್ತೊಂದು ಸ್ತುತ್ಯಕಾರ್ಯ. ಇಲ್ಲಿ

ಹಂಪೆಯ ಶ್ರೀ ವಿರೂಪಾಕ್ಷ ಸ್ವಾಮಿಯ ದೇವಸ್ಥಾನದಲ್ಲಿ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿಯ ವರ್ಣಚಿತ್ರಗಳ ವಿವರಣೆಗಳನ್ನು ಪ್ರಸ್ತುತ ಪಡಿಸಲಾಗಿದೆ.

**ಪರಂಪರೆ**

ಅನೇಕ ಮೂಲಗಳಿಂದ ಈಗಾಗಲೇ ತಿಳಿದಿರುವಂತೆ ವರ್ಣಚಿತ್ರ ಕಲೆಯ ಸಾವಿರಾರು ವರ್ಷಗಳಿಂದಲೂ ಪ್ರಚುರದಲ್ಲಿತ್ತು. ಎಂದರೆ, ಮಾನವನು ಶಿಲಾಯುಗದ ಕಾಲದಲ್ಲಿಯೇ, ಸಾವಿರಾರು ವರ್ಷಗಳಿಗಿಂತ ಮೊದಲೇ, ತನ್ನ ಭಾವನೆಗಳನ್ನು, ತನ್ನ ಮನಸ್ಸಿನಲ್ಲಿ ಮೂಡಿದ ರೂಪುಗಳನ್ನು, ತನಗೆ ಅನ್ಯೋನ್ಯವಾದ ಪರಿಸರಗಳ ದೃಶ್ಯಗಳನ್ನು ವರ್ಣಗಳಿಂದ ಚಿತ್ರಿಸುವಲ್ಲಿ ತೊಡಗಿದ್ದನೆಂಬುದಕ್ಕೆ ಅನೇಕ ನಿದರ್ಶನಗಳು ದೊರೆತಿವೆ. ಶಿಲಾಯುಗಗಳ ಮಾನವನು, ತಾನು ನೆಲೆಸಿದ್ದ ನಿವೇಶನಗಳಲ್ಲಿ, ಮುಖ್ಯವಾಗಿ ಗುಹೆಗಳಲ್ಲಿ, ಬೆಟ್ಟಗಳ ಅಥವಾ ಬಂಡೆಗಳ ಆಸರೆಗಳಲ್ಲಿ ಚಿತ್ರಿಸುತ್ತಿದ್ದನು. ತನ್ನ ಮನಸ್ಸಿನ ಭಾವನೆಗಳಿಗೆ ಆಕರಗಳನ್ನು ತನ್ನದೇ ಆದ ಶೈಲಿಯಲ್ಲಿ ಕೊಡುತ್ತಿದ್ದನೆಂಬುದನ್ನು ಗುಹಾಚಿತ್ರಗಳಿಂದ ತಿಳಿಯಬಹುದು. ಅಲ್ಲದೆ ಇವು ಬಹಳವಾಗಿ ಸರಳವಾದ ಶೈಲಿಯಲ್ಲಿದ್ದು ಕಂದು, ಕಾವಿ ಅಥವಾ ಬಿಳಿಯ ಬಣ್ಣಗಳಲ್ಲಿ ಮಾತ್ರ ಚಿತ್ರಿತವಾಗಿವೆ  ಮತ್ತು ಇವು ಚಪ್ಪಟೆಯಾದ ಅಥವಾ ರೇಖಾ ವಿನ್ಯಾಸದ ಚಿತ್ರಗಳಾಗಿರುತ್ತವೆ. ಇವು ಸಾಮಾನ್ಯವಾಗಿ ಬೇಟೆಯಲ್ಲಿ ನಿರತನಾದ ಮಾನವನನನ್ನೋ ಅಥವಾ ಬೇಟೆಯಾಡಲ್ಪಡುತ್ತಿದ್ದ ಪ್ರಾಣಿಗಳನ್ನೋ ನಿರೂಪಿಸುವಂತೆ ಚಪ್ಪಟೆಯಾಗಿ ಚಿತ್ರಿತವಾಗಿರುತ್ತವೆ. ಮತ್ತೆ ಕೆಲವು ರೇಖಾವಿನ್ಯಾಸಗಳಲ್ಲಿ ಮಾತ್ರ ಕಾಣಬರುತ್ತವೆ.

ಶಿಲಾಯುಗಕ್ಕೆ ಸೇರಿದ ಕಂದು ಬಣ್ಣದ ಚಿತ್ರಗಳನ್ನು ಹಂಪೆಯ 'ಸಿಂತಾ ಸೆರಗು' ಪ್ರದೇಶದ ಹತ್ತಿರ ಕೆಲವು ಬಂಡೆ ಆಸರೆಗಳ ಮೇಲೆ ಈಗಲೂ ಕಾಣಬಹುದು. ಮತ್ತು ಇದೇ ಜಿಲ್ಲೆಯ ಬಳ್ಳಾರಿಯ ಹತ್ತಿರದ ಸಂಗನಕಲ್ಲು ಗುಡ್ಡದಲ್ಲಿ, ಕುರುಗೋಡಿನ ಹತ್ತಿರದ ಗುಡ್ಡಗಳಲ್ಲಿಯೂ ಸಹ ಇಂತಹ ಚಿತ್ರಗಳು ಕಾಣಬರುತ್ತವೆ. ಹಂಪೆಗೆ ಸಮೀಪದಲ್ಲಿರವ ಆನೆಗೊಂದಿ, ಹಿರೇಬೆಣಕಲ್ಲು, ಗುಡ್ಡಗಳಲ್ಲಿ ಸಹ ಇವು ಕಾಣಸಿಗುತ್ತವೆ.

ಇದೇ ರೀತಿ, ಎಂದರೆ ಚಪ್ಪಟೆಯಾಗಿ ಒಂದೇ ರಂಗಿನಲ್ಲಿ ಚಿತ್ರಿಸುವ ಕಲೆ ಬಹುಪುರಾತನ ಕಾಲದಿಂದಲೂ ಪ್ರಚಲಿತದಲ್ಲಿದ್ದುದಾಗಿ, ಆ ಕಾಲದ ಮಣ್ಣಿನ ಪಾತ್ರೆಗಳ ಅಧ್ಯಯನದಿಂದಲೂ ತಿಳಿಯುತ್ತದೆ. ಉತ್ತರ ಭಾರತದಲ್ಲಿ ಹರಪ್ಪಾ ಮೊಹೆಂಜೋದಾರೋ ಸಂಸ್ಕೃತಿಯ ನಿವೇಶನಗಳಲ್ಲಿ ವಿಪುಲವಾಗಿ ದೊರೆಯುವ ಮಡಕೆ ಅಥವಾ ಮಣ್ಣಿನ ಪಾತ್ರೆಗಳನ್ನು ಪರಿಶೀಲಿಸಿದರೆ, ಅವುಗಳ ಮೇಲೆ ವರ್ಣಚಿತ್ರಗಳನ್ನು ಬಿಡಿಸುವ ಕಲೆಯು ಬಹು ಜನಾದರಣೀಯವಾಗಿದ್ದಿತೆಂದು ತಿಳಿದುಬರುತ್ತದೆ. ಇವುಗಳಾದರೋ ನಾಲ್ಕೂವರೆ ಸಾವಿರ ವರ್ಷಗಳಷ್ಟು ಹಿಂದಿನವೆಂಬುದು ಖಚಿತವಾಗಿ ತಿಳಿದುಬಂದಿದೆ. ಇವುಗಳ ವಿಷಯಗಳೋ ಬಹು ವೈವಿಧ್ಯಮಯವಾಗಿವೆ. ಇವೆಲ್ಲವೂ ಚಪ್ಪಟೆಯಾಗಿದ್ದು ಮತ್ತು ಒಂದೇ ಬಣ್ಣದಲ್ಲಿ, ಸಾಮಾನ್ಯವಾಗಿ ಕಪ್ಪು ಕಂದು ಬಣ್ಣದಲ್ಲಿ, ಚಿತ್ರಿತವಾಗಿರುತ್ತವೆ. ಆನಂತರದ ಪುರಾಣಗಳ ಕಾಲದಲ್ಲಿ (ರಾಮಾಯಣ ಮತ್ತು ಮಹಾಭಾರತಗಳ ಕಲ ಆರ್ಯಸಂಸ್ಕೃತಿಯ ಕಾಲವೆಂದು ಸಾಮಾನ್ಯ ವಾಡಿಕೆ) ಚಿತ್ರಿತ ವಿಷಯಗಳು ಮೊದಲಿನಂತೆ ವೈವಿಧ್ಯಮಯವಾಗಿರದೇ ಇದ್ದರೂ, ವಿವಿಧ ರೀತಿಯ ಜ್ಯಾಮಿತಿ ರೇಖಾವಿನ್ಯಾಸಗಳಲ್ಲಿ ಮಾತ್ರ ಕಾಣಬರುತ್ತವೆ. ಇವು ಸಾಮಾನ್ಯವಾಗ ಕಪ್ಪು ಬಣ್ಣದಲ್ಲಿರುತ್ತವೆ. ದಕ್ಷಿಣದಲ್ಲಿಯೂ ಸಹ ಶಾತವಾಹನರ ಕಾಲದ ನಿವೇಶನಗಳಲ್ಲಿ (ಕ್ರಿ.ಪೂ.೩೦೦ ರಿಂದ ಕ್ರಿ.ಶ. ೩೦೦ರವರೆಗಿನ ಕಾಲ) ದೊರೆಯುವ ಮಡಿಕೆಗಳ ಮೇಲೆಯೂ ಬಿಳಿಯ ಅಥವಾ ನಸು ಹಳದಿ ಬಣ್ಣಗಳಲ್ಲಿ ಮಾಡಿರುವ ರೇಖಾ ವಿನ್ಯಾಸಗಳನ್ನು ಕಾಣ ಬಹುದು. ಮುಸಲ್ಮಾನರ ಆಗಮನದಿಂದ ಬಳಕೆಗೆ ಬಂದ ಪಿಂಗಾಣಿ ಪಾತ್ರೆಗಳ ಮೇಲೆ ವೈವಿಧ್ಯಮಯ ಚಿತ್ರಗಳಿಂದ ಮತ್ತು ವಿವಿಧ ಬಣ್ಣಗಳಲ್ಲಿ, ಬೇರೆ ರೀತಿಯ ತಾಂತ್ರಿಕ ಪದ್ಧತಿಯಲ್ಲಿ, ಅಲಂಕರಿಸುವುದು ಸಾಮಾನ್ಯ ವಿಷಯವಾಯಿತು. ಆನಂತರದ ಇಂಗ್ಲೀಷರು ಮತ್ತು ಇತರ ಯುರೋಪಿಯನ್ನರ ಕಾಲದಲ್ಲಿ ಪಿಂಗಾಣಿ ಪಾತ್ರೆಗಳ ಅವರ ಅಭಿರುಚಿಗಳಿಗನು ಗುಣವಾಗಿ ಅನೇಕ ಬಗೆಯ ಚಿತ್ರಗಳಿಂದ ಅಲಂಕರಿಸಲ್ಪಟ್ಟುವು. ಅಲ್ಲದೆ ಮಧ್ಯಯುಗದಲ್ಲಿ ಬಳಕೆಯಲ್ಲಿದ ತಾಳೆಓಲೆಯ ಗ್ರಂಥಗಳಲ್ಲಿ, ಅನಂತರದ ಕರಡು ಕಾಗದದ ಗ್ರಂಥಗಳಲ್ಲಿ, ಪೀಠೋಪಕರಣಗಳ ಮೇಲೆ, ವಿವಿಧ ವರ್ಣಗಳಿಂದ ಚಿತ್ರಗಳ ಮೇಲೆಯೂ ಸಹ ವರ್ಣ ಚಿತ್ರಕಲೆಯ ಮೊದಲಿನಿಂದಲೂ ಜನಪ್ರಿಯವಾಗಿತ್ತು.

ಇನ್ನು ಭಿತಿ ಚಿತ್ರಗಳ ಪರಂಪರೆಯ ಬಗ್ಗೆ ಹೇಳುವಾಗ ಜಗತ್ತಿನಲ್ಲೇ ಪ್ರಸಿದ್ಧವಾಗಿರುವ ಅಜಂತಾ ವರ್ಣ ಚಿತ್ರಗಳು ಮನಃಪಟಲದ ಮೇಲೆ ಮೂಡುತ್ತವೆ. ಈ ಚಿತ್ರಗಳು ಬುದ್ಧನ ಜೀವನ ಚರಿತ್ರೆ, ಬುದ್ಧನ ಜಾತಕ ಕಥೆಗಳು ಮುಂತಾದ ವಿಷಯಗಳನ್ನು ನಿರೂಪಿಸುತ್ತಾ ಬೌದ್ಧ ಸಂಪ್ರದಾಯದಲ್ಲಿ ಚಿತ್ರಿತವಾದವುಗಳಾಗಿವೆ. ಇವು. ಕ್ರಿ.ಶ. ೬ನೆಯ ಶತಮಾನದಿಂದ ಕ್ರಿ.ಶ. ೮ನೆಯ ಶತಮಾನದವರೆಗಿನವು. ಭಾರತದಲ್ಲಿ ವರ್ಣಚಿತ್ರ ಕಲೆಯು ಅತ್ಯುನ್ನತ ಪ್ರೌಢತ್ವವನ್ನು ಪಡೆದಿರುವುದನ್ನು ಈ ಅಜಂತಾ ವರ್ಣಚಿತ್ರಗಳಲ್ಲಿ ಕಾಣಬಹುದು.

ಹಾಗೆಯೇ ಹಿಂದೂ ಧರ್ಮದ ಸಂಪ್ರದಾಯದಲ್ಲಿ ರೂಪುಗೊಂಡಿರುವ ವರ್ಣಚಿತ್ರಗಳು, ಬಿಜಾಪುರ ಜಿಲ್ಲೆಯ ಬಾದಾಮಿಯ ಗುಹಾಂತರ್ಗತ ದೇವಾಲಯಗಳಲ್ಲಿ ಕಾಣಬರುತ್ತವೆ. ಈ ವರ್ಗದ ಚಿತ್ರಗಳಲ್ಲಿ ಇದುವರೆಗೂ ತಿಳಿದು ಬಂದಿರುವಂತೆ ಇವೇ ಬಹು ಪುರಾತನವಾದವುಗಳು. ಇವುಗಳಲ್ಲಿ 'ಶಿವ-ಪಾರ್ವತಿಯರ ಕಲ್ಯಾಣ ನಿಶ್ಚಿತಾರ್ಥವು' ಬಹುಮುಖ್ಯ ದೃಶ್ಯವಾಗಿದೆ.[1] ತದನಂತರದ ರಾಷ್ಟ್ರಕೂಟ ಅರಸರ ಕಾಲದಲ್ಲಿ ನಿರ್ಮಿತವಾದ ಎಲ್ಲೋರಾದ ಗುಹಾಂತರ್ಗತ ದೇವಾಲಯಗಳಲ್ಲಿ ನಟರಾಜ, ಲಕ್ಷ್ಮೀನಾರಾಯಣ ಮುಂತಾದ ವಿಷಯಗಳನ್ನು ನಿರೂಪಿಸಲು ವರ್ಣಚಿತ್ರಗಳು ಚಿತ್ರಿತವಾಗಿವೆ.[2] ಹೊಯಿಸಳರ ಕಾಲದಲ್ಲಿಯೂ ಸಹ ದೇವಾಲಯಗಳ ಒಳಮಾಳಿಗೆಗಳಲ್ಲಿ ವರ್ಣಚಿತ್ರಗಳನ್ನು ಬರೆಯುವುದು ಸಾಮಾನ್ಯ ವಾಗಿತ್ತೆಂದು ತಿಳಿದುಬರುತ್ತದೆ.[3]

ಇಷ್ಟೊಂದು ಜನಾನುರಾಗಕ್ಕೆ ಪಾತ್ರವಾಗಿದ ವರ್ಣಚಿತ್ರ ಕಲೆಯನ್ನು ಕುರಿತು ಅವಶ್ಯವಿದ್ದ ಸಾಹಿತ್ಯವೂ ಸಹ ನಿರ್ಮಿತವಾಯಿತೆಂದರೆ ಅಚ್ಚರಿಪಡಬೇಕಾದುದೇನೂ ಇಲ್ಲ. ವಿಷ್ಣು ಧರ್ಮೋತ್ತರ ಪುರಾಣ, ಅಭಿಲಷಿತಾರ್ಥ ಚಿಂತಾಮಣಿ, ಕಾಮಸೂತ್ರ ಮುಂತಾದ ಪುರಾತನ ಗ್ರಂಥಗಳು, ವರ್ಣಚಿತ್ರಗಳನ್ನು ನಿರ್ಮಿಸುವಾಗ ಅನುಸರಿಸಬೇಕಾದ ನಿಬಂಧನೆಗಳು, ತಾಂತ್ರಿಕತೆ ಮುಂತಾದವುಗಳ ಒಗ್ಗೆ ಅನೇಕ ವಿವರಣೆಗಳನ್ನು ನೀಡುತ್ತವೆ. ಇಂತಹ ಗ್ರಂಥಗಳು ಬಹು ಹಿಂದೆಯೇ ಬಳಕೆಯಲ್ಲಿದ್ದರಬಹುದಾದರೂ, ಅವು ಗುಪ್ತವಂಶದ ಅರಸರ ಕಾಲದಲ್ಲಿ ಒಂದು ವ್ಯವಸ್ಥಿತ ರೂಪವನ್ನು ಹೊಮದಿ, ಚಿತ್ರಕಾರರಿಗೆ ಮಾರ್ಗದರ್ಶಿಗಳಾದುವು.

**ವಿಜಯನಗರ ಕಾಲದಲ್ಲಿ**

ವಿಜಯನಗರದ ಅರಸರು, ಅವರ ಅಧಿಕಾರಿಗಳು ಮತ್ತು ಪ್ರಜೆಗಳು, ಕಲೆಗಳು ವಿಷಯದಲ್ಲಿ ಅಭಿರುಚಿ ಮತ್ತು ಪ್ರಜ್ಞೆಯುಳ್ಳವರಾಗಿದ್ದರೆಂಬುದು ಸರ್ವವಿದಿತವಷ್ಟೇ? ಅವರು ನಿರ್ಮಿಸಿಸ ಸಾವಿರಾರು ದೇವಮಂದಿರಗಳು, ಮಠಗಳು, ಶಿಲಾಮೂರ್ತಿಗಳು, ಪಂಚಲೋಹ ಮೂರ್ತಿಗಳು ದಕ್ಷಿಣ ಭಾರತಾದ್ಯಂತ ಈಗಲೂ ಕಾಣಬರುತ್ತಿದ್ದು, ಅವರ ಆ ಹೆಗ್ಗಳಿಕೆಯನ್ನು ಇಂದಿಗೂ ಸಾರಿ ಹೇಳುತ್ತಿವೆ. ಅಂತೆಯೇ ವಿಜಯನಗರದ ಅರಸರ ಆಳ್ವಿಕೆಯ ಸಮಯದಲ್ಲಿ ವರ್ಣಚಿತ್ರಕಲೆಯೂ ಸಹ ಸಮಾನ ಪ್ರೋತ್ಸಾಹವನ್ನು ಪಡೆದಿತ್ತಲ್ಲದೆ ಬಹು ಜನಪ್ರಿಯವಾಗಿದ್ದುದರ ಕುರುಹಾಗಿ ಈಗಲೂ ಅನೇಕ ಕಡೆಗಳಲ್ಲಿ ಆ ಕಾಲದ ವರ್ಣಚಿತ್ರಗಳು ಕಾಣಬರುತ್ತವೆ. ಅಲ್ಲದೆ, ಇದೇ ವಿಷಯವು, ಅನೇಕ ಸಮಕಾಲೀನ ಸಾಹಿತ್ಯ ಗ್ರಂಥಗಳಲ್ಲಿರುವ ಉಲ್ಲೇಖನಗಳಿಂದ ಮತ್ತು ವಿದೇಶಿ ಪ್ರವಾಸಿಗಳು ಬರೆದಿರುವ ಟಿಪ್ಪಣಿಗಳಿಂದ ಖಚಿತವಾಗುತ್ತದೆ.[4] ಈಗ ಲಭ್ಯವಿರುವ ಈ ಚಿತ್ರಗಳನ್ನು ನೋಡಿ, ವಿಜಯನಗರದ ಕಾಲದಲ್ಲಿ ವರ್ಣಚಿತ್ರಗಳನ್ನು ದೇವಾಲಯಗಳ ಒಳಮಾಳಿಗೆಗಳ ಮೇಲೆ,[5] ಹೊರ ಗೋಡೆಗಳ ಮೇಲೆ[6] ಚಿತ್ರಿಸುತ್ತಿದ್ದರೆಂಬುದು ತಿಳಿಯುತ್ತದೆ. ಅಲ್ಲದೆ ಶಿಖರ ಮತ್ತು ಗೋಪುರಗಳ ಮೇಲಿನ ಇಟ್ಟಿಗೆ ಗಾರೆಗಳಿಮದ ನಿರ್ಮಿಸಿದ ಮೂರ್ತಿಗಳನ್ನು ಸಹ ವಿವಿಧ ಬಣ್ಣಗಳಿಂದ ಅಲಂಕರಿಸುವುದು ಪ್ರಚುರದಲ್ಲಿತ್ತು.[7] ಕೆಲವು ಬಾರಿ ಶಿಲಾಮೂರ್ತಿಗಳನ್ನು ಸಹ ವಿವಿಧ ಬಣ್ಣಗಳಿಂದ ಲೇಪಿಸುತ್ತಿದ್ದರೆಂಬುದು ಅವಶೇಷಗಳಿಂದ ತಿಳಿದುಬರುತ್ತದೆ.[8] ಮತ್ತು ಇದೇ ಕಾಲದಲ್ಲಿ ಬಿಳಿಯ ಕಲ್ಲಿನಲ್ಲಿ ಕಡೆಯಲಾಗುತ್ತಿದ್ದ ಶಿಲಾಮೂರ್ತಿಗಳು ಕೆಲವೊಂದು ಬಾರಿ, ಶಿಲ್ಪಿಯು ಕಲ್ಪಿಸಿಕೊಂಡ ಭಾವ ಲಕ್ಷಣಗಳನ್ನು ಬೇಕಾದ ಮತ್ತು ಪರಿಣಾಮಕಾರಿ ರೀತಿಯಲ್ಲಿ ರೂಪಿಸುವುದು ಸಾಧ್ಯವಾಗುತ್ತಿತ್ತು.[9]

ವಿಜಯನಗರದ ಪತನಾನಂತರವೂ ಸಹ ವರ್ಣಚಿತ್ರ ಕಲೆಯ ಪರಂಪರೆಯು ರಾಜಪ್ರೋತ್ಸಾಹದೊಂದಿಗೆ ಮುಂದುವರೆಯಿತು. ಆ ಸಮಯಕ್ಕಾಗಲೇ ಭಾರತಕ್ಕೆ ಬಂದ ಪಾಶ್ಚಿಮಾತ್ಯ ಕಲಾಕಾರರ ತಾಂತ್ರಿಕತೆ, ಶೈಲಿ, ಭಾವನಿರೂಪಣಾಕ್ರಮ ಮುಂತಾದವುಗಳ

ಪ್ರಭಾವಗಳಿಗೆ ಒಳಗಾಯಿತು.[10] ಅಲ್ಲದೇ ಮೈಸೂರಿನ ಒಡೆಯರರು, ತಂಜಾವೂರಿನ ರಾಜರು, ಕೊಚ್ಚಿ ತಿರುವಾಂಕೂರಿನ ಅರಸರು, ಮುಸಲ್ಮಾನ ಸುಲ್ತಾನರ ಪ್ರೋತ್ಸಾಹಗಳಿಂದಾಗಿ ಪ್ರಾಂತೀಯ ಶೈಲಿಗಳು ರೂಪುಗೊಂಡವು. ಆದರೂ ಇವುಗಳಲ್ಲೆಲ್ಲ ಪಾಶ್ಚಿಮಾತ್ಯ ಶೈಲಿಯ ಪ್ರಭಾವವನ್ನು ಗಮನಾರ್ಹ ರೀತಿಯಲ್ಲಿ ಕಾಣಬಹುದು.

**ಹಂಪೆಯ ವರ್ಣಚಿತ್ರಗಳು**

ಹಂಪೆಯು ಬಹುಪುರಾತನ ಕಾಲದಿಂದಲೂ ಯಾತ್ರಾಕ್ಷೇತ್ರವೆಂದು ಪ್ರಸಿದ್ಧಿಯಾಗಿದ್ದರೂ, ಅದು ರಾಜಕೀಯವಾಗಿ ಪ್ರಾಮುಖ್ಯತೆ ಪಡೆದುದು ವಿಜಯನಗರದ ಅರಸರ ರಾಜ್ಯಭಾರದ ಕಾಲದಲ್ಲಿ (ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೫೬೫ರವರೆಗೆ). ಈ ಹಂಪೆಯಲ್ಲಿ, ಇಂದಿಗೂ ಸಹ, ಪ್ರಧಾನ ದೇವತೆಯಾಗಿರುವ ಶ್ರೀ ವಿರೂಪಾಕ್ಷ ಸ್ವಾಮಿಯು, ವಿಜಯನಗರದ ಅರಸರ ಕುಲದೇವತೆಯಾಗಿದ್ದು, ಅವರು ತಮ್ಮನ್ನು ವಿರೂಪಾಕ್ಷ ಸ್ವಾಮಿಯ ಪ್ರತಿನಿಧಿಗಳೆಂದು ಭಾವಿಸಿಕೊಂಡು ರಾಜ್ಯಭಾರವನ್ನು ನಡೆಯಿಸಿದರು. ತತ್ಪರಿಣಾಮವಾಗಿ, ಈ ಅರಸರು ಹೊರಡಿಸಿದ ತಾಮ್ರ ಶಾಸನಗಳ ಕೊನೆಯಲ್ಲಿ ರಾಜನ ಹೆಸರಿನ ಅಂಕಿತವಿರದೆ 'ಶ್ರೀ ವಿರೂಪಾಕ್ಷ' ಎಂಬ ಅಂಕಿತವು ಕಾಣಬರುತ್ತದೆ. ಅಲ್ಲದೆ ಆರಂಭದಲ್ಲಿ ಆಳಿದ ಸಂಗಮ ವಂಶದ ಅರಸರು ಹೊರಡಿಸಿದ ನಾಣ್ಯಗಳ ಮುಮ್ಮುಖದ ಮೇಲೆ ಶಿವ ಪಾರ್ವತಿಯರ ರೂಪುಗಳು ಕಾಣಬರುತ್ತದೆ. ಅರ್ಥಾತ್ ಇವು ಶ್ರೀ ವಿರೂಪಾಕ್ಷ ಮತ್ತು ಪಂಪಾಂಬಿಕೆಯರನ್ನು ನಿರೂಪಿಸುತ್ತವೆ. ನಂತರ ವಿಜಯನಗರದ ಬಹು ಖ್ಯಾತಿವೆತ್ತ ಅರಸರಲ್ಲೊಬ್ಬನಾದ ತುಳು ವಂಶದ ಕೃಷ್ಣದೇವರಾಯನು ತಾನು ರಾಜ್ಯ ಪಟ್ಟಕ್ಕೆ ಬಂದ ಸಂದರ್ಭದಲ್ಲಿ ಒಂದು ಶಾಸನವನ್ನು ಹೊರಡಿಸಿ, ಇದೇ ವಿರೂಪಾಕ್ಷ ಸ್ವಾಮಿಗೆ ಅನೇಕ ದತ್ತಿಗಳನ್ನು ಕೊಟ್ಟಿರುವುದು ತಿಳಿಯುತ್ತದೆ. ಆ ಶಾಸನವು ಪೂರ್ವದ್ವಾರದ ಮೆಟ್ಟಲುಗಳ ಹತ್ತಿರ ಈಗಲೂ ಕಾಣಬರುತ್ತದೆ. ಹೀಗೆ ಹಂಪೆಯ ಶ್ರೀ ವಿರೂಪಾಕ್ಷಸ್ವಾಮಿ ದೇವಸ್ಥಾನವು, ರಾಜರ ಅಭಿಮಾನ, ಮನ್ನಣೆ, ಮತ್ತು ಪ್ರೋತ್ಸಾಹಗಳಿಗೆ ಪಾತ್ರವಾಗಿದ್ದಿತು. ಇವುಗಳ ಇನ್ನೊಂದು ಕುರುಹಾಗಿ, ಈ ದೇವಸ್ಥಾನದಲ್ಲಿಯೇ ಮುಂದೆ ವಿವರಿಸಲಾಗಿರುವ ವರ್ಣಚಿತ್ರಗಳು ಕಾಣಬರುತ್ತವೆ. ಈಗ ಲಭ್ಯವಿರುವಂತೆ ಹಂಪೆಯ ಇನ್ನಾವ ದೇವಸ್ಥಾನದಲ್ಲೂ ಇಷ್ಟೊಂದು ವಿವರವಾದ ಮತ್ತು ವ್ಯಾಪಕ ರೀತಿಯಲ್ಲಿ ನಿರ್ಮಿಸಲಾಗಿರುವ ವರ್ಣಚಿತ್ರಗಳು ಕಾಣಬರುತ್ತಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ, ಈ ಅರಸರ ಕಾಲದಲ್ಲಿ ಹಂಪೆಯ ಶ್ರೀ ವಿರೂಪಾಕ್ಷ ಸ್ವಾಮಿಯ ದೇವಸ್ಥಾನಕ್ಕೆ ಸಲ್ಲುತ್ತಿದ್ದ ಪ್ರಧಾನತೆಯು ವ್ಯಕ್ತವಾಗುತ್ತದೆ. ಆದುದರಿಂದ ಈ ದೇವಸ್ಥಾನದಲ್ಲಿ ಕಾಣಬರುವ ವರ್ಣಚಿತ್ರಗಳು ಬಹು ಮುಖ್ಯವಾದವುಗಳು. ಉತ್ತಮ ಗುಣಮಟ್ಟದವುಗಳೂ ಹಾಗೂ ಅರ್ಥ ಗರ್ಭಿತವಾದವುಗಳಾಗಿರಬೇಕೆಂದಾಯಿತು.

ಈ ವರ್ಣಚಿತ್ರಗಳು, ಹಂಪೆಯ ಶ್ರೀ ವಿರೂಪಾಕ್ಷ ಸ್ವಾಮಿಯ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಮಹಾರಂಗಮಂಟಪದ ನಡುವಣ ಅಂಕಣದ ಒಳಮಾಳಿಗೆ ಅಥವಾ ಮುಚ್ಚಿಗೆಯ ಮೇಲೆ ಚಿತ್ರಿತವಾಗಿದೆ. ಎಂದರೆ, ಕತ್ತನ್ನು ಮೇಲಕ್ಕೆತ್ತಿ ಇವುಗಳನ್ನು ನೋಡುಬೇಕಾಗುತ್ತದೆ. ಆದರೆ ಒಂದು ದೊಡ್ಡ ಕನ್ನಡಿಯನ್ನು ಅವುಗಳ ಕೆಳಗೆ ಹಿಡಿದು ನೇರವಾಗಿ ಅವುಗಳ ಪ್ರತಿಬಿಂಬಗಳನ್ನು ನೋಡಬಹುದು. ಆದರೂ ಇವುಗಳ ಶ್ರೇಷ್ಠ ವಿನ್ಯಾಸ, ವರ್ಣಗಳ ಹೊಂದಾಣಿಕೆ, ರೂಪುಗಳ ಆಕಾರ, ಭಂಗಿ, ಹಾವ ಮತ್ತು ಭಾವಗಳನ್ನು, ಅಲಂಕಾರಿಕ ವಿವರಣೆಗಳನ್ನೂ ನೋಡಿ ಆನಂದಿಸಬೇಕಾದಲ್ಲಿ, ಕತ್ತಿಗೆ ತೊಂದರೆ ತಪ್ಪಿದುದಲ್ಲ. ಈ ಚಿತ್ರಗಳನ್ನು ಉತ್ತರ-ದಕ್ಷಿಣವಾಗಿ ಹದಿಮೂರು ಸಾಲುಗಳನ್ನು ಚಿತ್ರಿಸಲಾಗಿದೆ. ಅಲ್ಲದೆ ಇವುಗಳ ಸುತ್ತಲೂ ಇರುವ ಕಲ್ಲಿನ ಪಟ್ಟಿಕಾಭಾಗದಲ್ಲಿ ಸಹ ನಿಲುಚಿತ್ರಗಳನ್ನು ಬಿಡಿಸಲಾಗಿದೆ. ಡಾ. ಪರಮಶಿವನ್ ಎಂಬ ಪುರಾತತ್ವ ರಸಾಯನಶಾಸ್ತ್ರ ಪರಿಣಿತರ ಅಭಿಪ್ರಾಯದಲ್ಲಿ, ಈ ಹಂಪೆಯ ಚಿತ್ರಗಳು ವಿಜಯನಗರದ ಕಾಲದಲ್ಲಿ ಪ್ರತಿಭಾವಂತ ಚಿತ್ರಕಾರರ ಕುಂಚಗಳಿಂದ ಮೂಡಿಬಂದ ಅತ್ಯುತ್ತಮ ಚಿತ್ರಗಳಾಗಿವೆ.[11] ಅವರು ಮುದುವರಿದು, ಈ ಚಿತ್ರಗಳು ಮತ್ತು ಆನೆಗೊಂದಿನ ಹುಚ್ಚಪ್ಪಯ್ಯನ ಮಠದಲ್ಲಿ ಕಾಣಬರುತ್ತಿದ್ದ ವರ್ಣಚಿತ್ರಗಳು[12] ಚಿತ್ರಕಲಾಭ್ಯಾಸಿಗಳಿಗೆ ಬಹುಮುಖ್ಯವಾದವೂ ಮತ್ತು ಪೂರಕವಾದವುಗಳೂ ಎಂದು ಹೇಳಿರುತ್ತಾರೆ. ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಮಾಡುವ ಚಿತ್ರಕಲಾಭ್ಯಾಸವು ಅಪೂರ್ಣವಾಗುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.[13]

ಈ ಹಂಪೆಯ ಚಿತ್ರಗಳನ್ನು ಎರಡು ಹಂತಗಳಲ್ಲಿ ಚಿತ್ರಿಸಿದಂತೆ ಕಾಣುತ್ತದೆ. ಏಕೆಂದರೆ ಪಶ್ಚಿಮದ ಅರ್ಧಭಾಗದಲ್ಲಿ ಕಪ್ಪು ಬಣ್ಣವು ಪ್ರಧಾನವಾಗಿ ಬಳಕೆಯಾಗಿದ್ದರೆ, ಇನ್ನುಳಿದ ಪೂರ್ವದ ಭಾಗದಲ್ಲಿ ಒಂದು ವಿಧವಾದ ಕೆಂಪು ಪ್ರಧಾನವಾಗಿ ಕಾಣಬರುತ್ತದೆ. ಇವು ಹಿಂದೂ ಧರ್ಮದ ಪುರಾಣಗಳಲ್ಲಿನ ದೃಶ್ಯಗಳನ್ನು ಮತ್ತು ಸಮಕಾಲೀನ ಸಾಮಾಜಿಕ ದೃಶ್ಯಗಳನ್ನು ನಿರೂಪಿಸುತ್ತವೆ. ಇವು ಶೈವ ಮತ್ತು ವೈಷ್ಣವ ಪುರಾಣಗಳಿಂದ ಆರಿಸಿಕೊಂಡ ದೃಶ್ಯಗಳಾಗಿವೆ. ಹಂಪೆಯ ಸ್ಥಳ ಪುರಾಣಕ್ಕೆ ಸಂಬಂಧಿಸಿದ ಮನ್ಮಥವಿಜಯ ಮತ್ತು ಶಿವ ಪಾರ್ವತಿಯರ ಕಲ್ಯಾಣದ ದೃಶ್ಯಗಳು ಬಹುರಮ್ಯವಾಗಿ ವರ್ಣಗಳಲ್ಲಿ ಹೊಮ್ಮಿಬಂದಿವೆ. ಈ ದೃಶ್ಯಗಳು ಮತ್ತು ಅವುಗಳಲ್ಲಿ ಕಾಣಬರುವ ಇತರ ದೇವಾನುದೇವತೆಗಳು, ಆಗಮ ಶಾಸ್ತ್ರಗಳ ನಿರೂಪಣೆಗಳ ಪ್ರಕರ ಮೂಡಿ ಬಂದಂತಹವುಗಳಾಗಿವೆ.

**ಇವುಗಳ ಕಾಲ**

ಈ ಚಿತ್ರಗಳು, ವಿಜಯನಗರದ ಆರಂಭದ ಕಾಲದಲ್ಲಿ ಚಿತ್ರಿತವಾದವುಗಳೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಆ ಸ್ಥಳದಲ್ಲಿಯೇ, ಈಗಲೂ ಕಾಣಬರುವ, ಕೃಷ್ಣದೇವರಾಯ ಮಹಾರಾಯನು (ಕ್ರಿ.ಶ. ೧೫೦೯ ರಿಂದ ಕ್ರಿ.ಶ. ೧೫೨೯ರ ವರೆಗೆ) ತಾನು ಪಟ್ಟಕ್ಕೆ ಬಂದ ಸಮಯದಲ್ಲಿ ಹೊರಡಿಸಿದ ಶಿಲಾಶಾಸನವನ್ನು ಪರಿಗಣಿಸುವುದರಿಂದ ಈ ಚಿತ್ರಗಳು ಕ್ರಿ.ಶ. ೧೬ನೆಯ ಶತಮಾನದವುಗಳೆಂದು ನಿರ್ಧರಿಸಬಹುದು. ಆ ಶಾಸನ ಒಂದು ಭಾಗವು ಈ ಕೆಳಗಿನಂತೆ ಇದೆ :

‘.....ಶಾಲಿವಾಹನ ಶಕವರುಷ ೧೪೩೦ ಸಂದು
ಮೇಲೆನಡೆವ ಶುಕ್ಲ ಸಂವತ್ಸರದ ಮಾಘ ಶು. ೧೪ ಲು ಶ್ರೀಮ
ನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀವೀರ ಪ್ರತಾಪ
ಶ್ರೀ ವೀರ ಕೃ
ಷ್ಣರಾಯ ಮಹಾರಾಯರು ಪಟ್ಟಾಭಿಷೇಕೋತ್ಸವ ಪುಣ್ಯ ಕಾಲದಲು
ಶ್ರೀ ವಿರುಪಾಕ್ಷ ದೇವರ ಅಮೃತ ಪಡಿ ನೈವೇದ್ಯಕೆ ಸಿಂ
ಗಿ ನಾಯಕನ ಹಳಿಯನೂ ಸಮರ್ಪಿಸಿ ದೇವ ಸಂಮುಖದ
ಮಹಾರಂಗ ಮಂಟಪವನೂ ಆ ಮುಂದಣ ಗೋಪುರವ
ನೂ ಕಟಿ
ಸಿ...... ಮಂಗಳ ಮಹಾಶ್ರೀ ಶ್ರೀ ಶ್ರೀ,[14]

ಎಂದರೆ ಮೇಲೆ ಉದ್ಧರಿಸಿರುವ ಶಾಸನದ ಪ್ರಕಾರ, ಶ್ರೀ ವಿರೂಪಾಕ್ಷ ಸ್ವಾಮಿಯ ದೇವಸ್ಥಾನಕ್ಕೆ ಹೊಂದಿರುವ ಮಹಾರಂಗ ಮಂಟಪವನ್ನು, ಕೃಷ್ಣದೇವರಾಯ ಮಹಾರಾಯನು ಕ್ರಿ.ಶ. ೧೫೦೯ರಲ್ಲಿ, ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ, ಕಟ್ಟಿಸಿದನೆಂಬುದು ಖಚಿತವಾಯಿತು. ನಾವು ಈಗ ತಿಳಿಯುತ್ತಿರುವ ವರ್ಣಚಿತ್ರಗಳು ಸಹ ಇದೇ ಮುಖಮಂಟಪದ ಒಳಮಾಳಿಗೆಯ ಮೇಲೆ ಕಾಣಬರುತ್ತವೆ. ಎಂದರೆ ಈ ಚಿತ್ರಗಳು ಕ್ರಿ.ಶ. ೧೫೦೯ರ ನಂತರ ಚಿತ್ರಿತವಾಗಿವೆ ಎಂಬುದೂ ಖಚಿತವಾಯಿತು ಮತ್ತು ಈಗಾಗಲೇ ಸರ್ವವಿದಿತವಿರುವಂತೆ ವಿಜಯನಗರದ ಅರಸರು ಕ್ರಿ.ಶ. ೧೫೬೫ರಲ್ಲಿ ರಕ್ಕಸ ತಂಗಡಿ ಕಾಳಗದಲ್ಲಿ ಪರಾಭವಗೊಂಡ ನಂತರ, ಪೆನುಗೊಂಡೆಯಲ್ಲಿ ಹೋಗಿ ನೆಲಸಿದರಷ್ಟೆ? ತದನಂತರ ವಿಜಯಿಗಳಾದ ಮುಸಲ್ಮಾನ ಸೈನಿಕರು, ವಿಜಯನಗರ ರಾಜಧಾನಿಯನ್ನು ನುಗ್ಗಿ, ನಿರಂತರವಾಗಿ ಆರು ತಿಂಗಳೂಗಳವರೆಗೆ ಧ್ವಂಸ ಕಾರ್ಯಗಳಲ್ಲಿ ನಿರತರಾಗಿದ್ದರೆಂಬುದು ತಿಳಿದಿದೆಯಷ್ಟೆ? ಆ ನಂತರ ವಿಜಯನಗರದ ಅರಸರು ವಿಜಯನಗರ ಪಟ್ಟಣಕ್ಕೆ ಹಿಂದಿರುಗುವಲ್ಲಾಗಲೀ ಅಥವಾ ಅದನ್ನು ಪುನರುಜ್ಜೀವನ ಗೊಳಿಸುವಲ್ಲಾಗಲೀ ಯಶಸ್ವಿಯಾಗಲಿಲ್ಲ. ಹೀಗಾಗಿ ವಿಜಯನಗರ ಪಟ್ಟಣವೂ ಸೇರಿದಂತೆ, ಇಂದಿಗೂ ಸಹ, ಉಳಿಯಬೇಕಯಿತು. ಈ ಎಲ್ಲ ಘಟನೆಗಳನ್ನು ಪರಿಶೀಲಿಸಿದಲ್ಲಿ, ಪ್ರಸ್ತುತ ಲೇಖನದ ವಿಷಯವಾದ, ಹಂಪೆಯ ವರ್ಣಚಿತ್ರಗಳು ಕ್ರಿ.ಶ. ೧೫೦೯ರ ನಂತರ, ಆದರೆ ಕ್ರಿ.ಶ. ೧೫೬೫ರೊಳಗೆ ರೂಪುಗೊಂಡಂಥವುಗಳಾಗಿರಬೇಕು. ಬಹುಶಃ ವಿಜಯನಗರದ

ವೈಭವವು, ಎಲ್ಲಾ ವಿಭಾಗಗಳಲ್ಲಿ, ಉಚ್ಛ್ರಾಯದ ಪರಿಮಿತಿಯನ್ನು ತಲುಪಿದ ಕೃಷ್ಣದೇವರಾಯನ ಕಾಲದಲ್ಲಿ ಚಿತ್ರಿತವಾದವುಗಳಾಗಿರಲೂ ಸಾಕು. ಅಂತಿಮದಲ್ಲಿ, ಇವು ಕ್ರಿ.ಶ. ೧೬ನೆಯ ಶತಮಾನದ ಪೂರ್ವಾರ್ಧದಲ್ಲಿ ರೂಪುಗೊಂಡವುಗಳೆಂದು ಹೇಳಬಹುದು.

**ಚಿತ್ರಗಳ ವಿವರಣೆಗಳು**

ಈಗ ಹಂಪೆಯ ವಿರೂಪಾಕ್ಷ ಗುಡಿಯಲ್ಲಿರುವ ಚಿತ್ರಗಳ ವಿಷಯಗಳನ್ನು ಒಂದೊಂದಾಗಿ ತಿಳಿಯೋಣ. ಈಗಾಗಲೇ ಹೇಳಿರುವಂತೆ ಇವು ಮುಖ್ಯವಾಗಿ ಹದಿಮೂರು ಸಾಲುಗಳಲ್ಲಿ ಚಿತ್ರಿತವಾಗಿವೆ. ಈ ಸಾಲುಗಳು ಸಹ ಚಿಕ್ಕ ಪ್ರಮಾಣದ ಚೌಕ ಅಥವಾ ಮನೆಗಳಾಗಿ ವಿಂಗಡಿಸಲ್ಪಟ್ಟವು. ಪ್ರತಿಯೊಂದಕ್ಕೂ ಬೇರೆ ಬೇರೆ ಆಕೃತಿಗಳನ್ನೋ ಅಥವಾ ವಿಷಯಗಳನ್ನೋ ಮೀಸಲಿರಿಸಲಾಗಿದೆ. ಇವುಗಳೆಲ್ಲಗಳ ಸುತ್ತಲೂ ಅಲಂಕಾರದ ಪಟ್ಟಿಗಳಿದ್ದು, ವಿವಿಧ ಹೂಗಳು ಅಥವಾ ರೇಖಾ ವಿನ್ಯಾಸಗಳಿಂದ ಚಿತ್ರತವಾಗಿವೆ.

೧. ಮೊದಲಿನ (ಪಶ್ಚಿಮದ ತುದಿಯಿಂದ ಪೂರ್ವಕ್ಕೆ ಮುಂದುವರಿಯುತ್ತಾ) ಮೂರು ಸಾಲುಗಳನ್ನು ಒಂದೇ ಮುಖ್ಯ ವಿಷಯದ ನಿರೂಪಣೆಗಾಗಿ ಚಿತ್ರಕಾರನು ಉಪಯೋಗಿಸಿ ಕೊಂಡಿರುವುದು ತಿಳಿಯುತ್ತದೆ. ಇಲ್ಲಿ ಹಿಂದೂ ಧರ್ಮದ ಮುಖ್ಯದೇವತೆಗಳಾದ ತ್ರಿಮೂರ್ತಿ (ಬ್ರಹ್ಮ, ಮಹೇಶ್ವರ ಮತ್ತು ವಿಷ್ಣು)ಗಳನ್ನು ಚಿತ್ರಿಸಲಾಗಿದೆ. ಎಂದರೆ, ಮಧ್ಯದ ಚೌಕದಲ್ಲಿ ಶಿವ ಮತ್ತು ಪಾರ್ವತಿಯರೂ ಅಥವಾ ವಿರೂಪಾಕ್ಷ ಮತ್ತು ಪಂಪಾಂಬಿಕಾ ಇವರುಗಳ ರೂಪುಗಳನ್ನು ಚಿತ್ರಿಸಲಾಗಿದೆ. ಇವರ ಬಲಭಾಗದಲ್ಲಿರುವ ಚೌಕದಲ್ಲಿ ಬ್ರಹ್ಮ ಮತ್ತು ಸರಸ್ವತಿಯರನ್ನು ಮತ್ತು ಇನ್ನುಳಿದ ಎಡಭಾಗದಲ್ಲಿ ವಿಷ್ಣು ಮತ್ತು ಲಕ್ಷ್ಮಿಯರ ರೂಪುಗಳನ್ನು ಸುಖಾಸೀನರಾಗಿರುವ ಭಂಗಿಗಳಲ್ಲಿ ಚಿತ್ರಿಸಲಾಗಿದೆ. ಈ ದೇವತಾ ದಂಪತಿಗಳ ಇಕ್ಕೆಲಗಳಲ್ಲಿ ಅವರವರಿಗೆ ಸೇರಿದ ಪರಿವಾರ, ಪರಿಚಾರಕರ ಆಕೃತಿಗಳ ಸಮೂಹವನ್ನೇ ಚಿತ್ರಿಸಲಾಗಿದೆ. ಉದಾಹರಣೆಗೆ ಶಿವ ಪಾರ್ವತಿಯರ ಚಿತ್ರಗಳ ಎಡ ಮತ್ತು ಬಲಗಳಲ್ಲಿ ತುಂಬುರ, ಭೃಂಗಿ ಮತ್ತಿತರ ಪರಿಚಾರಿಕೆಯರನ್ನು ವಿವಿಧ ಭಂಗಿಗಳಲ್ಲಿ ಮತ್ತು ವಿಶೇಷ ಅಲಂಕಾರಗಳೊಂದಿಗೆ ರೂಪಿಸಿರುವುದು ತಿಳಿಯುತ್ತದೆ. ಅದೇ ರೀತಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯರ ಜೊತೆಯಲ್ಲಿ ಗರುಡ, ಹನುಮಂತ ಮತ್ತಿತರ ಪರಿಚಾರಕರನ್ನು ಅತಿ ವಿನಮ್ರ ಭಾವನೆಗಳೊಂದಿಗೆ ಮತ್ತು ನಿಂತಿರುವ ಭಂಗಿಯಲ್ಲಿ ತೋರಿಸಲಾಗಿದೆ. ಈ ದೇವತಾ ಮೂರ್ತಿಗಳ ಆಸನಗಳ ಮುಮದೆ ಅವರವರ ವಾಹನಗಳನ್ನು ಕಾಣಬಹುದು. ಮೇಲ್ಭಾಗದಲ್ಲಿ ಶಿಖರಗಳಿಂದ ಕೂಡಿದ ಉಪ್ಪರಿಗೆಗಳನ್ನು ಚಿತ್ರಿಸಿದ್ದು, ಅವುಗಳಲ್ಲಿ ಋಷಿಗಳು, ಗಣಗಳು, ಕಿನ್ನರರು, ಗಂಧರ್ವರು ಮತ್ತಿತರ ಉಪದೇವತೆಗಳನ್ನು ಮತ್ತೆ ಕೆಲವರು ವಿವಿಧ ವಾದ್ಯವಿಶೇಷಗಳನ್ನು ನುಡಿಸುತ್ತಿರುವಂತೆಯೂ  ತೋರಿಸಲಾಗಿದೆ. ಹೀಗೆ ಚಿತ್ರಕಾರನು, ತ್ರಿಮೂರ್ತಿಗಳು ತಮ್ಮ ಪರಿವಾರ ಮತ್ತು ಇತರ ಅನುಚರರೊಂದಿಗೆ ತಮ್ಮ ಮಂದಿರಗಳಲ್ಲಿ ಆಸೀನರಾಗಿದ್ದ  ಯಾವುದೋ ಒಂದು ವಿಶೇಷ ಸಂದರ್ಭವನ್ನು ಸೂಚಿಸುವಂತೆ ಕಲ್ಪಿಸಿ ಚಿತ್ರಿಸಿರುತ್ತಾನೆ.

೨. ಮುಂದಿನ ದೃಶ್ಯವು ಈ ಕ್ಷೇತ್ರದ ಮುಖ್ಯ ದೇವತೆಗಳಾದ ವಿರೂಪಾಕ್ಷ ಮತ್ತು ಪಂಪಾಂಬಾ ಅವರೀರ್ವರ ಕಲ್ಯಾಣ ಮಹೋತ್ಸವವನ್ನು ತಿಳಿಸುತ್ತದೆ. ಎಂದರೆ, ಈ ಕ್ಷೇತ್ರದ ಸ್ಥಳಪುರಾಣವನ್ನು ಚಿತ್ರಗಳಲ್ಲಿ ನಿರೂಪಿಸುತ್ತದೆಯಾದುದರಿಂದ, ಆ ದೃಷ್ಟಿಯಿಂದ ಇದು ಬಹುಮುಖ್ಯವಾದ ದೃಶ್ಯವಾಗಿದೆ.

ಈ ಸಂದರ್ಭದಲ್ಲಿ ಹಂಪೆಯಲ್ಲಿ ಪ್ರತಿ ವರ್ಷವೂ ನಿಯತ ಕಾಲಗಳಲ್ಲಿ ತಪ್ಪದೆ ಜರುಗುವ ಕಾರ್ಯಕ್ರಮಗಳನ್ನು ಗಮನಿಸಬೇಕಾಗುತ್ತದೆ. ಶ್ರಾವಣ ಮಾಸದ ಪೌರ್ಣಮಿಯ ದಿನ (ನೂಲು ಹುಣ್ಣಿಮೆಯ ದಿನ) ವಿವಾಹ ಯೋಗ್ಯಳದ ಕನ್ಯೆಯನ್ನು (ಪಂಪಾಂಬಾ ದೇವಿಯನ್ನು)ವರನು (ವಿರೂಪಾಕ್ಷ ಸ್ವಾಮಿಯು) ನೋಡಿದಂತೆ ಕಾರ್ಯಕ್ರಮಗಳು ಜರುತ್ತಗುತ್ತವೆ. ಆನಂತರ, ಕಾರ್ತಿಕ ಮಾಸದಲ್ಲಿ ನಿಶ್ಚಿತಾರ್ಥವಾದಂತೆ ಕಾರ್ಯಕ್ರಮಗಳು ಜರುಗುತ್ತವೆ. ವೈಶಾಖ ಮಾಸದಲ್ಲಿ ಶುಕ್ಲ ಪಕ್ಷದ ಹದಿನಾಲ್ಕನೆಯ ದಿನದಂದು ಇಬ್ಬರಿಗೂ ವಿವಾಹ ಮಹೋತ್ಸವವು ಜರುಗಿ ಮಾರನೆಯ ದಿನವಾದ ಪೌರ್ಣಮಿಯಂದು ನಡೆಯುವ ರಥೋತ್ಸವವು ನವದಂಪತಿಗಳ ಮೆರವಣಿಗೆಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆ. ಎಂದರೆ, ದಕ್ಷನನ್ನು ಶಿಕ್ಷಿಸಿದ ಮತ್ತು ಮಾರನನ್ನು ಜಯಿಸಿದ ಆನಂತರದ ಘಟನೆಯಾದ ಗಿರಿಜಾ ಕಲ್ಯಾಣವು ಇಲ್ಲಿಯೇ ಜರುಗಿತೆಂಬುದು ಸ್ಥಳ ಪುರಾಣದ ಪಾಠ ಶಿವ ಪಾರ್ವತಿಯರ ಕಲ್ಯಾಣವೆಂದ ಬಳಿಕ ಬ್ರಹ್ಮ, ವಿಷ್ಣು, ಇಂದ್ರ ಮುಂತಾದ ದೇವತೆಗಳು,

ಋಷಿಗಲು, ಗಣಗಳು, ಕಿನ್ನರರು, ಗಂಧರ್ವರು, ವಿವಿಧ ವಾದ್ಯಗೋಷ್ಠಿಯವರು, ಅಷ್ಟದಿಕ್ಪಾಲಕರು ಮುಂತಾದವರು ಉಪಸ್ಥಿತರಾಗಿರಲೇ ಬೇಕಲ್ಲವೇ? ಅವರೆಲ್ಲರನ್ನು ಸೂಕ್ತ ವರ್ಣಗಳಲ್ಲಿ ಮತ್ತು ಸೂಕ್ತ ಸ್ಥೂನಗಳಲ್ಲಿ ಸಾಲಂಕೃತರನ್ನಾಗಿ ಚಿತ್ರಿಸಲಾಗಿದೆ[15] ಮತ್ತು ಈ ಕಲ್ಯಾಣ ಮಹೋತ್ಸವವು ವಟ ವೃಕ್ಷದ ಕೆಳಗೆ ಜರುಗಿದಂತೆ ಪ್ರತೀತಿ ಇರುವುದರಿಮದ ವಟ ವೃಕ್ಷದ ಕೆಳಗೆ ಭಾವೀ ದಂಪತಿಗಳು, ಪ್ರಾಣಿ ಗ್ರಹಣ ಕಾರ್ಯಕ್ಕಾಗಿ ತಮ್ಮ ಕೈಗಳನ್ನು ಮುಂದೆ ಚಾಚಿದವರಾಗಿ ಸುಂದರ ಭಂಗಿಗಳಲ್ಲಿ ನಿಂತಿರುತ್ತಾರೆ. ಶಿವನ ಬೆನ್ನ ಹಿಂದೆಯೇ ಬ್ರಹ್ಮನು ನಿಂತಿದ್ದು ಕನ್ಯಾದಾನವನ್ನು ನೆರವೇರಿಸುತ್ತಿದ್ದಾನೆ. ಪಾರ್ವತಿಯ ಹಿಂದೆ ಆರು ಜನ ಹೆಂಗಳೆಯರನ್ನು ಚಿತ್ರಿಸಲಾಗಿದೆ. ಎಂದರೆ ಈ ದೃಶ್ಯವು ಸಹ ಆಗಮಗಳಲ್ಲಿ ನಿರೂಪಿಸಲಾಗಿರುವಂತೆ ಹೊಮ್ಮಿ ಬಂದಿದೆ. ಸ್ಥಳ ಪುರಾಣವನ್ನು ಹೇಳುವ ಈ ದೃಶ್ಯವು ಮನೋಹರವಾಗುವಂತೆ, ಆಕರ್ಷಕ ಬಣ್ಣಗಳಿಂದ ಮತ್ತು ಸೂಕ್ತ ರೂಪುಗಳಿಂದಲೂ ಚಿತ್ರಿತವಾಗಿದೆ.

೨. ಈಗ ಮಧ್ಯದ ಸಾಲಿನಲ್ಲಿರುವ ದೃಶ್ಯಗಳನ್ನು ನೋಡೋಣ. ಈ ಸಾಲಿನಲ್ಲಿ ಮೂರು ಮುಖ್ಯ ಚೌಕ ಅಥವಾ ಮನೆಗಳಿದ್ದು, ಅವುಗಳಲ್ಲಿ ಕೊನೆಯವೆರಡು ಬಹುಮುಖ್ಯವಾಗಿವೆ. ಇವು ಸಹ ಬಹುರಮ್ಯವಾಗಿ ಚಿತ್ರಿತವಾಗಿವೆ. ಮಧ್ಯದ ಸ್ಥಳವನ್ನು ಅಲಂಕಾರಕ್ಕಾಗಿ ಬಳಸಿಕೊಳ್ಳಲಾಗಿದ್ದು, ಅದರಲ್ಲಿ ಸಂಪೂರ್ಣವಾಗಿ ಅರಳಿದ ಕಮಲವನ್ನು ತೋರಿಸಿ, ಅದರ ಸುತ್ತಲೂ ಅಲಂಕರಣದ ಚಿತ್ರಗಳು ತೋರಿಸಲಾಗಿದೆ. ಇದರ ಇಕ್ಕೆಲಗಳಲ್ಲಿರುವ ಎರಡು ಪೌರಾನಿಕ ದೃಶ್ಯಗಲಲ್ಲಿ, ದಕ್ಷಿಣದ ಕಡೆಗೆ ಇರುವುದು ತ್ರಿಪುರಗಳ ಸಂಹಾರದ ದೃಶ್ಯವನ್ನು ತೋರಿಸಿದರೆ, ಉತ್ತರ ಕಡೆಗಿರುವುದು ಮನ್ಮಥ ವಿಜಯವನ್ನು ನಿರೂಪಿಸುತ್ತದೆ. ಪುನಃ ಈ ಮನ್ಮಥ ವಿಜಯದ ದೃಶ್ಯವು ಸ್ಥಳ ಪುರಾಣಕ್ಕೆ ಸಂಬಂಧಿಸಿದುದಾಗಿದೆ.

**ಅ. ಮನ್ಮಥ ವಿಜಯ :** ದಾಕ್ಷಾಯಣಿಯನ್ನು ಕಳೆದುಕೊಂಡ ನಂತರ ಶಿವನು ಜಿಗುಪ್ಸೆಗೊಂಡು ಹೇಮಕೂಟದಲ್ಲಿ ಧ್ಯಾನಾಸಕ್ತಿನಾಗಿ ಕುಳಿತನು. ಈ ಮಧ್ಯೆ ಪರ್ವತರಾಜನ ಮಗಳಾಗಿ ಹುಟ್ಟಿದ ದಾಕ್ಷಾಯಣಿಯು ಶಿವನನ್ನು ಒಲಿಸಿಕೊಳ್ಳವ ಸಲುವಾಗಿ, ಧಾನ್ಯಾಸಕ್ತನಾದ ಶಿವನ ಸೇವೆಯಲ್ಲಿ ನಿರತಳಾಗಿದ್ದಳು. ಅದೇ ಸಮಯದಲ್ಲಿ ತಾರಕಾಸುರನೆಂಬ ಅಸುರನಿಂದ ಅನಂತ ಪೀಡೆಗೋಲಗಾಗಿದ್ದ ದೇವತೆಗಳು. ದೀರ್ಘ ಸಮಾಲೋಚನೆಯ ನಂತರ ಶಿವಕುಮಾರನೇ ಅ ಅಂತಕನ ನಿವಾರಕನೆಂಬ ಅರಿವಿನಿಂದಾಗಿ ಮನ್ಮಥನೊಡಗೂಡಿ ಶಿವನ ಧ್ಯಾನವನು ಕೆಡಿಸಿ ಗಿರಿಜೆಯಲ್ಲಿ ಅನುರಕ್ತನಗುವಂತೆ ಮಾಡಿದರೆಂಬುದು, ಈ ಪ್ರಯತ್ನದಲ್ಲಿ ಮನ್ಮಥನು ಶಿವನ ಕೋಪಾಗ್ನಿಯಲ್ಲಿ ಸುಟ್ಟು ಭಸ್ಮನಾದುದು ಮುಂತಾಗಿ ಸರ್ವರಿಗೂ ತಿಳಿದಿರುವ ಪುರಾಣ ಕಥೆಯಷ್ಟೆ? ಆ ದೃಶ್ಯವನ್ನೆ ಚಿತ್ರಕಾರನು ಇಲ್ಲಿ ಬಹುರಂಜಿತವಾಗಿಯೂ ಮತ್ತು ಅರ್ಥಗರ್ಭಿತವಾಗಿಯೂ ವಿವಿಧ ವರ್ಣಗಳಲ್ಲಿ ಬರೆದಿಟ್ಟಿರುತ್ತಾನೆ.

ಶಿವನು ಹೇಮಕೂಟದ ಮೇಲೆ, ತುಂಗಭದ್ರಾನದಿಯ ಮತ್ತು ಪಂಪಾ ಸರಸ್ಸುಗಳ ಪರಿಸರದಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುತ್ತಾನೆ. ಅವುಗಳಾದರೋ ಜನಚರ ಪ್ರಾಣಿಗಳಿಂದ ಭರಿತವಾಗಿವೆ. ಶಿವನ ಸುತ್ತಲೆಲ್ಲಾ ಹುತ್ತವು ಬೆಳೆದಂತೆ ತೋರಿಸಲಾಗಿದ್ದು ಹವುಗಳು ಸುತ್ತಿಕೊಂಡಿರುತ್ತವೆ. ಶಿವನು ಪದ್ಮಾಸನನಾಗಿ ಕುಳಿತಿದ್ದು ಜಟೆಯ ಬೀಳುಗಳು ಮೊಣಕಾಲಿನವರೆಗೂ ಬಂದಿರುತ್ತವೆ. ನಂದಿಯು ಸದಾ ಸೇವೆಯಲ್ಲಿ ನಿರತನೆಂಬಂತೆ, ಪೀಠದ ಕೆಳಗೆ ನಿಂತಿದ್ದಾನೆ. ಬ್ರಹ್ಮ, ವಿಷ್ಣು, ಇಂದ್ರ ಮುಮತಾದ ದೇವತೆಗಳಿಮದ ಪ್ರೇರಿತನಾದ ಮನ್ಮಥನು ಶಿವನ ಧ್ಯಾನವನ್ನು ಭಂಗಗೊಳಿಸುವ ಸಲುವಾಗಿ ಶುಕರಥಾರೂಢನಾಗಿ ಬಂದು ಎದುರಿನಲ್ಲಿ ಕರುವಿಲ್ಲನ್ನು ಹಿಡಿದು, ಪುಷ್ಪಬಾಣವನ್ನು ಹಡಿ ನಿಂತಿದ್ದಾನೆ. ಅದೇ ಸಮಯದಲ್ಲಿ ಅವನ ಹೆಂಡತಿಯಾದ ರತಿದೇವಿಯು ಹಿಂದೆ ನಿಂತಿದ್ದು, ಆ ಅಪಾಯಕಾರಿ ಕೆಲಸದಲ್ಲಿ ತೊಡಗಬಾರದೆಂಬಂತೆ ಮನ್ಮಥನನನ್ನು ಅಂಗಾಲಾಚಿ ಬೇಡಿಕೊಳ್ಳುತ್ತಿರುವವಳಂತೆ, ಎರಡೂ ಕೈಗಳನ್ನು ಮುಂದೆ ಮಾಡಿರುತ್ತಾಳೆ. ಇದು ಬಹು ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ನಂದಿಯ ಹಿಂದೆ ಗಿರಿಜೆ ಮತ್ತು ಅವಳ ತಂದೆಯಾದ ಪರ್ವತ ರಾಜ, ಮುಂದೇನಾಗುವುದೋ ಎಂಬ ಶಂಕೆಯಿಂದ ಕೂಡಿದವರಾಗಿ ಗಂಭೀರವದನರಾಗಿ ನಿಂತಿರುವಂತೆ ಚಿತ್ರಿಸಲಾಗಿದೆ. ರತಿದೇವಿಗೆ ವಿಷಯದಲ್ಲಂತೂ ವೀಕ್ಷಕರ ಕರುಣೆಯುಕ್ಕಿ ಬರುವಂತೆ ಭಾವಗರ್ಭಿತವಾಗಿ ಚಿತ್ರಿತವಾಗಿದೆ. ಇಲ್ಲಿ ಚಿತ್ರಕಾರನು ಅತೀ ಸೂಕ್ಷ್ಮ ಭಾವನೆಗಳನ್ನು, ಸನ್ನಿವೇಶಗಳನ್ನು ಬಹುಕುಶಲತೆಯಿಂದ ಚೈತನ್ಯಯುಕ್ತವಾಗಿಯೂ ನೈಜವಾಗಿಯೂ ಚಿತ್ರಿಸಿರುತ್ತಾನೆಂದು ಹೇಳಬಹುದು.

**ಇ. ತ್ರಿಪುರಗಳ ಸಂಹಾರ :** ಈ ದೃಶ್ಯವು ಸ್ಥಳ ಪುರಾಣಕ್ಕೆ ಸಂಬಂಧಿಸಿದಲ್ಲವಾದರೂ, ಹಿಂದೂ ದೇವಾಲಯಗಳಲ್ಲಿ ಸಾಮಾನ್ಯವಾಗಿ ವರ್ಣಗಳಲ್ಲಿ ಚಿತ್ರಿತವಾಗಿರುವ ದೃಶ್ಯಗಳಲ್ಲೊಂದು. ಇಲ್ಲಿ ಚಿತ್ರಕಾರನ ಕುಂಚಗಳ ಕುಶಲತೆ, ಅವನ ಭಾವನಾ ನಿರೂಪಣೆಯ ಜಾಣ್ಮೆ ಮತ್ತು ವಸ್ತು ನಿರ್ದೇಶನದ ಚತುರತೆಗಳು ಬಹುಪರಿಣಾಮಕಾರಿಯಾಗಿ ವ್ಯಕ್ತವಾಗಿವೆ, ಎಂದು ಹೇಳದರೆ ಅತಿಶಯೋಕ್ತಿಯಾಗಲಾರದು. ಈ ದೃಶ್ಯದಲ್ಲಿ ಶಿವನು ತನ್ನ ರಥದಲ್ಲಿ ವೀರ ಭಂಗಿಯಲ್ಲಿ ನಿಂತು ತ್ರಿಪುರಗಳ ರಾಕ್ಷಸರನ್ನು ಎದುರಿಸುತ್ತಿದ್ದಾನೆ. ಈ ಸಂದರ್ಭದಲ್ಲಿ ಶಿವನು ಪೃಥ್ವಿಯನ್ನೇ ತನ್ನ ರಥವನ್ನಾಗಿ, ಸೂರ್ಯಚಂದ್ರರೇ ಅದರ ಚಕ್ರಗಳಾಗಿ, ನಾಲ್ಕು ವೇದಗಳೇ ಆ ರಥದ ಕುದುರೆಗಳಾಗಿ (ಇಲ್ಲಿ ಐದು ಕುದುರೆಗಳನ್ನು ತೋರಿಸಲಾಗಿದೆ) ಬ್ರಹ್ಮನೇ ಸಾರಥಿಯಾಗಿ, ಮಂದಾರ ಪರ್ವತವೇ ಧನಸ್ಸಾಗಿ, ಆದಿಶೇಷನೇ ಅದರ ಸಿಂಜಿನಿಯಾಗಿ, ವಿಷ್ಣುವೇ ಬಾಣವಾಗಿ ಉಪಯೋಗಿಸಿಕೊಂಡ ಕಥೆಯನ್ನು ಇಲ್ಲಿ ಸ್ಮರಿಸಿಕೊಳ್ಳ ಬಹುದು. ಈ ಎಲ್ಲಾ ವಿಷಯಗಳು ಬಹು ಕುಶಲತೆಯಿಂದ ಮೇಲೆಯೇ ವಿವರಿಸಿರುವಂತೆ ಚಿತ್ರಿತವಾಗಿವೆ.

ಮುಕ್ಕಣ್ಣನೂ, ಚತುರ್ಭುಜಕ್ಕೂ, ಕಿರೀಟ ಮುಕುಟಧಾರಿಯೂ, ಸರ್ವಾಲಂಕರಣ ಭರಿತನೂ, ರುಂಡಮಾಲಾಧರನೂ ಆದ ಶಿವನು ವೀರ ಭಂಗಿಯಲ್ಲಿ ತ್ರಿಪುರದ ರಾಕ್ಷಸರ ಎದುರಿನಲ್ಲಿ ನಿಂತಿದ್ದರೂ, ಆ ರಾಕ್ಷಸರು ತನಗೆ ಸಾಟಿಯಲ್ಲವೆಂಬ ಭಾವನೆಯ ದ್ಯೋತಕವಾಗಿ ಶಂತಚಿತ್ರದಿಂದ ನಿಂತಿರುವಂತೆ ತೋರಿಸಲಾಗಿದೆ.

ತ್ರಿಪುರಗಳನ್ನು ನಿರ್ಮಿಸಿಕೊಂಡಿದ್ದ ಅಸುರರಾದ ಕಾಮಾಕ್ಷ, ಮಕರಾಕ್ಷ ಮತ್ತು ವಿದ್ಯುನ್ಮಾಲಿಗಳು ಅನೇಕ ವರಗಳನ್ನೂ, ಆಯುಧಗಳನ್ನೂ ಹೊಂದಿದವರಾಗಿ ದೇವತೆಗಳಿಗೂ ಕೊಡುತ್ತಿದ್ದ ಉಪಟಳಗಳನ್ನು ಕೊನೆಗೊಳಿಸಲು, ಬೇರಾರಿಂದಲೂ ಸಾಧ್ಯವಾಗದಂತೆ ಇರಲು, ಸರ್ವಶಕ್ತನಾದ ಶಿವನೇ ಯುದ್ಧಕ್ಕೆ ತೊಡಗಬೇಕಾಯಿತೆಂಬುದು ಪುರಾಣಾಂತರ್ಗತ ಕಥೆ.[16] ಆ ಶಿವನೂ ಸಹ ಇತರೆ ಎಲ್ಲಾ ದೇವತೆಗಳ ಸಹಾಯದಿಂದ ಮಾತ್ರವೇ ಅವರನ್ನು ಜಯಿಸಲು ಸಾಧ್ಯವಾಯಿತು. ಈ ರಾಕ್ಷಸರನ್ನು ಶಿವನ ಎದುರಿನಲ್ಲಿ, ಆಕಾಶದಲ್ಲೆಂಬಂತೆ ಮೂರು ವೃತ್ತಗಳ, ತೋರಿಸಲಾಗಿದ್ದು, ಅವುಗಳು ಅಕಾಶದಲ್ಲಿಯೇ ಒಂದನ್ನೊಂದು ಹೊಂದಿಕೊಂಡಿದ್ದು ಯಾವಾಗಲೂ ತಮ್ಮ ಸುತ್ತತಿರುಗುತ್ತಿದ್ದವೆಂಬ ವಿಷಯವನ್ನು ಸಹ ಚಮತ್ಕಾರದಿಂದ ನಿರೂಪಿಸಲಾಗಿದೆ. ಈ ಮೂರು ವೃತ್ತಗಳು, ಅಸುರರು ವರವಾಗಿ ಪಡೆದಿದ್ದ ಅಜೇಯವಾದ ಕೋಟೆಗಳನ್ನು ಪ್ರತಿನಿಧಿಸುತ್ತೆ.[17] ಆ ವೃತ್ತಗಳೊಳಗೆ ಅಸುರರ, ಅವರ ಅನುಯಾಯಿಗಳ ಭೀಕರ ಆಕೃತಿಗಳನ್ನು ಎರಡರಲ್ಲಿ ತೋರಿಸಲಾಗಿದ್ದು, ಮೂರನೆಯದರಲ್ಲಿ ವಿಷ್ಣುವು ಆಗಲೇ ಬಂದಿಳಿದು, ಆಸುರ ಪತ್ನಿಯರ ಮನೋಸ್ಥೈರ್ಯವನ್ನು ನಿರ್ವೀರ್ಯಗೊಳಿಸುವುದರ ಮೂಲಕ ತ್ರಿಪುರ ಸಂಹಾರ ಕಾರ್ಯದಲ್ಲಿ ನಿರತನಾಗಿರುವಂತೆ ತೋರಿಸಲಾಗಿದೆ. ಇಲ್ಲಿ ವಿಷ್ಣುವು ಇಬ್ಬರ ಅಸುರ ಪತ್ನಯರ ಮಧ್ಯದಲ್ಲಿ ಬೆತ್ತಲೆಯಾಗಿ ನಿಂತಿರುವಂತೆ ಚಿತ್ರಿಸಲಾಗಿದೆ.

ಈ ಯುದ್ಧವು ನಡೆದ ಪರಿಸರದ ದೃಶ್ಯವು ಸಮಕಾಲೀನ ಯುದ್ಧಭೂಮಿಯ ಸನ್ನಿವೇಶವನ್ನು ನೆನಪು ಮಾಡಿಕೊಡುವಂತಹುದಾಗಿದೆ. ಎಂದರೆ ಆ ಕಾಲದಲ್ಲಿ ಯುದ್ಧಗಳು ಜನವಸತಿಯಿಮದ ದೂರದಲ್ಲಿದ್ದ ಬಯಲುಗಳಲ್ಲಿ ಜರುಗುತ್ತಿದ್ದುವು. ಈ ಅಂಶವು ಈ ಚಿತ್ರದ್ಲಲಿ ಕಾಣಿಸಿರುವ ಗಿಡಗಳು, ಪೊದೆಗಳು, ನರಿ ಮುಂತಾದ ಕಾಡುಮೃಗಗಳ, ರಣಹದ್ದು ಮುಂತಾದ ಪಕ್ಷಿಗಳಿಂದ ವ್ಯಕ್ತವಾಗುತ್ತದೆ.[18] ಹೀಗೆ ಈ ದೃಶ್ಯವು ಸಂದರ್ಭೋಚಿತವಾಗಿಯೂ ಮತ್ತು ಪರಿಣಾಮಕಾರಿಯಾದ ವಿವರಣೆಗಳೊಂದಿಗೂ, ಚಿತ್ರಕಾರನ ಕುಶಲ ಕುಂಚಗಳಿಂದ ಮೂಡಿ ಬಂದಿದೆ.

ಈ. ನಂತರದ ಸಾಲಿನಲ್ಲಿಯೂ ಮೂರು ಭಾಗಗಳನ್ನು ಕಾಣಬಹುದು. ಮಧ್ಯದಲ್ಲಿರುವ ಭಾಗದಲ್ಲಿ ವಿಷ್ಣುವಿನ ದಶಾವತಾರಗಳನ್ನು ಚಿತ್ರಸಲಾಗಿದೆ. ಇವುಗಳೂ ಸಹ ಆಗಮ ಗ್ರಂಥಗಳಲ್ಲಿರುವ ನಿರ್ದೇಶನಗಳ ಮೇರೆಗೆ ಪ್ರಸ್ತುತಪಡಿಸಲಾಗಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಬುದ್ಧನ ಅವತಾರದ ಚಿತ್ರವು. ಇಲ್ಲಿ ಬುದ್ಧಾವತಾರದ ವಿಷ್ಣುವನ್ನು ಬೆತ್ತಲೆಯಾಗಿಯೂ ಮತ್ತು ಸಮಭಂಗಿಯಲ್ಲಿ ನಿಂತಿರುವಂತೆ ತೋರಿಸಿರುವುದಲ್ಲದೆ, ವಿವಿಧ ಆಭರಣಗಳನ್ನು ಧರಿಸಿರುವಂತೆಯೂ ಚಿತ್ರಿಸಲಾಗಿದೆ. ಈ ಚಿತ್ರವು ಹೆಚ್ಚಾಗಿ ಬಾಗಿ ಕೃಷ್ಣನನ್ನೋ ಅಥವಾ ಬಾಲ ಬಲರಾಮನನ್ನೋ ಹೋಲುವಂತಿದೆ. ಅತೀ ಸಮೀಪದಿಂದ ಪರೀಕ್ಷಿಸಿದಲ್ಲಿ, ಅವನ ಹಣೆಯ ಮೇಲೆ ವೀರ

ರೇಖೆಗಳೂ ಕಾಣಲಿಕ್ಕುಂಟು.[19] ಎಂದರೆ ಬುದ್ಧನನ್ನು ಸಂಪೂರ್ಣವಾಗಿ ಹಿಂದೂ ದೇವತೆಗಳ ಸಾಲಿಗೆ ಸೇರಿಸಿಕೊಂಡಂತೆ ತೋರಿಸಲಾಗಿದೆ.

ಮೇಲಿನ ದಶಾವತಾರದ ಒಂದು ಕೊನೆಯಲ್ಲಿರುವ ಚೌಕದಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿರುವ ಅಸಾರನೊಬ್ಬನು ಆನೆಯ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಆ ಆನೆಯ ದೇಹಭಾಗವೆಲ್ಲವೂ ಹೆಂಗಳೆಯರ ಚಿತ್ರಗಳಿಂದ ತುಂಬಲಾಗಿದೆ. ಹೊರನೋಟಕ್ಕೆ ಅದು ಒಂದು ವಿಧದ ಕಸರತ್ತಿನ ಆಟವೋ ಎಂಬಂತೆ ಇದೆ. ಅದೇ ರೀತಿಯಲ್ಲಿ ಇನ್ನೊಂದು ಕೊನೆಯಲ್ಲಿರುವ ಕುದುರೆಯ ಮೇಲಿರುವ ಸವಾರನದು ಸಹ ಚಿತ್ರಿತವಾಗಿದೆ.[20] ಈ ತರದ ಚಿತ್ರಗಳು, ಬಹುಶಃ ಅಲಂಕಾರಕ್ಕಾಗಿ ಚಮತ್ಕಾರದಿಂದ ಬಳಸಲಾಗಿದ್ದು, ಬೇರೆಡೆಗಳಲ್ಲಿಯೂ ಸಹ ಇಂತಹ ಚಿತ್ರಗಳು ಕಾಣಬರುತ್ತವೆ.

೫. ಈಗ ಪರಿಶೀಲಿಸಲಾಗುತ್ತಿರುವ ಸಾಲಿನಲ್ಲಿ ರಾಮಯಣ ಮತ್ತು ಮಹಾಭಾರತಗಳ ಎರಡು ಮುಖ್ಯ ಘಟನೆಗಳನ್ನು ನಿರೂಪಿಸಲಾಗಿದೆ. ಎಂದರೆ ಜನಕ ಮಹಾರಾಜನು ಸೀತಾ ಸ್ವಯಂವರದ ಸಂದರ್ಭದಲ್ಲಿ ಏರ್ಪಡಿಸಿದ್ದ ಶಿವಧನುಸ್ಸನ್ನು ಶ್ರೀ ರಾಮನು ಎದಗೇರಿಸಿ ಸಿಂಜಿನಿಯನ್ನು ಬಿಗಿಯುವ ದೃಶ್ಯವು.

ಅದೇ ರೀತಿ, ದ್ರುಪದರಾಜನು ದ್ರೌಪದಿಯ ಸ್ವಯಂವರದ ಸಮಯದಲ್ಲಿ ಏರ್ಪಡಿಸಿದ್ದ ಯಂತ್ರಮತ್ಸ್ಯದ ಪ್ರತಿಬಿಂಬವನ್ನು ಕೆಳಗಿನ ಪಾತ್ರೆಯ ನೀರಿನಲ್ಲಿ ನೋಡಿ, ಗುರಿ ಇಟ್ಟು ಅರ್ಜುನನಿಂದ ಭೇದಿಸಲ್ಪಡುತ್ತಿರುವುದು ಇನ್ನೊಂದು ದೃಶ್ಯವು. ಈ ಎರಡು ಘಟನೆಗಳ ಜೊತೆಗೆ ಆ ಸಮಯಕ್ಕೆ ನೆರೆದ ಇತರ ರಾಜಕುಮಾರರು, ಹೆಂಗಸರು, ಋಷಿಗಳು ಮುಂತಾದವರನ್ನು ಸಹ ಸೂಕ್ತವಾಗಿ ಚಿತ್ರಿಸಲಾಗಿದೆ.

೬. ಈ ಸಾಲಿನಲ್ಲಿ ರಾಜನೊಬ್ಬನು ತನ್ನ ಅನುಚರರು ಮತ್ತು ಭಟರೊಂದಿಗೆ ಬೇಟೆಗಾಗಿ ಹೊರಟಿರುವಂತೆ ತಿಳಿಯುತ್ತದೆ. ಇದರಲ್ಲಿ ಕೆಲವು ರಥಗಳೂ ಇವೆ. ಅವುಗಳ ಮೇಲೆಲ್ಲಾ ಬೇರೆ ಬೇರೆ ಆಕಾರದ ಛಾವಣಿಗಳನ್ನು ಚಿತ್ರಸಲಾಗಿದೆ. ಅವುಗಳಡಿಯಲ್ಲಿ ರಾಜನು ಅಥವಾ ಅಧಿಕಾರಿಗಳು ಸುಖಾಸೀನರಾಗಿದ್ದು, ಕೆಲವರ ಪರಿಚಾರಕರು ಗಾಳಿ ಹಾಕುತ್ತಿರುವಂತೆ ತೋರಿಸಲಾಗಿದೆ. ಅವರೆಲ್ಲ ರಾಜನು ಮತ್ತು ಅವನ ಪ್ರಮುಖ ಅಧಿಕಾರಿಗಳಾಗಿರಬೇಕು. ಅವರು ತಾವು ಸ್ವತಃ ಬೇಟೆಯಾಡದೆ, ತಮ್ಮ ಭಟರು ಮತ್ತು ಸೈನಿಕರು ಬೇಟೆಯಾಡುವುದನ್ನು ನೋಡಿ ಆನಂದಿಸಲು ಬಂದವರಾಗಿರಬೇಕು. ಇವರ ರಥಗಳಿಗೆ ಜೋಡಿ ಜೋಡಿಯಾಗಿ ಆನೆಗಳನ್ನೋ, ಕುದುರೆಗಳನ್ನೋ ಅಥವಾ ಹೋರಿಗಳನ್ನೋ ಹೂಡಿರುವಂತೆ ಕಾಣಿಸುತ್ತದೆ. ಭಟರು ಅಥವಾ ಸೈನಿಕರು ಸಾಲು. ಗುಂಪುಗಳಲ್ಲಿ ಅಲ್ಲಲ್ಲಿ ಕಾಣಬರುತ್ತಾರೆ. ಅವರೆಲ್ಲ ಸಮಕಾಲೀನ ಉಡುಪುಗಳನ್ನು ಧರಿಸಿದ್ದು, ಕೈಗಳಲ್ಲಿ ಖಡ್ಗ, ಗುರಾಣಿ, ಭರ್ಚಿ, ಕೋಲು, ಈಟಿ ಮುಂತಾದ ಆಯುಧಗಳನ್ನು ಹೊಂದಿರುತ್ತಾರೆ. ಇವರಲ್ಲದೆ ಕೆಲವು ಪಕ್ಷಿಗಳು, ಮನುಷ್ಯನನ್ನು ಬೆನ್ನಟ್ಟಿರುವ ಹುಲಿ, ಖಡ್ಗ ಮತ್ತು ಗುರಾಣಿಗಳನ್ನು ಹಿಡಿದು ಜಿಂಕೆಯೊಂದನ್ನು ಬೆನ್ನಟ್ಟಿರುವ ಸಯನಿಕ, ಇವೇ ಇಎತ ಚಿತ್ರಗಳು. ಇವೆಲ್ಲವುಗಳ ಪರಿಶೀಲನೆಯಿಂದ, ಇದು ಬೇಟೆಯ ಚಿತ್ರವನ್ನು ನಿರೂಪಿಸುತ್ತದೆಂದು ಹೇಳಬಹುದು, ಮತ್ತು ಆಗಿನ ಕಾಲದಲ್ಲಿ ಬೇಟೆಯಾಡುವ ಪದ್ಧತಿ, ಜನರ ವೇಷ ಭೂಷಣಗಳ ಅಧ್ಯಯನಕ್ಕೆ ಬಹಳ ಅನುಕೂಲವಾದ ವಸ್ತುವಾಗಿದೆ.[21]

೭. ಕೊನೆಯ ಸಾಲಿನ ಮಧ್ಯಭಾಗದಲ್ಲಿ ಒಬ್ಬ ಗುರು ಅಥವಾ ಸ್ವಾಮಿಯನ್ನು ಪಾಲಕಿಯಲ್ಲಿ ಕುಳ್ಳಿರಿಸಿ, ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಸ್ಥಳೀಯ ವದಂತಿಯ ಪ್ರಕಾರ, ಆ ಸ್ವಾಮಿಯು ಬೇರಾರೂ ಅಲ್ಲದೆ, ವಿಜಯನಗರ ಸಾಮ್ರಾಜ್ಯದ ಸ್ಥಾಪನಾಕಾರ್ಯದಲ್ಲಿ ಮುಖ್ಯ ಕಾರಣಕರ್ತರಾಗಿ, ಪ್ರೋತ್ಸಾಹಕರಾಗಿ, ಪೋಷಕರಾಗಿ ಪಾತ್ರವಹಿಸಿದ ವಿದ್ಯಾರಣ್ಯ ಸ್ವಾಮಿಯವರೆಂದು ಪ್ರತೀತಿ. ಅಂಥ ಪ್ರಮುಖ ಯತಿವರೇಣ್ಯರನ್ನು, ವಿಜಯನಗರದ ಅರಸರು ಈ ವಿರೂಪಾಕ್ಷ ಸ್ವಾಮಿಯ ದೇವಾಲಯದಲ್ಲಿ ವರ್ಣಚಿತ್ರಗಳಲ್ಲಿ ತೋರಿಸಿರುವುದರಿಂದ ಅವರಿಗೆ ಗೌರವವನ್ನು ಸಲ್ಲಿಸಿದಂತಾಗಿದೆ ಎಂದು ಹೇಳಬಹುದು. ಈ ಮೆರವಣಿಗೆಯಲ್ಲಿ ಅನೇಕ ಪರಿಚಾರಕರು, ಸೇವಕರು ವಂದಿಮಾಗಧರು, ಶಿಷ್ಯರು ಮುಂತಾದವರಿದ್ದಾರೆ.

ಶ್ರೀ ವಿದ್ಯಾರಣ್ಯ ಸ್ವಮಿಗಳ ಮೆರವಣಿಗೆಯ ಚಿತ್ರದ ಎರಡೂ ಕೊನೆಗಳಲ್ಲಿ ಚಿಕ್ಕ ಚೌಕ ಮನೆಗಳಿದ್ದು, ಒಂದರಲ್ಲಿ ಬಾಲಕೃಷ್ಣನಿಂದ ಗೋಪಿಕಾವಸ್ತ್ರಾಪಹರಣದ ಪ್ರಸಂಗವನ್ನು ಚಿತ್ರಿಸಲಾಗಿದೆ. ಇನ್ನೊಂದರಲ್ಲಿ ಶ್ರೀ ಪಂಪಾ ವಿರೂಪಕ್ಷ ಲಿಂಗಕ್ಕೆ ಮುಖ ಕವಚವನ್ನು ಧರಿಸಿದಂತೆಯೂ ಮತ್ತು ಎದುರಿನಲ್ಲಿ ನಂದಿಯನ್ನು ತೋರಿಸಿದಂತೆಯೂ ಚಿತ್ರವನ್ನು ರೂಪಿಸಲಾಗಿದೆ.

೮. ಈ ಮೇಲೆ ವಿವರಿಸಿದ ಚಿತ್ರಗಳಿರುವ ಒಳಮಾಳಿಗೆಗೆ ಸುತ್ತಲೂ ಇರುವ ಕಲ್ಲಿನ ಪಟ್ಟಿಕೆಗಳ ಮೇಲೆಯೂ ಸಹ ವರ್ಣಚಿತ್ರಗಳನ್ನು ಬರೆಯಲಾಗಿದೆ. ಎಂದು ಹಿಂದೆಯೇ ಹೇಳಿದೆ. ಇವು ನಿಲುಚಿತ್ರಗಳು ಮತ್ತು ಬಹು ಚಿಕ್ಕ ಪ್ರಮಾಣದಲ್ಲಿವೆ. ಇವುಗಳಲ್ಲಿ ಹೆಚ್ಚಿನವು, ಸುಣ್ಣ ಬಳಿಯುವವರ ಅಜ್ಞಾನದಿಂದಾಗಿ, ಹಾಳಾಗಿವೆ. ಆದರೂ ಉಳಿದಿರುವ ಕೆಲವು ಪ್ರಸ್ತುತ ಪಡಿಸುವ ವಿಷಯಗಳು ಅನೇಕವಾಗಿದ್ದು, ಸುಮಾರು ೬೭ ಚೌಕಗಳಲ್ಲಿ ಚಿತ್ರಿತವಾದಂತೆ ತಿಳಿಯುತ್ತದೆ. ಉದಾಹರಣೆಗೆ, ಹಿಂದೂ ಪಂಥದ ದೇವತೆಗಳು, ಮತ್ಸ್ಯೇಂದ್ರನಾಥ, ವಿವಿಧ ವಾದ್ಯಗಳನ್ನು ನುಡಿಸುವವರು, ಗೋಗ್ರಹಣ, ಕಾಲಧೇನು, ಕಿನ್ನರರು, ಗಂಧರ್ವರು, ಋಷಿಗಳು ಮುಂತಾದವುಗಳೇ ಅವುಗಳ ವಿಷಯಗಳು.

ಅಂಕಣದ ಪಶ್ಚಿಮದ ಕೊನೆಯಲ್ಲಿ ಕೆಲವು ರಾಜಮನೆತನದ ಭಕ್ತರು ಶ್ರೀ ವಿರೂಪಾಕ್ಷ ಸ್ವಾಮಿಗೆ ಪೂಜೆ ಸಲ್ಲಿಸುತ್ತಿರುವಂತೆ ತೋರಿಸಲಾಗಿದೆ. ರಾಸಾಯನಿಕ ರೀತಿಯಲ್ಲಿ ಇವುಗಳನ್ನು ತೊಳೆದಾಗ, ಅಕ್ಷರಗಳೇನಾದರೂ ಕಂಡುಬಂದರೆ, ಇವು ಬಹುಮುಖ್ಯವಾದ ವರ್ಣಚಿತ್ರಗಳೆಂದು ಪರಿಗಣಿಸಲ್ಪಡುವಲ್ಲಿ ಸಂದೇಹವೇ ಇರದು.[22] ಪ್ರಸ್ತುತದಲ್ಲಿ ಅವುಗಳೆಲ್ಲಾ ಬೆಳಕು. ಹೊಗೆ, ಧೂಳು, ಸುಣ್ಣಗಳ ದುಷ್ಪರಿಣಾಮಗಳಿಂದಾಗಿ ಮಸಕಾಗಿವೆಯಾದುದರಿಂದ ಅವುಗಳ ಬಗೆಗೆ ಏನೂ ತಿಳಿದುಬರುತ್ತಿಲ್ಲ.

**ತಾಂತ್ರಿಕತೆ**

ಕೊನೆಯಲ್ಲಿ ಇವುಗಳ ತಾಂತ್ರಿಕತೆಯ ಬಗ್ಗೆ ಎರಡು ಮಾತುಗಳನ್ನು ಹೇಳಲೇಬೇಕಾಗುತ್ತದೆ. ಇವುಗಳನ್ನು ರಾಸಾಯನಿಕ ವಿಶ್ಲೇಷಣೆಗಳಿಗೆ ಒಳಪಡಿಸುವವರಿಗೆ ಖಚಿತವಾಗಿ ಏನನ್ನೂ ಹೇಳಲಾಗದು. ಆದರೂ ಪುರಾತತ್ತ್ವ ರಾಸಾಯನಿಕ ಪರಿಣಿತರು[23] ನಾಯಕರ ಕಾಲದ (ಕ್ರಿ.ಶ. ೧೬ ಮತ್ತು ೧೭ನೇ ಶತಮಾನ) ವರ್ಣಚಿತ್ರಗಳನ್ನು ಕುರಿತು ಹೇಳಿರುವುದನ್ನು ಇಲ್ಲಿಯೂ ಉದ್ಧರಿಸಬಹುದು. ಏಕೆಂದರೆ ವಿಜಯನಗರ ಕಾಲದ ತಾಂತ್ರಿಕತೆಯೇ, ಈ ನಾಯಕರ ಕಾಲದ ಚಿತ್ರಗಳಲ್ಲಿಯೂ ಬಳಸಲಾಗಿದೆ ಎಂಬುದು ಸ್ಥಿರವಾಗಿದೆ. ‘ತಂಜಾವೂರಿನಲ್ಲಿ ವಿಜಯನಗರದ ಕಾಲದ ವರ್ಣಚಿತ್ರಕಾರರು, ಗಾರೆಯಿಂದ ಸಿದ್ಧವಾದ ಭಿತ್ತಿ (ಗೋಡೆ)ಗಳ ಮೇಲೆ ಅಥವಾ ಒಳಮಾಳಿಗೆಗಳ ಮೇಲೆ, ಸುಣ್ಣದ ನೀರಿನಲ್ಲಿ ಕಲಿಸಿದ ಬಣ್ಣಗಳಿಂದ ಚಿತ್ರಗಳನ್ನು ಬಿಡಿಸಿರುತ್ತಾರೆ. ಈ ಸ್ಥಳದಲ್ಲಿ ಸಾಮಾನ್ಯವಾಗಿ ಮೂರು ಪದರುಗಳು ಕಾಣಸಿಗುತ್ತವೆ. ಮೊದಲು ಒರಟಾದ ಗಾರೆಯಿಂದ ಸಿದ್ಧಪಡಿಸಿದ ಪದರು, ನಯವಾಗಿ ಸಿದ್ಧಪಡಿಸಿದ ಭೂಮಿಕೆ, ಆನಂತರ ಬಣ್ಣಗಳ ಲೇಪನದಿಂದಾದ ಚಿತ್ರಗಳು ಮುಂತಾಗಿ[24] ಅವರು ಹೆಚ್ಚಾಗಿ ಮಣ್ಣಿನ ಬಣ್ಣಗಳನ್ನೇ ಉಪಯೋಗಿಸುತ್ತಿದ್ದರು. ಈ ಬಣ್ಣಗಳನ್ನು ಸುಣ್ಣದ ತಿಳಿನೀರಿನಲ್ಲಿ ಕಲಿಸಿ ಚಿತ್ರಿಸುತ್ತಿದ್ದರಷ್ಟೇ? ಹಾಗೆ ಮಾಡುವುದರಿಂದ ಸುಣ್ಣದ ಇಳಿನೀರಿನಲ್ಲಿದ್ದ ಕ್ಷಾರವು, ವಾಯುವಿನಲ್ಲಿದ್ದ ಇಂಗಾಲದ ಡೈ ಆಕ್ಸೈಡನ್ನು ಹೀರಿಕೊಳ್ಳುವ ಗುಣವುಳ್ಳದ್ದಾಗಿರುವುದರಿಂದ, ಕೆಲಕಾಲದ ನಂತರ ಅವು ಗಟ್ಟಿಗೊಳ್ಳುತ್ತಿದ್ದವು ಆದುದರಿಂದಲೇ ಅವು ನಮಗೆ ಇಂದಿಗೂ ಕಾಣಬರುತ್ತವೆ.

**ಕೊನೆಯ ಮಾತು**

ಮೇಲೆ ಪ್ರಸ್ತುತಪಡಿಸಿರುವ ವಿವರಣೆಗಳಿಂದ, ಹಂಪೆಗೆ ಶ್ರೀ ವಿರೂಪಾಕ್ಷ ಸ್ವಾಮಿಯ ದೇವಸ್ಥಾನದ ಮಹಾರಂಗ ಮಂಟಪದಲ್ಲಿ ಕಾಣಬರುವ ವರ್ಣಚಿತ್ರಗಳು ಬಹುಮುಖ್ಯವಾದವುಗಳೆಂದಾಯಿತಲ್ಲವೇ? ಮತ್ತು ಆ ಕಾರಣದಿಂದಾಗಿ ಅಭಿಮಾನಪಡಬೇಕಾದ ವಿಷಯವೂ ಆಯಿತು. ಆದುದರಿಂದ ಅವುಗಳು ಮತ್ತಷ್ಟು ಹಾಳಾಗದಂತೆ (ಈಗಾಗಲೇ ಸಾಕಷ್ಟು ಹಾಳಾಗಿವೆ) ಬೇಕಾದ ಕ್ರಮಗಳನ್ನು ಕೈಕೊಂಡು ಅವುಗಳ

ರಕ್ಷಣೆಯನ್ನು, ಸಂಬಂಧಿಸಿದ ಎಲ್ಲರೂ ಅಭಿಮಾನ ಪ್ರೇರಿತರಾಗಿ ಮಾಡಬೇಕಾದುದು ಆದ್ಯ ಕರ್ತವ್ಯವಾಗಿದೆಯೆಂದು ಹೇಳಲೇಬೇಕಾಗಿದೆ. ಹುಚ್ಚಪ್ಪಯ್ಯನ ಮಠದಲ್ಲಿದ್ದ ವರ್ಣಚಿತ್ರಗಳಿಗಾದ ಗತಿಯು ಇವುಗಳಿಗೂ ಆಗಬಾರದೆಂದು ಆಶಿಸೋಣ.

**ಆಕಾರ**

ಹೇಮಕೂಟ, ಸಂ.೩, ಸಂಚಿಕೆ ೯, ೧೯೭೮, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿಮಠ, ಹಂಪಿ,

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] History and culture of the Indian People : Bhavan's Publication, Vol. III, pp. 546

[2] ಡಾ. ಶಿವರಾಮ ಕಾರಂತ, ಕರ್ನಾಟಕದಲ್ಲಿ ಚಿತ್ರಕಲೆ, ಮೈಸೂರು, ಪು. ೬೩.

[3] ಹಯವದನ ರಾವ್, Mysore Gazetteer, Vol. II, pt. I, pp. 330

[4] ರತ್ನಾಕರ ವರ್ಣಿಯ ಭರತೇಶ ವೈಭವ, ಕೃಷ್ಣದೇವರಾಯನ ಪಾರಿಜಾತಾಪಹರಣ, Domingos paes, Abdur Razzak etc.

[5] ಹಂಪೆಯ ಚಿತ್ರಗಳಲ್ಲದೆ ದಕ್ಷಿಣದ ಅನೇಕ ದೇವಾಲಯಗಳಲ್ಲಿ ವರ್ಣಚಿತ್ರಗಳು ಕಾಣಬರುತ್ತವೆ. ಉದಾ. ಎಡೆಯೂರಿನ ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿ, ಲೇಪಾಕ್ಷಿಯ ವೀರಭದ್ರ ಸ್ವಾಮಿ ದೇವಾಲಯದಲ್ಲಿ, ಕದರಿಯ ನಾರಾಯಣ ಸ್ವಾಮಿ ದೇವಾಲಯದಲ್ಲಿ, ತಂಜಾವೂರಿನ ಬೃಹದೀಶ್ವರಸ್ವಾಮಿಯ ದೇವಾಲಯದಲ್ಲಿ ಮುಂತಾಗಿ.

[6] ಇಂಥ ಅವಶೇಷಗಳನ್ನು, ಹಂಪೆಯ ಕಮಲ ಮಹಲು (ಚಿತ್ರಾಂಗಿ ಮಹಲು) ಹತ್ತಿರದ ಅರಮನೆಯ ನೆಲಗಟ್ಟುಗಳ ಹೊರಗೋಡೆಗಳ ಮೇಲೆ ಈಗಲೂ ನೋಡಬಹುದು. ಕಮಲ ಮಹಲುಗೆ ಸ್ಥಳೀಯ ಹೆಸರು ಚಿತ್ರಾಂಗಿ ಮಹಲೆಂದು ಹೆಸರೇ ಸೂಚಿಸುವಂತೆ, ಹಿಂದೆ ಅದು ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದುದಾಗಿರಬೇಕು. ಅದು ಅಂತಃಪುರದ ಹೆಂಗಳೆಯರ ವಿಹಾರ ಮಂಟಪವಾಗಿದ್ದುದರಿಮದ, ಹಾಗೆ ವರ್ಣಚಿತ್ರಗಳಿಂದ ಕೂಡಿದ್ದರೆ ಆಶ್ಚರ್ಯವೇನೂ ಇಲ್ಲ. ರಸಾಯನ ತಜ್ಞರು ಪರಿಗಣಿಸಬೇಕಾದ ವಿಷಯವೇ ಇದು.

[7] ಹಂಪೆಯ ಕೃಷ್ಣ ದೇವಸ್ಥಾನ, ವಿರೂಪಾಕ್ಷ ದೇವಾಲಯ, ಕಮಲಾಪುರದಲ್ಲಿರುವ ಒಂದು ಹಾಳು ದೇವಾಲಯಗಳಲ್ಲಿ, ಈ ಕುರುಹುಗಳನ್ನು ಈಗಲೂ ನೋಡಬಹುದು.

[8] ಹಂಪೆಯ ವಿಠಲ ದೇವಾಲಯದಲ್ಲಿ, ತಂಜವೂರಿನ ಬೃಹದೀಶ್ವರ ದೇವಾಲಯ ಮುಂತಾದೆಡೆಗಳನ್ನು ನೋಡಬಹುದು.

[9] ಇವುಗಳ ದೃಷ್ಟಾಂತಗಳನ್ನು ಹಂಪೆಯ ಪುರಾತತ್ವ ಸಮಗ್ರಹಾಲಯದ ಎರಡು ಶಿಲ್ಪಗಳ ಮೇಲೆ ನೋಡಬಹುದು.

[10] Heras : Aravidu Dynasty, pp. 486.

[11] S. Paramasivan : Vijayanagara Sexcentinary Vol. pp. 92.

[12] ಈಗ ಇವೆಲ್ಲ ಹಾಳಾಗಿವೆ.

[13] ಟಿಪ್ಪಣಿ ೧೨ರಲ್ಲಿದ್ದಂತೆ, ಪು. ೯೩.

[14] South Indian Inscriptions, Vol. No. 259, p. 54.

[15] Gopinatha Rao : Elements of Hindu Iconography, Vol. II, pt. I.

[16] ಬಿ.ಎನ್. ರಾವ್. ಪುರಾಣನಾಮ ಚೂಡಾಮಣಿ ಮುಂತಾದ ಗ್ರಂಥಗಳಲ್ಲಿ ಈ ಕಡೆಯನ್ನು ವಿವರವಾಗಿ ಕೋಡಲಾಗಿದೆ; Gopinatha Rao, Vol. II, Part I, pp. 164.

[17] ಮಹಾಭಾರತ (ಕರ್ಣಪರ್ವ) : ಕೋಟೆಗಳು ತಿರುಗುತ್ತಿದ್ದ ವಿಷಯವಾಗಿ ವಿವರಗಳನ್ನು ಕೊಡಲಾಗಿದೆ.

[18] ಶುಕ್ರನೀತಿಸಾರ, ರಾಜ್ಯಶಾಸ್ತ್ರದ ಬಗ್ಗೆ ವಿವರಗಳನ್ನು ಕೊಡುವಾಗ ಕೋಟೆ ಮುಂತಾದವುಗಳ ಬಗ್ಗೆಯೂ ವಿಶದವಾಗಿ ಹೇಳಲಾಗಿದೆ.

[19] ಹಂಪೆಯ ಹಜಾರರಾಮನ ದೇವಾಲಯದ ಹೊರಗಡೆಯ ಗೋಡೆಯ ಮೇಲೆ ಪದ್ಮಾಸನಸ್ಥನಾಗಿರುವ ಬುದ್ಧನ ಶಿಲ್ಪವಿದೆ. ಆ ಮೂರ್ತಿಯ ಹಣೆಯ ಮೇಲೆ ವೀರ ರೇಖೆಗಳನ್ನು ಕಾಣಬಹುದು.

[20] ಗೃಹಕೃತ್ಯಗಳಿಗಾಗಿ ಉಪಯೋಗ ಮಾಡಿಕೊಳ್ಳಲಾಗುತ್ತಿದ್ದ ಪ್ರಾಣಿಗಳನ್ನು ವಿವಿಧ ಬಣ್ಣಗಳಿಂದ ಚಿತ್ರಿಸುವುದು ಸಾಮಾನ್ಯವಾಗಿತ್ತೆಂದು ಡಾಮಿಂಗೊಪೇಸೆ ಎಂಬ ಪರದೇಶೀ ಪ್ರವಾಸಿಗನು ಹೇಳಿರುತ್ತಾನೆ. ಹಾಗೆ ಚಿತ್ರಸುತ್ತಿದ್ದುದು ವಿಶೇಷ ಸಂದರ್ಭಗಳಲ್ಲಿ ಮಾತ್ರ. ಹಬ್ಬ ಹರಿದಿನಗಳಲ್ಲಿ, ಯುದ್ಧ ಅಥವಾ ಬೇಟೆಗೆ ಹೊರಟ ಸಮಯಗಳಲ್ಲಿ ಹಾಗೆ ಮಾಡಲಾಗುತ್ತಿತ್ತು. ಮತ್ತು Sewell : Forgotten exmpire, pp. 277 ನೋಡುವುದು.

[21] ಪ್ರಸ್ತುತ ಲೇಖನದ ವಿಷಯದಿಂದ ಬೇರೆಯಾದುದರಿಮದ ಈ ವಿಷಯವನ್ನು ವಿಶದೀಕರಿಸಲಾಗಿಲ್ಲ.

[22] ಆ ಕಾಲದಲ್ಲಿ ಚಿತ್ರಗಳ ಕೆಳಗೆ ಪ್ರಾಂತೀಯ ಭಾಷೆಯಲ್ಲಿ ವಿಷಯವನ್ನು ಅಥವಾ ಚಿತ್ರಿಸಲ್ಪಟ್ಟ ಆಕೃತಿಗಳ ಹೆಸರುಗಳನ್ನು ಬರೆಯುವುದೂ ಇತ್ತು ಹಾಗೆ ಹಂಪೆಯಲ್ಲೇನಾದರೂ ಬರೆದಿದ್ದಲ್ಲಿ, ಅವು ರಾಸಾಯನಿಕ ಕ್ರಿಯೆಯ ನಂತರವೇ ಬೆಳಕಿಗೆ ಬರಬೇಕು. ಪ್ರಸುತ್ತದಲ್ಲಿ ಹಂಪೆಯ ಚಿತ್ರಗಳು ಕೇಂದ್ರ ಸರಕಾರದ ಅಥವಾ ರಾಜ್ಯ ಸರಕರದ ಪುರಾತತ್ವ ಶಾಲೆಯ ಆಡಳಿತಕ್ಕೊಳಪಡದೆ ಇರುವುದರಿಂದ, ಏನೂ ಮಾಡುವಂತೆಳ ಇಲ್ಲ.

[23] S. Paramasivan : 'Paintings at Tanjore' (Vijayanagara Sexcentinary Volume)

[24] ಮೇಲಿನಂತೆ

## ೫. ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಭಿತ್ತಿ ಚಿತ್ರಗಳು

ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯಲ್ಲಿರುವ ಚಿತ್ರಗಳು ಆ ಕಾಲದ ಅತ್ಯಂತ ಪ್ರಮುಖ ಉದಾಹರಣೆಗಳಾಗಿವೆ. ವಿಜಯನಗರ ಕಾಲದಲ್ಲಿ ಅಂದರೆ ಕ್ರಿ.ಶ. ೧೬ನೇ ಶತಮಾನದ ಮೊದಲೆರಡು ದಶಕಗಳಲ್ಲಿ

ರಚನೆಯಾಗಿರಬಹುದಾದ ಈ ಚಿತ್ರಗಳು ಹಲವಾರು ಅಂಶಗಳಿಂದ ಅತ್ಯಂತ ಮುಖ್ಯವಾಗಿವೆ. ಚಿತ್ರಕಲಾ ಇತಿಹಾಸದ ದೃಷ್ಟಿಯಿಂದ ಈ ಚಿತ್ರಗಳು ವಿಜಯನಗರದ ಕಾಲದಲ್ಲಿ ರಚಿತವಾದ ಅಪೂರ್ವ ಐತಿಹಾಸಿಕ ದಾಖಲೆಗಳಾಗಿವೆ. ಪ್ರಸ್ತುತ ಪ್ರಬಂಧದಲ್ಲಿ ಇವುಗಳಿಗೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಅಭ್ಯಾಸ ಮಾಡಲಾಗಿದೆ.

ಈ ಚಿತ್ರಗಳನ್ನು ಕುರಿತಂತೆ ಹಲವಾರು ವಿದ್ವಾಂಸರು ಈಗಾಗಲೇ ಅಭ್ಯಾಸ ಮಾಡಿದ್ದಾರೆ ಮತ್ತು ಇವುಗಳ ರಚನಾ ಕಾಲದ ಬಗ್ಗೆ ವಿಭಿನ್ನವಾದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಇವುಗಳಲ್ಲಿ ರಚಿತವಾಗಿರುವ ಹಲವಾರು ವಿಷಯ ವಸ್ತುಗಳನ್ನು ವಿಭಿನ್ನವಾಗಿ ತಮ್ಮದೇ ಆದ ದೃಷ್ಟಿಕೋನದಲ್ಲಿ ಗುರುತಿಸಿದ್ದಾರೆ. ಚಿತ್ರಕಲಾ ಇತಿಹಾಸದ ದೃಷ್ಟಿಯಿಮದ ನಾವು ಈ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಚಿತ್ರಗಳ ಬಗ್ಗೆ ಇದುವರೆಗೂ ಆಗಿರುವ ಅಧ್ಯಯನಗಳು ಅಪೂರ್ಣವೆನಿಸುತ್ತವೆ. ಮಹಾರಂಗಮಂಟಪದಲ್ಲಿನ ಚಿತ್ರಗಳು ಬೆಳವಣಿಗೆ ಹೊಂದಿರಬಹುದಾದ ರೀತಿ, ಚಿತ್ರಗಳ ಶೈಲಿ, ವರ್ಣವಿನ್ಯಾಸ, ಕಥಾ ಸಂಯೋಜನೆ, ಆಕೃತಿಗಳ ಸಂಯೋಜನೆ ಹಾಗೂ ಇಡಿಯಾದ ಚಿತ್ರಸ್ಥಳದ ಬಳಕೆ ಮತ್ತು ಇವುಗಳ ರಚನಾ ಕಾಲವನ್ನು ಒಂದೆಡೆ ಗಮನಿಸಿರುವುದು, ಈ ಚಿತ್ರಗಳ ಕಾಲದಲ್ಲಿದ್ದ ಸಮಕಾಲೀನ ಚಿತ್ರಶೈಲಿಗಳೊಂದಿಗೆ ಇವುಗಳಿಗಿದ್ದಿರಬಹುದಾದ ಸಂಬಂಧ – ಪ್ರಭಾವ ಅಥವಾ ಕೊಡು ಕೊಳ್ಳುವಿಕೆಯ ಕುರಿತು ವಿಮರ್ಶಾತ್ಮಕವಾಗಿ ನೋಡುವ ಪ್ರಯತ್ನವು ಅವಶ್ಯಕವಾಗಿ ಆಗಬೇಕಾಗಿದೆ.[1] ಇದರಿಂದ ಪ್ರಸ್ತುತ ಚಿತ್ರಗಳ ಬಗ್ಗೆ ಒಂದು ಪೂರ್ಣ ಚಿತ್ರ ದೊರೆದಂತಾಗುತ್ತದೆ.

**ಹಿನ್ನೆಲೆ**

ಮಹಾರಂಗಮಂಟಪದ ಚಿತ್ರಗಳ ಕಾಲದ ಹಿನ್ನೆಲೆಯನ್ನು ಗಮನಿಸಿದಾಗ, ಪ್ರಾಚೀನ ಭಾರತದ ಭಿತ್ತಿ ಚಿತ್ರ ಪರಂಪರೆಯ ಮುಂದುವರೆದ ಶೈಲಿ ಅಥವಾ ಚಿತ್ರ ಪರಂಪರೆಯದು ಎನ್ನಬಹುದು. ಅಜಂತಾ (ಮಹಾರಾಷ್ಟ್ರ), ಬಾಗ್ (ಮಧ್ಯಪ್ರದೇಶ)ಗಳಲ್ಲಿರುವ ಬೌದ್ಧಾಲಯಗಳಲ್ಲಿನ ಭಿತ್ತಿಚಿತ್ರಗಳ ರಚನೆಯ ನಂತರ ಈ ಪರಂಪರೆ ಮುಂದುವರೆದು ಕೊಂಡು ಒಂದದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಬಾದಾಮಿಯ ವೈಷ್ಣವ ಲಯಣದಲ್ಲಿ ಮತ್ತು ಐಹೊಳೆಯ ರಾವಣಪಹಾಡಿ ಲಯಣಗಳಲ್ಲಿ ಇಂದಿಗೂ ಒಳಮಾಳಿಗೆಯಲ್ಲಿ ಹಲವಾರು ಭಿತ್ತಿಚಿತ್ರಗಳ ಅವಶೇಷಗಳು ಕಂಡುಬರುತ್ತವೆ. ಇದರಿಂದ ನಂತರದ ಕಾಲದಲ್ಲಿ ಅಂದರೆ ರಾಷ್ಟ್ರಕೂಟದ ಕಾಲದಲ್ಲಿ ಎಲ್ಲೋರ ಮತ್ತು ಧಾರಾಶಿವ (ಮಹಾರಾಷ್ಟ) ಲಯಣಗಳಲ್ಲಿ, ಇತ್ತ ದಕ್ಷಿಣದಲ್ಲಿ ಪಲ್ಲವರ ಕಾಲದಲ್ಲಿನ ಕಾಂಚಿಪುರಂ ಮತ್ತು ಚೋಳರ ಕಾಲದ ಸಿತ್ತನವಾಸಲ್ ಹಾಗೂ ತಂಜಾವೂರು ಬೃಹದೀಶ್ವರ ದೇವಾಲಯಗಳಲ್ಲಿ ಭಿತ್ತಿಚಿತ್ರಗಳ ರಚನೆಯಾದ ಬಗ್ಗೆ ದಾಖಲೆಗಳಿವೆ ಮತ್ತು ಅವಶೇಷಗಳಿವೆ.[2] ಹಂಪೆಯಲ್ಲಿ ಚಿತ್ರಗಳ ರಚನೆಯ ಪ್ರಾರಂಭವಾಗುವುದಕ್ಕೆ ಮೊದಲೇ ಈ ಮೇಲೆ ಹೆಸರಿಸಿದ ಸ್ಥಳಗಳಲ್ಲಿ ಚಿತ್ರಕಲೆ ಆಯಾ ಕಾಲದ ಸಂವೇದನೆಗಳಿಗೆ ಅನುಗುಣವಾಗಿ ಪ್ರವರ್ಧಮಾನಕ್ಕೆ ಬಂದಿತ್ತು ಮತ್ತು ಬೆಳವಣಿಗೆ ಹೊಂದಿತ್ತು. ಆದರೆ ಕರ್ನಾಟಕದಲ್ಲಿ ವಿಶೇಷವಾಗಿ ಆ ಕಾಲದ ಚಿತ್ರಕಲೆಯ ಉದಾಹರಣೆಗಳನ್ನು ಕುರಿತು ಹುಡುಕಾಟ ಮಡಿದಾಗ ನಮಗೆ ಅಷ್ಟು ತೃಪ್ತಿಕರವಾದ ಪುರಾವೆಗಳು ದೊರೆಯುವುದಿಲ್ಲ. ಬಹುಶಃ ಇದರಿಂದಲೇ ನಮ್ಮ ಹಲವು ವಿದ್ವಾಂಸರಿಗೆ ಹಂಪೆಯ ಚಿತ್ರಗಳ ಕಾಲದ ಬಗ್ಗೆ ಸಂಶಯಗಳು ಇರುವುದು.

ವಿಜಯನಗರದ ರಾಜ್ಯ ಸ್ಥಾಪನೆಯಾದ ಸಮಯದಲ್ಲಿ ಮತ್ತು ಆ ಕಾಲಕ್ಕಿಂತಲೂ ಮೊದಲು, ಅಂದರೆ ಬಾದಾಮಿ ಚಾಲುಕ್ಯ ನಂತರದ ಕಾಲದಲ್ಲಿ, ಹಾಗೂ ಇಂದಿನ ಕರ್ನಾಟಕ್ಕೆ ಸೀಮಿತವಾದಂತೆ ಹೆಚ್ಚಿನ ಪ್ರೋತ್ಸಾಹ ವಾಸ್ತು ಮತ್ತು ಶಿಲ್ಪಕಲೆಗೆ ದೊರೆತಿತ್ತು ಎಂಬ ಅಂಶವನ್ನು ನಾವು ವಿಶೇಷವಾಗಿ ಗಮನಿಸಬೇಕು. ಈ ಕಾಲಗಳಲ್ಲಿ ಚಿತ್ರಕಲೆಯ ಪ್ರಚಲಿತತೆಯ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಈ ಕಾಲದಲ್ಲಿ ಚಿತ್ರಕಲೆಯ ಅಂಗವಾಗಿ ಪ್ರಾರಂಭವಾದ 'ಜೈನ ಮಾನಸ ಪ್ರತಿಗಳಲ್ಲಿ' ಕಂಡುಬರುವ ತೀರ್ಥಂಕರರ ಮತ್ತು ಜೈನ ಯಕ್ಷ ಯಕ್ಷಣಿಯರ ಹಾಗು ಅಚಾರ್ಯರ ರೇಖಾಚಿತ್ರಗಳನ್ನು ಇಲ್ಲಿ ಉದಾಹರಿಸ ಬಹುದು.[3] ಆದರೆ ಭಿತ್ತಿಚಿತ್ರಗಳ ರಚನೆಯ ಬಗ್ಗೆ ಯಾವುದೇ ದಾಖಲೆಗಳು ಈ ಕಾಲದಲ್ಲಿ ದೊರೆಯುವುದಿಲ್ಲ. ಚಿತ್ರಕಲೆಗೆ ಪ್ರಾಯಶಃ ಹೆಚ್ಚಿನ ಪ್ರೋತ್ಸಾಹ ಮತ್ತೊಂದು ಬಾರಿ ದೊರೆತದ್ದು ವಿಜಯನಗರದ ಕಾಲದಲ್ಲಿಯೇ ಎಂದು ಹೇಳಬೇಕು. ಈ ಕಾಲದಲ್ಲಿಯೇ ಚಿತ್ರಕಲೆಗೆ ಅತ್ಯಂತ ಪ್ರಾಮುಖ್ಯತೆ ದೊರೆತು, ದೇವಾಲಯಗಳ ಗೋಡೆಗಳ ಮೇಲೆ ಒಳಮಾಳಿಗೆಯ ಮೇಲೆ ಹಾಗೂ ಅಂದಿನ ಅರಮನೆಗಳಲ್ಲಿ ಚಿತ್ರಗಳ ರಚನೆಯಾದ ಬಗ್ಗೆ ಅವುಗಳ ವರ್ಣಸಂಯೋಜನೆಯ ಬಗ್ಗೆ

ತಿಳಿದುಬರುತ್ತದೆ. ಆದರಲ್ಲೂ ವಿಶೇಷವಾಗಿ ಹಂಪೆಗೆ ಆ ಕಾಲದಲ್ಲಿ ಬಂದಿದ್ದ ಹಲವು ವಿದೇಶಿ ಪ್ರವಾಸಿಗರು ದಾಖಲಿಸಿರುವಂತೆ ಅರಮನೆಗಳಲ್ಲಿ, ಮುಖ್ಯ ಬೀದಿಗಳಲ್ಲಿನ ಮನೆಗಳಲ್ಲಿ ಹಾಗೂ ರತಿಗೃಹಗಳಲ್ಲಿ, ಹಲವಾರು ಚಿತ್ರಗಳಿದ್ದ ಬಗ್ಗೆ ವಿವರಣೆಗಳು ದೊರೆಯುತ್ತವೆ.[4] ದುರದೃಷ್ಟವಶಾತ್, ಇಂದು ಈ ಯಾವ ಚಿತ್ರಗಳು ಅಥವಾ ಅವಶೇಷಗಳು ಉಳಿದುಕೊಂಡು ಬಂದಿಲ್ಲ. ಆದರೆ ಇಂದು ನಮ್ಮೆದುರು ಆ ಕಾಲದ ಉದಾಹರಣೆಗಳಾಗಿ ಹಂಪೆಯಲ್ಲಿ ಉಳಿದಿರುವ ಚಿತ್ರಗಳೆಂದರೆ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಮಾಳಿಗೆಯ್ಲಲಿ ಉಳಿದುಕೊಂಡು ಬಂದಿರುವ ಭಿತ್ತಿಚಿತ್ರಗಳು ಮಾತ್ರ ಮತ್ತು ಪಕ್ಕದ ಆನೆಗೊಂದಿಯ ಉಚ್ಛಪ್ಪಯ್ಯ ಮಠದ ಚಿತ್ರಗಳ ಅವಶೇಷಗಳು. ಈಗ ನೇರವಾಗಿ ಮಹಾರಂಗ ಮಂಟಪದಲ್ಲಿನ ಚಿತ್ರಗಳನ್ನು ಕುರಿತು ತಿಳಿಯುವುದು ಅವಶ್ಯಕವಾಗಿದೆ.

**ಚಿತ್ರಗಳ ವಿವರ**

ಮಹಾರಂಗಮಂಟಪದ ಒಳಮಾಳಿಗೆಯ ಆಯಾತಾಕಾರವಾಗಿದ್ದು ಸಂಪೂರ್ಣವಾಗಿ ಚಿತ್ರರಚನಾ ಅವಕಾಶವನ್ನು ಯಾವ ರೀತಿ ವಿಭಾಗಿಸಬೆಕು, ಎಲ್ಲೆಲ್ಲಿ ಯಾವ ಚಿತ್ರಗಳು ಬರಬೇಕೆಂಬುದು, ಇಷ್ಟು ವಿಶಾಲವಾದ ಚಿತ್ರಗಳ ಸಂಯೋಜನೆ, ವರ್ಣವಿನ್ಯಾಸ, ಈ ಎಲ್ಲಾ ಅಂಶಗಳು ಪೂರ್ವ ನಿಯೋಜಿತವಾಗಿವೆ ಎಂದು ಹೆಳಬಹುದು. ಇದರಿಂದ ನಿರ್ದಿಷ್ಟ ಆಕೃತಿಯಲ್ಲಿ ಮತ್ತು ಸ್ಥಳದಲ್ಲಿ ಉದ್ದೇಶಿತ ವಿಷಯದ ನಿರೂಪಣೆ ಕಂಡುಬರುತ್ತದೆ. ಪ್ರಸ್ತುತ ಚಿತ್ರಗಳನ್ನು ನಾವು ಕೊಂಚ ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಚಿತ್ರ ರಚನೆಯ ತಾಂತ್ರಿಕತೆ, ರಚನೆಯನ್ನು ಪ್ರಾರಂಭಿಸಿರುವ ವಿಧದಲ್ಲಿ ಕುರಿತು ಚಿಂತಿಸಿದರೆ ಬಹುಶಃ ಈ ಚಿತ್ರಗಳ ರಚನೆಯ ಬಗ್ಗೆ ಒಂದು ಉತ್ತಮ ಚಿತ್ರ ದೊರೆಯಲು ಸಾಧ್ಯವಾಗುತ್ತದೆ. ಇಲ್ಲಿ ಕಲಾವಿದ ನೆರವಾಗಿ ಚಿತ್ರರಚನೆ ಪ್ರಾರಂಭಿಸಿಲ್ಲ. ಸಂಯೋಜನೆಗೆ ಚಿತ್ರವಿನ್ಯಾಸದ ಚೌಕಟ್ಟನ್ನು ಹಾಕಿಕೊಂಡು ಅದರಲ್ಲಿ ಮತ್ತು ವಿಷಯ ವ್ಯಾಪ್ತಿಗೆ ಸರಿಹೊಮದುವ ರೀತಿಯಲ್ಲಿ ಆಕೃತಿಗಳನ್ನು ದುಡಿಸಿಕೊಂಡಿದ್ದಾನೆ. ಕಲಾವಿದ ಈ ಚಿತ್ರಗಳನ್ನು ಚಿತ್ರಿಸಿರುವ ರೀತಿಯನ್ನು ಗಮನಿಸಿದರೆ, ಪ್ರಾಯಶಃ ಎಂಥ ಸಾಮಾನ್ಯನಿಗಾದರೂ ಸಂಪೂರ್ಣವಾಗಿ ಚಿತ್ರದ ಮೂಲ, ರೇಖಾಚಿತ್ರ ರಚನೆಯಾದ ಮೇಲೆಯೇ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಚಿತ್ರಗಳನ್ನು ವರ್ಣಸಂಯೋಜನೆಯೊಡನೆ ಪೂರ್ತಿಗೊಳಿಸಿರಬಹುದೆಂದು ತಿಳಿಯುತ್ತದೆ.

ಚಿತ್ರಗಳ ಸಾಮಾನ್ಯವಾದ ಒಂದು ವಿವರವನ್ನು ಈ ಕೆಳಗೆ ನಾವು ಈಗ ನೋಡಬಹುದುದಾಗಿದೆ. ಚಿತ್ರಗಳಿರುವ ಒಳಮಾಳಿಗೆಯನ್ನು ಮೂರು ಮುಖ್ಯಭಾಗಗಳನ್ನಾಗಿ ವಿಂಗಡಿಸಿದೆ. ಇವುಗಳಲ್ಲಿ ಒಟ್ಟು ಎಂಟು ಉಪಭಾಗಗಳಿವೆ. ಪ್ರತಿಯೊಂದು ಭಾಗದಲ್ಲಿ ಚೌಕ, ಆಯತ ಹೀಗೆ ವಿಭಿನ್ನ ಅವಕಾಶಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ದೇವಾಲಯದ ನವರಂಗದ ಕಡೆಗೆ ಹೊಂದಿಕೊಂಡಂತೆ ಇರುವ ಅವಕಾಶದಲ್ಲಿ ಕ್ರಮವಾಗಿ ವಿಷ್ಣು, ಲಕ್ಷ್ಮೀಯರು ಬಲಗಡೆ ಗರುಡ ಮತ್ತು ಎಡಗಡೆ ಹನುಮಂತರಿಂದ ಜೊತೆಗೂಡಿ ಚಿತ್ರಿಸಲ್ಪಟ್ಟಿದ್ದಾರೆ. ಮಧ್ಯದ ಚೌಕದಲ್ಲಿ ಶಿವಪಾರ್ವತಿಯರನ್ನು ನಾರದ ಮತ್ತು ತುಂಬುರರನ್ನು ಚಿತ್ರಿಸಿದ್ದಾನೆ. ಕೊನೆಯದಾಗಿ, ಬ್ರಹ್ಮ ಮತ್ತು ಅವನ ಎಡತೊಡೆಯ ಮೇಲೆ ಕುಳಿತ ಸರಸ್ವತಿಯನ್ನು ಚಿತ್ರಿಸಲಾಗಿದೆ. ಇವರ ಎರಡೂ ಬದಿಯಲ್ಲಿ ಈರ್ವರು ದ್ವಾರಪಾಲಕರನ್ನು ತೋರಿಸಿದೆ. ಈ ಮೂರು ಚಿತ್ರಗಳಿಗೆ ಮತ್ತು ಸಾಮಾನ್ಯವಾಗಿ ಕೊನೆಯ ೧-೨ ಚಿತ್ರಗಳನ್ನು ಬಿಟ್ಟು ಈ ಭಿತ್ತಿಯ ಉಳಿದ ಬಹುತೇಕ ಎಲ್ಲ ಚಿತ್ರಗಳಿಗೆ ವಾಸ್ತುಕೃತಿಯ ಅಲಂಕಾರವಿದೆ. ಚಿತ್ರದ ಮುಖ್ಯವಸ್ತವನ್ನು ಕಮಾನಿನಲ್ಲಿ ಚಿತ್ರಿಸುವುದು, ಚಿತ್ರದ ಸಂಯೋಜನಯ ಮೇಲೆ ಹಣೆಪಟ್ಟಿ ಯಂತಿರುವ ಮತ್ತೊಂದು ಚಿತ್ರ ಅವಕಾಶದಲ್ಲಿ ಗೋಪುರಗಳನ್ನು ಕಲಾವಿದ ಚಿತ್ರಿಸಿದ್ದಾನೆ. ಚಿತ್ರಗಳ ಮೇಲೆ ಇರುವ ಗೋಪುರಗಳು ಸಾಂಕೇತಿಕವಾಗಿ ಆಯಾ ಸಂಯೋಜನೆಯಲ್ಲಿ ಇರುವ ದೇವಾನುದೇವತೆಗಳಿಗೆ ದೇವಾಲಯಗಳಂತೆ ಕಾಣುತ್ತವೆ.

ನಂತರದ ಸಾಲಿನಲ್ಲಿ ಪಾರ್ವತಿ ಕಲ್ಯಾಣದ ಚಿತ್ರವೇ ಚಿತ್ರಣದ ಪ್ರಮುಖ ಕಥಾವಸ್ತು. ಚಿತ್ರದ ಮಧ್ಯದಲ್ಲಿ ಶಿವನು ಪಾರ್ವತಿಯ ಕೈಯನ್ನು ಹಿಡಿದು ನಿಂತಿದ್ದಾನೆ. ಈ ಚಿತ್ರಪಟ್ಟಿಕೆಯ ಪ್ರಾರಂಭದಲ್ಲಿ ಶಿವಪಾರ್ವತಿಯ ಆಕೃತಿಗಳ ಜೊತೆಗೆ, ಭೈರವ, ನಾರದ, ತುಂಬುರ, ವಾಣಿ, ಬ್ರಹ್ಮ, ಹಿಮವತ್ ಮತ್ತು ಇನ್ನಿತರರು ಇದ್ದಾರೆ. ಇಲಲಿ ಬ್ರಹ್ಮನೆ ಈ ದಿವ್ಯ ಮದುವೆಯ ಪುರೋಹಿತ, ಹಿಮವತ್ತು ಕನ್ಯಾದಾನ ಮಾಡುತ್ತಿದ್ದಾನೆ. ಈ ಚಿತ್ರಸಂಯೋಜನೆಯ ಕೆಳಗಡೆ ಚಿಕ್ಕ ಚಿತ್ರಪಟ್ಟಿಕೆ ಇದೆ. ಇದರಲ್ಲಿ ಗಣ ಮತ್ತು ಮಧ್ಯದಲ್ಲಿ ಶಿವನ ವಾಹನ ನಂದಿಯನ್ನು ಚಿತ್ರಿಸಿದೆ. ಇಲ್ಲೂ

ಕೂಡ ಕಲಾವಿದನ ಸಮಯಪ್ರಜ್ಞೆಯನ್ನು ನಾವು ಗುರುತಿಸಬಹುದು. ನಂದಿಯು ಮುಖವನ್ನು ಮೇಲಕ್ಕೆತ್ತಿ ಮದುವೆಯನ್ನು ವೀಕ್ಷಿಸುತ್ತಿರುವಂತೆ ಕುಳಿತಿದ್ದಾನೆ.[5] ಈ ವಿವಾಹ ದೃಶ್ಯವನ್ನು ಸ್ಥಳೀಯ ದೇವತೆ ವಿರೂಪಾಕ್ಷ ಮತ್ತು ಪಂಪಾಂಬಿಕೆಯರ ವಿವಾಹಕ್ಕೆ ಹೋಲಿಸಲಾಗಿದೆ. ಇಲ್ಲೂ ಕೂಡ ಚಿತ್ರ ಸಂಯೋಜನೆಯ ಮೇಲ್ಭಾಗದಲ್ಲಿ ಗೋಪುರಗಳ ಸಾಲು ಮತ್ತು ತಾಳೆಮರಗಳನ್ನು ತೋರಿಸುವ ಚಿತ್ರಗಳಿವೆ. ಶಿವಪಾರ್ವತಿಯರ ಕಲ್ಯಾಣದ ದೃಶ್ಯದ ಕೆಳಗಡೆಯ ಸ್ಥರದಲ್ಲಿ ಅಷ್ಟದಿಕ್ಪಾಲಕರನ್ನು ಚಿತ್ರಿಸಲಾಗಿದೆ. ಇವರುಗಳಲ್ಲಿ ಇಂದ್ರ, ವರುಣ, ಅಗ್ನಿ, ವಾಯು, ಈಶಾನ, ಯಮ, ನೈರುತಿ, ಕುಬೇರ ಈ ದಿಕ್ಪಾಲಕರು ತಮ್ಮ ವಾಹನಗಳಿಂದ ಇರುವುದು ಕೂಡಾ ಕಂಡುಬರುತ್ತದೆ.

ಅಷ್ಟದಿಕ್ಪಾಲಕರ ನಂತರದ ಎರಡು ಮುಖ್ಯ ಸಂಯೋಜನೆಗಳೆಂದರೆ ಮನ್ಮಥವಿಜಯನ ಅಥವಾ ಶಿವನ ತಪಸ್ಸನ್ನು ಮನ್ಮಥನು ಮುರಿಯುವುದು ಮತ್ತು ತ್ರಿಪುರ ಸಂಹಾರಿ ಶಿವ. ಮನ್ಮಥ ವಿಜಯ ಚಿತ್ರದ ಸಂಯೋಜನೆಯಲ್ಲಿ ಕಲಾವಿದ ಅತ್ಯಂತ ಕ್ರಿಯಾತ್ಮಕವಾಗಿ ದೃಶ್ಯ ಸಂಯೋಜನೆಯನ್ನು ದುಡಿಸಿಕೊಂಡಿದ್ದಾನೆ.

ಇಲ್ಲಿ ಚಿತ್ರದ ಒಂದು ಭಾಗದಲ್ಲಿ ಜಟಾಧಾರಿ ಶಿವ ತಪಸ್ಸನ್ನು ಮಾಡುತ್ತಾ ಕುಳಿತಿದ್ದಾನೆ. ಇತ್ತ ಕಾಮರತಿಯರು ಗಿಳಿಯೆ ವಾಹನವಾಗಿರುವ ರಥವನ್ನು ಏರಿ, ಕಬ್ಬಿನ ಜಲ್ಲೆಯಿಂದ ಮಾಡಿದ ಬಿಲ್ಲಿನಿಂದ ಶಿವನತ್ತ ಸುಮಬಾಣ ಬಿಡುತ್ತಿದ್ದಾನೆ. ಕಾಮನ ನಿಂತ ಭಂಗಿಯಲ್ಲಿ ಮುಮ್ಮುಖವಾದ ಚಾಲನೆ ಇದೆ ಮತತು ನೈಜತೆ ಇದೆ.[6] ಕಾಮನ ಆಕೃತಿಯಲ್ಲೂ ಕೂಡ ಪ್ರೌಢತೆ ಕಣುತ್ತದೆ. ಶಿವನು ಕುಳಿತು ಭಂಗಿ ಎದುರಿನಿಮದ ನೋಡಿದಾಗ ಇರುವಂತೆ ಇದೆ. ಇಲ್ಲಿ ಶಿವನನ್ನು ಧ್ಯಾನಮಗ್ನನಾಗಿ ಇರುವಂತೆ ತೋರಿಸದೇ ಅಗಲವಾದ ಕಣ್ಣುಗಳನ್ನು ಬಿಟ್ಟು ದಿಟ್ಟಿಸಿ ನೋಡುತ್ತಿರುವಂತೆ ಕುಳಿತಿದ್ದಾನೆ.[7] ಚಿತ್ರದ, ತೀರ ಕೆಳಸ್ತರದಲ್ಲಿ ಜಲಾವೃತವಾದ ಭಾಗವನ್ನು ವಿವಿಧ ಆಕಾರದ ಮೀನುಗಳನ್ನು ಚಿತ್ರಿಸಿ ಚಿತ್ರದಲ್ಲಿ ಮತ್ತಷ್ಟು ನೈಜತೆಯನ್ನು ಕಲಾವಿದ ತುಂಬಿದ್ದಾನೆ.[8]

ಶಿವನು ತ್ರಿಪುರಾಸುರನನ್ನು ಕೊಲ್ಲುವ ದೃಶ್ಯದಲ್ಲಿಯೂ ಕಲಾವಿದ ಮೇಲಿನ ಚಿತ್ರದಂತೆಯೇ ಜಾಣ್ಮೆ ಮೆರೆದಿದ್ದಾನೆ. ತ್ರಿಪುರಾಸುರರನ್ನು ಮೂರು ಬೇರೆ ಬೇರೆ ವೃತ್ತಗಳಲ್ಲಿ ಚಿತ್ರಿಸಿದ್ದಾನೆ.

ಇನ್ನು ಶಿವನನ್ನು ಅವನ ರಥ ಹಾಗೂ ಬಿಲ್ಲುಬಾಣಗಳನ್ನು, ಕಥೆಯಲ್ಲಿಬರುವ ನಿರೂಪಣೆಗೆ ತಕ್ಕಂತೆ ನೈಜವಾಗಿ ಚಿತ್ರಿಸಿದ್ದಾನೆ. ಇಲ್ಲಿ ಭೂಮಿಯೇ ರಥ, ಬ್ರಹ್ಮನೇ ಸಾರಥಿ, ಸುರ್ಯ ಚಂದ್ರರೇ ರಥದ ಗಾಲಿಗಳು, ಇಂದ್ರ, ವರುಣ ಯಮ, ಕುಬೇರರೇ ರಥಾಶ್ವಗಳು. ಆದರೆ ಇಲ್ಲಿ ಕಲಾವಿದ ಐದು ಕುದುರೆಗಳನ್ನು ಮಾತ್ರ ಚಿತ್ರಿಸಿದ್ದಾನೆ. ಇವನ ಕೈಯಲ್ಲಿರುವ ಬಿಲ್ಲು ಮಂದಾರ ಪವತ, ವಾಸುಕೀಯೇ ಬಿಲ್ಲಿನ ದಾರ, ಅಗ್ನಿ, ವಿಷ್ಣು, ವಾಯು ಇವರು ಬಾಣಗಳಾಗಿದ್ದಾರೆ. ಇದರಿಂದಲೇ ಶಿವನು ತ್ರಿಪುರಾಸುರರನ್ನು ಧ್ವಂಸ ಮಾಡುವ ಕೆಲಸ ಅತ್ಯಂತ ಸುಗಮವಾಗುತ್ತದೆ. ಈ ಸಂಯೋಜನೆಯಲ್ಲಿನ ಎಲ್ಲ ಆಕೃತಿಗಳ ಮಧ್ಯೆ ಆಂತರಿಕವಾದ ಸಂಬಂಧವಿದೆ. ಪ್ರತಿಯೊಮದು ಆಕೃತಿಗಳು ಚಾಲನೆಯಿಂದ ಕೂಡಿವೆ. ಶಿವನ ಆಕೃತಿಯ ಮತ್ತು ಮನ್ಮಥನ ಆಕೃತಿಗಳಲ್ಲಿ ನಿಂತಿರುವ ಭಂಗಿಯನ್ನು ಗಮನಿಸಿದರೆ, ಎರಡೂ ಒಂದೇ ತೆರನಾಗಿ ಇರುವುದನ್ನು ಗಮನಿಸಬಹುದು. ಅಲ್ಲದೆ, ಆಕೃತಿಗಳಲ್ಲಿ ಮುಂದೆ ಬಾಗಿದಂತಿರುವ ಚಾಲನೆ ಕೂಡಾ ಒಂದೇ ತೆರನಾಗಿ ಇದೆ. ಈ ಎಲ್ಲ ಆಕೃತಿಗಳು ಒಂದೇ ಕಲಾವಿದನಿಂದ ರಚನೆ ಆಗಿರಬಹುದೆಂದು ತೋರುತ್ತದೆ.

ಮನ್ಮಥ ವಿಜಯ ಮತ್ತು ತ್ರಿಪುರ ಸಂಹಾರದ ಚಿತ್ರಸಂಯೋಜನೆಗಳ ಕೆಳಗಿನ ಪಟ್ಟಿಕೆಯಲ್ಲಿ ದಶಾವತಾರದ ಆಕೃತಿಗಳಿವೆ. ಈ ಆಕೃತಿಗಳ ಕೊನೆಯ ಭಾಗದಲ್ಲಿ ಕಾಮರತಿಯರನ್ನು ಬೇರೆಬೇರೆಯಾಗಿ ಒಂದೊಂದು ಚೌಕದಲ್ಲಿ ಚಿತ್ರಿಸಲಾಗಿದೆ.

ಇಲ್ಲಿ ಕಾಮ ಗಜಾರೂಢನಾಗಿ ಮತ್ತು ರತಿ ಅಶ್ವಾರೂಢಳಾಗಿದ್ದಳೆ. ವಿಶೇಷವೆಂದರೆ ಈ ಎರಡೂ ವಾಹನಗಳು ಮಾನವಾಕೃತಿಗಳಿಂದ ಚಿತ್ರಿತವಾಗಿವೆ. ಅಂದರೆ, ಇಲ್ಲಿ ಮಾನವಾ ಕೃತಿಗಳೇ ಗಜದ ಮತ್ತು ಅಶ್ವದ ರೂಪದಲ್ಲಿ ಚಿತ್ರಿತವಾಗಿವೆ. ದಶಾವತಾರದ ಚಿತ್ರಗಳಲ್ಲಿ

ವಿಷ್ಣುವಿನ ಹತ್ತು ಅವತಾರದ ಚಿತ್ರಗಳು ವೈವಿಧ್ಯಮಯವಾಗಿ ಮತ್ತು ನೈಜವಾಗಿ ಮೂಡಿಬಂದಿವೆ. ಇಲ್ಲೂ ಕೂಡಾ ಪ್ರತಿಯೊಮದು ಆಕೃತಿಯ ಚೌಕವಾದ ದೃಶ್ಯಾವಕಾಶದಲ್ಲಿ ಚಿತ್ರಿತವಾಗಿದ್ದು ಮೇಲ್ಭಾಗದಲ್ಲಿ ಕಮಾನಿನ ಚಿತ್ರಣವೂ ಇದೆ.

ದಶಾವತಾರದ ಚಿತ್ರಗಳ ನಂತರದಲ್ಲಿ ಬರುವುದು ಆಯತಾಕೃತಿಗಳಲ್ಲಿ ಚಿತ್ರಿತವಾಗಿರುವ ರಾಮಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳು ಇವು ಒಟ್ಟು ಮೂರು ಚಿತ್ರಗಳಿದ್ದು, ಇವುಗಳಲ್ಲಿ ಎರಡು ಚಿತ್ರಗಳು ಸೀತಾಸ್ವಯಂವರಕ್ಕೆ ಮತ್ತು ರಾಮಸೀತೆಯರ ಕಲ್ಯಾಣಕ್ಕೆ ಸಂಬಂಧಿಸಿದ್ದು, ಮೂರನೆಯದು ದ್ರೌಪದಿಯ ಸ್ವಯಂವರದಲ್ಲಿ ಅರ್ಜುನನು ಮತ್ಸಯಂತ್ರವನ್ನು ಭೇದಿಸುತ್ತಿರುವ ದೃಶ್ಯವಿದೆ. ಈ ಎರಡೂ ಚಿತ್ರಗಳು ಸ್ವಯಂವರಕ್ಕೆ ಸಂಬಂಧಿಸಿದವೇ ಆಗಿದ್ದು ಇದರಲ್ಲಿ ರಾಮಸೀತೆಯರ ಕಲ್ಯಾಣದ ಒಂದೇ ಒಂದು ಚಿತ್ರಣವಿದೆ. ಈ ಚಿತ್ರಗಳಲ್ಲೂ ಕೂಡಾ ಮೇಲಿನ ಹಾಗೆಯೇ ಸಂಯೋಜನೆ ಇದ್ದು ಕೆಳಸ್ತರಗಳಲ್ಲಿ ಹಲವಾರು ಜನರನ್ನು ನೈಜವಾಗಿ ತೋರಿಸಲಾಗಿದೆ. ಸೀತಾಸ್ವಯಂವರದಲ್ಲಿ ರಾಮನು ಸಂಯೋಜನೆಯ ಮಧ್ಯದಲ್ಲಿ ನಿಂತು ಶಿವಧನಸ್ಸಿಗೆ ಹೆದೆ ಏರಿಸುವ ಭಂಗಿಯಲ್ಲಿ ಇದ್ದಾನೆ. ಸೀತೆ ಹಿಂಭಾಗದಲ್ಲಿ ರಾಮನನ್ನು ವರಿಸಲು ಸಿದ್ಧಳಾಗಿ ನಿಂದಿದ್ದಾಳೆ. ಕೆಳಸ್ತರದಲ್ಲಿ ಕೂಡ ಸ್ವಯಂವರದಲ್ಲಿ ಭಾಗವಹಿಸಲು ಬಂದ ರಾಜರುಗಳೇ ಆಗಿರಬೇಕು. ನಂತರದ ಸಂಯೋಜನೆಯ, ಸೀತಾ ರಾಮರ ಕಲ್ಯಾಣದ ಚಿತ್ರ, ಇದರ ಮಧ್ಯದಲ್ಲಿ ಸೀತಾ ರಾಮರನ್ನು ತೋರಿಸಲಾಗಿದೆ.

ಅವರ ಪಕ್ಕದಲ್ಲಿ ಸೀತೆಯ ತಂದೆತಾಯಿಗಳ ಮತ್ತು ರಾಮನ ತಂದೆತಾಯಿಗಳು ವಧುವರರನ್ನು ಆಶೀವರ್ದಿಸುವ ತೆರದಲ್ಲಿ ನಿಂತಿದ್ದಾರೆ. ಈ ಕಲ್ಯಾಣ ಚಿತ್ರದಲ್ಲಿ ವಶಿಷ್ಟ ಮತ್ತು ವಿಶ್ವಾಮಿತ್ರ ಋಷಿಗಳನ್ನು ಕೂಡಾ ಗಮನಿಸಬಹುದು. ಅಲ್ಲದೇ ಇನ್ನು ಹಲವಾರು ಕಿರು ಆಕೃತಿಗಳನ್ನು ಕೂಡಾ ನೋಡಬಹುದು. ಉಳಿದ ಚಿತ್ರಗಳಂತೆ ಚಿತ್ರದ ಮೇಲ್ಭಾಗದಲ್ಲಿ ಗೋಪುರಗಳು ಮತ್ತು ತಾಳೆಯ ಗಿಡಗಳು ಚಿತ್ರಕ್ಕೆ ಕಲಶಪ್ರಾಯವಾಗಿ ಚಿತ್ರಿತವಾಗಿವೆ.

ಪ್ರಾಯಶಃ ಹೊಯ್ಸಳ, ವಿಜನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಅತ್ಯಂತ ಜನಪ್ರಿಯವಾದ ಚಿತ್ರವೆಂದರೆ ಅರ್ಜುನ ಮತ್ಸ್ಯ ಯಂತ್ರವನ್ನು ಭೇದಿಸುವ ಚಿತ್ರ. ಈ ಚಿತ್ರ ಇಲ್ಲಿ ದ್ರೌಪದಿಯ ಸ್ವಯಂವರಕ್ಕೆ ಪೂರಕವಾಗಿ ಮೂಡಿಬಂದಿದೆ. ಈ ಚಿತ್ರದಲ್ಲಿ ಕೊಪ್ಪರಿಗೆಯಲ್ಲಿ ಮೇಲೆ ತಿರುಗುತ್ತಿರುವ ಮತ್ಸ್ಯದ ಪ್ರತಿಬಿಂಬವನ್ನು ನೋಡುತ್ತ, ಮೇಲಕ್ಕೆ ಬಿಲ್ಲಿನಿಂದ ಗುರಿ ಇಟ್ಟಿರುವ ಅರ್ಜುನನ ಆಕೃತಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.[9] ಹಿನ್ನೆಲೆಯಲ್ಲಿ ದ್ರೌಪದಿಯ ಕೈಯಲ್ಲಿ ಹೂಮಾಲೆ ಹಿಡಿದು ನಿಂತಿದ್ದು ಅವಳ ಪಕ್ಕದಲ್ಲಿ ದ್ರುಪದನೂ ಕೂಡಾ ನಿಂತಿದ್ದಾನೆ. ಹಿನ್ನೆಲೆಯಲ್ಲೂ ಕೆಲವು ಆಕೃತಿಗಳನ್ನು ಗಮನಿಸಬಹುದು. ಒಟ್ಟಾರೆಯಾಗಿ ಈ ಚಿತ್ರ ಸಂಯೋಜನೆ ಮನೋಜ್ಞವಾಗಿ ಮೂಡಿಬಂದಿದೆ. ಈ ಮೂರು ಚಿತ್ರಗಳ ಕೆಳಗಿನ ಚಿತ್ರಪಟ್ಟಿಕೆಗಳಲ್ಲಿ ರಥಗಳಲ್ಲಿ ಸಾಗುತ್ತಿರುವ ಪ್ರಮುಖರು ಮತ್ತು ಸೈನಿಕರು ನಾವು ಗಮನಿಸಬಹುದು. ಇವುಗಳಲ್ಲಿ ಕುದುರೆಗಳು, ರಥಗಳು, ಆನೆಗಳು ಮತ್ತು ಸೈನಿಕರು ಮುಂದೆ ಮುಂದೆ ಹೋಗುತ್ತಿರುವ ರೀತಿಯನ್ನು ಗಮನಿಸಿದರೆ ಇವೆಲ್ಲವು ರಾಜಕೀಯ ಪ್ರಮುಖರ ಚಿತ್ರಗಳೆನ್ನಬಹುದು.[10]

ಈ ಭಿತ್ತಿ ಚಿತ್ರಗಳಲ್ಲಿಯೇ ಪ್ರಾಯಶಃ ಅತ್ಯಂತ ಚರ್ಚಾ ವಸ್ತುವಾದ ಚಿತ್ರವೆಂದರೆ, ಯತಿಗಳ ಮೆರವಣಿಗೆಯ ಚಿತ್ರ. ಈ ಚಿತ್ರ ಈ ಚಿತ್ರಗಳ ಸಮೂಹದ ಕೊನೆಯ ಸ್ತರದಲ್ಲಿದೆ. ಚಿತ್ರದ ಎರಡೂ ಕೊನೆಯ ಬದಿಯಲ್ಲಿ ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಒಂದೆಡೆ, ಕೃಷ್ಣನು ಗೋಪಿಕೆ ವಸ್ತ್ರಾಪಹರಣ ಮಾಡಿದ ದೃಶ್ಯವಿದ್ದರೆ ಇನ್ನೊಂದೆಡೆ ವಿರೂಪಾಕ್ಷ ದೇವಾಲಯವನ್ನು ತೋರಿಸುವ ಲಿಂಗರೂಪಿ ವಿರೂಪಾಕ್ಷನ ಚಿತ್ರವಿದೆ.

ನಂದಿಯನ್ನು ಕೂಡಾ ಕಲಾವಿದ ಇಲ್ಲಿ ತೋರಿಸಿದ್ದಾನೆ. ಈ ಎರಡೂ ಚಿತ್ರಗಳ ಮಧ್ಯದಲ್ಲಿ ವಿರೂಪಾಕ್ಷನ ಕಡೆ ಮುಖಮಾಡಿ, ಯತಿಗಳನ್ನು ತೆರೆದ ಪಲ್ಲಕ್ಕಿಯಲ್ಲಿ ಕುಳ್ಳರಿಸಿ ಸಕಲ ರಾಜಮರ್ಯಾದೆಯಿಂದ ಕರೆದೊಯ್ಯುತ್ತಿರುವ ದೃಶ್ಯವಿದೆ. ಈ ಚಿತ್ರದ ಸಂಯೋಜನೆ, ಒಂದು ಉದ್ದವಾದ ಪಟ್ಟಿಕೆಯಂತೆ ಇದ್ದು ಮಧ್ಯದಲ್ಲಿ ಯತಿಗಳನ್ನು ತೆರೆದ ಪಲ್ಲಕ್ಕಿಯಲ್ಲಿ ಕೂಡಿಸಲಾಗಿದೆ. ಅವರ ಸುತ್ತಲೂ ಪರಿಚಾರಕರು, ರಾಜಭಟರು ಮತ್ತು ಪ್ರಮುಖರು, ಸೈನಿಕರು ಯತಿಗಳನ್ನು ರಾಜಮರ್ಯಾದೆಯಿಂದ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದಾರೆ. ಈ

ಮೆರವಣಿಗೆಯ ಮುಂಭಾಗದ ಕೊನೆಯ ಭಾಗದಲ್ಲಿ ಶಿವಲಿಂಗದ (ವಿರೂಪಾಕ್ಷ ಲಿಂಗ ಚಿತ್ರಣ ಇರುವುದನ್ನು ಈ ಮೇಲೆ ಹೇಳಿದೆ. ಈ ಮೆರವಣಿಗೆಯ ಪಥವನ್ನು ಕುರಿತು ಒಂದು ಕ್ಷಣ ಸ್ಮೃತಿಪಟಲದ ಮೇಲೆ ಚಿತ್ರವನ್ನು ತಂದುಕೊಂಡರೆ ಹಂಪೆಯಲ್ಲಿನ ಈಗಿನ ಎದುರು ಬಸವಣ್ಣನ ಮಂಟಪದ ಕಡೆಯಿಂದ ವಿರೂಪಾಕ್ಷ ದೇವಾಲಯದ ಕಡೆಗೆ ಅಂದರೆ ವಿರೂಪಾಕ್ಷ ಬಜಾರ್ನಲ್ಲಿ ಈ ಮೆರವಣಿಗೆ ಹೊರಟಿದೆಯೋ ಎಂಬ ಚಿತ್ರಣ ಬರುತ್ತದೆ. ಈ ಮೆರವಣಿಗೆ ಚಿತ್ರದ ಕೇಂದ್ರಬಿಂದುವಾದ ಯತಿಗಳನ್ನು ಇದುವರೆಗೂ ಹಲವಾರು ವಿದ್ವಾಂಸರು, ವಿದ್ಯಾರಣ್ಯರು ಎಂದು ಗುರುತಿಸಿದ್ದಾರೆ. ಆದರೆ ಈ ಯತಿಗಳ ಚಿತ್ರವನ್ನು ಕೃಷ್ಣ ದೇವರಾಯನ ಕಾಲದಲ್ಲಿ ಹಂಪೆಯಲ್ಲಿದ್ದು ಅವನ ರಾಜಗುರುಗಳೂ, ಮಾರ್ಗದರ್ಶಕರೂ ಮತ್ತು ದಾಸಸಾಹಿತ್ಯದ ಹರಿಕಾರರೂ ಆಗಿದ್ದ ವ್ಯಾಸರಾಯರದು ಎಂದು ಹಲವಾರು ದಾಖಲೆಗಳ ಸಹಿತ ಈ ಹಿಂದೆ ನಾವು ಪ್ರತಿಪಾದಿಸಿದ್ದೇನೆ.[11]

ಇನ್ನು ಕೊನೆಯದಾಗಿ – ಈ ಭಿತ್ತಿಗಳು ಸುತ್ತಲೂ ಇರುವ ಕಂಬಗಳ ಬೋದಿಗೆಯ ಮೇಲಿರುವ ಪಟ್ಟಿಕೆಗಳ (ಹಾರದ ಭಾಗ) ಮೇಲೆ ಹಲವಾರು ಚಿತ್ರಗಳಿವೆ. ಇವುಗಳಲ್ಲಿ ಕೆಲವು ಮಹಾಭಾರತದ ವಿರಾಟಪರ್ವಕ್ಕೆ ಸಂಬಂಧಿಸಿದ ಗೋಗ್ರಹಣ ಘಟನೆಯ ಚಿತ್ರಗಳಿವೆ.[12] ನವರಂಗದ ಹೊರಭಾಗದ ಪಟ್ಟಿಕೆಯ ಮೇಲೆ ಬಾಗಿಲಿಗೆ ನೇರವಾಗಿ ಮೇಲೆಡೆಗೆ ಚೌಕಾಕಾರದ ಸಂಯೋಜನೆಯಲ್ಲಿ ಲಿಂಗರೂಪಿ ವಿರೂಪಾಕ್ಷನ ಚಿತ್ರಣವಿದ್ದು ಪಕ್ಕದಲ್ಲಿ ಅರ್ಚಕರು (ಯತಿಗಳು?) ಮತ್ತು ರಾಜಪೋಷಾಕಿನಲ್ಲಿರುವ ಈರ್ವರು ಪುರುಷಾಕೃತಿಗಲೀವೆ. ಬಹುಶಃ ಈ ಎರಡು ಆಕೃತಿಗಳು ಕೃಷ್ಣದೇವರಾಯ ಮತ್ತು ಅಚ್ಯುತರಾಯನದಾಗಿರಬಹುದೆಂದು ತೋರುತ್ತದೆ. ಆದಾಗ್ಯೂ, ಇವುಗಳ ಕುರಿತು ಸದ್ಯದ ಅಧ್ಯಯನ ಅಪೂರ್ಣವಾಗಿದೆ[13]

ಮಹಾರಂಗಮಂಟಪದ ಚಿತ್ರಗಳು ಸಂಪೂರ್ಣವಾಗಿ ಅಜಂತಾದ ಬೌದ್ಧಾಲಯಗಳಂತೆ ಒಳಮಾಳಿಗೆಯನ್ನು ಅಲಂಕರಿಸಿವೆ. ಇಲ್ಲಿ ಪ್ರತಿಯೊಮದು ಸನ್ನಿವೇಶವೂ ಅಲಂಕಾರಿಕ ಹೂಬಳ್ಳಿಗಳ ಪಟ್ಟಿಕೆಗಳಿಂದ ವಿಭಾಗಿಸಿದೆ. ಆಯಾ ಚೌಕಟ್ಟು ಆಯಾ ಚಿತ್ರಕ್ಕೆ ಮಾತ್ರ ಸೀಮಿತವಾಗಿದೆ. ಇದರಿಂದ ಇಲ್ಲಿ ಪ್ರತಿಯೊಂದು ಚಿತ್ರವು ಸ್ವತಂತ್ರವಾದುದೇ ಆಗಿದೆ. ಚಿತ್ರಗಳ ಸಂಯೋಜನೆಯ ಭಾಗವಾಗಿರುವ ಗೋಪುರಗಳ ಮತ್ತು ವಾಸ್ತುಕೃತಿಗಳ ಇತರೆ ಅಂಶಗಳು ಸಮಕಾಲೀನ ವಾಸ್ತುಕಲೆಯ ಅಂಶಗಳನ್ನು ತೋರಿಸುತ್ತವೆ. ಎಂದು ಈ ಹಿಂದೆ ಸೂಚಿಸಿದ್ದೇನೆ. ಈ ಚಿತ್ರಗಳಲ್ಲಿನ ಆಕೃತಿಗಳೆಲ್ಲವೂ ರೇಖಾಪ್ರಧಾನವಾದವುಗಳಾಗಿವೆ. ಬಾಹ್ಯ ರೇಖೆಗಳೇ ಚಿತ್ರದ ಜೀವಾಳ. ಆಕೃತಿಯ ಉಬ್ಬು ತಗ್ಗು, ಹಾವಭಾವ ಮತ್ತು ಆಕೃತಿಯಲ್ಲಿನ ಯಾವುದೇ ಅಲಂಕಾರವನ್ನು ರೇಖೆಯೇ ನಿರ್ದೇಶಿಸುತ್ತದೆ.[14] ಇಲ್ಲಿ ವರ್ಣಸಂಯೋಜನೆಯು ಕೆಲವೇ ವರ್ಣಗಳಿಗೆ ಪ್ರಧಾನವಾಗಿ ಕಂಡುಬರುತ್ತವೆ. ಆದರೆ ಈ ವರ್ಣಗಳನ್ನು ನೇರವಾಗಿ ಉಪಯೋಗಿಸಿರುವುದರಿಂದ ಇಲ್ಲಿ ವರ್ಣಗಳ ನೈಜತೆಗೆ ಅಥವಾ ಭಾವಾಭಿವ್ಯಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ಇರುವುದಿಲ್ಲ.[15] ಪ್ರಾಯಶಃ ಇದರಿಂದಲೇ ಆಕೃತಿಗಳಲ್ಲಿ ನೆರಳು ಬೆಳಕಿನ ಸಂಯೋಜನೆ ಅಷ್ಟಾಗಿ ಕಂಡುಬರುವುದಿಲ್ಲ. ಈ ಆಕೃತಿಗಳಲ್ಲಿ ಕೆಲವು ಸ್ಥಳೀಯ ಅಥವಾ ಆ ಕಾಲದ ಕೆಲವಾರು ಶಿಲ್ಪಗಳನ್ನು ಜ್ಞಾಪಕಕ್ಕೆ ತರುತ್ತವೆ. ಈ ಕುರಿತು ಕೂಡಾ ಬೇರೆಡೆ ನಾನು ಚರ್ಚಿಸಿದ್ದೇನೆ.[16]

ಮಹಾರಂಗಮಂಟಪದ ಚಿತ್ರಗಳ ರಚನಾ ಕಾಲದ ಬಗ್ಗೆ ಹಲವಾರು ವಿದ್ವಾಂಸರು ವಿಭಿನ್ನ ನಿಲುವುಗಳನ್ನು ಹೊಂದಿದ್ದಾರೆ. ಎಸ್. ಪರಮಶಿವನ್ ರವರು[17] ಇವುಗಳ ಕಾಲವನ್ನು ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರಿಸಿರುತ್ತಾರೆ. ಅದರಂತೆ ಶ್ರೀ ಸಿ.ಟಿ.ಯಂ. ಕೊಟ್ರಯ್ಯ[18] ಅವರು ಕ್ರಿ.ಶ. ೧೫೦೦ರ ನಂತರ ಇವು ರಚನೆ ಆಗಿರಬಹುದೆಂಬ ಅಭಿಪ್ರಾಯಪಟ್ಟಿದ್ದಾರೆ. ಸಿ. ಶಿವರಾಮಮೂರ್ತಿಯವರು[19] ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿಸಿದ್ದಾರೆ. ಇವರಿಗಿಂತ ವಿಭಿನ್ನವಾಗಿ ಡಾ. ಎಸ್. ರಾಜಶೇಖರ,[20] ಶ್ರೀಮತಿ ಎ.ಎಲ್. ದೆಲ್ಲಾಪಿಕೋಲಾರವರು[21] ಇವುಗಳನ್ನು ಕ್ರಿ.ಶ. ೧೮-೧೯ನೇ ಶತಮಾನಕ್ಕೆ ಸೇರಿಸಿದ್ದಾರೆ. ರಾಜಶೇಖರ್ ಇವುಗಳನ್ನು ಹೊಳಲಗುಂಡಿಯ ಚಿತ್ರಗಳಿಗೆ ಹೋಲಿಸುತ್ತಾ ಈ ಚಿತ್ರಗಳಲ್ಲಿಯ ಕೆಲವು ಅಂಶಗಳು ನಂತರದ ಕಾಲದವು ಎಂದು ಪ್ರತಿಪಾದಿಸುತ್ತ ನಂತರದ ಕಾಲಕ್ಕೆ ಅಂಶಗಳು ಕ್ರಿ.ಶ. ೧೮-೧೯ನೇ ಶತಮಾನದ ಶ್ರೀರಂಗಪಟ್ಟಣ ಮತ್ತು ಮೈಸೂರು ಶೈಲಿಯ ಚಿತ್ರಗಳಿಗೆ ಹೋಲಿಸುತ್ತಾ ಇವುಗಳ ಕಾಲವನ್ನು ಕ್ರಿ.ಶ. ೧೯ನೇ ಶತಮಾನಕ್ಕೆ ಸೇರಿಸುತ್ತಾರೆ, ಅಲ್ಲದೇ, ಯತಿಗಳ ಚಿತ್ರವನ್ನು ವಿದ್ಯಾರಣ್ಯ ಎಂಬುದಾಗಿಯೂ ಹಾಗೂ

ಯತಿಗಳು ಜಡೆಗಟ್ಟಿದ ಕೂದಲು ಉಳ್ಳವರಾಗಿಯೂ ಇದ್ದಾರೆಂದು ಅವರು ಬರೆಯುತ್ತಾರೆ.[22] ಆದರೆ, ವಾಸ್ತವದಲ್ಲಿ ಪ್ರಸ್ತುತ ವಿದ್ವಾಂಸರ ಅಭಿಪ್ರಾಯಗಳನ್ನು ಸಂಶಾಯಸ್ಪದ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ.[23]

ಪ್ರಸ್ತುತ ಚಿತ್ರಗಳು ಶೈಲಿಯ ದೃಷ್ಟಿಯಿಂದ ಇವುಗಳ ರಚನಾ ಕಾಲವನ್ನು ಕ್ರಿ.ಶ. ೧೫೧೦-೨೦ರ ಅವಧಿಯವರೆಗೆ ನಿರ್ಧರಿಸುವುದು ಸಮಂಜಸವಾಗಿದೆ. ಇವುಗಳು ಇರುವ ಮಹಾರಂಗಮಂಟಪದ ನಿರ್ಮಾಣವಾದದ್ದು ೧೫೦೯-೧೦ರಲ್ಲಿ.[24] ಇದೇ ದಿನಾಂಕದಲ್ಲಿ ಕೃಷ್ಣದೇವರಾಯನು ಪಟ್ಟಾಭಿಷಕ್ತನಾದ ವಿವರವು ಶಾಸನೋಕ್ತವಾಗಿದೆ. ಮಹಾರಂಗ ಮಂಟಪದ ಚಿತ್ರಗಳು ಕೃಷ್ಣದೇವರಾಯನ ಕಾಲದಲ್ಲಿಯೇ ರಚನೆ ಆಗಿರುವವು. ಇಂತಹ ದೊಡ್ಡಮಟ್ಟದ ಚಿತ್ರಗಳ ಪೋಷಕ ರಾಜ ರಾಜ ಪ್ರಮುಖನಾಗಿರಬೇಕೆಂದು ಹೇಳಬಹುದು. ಆದರೆ, ಕ್ರಿ.ಶ. ೧೮-೧೯ನೇ ಶತಮಾನದ ಇಲ್ಲಿನ ರಾಜಕೀಯ ಸ್ಥಿತಿಯನ್ನು ಗಮನಿಸಿದರೆ ಅಂತಹ ದೊಡ್ಡ ಪೋಷಕರಾರು ಕಂಡುಬರುವುದಿಲ್ಲ. ಇಲ್ಲಿ ಚಿತ್ರಿತವಾದ ವಿಷಯಗಳು ದೇವಾಲಯದ ಶಿಲ್ಪಗಳು ಆ ಕಾಲದ ಕಲಾ ಚಟುವಟಿಕೆಗಳ ಸಮನ್ವಯತೆಯನ್ನು ಪ್ರತಿಬಿಂಬಿಸುತ್ತದೆ. ಕೃಷ್ಣದೇವರಾಯನಂತಹ ಕಲಾ ಸಹೃದಯರು ಮಾತ್ರವೇ ಇಂತಹ ಚಿತ್ರಗಳ ರಚನೆಯ ಹಿನ್ನೆಲೆಯಲ್ಲಿ ಇದ್ದರೇ ಹೊರತು ಏನೊಂದು ವಿಶೇಷತೆಯನ್ನು ತೋರದ ನಂತರದ ಪ್ರಮುಖರಲ್ಲಿ. ಆದುದರಿಂದ ಚಿತ್ರಗಳು ಕೃಷ್ಣದೇವರಾಯನ ಕಾಲದಲ್ಲಿಯೇ ರಚನೆಯಾಗಿ ಸಾಧ್ಯತೆ ಹೆಚ್ಚು.[25]

ಚಿತ್ರಶೈಲಿಯ ದೃಷ್ಟಿಯಿಂದ ನಾವು ಇವುಗಳನ್ನು ಆ ಕಾಲದ ಸಮಕಾಲೀನ ಚಿತ್ರಗಳಿಗೆ ತುಲನಾತ್ಮಕವಾಗಿ ಹೋಲಿಸಬಹುದಾಗಿದೆ. ಕರ್ನಾಟಕದಲ್ಲಿ ಅಗಲೇ ನೆಲೆ ಕಂಡುಕೊಂಡಿದ್ದ ಇಸ್ಲಾಮಿಕ್ ದೊರೆಗಳ ಆಸ್ಥಾನದಲ್ಲಿ ಚಿಕಣಿ ಚಿತ್ರಗಕಲೆಯು ತನ್ನ ಪ್ರಾರಂಭಿಕ ಹಂತದಲ್ಲಿತ್ತು. ಮಧ್ಯಭಾರತದಲ್ಲಿ ಚೌರ ಪಂಚಾಶಿಕ ಕಥೆಗಳು ದೃಶ್ಯಮಾಧ್ಯಮದಲ್ಲಿ ಚಿತ್ರಗಳ ರೂಪದಲ್ಲಿ ರಚನೆಗೊಳ್ಳಲು ಪ್ರಾರಂಭಗೊಂಡಿದ್ದವು. ಇದೇ ಕಾಲದಲ್ಲಿ ರಾಜಸ್ಥಾನೀ ಕಲೆ ಚಿಕಣಿ ಚಿತ್ರಗಳ ರೂಪದಲ್ಲಿ ಅರಳತೊಡಗಿತ್ತು. ಇವುಗಳ ಜೊತೆಯಲ್ಲಿಯೇ ವಿಭಿನ್ನ ಕಲಾಪ್ರಕಾರಗಳಲ್ಲಿ ಚಿತ್ರಕಲೆ ತನ್ನದೇ ಆದ ಛಾಪನ್ನು ಒತ್ತತೊಡಗಿತ್ತು.[26] ಇಂತಹ ಸಂದರ್ಭದಲ್ಲಿ ಆಗಲೇ ವಾಸ್ತುಶಿಲ್ಪ, ಗಾರೆ ಶಿಲ್ಪದ್ಲಲಿ ಪ್ರೌಢಿಮೆ ಕಂಡುಕೊಂಡಿದ್ದು ವಿಜಯನಗರದ ಕಲಾವಿದನಿಗೆ ಚಿತ್ರರಚನೆ ಮಾಡುವುದು, ವಿಶೇಷವಾದ ಶ್ರಮವೆನಿಸಿರಲಿಕ್ಕಿಲ್ಲ. ಇಲ್ಲಿನ ಸ್ಥಳೀಯ ಕಲಾವಿದರೇ ಪ್ರಸ್ತುತ ಚಿತ್ರಗಳ ರಚನಾಕಾರರು. ಇವರೇ ಪೂರ್ವನಿಯೋಜಿಸಿ ಸಂಯೋಜಿಸಿ ಚಿತ್ರಿಸಿದ ಆಕೃತಿಗಳೇ ಇಲ್ಲಿ ತುಂಬಿವೆ. ಇದರೊಂದಿಗೆ ಸಮಕಾಲೀನ ಸೊಗಡನ್ನು ಭಾವಪೂರ್ಣವಾಗಿ ಇಲ್ಲಿ ಕಲಾವಿದ ದುಡಿಸಿಕೊಂಡಿದ್ದಾನೆ. ಹಂಪೆಯ ಚಿತ್ರಗಳು ಇಂದು ಹಂಪೆಯಲ್ಲಿ ಉಳಿದ ಚಿತ್ರಕಲೆಯ ಗತವೈಭವದ ದಾಖಲೆಗಳಾಗಿವೆ.

**ಆಕರ**

ವಿಜಯನಗರ ಅಧ್ಯಯನ, ಸಂ. ೭, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೪೮-೧೬೨.

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಈ ಚಿತ್ರಗಳನ್ನು ಕುರಿತಂತೆ ಇದುವರೆಗೂ ಆಗಿರುವ ಅಧ್ಯಯನಗಳಲ್ಲಿ ಸಮಕಾಲೀನ ಚಿತ್ರಗಳ ಅಥವಾ ಚಿತ್ರಕಲಾ ಚಟುವಟಿಕೆಗಳ ವ್ಯಾಪ್ತಿಯಲ್ಲಿ ಚರ್ಚೆ ಆಗಿಲ್ಲವೆಂದೇ ಹೇಳಬಹುದು.

[2] ಅಜಂತಾ ಮತ್ತು ಬಾಗ್ ಗಳಲ್ಲಿಯ ಭಿತ್ತಿಚಿತ್ರಗಳನ್ನು ಕುರಿತಂತೆ ಹಲವಾರು ಅತ್ಯುತ್ತಮ ಅಧ್ಯಯನಗಳು ಆಗಿವೆ. ಅದರಂತೆ ಬಾದಾಮಿ, ಐಹೋಳೆ, ಎಲ್ಲೋರ ಧಾರಶಿವಗಳ ಬಗ್ಗೆ ಕೂಡಾ ಹಲವಾರು ಲೇಖನಗಳು ಪ್ರಕಟವಾಗಿವೆ. ಇವತ್ತು ದಕ್ಷಿಣದ ಪಲ್ಲವ ಚೋಳರ ಕಾಲದಲ್ಲಿನ

ಚಿತ್ರಕಲಾ ಚಟುವಟಿಕೆಗಳನ್ನು ಕುರಿತಂತೆ ಕೂಡಾ ಹಲವಾರು ಪ್ರಸ್ತಕಗಳು, ಲೇಖನಗಳು ಪ್ರಕಟವಾಗಿವೆ. ಈ ಎಲ್ಲ ವಿಷಯಗಳ ಆಕರ ಗ್ರಂಥಗಳಿಗೆ ನೊಡಿ. Susan L. Huntington : The Art of Ancient India, Buddhist, Hindu, Jain, Weatherhill N.Y. 1985

[3] ಜೈನ ಮಾನಸಪ್ರತಿಗಳಲ್ಲಿನ ಚಿತ್ರಗಳು ಕರ್ನಾಟಕಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನವಾದದ್ದೂ ಎಂದರೆ ಮೂಡುಬಿದ್ರೆಯ 'ಧವಳ' ತಾಲಪತ್ರಗಳ ಮೇಲೆ ಚಿತ್ರಿತವಾದ ರೇಖಾಚಿತ್ರಗಳೆಂದು ಹೇಳಬಹುದು. Vijaya Rao, 1989 : Mural Paintings at the Jain Math, Shravanabelgola (Unpublished) MF A dissertation ಇದರಲ್ಲಿ ವಿವರವಾಗಿ ಧವಳ ಚಿತ್ರಗಳ ಬಗ್ಗೆ ಚರ್ಚೆ ಇದೆ.

[4] ಹಂಪೆಯಲ್ಲಿ ಅಂದಿನ ಕಾಲದಲ್ಲಿ ಅರಮನೆಗಳಲ್ಲಿ, ಮುಖ್ಯಬೀದಿಗಳ ಮನೆಗಳ ಗೋಡೆಗಳ ಮೇಲೆ ಮತ್ತು ಇನ್ನಿತರ ಪ್ರಮುಖ ಕಟ್ಟಡಗಳಲ್ಲಿ ಚಿತ್ರಗಳನ್ನು ನೋಡಿದ್ದ ಬಗ್ಗೆ ಹಂಪೆಗೆ ಬಂದಿದ್ದ ವಿದೇಶಿ ಪ್ರವಾಸಿಗರು ತಿಳಿಸುತ್ತಾರೆ. ಇವರಲ್ಲಿ ಮುಖ್ಯವಾಗಿ ನ್ಯೂನಿಜ್ ಮತ್ತು ಪೇಸ್ರು ಈ ಕುರಿತು ವಿವರಿಸುತ್ತಾರೆ.

[5] ಇಲ್ಲೂ ಕೂಡಾ ಕಲಾವಿದನ ಸಮಯಪ್ರಜ್ಞೆಯನ್ನು ಗಮನಿಸಬೇಕು. ಪ್ರತಿಯೊಂದು ಹಂತದಲ್ಲೂ ಸಂಯೋಜನೆಯ ಪ್ರತಿಯೊಂದು ಆಕೃತಿಗಳ ಮುಖ್ಯಕಥಾವಸ್ತುವಿಗೆ ಪೂರಕವಾಗಿ ಕಾರ್ಯತತ್ಪರವಾಗಿರಬೇಕೆಂಬುದು ಕಲಾವಿದನ ಉದ್ದೇಶ. ಇದನ್ನೇ ಆಂತರಿಕ ಸಂಬಂಧ ಎಂದು ಚಿತ್ರ ಸಂಯೋಜನೆಯಲ್ಲಿ ಹೆಳಬಹುದು.

[6] ಈ ಚಿತ್ರದಲ್ಲಿ ಕಾಮನ ಮುಖಮಾತ್ರ ಪಾರ್ಶ್ವ ಭಂಗಿಯಲ್ಲಿದೆ. ಆದರೆ ದೇಹ ಮಾತ್ರ ಮುಂದಿನಿಂದ ನೋಡಿದಾಗ ಇರುವಂತೆ ಇದೆ. ಇದು ಚಿತ್ರಗಳ ರೇಖಾಕೃತಿಯ ರಚನೆಯಲ್ಲಿ ಆಗುವ ತಾಂತ್ರಿಕವಾದ ಕ್ರಿಯೆ ಆಗಿದೆ. ಆರ್.ಎಚ್. ಕುಲಕರ್ಣಿ ೧೯೯೮ ವಿಜಯನಗರದ ಚಿತ್ರಶೈಲಿಯ ಕಿನ್ನಾಳದ ರೇಖಾಚಿತ್ರಗಳು. "ವಿಜಯನಗರ ಅಧ್ಯಯನ" ಸಂ. ೩, ಪು. ೧೫ -೩೫.

[7] ಶಿವನನ್ನು ಮನ್ಮಥವಿಜಯ ಚಿತ್ರಗಳಲ್ಲಿ ಸಾಮಾನ್ಯವಾಗಿ ಧ್ಯಾನಮುದ್ರೆಯಲ್ಲಿ ಚಿತ್ರಿಸಿರುವುದು ಹಲವಾರು ಶಿಲ್ಪಗಳಲ್ಲಿ ಚಿತ್ರಗಳಲ್ಲಿ ಕಂಡುಬರುತ್ತದೆ. ಇಲ್ಲಿ ಅವನು ಧ್ಯಾನದಿಮದ ಆಗಲೇ ಹೊರಬಂದಿರುವ ಹಂತ ಅಂದರೆ ಮನ್ಮಥನನ್ನು ತನ್ನ ನೊಸಲಕಣ್ಣಿನಿಂದ ಭಸ್ಮ ಮಾಡುವ ಪೂರ್ವ ಹಂತವನ್ನು ತೋರಿಸುತ್ತದೆ. ಅಲ್ಲದೇ ಶಿವನ ಅಗಲವಾದ ಕಣ್ಣುಗಳು ಕ್ರಿಯೆಗೆ ಪೂರಕವಾಗಿವೆ.

[8] ಈ ಚಿತ್ರ ಸಂಯೋಜನೆಯ ತೀರ ಕೆಳಸ್ಥರದಲ್ಲಿ ಕಂಡುಬರುವ ಲಯಬದ್ಧವಾದ ನೀರಿನ ಮತ್ತು ಜಲಚರಿಗಳ ಚಿತ್ರಣ ಅವಿಭಾಜ್ಯ ಅಂಗವಾಗಿದೆ. ಇದು ಚಿತ್ರದಲ್ಲಿ ಈ ಘಟನೆ ನಡೆದ ಸ್ಥಳಕ್ಕೆ ಪೂರಕವಾಗಿ ಸಾಂಕೇತಿಕವಾಗಿ ಚಿತ್ರಣಗೊಂಡಿದೆ. ಸಂಯೋಜನೆಯ ದೃಷ್ಟಿಯಲ್ಲಿ ಈ ಚಿತ್ರಣ ನಂತರದ ದಶಕಗಳಲ್ಲಿ ಪ್ರಾರಂಭವಾದ ಮೊಘಲ್ ರಾಜಸ್ಥಾನಿ ಚಿಕಣಿ ಚಿತ್ರಗಳಲ್ಲಿ ನೀರನ್ನು ಮುನ್ನೆಲೆಯಾಗಿ ದುಡಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಇಲ್ಲಿಹಲವಾರು ಕಥಾನಕ ಶಿಲ್ಪಗಳಲ್ಲಿ ಅದರಲ್ಲೂ ರಾಮಾಯಣದ ದೃಶ್ಯಗಳಲ್ಲಿ (ಹಜಾರ ರಾಮದೇವಾಲಯ ಸಂಯೋಜನೆಯಲ್ಲಿ ನೀರನ್ನು ದುಡಿಸಿಕೊಂಡಿರುವ ವಿಧ ಗಮನಾರ್ಹವಾದುದ್ದು.

[9] ಅರ್ಜುನ ಮತ್ಸ್ಯ ಯಂತ್ರವನ್ನು ಭೇದಿಸುವ ದೃಶ್ಯ ಮೊಟ್ಟಮೊದಲಬಾರಿಗೆ ಶಿಲ್ಪಗಳಲ್ಲಿ ಮೂಡಿಬಂದಿದೆ. ಹೊಯ್ಸಳ ಕಾಲದ ಹಜಾರರಾಮ ದೇವಾಲಯಗಳಲ್ಲಿ ಭಿತ್ತಿಯ ಸಾಲುಗಳಲ್ಲಿ ಕಥಾನಕ ಚಿತ್ರಗಳಲ್ಲಿ ಒಂದಾಗಿ ಮೂಡಿಬಂದಿದೆ. ಹಳೇಬೀಡು, ಬೇಲೂರು, ಸೋಮನಾಥಪುರ ಇತ್ಯಾದಿ ಕಡೆಗಳಲ್ಲಿ ಇದನ್ನು ಕಾಣಬಹುದು. ವಿಜಯನಗರದಲ್ಲಿ ದೇವಾಲಯ ಶಿಲ್ಪಗಳಲ್ಲಿ ಮೂಡಿಬಂದಿರುವುದು ಸ್ಪಷ್ಟವಾಗಿದೆ. ಈಗ ಈ ಭಿತ್ತಿಯಲ್ಲಿ ನಂತರದ ಕಿನ್ನಾಳ ಚಿತ್ರಗಳಲ್ಲಿ ಕೂಡಾ ಅತ್ಯಂತ ಜನಪ್ರಿಯವಾದ ಚಿತ್ರವಸ್ತು ಇದಾಗಿದೆ. ಕುಲಕರ್ಣಿ ಆರ್.ಎಚ್., ೧೯೯೮, ಅದೇ.

[10] ಈ ಚಿತ್ರಗಳ ಬಗ್ಗೆ ಸ್ಪಷ್ಟವಾದ ಗುರುತಿಸುವಿಕೆ ಇನ್ನೂ ಆಗಬೇಕಿದೆ. ಬಹುಶಃ ಅಂದಿನ ರಾಜರನ್ನೇ ಇವು ತೋರಿಸುವ ಸಾಧ್ಯತೆ ಇದೆ.

[11] ಕುಲಕರ್ಣಿ ಆರ.ಎಚ್., ೨೦೦೧, ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಭಿತ್ತಿಯಲ್ಲಿನ ಯತಿಗಳ ಚಿತ್ರ ವಿದ್ಯಾರಣ್ಯರದೆ? ವ್ಯಾಸರಾಯರದೆ? "ಇತಿಹಾಸ ದರ್ಶನ", ಸಂ. ೧೬, ಬೆಂಗಳೂರು, ಪು. ೧೭೮-೮೧.

[12] ದೆಲ್ಲಾಪಿಕೋಲಾ ಎ.ಎಲೊ.,೧೯೯೭, "Ceiling in the Virupaksha Temple", Hampi. South Asian Studies, No. 13, pp. 55-56

[13] ಈ ರಾಜರ ಆಕೃತಿಗಳನ್ನು ತೀರ ಹತ್ತಿರದಿಂದ ನೋಡುವ ಅವಕಾಶ ಇದುವರೆಗೂ ನನಗೆ ದೊರೆತಿಲ್ಲ. ಪೇಟ, ಉದ್ದವಾದ ಜುಬ್ಬದಂತಹ ಮೇಲಂಗಿ ಮತ್ತು ಧೋತ್ರಗಳನ್ನು ಧರಿಸಿದ್ದು ಈ ಆಕೃತಿಗಳು ಮುಮ್ಮುಖವಾಗಿ ಲಿಂಗಕ್ಕೆ ಪೂಜೆಸಲ್ಲಿಸಲು ಹೊರಟಿರುವಂತೆ ಪ್ರತ್ಯೇಕವಾದ 'ಚೌಕ'ದ ಸಂಯೋಜನೆಯಲ್ಲಿ ಚಿತ್ರಣಗೊಂಡಿವೆ. ಇವುಗಳು ಲೇಪಾಕ್ಷಿಯ ವೀರಭದ್ರ ದೇವಾಲಯದ ಕಲ್ಯಾಣಮಂಟಪದ ಭಿತ್ತಿಚಿತ್ರಗಳಲ್ಲಿ ಕಂಡುಬರುವ ವೀರಣ್ಣ ಮತ್ತು ವಿರುಪಣ್ಣರ ಚಿತ್ರಗಳಂತೆ ಈ ಸಂಯೋಜನೆಯಲ್ಲಿ ಕಂಡುಬರುತ್ತವೆ.

[14] ಕುಲಕರ್ಣಿ ಆರ್.ಎಚ್., ೨೦೦೦, ವಿಜಯನಗರ ಚಿತ್ರಶೈಲಿಯ ಕಿನ್ನಾಳದ ಮತ್ತಷ್ಟೂ ರೇಖಾ ಚಿತ್ರಗಳು, "ವಿಜಯನಗರ ಅಧ್ಯಯನ"-೬, ಪು. ೪೩-೬೨.

[15] ವರ್ಣಗಳು ಈಗ ಬಹುತೇಕವಾಗಿ ಮಾಸಿಹೋಗಿ ಕೇವಲ ಕೆಲವೇ ಕೆಲವು ವರ್ಣಗಳು ಕಾಣುತ್ತವೆ.

[16] ಕುಲಕರ್ಣಿ ಆರ್. ಎರ್ಚ., ಕಿನ್ನಾಳದ ರೇಖಾ ಚಿತ್ರಗಳು, ೧೯೯೮, ೨೦೦೦, ವಿಜಯನಗರ ಅಧ್ಯಯನ.

[17] ಪರಮಶಿವನ್, ಎಸ್., ೧೯೩೬, The Vijayanagara Paintings : late vijayanagara Paintings in Bhihadishwara Temple at Tajore "in Vijayanagara Sex centenary Association, Dhawad, pp. 326-343

[18] ಕೊಟ್ರಯ್ಯ ಸಿ.ಟಿ.ಯಂ., ೧೯೫೯, Vijayanagar Paintings at the Virupaksha Temple, Hampi, QJMS, Bangalore, pp. 228-237

[19] ಶಿವರಾಮಮೂರ್ತಿ ಸಿ., South Indian Paintings, National Museum, New Delhi.

[20] ರಾಜಶೇಖರ ಎಸ್., ೧೯೮೨, Holalagundi Paintings, Dharwad.

[21] ದೆಲ್ಲಾಪಿಕೋಲಾ ಎ.ಎಲ್., ೧೯೯೭, ಅದೇ.

[22] ಅದೇ, ಪು. ೬೩.

[23] ಕುಲಕರ್ಣಿ ಆರ್.ಎಚ್., ೨೦೦೧, ಇತಿಹಾಸ ದರ್ಶನ.

[24] ಸೌತ್ ಇಂತಿಯನ್ ಇನ್‌ಸ್ಕ್ರಿಪ್ಶನ್ಸ್, ೪, ಸಂಖ್ಯೆ ೨೫೮.

[25] ಕೃಷ್ಣದೇವರಾಯನ ಕಾಲವನ್ನು ಎಲ್ಲ ದೃಷ್ಟಿಯಿಂದಲೂ ವಿಜಯನಗರ ಕಾಲದ ಸುವರ್ಣಕಾಲವೆಂದು ಇತಿಹಾಸತಜ್ಞರು ಹೇಳುತ್ತಾರೆ. ಹಾಗಿದ್ದ ಮೇಲೆ ಈ ಚಿತ್ರಗಳು, ಕಾಲ ದೃಷ್ಟಿಯಿಂದ ರಚನೆಗೊಂಡಿರುವ ಸ್ಥಳದ ಮತ್ತು ಸಂದರ್ಭಗಳನ್ನು ಗಮನಿಸಿದರೆ ಅವನ ಕಾಲದಲ್ಲಿ ರಚನೆ ಆಗಿರಬೇಕೆಂಬುದು ರುಜುವಾಗಾದಂತಾಗುತ್ತದೆ.

[26] ಕ್ರಿ.ಶ. ೧೫೦೦ರ ಕಾಲ ಭಾರತೀಯ ಚಿತ್ರಕಲಾ ಇತಿಹಾಸದ ಪುನರುತ್ಥಾನದ ಸಮಯವೆಂದು ಕಲಾ ಇತಿಹಾಸತಜ್ಞರ ಅಭಿಮತ. ಏಕೆಂದರೆ ದೇಶದ ಇಲ್ಲೆಡೆ ಮತ್ತೊಂದು ಬಾರಿ ಚಿತ್ರಕಲೆಗೆ ವಿಶೇಷ ಪ್ರಾಮುಖ್ಯತೆ ದೊರೆತು ಚಿತ್ರರಚನೆ ವಿಭಿನ್ನ ನೆಲೆಗಟ್ಟಿನಿಂದ ಪ್ರಾರಂಭವಾಯಿತು. ಇದೇ ಸಂದರ್ಭದಲ್ಲಿ ದಕ್ಷಿಣದಲ್ಲೂ ಕೂಡಾ ಇದು ವಿಜಯನಗರದಲ್ಲಿನ ಚಿತ್ರಕಲೆಯ ರೂಪದಲ್ಲಿ ಪ್ರಾರಂಭವಾದದ್ದೇ ಪ್ರಸ್ತುತ ಚರ್ಚೆಯ ವಸ್ತು.

## ೬. ವರ್ಣಚಿತ್ರಕಲೆ

ವಿಜಯನಗರದರಸರ ಕಾಲಕ್ಕೆ ಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆತುದರಿಂದ ಅನೇಕ ದೇವಾಲಯಗಳಲ್ಲಿ ಚಿತ್ರಕಾರರು ತಮ್ಮ ಕಲಾ ಕೌಶಲ್ಯವನ್ನು ಪ್ರದರ್ಶಿಸಲು ಸಾಧ್ಯವಾಯಿತು. ವಿಜಯನಗರ ಕಾಲದ ಚಿತ್ರಕಲೆಯನ್ನು ಹಂಪೆಯ ವಿರೂಪಾಕ್ಷ, ಲೇಪಾಕ್ಷಿಯ ವೀರಭದ್ರ, ಸೋಮಪಾಲಯಂನಲ್ಲಿಯ ಚೆನ್ನಕೇಶವ, ಆನೆಗೊಂದಿಯ ಹುಚ್ಚಪ್ಪಯ್ಯಮಠ, ಕಾಂಚಿಯ ವರದರಾಜ, ತಿಳಿವಿಳಿದುಳಲೈನ ಶಿವದೇವಾಲಯ, ತಿರುಪರುತ್ತಿಕುನ್ರಮ್ ದ ಜೈನ ಬಸದಿ, ತಂಜಾವೂರಿನ ಬೃಹದೇಶ್ವರ, ಚಿದಾಂಬರಂನ ಶಿವಕಾಮ ಸುಂದರಿ, ತಿರುಮಲೈನ ಕುಂದಾಣಿ ಜಿನಾಲಯ ಮುಂತಾದ ದೇವಾಲಯಗಳಲ್ಲಿ ನೋಡಬಹುದು. ಈ ದೇವಾಲಯಗಳಲ್ಲದೇ ಈ ಕಾಲದ ಚಿತ್ರಕಲೆಯನ್ನು ಚೆಪ್ಪಗಿರಿ, ತಿರುಪತಿ, ಕದಿರಿ, ರಾಯಚೋಟಿ, ಕುಂಭಕೋಣಂ, ಶ್ರೀರಂಗಂ, ತಿರುವಣ್ಣಾಮಲೈ, ಕಾಳಹಸ್ತಿ, ಮಾಚರಲ್ಲ, ಗಂಡಿಕೋಟೆ ಮತ್ತು ತಾಡಪತ್ರಿಯ ದೇವಾಲಯಗಳಲ್ಲಿ ಕಾಣಬಹುದು. ಹಂಪೆಯ ವಿರೂಪಾಕ್ಷ ಮತ್ತು ಲೇಪಾಕ್ಷಿಯ ವೀರಭದ್ರ ದೇವಾಲಯಗಳಲ್ಲಿಯ ಚಿತ್ರಗಳು ಅಷ್ಟೇನು ಚೆನ್ನಗಿ ಉಳಿದು ಕೊಂಡು ಬಂದಿವೆ ಎಂದು ಹೇಳಲಾಗದು. ತಿರುಪರುತ್ತಿಕುನ್ರಮ್ ದ ಜೈನ ಬಸದಿಯಲ್ಲಿ ಕಾಣಸಿಗುವ ತೀರ್ಥಂಕರರ ಜೀವನಕ್ಕೆ ಸಂಬಂಧಿಸಿದ ಚಿತ್ರಗಳೂ ಸ್ವಲ್ಪ ಹಾಳಾಗಿವೆ.

ಹಂಪೆಯ ವಿರೂಪಾಕ್ಷ ದೇವಾಲಯದ ರಂಗಮಂಟಪದ ಭುವನೇಶ್ವರಿ ಮತ್ತು ತೊಲೆಗಳ ಮೇಲೆ ವರ್ಣ ಚಿತ್ರಗಳಿವೆ. ಲೇಪಾಕ್ಷಿಯ ವೀರಭದ್ರ ದೇವಾಲಯ ಸಂಕೀರ್ಣದ ವಿವಿಧ ಭಾಗಗಳಲ್ಲಿ ವರ್ಣಚಿತ್ರಗಳಿವೆ. ಲೇಪಾಕ್ಷಿಯ ದೇವಾಲಯವನ್ನು ಅಚ್ಯುತರಾಯನ ಅಧಿಕಾರಿ ವಿರೂಪಣ್ಣನು ಕಟ್ಟಿಸಿದ್ದನು.[1] ಇಲ್ಲಿಯ ವರ್ಣಚಿತ್ರಗಳು ಅಚ್ಯುತರಾಯನ ಕಾಲದವು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿಯ ವರ್ಣಚಿತ್ರಗಳು ಲೇಪಾಕ್ಷಿಯ ಅನಂತರದವು.

ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿ ವರ್ಣಚಿತ್ರಗಳನ್ನು ನಾಟ್ಯಸ ಮಂಟಪ, ಸುಕನಾಸಿ, ವರಾಂಡದಲ್ಲಿ ಮತ್ತು ವಿಷ್ಣುವಿನ ಚಿಕ್ಕಗುಡಿಯಲ್ಲಿ ಕಾಣಬಹುದು. ನಾಟ್ಯ ಮಂಟಪದಲ್ಲಿಯ ಭುವನೇಶ್ವರಿಗಳಲ್ಲಿ ಮಹಾಭಾರತ, ವೀರಭದ್ರನಿಗೆ ಸಂಬಂಧಿಸಿದ ದೃಶ್ಯಗಳು, ಮನುಚೋಳನ ಕಥೆ, ರಾಮಾಯಣ, ಕಿರುತಾರ್ಜುನೀಯ ಮುಂತಾದ ಘಟನೆಗಳಿಗೆ ಸಂಬಂಧಿಸಿದ ವರ್ಣಚಿತ್ರಗಳಿವೆ. ವರ್ಣಚಿತ್ರವೊಂದರಲ್ಲಿ ದೇವಾಲಯದ ಕೃರ್ತಗಳಾದ ವಿರೂಪಣ್ಣ ಮತ್ತು ಅವನ ಸಹೋದರ ವೀರಣ್ಣರು ಸೇವಕ ಪರಿವಾರ ದೊಡನಿರುವುದನ್ನು ಚಿತ್ರಿಸಲಾಗಿದೆ. ಈ ದೇವಾಲಯದ ಇತರ ಮನಮೆಚ್ಚುವ ವರ್ಣಚಿತ್ರಗಳಲ್ಲಿ ಚಂಡೇಶಾನುಗ್ರಹಮೂರ್ತಿ, ಗಿರಿಜಾ ಕಲ್ಲಾಣ್ಯ, ಅಂಧಕಾಸುರ ಸಂಹಾರಮೂರ್ತಿ, ದಕ್ಷಿನಾಮೂರ್ತಿ, ಲಿಮಗೋದ್ಭವ ಶಿವ, ಭಿಕ್ಷಾಟನ ಶಿವ, ಅರ್ಧನಾರೀಶ್ವರ ಮತ್ತು ತ್ರಿಪುರಾಂತಕ ಮೂರ್ತಿ ಶಿವನ ಚಿತ್ರಗಳು ಸೇರಿವೆ.

ಲೇಪಾಕ್ಷಿಯ ವರ್ಣಚಿತ್ರಗಳಲ್ಲಿ ಹೆಚ್ಚಾಗಿ ಕಿರಿಮಂಜಿ, ಕರಿ, ಬೂದಿಬಣ್ಣ ಮತ್ತು ಹಸಿರು ಬಣ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ಮನುಷ್ಯ, ದೇವತಾ ಪುರುಷರನ್ನು ಈ ವಣಚಿತ್ರಗಳಲ್ಲಿ ಸಾಮಾನ್ಯವಾಗಿ ನಿಂತಂತೆ ಚಿತ್ರಿಸಲಾಗಿದೆ. ಒಂದು ವರ್ಣಚಿತ್ರವನ್ನು ಮತ್ತೊಂದರಿಂದ ಬೇರ್ಪಡಿಸಲು ಈ ಚಿತ್ರಗಳನ್ನು ಚೌಕಟ್ಟುಗಳಲ್ಲಿ ಚಿತ್ರಿಸಲಾಗಿದೆ.

ಲೇಪಾಕ್ಷಿಯ ಈ ದೇವಾಲಯದಲ್ಲಿ ವೀರಭದ್ರನ ಗರ್ಭಗುಡಿಯ ಮುಂದಿನ ಮಂಟಪದ ಭುವನೇಶ್ವರಿಯಲ್ಲಿ ಸುಮಾರು ೧೫ ಅಡಿ x ೧೪ ಅಡಿ ಪ್ರಮಾಣದ ವೀರಭದ್ರನ ವರ್ಣಚಿತ್ರವಿದೆ. ಇಲ್ಲಿಯ ಈ ವರ್ಣಚಿತ್ರವನ್ನು ಪ್ರಮಾಣದಲ್ಲಿ ದಕ್ಷಿಣ ಭಾರತದ ಯಾವ ವರ್ಣಚಿತ್ರವೂ ಸರಿಗಟ್ಟುವುದಿಲ್ಲ. ಈ ವರ್ಣಚಿತ್ರದ ಕೆಳಭಾಗದಲ್ಲಿ ವಿರೂಪಣ್ಣನು ತನ್ನ ಪತ್ನಿಯೊಂದಿಗೆ ವೀರಭದ್ರನನ್ನೂ ಆರಾದಿಸುತ್ತಿರುವಂತೆ ತೋರಿಸಲಾಗಿದೆ.

ಹಂಪೆಯ ವಿರೂಪಾಕ್ಷ ದೇವಾಲಯದ ರಂಗಮಂಟಪದ ಭುವನೇಶ್ವರ ಮತ್ತು ತೊಲೆಗಳ ಮೇಲೆ ವರ್ಣಚಿತ್ರಗಳಿವೆ. ಶೈವ ಪ್ರಧಾನವಾದ ಈ ಚಿತ್ರಗಳು ವಿವರವಾಗಿ ಚಿತ್ರಿತವಾಗಿವೆ.[2] ಶಿವಪುರಾಣಗಳಿಂದ, ರಾಮಾಯಣ, ಮಹಾಭಾರತದಿಂದ ಆಯ್ದ ದೃಶ್ಯಗಳು ಭುವನೇಶ್ವರಿಯಲ್ಲಿ ಚಿತ್ರಿತವಾಗಿದ್ದರೆ ತೊಲೆಗಳ ಮೇಲೆ ಪುರಾಣ ಪುರುಷರ, ದೇವತೆಗಳ ಮತ್ತು ಸಮಕಾಲೀನ ಜೀವನವನ್ನು ಚಿತ್ರಿಸುವ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಈ ಚಿತ್ರಗಳು ಪ್ರಮಾಣದಲ್ಲಿ ಚಿಕ್ಕವು. ಇಂತಹ ೬೭ ಸಣ್ಣ ಚಿತ್ರಗಳಿವೆ.

ಹಂಪೆಯ ವರ್ಣಚಿತ್ರಗಳಲ್ಲಿ ಎದ್ದುಕಾಣುವ ಲಕ್ಷಣಗಳಿವೆ. ಆಕೃತಿಗಳನ್ನು ಸಾಮಾನ್ಯವಾಗಿ ಪಾರ್ಶ್ವಮುಖಚ್ಛಾಯೆಯಲ್ಲಿ ಚಿತ್ರಿಸಿದ್ದಾರೆ. ಬ್ರಹ್ಮನನ್ನು ಚಿತ್ರಿಸುವಾಗ, ಅವನ ನಾಲ್ಕು ಮುಖಗಳನ್ನು ತೋರಿಸಿದ್ದಾರೆ. ಈವರ್ಣಚಿತ್ರಗಳಲ್ಲಿ ಎದ್ದು ಕಾಣುವ ವರ್ಣಗಳೆಂದರೆ ಹಸಿರು, ಬೂದುಬಣ್ಣ ಮತ್ತು ಟೆಮ್ಯಾಟೋ ಹಣ್ಣಿನ ಕೆಂಪು, ಪ್ರಾಣಿಗಳ ಕಣ್ಣುಗಳನ್ನು ಮನುಷ್ಯರ ಕಣ್ಣಿನಂತೆಯೇ ಚಿತ್ರಿಸಲಾಗಿದೆ. ಪ್ರತಿಯೊಂದು ದೃಶ್ಯವನ್ನು ಚೌಕುಗಳಲ್ಲಿ ಚಿತ್ರಿಸಲಾಗಿದೆ. ಈ ಚೌಕಗಳಿಗೆ ಹೂಬಳ್ಳಿಗಳ ಪಟ್ಟಿ ಇದೆ. ಹೆಣ್ಣಿನ ಚಿತ್ರಗಳಲ್ಲಿ ಮೂಗುತಿ ಪ್ರಾಮುಖ್ಯವಾಗಿ ಎದ್ದು ಕಾಣಿಸುತ್ತಿದೆ.

ಈ ವರ್ಣಚಿತ್ರಗಳಲ್ಲಿ ಗಿರಿಜಾಕಲ್ಯಾಣ, ರಾಮ ಸೀತೆಯರ ವಿವಾಹ, ಮನ್ಮಥ ವಿಜಯ, ತ್ರಿಪುರಸಂಹಾರ, ದ್ರೌಪದೀ ಸ್ವಯಂವರ, ಗೋಪಿಕಾವಸ್ತ್ರಾಪಹರಣ, ಅಷ್ಟದಿಕ್ಪಾಲಕರು, ವಿಷ್ಣುವಿನ ದಶಾವತಾರಗಳು, ತ್ರಿಮೂರ್ತಿಗಳನ್ನು ಚಿತ್ರಿಸಿದ್ದಾರೆ.[3] ಇವುಗಳಲ್ಲಿ ಮನ್ಮಥ ವಿಜಯ, ತ್ರಿಪುರ ಸಂಹಾರ ಮತ್ತು ಗಿರಿಜಾಕಲ್ಯಾಣದ ದೃಶ್ಯಗಳು ಮನಂಬುಗುವಂತೆ ಚಿತ್ರಿತವಾಗಿವೆ. ಇಲ್ಲಿಯ ತ್ರಿಪುರ ಸಂಹಾರದ ವರ್ಣಚಿತ್ರ ಲೇಪಾಕ್ಷಿಯ ತ್ರಿಪುರ ಸಂಹಾರದ ವರ್ಣಚಿತ್ರಕ್ಕಿಂತಲೂ ಭವ್ಯವಾಗಿ ಚಿತ್ರಿತವಾಗಿದೆ. ಶಿವನು ತಾರಕಾಸುರನ ಮಕ್ಕಳಾದ ಕಮಾಕ್ಷ, ಮಕರಾಕ್ಷ ಮತ್ತು ವಿದ್ಯುನ್ಮಾಲಿಯರ ತ್ರಿಪುರಗಳನ್ನು ಸಂಹರಿಸುವ ದೃಶ್ಯದ ಸಂಯೋಜನೆ ಚಿತ್ರಕಾರನ ನಿರೂಪಣಾಶಕ್ತಿಗೆ ಒರೆಯಿಟ್ಟಂತಿದೆ. ಶಿವನ ನಿಂತಭಂಗಿ ಅಸುರರನ್ನು ದಮನಮಾಡುವ ಛಲವನ್ನು ಎತ್ತಿತೋರಿಸುತ್ತದೆ. ಇಲ್ಲಿ ಶಿವನು ಅಜೇಯ ಯೋಧ.

ಹಂಪಿಯ ಈ ವರ್ಣಚಿತ್ರಗಳು ಸಿ.ಟಿ.ಎಂ. ಕೊಟ್ರಯ್ಯನವರ ಪ್ರಕಾರ ಕ್ರಿ.ಶ. ೧೫೦೯ರ ನಂತರ ಮತ್ತು ಕ್ರಿ.ಶ. ೧೫೬೫ರ ಒಳಗೆ ಚಿತ್ರಿತವಾಗಿವೆ.[4] ಏಕೆಂದರೆ ವರ್ಣಚಿತ್ರಗಳಿರುವ ರಂಗಮಂಟಪವನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೦ರಲ್ಲಿ ಕಟ್ಟಿಸಿದನು. ಮತ್ತು ಕ್ರಿ.ಶ. ೧೫೬೫ರಲ್ಲಿ ನಡೆದ ಕದನದಲ್ಲಿ ವಿಜಯನಗರದ ಪರಾಭವವುಂಟಾಯಿತು. ಅಂದರೆ ಈ ವರ್ಣಚಿತ್ರಗಳು ಕ್ರಿ.ಶ. ೧೫೬೫ರ ಮುಂಚೆ ಮೂಡಿರಬೇಕೆಂದು ಅವರ ಅಭಿಪ್ರಾಯ. ಸಿ. ಶಿವರಾಮಮೂರ್ತಿಯವರು ಈ ವರ್ಣಚಿತ್ರಗಳನ್ನು ಲೇಪಾಕ್ಷಿಯ ವರ್ಣಚಿತ್ರಗಳಿಗಿಂತಲೂ ಹಳೆಯವೆನ್ನುವ ಅಭಿಪ್ರಾಯ ಮೂಡಿಸುತ್ತಾರೆ.[5] ಈ ವರ್ಣಚಿತ್ರಗಳು ಯಾವ ಕಾಲಕ್ಕೆ ಸೇರಿದವುಗಳೆನ್ನುವುದನ್ನು ಇಲ್ಲಿ ವಿವೇಚಿಸುವುದು ಒಳಿತು.

ಹಂಪೆಯ ವರ್ಣಚಿತ್ರಗಳಿಗೂ ಮತ್ತು ಲೇಪಾಕ್ಷಿಯ ವರ್ಣಚಿತ್ರಗಳಿಗೂ ಸಾಕಷ್ಟು ಭೇದಗಳಿವೆ. ಶೈಲಿಯಲ್ಲಿ, ಸಂಯೋಜನೆಯಲ್ಲಿ ಭಿನ್ನವಾಗಿವೆ. ಲೇಪಾಕ್ಷಿಯ ವರ್ಣಚಿತ್ರಗಳು ಚೌಕಗಳಲ್ಲಿವೆ. ಅಂತೆಯೇ ಹಂಪೆಯ ವರ್ಣಚಿತ್ರಗಳೂ. ಆದರೆ ಹಂಪೆಯ ವರ್ಣಚಿತ್ರಗಳು ಚೌಕಗಳಲ್ಲಿದ್ದರೂ ಇಲ್ಲಿ ಕೆಲವು ಚಿತ್ರಗಳ ಮೇಲ್ಭಾಗದಲ್ಲಿ ತೋರಣದಂತಹ ಅಲಂಕರಣೆ ಇದೆ. ಇಂತಹ ತೋರಣದಂತಹ ಅಲಂಕರಣೆ ಲೇಪಾಕ್ಷಿಯಲ್ಲಿ ಕಾಣಸಿಗುವುದಿಲ್ಲ. ಇಂತಹ ತೋರಣ ೧೭ನೇ ಶತಮಾನದ ವರ್ಣಚಿತ್ರಗಳಲ್ಲಿ ಮೊದಲು ಕಾಣಸಿಗುತ್ತದೆ. ಹಂಪೆಯ ವರ್ಣಚಿತ್ರಗಳಲ್ಲಿ ತೋರಣದ ಮೇಲ್ಗಡೆ ಮೂಲೆಗಳಲ್ಲಿ ಗಂಡಭೇರುಂಡ, ಗಿಳಿ ಮುಂತಾದ ಪಕ್ಷಿಗಳ ಚಿತ್ರಗಳಿವೆ. ಅಲ್ಲದೆ ಅನೇಕ ವರ್ಣಚಿತ್ರಗಳಲ್ಲಿ ದೇವಾಲಯಗಳ ಚಿತ್ರಗಳು ಮತ್ತು ಈ ದೇವಾಲಯಗಳ ಎರಡೂ ಬದಿಗಳಲ್ಲಿ ತೆಂಗಿನಮರದ ಚಿತ್ರಗಳನ್ನು ಬಿಡಿಸಿದ್ದಾರೆ. ಈ ರೀತಿದ ವರ್ಣಚಿತ್ರದ ಅಂಚಿನಲ್ಲಿ ದೇವಾಲಯ-ಶಿಖರಗಳು ಲೇಪಾಕ್ಷಿಯಲ್ಲಿ ಕಾಣಸಿಗುವುದಿಲ್ಲ. ಹಾಗೆಯೇ ಹಕ್ಕಿಗಳ, ತೆಂಗಿನ ಜಮರಗಳ ಚಿತ್ರಗಳೂ ಕೂಡ. ಈ ರೀತಿ ದೇವಾಲಯಗಳನ್ನು, ತೆಂಗಿನ ಮರಗಳನ್ನು ಚಿತ್ರಿಸುವ ಸಂಪ್ರದಾಯ ೧೬ನೇ ಶತಮಾನದಲ್ಲಿರಲಿಲ್ಲ. ಇಲ್ಲಿ ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿರುವ ಕರೂನುಲು ಜಿಲ್ಲೆಯ ಆಲೂರು ತಾಲ್ಲೂಕಿನ ಹೊಳಲಗುಂದದಲ್ಲಿರುವ ಸಿದ್ಧೇಶ್ವರ ದೇವಾಲಯದಲ್ಲಿರುವ ವರ್ಣಚಿತ್ರಗಳನ್ನು ವಿವೇಚಿಸುವುದು ಉಪಯುಕ್ತ. ಇಲ್ಲಿಯ ವರ್ಣಚಿತ್ರಗಳು ೧೫ನೇ ಶತಮಾನದ ಅಂತ್ಯ ಭಾಗದಲ್ಲಿ ಇಲ್ಲವೇ ೧೯ನೇ ಶತಮಾನದಲ್ಲಿ ಬರೆದವುಗಳು.[6] ಇಲ್ಲಿಯ ಸಮುದ್ರಮಂಥನ, ಉಷಾ ಪರಿಣಯ, ವೀರೇಶ ವಿಜಯ, ಗಿರಿಜಾ- ಕಲ್ಯಾಣ, ತಾರಕ ಸಂಹಾರ, ತ್ರಿಪಯುರ ಸಂಹಾರ, ಸೀತಾ ಸ್ವಯಂವರ ಮುಂತಾದ ವರ್ಣಚಿತ್ರಗಳಲ್ಲಿ ತೋರಣಗಳ, ಪಕ್ಷಿಗಳ ಮತ್ತು ದೇವಾಲಯ, ಶಿಖರಗಳ ಬಳಕೆ ಸಾಮಾನ್ಯವಾಗಿದೆ.[7] ಇವು ಹಂಪೆಯ ವರ್ಣಚಿತ್ರಗಳಿಂದ ಪ್ರಭಾವಿತವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶ, ಈ ಎಲ್ಲಾ ಅಲಂಕಾರಿಕ ಚಿಹ್ನೆಗಳು ವಿಜಯನಗರ ಕಾಲದ ಅಂದರೆ ಕ್ರಿ.ಶ. ೧೫೬೫ರವರೆಗೆ ಚಿತ್ರಿತ ವರ್ಣಚಿತ್ರಗಳಲ್ಲಿ ಕಾಣಬರುವುದಿಲ್ಲ. ಹಂಪೆಯ ವರ್ಣಚಿತ್ರಗಳು ನಿಶ್ಚಯವಾಗಿಯೂ ಕ್ರಿ.ಶ. ೧೫೬೫ರ ನಂತರ ಬಹುಶಃ ೧೭ನೇ ಶತಮಾನದ ಮಧ್ಯಭಾಗದಲ್ಲಿ ಚಿತ್ರಿತವಾದಂತೆ ಕಂಡುಬರುತ್ತವೆ.

**ಆಕರ**

ವಿಜಯಕಲ್ಯಾಣ, ೧೯೮೮, ಸಂಪಾದಕ : ಸಂ.ಶಿ. ಭೂಸನೂರಮಠ, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿಮಠ, ಹಂಪಿ, ಪು. ೨೧೧-೨೧೪.

[1] C. Shivaramamurthi, Vijayanagara Paintings, New Delhi, 1985, p. 31.

[2] S. Rajasekhara, Master pieces of Vijayanagara Art Bombay, 1983, p. 18-20.

[3] C. Shivaramamurthy, Opcit.pls. V to VIII.

[4] ಸಿ.ಟಿ.ಎಂ. ಕೊಟ್ರಯ್ಯ, "ಹಂಪೆ ವಿರೂಪಾಕ್ಷ ದೇವಾಲಯದ ವರ್ಣಚಿತ್ರಗಳು", ಹೇಮಕೂಟ,

[5] C. Shivaramamurthy, Opcit.p. 29-31.

[6] S. Rajasekhara, Holalagundi Paintings, 1982, p, 3-4.

[7] Ibid, pls. 8, 14, 16, 20, 23, 24, 26: p. 4.

# ೭. ರೇಖಾಚಿತ್ರಕಲೆ

ಜನಸಮುದಾಯದ ಸಮಗ್ರ ಜೀವನವನ್ನು ಕುರಿತು ಮತ್ತು ಜನಜೀವನದ ಎಲ್ಲ ಕ್ಷೇತ್ರಗಳಿಗೆ ಸಂಬಂಧಪಟ್ಟ ಸ್ಮರಣಾರ್ಥ ಸಂಗತಿಗಳ ವೈಜ್ಞಾನಿಕವಾದ ಹಾಗೂ ಅಧಿಕೃತವಾದ ನಿರೂಪಣೆ ಸಾಂಸ್ಕೃತಿಕ ಚರಿತ್ರೆಯಲ್ಲಿ ಪ್ರಮುಖವಾಗುತ್ತದೆ. ಅಂದರೆ ಜನ ಬದುಕಿದ ರೀತಿ, ಅವರ ನಡೆನುಸಿ, ಸಂಪ್ರದಾಯ, ಆಚಾರ, ಮತ-ಧರ್ಮ, ಬೆಳಗಿಸಿದ ಕಲೆ, ಸಾಹಿತ್ಯ, ಆರ್ಥಿಕ ವ್ಯವಸ್ಥೆ ಮುಂತಾದ ಸಕಲ ವ್ಯವಹಾರಗಳನ್ನು ಒಳಗೊಂಡಿರಬೇಕಾಗುತ್ತದೆ. ಮುಖ್ಯವಾಗಿ ಜನರು ಎತ್ತಿಹಿಡಿದ ಜೀವನ ಮೌಲ್ಯಗಳನ್ನೂ ಪ್ರತಿಬಿಂಬಿಸಬೇಕು. ಅವನು ಪ್ರಾಕೃತ ಮಟ್ಟದಿಂದ ಸಂಸ್ಕೃತಿಯ ಮಟ್ಟವನ್ನು ಏರುತ್ತ ಪ್ರಗತಿಪರವಾದ ಬಗೆಯನ್ನು ನಿರೂಪಿಸುವಂತಿರಬೇಕು.

ದೇಶದ ಸಕಲ ಸಂಪತ್ತು, ವ್ಯಾಪಾರ, ವ್ಯವಹಾರ, ವಿದ್ಯೆ, ಕಲಾಕುಶಲತೆ, ವಿಜ್ಞಾನಾಭಿವೃದ್ಧಿ, ಮತಾಚಾರ, ಧರ್ಮ, ಸಂಯಮ, ಯಂತ್ರ ಪರಿಶ್ರಮ, ಸಂಸ್ಕೃತಿ ಪ್ರಚಾರ ತತ್ವಶೋಧನೆ ಇವೆಲ್ಲವೂ ಜನಜೀವನದ ಮುಖ್ಯ ಲಕ್ಷಣಗಳಾದ್ದರಿಂದ, ಇವೆಲ್ಲವೂ ಚರಿತ್ರೆಯ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳೆಂದು ಸಹಜವಾಗಿಯೇ ಪರಿಗಣಿತವಾಗಿದೆ.

ಒಂದು ದೇಶದ, ಕಾಲಘಟ್ಟದ ಚರಿತ್ರೆ "ಸಮಗ್ರ ಜೀವನದ ಪ್ರತಿಬಿಂಬ" ಎಂಬುದನ್ನು ಒಪ್ಪಿಕೊಂಡಲ್ಲಿ ಅದನ್ನು ಪಡಿಮೂಡಿಸುವಲ್ಲಿ ಮುಖ್ಯಪ್ರಾತ್ರವಹಿಸುತ್ತಿರುವ ಸಂಗತಿಗಳಲ್ಲಿ ಕಲೆ, ವಾಸ್ತ್ರಶಿಲ್ಪ, ಚಿತ್ರ, ರೇಖಾಚಿತ್ರಕಲೆ ಅನನ್ಯವಾಗಿದೆ. ಕಲೆ ಒಂದು ಕಾಲದ, ಒಂದು ದೇಶದ, ಒಂದು ಜನಾಂಗದ ಹೃದಯವನ್ನು ಮಿಡಿಯುತ್ತದೆ. ಜನತೆಯ ಆಶೆ ಆಕಾಂಕ್ಷೆಗಳನ್ನು, ಮನೋಭಾವನೆಗಳನ್ನು ಅವರು ಬದುಕಿ ಬಾಳಿದ ರೀತಿಯನ್ನು ಬಿಂಬಿಸುತ್ತದೆ. ಅವರು ನಂಬಿದ್ದ ಜೀವನ ಮೌಲ್ಯಗಳನ್ನು ಸೂಚಿಸುತ್ತದೆ. ಕಲಕ್ಷೇತ್ರಕ್ಕೆ ವಿಜಯನಗರ ಸಾಮ್ರಾಜ್ಯದ ಕೊಡುಗೆ ಸಾಮಾನ್ಯವಾದುದೇನಲ್ಲ. ಆ ಕಲೆಯ ವಿವಿಧ ಪ್ರಕಾರಗಳು ಕುತೂಹಲಕಾರಿಯಾಗಿವೆ.

ಎರಡು ಶತಕಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿದ್ದು, ಆಗಿನ ಅಖಿಲ ದಕ್ಷಿಣ ಭಾರತದ ಒಂದು ಪ್ರಭಾವಶಾಲಿ ರಾಜಕೀಯ ಬಲವಾಗಿದ್ದುಕೊಂಡು ಜನತೆಗೆ ಶಾಂತಿ, ಸಂರಕ್ಷಣೆ ನೀಡಿದ್ದಲ್ಲದೆ, ಸಂಸ್ಕೃತಿಯನ್ನು ವೈವಿಧ್ಯಮಯಗೊಳಿಸಿದ ಖ್ಯಾತಿ ವಿಜಯನಗರ ಸಾಮ್ರಾಜ್ಯಕ್ಕಿದೆ. ಸಂಗಮ, ಸಾಳುವ, ತುಳುವ, ಅರವೀಡು ಮನೆತನಗಳ ಅಧಿಕಾರಾವಧಿಯಲ್ಲಿ ಹೊರಗಿನ ಶತ್ರುಗಳು ಹಾಗೂ ಒಳಜಗಳ ಕಾರಣದಿಂದ ಕಾಲಕಾಲಕ್ಕೆ ಹತಬಲವಾದರೂ ಹತಾಶವಾಗದೆ, ಬುಕ್ಕರಾಯ, ಪ್ರೌಢದೇವರಾಯ, ಕೃಷ್ಣದೇವರಾಯ, ರಾಮರಾಯಂಥ ಶೂರರೂ, ಮುತ್ಸದ್ಧಿಗಳೂ ಅವರ ಏಳಿಗೆಗೆ ಕಾರಣರಾದರು. ಕೃಷ್ಣದೇವರಾಯನಂತೂ ಆ ಸಾಮ್ರಾಜ್ಯದ ವೈಭವದ ಮುಕುಟಮಣಿಯಂತಿದ್ದ ಆ ರಾಯನ ದಕ್ಷತೆ, ಸಾಹಸ, ವೈಭವ, ದೈವಭಕ್ತಿ, ಧರ್ಮಶ್ರದ್ಧೆ, ಜನತಾ ವಾತ್ಸಲ್ಯ, ಸಮತಾದೃಷ್ಟಿ, ಕಲಾಭಿಮಾನ, ರಸಿಕತೆ, ವಿದ್ಯಾಭಿಮಾನವೇ ಮುಂತಾದವು ಪ್ರಶಂಸೆಗೆ ಅರ್ಹವಾದ ಸಂಗತಿಗಳಾಗಿವೆ. ತುಂಗಭದ್ರೆಯ ಮಹಾಪೂರದಂತೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಖ್ಯವಾಗಿ ರಾಜಧಾನಿಯಲ್ಲಿ ಧನ-ಧಾನ-ಜನ-ಸುಖ-ಧರ್ಮ ತುಂಬಿ ತುಳುಕುತ್ತಿತ್ತೆಂದು ದೇಶ-ವಿದೇಶದವರು ಹೊಗಳಿದ್ದಾರೆ. ಕೆಲವೊಮ್ಮೆ ವಿಮರ್ಶಕರು ಇವೆಲ್ಲ ಕೇವಲ ಕಾಲ್ಪನಿಕ ವರ್ಣನೆಗಳಿಂದ ಕೂಡಿದ ಅಸಂಬದ್ಧ ಪ್ರಲಾಪ, ಉತ್ಪ್ರೇಕ್ಷೆ, ಅತ್ಯುಕ್ತಿ, ಅತಿಶಯೋಕ್ತಿಗಳಿಮದ ಕೂಡಿದ ಅಪಲಾಪ ಎಂದು ಟೀಕಿಸಿದ್ದುಂಟು.

ಕೃಷ್ಣದೇವರಾಯನ ನಂತರ ಬಂದವನು ಅಷ್ಟೇನೂ ದಕ್ಷರಾಗಿರಲಿಲ್ಲ. ತುಂಗಭದ್ರೆಯ ಪ್ರವಾಹ ಬಂದಿಳಿದಂತೆ ಆ ರಾಜ್ಯದ ಸಂಪತ್ತು. ವೈಭವ ಇಳಿಮುಖವಾಗತೊಡಗಿತು. ಕೊಂಚ ಧರ್ಮಚ್ಯುತಿಯಾಗತೊಡಗಿತು. ಕ್ಷುಲ್ಲಕ ರಾಜಕಾರಣದಿಂದ ಸಾಮ್ರಾಜ್ಯದ ಸ್ವರ್ಣ ಸ್ವಪ್ನ ಕೆಲಮಟ್ಟಿಗೆ ಪುಡಿಯಾಯಿತು. ಹೊರ ವಿಘಾತಶಕ್ತಿ ಅಂತಃಕಲಹ ಪ್ರವೃತ್ತಿಗಳು ಸಾಮ್ರಾಜ್ಯದ ಶಕ್ತಿಹೀನತೆಗೆ ಕಾರಣಗಳಾದವು. ವಿಜಯನಗರದ ಇನ್ನೂರು ವರ್ಷದ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ವಿಶ್ಲೇಷಿಸಿದರೆ ಆ ಪರಿಸರದ ಪ್ರಜ್ಞೆ ಮೂಡಿತು. ಸಂಕೀರ್ಣತೆಯೇ ಈ ಯುಗದ ಆಂದೋಲನವನ್ನು ನಡೆಸಿತು. ವೀರಶೈವ ವಾಙ್ಮಯದ ಪುನರುಜ್ಜೀವನವೂ ಒಂದೆಡೆ ಮುನ್ನಡೆಯಿತು. ದೇಶೀಯತೆಯೂ ಹಲವೆಡೆ ದಿಗ್ವಿಜಯ ಸಾರಿದ್ದುಂಟು.

“ವಿಜಯನಗರ ಸಾಮ್ರಾಜ್ಯದ ದಕ್ಷಿಣ ಭಾರತ ಸಂಸ್ಕೃತಿಯ ರೂಪಕ” ಎಂದು ಬಾರ್ಬೋಸ್ ಹೇಳಿದ್ದು ಪ್ರಾಚೀನ ಸಂಪ್ರದಾಯಗಳ ಪೋಷಣೆಯ ದೃಷ್ಟಿಯಿಂದ ತುಸು ಸತ್ಯವೆನಿಸುತ್ತದೆ. ಅದರ ಪ್ರಮುಖ ಅರಸರು ನಿಜಕ್ಕೂ ಕೊಡುಗೈ ದೊರೆಗಳಾಗಿದ್ದರಿಂದ ಸಾಹಿತ್ಯ - ಸಂಗೀತ-ನೃತ್ಯ-ಶಿಲ್ಪಕಲೆ ವೈವಿಧ್ಯಮಯವಾಗಿ ಬೆಳೆದವು. ಹಿನ್ನೆಲೆಯಲ್ಲಿ ವಿಜಯನಗರ ಕಾಲದ ರೇಖಾಚಿತ್ರಕಲೆಯ ಕೆಲಸಂಗತಿಗಳನ್ನು ಕುರಿತು ಒಂದು ಚಿಂತನೆಯನ್ನು ಈ ಲೇಖನದಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

ಗೆರೆ, ಗೀಟು, ರೇಖೆ ಮನುಕುಲದಷ್ಟೇ ಪ್ರಾಚೀನವಾದರೂ, ಆ ಮೂಲಕ ಮಾನವ ಕಲಾತ್ಮಕ ಸಂವಹನ ಮಾಡುತ್ತ ಬಂದಿರಬಹುದಾದರೂ ಹದಿನೈದನೆಯ ಶತಮಾನದಿಂದ ಶುದ್ಧ ಕಲೆಯಾಗಿ ಇದು ಜಗತ್ತಿನ ಹಲವೆಡೆ ಜನಪ್ರಿಯವಾಗಿರುವುದು ಕುತೂಹಲಕಾರಿ ಸಂಗತಿ. ರೇಖೆಯ ಗುಣ ಕೇವಲ ಎಲ್ಲೆ ತೋರಿಸುವುದಕ್ಕೆ ಸೀಮಿತವಾಗಿಲ್ಲ. ಇದಕ್ಕೂ ಮೀರಿದ ಸತ್ವ ಗುಣಗಳ ಇದರಲ್ಲಿವೆ. ಅದರ ಚಾಲನೆಯಲ್ಲಿ ಒಂದು ಅಂತರ್ಗತ ಚೈತನ್ಯವಿದೆ. ಇದರಿಂದ ಒಂದು ಸಂಗತಿ ಸ್ಪಷ್ಟ. ಸಾಧಾರಣವೆನಿಸುವ ಒಂದು ಗೀರು, ರೇಖೆ, ಪಳಗಿದ ಕೈಯಲ್ಲಿ ಎಷ್ಟು ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ನೋಡಿಯೇ ಅರಿಯಬೇಕು. ಮನದಾಳದ ನೈಜ-ಭ್ರಾಮಕ ಕಲ್ಪನೆಗಳಿಗೆಲ್ಲ ಒಂದು ರೂಪುಕೊಡುವ ಶಕ್ತಿಯಿದೆ. ಈ ರೇಖೆಗೆ ಚಿತ್ರ, ಶಿಲ್ಪ ಮೂಲತಃ ರೂಪತಾಳುವುದೇ ಈ ರೇಖೆಯಿಂದ. ಅದರ ಒಳವಿವರಗಳು ಎದ್ದು ಕಾಣುವುದೂ ರೇಖೆಯ ಮೂಲಕವೇ. ಭಾರತೀಯ ಕಲೆಯಲ್ಲಿ ರೇಖೆಗೆ ಬಹು ಮಹತ್ವವಿದೆ. ‘ರೇಖಾಂಪ್ರಶಂಸಾತ್ಯಾಚಾರ್ಯ’, ‘ರೇಖಾಂ ಪ್ರಶಂಸಂತಿ ಆಚಾರ್ಯಃ (ವಿಷ್ಣುಧರ್ಮೋತ್ತರಂ)’, ‘‘ಡ್ರಾಯಿಂಗ್ ದಿ ಪಾದರ್ ಆಫ್ ಪೇಟಿಂಗ್’’ (ಪಸ್ಸೆರಿ, ೧೭೭೧)ಎಂಬ ಹೇಳಿಕೆ ಚಿತ್ರಕನ ರೇಖಾ ಸಿದ್ಧಿಯನ್ನು ಪ್ರಶಂಸಿದ ಸಂದರ್ಭ ಸೂಚಿ. ‘ಎನ್ ಗ್ರೇವಿಂಗ್ಸ್’ ಅಥವಾ ಅಚ್ಚು ಚಿತ್ರಕಲೆ ಹೆಚ್ಚು ಪ್ರಚಾರ ಗೊಂಡ ಕಾಲಘಟ್ಟ ವಿಜಯನಗರ ಸಾಮ್ರಾಟರದ್ದು. ಅದರ ಹೊಸ ಸಾಧ್ಯತೆಗಳನ್ನು ಈ ಕಾಲ ತೋರಿಸಿಕೊಟ್ಟಿದೆ. ನಿಯತಕ್ರಮ ಅನುಸರಿಸಿ ನಿಷ್ಕೃತ ವಸ್ತುನಿರೂಪಣೆ ಮಾಡುತ್ತಿದ್ದ ಕಡೆ ಈ ರೇಖೆ ಹೊಸ ಹೊಸ ರಚನೆಗಳನ್ನು ಸೃಷ್ಟಿಸಲು ಕಾರಣವಾಯಿತು. ರೇಖಾಚಿತ್ರವೆಂದರೆ ಮೂಲಚಿತ್ರದ ಒಂದು ಕರಡುಪ್ರತಿ ಎಂಬ ಭಾವನೆ ಮೀರಿಸಿದ ಈ ಕಾಲದಲ್ಲಿ ರೇಖಾಚಿತ್ರವಾಗಿದ್ದನ್ನು ಗಮನಿಸಬೇಕು. ರೇಖಾಚಿತ್ರ ರೇಖೆಗಳಿಂದ ಮೂಡಿಸಿದ ಚಿತ್ರವಷ್ಟೆ. ಅದು ಗೆರೆಯಾಗಿರಬಹುದು; ಕೊರೆದಿದ್ದಿರಬಹುದು; ಗೀರಿದ್ದಿರಬಹುದು. ಬಹುತೇಕವಾಗಿ ಸರಳತೆ ಗಿಳಿಸಿದ ಅದರ್ಶೀಕೃತ ರೂಪ. ರೇಖಾಚಿತ್ರ ಮತ್ತು ಲಿಪಿ ಲೇಖಕನ ಕಲೆ ಜೊತೆ ಜೊತೆಗೆ ಬಂದದ್ದನ್ನು ಈ ಕಾಲದಲ್ಲಿ ಹೆಚ್ಚಾಗಿ ನೋಡಬಹುದು. ಸಮತಲ ಶಿಲೆಯ ಮೇಲೆ ಲೋಹದ ತಗಡಿನ ಮೇಲೆ ಮೂರು ಆಯಾಮಗಳ ಸೂಚನೆಯಿಲ್ಲದೆ ರೂಪತಾಳಿದ್ದನ್ನು ಗಮನಿಸಬಹುದು. ಇದು ದಪ್ಪ, ತೆಳು, ಕೆಲಮೊಮ್ಮೆ ನವಿರಾಗಿರುತ್ತದೆ. ರೇಖಾಚಿತ್ರ ರಚಿಸಿದ ಆ ಕಾಲದ ಕಲಾವಿದನ ಮನಸ್ಥಿತಿ, ಚಿತ್ರವೃತ್ತಿ, ಭಾವನೆ ಆ ಕಲೆಯಿಂದ ಗೊತ್ತಾಗುತ್ತದೆ. ವಿಜಯನಗರ ವರ್ಣಚಿತ್ರದಲ್ಲೂ ರೇಖಾಕೌಶಲ್ಯ ಎದ್ದು ಕಾಣುತತದೆ. ಈ ಕಲೆಯಲ್ಲಿ ಕಂಡುಬರುವಂತೆ ಆಕಾರ ನಿರೂಪಣೆಯಲ್ಲಿ ರೇಖೆಯೇ ಪ್ರಧಾನವಾಗಿರುತ್ತದೆ. ನಾನೀಗ ಕೈಗೆತ್ತಿಕೊಂಡಿರುವುದು ವರ್ಣಲೇಪವಿಲ್ಲದ ಶುದ್ಧ ರೇಖಾಚಿತ್ರಕಲೆ, ನಿಶ್ಚಿನ ರೂಪವನ್ನು ವ್ಯಕ್ತಪಡಿಸಲು ಅರ್ಥಪೂರ್ಣವಾಗಿ ಬಳಸಿದ ರೇಖೆ-ಚಿತ್ರ ಮಾತ್ರ.

ಶಿಲ್ಪ ಚಿತ್ರಕ್ಕೆ ಪ್ರಾಥಮಿಕ ಪೂರ್ವಸಿದ್ಧತೆಯಾಗಿ ಕೆಳವಡೆ ರೇಖಾಚಿತ್ರಗಳಿವೆ. ಶಿಲ್ಪ, ವರ್ಣಚಿತ್ರಕಲೆಗೆ ಪೂರ್ವಭಾವಿಯಾಗಿ ರೇಖೆ, ಕೊರೆದ, ಬರೆದ ಕುರುಹುಗಳೂ ಇವೆ. ಶಾಸನಶಿಲಾ ಫಲಕ, ಮೇರೆ, ಸೀಮಾ, ಗಡಿಕಲ್ಲುಗಳಲ್ಲಿ, ವರ್ಣಚಿತ್ರ ಪಟ್ಟಿಕೆಗಳಲ್ಲಿ ಇದನ್ನು ಗಮನಿಸಬಹುದು. ಇವು ಒಂದು ರೀತಿಯ ಆಧಾರ ರೇಖಾಚಿತ್ರ (ಅಂಡರ್ ಡ್ರಾಯಿಂಗ್ಸ್). ಮೊದಲಿಗೆ ಹಾಕುವ ಕರಡುನಕ್ಷೆಗೆ ‘ಆಕಾರ ಮಾತೃಕಾ ಲೇಖ’ ಎಂದು ಮಾನಸೊಲ್ಲಾಸಕಾರ ಕರೆದಿದ್ದು ಬಣ್ಣ ತುಂಬಿದ ನಂತರವೂ ಅಂತಿಮದಲ್ಲಿ ಹಾಕುವ ರೇಖೆ ‘ಆಕಾರ ಜಾನಿಕಾ ಲೇಖ’ ಎಂದೆನಿಸಿದಕೊಳ್ಳುತ್ತದೆ. ಕಾವ್ಯಗಳಲ್ಲಿ ಇದನ್ನು ಲಾಕ್ಷಾರಸ ರೇಖಾಶುದ್ಧಿ’ ಎಂದು ಕರೆಯಲಾಗಿದೆ.

ಆಶ್ಚರ್ಯ ಎಂದರೆ ೧೫ನೇ ಶತಮಾನದಲ್ಲಿ ರೇಖಾಚಿತ್ರ ಜನಪ್ರಿಯವಾಯಿತು. ಜೊತೆಗೆ ಕೆಲವು ಜಟಿಲತಂತ್ರಗಳ ಅನುಸರಣೆಯೂ ಆರಂಭವಾಯಿತು. ಲೋಹದ ಮೊನೆಯಲ್ಲಿ ಕೊರೆದು ರೇಖಿಸುವುದು ಸಾಮಾನ್ಯವಾದಂತೆ ಕೆಂಪು ‘ಆಕರ್’ ವರ್ಣದಲ್ಲಿ ಅಂಚುಗೆರೆ ಬರೆಯುವುದೂ ಸರ್ವೇಸಾಮಾನ್ಯವಾಯಿತು. ಈ ಬಗೆಯ ಚಿತ್ರ ಶಿಲ್ಪಕಲೆಗಳ ಚೆಂದ ಅದರ ಮೂಲಮಾನದ ರೇಖೆಯನ್ನೇ

ಅವಲಂಬಿಸಿರುವುದು ಸ್ಪಷ್ಟ. ರೇಖೆಯ ಮೇಲಣ ಹಿಡಿತ, ಕೆಲವೊಮ್ಮೆ ಬೆರಗು ಹುಟ್ಟಿಸುವಂತಹದು. ಕೊರೆದ 'ಕಾವಿಕಲೆ'ಯಲ್ಲಿ ಇದನ್ನು ಮುಖ್ಯವಾಗಿ ಗಮನಿಸಬೇಕು. ವಿಜಯನಗರ ಕಾಲದ ಇನ್ನೊಂದು ಬೆಳವಣಿಗೆಯೆಂದರೆ Portraiture 'ಸಾದೃಶ್ಯ ಪ್ರತಿಕೃತಿ'. ಇದನ್ನು ಶಿಲ್ಪಶಾಸ್ತ್ರದಲ್ಲಿ 'ವಿದ್ದಚಿತ್ರ' ಎಂದಿದೆ. ಈ ಕಾಲದಲ್ಲಿ ವಿದ್ಧ ಸಾಲಬಂಜಿಕೆಗಳು ಸಾಕಷ್ಟಿವೆ. ಇದನ್ನು "Portrait Statuette" ಎನ್ನುತ್ತಾರೆ. ಈ ತರಹದ ವಿದ್ಧ ಸಾಲಬಂಜಿಕೆಗಳು ಸಾಕಷ್ಟಿವೆ. ಈ ತರಹದ ವಿದ್ಧ ಸಾಲಭಂಜಿಕೆಯರನ್ನು ನಿಜಜೀವನದ 'ಮಾಡೆಲ್'ಗಳಿಂದ ಆಯ್ದು ನಿರ್ಮಿಸುತ್ತಿದ್ದರು. ಹೀಗಾಗಿ ಕಲಾವಿದನ ಪ್ರತಿಭೆ, ಜಾಣ್ಮೆ, ಕೌಶಲ್ಯ ಎದ್ದು ಕಾಣುತ್ತದೆ. ಶಿಲಾಶಿಲ್ಪ, ವರ್ಣಚಿತ್ರಗಳಿರುವಂತೆ ಲೋಹಕರ್ಮದಲ್ಲೂ "ಪೋರ್ಟ್ರೇಟ್ ಫಿಗರ್ಸ್" ರಚಿಸುವುದು ಇಲ್ಲಿ ಗಮನಾರ್ಹ. ಶ್ರೀಕೃಷ್ಣದೇವರಾಯನ ಲೋಹಶಿಲ್ಪ ಪತ್ನಿ ಸಮೇತರಾಗಿರುವುದನ್ನು ತಿರುಪತಿ ಯಲ್ಲಿ ನೋಡಬಹುದಷ್ಟೆ. ರಾಜಮಹಾರಾಜರಲ್ಲದೆ, ಅಮಾತ್ಯ, ನಾಯಕ, ಭಕ್ತ, ಮುನಿ, ಸಾಧಕರ ರೇಖಾ ಶಿಲ್ಪಕಲಾಕೃತಿಗಳು ಅಧಿಕವಾಗಿ ಕಾಣಸಿಗುತ್ತವೆ. ಇವೆಲ್ಲ ವಿಜಯನಗರ ಶಿಲ್ಪ ಮೊದಲು ರೇಖಾಚಿತ್ರಕಾರನಾಗಿರುವುದು ನಮ್ಮ ಜನರಿಗೆ ಬರುತ್ತದೆ. ರಸ್ಕಿನ್ ಗುರುತಿಸಿದಂತೆ ಈ ಕಾಲದಲ್ಲಿ ಮೂರು ಬಗೆಯ ರೇಖಾಚಿತ್ರಗಳನ್ನು ನೋಡುಬಹುದು. ಎಕ್ಸ್ ಪೆರಿಮೆಂಟಲ್ (ಪ್ರಯೋಗಾತ್ಮಕ) ಡಿಟರಮಿನೆಂಟ್ (ಸೂತ್ರಪಾತ್ರ) ರೇಖಾ ಮತ್ತು 'ಕಮೆಮೊರೇಟಿವ್' ಶುಭವಾರ್ತೆ ರೇಖಾ, ಬನವಾಸಿಯ ಮಧುಕೇಶ್ವರಾಲಯದ ಆವರಣದಲ್ಲಿಟ್ಟಿರುವ ಒಂದು ಶಿಲಾಶಾಸನದ ಶಿರೋಭಾಗದಲ್ಲಿರುವ ರೇಖಾಚಿತ್ರ ಸಂಯೋಜನೆಯನ್ನು ಇಲ್ಲಿ ನಮ್ಮ ವಿಶ್ಲೇಷಣೆಗೆ ಎತ್ತಿಕೊಳ್ಳೋಣ. ೧೫೫೨ರಲ್ಲಿ ಜುಲೈ ೨೨, ಶುಕ್ರವಾರದಂದು ಹೊರಡಿಸಿದ ೨೪ ಸಾಲುಗಳು ಈ ಶಾಸನದ ಪಾಠದಷ್ಟೇ ಅಥವಾ ಅದಕ್ಕಿಂತ ಆಕರ್ಷಕವಾದದ್ದು ಈ ರೇಖಾಚಿತ್ರಕಲೆ ಎಂಬುದು ಹಲವರ ಗಮನಕ್ಕೆ ಬಾರದಿದ್ದರಿಂದ ಶಾಸನತಜ್ಞರಂತೂ ಇದರ ಬಗ್ಗೆ ಒಂದು ಪುಟ್ಟ ವಾಕ್ಯದಲ್ಲಿ ಹೇಳಿ ಕೈಬಿಟ್ಟಿದ್ದರಿಂದ ಇದನ್ನಿಲ್ಲಿ ಪ್ರತ್ಯೇಕವಾಗಿ ಹೆಸರಿಸುತ್ತಿದ್ದೇನೆ. ವಿಜಯನಗರದ ಅರವೀಡು (ಅರವೀಟಿ) ವಂಶದ ರಂಗರಾಜಯ್ಯ ವಿದ್ಯಾನಗರಿ (ವಿಜಯನಗರ)ಯಲ್ಲಿ ರಾಜ್ಯಭಾರಿ ಮಾಡುತ್ತಿದ್ದಾಗ ಅವನ ಮಕ್ಕಳಾದ ರಾಮರಾಜಯ್ಯ, ತಿರುಮಲರಾಜಯ್ಯ ಮತ್ತು ವೆಂಕಟಾದ್ರಿ ರಾಜಯ್ಯ ಮಹಾಮಂಡಲೇಶ್ವರರಾಗಿ ಚಂದ್ರಗುತ್ತಿ ದುರ್ಗದಲ್ಲಿ ಆಲುತ್ತಿದ್ದರು. ಆಗ ಅವರ ಊಳಿಗದ ಪಡುಮಪ್ಪ ಅವರ ಆಜ್ಞಾನುಸಾರ ಬನವಾಸಿಯ ಮಧುಕೇಶ್ವರ ದೇವಾಲಯ ಸಮುಚ್ಚಯದಲ್ಲಿ ಎರಡು ರಂಗಮಂಟಪಗಳನ್ನು ಕಟ್ಟಿಸಿದ. ಒಂದು ಪಾರ್ವತಿ ಗುಡಿಗೆ, ಇನ್ನೊಂದು ನರಸಿಂಹ ಗುಡಿಗೆ. ಆ ವಂಶದವರ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ, ಪುತ್ರಪ್ರಪೌತ್ರಾಭಿವೃದ್ಧಿಗಾಗಿ, ಧನಧಾನ್ಯಾಧಿ – ವಸ್ತುವಾಹನಾದಿಗವಾಶಪಶು ಹಿರಣ್ಯಾಭಿವೃದ್ಧಿಗಾಗಿ, ದೇವಬ್ರಹ್ಮರ ವೇದೋಕ್ತ ಆಶೀರ್ವಚನದಿಂದ, ಧರ್ಮಾರ್ಥ ಕಾಮಮೋಕ್ಷ ಚತುರ್ವಿದ ಪುರುಷಾರ್ಥ ಸಿದ್ಧಿಸಲು, ಅವರ ಉನ್ನತ ಪರಂಪರೆಯು ಆ ಚಂದ್ರಾರ್ಕ ಸ್ಥಾಯಿಯಾಗಿ ಆದಿತ್ಯ ನವಗ್ರಹರು ಅನುಗ್ರಹಿಸಬೇಕೆಂದು ಬರೆಸಿದ ಶಿಲಾಶಾಸನದ ಜೊತೆಗೆ ಆ ಕುಟುಂಬದವರ ರೇಖಾಚಿತ್ರಣವನ್ನು ಅವರ ಹೆಸರಿನೊಟ್ಟಿಗೇ ಕೊರೆಸಿದ್ದು ಬೆರಗು ಹುಟ್ಟಿಸುತ್ತದೆ.

'ಬನವಾಸಿ ೫೧' ಎಂದು ದಾಕಲಾಗಿರುವ ಈ ಶಾಸನಶಿಲೆ (೧೯೪ ೫೭ ಸೆಂ.ಮೀ)ಯ ಗಣನೀಯಭಾಗ (೫೮ ೨೮೭ ಸೆಂ.ಮೀ) ಈ ರೇಖಾಚಿತ್ರ ಸಂಯೋಜನೆಗಾಗಿಯೇ ಮೀಸಲು. ಸಾಂಪ್ರದಾಯಿಕವಾಗಿ ಬಲ ಮೇಲ್ಮೂಲೆಯಲ್ಲಿ ಚೌತಿಚಂದ್ರ ಎಡ ಮೇಲ್ಮೂಲೆಯಲ್ಲಿ ಸೂರ್ಯನನ್ನು ರೇಖಿಸಿದ್ದಾಗಿದೆ. ಚಿತ್ರಕಾರನು ಅದೇ ಸಾಲಲ್ಲಿ ಬಲಬದಿಗೆ ರಾಮ-ಲಕ್ಷ್ಮಣ-ಸೀತೆ, ಹನುಮಂತರನ್ನು ಸಾಲಾಗಿ ಚೆರಣೀರೇಖಾಕೃತಿಯಲ್ಲಿ ಕೊರೆದಿದ್ದಾನೆ. ಎಡಬದಿಗೆ ಚಕ್ರ-ಸಿಂಹಮುಖ-ಶಂಖ, ದರ್ಪಣ (?), ಪುಟ್ಟ ಗಣಪತಿ ಮೂರ್ತಿಯನ್ನು ರೇಖಿಸಲಾಗಿದೆ. ಇವಿಷ್ಟೂ ಮೊದಲ ಸಾಲಲ್ಲಿ ಒಂದು ಪಟ್ಟಿಕೆಯಾಗಿ ಸಂಯೋಜಿಸಲಾಗಿದೆ. ಇದರ ಕೆಳಭಾಗದಲ್ಲಿ ಬಲಬದಿಯಲ್ಲಿ ಎಡಕ್ಕೆ ಮುಖಮಾಡಿದ ಅಶ್ವಾರೋಹಿ ದೇವದಂಪತಿ (ಚತುರ್ಮುಖದೇವ) ಹಾಗೂ ದ್ವಿಭುಜನರಸಿಂಹರು ಉನ್ನತ ಪೀಠದ ಮೇಲಿರುವಂತೆ ಚಿತ್ರಿತರಾಗಿದ್ದಾರೆ. ನರಸಿಂಹನ ಪೀಠದ ಮೇಲೆ ಗರುಡನಿದ್ದಂತೆ, ಆತನ ಎಡಬುಜಬದಿಗೆ ಬಾಲ ಮೇಲೆತ್ತಿ ಸುರುಳಿ ಮಾಡಿಕೊಂಡು ಅಂಜಲಿಮುದ್ರೆಯಲ್ಲಿರುವ ಹನುಮಂತನ ಕಿರುಚಿತ್ರಗಳಿವೆ. ಇವುಗಳ ಎಡಬಾಹುವಿನಲ್ಲಿ ಸಾಲಾಗಿನಿಂತ ಮಹಾಮಂಡಲೇಶ್ವರ ಕುಮಾರರ ರೇಖಾಚಿತ್ರಗಳು ಸೊಗಸಾಗಿ ಮೂಡಿಬಂದಿವೆ. ನರಸಿಂಹದೇವರತ್ತ ಭಕ್ತಿಭಾವದಿಂದ ಮುಖಮಾಡಿ ಕರಜೋಡಿಸಿ ನಿಂತ ರಾಮರಾಜಯ್ಯ, ತಿರುಮಲ ರಾಜಯ್ಯ ಹಾಗೂ ವೆಂಕಟಾದ್ರಿರಾಜಯ್ಯರ ಮೈಮಾಟ, ಉದ್ದನೆಯ ಕಿರೀಟ, ವೇಷಭೂಷಣ ರಾಜಠೀವಿಗೆ ತಕ್ಕಂತಿದೆ. ಜೊತೆಗೆ ಅವರವರ ಆಪ್ತ ಅಧಿಕಾರಿ ಪ್ರಮುಖರೂ ನಿಂತಿರುವುದು ಗಮನಾರ್ಹ. ಇದಕ್ಕಿಂತ ಕುತೂಹಲಕರ ಸಂಗತಿಯೆಂದರೆ ಶ್ರೀರಂಗರಾಜಯ್ಯದೇವ

ಮಹಾ ಅರಸುಗಳ ಕುಮಾರರ ವ್ಯಕ್ತಿನಾಮ ಅನುಕ್ರಮವಾಗಿ ರಾಮರಾಜಯ್ಯ, ತಿರುಮಲರಾಜಯ್ಯ ಹಾಗೂ ವೆಂಕಟಾದ್ರಿರಾಜಯ್ಯ ಎಂಬುದಾಗಿ ಶಿರೋಭಾಗದಲ್ಲಿ ಶಾಸನವಾಗಿ ಕಂಡರಿಸಿರುವುದು. ಕೊನೆಯಲ್ಲಿ ಕರಜೋಡಿಸಿ ನಿಂತ ಊಳಿಗದ ಪದುಮಪ್ಪನಿದ್ದಾನೆ. ಆತನೂ ಸರ್ವಾಲಂಕಾರ ಭೂಷಿತವಷ್ಟೇ ಅಲ್ಲ, ತುಸು ಮುಂಭಾಗದ ಟೋಪಿ ಕಿರೀಟದಂತಿರುವ ಶಿರಸ್ತ್ರಾಣಧಾರಿ ಇವರೆಲ್ಲರನ್ನೂ ಸಮಾನಪಾತಳಿಯ ಮೇಲೆ ನಿಂತಂತೆ ರೇಖಾತ್ಮಕವಾಗಿ ಚಿತ್ರಿಸಲಾಗಿದೆ.

ಸ್ವಾರಸ್ಯದ ಸಂಗತಿಯೆಂದರೆ ಈ ರೇಖಾಚಿತ್ರ ಸಂಯೋಜನೆಯಲ್ಲಿ ಸೂಕ್ಷ್ಮತರತಮ ಭಾವ ಅಂತಸ್ತಿನ ನಿರೂಪಣೆಯು ಚೆನ್ನಾಗಿದೆ. "ಥಿಯರಿ ಆಫ್ ಸೆಂಟ್ರಿಪುಗ್ಯಾಲಿಟಿ" ಎನ್ನುವ ತತ್ವಾನುಸರಣೆ? ಅಂದರೆ ರಾಮರಾಜಯ್ಯನನ್ನು ಮೊದಲಿಗೆ ತೋರಿಸಿದ್ದು ಆತ ಉಳಿದವ ರೆಲ್ಲರಿಗಿಂತ ಹೆಚ್ಚು ಎತ್ತರದವನಾಗಿ ನಂತರ ತಿರುಮಲರಾಜಯ್ಯ ತುಸು ಕಡಿಮೆ ಎತ್ತರದವನಾಗಿ ಅವನಿಗಿಂತ ತುಸು ಕಡಿಮೆ ಎತ್ತರದವನಾಗಿ ವೆಂಕಟಾದ್ರಿ ರಾಜಯ್ಯನು ಚಿತ್ರಿತನಾಗಿದ್ದಾನೆ. ಇವರ ಜೊಅತೆಗಿದ್ದ ಆಪ್ತ ಅಧಿಕಾರಿಗಳ ಎತ್ತರದಲ್ಲೂ ಕ್ರಮಾನುಸಾರ ಎತ್ತರದಲ್ಲಿ ತಾರತಮ್ಮ ಸಂಗತಿಯನ್ನು ಗಮನಿಸಬಹುದು. ಈ ಮೂವರೂ ಮಹಾ ಮಂಡಳೇಶ್ವರರ ನಂತರ ಅವರ ಹಿಂಗಡೆಯಲ್ಲಿ ನಿಂತ ಊಳಿಗದ ಪದುಮಪ್ಪ ಇನ್ನೂ ಕಿರಿಯರ ಎಂಬುದು ಆತನ ಎತ್ತರದಲ್ಲಿ ಸೂಚಿತವಾಗಿದೆ. ಇದು ಒಂದು ರೀತಿಯಲ್ಲಿ ನಮ್ಮ ಸಾಮಾಜಿಕ ಕೌಟುಂಬಿಕ ಪರಂಪರಾನುಗತವಾಗಿದೆ. ಒಂದು "ಹೈಯರಾರ್ಕಿಕಲ್ ಆರ್ಡರ್" ತತ್ವಾನುಸಾರವಾಗಿದೆ ಎನ್ನಬಹುದು. ನಿಶ್ಚಿತ ಕಾಲ ವಿವರವುಳ್ಳ ಶಾಸನ ಸಹಿತ ಇರುವ ಈ ರೇಖಾಚಿತ್ರಕಲೆಯಲ್ಲಿ "ವಿಜಯನಗರ ಶೈಲಿ" ಎಂದು ಸ್ಪಷ್ಟವಾಗಿ ಗುರುತಿಸಬಲ್ಲ ಕೆಲ ಲಕ್ಷಣಗಳಿವೆ. ಅವು ಈ ಕೆಳಗಿನಂತಿವೆ:

೧. ದೇವಾನುದೇವ ಅರಸರನ್ನು ಉನ್ನತ ವ್ಯಕ್ತಿತ್ವದವರಾಗಿ, ಹಿತಮಿತದಪ್ಪದವರಾಗಿ ಚಿತ್ರಿಸುವುದು. ಇಲ್ಲಿ Stylisation ಸ್ವಲ್ಪ ರೂಢಿ ಮೂಲವಾಗಿ, ಸಂಪ್ರದಾಯಸ್ಥವಾಗಿ, ಸರಳೀಕರಿಸಿರುವುದು ಕಂಡುಬರುತ್ತದೆ.

೨. ವರ್ಣಚಿತ್ರಕಲೆಯಲ್ಲಿ ಕಾಣುವಂತೆ, ರೇಖಾಚಿತ್ರದಲ್ಲೂ 'ಫ್ರೋಫೈಲ್' ಆಗಿ ಪಾರ್ಶ್ವ ನೋಟದವರಾಗಿಯೇ ಚಿತ್ರಿಸಿರುವುದು. ಅಂದರೆ ಮುಖವನ್ನು ಹೊರತುಪಡಿಸಿ ಉಳಿದ ಭಾಗ ನಮಗೆದುರು ನಿಂತಾಗ ಕಾಣುವಂತೆ ಚಿತ್ರಿಸಿ, ಮುಖಮಾತ್ರ ಬಲಬದಿಯಗೆ ಹೊರಳಿಸಿದಂತಿರುತ್ತದೆ. ಕೋಲುಮುಖ, ಚೂಪುಮೂಗು, ಲಂಬಾಂತರದ ಉದ್ದನೆಯ ಕಿರೀಟ ಧರಿಸಿದ ಈ ರಾಜಮುಖದಲ್ಲಿ ಬದಿನೋಟದಲ್ಲಿ ಸಾಮನ್ಯವಾಗಿ ಒಂದೇ ಕಣ್ಣು ನೋಟಕನಿಗೆ ಕಾಣುವುದು ಸಹಜ. ಆದರೆ ಈ ಶೈಲಿಯಲ್ಲಿ ಪ್ರಜ್ಞಾಪೂರ್ವಕವಾಗಿ ಎರಡೂ ಕಣ್ಣುಗಳನ್ನೂ ತೋರಿಸಿರುತ್ತಾರೆ. 'ಫ್ರೋಫೈಲ್ ಸ್ಟಡಿ'ಯಲ್ಲಿ ವಾಸ್ತವವಾಗಿ ಕಾಣಬಾರದ ಈ ಲಕ್ಷಣ ಇಷ್ಟೇಕೆ ಎದ್ದು ಕಾಣಬೇಕು? ಅರ್ಥವಾಗುವುದಿಲ್ಲ. ಇದೊಂದು ತಪ್ಪದೇ ಗಮನಿಸಬೇಕಾದ ಗುಣಲಕ್ಷಣ ಎಂದು ಮಾತ್ರ ಇಲ್ಲಿ ಹೇಳಬಲ್ಲೆ. ಈ ಲಕ್ಷಣ ವಿಜಯನಗರೋತ್ತರದಲ್ಲೂ ಮುಂದುವರೆದದ್ದೂ ಕಂಡುಬಾರದಿರದು.

೩. ವ್ಯಕ್ತಿ ಚಿತ್ರಣದಲ್ಲಿ ಮೂಗು ಮಾತ್ರವಲ್ಲ, ಎದ್ದು ಕಾಣುವಂತೆ ಪ್ರಧಾನವಾಗಿ ಇರುವುದು. ಅಂತೂ ಇವರೆಲ್ಲ ದೊಡ್ಡ ಮೂಗಿನ ದೊಡ್ಡ ಜನರಾಗಿ ಕಾಣುತ್ತಾರೆ.

೪. ಉಟ್ಟಪಂಚೆಯ ನೆರಿಗೆ ತುಂಬ ಸಂಪ್ರದಾಯಸ್ಥರಾಗಿ, ಕ್ರಮ ಕ್ರಮವಾಗಿ ಮಡಚಿಟ್ಟಂತೆ ತುಸು ಕೃತಕವಾಗಿ ಕಂಡುಬರುತ್ತಿದೆ. (ಅಚ್ಯುತದೇವರಾಯರುಟ್ಟ ಪಂಚೆ ಗಮನಿಸಿ). ಉದ್ದನೆಯ, ಎತ್ತರದ ನಿಲುವಿನಲ್ಲಿರುವ ಆಳುವ ಅರಸನನ್ನೂ ಚಿತ್ರಿಸಿರುವುದು ಸಾಮಾನ್ಯ ಲಕ್ಷಣ. ಇದೂ ತುಸು ಕೃತಕವಾಗಿ ಕಾಣುತ್ತದೆ.

ಿ. ನಾಟಕೀಯತೆ ರಾಜ್ಯ ರೀತಿಯಲ್ಲಿ, ಭಕ್ತಿಸೂಚನೆಯಲ್ಲಿ ನಿಲುವಿನಲ್ಲಿ ಸ್ಪಷ್ಟವಾಗಿ ಕಂಡು ಬರುತ್ತಿದೆ. ಬುದ್ಧಿಪೂರ್ವಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಒಮದು ಸಂಪ್ರದಾಯಸ್ಥ ಸಾಂಸ್ಕೃತಿಕ ಪರ‍್ಯಾವರಣದಲ್ಲೇ ಇರುವವರಂತೆ ಚಿತ್ರಿತರಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ಇದನ್ನು ಕೆಲವರು 'ಟ್ರೇಟ್ ಮೆಂಟ್ ಇಜ್ ಸ್ಟಾಟಿಕ್ ಮತ್ತು ಕ್ರೂಡ್' ಎಂದು ಟೀಕಿಸಿದ್ದುಂಟು.

ಈ ಹಿಂದಿದ್ದ ಸಹಜ ಸೊಬಗು, ನವಿರಾದ ಸೂಚ್ಯಭಾವ ಬದಿ ಸರಿದು, ಕೃತಕತೆ, ಡಾಂಬಿಕತೆ, ನಾಟಕೀಯತೆ ಮುಂದಾಗಿರುವುದರಿಂದ ನಿಜ ಸೌಂದರ್ಯ ಮೀಮಾಂಸೆಯ ದೃಷ್ಟಿಯಿಂದಿದು ಅವನತಿಯ ಸೂಚನೆಯೆಂದೂ ವಿಮರ್ಶಿಸಿದ್ದಾರೆ. ಆದರೆ ಕಲೆ ಕಾಲಧರ್ಮಾನುಸಾರಿಣಿ ಸಮಕಾಲೀನ ಸಂಸ್ಕೃತಿಯ ಪ್ರತಿಬಿಂಬ ಎನ್ನುವುದಾದರೆ ವಿಜಯನಗರ ಕಾಲದ ಗುಣ ಮಹಿಮೆ ಸಹಜವಾಗಿಯೇ ಅವರ ಈ ರೇಖಾ ಕಲೆಯಲ್ಲೂ ಧ್ವನಿತವಾಗಿದೆ ಎಂದು ಹೇಳಿಬಿಡಬಹುದು.

ಉಳಿದ ಕಲೆಯಂತೆ ರೇಖಾಚಿತ್ರಕಲೆಯಲ್ಲೂ ಮತಧರ್ಮಭಾವ ಪ್ರಭಾವ ಪ್ರಧಾನವಾಗಿದೆಯೆನ್ನ ಬಹುದಾದರೂ ಲೌಕಿಕ ವಸ್ತುವಿಷಯ ಇಲ್ಲಿಯ ಕಲಾವಿದರನ್ನು ಆಕರ್ಷಿಸದೆ ಬಿಡಲಿಲ್ಲ. 'ಪೋರ್ಟ್ರೇಟ್ ಫಿಗರ್ಸ್' ಈ ಕಾಲಘಟ್ಟದಲ್ಲಿ ಮತ್ತು ಅನಂತರದಲ್ಲಿ ಹೆಚ್ಚು ಜನಪ್ರಿಯವಾಗಯಿತು. ದೇವಾಲಯಗಳ ಸಭಾಮಂಟಪದಲ್ಲಿ ಮುಖ್ಯವಾಗಿ ರಂಗಮಂಟಪದಲ್ಲಿ ಹಾಸುಗಲ್ಲಿನ ಮೇಲೆ ಸಾಷ್ಟಾಂಗ ನಮಸ್ಕಾರದಲ್ಲಿರುವಂತೆ ರೇಖಿಸಿದ ಈ ಚಿತ್ರಗಳ ದೊಡ್ಡ ಪಟ್ಟಿಯನ್ನೇ ನಾವು ಮಾಡಬಹುದು. ಇವೆಲ್ಲ ಒಂದೇ ಕಾಲಘಟ್ಟದವಲ್ಲ ನಿಜ. ಹಂಪಿ ವಿರೂಪಾಕ್ಷಮಂದಿರ ಒಂದರಲ್ಲೇ ಇಂಥ ಸುಮಾರು ನೂರೈವತ್ತು ರೇಖಾಚಿತ್ರಗಳನ್ನು ಗುರುತಿಸಬಹುದು. ಲೇಪಾಕ್ಷಿಯಲ್ಲೂ ಈ ಬಗೆಯ ರೇಖಾಚಿತ್ರಗಳನ್ನು ಸಾಕಷ್ಟಿವೆ. ಬನವಾಸಿ, ಕೆಳದಿ, ಕೊಲ್ಲೂರು, ಇಟಗಿ ಮುಂತಾದೆಡೆಗಳಲ್ಲಿ ವಿಜಯನಗರೋತ್ತರ ಕಾಲದಲ್ಲೂ ಈ ಬಗೆಯ ರೇಖಾಚಿತ್ರ ಸಂಪ್ರದಾಯ ಮುಂದುವರೆದಿರುವುದನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ಶಾಸನಸಹಿತ, ಹಲವು ಶಾಸನ ರಹಿತವಾಗಿವೆ. ಈ ಚಿತ್ರಣದಲ್ಲೂ ಒಂದು ಸಂಪ್ರದಾಯವಿದೆ. ದೇವರಿಗೆ ನೇರವಾಗಿ ಎದುರಾಗಿ ನಮಸ್ಕರಿಸದೇ ತುಸು ಕೋನ ಅಂದರೆ ಬದಿಯಿಂದ ಸಾಷ್ಟಾಂಗ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಇದು ನಮ್ಮ ಸಂಪ್ರದಾಯ. ಒಟ್ಟಿನಲ್ಲಿ 'ಸಂಪ್ರದಾಯ ಶರಣತೆ' ಪ್ರತಿ ಹಂತಲದಲ್ಲೂ ಈ ಕಾಲಘಟ್ಟದಲ್ಲಿ ನಮ್ಮ ಜನರಿಗೆ ಬಾರದೆ ಇರದು.

ವಿಜಯನಗರ ಕಾಲದ ರೇಖಾಚಿತ್ರಕಲೆಯಲ್ಲಿ ಹೂಬಳ್ಳಿ, ಜ್ಯಾಮಿತಿ ವಿನ್ಯಾಸ, ಪ್ರಾಣಿ, ಪಕ್ಷಿ ವಿನ್ಯಾಸಗಳು ಈ ಚೌಕಟ್ಟಿನಲ್ಲೇ ಕಾಣಸಿಗುತ್ತವೆ. ಹಂಪಿಯ ಶ್ರೀಕೃಷ್ಣದೇವಾಲಯದಲ್ಲಿ ಮಹಾದ್ವಾರದ ಬಲಗೋಡೆ (ಮೀನ), ಹೊಸ್ತಿಲ ಮೇಲೆ (ಪದ್ಮ ವಿನ್ಯಾಸ), ಅಂತರಾಳದ ಪ್ರವೇಶದ್ವಾರ (ಬೇರೆ ಪದ್ಮ ವಿನ್ಯಾಸ) ದಲ್ಲಿರುವಂತೆ. ಕಮಲಮಹಲಿನಲ್ಲಿ ಅದರ ಚಿಕಣಿ ರೇಖಾಚಿತ್ರ, ಕೋದಂಡರಾಮ ದೇಗುಲದೇದುರಿನ ಬಂಡೆಗಲ್ಲಿನ ಮೇಲೆ (ಚಕ್ರತೀರ್ಥದ ಬಳಿ) ಲಕ್ಷ್ಮಿ ನರಸಿಂಹನ ರೇಖಾಚಿತ್ರಗಳೂ ನಮ್ಮನ್ನು ಆಕರ್ಷಿಸುತ್ತವೆ (ಇವುಗಳ ಅಧ್ಯಯನದಲ್ಲಿ ಎಸ್.ಕೆ. ಜೋಶಿಯವರ ನೆರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಇನ್ನು ಶಾಸನದ ಕೊನೆ ಭಾಗದಲ್ಲಿ ಶಾಪಾಶಯ ಪಾಠವನ್ನು ಚಿತ್ರೀಕರಿಸಲು ರೇಖಾಚಿತ್ರ ಬಳಸಿರುವುದುಂಟು. ಬಳ್ಳಿಗಾವೆಯ ಶಾಸನದ ಕೊನೆಯಲ್ಲಿ ಪ್ರಾಣಿ-ಮಾನವ ಸಂಭೋಗ ಚಿತ್ರ ಕುತೂಹಲಕಾರಿ; ಹಾಗೆಯೇ ಬನವಾಸಿ ಮಧುಕೇಶ್ವರ ಗುಡಿಯ ಪ್ರಾಕಾರಕ್ಕೆ ಜೋಡಿಸಿಟ್ಟ ಶಿಲೆಯೊಂದರಲ್ಲಿ ಸ್ತ್ರೀಯೋರ್ವಳನ್ನು ಪ್ರಾಣಿ ಸಂಭೋಗಿಸುತ್ತಿರುವ ಚಿತ್ರವೂ ಅಷ್ಟೇ ಕುತೂಹಲಕಾರಿಯಾಗಿದೆ. ಇನ್ನು ಊರೂರಲ್ಲಿ ಕಾಣಸಿಗುವ ನಾಗರಕಲ್ಲುಗಳ ಜೊತೆಗೆ ಹಲವೆಡೆ ಇರುವ ಗಡಿಕಲ್ಲುಗಳ ಮೇಲೆ ಲಿಂಗಮುದ್ರೆ, ವಾಮನಮುದ್ರೆ, ಹನುಮಂತ ಮುಂತಾದವನ್ನು ರೇಖಾಕೃತಿಯಾಗಿ ಕೊರೆದಿರುವುದು ವಿಜಯನಗರ ಕಾಲೋತ್ತರದಲ್ಲಿ ಸಾಮಾನ್ಯವಾಗಿದೆ. ತಾಮ್ರಪತ್ರ, ಲೋಹದಕಲಶ, ದೇಗುಲದ ಕೆಲವು ಪೂಜಾ ಸಾಮಗ್ರಿಗಳ ಮೇಲೆ ಸೂಕ್ಷ್ಮ ರೇಖಾಚಿತ್ರ ವಿನ್ಯಾಸಗಳಿರುವುದನ್ನು ನಾವು ಅಲಕ್ಷಿಸುವಂತಿಲ್ಲ. ಈ ಕಾಲಘಟ್ಟದ ನಾಣ್ಯಗಳ ಮೇಲಣ ಚಿಕಣಿ ಚಿತ್ರಗಳೂ ರೇಖಾಪ್ರಧಾನವಾಗಿರುತ್ತವೆ. ತಂತ್ರಗಾರಿಕೆಯ ದೃಷ್ಟಿಯಿಂದ ಇವು ತುಸು ಭಿನ್ನವಾಗಿವೆ. ಇವೆಲ್ಲವನ್ನೂ ವಿವರವಾಗಿ ಅಧ್ಯಯನ ಮಾಡಿದಂತೆಲ್ಲ ವಿಜಯನಗರ ಕಾಲದಲ್ಲಿ 'ರೇಖಾಚಿತ್ರಕಲೆ' ಹೆಚ್ಚು ಜನಪ್ರಿಯವಾಗಿ ಬೆಳೆದಂತೆ, ಸಂಕೀರ್ಣವಾಗಿದ್ದೂ ಕಂಡುಬರುತ್ತದೆ.

ಜಾಗತಿಕವಾಗಿ ಹದಿನೈದನೆಯ ಶತಮಾನದಲ್ಲಿ ರೇಖಾಚಿತ್ರಕಲೆ ಹೆಚ್ಚು ಪ್ರಚಾರಕ್ಕೆ ಬಂದದನ್ನು ನೆನೆದರೆ ನಮ್ಮಲ್ಲಿ ಮೊದಲಿಂದಲೂ ಇದ್ದ ಈ ಕಲೆ ಈ ಕಾಲಘಟ್ಟದಲ್ಲಿ ಹೆಚ್ಚು ಜನಜನಿತ ಏಕೆ ಹೇಗಾಯಿತು? ಎಂಬುದು ಅರ್ಥವಾದೀತು. ಶಿಲೆಯ ಅರಿವಿನ ಜೊತೆಗೆ, ಲೋಹಗಾರಿಕೆ ತಂತ್ರಜ್ಞಾನದ ಬೆಳವಣಿಗೆ ಕೂಡ ಸೇರಿಕೊಂಡು, ಕಸುಬುದಾರರ ಕೈಚಳಕ ಚಿಮ್ಮತೊಡಗಿದ್ದು ಸುಸ್ಪಷ್ಟ. ಅಂತೆಯೇ ವಿಜಯನಗರ ಕಲೆಯ ಸಮಗ್ರ ಅಧ್ಯಯನದ ಹುನ್ನಾರದಲ್ಲಿ ಈ ರೇಖಾಚಿತ್ರ ಭಾಗವನ್ನು ನಾವು ತಪ್ಪದೆ ಗಮನಿಸಬೇಕು ಎಂಬುದೇ ಈ ಸಂಪ್ರಬಂಧದ ಒಟ್ಟು ಆಶಯ.

**ಆಯ್ದ ಆಧಾರ ಗ್ರಂಥಗಳು**


೧. **Vijayanagara Sixth Centenary Volume,** Dharwad, ೧೯೩೬.

೨. Gopalakrishna Murthy S. **The Art of Lepakshi Hyderabad**, ೧೯೬೩.

೩. C. Sivaramamurti, **The Art of India**, Bombay, ೧೯೭೭.

೪. C. Sivaramamurti, **Indian Painting,** N. Delhi, ೧೯೬೮.

೫. C. Sivaramamurti, **South Indian Painting**, New Delhi, ೧೯೬೮.

೬. D.V. Devaraj, C.S. Patil (eds), **Art and Architecture in Karnataka**, Mysore, ೧೯೯೬.

೭. ಹಾ.ಮಾ. ನಾಯಕ (ಸಂ), **ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ**, ಮೈಸೂರು, ೧೯೭೯.


**ಆಕಾರ**


ವಿಜಯನಗರ ಅಧ್ಯಯನ, ಸಂ. ೮ , ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೬೮-೧೭೬.


## ೮. ಕಿನ್ನಾಳದ ರೇಖಾಚಿತ್ರಗಳು

ಕಿನ್ನಾಳದ ರೇಖಾಚಿತ್ರಗಳು[1] ವಿಜಯನಗರ ಚಿತ್ರಕಲೆಯ ಬೆಳವಣಿಗೆಯ ಅವಿಭಾಜ್ಯ ಅಂಗಗಳಾಗಿವೆ. ಈ ರೇಖಾಚಿತ್ರಗಳ ಕುರಿತಾಗಲಿ ಅಥವಾ ಕಿನ್ನಾಳದ ಚಿತ್ರಕಲೆಯನ್ನು ಕುರಿತಾಗಲಿ ಆದ ಅಧ್ಯಯನಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ.[2] ವಿಜಯನಗರ ಚಿತ್ರಶೈಲಿಗೆ ಕಿನ್ನಾಳ ಚಿತ್ರಕಲೆಯ, ಕಲಾವಿದರ ಕೊಡುಗೆಯನ್ನು ಕುರಿತು ಇಂದು ನಾವು ಪುನಃ ಆ ಕಾಲದತ್ತ ಗಮನಹರಿಸುವುದು ಅವಶ್ಯಕವಾಗಿದೆ. ವಿಜಯನಗರ ಚಿತ್ರಕಲೆಯ ಸಂಪೂರ್ಣ ಚಿತ್ರಣ ಕೇವಲ ಹಂಪೆಯಲ್ಲಿನ ಭಿತ್ತಿಚಿತ್ರಗಳಿಂದ ಮಾತ್ರ ದೊರೆಯುವುದಿಲ್ಲ. ಆ ಕಾಲದಲ್ಲಿನ ವಿಭಿನ್ನ ಕೇಂದ್ರಗಳಲ್ಲಿ ಬೆಳವಣಿಗೆ ಹೊಂದಿದ ಮತ್ತು ರಚನೆಗೊಂಡ ಚಿತ್ರಗಳನ್ನು ಕಲಾ ಇತಿಹಾಸದ ಚೌಕಟ್ಟಿನಲ್ಲಿ, ಅವುಗಳ ಶೈಲಿ ತಾಂತ್ರಿಕತೆಗೆ ಹೀಗೆ ಅವುಗಳನ್ನು ಕುರಿತು ಅಮೂಲಾಗ್ರವಾದ ಅಧ್ಯಯನವೊಂದೇ ನಮಗೆ ಆ ಕಾಲದ ಕಲಾ ಚಟುವಟಿಕೆಗಳ ಬಗ್ಗೆ ಒಂದು ಸ್ಪಷ್ಟ ಚಿತ್ರಣ-ಕೊಡಲು ಸಾಧ್ಯ.

ಕಿನ್ನಾಳ,[3] ವಿಜಯನಗರದ ಅಂದರೆ, ಹಂಪೆಯ ಪರಿಸರದಲ್ಲಿನ ಒಂದು ಗ್ರಾಮ. ಇಂದಿಗೂ ಅಲ್ಲಿ ಚಿತ್ರಗಾರ ಕುಟುಂಬಗಳು ವಂಶಪಾರಂಪರಿಕವಾಗಿ ಚಿತ್ರಕಲೆಯ ರಚನೆ ಮತ್ತು ಕರಕುಶಲ ಕೆಲಸಗಳನ್ನು ಮಾಡುತ್ತ ಇವೆ. ಅವರಲ್ಲಿ ಇರುವ ಪ್ರಸ್ತುತ ರೇಖಾಚಿತ್ರಗಳು ಕೆಲವು ತಲೆಮಾರಿಯಿಂದ ಉಳಿದುಕೊಂಡು ಬಂದಿವೆ. ಈ ರೇಖಾಚಿತ್ರಗಳನ್ನು ನಾವು ಗಮನವಿಟ್ಟು ನೋಡಿದಾಗ ಅವುಗಳು ಕೇವಲ ಆಕೃತಿಗಳನ್ನು ರೂಪಿಸುವ ರೇಖೆಗಳಲ್ಲಿ. ಪ್ರಬುದ್ಧವಾದ ಮತ್ತು ತಾಂತ್ರಿಕವಾಗಿ ಉನ್ನತಿ ಹೊಂದಿದ ಚಿತ್ರಶೈಲಿಯ ಗುರುತಾಗಿವೆ. ರೇಖೆಗಳ ವಿನ್ಯಾಸ, ಅವುಗಳಲ್ಲಿನ ಸ್ಪಷ್ಟವಾದ ಮತ್ತು ನೇರವಾದ ಅಭಿವ್ಯಕ್ತ ರೂಪ,  ನುರಿತ ಕಲಾವಿದನ ಕೈಯಿಂದ ಮೂಡಿಬಂದಿವೆ. ಆಕೃತಿಗಳನ್ನು ರಚಿಸುವಾಗ ಬೇರೆ ಬೇರೆ ಆಕೃತಿಗಳಲ್ಲಿನ ಆಂತರಿಕ ಸಂಬಂಧ ತಾಂತ್ರಿಕವಾಗಿ ಕಲಾವಿದನ ಕೈಯಿಂದ ಮೂಡಿಬಂದಿವೆ. ಕಲಾವಿದ ಅವುಗಳನ್ನು ಸಂಯೋಜಿಸಿರುವ ರೀತಿ ಅತ್ಯಂತ ಸ್ಪಷ್ಟವಾಗಿ ಮೂಡಿಬಂದಿದೆ. ವಿಜಯನಗರ ಕಾಲದ ಕಲೆಯ ಅತ್ಯುತ್ತಮ ಮತ್ತು ಪ್ರೌಢವಾದ ಶೈಲಿಯನ್ನು ಹೊಂದಿದ ಕೃತಿಗಳೆಂದರೆ ಹಂಪೆ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯಲ್ಲಿನ ಭಿತ್ತಿಚಿತ್ರಗಳೆ ಎಂದು ಹೇಳಬಹುದು. ಅವುಗಳನ್ನು ಮೂಲ ದೃಷ್ಟಾಂತಗಳನ್ನಾಗಿಟ್ಟು ಕಿನ್ನಾಳದ ರೇಖಾಚಿತ್ರಗಳನ್ನು ತುಲನಾತ್ಮಕವಾಗಿ ನೋಡಿದರೆ ಅವುಗಳಲ್ಲಿನ ಸ್ಪಷ್ಟ ಸಂಬಂಧಗಳನ್ನು ನಾವು ಗುರುತಿಸಬಹುದು. ಈ ರೇಖಾಕೃತಿಗಳನ್ನೂ ಕೇವಲ ಚಿತ್ರಕಲೆಗೆ ನಾವು ಸೀಮಿತಗೊಳಿಸಬೇಕಾಗಿಲ್ಲ. ಶಿಲ್ಪ, ಕೋಷ್ಟ ಮತ್ತು ಗಾರೆ ಕಲೆಯಲ್ಲಿ ಈ ಅರಳಿರುವ  ಆ ಕಾಲದ ಹಲವಾರು ಕಲಾಕೃತಿಗಳನ್ನು ಸಮೀಕರಿಸಿ ನೋಡಿದರೆ ಈ ರೇಖಾಕೃತಿಗಳು ಚಿತ್ರ-ಶಿಲ್ಪಗಳೆರಡಕ್ಕೂ ಮೂಲ ಆಕೃತಿಗಳಾಗಿದ್ದಿರಬಹುದೇ ಎಂಬ ಭಾವನೆ ಬಾರದೇ ಇರುವುದಿಲ್ಲ.

ಕಿನ್ನಾಳದ ರೇಖಾಚಿತ್ರಗಳು ಒಂದು ಅರ್ಥದಲ್ಲಿ ಕೇವಲ ಕಿನ್ನಾಳ ಪರಿಸರಕ್ಕೆ ಸೀಮಿತವಾದ ಕಲಾಕೃತಿಗಳಲ್ಲಿ. ಅಚ್ಚರಿ ಪಡುವಂತೆ ಇವುಗಳದೇ ತದ್ರೂಪಾದ ವರ್ಣಸಹಿತ ಕಲಾಕೃತಿಗಳು ಸುರಪುರದ ಚಿತ್ರಕಲೆಯಲ್ಲಿ ಮತ್ತು ಮೈಸೂರ ಶೈಲಿಯಲ್ಲಿ[4] (ಇದೂ ಕೂಡಾ ವಿಜಯನಗರದ ಚಿತ್ರಶೈಲಿಯಿಂದಲೇ ಬೆಳೆದಿದ್ದು)ಯೂ ಕೂಡಾ ಕೆಲ ಚಿತ್ರಗಳನ್ನು ನಾವು ನೋಡುಬಹುದು ಅಂದರೆ ಇವೆಲ್ಲಕ್ಕೂ ಕಿನ್ನಾಳದ ರೇಖಾಚಿತ್ರಗಳೇ ಮೂಲ ಆಧಾರಗಳು ಎಂದು ಹೇಳುವುದಲ್ಲ. ವಿಜಯನಗರ ಪರಿಸರದಲ್ಲಿ ಅಂದು ಗಾಢವಾಗಿ ಬೇರೂರಿದ್ದ ಕಲಾತ್ಮಕ ಅಂಶಗಳು (Artmotif) ಕಲಾ ಚಟುವಟಿಕೆಗಳು ನಡೆಯುವಾಗ ಇಂತಹ ಅಂಶಗಳು ಚಿತ್ರಗಾರರಿಂದ ಚಿತ್ರಗಾರರಿಗೆ ಹರಡುತ್ತವೆ. ಇಂತಹದೆ ಹಲವಾರು ಉದಾಹರಣೆಗಳನ್ನು ನಾವು ಶಿಲ್ಪಶೈಲಿಯಲ್ಲಿ ನೋಡಬಹುದು.[5] ಪ್ರಸ್ತುತ ಚರ್ಚೆಯಲ್ಲಿರುವ ರೇಖಾಚಿತ್ರಗಳು ಅಂದು ಬಹುಶಃ ಎಲ್ಲೆಡೆ ಅಂದರೆ ಚಿತ್ರಕಲಾ ಚಟುವಟಿಕೆಗಳು ನಡೆಯುವಲ್ಲಿ ವ್ಯಾಪಕವಾಗಿ ಹರಡಿರಬಹುದು. ಅಥವಾ ಇಂತಹದೇ ಸಂಪ್ರದಾಯ ಬೇರೆ ಕಡೆಗಳಲ್ಲಿ ಇದ್ದಿರಬಹುದೆಂದು ತೋರುತ್ತದೆ. ಚಿತ್ರದ ಕಥಾವಸ್ತು ಒಂದೇ ಆಗಿದ್ದು, ಶೈಲಿಯಲ್ಲಿ ಮತ್ತು ನಿರೂಪಣಾ ವಿಧದಲ್ಲಿ ಸ್ವಲ್ಪಮಟ್ಟಿನ ಬದಲಾವಣೆಗಳನ್ನು ಕಲಾವಿದ ತನ್ನ ಅವಶ್ಯಕತೆಗೆ ತಕ್ಕಂತೆ ಸರಿ ಹೊಂದಿಸಿಕೊಂಡು ಅಭಿವ್ಯಕ್ತ ಪಡಿಸಿಕೊಂಡಿರಬಹುದು.

ಕಿನ್ನಾಳದ ಕಲಾವಿದನ ಕೈಯಲ್ಲಿ ಹಲವಾರು ವಿಷಯ ವ್ಯಾಪ್ತಿಗೆ ಸೇರಿದ ಚಿತ್ರಗಳು ಮೂಡಿಬಂದಿವೆ. ದಶಾವತಾರ, ರಾಮಾಯಣ, ಮಹಾಭಾರತ, ಶ್ರೀ ಕೃಷ್ಣಲೀಲೆ ಹೀಗೆ ಅಂದು ಪ್ರಚಲಿತದಲ್ಲಿದ್ದ ಹಲವಾರು ಪೌರಾಣಿಕ ಕಥನಗಳನ್ನು ಚಿತ್ರದ ಅವಶ್ಯಕತೆಗೆ ತಕ್ಕಂತೆ ಸಂಕ್ಷಿಪ್ತಗೊಳಿಸಿ ರೇಖಾಚಿತ್ರಗಳ ಮಾಧ್ಯಮದಲ್ಲಿ ಕಲಾವಿದ ದುಡಿಸಿಕೊಂಡಿದ್ದಾನೆ. ಕಿನ್ನಾಳ ಕಲಾವಿದನ ಕೆಲವು ರೇಖಾಚಿತ್ರಗಳನ್ನು ಈ ಮುಂದೆ ನೋಡಬಹುದಾಗಿದೆ.

**ಚಿತ್ರಗಳ ಚರ್ಚೆ**

ಪ್ರಸ್ತುತ ಚರ್ಚೆಯಲ್ಲಿ ನಾವು ಒಟ್ಟು ಹದಿನಾಲ್ಕು ರೇಖಾಚಿತ್ರಗಳನ್ನು ತೆಗೆದು ಕೊಂಡಿದ್ದೇವೆ. ಇವುಗಳನ್ನು ಕೆಲವು ವಿಷ್ಣುವಿನ ವಿವಿಧ ಆಕೃತಿಗಳನ್ನು-ಅವತಾರಗಳನ್ನು ತೋರಿಸಿದರೆ ಇನ್ನು ಕೆಲವು ಶ್ರೀಕೃಷ್ಣಲೀಲೆ (ಭಾಗವತದ)ಯ ಆಯ್ದ ದೃಶ್ಯಾವಳಿಗಳಾಗಿವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಎಲ್ಲ ಚಿತ್ರಗಳು ಬಹುಶಃ ಒಬ್ಬನೇ ಕಲಾವಿದನಿಂದ ಮೂಡಿಬಂದ ಕೃತಿಗಳಾಗಿವೆ. ಪ್ರತಿಯೊಂದು ಆಕೃತಿಯಲ್ಲಿರುವ ಶೈಲಿಯ ಸಂಬಂಧ ಇದನ್ನು ದೃಢಪಡಿಸುತ್ತದೆ. ರೇಖೆಯ ವಿನ್ಯಾಸ, ಅದರ ಭಾವ ಪೂರ್ಣವಾದ ಮತ್ತು ಅತ್ಯಂತ ಪ್ರಬುದ್ಧವಾದ ಚಿತ್ರಣವೂ ಕೂಡ ಇದಕ್ಕೆ ಪುಷ್ಟಿ ನೀಡುತ್ತದೆ.

ವಿಷ್ಣುವನ್ನು ತೋರಿಸುವ ಚಿತ್ರಗಳು ಮುಖ್ಯವಾಗಿ ಗರುಡಾರೂಢ ಲಕ್ಷ್ಮೀನಾರಾಯಣ (ಚಿತ್ರ ೧), (ಅನಂತಶಯನ ಚಿತ್ರ ೨) ಮತ್ತು ಶ್ರೀದೇವಿ ಭೂದೇವಿಯರ ಸಹಿತನಾಗಿರುವ ಶ್ರೀ ವೆಂಕಟೇಶ್ವರ (ಚಿತ್ರ ೩).

ಗರುಡಾರೂಢ ಲಕ್ಷ್ಮೀನಾರಾಯಣ (ಚಿತ್ರ ೧) ಚಿತ್ರದಲ್ಲಿ ಮನುಷ್ಯಾಕೃತಿಯ ಗರುಡನ ಭುಜದ ಮೇಲೆ ನಾರಾಯಣ ಮತ್ತು ಲಕ್ಷ್ಮೀ ಕುಳಿತಿದ್ದಾರೆ. ನಾರಾಯಣ ತನ್ನ ಎರಡೂ ಕಾಲುಗಳನ್ನು ಗರುಡನ ಎರಡೂ ಭುಜದ ಮೇಲೆ ಹಾಕಿ ಮುಂದೆ ಇಳಿಬಿಟ್ಟಿದ್ದಾನೆ. ನಾರಾಯಣನ ಎಡ ತೊಡೆಯ ಮೇಲೆ ಲಕ್ಷ್ಮೀ ಕುಳಿತಿದ್ದಾಳೆ. ಲಕ್ಷ್ಮೀಯು ತೊಡೆಯ ಮೇಲಿಂದ ಜಾರದಂತೆ ನಾರಾಯಣನು ಅವಳನ್ನು ತನ್ನ ಎಡಗೆಯಿಂದ ಬಳಸಿ ಹಿಡಿದಿದ್ದಾನೆ. ಅವನ ಒಂದು ಕೈ ಅಭಯದಲ್ಲೂ ಮತ್ತೆರಡು ಚಕ್ರ ಶಂಖಗಳನ್ನು ಹಿಡಿದಿದೆ. ಗರುಡನು ತನ್ನೆರಡು ಕೈಗಳಿಂದ ನಾರಾಯಣನ ಎರಡೂ ಪಾದಗಳನ್ನು ಹಿಡಿದಿದ್ದಾನೆ. ಇಲ್ಲಿ ಕಲಾವಿದ ವಾಸ್ತವಿಕತೆಯ ಅರಿವಿನಿಂದ ಈ ಆಕೃತಿಗಳಲ್ಲಿ ನೈಜತೆಯನ್ನು ಬಿಂಬಿಸಿದ್ದಾನೆ. ತನ್ನ ಕೈಗಳಿಂದ ಮೇಲೆ ಕುಳಿತ ಆಕೃತಿ ಹಿಂದೆ ಜಾರತಂತೆ ಹಿಡಿದಂತೆ ತೋರಿಸುವುದು ಮತ್ತು ಲಕ್ಷ್ಮೀಯನ್ನು ನಾರಾಯಣನು ಭದ್ರವಾಗಿ ಹಿಡಿದುಕೊಳ್ಳುವುದು, ಈ ಎರಡೂ ಸನ್ನಿವೇಶಗಳನ್ನು ವಾಸ್ತವಿಕವಾಗಿ ದೃಶ್ಯ ಮಾಧ್ಯಮದಲ್ಲಿ ತೊರಿಸಲು ಬರುವುದು ಕೇವಲ ನುರಿತ-ಕಲಾವಿದನಿಗೆ ಮಾತ್ರ ಸಾಧ್ಯ. ಇಂತಹವೇ ಹಲವಾರು ಉದಾಹರಣೆಗಳು ಬಾದಾಮಿ ಚಾಲುಕ್ಯರ ಶಿಲ್ಪಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಐಹೊಳೆಯ ಕಾವಣಸಹಾಡಿ ಗುಹಾಂತರ ದೇವಾಲಯದಲ್ಲಿನ ಭೂವರಾಹಮೂರ್ತಿಯ ಶಿಲ್ಪದಲ್ಲಿ, ಹುಚ್ಚಪ್ಪಯ್ಯ ಗುಡಿಯ ಒಳಮಾಳಿಗೆಯ ಶಿವ ಪಾರ್ವತಿಯರು ನಂದಿಯ ಮೇಲೆ ಕುಳಿತ ಸನ್ನಿವೇಶ ಮತ್ತು ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ಶಿಲ್ಪದಲ್ಲಿ ಪಾರ್ವತಿಯ ಶಿಲ್ಪ, ಹೀಗೆ ಹಲವಾರು ಉದಾಹರಣೆಗಳು ಗಮನಕ್ಕೆ ಬರುತ್ತವೆ. ಅದರಂತೆ ಚಿತ್ರಗಳಲ್ಲಿ ಹಂಪೆ ವಿರುಪಾಕ್ಷ ದೇವಾಲಯದ ಮಹಾರಂಗಮಂಟಪದ ಭಿತ್ತಿಚಿತ್ರಗಳಲ್ಲಿನ ರತಿಯ ಚಿತ್ರದಲ್ಲಿಯೂ ಇಂತಹದೆ ದೃಶ್ಯ ಹೊಂದಾಣಿಕೆಯನ್ನು ನಾವು ಸ್ಮರಿಸಬಹುದು. ಇಲ್ಲಿ ಕಲಾವಿದನಿಗೆ ಆಕೃತಿಗಳನ್ನು ಚಿತ್ರಿಸುವಾಗ ಅವುಗಳ ಸಂಯೋಜನೆಯ ಸಮಪೂರ್ಣ ತಿಳುವಳಿಕೆ ಇದೆ. ಆದುದರಿಂದಲೆ ಅಸಾಧ್ಯವಾದುವನ್ನು ರೇಖೆಗಳಲ್ಲಿ ಸಾಧ್ಯವಾಗಿಸುವ ಚಾಕಚಕ್ಯತೆ ಅವನಿಗೆ ಕರತಲಾಮಲಕವಾಗಿರುವುದು. ಚಿತ್ರರಚನೆಯಲ್ಲಿ ಹಲವಾರು ಸಾಮಾನ್ಯ ಅಂಶಗಳನ್ನು ಎಲ್ಲ ಚಿತ್ರಗಳಲ್ಲೂ ಅವನು ಪುನಃ ಪುನಃ ಉಪಯೋಗಿಸಿದ್ದಾನೆ. ಉದಾಹರಣೆಗೆ ಚಿಕ್ಕದಾಗಿ ಹುರಿದಿರಿವಿದ ಮೀಸೆ ಮತ್ತು ಕೆನ್ನೆಯ ಮೇಲೆ ಉದ್ದವಾಗಿ ಮತ್ತು ಆಕರ್ಷಕವಾಗಿ ಕಾಣುವ ಕೂದಲಿನ ಕಟ್ಟು (Side Lock) ಮತ್ತು ಮುಖದ ಹಾವಭಾವಗಳನ್ನು ತದ್ರೂಪಾಗಿ ಬಳಸಿದ್ದಾನೆ.

ಚಿತ್ರ ೨ ಮತ್ತು ೩, ಎರಡೂ ರೇಖಾಚಿತ್ರಗಳು ರಚನಾದೃಷ್ಟಿಯಿಂದ ಒಂದೇ ಗುಂಪಿಗೆ ಸೇರುತ್ತವೆ. ಈ ಮೊದಲಿನ ಚಿತ್ರಗಳಲ್ಲಿ ಆಕೃತಿಗಳ ಮುಖಗಳು ಒಂದೇ ಕಡೆಗೆ ಇದ್ದೂ ಇಲ್ಲಿ ಎದುರಿನಿಂದ ನೋಡಿದಾಗಿನ ಹಾಗೆ ಚಿತ್ರಿಸಲಾಗಿದೆ.

ಚಿತ್ರ ೨ರಲ್ಲಿ ಅನಂತಶಯನನ್ನು ಐದು ಹೆಡೆ ಶೇಷಸರ್ಪದ ಮೇಲೆ ಮಲಗಿದಂತೆ ತೋರಿಸಲಾಗಿದೆ. ಇಲ್ಲಿ ಅನಂತನು ಮಲಗಿರುವುದು ಅಷ್ಟೊಂದು ನೈಜವಾಗಿಲ್ಲ. ಬದಲಾಗಿ ಸಾಂಕೇತಿಕವಾಗಿ ನಾಟಕೀಯವಾದ ಅಂಶವನ್ನು ಉಪಯೋಗಿಸಿದ್ದಾನೆ. ಇಲ್ಲಿ ಅನಂತನಿಗೆ ಎರಡೇ ಕೈಗಳು. ಬಳಗೈಯನ್ನು ಮೇಲಕ್ಕೆ ಮಡಿಚಿದಂತೆ ತೋರಿಸಿ ಎಡಗೈಯನ್ನು ಕಾಲಮೇಲೆ ಆರಾಮವಾಗಿ ಇಟ್ಟ ರೀತಿಯಲ್ಲಿ ತೋರಿಸಲು ಯತ್ನಿಸಿದೆ. ಶೇಷಸರ್ಪವನ್ನು ಸ್ವಲ್ಪ ನೈಜತೆಯಿಮದ ತೋರಿಸುವ ಪ್ರಯತ್ನವಿದೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಹಲವಾರು ದೇವಾಲಯಗಳು ಅನಂತನಿಗೋಸ್ಕರವೇ ನಿರ್ಮಾಣವಾದದ್ದುನ್ನು ನಾವು ನೋಡಬಹುದು. ಅಲ್ಲದೇ ಅಲ್ಲಿ ಇಂತಹದೇ ಅಥವಾ ಚತುರ್ಬಾಹುಗಳುಳ್ಳ ಶಿಲ್ಪವನ್ನು ರಚಿಸಿ ಪ್ರತಿಷ್ಠಾಪಿಸಿರುವುದು ಹಲವಾರು ಉದಾಹರಣೆಗಳಿಂದ ತಿಳಿದುಬರುತ್ತದೆ.

ಚಿತ್ರ ೩ರಲ್ಲಿ ಶ್ರೀವೆಂಕಟೇಶ್ವರ ಕಟ್ಯಾವಾಂಚಿತ ಮತ್ತು ತರ್ಪಣ ಮುದ್ರೆಯಲ್ಲಿ ಸ್ಥಿತಿಯಲ್ಲಿ ನಿಂತಿದ್ದಾನೆ. ಮೇಲೆನ ಎರಡೂ ಕೈಗಳಲ್ಲಿ ಚಿತ್ರ ಮತ್ತು ಶಾಖಗಳನ್ನು ಹಿಡಿದಿದ್ದಾನೆ. ಎರಡೂ ಬದಿಯಲ್ಲಿ ತದ್ರೂಪಾದ ಒಂದರ ನಕಲು ಇನ್ನೊಂದು ಎಂಬಂತೆ ಇರುವ ಶ್ರೀದೇವಿ ಮತ್ತು ಭೂದೇವಿಯರನ್ನು ಅಥವಾ ಲಕ್ಷ್ಮೀ-ಪದ್ಮಾವತಿಯರನ್ನು ನೋಡಬಹುದು. ಎಲ್ಲ ಆಕೃತಿಗಳನ್ನೂ ಪದ್ಮದ ಮೇಲೆ ನಿಂತಂತೆ ತೋರಿಸಲಾಗಿದೆ.

ದಶಾವತಾರದ[6] ಚಿತ್ರಗಳಲ್ಲಿ ಕೂರಮ್ಮವತಾರ, ವರಾಹ ಅವತಾರ, ರಾಮಾವಾತಾರ, ಬಲರಾಮ ಅವತಾರ ಮತ್ತು ಬೌದ್ಧ ಅವತಾರಗಳನ್ನು ತೋರಿಸಲಾಗಿದೆ. ಕೂರ್ಮಾವತಾರದ ಚಿತ್ರದಲ್ಲಿ (ಚಿತ್ರ ೪) ಒಂದೆಡೆ ಅರ್ಧ ಕೂರ್ಮದ ದೇಹವಿರುವ ವಿಷ್ಣುವನ್ನು ತೋರಿಸಿದೆ. ಮತ್ತೊಂದೆಡೆಗೆ ರಾಕ್ಷಸರು ಮತ್ತು ದೇವತೆಗಳು ಆದಿಶೇಷನನ್ನು ಮಂದಾರ ಪರ್ವತಕ್ಕೆ ಹಗ್ಗದಂತೆ ಕಟ್ಟಿ ಸಮುದ್ರಮಥನವನ್ನು ಮಾಡುತ್ತಿದ್ದಾರೆ. ಇದು ಅವತಾರವನ್ನು ನಿರ್ದೇಶಿಸುವ ಕಥಾನಕ ಚಿತ್ರವೂ ಹೌದು. ಈ ಚಿತ್ರದಲ್ಲಿ ಸಾಂಕೇತಿಕವಾಗಿ ಸಮುದ್ರ ಮಥನವನ್ನು ಕೂರ್ಮಾವತಾರವನ್ನು ತೋರಿಸಲು ಉಪಯೋಗಿಸಿದಂತೆ ತೋರುತ್ತದೆ. ಏಕೆಂದರೆ, ಕೂರ್ಮವನ್ನು ಮಂದಾರದ ಕೆಳಗೆ ಆಸರೆಯಾಗಿ ತೋರಿಸಬೇಕಾಗಿತ್ತು ಬದಲಾಗಿ ಬೇರೆಯಾಗಿಯೇ ತೋರಿಸಲಾಗಿದೆ.

ವರಾಹ ಅವತಾರದಲ್ಲಿ ಸಹ (ಚಿತ್ರ ೫) ಕಲಾವಿದ ಸಾಮಾನ್ಯವಾಗಿ ಶಿಲ್ಪಗಳಲ್ಲಿ ಕಂಡು ಬರುವ ಹಿರಣ್ಯಕ್ಷನನ್ನು ಪಾತಾಳದಲ್ಲಿ ಸೋಲಿಸಿ ಭೂದೇವಿಯನ್ನು ಮೇಲಿಕ್ಕೆ ತಂದ ವಿಜಯೋತ್ಸಾಹದ ದವೀರಮೂರ್ತಿಯಂತೆ ತೋರಿಸದೆ, ಪಾತಾಳದಲ್ಲಿ ವರಾಹದೇವರಿಗೂ ಮತ್ತು ಹಿರಣ್ಯಾಕ್ಷನಿಗೂ ನಡೆದ ಕಾಳಗದ ಕೃಶ್ಯವನ್ನು ತೋರಿಸಿದ್ದಾನೆ. ಬಹುಶಃ ಇದು ಕಲಾವಿದನಿಗೆ ಅವತಾರಗಳ ಕಥೆಗಳ ಬಗ್ಗೆ ಇದ್ದ ಜ್ಞಾನವನ್ನು ತೋರಿಸುತ್ತದೆ. ಇಂತಹ ಚಿತ್ರಗಳು ಅತ್ಯಂತ ವಿರಳವೇ ಎಂದು ಹೇಳಬಹುದು. ಚಿತ್ರದಲ್ಲಿ ಚತುರ್ಬಾಹು ಹಸ್ತನಾದ ವರಾಹ ಗದೆ ಗುರಾಣಿ ಹಿಡಿದು, ಶಂಖ-ಚಕ್ರಧರನಾಗಿ, ಹಿರಣ್ಯಾಕ್ಷನೂ  ಕೂಡಾ ಗದೆ ಗುರಾಣಿಗಳನ್ನು ಹಿಡಿದು ಎದುರು ಬದುರಾಗಿ ಯುದ್ಧ ಮಾಡುತ್ತಿದ್ದಾರ. ಇಬ್ಬರದೂ ಮುಮ್ಮುಖ ಚಾಲನೆ. ಅವರ ಆಕೃತಿಗಳು ಯುದ್ಧದಲ್ಲಿ ತಲ್ಲೀನರಾದ ಹಾವ-ಭಾವವನ್ನು ಕಲಾವಿದ ಅವರು ನಿಂತ ಭಂಗಿಯನ್ನು ದುಡಿಸಿಕೊಂಡು ತೋರಿಸಿದ್ದಾನೆ. ಗಾಳಿಯಲ್ಲಿ ಹಾರುತ್ತಿರುವಂತೆ ತೋರಿಸಲಾದ ಉತ್ತಿರೀಯ ಅವರ ಕೈಸನ್ನೆಗಳು ಇದಕ್ಕೆ ಪೂರಕವಾಗಿವೆ.

ಶ್ರೀರಾಮ, ಲಕ್ಷ್ಮಣ, ಸೀತಾ ಮತ್ತು ಹನುಮಂತರನ್ನೂ ತೋರಿಸುವ ಚಿತ್ರ ೬ರಲ್ಲಿ ಮಧ್ಯದಲ್ಲಿ ಶ್ರೀರಾಮನನ್ನು ಕೋದಂಡ ಧರನಾಗಿ ಶ್ರೀಕೃಷ್ಣನು ನಿಲ್ಲುವ ಭಂಗಿಯಲ್ಲಿ ಬಲಗಾಲನ್ನು ಎಡಗಾಲ ಮುಂದೆ ಮೇಲಕ್ಕೆತ್ತಿ ಮಡಿಸಿ ನಿಂತಿದ್ದಾನೆ. ಅವನ ಬಲಕ್ಕೆ ಲಕ್ಷ್ಮಣ ಮತ್ತು ಎಡಕ್ಕೆ ಸೀತಾ ಮತ್ತು ಹನುಮಂತರು ಕೈಮುಗಿದು ನಿಂತಿದ್ದಾರೆ. ಈ ಆಕೃತಿಗಳೆಲ್ಲವೂ ಶ್ರೀರಾಮನೆಡೆ ಕೇಂದ್ರೀಕೃತವಾದಂತೆ ನೋಡುತ್ತ ನಿಂತಿವೆ. ರಾಮನ ಮುಖ ಅನಂತ, ವೆಂಕಟೇಶ್ವರನನ್ನು ಜ್ಞಾಪಕಕ್ಕೆ ತಂದರೆ, ಲಕ್ಷ್ಮಣ ಸೀತಾರ ಆಕೃತಿಗಳು ಲಕ್ಷ್ಮೀನಾರಾಯಣರನ್ನು ಜ್ಞಾಪಕಕ್ಕೆ ತರುತ್ತವೆ. ಇನ್ನು ವಿಶೇಷವಾಗಿ ಹನುಮಂತನ ಆಕೃತಿಯಲ್ಲಿ ವಿಜಯನಗರ ಕಾಲದ ಯಾವುದೇ ಹನುಮಂತನ ಶಿಲ್ಪದೊಂದಿಗೆ ಹೋಲಿಸಬಹುದು. ಅಲ್ಲದೆ ಹಂಪೆಯ ಭಿತ್ತಿಯಲ್ಲಿನ ಚಿತ್ರದಲ್ಲೂ ಹನುಮಂತನನನ್ನು ಇದೇ ಶೈಲಿಯಲ್ಲಿ ತೋರಿಸಿರುವುದು. ಸುರಪುರದಲ್ಲಿನ "ಗರುಡಾದ್ರಿ" ಚಿತ್ರಗಳಲ್ಲಿನ ಶ್ರೀರಾಮ ಪಟ್ಟಾಭಿಷೇಕದ ಚಿತ್ರಗಳಲ್ಲೂ ಇದೇ ತೆರನಾದ ತದ್ರೂಪಾದ ಆಕೃತಿ ಕಂಡುಬರುತ್ತದೆ. ಹನುಮಂತನ ಈ ಭಂಗಿ ಅಂದು ಅತ್ಯಂತ ಜನಪ್ರಿಯವಾದ ಆಕೃತಿಯಾಗಿತ್ತೆಂದು ತೋರುತ್ತದೆ.[7]

ಬಲರಾಮನ ಅವತಾರದ (ಚಿತ್ರ ೭) ಬಹುಶಃ ಬೇರೆ ಇನ್ನಾವುದೇ ಚಿತ್ರಗಳಿಗಿಂತ ವಿಭಿನ್ನವಾಗಿದೆ. ಚಿತ್ರದ ಒಂದು ಬದಿಯಲ್ಲಿ ಬಲರಾಮ ತನ್ನ ಹಲಾಯುಧವನ್ನು ಹಿಡಿದು ಮುಂದುಗಡೆ ಯಾರನ್ನೋ ಶಿಕ್ಷಿಸಲು ಹೊರಟದಂತೆ ಇದೆ. ಅವನಿಗೆದುರಾಗಿ ಅರ್ಜುನ ಕೈಮುಗಿದು ವಿನಮ್ರನಾಗಿ ಬಲರಾಮನನ್ನು ಶಾಂತಗೊಳಿಸುವ ವಿಧದಲ್ಲಿ ನಿಂತಿದ್ದಾನೆ. ಚಿತ್ರದಲ್ಲಿ ಆಕೃತಿಗಳೆರಡೇ ಇದ್ದರೂ- ಹಿನ್ನೆಲೆಯಲ್ಲಿನ ಕಥಾನಕ ವಿಷಯ ಅತ್ಯಂತ ಮುಖ್ಯವಾದದ್ದು. ಇಲ್ಲಿ ಮಹಾಭಾರತದ ಮುಖ್ಯ ಘಟನೆಯೊಂದರ ನಿರೂಪಣೆ ಇದೆ.

ತಕ್ಷಣದಲ್ಲಿ ಸ್ಪಷ್ಟವಾಗಿ ಈ ಚಿತ್ರದಿಂದ ಇದರ ಉದ್ದೇಶ ತಿಳಿಯದಿದ್ದರೂ ಬಹುಶಃ ತನ್ನದ ಆಪ್ತ ಶಿಷ್ಯ ದುರ್ಯೋಧನ ಮಲ್ಲಯುದ್ಧದಲ್ಲಿ ಕೃಷ್ಣನ ಯುಕ್ತಿಯಿಂದ ಭೀಮನ ಕೈಯಲ್ಲಿ ಸೋಲುತ್ತಿರುವ ಸಂದರ್ಭ ಬಂದಾಗ, ಬಲರಾಮ ತಾನೇ ಎದ್ದು ಭೀಮನತ್ತ ನುಗ್ಗುತ್ತಿರುವ ದೃಶ್ಯ ಆಗಿದ್ದು, ಅವನನ್ನು ಶಾಂತನಾಗುವಂತೆ ಅರ್ಜುನನು ಪ್ರಾರ್ಥಿಸುವ ಸನ್ನಿವೇಶ ಇದಾಗಿರಬಹುದೆಂದು ತಿಲಿಯಬಹುದು. ಇಬ್ಬರ ಮಧ್ಯ ಕೋಟೆ ಮತ್ತು ಗುಡ್ಡಗಳು ಸಾಂಕೇತಿಕವಾಗಿ ಚಿತ್ರ ಅವಕಾಶದಲ್ಲಿ ಮೂಡಿವೆ.

ಬೌದ್ಧವತಾರದಲ್ಲಿ (ಚಿತ್ರ ೮) ಮೂರು ಆಕೃತಿಗಳ ಸಂಯೋಜನೆ ಇದೆ. ಸರ್ವಾಲಂಕೃತನಾಗಿ ಮುಂದಿನ ಆಕೃತಿಗಲಿಗೆ ಸಾಂಕೇತವನ್ನು ನೀಡುತ್ತಿರುವಂತೆ ನಿಂತಿದ್ದಾನೆ ಬುದ್ಧ. ಮುಂದೆ ಕೈಮುಗಿದು ನಿಂತಿರುವ ಎರಡು ಆಕೃತಿಗಳು ದೇವತೆಗಳನ್ನು ನಿರ್ದೇಶಿಸುತ್ತವೆ. ಇವೆರಡೂ ಆಕೃತಿಗಳು ಕೊಂಚ ಬದಲಾವಣೆಯೊಡನೆ ಭಾಗಶಃ ತದ್ರೂಪಾಗಿಯೇ ಇವೆ. ಬುದ್ಧನನ್ನು ಉಷ್ಣೀಪದೊಂದಿಗೆ ಮುನಿಯ ಹಾಗೆ ಕಲಾವಿದ ಚಿತ್ರಸಿದ್ದಾನೆ. ಮೂರು ಆಕೃತಿಗಳಲ್ಲಿ ಸಂಭಾಷಣೆ ನಡೆಸುತ್ತಿರುವ ದೃಶ್ಯಕ್ಕೆ ಸಂಬಂಧವಿದೆ.

ಹಯಗ್ರೀವನನ್ನು (ಚಿತ್ರ ೯) ಕೂಡಾ ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ. ವಿಷ್ಣುವಿನದೇ ಅವತಾರವಾದ ಹಯಗ್ರೀವನಲ್ಲಿ ಮುಖದ ಭಾಗ ಅತ್ಯಂತ ನೈಜವಾಗಿ ಮೂಡಿ ಬಂದಿದೆ. ಕೈಗಳಲ್ಲಿ ಖಡ್ಗವನ್ನು ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಇನ್ನೆರಡು ಕೈಗಳಲ್ಲಿ ಚಕ್ರ ಮತ್ತು ಶಂಕಗಳಿವೆ. ಇಲ್ಲಿ ಖಡ್ಗವನ್ನು ಚಕ್ರದ ಹಿಂದೆ ಬರುವಂತೆ ತೋರಿಸಲಾಗಿದೆ. ಒಂದು ವೇಳೆ ಅದರ ಮುಂದೇ ತೋರಿಸಿದರೆ ಚಕ್ರದ ಭಾಗ ಮರೆ ಆಗುತ್ತದೆಂಬ ತಿಳುವಳಿಕೆಯಿಮದಲೇ ಕಲಾವಿದ ಈ ಜಾಣ್ಮೆಯನ್ನು ಉಪಯೋಗಿಸಿರುವುದು.

ಶ್ರೀಕೃಷ್ಣ ಬಾಲಲೀಲೆಗೆ ಸಂಬಂಧಿಸಿದಂತೆ ಕೃಷ್ಣನನ್ನು ವಿವಿಧ ಆಕೃತಿಗಳಲ್ಲಿ ತೋರಿಸಲಾಗಿದೆ. ಅವನ ಬಾಲ್ಯದಲ್ಲಿನ ಅತ್ಯಂತ ಪ್ರಮುಖ ಘಟನೆಗಳನ್ನು ಆಯ್ದುಕೊಂಡು ಇಲ್ಲಿ ಚಿತ್ರ ರಚನೆ ಮಾಡಲಾಗಿದೆ. ಕಾಳೀಮರ್ಧನ (ಚಿತ್ರ ೧೦) ಚಿತ್ರ, ದೃಷ್ಟ ಕಾಳಿಂಗಸರ್ಪವನ್ನು ಸೋಲಿಸಿ ಅದರ ಮೇಲೆ ಕೃಷ್ಣ ನರ್ತನ ಮಾಡಿದ ದೃಶ್ಯವನ್ನು ಚಿತ್ರಿಸಲಾಗಿದೆ. ಚಿತ್ರಕಲೆಯಲ್ಲಿ ಕಾಳಿಯ ದಮನ, ಕಾಳೀಯ ಮರ್ದನ ಚಿತ್ರಗಳು ಅತ್ಯಂತ ಜನಪ್ರಿಯವಾಗಿ ಮೂಡಿಬಂದಿವೆ. ಪ್ರಸ್ತುತ ಚಿತ್ರದಲ್ಲಿ ಕೃಷ್ಣ ಎಡಗೈಯಲ್ಲಿ ಸರ್ಪದ ಬಾಲವನ್ನು ಹಿಡಿದು ಬಲಗಾಲನ್ನು ಕೊಂಚ ಮೇಲೆಕ್ಕೆತ್ತಿ ಅದರ ಹೆಡೆಯ ಮೇಲೆ ಕಾಲಿಡುವ ತೆರದಲ್ಲಿ ಅಥವಾ ನರ್ತನ ಮಾಡುವ ತೆರದಲ್ಲಿ ನಿಂತಿದ್ದಾನೆ. ಬಾಲಕನಾಗಿರುವ ಕೃಷ್ಣನಿಗೆ ಮೀಸೆಗಳನ್ನು ತೋರಿಸಿಲ್ಲ. ಬದಲಾಗಿ ಅವನ ಮುಖ ಮತ್ತು ದೇಹದ್ಲಲಿ ಬಾಲ್ಯದ ಕ್ರಾಂತಿಯನ್ನು ತೋರಿಸಲು ಯತ್ನಿಸಲಾಗಿದೆ. ಚಿತ್ರ ೧೧, ೧೨ರಲ್ಲಿಯೂ ಕೃಷ್ಣನನ್ನೇ ತೋರಿಸಲಗಿದೆ. ಚಿತ್ರ ೧೧ರಲ್ಲಿ ಆಲದೆಲೆಯ ಮೇಲೆ ಇರುವಂತೆ, ಹಿನ್ನೆಲೆಯಲ್ಲಿ ಸುಂದರ ಸುಳುವಿನ ಬಳ್ಳಿಗಳ ಚಿತ್ರಣವಿದೆ. ಅದೇ ರೀತಿ ಚಿತ್ರ ೧೨ರಲ್ಲಿ ಕೃಷ್ಣ ನಿಂತಿರುವ ದೃಶ್ಯವಿದೆ.

ಚಿತ್ರ ೧೩, ೧೪ ಎರಡೂ ಚಿತ್ರಗಳು ಕೃಷ್ಣನ ಬಾಲ್ಯದ ಲೀಲೆಗಳಿಗೆ ಸಂಬಂಧಿಸಿವೆ. ಚಿತ್ರ ೧೩ರಲ್ಲಿ ತುಂಟ ಕೃಷ್ಣನನ್ನು ಯಶೋಧೆಯು ಕುಟ್ಟುವ ಕಲ್ಲಿಗೆ ಅವನನ್ನು ಕಟ್ಟಿಹಾಕಿರುವ ದೃಶ್ಯವಿದೆ. ಕೈಯಲ್ಲಿ ಚಿಕ್ಕ ಕೋಲನ್ನು ಹಿಡಿದು ಅವನನ್ನು ಗದರಿಸಲು ನಿಂತಿರುವಂತೆ ನಿಂತಿದ್ದಾಳೆ. ಅವಳ ಹಿಂದೆಯೇ ಒಂದು ಮರದ ಚಿತ್ರವಿದ್ದು ಅದರಲ್ಲಿ "ನಳಕೂಟ-ಜಯಂತ" ಎಂಬ ಶಿರೋನಾಮೆ ಇರುವ ಈರ್ವರು ವ್ಯಕ್ತಿಗಳನ್ನು ತೋರಿಸಿದೆ. ಇವರು ಬಹುಶಃ ಕೃಷ್ಣನನ್ನು ಮುಗಿಸಲು ಬಂದ ರಾಕ್ಷಸರೇ ಇರಬೇಕು. ವಾಸ್ತವದಲ್ಲಿ – ರಾಕ್ಷಕ ರೂಪದ ಯಮಳಾರ್ಜುನ ವೃಕ್ಷಗಳನ್ನು ಕೃಷ್ಣ ತನ್ನ ಬಾಲ್ಯದಲ್ಲದಿ ಸಂಹರಿಸಿದೆ ಎಂದು ಬಾಲಲೀಲೆಯಲ್ಲಿ ಉಲ್ಲೇಖಿತವಾಗಿದೆ. ಆದರೆ ಇಲ್ಲಿ ವೃಕ್ಷವೊಂದೆ ಇದ್ದು, ಅದರಲ್ಲಿ ವ್ಯಕ್ತಿಗಳು ಕೈಮುಗಿದು ಕೃಷ್ಣನ ಮಹಾನ್ ಶಕ್ತಿಯನ್ನು ನೋಡುತ್ತಿದ್ದಾರೆ. ಕೃಷ್ಣನನ್ನು ಈ ಹಿಂದಿನ ಆಕೃತಿಗಳಲ್ಲಿದ್ದಂತೆಯೇ ತೋರಿಸಲಾಗಿದೆ. ಇಲ್ಲಿ ಮರ ಕೇವಲ ಸಾಂಕೇತಿಕವಾಗಿ ಚಿತ್ರಿತವಾಗಿದೆ.

ಕೊನೆಯದಾಗಿ ಗೋಪಿಕಾ ವಸ್ತ್ರಾಪಹರಣ, ಚಿತ್ರ ೧೪ರಲ್ಲಿ ಕೃಷ್ಣನನ್ನು ಯುವ ವಯಸ್ಕನಾಗಿರುವಂತೆ ತೋರಿಸಲಾಗಿದೆ.ದ ಮರವನ್ನು ಸಾಂಕೇತಿಕವಾಗಿ ಚಿತ್ರದ ಮಧ್ಯದ್ಲಿ ತೋರಿಸಲಾಗಿದ್ದು ವಿವಸ್ತ್ರರಾದ ಗೋಪಿಕೆಯರು ಕೃಷ್ಣನನ್ನು ತಮ್ಮಸದ ಉಡುಗೆಗಳನ್ನು ಮರಳಿಸುವಂತೆ ಪ್ರಾರ್ಥಿಸುವ ತೆರದಲ್ಲಿ ವಿವಿಧ ಸಂಜ್ಞೆಗಳಲ್ಲಿ ಇದ್ದಾರೆ. ಕೃಷ್ಣ ಸಹಜವಾಗಿ ನೆಲದ ಮೇಲೆ ನಿಂತಾಗ ಇರುವ ಹಾಗೆ ಮರದ ಮೇಲೆ ನಿಂತಿದ್ದಾನೆ. ಎರಡೂ ಕೈಗಳನ್ನೂ ಅಗ್ಗಲಿಸಿ ಅವುಗಳಲ್ಲಿ ವಸ್ತ್ರಗಳನ್ನೂ ಹಿಡಿದು ಗೋಪಿಕೆಯರಿಗೆ ತೋರಿಸುವ ಹಾಗೆ ಇದೆ ಈ ದೃಶ್ಯ. ಗೋಪಿಕೆಯರ ಆಕೃತಿಗಳಲ್ಲಿ ಕೊಂಚ ಜಡತ್ವ ಇದೆ. ರೇಖೆಗಳಲ್ಲಿ ನವಿರಾದ ಮತ್ತು ಕಾವ್ಯಮಯವಾದ ಹರಿವು ಇಲ್ಲ. ಆದರೆ ಮುಖದ ಭಾಗವನ್ನು ತೋರಿಸುವಾಗ ತದ್ರುಪಾದ ಸಮಾನತೆಯನ್ನು ಅಭಿವ್ಯಕ್ತಿಪಡಿಸಿದ್ದಾನೆ. ಕೃಷ್ಣಲೀಲೆಯ ಇಂತಹ ಹಲವಾರು ಆಕೃತಿಗಳು ಹಂಪೆಯ ದೇವಾಲಯಗಳಲ್ಲಿ ಶಿಲ್ಪರೂಪದಲ್ಲಿ ಕೆತ್ತಲ್ಪಟ್ಟಿವೆ. ಅಲ್ಲದೇ ವಿರೂಪಾಕ್ಷ ದೇವಾಲಯದ ಮಹಾರಂಗಮಂಟಪದ ಭಿತ್ತಿಯಲ್ಲಿರುವ ಯತಿಗಳ

ಮೆರವಣಿಗೆ ಚಿತ್ರದ ಒಂದು ತುದಿಯಲ್ಲಿ ಪ್ರತ್ಯೇಕವಾಗಿ ಗೋಪಿಕಾ ವಸ್ತ್ರಾಪಹರಣವನ್ನು ತೋರಿಸುವ ಚಿತ್ರವಿರುವುದುನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವಿಜಯನಗರ ಕಾಲದಲ್ಲಿ ಮತ್ತು ನಂತರದಲ್ಲೂ ಭಾಗವತ ಮತ್ತು ಕೃಷ್ಣಲೀಲೆ ಹಾಗೂ ಶ್ರೀವೈಷ್ಣವ ಪಂಥಕ್ಕೆ ಸೇರಿದ ಚಿತ್ರಗಳೇ ಹೆಚ್ಚು ಜನಪ್ರಿಯವಾಗಿ ಚಿತ್ರಿತವಾದದ್ದೂ ಕಂಡುಬರುತ್ತದೆ. ಶ್ರೀಕೃಷ್ಣದೇವರಾಯನ ಕಾಲದಿಂದ ವಿಜಯನಗರದಲ್ಲಿ ಭಾಗವತ/ವೈಷ್ಣವ ಧರ್ಮಕ್ಕೆ ಹೆಚ್ಚಿನ ಒಲವು ದೊರೆತಿರುವುದರಿಂದ ಅಂತಹ ಒಂದು ಬೆಳವಣಿಗೆಯನ್ನು ನಾವು ನೋಡಬಹುದು.

**ಉಪಸಂಹಾರ**

ಕಿನ್ನಾಳದ ರೇಖಾಚಿತ್ರಗಳು ರಚನೆಯಾದ ಕಾಲದ ಬಗ್ಗೆ ಇಂದು ನಮಗೆ ಸ್ಪಷ್ಟವಾದ ದಾಖಲೆಗಳಿಲ್ಲ. ಅವುಗಳ ಅನುಪಸ್ಥಿತಿಯಲ್ಲಿ ಕೇವಲ ಶೈಲಿಯ ಆಧಾರದ ಮೇಲಿಂದಲೇ ನಾವು ಇವುಗಳ ಕಾಲಮಾನವನ್ನು ನಿರ್ಧರಿಸಬೇಕಾಗಿದೆ. ಹಂಪೆಯ ವಿರುಪಾಕ್ಷ ದೇವಾಲಯದಿಂದ ಮಹಾರಂಗಮಂಟಪದ ಒಳಮಾಳಿಗೆಯ ಚಿತ್ರಗಳನ್ನೇ ಇಲ್ಲಿ ನಾವು ಮೂಲ ದಾಖಲೆಗಳಾಗಿಟ್ಟುಕೊಂಡು ಪ್ರಸ್ತುತ ಚಿತ್ರಗಳನ್ನು ನೋಡಬೇಕಾಗುತ್ತದೆ. ಹಂಪೆ ಭಿತ್ತಿಚಿತ್ರಗಲ ಕಾಲದ ಬಗ್ಗೆ ಹಲವಾರು ವಿದ್ವಾಂಸ ಮಹನೀಯರು ವಿಭಿನ್ನವಾದ ನಿಲುವುಗಳನ್ನೇ ವ್ಯಕ್ತಪಡಿಸಿದ್ದಾರೆ. ಶಿವರಮಮೂರ್ತಿಯವರು[8] ಇವುಗಳನ್ನು ೧೫ನೇ ಶತಮಾನಕ್ಕೆ ಸೇರಿಸಿದರೆ, ಮತ್ತೊಬ್ಬ ಕಲಾ ಇತಿಹಾಸ ತಜ್ಞೆದಲ್ಲಾಪಿಕೋಲಾರ[9]ರವರು ಇವುಗಳ ಕಾಲವನ್ನು ೧೮-೧೯ನೇ ಶತಮಾನಕ್ಕೆ ಸೇರಿಸಿದ್ದಾರೆ. ಇಲ್ಲಿ ಚಿತ್ರಗಳ ಕಾಲಮಾನವನ್ನು ನಿರ್ಧರಿಸುವಾಗಿನ ವಿಭಿನ್ನ ವೈಪರಿತ್ಯವನ್ನು ನಾವು ಗಮನಿಸಬಹುದು. ಶಿವರಾಮಮೂರ್ತಿಯವರಿಗೆ ಭಿತ್ತಿಚಿತ್ರಗಳಿರುವ ಮಹಾರಂಗಮಂಟದ ನಿರ್ಮಾಣದ ಕಾಲ (ಕ್ರಿ.ಶ. ೧೫೧೦)ದ ಬಗ್ಗೆ ಗಮನವೇ ಇಲ್ಲದಿರುವುದು ತಿಳಿದುಬರುತ್ತದೆ. ಅವರ ಪ್ರಕಾರ, ಪ್ರಸ್ತುತ ಭಿತ್ತಿಚಿತ್ರಗಳು ಮಹಾರಂಗಮಂಟಪದ ನಿರ್ಮಾಣಕ್ಕೆ ಮೊದಲೇ ರಚನೆ ಆದಂತೆ ಆಯಿತು. ಇನ್ನೂ ದಲ್ಲಾಪಿಕೋಲಾ ಅವರು ಇವುಗಳು ಶೈಲಿಯಲ್ಲಿ ೧೮-೧೯ನೇ ಶತಮಾನದ ಭಿತ್ತಿಚಿತ್ರಗಳನ್ನು ಹೋಲುತ್ತವೆ. ಎಂದು ತಿಳಿಸುತ್ತಾರೆ. ಅವರೂ ಕೂಡಾ ಪ್ರಸ್ತುತ ಚಿತ್ರಗಳನ್ನು ೧೮-೧೯ನೇ ಶತಮಾನದಲ್ಲಿ ರಚನೆಯಾದ ಮೈಸೂರು ಭಾಗದ ಭಿತ್ತಿಚಿತ್ರಗಳನ್ನು ತುಲನಾತ್ಮಕವಾಗಿ ಗಮನಿಸದೇ ಇರುವುದು ಸ್ಪಷ್ಟವಾಗುತ್ತದೆ. ಅಲ್ಲದೇ ಅವರ ಪ್ರಕರವೇ ನಾವು ಇವುಗಳ ಕಾಲವನ್ನು ನಿರ್ಧರಿಸಿದರೆ, ಅಂದಿನ ಕಾಲದಲ್ಲಿ ಹಂಪೆಯ ಪರಿಸರದಲ್ಲಿದ್ದ ಕಿರು ರಾಜರೆಲ್ಲ ಆಗಲೇ ಹೈದರಾಬಾದು ಸಂಸ್ಥಾನಕ್ಕೆ ಸೇರಿ, ಅವರ ಅಧೀನದಲ್ಲಿ ಇದ್ದವರು ಕೆಲವರು ಮತ್ತು ಹೈದರ್ ಟಿಪ್ಪು ಅಧೀನದಲ್ಲಿ ಮತ್ತೆ ಕೆಲವರು ಇದ್ದರು. ಹೀಗಾಗಿ ಸ್ವತಂತ್ರವಾಗಿ ಅಷ್ಟು ದೊಡ್ಡ ಚಿತ್ರ ರಚನಾ ಯೋಜನೆಯನ್ನು ಹಮ್ಮಿಕೊಳ್ಳಲು ಸಾಧ್ಯವಿತ್ತೆ ಎಂಬ ಪ್ರಶ್ನೆ ಬರುತ್ತವೆ. ಅಲ್ಲದೆ ಭಿತ್ತಿಚಿತ್ರಗಳನ್ನು ಗುರುತಿಸುವಲ್ಲಿನ ಈ ವಿದ್ವಾಂಸರ ವಾದಗಳನ್ನು ಬೇರೆಡೆ ದನಾವು ಚರ್ಚಿಸಿದ್ದೇವೆ ಮತ್ತು ಸೂಕ್ತವಾದ ಗುರುತಿಸುವಿಕೆಯನ್ನು ಸೂಚಿಸಿದ್ದೇವೆ.[10] ಈ ವಾದ ವಿವಾದಗಳನ್ನು ಹಿಂದೆ ಇಟ್ಟು ನಾವು ಪ್ರಸ್ತುತ ಭಿತ್ತಿಚಿತ್ರಗಳನ್ನು ಯಾವುದೇ ತೊಂದರೆ ಇಲ್ಲದೆ ಶ್ರೀಕೃಷ್ಣದೇವರಾಯನ ಕಾಲಕ್ಕೆ ಸೇರಿಸಬಹುದಾಗಿದೆ. ಮಹಾರಂಗಮಂಟಪ ನಿರ್ಮಾಣವಾದ ಮೇಲೆ ಕ್ರಿ.ಶ. ೧೫೧೦ ರಿಂದ ಹಿಡಿದು ಅವನ ಕಾಲಾವಧಿಯಲ್ಲಿ ಇವುಗಳು ಚಿತ್ರತವಾಗಿವೆ ಎಂಬುದನ್ನು ದೃಢಪಡಿಸಬಹುದು.[11]

ಪ್ರಸ್ತುತ ರೇಖಾಚಿತ್ರಗಳ ಮುಖ್ಯ ಉದ್ದೇಶ, ವರ್ಣ ವಿನ್ಯಾಸದಿಂದ ಕೂಡಿದ ಚಿತ್ರ ರಚನೆಗೆ ಇರುವ ಮೂಲ ಆಕೃತಿಗಳೆಂದು ತಿಳಿಯಬಹುದು. ಅಂದರೆ ಒಂದು ರೀತಿಯ ಮೂಲ ಕೃತಿಗಳು (Master Copies) ಎಂದು ಹೇಳಬಹುದು. ಇವುಗಳ ನಕಲುಗಳನ್ನು ಇದೇ ಅಳತೆಗೆ ಅಥವಾ ಇವನ್ನು ಮೂಲವಾಗಿಟ್ಟುಕೊಂಡು ಅವರವರ ಅಳತೆಗೆ ತಕ್ಕಂತೆ ಚಿತ್ರಗಳನ್ನು ರಚಿಸಿಕೊಳ್ಳುತ್ತಿದ್ದುದು ಕೂಡ ಕಂಡುಬರುತ್ತದೆ. ಈ ಹಿಂದೆ ನಾವು ಇವುಗಳನ್ನು ಅಭ್ಯಾಸ ಪುಸ್ತಕದಲ್ಲಿನ ಚಿತ್ರಗಳಿಂದ ಗುರುತಿಸಿದ್ದೆವು. ಆದರೆ ಪ್ರಸ್ತುತ ಇವುಗಳ ಮೂಲ ಉದ್ದೇಶದ ವ್ಯಾಪ್ತಿಯನ್ನು ಅರ್ಥ ಮಾಡಿಕೊಂಡು ಇವು ಕೇವಲ ಅಭ್ಯಾಸ ಪುಸ್ತಕದ ಚಿತ್ರಗಳಲ್ಲ. ಚಿತ್ರ ನಿರ್ಮಾಣದ ಮೂಲ ಆಕರಗಳು ಎಂದು ಹೇಳಬೇಕಾಗಿದೆ.[12] ಇವುಗಳ ಕಾಲದ ಬಗ್ಗೆ ಹಂಪೆಯ ಭಿತ್ತಿಚಿತ್ರಗಳನ್ನು ನಾವು ಅವಲಂಬಿಸಿಯೇ ಹೇಳಬೇಕಾಗುತ್ತದೆ. ಇವು ಅವಕ್ಕೆ ಸಮಕಾಲೀನವಲ್ಲದಿದ್ದರೂ ಅಂದಿನ ಕಲಾವಿದನೊಬ್ಬನ ಕೃತಿಗಳು ಇವೆಂದು ಹೇಳಬಹುದು. ಆದರೆ ಪ್ರಸ್ತುತ ಆಕೃತಿಗಳು ಇರುವುದು ಸಮಾರು ೧೮-೧೯ನೇ

ಶತಮಾನ ತೆಳು ಹಾಳೆಯ ಮೇಲೆ. ಮೂಲದಲ್ಲಿದ್ದ ಆಕೃತಿಗಳನ್ನು ಹಾಗೆಯೇ ಮೂಲರೂಪದಲ್ಲೇ ಇಂದಿನ ಕಲಾವಿದರು, ಹಿಂದಿದ ತಲೆಮಾರಿನವರು ಉಳಿದ ರಕ್ಷಿಸಿಕೊಂಡು ಬಂದರೆಂದು ತೋರುತ್ತದೆ. ಇವುಗಳಲ್ಲಿ ಅಂದಿನ ದಖ್ಖನಿ ಸುಲ್ತಾನರ ಜಿಕಣಿ ಚಿತ್ರಗಳ ಶೈಲಿಯಾಗಿಲೀ ಅಥವಾ ೧೭-೧೮ನೇ ಶತಮಾನದ ಭಿತ್ತಿಚಿತ್ರಗಳಲ್ಲಿ ಕಂಡುಬರುವ ಮರಾಠ ಶೈಲಿಯ ಪ್ರಭಾವ ಕಂಡುಬರುವುದಿಲ್ಲ. ಇವುಗಳು ದೇಶಿಯವಾಗಿ ಸ್ಥಳೀಯ ಸಂವೇದನೆಗಳನ್ನೇ ಮೈಗೂಡಿಸಿದಕೊಂಡು ಬೆಳವಣಿಗೆ ಹೊಂದಿದಂತೆ ಕಂಡುಬರುತ್ತದೆ. ಕಿನ್ನಾಳದ ಪ್ರಸ್ತುತ ರೇಖಾಚಿತ್ರಗಳನ್ನು ಅಂದಿನ ಪಾರಂಪರಿಕ ಚಿತ್ರಕಲಾ ಸಂಪ್ರದಾಯ ಚೌಕಟ್ಟಿನಲ್ಲಿ ನೋಡಿದಾಗ ಮಾತ್ರ ಅವುಗಳ ಮಹತ್ವದ ಕಲ್ಪನೆ ಬರುವುದು. ಅಲ್ಲಿನ ಕಲಾವಿದ, ಅವನ ಕಲಾ ನೈಪುಣ್ಯತೆ ಮತ್ತು ಅವನಿಗಿದ್ದ ಚಿತ್ರ ರಚನಾ ಜ್ಞಾನಕ್ಕೆ ಈ ಚಿತ್ರಗಳು ಉತ್ತಮ ಉದಾಹರಣೆಗಳಾಗಿವೆ.

**ಆಕರ**

ವಿಜಯನಗರ ಅಧ್ಯಯನ, ಸಂ. ೬, ೨೦೦೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೪೩-೬೨.

[1] ಪ್ರಸ್ತುತ ಲೇಖನ ಈ ಹಿಂದೆ ಇದೆ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಕೆಲವು ರೇಖಾಚಿತ್ರಗಳ ಮುಂದುವರೆದ ಭಾಗವಾಗಿದೆ. ನೋಡಿ: 'ವಿಜಯನಗರ ಚಿತ್ರ ಶೈಲಿಯ ಕಿನ್ನಾಳದ ರೇಖಾಚಿತ್ರಗಳು', ಆರ್.ಎಚ್. ಕುಲಕರ್ಣಿ, ವಿಜಯನಗರ ಅಧ್ಯಯನ, ಸಂ. ೩ ಮತ್ತು ಪುಟ ೨೨-೩೫, ಮೈಸೂರು, ೧೯೯೮.

[2] ಕಿನ್ನಾಳದ ಕಲೆಯನ್ನು ಕುರಿತು ಮತ್ತು ಚಿತ್ರಕಲೆಯನ್ನು ಕುರಿತು ೧೯೬೦ರ ದಶಕದಲ್ಲಿ ದಿ. ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬರೆದ ಮೇಲೆ ಇತ್ತೀಚಿನವರೆಗೂ ಗಮನಾರ್ಹವಾದ ಯಾವ ಕೆಲಸಗಳೂ ಆಗಿಲ್ಲ. ಅಲ್ಲಿನ ಚಿತ್ರಕಲೆಯನ್ನು ಪ್ರಾಯಶಃ ಮೊಟ್ಟಮೊದಲ ಬಾರಿಗೆ ಹೆಚ್ಚು ವಿಶದವಾಗಿ ನೋಡುವ ಪ್ರಯತ್ನವನ್ನು ನಾನು ನನ್ನ 'ಕಿನ್ನಾಳದ ಚಿತ್ರಕಲೆ' ಲಲಿತಕಲಾ ಅಕಾಡೆಮಿ ಬೆಂಗಳೂರು ೧೯೯೨ರಲ್ಲಿ ಮಾಡಿದ್ದೇನೆ ಮತ್ತು ರೇಖಾಚಿತ್ರಗಳನ್ನೇ ಕುರಿತು ನಡೆಸಿದ ಅಧ್ಯಯನಗಳಲ್ಲಿ ಈ ಮೊದಲಿನ ನನ್ನ ಲೇಖನ, ೧೯೯೮, ಪೂರ್ವೋಕ್ತ, ಮೊಟ್ಟಮೊದಲನೆಯದು ಮತ್ತು ಪ್ರಸ್ತುತ ಲೇಖನ ಎರಡನೆಯದು.

[3] ಕಿನ್ನಾಳ, ಕೊಪ್ಪಳ ಜಿಲ್ಲೆಯ ಅದೇ ತಾಲೂಕಿನಲ್ಲಿಯ ಗ್ರಾಮ ಅಲ್ಲಿಂದ ೧೧ ಕಿ.ಮೀ. ದೂರದಲ್ಲಿದೆ.ದ ಇಂದಿಗೂ ಹಲವಾರು ಚಿತ್ರಗಾರ ಕುಟುಂಬಗಳು ಅಲ್ಲಿ ಇವೆ.

[4] ಸುರಪುರದ ಗರಡಾದ್ರಿ ಚಿತ್ರ ಶೈಲಿ ವಿಜಯನಗರ ಚಿತ್ರಶೈಲಿಯಿಂದಲೇ ಬೆಳೆದುದು. ಅಲ್ಲಿನ ಹಲವಾರು ಪೌರಾಣಿಕ, ಬಿಡಿ ಚಿತ್ರಗಳಲ್ಲಿ ಇಂತಹ ಉದಾಹರಣೆಗಳನ್ನು ನೋಡಬಹುದು. ಮೈಸೂರಿನ ಶ್ವೇತವರಾಹಸ್ವಾಮಿ ದೇವಾಲಯ, ಪ್ರಸನ್ನ ಕೃಷ್ಣದೇವಾಲಯ ಮತ್ತು ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯಗಳಲ್ಲಿ ಭಿತ್ತಿಚಿತ್ರಗಳಲ್ಲಿ ಮೂಡಿಬಂದ ಭಾಗವತ, ರಾಮಾಯಣದ ಚಿತ್ರಗಳನ್ನು ಈ ದಿಶೆಯಲ್ಲಿ ಗಮನಿಸಬಹುದು.

[5] ಕಲಾ ಅಂಶಗಳು (Art Motifs) ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡುವುದನ್ನು ಪ್ರಾಚೀನ ಶಿಲ್ಪಗಳ ದೃಷ್ಟಾಂತದಿಂದ ನೋಡಬಹುದು. ಇದಕ್ಕೆ ಅಂದು ಇದ್ದ ಕಲಾ ಸಂವೇದನೆಗಳೇ ಕಾರಣ. ಉದಾಹರಣೆಗೆ ಶಿಲ್ಪಗಳಲ್ಲಿನ ವಿದ್ಯಾಧರ, ಗಂಧರ್ವ ದಂಪತಿಗಳು ಅಜಂತಾದ ಬೌದ್ಧಾಲಯಣಾಗಳಲ್ಲಿವೆ. ಹಾಗೆ ಎಲಿಫೆಂಟಾ, ಎಲ್ಲೋರಾ ಮತ್ತು ಚಾಲುಕ್ಯರ ಬಹುತೇಕ ದೇವಾಲಯಗಳಲ್ಲಿ ಮತ್ತು ಲಯಣಗಳಲ್ಲಿ ಇವೆ. ಹಾಗೆಯೇ ಚಿತ್ರಕಲೆಯಲ್ಲೂ ಕೂಡ ಇದನ್ನು ಗಮನಿಸಬಹುದು.

[6] ದಶಾವತಾರದ ಇನ್ನೂ ಹಲವು ಚಿತ್ರಗಳನ್ನು ಈ ಹಿಂದಿನ ಲೇಖನದಲ್ಲಿ ಚರ್ಚಿಸಿದೆ. ಕುಲಕರ್ಣಿ ಆರ್.ಎಚ್., ೧೯೯೮, ಪೂರ್ವೋಕ್ತ.

[7] ವಿಜಯನಗರ ಕಾಲದಲ್ಲಿ ಹನುಮಂತನ ಮೂರ್ತಿಗಳು ಬಹುಶಃ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಪ್ರತಿಷ್ಠಾಪಿತವಾದವು. ಮಾಧ್ವ ಪರಂಪರೆಯಲ್ಲಿ ಮುಖ್ಯ ಪ್ರಾಣನೆನಿಸುವ ಅವರು ಪ್ರಮುಖ ಆರಾಧ್ಯ ದೈವವಾಗಿವೆ. ಶ್ರೀ ವ್ಯಾಸತೀರ್ಥರು ೭೩೨ ಮುಖ್ಯಪ್ರಾಣರನ್ನು (ಶ್ರೀ ಆಜನೇಯ) ರಾಜ್ಯದ-ಹೊರರಾಜ್ಯದ ವಿವಿಧೆಡೆ ಪ್ರತಿಷ್ಠಾಪಿಸಿದ ಕುರಿತು ದಾಖಲೆಗಳು ದೊರೆಯುತ್ತವೆ. ಅಲ್ಲದೆ ಪ್ರಸ್ತುತ ಹಂಪೆಯ ರಾಮಾಯಣದ ಕಿಷ್ಕಿಂಧೆಯೆಂದು ಗುರುತಿಸುವ ಪ್ರಯತ್ನವನ್ನು ಅ. ಸುಂದರ ಅವರು ಮಾಡಿದ್ದಾರೆ. ಕಿಷ್ಕಿಂಧೆಯಲ್ಲಿಯೇ ಹನುಮಂತ ವಾಸ. ಹೀಗಾಗಿ ಅದೂ ಕೂಡ ಹನುಂತನ ಮೂರ್ತಿಗಳ ಜನಪ್ರಿಯತೆಗೆ ಅಂದು ಪೂರಕನಾಗಿದ್ದಿರ ಬಹುದು.

[8] Sivaramamurthy C., 1998, *South Indian Paintings, National Museum*, New Delhi – Vijayanagara Painitings, 1972, New Delhi ಮತ್ತು ತಮ್ಮ ಹಲವಾರು ಲೇಖನಗಳಲ್ಲಿ ಹಂಪೆಯ ಭಿತ್ತಿಚಿತ್ರಗಳನ್ನು ೧೫ನೇ ಶತಮಾನದವು ಎಂದಿದ್ದಾರೆ. ಆಶ್ಚರ್ಯವೆಂಬಂತೆ ಜಾರ್ಜ್ ಮಿಶೆಲ್ ಮತ್ತು ಮಾಲ್ಕರಾಜ ಆನಂದರು ಸೇರಿ ಬರೆದ ವಿಜಯನಗರ ಚಿತ್ರಕಲೆಯನ್ನು ಕುರಿತ ಸಚಿತ್ರ ಲೇಖನದಲ್ಲಿ ಇದೇ ಅಭಿಪ್ರಾಯವನ್ನು ಹೋಂದಿದ್ದಾರೆ. (Marg Magzine).

[9] Dallapiccola A.L., 1997, *Ceiling Paintings in the Virupaksha Temple, Hampi, In South Asian Studies*, No. 13, pp. 55 ff.

[10] ನಾನು ಹಂಪೆ ವಿರುಪಾಕ್ಷ ದೇವಾಲಯದ ಮಹಾರಂಗಮಂಟಪದಲ್ಲದಿನ ಭಿತ್ತಿಚಿತ್ರಗಳ ಕುರಿತಾದ ದೀರ್ಘವಾದ ಅಧ್ಯಯನ ನಡೆಸಿದ್ದೇನೆ. ಕಲಾ ಇತಿಹಾಸದ ದೃಷ್ಟಿಯಿಂದ ಮತ್ತು ಚಿತ್ರ ಶೈಲಿಯ ಅಧ್ಯಯನ ಅಲ್ಲಿ ಚಿತ್ರಿಸಿರುವ ಹಲವಾರು ಆಕೃತಿಗಳ ಗುರುತಿಸುವಿಕೆಯೂ ಕೂಡ ಇದರಲ್ಲಿ ಸೇರಿದೆ. ಇದರ ಫಲವೆ ನಾನು ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ಇವರ ೧೪ನೇ ವಾರ್ಷಿಕ ಸಮ್ಮೇಳನ, ಹಂಪೆ, ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದಾಗ ಮಂಡಿಸಿದ ಅಕಾಡೆಮಿ, ಬೆಂಗಳೂರು ಇವರ ೧೪ನೇ ವಾರ್ಷಿಕ ನಮ್ಮೇಳನ, ಹಂಪೆ, ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದಾಗ ಮಂಡಿಸಿದ ಅಕಾಡೆಮಿ, ಬೆಂಗಳೂರು ಇವರ ೧೪ನೇ ವಾರ್ಷಿಕ ಸಮ್ಮೇಳನ, ಹಂಪೆ, ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದಾಗ ಮಂಡಿಸಿದ ಪ್ರಬಂಧ: ''ಹಂಪೆ ವಿರುಪಾಕ್ಷ ದೇವಾಲಯದ ಮಹಾರಂಗಮಂಟಪದ ಒಳಮಾಳಿಗೆಯಲ್ಲಿನ ಭಿತ್ತಿಚಿತ್ರದಲ್ಲಿರುವ ಯತಿಗಳ ಚಿತ್ರ ವಿದ್ಯಾರಣ್ಯರದೇ, ವ್ಯಾಸರಾಯರದೇ, ಒಂದು ವಿವೇಚನೆ.'' (ಇತಿಹಾಸದರ್ಶನದಲ್ಲಿ ಪ್ರಕಟವಾಗಿದೆ.)

[11] ಅದೇ.

[12] ಕುಲಕರ್ಣಿ ಆರ್.ಎಚ್., ೧೯೯೮, ಪೂರ್ವೋಕ್ತ.

## ೯. ವಿಜಯನಗರ ಕಾಲದ ಗಾರೆ ಕಲೆ

**ಪ್ರಸ್ತಾವನೆ**

ದಕ್ಷಿಣ ಭಾರತದ ಕಲಾ ಇತಿಹಾಸದಲ್ಲಿ ವಿಜಯನಗರ ಕಾಲದ ಕಲೆಗೆ ಒಂದು ವಿಶಿಷ್ಟ ಸ್ಥಾನವಿದೆ. ಆ ಕಾಲದಲ್ಲಿನ ಅಗಾಧವಾದ ಕಲಾ ಚಟುವಟಿಕೆಗಳು ವಿಜಯನಗರ ಕಲೆಯ ವಿವಿಧ ಹಂತಗಳನ್ನು ಪ್ರಸ್ತುತಪಡಿಸುತ್ತವೆ. ಚಾಲುಕ್ಯ, ಹೊಯ್ಸಳ ಕಲಾಶೈಲಿಯ ಮತ್ತು

ವಾಸ್ತುಶೈಲಿಯ ಹಿನ್ನೆಲಯಿಂದ ಪ್ರಾರಂಭವಾದ ಚಟುವಟಿಕೆಗಳು ಸಮಕಾಲೀನ ಇಸ್ಲಾಮಿಕ್ ಕಲಾಶೈಲಿಯನ್ನು ಅವಶ್ಯವಿದ್ದಲ್ಲಿ ಉಪಯೋಗಿಸಿಕೊಂಡು ವಿಜಯನಗರದ್ದೇ ಎನ್ನುವಂತಹ ಒಂದು ವಿಶಿಷ್ಟವಾದ ಶೈಲಿಯಲ್ಲಿ ಅಭಿವೃದ್ಧಿಪಡಿಸಿದವು.

ವಿಜಯನಗರ ಕಾಲದಲ್ಲಿ ರಾಜ್ಯವ್ಯಾಪ್ತಿಯಿರುವಷ್ಟು ಉದ್ದಗಲಕ್ಕೂ ಕಲಾ ಚಟುವಟಿಕೆಗಳು ನಡೆದೇ ಇದ್ದವು. ವಿಜಯನಗರವನ್ನು ಆಳಿದ ವಿಭಿನ್ನ ರಾಜಮನೆತನಗಳು ದೇವಾಲಯಗಳ, ಶಿಲ್ಪಗಳ, ಅರಮನೆಗಳ, ಕೋಟೆ ಕೊತ್ತಲಗಳ ಮತ್ತು ಕೆರೆ ಬಾವಿಗಳ ನಿರ್ಮಾಣಕ್ಕೆ ಪೋಷಕವಾಗಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ. ಆ ಕಾಲದ ಕಲಾವಿದ ಕಟ್ಟಡಗಳ ನಿರ್ಮಾಣದ ತೀವ್ರತೆ ಮತ್ತು ಇರುವ ಕಾಲಾವಕಾಶದಲ್ಲಿ ಇವುಗಳನ್ನು ಸಂಪೂರ್ಣ ಗೊಳಿಸುವುದಕ್ಕಾಗಿ ಹೊಸ ಹೊಸ ಮಾಧ್ಯಮಗಳನ್ನು ರೂಢಿಸಿಕೊಳ್ಳಬೇಕಾಯಿತು. ಇದಕ್ಕಾಗಿ ಶಿಖರ, ಗೋಪುರಗಳ ನಿರ್ಮಾಣಗಳಲ್ಲಿ ಹೊಸ ಮಾಧ್ಯಮವನ್ನು ಪ್ರಯೋಗಿಸಲಾಯಿತು. ವಿಜಯನಗರ ದೇವಾಲಯಗಳ ಮುಖ್ಯ ಆಕರ್ಷಣೆಗಳಾದ ಮಹಾದ್ವಾರದ ಮೇಲಿನ ಆಕಾಶದೆತ್ತರಕ್ಕೆ ಚಾಚಿದೊಂಡಿರುವ ಗೋಪುರ, ದೇವಸ್ಥಾನದ ಕಲ್ಯಾಣಮಂಟಪಗಳು ಮತ್ತು ಮುಖಮಂಟಪಗಳು ಮೇಲಿನ ಪ್ರಸ್ತರಗಳ ಸಾಲು ಹೀಗೆ ದೇವಾಲಯದ ಆಲಂಕರಣಕ್ಕೆ ಕಲ್ಲಿನಲ್ಲಿ ಕೆತ್ತಲು ಬೇಕಾಗುವ ಕಾಲಾವಕಾಶವನ್ನು ಗಮನಿಸಿದರೆ ಪ್ರಾಯಶಃ ಯೋಚಿಸಲು ಸಾಧ್ಯವಾಗದಷ್ಟು ಸಮಯಬೇಕಾಗುತ್ತದೆ. ಅದಕ್ಕೆಂದೇ ವಿಜಯನಗರ ಕಾಲದಲ್ಲಿ ಕಲಾವಿದ ಅಂದು ಪ್ರಚಲಿತದಲ್ಲಿದ್ದ ಹೊಸ ಮಾಧ್ಯಮವನ್ನು ತನ್ನದಾಗಿಸಿಕೊಂಡಿರಬೇಕು. ಈ ಹೊಸ ಮಾಧ್ಯಮವೇ ಪ್ರಸ್ತುತ ಚರ್ಚೆಯಲ್ಲಿರುವ ಗಾರೆ. ಗಾರೆ ಕಾಲ ಮಾಧ್ಯಮವಾಗಿ ವಿಜಯನಗರ ಕಾಲದಲ್ಲಿ ಒಮ್ಮಿಂದೊಮ್ಮೆಲೆ ಉಪಯೋಗವಾಗಿಲ್ಲ. ಶಿಲೆ, ಕಾಷ್ಠಗಳಿಗಿರುವಂತೆ ಇದಕ್ಕೂ ದೀರ್ಘವಾದ ಇತಿಹಾಸವಿದೆ. ಅದೇನೇ ಇರಲಿ ವಿಜಯನಗರ ಕಾಲದಲ್ಲಿ ಗಾರೆ ಶಿಲಯಷ್ಟೇ ಪ್ರಮುಖವಾದ ಮಾಧ್ಯಮವಾಯಿತು. ಯಾವುದೇ ದೇವಾಲಯದ ನಿರ್ಮಾಣವಿರಲಿ, ಮಂಟಪ, ಪುಷ್ಕರಿಣಿಗಳಾಗಲೀ ಅಥವಾ ಇನ್ನಾವುದೋ ಖಾಸಗಿ ಕಟ್ಟಡದ ನಿರ್ಮಾಣವಿರಲಿ ಇಟ್ಟಿಗೆ ಮತ್ತು ಗಾರೆ ಅಲ್ಲಿ ಉಪಯೋಗವಾಗಿರಲೇ ಬೇಕು.

ಗಾರೆಯೊಂದಿಗೆ ಇಟ್ಟಿಗೆ ಕೂಡ ವಿಜಯನಗರ ಕಾಲದ ದೇವಾಲಯಗಳ ಅಲಂಕರಣಗಳಲ್ಲಿ ಅಷ್ಟೇ ಮುಖ್ಯವಾದ ವಸ್ತುವಾಗಿದೆ. ಗೋಪುರ, ಶಿಖರ ಮತ್ತು ಕಿರು ವಿಮಾನಗಳ ನಿಮಾಣದಲ್ಲಿ ಮತ್ತು ಆಕೃತಿಗಳು ವಿಭಿನ್ನ ವಿನ್ಯಾಸಗಳ ಹಾಗೂ ಯಾವುದೇ ಸೂಕ್ಷ್ಮವಾಗದ ಅಲಂಕಾರಿಕ ವಸ್ತುಗಳ ರಚನೆಯಲ್ಲಿ ಗಾರೆ ಮತ್ತು ಇಟ್ಟಿಗೆಗೆ ಸಮನಾಗಿ ಉಪಯೋಗವಾಗಿವೆ.

**ಗಾರೆಯ ಕಲಾ ಹಿನ್ನೆಲೆ**

ಗಾರೆಯು ಕಲಾ ಮಾಧ್ಯಮವಾಗಿ ಬೆಳೆದುದನ್ನು ಸ್ಥೂಲವಾಗಿ ಗಮನಿಸಿದರೆ ಅದರ ಕಲಾ ಇತಿಹಾಸ ನಮ್ಮನ್ನು ಪ್ರಾಚೀನ ಕಾಲದತ್ತ ಕೊಂಡೊಯ್ಯುತ್ತದೆ. ಗಾರೆಯನ್ನು ಪ್ರಾಚೀನ ನಾಗರಿಕತೆಗಳಲ್ಲಿ ಉಪಯೋಗಿಸಿರುವುದನ್ನು ಈಜಿಪ್ತ, ಸುಮೇರಿಯನ್ ಮತ್ತು ಸಿಂಧೂ ನದಿ ಕೊಳ್ಳದ ಹರಪ್ಪ, ಮೆಹೆಂಜೋದಾರೋಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ಈಜಿಪ್ತಿನ ಪಿರಮಿಡ್ಡುಗಳಲ್ಲಿನ ಒಳಕೋಣೆಗಳಲ್ಲಿ ಕಂಡುಬರುವ ಭಿತ್ತಿಚಿತ್ರಗಳ ಹಿನ್ನೆಲೆಯಾಗಿ ಗಾರೆ ಉಪಯೋಗವಾಗಿದೆ. ಸುಮೇಯನ್ ಸಂಸ್ಕೃತಿಯಲ್ಲಿ ಜಿಗುರಾಟ್‌ಗಳ ನಿರ್ಮಾಣದಲ್ಲಿ ಮತ್ತು ಬಿಡಿ ಆಕೃತಿಗಳ ನಿರ್ಮಾಣದಲ್ಲಿ ಗಾರೆ ಉಪಯೋಗವಾಗಿದೆ. ಗ್ರೀಕೋ ರೋಮನ್ ನಾಗರಿಕತೆಗಳಲ್ಲಿ ಕಟ್ಟಡಗಳ ನಿರ್ಮಾಣದಲ್ಲಿ ಮತ್ತು ಕಲಾತ್ಮಕವಾದ ಶಿಲ್ಪಾಕೃತಿಗಳ ರಚನೆಗಾಗಿ ಗಾರೆ ಮಾಧ್ಯಮವಾಗಿದೆ. ಗಾರೆಗೆ ಸ್ವತಂತ್ರವಾದ ಕಲಾಮಾಧ್ಯಮದ ಸ್ಥಾನ ದೊರೆತಿದ್ದು ಗ್ರೀಕೋ ರೋಮನ್ ಕಾಲದಲ್ಲಿಯೇ ಎನ್ನಬಹುದು.

ಇತ್ತ ಭಾರತದಲ್ಲಿ ಕುಷಾಣರ ಕಾಲದಲ್ಲಿ ಗಾಂಧಾರ ಶೈಲಿಯಲ್ಲಿ ರಚಿಸಲ್ಪಟ್ಟ ಹಲವಾರು ಬಿಡಿ ಆಕೃತಿಗಳು ಮತ್ತು ಕಥಾನಕ ಆಕೃತಿಗಳು ಕಂಡುಬರುತ್ತವೆ. ಇವು ಮುಖ್ಯವಾಗಿ ಬೌದ್ಧಧರ್ಮಕ್ಕೆ ಸೇರಿವೆ.[1] ಶಾತವಾಹನರ ಕಾಲದ ಲಯಣಗಳಲ್ಲಿ ಹಾಗೂ ಗುಪ್ತ, ವಾಕಾಟಕ ರಾಜ ಮನೆತನದವರು ನಿರ್ಮಿಸಿರುವ ಬೌದ್ಧ ಚೈತ್ಯವಿಹಾರಗಳಲ್ಲಿನ ಭಿತ್ತಿಚಿತ್ರಗಳ ಹಿನ್ನೆಲೆಯ ಲೇಪನವಾಗಿ ಗಾರೆಯನ್ನು ಉಪಯೋಗಿಸಿದೆ. ಅಲ್ಲದೆ ಐಹೊಳೆಯಲ್ಲಿನ ಚಾಲುಕ್ಯ ಪೂರ್ವಕಾಲದ ಇಟ್ಟಿಗೆಯ ಕಟ್ಟಡವನ್ನು ಗಾರೆಯನ್ನು ಉಪಯೋಗಿಸಿಯೆ ಕಟ್ಟಿದೆ. ನಂತರದ ಕಾಲದಲ್ಲಿ

ಗಾರೆಯ ಉಪಯೋಗವಾಗಿದ್ದರೂ ಅದು ಸ್ವಲ್ಪ ವಿರಳವೆಂದೆ ಹೇಳಬೇಕು. ಏಕೆಂದರೆ ದೇಶದ ಉದ್ದಗಲಕ್ಕೂ ಅಂದು ಪ್ರಭಾವಕಾರಿಯಾಗಿ ಪ್ರಚಲಿತದಲ್ಲಿದ್ದ ಭವ್ಯವಾದ ಲಯಣಗಳ ಕೆತ್ತನೆ, ದೇಗುಲಗಳ ನಿರ್ಮಾಣ, ಶಿಲ್ಪಗಳ ಕೆತ್ತನೆ ಎಲ್ಲವೂ ಶಿಲೆಯನ್ನು ಆಧರಿಸಿದವುಗಳೆ. ಹೀಗಾಗಿ ಅಂದು ಶಿಲೆ ಪ್ರಮುಖ ಮಾಧ್ಯಮವಾಯಿತು. ಆದರೆ, ಗಾರೆಯ ವಿಶೇಷವಾದ ಸ್ಥಾನಮಾನ ಮತ್ತೊಮ್ಮೆ ದೊರೆತದ್ದು ೧೩-೧೪ನೇ ಶತಮಾನದಲ್ಲಿ ಅನ್ನಬಹುದು.

ಗಾರೆಯ ಉಪಯೋಗ ಪ್ರಾಯಶಃ ಅದರ ತಾಂತ್ರಿಕ ಸರಳತೆಯನ್ನು ಅವಲಂಬಿಸಿದೆ. ಅದಕ್ಕಾಗಿಯೇ ಪರ್ಶಿಯಾದಲ್ಲಿ ಇಸ್ಲಾಮಿಕ್ ದೊರೆಗಳ ಭವ್ಯವಾದ ಮಸೀದಿಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದು, ಪ್ರಾಯಶಃ ಅದೇ ಪರಂಪರೆ ಭಾರತದಲ್ಲಿ ಇಸ್ಲಾಮಿಕ್ ಧರ್ಮದ ಅರಸರು ರಾಜ್ಯಭಾರ ಪ್ರಾರಂಭಿಸಿದ ಮೇಲೆ ಮುಮದುವರೆದುಕೊಂಡು ಬಂದಿತೆಂದು ಹೇಳಬಹುದು. ಮಹಾದ್ವಾರಗಳ ಅಲಂಕರಣ, ಮಸೀದಿಗಳ ಒಳಮಾಳಿಗೆಗಳ, ಗೋಡೆಗಳ ಅಲಂಕರಣ, ಹೀಗೆ ಪ್ರಾರಂಭವಾದ ಗಾರೆಯ ಉಪಯೋಗ ಕಾಲ ಕ್ರಮೇಣ ವಿಜಯನಗರ ಕಾಲದಲ್ಲಿ 'ಶಿಲೆ'ಗೆ ಪರಾಯವಾಗಿ ಇಟ್ಟಿಗೆಯೊಂದಿಗೆ ಪ್ರಮುಖ ಮಾಧ್ಯಮವಾಯಿತು.

**ಗಾರೆಯ ತಾಂತ್ರಿಕ ಬೆಳವಣಿಗೆ**

ಗಾರೆಯನ್ನು ಅಷ್ಟು ಅಗಾಧ ರೀತಿಯಲ್ಲಿ ಬಳಸಲು ಮುಖ್ಯ ಕಾರಣ ಅದರ ಸರಳ ತಾಂತ್ರಿಕತೆ. ನವೀನ ಯುಗದ ಸಿಮೆಂಟಿನಷ್ಟೇ ಗಟ್ಟಿಯಾದ ಈ ಮಾಧ್ಯಮ ಬಳಸಲು ಸುಲಭವೂ ಆಗಿದೆ. ಸಿಮೆಂಟ್ ನೀರಿನೊಂದಿಗೆ ಬೆರೆತೊಡನೆ ಕೆಲವೇ ಗಂಟೆಗಳಲ್ಲಿ ಗಟ್ಟಿಯಾಗಿ ಬಿಡುತ್ತದೆ. ಆದರೆ ಗಾರೆಯಲ್ಲಿ ತಯಾರಿಸಿ ಕೆಲವು ದಿನಗಳವರೆಗೆ ಹಾಗೆ ಇಡಬಹುದು. ಗಾರೆಯ ಈ ಅನುಕೂಲಕರ ಮಿಶ್ರಣ ಅಂದಿನ ವಿಜಯನಗರ ಕಲಾವಿದರಿಗೆ ಅತ್ಯಂತ ಆಕರ್ಷಕವಾದ ಮಾಧ್ಯಮವಾಗಿ ಕಂಡಿರಬೇಕು.

ಗಾರೆಯನ್ನು ಮುಖ್ಯವಾಗಿ ಸುಣ್ಣ, ಮರಳು, ನೀರು ಮತ್ತು ಕೆಲವು ಅಂಟು ದ್ರಾವಣಗಳನ್ನು ಸೇರಿಸಿ ತಯಾರಿಸುತ್ತಾರೆ. ಉಪಯೋಗವನ್ನು ಅವಲಂಬಿಸಿ ಮತ್ತು ರಚಿಸಬೇಕಾದ ಆಕೃತಿಯ ಸೂಕ್ಷ್ಮತೆ, ಅಲಂಕರಣವನ್ನು ಗಮನದಲ್ಲಿರಿಸಿ ಗಾರೆಯ ಸರಿಯಾದ ಗುಣಮಟ್ಟದ ತಯಾರಿಕೆ ನಡೆಯುತ್ತದೆ. ಆಕೃತಿಗಳು ಗಾರೆಯ ಗುಣಮಟ್ಟವನ್ನು ಅವಲಂಬಿಸಿವೆ ಎಂಬುದನ್ನು ಹಲವಾರು ಉದಾಹರಣೇಗಳಿಂದ ರುಜುವಾತುಪಡಿಸಬಹುದು. ಗಾರೆಯಲ್ಲಿ ಸುಣ್ಣದ ಗುಣಮಟ್ಟ ಅತೀ ಮುಖ್ಯ. ಸೋಸಿ ತೆಗೆದ ಕಪ್ಪೆಚಿಪ್ಪಿನ ಸುಣ್ಣ, ಕಲ್ಲು ಸುಣ್ಣ ಅಥವಾ ಸುಣ್ಣ ಬುರಳಿ ಇವು ಮುಖ್ಯ ವಸ್ತುಗಳು. ಇದರೊಂದಿಗೆ ಉತ್ತಮ ಮರಳು, ಲೋಳೆಸರ, ಬಿಲ್ವಪತ್ರೆ ಕಾಯಿ, ಬೆಲ್ಲ ಅಥವಾ ಕೆಲವು ಸಲ ಮೊಟ್ಟೆಯೂ ಕೂಡಾ ಅಂಟು ದ್ರಾವಣದ ರೂಪದಲ್ಲಿ ಉಪಯೋಗವಾಗುತ್ತವೆ. ಎಲ್ಲವನ್ನು ಹದಕ್ಕೆ ತಕ್ಕಂತೆ ಹಾಕಿ ಚೆನ್ನಾಗಿ ರುಬ್ಬಬೇಕು. ರುಬ್ಬಿದ ನಂತರ ಬೆಣ್ಣೆಯ ಹಾಗೆ ಹದಕ್ಕೆ ಬಂದಾಗ ಮಾತ್ರ ಯಾವುದೇ ಆಕೃತಿಯ ರಚನೆ ಇರಲಿ ಅತ್ಯಂತ ನೈಜವಾಗಿ ಮೂಡುತ್ತದೆ. ಅಲ್ಲದೆ, ಉಪಯೋಗಕ್ಕೂ ಸಹಕಾರಿಯಾಗುತ್ತದೆ. ಪ್ರಾಚೀನ ಕಾಲದಲ್ಲಿಯೇ ವಿವಿಧವರ್ಗದ ಗುಣಮಟ್ಟದ ಗಾರೆ ಗ್ರೀಕ್ ಮತ್ತು ಇಟಲಿ ದೇಶಗಳ ಕಲೆಯಲ್ಲಿ ಉಪಯೋಗವಾಗಿರುವುದು ಕಂಡು ಬರುತ್ತದೆ. ಅಂತಹದೇ ಪ್ರಯತ್ನ ವಿಜಯನಗರ ಕಾಲದ ವಿವಿಧ ರಚನೆಗಳಲ್ಲಿ ಆಗಿರುವುದನ್ನು ಹಲವಾರು ಉದಾಹರಣೆಗಳಿಂದ ಗಮನಿಸಬಹುದು.

ವಿಜಯನಗರ ಕಾಲದಲ್ಲಿ ಗಾರೆಯು ಕಲೆಯ ಒಂದುಸ ಸಂಪೂರ್ಣವಾದ ಕಲಾಮಾಧ್ಯಮವಾಗಿ ಬೆಳೆದಿತ್ತು ಎನ್ನುವುದನ್ನು ನಾವು ಇಂದಿಗೂ ಉಳಿದಿರುವ ಆ ಕಾಲದ ದೇವಾಲಯಗಳಿಂದ ಮತ್ತು ವಿವಿಧ ಕಟ್ಟಡಗಳಿಮದ ತಿಳಿಯಬಹುದು. ವಿಜಯನಗರ ರಾಜಧಾನಿ ಹಂಪೆಯಲ್ಲಿನ ಎಲ್ಲಾ ದೇವಾಲಯಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಗಾರೆಯ ಉಪಯೋಗವಿದೆ. ವಿಜಯನಗರದ ರಾಜ್ಯವ್ಯಾಪ್ತಿಯುದ್ದಕ್ಕೂ ಹರಡಿಕೊಂಡಿರುವ ಮಂಟಪಗಳಿರಲಿ ಅಥವಾ ಯಾವುದೇ ಸಾರ್ವಜನಿಕ ಕಟ್ಟಡಗಳಿರಲಿ ಗಾರೆ ಮಾಧ್ಯಮವಾಗಿ ಉಪಯೋಗವಾಗಿದೆ. ಅಂದರೆ ಗಾರೆಯ ತಯಾರಿಕೆ, ಅದನ್ನು ಉಪಯೋಗಿಸಲು ಸಿದ್ಧವಾಗಿರುತ್ತಿದ್ದ ಕಲಾವಿದರು, ಗಾರೆ ಕೆಲಸದವರು ಎಲ್ಲವನ್ನು ಲೆಕ್ಕ ಹಾಕಿದರೆ ಯೋಚನೆಗೂ ಮೀರಿದ ಬೆಳವಣಿಗೆ ಕಾಣುತ್ತದೆ. ಶಿಲೆಯನ್ನು ಬದಿಗೆ ತಳ್ಳಿ ತನ್ನನ್ನು ಮುಖ್ಯ ಮಾಧ್ಯಮವನ್ನಾಗಿ ಸ್ಥಾಪಿಸಿಕೊಳ್ಳುವಲ್ಲಿ ಗಾರೆ

ಯಶಸ್ವಿಯಾಗಿದೆ ಅಥವಾ ಶಿಲೆಗೆ ಸಮಾನಾಂತರವಾದ ಸ್ಥಾನವನ್ನು ಅದು ಪಡೆದಿದೆ ಎನ್ನಬಹುದು. ದೇವಸ್ಥಾನದ ಮುಖ್ಯ ಆಕರ್ಷಣೆಗಳಾದ ಶಿಖರ, ಗೋಪುರ, ವಿಮಾನಗಳ ಗೂಡಿನ ಸಲು ಹಾಗು ಇನ್ನಿತರ ಅಲಂಕರಣಗಳಲ್ಲಿ ಆಕೃತಿಗಳು ಮುಖ್ಯವಾಗಿ ಕಂಡುಬರುತ್ತವೆ. ಸಾಮಾನ್ಯವಾಗಿ ಆಯಾ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಅಂಥೀಯ ಆಕೃತಿಗಳು ಕಾಣಿಸಿಕೊಂಡಿವೆ. ವೈಷ್ಣವ, ಶೈವ ಪಂಥಕ್ಕೆ ಸೇರಿಸ ಆಕೃತಿಗಳು ಒಟ್ಟೊಟ್ಟಿಗೆ ಕಾಣಿಸಿರುವ ಉದಾಹರಣೆಗಳು ಇಲ್ಲದಿಲ್ಲ.

ವಿಜಯನಗರ ಪ್ರಪ್ರಥಮ ರಾಜ್ಯಮನೆತನದ ಅರಸರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳಲ್ಲಿ ಗಾರೆ ಕೆಲಸ ಇದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲಾ.[2] ನಂತರದ ಕಾಲದಲ್ಲೂ ಹಲವಾರು ಹೊಸ ಜೋಡಣೆಗಳೂ ಆಗಿರುವ ಸಾಧ್ಯತೆ ಇದೆ. ಗಾರೆಯು ಇದ್ದಕ್ಕಿದ್ದಂತೆ ಅಷ್ಟು, ವೇಗವಾಗಿ ಮತ್ತು ಶಿಲೆಗೆ ಪರ್ಯಯವಾಗಿ ಉಪಯೋಗಗೋಳ್ಳಲು ಕಾರಣಗಳು ಹಲವಾರು ಇರಬಹುದು. ಸಮರೋಪಾದಿಯಲ್ಲಿ ನಿರ್ಮಾಣಗೊಂಡ ವಿಶಾಲ ದೇವಾಲಯಗಳು ಮೂಲತಃ ಮಳಿಗಿಯವರೆಗೂ ಗಟ್ಟಿಯಾಗಿ ಕಣಶಿಲೆಯಲ್ಲಿ (ಗ್ರಾನೈಟ್)ಯೇ ನಿರ್ಮಾಣವಾದವು. ಕಂಬಗಳ ಅಲಂಕರಣ, ಹೊರ ಭಿತ್ತಿಗಳ ಅಲಂಕರಣ ಹೀಗೆ ವಿವಿಧ ಆಕೃತಿಗಳನ್ನು ಕೆತ್ತುವ ಕೆಲಸಕ್ಕೆ ಸಾಮಾನ್ಯವಾಗಿ ಹೆಚ್ಚು ಸಮಯ ಬೇಕಾಗುತ್ತಿತ್ತು. ಬಹುಶಃ ತಾಂತ್ರಿಕವಾಗಿ ಇದನ್ನೇ ಮೇಲ್ಕಟ್ಟಡಕ್ಕೆ ಮುಂದುವರಿಸಿದರೆ ಉದ್ದೇಶಿತ ಸಮಯದಲ್ಲಿ ನಿರ್ಮಾಣಕಾರ್ಯ ಸಂಪೂರ್ಣಗೊಳ್ಳದೆ ಇರುವ ಸಂಭವ ಹೆಚ್ಚು. ಹೀಗಾಗಿ ಮೂಲ ನಕ್ಷೆಯಲ್ಲಿರುವ ಆಕೃತಿಗಳನ್ನು ಈ ಹೊಸ ಇಟ್ಟಿಗೆ, ಗಾರೆಯನ್ನು ಮೂಲವಸ್ತುವನ್ನಾಗಿ ಮಾಡಿಕೊಂಡು ನಿರ್ಮಿಸಿದರು ಎಂದೆನಿಸುತ್ತದೆ. ದೇವಸ್ಥಾನಕ್ಕಾಗಿಯೇ ವಿವಿಧ ಆಕಾರದ ಇಟ್ಟಿಗೆಯ ತಯಾರಿಕಾ ಕೇಂದ್ರಗಳು ಕಾರ್ಖಾನೆ ಮಾದರಿಯಲ್ಲಿ ಪ್ರಾರಂಭವಾಗಿದ್ದಿರ ಬಹುದು, ಇದರ ಜೊತೆಯಲ್ಲಿಯೇ ಗಾರೆಯೂ ಕೂಡ ಸಾಕಷ್ಟು ಪ್ರಮಾಣದಲ್ಲಿ ತಯಾರಾಗುತ್ತಿತ್ತು. ಇಂದಿಗೂ ಕೂಡ ವಿಜಯನಗರ(ಹಂಪೆ)ದಲ್ಲಿ ಅಲ್ಲಲ್ಲಿ ಗಾರೆ ಅರೆಯುವ ಕಲ್ಲುಗಳನ್ನು ನೋಡಬಹುದು.

ವಿಜಯನಗರದ ಕಲಾವಿದ ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ ಕಲಾತ್ಮಕವಾದ, ಸುಂದರವಾದ ಆಕೃತಿಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತನಾಗಿದ್ದ. ಸಾಮಾನ್ಯವಾಗಿ ಆಕೃತಿಗಳು ಶಿಲ್ಪಗಳಂತೆ ಬಿಡಿಸ ಆಕೃತಿಗಳಲ್ಲಿ, ಹಿನ್ನೆಲೆ ಅಂಟಿಕೊಂಡಂತೆ ಇವೆ. ಇದೇ ತಾಂತ್ರಿಕತೆಯನ್ನು ಶಿಲಾ ಆಕೃತಿಗಳನ್ನು ಭಿತ್ತಿಗಳ ಮೇಲೆ ಕೆತ್ತುವಾಗ ಅನುಸರಿಸಲಾಗುತ್ತಿದೆ. ವಿಜಯನಗರದುದ್ದಕ್ಕೂ ಇರುವ ಶಿಲಾ ಆಕೃತಿಗಳು ಕೆಳ ಉಬ್ಬು ಶಿಲ್ಪಗಳಾಗಿವೆ. ಹೆಚ್ಚು ಹೊರಚಾಚಿರುವ ಉಬ್ಬು ಶಿಲ್ಪಗಳಿಲ್ಲವೆಂದಲ್ಲ. ಆದರೆ ಸಾಮಾನ್ಯವಾಗಿ ಕೆಳ ಉಬ್ಬು ಶಿಲ್ಪಗಳ ಸಂಖ್ಯೆಯೇ ಹೆಚ್ಚು. ಇವುಗಳಿಗೆ ಸಮಾನಾಂತರವಾಗಿ ಗಾರೆ ಆಕೃತಿಗಳೂ ದುಂಡು ಶಿಲ್ಪಗಳಂತೆಯೇ ಹೆಚ್ಚು ಉಬ್ಬು ಆಕೃತಿಗಳಾಗಿ ಬೆಳೆದವು. ಗಾರೆ ಆಕೃತಿಗಳನ್ನು ನೋಡಿದಾಗ, ಹಿನ್ನೆಲೆಯಿಂದ ಸಂಪೂರ್ಣವಾಗಿ ಹೊರಬರುವಂತೆ, ಭಾಸವಾಗದೇ ಇರದು. ಕಲಾವಿದನಿಗೆ ಇಲ್ಲಿ ಸ್ಥಳಾವಕಾಶದ ಸಮಪೂರ್ಣ ಜ್ಞಾನವಿದೆ. ಆದ್ದರಿಂದ ಇರುವ ಅವಕಾಶಕ್ಕೆ ಅನುಗುಣವಾಗಿ ಆಕೃತಿಗಳನ್ನು ನಿರ್ದೇಶಿಸಿದ್ದಾನೆ. ಭಿತ್ತಿ ಚಿತ್ರಗಳನ್ನು ಮತ್ತು ಭಿತ್ತಿ ಆಕೃತಿ ಎಲ್ಲ ಆಕೃತಿಗಳಿಗಿಂತ ಎತ್ತರವಾಗಿದ್ದು ಮಧ್ಯದ್ಲಲಿರುತ್ತದೆ. ಉಳಿದವುಗಳು ಎರಡು ಪಕ್ಕಗಳಲ್ಲಿ ಸಮಾನಾಂತರವಾಗಿ ರಚಿಸಲ್ಪಡುತ್ತವೆ. ಇದನ್ನೇ ನಾವು ಕಲಾ ಇತಿಹಾಸದಲ್ಲಿ ಸಮಾನಾಂತರವಾದ ಸಂಯೋಜನೆ ಎನ್ನುವುದು.

ಹಂಪೆಯಲ್ಲಿ, ಕನಕಗಿರಿಯಲ್ಲಿ, ಇತ್ತ ಹಳೆ ಮೈಸೂರು ಭಾಗದಲ್ಲಿ ನಿರ್ಮಾಣವಾದ ಬಹುತೇಕ ಎಲ್ಲ ದೇವಾಲಯಗಳಲ್ಲೂ ಹೆಚ್ಚು ಕಡಿಮೆ ಒಂದೇ ತೆರನಾದ ಗಾರೆ ಕೆಲಸವಿದೆ. ಹಂಪೆಯಲ್ಲಿಯ ದೇವಾಲಯಗಳಲ್ಲಿ ಕೆಲವನ್ನು ಗಾರೆ ಕಲೆಯ ದೃಷ್ಟಿಯಿಂದ ಅಭಾಸ ಮಾಡಿದಾಗ ಹಲವಾರು ಹೊಸ ವಿಷಯಗಳು ಹೊರಬರುತ್ತವೆ. ಮೊದಲನೆಯದಾಗಿ ಅವುಗಳ ರಚನಾ ವಿಧಾನದಲ್ಲಿ ಸಾಧಿಸಿದ ಪ್ರಗತಿ ಹಾಗೂ ರಚನೆಯಲ್ಲಿ ಕಂಡುಕೊಂಡ ತಾಂತ್ರಿ ಪರಿಣತಿ. ವಿಜಯವಿಠಲ ದೇವಾಲಯ, ವಿರೂಪಾಕ್ಷ ದೇವಾಲಯ, ಕೃಷ್ಣ, ಹಜಾರರಾಮ ದೇವಾಲಯಗಳು ಹಾಗೂ ಅಚ್ಯುತಾಪುರದಲ್ಲಿಯ ಕಿರು ದೇವಾಲಯಗಳು ಗಾರೆ ಕಲೆಗೆ ಉತ್ತಮ ಉದಾಹರಣೆಗಳಾದರೆ ಇತ್ತ ರಾಜ ರಾಣಿಯರ ಖಾಸಗಿ ಕಟ್ಟಡಗಳಾದ ಕಮಲ್ ಮಹಲ್ (ರಾಣಿ ಮಹಲ್) ಮತ್ತು ರಾಣಿಯರ ಸ್ನಾನಗೃಹಗಳು ಉತ್ತಮ ಗುಣಮಟ್ಟದ ಮತ್ತು

ಅತ್ಯಂತ ಆಕರ್ಷಕವಾದ ಗಾರೆ ಕಲೆಯನ್ನು ಹೊಂದಿವೆ. ಹಂಪೆಯ ಭೌಗೋಳಿಕ ವ್ಯಾಪ್ತಿಯಲ್ಲಿರುವ ಕನಕಗಿರಿಯಲ್ಲಿನ ಎಲ್ಲಾ ದೇವಾಲಯಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ.

ಗಾರೆ ಆಕೃತಿಗಳ ಬೆಳವಣಿಗೆಯನ್ನು ಈಗಿನ ಆಂಧ್ರಪ್ರದೇಶದ ಹಲವಾರು ಸ್ಥಳಗಳಲ್ಲಿಯೂ ನೋಡಬಹುದು. ತಿರುಪತಿ ಹತ್ತಿರವಿರುವ ಕಾಳಹಸ್ತಿಯಲ್ಲಿ ಕೃಷ್ಣದೇವರಾಯ ನಿರ್ಮಿಸಿದ ರಾಯಗೋಪುರ, ಹಿಂದುಪುರದ ಹತ್ತಿರವಿರುವ ಲೇಪಾಕ್ಷಿಯಲ್ಲಿ ವೀರಣ್ಣ, ವಿರುಪಣ್ಣ ನಿರ್ಮಿಸಿದ ವೀರಭದ್ರೇಶ್ವರ ದೇವಸ್ಥಾನ, ತಾಡಪತ್ರಿ ಹಾಗೂ ಕಡಪಾ ಜಿಲ್ಲೆಯ ಪುಷ್ಪಗಿರಿಯಲ್ಲಿನ ಸಂತಾನ ಮಲ್ಲೇಶ್ವರ ದೇವಾಲಯದಲ್ಲಿನ ಅಪರೂಪದ ಕಥಾನಕ ಆಕೃತಿಗಳು. ಹೀಗೆ ಅಗಾಧವಾದ ರೀತಿಯಲ್ಲಿ ಗಾರೆ ಆಕೃತಿಗಳು ಬೆಳವಣಿಗೆ ಹೊಂದಿ ಉತ್ಕೃಷ್ಟ ಪರಂಪರೆಗೆ ನಾಂದಿ ಹಾಡಿದವು.

**ಗಾರೆ ಆಕೃತಿಗಳ ಚರ್ಚೆ**

ಪ್ರಸ್ತುತ ಚರ್ಚೆಯಲ್ಲಿ ಮೊಟ್ಟಮೊದಲು ಹಂಪೆಯಲ್ಲಿನ ದೇವಾಲಯಗಳನ್ನು ಮತ್ತು ಖಾಸಗಿ ಕಟ್ಟಡಗಳನ್ನು ನೋಡಬಹುದು.

ಸಾಮಾನ್ಯವಾಗಿ, ಈ ಮೊದಲೇ ವಿವರಸಿದಂತೆ, ದೇವಾಲಯದ ಕಿರೀಟಪ್ರಾಯವಾದ ಗೋಪುರ, ಶಿಖರ ಹಾಗೂ ದೇವಾಲಯದ ಸುತ್ತಲೂ ಇರುವ ಪೌಳಿಮಂಟಪದ, ರಂಗಮಂಟಪ ಮತ್ತು ಕಲ್ಯಾಣ ಮಂಟಪಗಳ ಮೇಲಣ ಸ್ತರಗಳಲ್ಲಿ ಗಾರೆ ಆಕೃತಿಗಳು ಕಂಡುಬರುತ್ತವೆ. ಗೋಪುರ ಶಿಖರಗಳಲ್ಲಿ ಬಿಡಿಯಾಗಿ ವಿಭಿನ್ನ ಸ್ತರಗಳಲ್ಲಿ ಹಾಗೂ ಕಿರುದ್ವಾರಗಳ ಎರಡು ಬದಿಗಳಲ್ಲಿ ದ್ವಾರಪಾಲಕರಾಗಿ ಮತ್ತೂ ಮೂಲೆಗಳಲ್ಲಿ ಕಿರುವಿಮಾನಗಳಲ್ಲಿ ಹೊರಚಾಚಿರುವ ನಾಸಿಕಗಳಲ್ಲಿದ ಅಲಂಕಾರಿಕ ವಿಗ್ರಹಗಳಂತೆ ಆಕೃತಿಗಳು ಕಂಡು ಬರುತ್ತವೆ. ಮಂಟಪಗಳ ಮೇಲಿರುವ ಗೂಡುಗಳಲ್ಲಿ ಮತ್ತು ಕಿರು ವಿಮಾನಗಳಲ್ಲಿ ಹಲವಾರು ದೇವಾನುದೇವತೆಗಳ ಆಕೃತಿಗಳ ರಚನೆಗಳು ಇವೆ. ಅಲ್ಲದೆ ಅತ್ಯಂತ ನಾಜೂಕಾದ ಸುರುಳಿ ಯಂತಹ ಬಳ್ಳಿಗಳ ವಿನ್ಯಾಸ, ಮಕರ, ವ್ಯಾಳ ಮುಖಗಳು, ಪಕ್ಷಿಗಳ ಸಾಲುಗಳ ವಿನ್ಯಾಸ ಹೀಗೆ ಹಲವಾರು ಹೊಸ ನಮೂನೆಗಳು ಗಾರೆಯಲ್ಲಿ ಮತ್ತು ಇಟ್ಟಿಗೆಯಲ್ಲಿ ಅರಳ ತೊಡಗಿದವು.

ವಿರೂಪಾಕ್ಷ ದೇವಾಲಯದಲ್ಲಿನ ಪಕ್ಕದ ಮಂಟಪದ ಮೇಲೆ ಇರುವ ಆಕೃತಿಗಳು ಒಂದೇ ತೆರನಾದ ಶೈಲಿಯನ್ನು ಹೊಂದಿವೆ. ಪ್ರಾಯಶಃ ಈ ಎಲ್ಲಾ ಆಕೃತಿಗಳು ಒಂದೇ ಗುಂಪಿನ ಕಲಾವಿದರ ಕೆತ್ತನೆಯಾಗಿರಬೇಕು. ಉಮಾಮಹೇಶಮೂರ್ತಿ ಮತ್ತು ಲಕ್ಷ್ಮೀ ನರಸಿಂಹ, ವೃಷಭವಾಹನ ಶಿವ ಮತ್ತು ಪಾರ್ವತಿ ಎಲ್ಲವೂ ಆಸನ ಕೃತಿಗಳೇ. ಉಮಾಮಹೇಶ ಮೂರ್ತಿ ಮತ್ತು ಲಕ್ಷ್ಮೀನರಸಿಂಹ ಆಕೃತಿಗಳಲ್ಲಿ ಅತ್ಯಂತ ಸಾಮ್ಯತೆ ಇದೆ. ಎರಡೂ ಆಕೃತಿಗಳಲ್ಲಿ ಸ್ತ್ರೀ ಅಂದರೆ ಪಾರ್ವತಿ ಮತ್ತು ಲಕ್ಷ್ಮೀ ಕ್ರಮವಾಗಿ ತಮ್ಮ ಪುರುಷರ ಎಡ ತೊಡೆಯ ಮೇಲೆ ಕುಳಿತಿದ್ದಾರೆ. ಆಕೃತಿಗಳಲ್ಲಿ ಶಿವ ಮತ್ತು ನರಸಿಂಹ ಪೀಠಗಳ ಮೇಲೆ ಮಹಾರಾಜ ಲೀಲಾಸನದಲ್ಲಿ ಕುಳಿತಿದ್ದಾರೆ. ಚತುರ್ಭುಜರಾಗಿರುವ ಈ ಆಕೃತಿಗಳಲ್ಲಿ ದೈಹಿಕ ನೈಜತೆ ಸ್ಪಷ್ಟವಾಗಿ ಕಾಣುತ್ತದೆ. ಸರ್ವ ಅಲಂಕಾರ ಭೂಷಣವಾದ ಆಕೃತಿಗಳಲ್ಲಿ ಸ್ವಾಭಾವಿಕ ನಾಜೂಕುತನ ಎದ್ದುಕಾಣುತ್ತದೆ.

ಆಕೃತಿಗಳ ಮುಖ್ಯ ಭಾಗವನ್ನು ಮತ್ತು ಪೀಠಗಳನ್ನು ಚಿಕ್ಕ ಚಿಕ್ಕ ಇಟ್ಟಿಗೆಗಳಲ್ಲಿ ಆಕೃತಿಯ ಆಕಾರಕ್ಕೆ ತಕ್ಕಂತೆ ಕಟ್ಟಿಕೊಂಡು ನಂತರ ಕೈ, ಕಾಲು, ಮುಖ ಹಾಗೂ ವಿವಿಧ ಭಾಗಗಳನ್ನು ಗಾರೆಯಿಂದ ನಿಧಾನವಾಗಿ ಹಂತ ಹಂತವಾಗಿ ರಚಿಸಲಾಗುತ್ತದೆ. ಕಲವೊಮ್ಮೆ ಹೊರಚಾಚಿರುವ ಭಾಗಗಳನ್ನು / ಭಾಗವನ್ನು ಹಿಡಿಯಲು ಒಳಗಿನಿಂದ ಬಿದಿರು ಅಥವಾ ಕಬ್ಬಿಣದ ತಂತಿಗಳನ್ನು ಬಳಸಿದ್ದಾರೆ. ಇದನ್ನೆ ಆರ್ಮೇಚರ್ ಎನ್ನುವುದು. ಗಾರೆ ಅಥವಾ ಸಿಮೆಂಟಿನ ಆಕೃತಿಗಳನ್ನು ಇಡಿಯಾಗಿ ಅದೇ ಮಾಧ್ಯಮದಿಂದ ಮಾಡಿದರೆ ಸಂಪೂರ್ಣವಾಗಿ ಆರ್ಮೇಚರ್ ಎನ್ನುವುದು. ಗಾರೆ ಅಥವಾ ಸಿಮೆಂಟಿನ ಆಕೃತಿಗಳನ್ನು ಇಡಿಯಾಗಿ ಅದೇ ಮಾಧ್ಯಮದಿಂದ ಮಾಡಿದರೆ ಸಂಪೂರ್ಣವಾಗಿ ಆರ್ಮೇಚರ್ ಬಳಸಬೇಕಾಗುತ್ತದೆ. ಅಂದರೆ ಆಕೃತಿಗಳ ಭದ್ರತೆ ಮತ್ತು ಬಳಕೆಗೆ ಅದು ಅವಶ್ಯಕವಾಗಿದೆ. ವಿಜಯನಗರದ ಹಲವಾರು ಆಕೃತಿಗಳಲ್ಲಿ ಈ ತಾಂತ್ರಿಕತೆಗಳನ್ನು ಉಪಯೋಗಿಸಿರುವುದನ್ನು ನಾವು ಪ್ರಸ್ತುತವಾಗಿ ಗಮನಿಸಬಹುದು.

ವೃಷಭವಾಹನ ಶಿವ ಪಾರ್ವತಿ ಆಕೃತಿಯಲ್ಲಿ ಶಿವ ಪಾರ್ವತಿ ವೃಷಭದ ಮೇಲೆ ಎರಡೂ ಕಾಲುಗಳನ್ನು ಸವಾರಿ ಮಾಡುವ ಹಾಗೆ ಹರಡಿ ಕುಳಿತಿದ್ದಾರೆ. ಸರ್ವಾಲಂಕರಣ ಭೂಷಿತವಾದ ನಂದಿ ಮತ್ತು ಶಿವ ಪಾರ್ವತಿಯರು ಅತ್ಯಂತ ಸ್ವಾಭಾವಿಕವಾಗಿ ಮೂಡಿಬಂದಿದ್ದಾರೆ. ಎರಡೂ ಪಕ್ಕಗಳಲ್ಲಿ ಗಣಗಳು ಭಕ್ತಿಯಿಮದ ಕೈಮುಗಿದು ನಿಂತಿದ್ದಾರೆ. ಇಲ್ಲಿ ನಾವು ನಂದಿಯನ್ನು ವಿಶೇಷವಾಗಿ ಗಮನಿಸಬೇಕು. ಗೂಡಿನ ಅಳತೆಗೆ ಮತ್ತು ನಂದಿಯ ದೇಹದ ಅಡ್ಡಲಾಗಿ ಚಾಚಿಕೊಂಡಿರುವ ಅಳತೆಯನ್ನು ಗಮನಿಸಿದರೆ ಸ್ಥಳದ ಅವಕಾಶದ ಹೊಂದಾಣಿಕೆಯನ್ನು ಗಮನಿಸಬಹುದು. ನಂದಿ ಹಿಂಭಾಗದಲ್ಲಿ ಕೊಂಚ ಮಣಿದಂತೆ ಹಿಂಗಾಲುಗಳನ್ನು ಮಡಚಿದೆ. ಮೇಲೆ ಕುಳಿತ ಪಾರ್ವತಿ ಪರಮೇಶ್ವರರು ಅತ್ಯಂತ ಆರಾಮವಾಗಿ ಹಾಗೂ ಆಕರ್ಷಕವಾಗಿ ಕಾಣುತ್ತಾರೆ. ಇದೇ ದೇವಾಲಯದಲ್ಲಿನ ವೃಷಭವಾಹನ ಶಿವ ಹಾಗೂ ಬ್ರಹ್ಮ ಮತ್ತು ನರ್ತನ ಭಂಗಿಯಲ್ಲಿರುವ ಗಣಪತಿ ಗಾರೆ ಕಲೆಗೆ ಉತ್ತಮ ಉದಾಹರಣೆಗಳಾಗಿವೆ. ಶೈಲಿಯಲ್ಲಿ ಹಾಗೂ ರಚನೆಯಲ್ಲಿ ಒಂದೇ ಗುಂಪಿಗೆ ಸೇರುವ ಈ ಆಕೃತಿಗಳು ಶೈಲಿಯಲ್ಲಿ ಪ್ರೌಢಿಮೆಯನ್ನು ಬಿಂಬಿಸುತ್ತವೆ. ಪುರುಷಾಕೃತಿಗಳಲ್ಲಿ ಸಾಮಾನ್ಯವಾಗಿ ಕುಸುರಿನಿಂದ ಕೂಡಿ ಕಂಠಹಾರಗಳು, ಮಾಲೆಗಳು, ಸ್ಕಂದಾಲಂಕಣಗಳು ಹಾಗೂ ಕಿರೀಟಗಳು ಆಕರ್ಷಕವಾಗಿ ಮೂಡಿಬಂದಿವೆ. ಉಡುಗೆ ತೊಡುಗೆ ಕೂಡಾ ನೈಜತೆಯನ್ನು ಹೊಂದಿವೆ. ಇನ್ನು ಪ್ರತಿಮಾ ಲಕ್ಷಣಕ್ಕನುಗುಣವಾಗಿ ಆಯಾ ಆಕೃತಿಗಳು ತಮ್ಮ ಆಯುಧಗಳನ್ನು ಹಿಡಿದಿವೆ. ನರ್ತನ ಗಣಪತಿಯು ಬಹುಶಃ ನರ್ತನ ಆಕೃತಿಗಳ ಮಧ್ಯೆ ಇದೆ ಎನಿಸುತ್ತದೆ. ಎರಡೂ ಬದಿಯಲ್ಲಿರುವ ನರ್ತಿಸುತ್ತಿರುವ ಸ್ತ್ರೀ ಆಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ.

ವಿರೂಪಾಕ್ಷ ದೇವಾಲಯದ ಆಕೃತಿಗಳಲ್ಲಿ ಗ್ರಾನೈಟ್ ಶಿಲೆಯಲ್ಲಿ ಸಾಧ್ಯವಾಗದ ನೈಜತೆ ಮೂಡಿಬಂದಿದೆ. ಅಲ್ಲದೆ ಸಂಯೋಜನೆಯಲ್ಲಿ ಪ್ರೌಢಿಮೆ ಎದ್ದುಕಾಣುತ್ತದೆ.

ಹಜಾರ ರಾಮಚಂದ್ರ ದೇವಸ್ಥಾನದಲ್ಲಿನ ಆಕೃತಿಗಳು ಸಭೆಯ ಚಿತ್ರಗಳಂತೆ[3] ಹೆಚ್ಚಿನ ಸಂಖ್ಯೆಯ ಆಕೃತಿಗಳನ್ನು ಹೊಂದಿವೆ. ಮಧ್ಯದಲ್ಲಿ ಮುಖ್ಯ ಆಕೃತಿ ಮತ್ತು ಇಕ್ಕೆಲಗಳಲ್ಲಿ ಕೈಮುಗಿದು ವಿಭಿನ್ನ ಉಡುಗೆತೊಡುಗೆಗಳೊಂದಿಗೆ ನಿಂತಿರುವ ಆಕೃತಿಗಳು ಗಮನ ಸೆಳೆಯುತ್ತವೆ. ಚಿತ್ರ ೫ರಲ್ಲಿ ನಿಂತಿರುವ ವಿಷ್ಣು ಲಕ್ಷ್ಮಿಯ ಆಕೃತಿಗಳು ಮತ್ತು ಚಿತ್ರ ೬ ರಲ್ಲಿ ಕುಳಿತ ಭಂಗಿಯಲ್ಲಿರುವ ವೈಕುಂಠ ವಿಷ್ಣು (ಲಕ್ಷ್ಮಿನಾರಾಯಣ) ವಿರೂಪಾಕ್ಷ ದೇವಾಲಯದ ಆಕೃತಿಗಳಂತೆಯೇ ಇವೆ. ಆದರೆ ಕೊಂಚ ನೀಳವಾದ ಉದ್ದವೆನಿಸುವ ದೇಹ ಸೌಂದರ್ಯವನ್ನು ಹೊಂದಿವೆ. ಇಲ್ಲಿ ಆಕೃತಿಗಳು ಧರಿಸಿರುವ ಕಿರೀಟಗಳಲ್ಲಿ ವಿರೂಪಾಕ್ಷ ದೇವಾಲಯದವುಗಳಿಗಿಂತ ವಿಭಿನ್ನತೆಯನ್ನು ಗಮನಿಸಬಹುದು. ಶಿಲ್ಪಗಳಲ್ಲಿರುವ ಸರಳವಾದ ಹೆಚ್ಚು ಅಲಂಕಾರಿಕವಲ್ಲದ ಶೈಲಿ ಇಲ್ಲಿ ಮೂಡಿಬಂದಿದೆ. ಸಂಯೋಜನೆಯಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಆಕೃತಿಗಳನ್ನು ಜೋಡಿಸಲಾಗಿದೆ.

ಹೆಚ್ಚು ಜೀರ್ಣಾವಸ್ಥೆಯಲ್ಲಿರುವ ಕೃಷ್ಣ ದೇವಾಲಯದಲ್ಲಿ ಗಾರೆ ಆಕೃತಿಗಳು ಬಹುಶಃ ಮೂಲದಲ್ಲಿ ಅತ್ಯಂತ ಆಕರ್ಷಕವಾದ ಹಾಗೂ ಅಷ್ಟೇ ಉತ್ಕೃಷ್ಟವಾದ ಪ್ರೌಢಶೈಲಿಯನ್ನು ಹೊಂದಿದಂತೆ ತೋರುತ್ತವೆ.

ಶ್ರೀದೇವಿ ಭೂದೇವಿಯರೊಂದಿಗೆ ವಿಷ್ಣುವನ್ನು ಆಕೃತಿಯೊಂದರಲ್ಲಿ ತೋರಿಸಲಾಗಿದೆ. ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಎರಡೂ ಬದಿಗಳಲ್ಲಿ ದೇವಿಯರು ಲಾಲಿತ್ಯಪೂರ್ಣವಾದ ಭಂಗಿಯಲ್ಲಿ ನಿಂತಿದ್ದಾರೆ. ವಿಷ್ಣುವಿನ ಎಡಭಾಗದಲ್ಲಿ ಸ್ತ್ರೀಯರು ಸಾಲು ಆಕೃತಿಗಳಿದ್ದರೆ, ಬಲಗಡೆ ಪುರುಷರಸಾಲು ಆಕೃತಿಗಳಿವೆ. ಕೈಮುಗಿದ ಹಾಗೂ ವಿಭಿನ್ನ ಭವ ಭಂಗಿಗಳನ್ನು ಈ ಆಕೃತಿಗಳಲ್ಲಿ ಗಮನಿಸಬಹುದು. ಆಕೃತಿಗಳಲ್ಲಿನ ನೈಜತೆ ಮತ್ತು ಸ್ವಾಭಾವಿಕ ಸಹಜತೆ ಎಲ್ಲವನ್ನು ಜೀವಂತವಾಗಿಸುತ್ತವೆ. ಆರೋಗ್ಯಭರಿತ ದೇವಸೌಂದರ್ಯ, ದೇಹದ ಕರಾರುವಕ್ಕಾದ ಉಬ್ಬುತಗ್ಗುಗಳು ಆಕೃತಿಗಳ ಸಹಜತೆಯನ್ನು ಹೆಚ್ಚಿಸುತ್ತವೆ. ಹಜಾರ ರಾಮಚಂದ್ರ ದೇವಾಲಯದಲ್ಲಿರುವ ರತಿ ಮನ್ಮಥರ ಆಕೃತಿಗಳನ್ನು ಗಮನಿಸಿದಾಗ ಮೇಲೆ ವಿವರಿಸಿದ ಭಾವನೆ ಬಾರದೆ ಇರದು. ಇದೇ ದೇವಾಲಯದ ಆವರಣದಲ್ಲಿಯ ಕಿರುದೇವಾಲಯದ ಶಿಖರದ ಮೇಲಿನ ವಿಷ್ಣು ಮತ್ತು ದಕ್ಷಿಣದ ಭಗ್ನಗೊಂಡಿರುವ ಮಹಾಗೋಪುರದ ವಿವಿಧ ಹಂತಗಳನ್ನು ಗಮನಿಸಬಹುದು. ವಿಷ್ಣು ಮತ್ತು ದೇವಿ ಹಾಗೂ ಕುಳಿತ ವಿಷ್ಣು ಮತ್ತು ದ್ವಾರಪಾಲಕರು ಶೈಲಿಯಲ್ಲಿ ಒಂದೇ ತರಹವಾಗಿವೆ. ಕೊಂಚ ಕುಳ್ಳು ಎನಿಸುವ ದೇಹದ ರಚನೆಯನ್ನುಳಿದರೆ, ಉಳಿದ ಎಲ್ಲ ಅಂಶಗಳು ಕೃಷ್ಣ ದೇವಾಲಯದ ಮುಖ್ಯ ಗಾರೆ ಆಕೃತಿಗಳಿಗೆ ಸರಿಸಮವಾಗಿವೆ.

ಕೃಷ್ಣ ದೇವಾಲಯದ ಮುಖ್ಯದ್ವಾರದ ಮೇಲಿನ ಗೋಪುರ ಹೆಚ್ಚು ಕಡಿಮೆ ಇಂದು ಭಗ್ನಾವಸ್ಥೆಯಲ್ಲಿದೆ. ಅಳದುಳಿದ ಕೆಲವು ಆಕೃತಿಗಳನ್ನು ಗಮನಿಸಿದರೆ ಅತ್ಯಂತ ಪ್ರೌಢವಾದ ಶೈಲಿಯನ್ನು ಹೊಂದಿದ ಆಕೃತಿಗಳೆಂದು ಅನ್ನಿಸದೆ ಇರದು. ಶಿಖರದ ಹೊರಕ್ಕೆ ಹರಡಿರುವ ಶಾಲದ ಮುಖ, ಅದರ ಪಕಳೆಗಳ ಹಾಗೆ ಕಾಣುವ ವಿನ್ಯಾಸ ಮತ್ತು ಮೇಲೆ  ವಿಶಾಲವಾಗಿ ಚಾಚಿರುವ ವ್ಯಾಳಮುಖ ಇವೆಲ್ಲವೂ ಗಾರೆಯಿಂದಲೇ ರಚಿಸಲ್ಪಟ್ಟಿವೆ. ಶಾಲಮುಖದ ಮೇಲಣ ಮಕರಗಳು, ಅವುಗಳಿಂದ ಕಲಾವಿದ ಯಾವ ಹಿಡಿತಕ್ಕೂ ಒಳಗಾಗದೇ ತನ್ನಲ್ಲಿ ಅಡಗಿರುವ ಕಲೆಯನ್ನು ಅಭಿವ್ಯಕ್ತಗೊಳಿಸಿರುವ ರೀತಿ ನಿಜಕ್ಕೂ ಶ್ಲಾಘನೀಯವಾಗಿದೆ.

ಇನ್ನು ಪ್ರಸಿದ್ಧ ವಿಠಲ ದೇವಸ್ಥಾನದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಬಹುತೇಕವಾಗಿ ಈ ದೇವಾಲಯದ ಗಾರೆಯ ಕೃತಿಗಳ ಭಗ್ನಾವಸ್ಥೆಯಲ್ಲಿವೆ. ಒಂದು ಹಂತದಲ್ಲಿ ಇಲ್ಲಿನ ಶಿಖರ, ಗೋಪುರಗಳ ಮೇಲಣ ಉಪ್ಪರಿಗೆಗಳಲ್ಲಿ ಗಾರೆಯಾಕೃತಿಗಳು ರಾರಾಜಿಸಿದ್ದಿರಬಹುದು. ವಿಜಯ ವಿಠಲ ದೇವಾಲಯವನ್ನು ವಾಸ್ತುಕೃತಿ, ಶಿಲ್ಪಗಳು, ವಿಭಿನ್ನತೆ, ಶೈಲಿಯ ದೃಷ್ಟಿಯಿಂದ ಮುಖ್ಯವಾದ ಕೃತಿಯೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಇದಕ್ಕೆ  ಪೂರಕವಾಗಿ ಶಿಖರದ ಮೇಲೆ ಉಳಿದ ಕೆಲವೇ ಆಕೃತಿಗಳು ಇವೆ.

ವಿಠಲ ದೇವಾಲಯದ ಗಾರೆಯಾಕೃತಿಗಳ ಎರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ತೆಗೆದುಕೊಂಡಿದೆ. ಗರ್ಭಗೃಹದ ಶಿಖರದ ಮೇಲಿನ ಶುಕನಾಸದ ಸ್ಥಳ ದಲ್ಲಿರುವ ವಿಷ್ಣುವಿನ ಮೂರ್ತಿ ಮತ್ತು ಅದೇ ಶಿಖರದ ದಕ್ಷಿಣ ಭಾಗದಲ್ಲಿನ ಗೋವರ್ಧನ ಕೃಷ್ಣ. ವಿಷ್ಣುವಿನ ಆಕೃತಿ ಶೈಲಿಯಲ್ಲಿ ಸಾಕಷ್ಟು ಪ್ರೌಢಿಮೆಯನ್ನು ಹೊಂದಿದೆ. ಆದರೆ ಹೆಚ್ಚು ಆಕರ್ಷಕವಾಗಿರುವುದು ಗೋವರ್ಧನ ಕೃಷ್ಣ ಕೃತಿಯಾಗಿದೆ. ಆಕೃತಿಯಲ್ಲಿ ಕೃಷ್ಣ ಬಳಗೈಯನ್ನು ಮೇಲಕ್ಕೆತ್ತಿ ಗೋವರ್ಧನಗಿರಿಯನ್ನು ಎತ್ತಿ ಹಿಡಿದಿದ್ದಾನೆ. ಎಡಗೈ ಕಟ್ಯಾವಲಂಬಿತ ಸ್ಥಿತಿಯಲ್ಲಿದೆ. ಎರಡೂ ಬದಿಯಲ್ಲಿ ಗೋವುಗಳನ್ನು ತೋರಿಸಲಾಗಿದೆ. ದಷ್ಟಪುಷ್ಟವಾದ ಕೊಂಚ ಕುಳ್ಳ ಎನಿಸುವ ಶರೀರ ಕೃಷ್ಣನನ್ನು ಬಾಲಕನೆಂಬ ಭಾವನೆ ತರಿಸುತ್ತದೆ. ಇಂತಹದೇ ಶಿಲ್ಪ ಪ್ರಪ್ರಥಮವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಾದಾಮಿಯ ಉತ್ತರ ಗುಡ್ಡದ ಮೇಲಣ ಶಿವಾಲಯ (ವೈಷ್ಣವ ದೇವಾಲಯ)ದ ದಕ್ಷಿಣ ಹೊರಗೋಡೆಯ ಮೇಲಿರುವುದನ್ನು ನೆನಪಿಸಿಕೊಳ್ಳ ಬಹುದು. ಒಂದಂತೂ ನಿಜ. ವಿಜಯನಗರದ ಕಲಾವಿದರಿಗೆ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳರ ಕಲೆಯ ಆಗಾಧವಾದ ಹಿನ್ನೆಲೆ ಇತ್ತು. ಚಾಲುಕ್ಯರ ಕಲೆಯ ಹಲವಾರು ಅಂಶಗಳೂ ಸ್ಫೂರ್ತಿದಾಯಕವಾಗಿ ಉಳಿದು, ಬೆಳೆದುಕೊಂಡು ಬಂದಿವೆ. ಪ್ರಸ್ತುತ ವಿಠಲ ದೇವಾಲಯದ ಗೋವರ್ಧನಧಾರಿ ಕೃಷ್ಣ ಮತ್ತು ಬಾದಾಮಿಯ ಮೇಲಣ ಶಿವಾಲಯದ ಶಿಲ್ಪಗಳನ್ನು ಪಕ್ಕಪಕ್ಕದಲ್ಲಿರಿಸಿ ತುಲನೆ ಮಾಡಿದಾಗ ಶೈಲಿಯ ಪ್ರಭಾವ ಮತ್ತು ಶಿಲ್ಪದ ವಸ್ತುವಿನ ಪ್ರಭಾವ ಎಷ್ಟು ಗಾಢವಾಗಿದೆ ಎಂದು ಊಹಿಸಬಹುದು. ಕಲೆಯ ಅಂಶಗಳು ಹಾಗೂ ಕಲಾತ್ಮಕ ಗುಣಗಳ ಶೈಲಿ ನಿರಂತರವಾಗಿ ಪರೋಕ್ಷವಾಗಿ ಮುಂದುವರೆಯುತ್ತಲೆ ಇರುತ್ತವೆ. ಇದಕ್ಕೆ ಮುಖ್ಯ ಕಾರಣ ಕಲಾವಿದನೆ ಆಗಿದ್ದಾನೆ.

ಹಂಪೆಯ ಪರಿಸರದ ಮತ್ತೊಂದು ಮುಕ್ಯ ಆಕರ್ಷಣೆಯಾದ ಅಂದು ರಾಜರಾಣಿಯರ ಖಾಸಗಿ ಕಟ್ಟಡವಾಗಿದ್ದ ರಾಣಿಮಹಲ್ ಅಥವಾ ಕಮಲಮಹಲ್ ಮತ್ತು ರಾಣಿಯರ ಸ್ನಾನ ಗೃಹಗಳು. ಇಸ್ಲಾಮಿಕ್ ವಾಸ್ತುಶೈಲಿಯ ಸೊಗಡಿನೊಮದಿಗೆ ಮತ್ತು ಭಾರತೀಯ ಶೈಲಿಯ ಮಿಶ್ರಣದೊಂದಿಗೆ ನಿರ್ಮಾಣಗೊಂಡ ಈ ಎರಡೂ ಕಟ್ಟಡಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ.

ಕಮಲಮಹಲ್‌ನ ಕಮಾನಿನ ಸುತ್ತಲೂ ಐದು ಸಾಲಿನಲ್ಲಿ ವಿವಿಧ ವಿನ್ಯಾಸವಾಗಿ ರೂಪಗೊಂಡಿರುವ ಕೆಳ ಉಬ್ಬು ಚಿತ್ರಣ ಕ್ಲಿಷ್ಟಕರವಾದ, ಅಷ್ಟೇ ಸೂಕ್ಷ್ಮವಾದ ವಿನ್ಯಾಸಗಳಿಂದ ಕೂಡಿದೆ. ತೀರ ಮೇಲಣ ಸ್ಥರದಲ್ಲಿನ ವ್ಯಾಳಮುಖದಿಂದ ಈ ವಿನ್ಯಾಸ ಉಗಮವಾಗುತ್ತದೆ. ವಿವಿಧ ಬಳ್ಳಿಗಳು, ಪಕ್ಷಗಳು ಹಾಗೂ ವೃತ್ತಾಕಾರದ ವಿಭಿನ್ನ ಸುಳಿಯ ಚಿತ್ರಣ ಕಂಡುಬರುತ್ತದೆ. ಕಮಲಮಹಲ್ ನ ಮೇಲ್ಮಹಡಿಯು ಕಮಾನಿನ ವಿನ್ಯಾಸವನ್ನು ತೋರಿಸುತ್ತದೆ. ಬಳ್ಳಿಗಳು, ಎಲೆಗಳು ಹಾಗೂ ಒಂದಕ್ಕೊಂದು ಹೊಂದಿದಂತೆ ಇರುವ ಪಕ್ಷಿಗಳು ಕಮಾನಿನ ಸೌಂದರ್ಯವನ್ನು ಹೆಚ್ಚಿಸಿವೆ. ಕಮಲಮಹಲ್‌ನ ಇನ್ನೊಂದು ಕಮಾನಿನಲ್ಲಿ ರೂಪಗೊಂಡ ಹಕ್ಕಿಗಳ ಸಾಲು ಆಕರ್ಷಣೀಯವಾಗಿದೆ. ಈ ಹಕ್ಕಿಗಳನ್ನು ಮೊದಲೇ ಅಚ್ಚಿನಲ್ಲಿ ತಯಾರಿಸಿಕೊಂಡು ನಂತರ ಗೋಡೆಗೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ಕೂಡಿಸಿದೆ.[4] ಕಮಾನು ಭಾವ ಗೀತಾತ್ಮಕವಾದ

ವೃತ್ತಾಕಾರದೊಂದಿಗೆ ಹೊಂದಿಕೊಂಡಿದೆ. ವಿಜಯನಗರ ಪೂರ್ವಕಾಲದ ದೇವಾಲಯಗಳ ಭುವನೇಶ್ವರಿಯನ್ನು ಜ್ಞಾಪಕಕ್ಕೆ ತರುವ ರಾಣಿಯರ ಸ್ನಾನಗೃಹದ ಒಂದು ಒಳಮಾಳಿಗೆಯಲ್ಲಿನ ಗಾರೆ ಕೆಲಸ ಬಹುಶಃ ಕಲಾವಿದನೋರ್ವನ ಜಾಣ್ಮೆಯನ್ನು ಪ್ರದರ್ಶಿಸುತ್ತದೆ.

ಹಂಪೆಯಲ್ಲಿನ ಮುಖ್ಯ ದೇವಾಲಯಗಳು ಮತ್ತು ಖಾಸಗಿ ಕಟ್ಟಡಗಳು ಪ್ರಾಯಶಃ ರಾಜರ ಅಥವಾ ಅವರ ಮಂತ್ರಿಗಳ ಸ್ವಂತ ನಿರ್ದೇಶನದಲ್ಲಿ ಆದವುಗಳಾಗಿವೆ. ಹಂಪೆಯಲ್ಲಿ ವಾಸ್ತವಿಕವಾದ ಶಿಲ್ಪ ಮತ್ತು ಗಾರೆ ಕಲಾವಿದ ಹಾಗೂ ವಿನ್ಯಾಸಗಾರ ಶ್ರಮ ತೆಗೆದುಕೊಂಡು ಕೆಲಸ ಮಾಡಿದಷ್ಟು ಪ್ರಾಯಶಃ ಬೇರೆಲ್ಲೂ ಮಾಡಿರಲಿಕ್ಕಿಲ್ಲವೇನೋ ಎಂಬ ಭಾವನೆ ಬರುತ್ತದೆ. ಆದರೆ ಹಲವಾರು ಹೊರಗಿನ ಉದಾಹರಣೆಗಳಿಮದ ಅಲ್ಲೂ ಕೂಡ ಆಯಾ ಸ್ಥಳೀಯ ನಾಯಕರ ಮಾಂಡಲಿಕರ ಆಶ್ರಯ ಮತ್ತು ಸ್ವಂತ ಪೋಷಣೆಯಲ್ಲಿ ನಿರ್ಮಾಣವಾದ ದೇವಾಲಯಗಳು ಮತ್ತು ಅಲ್ಲಿನ ಕಲೆ ಪ್ರಾಯಶಃ ಹಂಪೆಯಷ್ಟೇ ಪ್ರಗತಿಯನ್ನು, ಪ್ರೌಢಿಮೆಯ ಶೈಲಿಯನ್ನೂ ತೋರಿಸುತ್ತವೆ.

ಗಂಗಾವತಿ ತಾಲ್ಲೂಕಿನ ಕನಕಗಿರಿಯಲ್ಲಿನ ಹಲವಾರು ದೇವಾಲಯಗಳಲ್ಲಿ ಪ್ರಾಯಶಃಗಾರೆ ಕಲೆಯ ಅತ್ಯುತ್ತಮ ಉದಾಹರಣೆಗಳು ಇವೆ. ಕನಕಗಿರಿಯ ಪ್ರಮುಖ ದೇವಾಲಯ ಕನಕಾಲಪತಿ ಅಥವಾ ನರಸಿಂಹ ದೇವಸ್ಥಾನದ ಕಲ್ಯಾಣ ಮಂಟಪ, ಗೋಪುರ, ಶಿಖರ ಹಾಗೂ ಪ್ರಾಕಾರದ ಒಳಗಿನ ಮಂಟಪದ ಸಾಲಿನ ಮೇಲೆ ಹಲವಾರು ಉತ್ತಮ ಉದಾಹರಣೆಗಳಿವೆ. ವಿಜಯನಗರದ ಮಾಂಡಲೀಕ ಮನೆತನವಿದ್ದ ಕನಕಗಿರಿಯಲ್ಲಿ ಹೀಗೆ ವಿಭಿನ್ನ ದೇವಾನುದೇವತೆಗಳನ್ನು ಚಿತ್ರಸುವ ಆಕೃತಿಗಳಿವೆ. ಈ ದೇವಾಲಯದಲ್ಲಿ ಕಲ್ಯಾಣ ಮಂಟಪದ ಒಳ ಭಿತ್ತಿಯಲ್ಲಿ ವಿಭಿನ್ನ ದೃಶ್ಯಗಳನ್ನು ತೋರಿಸುವ ಗಾರೆಯ ಕೃತಿಗಳಿವೆ. ವಿಶೇಷವೇನೆಂದರೆ ಎಲ್ಲಾ ಆಕೃತಿಗಳೂ ಬಣ್ಣದಿಂದ ಕೂಡಿವೆ. ಮೂಲದಲ್ಲೇ ಮಾಡಿದ ಒಣ್ಣಕ್ಕೆ ನಂತರದಲ್ಲಿ ವಾರ್ನಿಷ್ ಲೇಪನ ಮಾಡಿರುವ ಸಾಧ್ಯತೆ ಇದೆ. ವೈಕುಂಠ ವಿಷ್ಣು, ಶಿವಪಾರ್ವತಿಯರ ಕಲ್ಯಾಣ, ಶ್ರೀಕೃಷ್ಣ, ಮತ್ತು ರಾಮರ ಕಲ್ಯಾಣದ ಭಿನ್ನ ಚಿತ್ರಣಗಳು, ಗೋಪಿಕೆಯರ ಮಧ್ಯೆ ಕೃಷ್ಣ, ರಾಮ ಲಕ್ಷ್ಮಣ ಹಾಗೂ ಇನ್ನಿತರ ಆಕೃತಿಗಳು ಇವೆ. ಶೈಲಿಯಲ್ಲಿ ಮುಖ್ಯ ಆಕೃತಿಗಳೊಂದಿಗೆ ಸಾಮ್ಯತೆ ಅಷ್ಟಾಗಿ ಕಂಡುಬರುವುದಿಲ್ಲ. ಇಲ್ಲೂ ಕೂಡಾ ಇಟ್ಟಿಗೆ ಗಾರೆ ಆಕೃತಿಗಳ ನಿರ್ಮಾಣದಲ್ಲಿ ಮೂಲವಸ್ತುಗಳಾಗಿವೆ. ಬಹುಶಃ ಹೆಚ್ಚು ಅಳತೆಬದ್ಧವಾದ ಮತ್ತು ಅಷ್ಟೇ ಸಮರ್ಪಕವಾದ ಸಹಜವೆನಿಸುವ ಆಕೃತಿಗಳು ಇಲ್ಲಿ ಕಾಣಬರುತ್ತವೆ. ಲಕ್ಷ್ಮೀನರಸಿಂಹ ಆಕೃತಿಯಲ್ಲಿ ಪೀಠದ ಮೇಲೆ ಕುಳಿತಿರುವ ನರಸಿಂಹನ ತೊಡೆಯ ಮೇಲೆ ಲಕ್ಷ್ಮಿಯನ್ನು ಕೂಡಿಸಲಾಗಿದೆ. ಇಲ್ಲಿ ಕಲಾವಿದನು ಹೊರಕ್ಕೆ ಚಾಚಿರುವ ಕೈಗಳನ್ನು ಗಟ್ಟಿಯಾಗಿ ಕೂಡಿಸಲು ತಂತಿಯನ್ನು ಆರ್ಮೇಚರ್ ರೂಪದಲ್ಲಿ ಬಳಸಿರುವುದನ್ನು ಗಮನಿಸಬಹುದು. ಇದೇ ಆಕೃತಿಯ ಗೂಡಿನ ಮೇಲಿನ ಕಮಾನಿನಲ್ಲಿ ಹಕ್ಕಿಗಳ ಸಾಲು, ವ್ಯಾಳಮುಖಗಳು ಕೂಡ ಇವೆ. ಲಕ್ಷ್ಮೀನಾರಾಯಣ ಆಕೃತಿ ಒಂದು ಕ್ಷಣ ಹಂಪೆಯ ಕೃಷ್ಣ ದೇವಾಲಯದ ಮತ್ತು ವಿರೂಪಾಕ್ಷ ದೇವಾಲಯದ ಆಸನ ಆಕೃತಿಗಳನ್ನು ಜ್ಞಾಪಕಕ್ಕೆ ತರುತ್ತದೆ. ಆದರೆ ಇಲ್ಲಿ ಸಂಯೋಜನೆಯಲ್ಲಿ ಮುಖ್ಯ ಆಕೃತಿಯ ಇಕ್ಕೆಲಗಳಲ್ಲಿ ಹೆಚ್ಚು ನಿಬಿಡವಾದ ಆಕೃತಿಗಳಿಲ್ಲ. ಸಹಾಯಕರ ಹಾಗೆ ಎರಡೆರಡು ಆಕೃತಿಗಳು ಕೈಮುಗಿದು ಮುಖ್ಯ ಆಕೃತಿ ಬದಿಗೆ ನಿಂತಿದ್ದಾರೆ. ಲಕ್ಷ್ಮೀನಾರಾಯಣ ಆಕೃತಿಯಲ್ಲಿ ವಿಶೇಷವಾಗಿ ಲಕ್ಷ್ಮಿ ಕುಲಿತ ವಿಧವನ್ನು (ಮುಖದ ಭಾಗ ಹಾಳಾಗಿದೆ) ಗಮನಿಸಬೇಕು. ಎಡಗಾಲನ್ನು ಮಡಿಸಿ, ಬಲಗಾಲನ್ನು ನೀಳವಾಗಿ ಕೆಳಕ್ಕೆ ಹರಡಿ ಲಕ್ಷ್ಮಿ ಕುಳಿತಿದ್ದಾಳೆ. ಯಾವ ಗ್ರಂಥಗಳಲ್ಲೂ ಕಾಣದ ಈ ತರಹದ ಹೊಂದಾಣಿಕೆ ಕೇವಲ ಕಲಾವಿದನ ಕಲ್ಪನೆಗೆ ಮಾತ್ರ ಸಾಧ್ಯ. ಇಂತಹದೇ ಇನ್ನೊಂದು ಕೃತಿ ಕೃಷ್ಣ ಕೈಯಲ್ಲಿ ಶಂಖವನ್ನು ಕಟ್ಯಾವಲಂಬಿತದಲ್ಲಿ ಹಿಡಿದಿರುವುದು. ಬಲ ಮುಂಗೈ ಹಾಳಾಗಿದೆ. ಪ್ರಾಯಶಃ ಕೊಳಲೋ ಅಥವಾ ಬೆಣ್ಣೆ ಮುದ್ದೆಯೋ (ಸಾಲಿಗ್ರಾಮ ?) ಇರಬೇಕು. ಇಲ್ಲಿ ಕೃಷ್ಣ ಬಾಲಕೃಷ್ಣ ನಾಗಿದ್ದಾನೆ. ದುಂಡು ದುಂಡಾದ ಎಳೆ ದೇಹ, ಅಗಲವಾದ ಮುಖ, ಬಾಚಿ ಮೇಲೆ ಕಟ್ಟಿರುವ ಕೇಶ, ಮೊಳಕಾಲ ಮೇಲೆ ಅರ್ಧ ವೃತ್ತಾಕಾರವಾಗಿ ಹರಡಿರುವ ವೈಜಯಂತಿ ಮಾಲೆ, ಮುಂಗೈ ಕಟ್ಟು, ತೋಳ್ಬಂದಿಗಳು ಹಾಗೂ ಕಂಠಹಾರ ಕೃಷ್ಣನಲ್ಲಿ ಎದ್ದುಕಾಣುವ ಅಂಶಗಳು. ಇಲ್ಲಿ ಕೃಷ್ಣ ಶಂಖವನ್ನು ಹಿಡಿದಿರುವ ರೀತಿ ಬನವಾಸಿ ಕದಂಬರ ಕಾಲದ ವಿಷ್ಣು, ಹರಿಹರ[5] ಹಾಗೂ ಬಾದಾಮಿ ಚಾಲುಕ್ಯರ ಲಯಣ ದೇವಾಲಯಗಳಲ್ಲಿನ ವಿಷ್ಣು, ಹರಿಹರ ಶಿಲ್ಪಗಳಲ್ಲಿ ಕಾಣಬರುವ ಆಯುಧ ಹಿಡಿವ ರೀತಿಯಲ್ಲಿ ಮೂಡಿಬಂದಿದೆ. ಕಲಾವಿದ ಇಲ್ಲಿ ಶಂಕವನ್ನು ಕಟ್ಯಾವಲಂಬಿತದಲ್ಲಿ ಚಿತ್ರಿಸಿರುವ ವಿಧ ಪ್ರಾಚೀನ ಅಂಶಗಳ ಮರು ಉಪಯೋಗ ಅಥವಾ ಮುಂದುವರೆಯುವಿಕೆಯನ್ನು ತೋರಿಸುತ್ತದೆ.

ಕನಕಗಿರಿಯಲ್ಲೇ ಇರುವ ಈಶ್ವರ ದೇವಾಲಯದ ಮೇಲಿರುವ ಆಸನ ಭಂಗಿಯಲ್ಲಿನ ಶಿವಪಾರ್ವತಿ ಹಾಗೂ ಗಣೆಶ್ವರ ಆಕೃತಿಗಳೂ ಕನಕಾಚಲ ದೇವಾಲಯದ ಶೈಲಿಗೆ ಅನುಗುಣವಾಗಿವೆ. ಪ್ರಾಯಶಃ ಈ ಆಕೃತಿಗಳೂ ಕೂಡ ನುರಿತ ಕಲಾವಿದನ ಕೃತಿಗಳಾಗಿವೆ. ಈಶ್ವರನ ತೊಡೆಯ ಮೇಲೆ ಕುಳಿತ ಪಾರ್ವತಿ (ಪೂರ್ತಿ ಹಾಳಾಗಿದೆ) ತನ್ನ ಕಾಲುಗಳನ್ನು ಕಮಲದ ಮೇಲೆ ಇರಿಸಿದ್ದಾಳೆ. ಹಾಗೆಯೇ ಪೀಠದ ಮೇಲೆ ಕುಳಿತ ಶಿವನ ಕೆಳಗೆ ಕಮಲದ ಆಸನವಿದೆ. ಎಡಗೈಯಲ್ಲಿ ತಂಬೂರದರನಾದ ತಂಬೂರ ಹಾಗೂ ಬಲಬದಿಯಲ್ಲಿ ಗಣನ ಆಕೃತಿ ಇದೆ. ವೃಷಭದ ಅವಶೇಷವನ್ನು ಮಾತ್ರ ಕೆಳಗಡೆ ಗಮನಿಸಬಹುದು.

**ಉಪಸಂಹಾರ**

ಇಡಿಯಾಗಿ ಗಾರೆಯ ಕಲೆಯನ್ನು ವಿಜಯನಗರದ ರಾಜ್ಯ ವ್ಯಾಪ್ತಿಯಾಗಿ ನೋಡಿದಾಗ ಅದೊಂದು ಪರಿಪೂರ್ಣವಾದ ಮಾಧ್ಯಮವಾಗಿ ಬೆಳೆಯಿತು ಎಂದು ಹೇಳಬಹುದು. ಕೇವಲ ಕಟ್ಟಡದ ನಿರ್ಮಾಣದ ವಸ್ತುವಾಗಿರದೆ ಕಲಾ ಮಾಧ್ಯಮವಾಗಿ ವಿಕಾಸಗೊಂಡಿತು. ಕಲಾವಿದರು ಮೂಲತಃ ಗಾರೆಯಲ್ಲೇ ಪರಿಣತಿ ಪಡೆದವರೇ ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಶಿಲೆಯನ್ನು ಕೆತ್ತಿ ಶಿಲ್ಪಗಳನ್ನು ರಚಿಸುವಲ್ಲಿ ಪರಿಣತಿ ಪಡೆದ್ದು ಹಿಂದಿನಿಂದಲೂ ಬೆಳೆದು ಬಂದ ಸಂಪ್ರದಾಯ. ಒಮ್ಮಿದೊಂಮ್ಮೆಲೆ ಅಷ್ಟು ಭವ್ಯವಾಗಿ ಮತ್ತು ಅಗಾಧವಾದ ರೀತಿಯಲ್ಲಿ ದೇವಾಲಯ ನಿರ್ಮಾಣ ಮತ್ತು ಗಾರೆ ಆಕೃತಿಗಳ ನಿರ್ಮಾಣಕ್ಕೆ ಕೈಜೋಡಿಸಿದ ಕಲಾವಿದರು ಯಾರು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಮೊದಲು ಶಿಲೆಯಲ್ಲಿ ಕೆಲಸ ಮಾಡಿದ ಕಲಾವಿದರೇ ಗಾರೆ ಕೆಲಸದಲ್ಲಿ ಪರಿಣತಿ ಪಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅಷ್ಟು ಸಂಖ್ಯೆಯಲ್ಲಿ ಒಟ್ಟಿಗೆ ಗಾರೆ ಕಲಾವಿದರು ಇದಕ್ಕೂ ಮೊದಲೇ ಪರಿಣತಿ ಪಡೆದಿದ್ದರೆ? ಪ್ರಾಯಶಃ ಹಾಗೆ ಆಗಿರಲು ಸಾಧ್ಯವಿರಲಿಕ್ಕಿಲ್ಲ. ಏಕೆಂದರೆ ಗಾರೆ ಕಲಾ ಮಾಧ್ಯಮವಾಗಿ ಪ್ರಾರಂಭದಿಂದಲೂ ಇತ್ತಾದರೂ ವಿಜಯನಗರ ಕಾಲದಲ್ಲಿ ರೂಪ ಗೊಂಡಷ್ಟು ದೇವಾಲಯದ ಅಲಂಕರಣ ಆಕೃತಿಗಳು ಬಹುಶಃ ಬೇರಾವ ಕಾಲದಲ್ಲೂ ಆಗಲಿಲ್ಲ. ಇದಕ್ಕೂಮೊದಲು ತಮಿಳುನಾಡು, ಕೇರಳ ಪ್ರದೇಶದ ಪಾಂಡ್ಯರ ಕಾಲದಲ್ಲಿ ದೇವಾಲಯಗಳಲ್ಲಿ ಅಲಂಕರಣಕ್ಕೆ ಗಾರೆ ಬಳಸುವ ಪರಂಪರೆ ಪ್ರಾರಂಭವಾಗಿತ್ತು. ಅದು ವಿಜಯನಗರದಷ್ಟು ಭವ್ಯತೆಯನ್ನು ಮತ್ತು ವಿಸ್ತಾರವನ್ನು ಹೊಂದಿರಲಿಲ್ಲ. ವಿಜಯನಗರ ಕಾಲದಲ್ಲಿ ಮಾತ್ರ ಹೆಚ್ಚಿನ ಕಲಾ ಚಟುವಟಿಕೆಗಳು ತಮಿಳು, ಮಲೆಯಾಳ ಪ್ರದೇಶಗಳಲ್ಲಿ  ಕಾಣಬರುತ್ತವೆ. ಅದರಲ್ಲೂ ಗಾರೆ ಕಲೆ ತಮಿಳು ಪ್ರದೇಶದಲ್ಲಿ ವಿಜಯನಗರೋತ್ತರ ಕಾಲದಲ್ಲೂ ಚಲಾವಣೆಯಲ್ಲಿತ್ತು. ಪ್ರಾಯಶಃ ಅದೇ ನಿದರ್ಶನಗಳಿಮದ ಈಗಲೂ ಮಧುರೈ ತಂಜಾವೂರು ಭಾಗಗಳ ಪರಿಣತ ಸಿಮೆಂಟ್ ಕಲಾವಿದರು ನವೀನ ಗೋಪುರ, ಶಿಖರಗಳ ನಿರ್ಮಾಣದಲ್ಲಿ ಸಿದ್ಧಹಸ್ತರಾಗಿರುವುದು. ಕಲಾವಿದರು ಮೂಲತಃ ಶಿಲೆಯಲ್ಲಿ ಕೆಲಸ ಮಾಡುತ್ತಿದ್ದಿರಬಹುದು. ಗಾರೆಯ ಉಪಯೋಗ ಪ್ರಾರಂಭವಾದ ಮೇಲೆ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಗುಂಪು ಗುಂಪುಗಳಲ್ಲಿ ಪರಿಣತರಾಗಿದ್ದಿರಬೇಕು. ಶಿಲ್ಪವನ್ನು ಕೆತ್ತುವ ಕೈ ಈಗ ತೇಪೆಗಳಿಂದ ಗಾರೆಯನ್ನು ಮಾಡುವಂತಾಯಿತು. ಅಜಂತಾದಲ್ಲಿ ಶಿಲ್ಪಗಳೆ ಚಿತ್ರಕಾರರಾಗಿದ್ದ ಉದಾಹರಣೆಗಳಿಲ್ಲವೆ ಹಾಗೆ, ಆಕೃತಿಗಳ ವಿಷಯದ ಹೊರವುಗಳನ್ನು ಅರಿತ ಕಲಾವಿದ ಅದಕ್ಕೆ ತಕ್ಕಂತೆ ಆಕೃತಿಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಈ ಗಾರೆಯ ಕೃತಿಗಳ ಶೈಲಿಗಳಲ್ಲಿ ವಿಭಿನ್ನತೆ ಎದ್ದುಕಾಣುತ್ತದೆ. ಬಹುಶಃ ಒಂದೇ ಸಮಯದಲ್ಲಿ ಬೇರೆ ಬೇರೆ ಕಲಾವಿದರ ಗುಂಪುಗಳು (ಕಲಾವಿದರ ಗಣ) ಒಂದೇ ಸ್ಥಳದಲ್ಲಿ ಆದರೆ ಬೇರೆ ಬೇರೆ ದೇವಾಲಯಗಳಲ್ಲಿ ಕೆಲಸ ಮಾಡುತ್ತಿದ್ದಿರಬೇಕು. ಬಹುಶಃ ಅದಕ್ಕಾಗಿಯೇ ವಿರೂಪಾಕ್ಷ ದೇವಾಲಯ ಮತ್ತು ಹಜಾರರಾಮ ದೇವಾಲಯಗಳ ಆಕೃತಿಗಳಲ್ಲಿನ ಶೈಲಿಯ ಭಿನ್ನತೆ ಸ್ಪಷ್ಟವಾಗಿರುವುದು. ಅದೇ ರೀತಿ ಕನಕಗಿರಿಯಲ್ಲಿನ ಆಕೃತಿಗಳು ಬಹುಶಃ ಶೈಲಿಯ ಪಕ್ವತೆಯನ್ನು ಬಿಂಬಿಸುತ್ತವೆ. ಹೀಗೆ ಶೈಲಿಗಳಲ್ಲಿನ ವಿಭಿನ್ನತೆ ಸ್ಥಳದಿಂದ  ಸ್ಥಳಕ್ಕೆ ಕಾಣುತ್ತಲೇ ಇರುತ್ತದೆ.

ಗಾರೆಯಾಕೃತಿಗಳು ದೇವಾಲಯಗಳ ನಿರ್ಮಾಣದ ಮತ್ತು ದೇವಾಲಯದ ನೀಲನಕ್ಷೆಯ ಮೂಲ ವಿನ್ಯಾಸದಲ್ಲಿ ಇದ್ದವುಗಳೇ ಆಗಿವೆ. ಅವಶ್ಯವಿದ್ದ ಸಣ್ಣಪುಟ್ಟ ಹೊಂದಾಣಿಕೆಗಳನ್ನು. ಕಲಾವಿದ ಮಾಡಿರಬಹುದು. ಪ್ರಾಯಶಃ ಇದು ಪೂರ್ವ ನಿಯೋಜಿತವಾದದ್ದು. ಒಂದು ಕಿರು ವಿಮಾನ ಜಗೂಡನ್ನು ನಿರ್ಮಿಸಲು ಪ್ರಾರಂಭಿಸಿದೊಡನೆ ಅದರಲ್ಲಿ ಯಾವ ಆಕೃತಿ ಬರಬೇಕು ಅಥವಾ ಕೆಲವೊಮ್ಮೆ ಅಕೃತಿಗಳು

ಪ್ರಾಮುಖ್ಯತೆ ಮತ್ತು ಅಳತೆಗಳಿಗೆ ತಕ್ಕಂತೆಯೂ ವಿಮಾನ ಗೂಡುಗಳ ನಿರ್ಮಾಣವಾಗಿರಬೇಕು. ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದಿಂದ ಗಾರೆಯಾಕೃತಿಗಳು ದೇವಾಲಯದ ಮೂಲಕಲ್ಪನೆಯಲ್ಲಿ ಇದ್ದನ್ನು ಎಂದು ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನವು ಗಾರೆ ಕಲೆಯನ್ನು ಕುರಿತು ಮಾಡಿದ ಅವಲೋಕನವಷ್ಟೇ ಇನ್ನೂ ಹೆಚ್ಚಿನ ಅಧ್ಯಯನ ಇದನ್ನು ಕುರಿತಂತೆ ಹೊಸ ಹೊಸ ವಿಷಯಗಳನ್ನು ಮುಂಬರುವ ದಿನಗಳಲ್ಲಿ ಹೊರಗೆಡುವುದರಲ್ಲಿ ಯಾವ ಸಂಶಯವೂ ಇಲ್ಲ.

**ಆಕರ**

ವಿಜಯನಗರ ಅಧ್ಯಯನ, ಸಂ. ೫, ೨೦೦೨, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೧-೧೮.

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಬೌದ್ಧ ಧರ್ಮಕ್ಕೆ ಸೇರಿದ ಹಲವಾರು ಗಾರೆಯಾಕೃತಿಗಳು ಅಫ್ಘಾನ್ ಪ್ರದೇಶದಲ್ಲಿ ದೊರೆತಿವೆ. ನೋಡಿ. V.A. Smith : A History of Fine Art in India and Ceylon, Oxford, 1911, Chapter IV, The Hellenistic Sculpture of Gandhara, Photographs, P.P. 96ff.

[2] ವಿಜಯನಗರದ ಪ್ರಾರಂಭದ ಕಾಲದಲ್ಲಿ ನಿರ್ಮಿಸಿರುವ ದೇವಾಲಯದಲ್ಲಿ ಗಾರೆ ಇತ್ತೇ ಇಲ್ಲವೇ ಎಂಬುದು ಇನ್ನು ಅಸ್ಪಷ್ಟವಾಗಿದೆ. ಆದರೆ ನಂತರದ ಕಾಲದಲ್ಲಿ ಉಪಯೋಗಿಸಿದ ಮಾಹಿತಿ ಇದೆ.

[3] ಸಭಾ ಚಿತ್ರ ವಿಜಯನಗರೋತ್ತರ ಕಾಲದಲ್ಲಿ ಭಿತ್ತಿ ಚಿತ್ರಗಳಲ್ಲಿ ಪ್ರಮುಖ ಪಂಗಡವಾಗಿ ಬೆಳೆಯಿತು. ಮುಖ್ಯ ಆಕೃತಿ ಮಧ್ಯದಲ್ಲಿದ್ದು ಇಕ್ಕೆಲಗಳಲ್ಲಿ ಗಣ ಪರಿವಾರದ ಆಕೃತಿಗಳು ನಿಂತಿರುವುದು ಅಥವಾ ಕುಳಿತಿರುವುದು.

[4] ಗಾರೆಯಲ್ಲಿ ಸೂಕ್ಷ್ಮವಾದ ಅಥವಾ ನೀರ ಗಾರೆಯಿಂದ ಮಾಡಬಹುದಾದ ಯಾವುದೇ ಆಕೃತಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕಾದಾಗ ಅಚ್ಚನ್ನು ಉಪಯೋಗಿಸಬಹುದಾಗಿದೆ. ಅಚ್ಚಿನಿಂದ ತೆಗೆದ ಆಕೃತಿಗಳನ್ನು ಹಸಿಯಾದ ಹಿನ್ನೆಲೆಗೆ ಜೋಡಿಸಿ ನಂತರ ಉಳಿದ ಕೆಲಸವನ್ನು ಮಾಡಬಹುದಾಗಿದೆ.

[5] ಚಿತ್ರಗಳಿಗೆ ನೋಡಿ : ಕುಲಕರ್ಣಿ ಆರ್.ಎಚ್., ೧೮೯೯೭, ''ಬನವಾಸಿ ಕದಂಬರ ಕಾಲದ ಶಿಲ್ಪಕಲೆ'', ಕದಂಬ ಅಧ್ಯಯನ, ಪು. ೧೮-೩೪, ಚಿತ್ರ ೨, ೩, ೬, ೧೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

# ೧೦. ಗಾರೆಶಿಲ್ಪ

ವಿಜಯನಗರ ಕಾಲದ ಶಿಲಾಶಿಲ್ಪಗಳನ್ನು ಕುರಿತಂತೆ ಈಗಾಗಲೇ ಹೆಚ್ಚಿನ ಅಧ್ಯಯನಗಳು ನಡೆದಿವೆ. ಗಾರೆ ವಸ್ತುವೊಂದನ್ನು ಬಿಟ್ಟರೆ ಉಳಿದಂತೆ ಶಿಲಾ ಶಿಲ್ಪಗಳ ಶೈಲಿ ಮತ್ತು ಲಕ್ಷಣಗಳನ್ನು ಗಾರೆಶಿಲ್ಪಗಳಲ್ಲೂ ಕಾಣಬಹುದು. ನೋಡಲು ಶಿಲಾಶಿಲ್ಪಗಳಿಗಿಂತ ಹೆಚ್ಚು ಅಲಂಕರಣಗಳಿಂದ ಕೂಡಿ ಸುಂದರವಾಗಿ ಕಂಡುಬರುತ್ತವೆ. ಅಂದರೆ ಬೆಡಗು ಬಿನ್ನಾಣಗಳಿಂದ ಕೂಡಿದ ಕೆಲವು ಗಾರೆಶಿಲ್ಪಗಳು ಹೊಯ್ಸಳ ಶಿಲ್ಪಗಳನ್ನು ನೆನಪಿಸುತ್ತವೆ. ಗಾರೆ ಹಸಿ ಹಿಟ್ಟಿನಂತಿರುವುದರಿಂದ ಶಿಲ್ಪಿಯು ತನ್ನೆಲ್ಲ ಕುಶಲತೆಯನ್ನು ಪ್ರಯೋಗಿಸಲು ಅವಕಾಶವಿದ್ದು,

ಶಿಲ್ಪಗಳು ಅತ್ಯಂತ ಮನೋಜ್ಞವಾಗಿ ಮೂಡಿಬರಲು ಸಾಧ್ಯವಾಗಿದೆ. ಒಂದು ವೇಳೆ ರಚನೆಯು ಸರಿ ಬರದಿದ್ದರೆ, ಪುನಃ ಅದರ ಮೇಲೆ ಗಾರೆಯನ್ನು ಲೇಪಿಸಿ ಸುಂದರಗೊಲಿಸಬಹುದಾಗಿತ್ತು. ಹೀಗಾಗಿ ಗಾರೆಶಿಲ್ಪಗಳಲ್ಲಿ ತಿಳಿದೋ, ತಿಳಿಯದೆಯೋ ಸೃಜನಶೀಲ ಲಕ್ಷಣಗಳು ಕಂಡು ಬರುತ್ತವೆ. ಇದಕ್ಕೆ ಗಾರೆ ಮಾಧ್ಯಮಕ್ಕಿರುವ ಗುಣವೆ ಕಾರಣ.

ಈ ಕಾಲದ ಗಾರೆಶಿಲ್ಪಗಳು ನಾನಾ ಭಂಗಿಗಳಲ್ಲಿದ್ದು, ನೀಳ ರಚನೆಗಳಾಗಿವೆ. ಶಿಲ್ಪಗಳು ಉದ್ದವಾಗಿದ್ದು, ತೆಳುವಾಗಿ ಬಳುಕುವ ಲಕ್ಷಣಗಳಿಂದ ಕೂಡಿವೆ. ಈ ಲಕ್ಷಣಗಳನ್ನು ಆ ಕಾಲದ ಶಿಲಾ ಶಿಲ್ಪಗಳಲ್ಲೂ ಕಾಣಬಹುದು. ಶಿಲ್ಪಗಳಿಗೆ ವಸ್ತ್ರದ ಅಲಂಕರಣವಿದ್ದು, ಕಸೂತಿ ಕೆಲಸವನ್ನು ಮಾಡಲಾಗಿದೆ. ಮಣಿಸರಗಳು ಪ್ರಧಾನ ಆಭರಣಗಳಾಗಿ ಎದ್ದು ಕಾಣುತ್ತವೆ. ಈ ಗಾರೆಶಿಲ್ಪಗಳು ಗೋಡೆಯ ಒರಗಿ ನಿಂತ ಬಿಡಿ ಶಿಲ್ಪಗಳಂತೆ ರಚನೆಗೊಂಡಿವೆ. ಆದರೆ ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡ ಗಾರೆಶಿಲ್ಪಗಳು ಉಬ್ಬು ರಚನೆಗಳಾಗಿದ್ದು, ಒರಟುತನವನ್ನು ಪ್ರದರ್ಶಿಸುತ್ತವೆ. ಈ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಗೂಡುಗಳಲ್ಲಿ (ವೈಷ್ಣವ ಶಿಲ್ಪಗಳು) ಮತ್ತು ಮಹಾದ್ವಾರ ಗೋಪುರದಲ್ಲಿ ಕಂಡುಬರುತ್ತವೆ. ಈ ಶಿಲ್ಪಗಳು ಕೇವಲ ಗೋಡೆಗಂಟಿದ ತೆಳು ಉಬ್ಬು ಶಿಲ್ಪಗಳಂತೆ ಕಂಡುಬರುತ್ತವೆ. ವಸ್ತು ಮತ್ತು ಆಭರಣಗಳ ಅಲಂಕರಣದಲ್ಲಿ ವಿಜಯನಗರ ಕಾಲದ ಶಿಲ್ಪಗಳನ್ನು ಅನುಸರಿಸಿದ್ದರೂ ಶಿಲ್ಪಗಳಲ್ಲಿ ಒರಟು ಲಕ್ಷಣಗಳು ಎದ್ದುಕಾಣುತ್ತವೆ.

**ರಚನಾ ಕಾಲ**

ಸಾಮಾನ್ಯವಾಗಿ ಗಾರೆಶಿಲ್ಪಗಳು ಜೀರ್ಣೋದ್ಧಾರ ಮತ್ತು ಸುಣ್ಣ ಬಣ್ಣಗಳ ಕ್ರಿಯೆಗೆ ಒಳಗಾಗುವುದರಿಂದ ಅವುಗಳ ಕಾಲಮಾನವನ್ನು ಗುರುತಿಸುವಲ್ಲಿ ಸ್ವಲ್ಪ ಗೊಂದಲವುಂಟಾಗುವುದು ಸಹಜ. ಹಂಪೆಯ ದೇವಾಲಯಗಳಲ್ಲಿ ಕಂಡುಬರುವ ಗಾರೆಶಿಲ್ಪಗಳು ಮುಖ್ಯವಾಗಿ ಎರಡು ಕಾಲ ಘಟ್ಟದವು. ಅಂದರೆ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ರಚನೆಗಳು. ಗಾರೆಶಿಲ್ಪಗಳ ರಚನಾ ಸ್ವರೂಪವೆ ಕಾಲ ವಿಂಗಡಣೆಗೆ ಸಹಾಯಕವಾಗಿದೆ. ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ಗಾರೆಶಿಲ್ಪಗಳು ಬಿಡಿ ಶಿಲ್ಪಗಳಂತೆ ಕಂಡು ಬರುತ್ತವೆ. ಪ್ರತಿಮಾಶಾಸ್ತ್ರದ ಲಕ್ಷಣಗಳನ್ನೊಳಗೊಂಡ ಈ ಶಿಲ್ಪಗಳು ಅಂಗಾಗ ಪ್ರಮಾಣ ಬದ್ಧತೆಯನ್ನು ಕಾಯ್ದುಕೊಂಡಿವೆ. ವಿಶೇಷ ಅಲಂಕಾರಗಳಿಂದ ಕೂಡಿರುವ ಈ ಶಿಲ್ಪಗಳು ನುರಿತ ಶಿಲ್ಪಿಗಳ ಅನುಭವದ ಸಾಕಾರ ಮೂರ್ತಿಗಳಂತೆ ಕಂಡುಬರುತ್ತವೆ. ಸಮಕಾಲೀನ ಲೋಹ, ಶಿಲೆ ಮತ್ತು ಮರದ ಪ್ರತಿಮೆಗಳಿಗೆ, ರಚನೆಯಲ್ಲಿ ಸರಿಸಮನಾಗಿ ನಿಲ್ಲುವ ಸಾಮರ್ಥ್ಯ ಮತ್ತು ಗುಣ ವಿಜಯನಗರ ಕಾಲದ ಗಾರೆಶಿಲ್ಪಗಳಿವೆ. ಇವುಗಳ ರಚನೆಗೆ ಮರದ ಗೂಟ ಮತ್ತು ಕಬ್ಬಿಣದ ಕಡ್ಡಿಗಳನ್ನು ಹಗೂ ಸಾಂಪ್ರದಯಿಕವಾಗಿ ತಯಾರಿಸಿದ ನುಣ್ಣಗಿನ ಗಾರೆಯನ್ನು ಬಳಸಲಾಗಿದೆ. ಜೊತೆಗೆ ಬಣ್ಣವನ್ನು ಲೇಪಿಸಲಾಗುತ್ತಿತ್ತು. ಹೀಗಾಗಿ ಶಿಲ್ಪಗಳು ಬಿಡಿ ರಚನೆಗಳಂತೆ ಸ್ಫುಟವಾಗಿ ಎದ್ದು ಕಾಣುತ್ತವೆ. ವಿರೂಪಾಕ್ಷ ದೇವಾಲಯದ ಕಿರಿಯ ಗೋಪುರ, ಕೃಷ್ಣ ದೇವಾಲಯ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳಲ್ಲಿರುವ ಗಾರೆಶಿಲ್ಪಗಳು ಗೋಪುರ ಮತ್ತು ಶಿಖರಗಳ ರಚನೆಯ ಜೊತೆಯಲ್ಲೇ ನಿರ್ಮಾಣಗೊಂಡಿವೆ. ಇದೇ ಕಾಲಕ್ಕೆ ಮೇಲುಕೋಟೆ (ಮಂಡ್ಯ ಜಿಲ್ಲೆ), ಕನಕಗಿರಿ (ರಾಯಚೂರು ಜಿಲ್ಲೆ) ಮುಂತಾದೆಡೆಗಳಲ್ಲಿನ ರಾಯಗೋಪುರಗಳಲ್ಲಿ ಹಾಗೂ ಕೈಪಿಡಿ ಗೋಡೆಯಲ್ಲಿನ ಗೂಡುಗಳಲ್ಲಿ ಗಾರೆಶಿಲ್ಪಗಳು ನಿರ್ಮಾಣಗೊಂಡಿರುವುದನ್ನು ಕಾಣಬಹುದು.

ಕೆಲವು ಗಾರೆಶಿಲ್ಪಗಳು ನಂತರದ ಶತಮಾನದ ಜೀರ್ಣೋದ್ಧಾರಗೊಂಡಿರುವುದರಿಂದ ಇವುಗಳ ಕಾಲಮಾನಕ್ಕೆ ಸಂಬಂಧಿಸಿದಂತೆ ಸಂಶೋಧಕರಲ್ಲಿ ಗೊಂದಲವುಂಟಾಗುವುದು ಸಾಮಾನ್ಯ. ಆದರೆ ಅದೇ ಕಾಲದ ಇತರ ಮಾಧ್ಯಮದ ಶಿಲ್ಪಾವಶೇಷಗಳನ್ನು ಗಮನಿಸಿದಾಗ ಮೇಲೆ ಹೇಳಿದ ಗೊಂದಲಗಳು ನಿವಾರಣೆಯಾಗುವ ಸಾಧ್ಯತೆಯುಂಟು. ಹಂಪೆಯಲ್ಲಿ ವೈಷ್ಣವ ಮಂದಿರಗಳು ನಿರ್ಮಾಣಗೊಂಡಂತೆ ಗಾರೆಶಿಲ್ಪಗಳು ಸಹ ನಿರ್ಮಾಣಗೊಂಡಿವೆ. ಅದರಂತೆ ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯಲ್ಲಿನ ಗೂಡುಗಳಲ್ಲಿ ಶೈವ ಮತ್ತು ವೈಷ್ಣವ ಶಿಲ್ಪಗಳು ರಚನೆಗೊಂಡವು. ಆದರೆ ೧೫೬೫ರ ಯುದ್ಧದ ಸಂದರ್ಭದಲ್ಲಿ ಹಂಪೆಯ ಪ್ರಮುಖ ವೈಷ್ಣವ ದೇವಾಲಯಗಳು ಹಾಳಾದವೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದ ಗೂಡುಗಳಲ್ಲಿದ್ದ ವೈಷ್ಣವ ಶಿಲ್ಪಗಳನ್ನು ಸಹ ಹಾಳು ಮಾಡಿದ ಸೂಚನೆಗಳು ಸುಸ್ಪಷ್ಟವಾಗಿ ಕಂಡುಬರುತ್ತವೆ. ಅವುಗಳನ್ನು ವಿಜಯನಗರೋತ್ತರ ಕಾಲದಲ್ಲಿ ಆಯಾಯ

ಗೂಡುಗಳಲ್ಲೇ ಪುನರ್ರಚಿಸಲಾಯಿತು. ಹೀಗಾಗಿ ವಿರೂಪಾಕ್ಷ ದೇವಾಲಯದ ಗೂಡುಗಳಲ್ಲಿರುವ ಶೈವ ಮತ್ತು ವೈಷ್ಣವ ಶಿಲ್ಪಗಳು ಭಿನ್ನ ರಚನೆಗಳಂತೆ ಕಂಡುಬರುತ್ತವೆ.

ಇನ್ನು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡ ಗಾರೆಶಿಲ್ಪಗಳೆಂದರೆ, ಮೇಲೆ ತಿಳಿಸಿದ ವಿರೂಪಾಕ್ಷ ದೇವಾಲಯದ ವೈಷ್ಣವ ಶಿಲ್ಪಗಳು. ಇವು ಇಲ್ಲಿನ ಶೈವ ಶಿಲ್ಪಗಳಿಗಿಂತ ಅಲಂಕರಣದಲ್ಲಿ ಭಿನ್ನವಾಗಿದ್ದು, ಒರಟುತನವನ್ನು ಮತ್ತು ಮೊಂಡು ಲಕ್ಷಣಗಳನ್ನು ಪ್ರಕಟಮಾಡುತ್ತವೆ. ವೇಷ ಭೂಷಣಗಳಲ್ಲಿ ವಿಜಯನಗರ ಕಾಲದ ಶಿಲ್ಪಗಳನ್ನೇ ಅನುಕರಣೆ ಮಾಡಿದಂತೆ ಕಂಡುಬಂದರೂ, ಅಂಗಾಗ ರಚನೆಯಲ್ಲಿ ಹಾಗೂ ಪ್ರಮಾಣದಲ್ಲಿ ಜನಪದ ಶೈಲಿಯನ್ನು ಅನುಸರಿಸಿದಂತೆ ಕಂಡುಬರುತ್ತವೆ. ಇದೇ ಸ್ವರೂಪದ ಗಾರೆಶಿಲ್ಪಗಳನ್ನು ವಿರೂಪಾಕ್ಷ ದೇವಾಲಯದ ಮುಂದಿನ ಮಹಾದ್ವಾರ ಗೋಪುರದ ಮೊದಲ ಹಂತದಲ್ಲಿ ಕಾಣಬಹುದು. ಇವು ಸಹ ವಿಜಯನಗರೋತ್ತರ ಕಾಲದ ರಚನೆಗಳು. ಹೀಗಾಗಿ ಲಭ್ಯವಿರುವ ಗಾರೆಶಿಲ್ಪಗಳಲ್ಲಿ ಭಿನ್ನ ರಚನೆಗಳನ್ನು ಸುಸ್ಪಷ್ಟವಾಗಿ ಗುರುತಿಸಬಹುದು. ಈ ಭಿನ್ನ ರಚನೆಗಳೇ ಗಾರೆಶಿಲ್ಪಗಳ ಕಾಲವನ್ನು ನಿರ್ಧರಿಸಲು ಸಹಾಯಕವಾಗಿವೆ.

**ಸ್ಥಾನ ಮತ್ತು ವಸ್ತು**

ವಿಶೇಷವಾಗಿ ಗಾರೆಶಿಲ್ಪಗಳನ್ನು ದೇವಾಲಯದ ಗೋಪುರ, ಶಿಖರ ಮತ್ತು ಮಂಟಪಗಳ ಮೇಲಿನ ಕೈಪಿಡಿ ಗೋಡೆಯಲ್ಲಿರುವ ಗೂಡುಗಳಲ್ಲಿ ಕಾಣುತ್ತೇವೆ. ವೈವಿಧ್ಯಮಯವಾದ ಸೌಂದರ್ಯ ಸೃಷ್ಟಿಗಾಗಿ, ವಾಸ್ತು ರಚನೆಗಳ ನಡುವೆ ಗಾರೆಶಿಲ್ಪಗಳನ್ನು ನಿರ್ಮಿಸುವುದರ ಮೂಲಕ ಒಟ್ಟು ಕಟ್ಟಡದ ಅಲಂಕರಣವನ್ನು ಹೆಚ್ಚಿಸುವುದಾಗಿತ್ತು. ಮಹಾದ್ವಾರ ಗೋಪುರಗಳು ಒಂದು, ಎರಡು ಮತ್ತು ಮೂರಕ್ಕಿಂತಲೂ ಹೆಚ್ಚು ಹಂತಗಳಿಂದ ಕೂಡಿದ್ದು, ಪ್ರತಿಯೊಂದು ಹಂತದಲ್ಲಿಯೂ ಅರ್ಧಕಂಬ ಮತ್ತು ದೇವಕೋಷ್ಟಗಳ ಅಲಂಕಾರಿಕ ರಚನೆಗಳಿಂದ ಕೂಡಿವೆ. ಈ ರಚನೆಗಳಿಗೆ ಹೊಂದಿಕೊಂಡಂತೆ, ಮೊದಲ ಹಂತದಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಪಂಥದ ದೇವತೆಗಳ ಮತ್ತು ಘಟನಾವಳಿಗಳನ್ನು ನಿರೂಪಿಸುವ ಗಾರೆಶಿಲ್ಪಗಳನ್ನು ನಿರ್ಮಿಸಿದ್ದಾರೆ. ಈ ದೇವತಾ ಪ್ರತಿಮೆಗಳ ಜೊತೆ ಪರಿವಾರ ದೇವತೆಗಳ, ಪ್ರಾಣಿ ಪಕ್ಷಿಗಳು, ರಾಜ ಮತ್ತು ರಾಣಿ ಪರಿವಾರದವರು, ಯತಿಗಳು, ಭಕ್ತರು, ಶಿಷ್ಯರು ಮತ್ತು ಮಿಥುನ ಶಿಲ್ಪಗಳು ಕಂಡುಬರುತ್ತವೆ. ಅಪರೂಪಕ್ಕೆ ರಾಜನ ದಂಡಯಾತ್ರೆಯನ್ನು ಪ್ರತಿಬಿಂಬಿಸುವ ಗುಂಪು ಶಿಲ್ಪಗಳು ಸಹ ರಚನೆಗೊಂಡಿವೆ.

ಮಂಟಪಗಳ ಮೇಲೆ ಚಾವಣಿಯ ಅಂಚಿನಲ್ಲಿ ಕೈಪಿಡಿ ಗೋಡೆಯಿದ್ದು, ನಡುವೆ ಗೋಪುರ, ಅಲಂಕರಣವಿರುವ ಕಮಾನಿನ ಗೂಡುಗಳನ್ನು ನಿರ್ಮಿಸಿದ್ದಾರೆ. ಈ ಗೂಡುಗಳಲ್ಲಿರುವ ಗಾರೆಶಿಲ್ಪಗಳಿಗೆ ಮಳೆ, ಗಾಳಿ ಮತ್ತು ಬಿಸಿಲುಗಳಿಂದ ಅಲ್ಪ ಸ್ವಲ್ಪ ರಕ್ಷಣೆ ಸಿಗಬಹುದು. ಆದರೆ ಗೋಪುರ ಮತ್ತು ಶಿಖರಗಳಲ್ಲಿರುವ ಗಾರೆಶಿಲ್ಪಗಳು ಯಾವುದೇ ರಕ್ಷಣೆ ಇಲ್ಲದೆ ಹಾಳಾಗುವ ಸಾಧ್ಯತೆಗಳೇ ಹೆಚ್ಚು. ಈ ಗಾರೆಶಿಲ್ಪಗಳು ಪದೇ ಪದೇ ಜೀರ್ಣೋದ್ಧಾರಗೊಂಡು ರೂಪಾಂತರ ಹೊಂದುತ್ತವೆ. ಹೀಗಾಗಿ ಅವುಗಳ ಕಾಲಮಾನ ಸಂದೇಹಕ್ಕೊಳಗಾಗಿದೆ. ಆದರೆ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಶಿಲ್ಪಗಳು ತಮ್ಮ ಮೂಲಶೈಲಿ ಮತ್ತು ಲಕ್ಷಣಗಳನ್ನು ಉಳಿಸಿಕೊಂಡಿರುವುದರಿಂದ ಅವುಗಳ ಕಾಲಮಾನವನ್ನು ಸರಿಸುಮಾರಾಗಿ ನಿರ್ಧರಿಸಬಹುದು. ಈ ಗೂಡುಗಳಲ್ಲಿರುವ ಶಿಲ್ಪಗಳು ದೇವಾಲಯವು ಯಾವ ಪಂಥಕ್ಕೆ ಸೇರಿದೆ ಎಂಬುದನ್ನು ಸೂಚಿಸುತ್ತವೆ. ಉದಾಹರಣೆಗೆ, ವಿರೂಪಾಕ್ಷ ದೇವಾಲಯದಲ್ಲಿ ಶೈವ ಮತ್ತು ವೈಷ್ಣವ ಶಿಲ್ಪಗಳಿದ್ದು, ದೇವಾಲಯವು ಮೊದಲಿನಿಂದಲೂ ಅದ್ವೈತ ಪಂಥಕ್ಕೆ ಸೇರಿರುವುದನ್ನು ಸ್ಪಷ್ಟಪಡಿಸುತ್ತವೆ.

**ಗೂಡುಗಳ ರಚನೆ**

ವಿಜಯನಗರ ಕಾಲದಲ್ಲಿ, ಹೊಸತಾಗಿ ಕೆಲವು ವಾಸ್ತು ರಚನೆಗಳು ನಿರ್ಮಾಣಗೊಂಡು ದೇವಾಲಯಕ್ಕೆ ಸೇರ್ಪಡೆಗೊಂಡವು. ಅವುಗಳೆಂದರೆ ಮುಖಮಂಟಪ, ಕಲ್ಯಾಣ ಮಂಟಪ, ಉತ್ಸವ ಮಂಟಪ, ಉಯ್ಯಾಲೆ ಮಂಟಪ ಮತ್ತು ಮಹಾದ್ವಾರ ಗೋಪುರಗಳು. ವಿಶೇಷವಾಗಿ

ಮಂಟಪಗಳ ಮೇಲ್ತುದಿಯಲ್ಲಿ ಅಲಂಕರಣದ ದೃಷ್ಟಿಯಿಂದ ನಿರ್ಮಾಣಗೊಂಡ ಕೈಪಿಡಿ ಗೋಡೆಗಳಲ್ಲಿ, ಗಾರೆಶಿಲ್ಪಗಳಿಗಾಗಿ ಸುಂದರವಾದ ಗೂಡುಗಳನ್ನು ನಿರ್ಮಿಸುವಲ್ಲಿ ಮುಂದಾದರು. ಇವು ಮಂಟಪದ ಅಥವಾ ಕಟ್ಟಡ ಸೌಂದರ್ಯಕ್ಕೆ ಕಿರೀಟ ಪ್ರಾಯವಾಗಿದ್ದವು. ಇದರಿಂದ ಕೈಪಿಡಿ ಗೋಡೆ ಗೌಣವಾಗಿ ಗೋಪುರ ರಚನೆಗಳಿಂದ ಅಲಂಕೃತಗೊಂಡ ಗೂಡುಗಳೇ ಪ್ರಧಾನವಾಗಿ ಎದ್ದು ಕಾಣುವಂತಾದವು. ಗೂಡುಗಳು ಸಾಮಾನ್ಯವಾಗಿ ೪ ರಿಂದ ೬ ಅಡಿ ಎತ್ತರವನ್ನು ಹೊಂದಿವೆ. ಕಮಾನು ಅಲಂಕರಣವಿರುವ ಈ ಗೂಡುಗಳನ್ನು ನಿರ್ಮಿಸಲು ಚಪ್ಪಟೆ ಇಟ್ಟಿಗೆ, ಗಾರೆ ಮತ್ತು ಮರದ ಹಲಗೆಗಳನ್ನು ಬಳಸಲಾಗಿದೆ. ಇಟ್ಟಿಗೆಯಿಂದ ನಿರ್ಮಿಸಿದ ಗೋಡೆಗಳ ಮೇಲೆ ಅಡ್ಡವಾಗಿ ಮರದ ಸಣ್ಣ ಹಲಗೆಗಳನ್ನು ಇಟ್ಟು ಗೂಡುಗಳನ್ನು ನಿರ್ಮಿಸುತ್ತಿದ್ದರು. ಗೂಡುಗಳು ಕಮಾನುಗಳು ವಿವಿಧ ಆಕೃತಿಯಲ್ಲಿವೆ. ಕೆಲವು ಅರ್ಧವೃತ್ತಾಕಾರದಲ್ಲಿದ್ದರೆ, ಮತ್ತೆ ಕೆಲವು ಮೇಲ್ ಮೂಲೆ ಮುರಿದ ಆಯತಾಕಾರದಲ್ಲಿವೆ. ಇನ್ನೂ ಕೆಲವು ಉಪಕಮಾನುಗಳ ಅಲಂಕರಣದಿಂದ ಕೂಡಿದೆ. ಈ ವೈವಿಧ್ಯಮವಾದ ಕಮಾನುಗಳು ಅಂಚಿನಲ್ಲಿ ಹಂಸ, ಗಿಳಿ, ಹೂ, ಲತಾ ಬಳ್ಳಿ ಮುಂತಾದ ಸಾಲು ರಚನೆಗಳ ಸೂಕ್ಷ್ಮ ಅಲಂಕರಣವಿದ್ದು, ಮೇಲಿನ ಕೀರ್ತಿಮುಖದಲ್ಲಿ ಕೊನೆಗೊಳ್ಳುತ್ತವೆ. ಗೂಡುಗಳ ಮೇಲಿರುವ ಕಿರುಹಂತದ ಗೋಪುರಗಳೂ, ತುದಿಯಲ್ಲಿ ಸ್ತೂಪಿಯನ್ನು ಅಥವಾ ಶೃಂಗಗಳನ್ನು ಅಥವಾ ಸ್ತೂಪಿ ಮತ್ತು ಕಳಸಗಳನ್ನು ಒಳಗೊಂಡಿವೆ. ಈ ಕಿರು ಗೋಪುರಗಳ ದ್ರಾವಿಡ ಶೈಲಿಯಲ್ಲಿವೆ. ಗೂಡುಗಳ ಹಿಂಭಾಗದ ಗೋಡೆ ಮಟ್ಟವಾಗಿದ್ದು, ನಿರಾಡಂಬರವಾಗಿದೆ.

ಗೂಡುಗಳ ಹೊರಗೆ ಇಕ್ಕೆಲಗಳಲ್ಲಿ ಪರಿವಾರ ದೇವತೆಗಳು, ನೃತ್ಯಗಾರರು, ಸಂಗೀತಗಾರರು, ಯತಿಗಳು, ಶಿಷ್ಯರು, ಭಕ್ತರು ಮತ್ತು ಮಿಥುನ ಶಿಲ್ಪಗಳು ಕಂಡುಬರುತ್ತವೆ. ಪ್ರತಿಯೊಂದು ಗೂಡು ಸುಮಾರು ೧.೫ ಅಡಿ ಒಳ ಉದ್ದವನ್ನು ಹೊಂದಿದೆ. ಗೂಡುಗಳಲ್ಲಿ ಹೂಬಳ್ಳಿಗಳ ವರ್ಣಚಿತ್ರಗಳನ್ನು ಬಿಡಿಸುವ ಮೂಲಕ, ಅವುಗಳ ಅಲಂಕರಣವನ್ನು ಹೆಚ್ಚಿಸಲಾಗುತ್ತಿತ್ತು. ಆದರೂ ಗಾರೆಶಿಲ್ಪಗಳ ಪ್ರಧಾನವಾಗಿ ಎದ್ದು ಕಾಣುತ್ತಿದ್ದವು. ಶಿಲ್ಪಗಳು ಎತ್ತರವಾಗಿದ್ದು, ಗೂಡಿನ ತಳದಿಂದ ತುದಿಯವರೆಗೂ ನಿಂತ ಅಥವಾ ವೇದಿಕೆ ಮೇಲೆ ಕುಳಿತ ಭಂಗಿಯಲ್ಲಿ ರಚನೆಗೊಂಡಿವೆ.

**ಶಿಲ್ಪಗಳ ರಚನೆ**

ಶಿಲ್ಪಗಳನ್ನು ರಚಿಸಲು ಬೇಕಾದ ಗಾರೆಯನ್ನು ಸಾಂಪ್ರದಾಯಿಕವಾಗಿ ಇಂದು ಸಹ ರೂಢಿಯಲ್ಲಿರುವಂತೆ ಒಂದು ಭಾಗ ಸುಣ್ಣ, ಎರಡು ಭಾಗ ಮರಳು, ಒಂದು ಭಾಗ ಬೆಲ್ಲ ಮತ್ತು ಅರ್ಧ ಭಾಗಹ ಅಂಟುವಾಳಕಾಯಿ ಮಿಶ್ರಣಗಳನ್ನು ನುಣ್ಣಗೆ ಅರೆದು ತಯಾರಿಸಲಾಗುತ್ತಿತ್ತು. ನಂತರ ಶಿಲ್ಪಗಳನ್ನು ನಿರ್ಮಿಸುವ ಗೋಡೆಯಲ್ಲಿ ಶಿಲ್ಪಗಳ ಭಂಗಿಯನ್ನು ಅನುಲಕ್ಷಿಸಿ, ಮರದ ಗೂಟ ಮತ್ತು ಕಬ್ಬಿಣದ ಕಡ್ಡಿಗಳನ್ನು ಅಳವಡಿಸುತ್ತಿದ್ದರು. ಹೀಗೆ ಅಳವಡಿಸಿದ ಗೂಟ ಮತ್ತು ಕಬ್ಬಿಣದ ಕಡ್ಡಿಗಳ ಮೇಲ್ಮೈಗೆ ಗಾರೆಯನ್ನು ಹಂತಹಂತವಾಗಿ ಬಳಿದು, ಒರಟು ಆಕೃತಿಯನ್ನು ಸಿದ್ಧಪಡಿಸಿಕೊಳ್ಳಲಾಗುತ್ತಿತ್ತು. ನಂತರ ಅದರ ಓರೆ ಕೋರೆಗಳನ್ನು ತಿದ್ದಿ, ವಿಶೇಷವಾಗಿ ಅರೆದ ನುಣ್ಣಗಿನ ಗಾರೆಯನ್ನು ಲೇಪಿಸಿ ಅಂತಿಮವಾದ ರೂಪವನ್ನು ಕೊಡುತ್ತಿದ್ದರು. ಕೊನೆಯಲ್ಲಿ ಬಣ್ಣವನ್ನು ಲೇಪಿಸಲಾಗುತ್ತಿತ್ತು. ದೇವಾಲಯದ ಒಳಗಿರುವ ಲೋಹ ಮತ್ತು ಶಿಲಾ ಶಿಲ್ಪಗಳು ಪೂಜಾವಿಧಿಗಳಿಗೆ ಬಳಕೆಗೊಂಡರೆ, ಹೊರಗಿರುವ ಗಾರೆ ಶಿಲ್ಪಗಳು ದೇವತೆಗಳ ಕಥೆ ಮತ್ತು ಮಹಿಮೆಗಳನ್ನು ತಳಿಸುವ ಅಲಂಕಾರಿಕ ಪ್ರದರ್ಶನ ಶಿಲ್ಪಗಳಾಗಿದ್ದವು.

ಪೂಜಾವಿಧಿಗಳಿಂದ ಮುಕ್ತವಾಗಿದ್ದ ಗಾರೆಶಿಲ್ಪಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿ. ಭಕ್ತರ ಮನಸ್ಸಿಗೆ ಮುದವನ್ನು ನೀಡುತ್ತಿದ್ದವು. ಶಿಲೆ, ಮರ, ಲೋಹ, ಮತ್ತಿತರ ವಸ್ತುಗಳಿಗಿಂತ ಗಾರೆಶಿಲ್ಪಗಳ ರಚನೆ, ಕಾಲ ಮತ್ತು ಹಣದಲ್ಲಿ ಮಿತವ್ಯಯಕಾರಿ. ಬಹುಶಃ ಇದರಿಂದಲೇ ಗಾರೆಶಿಲ್ಪಗಳ ರಚನೆ ಜನಪ್ರಿಯಗೊಂಡಿರಬಹುದು. ಶಿಲ್ಪಗಳನ್ನು ರಚಿಸುವಾಗ ಪರಿಷ್ಕರಣೆಗಳಿಗೆ ವಿಪುಲವಾದ ಅವಕಾಶವಿದ್ದುದರಿಂದ, ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಶಿಲ್ಪಗಳನ್ನು ಸುಂದರಗೊಳಿಸಬಹುದಾಗಿತ್ತು. ಇನ್ನು ಗಾರೆಶಿಲ್ಪಗಳ ಬಗೆಗೆ ಸ್ವಲ್ಪ ಮಾಹಿತಿ ಇಲ್ಲ. ವಿಜಯನಗರ ಕಾಲದ ಗಾರೆಶಿಲ್ಪಗಳನ್ನು, ಶಿಲ್ಪಶಾಸ್ತ್ರದಲ್ಲಿ ಪರಿಣತಿ ಪಡೆದ ಶಿಲ್ಪಿಗಳೇ ನಿರ್ಮಿಸಿರಬೇಕು. ಏಕೆಂದರೆ ಆ ಕಾಲದ ಮರ, ಶಿಲೆ, ಲೋಹ ಮತ್ತು ಗಾರೆಶಿಲ್ಪಗಳು ರಚನೆಯಲ್ಲಿ ಒಂದೇ ತೆರನಾಗಿ ಕಂಡುಬರುತ್ತವೆ. ಅಂದರೆ ವಿಜಯನಗರ ಕಾಲದಲ್ಲಿ ಗಾರೆ ಕುಶಲ ಕಲೆಯಲ್ಲಿ ನುರಿತ ಶಿಲ್ಪಗಳ

ಒಂದು ವರ್ಗವೇ ಇತ್ತೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಮಧ್ಯಕಾಲದಲ್ಲಿ ಗಾರೆಶಿಲ್ಪಗಳ ರಚನೆ ಒಂದು ಜನಪ್ರಿಯ ಶಿಲ್ಪಕಲಾ ಮಾಧ್ಯಮವಾಗಿತ್ತು.

**ದೇವತಾ ಶಿಲ್ಪಗಳು**

ವಿಜಯನಗರ ಕಾಲದ ಗಾರೆಶಿಲ್ಪಗಳಲ್ಲಿ ಹೆಚ್ಚಿನವು ದೇವತಾ ಶಿಲ್ಪಗಳು. ಅವುಗಳನ್ನು ಶೈವ ಮತ್ತು ವೈಷ್ಣವ ಶಿಲ್ಪಗಳೆಂದು ವಿಂಗಡಿಸಿಕೊಳ್ಳಲಾಗದೆ. ಹಂಪೆ ಮತ್ತು ಪರಿಸರದ ಶಿವಾಲಯಗಳಲ್ಲಿ ಎರಡೂ ಪಂಥದ ಶಿಲ್ಪಗಳು ಕಂಡುಬರುತ್ತವೆ. ಆದರೆ ವೈಷ್ಣವ ದೇವಾಲಯಗಳಲ್ಲಿ ತಮ್ಮ ಪಂಥದ ಶಿಲ್ಪಗಳು ಮಾತ್ರ ರಚನೆಗೊಂಡಿವೆ.

**ಶೈವ ಶಿಲ್ಪಗಳು**

ವಿರೂಪಾಕ್ಷ ದೇವಾಲಯದ ಒಳ ಸಾಲು ಮಂಟಪಗಳ ಮೇಲಿರುವ ಕೈಪಿಡಿ ಗೋಡೆಯಲ್ಲಿನ ಗೂಡುಗಳಲ್ಲಿ ಹೆಚ್ಚಿನ ಸಂಖ್ಯೆಯ ಶೈವ ಶಿಲ್ಪಗಳಿವೆ. ಈ ಗಾರೆಶಿಲ್ಪಗಳು ಪ್ರತಿಮಾಶಾಸ್ತ್ರದ ರೀತ್ಯಾ ರಚನೆಗೊಂಡಿದ್ದು, ಪ್ರಮಾಣ ಬದ್ಧವಾಗಿವೆ. ಪೀಠದ ಮೇಲೆ ಕುಳಿತಿರುವ ಪಾರ್ವತಿ ಪರಮೇಶ್ವರರ ಮೂರ್ತಿಗಳಂತೂ ಮನಮೋಹಕವಾಗಿವೆ. ಬಹುತೇಕ ಶಿಲ್ಪಗಳು ಭಗ್ನಗೊಂಡಿದ್ದರೂ, ತಮ್ಮ ರಚನಾ ಶ್ರೇಷ್ಠತೆಯಿಂದಾಗಿ ನೋಡುಗರ ಗಮನವನ್ನು ಸೆಳೆಯುತ್ತವೆ. ಜಟಮುಕುಟಧಾರಿ ಶಿವನ ತೊಡೆಯ ಮೇಲೆ ಕುಳಿತ ಪಾರ್ವತಿ, ನಂದಿಯನ್ನು ಒರಗಿ ನಿಂತ ಶಿವ, ಸಮಭಂಗಿಯಲ್ಲಿರುವ ಶಿವ, ನಾಟ್ಯಭಂಗಿಯಲ್ಲಿರುವ ಗಣಪ, ತ್ರಿಭಂಗಿಯಲ್ಲಿರುವ ಶಿವ, ಅಭಂಗಿಯಲ್ಲಿರುವ ಶಿವ ಪಾರ್ವತಿ, ನಂದಿ ಮೇಲೆ ಕುಳಿತ ಶಿವಪಾರ್ವತಿ, ಧ್ಯಾನ ಮುದ್ರೆಯಲ್ಲಿರುವ ಶೈವಯತಿ, ಗಣ ಸಮೂಹ, ಚಾಮರಧಾರಿ ಸ್ತ್ರೀಯರು, ಭಕ್ತವೃಂದ ಮುಂತಾದ ಗಾರೆಶಿಲ್ಪಗಳು ಪ್ರಮುಖವಾಗಿವೆ. ಈ ಶಿಲ್ಪಗಳಲ್ಲಿ ಕಸೂತಿ ಅಲಂಕರಣವಿರುವ ವಸ್ತ್ರಗಳನ್ನು ಬಿಡಿಸಲಾಗಿದೆ. ಸುಣ್ಣ ಬಣ್ಣಗಳ ಲೇಪನದಿಂದಾಗಿ ಈ ಗಾರೆಶಿಲ್ಪಗಳ ಸೌಂದರ್ಯ ಮಸುಕಾಗಿದೆ. ಆಭರಣಗಳ ಸೂಕ್ಷ್ಮ ಅಲಂಕರಣಗಳ ಮುಚ್ಚಿ ಹೋಗಿವೆ. ಕೆಲವು ಗಾರೆಶಿಲ್ಪಗಳು ಜೀರ್ಣೋದ್ಧಾರಗೊಂಡಿದ್ದು, ಮೂಲ ರಚನೆಯ ಭಾಗಗಳಿಗೂ ಸೇರ್ಪಡೆ ಗೊಂಡ ಭಾಗಗಳಿಗೂ ವ್ಯತ್ಯಾಸ ಸುಸ್ಪಷ್ಟ. ಇನ್ನೂ ಕೆಲವು ಗೂಡುಗಳಲ್ಲಿ ಯಾವುದೇ ಶಿಲ್ಪಗಳು ಕಾಣಬರುವುದಿಲ್ಲ. ಆದರೆ ಹೊರಭಾಗದಲ್ಲಿ ಪರಿವಾರ ಶಿಲ್ಪಗಳಿರುವುದರಿಂದ, ಗೂಡುಗಳಲ್ಲಿದ್ದ ಪ್ರಧಾನ ಶಿಲ್ಪಗಳು ಹಾಳಾಗಿರಬಹುದೆಂದು ಗ್ರಹಿಸಬಹುದು. ಕೆಲವು ಶಿಲ್ಪಗಳು ಹೆಚ್ಚು ಭಗ್ನಗೊಂಡಿರುವುದರಿಂದ ಅವು ಯಾವುವೆಂದು ಗುರುತಿಸಲಾಗುವುದಿಲ್ಲ.

ವಿರೂಪಾಕ್ಷ ದೇವಾಲಯದ ಬಲಭಾಗದ ಕೈಸಾಲೆ ಮಂಟಪದ ಮೇಲೆ ಉತ್ತರಾಭಿಮುಖವಾಗಿರುವ ಗೂಡುಗಳು ಸಣ್ಣ, ಮಧ್ಯಮ ಮತ್ತು ಬೃಹದಾಕೃತಿಗಳಲ್ಲಿವೆ. ಇಲ್ಲಿರುವ ಶೈವ ಶಿಲ್ಪಗಳಲ್ಲಿ ವೀರಭದ್ರ ಮತ್ತು ಕಮಲದ ಮೊಗ್ಗನ್ನು ಹಿಡಿದ ಸ್ತ್ರೀ ದೇವತೆ ಶಿಲ್ಪಗಳು ತೆಳು ಉಬ್ಬು ಶಿಲ್ಪಗಳಂತೆ ಕಂಡುಬರುತ್ತವೆ. ಅಂದರೆ ಈ ಗೂಡಿನಲ್ಲಿದ್ದ ವಿಜಯನಗರ ಕಾಲದ ವೈಷ್ಣವ ಪ್ರತಿಮೆಯು ಹಾಳಾದ ನಂತರ, ಮೇಲೆ ಹೇಳಿದ ವೀರಭದ್ರ ಮತ್ತು ಸ್ತ್ರೀ ದೇವತೆಯ ಶಿಲ್ಪಗಳು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಇದೇ ಸ್ವರೂಪದಲ್ಲಿವೆ. ಸರಸ್ವತಿ ಸಮೇತನಾದ ಬ್ರಹ್ಮನ ಪ್ರತಿಮೆಯ ಭಗ್ನಗೊಂಡಿದೆ. ನಂದಿಯನ್ನು ಒರಗಿ ನಿಂತ ಶಿವನ ಕೈಗಳು ಒರಟಾಗಿ ಜೀರ್ಣೋದ್ಧಾರಗೊಂಡಿವೆ. ಜಟಾಧಾರಿ ಶಿವನ ಶಿಲ್ಪವೊಂದರ ಎರಡು ಕೈಗಳು ಭಗ್ನಗೊಂಡಿದ್ದು, ಉಳಿದೆರಡು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ ಮತ್ತು ಢಮರುಗಳಿವೆ. ಹೊರಗೆ ಇಕ್ಕೆಲಗಳಲ್ಲಿ ಕೊಂಬು ಮತ್ತು ಮೃದಂಗ ವಾದಕರ ಮತ್ತು ಭಕ್ತರ ಗುಂಪು ಶಿಲ್ಪಗಳಿವೆ. ಜೊತೆಗೆ ಮಿಥುನ ಶಿಲ್ಪಗಳಿವೆ. ಧ್ಯಾನದಲ್ಲಿರುವ ಯತಿಯ ಎರಡೂ ಕೈಗಳು ಭಗ್ನಗೊಂಡಿದ್ದು, ಹೊರಗೆ ಶಿಷ್ಯರ ಮತ್ತು ಭಕ್ತರ ಶಿಲ್ಪಗಳುಂಟು. ಶಿಷ್ಯರು ಸರಳವಾದ ದೋತಿಗಳನ್ನು ಧರಿಸಿದ್ದರೆ, ಭಕ್ತರು ಕಿರೀಟ, ಆಭರಣ ಮತ್ತು ಅಲಂಕಾರಿಕ ವಸ್ತುಗಳನ್ನು ಧರಿಸಿದ್ದಾರೆ. ಮೋಹಕ ಭಂಗಿಯಲ್ಲಿರುವ ಶಿವಪಾರ್ವತಿಯರ ಶಿಲ್ಪಗಳು ಸುಸ್ಥಿತಿಯಲ್ಲಿದ್ದು, ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಇವು ನುರಿತ ಗಾರೆಶಿಲ್ಪಿಯೊಬ್ಬನ ಕಲಾ ಪ್ರೌಢಿಮೆಗೆ ಜೀವಂತ ಸಾಕ್ಷಿ. ಈ ಗಾರೆಶಿಲ್ಪದಲ್ಲಿ, ವಿಜಯನಗರ ಕಾಲದ ಶಿಲಾ ಅಥವಾ ಲೋಹ ಪ್ರತಿಮೆಗಳ ಗಾಂಭೀರ್ಯ, ಸೌಂದರ್ಯ

ಮತ್ತು ಅಲಂಕರಣಗಳನ್ನು ಕಾಣಬಹುದು. ಹೀಗೆ ಜಟಾಮುಕುಟಧಾರಿ ಶಿವ ಮತ್ತು ಒನಪು ವಯ್ಯಾರದ ಪಾರ್ವತಿ ಶಿಲ್ಪ ಶ್ರೇಷ್ಠ ರಚನೆಯಾಗಿದೆ.

ಉಮಾಮಹೇಶ್ವರ ಶಿಲ್ಪಗಳಲ್ಲಿ ವಸ್ತ್ರ ಮತ್ತು ಆಭರಣಗಳ ಅಲಂಕರಣ ಎದ್ದು ಕಾಣುವುದು. ಶಿವನ ಪ್ರತಿಮೆಯಲ್ಲಿ ಕರ್ಣಾಭರಣ, ಮಣಿಗಳ ಹಾರ, ಕೀರ್ತಿಭುಜ, ಜಟಾಮುಕುಟ, ಕಿರೀಟ, ಗಂಗೆಯ ಸೂಕ್ಷ್ಮ ಅಲಂಕರಣ, ಕಡಗ ಹಾಗೂ ನಡುಪಟ್ಟಿಗಳನ್ನು ಬಿಡಿಸಿದೆ. ಪಾರ್ವತಿ ಪ್ರತಿಮೆಯಲ್ಲಿ ಕೊರಳಹರ, ತೋಳ್ಬಂದಿ, ಕಡಗ, ಡಾಬು ಮತ್ತು ಕಿರೀಟ ಮುಕುಟಗಳ ಅಲಂಕರಣಗಳುಂಟು. ಈ ಎಲ್ಲಾ ಗಾರೆಶಿಲ್ಪಗಳಲ್ಲಿ, ಪುರುಷ ದೇವತೆಯನ್ನು ದೊಡ್ಡದಾಗಿಯೂ ಸ್ತ್ರೀ ದೇವತೆಯನ್ನು ಚಿಕ್ಕದಾಗಿಯೂ ರಚಿಸಲಾಗಿದೆ. ಹೀಗೆ ಶಿಲ್ಪಗಳ ಪ್ರಮಾಣದಲ್ಲಿ ವ್ಯತ್ಯಾಸವಿದ್ದರೂ, ಎರಡೂ ರಚನೆಗಳು ಇಡಿಯಾಗಿ ಎದ್ದುಕಾಣುತ್ತವೆ. ಇದು ಇಲ್ಲಿನ ಗಾರೆಶಿಲ್ಪಗಳ ಪ್ರಮುಖ ಲಕ್ಷಣ.

ಇದೇ ದೇವಾಲಯದ ಮುಖಮಂಟಪದಲ್ಲಿನ ಮಧ್ಯದ ಒಳ ಛಾವಣಿಯಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಈ ಭಾಗವನ್ನು ಹೊತ್ತ ಕಿರು ಭಿತ್ತಿಯ ಶಿಲಾ ಫಲಕಗಳಲ್ಲಿ ನೃತ್ಯಗಾರ್ತಿಯರ ಸಾಲು ಉಬ್ಬು ಶಿಲ್ಪಗಳನ್ನು ಬಿಡಿಸಲಾಗಿದೆ. ಇವುಗಳ ಮೇಲೆ ವಿಜಯನಗರೋತ್ತರ ಕಾಲದಲ್ಲಿ ಗಿರಿಜಾ ಕಲ್ಯಾಣ, ಅನಂತಶಯನ ಮತ್ತು ದಶಾವತಾರದ ಗಾರೆ ಶಿಲ್ಪಗಳನ್ನು ನಿರ್ಮಿಸಲಾಗಿದೆ. ಇದೇ ರೀತಿ ಮಾರ್ಕಂಡೇಯ, ಮಹಿಷಮರ್ದಿನಿ, ಶಿವ ಪಾರ್ವತಿ, ಗಣಪತಿ ಮತ್ತು ಕಾರ್ತಿಕೇಯ ಶಿಲ್ಪಗಳನ್ನು ಇತ್ತೀಚೆಗೆ ಸಿಮೆಂಟಿನಿಂದ ರಚಿಸಿದ್ದಾರೆ. ಕನಕಗಿರಿ ಗೋಪುರದ ಮೊದಲ ಹಂತದ ಸಣ್ಣ ಗುಡೂಗಳಲ್ಲಿ ರುಂಡ ಭಾಗಗಳನ್ನು ಬಿಡಿಸಲಾಗಿದೆ. ಇವಲ್ಲದೆ ದ್ವಾರಪಾಲಕರ, ಕುದುರೆ ಸವಾರರ, ಹಂಸಗಳ ಮತ್ತು ಗಿಳಿಗಳ ರಚನೆಗಳನ್ನು ಕಾಣಬಹುದು.

ಕ್ರಿ.ಶ. ೧೫೧೦ರಲ್ಲಿ ಕೃಷ್ಣದೇವರಾಯನು ನಿರ್ಮಿಸಿದ ಕಿರಿಯ ಮಹಾದ್ವಾರ ಗೋಪುರದಲ್ಲಿ ಗಣಪತಿ, ಲಿಂಗ, ನಾಗದೇವತೆ, ಶೈವತಪೋಧನರು, ಶಿವಪಾರ್ವತಿ, ನಂದಿ ಮತ್ತು ರುಂಡ ಶಿಲ್ಪಗಳು ಸುಣ್ಣ ಬಣ್ಣಗಳಲ್ಲಿ ಮುಚ್ಚಿಹೋಗಿವೆ. ಮುಂದಿರುವ ಹಿರಿಯ ಮಹಾದ್ವಾರ ಗೋಪುರವು ಎರಡನೆ ದೇವರಾಯನ ಕಾಲದ್ದು. ಆದರೆ ಅಲ್ಲಿ ರಚನೆ ಗೊಂಡಿರುವ ಗಾರೆಶಿಲ್ಪಗಳು ವಿಜಯನಗರೋತ್ತರ ಕಾಲದವು. ಅವುಗಳಲ್ಲಿ ಗಿರಿಜಾ ಕಲ್ಯಾಣ, ನಂದಿ, ವಾಹನಸಹಿತ ಶಿವ, ಗಣಪತಿ, ಲಿಂಗ ಮುಂತಾದ ಶೈವ ಶಿಲ್ಪಗಳು ಪ್ರಮುಖವಾಗಿವೆ. ಹಂಪೆಯ ಚಂದ್ರಶೇಖರ ದೇವಾಲಯ, ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯ ಮತ್ತು ತಿಮ್ಮಲಾಪುರ (ಹೊಸಪೇಟೆ ತಾ.) ತ್ರಿಕೂಟ ಶಿವಾಲಯಗಳ ಗೋಪುರ ಮತ್ತು ಶಿಖರಗಳಲ್ಲಿ ಶೈವ ಶಿಲ್ಪಗಳನ್ನು ಕಾಣಬಹುದು. ಹೀಗೆ ವಿಜಯನಗರ ಕಾಲದ ಶೈವ ಶಿಲ್ಪಗಳಲ್ಲಿ ಲಿಂಗ, ಗಣೇಶ, ಶಿವಪಾರ್ವತಿ, ನಂದಿ, ಶೈವ ಯತಿ ಮತ್ತುದ್ವಾರಪಾಲಕರ ಶಿಲ್ಪಗಳು ಪ್ರಧಾನವಾಗಿ ನಿರ್ಮಾಣಗೊಂಡಿವೆ. ವಿಜಯನಗರ ಪೂರ್ವ ಕಾಲದಲ್ಲಿ ಶಿವ ಪಾರ್ವತಿಯರ ಶಿಲ್ಪಗಳು ಹೆಚ್ಚಾಗಿ ಶಿಲೆಯಲ್ಲಿ ರಚನೆಗೊಂಡಿರುವುದನ್ನು ಕಾಣಬಹುದು. ಆದರೆ ವಿಜಯನಗರ ಕಾಲದಲ್ಲಿ ಶಿಲಪಗಳು, ದೇವಾಲಯ ಸೌಂದರ್ಯ ನಿಮಿತ್ತ ಶಿಲೆಯ ಬದಲಿಗೆ ಗಾರೆಯಲ್ಲಿ ನಿರ್ಮಾಣಗೊಂಡಂತೆ ಕಂಡುಬರುತ್ತವೆ. ಶಿಷ್ಟ ಪರಂಪರೆಯಲ್ಲಿ ಸಾಮಾನ್ಯವಾಗಿ ದೇವತಾ ಶಿಲ್ಪಗಳನ್ನು ದೀರ್ಘಕಾಲ ಬಾಳಿಕೆ ಬರುವ ಸಾಮಗ್ರಿಗಳಾದ ಶಿಲೆ ಮತ್ತು ಲೋಹಗಳಲ್ಲಿ ರಚಿಸುವ ಒಲವನ್ನು ಕಾಣುತ್ತೇವೆ. ಇಂತಹ ಒಲವು ಸಡಿಲಗೊಂಡು ದೇವತಾಶಿಲ್ಪಗಳನ್ನು ಪ್ರದರ್ಶನ ಗೊಂಬೆಗಳಂತೆ ಗಾರೆಯಲ್ಲಿ ರಚಿಸಲು ಮುಂದಾದದ್ದು ಗಮನಾರ್ಹ. ಹಂಪೆಯ ಧಾರ್ಮಿಕ ಆಚರಣೆಗಳಲ್ಲಿ ಹಾಗೂ ಸ್ಥಳ ಪುರಾಣದಲ್ಲಿ ಗಿರಿಜಾ ಕಲ್ಯಾಣಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಇದನ್ನು ವಿರೂಪಾಕ್ಷ ದೇವಾಲಯದಲ್ಲಿರುವ ಗಿರಿಜಾ ಕಲ್ಯಾಣದ ಗಾರೆ ಶಿಲ್ಪಗಳು ಸಮರ್ಥಿಸುತ್ತವೆ. ಗೂಡುಗಳ ಹೊರಗೆ ಇಕ್ಕೆಲಗಳಲ್ಲಿರುವ ಪರಿವಾರ ದೇವತೆಗಳು, ಯತಿಗಳು, ಶಿಷ್ಯರು ಮತ್ತು ಭಕ್ತರುಗಳ ಕುಬ್ಜ ಶಿಲ್ಪಗಳಿಂದಾಗಿ, ಗೂಡಿನೊಳಗಿರುವ ಪ್ರಧಾನ ಶಿಲ್ಪವು ಎದ್ದು ಕಾಣುವಂತಿದ್ದು, ನೋಡುಗನ ಗಮನವನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗಿದೆ. ಈ ಎಲ್ಲಾ ಶಿಲ್ಪಗಳು, ಸಮಕಾಲೀನ ಉಡುಗೆತೊಡುಗೆ ಮತ್ತು ಧಾರ್ಮಿಕ ಆಸಕ್ತಿಯನ್ನು ಸವಿವರವಾಗಿ ಪರಿಚಯಿಸುತ್ತವೆ. ಗಾರೆಶಿಲ್ಪಿಯು, ಸಣ್ಣ ಶಿಲ್ಪಗಳ ರಚನೆಯಲ್ಲೂ ಹೆಚ್ಚಿನ ಆಸಕ್ತಿ ವಹಿಸಿರುವುದನ್ನು ಕಾಣಬಹುದು.

**ವೈಷ್ಣವ ಶಿಲ್ಪಗಳು**

ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ, ವೈಷ್ಣವ ದೇವಾಲಯಗಳ ಸಂಖ್ಯೆಯೇ ಹೆಚ್ಚು. ಈ ಮಾತು ಹಂಪಿಗೂ ಅನ್ವಯಿಸುತ್ತದೆ. ಅದರಲ್ಲೂ ತುಳುವ ಮನೆತನದ ಆಳ್ವಿಕೆ ಕಾಲದಲ್ಲಿ ಬೃಹತ್ ದೇವಾಲಯಗಳು ನಿಮಾಣಗೊಂಡವು. ಈ ದೇವಾಲಯಗಳ ಶಿಖರ ಮತ್ತು ಗೋಪುರಗಳಿಗೆ ನಡೆದ ಅಲಂಕರಣದಲ್ಲಿ ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿದ ಶಿಲ್ಪಗಳು ರೂಪುಗೊಂಡವು. ಜೊತೆಗೆ ಯತಿಗಳು, ಶಿಷ್ಯರು ಮತ್ತು ದ್ವಾರಪಾಲಕರ ಶಿಲ್ಪಗಳನ್ನು ರಚಿಸಲಾಗಯಿತು. ಹಂಪೆ, ಅನಂತಶಯನಗುಡಿ, ತಿಮ್ಮಲಾಪುರ, ಮೇಲುಕೋಟೆ, ಕನಕಗಿರಿ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳಲ್ಲಿ ವೈಷ್ಣವ ಪಂಥದ ಶಿಲ್ಪಗಳು ಕಂಡುಬರುತ್ತವೆ.

ಕ್ರಿ.ಶ. ೧೫೬೫ರ ಯುದ್ಧದ ಸಂದರ್ಭದಲ್ಲಿ ಹಂಪೆಯಲ್ಲಿನ ಪ್ರಮುಖ ವೈಷ್ಯವ ದೇವಾಲಯಗಳು ದಾಳಿ ಮತ್ತು ಲೂಟಿಗೆ ಒಳಗಾದವು. ಇದೇ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿದ್ದ ವೈಷ್ಣವ ಗಾರೆಶಿಲ್ಪಗಳು ಸಹ ಹಾನಿಗೊಳಗಾದ ಬಗೆಗೆ ಸ್ಪಷ್ಟ ಸೂಚನೆಗಳಿವೆ. ಅಂದರೆ ಅಕ್ಕಪಕ್ಕದ ಗೂಡುಗಳಲ್ಲಿರುವ ಶೈವ ಶಿಲ್ಪಗಳು ವಿಜಯನಗರ ಕಾಲದ ರಚನೆಗಳಾಗಿದ್ದು, ಸುಸ್ಥಿತಿಯಲ್ಲಿವೆ. ಆದರೆ ವೈಷ್ಣವ ಶಿಲ್ಪಗಳು ಮಾತ್ರ ಸಾಮಾನ್ಯ ಉಬ್ಬು ಶಿಲ್ಪಗಳಂತೆ ರಚನೆಗೊಂಡಿರುವುದು ಗಮನಾರ್ಹ. ಅಂದರೆ ವಿಜಯನಗರೋತ್ತರ ಕಾಲದಲ್ಲಿ ವೈಷ್ಣವ ದೇವತೆಗಳ ಗಾರೆಶಿಲ್ಪಗಳನ್ನು ಪುನರ್ರಚಿಸಲಾಯಿತು. ಹೀಗೆ ರಚನೆಗೊಂಡ ವೈಷ್ಣವ ಗಾರೆಶಿಲ್ಪಗಳು ಗೋಡೆಗಂಟಿದ ತೆಳು ಉಬ್ಬು ಶಿಲ್ಪಗಳಂತೆ ಕಂಡುಬರುತ್ತವೆ. ಇವುಗಳಲ್ಲಿ ಶೈವ ಶಿಲ್ಪಗಳಲ್ಲಿರುವ ಲಕ್ಷಣಗಳಾಗಲಿ ಅಥವಾ ಅಲಂಕರಣಗಳಾಗಲಿ ಕಂಡುಬರುವುದಿಲ್ಲ. ಶೈವ ಶಿಲ್ಪಗಳು ಬಿಡಿ ರಚನೆಗಳಂತೆ ಕಂಡುಬಂದರೆ, ವೈಷ್ಣವ ಶಿಲ್ಪಗಳು ತೆಳು ಉಬ್ಬು ಶಿಲ್ಪಗಳಿಂತಿವೆ. ಈ ಶಿಲ್ಪಗಳಲ್ಲಿ ಯಜ್ಞೋಪವಿತವಾಗಲಿ, ಉಪವೀತವಾಗಲಿ ಕಂಡುಬರುವುದಿಲ್ಲ. ಹೀಗೆ ರಚನಾ ವ್ಯತ್ಯಾಸಗಳೆ ಅವುಗಳ ಕಾಲ ನಿರ್ಣಯಕ್ಕೆ ಸಹಾಯಕವಾಗಿದೆ. ಹಗೂ ಮೂಲ ವೈಷ್ಣವ ಶಿಲ್ಪಗಳನ್ನು ಹಾಳು ಮಾಡಿದ ಬಗೆಗೂ ಸ್ಪಷ್ಟ ಸೂಚನೆಗಳು ದೊರೆಯುತ್ತವೆ.

ಕ್ರಿ.ಶ. ೧೫೦೦ರ ನಂತರ ವೈಷ್ಣವ ಧರ್ಮ ಮತ್ತು ಸಂಸ್ಕೃತಿಗೆ ವಿಶೇಷವಾದ ರಾಜಾಶ್ರಯ ದೊರೆಯಲಾಗಿ, ಹಂಪೆಯಲ್ಲಿ ಭವ್ಯ ದೇವಾಲಯಗಳು ನಿರ್ಮಾಣಗೊಂಡವು. ಈ ಬೆಳವಣಿಗೆ ಅಂತಿಮವಾಗಿ ಯುದ್ಧದ ಸಂದರ್ಭದಲ್ಲಿ ಸೈವ ಮತ್ತು ವೈಷ್ಣವರ ಸಂಘರ್ಷಕ್ಕೆ ಎಡೆಮಾಡಿ ಕೊಟ್ಟಿತು. ಈ ರೀತಿ ದಾಳಿಗೆ ತುತ್ತಾದ ದೇವಾಲಯಗಳಲ್ಲಿ ಹಂಪೆಯ ಲಕ್ಷ್ಮೀನರಸಿಂಹ, ಹಜಾರರಮ ದೇವಾಲಯ, ಕೃಷ್ಣ ದೇವಾಲಯ, ಅಚ್ಯುತರಾಯ ದೇವಾಲಯ (ತಿರುವೆಂಗಳನಾಥ), ವಿಠಲದೇವಾಲಯ, ಪಟ್ಟಾಭಿರಾಮ ದೇವಾಲಯ, ಅನಂತಶಯನ ಗುಡಿಯ ಅನಂತಶಯನ ದೇವಾಲಯ, ತಿರುಮಲಾದೇವಿಯರ ಪಟ್ಟಣದ ತಿರುವೆಂಗಳನಾಥ ದೇವಾಲಯ (ಹೊಸಪೇಟೆ) ಮುಂತಾದವು ಪ್ರಮುಖವಾಗಿವೆ. ದಾಳಿಗೆ ತುತ್ತಾಗದೆ ಉಳಿದ ವೈಷ್ಣವ ದೇವಾಲಯವೆಂದರೆ ಕಂಪ್ಲಿ ರಸ್ತೆಯಲ್ಲಿರುವ ಮಾಲ್ಯವಂತ ರಘನಾಥ ದೇವಾಲಯ. ಇದು ಹಂಪಿಯ ಹೊರವಲಯದ ಗುಡ್ಡದಲ್ಲಿರುವುದರಿಂದ ದಾಳಿಯ ಒಳಗಾಗಿಲ್ಲವೆಂದು ಹೇಳಬಹುದಾದರೂ, ಬಿಜಾಪುರ ಸೈನ್ಯದ ಪ್ರವೇಶ ಮಾರ್ಗದಲ್ಲಿ ಹಾಗೂ ವಿಜಯನಗರದ ಮುಸ್ಲಿಂ ವಸತಿ ನೆಲೆಗೆ ಅತೀ ಸಮೀಪವಿದ್ದ ಈ ದೇವಾಲಯವು ದಾಳಿಗೊಳಗಾದಿರುವುದು ಆಶ್ಚರ್ಯದ ಸಂಗತಿ. ಇದು ಬೇರೆ ರೀತಿಯ ವಿಶ್ಲೇಷಣೆಗೆ ಅವಕಾಶ ಮಾಡಿಕೊಡುತ್ತದೆ. ಹಾಗೂ ವೈಷ್ಣವ ದೇವಾಲಯಗಳ ನಾಶದ ಬಗೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ.

ವಿರೂಪಾಕ್ಷ ದೇವಾಲಯದಲ್ಲಿರುವ ವೈಷ್ಣವ ಪ್ರತಿಮೆಗಳಿಗೂ, ಕೃಷ್ಣ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳಲ್ಲಿರುವ ಶಿಲ್ಪಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ವೈಷ್ಣವ ಶಿಲ್ಪಗಳಲ್ಲಿ ಲಕ್ಷ್ಮಿನರಸಿಂಹ, ರಾಮ, ಲಕ್ಷಣ, ಸೀತೆ, ಲಕ್ಷ್ಮೀನಾರಾಯಣ, ನಾರಾಯಣ, ಶ್ರೀದೇವಿ, ಭೂದೇವಿ ಸಹಿತ ವಿಷ್ಣು, ಮತ್ಸ್ಯಾವತಾರ ಮುಂತಾದವು ಪ್ರಮುಖವಾಗಿವೆ. ಕೆಲವು ಶಿಲ್ಪಗಳು ಭಗ್ನಗೊಂಡಿರುವುದರಿಂದ, ಶಿಲ್ಪಗಳ ರಚನೆಯಲ್ಲಿ ಬಳಸಿರುವ ಮರದ ಗೂಟಗಳು ಹಾಗೂ ಕಬ್ಬಿಣದ ಕಡ್ಡಿಗಳು ಹೊರಕಾಣುತ್ತವೆ. ಈ ಮೊದಲೇ ತಿಳಿಸಿದಂತೆ ಶಿಲ್ಪಗಳನ್ನು ರಚಿಸಲು ಭಿತ್ತಿಯಲ್ಲಿ ರಂಧ್ರ ಕೊರೆದು ಮರದ ಗೂಟುಗಳನ್ನು ಅಳವಡಿಸಿ ನಂತರ ಗಾರೆಯನ್ನು ಹಂತಹಂತವಾಗಿ ಮೆತ್ತುವುದರ ಮೂಲಕ ಶಿಲ್ಪದ ಒರಟು ರಚನೆಯನ್ನು ಮಾಡಿ ಕೊಳ್ಳುತ್ತಿದ್ದರು. ಕೊನೆಯಲ್ಲಿ ನುಣ್ಣಗೆ ಅರೆದ ಗಾರೆಯನ್ನು ಲೇಪಿಸಿ ಅಂತಿಮ ರೂಪ ಕೊಡುತ್ತಿದ್ದರು. ಅಭಯ ಮತ್ತು ವರದ ಹಸ್ತಗಳನ್ನು ರಚಿಸುವಾಗ ಒಳಭಾಗದಲ್ಲಿ ಕಬ್ಬಿಣದ ಕಡ್ಡಿಗಳನ್ನು

ಬಳಸುತ್ತಿದ್ದರು. ಹೀಗೆ ಶಿಲೆಯಲ್ಲಿ ಅಸಾಧ್ಯವಾದ ಅಲಂಕರಣಗಳನ್ನು ಗಾರೆಯಲ್ಲಿ ಸಾಧ್ಯಮಾಡಲಾಗಿದೆ ಎಂಬರ್ಥದಲ್ಲಿ ಕೆಲವು ಶಿಲ್ಪಗಳು ರೂಪುಗೊಂಡಿವೆ. ಗೂಡುಗಳ ಹೊರಭಾಗದಲ್ಲಿ ಸಂಗೀತಗಾರರು ಮತ್ತು ಭಕ್ತರ ಗುಂಪು ಪ್ರತಿಮೆಗಳಿವೆ. ಶೈವ ಶಿಲ್ಪಗಳಂತೆ ವೈಷ್ಣವ ಶಿಲ್ಪಗಳಲ್ಲೂ ಪುರುಷ ದೇವತೆಗಳನ್ನು ದೊಡ್ಡದಾಗಿಯೂ, ಸ್ತ್ರೀ ದೇವತೆಗಳನ್ನು ಚಿಕ್ಕದಾಗಿಯೂ ರಚಿಸಲಾಗಿದೆ.

ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ನಿರ್ಮಾಣಗೊಂಡ ಕೃಷ್ಣ ದೇವಾಲಯ ಹಂಪೆಯ ಮಹತ್ವದ ದೇವಾಲಯಗಳನ್ನು ಒಂದು. ಉದಯಗಿರಿ ಯುದ್ಧದಲ್ಲಿ ಗೆದ್ದು, ಅಲ್ಲಿಂದ ತಂದ ಕೃಷ್ಣ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸುತ್ತಾನೆ. ಇದು ಈಗ ಮದ್ರಾಸ್ ವಸ್ತು ಸಂಗ್ರಹಾಲಯದಲ್ಲಿದೆ. ದೇವಾಲಯದ ಮಹದ್ವಾರಗೋಪುರವು ಭಗ್ನಗೊಂಡಿದ್ದು, ಪೂರ್ವ, ಉತ್ತಮ ಮತ್ತು ದಕ್ಷಿಣ ಮುಖಗಳಲ್ಲಿ ಕೃಷ್ಣ ಲೀಲೆಗಳಿಗೆ ಸಂಬಂಧಿಸಿದ ಗಾರೆಶಿಲ್ಪಗಳಿವೆ. ಪಶ್ಚಿಮ ಮುಖದಲ್ಲಿ ಉದಯಗಿರಿ ಯುದ್ಧದಲ್ಲಿ ಪಾಲ್ಗೊಂಡ ಸೈನ್ಯದ ವಿಜಯೋತ್ಸವವನ್ನು ನಿರೂಪಿಸುವ ಗುಂಪು ಶಿಲ್ಪಗಳನ್ನು ರಚಿಸಲಾಗಿದೆ. (ಮುಂದೆ ವಿವರಿಸಲಗುವುದು). ತೀರಾ ಭಗ್ನ ಸ್ಥಿತಿಯಲ್ಲಿರುವ ಇಲ್ಲಿಯ ಶಿಲ್ಪಗಳ ಜೀನೋದ್ಧಾರ ಕಾರ್ಯ ನಡೆಯುತ್ತಿದೆ.

ಗೋಪುರದ ಪೂರ್ವ ಮುಖದ ಮೊದಲ ಹಂತದಲ್ಲಿ, ಕೃಷ್ಣನ ತನ್ನ ಬಲಗೈಯ್ಯಲಿ ಗೋವರ್ಧನಗಿರಿಯನ್ನು ಎತ್ತಿಹಿಡಿದಿರುವ ಶಿಲ್ಪವು ಸೊಗಸಾಗಿ ಮೂಡಿಬಂದಿದೆ. ಇದೇ ಮುಖದ ಮೊದಲನೆ ಮತ್ತು ಎರಡನೆ ಹಂತಗಳಲ್ಲಿ ಆಳೆತ್ತರದ ದ್ವಾರಪಾಲಕರ ಶಿಲ್ಪಗಳುಂಟು. ಸುಮಾರು ಸುಸ್ಥಿತಿಯಲ್ಲಿರುವ ಇವು ವಿಜಯನಗರ ಕಾಲದ ಗಾರೆಶಿಲ್ಪಗಳ ಅಧ್ಯಯನಕ್ಕೆ ಅತ್ಯುತ್ತಮ ಮಾದರಿಗಳು. ಇದೇ ಗೋಪುರದ ದಕ್ಷಿಣ ಮುಖದಲ್ಲಿ ವಸ್ತ್ರಗಳನ್ನು ಅಪಹರಿಸಿಕೊಂಡು ಮರದ ಮೇಲೆ ಕುಳಿತ ಕೃಷ್ಣ ಮತ್ತು ಕೆಳಗಡೆ ವಸ್ತ್ರಗಳ ನಿರೀಕ್ಷೆಯಲ್ಲಿರುವ ನಗ್ನ ಸ್ತ್ರೀಯರ ಪ್ರತಿಮೆಗಳಲ್ಲಿ ಶಿಲ್ಪಿಯು ಜೀವಂತಿಕೆಯನ್ನು ತುಂಬಿದ್ದಾನೆ. ಸ್ತ್ರೀಯರ ಅಂಗಾಂಗಗಳನ್ನು ವಿವರ ಸಹಿತ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಇವು, ಶಿಲ್ಪಿಯ ಆಸಕ್ತಿ ಮತ್ತು ಕಾರ್ಯಮಗ್ನತೆಯನ್ನು ಸೂಚಿಸುವುದರ ಜೊತೆಗೆ, ಕಾವ್ಯದ ಕನಸನ್ನು ಸಾಕಾರಗೊಳಿಸುವಲ್ಲಿ ಅವನಲ್ಲಿದ್ದ ಸೌಂದರ್ಯದೃಷ್ಟಿ ಹಾಗೂ ಪರಿಣತಿಗಳನ್ನು ಪರಿಚಯಿಸುತ್ತವೆ. ಸಾಮಾನ್ಯ ನೋಡುಗನನ್ನು ಸಹ ವಿಸ್ಮಯಗೊಳಿಸುವ ಸಾಮರ್ಥ್ಯ ಇಲ್ಲಿನ ಶಿಲ್ಪಗಳಿಗುಂಟು.

ಇದೇ ದೇವಾಲಯದ ಉತ್ತರ ದ್ವಾರದ ಗೋಪುರದಲ್ಲಿ ಕೆಲವು ಶಿಲ್ಪಗಳಿವೆ. ಮುಖಮಂಟಪದ ಈಶಾನ್ಯ ಮೂಲೆಯಲ್ಲಿರುವ ಬಿಡಿ ಕೊಠಡಿಯ ಮೇಲೆ ಏಕತಲ ಶಿಖರವಿದ್ದು, ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ವಿಷ್ಣು, ಗರುಡ ಮತ್ತು ಕೀರ್ತಿ ಮುಖಗಳ ಅಲಂಕರಣವುಂಟು. ಆವರಣದಲ್ಲಿರುವ ಅಮ್ಮನವರ ಗುಡಿ ಹಾಗೂ ಇದಕ್ಕೆ ಹೊಂದಿಕೊಂಡು ದಕ್ಷಿಣಾಭಿಮುಖವಾಗಿರುವ ಕೊಠಡಿಯ ಮೇಲೆ ಶಿಖರಗಳಿವೆ. ಈ ಶಿಖರಗಳಲ್ಲಿ ವಿಷ್ಣು, ಕಾಳಿಂಗ ಮರ್ದನ ಕೃಷ್ಣ, ಲಕ್ಷ್ಮಿ ಮುಂತಾದ ಶಿಲ್ಪಗಳನ್ನು ಬಿಡಿಸಲಾಗಿದೆ. ಕೃಷ್ಣ ದೇವಾಲಯದ ಮೇಲಿರುವ ಶಿಖರದಲ್ಲಿ ನರಸಿಂಹ ಮತ್ತು ನಾರಾಯಣ ಶಿಲ್ಪಗಳು ಕಂಡುಬರುತ್ತವೆ. ಆವರಣದ ನೈಋತ್ಯ ಮೂಲೆಯಲ್ಲಿರುವ ಬಿಡಿಕೊಠಡಿ ಮತ್ತು ದಕ್ಷಿಣ ಭಾಗದ ಬಿಡಿ ಕೊಠಡಿಗಳ ಮೇಲಿರುವ ಶಿಖರಗಳಲ್ಲಿನ ಬ್ರಹ್ಮನ ಪ್ರತಿಮೆಗಳುಂಟು. ಈ ಎಲ್ಲಾ ಗಾರೆಶಿಲ್ಪಗಳು ಶೈಲಿ ಮತ್ತು ಆಲಂಕರಣಗಳಲ್ಲಿ ವಿರೂಪಾಕ್ಷ ದೇವಾಲಯ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಶೈವ ಪ್ರತಿಮೆಗಳಿಗಿಮತ ಮೊದಲು ನಿರ್ಮಾಣಗೊಂಡಿದ್ದು, ಜೊತೆಯಲ್ಲೆ ಗಾರೆಶಿಲ್ಪಗಳ ರಚನೆ ನಡೆದಿರುವುದು ಸುಸ್ಪಷ್ಟ. ಹೀಗೆ ಕೃಷ್ಣ ದೇವಾಲಯದಲ್ಲಾದ ಗಾರೆಶಿಲ್ಪಗಳ ರಚನೆ ಮತ್ತು ಅಲಂಕರಣಗಳಿಂದ ಸ್ಫೂರ್ತಿಗೊಂಡು, ನಂತರ ವಿರೂಪಾಕ್ಷ ದೇವಾಲಯದಲ್ಲಿ ಶೈವ ಮತ್ತು ವೈಷ್ಣವ ಶಿಲ್ಪಗಳನ್ನು ರಚಿಸಿರಬೇಕು.

ತುರ್ತಾ ಕಾಲುವೆ ದಡದಲ್ಲಿರುವ ಸರಸ್ವತಿ ದೇವಾಲಯದಲ್ಲಿ ಕೆಲವು ಭಗ್ನ ಗಾರೆಶಿಲ್ಪಗಳು ಕಂಡುಬರುತ್ತವೆ. ಪ್ರದಕ್ಷಿಣಾ ಮಂಟಪದ ಮೇಲಿರುವ ದಕ್ಷಿಣದ ಗೂಡಿನಲ್ಲಿ ಅಂಬೆಗಾಲು ಕೃಷ್ಣನ ಭಗ್ನ ಪ್ರತಿಮೆಯಿದೆ. ಜೊತೆಯಲ್ಲಿ ಭಗ್ನಗೊಂಡ ಸ್ತ್ರೀ ಪ್ರತಿಮೆಯುಂಟು. ಕೃಷ್ಣನ ಪ್ರತಿಮೆಯಲ್ಲಿ ಅಂಗಾಂಗಗಳನ್ನು ದಷ್ಟಪುಷ್ಟವಾಗಿ ಬಿಡಿಸಲಾಗಿದೆ. ಪ್ರತಿಮೆಯ ರಚನೆಯಲ್ಲಿ ಶಿಲ್ಪಿಯ ಕಲ್ಪನೆಗಳಿಗಿಂತ ಭಾಗವತದ ಕಲ್ಪನೆಗಳೇ ವಿಜೃಂಭಿಸಿವೆ. ಹಾಲು, ಮೊಸರು ಮತ್ತು ಬೆಣ್ಣೆಗಳನ್ನು ತಿಂದ ಕೃಷ್ಣನ ವರ್ಣನೆಯ ಅನುಸಾರ ಪ್ರತಿಮೆಯನ್ನು ಬಿಡಿಸಿರುವುದು ಗಮನಾರ್ಹ. ಆದರೆ ಶಿರಭಾಗ ಹಾಳಾಗಿರುವುದರಿಮದ ನೋಡಗರಿಗೆ ಸಾಮಾನ್ಯ ರಚನೆಯಂತೆ ಕಾಣುವುದು. ಇದೇ ದೇವಾಲಯದ

ಮುಖಮಂಟಪದ ಕಂಬಗಳಿಗೆ ಮತ್ತು ಚಾವಣಿಗೆ ಗಾರೆ ಲೇಪಿಸಿ, ಹೊರಮೈಯನ್ನು ನಯಗೊಳಿಸಲಗಿದೆ. ಸಾಸಿವೆ ಕಾಳು ಗಣಪತಿ ಮಂಟಪದಲ್ಲೂ ಗಾರೆ ಲೇಪನದ ಕುರುಹುಗಳನ್ನು ಕಾಣಬಹುದು. ಸರಸ್ವತಿ ದೇವಾಲಯದ ಕಂಬಗಳ ಮೇಲೆ, ಗೋಪುರದ ಅಲಂಕರಣವಿರುವ ಕಮಾನು ಮತ್ತು ಶಿಲ್ಪಗಳ ಉಬ್ಬು ರಚನೆಗಳಿವೆ. ಇವುಗಳನ್ನು ನಿರ್ಮಿಸಲು ಗಾರೆಯೊಡನೆ ಇಟ್ಟಿಗೆ ಚೂರುಗಳನ್ನು ಬಳಸಲಾಗಿದೆ. ಕಂಬಗಳಲ್ಲಿ ಗಾರೆ ಉಬ್ಬು ಶಿಲ್ಪಗಳು ಮೂಡಿಬರಲು, ಉಬ್ಬು ಪ್ರತಿಮೆಗಳಿರುವ ಶಿಲಾ ಕಂಬಗಳೇ ಸ್ಪೂರ್ತಿ. ವಿದ್ವಾಂಸರು ಈಗಾಗಲೇ ವಿಜಯನಗರ ಶೈಲಿಯ ಕಂಬಗಳನ್ನು ಗುರುತಿಸಿದ್ದು, ಅವುಗಳಲ್ಲಿ ಗಾರೆ ಲೇಪಿತ ಕಂಬಗಳನ್ನು ಗುರುತಿಸಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಈ ಗಾರೆ ಲೇಪಿತ ಕಂಬಗಳು ವಿಜಯನಗರಶೈಲಿಯ ಕಂಬಗಳ ಗುಂಪಿಗೆ ಹೊಸ ಸೇರ್ಪಡೆಯಾಗಿವೆ. ಇಂತಹ ಕಂಬಗಳನ್ನು ಅರಮನೆಗಳಂತಹ ಕಟ್ಟಡಗಳಲ್ಲಿ ಬಳಸಿರುವುದಕ್ಕೆ ಸೂಚನೆಗಳಿವೆ. ಅಂದರೆ ಲೌಕಿಕ ವಾಸ್ತು ರಚನೆಗಳನ್ನು, ಅನೇಕ ಶತನಮಾನಗಳ ನಂತರ ದೇವಾಲಯಗಳಲ್ಲಿ ಅಳವಡಿಸಿಕೊಳ್ಳುವ ಪದ್ಧತಿ ವಿಜಯನಗರ ಕಾಲದಲ್ಲಿ ಪುನರಾವರ್ತಿಸಿರುವುದು ಗಮನಾರ್ಹ. ಇಂತಹ ಕಂಬಗಳ ಅಳವಡಿಕೆಯ ನವ್ಯ ಮತ್ತು ಸೌಂದರ್ಯ ದೃಷ್ಟಿಯದಾಗಿದ್ದು, ಸಣ್ಣ ಪ್ರಮಾಣದ ದೇವಾಲಯಗಳಲ್ಲಿ ಮಾತ್ರ ಕಂಡುಬರುತ್ತವೆ. ಇದೇ ರೀತಿ ವಿಜಯನಗರ ಕೊನೆಗಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಗರ್ಭಗೃಹಗಳ ಛಾವಣಿ ನಿರ್ಮಾಣದಲ್ಲಿ ಮರದ ತೊಲೆಗಳನ್ನು ಬಳಸಿರುವುದು ದೇವಾಲಯದ ರಚನೆಯಲ್ಲಾದ ಬದಲಾವಣೆಗಳನ್ನು ಸೂಚಿಸುತ್ತವೆ.

ಪ್ರಸಿದ್ಧ ಹಜಾರರಾಮ ದೇವಾಲಯ, ವಿಠಲ ದೇವಾಲಯ, ಅಚ್ಯುತರಾಯ ದೇವಾಲಯ (ತಿರುಮಂಗಳನಾಥ), ಪಟ್ಟಾಭಿರಾಮ ದೇವಾಲಯ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳ ಗೋಪುರ ಮತ್ತು ಶಿಖರಗಳಲ್ಲಿ ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ವಿಠಲ ದೇವಾಲಯದ ಗೋಪುರದಲ್ಲಿ ವಿಷ್ಣುವಿನ ಅವತಾರಗಳ ಶಿಲ್ಪಗಳನ್ನು ಬಿಡಿಸಲಾಗಿದೆ. ಮಾಲ್ಯವಂತ ರಘುನಾಥ ದೇವಾಲಯದ ಗೋಪುರಗಳಲ್ಲಿ ಕೃಷ್ಣ, ಆಂಜನೇಯ, ವಿಷ್ಣು, ದ್ವಾರಪಾಲಕರು, ಯತಿಗಳು ಮುಂತಾದ ಶಿಲ್ಪಗಳನ್ನು ರಚಿಸಿ, ಬಣ್ಣವನ್ನು ಲೇಪಿಸಲಾಗಿದೆ. ಬಣ್ಣಗಲ್ಲಿ ಗಿಳಿ ಹಸಿರು ಮತ್ತು ಕಾವಿ ಕೆಂಪು ಮುಖ್ಯವಾದವು. ಈಗಲೂ ಶಿಲ್ಪಗಳಲ್ಲಿ ಆಳಿದುಳಿದ ಬಣ್ಣಗಳನ್ನು ಕಾಣಬಹುದು. ಒಳ ಆವರಣದಲ್ಲಿರುವ ಗುಡಿಗಳ ಮೇಲಿನ ಶಿಖರಗಳಲ್ಲಿ ಮತ್ತು ಕೈಪಿಡಿ ಗೋಡೆಯ ಗೂಡುಗಳಲ್ಲಿ ಶಿಲ್ಪಗಳಿದ್ದು, ಭಗ್ನಗೊಂಡಿವೆ. ಹಂಪೆಯಲ್ಲದೆ ಹಳೆಯ ಮೈಸೂರು ಪ್ರದೇಶದ ರಾಯಗೋಪುರಗಳಲ್ಲಿ ಹಾಗೂ ಕೈಪಿಡಿ ಗೋಡೆಯ ಗೂಡುಗಳಲ್ಲಿ ಗಾರೆ ಶಿಲ್ಪಗಳು ಆಧಿಕ ಸಂಖ್ಯೆಯ್ಲಲಿ ರಚನೆಗೊಂಡಿವೆ. ಅವುಗಳಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯ ತಿರುನಾರಾಯಣಸ್ವಾಮಿ ದೇವಾಲಯದಲ್ಲಿನ ಕೈಪಿಡಿ ಗೋಡೆಯ ಗೂಡುಗಳಲ್ಲಿ ಗಾರೆಶಿಲ್ಪಗಳಿದ್ದು, ಬಹಳಷ್ಟು ಭಗ್ನಗೊಂಡಿವೆ. ಆದರೂ ಈ ಪ್ರತಿಮೆಗಳು ಇಂದಿಗೂ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿ, ಇತರ ಮಾಧ್ಯಮದ ಶಿಲ್ಪಗಳಿಗಿಂತ ಭಿನ್ನವಾದ ಕಲಾನುಭವವನ್ನು ನೀಡುವುದರಲ್ಲಿ ಯಶಸ್ವಿಗೊಂಡಿವೆ.

**ಲೌಕಿಕ ಶಿಲ್ಪಗಳು**

ವಿಜಯನಗರ ಕಾಲದ ಗಾರೆಶಿಲ್ಪಗಳಲ್ಲಿ ಲೌಕಿಕ ಶಿಲ್ಪಗಳನ್ನು ಸಹ ಬಿಡಿಸಲಾಗಿದೆ. ವಿರೂಪಾಕ್ಷ ದೇವಾಲಯದ ಗೂಡುಗಳ ಹೊರಭಾಗದಲ್ಲಿ ಕೈಪಿಡಿಗೋಡೆಗೆ ಒರಗಿ ನಿಂತ ಸಂಗೀತ ವಾದಕರು, ನೃತ್ಯಗಾರರು, ಹಾಸ್ಯಗಾರರು, ಭಕ್ತರು ಮತ್ತು ಶಿಷ್ಯರ ಗಾರೆಶಿಲ್ಪಗಳನ್ನು ಬಿಡಿಸಲಾಗಿದೆ. ಇವು ಸಮಕಾಲೀನ ಜನರ ವೇಷಭೂಷಣಗಳ ಬಗೆಗೆ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಜೊತೆಗೆ ಸಂಗೀತ ವಾದ್ಯಗಳು ಹಾಗೂ ನರ್ತನದ ವಿವಿಧ ಪ್ರಕಾರಗಳನ್ನು ಪರಿಚಯಿಸುತ್ತವೆ. ಉತ್ತರ ಭಾಗದ ಗೂಡೊಂದರಲ್ಲಿ, ತಲೆಗೆ ರುಮಾಲನ್ನು ಸುತ್ತಿದ ವ್ಯಕ್ತಿಯೊಬ್ಬನ ಪ್ರತಿಮೆಯುಂಟು. ಇದು ಬುಕ್ಕರಾಯನ ಪ್ರತಿಮೆ ಎಂದು ಸ್ಥಳೀಯರು ಕರೆಯುತ್ತಾರೆ. ಇದರ ಜೊತೆಯಲ್ಲಿದ್ದ ಮತ್ತೊಂದು ಪ್ರತಿಮೆ ಸಂಪೂರ್ಣವಾಗಿ ಹಾಳಾಗಿದ್ದು, ಅದು ಹಕ್ಕನ ಪ್ರತಿಮೆಯಾಗಿತ್ತೆಂದು ತಿಳಿಸುತ್ತಾನೆ. ಅಂದರೆ ಮೊದಲಿನಿಂದಲೂ ಈ ಪ್ರತಿಮೆಗಳನ್ನು ಹಕ್ಕಬುಕ್ಕರೆಂದು ಸ್ಥಳೀಯರು ಗುರುತಿಸಿರುವುದು ಗಮನಾರ್ಹ. ಗಾಂಭೀರ್ಯವನ್ನು ಪ್ರದರ್ಶಿಸುವ ಪ್ರತಿಮೆಯು, ಗಣ್ಯವ್ಯಕ್ತಿಯ ವೇಷಭೂಷಣಗಳನ್ನು ಒಳಗೊಂಡಿದೆ. ಕನಕಗಿರಿ ಗೋಪುರದಲ್ಲಿ ಕುದುರೆ ಸವಾರರ ಪ್ರತಿಮೆಗಳಿದ್ದು, ಗೋಪುರದ ಅಲಂಕರಣಕ್ಕೆ ನೆರವಾಗಿವೆ. ಮುಂದಿರುವ ಹಿರಿಯ ಮಹಾದ್ವಾರ ಗೋಪುರದ ಪಶ್ಚಿಮಮುಖದಲ್ಲಿ ಗಂಡು ಜೋಗಮ್ಮನ ಪ್ರತಿಮೆಯೊಂದನ್ನು ಬಿಡಿಸಲಾಗಿದೆ.

ಅದು ಶಿಷ್ಟವಿರಲಿ, ಪರಿಶಿಷ್ಟವಿರಲಿ, ಪರಿಸರದ ಸಾಂಸ್ಕೃತಿಕ ಚಿತ್ರಗಳನ್ನು ಗೋಪುರಗಳಲ್ಲಿ ಬಿಡಿಸುವ ಪದ್ಧತಿ ವಿಜಯನಗರೋತ್ತರ ಕಾಲದಲ್ಲಿ ಆರಂಭಗೊಂಡಂತೆ ಕಾಣುತ್ತದೆ. ಏಕೆಂದರೆ ಮೇಲೆ ಹೇಳಿದ ಮಹಾದ್ವಾರ ಗೋಪುರದ ಶಿಲ್ಪಗಳು ವಿಜಯನಗರೋತ್ತರ ಕಾಲದ ರಚನೆಗಳಾಗಿರುವುದು ಈ ಗೋಪುರದಲ್ಲಿ ಬಿಡಿಸಿರುವ ರಾಜ ಮತ್ತು ರಾಣಿಯರ ಪ್ರತಿಮೆಗಳು ನೀಳವಾಗಿದ್ದು, ಒರಟು ರಚನೆಗಳಂತೆ ಕಂಡುಬರುತ್ತವೆ.

ಕೃಷ್ಣ ದೇವಾಲಯದ ಮಹಾದ್ವಾರ ಗೋಪುರದ ಪಶ್ಚಿಮ ಭಾಗದಲ್ಲಿ, ಉದಯಗಿರಿ ಯುದ್ಧದಲ್ಲಿ ಪಾಲ್ಗೊಂಡ ಸೈನ್ಯವನ್ನು ಗಾರೆಶಿಲ್ಪಗಳಲ್ಲಿ ಬಿಡಿಸಲಾಗಿದೆ. ಗಜದಳ, ಅಶ್ವದಳ ಮತ್ತು ಕಾಲ್ದಳಗಳ ಗುಂಪು ಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ. ಈ ಶಿಲ್ಪಗಳಲ್ಲಿ ಎದ್ದು ಕಾಣುವುದು ಶೌರ್ಯಗುಣ, ದಿಟ್ಟ ನಡಿಗೆಯಿಂದ ಮುನ್ನುಗ್ಗುವ ಕುದುರೆಗಳು, ಆನೆಗಳು ಮತ್ತು ವೀರಾವೇಷದಿಂದ ಕೂಡಿದ ಸೈನಿಕರ ಶಿಲ್ಪಗಳು ಜೀವಂತಿಕೆಯನ್ನು ಪ್ರದರ್ಶಿಸಿ, ವಿಜಯನಗರ ಸೈನ್ಯದ ಶಕ್ತಿ, ಸಾಮರ್ಥ್ಯಗಳ ಕಲ್ಪನೆಗಳನ್ನುನೋಡುಗನ ಸ್ಮೃತಿಪಟಲಕ್ಕೆ ತುಂಬುವಲ್ಲಿ ಸಫಲವಾಗಿವೆ. ಭಗ್ನಗೊಂಡಿರುವ ಈ ಶಿಲ್ಪಗಳನ್ನು ಜೀರ್ಣೋದ್ಧಾರಗೊಳಿಸಲಗುತ್ತಿದೆ. ಹಂಪೆಯ ಇತರ ದೇವಾಲಯಗಳಲ್ಲೂ ಕೆಲವು ಲೌಕಿಕ ಶಿಲ್ಪಗಳು ಕಂಡುಬರುತ್ತವೆ. ಲೌಕಿಕ ಶಿಲ್ಪಗಳಿಂದಾಗಿ ಚರಿತ್ರೆ ಕಾಲದ ಸ್ಪಷ್ಟ ಹಾಗೂ ಶಿಖರವಾದ ಚಿತ್ರಗಳನ್ನು ಪಡೆಯಬಹುದಾಗಿದೆ. ಪ್ರಸ್ತುತ ಸಂಸ್ಕೃತಿ ಅಧ್ಯಯನದಲ್ಲಿ ಈ ರೀತಿಯ ಶಿಲ್ಪಗಳು ಹೆಚ್ಚು ಜಿಜ್ಞಾಸೆಗೆ ಅವಕಾಶ ಮಾಡಿಕೊಡುತ್ತವೆ.

**ಮಿಥನ ಶಿಲ್ಪಗಳು**

ರಚನೆಯಲ್ಲಿ ಭಿನ್ನವಾಗಿರುವ ವಿಜಯನಗರ ಕಾಲದ ಮಿಥುನ ಶಿಲ್ಪಗಳು ಹೆಚ್ಚಾಗಿ ಅಂಗಾಂಗ ಪ್ರದರ್ಶನದ ಉದ್ದೇಶವನ್ನು ಹೊಂದಿವೆ. ಅದರಲ್ಲೂ ಗಾರೆ ಮಿಥುನ ಶಿಲ್ಪಗಳು ಒರಟು ರಚನೆಗಳಾದರೂ ತಮ್ಮ ಉದ್ದೇಶವನ್ನು ಹೇಳುವಲ್ಲಿ ಸಫಲವಾಗಿರುವುದು ಗಮನಾರ್ಹ. ಮೀಥುನ ಶಿಲ್ಪಗಳು ಕೇವಲ ದೇಹ ಸೌಂದರ್ಯವನ್ನಲ್ಲದೆ ಮನಸ್ಸಿನ ಉಲ್ಲಾಸವನ್ನು ಸಹ ಪ್ರಕಟಮಾಡುತ್ತವೆ. ವಿಠಲ ದೇವಾಲಯದ ಮಹಾದ್ವಾರ ಗೋಪುರದಲ್ಲಿ ನಗ್ನ ಸ್ತ್ರೀ ಶಿಲ್ಪವೊಂದಿದ್ದು, ಲಜ್ಜಾಗೌರಿ ಶಿಲ್ಪವನ್ನು ಹೋಲುತ್ತದೆ. ಕೃಷ್ಣ ದೇವಾಲಯದಲ್ಲಿ ಮಹಾದ್ವಾರ ಗೋಪುರದ ಪೂರ್ವ ಮುಖದಲ್ಲಿ ನಗ್ನ ಸ್ತ್ರೀಯರ ಶಿಲ್ಪಗಳಿದ್ದು, ತುಂಬು ಯೌವ್ವನವನ್ನು ಪ್ರದರ್ಶಿಸುತ್ತವೆ. ಸ್ತ್ರೀಯರ ಕೇಶಾಲಂಕಾರ ಮನವೋಹಕವಾಗಿದ್ದು ಲೇಪಾಕ್ಷಿಯ ವರ್ಣಚಿತ್ರಗಳಲ್ಲಿರುವ ಸ್ತ್ರೀಯರ ಕೇಶಾಲಂಕಾರವನ್ನು ಹೋಲುತ್ತವೆ. ಇದೇ ಗೋಪುರದಲ್ಲಿ ಕಂಡುಬರುವ ಗೋಪಿಕಾ ಸ್ತ್ರೀಯರ ಶಿಲ್ಪಗಳು ನಗ್ನವಾಗಿದ್ದರೂ, ಸದಭಿರುಚಿಗೆ ಉತ್ತಮ ಉದಾಹರಣೆಗಳು. ಸರಸ್ವತಿ ದೇವಾಲಯದ ಕೈಪಿಡಿ ಗೋಡೆಯಲ್ಲಿರುವ ನಗ್ನ ಸ್ತ್ರೀಯ ಪ್ರತಿಮೆಯೊಂದು ಉತ್ಕೃಷ್ಟ ರಚನೆಯದು. ವಿರೂಪಾಕ್ಷ ದೇವಾಲಯದ (ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ನಿರ್ಮಿಸಿದ) ಹಿರಿಯ ಮಹಾದ್ವಾರ ಗೋಪುರದಲ್ಲಿ ಕೆಲವು ಮಿಥುನ ಶಿಲ್ಪಗಲು ಕಂಡುಬರುತ್ತವೆ. ಅತಿಯಾದ ಸುಣ್ಣ ಬಣ್ಣಗಳ ಲೇಪನದಿಂದಾಗಿ ಶಿಲ್ಪಗಳು ಸ್ಪಷ್ಟವಾಗಿ ಕಂಡುಬರುವುದಿಲ್ಲ.

ಇದೇ ದೇವಾಲಯದ ಉತ್ತರ ದಿಕ್ಕಿನ ಸಾಲು ಮಂಟಪದ ಕೈಪಿಡಿ ಗೋಡೆಯಲ್ಲಿ, ರತಿಕ್ರೀಡೆಯಲ್ಲಿ ನಿರತರಾದ ಹೆಣ್ಣು ಗಂಡುಗಳು ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಕೈಪಿಡಿ ಗೋಡೆಯು ವಿಜಯನಗರೋತ್ತರ ಕಾಲದ ರಚನೆ. ಆದ್ದರಿಂದ ಮೇಲೆ ಹೇಳಿದ ಮಿಥುನ ಶಿಲ್ಪಗಳು ಸಹ ಅದೇ ಕಾಲದವು. ಹೆಣ್ಣು ಮತ್ತು ಗಂಡಿನ ಶಿಲ್ಪವೊಂದರ ಭಂಗಿಯನ್ನು ಗಮನಿಸಿದರೆ, ಭೂಮಿ ಮತ್ತು ಬೀಜವನ್ನು ಸಂಕೇತಿಸಿ, ಸೃಷ್ಟಿಯ ಮಹತ್ವವನ್ನು ಸಾರುವಂತಿವೆ. ಜೊತೆಗೆ ಬೋಧನಾ ಉದ್ದೇಶವನ್ನು ಒಳಗೊಂಡಂತಿವೆ. ಮುಂದಿನ ಮಹಾದ್ವಾರ ಗೋಪುರದಲ್ಲಿ ಸ್ತ್ರೀಯರ ಕೆಲವು ನಗ್ನ ಶಿಲ್ಪಗಳುಂಟು. ಈ ಶಿಲ್ಪಗಳಲ್ಲಿ ಉದ್ದೇಶಪೂರ್ವಕವಾಗಿಯೇ ಗುಪ್ತಾಂಗಗಳನ್ನು ಸೂಕ್ಷ್ಮವಾಗಿ ತೋರಿಸುವ ಪ್ರಯತ್ನ ಮಾಡಲಾಗಿದೆ. ತೊಡೆಗಳನ್ನು ಅಗಲಿಸಿ ನಿಂತ ಸ್ತ್ರೀ ಶಿಲ್ಪಗಳು ವೈದ್ಯಶಾಸ್ತ್ರದಲ್ಲಿ ದೇಹದ ಭಾಗಗಳನ್ನು ಪ್ರದರ್ಶಿಸುವ ಚಿತ್ರಗಳಂತೆ ಕಂಡುಬರುತ್ತವೆ. ಹೀಗೆ ನೋಡುಗರಿಗೆ ಬೇರೆ ಬೇರೆ ರೀತಿಯ ಅನುಭವಗಳನ್ನು ನೀಡುವ ಮಿಥುನ ಶಿಲ್ಪಗಳು ಸಾರ್ಥಕ ರಚನೆಗಳೆನಿಸಿವೆ.

**ಉಪಸಂಹಾರ**

ಈಗಾಗಲೇ ವಿದ್ವಾಂಸರು ವಿಜಯನಗರ ಶಿಲಾಶಿಲ್ಪಗಳನ್ನು ಕುರಿತಂತೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಶಿಲ್ಪಗಳ ದೇಹ ಪ್ರಮಾಣ, ಮುಖಭಾವ, ಪ್ರಭಾವಳಿ, ಆಭರಣ, ವಸ್ತ್ರ ಮತ್ತು ಆಯುಧಗಳನ್ನು ಬಿಡಿಸಿರುವ ರೀತಿಯಲ್ಲೇ ಗಾರೆಶಿಲ್ಪಗಳನ್ನು ಸಹ ಬಿಡಿಸಿರುವುದು ಗಮನಾರ್ಹ. ವಿಜಯನಗರದ ಶಿಲಾಶಿಲ್ಪಗಳಲ್ಲಿ ಬಳಕುವ ದೇಹ, ಬೊಗಸೆ ಕಣ್ಣುಗಳು, ಮೇಲೇರಿದ ಹುಬ್ಬು ಹಾಗೂ ಚೂಪಾದ ಮೂಗು, ಕಸೂತಿಯಿಂದ ಕೂಡಿದ ನೆರಿಗೆಗಳುಳ್ಳ ವಸ್ತ್ರಾಲಂಕರಣ, ಉದ್ದನೆಯ ಕಿರೀಟಮುಕುಟ, ವಿವಿಧ ರೀತಿಯ ಕಿವಿಯಾಭರಣಗಳು, ಹಾರಗಳು, ಉಂಗುರಗಳು, ಹಾವಭಾವದಲ್ಲಿ ನಿಶ್ಚಲತೆ ಮುಂತಾದ ಲಕ್ಷಣಗಳನ್ನು ಗುರುತಿಸಲಾಗಿದೆ.[1] ಆದರೆ ಗಾರೆಶಿಲ್ಪಗಳಲ್ಲಿ ಮೇಲೆ ಹೇಳಿದ ಎಲ್ಲ ಲಕ್ಷಣಗಳಿದ್ದರೂ ಹಾವಭಾವದಲ್ಲಿ ನಿಶ್ಚಲತೆಯ ಬದಲಿಗೆ ಚಲನಶೀಲತೆಯನ್ನು ಗುರುತಿಸಬಹುದಾಗಿದೆ. ಚಲನಶೀಲತೆಯ ಜೊತೆಗೆ ಗಾಂಭೀರ್ಯವನ್ನು ಸಹ ಮೈಗೂಡಿಸಿಕೊಂಡಿರುವುದು ಗಾರೆಶಿಲ್ಪಗಳ ವಿಶೇಷ ಲಕ್ಷಣ. ಬಹುತೇಕ ಗಾರೆಶಿಲ್ಪಗಳು ಸಮಭಂಗಿಯಲ್ಲಿ ರಚನೆಗೊಂಡಿವೆ. ಇದು ಆ ಕಾಲದ ಗಾರೆಶಿಲ್ಪಗಳ ಪ್ರಮುಖ ಲಕ್ಷಣ. ಶಿಲಾ ಶಿಲ್ಪಗಳಿಗಿಂತ ಹೆಚ್ಚಿನ ಅಲಂಕರಣವನ್ನು ಗಾರೆಶಿಲ್ಪಗಳಲ್ಲಿ ಕಾಣುತ್ತೇವೆ. ಹಾಗಾಗಿ ಕೆಲವು ಶಿಲ್ಪಗಳು ಹೊಯ್ಸಳರ ಶಿಲ್ಪಗಳನ್ನು ನೆನಪಿಸುತ್ತವೆ. ಗೂಡುಗಳ ಹೊರಗಿರುವ ಪರಿವಾರ ದೇವತೆಗಳು, ದ್ವಾರಪಾಲಕರು, ಸಂಗೀತವಾದಕರು, ನೃತ್ಯಗಾರರ, ಭಕ್ತರು, ಶಿಷ್ಯರು ಮತ್ತು ಸ್ತ್ರೀ ಪರಿವಾರದವರ ಗಾರೆಶಿಲ್ಪಗಳು ರಚನೆಯಲ್ಲಿ ದೇವತಾ ಶಿಲ್ಪಗಳಿಗಿಂತ ಸ್ವಲ್ಪ ಭಿನ್ನವಾಗಿದ್ದು, ಜಾನಪದ ಶೈಲಿಯ ರಚನೆಗಳಂತೆ ಕಂಡುಬರುತ್ತವೆ.

ಮೇಲೆ ಹೇಳಿದ ಗಾರೆಶಿಲ್ಪಗಳು, ದೇವಾಲಯದ ಅಲಂಕರಣ ನಿಮಿತ್ತ ರಚನೆಗೊಂಡರೂ ಮುಖ್ಯವಾಗಿ ದೇವತೆಗಳ ಪುರಾಣ ಕಥೆಗಳನ್ನು ಜನಸಾಮಾನ್ಯರಿಗೆ ನೇರವಾಗಿ ತಿಳಿಹೇಳುವ ಉದ್ದೇಶವನ್ನು ಹೊಂದಿದ್ದವು. ವಿಜಯನಗರ ಕಾಲದ ಗಾರೆಯನ್ನು ನವ್ಯ ಶೈಲಿಯೋಪಾದಿಯಲ್ಲಿ ಕಟ್ಟಡ ಮತ್ತು ಶಿಲ್ಪಗಳಿಗೆ ಬಳಸಲಾಯಿತು. ರಚನೆಗೊಂಡು ಶಿಲ್ಪಗಳು ಪಂಥ, ಆಗಮ ಮೊದಲಾಗಿ ದೇವಾಲಯಗಳು ನಡೆದು ಬಂದ ಪಾರಂಪರಿಕ ದಾರಿಯನ್ನು ಗುರುತಿಸಲು ಸಹಕಾರಿಯಾಗಿವೆ. ದೇವರುಗಳನ್ನು ಪ್ರದರ್ಶಿಸುವ ಮಡಿವಂತಿಕೆಯನ್ನು ಕೈಬಿಟ್ಟು, ತೆರೆದ ಸ್ಥಿತಿಯಲ್ಲಿ ಗಾರೆಶಿಲ್ಪಗಳನ್ನು ರಚಿಸಿದ್ದು, ಶಿಲ್ಪಕಲಾ ಕ್ಷೇತ್ರದಲ್ಲಾದ ಒಂದು ಪ್ರಮುಖ ಬೆಳವಣಿಗೆ. ಗಾರೆ ಕೆಲಸದಲ್ಲಿ ನುರಿತ ಕುಶಲ ಕರ್ಮಿಗಳು, ತಮ್ಮ ಪರಿಣತಿ ಮತ್ತು ಪರಿಶ್ರಮಗಳ ಪ್ರತೀಕವಾದ ಗಾರೆಶಿಲ್ಪಗಳನ್ನು ರೂಪಿಸಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನೇ ನೀಡಿದ್ದಾರೆ. ಗೋಪುರ ಅಥವಾ ಶಿಖರಗಳೆಡೆಗೆ ಗಮನ ಸೆಳೆಯುವಲ್ಲಿ ಗಾರೆಶಿಲ್ಪಗಳ ಪಾತ್ರ ಮಹತ್ವದ್ದು. ಆ ಮೂಲಕ ನೋಡುಗನಲ್ಲಿ, ದೇವಾಲಯದ ಭವ್ಯತೆಯ ಅರಿವು ಉಂಟಾಗುತ್ತಿತ್ತು. ಬಿಡಿಯೂ ಅಲ್ಲದ, ಉಬ್ಬು ಅಲ್ಲದ ಗಾರೆಶಿಲ್ಪಗಳ ರಚನೆ ವಿಶಿಷ್ಟವಾದುದು.

ವಿಜಯನಗರದಲ್ಲಿ ಪರಿಶ್ರಮ ಪಡೆದ ಗಾರೆಶಿಲ್ಪಗಳ ದೊಡ್ಡ ಸಮೂಹವೇ ನೆಲೆಸಿತ್ತು. ಸಾಮ್ರಾಜ್ಯದ ಅವನತಿಯ ನಂತರ, ಇತರ ಕುಶಲಕರ್ಮಿಗಳಂತೆ ಇರುವ ಸಹ ಬದುಕಿಗಾಗಿ ಬೇರೆಡೆ ವಲಸೆ ಹೋದರು. ಉದಾಹರಣಗೆ ಕಿನ್ನಾಳದಲ್ಲಿ (ಕೊಪ್ಪಳ-ಜಿಲ್ಲೆ) ನೆಲೆಸಿರುವ ಚಿತ್ರಗಾರರು ತಾವು ವಿಜಯನಗರದಿಂದ (ಹಂಪೆ) ಬಂದವರೆಂದು ಇಂದಿಗೂ ಹೇಳಿ ಕೊಳ್ಳುತ್ತಾರೆ.[2] ಇವರು ರಥಗಳ ಅಲಂಕರಣಕ್ಕೆ ಬಳಸುವ ಮಕ್ಕಿನ ಪ್ರತಿಮೆಗಳನ್ನು ರಚಿಸುತ್ತಾರೆ.[3] ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಬಿಡಿ ಶಿಲ್ಪಗಳನ್ನಿಡಲು ನವರಂಗದಲ್ಲಿ ಗೂಡುಗಳನ್ನು ನಿರ್ಮಿಸಲಾಗುತ್ತಿತ್ತು. ಆದರೆ ವಿಜಯನಗರ ಕಾಲದಲ್ಲಿ ಈ ಗೂಡುಗಳ ರಚನೆಯನ್ನು ಕೈಬಿಡಲಾಯಿತು. ಬದಲಿಗೆ ಹೊರಭಾಗದ ಕೈಪಿಡಿಗೋಡೆಯಲ್ಲಿ ಗೂಡುಗಳನ್ನು ನಿರ್ಮಿಸಿ, ಗಾರೆಶಿಲ್ಪಗಳನ್ನು ರಚಿಸುವುದರ ಮೂಲಯಕ ದೇವಾಲಯವನ್ನು ಸುಂದರಗೊಳಿಸುವ ಆಸ್ಥೆಯನ್ನು ಗುರುತಿಸಬಹುದಾಗಿದೆ. ಅದೇ ರೀತಿ ಗೋಪುರ ಮತ್ತು ಶಿಖರಗಳ ನಿರ್ಮಾಣದಲ್ಲಿ ಶಿಲೆಯನ್ನು ಗೌಣ ಮಾಡಿ, ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಹೊರಮೈಯನ್ನು ಗಾರೆಶಿಲ್ಪಗಳಿಂದ ಅಲಂಕರಿಸಲಾಯಿತು. ಇದು ವಾಸ್ತು ಮತ್ತು ಶಿಲ್ಪ ಕಲಾಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ದಾರಿ ಮಾಡಿಕೊಟ್ಟಿತು. ತತ್ಪರಿಣಾಮವಾಗಿ ದೇವಾಲಯದ ನಿರ್ಮಾಣಗಳು ಹಗುರಗೊಂಡು, ಆರ್ಥಿಕವಾಗಿ ಮಿತವ್ಯಯವನ್ನು ಸಾಧಿಸಿದವು.

**ಆಕರ**

ವಿಜಯನಗರದ ಗಾರೆಶಿಲ್ಪ, ೨೦೦೦, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯-೨೬.

[1] ಅಪರ್ಣ ಕೂ.ಸ.,೧೯೯೪, ವಿಜಯನಗರ ಕಾಲದ ಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ, ಪು. ೨೩೭-೩೮.

[2] ಮಹದೇವ ಸಿ., ೨೦೦೦, ಮರದ ವಾಸ್ತು ಮತ್ತು ಕಲೆ – ಬಳ್ಳಾರಿ ಜಿಲ್ಲೆ.

[3] ಹಗುರುರವಾದ ಹೆಬ್ಬೆವು ಮರದಿಂದ ಪ್ರತಿಮೆಗಳು ಒರಟು ರಚನೆಯನ್ನು ಮಾಡಿ ಕೊಳ್ಳುತ್ತಾರೆ. ನಂತರ ಬಟ್ಟೆಗೆ ಹುಣಸೆ ಬೀಜದ ಸರಿಯನ್ನು ಸುರಿದು ಒರಟು ಪ್ರತಿಮೆಗೆ ಸುತ್ತಿ ಅಂತಿಮ ರೂಪ ಕೊಡುತ್ತಾರೆ. ಅದು ಒಣಗಿದ ನಂತರ ಸೂಕ್ತ ಬಣ್ಣಗಳನ್ನು ಹಚ್ಚಲಾಗುವುದು. ಇದನ್ನೇ ಮಕ್ಕಿನ ಪ್ರತಿಮೆ ಎಂಬು ಕರೆಯುವರು. ಈ ಮಕ್ಕಿನ ಪ್ರತಿಮೆಗಳಲ್ಲಿ ದ್ವಾರಪಾಲಕರು, ಸ್ತ್ರೀಯರು, ಪುರುಷರು, ಪ್ರಾಣಿಗಳು, ದೇವತೆಗಳ ವಾಹನಗಳು ಮತ್ತು ಗ್ರಾಮ ದೇವತೆಗಳು ಮುಖ್ಯವಾಗಿವೆ.

# ೧೧. ಆಯುಧ ಕಲೆ

ನಾಗರಿಕತೆಯ ಬೆಳವಣಿಗೆಯಲ್ಲಿ ಆಯುಧಗಳ ಪಾತ್ರ ಪ್ರಾಮುಖ್ಯವಾಗಿದೆ. ಅಂತೆಯೇ ಅವುಗಳ ವಿಕಾಸವೂ ಬಹಳ ಆಸಕ್ತಿಯಿಂದ ಕೂಡಿದ್ದು, ಮಾನವ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಮಾನವನು ವಿವಿಧ ಆಯುಧಗಳನ್ನು ಹಿಡಿದಿರುವ ವಿವಿಧ ದೇವ ದೇವತೆಗಳನ್ನು ಪೂಜಿಸುತ್ತಿದ್ದಾನೆ. ಈ ಆಯುಧಗಳನ್ನು ಆಧಾರವಾಗಿಟ್ಟುಕೊಂಡು ದೇವರುಗಳನ್ನು ಗುರುತಿಸಲಾಗುತ್ತಿದೆ. ಈ ರೀತಿ ಪುರಾಣಗಳಲ್ಲಿ ಮತ್ತು ಇತಿಹಾಸದಲ್ಲಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡ ಆಯುಧಗಳನ್ನು ಸಾಂಪ್ರದಾಯಿಕವಾಗಿ ಗುರುತಿಸಲಾಗುತ್ತಿದೆ. ಈ ದಿಕ್ಕಿನಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಕಾಣಸಿಗುವ ಇಂದ್ರನ ವಜ್ರಾಯುಧ ಮತ್ತು ಪಾಶ, ವಿಷ್ಣುವಿನ ಗದೆ ಮತ್ತು ಚಕ್ರ, ಶಿವನ ತ್ರಿಶೂಲ ಮತ್ತು ಪರಶುರಾಮನ ಕೊಡಲಿ (ಪರಶು) ಇವುಗಳನ್ನು ಇಂದಿಗೂ ಒಂದಲ್ಲ ಒಂದು ವಿಧದಲ್ಲಿ ಕಾಣಸಿಗುತ್ತವೆ.

ವಿಜಯನಗರ ಕಾಲದ ಆಯುಧ ಕಲೆಯನ್ನು ಅಧ್ಯಯನ ಮಾಡಲು ಶಾಸನಗಳು, ಶಿಲ್ಪಗಳು, ನಾಣ್ಯಗಳು, ವರ್ಣಚಿತ್ರಗಳು, ಸಾಹಿತ್ಯ ಮತ್ತು ವಿದೇಶಿಯರ ಬರಹ ಮುಖ್ಯ ಆಕರಗಳಾಗಿವೆ.

**ಶಾಸನಗಳು**

ಆಯುಧ ಕಲೆಯನ್ನು ತಿಳಿಯಲು ಶಾಸನಗಳ ಪಾತ್ರ ಗಣನೀಯವಾಗಿರುವುದು. ಕನ್ನಡ ಶಾಸನಗಳಲ್ಲಿ ನೂರಾರು ಆಯುಧಗಳ ಹೆಸರುಗಳು ಬರುತ್ತವೆ. ಆದರೆ ಅವುಗಳ ಸ್ವರೂಪ ವೇನೆಂಬುದನ್ನು ತಿಳಿಯಲು ಕಷ್ಟದಾಯಕವಾದರೂ ಪ್ರಮುಖವಾದ ಆಯುಧಗಳನ್ನು ಗುರುತಿಸಬಹುದು. ಬಾಣದ ಪ್ರಭೇದಗಳಲ್ಲಿ ಬಿಳಿಯಂಬು, ಕೋಲಂಬು, ಸುಂಗಲಂಬು ಮುಂತಾದವುಗಳ ಹೆಸರುಗಳು ದೊರೆಯುತ್ತವೆ. ಖಡ್ಗ ಅಥವಾ ಕತ್ತಿಗೆ ಕರವಾಳ್ ಇಲ್ಲವೆ ತೋಳಬಾಳ್ ಎಂಬ ಹೆಸರುಗಳೂ ಇದ್ದವು. ಕಡಿತಲೆ, ಅಲಗು, ಗೇಣ್, ಕೊಂತ, ಶಲ್ಯ, ಭಲ್ಯ, ಕಣೆಯ, ಕರ್ಕಡೆ, ಸುರಿಗೆ, ಮುಸಲ, ತೀರಿಕೆ, ಜಟ್ಟಿಗೆ, ಭಿಂಡಿವಾಳ, ಪಂಚರಾಯುಧ, ಮುದ್ಗರ ಮುತಾದವುಗಳನ್ನು ಹೆಸರಿಸಬಹುದಾಗಿದೆ.

**ಸಾಹಿತ್ಯ**

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಮರಗಳ ಬಗ್ಗೆ ಮತ್ತು ಆಯುಧಗಳ ಬಗ್ಗೆ ಉಲ್ಲೇಖವಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಕವಿಗಳು

ಕೋಟೆ ಕೊತ್ತಲಗಳ ಮತ್ತು ಯುದ್ಧದ ವರ್ಣನೆಯನ್ನು ಕೊಡುವುದರ ಜೊತೆಗೆ ಆಯುಧಗಳ, ಸೈನಿಕರ, ಉಡಿಗೆ ತೊಡಿಗೆ, ಸೈನಿಕರ, ಉಡಿಗೆ ತೊಡಿಗೆ, ಸೈನಿಕರ ರಕ್ಷಾಕವಚಗಳು, ಆನೆ ಕುದುರೆಗಳ ಸಂರಕ್ಷಕ ಸಾಧನಗಳು, ಸಿಡಿಮದ್ದು, ರಣವಾದ್ಯ ಮುಂತಾದವುಗಳ ವರ್ಣನೆಯನ್ನು ಕೊಡುವರು.

ಕನ್ನಡ ಕೃತಿಗಳಾದ ನಂಜುಂಡ ಕವಿಯ ರಾಮನಾಥಚರಿತೆ, ಕಂಠೀರವ ನರಸರಾಜ ವಿಜಯ, ಕೆಳದಿ ನೃಪವಿಜಯ ಮತ್ತು ವೀರಶೈವ ಹಾಗೂ ಜೈನ ಪುರಾಣಗಳಲ್ಲಿ ಕೋಟೆ ಕಾಳಗ ಮತ್ತು ಆಯುಧಗಳ ಚಿತ್ರ ಅದ್ಭುತವಾಗಿದೆ. ವಿರೂಪಾಕ್ಷ ಪಂಡಿತನ ಕ್ರಿ.ಶ. ೧೫೮೫ ಚೆನ್ನಬಸವ ಪುರಾಣದಲ್ಲಿ ಕೋಟೆ ಕಾಳಗಗಳ ವರ್ಣನೆಯು ನೈಜ ಚಿತ್ರಣವನ್ನು ಕೊಡುವದು. ಪುರಾಣ ವಿಷಯಗಳ ಮಧ್ಯದಲ್ಲಿ ಹುದುಗಿರುವ ಇಂತಹ ಅನೇಕ ವಿಷಯಗಳನ್ನು ನೋಡ ಬಹುದು. ಹಾಗೆಯೇ ಪುಷ್ಪದಂತ ಪುರಾಣ, ಪಾರ್ಶ್ವನಾಥ ಪುರಾಣ, ನೇಮಿನಾಥಪುರಾಣ, ಚಂದ್ರಪ್ರಭ ಪುರಾಣ, ಅನಂತನಾಥಪುರಾಣ, ಜಗನ್ನಾಥ ವಿಜಯ ಮುಂತಾದವುಗಳು ಕೋಟೆ ಹಾಗೂ ಸಮರೋಪಕರಣಗಳು, ಸೈನಿಕರ ಆಯುಧಗಳು ರಕ್ಷಾಕವಚಗಳು, ಆನೆ ಕುದುರೆಗಳ ಸಂರಕ್ಷಕ ಸಾಧನಗಳು, ಸಿಡಿಮದ್ದು, ರಣವಾದ್ಯಗಳು, ಸೇನಾಬಲ, ಗಜಾಶ್ವದಳ, ಸೈನಿಕರ ಉಡುಗೆ ತೊಡುಗೆಗಳು, ಸಮರ ಕಾರ್ಯಾಚರಣೆ, ಕೋಟೆಗಳಿಗೆ ದಂಡಯಾತ್ರೆ, ಸಮರ ಸಿಬ್ಬಂದಿ ಮುಂತಾದವುಗಳ ವರ್ಣನೆಯನ್ನು ಕೊಡುವವು.

ಕನ್ನಡೇತರ ಕೃತಿಗಳಾದ ಸಾಳವಾಭ್ಯುದಯಂ ಮತ್ತು ಗಂಗಾಂಬಿಕೆಯ ಮಧುರಾ ವಿಜಯಂ ಕಾವ್ಯಗಳು ಶಸ್ತ್ರ (ಬಾಕು, ಕತ್ತಿ), ಶರಾಸನ (ಬಿಲ್ಲು), ಅಸಿ, ಕರ್ಪಣ, ಕಥಾರಿಕಾಸ್ತ್ರಮ್ (ಒಂದು ಬಗೆಯ ಬಾಣಂ, ಕಾರ್ಮುಕಂ, ಕೋದಂಡಂ, ಮುದ್ಗರ (ಚಮ್ಮಟಿಗೆಯಂತಹ ಆಯುಧ), ಪ್ರಾಸ (ಕ್ಷಿಪಣಿ) ಮುಂತಾದ ಆಯುಧಗಳ ಹೆಸರನ್ನು ಹೇಳುತ್ತವೆ. ಶತ್ರುಗಳ ಬಾಣದಿಂದ ರಕ್ಷಿಸಿಕೊಳ್ಳಲು ಸೈನಿಕರು ಫಲಕಗಳನ್ನು, ಕೆಲವು ಸಮಯದಲ್ಲಿ ಚರ್ಮದ ಫಲಕವನ್ನೂ (ಕರ್ಮಧಾರಣ) ಸಹ ಉಪಯೋಗಿಸುತ್ತಿದ್ದರು.

**ವಿದೇಶಿ ಪ್ರವಾಸಿಗರ ವರದಿ**

ವಿದೇಶಿ ಪ್ರವಾಸಿಗಳ ವರದಿಗಳು ಸಹ ಆಯುಧಗಳ ವಿವರಗಳನ್ನು ಕೊಡುವವು. ರಾಯಚೂರು ಯುದ್ಧಕ್ಕೆ ಹೊರಟ ವಿಜಯನಗರ ಸೈನ್ಯವನ್ನು ವರ್ಣಿಸುವ ನ್ಯೂನಿಜನು, "He (the king) left the city of Bisnage with all his troops; and they marched in the following order. The chief of the guard led the advance with thirty thousand infantry-archers, men with shields, and musqueteers, and speamen and a thousand horse, and his elephants." ವಿಜಯನಗರ ಕಾಲದ ವಿವಿಧ ಆಯುಧಗಳ ವರ್ಣನೆಯನ್ನು ಇಲ್ಲಿ ಕಾಣಬಹುದು.

**ಶಿಲ್ಪಗಳು**

ನಾವು ಸಾಮಾನ್ಯವಾಗಿ ಯಾವುದೇ ವೀರಗಲ್ಲು ಮತ್ತು ಶಿಲ್ಪಗಳನ್ನು ಕಂಡಾಗ ಅವುಗಳಲ್ಲಿ ಆಯುಧಗಳನ್ನು ಕಾಣಬಹುದು. ದೇವಾಲಯಗಳ ಅಧಿಷ್ಠಾನದ ಮೇಲಿನ ಯುದ್ಧ ದೃಶ್ಯಗಳಲ್ಲಿ ಸೈನಿಕರು ಹಿಡಿದಿರುವ ಆಯುಧಗಳು, ಅವರ ವೇಷಗಳನ್ನು ಗಮನಿಸಬಹುದು. ಶಿಲ್ಪಗಳಲ್ಲಿಯ ಪೌರಾಣಿಕ ದೃಶ್ಯಗಳಲ್ಲಿ ಆಯುಧ ಕಲೆಗೆ ಒತ್ತು ಕೊಡಲಾಗಿದೆ.

ಆಯುಧಗಳನ್ನು (೧) ಆಕ್ರಮಣಕಾರಕ ಆಯುಧಗಳು ಮತ್ತು (೨) ರಕ್ಷಣಾತ್ಮಕ ಆಯುಧಗಳು ಎಂದು ವಿಂಗಡಿಸಬಹುದು. ಆಕ್ರಮಣಕಾರಕ ಆಯುಧಗಳಲ್ಲಿ (i) ಚುಚ್ಚುವ ಆಯುಧಗಳು, (ii) ಹೊಡೆಯುವ ಆಯುಧಗಳು, (iii) ಕತ್ತರಿಸುವ ಆಯುಧಗಳು ಮತ್ತು (iv) ಧ್ವಂಸ ಮಾಡುವ ಆಯುಧಗಳು ಎಂದು ವಿಂಗಡಿಸಬಹುದು. ರಕ್ಷಣಾತ್ಮಕ ಆಯುಧಗಳಲ್ಲಿ ಗುರಾಣಿಗಳು ಪ್ರಮುಖವಾಗಿರುವವು.

**೧. ಆಕ್ರಮಣಕಾರಕ ಆಯುಧಗಳು**

(i) ಚುಚ್ಚುವ ಆಯುಧಗಳಲ್ಲಿ ಸಾಮಾನ್ಯವಾಗಿ ಭರ್ಚಿಗಳು ಮತ್ತು ಕಾಠಾರಿಗಳು, ಬಿಲ್ಲು ಮತ್ತು ಬಾಣಗಳು, ಬತ್ತಳಿಕೆಗಳು, ಅಂಕುಶಗಳು ಪ್ರಾಮುಖ್ಯವಾಗಿರುವವು. ಭರ್ಚಿಗಳನ್ನು ಹಿಡಿದ ಕುದುರೆದಳ ಮತ್ತು ಕಾಲ್ದಳಗಳನ್ನು ವಿಜಯನಗರದ ಹಜಾರರಾಮ ದೇವಸ್ಥಾನ ಮತ್ತು ತಿರುವೆಂಗಳನಾಥ ದೇವಾಲಯದ ಪ್ರಕಾರ ಗೋಡೆಯ ಮೇಲಿರುವ ಶಿಲ್ಪಗಳಲ್ಲಿ ಕಾಣಬಹುದು. ಕಠಾರಿಗಳನ್ನು ಹೆಚ್ಚಾಗಿ ವೀರಗಲ್ಲುಗಳ ಮೇಲೆ ಮತ್ತು ಯೋಧರ ಶಿಲ್ಪಗಳಲ್ಲಿ ಕಾಣಬಹುದು. ವಿಜಯನಗರ ತಿರುವೆಂಗಳನಾಥ ದೇವಾಲಯದಲ್ಲಿ ವಿಜಯನಗರ ಅರಸರ ಲಾಂಛನದಲ್ಲಿ ಕಠಾರಿಯನ್ನು ನೋಡಬಹುದು. ಬಿಲ್ಲು, ಬಾಣ ಮತ್ತು ಬತ್ತಳಿಕೆಗಳ ಸಾಮಾನ್ಯವಾಗಿ ಪೌರಾಣಿಕ ಕಥೆಗಳ ಶಿಲ್ಪಗಳಲ್ಲಿ ಮತ್ತು ವೀರಗಲ್ಲುಗಳಲ್ಲಿ ಕಂಡುಬರುವವು. ವಿಜಯನಗರದಲ್ಲಿ ಹಜಾರರಾಮ, ತಿರುವೆಂಗಳನಾಥ, ವಿರೂಪಾಕ್ಷ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿ ರಾಮಾಯಣ ದೃಶ್ಯಗಳು ಶಿಲ್ಪಗಳಲ್ಲಿ ಕಾಣುತ್ತವೆ. ಅಂಕುಶಗಳನ್ನು ಸಾಮಾನ್ಯವಾಗಿ ಆನೆಗಳನ್ನು ಪಳಗಿಸಲು ಮಾವುತರು ಉಪಯೋಗಿಸುತ್ತಿದ್ದುದನ್ನು ಶಿಲ್ಪಗಳಲ್ಲಿ ಕಾಣಬಹುದು.

(ii) ಹೊಡೆಯುವ ಆಯುಧಗಳಲ್ಲಿ ವಿವಿದ ಆಕಾರ ಮತ್ತು ಗಾತ್ರದ ದೊಣ್ಣೆಗಳು ಪ್ರಮುಖವಾಗಿವೆ.

(iii) ಕತ್ತರಿಸುವ ಆಯುಧಗಳನ್ನು ಕತ್ತಿಗಳು, ಯುದ್ಧ ಕೊಡಲಿಗಳು ಅಥವಾ ಪರಶುಗಳು ಎಂದು ವಿಂಗಡಿಸಬಹುದು. ಶಿಲ್ಪಗಳಲ್ಲಿ ಕೊಡಲಿಗಳ ಪ್ರದರ್ಶನ ಕಡಿಮೆಯಾದರೆ ಕತ್ತಿಗಳ ಪ್ರದರ್ಶನ ಹೆಚ್ಚಾಗಿರುವುದು ಕಂಡುಬರುತ್ತದೆ. ಖಡ್ಗಗಳ ಉಪಯೋಗ ಪೌರಾಣಿಕ ದೃಶ್ಯಗಳಲ್ಲಿ ಹೆಚ್ಚಾಗಿರುವುದನ್ನು ಗಮನಿಸಬಹುದು.

(iv) ಧ್ವಂಸ ಮಾಡುವ ಆಯುಧಗಳಲ್ಲಿ ಸಾಮಾನ್ಯವಾಗಿ ವಿಷ್ಣುವಿನ ಚಕ್ರವನ್ನು ಶಿಲ್ಪಗಳಲ್ಲಿ ನೋಡಬಹುದು. ಈ ಆಯುಧಗಳನ್ನು ಯುದ್ಧದಲ್ಲಿ ಉಪಯೋಗಿಸದಿದ್ದರೂ ವಿಜಯನಗರ ದೇವಾಲಯಗಳ ಶಿಲ್ಪಗಳಲ್ಲಿ ಕಾಣಬಹುದು.

**೨. ರಕ್ಷಣಾತ್ಮಕ ಆಯುಧಗಳು**

ರಕ್ಷಣಾತ್ಮಕ ಆಯುಧಗಳಲ್ಲಿ ಗುರಾಣಿಗಳೇ ಪ್ರಮುಖವಾಗಿವೆ. ಆಕಾರಕ್ಕನುಗುಣವಾಗಿ ಇವುಗಳನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಬಹುದು. ದುಂಡಾಕೃತಿ, ಚೌಕಾಕೃತಿ, ಆಯತಾಕೃತಿ ಮತ್ತು ಅಂಡಾಕೃತಿ ಗುರಾಣಿಗಳನ್ನು ವಿಜಯನಗರ ದೇವಾಲಯಗಳ ಮೇಲಿನ ಪೌರಾಣಿಕ ದೃಶ್ಯಗಳ ಶಿಲ್ಪಗಳಲ್ಲಿ ಮತ್ತು ವೀರಗಲ್ಲುಗಳನ್ನು ಕಾಣಬಹುದು.

**ಆಕರ ಗ್ರಂಥಗಳು**


೧. H.T. Talwar, 1994, The Arms and Armoury of the Mysore Palace.

೨. T. Dayanand Pate, Kesava Temple at Somanathapur : A Cultural Study.

೩. ಕೆ. ಶ್ರೀಕಂಠಯ್ಯ, ೧೯೮೩, ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು.

೪. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

೫. G.N. Pant, 1978, Indian Arms and Armour.

೬. Robert Sewell, A Forgotten Empire.

**ಆಕರ**

ವಿಜಯನಗರ ಅಧ್ಯಯನ, ಸಂ. ೪, ೧೯೯೯, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೨೪-೨೬.

## ೧೨. ಸಂಗೀತ ಮತ್ತು ನೃತ್ಯ : ಶಾಸನಾಧಾರಿತ ಅಧ್ಯಯನ

ವಿಜಯನಗರದ ಶಾಸನಗಳ ವಿಶೇಷ ಅಧ್ಯಯನದಿಂದ ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಪುನರ್ರಚನೆ ಸಾಧ್ಯ ಹಾಗೂ ಆ ಕಾಲದಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಇದ್ದಂತಹ ಪ್ರಾಮುಖ್ಯತೆ, ಪ್ರೋತ್ಸಾಹ ಮತ್ತು ಇನ್ನು ಹಲವು ರೀತಿಯ ವಾಡಿಕೆಗಳನ್ನು ಅರಿಯಲು ಸಾಧ್ಯವಾಗಿದೆ. ವಿಜಯನಗರದ ಕಾಲದಲ್ಲಿ ಅರಸರು ಮತ್ತು ಜನರು ಸಂಗೀತ ಮತ್ತು ನೃತ್ಯಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟಿದ್ದರು ಎಂಬುದಕ್ಕೆ ಅವರ ಕಾಲದ ಅನೇಕ ಶಾಸನಗಳು ಕಾರಣವಾಗಿವೆ. ಈ ನಿಟ್ಟಿನಲ್ಲಿ ನನ್ನ ಸಂಶೋಧನೆಯ ಹಲವು ವಿವರಗಳನ್ನು ಇಲ್ಲಿ ತಿಳಿಯಲು ಇಚ್ಛೆಪಡುತ್ತೇನೆ.

ಹಲವು ಶಾಸನಗಳು ಸಂಗೀತ ರಚನೆಕಾರರ ಬಗ್ಗೆ ತಿಳಿಸುತ್ತ ಅವರನ್ನು ಸಂಗೀತ ವಾಗ್ಗೇಯಾಕಾರರನ್ನಾಗಿ ಸಂಬೋಧಿಸುತ್ತವೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಚಿಕ್ಕಕೇರಿಯ ಮತ್ತು ಹುಲಿಗುಂಟ ಊರುಗಳ ಕ್ರಿ.ಶ. ೧೫೩೯ರ ಅಚ್ಚುತರಾಯನ ಕಾಲದ ಶಾಸನವು ಒಂದು ವಿಶೇಷತೆಯಿಮದ ಕೂಡಿದೆ.[1] ಇದರಲ್ಲಿ ಬಾಯಕಾರ ರಾಮಪ್ಪಯನ ವಂಶಾವಳಿಯನ್ನು ಶಾಸನದಲ್ಲಿ ಕೊಟ್ಟದಲ್ಲದೆ ಅವರನ್ನು ಸಂಗೀತ ವಾಗ್ಗೇಯಕಾರರನ್ನಾಗಿ ಸಂಬೋಧಿಸಿ, ಅವರು ರಾಜನಿಂದ ಪಡೆದ ದಾನಗಳಿಂದ ಕಟ್ಟಿಸಿದಂತಹ ಹಲವಾರು ಕೆರೆಕಟ್ಟೆಗಳ ಬಗ್ಗೆ ಮತ್ತು ರಾಜದನಿಂದ ಮುಖ್ಯ ದಳಪತಿಯಾಗಿ ನೇಮಕಗೊಂಡ ವಿವರಗಳನ್ನು ನೀಡುತ್ತವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು, ದೇವವೃಂದ ಗ್ರಾಮದ, ಬುಕ್ಕರಾಯ ಕ್ರಿ.ಶ. ೧೩೭೧ರ ಕಾಲದ ಶಾಸನವು[2] ಆ ಗ್ರಾದ ರಾಮೇಶ್ವರ ದೇವಸ್ಥಾನದ ನೃತ್ಯಗಾರ್ತಿಯರ ನಿರ್ವಹಣೆಗಾಗಿ ದತ್ತಿಯನ್ನು ಕೊಟ್ಟ ಬಗ್ಗೆ ಉಲ್ಲೇಖಿಸುತ್ತವೆ. ಇದೇ ಜಿಲ್ಲೆಯ ಹಾಗೂ ತಾಲ್ಲೂಕಿನ ಕರುವಂಮಗಿ ಗ್ರಾಮದ ಕ್ರಿ.ಶ. ೧೫೪೯ರ ಸದಾಶಿವರಾಯನ ಕಾಲದ ಶಾಸನವು,[3] ಆ ಗ್ರಾಮದ ರಾಮೇಶ್ವರ ದೇವಸ್ಥಾನದಲ್ಲಿ ಅನೇಕ ವಿಧವಾದ ಹಬ್ಬಗಳ ಆಚರಣೆಯಲ್ಲಿ ಹಾಗೂ ವಿಶೇಷ ಹಬ್ಬಗಳಾದ ಶಿವರಾತ್ರಿಯಲ್ಲಿ, ಕರಾಡೆ, ಕಹಳೆ ಮತ್ತು ಜಾನಪದ ಸಂಗೀತದ ಕಂಸಾಳೆ ಬಾರಿಸುವವರಿಗೆ ದತ್ತಿಗಳನ್ನು ಕೊಟ್ಟ ಬಗ್ಗೆ ವಿವರವನ್ನು ಕೊಡುತ್ತವೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಹಂಪಿಯಲ್ಲಿ ತುಳುವ ಅಚ್ಯುತರಾಯನ ಕ್ರಿ.ಶ. ೧೫೬೩ರ ಶಾಸನದಲ್ಲಿ[4] ಹಂಪಿಯ ವಿಠಲ ದೇವಸ್ಥಾನದಲ್ಲಿ ಮುಂಜಾನೆ ದೇವರ ಪೂಜಾಕಾರ್ಯಕ್ರಮಗಳ ಅವಧಿಯಲ್ಲಿ ಸಂಗೀತಕಾರರ ಒಂದು ಸಮೂಹವೆ ನೇಮಕ ಗೊಂಡಿತ್ತು ಎಂದು ಉಲ್ಲೇಖಿಸುತ್ತದೆ. ಇದೇ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ದೇವಲಪುರದ, ಸದಾಶಿವರಾಯನ ಕಾಲದ ಶಾಸನವು[5] ಮುಖವೀಣಾ ಮಸಿಯ ರಾವುತ ಎಂಬುವನ ಬಗ್ಗೆ ಬರೆಯುತ್ತಾ ಅವನು ಎರಡು ನಾಗಸ್ವರ ಮತ್ತು ಎರಡು ತಬಲಗಳನ್ನು ಒಂದೇ ಬಾರಿಗೆ ಬಾರಿಸುತ್ತಿದ್ದ ಚಾತುರ್ಯಕ್ಕಾಗಿ, ಅವನಿಗೆ ವಿಶೇಷವದ ದಾನ ಕೊಟ್ಟಿದ್ದನ್ನು ವಿವರಿಸುತ್ತದೆ.

ಬುಕ್ಕರಾಯನ ಕಾಲದ ಕ್ರಿ.ಶ. ೧೩೬೮ರ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕು ಕಲ್ಯಾಗ್ರಾಮದ ಶಾಸನವು[6] ಶ್ರೀವೈಷ್ಣವ ಮತ್ತು ಜೈನರಿಬ್ಬರು ಪಂಚವಾದ್ಯಗಳನ್ನು ಅಂದರೆ ಕಳಸ, ಜಾಗಟೆ, ಜಾಗಲಾ ಮುಂತಾದವುಗಳನ್ನು ನುಡಿಸುತ್ತಿದ್ದ ವಾದ್ಯಗಾರರನ್ನು ಎರಡು ಧರ್ಮದವರು ನೇಮಕ ಮಾಡಿಕೊಂಡು ದಾನಕೊಟ್ಟ ಬಗ್ಗೆ ವಿವರವನ್ನು ಕೊಡುತ್ತವೆ.

ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕು ಕೂಡಿಗೆ ಹಳ್ಳಿಯ ದೇವರಾಯನ ಕಾಲದ ಕ್ರಿ.ಶ. ೧೩೫೩ರ ಶಾಸನವು[7] ಏಳು ಜನ ಪಾತ್ರದ ಜನರೆಂದರೆ, ಸಂಗೀತ ಮತ್ತು ನೃತ್ಯದವರನ್ನು ಅಲ್ಲಿನ ಸೋಮದೇವ ದೇವಸ್ಥಾನದಲ್ಲಿ ದಿನನಿತ್ಯದ ಸಂಗೀತ ಸೇವೆಗೋಸ್ಕರ

ಮತ್ತು ಆ ಜನರ ನಿರ್ವಹಣೆಗೋಸ್ಕರ ದಾನ ಕೊಟ್ಟ ವಿವರವನ್ನು ನಿಡುತ್ತವೆ. ಆ ಏಳು ಜನ ಸಮಗೀತಗಾರರಲ್ಲಿ ಇಬ್ಬರು ನೃತ್ಯಗಾರ್ತಿಯರು, ಒಬ್ಬ ನೃತ್ಯ ಕಲಿಸುವ ನಟುವಾಂಗ, ಒಬ್ಬ ತಬಲ ಅಥವಾ ನಗಾರಿ ಬಾರಿಸುವ, ಒಬ್ಬ ಸೀತಾರವಾದಕ, ಒಬ್ದಬ ಉಪಾಂಗ, ಒಬ್ಬ ಕಂಸಾಳೆ ಬಾರಿಸುವವ ಎಂದು ವಿವರಣೆಯನ್ನು ಕೊಡುತ್ತವೆ. ಇನ್ನೊಂದು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಬಾರಕೂರು ಗ್ರಾಮದ, ಹರಿಯಪ್ಪನ ಕಾಲದ ಕ್ರಿ.ಶ. ೧೩೮೨ರ ಶಾಸನವು[8] ನೃತ್ಯಗಾರ್ತಿಯರಿಗೆ ಭೂಮಿಯನ್ನು ಕೊಡುಗೆಯಾಗಿ ಕೊಟ್ಟ ವಿವರಣೆ ನೀಡುತ್ತದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳದ ಶಾಸನ[9] ಒಂದರಲ್ಲಿ ಐದು ಮುಖ್ಯ ವಾದ್ಯಗಳನ್ನು ಉಲೇಖಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕು, ಮಾವಳ್ಳಿ ದೇವರಾಯನ ಕಾಲದ ಶಾಸನವೊಂದರಲ್ಲಿ[10] ಅಲ್ಲಿನ ವಿಶೇಷ ಸೇವೆಗಳಲ್ಲಿ, ಸಂಗೀತವಾದ್ಯಗಳಾದ ಡೋಲು, ಜಾಗಟೆ ಮತ್ತು ಶಂಖರಗಳು ಮುಂತಾದ ಸಂಗೀತ ಉಪಕರಣಗಳ ಉಪಯೋಗವನ್ನು ತಿಳಿಸುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕು ಕೊಲ್ಲೂರಿನ ಮೂಕಾಂಬಿಕ ದೇವಸ್ಥಾನದಲ್ಲಿ ವಿರೂಪಾಕ್ಷನ ಕಾಲದ ಶಾಸನ[11]ವೊಂದದರಲ್ಲಿ, ವಾದ್ಯಕಾರ, ಮದ್ದಲೆ ಮತ್ತು ಹಲಗೆಗಳನ್ನು ನುಡಿಸುತ್ತಿದ್ದ ಸಂಗೀತ ವಾದ್ಯಗಾರರಿಗೆ ದಾನಕೊಟ್ಟಿರುವುದನ್ನು ಉಲ್ಲೇಖಿಸುತ್ತವೆ ಮತ್ತು ನಿತ್ಯವೂ ಕೂಡ ದೇವಸ್ಥಾನದಲ್ಲಿ ಸಲ್ಲುತ್ತಿದ್ದ ಪೂಜಾ ವಿವರಗಳನ್ನು ಕೊಡುತ್ತವೆ.

ಕ್ರಿ.ಶ. ೧೫೨೭ ಕೃಷ್ಣದೇವರಾಯನ ಕಾಲದ ಶಾಸನ[12] ವೊಂದರಲ್ಲಿ ಒಬ್ಬ ನಿಲಾಡಿ ಎಂಬ ಶ್ರೇಷ್ಠ ನೃತ್ಯಗಾತಿಗೆ ಒಂದು ಗ್ರಾಮವನ್ನು ಕೋಡುಗೆಯಾಗಿ ಕೊಟ್ಟ ಬಗ್ಗೆ ಉಲ್ಲೇಖಿಸುತ್ತದೆ.ದ ಈ ಶಾಸನವು ಧಾರವಾಡ ಸಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕು ಹೊನ್ನಾಪುರ ಗ್ರಾಮದಲ್ಲಿದೆ. ಇನ್ನೊಂದು ಹಾಸನ ಜಿಲ್ಲೆಯ ಆಲೂರು ತಾಲ್ಲೂಕು, ಪಾಳ್ಯಗ್ರಾಮದ ಕ್ರಿ.ಶ. ೧೩೬೯ರ ಬುಕ್ಕರಾಯನ ಕಾಲದ ಶಾಸನವು[13] ಓಲಗದವನಿಗೆ ಮತ್ತು ದಾವಣಿ ಬಾರಿಸುವವನಿಗೆ ಅವರ ಸೇವೆಗಾಗಿ ದತ್ತಿಯನ್ನು ಕೋಡುತ್ತಿದ್ದ ಬಗ್ಗೆ ವಿವರಣೆ ನೀಡುತ್ತವೆ.

ಅನೇಕ ದೇವಸ್ಥಾನದಲ್ಲಿ ಅನೇಕ ವಿಧವಾದ ಹಬ್ಬಗಳನ್ನು ಆಚರಣೆಯಲ್ಲಿ ತಂದಿದ್ದರು. ಅವುಗಳಲ್ಲಿ ರಂಗಪೂಜೆ ಕಾರ್ಯಕ್ರಮಕ್ಕೆ ದತ್ತಿಗಳನ್ನು ಮತ್ತು ದೇವದಾಸಿಗಳನ್ನು (ನೃತ್ಯಗಾರ್ತಿಯರು) ಸಂಗೀತ ಮತ್ತು ನೃತ್ಯಕ್ಕೆ ನೇಮಕ ಮಾಡಿಕೊಂಡಿರುವುದನ್ನು ಉಲ್ಲೇಖಿಸುತ್ತವೆ. ಚಿಕ್ಕಮಂಗಳೂರು ಜಿಲ್ಲೆಯ ಮೂಡುಗೆರೆ ತಾಲ್ಲೂಕು, ಕಲಶ ಗ್ರಾಮದಲ್ಲಿ ಕ್ರಿ.ಶ. ೧೫೫೫ರ ಸದಶಿವರಾಯನ ಕಾಲದ ಶಾಸನವು[14] ರಂಗಪೂಜೆಯ ಉಲ್ಲೇಖವನ್ನು ಮಾಡಿವೆ. ಇದೇ ಸ್ಥಳದ ಇನ್ನೊಂದು ಹರಿಯಪ್ಪ ಒಡೆಯನ ಕಾಲದ ಶಾಸನವು ಪಂಚವಾದ್ಯದವರಾದ ಭೇರಿ, ಶಂಕ, ಕದಳೆ, ಗಂಟೆ ಮತ್ತು ವೀಣಾ ಬಾರಿಸುವವರ ನಿರ್ವಹಣೆಗಾಗಿ ದಾನವನ್ನು ಕೊಡುತ್ತಿರುವ ಬಗ್ಗೆ ವಿವರ ನೀಡುತ್ತವೆ. ಹಾಗೆಯೇ ವಿಜಯನಗರ ಶಾಸನ ಸಂಪುಟ ಎರಡರ ಶಾಸನಗಳಲ್ಲಿ[15] ರಂಗಪೂಜೆ ಆಚರಣೆ ಮತ್ತು ಅಲ್ಲಿನ ಪೂಜೆಗೆ ನೇಮಕ ಹೊಂದಿದ್ದ ಸಂಗೀತ ಮತ್ತು ನೃತ್ಯಗಾರ್ತಿಯರಿಗೆ ದತ್ತಿಯನ್ನು ಕೊಟ್ಟಿದ್ದರ ಬಗ್ಗೆ ವಿವರವನ್ನು ತಿಳಿಸುತ್ತವೆ.

ಒಳ್ಳಾರಿ ತಾಲ್ಲೂಕಿನ ಸೋಮಸಮುದ್ರದ ಊರಿನ ಸದಾಶಿವನ ಕಾಲದ ಕ್ರಿ.ಶ. ೧೫೫೬ರ ಶಾಸನವು[16]ಜಾನಪದ ನೃತ್ಯ, ಯಕ್ಷಗಾನದ ಕಾರ್ಯಕ್ರಮವನ್ನು ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಏರ್ಪಡಿಸಿ ಆ ಕಲಾವಿದರಿಗೆ ದಾನಗಳನ್ನು ಕೊಟ್ಟ ಬಗ್ಗೆ ವಿವರಣೆ ನೀಡುತ್ತವೆ. ಹಂಪಿಯ ಸದಾಶಿವರಾಯನ ಕ್ರಿ.ಶ, ೧೫೫೯ರ ಶಾಸನವು[17] ಗ್ರಾಮಂತಾರ ಸಂಗೀತ ಮೇಳಗಳಾದ ಗಾಮಡು ಮೇಳ ಮತ್ತು ದೇಮ್ಮನು ಮೇಳಗಳ ಕಲೆಗಾರರ ಬಗ್ಗೆ ವಿವರಗಳನ್ನು ತಿಳಿಸುತ್ತವೆ.

ವಿಜಯನಗರ ಸಾಮ್ರಾಜ್ಯದ ದೊರೆಗಳಾದ ಬುಕ್ಕರಾಯ, ಕೃಷ್ಣದೇವರಾಯ, ಅಚ್ಚುತರಾಯ, ಸದಾಶಿವರಾಯ ಮುಂತಾದವರು ಸಂಗೀತ ಮತ್ತು ನೃತ್ಯಕ್ಕೆ ವಿಶೇಷ ಪ್ರೋತ್ಸಾಹಗಳನ್ನು ಕೊಟ್ಟಂತಹ ನಿದರ್ಶನಗಳನ್ನು ಆ ಕಾಲದ ಶಾಸನಗಳು ವಿವರವಾಗಿ ತಿಳಿಸುತ್ತವೆ. ಇವುಗಳಿಂದ ರಾಜರು ಕಲೆಗಳು ಮತ್ತು ಕಲಾವಿದರಿಗೆ ಕೊಡುತ್ತಿದ್ದಂತಹ ಗೌರವ ಕೊಡುಗೆಗಳ ಬಗ್ಗೆ ಹಾಗೂ ದೇವಸ್ಥಾನಗಳಲ್ಲಿ ವಿವಿಧ ಪೂಜೆಗಳ ಪೂಜಾವಿಧಿಗಳಲ್ಲಿ ಸಂಗೀತ ಮತ್ತು ನೃತ್ಯಗಾರ್ತಿಯರ ಸೇವೆಗಳ ವಿವರಗಳು ನಮಗೆ ದೊರಕುತ್ತವೆ. ವಿವಿಧ ವಾದ್ಯಗಳಾದ ತಬಲ, ದಾವಣೆ, ನಗಾರಿ, ಸೀತಾರ, ಉಪಾಂಗ, ಕಂಸಾಳೆ, ಜಾಗಟೆ, ಡೋಲು, ಶಂಖ, ನಾಗಸ್ವರ ವಾದ್ಯಗಳ ಉಪಯೋಗ ಹಾಗೂ

ಶಾಸನಗಳಲ್ಲಿ ಗ್ರಾಮಂತರ ಕಲೆಗಳಾದ ಜಾನಪದ, ತಾಳಮದ್ದಳೆ (ಯಕ್ಷಗಾನ) ಸಂಗೀತ ಮೇಳಗಳಾದ ಗಾಮಡು-ಮೇಲ ಮತ್ತು ದೆಮ್ಮನು ಮೇಳಗಳ ಬಗ್ಗೆಯು ಕೂಡ ವಿವರಗಳನ್ನು ತಿಳಿಸುತ್ತವೆ.

**ಆಕರ**

ವಿಜಯನಗರ ಅಧ್ಯಯನ, ಸಂ. ೬, ೨೦೦೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೧೧೧-೧೧೩.

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಬಿ.ಆರ್. ಗೊಪಾಲ, ವಿಜಯನಗರ ಶಾಸನಗಳು, ಸಂಪುಟ ೧, ಕೆ.ಎನ್. ೪೦೦ ಮತ್ತು ೪೦೨.

[2] ಅದೇ, ಸಂಪುಟ ೨, ಕೆ.ಎನ್. ೪೭೦.

[3] ಅದೇ, ಸಂಪುಟ ೨, ಕೆ.ಎನ್. ೪೩೫.

[4] ಅದೇ, ಸಂಪುಟ ೧, ಕೆ.ಎನ್. ೩೬೩.

[5] ಅದೇ, ಸಂಪುಟ ೧, ಕೆ.ಎನ್. ೪೦೧.

[6] ಅದೇ, ಸಂಪುಟ ೧, ಕೆ.ಎನ್. ೨೧೧.

[7] ಅದೇ, ಸಂಪುಟ ೧, ಕೆ.ಎನ್. ೫೯.

[8] ಅದೇ, ಸಂಪುಟ ೨, ಕೆ.ಎನ್. ೧೦೯೫.

[9] ಅದೇ, ಸಂಪುಟ ೨, ಕೆ.ಎನ್. ೮೧೪.

[10] ಅದೇ, ಸಂಪುಟ ೨, ಕೆ.ಎನ್. ೯೦೧.

[11] ಅದೇ, ಸಂಪುಟ ೨, ಕೆ.ಎನ್. ೯೭೯.

[12] ಅದೇ, ಸಂಪುಟ ೨, ಕೆ.ಎನ್. ೭೧೧.

[13] ಅದೇ, ಸಂಪುಟ ೨, ಕೆ.ಎನ್. ೭೨೭.

[14] ಅದೇ, ಸಂಪುಟ ೨, ಕೆ.ಎನ್. ೪೯೨.

[15] ಅದೇ, ಸಂಪುಟ ೨, ಕೆ.ಎನ್. ೪೮೫, ೯೫೪, ೯೮೨ ಮತ್ತು ೯೯೦.

[16] ಅದೇ, ಸಂಪುಟ ೨, ಕೆ.ಎನ್. ೨೭೯.

[17] ಅದೇ, ಸಂಪುಟ ೨, ಕೆ.ಎನ್. ೨೬೦.

## ೧೩. ಸಂಗೀತ ಮತ್ತು ನೃತ್ಯ-ಕೊಡುಗೆ

**ಪ್ರಸ್ತಾವನೆ**

ಭಾರತೀಯ ಸಂಸ್ಕೃತಿಯ ಮುಕುಟದಲ್ಲಿ ಅತ್ಯಂತ ಜಾಜ್ವಲ್ಯ ಮಾನವಾದ ರತ್ನದಂತಿರುವುದು ಸಂಗೀತ. ಇದರ ಮೂಲವು ಸಾಮವೇದ. ಅದ್ದರಿಂದ ವಿಶ್ವದ ಸಂಗೀತ ಪದ್ಧತಿಗಳಲ್ಲಿ ಅತ್ಯಂತ ಪ್ರರಾತನವಾದುದು. ಇದು ನಾದ ವಿದ್ಯೆ, ಧ್ವನಿಯ ವಿಜ್ಞಾನ, ಒಂದು ಉಪವೇದ. ಭಾರತೀಯ ಸಂಗೀತದ ಸಪ್ತ ಸ್ವರಗಳಾದ ಸ, ರಿ, ಗ, ಮ, ಪ, ದ, ನಿ ನಾರದ ಪರಿವ್ರಾಜಕ ಉಪನಿಷತ್ತಿನಲ್ಲಿ ಮೊಟ್ಟಮೊದಲನೆಯ ಸಲ ಉಕ್ತವಾಗಿವೆ. ತ್ರಿಸ್ಥಾಯಿಗಳು, ಸ್ವರದ ಗಮಕಗಳನ್ನು ಋಕ್ ಪ್ರತಿಶಾಖ್ಯದಲ್ಲಿ ಹೆಳಿರುವುದು ಅತ್ಯಂತ ಪ್ರರಾತನವಾದುದು.

ಸಂಗೀತ ಸಾಹಿತ್ಯದಲ್ಲಿ ಭರಿತ ಮುನಿಯ ನಾಟ್ಯಶಾಸ್ತ್ರವೆಂಬ ಗ್ರಂಥವು ಅತ್ಯಂತ ಹಿಂದಿನದು. ಇದರಲ್ಲಿ ಸಂಗೀತವನ್ನು ನಾಟ್ಯ ಮತ್ತು ನಾಟಕದ ಒಂದು ಪೋಷಕಾಂಗವಾಗಿ ಪರಿಗಣಿಸಲಗಿದೆ. ಇದು ವೇದದ ಸಂಗೀತದಿಮದ ಉಂಟಾದ ಮೊದಲ ಬದಲಾವಣೆಯನ್ನು ಸೂಚಿಸುತ್ತದೆ. ಭರತನ ಗ್ರಂಥದ ನಂತರ ಅತಿ ಮುಖ್ಯವಾದ ಶಾಸ್ತ್ರ ಗ್ರಂಥವೆಂದರೆ ಮತಂಗ ಮುನಿಯ ಬೃಹದ್ದೇಶಿ (೯ನೇ ಶತಮಾನ). ಇದರಲ್ಲಿ ಪ್ರಥಮ ಬಾರಿ ರಾಗದ ವಿವೇಚನೆಯನ್ನು ಮಾಡಲಾಗಿದೆ. ತರುವಾಯ ಅತಿ ಮುಖ್ಯವಾದ ಗ್ರಂಥ ಶಾರ್ಙ್ಗದೇವನ ಸಂಗೀತ ರತ್ನಾಕರ (೧೩ನೇ ಶತಮಾನ). ಈ ಗ್ರಂಥವನ್ನು ಭಾರತೀಯ ಸಂಗೀತದ ಅಧಿಕೃತವಾದ ಪ್ರಮುಖ ಗ್ರಂಥವೆಂದು ಇಂದಿಗೂ ಪರಿಗಣಿಸಲಾಗಿದೆ. ಇದು ೨೬೪ ರಾಗಗಳನ್ನೂ ಪ್ರಸಿದ್ಧವಾಗಿದ್ದ ದೇಶೀ ರಾಗಗಳನ್ನೂ, ೧೨೦ ತಾಳಗಳನ್ನೂ, ಒಂದು ರಾಗವನ್ನು ಹಾಡುವಾಗ ಅನುಸರಿಸಬೇಕಾದ ನಿಯಮಗಳನ್ನೂ ಕುರಿತು ವಿವರಿಸಿದೆ.

೧೩ನೇ ಶತಮಾನದವರೆಗೂ ಭಾರತಾದ್ಯಂತ, ಸ್ಥಳೀಯ ವ್ಯತ್ಯಾಸಗಳನ್ನು ಬಿಟ್ಟರೆ, ಒಂದೇ ವಿಧವಾದ ಸಂಗೀತ ಪದ್ಧತಿ ಇದ್ದಿತು. ದೆಹಲಿಯು ಪರಕೀಯ ಮುಸ್ಲಿಮರ ವಶವಾದ ನಂತರ, ಉತ್ತರ ಭಾರತದಲ್ಲಿ ಪರ್ಷಿಯಾ ಮತ್ತು ಅರಬ್ಬಿಯಿಂದ ಪ್ರಭಾವಿತವಾಗಿ ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತಗಳೆಂಬ ಎರಡು ಪದ್ಧತಿಗಳಾಗಿ ವಿಭಾಗವಾಯಿತು. ದಕ್ಷಿಣ ಭಾರತದಲ್ಲಿ ವಿದೇಶೀ ಆಕ್ರಮಣಗಳಿಗೆ ಒಳಗಾಗಿ ಅಲ್ಲೋಲಕಲ್ಲೋಲವಾಗದೆ, ಸಂಗೀತವು ಪರಂಪರೆಗೆ ಹೊಂದಿಕೊಂಡು ಮುಂದುವರಿಯಿತು. ಇದೇ ಕಾಲಾನುಕ್ರಮದಲ್ಲಿ ದಾಕ್ಷಿಣಾತ್ಯ ಅಥವಾ ಕರ್ನಾಟಕ ಸಂಗೀತ ಪದ್ಧತಿ ಎನಿಸಿಕೊಂಡಿತು. ಪ್ರಬಂಧ ಅಥವಾ ರಚನೆಗಳು, ಪ್ರಮೇಯ ಅಥವ ನಿಯಮಗಳು, ಸಂಶೋಧನೆ ಮತ್ತು ಸಂಗೀತ ವಾದ್ಯಗಳು ಈ ಎಲ್ಲಾ ಕ್ಷೇತ್ರಗಳಲ್ಲಿ ಕರ್ನಾಟಕದವರು ಮೂಲಭೂತವಾದ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕದಲ್ಲಿದ್ದವರು ಮತ್ತು ಬೇರೆ ರಾಜ್ಯಗಳಲ್ಲಿ ನೆಲೆಸಿದ ಕರ್ನಾಟಕದ ಜನರ ಕೊಡುಗೆಯ ವಿಶೇಷವಾದುದು. ಇದಲ್ಲದೆ, ಹೊಯ್ಸಳ ಸಾಮ್ರಾಜ್ಯ ಮತ್ತು ವಿಜಯನಗರ ಸಾಮ್ರಾಜ್ಯಗಳು ದಕ್ಷಿಣದ ಶ್ರೀರಂಗದವರೆಗೆ ವಿಸ್ತಾರವಾಗಿದ್ದುವು. ತತ್ಕಾರಣ ದಕ್ಷಿಣ ಭಾರತದ ಸಂಗೀತವನ್ನು ಕರ್ನಾಟಕ ಸಂಗೀತವೆಂದು ಕರೆಯುವುದು ರೂಢಿಗೆ ಬಂದಿದೆ.

**ವಿಜಯನಗರ ಕಾಲ**

ಹರಿಹರ ಮತ್ತು ಬುಕ್ಕರಾಯನ ಗುರು ಮತ್ತು ಶೃಂಗೇರಿ ಮಠಾಧೀಶರಾಗಿದ್ದ ವಿದ್ಯಾರಣ್ಯ ಶ್ರೀಚರಣರು, ಒಬ್ಬ ಮಹಾವಿದ್ವಾಂಸರೂ ಸಂಗೀತದಲ್ಲಿ ಘನವಿದ್ವಾಂಸರೂ ಆಗಿದ್ದರು. ಇವರು ಸಂಗೀತಸಾರವೆಂಬ ಲಕ್ಷಣಗ್ರಂಥವನ್ನು ರಚಿಸಿದರು. ಈ ಗ್ರಂಥವು ಇಲ್ಲಿಯವರೆಗೆ ದೊರೆತಿಲ್ಲವಾದರೂ ಗೋವಿಂದ ದೀಕ್ಷಿತರ ಸಂಗೀತ ಸುಧಾ ಎಂಬ ಗ್ರಂಥದಲ್ಲಿ ಶ್ರೀ ವಿದ್ಯಾರಣ್ಯರನ್ನೂ ಅವರ ಸಂಗೀತಸಾರದಿಂದ ಸ್ವಲ್ಪ ಭಾಗವನ್ನೂ ಉಲ್ಲೇಖಿಸಿರುವುದರಿಂದ ಈ ಗ್ರಂಥದ ವಿಚಾರವಾಗಿ ತಿಳಿದುಬುರುತ್ತದೆ. ಉಲ್ಲೇಖವು ಹೀಗಿದೆ.

"ಸಂಗೀತಸಾರಂ ಸಮವೇಕ್ಷ್ಯ ವಿದ್ಯಾರಣ್ಯಾಭಿದ ಶ್ರೀ ಚರಣ ಪ್ರಣೀತಮ್ I (ಪು. ೧೨೫) ಕರ್ಣಾಟಕ ಸಿಂಹಾಸನ ಭಾಗ್ಯ ವಿದ್ಯಾರಣ್ಯಾಭಿದ ಶ್ರೀ ಚರಣಾಗ್ರಣೇಭ್ಯಃ II ಆರಭ್ಯರಾಗಾನ್ ಪ್ರಚುರ ಪ್ರಯೋಗಾನ್ ಪಂಚಾಶತಮ್ ಚಾಕಲಯೇ ಷಡಂಗಾನ್" II (ಅದೇ ಪು.)

ಈ ಗ್ರಂಥದಲ್ಲಿ ವಿದ್ಯಾರಣ್ಯರು ೧೫ ಜನಕರಾಗಗಳನ್ನು ಹೆಸರಿಸಿದ್ದಾರೆ. ಜನಕ-ಜನ್ಯರಾಗ ಪದ್ಧತಿಯ ರಾಗ ವರ್ಗೀಕರಣವನ್ನು ಸೂಚಿಸಿದವರಲ್ಲಿ ಇವರೇ ಮೊದಲಿಗರು. ೧೫ ರಾಗಗಳ ವರ್ಗಿಕರಣದಲ್ಲಿ ಒಳಗೊಂಡಂತೆ ೫೦ ರಾಗಗಳ ವಿವರಣೆಯನ್ನು ಕುರಿತು ವಿದ್ಯಾರಣ್ಯರು ಮುಂದಿನ ವ್ಯವಸ್ಥೆಯ ಬೆಳವಣಿಗೆಗೆ ಮಾರ್ಗದರ್ಶಿಯಾಗಿ ಕರ್ಣಾಟಕ ಸಂಗೀತ ಸಾಮ್ರಾಜ್ಯ ಸ್ಥಾಪಕರಾದರು.

ವಿಜಯನಗರದ ದೊರೆಗಳು ಸಂಗೀತ ಮತ್ತು ಇತರ ಲಲಿತ ಕಲೆಗಳ ಪೋಷಕರಾಗಿದ್ದರು. ಸಂಗೀತ ಮತ್ತು ನೃತ್ಯ ಇವು ಯಮಳಕಲೆಗಳಾಗಿ ಪರಸ್ಪರ ಪೋಷಕಗಳಾಗಿದ್ದುವು. ಇವು ಸಾರ್ವಜನಿಕ ಸಮಾರಂಭಗಳು, ಉತ್ಸವಗಳು, ಧಾರ್ಮಿಕ ಸಮಾರಂಭಗಳು, ರಾಜಾಸ್ಥಾನಗಳು ಮತ್ತು ಸಭೆಗಳ ಕಲಾಪಗಳು ಒಂದು ಅಂಗವಾಗಿದ್ದುವು. ಈ ಲಲಿತ ಕಲೆಗಳ ಪೋಷಣೆ ಮತ್ತು ವಿಕಾಸದಲ್ಲಿ ದೇವಾಲಯಗಳು ಮಹತ್ತರ ಪಾತ್ರ ವಹಿಸಿದ್ದುವು. ಅನೇಕ ಸಂಗೀತ ವಿದ್ವಾಂಸರು ಮತ್ತು ವಾದ್ಯಗಾರರು ರಾಜರು, ಶ್ರೀಮಂತರು, ರಾಜ ಪುರುಷರು ನೀಡಿದ ವೃತ್ತಿಗಳಿಂದ ಜೀವನ ಮಾಡುತ್ತಿದ್ದರು.[1]

ಸಂಗೀತಶಾಸ್ತ್ರ ಮತ್ತು ಪ್ರಯೋಗಗಳು ಈ ಕಾಲದಲ್ಲಿ ಮಹತ್ತರವಾದ ಅಧ್ಯಯನ ಮತ್ತು ಸಂಶೋದನೆಗೆ ಒಳಗಾಯಿತು ಎಂಬುದು ಹಲವು ಸಂಗೀತ ಶಾಸ್ತ್ರಗಳು ಮತ್ತು ಸಮಕಾಲೀನ ಸಾಹಿತ್ಯ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಸರ್ವರಿಗೂ ತಿಳಿದಿರುವಂತೆ, ವಿಜಯನಗರ ಸಾಮ್ರಾಜ್ಯವು ಹಿಂದೂ ಸಂಸ್ಕೃತಿಯ ಸರ್ವತೋಮುಖವಾದ ಬೆಳವಣಿಗೆಗೆ ಆಮೂಲ್ಯವಾದ ಸೇವೆ ಸಲ್ಲಿಸಿತು. ಸಂಗೀತ ಪ್ರೇಮವು ಸಮಾಜದ ಎಲ್ಲ ಸ್ತರಗಳಿಗೂ ವ್ಯಾಪಿಸಿತ್ತು.

ಶಾರ್ಙ್ಗದೇವನ ಸಂಗೀತ ರತ್ನಾಕರದ ಪ್ರಸಿದ್ಧವಾದ ವ್ಯಾಖ್ಯಾನಕಾರನಾದ ಚತುರ ಕಲ್ಲಿನಾಥನು ಇಮ್ಮಡಿ ದೇವರಾಯನ ಪೋಷಣೆಯನ್ನು ಪಡೆದಿದ್ದನು. ಇವನ ಪ್ರಸಿದ್ಧ ವ್ಯಾಖ್ಯಾನ ಗ್ರಂಥವಾದ 'ಕಲಾನಿಧಿ' ಎಂಬುದು ಒಂದು ನಿಖರವಾದ, ಸ್ಪಷ್ಟವಾದ ಗ್ರಂಥ. ಇದು ಮುಂದೆ ರಮಾಮಾತ್ಯ, ಪುಂಡರೀಕ ವಿಠಲ, ಸೋಮನಾಥ, ವೆಂಕಟಮುಖಿ, ತುಳಜಾಜಿ ಮುಂತಾದವರಿಗೆ ಅತ್ಯಂತ ಮುಖ್ಯವಾದ ಆಕರ ಗ್ರಂಥವಾಯಿತು. ಇವನು ವೇದ, ಉಪನಿಷತ್ತು, ವ್ಯಾಕರಣ, ತರ್ಕ, ಅಲಂಕಾರ ಮತ್ತು ಅಯುರ್ವೇದಗಳಲ್ಲಿ ವಿದ್ವಾಂಸ ನಾಗಿದ್ದನು. ಇವನು ಆಧುನಿಕ ಕರ್ನಾಟಕ ಸಂಗೀತದ ಅರುಣೋದಯ ತಾರೆ. ಕನ್ನಡಿಗನಾದ ಈತನು ಸಂಗೀತದಲ್ಲಿ ಆಗಿದ್ದ ಬದಲಾವಣೆಗಳನ್ನೆಲ್ಲ ಲಕ್ಷಣದೊಡನೆ ಅನ್ವಯಿಸಿ ಅವುಗಳಿಗೆ ಶಾಸ್ತ್ರಧಿಕಾರವನ್ನು ಒದಗಿಸಿ ಆಧುನಿಕ ಸಂಗೀತದ ಕುಲದೀಪವಾಗಿದ್ದಾನೆ.

ಮಾಧ್ವ ಯತಿವರ್ಯರಾದ ಶ್ರೀಪಾದರಾಯಸ್ವಾಮಿಯು (ಕ್ರಿ.ಶ. ೧೩೦೪-೧೫೦೨), ಸಂಗೀತದಲ್ಲಿ ಪರಿಣತಿ ಹೊಂದಿದ, ಕವಿತಾ ಪ್ರತಿಭಾ ಸಂಪನ್ನರಾಗಿದ್ದರು. ಇವರು ವಿಜಯನಗರದ ಸಾಮಂತನಾಗಿದ್ದ ಚಂದ್ರಗಿರಿಯ ಸಾಳುವ ನರಸಿಂಹರಾಯನ (ಕ್ರಿ,ಶ. ೧೪೮೭-೧೪೯೭) ಗುರುವಾಗಿದ್ದರು. ಇವರು ಶ್ರೀರಂಗದಲ್ಲಿ ಹಲವು ವರ್ಷಗಳ ಕಾಲವಿದ್ದರು. ಅಲ್ಲಿ ವಿಷ್ಣು ದೇವಾಲಯಗಳಲ್ಲಿ ಆಳ್ವಾರರ ದಿವ್ಯ ಪ್ರಬಂದಗಳನ್ನು

ಹಾಡುವುದನ್ನು ಗಮನಿಸಿ ತಿಳಿಸಿದ್ದರು. ಇದು ಅವರ ಮೇಲೆ ಮಹತ್ತರವಾದ ಪ್ರಭಾವ ಬೀರಿತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಪಾದರಾಜರು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಿಂತ ಮೇಲೆ ಕನ್ನಡದಲ್ಲಿ ಹಾಡುಗಳನ್ನು ರಚಿಸಿ ದೇವರ ಪೂಜೆಯಲ್ಲಿ ಅವುಗಳನ್ನು ಹಾಡುವುದನ್ನು ಪ್ರಾರಂಭಿಸಿದರು. ದೇವರನಾಮಗಳು ಅಥವಾ ದಾಸರ ಪದಗಳೆಂಬ ಹಾಡುಗಳನ್ನು ವಿಜಯನಗರದಲ್ಲಿ ೧೪-೧೫ನೇ ಶತಮಾನಗಳ ಅವಧಿಯಲ್ಲಿ ಮೊಟ್ಟಮೊದಲು ರಚಿಸಲಾಯಿತು. ಇದು ನರಹರಿ ತೀರ್ಥರಿಂದ ಆರಂಭವಾಯಿತು. ನಂತರ ಇದ್ದ ಹರಿದಾಸರೆಲ್ಲರೂ ಸಾವಿರಾರು ದೇವರ ನಾಮಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಬೆಳೆಸಿದರು. ಸುಮಾರು ಇದೇ ಕಾಲದಲ್ಲಿ ತಿರುಪತಿಯ ತಾಳ್ಳಪಾಕಂ ಅಣ್ಣಮಾಚಾರ್ಯರು, ಪೆದ್ದ ತಿರುಮಲ, ಚಿನ್ನ ತಿರುಮಲ ತೆಲುಗಿನಲ್ಲೂ, ಕೊಳ್ಳೆಗಾಲದ ಸಮೀಪದಲ್ಲಿರುವ ಚಿಲುಕವಾಡಿಯ ನಿಜಗುಣ ಶಿವಯೋಗಿ ಮುಂತಾದವರು ದೇವರ ನಾಮಗಳ ಮದರಿಯನ್ನು ಅನುಸರಿಸಿ ಹಲವು ಕನ್ನಡದಲ್ಲೂ ಹಾಡುಗಳನ್ನು ರಚಿಸಿದರು.

ಹರಿದಾಸ ಚಳವಳಿ ಮತ್ತು ಸಾಹಿತ್ಯಕ್ಕೆ ಶ್ರೀಪಾದರಾಜಸ್ವಾಮಿಯ ಕೊಡುಗೆ ಕರ್ನಾಟಕದ ಭಕ್ತಿ ಚಳವಳಿಗೆ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಿಯಾಯಿತು. ಪ್ರತಿನಿತ್ಯ ದೇವರ ಪೂಜೆಯ ಅಂಗವಾಗಿ ದೇವರ ನಾಮಗಳನ್ನು ಹಾಡುವ ಪದ್ಧತಿಯನ್ನು ಪ್ರಾರಂಭಿಸಿದರು. ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ವೃತ್ತನಾಮಗಳು, ದಂಡಕಗಳು, ಗೋಪಿಗೀತ, ವೇಣುಗೀತ, ಭ್ರಮರಗೀತ, ಲಕ್ಷ್ಮೀ ನರಸಿಂಹ ಪ್ರಾದುರ್ಭಾವ ದಂಡಕ, ರುಕ್ಮಿಣಿ ಸತ್ಯಭಾಮ ವಿಲಾಸ ಮುಂತಾದ ಇವರ ವಿಶೇಷ ರಚನೆಗಳು ಹರಿದಾಸ ಸಾಹಿತ್ಯಕ್ಕೆ ಅಪರೂಪದ ಕೊಡುಗೆಗಳಾಗಿವೆ. ನಿಂದಾಸ್ತುತಿಗಳು, ಸುಳಾದಿಗಳು ಮತ್ತು ಉಗಾಬೋಗಗಳನ್ನು ರಚಿಸಿದವರಲ್ಲಿ ಇವರೇ ಮೊದಲಿಗರು ಮತ್ತು ಮಾರ್ಗದರ್ಶಿ. ಇವರ ಅಂಕಿತ 'ರಂಗವಿಠಲ'.

ಶ್ರೀಪಾದರಾಜಸ್ವಾಮಿಯ ಶಿಷ್ಯರಲ್ಲಿ, ಕೃಷ್ಣದೇವರಾಯನ ಗುರುವಾಗಿದ್ದ ವ್ಯಾಸರಾಯ ಸ್ವಾಮಿಗಳು ವಾಗ್ಗೇಯಕಾರರೂ, ಸಂಗೀತವಿದ್ವಾಂಸರೂ ಆಗಿದ್ದರು. ಇವರು ವ್ಯಾಸಕೂಟ ಮತ್ತು ದಾಸಕೂಟಗಳನ್ನು ಸ್ಥಾಪಿಸಿದರು. ಇವರ ಹಲವು ಶಿಷ್ಯರಲ್ಲಿ ಪುರಂದರದಾಸರು, ಕನಕದಾಸರು, ವಾದಿರಾಜಸ್ವಾಮಿಗಳು ಬಹಳ ಪ್ರಸಿದ್ಧರು. ವೃತ್ತ ಪದ್ಯ, ಸಾಂಗತ್ಯ, ಸೂಳಾದಿ, ಪದಗಳು ಮತ್ತು ದೇವರ ನಾಮಗಳನ್ನು ಶ್ರೀಕೃಷ್ಣ ಎಂಬ ಅಂಕಿತದಲ್ಲಿ ಹಲವಾರು ರಚಿಸಿ ಹರಿದಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದರು.

ಸುಮಾರು ಇದೇ ಕಾಲದಲ್ಲಿ ನಿಜಗುಣ ಶಿವಯೋಗಿ (ಸು. ಕ್ರಿ.ಶ. ೧೫೫೦) ಮೈಸೂರು ಜಿಲ್ಲೆಯ ಕೊಳ್ಳೆಗಾಲದ ಸಮೀಪದಲ್ಲಿ ವಾಸವಾಗಿದ್ದರು. ಮೊದಲು ಇವರು ಒಂದು ಚಿಕ್ಕಸೀಮೆಯ ಅಧಿಪತಿಯಾಗಿದ್ದು, ವೈರಾಗ್ಯದಿಂದ ಐಹಿಕ ಜೀವನವನ್ನು ತ್ಯಜಿಸಿ ಯೋಗಿಯಾಗಿ ಚಿಲುಕವಾಡಿ ಬಳಿಯಿರುವ ಶಂಭುಲಿಂಗ ಬೆಟ್ಟದಲ್ಲಿ ವಾಸವಾಗಿದ್ದರು. ಶೈವ ವೇದಾಂತ, ಸಂಗೀತ, ಕನ್ನಡ ಮತ್ತು ಸಂಸ್ಕೃತದಲ್ಲಿ ಪರಿಣತರಾಗಿದ್ದರು, ಹಲವು ಗ್ರಂಥಗಳನ್ನು ರಚಿಸಿದರು. ವಿವೇಕ ಚಿಂತಾಮಣಿ ಎಂಬ ಗ್ರಂಥದ ಒಂದು ಅಧ್ಯಾಯದಲ್ಲಿ ಶ್ರುತಿ, ಸ್ವರ, ಅಲಂಕಾರ, ಜಾತಿಗಳು ಮತ್ತು ಸಂಗೀತ ವಾದ್ಯಗಳು ಮತ್ತು ರಾಗಗಳ ವರ್ಗೀಕರಣವನ್ನು ಕುರಿತು ವಿವೇಚನೆ ಮಾಡಲಾಗಿದೆ. ಪಲ್ಲವಿ ಮತ್ತು ಚರಣಗಳನ್ನುಳ್ಳ ಕನ್ನಡದ ಹಾಡುಗಳನ್ನು ರಚಿಸಿದರು. ತಮ್ಮ ಕಾಲದ ವೀಣೆಯನ್ನೂ, ರಾಗಗಳನ್ನೂ ವರ್ಣಿಸಿದ್ದಾರೆ. ಶಂಭುಲಿಂಗ ಎಂಬ ಅಂಕಿತದಲ್ಲಿರುವ ಇವರ ಹಾಡುಗಳನ್ನು ಕರ್ನಾಟಕ ಸಂಗೀತಕ್ಕೆ ಅಮೂಲ್ಯವಾದ ಕೊಡುಗೆ ಎಂದು ಪರಿಗಣಿಸಲಗಿದೆ. ಈ ಕಾಲದ ಶಿವಶರಣರು ಮಂತ್ರಗೋಪ್ಯ ಮತ್ತು ಕಾಲಜ್ಞಾನಗಳನ್ನು ರಚಿಸಿ ಕನ್ನಡದ ಸಂಗೀತ ಸಾಹಿತ್ಯವನ್ನು ಮತ್ತಷ್ಟು ಸಂಪದ್ಭರಿತವಾಗಿ ಮಾಡಿದರು.

ವ್ಯಾಸರಾಯಸ್ವಾಮಿಯ ಪ್ರಸಿದ್ಧ ಶಿಷ್ಯರಲ್ಲಿ ಒಬ್ಬರಾದ ಪುರಂದರದಾಸರು ಭಕ್ತಿ, ತತ್ವನೀತಿಮಯವಾದ ಸಾವಿರಾರು ಹಾಡುಗಳನ್ನು ಸುಲಭವಾಗಿ, ಅರ್ಥವಾಗುವಂಥ, ಎಲ್ಲರ ಮೆಚ್ಚಿಗೆಗೆ ಪಾತ್ರವಾಗುವಂಥ ಕನ್ನಡದಲ್ಲಿ ರಚಿಸಿದರು. ಅವರ ರಚನೆಗಳು ಸಂಗೀತ ಮತ್ತು ಕವಿತ್ವದ ಮಧುರ ಸಮ್ಮಿಳನವಾಗಿವೆ. ಅವರು ಕೇವಲ ಕವನಗಳ ಕವಿಯಾಗಿರಲಿಲ್ಲ. ಸರಿಯಾದ ಅರ್ಥದಲ್ಲಿ ವಾಗ್ಗೇಯಕರರಾಗಿದ್ದರು. ತತ್ಕಾರಣ, ಇವರ ವಿವಿಧ ರಚನೆಗಳನ್ನು ನಂತರದ ವಾಗ್ಗೇಯಕಾರರಾದ ಷಾಹಜಿ ಮತ್ತು ಶಾಸ್ತ್ರ ರಚನಕಾರರಾದ ತುಳಜಾಜಿ ಮುಂತಾದವರು ಹಲವು ರಾಗಗಳಿಗೆ ಲಕ್ಷ್ಯವಾಗಿ ಪರಿಗಣಿಸಿದ್ದಾರೆ. ತುಳಜಾಜಿಯು ತನ್ನ ಸಂಗೀತ ಸಾರಾಮೃತವೆಂಬ ಗ್ರಂಥದಲ್ಲಿ ರಾಗಗಳು

ಮತ್ತು ಪ್ರಬಂಧಗಳ ಸಂಬಂದವಾಗಿ ಇವರ ೫೦ ರಚನೆಗಳನ್ನು ಲಕ್ಷ್ಯವಾಗಿ ಉಲ್ಲೇಖಿಸಿದ್ದಾನೆ. ತ್ಯಾಗರಾಜ ಸ್ವಾಮಿಯ ರಚನೆಗಳು ದಾಸರಿಂದ ಹೇಗೆ ಎಷ್ಟರಮಟ್ಟಿಗೆ ಪ್ರಭಾವಿತವಾಗಿದ್ದವು ಎಂಬುದನ್ನು ತೋರಿಸುತ್ತವೆ. ತ್ಯಾಗರಾಜಸ್ವಾಮಿಯು ತಮ್ಮ ಪ್ರಹಲ್ಲಾದ ಭಕ್ತಿ ವಿಜಯವೆಂಬ ಸಂಗೀತ ರೂಪಕದಲ್ಲಿ ಪುರಂದರದಾಸರನ್ನು ನಮಿಸಿದ್ದಾರೆ. ಕಮಲಾಪುರದಲ್ಲಿ ದೊರಕಿರುವ ತಾಮ್ರ ಸಾಸನಗಳು ಪುರಂದರದಾಸರ ಮತ್ತು ಅವರ ಪ್ರತ್ರರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುತ್ತವೆ.[2] ಇದಲ್ಲದೆ, ಪೆದ್ದತಿರುಮಲಾಚಾರ್ಯನು ತನ್ನ ತಾತ ತಿರುಪತಿಯ ತಾಳ್ಳಪಾಕಂ ಅಣ್ಣಮಾಚಾರ್ಯರೂ ಪುರಂದರದಾಸರೂ ಭೇಟಿಯಾಗಿದ್ದರು ಎಂದು ಬರೆದಿದ್ದಾರೆ.

ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹರೆಂದು ಗೌರವದಿಂದ ಸ್ಮರಿಸುವುದುವಾಡಿಕೆ. ಹೀಗೆ ಕೊಂಡಾಡುವುದು ಮೊದಲು ತಮಿಳುನಾಡಿನಲ್ಲಿ ಪ್ರಾರಂಭವಾಗಿ ನಂತರ ಭಾರತದ ಇತರ ಭಾಗಗಳಲ್ಲಿ ಹರಡಿ ರೂಡಿಗೆ ಬಂದಿತು ಗಮನಾರ್ಹ. ಇವರು ಮಾಯಾ ಮಾಳವ ಗೌಳ ಮೇಳವನ್ನು ಶುದ್ಧಮೇಳವೆಂದು ಆರಿಸಿಕೊಮಡು ಅದರ ಜನ್ಯವಾದ ಮಲಹರಿ ರಾಗದಲ್ಲಿ ಸಂಗೀತಾಭ್ಯಾಸಕ್ಕಾಗಿ ವೈಜ್ಞಾನಿಕವಾದ ಪಾಠಗಳನ್ನು ರಚಿಸಿದರು. ಇವರ ಲಕ್ಷ್ಯಗೀತೆಗಳಾದ ಪಿಳ್ಳಾರಿಗೀತೆಗಳನ್ನು ಪ್ರತಿಯೊಬ್ಬ ಕರ್ನಾಟಕದ ಸಂಗೀತದ ವಿದ್ಯಾರ್ಥಿಯು ಇಂದಿಗೂ ಅಭ್ಯಾಸ ಮಾಡುತ್ತಾನೆ. ದಾಸರು ಕೃತಿಗಳು, ಕೀರ್ತನೆಗಳು, ಪದಗಳು ಸುಳಾದಿಗಳು, ಉಗಾಬೋಗಗಳೇ ಮುಂತಾದ ಹಲವು ರೀತಿಯ ರಚನೆಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ವಿಪುಲವಾಗಿ ಸಮೃದ್ಧಗೊಳಿಸಿದ್ದಾರೆ. ತಮ್ಮ ಮೂರು ರಚನೆಗಳಲ್ಲಿ ಆಗ ಪ್ರಚಲಿತವಿದ್ದ ೩೨ ರಾಗಗಳನ್ನು ಹೆಸರಿಸಿದ್ದಾರೆ. ಆಡಿದನೋ ರಂಗ ಎಂಬ ಕೆಲವು ಹಾಡುಗಳನ್ನು ರಚಿಸುವುದರಲ್ಲಿ ಸಾಂಪ್ರದಾಯಿಕವಾದ ಭರತನಾಟ್ಯ ಪದ್ಧತಿಯನ್ನು ಅನುಸರಿಸಿದ್ದಾರೆ. ಭಯಸಮಯದೇವ ಎಂಬ ಭಾಂಡೀರ ಭಾಷೆಯ ಅವರ ರಚನೆಯನ್ನು ನೋಡಿದರೆ ಭಾಂಡೀರ ಭಾಷೆಯಲ್ಲಿಯೂ ಕೃತಿ ರಚನೆ ಮಾಡಿದ್ದರು ಎಂದು ತಿಳಿದುಬರುತ್ತದೆ. ಅವರ ಅಂಕಿತವಿರುವ ದೇಶಾಕ್ಷಿ ರಾಗದ ಗೀತೆಯೊಂದು ಅಪರೂಪ ಬಳಕೆಯಲ್ಲಿದೆ. ಪಿಳ್ಳಾರಿ ಗೀತಗಳಲ್ಲದೆ ಬೇರೆ ಬೇರೆ ತೀತಗಳನ್ನೂ ರಚಿಸಿದ್ದರು ಎಂದು ಇದರಿಂದ ತಿಳಿಯುತ್ತದೆ. ಇದಲ್ಲದೆ ದಾಸರು ಲಕ್ಷಣ ಗೀತಗಳು, ತಾನವರ್ಣಗಳು ಮತ್ತು ತಿಲ್ಲಾನಗಳನ್ನೂ ರಚಿಸಿದ್ದಾರೆಂದು ಹೇಳಲಾಗಿದೆ. ಆದರೆ ಇವು ಯಾವುದೂ ಲಬ್ಧವಿಲ್ಲ. ಇವರ ಅನೇಕ ರಚನೆಗಳು ಮಧ್ಯಮ ಕಾಲದಲ್ಲಿವೆ. ಆದಿತಾಳ, ಛಾಪುತಾಳ ಮತ್ತು ಝಂಪೆತಾಳಗಳ ಬಗ್ಗೆ ಅವರಿಗೆ ವಿಶೇಷ ಒಲವು ಇದ್ದಿತು ಎಂದು ತೋರುತ್ತದೆ. ಅವರ ಶೃಂಗಾರ ಭಾವವವಿರುವ ರಚನೆಗಳು ಪದಗಳ ವಾಗ್ಗೇಯಕಾರರಾದ ಕ್ಷೇತ್ರಜ್ಞರಿಗೆ ಮಾದರಿಗಳಾದುವು. ಹರಿದಾಸರು ಕರ್ನಾಟಕ ಸಂಗೀತದ ತಾಳ ಪದ್ಧತಿಯಲ್ಲಿ ಮಹತ್ತರ ಬದಲಾವಣೆ ಉಂಟುಮಾಡಿದರು. ನೂರಾರು ದೇಶೀ ತಾಳಗಳ ಸ್ಥಾನದಲ್ಲಿ ಒಂಬತ್ತು ಅಥವಾ ಹತ್ತು ತಾಳಗಳನ್ನು ರೂಢಿಗೆ ತಂದರು. ಸುಳಾದಿ ಸಪ್ತತಾಳಗಳನ್ನು ಬಳಕೆಗೆ ತಂದು ಕರ್ನಾಟಕ ಸಂಗೀತದ ತಾಳಪದ್ಧತಿಯಲ್ಲಿ ಕ್ರಾಂತಿಯನ್ನು ಉಂಟುಮಾಡಿದರು.

ವ್ಯಾಸರಾಯಸ್ವಾಮಿಯ ಮತ್ತೊಬ್ಬ ಪ್ರಮುಖ ಶಿಷ್ಯರೂ ಪುರಂದರದಾಸರ ಒಡನಾಡಿಗಳೂ ಆದ ವಾದಿರಾಜರು ಮತ್ತು ಬೇಲೂರು ವೈಕುಂಟದಾಸರ ಮಿತ್ರರಾಗಿದ್ದರು. ಇವರು ವಿದ್ವಾಂಸರು, ಕವಿ, ಸಂಗೀತ ವಿದ್ವಾಂಸರು ಮತ್ತು ವಾಗ್ಗೇಯಕಾರರಾಗಿದ್ದರು. ಇವರು ಎಲ್ಲಾ ವಿಧವಾದ ರಚನೆಗಳು ಮತ್ತು ದೀರ್ಘವಾದ ಸಂಗೀತ ಪ್ರಕಾರಗಳನ್ನು ರಚಿಸಿದರು. ದ್ವೈತಸಿದ್ಧಾಂತವನ್ನು ಪ್ರತಿಪಾದಿಸುವ, ವಿವರಿಸುವ ಹಲವು ವಿದ್ವತ್ಪೂರ್ಣವಾದ ಸಂಸ್ಕೃತ ಗ್ರಂಥಗಳನ್ನು ರಚಿಸಿದರು. ಇವರು ೩೦೩ ಹಾಡುಗಳು ಹಯವದನ ಎಂಬ ಅಂಕಿತದಲ್ಲಿರುವುದು ಲಭ್ಯವಾಗಿದೆ. ಇದು ೨೯೦ ಕೃತಿಗಳು, ೧೦ ಸುಳಾದಿಗಲು ಮತ್ತು ೧೩ ಉಗಾಭೋಗಗಳನ್ನು ಒಳಗೊಂಡಿದೆ. ಇವರು ಭ್ರಮರಗೀತ, ಗುಂಡಕ್ರಿಯ, ವೈಕುಂಠವರ್ಣನೆ, ಸ್ವಪ್ನಗದ್ಯ ಲಕ್ಷ್ಮೀಶೋಭಾನೆ, ನಾರದ ಕುರವಂಜಿ ಮತ್ತು ತತ್ವಸುವ್ವಾಲಿ ಎಂಬ ವಿಶಿಷ್ಟವಾದ ದೀರ್ಘ ರಚನೆಗಳನ್ನು ರಚಿಸಿದ್ದಾರೆ. ನಾರದ ಕುರವಂಜಿಯು ಸಂಗೀತ ಸಾಹಿತ್ಯ ರಚನೆಗಳನ್ನು ವಾದಿರಾಜರು ಸಾಧಿಸಿದ ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಜಾನಪದ ನೃತ್ಯ ನಾಟಕವಾಗಿದೆ. ಬಹುಶಃ ಇಡೀ ಭಾರತದಲ್ಲೇ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಕ್ಷೇತ್ರದಲ್ಲಿ ಇದು ಪ್ರಥಮ ರಚನೆ ಎನ್ನಲು ಅಡ್ಡಿಯಿಲ್ಲ.

ಈ ಕಾಲದ ಮತ್ತೊಂದು ವಿಶಿಷ್ಟ ಗ್ರಂಥ ಸ್ವರಮೇಳ ಕಳಾನಿಧಿ. ಇದನ್ನು ರಾಮರಾಯನ ಮಂತ್ರಿ ವಿದ್ವಾಂಸ ಮತ್ತು ಸಂಗೀತ ಕಲಾಕೋವಿದನಾಗಿದ್ದ ರಾಮಾಮಾತ್ಯನು ರಾಜನ ಅಣತಿಯಂತೆ ಆಗಿನ ಕಾಲದ್ಲಲಿ ಗೊಮದಲವನ್ನು ಪರಿಹರಿಸಿ ಸಂಪ್ರದಾಯ ಮತ್ತು ಪ್ರಯೋಗಗಳ ಸಮನ್ವಯ ಮಾಡಲು ರಚಿಸಿದನು. ಇವನು ಚತುರ ಕಲ್ಲಿನಾಥನ ಮೊಮ್ಮಗ. ಬಯಕಾರ ರಾಮಪ್ಪಯ್ಯ ಎಂದೂ ಇವನ ಹೆಸರು. ಇವನು ಈ ಗ್ರಂಥವನ್ನು ರಚಿಸಿ ಸುಭದ್ರ ಸುಂದರವಾದ ಆಣೆಕಟ್ಟನ್ನು ನಿರ್ಮಿಸಿ ಉಪಕರಿಸಿದ್ದಾನೆ. ಈ ಗ್ರಂಥವು ೫ ಅಧ್ಯಾಯಗಳಲ್ಲಿ ಒಟ್ಟು ೩೨೮ ಸಂಸ್ಕೃತ ಶ್ಲೋಕಗಳುಳ್ಳ ಗ್ರಂಥ. ಗ್ರಂಥವು ಪುಟ್ಟದಾದರೂ ಅದು ೧೦೦೦ ವರ್ಷಗಳ ಕಾಲದ ಸಂಗೀತದ ವಿಕಾಸವನ್ನು ಪ್ರತಿಬಿಂಬಿಸುತ್ತದೆ. ವಿಷಯದ ಸಂಗ್ರಹವು ವಿಶಿಷ್ಟವಾದ ಸೂಚ್ಯಾರ್ಥ ಕೊಡುತ್ತದೆ. ಇದು ದಕ್ಷಿಣ ಭಾರತದ ಸಂಗೀತದ ಇತಿಹಾಸದಲ್ಲಿ ಆಧುನಿಕ ಯುಗಕ್ಕೆ ಸೂಕ್ತವಾದ ಪೀಠಿಕೆಯಾಗಿದೆ. ವೀಣೆ, ಮೇಳ ಮತ್ತು ರಾಗದ ವಿವೇಚನೆಯು ಎಷ್ಟು ಸ್ಪಷ್ಟ ಮತ್ತು ಕರಾರುವಕ್ಕಗಿದೆ ಎಂದರೆ ನಮ್ಮನ್ನು ಅದು ಹಠಾತ್ತನೆ ಈಗಿನ ಕಾಲಕ್ಕೆ ಕರೆದೊಯ್ಯುವಂತೆ ಭಾವನೆ ಉಂಟಾಗುತ್ತದೆ. ಪರಿಭಾಷಿಕ ಶಬ್ದಗಳ ಬಗ್ಗೆ ತಲೆದೋರಿದ್ದ ಗೊಂದಲವನ್ನು ನಿವಾರಿಸುತ್ತದೆ. ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ರಾಗಗಳನ್ನು ವೈಜ್ಞಾನಿಕವಾಗಿ ಅವುಗಳಲ್ಲಿಯ ಸ್ವರಗಳ ಸಂಖ್ಯೆ ಮತ್ತು ಮೈತ್ರಿಯ ಆಧಾರದ ಮೇಲೆ ವರ್ಗೀಕರಣ ಮಾಡಿ ೨೦ ಜನಕರಾಗಗಳ ಪಟ್ಟಿ ಕೊಟ್ಟಿದ್ದಾನೆ. ಒಂದೇ ಸ್ವರ ಸ್ಥಾನದಲ್ಲಿ ನೆರೆಹೊರೆಯ ಎರಡು ಸ್ವರಗಳು ಪ್ರಕಟವಾಗಬಹುದೆಂಬ ಪ್ರಮೇಯವನ್ನು ವಿವೇಚಿಸಿ ಆರಂಭಿಸಿ ಆಧುನಿಕ ಜನಕರಾಗಗಳ ಜನಕನಾಗಿ, ಆದುನಿಕ ಸಂಗೀತದ ಅರುಣೊದಯವಾಗಿದ್ದಾನೆ. ರಾಗ ಮತ್ತು ಮೇಳಗಳ ಬಗ್ಗೆ ಅವನ ವಿಶ್ಲೇಷಣೆಯು ಸಂಗೀತ ಪದ್ಧತಿಯ ವೈಜ್ಞಾನಿಕ ವಿಕಾಸ ಮತ್ತು ವರ್ಗೀಕರಣದಲ್ಲಿ ಒಂದು ಮೈಲಿಗಲ್ಲು ಆಗಿದೆ. ಇವನು ಕೊಟ್ಟಿರುವ ಮೇಳಗಳು ಈಗಿನ ಮೇಳಕರ್ತ ಪದ್ಧತಿಯ ಒಂದು ಅಂಗವಾಗಿವೆ. ಇವನ ಮೇಳಗಳು ಹಳೆಯದಾಗಿದ್ದರೂ ಕೆಲವು ಆಧುನಿಕ ರಾಗಗಳ ವಿವರಣೆಗೆ ಸಹಾಯಕವಾಗಿವೆ.

ಸಂಗೀತ ವಾದ್ಯಗಳಲ್ಲಿ ವೀಣೆಯು ಶ್ರುತಿ ಮಾಡುವ ವಿಧಾನ ಮತ್ತು ಮೆಟ್ಟಿಲು ಸಂಖ್ಯೆಯ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಬಿಟ್ಟರೆ ವಿಜಯನಗರದ ಕಾಲದಲ್ಲಿ ಈಗಿನ ಸ್ವರೂಪವನ್ನು ಪಡೆಯಿತು. ಶಾರ್ಙ್ಗದೇವನು ಹೇಳಿರು ಕಿನ್ನರಿ ವೀಣೆಯು ವಿಜಯನಗರ ಕಾಲದ ರುದ್ರವೀಣೆಯಾಗಿ ವಿಕಾಸಗೊಂಡಿತು. ಇದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಆಧುನಿಕ ವೀಣೆಯಾಗಿ ನಮಗೆ ಬಂದಿದೆ. ರಾಮಾಮಾತ್ಮನು ಅಚ್ಯುತರಾಯ ಮೇಳ ವೀಣೆಯನ್ನು ನಿರ್ಮಿಸಿದನು. ಅವನು ದೊರೆಯ ಕೃಪಾಪೋಷಿತನೂ ಸನ್ಮಾನಿತನೂ ಆಗಿದ್ದನು ಎಂಬುದನ್ನು ಇಲ್ಲಿ ಸ್ಮರಿಸಬಹುದು.[3] ಈ ಮಧ್ಯ ಮೇಳ ವೀಣೆಯ ಮುಂದೆ ತುಳಜೇಂದ್ರ ವೀಣಾ ಎಂಬ ಹೆಸರು ಪಡೆದು ಆಧುನಿಕ ವೀಣೆಗೆ ಸಮನಾಗಿದೆ.

ಇದೇ ಕಾಲದಲ್ಲಿ ರಚಿಸಲ್ಪಟ್ಟ ಮತ್ತೊಂದು ಸಂಗೀತ ಶಾಸ್ತ್ರ ಗ್ರಂಥ ಸಂಗೀತ ಸೂರ್ಯೋದಯ. ಗ್ರಂಥಕರ್ತನಾದ ಭಂಡಾರು ಲಕ್ಷ್ಮೀನಾರಾಯಣನು ಕಲ್ಲಿನಾಥನಂತೆ ರಾಯಬಯಕಾರನಾಗಿದ್ದು ತೋಡರಮಲ್ಲ ಎಂಬ ಬಿರುದಾಂಕಿತನಾಗಿ ಕೃಷ್ಣ ದೇವರಾಯನ ಕಾಲದ್ಲಲಿ ರಾಜಮನೆತನದ ನಾಟ್ಯಾಚಾರ್ಯನಾಗಿದ್ದರು. ಸಂಸ್ಕೃತದಲ್ಲಿರುವ ಈ ಗ್ರಂಥವು ಹೆಚ್ಚು ಕಡಿಮೆ ಸಂಗೀತ ರತ್ನಾಕರವನ್ನು ಅನುಸರಿಸಿ ಸ್ವರಗಳು, ಜಾತಿಗಳು, ತಾಳಗಳು, ಪ್ರಬಂಧಗಳು ಮತ್ತು ನೃತ್ಯ ಇವುಗಳ ವಿವರನೆಯನ್ನೊಳಗೊಂಡಿವೆ.

ಮತ್ತೊಬ್ಬ ಮಹಾ ಸಂಗೀತ ವಿದ್ವಾಂಸ ಮತ್ತು ಸಂಗೀತಶಾಸ್ತ್ರಜ್ಞನಾಗಿದ್ದ ಪುಂಡರೀಕ ವಿಠಲನನ್ನು (ಕ್ರಿ.ಶ. ೧೫೬೨-೧೫೯೯) ಹೆಸರಿಸಬಹುದು. ಇವನು ಬೆಂಗಳೂರು ಜಿಲ್ಲೆಯ ಶಿವಗಂಗೆಯ ಬಳಿ ಇರುವ ಸಾತನೂರಿನವನು. ಸಂಗೀತದ ಎರಡು ಪದ್ಧತಿಗಳಲ್ಲೂ ಪರಿಣತನಾಗಿದ್ದನು. ಉತ್ತರ ಭಾರತಕ್ಕೆ ಹೋಗಿ ನೆಲೆಸಿ ಸದ್ರಾಗ ಚಂದ್ರೋದಯವೆಂಬ ಗ್ರಂಥವನ್ನು ರಚಿಸಿ ಅದರಲ್ಲಿ ದಕ್ಷಿಣ ಭಾರತದ ಸಂಗೀತವನ್ನು ಕುರಿತು ಬರೆದಿದ್ದಾನೆ. ನಂತರ ಗ್ವಾಲಿಯರ್ನಲ್ಲಿದ್ದಾಗ ಹಿಂದೂಸ್ಥಾನಿ ಸಂಗೀತದ ಆಕರ ಗ್ರಂಥವಾಗಿರುವ ರಾಗಮಂಜರೀ ಎಂಬ ಗ್ರಂಥವನ್ನು ಬರೆದನು. ಮೊಗಲ್ ಚಕ್ರವರ್ತಿ ಅಕ್ಬರ್ನಿಂದ ಆಹ್ವಾನಿತನಾಗಿ ದೆಹಲಿಗೆ ಹೋಗಿ ರಾಗಮಲಾ ಮತ್ತು ನರ್ತನ ನಿರ್ಣಯವೆಂಬ ಇತರ ಗ್ರಂಥಗಳನ್ನು ಬರೆದು ಅಕ್ಬರೀಯ ಕಾಳಿದಾಸನೆನೆಸಿಕೊಂಡನು. ಇಂದಿಗೂ ಇವನ ಗ್ರಂಥಗಳು ಹಿಂದೂಸ್ಥಾನೀ ಸಂಗೀತದ ಆಕರ ಗ್ರಂಥಗಳೆಂದು ಪರಿಗಣಿಸಲ್ಪಟ್ಟಿವೆ. ಇವನು ೯೦ ಮೇಳಕರ್ತ್ ಪದ್ಧತಿಯನ್ನು ರೂಪಿಸಿದ್ದಾನೆ. ಇದು ಕ್ರಾಂತಿಕಾರಕವೂ

ವೈಜ್ಞಾನಿಕವೂ ಆದ ಒಂದು ಮೇಳಕರ್ತ ಪದ್ಧತಿ. ರಾಮಮಾಲಾ ಗ್ರಂಥದಲ್ಲಿ ರಾಗಗಳನ್ನು ಪ್ರತಿ ಪುಂರಾಗವು ೫ ರಾಗಿಣಿಗಳನ್ನು ಹೊಂದಿರುವ ರಾಗ ವರ್ಗೀಕರಣವನ್ನು ಕೊಟ್ಟಿರುವುದಲ್ಲದೆ ಗಾನ ವೇಳೆಯನ್ನು ಗೊತ್ತು ಮಾಡಿದೆ.

ಈ ಕಾಲದ ಮತ್ತೊಂದು ಸಂಗೀತಶಾಸ್ತ್ರ ಗ್ರಂಥ ಸಂಗೀತದರ್ಪಣ. ಇದರ ಕರ್ತೃ ಚತುರ ದಾಮೋದರ. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಚೆರುಕುರಿ ಎಂಬ ಸ್ಥಳದವನು. ಇವನ ತಂದೆ ಲಕ್ಷ್ಮೀಧರನು ಸಂಗೀತ ಕಲಾಕೋವಿದನಾಗಿದ್ದು ವಿಜಯನಗರದ ತಿರುಮಲ ರಾಯನ ಆಸ್ಥಾನ ಕವಿಯಾಗಿದ್ದನು. ದಾಮೋದರನು ಎರಡು ಸಮಗೀತ ಪದ್ಧತಿಗಳ ವಿದ್ವಾಂಸನಾಗಿ, ಸಂಸ್ಕೃತದಲ್ಲಿ ೭ ಅಧ್ಯಾಯಗಳುಳ್ಳ ಈ ಗ್ರಂಥವನ್ನು ಬರೆದನು. ಇದರಲ್ಲಿ ತನ್ನ ಕಾಲದಲ್ಲಿದ್ದ ಸಂಗೀತ ಶಾಸ್ತ್ರ ಮತ್ತು ಸಂಪ್ರದಾಯಗಳೆರಡನ್ನೂ ಪ್ರತಿಬಿಂಬಿಸಿದ್ದಾನೆ. ಈ ಗ್ರಂಥದ ಪ್ರತಿ ಭಾಗದಲ್ಲೂ ನಿಖರತೆ ಮತ್ತು ಸಂಗ್ರಹ ಸಾರವು ಕಂಡುಬರುತ್ತದೆ.

ಸಂಗೀತ ಮತ್ತು ನಾಟ್ಯವನ್ನು ಕುರಿತು ರಚಿಸಲಾದ ಕಾಲದ ಇತರ ಗ್ರಂಥಗಳು ರಸಿಕನೂ ಸಂಗೀತ ವಿದ್ಯಾವಿನೋದನೂ ಆಗಿದ್ದ ಕನ್ನಡಿಗ ದೊರೆ ಅಚ್ಯುತರಾಯನ ತಾಳ ಕಲಾವಾರಿಧಿ ಎಂಬ ಪ್ರೌಢ ಸಂಗೀತ ಶಾಸ್ತ್ರ ಗ್ರಂಥ, ಇವನ ಆಶ್ರಿತನಾಗಿದ್ದ ಅಷ್ಟವಧಾನ ಸೋಮನಾರ್ಯ್ನ ನಾಟ್ಯ ಚೂಡಾಮಣಿ ಮತ್ತು ಸಂಗೀತ ಚಿಂತಾಮಣಿ-ಎರಡನೆಯದು ಸಂಗೀತ ರತ್ನಾಕರವನ್ನು ಅನುಸರಿಸಿದೆ. ದೇವಣ್ಣ ಭಟ್ಟನ ಸಂಗೀತ ಮುಕ್ತಾವಳೀ, ವೇದನ ಸಂಗೀತ ಮಕರಂದ, ಚಂದ್ರಶೇಖರನ ಪಂಪಾಪತಿ ಸ್ಥಾನವರ್ಣನಂ, ತಾನಪ್ಪನ ಚತುರ್ದಂಡಿ ಮುಂತಾದುವು.

## ನೃತ್ಯ

ನೃತ್ಯವು ಮಾನವನಿಂದ ವಿಕಾಸಗೊಡ ಬಹು ಪುರಾತನ ಕಲೆ. ನಮ್ಮೊಳಗಿನ ಬಲವಾದ ಉದ್ವೇಗ ಮತ್ತು ಭಾವವು ನಾಟ್ಯದ ಮೂಲಕ ಬಹಿರಂಗವಾಗಿ ವ್ಯಕ್ತಗೋಳ್ಳುತ್ತದೆ. ನಮ್ಮ ಹೃದಯಾಂತರಾಳದಲ್ಲಿ ಹುದುಗಿರುವ ಭಾವನೆಯ ಬಹಿರೂಪವೇ ನೃತ್ಯ. ನಮ್ಮನ್ನು ಐಹಿಕ ಬಂದನಗಳಿಂದ ಮೇಲಕ್ಕೆ ಕೊಂಡೊಯ್ಯುವ ಸ್ಫೂರ್ತಿಯ ಸಂಕೇತವಾಗಿ, ಈ ಕಲೆಯ ತಳಹದಿ ಅಧ್ಯಾತ್ಮಿಕತೆ. ಈ ಕಲೆಗೆ ದೇಹದ ಅಂಗಾಂಗಗಳು, ಕೈಕಾಲುಗಳು, ಹಾವಭಾವಗಳು, ಮನಸ್ಸಿನ ಬದಲಾವಣೆಗಳೇ ವಾಹನ ವಸ್ತುಗಳು. ಇವೆಲ್ಲವನ್ನೂ ಒಳಗೊಂಡಿರುವ ಭರತನಾಟ್ಯವು ಅತಂಕ ಆಕರ್ಷಕ ಕಲೆಯಾಗಿ ಬಂದಿದೆ. ಸೂಚಿಸುವುದು ಮತ್ತು ಅಧ್ಯಾತ್ಮಿಕತೆ ಇವೆರಡೂ ನಾಟ್ಯ ಸರಸ್ವತಿಯ ಎರಡು ಕಣ್ಣುಗಳು. ಒಳಗಿನ ಸಂಗೀತವಿಲ್ಲದೆ ನೃತ್ಯಮಾಡಲು ಸಾಧ್ಯವಿಲ್ಲ.

ಸಂಗೀತದಂತೆಯೇ ನಾಟ್ಯವನ್ನು ರಾಜರು, ರಾಜ ಪುರುಷರು ಪೋಷಿಸುತ್ತಿದ್ದರು. ಇದು ವಿಜಯನಗರದ ಸಾಮಸ್ಕೃತಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ವಿದೇಶೀ ಪ್ರವಾಸಿಗಳಾದ ಪೇಯಸ್, ನ್ಯೂನಿಜ್ ಮತ್ತು ಇತರರು ನೃತ್ಯ ಮಂಟಪಗಳು ಮತ್ತು ನೃತ್ಯ ಕಲಾವಿದೆಯರನ್ನು ವರ್ಣಿಸಿದ್ದಾರೆ.[4] ರಂಗಮಂಟಪಕ್ಕೆ ನಾಟ್ಯಶಾಲಾ, ನಾಟ್ಯಮಂಟಪ ಎಂಬ ಹೆಸರುಗಳಿದ್ದವು. ದೇವಾಲಯಗಳಿಗೆ ಸೇರಿದ ದೇವದಾಸಿಯರಿಗೆ ಸಮಾಜದಲ್ಲಿ ಅಪಾರ ಗೌರವವಿದ್ದಿತು[5] ಮತ್ತು ಅವರು ಕೆಲವು ವಿಶೇಷ ಹಕ್ಕುಗಳನ್ನು ಅನುಭವಿಸುತ್ತಿದ್ದರು. ಆಗಿನ ಶಿಲ್ಪಕಲೆಯಲ್ಲಿ ಪ್ರತಿಬಿಂಬಿಸಿರುವಂತೆ ಆ ಕಾಲದಲ್ಲಿ ನೃತ್ಯಕ್ಕೆ ವಿಶೇಷವಾದ ಸ್ಥಾನಮನಗಳಿದ್ದವು. ಕೂಚಿಪುಡಿ ನೃತ್ಯ ಪದ್ಧತಿಯು ಬಹುಪ್ರಸಿದ್ಧವಾದ ನಾಟ್ಯ ಪ್ರಕಾರವಾಗಿತ್ತು. ಸಮಕಾಲೀನ ಸಾಹಿತ್ಯ ಗ್ರಂಥಗಳಲ್ಲಿ ಕವಿಗಳು ನೃತ್ಯ, ಗಾಯಕ ಮತ್ತು ವಾದ್ಯ ಮೇಳಗಳನ್ನು ವರ್ಣಿಸಿದ್ದಾರೆ.[6] ಸಾಮಾನ್ಯವಾಗಿ ದೇವದಾಸಿಯರು ಅತ್ಯಂತ ಹಿಂದಿನ ಕಾಲದಿಂದ ಸಂಗೀತ ಮತ್ತು ನೃತ್ಯ ಕಲೆಗಳ ರಕ್ಷಕರೂ, ಪರಿಣತರೂ ಆಗಿದ್ದರು. ಕೃಷ್ಣದೇವರಾಯನ ಕಿರಿಯರಾಣಿ ಚಿನ್ನಾದೇವಿಯ ಹಂಪೆಯ ವಿರೂಪಾಕ್ಷ ದೇವಾಲಯದ ಪ್ರಸಿದ್ಧ ನರ್ತಕಿಯಾಗಿದ್ದಳು. ಆಗಿನ ಗ್ರಂಥಗಳಲ್ಲಿ ಹಿಂದೆಯೇ ಹೇಳಿದಂತೆ ಅಚ್ಯುತರಾಯನ ತಾಳ ಕಲಾ ವಾರಿಧಿಯು ಆಧುನಿಕ ತಾಳದ ತತ್ವಗಳನ್ನು ನಿರೂಪಿಸುತ್ತದೆ. ಪೂಲೂರಿ ಗೋವಿಂದ ಕವಿಯ ತಾಳದಶ ಪ್ರಾಣ ದೀಪೀಕಾ ಎಂಬ ಗ್ರಂಥವು ನಂತರದ ಗ್ರಂಥವಾದರೂ ನೃತ್ಯದ ಬಗ್ಗೆ ಅಧಿಕೃತವಾದ ವಿಷಯವನ್ನು ತಿಳಿಸುತ್ತದೆ.

ಆಗಿನ ಸಂಗೀತ ವಾದ್ಯಗಳಲ್ಲಿ ವೀಣೆಯು ಜನಪ್ರಿಯವಾದ ವಾದ್ಯವಾಗಿತ್ತು. ಚೆನ್ನಾದೇವಿ ಮತ್ತು ತಿರುಮಲಾದೇವಿ ಅತ್ಯುತ್ತಮ ವೀಣಾ ವಿದುಷಿಯರಾಗಿದ್ದರು. ತಂಬೂರಿ, ಕೊಂಬು, ಡೋಲು, ತಾಳಗಳು, ಶಂಖ, ದಂಡಿಗೆ, ಸ್ವರಮಂಡಲ, ಕಿನ್ನರಿ, ವೇಣು, ವಿಪಂಚಿ, ವಲ್ಲಕಿ, ಒತ್ತು, ಕರಡೆ, ಮೃದಂಗ, ಅವುಜ, ದುಂದುಭಿ, ಪಣವ, ದಮರು, ರವಳಿ, ಘಂಟೆ, ಕಿಂಕಿಣಿ, ಕಂಸಾಲ ಇವು ಆಗಿನ ಜನರು ಬಳಸುತ್ತಿದ್ದ ಇದರ ಸಂಗೀತ ವಾದ್ಯಗಳಾಗಿದ್ದುವು.[7]

ವಿಜಯನಗರದ ಸಂಗೀತ ಸಂಪ್ರದಾಯಗಳನ್ನು ತಂಜಾವೂರಿನ ನಾಯಕ ದೊರೆಗಳು ಮತ್ತು ಮೈಸೂರಿನ ಒಡೆಯರು ಮುಂದುವರಿಸಿಕೊಮಡು ಪೋಷಿಸಿದರು. ಈ ಕಾಲದಲ್ಲಿ ಹಿಂದೂಸ್ಥಾನಿ ಸಂಗೀತದೊಡನೆ ನೆರೆಯ ರಾಜ್ಯಗಳಾದ ಬಿಜಾಪುರ ಮತ್ತು ಗುಲ್ಬರ್ಗ ಮತ್ತು ವಿಜಯನಗರದ ಸಂಗೀತಕ್ಕೂ ಪರಸ್ಪರ ಸಂಪರ್ಕ ಹಾಗೂ ಪ್ರಭಾವ ಉಂಟಾಯಿತು. ಹೀಗೆ ವಿಜಯನಗರದ ಕಾಲವು ಕರ್ನಾಟಕ ಸಂಗೀತವನ್ನು ಕೈಹಿಡಿದು ನಡೆಸಿದ ಪರ್ವಯುಗ. ಕ್ರಾಂತವಾಗುತ್ತಿದ್ದ ಸಂಗೀತವನ್ನು ಅಭಿನವ ಭರತಾಚಾರ್ಯರೂ, ವಾಗ್ಗೇಯಕಾರರೂ ಆಗಿದ್ದ ವ್ಯಾಸರಾಯರು ಮತ್ತು ಅವರ ಶ್ರೇಷ್ಠ ಶಿಷ್ಯರಾಯ ಪುರಂದರದಾಸರು, ವಾದಿರಾಜರು, ಕನಕದಾಸರು ಮತ್ತು ಬೇಲೂರು ವೈಕುಂಠದಾಸರು ಅದರ ಲಕ್ಷ್ಯಮಾರ್ಗವನ್ನು ಪರಿಷ್ಕರಿಸಿ ಸಮೃದ್ಧಗೊಳಿಸಿದರು. ಶಿವಶರಣರು ನಿಜಗುಣ ಶಿವಯೋಗಿಯ ನಾಯಕತ್ವದಲ್ಲಿ ಸಂಗೀತದ ಗೇಯ ಸಂಪತ್ತನ್ನು ಬೆಳೆಸಿದರು. ರಾಮಾಮಾತ್ಯ, ಭಂಡಾರು ಲಕ್ಷ್ಮೀನಾರಾಯಣ ಮುಂತಾದವರು ಹಳೆಯದಕ್ಕೆ ಹೊಸತನವನ್ನು ಕೊಟ್ಟರು. ಕಲ್ಲಿನಾಥ, ರಾಮಾಮಾತ್ಯ, ಶ್ರೀಕಂಠ, ಪುಂಡರೀಕ ವಿಠಲ ಮುಂತಾದವರು ಸಂಗೀತಕ್ಕೆ ಹೊಸ ಆಯಾಮಗಳನ್ನು ಕಲ್ಪಿಸಿದರು. ಹೀಗೆ ವಿಜಯನಗರದ ಕಾಲವು ಕರ್ನಾಟಕ ಸಂಗೀತ ಮತ್ತು ನೃತ್ಯ ಕಲೆಗಳ ಪೋಷಣೆ, ರಕ್ಷಣೆ, ವಿಕಾಸದಲ್ಲಿ ಗುರುತರವಾದ ಪಾತ್ರವಹಿಸಿದೆ. ಕಲಾಭಿಜ್ಞರೂ, ಕಲಾರಸಿಕರೂ, ಪೋಷಕನೂ ಆಗಿದ್ದ ಅದರ ರಾಜರು ಕಲಾದೇವಿಯ ಆರಾಧಕರಾಗಿ ನಮಗೆ ಸಂಪದ್ಭರಿತವಾದ ಅಮೂಲ್ಯವಾದ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ.

**ಆಕರ**

ವಿಜಯನಗರ ಅಧ್ಯಯನ, ಸಂ. ೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೧೦೯-೧೧೪.

[1] ಸೌಇಂಇ., ೪, ಸಂ. ೭೯೭.

[2] ಎಇಂ., ೩೧, ಪು. ೧೫೨.

[3] ಎಕ., ೫, ಅರಸೀಕೆರೆ ತಾಲೂಕು, ಸಂ. ೧೭೭.

[4] ರಾಬರ್ಟ್ ಸಿವೆಲ್, ಎ ಫಾರ್ಗಾಟನ್ ಎಂಪಾಯರ್, ಪು. ೨೮೮-೮೯.

[5] ಅದೇ, ಪು. ೨೪೨.

[6] ಸಿಂಗಿರಾಜ ಪುರಾಣ (ಕ್ರಿ.ಶ. ೧೫೦೦), ಅ. ೩೮, ಪು. ೩೭೯-೮೦, ಚೆನ್ನಬಸವಪುರಾಣ (೧೬ನೇ ಶತಮಾನ), ವೀರಭದ್ರ ವಿಜಯ (ಕ್ರಿ.ಶ. ೧೫೩೦), ಅ೧೦ : ಭರತೇಸ ವೈಭವ (೧೬ನೇ ಶತಮಾನ) ಹಲವು ನೃತ್ಯಗಳ ವರ್ಣನೆ.

[7] ಇಂಎ., ೨೪, ಪು. ೨೭೩.

# ೧೪. ವಿಜಯನಗರ ಕಾಲದ ಸಂಗೀತ

"ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತ ಸಂಸ್ಕೃತಿಯ ಪ್ರತೀಕ" ಎಂಬ ಬಾರ್ಬೋಸ ಹೇಳಿಕೆಯನ್ನು ಗಮನಿಸಿದರೆ, ಅಂದಿನ ಕಲೆ, ಸಾಹಿತ್ಯ ಮುಂತಾದವು ಎಷ್ಟು ಔನ್ನತ್ಯದಲ್ಲಿತ್ತೆಂಬುದು ತಿಳಿಯುತ್ತದೆ. ಸಂಗೀತ, ಸಾಹಿತ್ಯ, ವಾದ್ಯಗಾರಿಕೆ, ನೃತ್ಯ, ಮಾರ್ಗ, ದೇಶೀ – ಎಲ್ಲ ಪ್ರಕಾರಗಳೂ ಆ ಕಾಲದಲ್ಲಿ ಸಮೃದ್ಧವಾಗಿ, ಬೆಳಗೆದಿರುವುದನ್ನು ಕಾಣುತ್ತೇವೆ. ವಿಜಯನಗರ ಸಾಮ್ರಾಜ್ಯವನ್ನು ಕುರಿತಂತೆ ವಿವಿದ ನಿಟ್ಟಿನಲ್ಲಿ ರಚಿತವಾದ ಹಲವಾರು ಗ್ರಂಥಗಳು ಲಭ್ಯ. ಆದಾಗ್ಯೂ ಸಂಗೀತವನ್ನು ಕುರಿತ ಗಮನ ಅಧ್ಯಯನ ಉಂಬಾ ಕಡಿಮೆಯೆಂದೇ ಹೆಳಬೇಕು. ಈ ನಿಟ್ಟಿನಲ್ಲಿ ಇದೊಂದು ಪುಟ್ಟ ಪ್ರಯತ್ನ.

ಸಂಗೀತ ದೃಷ್ಟೀಯಿಂದ ಗಮನಿಸುವುದಾದರೆ, ವಿಜಯನಗರದ ಕೊಡುಗೆ ಅತ್ಯಂತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಲಕ್ಷ್ಯಸಂಗೀತ ಹಾಗೂ ಲಕ್ಷಣಗಳೆರಡೂ ವಿಭಾಗಗಳ ಬೆಳವಣಿಗೆಯನ್ನು ಆ ಕಾಲದಲ್ಲಿ ಕಾಣುತ್ತೇವೆ. ಅಂದು ಗೀತ, ವಾದ್ಯ, ನೃತ್ಯ ಈ ಮೂರು ಸೇರಿ ಸಂಗೀತವೆನಿಸಿದ್ದಕ್ಕೆ ವಿಪುಲ ಉದಾಹರಣೆಗಳಿವೆ. ಹಬ್ಬ, ಉತ್ಸವ, ಹಾಗೂ ಆಚರಣೆಗಳ ಸಂದರ್ಭದಲ್ಲೂ ಸಂಗೀತದ ಬಳಕೆಯಾಗುತ್ತಿತ್ತು. ಪ್ರಮುಖವಾಗಿ ಸ್ತ್ರೀಯರು ಗಾಯನ, ವಾದನ, ನೃತ್ಯ ಈ ಎಲ್ಲದರಲ್ಲೂ ಪ್ರಾವೀಣ್ಯತೆಯನ್ನು ಪಡೆದಿದ್ದರು.[1] ಕೆಲವು ಸ್ತ್ರೀಯರು ಕಹಳೆ, ಕೊಳಲು,[2]ತುತ್ತೂರಿ, ಮದ್ದಲೆ, ಪಿಟೀಲು[3]ಇನ್ನು ಮುಂತಾದ ವಾದ್ಯಗಳನ್ನು ನುಡಿಸುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ.ದ ವಿಜಯನಗರ ಸಾಮ್ರಾಜ್ಯದ ಪ್ರಮುಖ ದೊರೆಯಾದ ಶ್ರೀ ಕೃಷ್ಣದೇವರಾಯನ ಹೆಂಡತಿಯರಾದ ಚಿನ್ನಾದೇವಿ ಹಾಗೂ ತಿರುಮಲ ದೇವಿಯರು ಒಳ್ಳೆಯ ಕಂಠಸಿರಿ ಹೊಂದಿ ಸೊಗಸಾಗಿ ಹಡುತ್ತಿದ್ದರು. ದೊರೆ ರಾಮರಾಯನು ಹಾಡುಗಾರಿಕೆಯ ಜೊತೆಗೆ ವೀಣೆಯನ್ನು ನುಡಿಸುತ್ತಿದ್ದನೆಂಬುದಾಗಿ ತಿಳಿದುಬರುತ್ತದೆ.[4]

ಹೀಗೆ ವಿಜಯನಗರದ ಅವಧಿಯಲ್ಲಿ ಪ್ರೌಢ ಹಾಗೂ ಜನಪದ ಸಂಗೀತಗಳೆರಡೂ ಸಮೃದ್ಧಿಯಾಗಿ ಬೆಳದವು ಈ ಎರಡೂ ಸಮಗೀತಗಳ ನಡುವೆ ಕೊಳುಕೊಡುಗೆಗಳಾದವು. ವ್ಯಷ್ಟಿ ಗಾಯನ ಹಾಗೂ ಸಮಷ್ಟಿ ಗಾಯನಗಳು ತಮ್ಮ ವೈವಿಧ್ಯವಯ ನಾದಸಂಪನ್ನತೆಯಿಂದ ಜನರಿಗೆ ರಸದೌತಣವನ್ನು ನೀಡಿದವು. ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಸಂಗೀತಕ್ಕೆ ಅತಿಯಾದ ಪ್ರಾಮುಖ್ಯತೆ, ಮನ್ನಣೆ, ಪೋಷಣೆಗಳು ದೊರೆತವು. ಶ್ರೀ ವ್ಯಾಸರಾಯರು, ಪುರಂದರದಾಸರು, ಕನಕದಾಸರೇ ಮುಂತಾದ ಪ್ರಮುಖರು ಈ ಅವಧಿಯಲ್ಲಿದ್ದರು. ಶ್ರೀ ವ್ಯಾಸರಾಯರು ಕೃಷ್ಣದೇವರಾಯನ ಆಸ್ಥಾನ ಗುರುಗಳಾಗಿದ್ದರು. ಹೀಗೆ ವಿಜಯನಗರ ಕಾಲದಲ್ಲಿ ಸಂಗೀತವು ವೈವಿಧ್ಯಮಯವಾಗಿ ಬೆಳೆಯಿತು. ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಕೊಡುಗೆ ಅತ್ಯಂತ ಮಹತ್ವಪೂರ್ಣವಾದುದು. ಇದಕ್ಕೆ ಕಾರಣರಾದ ಕೆಲವು ಪ್ರಮುಖ ಲಾಕ್ಷಣಿಕರು ಹಾಗೂ ಸಮಗೀತಗಾರರ ಸಂಕ್ಷಿಪ್ತ ಪರಿಚಯ ಸಂಗೀತಕ್ಕೆ ಇವರ ಕೊಡುಗೆಯ ಬಗೆಗೆ ಇಲ್ಲಿ ವಿವರಿಸಲಾಗಿದೆ.

**ಲಕ್ಷಣ ಸಂಗೀತ**

**೧. ಶ್ರೀ ವಿದ್ಯಾರಣ್ಯರು**

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದ ವಿದ್ಯಾರಣ್ಯರು ೧೪ನೆಯ ಶತಮಾನದಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ ''ಸಂಗೀತ ಸಾರ'' ವೆಂಬ ಗ್ರಂಥವನ್ನು ರಚಿಸಿದರು. ಲಕ್ಷ್ಯ ಲಕ್ಷಣಗಳೆರಡರ ಸಾರ ಮೇಳೈಸಿದ್ದ ಈ ಕೃತಿ ಈಗ ಉಪಲಬ್ಧವಿಲ್ಲ. ''ಸಂಗೀತ ಸುಧಾ'' ರಚಿಸಿದ ಗೋವಿಂದ ದೀಕ್ಷಿತರು ''ಸಂಗೀತ ಸಾರ'' ದಿಂದ ಒಂಬತ್ತು ಭಾಗಗಳನ್ನು ಉಲ್ಲೇಖಿಸಿ, ವಿದ್ಯಾರಣ್ಯರನ್ನು ಶ್ರೀ ಚರಣರೆಂದು ಗೌರವಿಸಿದ್ದಾರೆ. ಇದೇ ''ಸಂಗೀತ ಸಾರ'' ಗ್ರಂಥದ ಬಗೆಗಿನ ಪ್ರಮುಖ ಹಾಗೂ ಏಕೈಕ ಆಕರವಾಗಿದೆ. ''ಐವತ್ತು ರಾಗಗಳ ಲಕ್ಷಣಗಳನ್ನು ತಾನು ವಿದ್ಯಾರಣ್ಯರಿಂದಲೇ ಪಡೆದುಕೊಂಡುದಾಗಿ ಹೇಳಿದ್ದಾನೆ. ಅವರ ಮತದಲ್ಲಿ ಮೇಳಗಳು ಹದಿನೈದು ಎಂದು ಹೇಳಿದ್ದಾನೆ. ವಿದ್ಯಾರಣ್ಯರು

ರೂಢಿಯಲ್ಲಿದ್ದು ಐವತ್ತು ರಾಗಗಳನ್ನು ಹದಿನೈದು ಮೇಳಗಳಲ್ಲಿ ಅಡಕಗೊಳಿಸಿ ವರ್ಗೀಕರಿಸಿದ್ದರು ಎಂದು ತಿಳಿದುಬರುತ್ತದೆ. ವಿದ್ಯಾರಣ್ಯರು ರೂಢಿಯಲ್ಲಿದ್ದು ಐವತ್ತು ರಾಗಗಳನ್ನು ಹದಿನೈದು ಮೇಳಗಳಲ್ಲಿ ಅಡಕಗೊಳಿಸಿ ವರ್ಗೀಕರಿಸಿದ್ದರು ಎಂದು ತಿಳಿದುಬುರುತ್ತದೆ. ಇದಲ್ಲದೆ ಸಂಗೀತ ಸಾರವು ವಾಗ್ಗೇಯಕಾರ ಗುಣದೋಷಗಳು, ಗಾಯಕ ಪಂಚಭೇದಗಳು ಮುಂತಾದವುಗಳನ್ನು, ಪ್ರಬಂಧಾಧ್ಯಾಯವೊಂದನ್ನು ಒಳಗೊಂಡಿತ್ತೆಂದು ತಿಳಿದುಬರುತ್ತದೆ. ವಿದ್ಯಾರಣ್ಯರು ಹೇಳಿದ ಹದಿನೈದು ಮೇಳಗಳು ಯಾವುವೆಂದರೆ, ನಟ್ಟಾ, ಗುರ್ಜರೀ, ವರಾಟೀ, ಶ್ರೀರಾಗ, ಭೈರವೀ, ಶಂಕರಾ ಭರಣ, ಆಹರೀ, ವಸಂತ ಭೈರವಿ, ಸಮಂತ, ಕಾಂಬೋಧಿ, ಮುಖಾರಿ, ಶುದ್ಧರಾಮಶ್ರೀ, ಕೇದಾರಗೌಳ, ಹೆಜ್ಜುಜ್ಜೀ, ದೇಶಾಕ್ಷೀ"[5]ಹದಿನೈದು ಮೇಳರಾಗಗಳನ್ನು ಐವತ್ತು ರಾಗಗಳನ್ನು ಅಡಕಗೊಳಿಸಿದ ಶ್ರೀ ವಿದ್ಯಾರಣ್ಯರು ಕರ್ನಾಟಕ ಸಂಗೀತದಲ್ಲಿನ ಜನಕ ಜನ್ಯ ಪದ್ಧತಿಗೆ ಉತ್ತಮ ಮಾರ್ಗದರ್ಶಕರಾಗಿದ್ದಾರೆ.

**೧. ಕಲ್ಲಿನಾಥ**

ವಿಜಯನಗರದ ದೊರೆ ಎರಡನೇ ದೇವರಾಯನಿಂದ ಪ್ರೋತ್ಸಾಹ ಪಡೆದು ಶಾರ್ಙ್ಗದೇವನ "ಸಂಗೀತ ರತ್ನಾಕರ"ಕ್ಕೆ ತನ್ನ" ಸಂಗೀತ ಕಲಾನಿಧಿ"ಯಲ್ಲಿ ವ್ಯಾಖ್ಯಾನವನ್ನು ಬರೆದು ಚತುರ ಕಲ್ಲಿನಾಥರು ಸಂಗೀತಕ್ಕೆ ಸಂಬಂಧಿಸಿದಂತೆ ಒಂದು ಮಹತ್ತರ ಕೆಲಸ ಮಾಡಿದ್ದಾರೆ. ವಿದ್ವತ್ ಪೂರ್ಣವಾದ ಈ ಗ್ರಂಥ ಸಂಗೀತದ ವಿಶ್ವಕೋಶದಂತಿದೆ. ಕಲ್ಲಿನಾಥರ ವಿವರವಾದ ವ್ಯಾಖ್ಯಾನ ಇರದಿದ್ದರೆ ನಾವು "ಸಂಗೀತ ರತ್ನಾಕರ"ವನ್ನು ಅರ್ಥೈಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಕಲ್ಲಿನಾಥರಿಗೆ ಹಲವಾರು ಶಾಸ್ತ್ರಗಳಲ್ಲಿ ಅನುಪಮ ಪರಿಣತಿ ಇದ್ದಿತೆಂಬುದಕ್ಕೆ ಅವರು ಬರೆದ "ಸಂಗೀತ ಕಲಾನಿಧಿ" ವ್ಯಾಖ್ಯಾನದ ಪ್ರತಿ ಪುಟವೂ ಸಾಕ್ಷಿಯಾಗಿದೆ.

ಶಾರ್ಙ್ಗದೇವನ "ಸಂಗೀತ ರತ್ನಾಕರ"ವು ಭಾರತೀಯ ಸಂಗೀತದ ಒಂದು ಪ್ರಮುಖ ಮೈಲಿಗಲ್ಲು. ಇದರ ಬಗೆಗೆ ಅನೇಕರು ವ್ಯಾಖ್ಯಾನ ಬರೆದಿದ್ದಾರೆ. ಆದರೆ ಇವರೆಲ್ಲರೂ ಕಲ್ಲಿನಾಥ ಮೊದಲಿಗರಾಗುತ್ತಾರೆ. ರತ್ನಾಕರಕ್ಕೆ ಸಂಬಂಧಿಸಿದಂತೆ "ಮೂಲ ಗ್ರಂಥದಲ್ಲಿ ಎಲ್ಲೆಲ್ಲಿ ಸಂದೇಹಕ್ಕೆ ಎಡೆಯಿದೆಯೋ ಅಲ್ಲೆಲ್ಲ ಅವುಗಳನ್ನು ತರ್ಕಶುದ್ಧಿ, ಅನುಭವದ ಅಧಿಕಾರ, ಪೂರ್ವಪಕ್ಷದ ಪ್ರಮಾಣಿಕ, ಪ್ರಬಲ ಮಂಡಲ, ಮನಃಪೂರ್ವಕವಾಗಿ ಒಪ್ಪಿಕೊಳ್ಳುವಂತಹ ಅದರ ಖಂಡನೆ ಹಾಗೂ ಸ್ವಮತಖಂಡನೆ ಇವುಗಳಿಂದ ಪರಿಹರಿಸಿದ್ದಾನೆ. ಮೂಲಗ್ರಂಥದ ಜಟಿಲ ಭಾಗವನ್ನು ಸರಳಗೊಳಿಸುವುದು, ಕಠಿಣ ಶಬ್ದಗಳಿಗೆ ನೇರವಾದ, ಸ್ಪಷ್ಟವಾದ ಅರ್ಥಗಳನ್ನು ಒದಗಿಸುವುದು, ಪ್ರಾಚೀನ, ಸಂಸ್ಕೃತ ಪರಿಭಾಷಾ ಶಬ್ದಗಳಿಗೆ ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದ ದೇಶೀ ಶಬ್ದ ದೇಶೀ ಪ್ರಯೋಗಗಳನ್ನು ಸೂಚಿಸುವುದು, ತಾತ್ಪರ್ಯ, ತಾರತಮ್ಯ, ಮಾತಾಂತರ, ಧ್ವನಿ ಮುಂತಾದವುಗಳನ್ನು ಆಯಾ ಸಂದರ್ಭಕ್ಕೆ ಅನುಸಾರವಾಗಿ ಸಂಗ್ರಹಿಸುವುದು ಇತ್ಯಾದಿಗಳಲ್ಲಿ ಅವನ ವ್ಯಾಖ್ಯನವು ನಮ್ಮ ಸಂಗೀತಶಾಸ್ತ್ರ ಗ್ರಂಥರಾಶಿಯಲ್ಲಿ ಮನೋನ್ನತಿಯನ್ನು ಪಡೆದಿದೆ[6] ಎಂಬ ಮಾತಿನಲ್ಲಿ ಕಲ್ಲಿನಾಥರ ವ್ಯಾಖ್ಯಾನಕ್ಕೆ ಅಗ್ರಸ್ಥಾನ ಏಕೆ ಎಂಬ ಪ್ರಶ್ನೆಗೆ ಪುತ್ತರವಿದೆ. ಒಟ್ಟಿನಲ್ಲಿ ಕಲ್ಲಿನಾಥರ ವ್ಯಾಖ್ಯಾನ ಇತರ ವ್ಯಾಖ್ಯಾನಗಳಿಗೆ ಮಾದರಿಯಾಗಿದೆ.

**೨. ರಾಮಾಮಾತ್ಯ**

ರಾಮಾಮಾತ್ಯರು ಕರ್ನಾಟಕ ಸಂಗೀತ ಇತಿಹಾಸದಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ದೊರೆ ರಾಮರಾಯನ ಮಂತ್ರಿಯಾಗಿದ್ದ ಇವರು ರಚಿಸಿದ "ಸ್ವರಮೇಳ ಕಲಾನಿಧಿ" ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಪ್ರಮುಖ ಗ್ರಂಥ. "ಅಭಿನವ ಭರತಾ ಚಾರ್ಯ" ಎಂಬ ಬಿರುದಿಗೆ ಪಾತ್ರರಾಗಿದ್ದ ರಾಮಾಮಾತ್ಯ ದೊರೆಯ ಇಚ್ಛೆಯಂತೆ ಸಂಗೀತದ ಲಕ್ಷ್ಯ ಲಕ್ಷಣಗಳೆರಡನ್ನೂ ಸಮನ್ವಯಗೊಳಿಸಿ "ಸ್ವರಮೇಳ ಕಲಾನಿಧಿ" ಎಂಬ ಗ್ರಂಥವನ್ನು ರಚಿಸಿದರು. ಇವರು "ಸಂಗೀತ ಕಲಾನಿಧಿ" ವ್ಯಾಖ್ಯಾನ ಬರೆದ ಚತುರ ಕಲ್ಲಿನಾಥರ ಮೊಮ್ಮಗ.

ಸ್ವರ ಪ್ರಕರಣ, ವೀಣಾ ಪ್ರಕರಣ, ಮೇಳ ಪ್ರಕರಣ, ರಾಗ ಪ್ರಕರಣ ಎಂಬ ನಾಲ್ಕು ಪ್ರಕರಣಗಳನ್ನು ಹಾಗೂ ೩೨೮ ಶ್ಲೋಕಗಳನ್ನು ಒಳಗೊಂಡ ಒಂದು ಪುಟ್ಟ ಗ್ರಂಥವಾಗಿರುವ "ಸ್ವರಮೇಲ ಕಲಾನಿಧಿ"ಯು ೧೦೦೦ ವರ್ಷಗಳ ಕಾಲದ ಸಂಗೀತದ ವಿಕಾಸವನ್ನು

ಪ್ರತಿಬಿಂಬಿಸುತ್ತದೆ. ಇದು "ಆಧುನಿಕ ಕರ್ನಾಟಕ ಸಂಗೀತದ ಯುಗಕ್ಕೆ ಅತ್ಯಂತ ಸೂಕ್ತವಾದ ಪೀಠಿಕೆಯಂತಿದೆ".[7] ಈ ಗ್ರಂಥದಲ್ಲಿ ಗೀತ ಪ್ರಶಂಸೆ, ಸ್ವರನಾಮ ಪದ್ಧತಿ, ವೀಣೆ ಅದರಲ್ಲಿ ಶುದ್ಧ ಮೇಳ ವೀಣಾ, ಮಧ್ಯಮೇಳ ವೀಣಾ, ಅಚ್ಯುತ ರಾಜೇಂದ್ರ ಮೇಳ ವೀಣಾ ಎಂಬ ವಿಧಗಳು ಹೇಳಲ್ಪಟ್ಟಿವೆ. ರಾಗಗಳ ಮೇಳ, ಜನ್ಯಪದ್ಧತಿ- ಇಲ್ಲಿದ್ದು, ರಾಗಗಳನ್ನು ಉತ್ತಮ, ಮಧ್ಯಮ, ಅಧಮವೆಂಬುದಾಗಿ ವರ್ಗೀಕರಿಸಿರುವುದು ಕಂಡುಬರುತ್ತದೆ. ಈತ ೨೦ ಮೇಳ ರಾಗಗಳನ್ನು ಹೆಸರಿಸಿದ್ದಾರೆ. ಹಗೂ "ಶುದ್ಧ ಮೆಳರಾಗಗಳಲ್ಲಿ ಮುಖಾರಿಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದಾರೆ".[8]

**ಲಕ್ಷ್ಯ ಸಂಗೀತ**

**೧. ಸ್ರೀ ಪಾದರಾಜರು**

ಜನಸಾಮಾನ್ಯರ ಉದ್ಧಾರ ಹಗೂ ಸಮಾಜ ಸುಧಾರಣೆಗಾಗಿ ತಮ್ಮ ಜ್ಞಾನ ಅನುಭವಗಳ ಸಾರವನ್ನು ಶ್ರೀ ಪಾದರಾಯರು ಸರಳವಾದ ಸಾಹಿತಯ ರೂಪದಲ್ಲಿ ನೀಡಿದ್ದಾರೆ. ನರಹರಿ ತೀರ್ಥರ ತರುವಾಯ ದಾಸಕೂಟವನ್ನು ಬೆಳೆಸಿದ ಮೊದಲನೆಯವರು. ಆದುದರಿಂದ ಹರಿದಾಸರೆಲ್ಲರೂ ಪರಂಪರೆಯಿಂದ ಬಂದ "ನಮಸ್ತೋ ಶ್ರೀಪಾದರಾಜಾಯ" ಎಂಬ ಶ್ಲೋಕದಲ್ಲಿ ಇವರನ್ನು ಸ್ಮರಿಸುತ್ತಾರೆ.

ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೋಕಿಗೆ ಸೇರಿದ ಅಬ್ಬೂರು ಎಂಬ ಹಳ್ಳಿಯಲ್ಲಿ ಶ್ರೀ ಪಾದರಾಜರು ಜನಿಸಿದರು. ಇವರ ತಂದೆ ಶೇಷಗಿರಿ ಆಚಾರ್ಯ ಮತ್ತು ತಾಯಿ ಗಿರಿಜಮ್ಮ. ಇವರ ಮೊದಲ ಹೆಸರು ಲಕ್ಷ್ಮೀನಾರಾಯಣ. ಶ್ರೀರಂಗದ ಸ್ವರ್ಣವರ್ಣತೀರ್ಥರು ದೇಶ ಸಂಚಾರ ಮಾಡುತ್ತಾ ಅಬ್ಬೂರಿಗೆ ಬಂದು, ಅಲ್ಲಿ ದನಕಾಯುತ್ತಿದ್ದ ಈ ಹುಡುಗನನ್ನು ನೋಡಿ, ತಂದೆ ತಾಯಿಯರು ಒಪ್ಪಿಗೆ ಪಡೆದು ತಮ್ಮೊಡನೆ ಕರೆದುಕೊಂಡು ಬಂದು ಮಠದಲ್ಲಿ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿಸಿದರು. ಗುರುವಿಗೆ ತಕ್ಕ ಶಿಷ್ಯನಾಗಿ, ವಿಯನದಿಂದಿದ್ದು, ಗುರುಗಳ ವಿಶ್ವಾಸಕ್ಕೆ ಪಾತ್ರನಾಗಿ ಸನ್ಯಾಸಾಶ್ರಮ ಸ್ರೀಕರಿಸಿ ಲಕ್ಷ್ಮೀನಾರಾಯಣ ಯೋಗಿ ಎನಿಸಿದರು. ಮುಂದೆ ಉತ್ತರಾದಿ ಮಠದ ರಘನಾಥ ತೀರ್ಥರು ಇವರ ಪಾಂಡಿತ್ಯ ಕಂಡು ಮೆಚ್ಚಿ ಶ್ರೀಪಾದರಾಜರೆಂದು ಕರೆದರು. ಅಂದಿನಿಂದ ಇವರು ಈ ಹೆಸರಿನಿಂದ ಪ್ರಸಿದ್ಧರಾದರು.

ಶ್ರೀ ಪಾದರಾಯರು ಚಂದ್ರಗಿರಿಯ ದೊರೆ ಸಾಳುವ ನರಸಿಂಹನಿಗೆ ತಗುಲಿದ್ದ ಬ್ರಹ್ಮಹತ್ಯಾ ದೋಷವನ್ನು ನಿವಾರಿಸಿದರು. ಅದರಿಂದ "ರಾಜನು ಅವರನ್ನೆ ಸಿಂಹಾಸನದ ಮೇಲೆ ಕೂರಿಸಿ ಸಕಲ ಸನ್ಮಾನಗಳನ್ನು ಮಾಡಿದ"[9]ನೆಂಬುದಾಗಿ ತಿಳಿದುಬರುತ್ತದೆ. 'ರಂಗನಾಥ' ಎವರ ನೆಚ್ಚಿನ ಆರಾಧ್ಯ ದೈವ. ಈ ದೈವವನ್ನೊಳಗೊಮಡ ಕೆಲವು ರಚನೆಗಳ ಮೊದಲ ಸಾಲು ಇಂತಿದೆ.

೧. ಕಂಗಳಿದ್ಯಾತಕೋ – ಕಾವೇರಿ ರಂಗನ ನೋಡದ

೨. ಇಕ್ಕೋ ನೋಡೆ ರಂಗನಾಥನ ಚಿಕ್ಕ ಪಾದವ

೩. ನೀನೇ ಬಲ್ಲಿದನೋ ರಂಗ – ನಿನ್ನ ದಾಸರು ಬಲ್ಲಿದರೋ

೪. ಪೋಪು ಹೋಗೋಣ ಬಾರೋ ರಂಗ

೫. ರಂಗಾ ಮನೆಗೆ ಬಾರೋ ಕೃಪಾಂಗ ಶ್ರೀರಂಗ -ಇತ್ಯಾದಿ

“ರಂಗ ವಿಠಲ” ಎಂಬ ಅಂಕಿತದಲ್ಲಿ ಇವರು ತಮ್ಮದ ಕೃತಿರಚನೆ ಮಾಡಿದ್ದಾರೆ. ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕಗಳ ಜೊತೆಗೆ, ಗೋಪೀಗೀತ, ವೇಮುಗೀತ, ಭ್ರಮರಗೀತ, ಲಕ್ಷ್ಮೀನರಸಿಂಹ ಪಾದುರ್ಭಾವ ದಂಡಕ, ರುಕ್ಮಿಣೀ ಸತ್ಯಭಾಮಾ ವಿಲಾಸ ಮುಂತಾದವುಗಳನ್ನು ರಚಿಸಿದ್ದಾರೆ. ತಮ್ಮ ಕೊನೆಯ ದಿನಗಳನ್ನು ಮುಳಬಾಗಿಲಿನಲ್ಲಿ ಕಲೆದ ಇವರ ರಚನೆಗಳು ಕನ್ನಡ ಹರಿದಾಸ ಸಾಹಿತ್ಯಕ್ಕೆ ಅತ್ಯಮೂಲ್ಯ ಕೊಡುಗೆ.

**೨. ಶ್ರೀ ವ್ಯಾಸರಾಯರು**

ದಾಸ ಪರಂಪರೆಯಲ್ಲಿ ಶ್ರೀ ಪಾದರಾಜರ ಶಿಷ್ಯರಾಗಿದ್ದ ವ್ಯಾಸರಾಯರು ಮೈಸೂರು ಜಿಲ್ಲೆಯ ಬನ್ನೂರಿನಲ್ಲಿ ಜನಿಸಿದರು. ಇವರ ತಂದೆ ರಾಮಾಚಾರ್ಯ ಹಾಗೂ ತಾಯಿ ಸೀತಾಬಾಯಿ. ಇವರನ್ನು ಬ್ರಹ್ಮಣ್ಯತೀರ್ಥರ ಶ್ರೀಮಠದವರು ಬೆಳೆಸಿ. ವಿದ್ಯಾಭ್ಯಾಸ ಮಾಡಿಸಿದರು. ನಂತರ ಶ್ರೀ ಪಾದರಾಜರಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಮಾಡಿ ಅದ್ವಿತೀಯ ವಿದ್ವಾಂಸರಾದರು. ಬಾಲ್ಯದಲ್ಲೇ ಸನ್ಯಾಸಾಶ್ರಮ ಸ್ವೀಕರಿಸಿ ವ್ಯಾಸತೀರ್ಥರಾದ ಇವರು ಗುರುವಿನ ಮಾತಿನಂತೆ ಚಂದ್ರಗಿರಿಯ ದೊರೆ ಸಾಳುವ ನರಸಿಂಹನಿಮದ ವಿಶೇಷವಾಗಿ ಸನ್ಮಾನಿತರಾದರು.

ವಿಜಯನಗರ ಸಾಮ್ರಾಜ್ಯದ ಪ್ರಮುಖ ದೊರೆ ಸ್ರೀ ಕೃಷ್ಣದೇವರಾಯನ ಆಸ್ಥಾನ ಗುರುಗಳಾಗಿದ್ದ ಶ್ರೀ ವ್ಯಾಸರಾಯರು ರಾಜನಿಗೆ ಒದಗಿದ್ದ ಕುಹೂ ಯೋಗವನ್ನು ನಿವಾರಿಸಿದ ಕಾರಣಕ್ಕಾಗಿ ಸಿಂಹಾಸನಾರೋಹಣ ಮಾಡಿದ್ದರೆಂಬುದಾಗಿ ತಿಳಿದುಬರುತ್ತದೆ. ವಿಜಯನಗರದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ, ಸಹಸ್ರಾರು ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನವನ್ನು ಉಣಬಡಿಸಿದರು. ಇವರ ಆರಾಧ್ಯದೈವ ಶ್ರೀ ಕೃಷ್ಣ. ಇವರು ಕೃಷ್ಣ, ಶ್ರೀ ಕೃಷ್ಣ, ಸಿರಿಕೃಷ್ಣ. ಎಂಬ ಅಂಕಿತದಲ್ಲಿ ತಮ್ಮ ಕೃತಿರಚನೆ ಮಾಡಿದ್ದಾರೆ. ಇವರು ತತ್ವಶಾಸ್ತ್ರ ಸಂಬಂಧವಾದ ಕರ್ತತಾಂಡವ, ನ್ಯಾಯಾಮೃತ ಹಾಗೂ ತಾತ್ಪರ್ಯಚಂದ್ರಿಕಾ ಎಂಬ ಮೂರು ಪ್ರೌಢಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದರು. ಇವು ವ್ಯಾಸತ್ರಯವೆಂದು ಪ್ರಸಿದ್ಧಿ ಪಡೆದಿವೆ. ಈ ಕಾರಣ ಇವರಿಗೆ ‘‘ಚಂದ್ರಿಕಾಚಾರ್ಯ’’ ಎಂಬ ಬಿರುದು ಸಂದಿದೆ.

ವ್ಯಾಸರಾಯರು ಸಂಸ್ಕೃತದಲ್ಲಷ್ಟೇ ಅಲ್ಲದೆ, ಕನ್ನಡದಲ್ಲಿ ಹಲವು ಪದಗಳು, ಉಗಾಭೋಗ, ಸುಳಾದಿಗಳು, ವೃತ್ತಿನಾಮಗಳು ಹಾಗೂ ಕೀರ್ತನೆಗಳನ್ನು ರಚಿಸಿದ್ದಾರೆ. ಜ್ಞಾನ, ಭಕ್ತಿ, ವೈರಾಗ್ಯ ಎಲ್ಲವನ್ನೂ ಒಳಗೊಂಡಂತೆ ಇವರ ರಚನೆಗಳು ಸರಳವಾಗಿವೆ.

೧. ಮಹಿಮೆ ಸಾಲದೆ ಇಷ್ಟೆ ಮಹಿಮೆ ಸಾಲದೆ

೨. ದಾಸರೆಂದರೆ ಪುರಂದರದಾಸರಯ್ಯ – ಇತ್ಯಾದಿ

ಮೊದಲ ಹಾಡಿನಲ್ಲಿ ೧. ಗುರುವಿನ ಮಹಿಮೆಯನ್ನು ಹಾಡಿ ಹೊಗಳಿದರೆ, ನಂತರದ ಹಾಡಿನಲ್ಲಿ ೨. ಶಿಷ್ಯನ ಬಗೆಗಿನ ಮೆಚ್ಚುಗೆ ಇದೆ. ಇದಲ್ಲದೆ ಇವರ ಗುರುಗಳಾದ ಶ್ರೀ ಪಾದರಾಜರು ಸಹ ತಮ್ಮ ಒಂದು ರಚನೆಯಲ್ಲಿ ‘‘ಸಾಸಿರ ಜಿಹ್ವೆಗಳುಳ್ಳ ಶೇಷನೆ ಕೊಂಡಾಡಬೇಕು. ವ್ಯಾಸಮುನಿರಾಯರ ಸನ್ಯಾಸದಿರವ’’ ಎಂಬುದಾಗಿ ಹೊಗಳಿದ್ದಾರೆ. ‘‘ಕೃಷ್ಣಾ ನೀ ಬೇಗನೆ ಬಾರೋ’’ ಎಂಬುಂದು ಇವರ ಪ್ರಸಿದ್ಧ ರಚನೆ.

ಹೀಗೆ, ದಾಸ ಸಾಹಿತ್ಯವು ಉನ್ನತ ಮಟ್ಟವನ್ನು ಮುಟ್ಟಿದ ಕಾಲದಲ್ಲಿದ್ದ ಶ್ರೀ ವ್ಯಾಸರಾಯರು ಪುರಂದರದಾಸರು, ಕನಕದಾಸರೇ ಮುಂತಾದ ಪ್ರಮುಖ ಹರಿದಾಸರಿಗೆ ಗುರುಗಳಾಗಿದ್ದರು. ಇವರ ನಿಧನದ ನಂತರ ಇವರ ವೃಂದಾವನವನ್ನು ಆನೆಗೊಂದಿಯ ಹತ್ತಿರವಿರುವ ನವಬೃಂದಾವನದಲ್ಲಿ ನೆಲಗೊಳಿಸಲಾಗಿದೆ.

**೩. ಶ್ರೀ ವಾದಿರಾಜರು**

ಶ್ರೀ ಪಾದರಜರ ಪ್ರಶಿಷ್ಯರೂ, ಶ್ರೀ ವ್ಯಾಸರಾಯರ ಶಿಷ್ಯರೂ ಆದ ಶ್ರೀ ವಾದಿರಾಜರು ಕುಂದಾಪುರ ತಾಲೋಕಿನ ಕುಂಭಾಸಿಯ ಹತ್ತಿರದ ಹುವಿನ ಕೆರೆ ಗ್ರಾಮದಲ್ಲಿ ಜನಿಸಿದರು. ಇವರ ತಮದೆ ರಾಮಚಾರ್ಯ ಹಾಗೂ ತಾಯಿ ಸರಸ್ವತೀದೇವಿ. ಇವರ ಮೊದಲ ಹೆಸರು ವರಾಹ. ಚಿಕ್ಕವಯಸ್ಸಿನಲ್ಲಿಯೇ ಅಸಾಧಾರಣ ಪ್ರತಿಭೇ ಹೊಂದಿದ್ದ ಇವರಿಗೆ ಮಾಧ್ವಯತಿಗಳಾದ ಶ್ರೀ ವಾಗೀಶ ತೀರ್ಥರು ಇವರ ಎಂಟನೇ ವಯಸ್ಸಿಗೆ ಸನ್ಯಾಸ ದೀಕ್ಷೆಯಿತ್ತು. "ವಾದಿರಾಜ"ರೆಂದು ಕರೆದರು. ಕೆಲಕಾಲ ಶ್ರೀ ವಿದ್ಯಾನಿಧಿ ತೀಥರಿಂದ ವಿದ್ಯಾಭ್ಯಾಸ ಮಾಡಿದರು. ನಂತರ ವ್ಯಾಸರಾಯರ ಬಳಿ ಶಿಷ್ಯತ್ವವನ್ನು ಸ್ವೀಕರಿಸಿ, ವಿದ್ಯಾರ್ಜನೆ ಮಾಡಿ ನಂತರ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ "ಸೋದೆ" ಮಠದ ಇಪ್ಪತ್ತನೆಯ ಪೀಠಾಧಿಪತಿಗಳಾದರು.

ಶ್ರೀ ವಾದಿರಾಜರು ಸಂಸ್ಕೃತ ಹಗೂ ಕನ್ನಡದಲ್ಲಿ ಪಾಂಡಿತ್ಯ ಪಡೆದಿದ್ದರು. ಭಾರತದಾದ್ಯಂತ ಸಂಚರಿಸಿ, ಧರ್ಮಪ್ರಚಾರ ಮಾಡಿ, ತಾವು ಸಂದರ್ಶಿಸಿದ ಪುಣ್ಯಕ್ಷೇತ್ರಗಳ ಬಗ್ಗೆ ಹಾಗೂ ಅಲ್ಲಿಯ ದೇವತಾಮೂರ್ತಿಗಳನ್ನು ಕುರಿತಂತೆ ವಿವರಣೆಯನ್ನು ಒಳಗೊಮಡ "ತೀರ್ಥ ಪ್ರಬಂಧ"ವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದರು. ಸಂಸ್ಕೃತದಲ್ಲಿ ಸುಮಾರು ೭೦ ಗ್ರಂಥಗಳನ್ನು ರಚಿಸಿರುವರೆಂಬುದಾಗಿ ತಿಳಿದುಬರುತ್ತದೆ. ಕನ್ನಡದಲ್ಲಿ ಇವರು ನೂರಾರು ಪದಗಳು, ಪದ್ಯ, ಸುಳಾದಿ, ಲಕ್ಷ್ಮೀ ಶೋಭಾನೆ. ವೈಕುಂಠ ವರ್ಣನೆ, ಸ್ವಪ್ನಪದ, ಗುಂಡಕ್ರಿಯಾ, ಭ್ರಮಗೀತ ಮುಂತಾವುಗಳನ್ನು ರಚಿಸಿದ್ದಾರೆ. ಇವರ ಅಂಕಿತ "ಹಯವದನ".

ವಾದಿರಾಜರು ವಿಜಯನಗರದ ರಾಜರಿಂದ ಸನ್ಮಾನಿತರಾಗಿ "ಪ್ರಸಂಗಾಭರಣತೀರ್ಥ" ಎಂಬ ಬಿರುದನ್ನು ಪಡೆದರು. ಇವರು ಉಡುಪಿಯ ಅಷ್ಟಮಠಗಳನ್ನು ಕಟ್ಟಸಿದ್ದು, ಪರ್ಯಾಯ ಪದ್ದತಿಯ ವ್ಯವಸ್ಥೆ ಹೀಗೆ ಅನೇಕ ಕಾರ್ಯಗಳಲ್ಲಿ ತೋಡಗಿಸಿಕೊಂಡರು. ಅಷ್ಟಮಠಗಳಲ್ಲಿ ಭಾಗವತರ ಭಜನ ಪದ್ಧತಿಯನ್ನು ಆಚರಣೆಗೆ ತಂದು, ದೇವರ ಸೇವೆಗೆ ಕನ್ನಡ ಕೀರ್ತನೆಗಳನ್ನು ರಚಿಸಿ ಹಾಡಿದ ಉಡುಪಿಯ ಅಷ್ಟಮಠಗಳ ಯತಿಗಳಲ್ಲಿ ವಾದಿರಾಜರು ಮೊದಲಿಗರಾದರು. ೧೨೦ ವರ್ಷಗಳ ತುಂಬುಜೀವನ ನಡೆಸಿದ ಇವರು ತಮ್ಮ ಕೊನೆಯ ದಿನಗಳನ್ನು 'ಸೋದೆ' ಯಲ್ಲಿಯೇ ಕಳೆದು ಸಶರೀರರಾಗಿಯೇ ಬೃಂದಾನ ಪ್ರವೇಶಿಸಿದರೆಂಬುದಾಗಿ ತಿಳಿದುಬರುತ್ತದೆ.

**ಶ್ರೀ ಪುರಂದರ ದಾಸರು**

ಕರ್ನಾಟಕ ಸಂಗೀತ ಪಿತಾಮಹರೆನಿಸಿದ ಶ್ರೀ ಪ್ರರಂದರದಾಸರು ಶ್ರೀ ವ್ಯಾಸರಾಯರ ಶಿಷ್ಯಶ್ರೇಷ್ಠರಲ್ಲಿ ಒಬ್ಬರು. ಇವರು ಪುನಾದ ಪುರಂದರಗಡ ಎಂಬ ಊರಿನಲ್ಲಿ ಜನಿಸಿದರು. ಇವರ ತಂದೆ ವರದಪ್ಪ ನಾಯಕ ಹಾಗೂ ತಾಯಿ ಕಮಲಾಂಬ. ಇವರ ಮೊದಲ ಹೆಸರು ಶ್ರೀನಿವಾಸ. ಶೀನಪ್ಪ ಎಂದು ಇವರನ್ನು ಕರೆಯುತ್ತಿದ್ದರು. ಚಿಕ್ಕಂದಿನಲ್ಲಿಯೇ ಶಿಕ್ಷಣ ಪಡೆದು ಸಂಸ್ಕೃತ, ಕನ್ನಡ, ಶಾಸ್ತ್ರ ಸಂಗೀತಗಳಲ್ಲಿ ಒಳ್ಳೆಯ ಪಾಂಡಿತ್ಯ ಪಡೆದ ಇವರಿಗೆ ೧೬ನೆಯ ವಯಸ್ಸಿನಲ್ಲಿ ವಿವಾಹವಾಯಿತು. ಇವರ ಹೆಂಡತಿಯ ಹೆಸರಯು ಸರಸ್ವತೀಬಾಯಿ.

ರತ್ನಪಡಿ ವ್ಯಾಪಾರಿಯಾಗಿದ್ದ ಇವರ ತಂದೆಯು ಮರಣಿಸಿದ ನಂತರ ಶ್ರೀನಿವಾಸರು ತಂದೆಯ ಕಸುಬನ್ನು ಮುಂದುವರೆಸಿ, ವ್ಯಾಪರದಲ್ಲಿ ಅಪಾರ ಹಣವನ್ನು ಗಳಿಸಿ 'ನವಕೋಟಿ ನಾರಾಯಣ' ಎಂಬ ಬಿರುದಿಗೆ ಪಾತ್ರರಾದರು. ಶ್ರೀನಿವಾಸರು ಮಹಾಜಿಪುಣ. ಇವರ ಹೆಂಡತಿ ಮಹಾದೈವಭಕ್ತಿ. ಸರಸ್ವತೀಬಾಯಿಯವರು ಧರಿಸಿದ್ದ ಮೂಗುತಿಯೇ ಇವರ ಮನಃ ಪರಿವರ್ತಿಸಲು ಕಾರಣವಾಯಿತೆಂಬುದಾಗಿ ಪ್ರತೀತಿ. (ಮೂಗುತಿ ಕಥೆ) ನಂತರ ಶ್ರೀನಿವಾಸರು ತಮ್ಮ ಬಳಿಯಿದ್ದ ಸರಲೈಶ್ವರ್ಯವನ್ನು ಶ್ರೀಹರಿಯ ಹೆಸರಿನಲ್ಲಿ ದಾನಮಾಡಿ, ಹರಿದಾಸರಾದರೆಂಬುದಾಗಿ ತಿಳಿದುಬರುತ್ತದೆ. ಕತೆ ಏನೇ ಇದ್ದರೂ ಶ್ರೀನಿವಾಸ ನಾಯಕರು ಪುರಂದರರಾಗುವಲ್ಲಿ ಸರಸ್ವತೀಬಾಯಿಯವರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಪುರಂದರರ ಒಂದು ಕೃತಿಯಲ್ಲಿಯೇ ಇದಕ್ಕೆ ಉತ್ತರವಿದೆ.

| | | |
|---|---|---|
| ದಂಡಿಗೆ | ಬೆತ್ತ | ಹಿಡಿಯುವುದಕ್ಕೆ |
| ಮಂಡೆ | ತಗ್ಗಿಸಿ | ನಾಚುತಲಿದ್ದೆ |

ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ

ಎಂಬುದಾಗಿ ಹೆಂಡತಿಯನ್ನು ಕುರಿತಾಗಿ ಹಾಡಿದ್ದಾರೆ. ನಂತರ ಇವರು ವ್ಯಾಸರಾಯರಲ್ಲಿ ಶಿಷ್ಯತ್ವ ಪಡೆದು ಹರಿದಾಸ ಕೂಟಕ್ಕೆ ಸೇರಿ ಪುರಂದರದಾಸರೆನಿಸಿದರು. ವ್ಯಾಸರಾಯರ ಬಗೆಗೆ ಪುರಂದರರು ತಮ್ಮ ಒಂದು ರಚನೆಯಲ್ಲಿ ವ್ಯಾಸರಾಯರ ಚರಣಕಮಲ ದರುಶನವೆನಗೆ, ಏಸು ಜನ್ಮದ ಸುಕೃತಫಲದಿ ದೊರಕಿತೋ ಎನ್ನ ಎಂದು ಗುರುಸ್ಮರಣೆ ಮಾಡಿದ್ದಾರೆ.

ಪುರಂದರದಾಸರು ಭಾರತದ ಪುಣ್ಯಕ್ಷೇತ್ರಗಳ ದರ್ಶಮಾಡಿ, ಆ ಕ್ಷೇತ್ರಗಳ ದೇವರನ್ನು ಕುರಿತು ಹಾಡುಗಳನ್ನು ರಚಿಸಿದರು. ಇವರ ಜ್ಞಾನ ಸಂಪಾದನೆ ಅಪಾರವಾದುದು. ಭಕ್ತಿ ಅಗಾಧವಾದುದು. ಹರಿದಾಸ ಪಂಥದಲ್ಲಿ ಇವರದು ಅಗ್ರಸ್ಥಾನ, ಪಂಡಿತ ಪಾಮರರಾದಿಯಾಗಿ ಎಲ್ಲರ ನಾಲಗೆಯಲ್ಲೂ ಇವರ ರಚನೆಗಳು ನಲಿದಾಡುತ್ತವೆ. ತಾವು ರಚಿಸಿದ ಹಾಡುಗಳನ್ನು ಹಾಡುತ್ತಾ, ತಂಬೂರಿಯನ್ನು ಮೀಟುತ್ತಾ, ಬೀದಿ ಬೀದಿಯಲ್ಲಿ ಸಂಚರಿಸಿ ಭಗವದ್ಭಕ್ತಿಯನ್ನು ಸಾಮಾನ್ಯರಿಗೂ ತೋರಿಸದರು. ಹೀಗೆ ಇವರು ರಚಿಸಿದ ಕೃತಿಗಳು ಒಟ್ಟು ನಾಲ್ಕು ಲಕ್ಷ ಇಪ್ಪತ್ತೈದು ಸಾವಿರವೆಂದು ಅವರ ಒಂದು ಕೃತಿಯಿಂದಲೇ ತಿಳಿಯುತ್ತದೆ.

ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಕೃತಿಯು
ಕಂತುಜನಕನ ನಾಮ ಘನಮಹಿಮೆ
ಸಂತಸದಿ ಶ್ರುತಿ ಸ್ಮೃತಿ ಸಮ್ಮತದಿಂದ
ಪುರಂದರವಿಠಲ ವ್ಯಾಸಮುನಿಗಳು ಪೇಳಿಸಿದರು

ಇವುಗಳಲ್ಲಿ ತೀರ್ಥಕ್ಷೇತ್ರ ಮಹಿಮೆ, ಮಧ್ವಮತ ಹಾಗೂ ಗುರುಪರಂಪರೆ, ಪೌರಾಣಿಕ ಕತೆಗಳು, ದೇವತಾಮೂರ್ತಿ ಧ್ಯಾನ, ಸುಳಾದಿಗಳು, ಉಗಾಭೋಗಗಳು, ದೇವರನಾಮ ಮುಂತಾದವುಗಳಿವೆ. ಇಷ್ಟಾಗಿಯೂ ಇವರ ರಚನೆಗಳು ನಮಗೆ ಲಭ್ಯವಾಗಿರುವುದು ಒಂದು ಸಾವಿರವನ್ನೂ ಮೀರಲಾರದು.

'ಪುರಂದರ ವಿಠಲ' ಎಂಬ ಅಂಕಿತದಲ್ಲಿ ಸಾಹಿತ್ಯ ರಚನೆ ಮಾಡಿರುವ ಇವರು ಸಂಗೀತದ ಕಡೆಗೂ ಗಮನಕೊಟ್ಟರು ತಮ್ಮ ಸಾಹಿತ್ಯ ಸಾಮನ್ಯ ಜನರನ್ನೂ ಮುಟ್ಟಬೇಕೆಂಬ ಉದ್ದೇಶದಿಂದ ತಮ್ಮ ರಚನೆಗಳಿಗೆ ಜನಪದ ಸಂಗೀತದ ಮಟ್ಟುಗಳನ್ನು ಅಳವಡಿಸಿದರು. ಬಹುಶಃ ಹರಿದಾಸರ ರಚನೆಗಳಲ್ಲಿ ಪುರಂದರರ ಕೃತಿಗಳು ಪ್ರಸಿದ್ಧಿ ಪಡೆಯಲು ಈ ಗೇಯಗುಣವೂ ಕಾರಣ. ಇವರ ಸಮಕಾಲೀನರಾದ ಕನಕದಾಸರೂ ಈ ಹಾದಿಯಲ್ಲಿ ಸಾಗಿದ್ದಾರೆ. ಬದುಕಿಗೆ ಭಗವದ್ಭಕ್ತಿ ತುಂಬಾ ಮುಖ್ಯ ಎಂದಿರುವ ಇವರು ನವವಿಧ ಭಕ್ತಿಯ ಸಂಕೀರ್ತನೆಯನ್ನು ಬೆಳೆಸಿದರು.

"ಕೇಳನೋ ಹರಿ ತಾಳೆನೋ
ತಾಳ ಮೆಳಗಳಿದ್ದು ಪ್ರೇಮವಿಲ್ಲದ ಗಾನ" ಎಂದಿದ್ದಾರೆ.

ಪುರಂದರರ ಜ್ಞಾನ ಮಾರ್ಗದೇಶಿಗಳೆರಡರ ಸಂಗಮ. ಇವರು ತಮ್ಮ ಹಾಡುಗಳಿಗೆ ಜನಪದ ಮಟ್ಟುಗಲನ್ನು ಅಳವಡಿಸುವ ಮೂಲಕ ದೇಶೀ ಮನೋಧರ್ಮವನ್ನು ಮೆರೆದಿದ್ದಾರೆ. ಇದರ ಜೊತೆಗೆ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಿಕೊಡುವ ಮೂಲಕ ಮಾರ್ಗದ ಪ್ರೌಢಿಮೆಯನ್ನು ಮೆರೆದಿದ್ದಾರೆ. "ಪುರಂದರರ ಕಾಲಕ್ಕೆ ಹಿಂದೆ ಖರಹರಪ್ರಿಯ ರಾಗವನ್ನು ಶುದ್ಧ ರಾಗವನ್ನಾಗಿ ಗ್ರಹಿಸುವ ರೂಢಿಯಿದ್ದಿತು".[10] ಆದರೆ ಪುರಂದರರು ಖರಹರಪ್ರಿಯ ರಾಗದ ಬದಲಿಗೆ ಮಾಯಮಾಳವಗೌಳ ರಾಗವನ್ನು ಶುದ್ಧಮೇಳವೆಂದು ಕರೆದು,

ಈ ರಾಗದಿಂದ ಸಂಗೀತಾಭ್ಯಾಸವು ಪ್ರಾರಂಭವಾಗುವ ವ್ಯವಸ್ಥೆ ಮಾಡಿದರು. ಈ ರಾಗವು ಸಂಪೂರ್ಣ ರಾಗವಾಗಿದ್ದು, ಹಾಡಲು ಸರಳ, ಸುಲಭವೆಂದು, ಇದರಲ್ಲಿ ಸರಳವರಸೆ, ಜಂಟಿವರಸೆ, ಸಪ್ತತಾಳಗಳ ಅಲಂಕಾರಗಳ ಜೊತೆಗೆ, ಇದರಲ್ಲಿಯೇ ಜನ್ಯವಾದ 'ಮಲಹರಿ' ರಾಗದಲ್ಲಿ ಸರಳವಾದ ಪಿಳ್ಳಾರಿ ಗೀತೆಗಳನ್ನು ರಚಿಸಿದರು. ಕರ್ನಾಟಕ ಸಂಗೀತವು ಈ ಅಭ್ಯಾಸ ಗಾನದಿಮದಲೇ ಪ್ರಾರಂಭವಾಗುತ್ತದೆ. ಹೀಗೆ ಕರ್ನಾಟಕ ಸಂಗೀತಕ್ಕೆ ಒಂದು ಚೌಕಟ್ಟನ್ನು ನಿರ್ಮಿಸಿ, ಅದಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ ಶ್ರೀ ಪುರಂದರದಾಸರನ್ನು "ಕರ್ನಾಟಕ ಸಂಗೀತ ಪಿತಾಮಹ" ಎಂದು ಕರೆಯಲಾಗಿದೆ.

ಪುರಂದರರು ಅಂತರಂಗ ಶುದ್ಧಿಯಿಲ್ಲದ ಯಾವ ಪೂಜೆಯೂ ಮಡಿಯೂ ವ್ಯರ್ಥ ಎಂದಿದ್ದಾರೆ.

"ಕುಟಿಲದವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟಿಯನ್ನಡುವ ಮನುಜರು ಮನದಲಿ
ವಿಠಲನ ನೆನೆದರೆ ಏನು ಫಲ"

"ಮಡಿ ಮಡಿಯೆಂದು ಮುಮ್ಮೂರು ಹಾರುತಿ
ಮಡಿಯಲ್ಲಿ ಬಂದಿತೋ ಬಿಕನಾಸಿ"

ಹೀಗೆ ಇವರು ಡಾಂಭಿಕ ಭಕ್ತಿ ತೋರುವ ಮಂದಿಯನ್ನು ಯಾವುದೇ ಮೂಲಾಜಿಲ್ಲದೆ ನಿರಾಕರಸಿದ್ದಾರೆ. ಹರಿಭಕ್ತಿಯ ಜೊತೆಗೆ ಬದುಕಿನ ಎಲ್ಲ ಮಜಲುಗಳಿಗೂ ಸ್ಪಂದಿಸುವ ಇವರ ರಚನೆಗಳ ಸಮಾಜದ ಓರೆಕೋರೆಗಳನ್ನು ತಿದ್ದುವ ನಿಟ್ಟಿನಲ್ಲೂ ಸಾರ್ಥಕ್ಯವನ್ನು ಪಡೆದಿವೆ. ಹೀಗಾಗಿ ಇವರ ರಚನೆಗಳು ಇಂದಿಗೂ ಪ್ರಸ್ತುತ. ಇವರು ತಮ್ಮ ಕೊನೆಯ ದಿನಗಳನ್ನು ಹಂಪಿಯಲ್ಲಿ ಕಳೆದು, ಅಲ್ಲಿಯೇ ಕ್ರಿ.ಶ. ೧೫೬೫ರಲ್ಲಿ ಪುಷ್ಯ ಬಹುಳ ಅಮವಾಸ್ಯೆಯಂದು ನಿಧನರಾದರೆಂದು ತಿಳಿದುಬರುತ್ತದೆ. ಇವರ ನೆನಪಾಗಿ ಹಂಪೆ'ಯಲ್ಲಿ ಪುರಂದರ ಮಂಟಪವಿದೆ. ಇಂದಿಗೂ ಈ ಕ್ಷೇತ್ರದಲ್ಲಿ 'ಪುರಂದರ ದಸರ ಆರಾಧನೆ' ಯನ್ನು ಬಹಳ ವಿಜೃಂಭಣೆಯಿಮದ ಆಚರಿಸಲಾಗುತ್ತಿದೆ.

**೫. ಶ್ರೀ ಕನಕದಾಸರು**

"ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ
ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ"

ಕನಕದಾಸರೆಂದ ಕೂಡಲೇ ನೆನಪಿಗೆ ಬರುವುದು ಈ ಪ್ರಸಿದ್ಧವಾದ ಭಕ್ತಿಪೂರ್ವಕ ರಚನೆ. ಕನಕದಾಸರು ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ವೀರಪ್ಪ ಹಾಗೂ ತಾಯಿ ಬುಚ್ಚಮ್ಮ. ಇವರ ತಂದೆ ಹಾಗೂ ಪೂರ್ವಿಕರು ವಿಜಯನಗರದ ಅರಸರ ಬಳಿ ದಂಡನಾಯಕರಾಗಿ ಸೇವೆ ಸಲ್ಲಿಸುತ್ತಿದ್ದರು. ತಿರುಪತಿದ ತಿಮ್ಮಪ್ಪನ ವರಪ್ರಸಾದದಿಂದ ಹುಟ್ಟಿದ ಮಗನಿಗೆ ತಿಮ್ಮಪ್ಪ ಎಂದು ಹೆಸರಿಟ್ಟರು. ನಂತರ ಚಿನ್ನದ ನಿಧಿ ಸಿಕ್ಕು, ಅದನ್ನು ಜನರಿಗೆ ಹಾಗೂ ದೇವಾಲಯ ಜೀರ್ಣೋದ್ಧಾರಕ್ಕಾಗಿ ಹಂಚಿದ್ದರಿಂದ ಕನಕಪ್ಪ ಆಗಿ, ದಂಡನಾಯಕ ಪದವಿ ಗಳಿಸಿದಾಗ ಕನಕನಾಯಕನಾಗಿ, ದಾಸ ದೀಕ್ಷೆಯನ್ನು ಪಡೆದ ನಂತರ ಕನಕದಾಸರಾಗಿ ತಮ್ಮ ಇಷ್ಟದೇವತೆಯಾದ "ಕಾಗಿನೆಲೆಯ ಆದಿಕೇಶವ"ನ ಅಂಕಿತದಲ್ಲಿ ಹರಿದಾಸ ಸಾಹಿತ್ಯವನ್ನು ರಚಿಸಿದರು.

ವ್ಯಾಸರಾಯರ ಶಿಷ್ಯಶ್ರೇಷ್ಠರಲ್ಲಿ ಒಬ್ಬರಾದ ಕನಕದಾಸರು, ಪ್ರರಂದರರ ಸಮಕಾಲೀನ ರಾಗಿ, ಹರಿಭಕ್ತಿಯಲ್ಲಿ ಅವರಿಗೆ ಸರಿಸಮವಾಗಿ ನಿಂತು, ಅಸೂಯಾಪರರ ನಡುವೆಯೂ ಗುರುವಿನ ಅನುಗ್ರಹಕ್ಕೆ ಪಾತ್ರರಾದರು. ಕನಕರ ಭಕ್ತಿನಿಷ್ಠೆ ಎಷ್ಟಿತ್ತೆಂಬುದು ಬಾಳೇಹಣ್ಣಿನ ಪ್ರಸಂಗ

ತಿಳಿಸಿದರೆ, ಮನುಷ್ಯನ ಜಾತಿ, ಬಣ್ಣಗಳಿಗಿಂತ ಅವನ ವಿಚಾರ, ಹಾಗೂ ಸನ್ನಡತೆ ಮುಖ್ಯ ಎಂಬುದನ್ನು ರಾಮಧಾನ್ಯ ಚರಿತೆಯಲ್ಲಿ ತಿಳಿಯಬಹುದು. ಅಪಾರ ಜ್ಞಾನ ಸಂಪಾದನೆ ಮಾಡಿದ್ದ ಕನಕದಾಸರು ದೇವರನಾಮಗಳಲ್ಲದೆ, ನಳಚರಿತ್ರೆ, ಹರಿಭಕ್ತಿಸಾರ, ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ ಎಂಬ ಗ್ರಂಥಗಳನ್ನೂ, ಕನಕನ ಮಂಡಿಗೆಗಳು ಹಾಗೂ ನರಸಿಂಹ ಸ್ತೋತ್ರಗಳೂ ರಚಿಸಿದರು. ಇವರು ತಮ್ಮ 'ಮೋಹನ ತರಂಗಿಣಿ'ಯಲ್ಲಿ ಶ್ರೀಕೃಷ್ಣನೊಂದಿಗೆ ಶ್ರೀ ಕೃಷ್ಣದೇವರಾಯನನ್ನು ಸಮೀಕರಿಸುವುದು ಜೊತೆಗೆ ದವಿಜಯನಗರದ ಜನಜೀವನವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ.

ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದಂತೆಯೂ ಕನಕದಾಸರಿಗೂ ಪಾಂಡಿತ್ಯವಿತ್ತೆಂದು ಅವರ ರಚನೆಗಳಲ್ಲಿ ಕಂಡುಬರುವ ರಾಗಗಳು, ವಾದ್ಯಗಳ, ಹೆಸರುಗಳು ಮುಂತಾದವುಗಳಿಂದ ತಿಳಿದು ಬರುತ್ತದೆ. ಜೊತೆಗೆ ಸಾಹಿತ್ಯ ಸಂಗೀತದಲ್ಲಿ ಜನಪದ ಮನೋಧರ್ಮವನ್ನು ಮೆರೆದಿದ್ದಾರೆ.

ದ್ಯಾವಿ ನಮ್ಮ ದ್ಯಾವರು ಬಂದರು
ಬನ್ನಿರೆ ನೋಡಬನ್ನಿರೆ

"ಡೊಳ್ಳಿನ ಮೇಲ್ ಕೈಯ ಭರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಟಾನ್ಯ್ಯ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಯ್ಯ".

ಹೀಗೆ ಜನಪದ ಮನೋಧರ್ಮ ಹಾಗೂ ಶಾಸ್ತ್ರದ ಪ್ರೌಢತೆಗಳನ್ನು ಒಳಗೊಂಡ ಇವರ ರಚನೆಗಳು ಇಂದಿಗೂ ಪ್ರಸ್ತುತ.

ದಾಸ್ಯ ಭಕ್ತಿ ನಿವೇದನೆಯಲ್ಲಿ ಕನಕದಾಸರದು ಅತ್ಯಂತ ಮನೋಜ್ಞರಚನೆಗಳು. ಬಹುಶಃ ಬದುಕಿನ ಅನುಭವವೂ ಇವರ ರಚನೆಗಳನ್ನು ಪುಷ್ಟಿಗೊಳಿಸಿರಲಿಕ್ಕೆ ಸಾಕು.

"ದಾಸ ದಾಸರ ಮನೆಯ ದಾಸಿಯರ ಮಗನಾನು
ಸಾಸಿರ ನಾಮದೊಡೆಯ ರಂಗಯ್ಯನ ಮನೆಯ"

"ದಾಸನಾಗಬೇಕು ಸದಾಶಿವನ
ದಾಸನಾಗಬೇಕು"

"ದಾಸನಾಗೋ ಭವಪಾಶನೀಗೋ"

"ದಾಸಾರ್ಯರ ದಾಸರದಾಸ ನಾನು ಬಾಡ
ದೀಶ ಕಾಯ್ದುಕೊಳ್ಳು"

ಹೀಗೆ ಅತ್ಯಂತ ಹೃದಯಸ್ಪರ್ಶಿಯಾಗಿ ಹರಿಯಲ್ಲಿ ಭಕ್ತಿ ನಿವೇದನೆ ಮಾಡಿಕೊಂಡ ಕನಕದಾಸರು ಸುಮಾರು ೯೯ ವರ್ಷಗಳ ತುಂಬು ಜೀವನ ನಡೆಸಿ, ತಮ್ಮ ಕೊನೆಯ ದಿನಗಳನ್ನು ಕಾಗಿನೆಲೆಯಲ್ಲಿ ಕಳೆದರೆಂಬುದಾಗಿ ತಿಳಿದುಬರುತ್ತದೆ.

ಹೀಗೆ ವಿಜಯನಗರ ಅವಧಿಯ ಲಕ್ಷ್ಯ ಲಕ್ಷಣ ಸಂಗೀತವು ಕರ್ನಾಟಕ ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕೊಡುಗೆ. ಅಂದಿನ ೧೫-೨೦ ಮೇಳಗಳ ಸಂಗೀತವು ತದನಂತರದಲ್ಲದಿ ಬೆಳೆದು ೭೨ ಮೇಳಗಳನ್ನು ಹೊಂದಿದೆ. ಅಂದಿನ ಜನಕ ಜನ್ಯ ಪದ್ಧತಿಯೇ ಇಂದಿಗೂ ಬಳಕೆಯಲ್ಲಿದೆ. ತಾಳಗಳಿಗೆ ಸಂಬಂಧಿಸಿದಂತೆ ಅಂದಿನ ದೇಶೀ ತಾಳಗಳಾಗಿದ್ದ ೩, ೪, ೫, ೬, ೭, ೯ ಈ ರೀತಿಯ ಅಕ್ಷರ ಕಾಲಗತಿಗೆ, ಪುರಂದರರು ಹಾಕಿಕೊಟ್ಟ ಸಪ್ತತಾಳಗಳ ಪದ್ಧತಿಯೇ ಇಂದಿನ ಸಂಗೀತ ಭದ್ರ ಆಡಿಪಾಯವೆನಿಸಿದೆ. ಕರ್ನಾಟಕ ಸಂಗೀತವು ದಕ್ಷಿಣಾದಿ ಸಂಗೀತವೆಂದು ಕರೆಯಲ್ಪಟ್ಟು, ಪುರಂದರರು ಹೇಳಿದ ಮಾಯಮಾಳವ ಗೌಳ ರಾಗವೇ ಅಭ್ಯಾಸಗಾನದ ರೂಪದಲ್ಲಿ ಶುದ್ಧರಾಗವಾಗಿ ಇಂದಿಗೂ ಬಳಕೆಯಲ್ಲಿದೆ.

ಸಂಗೀತಶಾಸ್ತ್ರದ ಪ್ರೌಢತೆಯೊಡನೆ, ಸರಳವಾದ ಸಾಹಿತ್ಯಕ್ಕೆ ರಾಗ, ತಾಳಗಳ ಮೂಲಕವಾಗಿ ದೇಶೀಯತೆಯ ಮೆರುಗನ್ನು ನೀಡಿದ ಹರಿದಾಸರ ಕಾರ್ಯ ಸ್ತುತ್ಯಾರ್ಹವಾದುದು. ವಿಜನಯಗರದ ಅರಸದಿಂದ ಪ್ರೋತ್ಸಾಹಿತರಾಗಿ ಮನ್ನಣೆಗೆ ಪಾತ್ರರಾಗಿ ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅತ್ಯಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ. ತನ್ಮೂಲಕ ವೈಯಕ್ತಿಕ ಪ್ರತಿಭೆಯನ್ನು ಮೆರೆಯುವುದರ ಜೊತೆಗೆ ಸಮಾಜಕ್ಕೂ ಮುಖಾಮುಖಿಯಾಗಿದ್ದಾರೆ. ಈ ನಿಟ್ಟಿನಲ್ಲಿ ಬದುಕಿನ ಎಲ್ಲ ಮಜಲುಗಳಿಗೂ ಸ್ಪಂದಿಸುವ ಇವರ ರಚನೆಗಳು ಇಂದಿಗೂ ಪ್ರಸ್ತುತ.

ಒಟ್ಟಾರೆಯಾಗಿ ಹೇಳುವುದಾದರೆ ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ವಿಜಯನಗರದ ಕೊಡುಗೆ ಅತ್ಯಂತ ಮೌಲಿಕವಾದುದು. ಸಂಗೀತದ ಲಕ್ಷ್ಯ ಲಕ್ಷಣಗಳೆರಡೂ ನಿಟ್ಟಿನ ರಚನೆಗಳನ್ನು ತಾವು ಇಲ್ಲಿ ಕಾಣುತ್ತೇವೆ. ಅದರ ಜೊತೆಗೆ ಸಾಹಿತ್ಯ ಹಾಗೂ ಸಂಗೀತಗಳೆರಡನ್ನು ಒಳಗೊಂಡು ಮಾರ್ಗ ಮತ್ತು ದೇಶೀ ಮನೋಧರ್ಮಗಳ ಸಮ್ಮಿಲನವಿದೆ. ಸಂಸ್ಕೃತ ಕನ್ನಡ ರಚನಾ ವೈವಿಧ್ಯವಿದೆ. ಗಾಯನ, ವಾದನ, ನರ್ತನಗಳನ್ನು ಒಳಗೊಂಡಂತೆ ವ್ಯಷ್ಟಿ ಪ್ರತಿಭೆಯ ಜೊತೆಯಲ್ಲಿ ಸಮಷ್ಟಿಯ ಸಂಗಮವಿದೆ. ಹೀಗಾಗಿ, ಭಾರತೀಯ ಸಂಗೀತ ಇತಿಹಾಸದಲ್ಲಿ ವಿಜಯನಗರ ಕಾಲದ ಸಂಗೀತವು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ.

[1] ವಿವರಕ್ಕೆ ನೋಡಿ. ಪ್ರವಾಸಿ ಕಂಡ ವಿಜಯನಗರ, ಸಂ. ಬಿ.ಎ. ವಿವೇಕ ರೈ. ಪು. ೫, ೨೨, ೪೦.

[2] ಅದೇ, ಪು. ೬೩.

[3] ಅದೇ, ಪು. ೮೨.

[4] Epigraphia Carnatica, XII, CK. 39.

[5] ಸಂಗೀತ ಪಾರಿಭಾಷಿಕ ಕೋಶ, ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ, ಸಂ. ೩, ಪು. ೨೭೮.

[6] ಕನಾಟಕ ಸಂಗೀತ ವಾಹಿನಿ, ಡಾ.ರಾ. ಸತ್ಯನಾರಾಯಣ, ಪು. ೧೩೨.

[7] ಸಂಗೀತ ಪಾರಿಭಾಷಿಕ ಕೋಶ, ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ, ಸಂ. ೩, ಪು. ೮೧೮.

[8] ಕರ್ನಾಟಕ ಸಂಗೀತ, ಎಲ್. ರಾಜಾರಾವ್, ಪು. ೧೭೨.

[9] ಸಮಗ್ರ ದಾಸ ಸಾಹಿತ್ಯ, ಸಂ. ೧, ಪು. ೨೭.

[10] ಕರ್ನಾಟಕ ಸಂಗೀತ ಸುಧಾ, ರಾನರತ್ನಂ ವಿ, ವಿ.ಎಸ್. ಸಂಪತ್ಕುಮಾರಾಚಾರ್ಯ, ಪು. ೨೪೧.

# ಭಾಗ ೨ – ಕ್ರೀಡೆ

## ೧೫. ವಿಜಯನಗರದ ಶಾಸನಗಳಲ್ಲಿ ಕುಸ್ತಿಯ ಉಲ್ಲೇಖಗಳು

ವಿಜಯನಗರದಲ್ಲಿ ಕುಸ್ತಿಯ ಕಲೆಯು ಮಲ್ಲಕಾಳಗ, ಬಾಹುಯುದ್ಧ, ಗರಡಿ ವಿದ್ಯೆ ಮುಂತಾದ ಹೆಸರುಗಳಿಂದ ಅತ್ಯಂತ ಜನಪ್ರಿಯವಾಗಿತ್ತು. ಇದು ಸಮರ ಕಲೆಯ ಒಂದು ಭಾಗವಾಗಿ, ಮನರಂಜನೆಯ ಕ್ರೀಡಾ ಪ್ರದರ್ಶನವಾಗಿ ರಾಜರ ಮತ್ತು ಜನರ ಮನ್ನಣೆಗೆ ಪಾತ್ರವಾಗಿತ್ತು. ಅಬ್ದುಲ್ ರಜಾಕ್, ನ್ಯೂನಿಜ್, ಪಯಸ್ ಬಾರ್ಬೋಸಾ ಮುಂತಾದ ವಿದೇಶಿ ಪ್ರವಾಸಿಗರು ಕುಸ್ತಿಯಾಟವನ್ನು ಕಣ್ಣಾರೆ ಕಂಡು, ಹಲವು ಸನ್ನಿವೇಶಗಳನ್ನು ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ. ಕನ್ನಡದ ಮಹಾಕವಿಗಳಾದ ಕುಮಾರವ್ಯಾಸ, ರತ್ನಾಕರವರ್ಣಿ, ಷಡಕ್ಷರದೇವ, ನಂಜುಂಡ ಮುಂತಾದ ಕವಿಗಳು ತಮ್ಮ ಕಾವ್ಯ ಕೃತಿಗಳಲ್ಲಿ ಕುಸ್ತಿಕಾಳಗದ ಸಂದರ್ಭಗಳನ್ನು ಜೀವಂತವಾಗಿ ಚಿತ್ರಿಸಿದ್ದಾರೆ. ಹಜಾರರಾಮ ದೇವಾಲಯ, ವಿಜಯವಿಠ್ಠಲ ಸ್ವಾಮಿ ದೇವಾಲಯ, ಅಚ್ಯುತರಾಯ ದೇವಾಲಯ, ವಿರೂಪಾಕ್ಷ ದೇವಾಲಯ, ಮಹಾನವಮಿ ದಿಬ್ಬ, ಕೋಟೆಯ ಹೆಬ್ಬಾಗಿಲು ಇತ್ಯಾದಿ ಕಟ್ಟಡ, ಗೋಡೆ ನಿರ್ಮಾಣಗಳಲ್ಲಿ, ಪಟ್ಟಿಕೆಗಳಲ್ಲಿ ಕೆತ್ತಲಾಗಿರುವ ಉಬ್ಬು ಶಿಲ್ಪಗಳಲ್ಲಿ ಕುಸ್ತಿಯಾಟದ ನಾನಾ ಸನ್ನಿವೇಶಗಳು ಸೇರಿಕೊಂಡಿವೆ. ಮಹಾನವಮಿ ಉತ್ಸವ ಹಬ್ಬ ಹರಿದಿನ ಇತ್ಯಾದಿ ಕೆಲವು ವಿಶೇಷ ಸಂದರ್ಭಗಳಲ್ಲಿ ಕುಸ್ತಿ ಪಂದ್ಯಾಟವನ್ನು ಏರ್ಪಡಿಸುತ್ತಿದ್ದರು. ರಾಜರು ಪ್ರಜೆಗಳು ಇತ್ಯಾದಿಯಾಗಿ ಎಲ್ಲರೂ ಇಂತಹ ಪಂದ್ಯಾಟಗಳನ್ನು ನೊಡಿ ಸಂತೋಷಪಡುತ್ತಿದ್ದರು, ಜಟ್ಟಿಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ವಿಜಯನಗರದ ಕುಸ್ತಿಯ ಕುರಿತು ಶಾಸನಗಳಲ್ಲಿ ಏನಾದರೂ ಉಲ್ಲೇಖಗಳು ಸಿಗುತ್ತವೆಯೇ ಎಂದು ನೋಡಿದಾಗ, ಮಾಹಿತಿಗಳು ದೊರೆಯುವುದಿಲ್ಲ. ಜನಜೀವನದ ಒಂದು ಭಾಗವಾಗಿದ್ದ ಈ ಕಲೆಯ ಬಗೆಗೆ ಆಧಾರ ನೀಡಬಲ್ಲ ಶಾಸನಗಳು ಬಹಳಷ್ಟು ಇಲ್ಲ. ಲಭ್ಯವಾಗಿರುವ ಶಾಸನಗಳ ಪೈಕಿ ಅಪರೂಪ ಎನ್ನುವಂತೆ ಎರಡು ಶಾಸನಗಳು ಮುಖ್ಯವಾಗಿ ಗಮನ ಸೆಳೆಯುತ್ತವೆ. ಮಾಲ್ಯವಂತ ಬೆಟ್ಟದಿಂದ ತಳವಾರಘಟ್ಟದ ಕಡೆಗೆ ಹೋಗುವ ರಸ್ತೆಯಲ್ಲಿ ಅಸಂಖ್ಯಾತ ಗೋರಿಗಳನ್ನು ವಸತಿ ವಿನ್ಯಾಸಗಳನ್ನು ಒಳಗೊಂಡಿರುವ ಒಂದು ಬೆಟ್ಟದ ತಪ್ಪಲು ಪ್ರದೇಶದಲ್ಲಿ ಒಂದು ಶಾಸನ ದೊರೆತಿದೆ. ವಿಜಯನಗರದ ಪ್ರಜೆಗಳಾಗಿದ್ದ ಮುಸ್ಲಿಮರು ವಾಸವಾಗಿದ್ದ ನೆಲೆಯಿದು. ಇಲ್ಲಿರುವ ಅಸಂಖ್ಯಾತ ಕುರುಹುಗಳನ್ನು ಆಧರಿಸಿ ನಡೆದಿರುವ ಶೋಧನೆಗಳು ಇದನ್ನು ಸ್ಪಷ್ಟಪಡಿಸಿವೆ. ಇಲ್ಲಿರುವ ಅಹಮದ್ ಖಾನ್ ಧರ್ಮಶಾಲೆ (ಮಸೀದಿ) ಹತ್ತಿರದಲ್ಲಿರುವ ಮಂಟಪದ ಗುಮಡಿನಲ್ಲಿ ಶಾಸನವೊಂದನ್ನು ಕೆತ್ತಲಾಗಿದೆ.

**ಒಂದನೇ ಶಾಸನ : ಕುಸ್ತಿಯಲ್ಲಿ ಮುಸ್ಲಿಮರು**

ಕ್ರಿ.ಶ. ೧೪೪೧ರ ಕಾಲದ ಈ ಶಾಸನವು ಮುಸ್ಲಿಮ್ ಪೈಲ್ವಾನನೊಬ್ಬನ ಬಗ್ಗೆ ಉಲ್ಲೇಖ ನೀಡುತ್ತದೆ. "ಶ್ರೀಮತು ಹಾಮಾದಿಮ ಮೀರಿಪಾಲುವನನು ದಾವಿಮಯನ ಮಗ ಬರಿಯಮ ಕೊಟ್ಟ ಮನೆಯ ಕ್ರಯ ಗ(ದೆ) ಅಕ್ಷಾರದಲು ಆರುವರಾಹಕೆ ಬಿಟ್ಟ ಶಾಸನ ಮಲುಖಾನವ ಪಾಗೆ….."[1]. ಹಾಮಾದಿ ಮಮೀರಿ ಪಾಲುವಾನನು (ಮೀರ್ಪಹಿಲ್ ವಾನ್?) ಮತ್ತು ದಾವಿಮಯನ ಮಗ ಬರಿಯಮನು ಮಲುಖಾನನಿಗೆ ಮನೆಯೊಂದನ್ನು ಆರು ವರಾಹಗಳಿಗೆ ಕೊಂಡು ದಾನವಾಗಿ ಕೊಟ್ಟಿದ್ದು ಈ ಶಾಸನದ ಸಾರಾಂಶ.

ಈ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಮೀರಿಪಾಲುವಾನ'ಎಂಬ ವ್ಯಕ್ತಿಯ ಹೆಸರು 'ಮೀರ್ ಪಹೀಲ್ ವಾನ್' ಆಗಿರಬಹುದೆ ಎಂದು 'ಹಂಪಿ ಶಾಸನ' ಸಂಪುಟದ ಸಂಪಾದಕರು **'ಕಂಸದಲ್ಲಿ ಈ ಹೆಸರಿನ ಮುಂದೆ ಪ್ರಶ್ನಾರ್ಥಕ ಚಿಹ್ನೆ'**ಯಿಟ್ಟು ಸಮದೇಹ ವ್ಯಕ್ತಪಡಿಸಿದ್ದಾರೆ[2]. ಇದನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಕನ್ನಡ ಮತ್ತು ತೆಲಗು ಶಾಸನಗಳ ಮಾಧ್ಯಮಕ್ಕೆ ವಿಜಯನಗರ ರಾಜಧಾನಿಯ ಮುಸ್ಲಿಮ್ ಪ್ರಜೆಗಳ ಹೆಸರುಗಳು ದಾಖಲೆಗೆ ಒಗ್ಗಿ ಕೊಳ್ಳುತ್ತಿದ್ದ ಪ್ರಾರಂಭಿಕ ಪ್ರಕ್ರಿಯೆ ಆಗತಾನೆ ಶುರುವಾಗಿದ್ದಂತೆ ತೋರುತ್ತದೆ. ಮುಸ್ಲಿಮ್ ಜನಪದರ

ವಸ್ತುವಾಚಕ, ನಾಮವಾಚಕ ಪದಗಳನ್ನು ಉಚ್ಚಾರಕ್ಕೆ ತಕ್ಕಂತೆ ಬರೆಹಕ್ಕೆ ಇಳಿಸುವಾಗ ಅಲ್ಪಸ್ವಲ್ಪ ಕಾಗುಣಿತ ಬದಲವಣೆಗಳನ್ನು ಶಾಸನದ ಲಿಪಿಕಾರರು ಮಾಡಿಕೊಂಡಂತಿದೆ. ಆಹಮುದಖಾನ (ಅಹಮದ್ ಖಾನ್), ಮಸೂಜಿ (ಮಸೀದಿ), ಮಲುಖಾನ (ಮೌಲಾ ಖಾನ್), ಕಬಿರುರಾವುತ (ಕಬೀರ್ರಾಹುತ), ಗುಂಮಥ (ಗುಮ್ಮಟ), ಮುರಿದ (ಮುರೀದ್), ಮುಖಾತೀರ್ಥ (ತೀರ್ಥಸ್ಥಳ ಮಕ್ಕಾ), ಕಲಾಬನಾಣೆ (ಕರ್ಬಲಾ ಆಣೆ). ಇದೇ ರೀತಿ 'ಮೀರಿಪಾಲುವಾನ' ಎಂಬ ಬರೆಹದ ಉಚ್ಛಾರವು ಮೀರ್ಪಹಿಲ್ವಾನ್, ಮೀರ್ಪೈಲ್ವಾನ್ ಆಗಿದೆ. ಪೈಲ್ವಾನ್ ಎಂಬ ಪದವು ಆತನ ವೃತ್ತಿಗೆ ಅಥವಾ ಕರಗತ ಮಾಡಿಕೊಂಡಿದ್ದ ಕಲೆಗೆ ದ್ಯೋತಕವಾಗಿ, ಗುಣವಾಚಕ ಪದವಾಗಿ ಹೆಸರಿನ ಮುಮದೆ ಲಿಪಿಕಾರ ಸೇರಿಸಿದ್ದಾನೆ. ಆದ್ದರಿಂದ ಖಂಡಿತ ಈತ ಮಲ್ಲ ಕಲೆಯಲ್ಲಿ ಪಳಗಿದವನಾಗಿರಬೇಕೆಂದು ಇತ್ಯರ್ಥಕ್ಕೆ ಬರಬಹುದಾಗಿದೆ.

ಇದನ್ನು ಇನ್ನಷ್ಟು ಆಧಾರಗಳ ಮೂಲಕ ಸಮರ್ಥಿಸಿ ನೋಡಬಹುದು. ಹಂಪಿ ಪರಿಸರದಲ್ಲಿ ದೊರೆತಿರುವ ಶಾಸನಗಳ ಪೈಕಿ ಸುಮಾರು ಹತ್ತು ಶಾಸನಗಳು, ಮುಸ್ಲಿಮರು ವಿಜಯನಗರದಲ್ಲಿ ಸಮೃದ್ಧ ಬದುಕು ಸಾಗಿಸಿದರೆಂಬುದನ್ನು ಉಲ್ಲೇಖಿಸುತ್ತವೆ. ಪ್ರಭುತ್ವದ ಆಡಳಿತಕ್ಕೆ, ಸಂಬಂಧಪಟ್ಟ ಕೆಲವು ಸೇವೆಗಳಲ್ಲಿ, ಜನಜೀವನದ ವಿವಿಧ ಕ್ಷೇತ್ರಗಳಲ್ಲಿ ಅವರು ಎಲ್ಲರಂತೆ ಪರಿಶ್ರಮ ಹೊಂದಿದ್ದರೆಂದು ತಿಳಿಯುತ್ತದೆ. ಮುಖ್ಯವಾಗಿ ಸೈನ್ಯಬಲದಲ್ಲಿ ಅವರಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ವಿಜಯನಗರದ ಸೈನ್ಯವನ್ನು ಬಲಪಡಿಸುವುದಕ್ಕಾಗಿ ಎರಡನೇ ದೇವರಾಯನು ಅಶ್ವದಳ, ಪದಾತಿದಳ ಮತ್ತು ಬಿಲ್ಲುಪಡೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಕೊಂಡಿದ್ದನೆಂದು ತಿಳಿಯುತ್ತದೆ. ಈ ಮೂರು ವಿಧದ ಸಮರಕಲೆಗಳಲ್ಲಿ ಮುಸಲ್ಮಾನರು ಹೆಚ್ಚಿನ ಪರಿಶ್ರಮ ಹೊಮದಿರುವುದನ್ನ ಅರಿತಿದ್ದ ಆತನು ತನ್ನ ಸೈನ್ಯ ಸಂಘಟನೆಯಲ್ಲಿ ಅವರು ಸೇರುವುದಕ್ಕೆ ಉತ್ತೇಜನ ನೀಡಿದ್ದನು. "ಕ್ರಿ.ಶ. ೧೪೩೦ರ ಶ್ರೀರಂಗಪಟ್ಟಣದ ಶಾಸನವೊಂದರ ಪ್ರಕಾರ ಎರಡನೇ ದೇವರಾಯನು ಸೈನ್ಯ ವ್ಯವಸ್ಥೆಯಲ್ಲಿ ೧೦ ಸಾವಿರ ಮುಸ್ಲಿಮರ ಕುದುರೆಪಡೆಯನ್ನು ಹೊಂದಿದ್ದನು. ಯುದ್ಧ ಕಲೆಯಲ್ಲಿ ಪರಿಣತರಾದ ಮುಸ್ಲಿಮರನ್ನು ಸೇರಿಸಿಕೊಳ್ಳವುದರ ಮೂಲಕ ಆತ ಸೈನ್ಯ ಸಂಘಟನೆಯನ್ನು ಬಲಪಡಿಸಿದನು. ಅವರಿಗೆ ಅನೇಕ ಜಾಗೀರುಗಳನ್ನು ನೀಡಿದನು. ವಿಜಯನಗರದಲ್ಲಿ ಮಸೀದಿಗಳನ್ನು ನಿರ್ಮಿಸುವುದಕ್ಕೆ ಮತ್ತು ಮುಸಲ್ಮಾನರು ತಮ್ಮ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತನ್ನ ಅಧಿಕಾರಿಗಳಿಂದಾಗಲಿ, ಇತರ ಪ್ರಜೆಗಳಿಂದಾಗಲಿ ಅಡ್ಡಿಯಾಗಲಿ, ಅಪಚಾರವಾಗಲಿ ಆಗಕೂಡದೆಂದು ಆಜ್ಞೆ ಮಾಡಿದ್ದನು. ಅಲ್ಲದೆ ತನ್ನ ಸಿಂಹಾಸನದ ಮುಂದುಗಡೆ ಒಂದು ಉನ್ನತ ಪೀಠದಲ್ಲಿ ಪವಿತ್ರ ಕುರಾನಿನ ಪ್ರತಿಯನ್ನು ಇಡಬೇಕೆಂದು ಆಜ್ಞೆ ಮಾಡಿದ್ದನು. ಈ ಪವಿತ್ರ ಗ್ರಂಥಕ್ಕೆ ನಮಿಸುವುದರ ಮೂಲಕ ವಿಧೇಯರಾಗಿರುವಂತೆ ತನ್ನಲ್ಲೂ ವಿಶ್ವಾಸವನ್ನು ತೋರಬೇಕೆಂದು ಬಯಸಿದ್ದನು."[3]

ಸೈನ್ಯ ದಕ್ಷತೆಯನ್ನು ಹೆಚ್ಚಿಸುವ, ಸುಧಾರಿಸುವ, ವಿಶೇಷ ತರಬೇತು ನೀಡುವ ಪ್ರಕ್ರಿಯೆ ಮೊದಲನೇ ದೇವರಯನ ಕ್ರಿ.ಶ. (೧೪೦೬-೧೪೨೨) ಕಾಲದಲ್ಲೇ ಆರಂಭವಾದಂತೆ ಕಾಣುತ್ತದೆ. "ಒಂದನೇ ದೇವರಾಯನು ಅಶ್ವದಳದ ಮೌಲ್ಯವನ್ನು ಅರಿತವನಾಗಿದ್ದುದರಿಂದ ಅರೇಬಿಯಾ ಮತ್ತು ಪರ್ಶಿಯಾ ದೇಶಗಳಿಂದ ಕುದುರೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಂಡು ಅವುಗಳನ್ನು ಪಳಗಿಸಲು ಸಿಬ್ಬಂದಿಯನ್ನು ನಿಯಮಿಸಿದನು. ಅವನು ವಿದೇಶಿಯರನ್ನು ತನ್ನ ಸೇನೆಗೆ ನೇಮಕ ಮಾಡಿಕೊಂಡನು."[4]ಇದರಿಂದ ವಿಜಯನಗರದ ಸೈನಿಕ ವ್ಯವಸ್ಥೆಯಲ್ಲಿ ಸಮರ ಕಲೆಗಳನ್ನು ಕರಗತ ಮಾಡಿಕೊಂಡಿದ್ದ ಮುಸ್ಲಿಮರು ಅಸಂಖ್ಯಾತರಾಗಿದ್ದರು. ಅವರಲ್ಲಿ ಹಲವರು ಅಧಿಕಾರಿಗಳು ಆಗಿದ್ದರು. ಅಂತಹ ಅಧಿಕಾರಿಯೊಬ್ಬನ ಹೆಸರು ಕ್ರಿ.ಶ. ೧೪೩೯ನೇ ಅವಧಿಯ ಹಂಪಿ ಶಾಸನವೊಂದರಲ್ಲಿ ಕಾಣಿಸುತ್ತದೆ. "ಶ್ರೀ ವೀರಪ್ರತಾಪ ದೇವರಾಯ ಮಹಾರಾಯರ ಶ್ರೀಪಾದ ಸೇವೆಯ ಕಟಿಗೆಯ ಆಮುದಖಾನನು ರಾಯರಿಗೆ ಧರ್ಮವಾಗಬೇಕೆಂದು ಕಟ್ಟಿಸಿದ ಧರ್ಮಸಾಲೆ ಬಾವಿ……"[5] ಇಲ್ಲಿ ಉಲ್ಲೇಖಿಸಲಾಗಿರುವ 'ಧರ್ಮಸಾಲೆ' ಮುಸ್ಲಿಮರು ಪ್ರಾರ್ಥನೆ ಸಲ್ಲಿಸುವ ಮಸೀದಿ ಎಂಬುದು ವಾಸ್ತುನಿರ್ಮಾಣದ ಒಳಲಕ್ಷಣದಿಂದ ದೃಢಪಟ್ಟಿದೆ. ಈ ಮಸೀದಿಯ ತೊಲೆಯ ಮೇಲೆ ಈ ಶಾಸನ ಕೆತ್ತಿಸಿದ ವ್ಯಕ್ತಿ ಬಹುಶಃ ದಂಡವನ್ನು ಹಿಡಿಯುತ್ತಿದ್ದ ಒಬ್ಬ ಅಧಿಕಾರಿ ಅಹಮದ್ ಖಾನ್"[6] ಎಂದೂ ಡಾ. ಚನ್ನಬಸಪ್ಪ ಎಸ್. ಪಾಟೀಲರು ಮತ್ತು "ಕಟ್ಟಿಗೆ ಅಹಮದ್ ಖಾನ್ ಇಮ್ಮಡಿ ದೇವರಾಯನ ಅಂಗರಕ್ಷಕನಾಗಿದ್ದ. ಮಹಾರಾಜನಿಗೆ ಒಳ್ಳಯದಾಗಲೆಂದು ಆತ ಒಂದು ಅನ್ನಛತ್ರ ಕಟಟಿಸಿದ. ಈಗಲೂ ಅದನ್ನು ನೋಡಬಹುದು. ಅದರ ಪಕ್ಕದಲ್ಲೇ ಆತನ ಗೋರಿಯೂ ಇದೆ"[7] ಎಂದು ಡಾ. ವಸುಂಧರಾ ಫಿಲಿಯೋಜಾ ಅವರು ತಿಳಿಸುತ್ತಾರೆ. ಇವರಿಬ್ಬರ ಉಲ್ಲೇಖಗಳನ್ನು

ಅನುಸರಿಸಿ ಹೇಳುವುದಾದರೆ ಅಹಮದ್ ಖಾನ್ ಒಬ್ಬ ಸಾಮಾನ್ಯ ಪ್ರಜೆಯಾಗಿರದೆ ಇಮ್ಮಡಿ ದೇವರಾಯನ ಸೈನ್ಯದಲ್ಲಿ ಒಂದು ಪ್ರಮುಖ ಸ್ಥಾನ ಪಡೆದಿದ್ದನೆಂಬುದು ಖಚಿತವಾಗುತ್ತದೆ.

ಸಮರಕಲೆಯಲ್ಲಿ ನಿಷ್ಣಾತರಾದ ಮುಸ್ಲಿಮ್ ವೀರರ ಬಗ್ಗೆ ಮಾಹಿತಿಯನ್ನು ಕಲೆ ಹಾಕಲು ಕನ್ನಡದ ಗಂಡುಗಲಿ, ಕುಮ್ಮಟದುರ್ಗ-ಹೊಸಮಲೆದುರ್ಗದ ವೀರ ಕುಮಾರರಾಮನ ಕಾಲಕ್ಕೂ ಹೋಗಬಹುದು. ಕುಮಾರರಾಮನಿಗೆ ಆಪ್ತರಾಗಿದ್ದ, ಅಂಗರಕ್ಷಕರಾಗಿದ್ದ ಆತನವಾರಗೆಯ ಸುಮಾರು ೧೦೦ ರಷ್ಟು ಸ್ನೆಹಿತರ ಪಡೆಯಲ್ಲಿ ಬಾದೂರಖಾನ (ಕುಮಾರರಾಮನ ಆಶ್ರಯ ಪಡೆದವ), ಮಹಿಮಯ ಖಾನ, ಅಬ್ದುಲ್ಲಾನ ಎಂಬುವರೂ ಇದ್ದರು. ಪಳಗಿದವರಾಗಿದ್ದ ಅವರು ಕುಮಾರರಾಮನ ನಡೆಸಿದ ಯುದ್ಧಗಳಲ್ಲಿ ಪಾಲ್ಗೊಂಡು ವೀರತನ ಮರೆದಿದ್ದನ್ನು ನಾವು ಕಾಣುತ್ತೇವೆ.[8]

ಈ ಮೇಲಿನ ಎಲ್ಲ ವಿಚಾರಗಳನ್ನು ತಾಳೆಹಾಕಿ ನೋಡಿದಾಗ, ವಿಜಯನಗರದ ಸೈನ್ಯದಲ್ಲಿದ್ದ ಯೋಧರಿಗೆ ಸಮರಕಲೆಯ ಒಂದು ಪ್ರಕಾರವಾಗಿದ್ದ ಕುಸ್ತಿಕಲೆ ಕರಗತವಾಗಿತ್ತು. ಈ ಪಡೆಯಲ್ಲಿರಬಹುದಾದ ಮೀರ್ ಪೈಲ್ವಾನನು ಶಾಸನದ ಮಾಧ್ಯಮಕ್ಕೆ ದಾಖಲಾದ ಆ ಕಾಲದ ಓರ್ವ ಶ್ರೇಷ್ಠ ಕುಸ್ತಿಪಟು ಎಂದು ತೀರ್ಮಾನಕ್ಕೆ ಬರಬಹುದಾಗಿದೆ.

ಇದಕ್ಕೆ ಪೂರಕವಾಗಿ ಇನ್ನಷ್ಟು ಆಧಾರಗಳನ್ನು ಸಮೀಕರಿಸಿ ನೋಡಬಹುದು. ವಿಜಯನಗರ ಪರಂಪರೆಯ ಭಾಗವಾಗಿ ಬೆಳೆದು ಬಂದಿರುವ ಮತ್ತು ಉಳಿದುಕೊಂಡಿರುವ "ಹೊಸಪೇಟೆ ತಾಲೂಕಿನ ಗರಡಿಮನೆಗಳಲ್ಲಿ ಆಂಜನೇಯ, ಮೌಲಾಲಿ ಮತ್ತು ಕುಮಾರ ರಾಮರನ್ನು ಗರಡಿದೈವಗಳೆಂದು ಭಾವಿಸಿದ್ದಾರೆ. ಹಿಂದೂ-ಮುಸ್ಲಿಮ್ ಎಂಬ ಭೇದ ಭಾವನೆ ಇಲ್ಲದೆ ಇಲ್ಲಿ ಸಾಧನೆ ಮಾಡುತ್ತಾರೆ" ಎಂದು ಗರಡಿ ಸಂಪ್ರದಾಯದ ಬಗ್ಗೆ ಅಧ್ಯಯನ ನಡೆಸಿದ ಪಿ.ಹೆಚ್.ಡಿ. ಮಹಾಪ್ರಬಂಧದಲ್ಲಿ ತಿಳಿಸಲಾಗಿದೆ."[9]ಆಂಜನೇಯ, ಕುಮಾರ ರಾಮರು ವೀರತನಕ್ಕೆ ಪ್ರತೀಕವಾದಂತೆ ಮೌಲಾಲಿ ಸಹ ಆದರ್ಶಪ್ರಾಯರಾಗಿದ್ದಾರೆ. ಮಹಮ್ಮದ್ ಪೈಗಂಬರರ ಅಳಿಯರಾದ ಮತ್ತು ಹಸನ್-ಹುಸೇನರ ತಂದೆಯವರಾದ ಹಜ್ರತ್ ಅಲಿಯವರನ್ನು ಮುಸ್ಲಿಮರು 'ಶಕ್ತಿಯ ಸಂಕೇತ (Symbol of Power)ವೆಂದು ಭಾವಿಸುತ್ತಾರೆ. ಹೀಗಾಗಿ ಗರಡಿ ಕಲೆಗೆ ಮತ್ತು ವೀರತನಕ್ಕೆ ಜನಪದರು ಇವರನ್ನು ಆದರ್ಶವಾಗಿ ಪರಿಗಣಿಸಿರುವುದರಲ್ಲಿ ವಿಶೇಷಾರ್ಥವೂ ಅನನ್ಯತೆಯೂ ಪ್ರತಿಬಿಂಬಿತವಾಗುತ್ತದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಹಂಪಿಯ ಗುಂಡುಕಲ್ಲಿನ ಮೇಲೆ ಶಾಶ್ವತವಾಗಿ ಶಾಸನದ ರೂಪದಲ್ಲಿ ಉಳಿದುಕೊಂಡು 'ಮೀರಿಪಾಲುವಾನನು' ಮಲ್ಲಕಲೆಯಲ್ಲಿ ಅನುಭವ ಹೊಂದಿದ ಆ ಕಾಲದ ಪ್ರಸಿದ್ಧ ಪೈಲ್ವಾನಾಗಿರಬೇಕು ಎಂಬುದರ ಬಗ್ಗೆ ಅನುಮಾನ ಉಳಿಯಲಾರದು. ಮುಸ್ಲಿಮರನ್ನು ಉಲ್ಲೇಖಿಸುವ ಇತರ ಶಾಸನಗಳಾದರೂ (ಇವು ಹಂಪಿಯ ಶಾಸನಗಳು) ಏನನು ಹೇಳುತ್ತವೆ – ಮಿಯಾರಾವುತನಿಗೆ ಪುಣ್ಯವಾಗಬೇಕೆಂದು ಬಸವ..... ನಾಯಕನು 'ಗೋರಿ' 'ಮಸೂಜಿ'ಯನ್ನು ಕಟ್ಟಿಸಿದ್ದಾನೆ. ಪಿಲಿಕುಂಚಲಕ ಎಂಬುವನು ಬಯಿರಾವುತನಿಗೆ ಬಾಯಿಯನ್ನು ದಾನ ಮಾಡಿದ್ದಾನೆ. ಚಿಕ್ಕರಾಯರಿಗೆ ಪುಣ್ಯವಾಗಲೆಂದು ಶಕಲಜರಾವುತನು 'ಗುಂಮತ' ಕಟ್ಟಿಸಿದ್ದಾನೆ. ವೀರಪ್ರತಾಪದೇವರಾಯನಿಗೆ ಒಳ್ಳೆಯದಾಗಲೆಂದು ಕಟ್ಟಿಗೆಯ ಆಮುದಖಾನನು ಧರ್ಮಸಾಲೆ (ಮಸೀದಿ) ಮತ್ತು ಬಾವಿಯನ್ನು ಕಟ್ಟಿಸಿದ್ದಾನೆ. ಹೀಗೆ ಈ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಹೆಸರುಗಳು, ಮಾಡಿರುವ ದಾನಗಳು, ಕಟ್ಟಿಸಿರುವ ಗುಮ್ಮಟ ಮಸೀದಿಗಳ ಹಿನ್ನೆಲೆಯಲ್ಲಿ ಜಾತ್ಯಾತೀತ ಮನೋಭಾವವನ್ನು, ವಿಶೇಷ ಸಾಧನೆಗಳನ್ನು ಎತ್ತಿಹಿಡಿದಿವೆ. ಅದೇ ರೀತಿ ಮನೆಯನ್ನು ದಾನ ಮಾಡಿರುವ ವ್ಯಕ್ತಿ 'ಮೀರಿಪಾಲುವಾನ' ಹೆಸರಿನಲ್ಲಿನ ವಿಶೇಷತೆಯೇನೆಂದರೆ ಆತ ಪೈಲ್ವಾನಾಗಿದ್ದನೆಂಬುದೇ ಆಗಿದೆ.

ಇನ್ನು ಎರಡನೆಯ ಶಾಸನದ ಬಗ್ಗೆ ಪರಿಶೀಲಿಸುವಾ.

**ಎರಡನೇ ಶಾಸನ: ಕುಸ್ತಿಯಲ್ಲಿ ಮಹಿಳೆಯರು:** ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕ್ರಿ.ಶ. ೧೪೪೬ರ ಶಾಸನವೊಂದು ಕುಸ್ತಿ ಕಾಳಗಕ್ಕೆ ಇನ್ನೊಂದು ಆಧಾರವನ್ನು ಒದಗಿಸುತ್ತದೆ ಮತ್ತು ಈ ಕ್ಷೇತ್ರದಲ್ಲಿ ಮಹಿಳೆಯರು ಸಹ ಪರಿಶ್ರಮ ಹೋಂದಿದ್ದರೆಂಬ ವಿಚಾರದ ಮೇಲೆ ಬೆಳಕು ಚೆಲ್ಲುತ್ತದೆ. 'ಎಪಿಗ್ರಾಫಿಯಾ ಕರ್ನಾಟಕ'ದ ೭ನೇ ಸಂಪುಟದಲ್ಲಿ ಸೇರಿರುವ ಈ ಶಾಸನವನ್ನು ಉಲ್ಲೇಖಿಸುತ್ತಾ ಎನ್. ಸರಸ್ವತಿ ನಾಣಯ್ಯ ಅವರು 'ನಾಗನಗೌಡನ ಮಗ ಮಾದಿಗೌಡನು ಕುಸ್ತಿ ಯಾಡುತ್ತಿರುವಾಗ ಮರಣ ಹೊಂದಿ ಸ್ವರ್ಗ ಸೇರಿದನು. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿ ಪಟುವಿನೊಂದಿಗೆ ಕಾದು ತಾನೂ ಸ್ವರ್ಗ ಸೇರಿದಳು. ಈ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ನಿಲ್ಲಿಸಿದನು. ವೀರಗಲ್ಲಿನ ಮೇಲಿನ ಭಾಗದಲ್ಲಿ ಒಬ್ಬ ಕುಸ್ತಿಪಟ್ಟು ನಿಂತಿದ್ದಾನೆ. ಅವನ ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವಮ ಜುಟ್ಟು ಹಿಡಿದು ಬಲಗೈಯಲ್ಲಿ ಖಡ್ಗದಿಮದ ಅವನನ್ನು ಇರಿಯುತ್ತಿದ್ದಾಳೆ. ಇದರಿಂದ ಹಿರಿಯಕ್ಕ ವಿಜಯನಗರ ಕಾಲದಲ್ಲಿ ಪ್ರಖ್ಯಾತ ಕುಸ್ತಿಪಟುವಾಗಿದ್ದಳು ಎಂಬ ತೀರ್ಮಾನಕ್ಕೆ ಬಂದಿದ್ದಾರೆ."[10] 'ವಿಜಯನಗರದ ಕಾಲದ ಶಿಲ್ಪದಲ್ಲಿ ಮಹಿಳೆಯರು' ಕುರಿತು ಲೇಖನ ಬರೆದಿರುವ ಎನ್. ಸರಸ್ವತಿ ಅವರು ಈ ಮೇಲಿನ ಪ್ರತಿಪಾದನೆಯನ್ನು ಸಮರ್ಥಿಸಿದ್ದಾರಲ್ಲದೆ, ಹಿರಿಯಕ್ಕ ಆ ಕಾಲದ ಪ್ರಸಿದ್ಧ ಕುಸ್ತಿಪಟು ಎಂಬುದನ್ನು ಒಪ್ಪಿಕೊಂಡಿದ್ದಾರೆ.[11] ಆದರೆ, 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ'ಯ ಕುರಿತು ಸಂಶೋಧನ ಅಧ್ಯಯನ ನಡೆಸಿದ ಎಸ್.ವೈ. ಸೋಮಶೇಖರ್ ಅವರು ಹಿರಿಯಕ್ಕನನ್ನು ಕುಸ್ತಿಪಟುವಾಗಿ ಕಂಡೇ ಇಲ್ಲ. ಶತ್ರುವಿನೊಂದಿಗೆ ಹೋರಾಡಿದ ವೀರಮಹಿಳೆ. ಮಧ್ಯಯುಗದ ವೀರಮಹಿಳೆಗೆ ನೈಜ ದಾಖಲೆಯಾಗಿದೆ ಈ ಶಿಕಾರಿಪುರದ ವೀರಗಲ್ಲು ಎಂದು ತಮ್ಮ ಪ್ರಬಂಧದಲ್ಲಿ ಅಭಿಪ್ರಾಯ ಮಂಡಿಸಿದ್ದಾರೆ."[12]

ಮೇಲಿನ ಇಬ್ಬರ ಅಭಿಪ್ರಾಯಗಳಿಗೆ ಸೋಮಶೇಖರ್ ಅವರ ಅಭಿಪ್ರಾಯ ಸ್ವಲ್ಪ ಭಿನ್ನವಾಗಿದೆ. ಹಿರಿಯಕ್ಕನನ್ನು ವೀರಮಹಿಳೇಯ ಸ್ಥಾನದಲ್ಲಿ ನಿಲ್ಲಿಸುವುದೊಂದೇ ಅವರ ದೃಷ್ಟಿಯಾದಂತಿದೆ. ತನ್ನ ತಂದೆಯನ್ನು ಕುಸ್ತಿಯಾಟದಲ್ಲಿ ಕೊಂದ ಪ್ರತಿಸ್ಪರ್ಧಿ ಕುಸ್ತಿಪಟುವನ್ನು ಕಣದಲ್ಲಿ ಹಾರಾಡಿ ಅವನ ಜುಟ್ಟನ್ನು ಹಿಡಿದು ಮಣಿಸುವಷ್ಟು ಮಟ್ಟಕ್ಕೆ ಬರಬೇಕಾದರೆ ಆಕೆ ಕುಸ್ತಿಪಟ್ಟುಗಳನ್ನು ಅರಿತವಳೆ ಆಗಿರಬೇಕು. ವೀರಗಲ್ಲಿನ ಚಿತ್ರ ಮತ್ತು ಇದಕ್ಕೆ ಸಂಬಂಧಿಸಿದ ವಿವರವು ಸರಿಯಾಗಿ ತಾಳೆಯಾಗುತ್ತದೆ. ಆದ್ದರಿಂದ ಕುಸ್ತಿ ಅಖಾಡಕ್ಕೆ ಇಳಿದು ತನ್ನ ವಿರೋಧಿ ಕುಸ್ತಿಯಾಳನ್ನು ಮುಗಿಸುವ ಹಂತಕ್ಕೆ ತಲುಪಿದ ಹರಿಯಕ್ಕ ಪಳಗಿದ ಓರ್ವ ಕುಸ್ತಿಪಟುವೂ ಹೌದು, ಈ ದಿಶೆಯಲ್ಲಿ ಹೋರಾಡಿ ಮಡಿದ ವೀರಮಹಿಳೆಯೂ ಹೌದೆಂದು ಸ್ಪಷ್ಟವಾಗುತ್ತದೆ.

ವಿಜಯನಗರದ ಮಹಿಳೆಯರು ಮಲ್ಲಕಲೆಯಲ್ಲಿ ಪರಿಣತರಾಗಿದ್ದರೆ? ಅನ್ನುವುದಕ್ಕೆ ಶಾಸನಗಳು ಸಿಕ್ಕುವುದಿಲ್ಲ. ಶಿಕಾರಿಪುರದ ಶಾಸನವೊಂದೇ ಏಕೈಕ ಆಧಾರವಾಗಿ ನಿಲ್ಲುತ್ತದೆ. ಆದರೆ ಗರಡಿ ಸಾಧನೆಯ ಕ್ಷೇತ್ರದಲ್ಲಿ ವಿಜಯನಗರದ ಮಹಿಳೆಯರು ಪಾಲ್ಗೊಳ್ಳುತ್ತಿದ್ದರು ಎಂಬುದನ್ನು ವಿದೇಶಿ ಪ್ರವಾಸಿಗರ ಉಲ್ಲೇಖಗಳಿಂದ, ಕೆಲವು ಸಾಹಿತ್ಯ ಕೃತಿಗಳಿಂದ ನಾವು ಗ್ರಹಿಸಬಹುದಾಗಿದೆ. ಕೃಷ್ಣದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೋ ಪಯಸ್ ನು ಅರಮನೆ ಪ್ರದೇಶದಲ್ಲಿ ಸುತ್ತಾಡುವಾಗ "ಈ ಆವರಣದೊಳಗೆ ಸುಮಾರು ೧೨,೦೦೦ ಪರಿಚಾರಿಕೆಯರಿರುವರೆಂದು ಹೇಳುತ್ತಾರೆ. ಖಡ್ಗ ಗುರಾಣಿಯನ್ನು ಉಪಯೋಗಿಸಬಲ್ಲ, ಕುಸ್ತಿಯಾಡಿಬಲ್ಲ, ಅನೇಕ ತರದ ವಾದ್ಯಗಳನ್ನು ನುಡಿಸಬಲ್ಲ ಹೆಂಗಸರು ಇಲ್ಲಿದ್ದಾರೆ. ಅದೇ ರೀತಿ ಪಲ್ಲಕ್ಕಿ ಹೊರುವ ಹೆಂಗಸರು, ಅಗಸಗಿತ್ತಿಯರು, ದ್ವಾರಗಳ ಕಾವಲುಗಾರರು ಹೆಂಗಸರೇ"[13] ಎಂದು ಉಲ್ಲೇಖಿಸಿದ್ದರೆ. ಅಚ್ಯುತದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಬಂದಿದ್ದ ಇನ್ನೊಬ್ಬ ಪೋರ್ಚುಗೀಸ್ ಪ್ರವಾಸಿ ಫೆರ್ನಾವೋನ್ಯೂನಿಜ್ (ಈತ ಕುದುರೆ ವ್ಯಾಪಾರಿ) ಇಂತಹದೇ ಚಿತ್ರಣವನ್ನು ನೀಡುತ್ತಾನೆ – "ಈ ರಾಜ ತನ್ನ ದ್ವಾರದೊಳಗೆ ನಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಯರನ್ನು ಹೊಂದಿದ್ದಾನೆ. ಅವರೆಲ್ಲ ಅರಮನೆಯಲ್ಲಿ ಇರುತ್ತಾರೆ. ಕೆಲವರು ನೃತ್ಯಗಾರ್ತಿಯರಾಗಿರುತ್ತಾರೆ, ಇನ್ನು ಕೆಲವರು ರಾಜನ ಹೆಂಡಂದಿರನ್ನು ಮತ್ತು ಅರಮನೆಯೊಳಗಡೆ ರಾಜನನ್ನು ತಮ್ಮ ಹೆಗಲ ಮೇಲೆ ಹೋರುವ ಬೋಯಿಗಳ ಇರುತ್ತರೆ. ಏಕೆಂದರೆ ರಾಜನ ಮನೆಗಳು ದೊಡ್ಡವಿದೆ ಮತ್ತು ಒಂದು ಮತ್ತೊಂದರ ನಡುವೆ ಬಹಳ ಅಂತರವಿರುತ್ತದೆ. ಅವನಲ್ಲಿ ಕುಸ್ತಿ ಆಡುವ ಸ್ತ್ರೀಯರೂ ಮತ್ತು ಭವಿಷ್ಯ ಹಾಗೂ ಕಣಿ ಹೇಳುವ ಇತರರು ಇದ್ದಾರೆ. ಅವನಲ್ಲಿ ದ್ವಾರದೊಳಗೆ ಮಾಡಲಾದ ಖರ್ಚುಗಳನ್ನು ಲೆಕ್ಕ ಬರೆಯುವ ಸ್ತ್ರೀಯರೂ ಮತ್ತು ರಾಜ್ಯದ ಎಲ್ಲ ಆಗುಹೋಗುಗಳನ್ನು ಬರೆದು ಹೊರಗಿನ

ಲೇಖಕರೊಂದಿಗೆ ತಮ್ಮ ಪುಸ್ತಕಗಳನ್ನು ಹೋಲಿಸಿ ನೋಡುವ ಕರ್ತವ್ಯವುಳ್ಳ ಇತರರೂ ಇದ್ದರೆ. ಅವನನ್ನು ದ್ವಾರದೊಳಗೆ ಮಾಡಲಾದ ಖರ್ಚುಗಳನ್ನು ಲೆಕ್ಕ ಬರೆಯುವ ಸ್ತ್ರೀಯರೂ ಮತ್ತು ರಾಜ್ಯದ ಎಲ್ಲ ಆಗುಹೋಗುಗಳನ್ನು ಬರೆದು ಹೊರಗಿನ ಲೇಖಕರೊಂದಿಗೆ ತಮ್ಮ ಪುಸ್ತಕಗಳನ್ನು ಹೋಲಿಸಿ ನೋಡುವ ಕರ್ತವ್ಯವುಳ್ಳ ಇತರರೂ ಇದ್ದಾರೆ. ಅವನಲ್ಲಿ ಸಂಗೀತಕ್ಕೂ ಸ್ತ್ರೀಯರಿದ್ದಾರೆ. ಅವರು ವಾದ್ಯಗಳನ್ನು ನುಡಿಸುತ್ತಾರೆ ಮತ್ತು ಹಾಡುತ್ತಾರೆ. ರಾಜನ ಹೆಂಡಂದಿರೂ ಸಂಗೀತದಲ್ಲಿ ಪರಿಣಿತರಿರುವರು."[14]

ಅರಮನೆಯೊಳಗೆ ದವಿವಿಧ ರೀತಿಯ ಸೈವೆಗ್ಯೆಯ್ಯುವ ಪರಿಚಾರಿ (ದಾಸಿ)ಯರು ಮತ್ತು ಅವರ ವೃತ್ತಿ ವೈಶಿಷ್ಟ್ಯಗಳು ಇಬ್ಬರು ಪ್ರವಾಸಿಗರ ವರ್ಣನೆಯಲ್ಲಿ ಸಿಗುತ್ತವೆ. ಮಹಿಳಾ ಅಧ್ಯಯನಕ್ಕೆ ಒಂದು ವಿಶೇಷ ನೋಟ ಇಲ್ಲಿದೆ. ಅರಮನೆಯಲ್ಲಿ ಕುಸ್ತಿಯಾಡಬಲ್ಲ ದಾಸಿಯರನ್ನು ಸಹ ಅವರು ಉಲ್ಲೇಖಿಸಿದ್ದಾರೆ. ಮಹಿಳೆಯರ ಈ ಕುಸ್ತಿಯಾಟ ಅರಮನೆಯ ರಾಜ, ರಾಣಿಯರನ್ನು ಮನರಂಜಿಸುವ ಕ್ರೀಡೆಯಾಗಿತ್ತೆಂದು ಇದರಿಂದ ಗೊತ್ತಾಗುತ್ತದೆ. ಆದರೆ ಅವರು ಬಹಿರಂಗವಾಗಿ ಕುಸ್ತಿ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದರೆ ಎನ್ನುವುದು ಗೊತ್ತಾಗುವುದಿಲ್ಲ. ಇದರಿಂದ ಅರಮನೆಯ ದಾಸಿಯರಲ್ಲಿದ ಒಂದು ವರ್ಗವು ಮಲ್ಲಕಲೆಯಲ್ಲಿ ಪರಿಣತಿ ಹೊಂದಿತ್ತೆಂದು ತಿಳಿಯುತ್ತದೆ. ಹಂಪಿಯ ಹಜಾರರಾಮ, ವಿಜಯವಿಠ್ಠಲ, ಅಚ್ಯುತರಾಯ, ವಿರುಪಾಕ್ಷ ದೇವಾಲಯಗಳ, ಮಹಾನವಮಿ ದಿಬ್ಬಗಳಲ್ಲಿರುವ ಉಬ್ಬುಶಿಲ್ಪ ರಚನೆಗಳಲ್ಲಿ ಮಹಿಳೆಯರನ್ನು ಹೋರಾಟಗಾರರಾಗಿ, ಕುಸ್ತಿಪಟುಗಳಾಗಿ, ಅಂಗರಕ್ಷಕರಾಗಿ, ನೃತ್ಯಗಾರ್ತಿಯರಾಗಿ, ಸಂಗೀತಗಾರರಾಗಿ ಚಿತ್ರಿಸಿದ್ದಾರೆ. ಪ್ರವಾಸಿಗರು ನೀಡುರುವ ವರ್ಣನೆಗಳಿಗೂ ಶಿಲ್ಪಗಳು ನೀಡುವ ಚಿತ್ರಣಕ್ಕೂ ಸಾಮ್ಯತೆ ಇರುವುದು ಸ್ಪಷ್ಟವಾಗುತ್ತದೆ.

ವಿಜಯನಗರ ಕಾಲದಲ್ಲಿ ವೇಶ್ಯಾವಾಟಿಕೆ ವೃತ್ತಿಗೆ ಇಳಿಯುವ ಮಹಿಳೆಯರು ಸಂಗೀತ ನೃತ್ಯಗಳ ಜೊತೆಗೆ ಮಲ್ಲವಿದ್ಯೆಯನ್ನು ಅರಿತಿರುವುದು ಅನಿವಾರ್ಯವಾಗಿತ್ತೆಂದು ಕೃಷ್ಣದೇವರಾಯನು ಬರೆದ 'ಆಮುಕ್ತಮಾಲ್ಯ'ದಲ್ಲಿ ಕೃತಿಯಿಂದ ತಿಳಿಯುತ್ತದೆ. "ವೇಶ್ಯೆಯರು ಸಂಗೀತ ವಿದ್ಯೆಯಲ್ಲಿ ವಿಶೇಷ ಸಾಧನೆ ಮಾಡುತ್ತಿದ್ದರು. ಅವರು ತಮ್ಮ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಬಿಡುತ್ತಿದ್ದರು. ವೇಶ್ಯೆಯರೆಂದು ಸಮಾಜದಲ್ಲಿ ಅವರ ಗೌರವಗಳು ಕಡಿಮೆಯಾಗುತ್ತಿರಲಿಲ್ಲ. ಧನಿಕರು ಅವರನ್ನು ಪೋಷಿಸುತ್ತಿದ್ದರು. ಅವರು ಗುಡಿಗಳಲ್ಲಿ, ಅರಮನೆಗಳಲ್ಲಿ ನಿರಾತಂಕವಾಗಿ ಪ್ರವೇಶಿಸಬಹುದಾಗಿತತು. ನಡುರಾತ್ರಿಯಲ್ಲಿ ವೇಶ್ಯೆಯರು ಕುಸ್ತಿ ಸಹ ಕೊಟ್ಟಿದ್ದನು.[15] 'ವಿಜಯನಗರದಲ್ಲಿ ಸೂಳೆಯರ ಸಂಖ್ಯೆ ಅಪಾರವಾಗಿತ್ತೆಂದೂ ಕೃಷ್ಣದೇವರಾಯನಿಗೆ ಆ ಸೂಳೆಗೇರಿ ಚೆನ್ನಾಗಿ ಪರಿಚಿತವಾಗಿರಬೇಕೆಂದು 'ಆಮುಕ್ತಮಾಲ್ಯ'ದಲ್ಲಿ ಮೇಲಿಂದ ಮೇಲೆ ಬರುವ ಸೂಳೆಗೇರಿಯ ವರ್ಣನೆಗಳಿಂದ ತಿಳಿಯುತ್ತದೆ."[16] ಇದರಿಂದ ವ್ಯಕ್ತವಾಗುವ ಸಂಗತಿಯೆಂದರೆ, ಮಹಿಳೆಯರಲ್ಲಿ ಮುಖ್ಯವಾಗಿ ವೇಶ್ಯೆಯರು ಸಂಗೀತ, ನೃತ್ಯ ಮತ್ತು ಗರಡಿ ಕಲೆಗಳನ್ನು ತಮ್ಮ ವೃತ್ತಿಗೆ ಪೂರಕವಾಗಿ ಮೈಗೂಡಿಸಿಕೊಂಡಿದ್ದರೆಂದಬುದು. ಇವರ ಬದುಕಿಗೆ ನೈತಿಕ ಮತ್ತು ಆರ್ಥಿಕ ಆಧಾರವಾಗಿ ಸೂಳೆಯಕೇರಿಗಳು ಪ್ರಮುಖ ಕೇಂದ್ರಗಳಾಗಿದ್ದವು. ವಿಜಯನಗರ ಕಾಲದಲ್ಲಿ ವ್ಯಾಪಾರದ ವಹಿವಾಟೆಗೆಂದೇ ಬಜಾರುಗಳ ವ್ಯವಸ್ಥೆ ಇದ್ದಂತೆ ವೇಶ್ಯೆಯರಿಗೆ ಸೂಳೆಬಜಾರು ಇತ್ತೆಂಬುದು ಖಚಿತ. ನರ್ತಕಿಯರನ್ನು ದೇವದಾಸಿಯರನ್ನಾಗಿ ಬಿಡುವ ಪದ್ಧತಿಗೆ ಪೂರಕವಾದ ತರಬೇತು, ತಯಾರಿಗಳು ಅಲ್ಲಿ ನಡೆಯುತ್ತಿರಬೇಕು.

ಇದಕ್ಕೆ ಪ್ರತ್ಯೇಕವಾಗಿ ಗರಡಿಸಾಧನೆ ಕುರಿತ ಉಲ್ಲೇಖವೊಂದು ಎ.ಎಸ್. ನಂಜುಂಡ ಸ್ವಮಿಯವರ 'ವಿಜಯನಗರದ ಇತಿಹಾಸ' ಗ್ರಂಥದಲ್ಲಿ ಸಿಕ್ಕುತ್ತದೆ. "ನೃತ್ಯ ಶಿಕ್ಷಣಕ್ಕೆ ಪೂರ್ವಭಾವಿಯಾದ ಅಂಗಸೌಷ್ಠವವನ್ನು ಬೆಳೆಸಿಕೊಳ್ಳಲು ಮಹಿಳೆಯರು ನಾನಾ ಬಗೆಯ ವ್ಯಾಯಾಮಗಳನ್ನು ಮಾಡಬೇಕಾಗಿದ್ದಿತು. ವಿಜಯನಗರದ ಅರಮನೆಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಗರಡಿಮನೆ ಇದ್ದಿತು."[17]

ಶಿಕಾರಿಪುರದ ಶಾಸನವನ್ನು ಬೆಂಬತ್ತಿ, ಮಹಿಳೆಯರು ವಿಜಯನಗರ ಕಾಲದಲ್ಲಿ ಮಲ್ಲವಿದ್ಯೆಯಲ್ಲಿ ಪರಿಣತರಾಗಿದ್ದರೇ ಎಂಬುದರ ಕುರಿತು ಕಲೆ ಹಾಕಿದ ವಿವರಗಳು ಹೌದೆಂದು ಪುಷ್ಟಿ ನೀಡುತ್ತವೆ. ಆದರೆ, ಬಹಿರಂಗ ಪ್ರದರ್ಶನಕ್ಕೆ ಇವರ ಸಾಧನೆ ದೊರೆಯುತ್ತಿರಲಿಲ್ಲ, ಪ್ರತ್ಯೇಕವಾಗಿ ನಡೆಯುತ್ತಿತ್ತು ಎಂದು ಗೊತ್ತಾಗುತ್ತದೆ. ಉನ್ನತ ವರ್ಗಕ್ಕೆ ತೃಪ್ತಿಪಡಿಸಲೋಸುಗ ಮತ್ತು ತಮ್ಮ ಬದುಕಿಗಾಗಿ ಈ ಕಲೆಯನ್ನು ಪೂರಕವಾಗಿ ಕರಗತ ಮಾಡಿಕೊಂಡಿದ್ದರೆಂದು ಒಳನೋಟಗಳಿಂದ ತಿಳಿಯುತ್ತದೆ.

ಈ ಕುಸ್ತಿಕಲೆಗೆ ಆಧಾರವಾಗಿ ನಿಲ್ಲಬಲ್ಲ ಈ ಎರಡು ಶಾಸನಗಳು ಮತ್ತು ಇದನ್ನು ಅನುಸರಿಸಿ ಈ ಪ್ರಬಂಧದ ಟಿಪ್ಪಣಿಗಳನ್ನು ಮುಗಿಸುವಾಗ ಇನ್ನಷ್ಟು ಶಾಸನಗಳು ಅಲ್ಲಲ್ಲಿ ಇರಬಹುದೇ ಇದ್ದರೆ ಬೆಳಕಿಗೆ ಬರಿವ ಅವಶ್ಯಕತೆ ಎಂದು ಅನಿಸಿತು. ಮುಗಿಸುವ ಮುನ್ನ ಒಂದು ಮಾಹಿತಿ – "ಅತ್ಯಂತ ಬಲಿಷ್ಠರಾದ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರಬಾಗಲಿಗೆ ತನ್ನ ಇಜಾರ ಕಟ್ಟಿಸಿ ಮೆರೆಯುತ್ತಿದ್ದ ಬೀಮಾಜಟ್ಟಿ ಎಂಬುವನನ್ನು ಸೋಲಿಸಿದ ಜೋಡಿ ಮಲ್ಲಪ್ಪನಾಯ್ಕನಿಗೆ ಆನೆಗೊಮದಿ ರಾಜರಾದ ರಾಮರಾಯ ತಿರುಮಲರಾಜದೇವನು ಬುಕ್ಕಸಾಗರ ಹರಿಯಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ ಗ್ರಾಮವನ್ನು ಅದರ ಸಮೀಪವೇ ಇದ್ದ ಕಮಲಾಪುರದ ಕೆರೆಯ ಕೆಳಗಿನ ೩ ಖಂಡುಗ ಬೀಜಾವರಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟ"[18] ಈ ವಿಚಾರವನ್ನು ತಿಳಿಸುವ ತಾಮ್ರಶಾಸನದ ಬಗ್ಗೆ ಉಲ್ಲೇಖ ಸಿಕ್ಕಿತು. ಕನ್ನಡ ಲಿಪಿಯಿರುವ ತೆಲುಗು ಭಾಷೆಯ ಈ ತಾಮ್ರಪತ್ರದ ಕುರಿತು 'ನಾಯಕನಹಟ್ಟಿ ಪಾಳೆಯಗಾರರು' ಎಂಬ ಲೇಖನದಲ್ಲಿ ಮೀರಾಸಾಬಿಹಳ್ಳಿ ಶಿವಣ್ಣನವರು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. ಬೀಮಾಜಟ್ಟಿ ಎಂಬುವವನು ಕುಸ್ತಿ ಪೈಲ್ವಾನನಾಗಿದ್ದನೇ ಎಂಬುದು ಆತನ ಹೆಸರಿನಿಂದಷ್ಟೇ ತಿಳಿಯಬೇಕು. ವಿಜಯನಗರದ ಪಾಳೆಯಗಾರರ ಕುರಿತಾದ ಚರಿತ್ರೆಗಳನ್ನು ಅಭ್ಯಸಿಸಿದರೆ ಆ ಕುಸ್ತಿ ಕಲೆಯ ಬಗ್ಗೆ ಮಾಹಿತಿಗಳು ಲಭ್ಯವಾಗಬಹುದೇನೋ?

[1] ಡಾ. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೩ (ಹಂಪಿ ಶಾಸನಗಳು) (ಇನ್ನು ಮುಂದೆ ಕವಿಶಾ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦, ಶಾಸನಸಂಖ್ಯೆ ೩೧೨, ಪು. ೨೨೫.

[2] ಕವಿಶಾ, ಅದೇ ಸಂಪುಟ, ಪ್ರಸ್ತಾವನೆ, ಪು. xvi.

[3] ಡಾ. ಎಚ್.ಎಂ. ನಾಗರಾಜ, ದೇವರಯ II ಅಂಡ್ ಹಿಜ್ ಟೈಮ್ಸ್ (ಹಿಸ್ಟರಿ ಆಪ್ ವಿಜಯನಗರ) ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪ್ರ. ೧೯೨.

[4] ಎ.ಎಸ್. ನಂಜುಂಡಸ್ವಾಮಿ, ವಿಜಯನಗರದ ಇತಿಹಾಸ (ಇನ್ನು ಮುಂದೆ ವಿ.ಇ.) ಸಮಾಜ ಪುಸ್ತಕಾಲಯ, ಧಾರವಾಡ, ನಾಲ್ಕನೇ ಮುದ್ರಣ, ೧೯೯೯, ಪು. ೩೬.

[5] ಕವಿಶಾ, ಸಂ. ೩, ಶಾಸನಸಂಖ್ಯೆ ೩೧೧, ಪು. ೨೨೪.

[6] ಡಾ,ಚನ್ನಬಸಪ್ಪ ಎಸ್. ಪಾಟೀಲ, ಕಲೆ ಮತ್ತು ವಾಸ್ತುಶಿಲ್ಪ, ಕರ್ನಾಟಕ ಚರಿತ್ರೆ( ಸಂಪುಟ ೩) (ಪ್ರ.ಸಂ. ಪ್ರೊ. ಬಿ. ಷೇಕ್‌ಅಲಿ, ಸಂಪುಟ ಸಂಪಾದಕರು ಪ್ರೊ. ಕೆ.ಎಸ್. ಶಿವಣ್ಣ), ಪ್ರಸಾರಾಂಗ, ಕ.ವಿ.ಹಂ. ೧೯೯೭, ಪುಟ ೩೬೩.

[7] ಡಾ. ವಸುಂದರಾ ಫಿಲಿಯೋಜಾ, ವಿಶ್ವಪರಂಪರೆಯಾದಿಯಲ್ಲಿ ಹಂಪೆ, ಕರ್ಮವೀರ ದೀಪಾವಳಿ ವಿಶೇಷಾಂಕ ೨೦೦೦, ಪುಟ ೧೭. (ಅಹಮರ್ದಖನ್ ಕಟ್ಟಿಸಿದ ಕಟ್ಟಡವನ್ನು 'ಧರ್ಮಸಾಲೆ'ಎಂದು ಆತ ಕರೆದಿರುವುದರಿಂದ ಫಿಲಿಯೋಜಾ ಅವರು ಅದನ್ನು ಅನ್ನಛತ್ರವಲ್ಲ; ವಾಸ್ತುನಿರ್ಮಾಣದ ಒಳಲಕ್ಷಣಗಳ ಪ್ರಕಾರ ಅದು ಮಸೀದಿ ಎಮದು ದೃಢಪಟ್ಟಿದೆ.)

[8] ಡಾ. ಎಂ.ಎಂ. ಕಲಬುರ್ಗಿ (ಸಂ.), ಕೊಮಾರರಾಮಯ್ಯುಉನ ಚರಿತ್ರೆ (ಪ್ರಸ್ತಾವನೆ, ಪು. ೨೭, ೨೯, ೩೭), ಪ್ರಸಾರಾಂಗ, ಕ.ವಿ.ಹಂ. ೨೦೦೧.

[9] ಯು. ಮಲ್ಲಿಕಾರ್ಜುನ, ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂ. ೨೦೦೪, ಪುಟ ೭೫.

[10] ಎನ್. ಸರಸ್ವತಿ ನಾಣಯ್ಯ, ದಿ ಪೊಜಿಷನ್ ಆಫ್ ಉಮೆನ್ ಡೂರಿಂಗ್ ವಿಜಯನಗರ ಪಿರಿಯಡ್ (೧೩೩೬-೧೬೪೬), ಮೈಸೂರು, ಸರಸ್ವತಿ ಪಬ್ಲಿಕೇಶನ್, ಮೈಸೂರು, ೧೯೯೨.

[11] ಎನ್.ಸರಸ್ವತಿ, ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು, ವಿಜಯನಗರ ಅರಮನೆ (ಸಂ.೨), ಎಂ.ಎಲ್. ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ (ಸಂ.), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭, ಪುಟ ೦೧.

[12] ಎಸ್. ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂ. ೨೦೦೦, ಪುಟ ೮

[13] ಎಂ.ಪಿ. ಪ್ರಕಾಶ್ (ಅನುವಾದ) ಡೊಮಿಂಗೋಸ್ ಪಿಯಾಸ್ ಕಂಡ ಸವಿಜಯನಗರ (ಮಂಟಪಮಾಲೆ-೫೯), ಪ್ರಸಾರಾಂಗ, ಕ.ವಿ.ಹಂ. ೨೦೦೦, ಪ್ರ. ೮

[14] ಸದಾನಂದ ಕನವಳ್ಳಿ (ಅನು), ರಾಬರ್ಟ್ ಸಿವೆಲ್ (ಮೂಲ), ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕ.ವಿ.ಹಂ. ೧೯೯೨, ಪುಟ ೪೦೬.

[15] ನಿರುಪಮಾ, ಆಮುಕ್ತಮಾಲ್ಯದ (ಮಂಟಪಮಾಲೆ-೬೩), ಪ್ರಸಾರಾಂಗ, ಕವಿ. ಹಂ. ೧೯೯೯, ಪುಟ ೧೬.

[16] ಅದೇ, ಪುಟ ೧೫.

[17] ವಿ. ಇ., ಪುಟ ೧೦೬.

[18] ಮೀರಾಸಾಬಿಹಳ್ಳಿ ಶಿವಣ್ಣ, ನಾಟಕನಹಟ್ಟಿ ಪಾಳೆಯಗಾರರು, ದಕ್ಷಿಣ ಕರ್ನಾಟಕ ಅರಸು ಮನೆತನಗಳು (ಸಂ.ಡಾ.ಎಂ.ವಿ. ವಸು), ಪ್ರಸಾರಾಂತ, ಕ.ವಿ.ಹಂ. ೨೦೦೧, ಪುಟ ೭೯-೮೦.

## ೧೬. ಗರಡಿ – ಕುಸ್ತಿ

ಭಾರತದಲ್ಲಿ ಪ್ರಚಲಿತವಿದ್ದ ಅರವತ್ನಾಲ್ಕು ವಿದ್ಯೆಗಳಲ್ಲಿ ಈ ಗರಡಿಕಲೆಯೂ ಒಂದು. ಸಮರ ಕಲೆಗಳಲ್ಲಿ ಒಂದೆಂದು ಪರಿಗಣಿಸಲಾಗುವ ಮಲ್ಲಯುದ್ಧ ಎನ್ನುವುದು ಈ ಕುಸ್ತಿಕಲೆಯೇ ಆಗಿದೆ. ಯಾವುದೇ ಆಯುಧ ಆಧಾರಗಳಿಲ್ಲದೆ, ತನ್ನ ದೈಹಿಕಶಕ್ತಿ ಮತ್ತು ಯುಕ್ತಿಗಳಿಂದ ನಡೆಸುವ ಕ್ರಿಯೆಯೇ ಈ ಮಲ್ಲಯುದ್ಧ. ಸಮರದ ವೇಳೆಯಲ್ಲಿ ಯುದ್ಧದ ಅಂಗವಾಗಿ ಬಳಕೆಗೊಳ್ಳುವ ಈ ಕಲೆ, ಸಾಮಾನ್ಯ ವೇಳೆಯಲ್ಲಿ ಕ್ರೀಡೆಯಾಗಿ ಬಳಕೆಗೊಳ್ಳುತ್ತದೆ. ಎಲ್ಲಾ ಸಮರ ಕಲೆಗಳ ತಾಯಿ ಬೇರಾಗಿರುವ ಈ ಕಲೆ ಪ್ರಾಚೀನ ಕಾಲದಿಂದಲೂ ಗೌರವಕ್ಕೆ ಪಾತ್ರವಾಗುತ್ತಲೇ ಬಂದಿದೆ.

ವಿಜಯನಗರ ಕಾಲದಲ್ಲಿ ಈ ಕಲೆ ಶ್ರೀಮಂತವಾಗಿ ಬೆಳೆದದ್ದನ್ನು ವಿದೇಶೀ ಪ್ರವಾಸಿಗಳು ವರ್ಣಿಸಿರುವುದನ್ನು ಗಮನಿಸಬಹುದು. ಗ್ರಾಮೀಣ ಭಾರತದ ಒಂದು ಅಂಗವೇನೋ ಎನ್ನುವಂತೆ ನಂಟನ್ನು ಹೊಂದಿದ್ದ ಕ್ರೀಡೆ ಎಂದರೆ ಕುಸ್ತಿ ಎನ್ನಬಹುದು. ದೈಹಿಕ ಶಕ್ತಿ ಮತ್ತು ಯುಕ್ತಿಗಳ ಪ್ರತೀಕವಾಗಿ ಈ ಗರಡಿಕಲೆ ಇದೆ. ಇದರ ಬಗ್ಗೆ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಹಲವಾರು ಉಲ್ಲೇಖಗಳು ದೊರೆಯುತ್ತವೆ.

ಮಲ್ಲಯುದ್ಧ, ಮೃಗಯಾ ವಿನೋದಗಳು ಆಗಿನ ಕಾಲಕ್ಕೆ ಜನರ ಬಹು ಪ್ರಿಯವಾದ ವಿನೋದಗಳಾಗಿದ್ದವೆಂದು ತೋರುತ್ತದೆ. ನಂಜುಂಡ ಕವಿ ಹೊಸಮಲೆ ದುರ್ಗವನ್ನು ವರ್ಣಿಸುವಾಗ ಪುರದ ಹೊರವಲಯದೊಳಗೆ ಎಂಟು ದಿಕ್ಕಿನಲ್ಲಿ ಗರಡಿಗಳಿದ್ದವೆಂದು ಅಲ್ಲಿನ ಬಿರುದಿನ ಬಂಟರಿಗೆ ಪಾಡುಗಳನ್ನು ಭರಿಸುವ ಅಭ್ಯಾಸಗಳಿದ್ದವೆಂದೂ ಹೇಳುತ್ತಾನೆ. ಆ ಹೊಸಲಮಲೆ ದುರ್ಗದ ಹೊರವಲಯದಲ್ಲಿ ಬಿಲ್ಲಾಳು ಗುಲ್ಬುಗಳೆನಿಸುವ ಬಯಲು ಬಲುಮಲ್ಲರು ಹೆಣಗುವ ಬಯಲು ಪಲ್ಲವ / ಮಿಯ ಸಾಧನೆಯು ಬಯಲು ಕಣ್ಣಲ್ಲಲ್ಲಿ ಕರೆದೆಸೆದಿಹುದು.

ವಿಜಯನಗರದ ಕಾಲದಲ್ಲಿ ಕ್ರೀಡೆಗಳಿಗೆ ಸಾರ್ವತ್ರಿಕ ಪ್ರಾಮುಖ್ಯ ದೊರಕಿತ್ತು. ಆಗಿನ ಜನರ ಶಕ್ತಿ ಸಾಹಸ ಪ್ರದರ್ಶನಕ್ಕೆ ದ್ವಂದ್ವಯುದ್ಧ, ಜಟ್ಟಿಕಾಳಗ, ಮಲ್ಲಯುದ್ಧ, ಕತ್ತಿ ಸಾಧನೆ ಮತ್ತು ಬೇಟೆ ಇವು ಮುಖ್ಯ ಸಾಧನಗಾಗಿದ್ದವು. ರಾಜರೇ ಪ್ರದರ್ಶನಗಳಲ್ಲಿ ಭಾಗಿಗಳಾಗಿ ಮಾರ್ಗದರ್ಶಕರಾಗಿದ್ದರು. ಕೃಷ್ಣದೇವರಾಯನ ಬೆಳಗಿನ ವ್ಯಾಯಾಮವನ್ನು ಕುರಿತು ಪಾಯೇಸ ಕೊಡುವ ವರ್ಣನೆ ಸುಂದರವಾಗಿದೆ.

ಮಲ್ಲರು ಒಂದು ಜನಾಂಗವಾಗಿದ್ದು ಸಮಾಜದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದು ರಾಜರಿಂದ ಆಗಾಗ ಸಾರ್ವತ್ರಿಕ ಮನ್ನಣೆಯನ್ನು ಪಡೆದಿದ್ದರು. ರಾಜ ಸಭೆಗಳಲ್ಲಿ ಶೋಭಿಸುತ್ತಿದ್ದ ಕಲಾವಿದರಲ್ಲಿ ಮಲ್ಲರೂ ಕಠಾರಿ ವೀರರೂ ಇರುತ್ತಿದ್ದರು. ರಾಜರು ವಿಶೇಷ ಸಂದರ್ಭಗಳಲ್ಲಿ ಏರ್ಪಡಿಸುತ್ತಿದ್ದ ವಿನೋದ ಪ್ರದರ್ಶನಗಳಲ್ಲಿ ಜಟ್ಟಿ ಕಾಳಗವೂ ಇರುತ್ತಿತ್ತು.

ಕನಕದಾಸರು ದ್ವಾರಾಕಾನಗರಿಯಲ್ಲಿದ್ದ ನಾನಾ ಬಗೆಯ ಜನರನ್ನು ವರ್ಣಿಸುತ್ತ ಅಲ್ಲಿ ತೋರಿಯ ಭುಜವೆತ್ತು ಜಗಜಟ್ಟಿ ಮಸೆದ ಕಠಾರಿ ಬಂಡೆಯದ ಮಸಾಳು (ಶೂರ)ಗಳು ಇದ್ದುದಾಗಿ ಹೇಳುವರು. ಈ ಮಲ್ಲರಿಂದ ಆಗಾಗ ಸಾರ್ವಜನಿಕ ಪ್ರದರ್ಶನಗಳೂ ನಡೆಯುತ್ತದ್ದವು. ಹೀಗೆ ನಡೆಯುತ್ತಿದ್ದ ಸಾರ್ವಜನಿಕ ಪ್ರದರ್ಶನಗಳನ್ನು ಕಳೆಗಟ್ಟಿಸಲು ಸುಪ್ರಸಿದ್ಧ ಮಲ್ಲರನ್ನು ಎದುರಿಸಿ ಹೋರಾಡಲು ಮಾಸಾಳುಗಳನ್ನು ದುಡ್ಡು ಕೊಟ್ಟು ಕರೆಸುತ್ತಿದ್ದರೆಂದು ತೋರುತ್ತದೆ. ಹೊಟ್ಟೆ ಪಾಡಿಗಾಗಿ ನಾನಾ ವೃತ್ತಿಯನ್ನು ಅವಲಂಬಿಸಿ ಹಣ ಸಂಪಾದಿಸುವಂತೆ ಮಲ್ಲಯುದ್ಧದಲ್ಲಿ ಭಾಗವಹಿಸಿ ಹಣ ಸಂಪಾದಿಸುತ್ತಿದ್ದರೆಂದು ತೋರುತ್ತದೆ. ''ಪಲ್ಲಕ್ಕಿ ಹೊರುವುದು ಹೊಟ್ಟೆಗಾಗಿ ದೊಡ್ಡ ಮಲ್ಲರೊಡನಾಡುವುದು ಹೊಟ್ಟೆಗಾಗಿ'' ಎಂಬ ದಾಸರ ಕೀರ್ತನೆ ಇದಕ್ಕೆ ನಿದರ್ಶನ.

ಕುಮಾರವ್ಯಾಸ ತನ್ನ ಕಾವ್ಯ ಕರ್ನಾಟ ಭಾರತ ಕಥಾಮಂಜರಿಯಲ್ಲಿ ಗರುಡಿ, ಗರುಡಿಮನೆ, ಮಲ್ಲರ ಪಟ್ಟುಗಳ ಬಗೆಗೆ ವಿವರವಾದ ಉಲ್ಲೇಖಗಳನ್ನು ಕೊಡುತ್ತಾ ಹೋಗುತ್ತಾನೆ. ಗರುಡಿಮನೆಯ ಆರಂಭಿಸುವ ಮುನ್ನ ಆಚರಿಸುತ್ತಿದ್ದ ಆಚರಣೆಯನ್ನು ಆದಿಪರ್ವದಲ್ಲಿ ಕೊಡುತ್ತಾನೆ.

ಗರುಡಿಯ ಕಟ್ಟಿತು ನೂರು ಯೋಜನ
ವರೆಯ ವಿಸ್ತಾರದಲಿ ಸಾವಿರ
ಕುರಿಯ ಹೊಯ್ದರು ಪೂಜಿಸಿದರಾ ಚದುರ ಚಂಡಿಕೆಯ
(ಆದಿಪರ್ವ, ಸಂಧಿ ೭.೪)

ಎನ್ನುತ್ತಾನೆ. ಇಲ್ಲಿ ಗರುಡಿಯ ಆರಂಭದಲ್ಲಿ ಪೂಜಿಸುತ್ತಿದ್ದುದು ಚಂಡಿಯನ್ನು, ಹನುಮನನ್ನಲ್ಲ.

ಕುಮಾರವ್ಯಾಸ ಮಲ್ಲಯುದ್ಧದ ವರ್ಣನೆಗಳು ಬಂದಾಗ ಮನತುಂಬಿ ವರ್ಣಿಸುತ್ತಾನೆ. ಜರಾಸಂಧ – ಭೀಮ, ಭೀಮ – ದುಯೋಧನರ ನಡೆವೆ ಆದ ಮಲ್ಲಯುದ್ಧದ ವರ್ಣನೆಗಳನ್ನು ನೋಡಿದಾಗ ಅವನಿಗೂ ಸಹ ಗರುಡಿಯ ಅನುಭವ ಇದ್ದ ಹಾಗೆ ಕಂಡುಬರುತ್ತದೆ. ಉದಾಹರಣೆಗೆ ಅರಣ್ಯಪರ್ವದಲ್ಲಿ ಬರುವ ಕಿರಾತರ್ಜುನೀಯ ಪ್ರಸಂಗದಲ್ಲಿ ಶಿವ ಹಾಗೂ ಅರ್ಜುನನ ಹೋರಾಟದಲ್ಲಿ ಮಲ್ಲಯುದ್ಧದ ಹಲವಾರು ಪಟ್ಟುಗಳನ್ನು ಹಾಗೂ ಅವುಗಳ ಬಿಡಿಸುವಿಕೆಯನ್ನು ವಿವರಿಸುತ್ತಾನೆ.

ಬಿಗಿವ ಬಿಡಿಸುವ ಬಿಡಿಸಿದಾಕ್ಷಣ
ತೆಗೆವ ಕಳಚುವ ಕೊಂಬ ಲಳಿಯಲಿ
ಹೊಗುವ ಹತ್ತುವ ಲವಣಿಯಲಿ ಲಾಗಿಸುವ ಹೊರವಡುವ
ಚಿಗಿವ ಬಳಸುವ ಬಂದ ಗತಿಯಲಿ
ಗಗಡಿಸುವ ಲೋಕೈಕವೀರರು ಹೊಕ್ಕು ಹೆಣಗಿದರು
(ಅರಣ್ಯಪರ್ವ, ಸಂಧಿ ೫.೨೮)

ಇದರ ಮುಂದಿನ ಪದ್ಯದಲ್ಲಿಯೂ ಸಹ ಇದೇ ರೀತಿಯ ವರ್ಣನೆಯು ಬರುತ್ತದೆ.

ಅದೇ ರೀತಿ ಸಭಾಪರ್ವದಲ್ಲಿ ಭೀಮ ಜರಾಸಂಧರ ಕಾಳಗದಲ್ಲಿ ಬರುವ ವರ್ಣನೆಯೂ ಸಹ ಇದೆ ರೀತಿಯಲ್ಲಿದೆ.

ಸಿಕ್ಕರೊಬ್ಬರಿಗೊಬ್ಬರುರೆ ಕೈ
ಯಿಕ್ಕು ಹರಿಯರು ಕೊಂಡ ಹೆಜ್ಜೆಯ

ಠಕ್ಕಿನಲ್ಲಿ ಮೈಗೊಡರು ತಿರಿಮುರಿವುಗಳ ಮಂಡಿಗಳ
ಇಕ್ಕಿದರು ಗಳಹತ್ತದಲಿ ಸಲೆ
ಮಿಕ್ಕ ಸತ್ರಾಣದಲಿ ಮಿಗೆಸರಿ
ವೊಕ್ಕ ಹಿಡಿದರು ಬಿನ್ನಣದ ಚೊಕ್ಕೆಯಾದ ಜೋಡಿಯಲಿ
(ಸಭಾಪರ್ವ, ಸಂಧಿ ೨.೨೮)

ಕವಿ ತನ್ನ ಕಾವ್ಯದಲ್ಲಿ ಮಲ್ಲರು ತಮ್ಮ ಕೈಕಾಲು ಚಳಕಗಳಿಂದ ಹೇಗೆ ಹೋರಾಡುತ್ತಾ ಪ್ರತಿಸ್ಪರ್ಧಿಯನ್ನು ಚಿತ್ತು ಮಾಡುತ್ತಿದ್ದರು ಎಂಬುದರ ನೈಜಚಿತ್ರಣವನ್ನು ಮೂಡಿಸಿದ್ದಾನೆ.

ನಂಜುಂಡ ಕವಿಯ ಕುಮಾರರಾಮ ಸಾಂಗತ್ಯದಲ್ಲಿ ಬುರವ ಮಲ್ಲಯುದ್ಧ ಹಾಗೂ ಪಟ್ಟುಗಳು ಅಂದಿನ ಜೀವನದಲ್ಲಿ ಕಂಡು ಬರುವ ಜೀವನ ವಿಧಾನವಾಗಿದೆ. ಕಂಪಿಲೆಯ ರಾಮನೆಂದೇ ಹೆಸರು ಪಡೆದಿರುವ ಈ ವ್ಯಕ್ತಿ ೧೪ನೆಯ ಶತಮಾನದಲ್ಲಿ ಜೀವಿಸಿದ್ದ. ಅವನ ನಿಜ ಜೀವನವನ್ನೇ ಆಧಾರವಾಗಿಟ್ಟುಕೊಂಡು ಕವಿ ಕಾವ್ಯ ರಚಿಸಿದ್ದಾನೆ. ಅಲ್ಲಿ ಬರುವ ಗುಂಡು ಎತ್ತುವ ಸ್ಪರ್ಧೆಯು ಅಂದಿನ ಮಲ್ಲರ ಶಕ್ತಿಯ ಪ್ರದರ್ಶನದ ಕಲೆಯಾಗಿದೆ.

ಇದೇ ಕೃತಿ "ರಾಮನಾಥ ಚರಿತೆ" ಯಲ್ಲಿ ಗರಡಿಯ ಬಗೆಗೆ ಉಲ್ಲೇಖವಿದೆ.

ಪುರದ ಬಹಿರ್ವಳೆಯದೊಳೆಣ್ದಿಸೆಯೊಳು
ಗಡುಡಿಗಳಿಹವದ ಹೊಳಗೆ ಬಿರಿದಿನ
ಬಂಟಗಳ ಬಿಡದೆ ಪಾಡುಗಳನು ಬರಿಸುವಭ್ಯಾಸಿಗಳಿಹರು
(ರಾಮನಾಥ ಚರಿಗೆ, ಪುಟ ೭೮-೭೫)

ಎಂಬ ಪದ್ಯವೊಂದನ್ನು ಬರೆದಿದ್ದಾನೆ. ಇದು ೧೪೨೫ರಲ್ಲಿಯೇ ಗರಡಿಗಳಿದ್ದವು ಎಂಬುದನ್ನು ಸೂಚಿಸುತ್ತದೆ.

ರತ್ನಾಕರವರ್ಣಿಯ ಭರತೇಶ ವೈಭವವು ವಿಜಯನಗರೋತ್ತರದಲ್ಲಿ ರಚಿಸಲಾದ ಕಾವ್ಯ. ಇದರಲ್ಲಿ ಬರುವ ಹಲವಾರು ಸನ್ನಿವೇಶಗಳು ಅಂದಿನ ಜನಜೀವನದ ನೈಜ ಚಿತ್ರಣವಾಗಿದೆ.

ಅದೊಂದು ಕಲ್ಪಿತ ಎನ್ನಬಹುದಾದ ಕಾವ್ಯವಾದರೂ ಅಲ್ಲಿಯ ಘಟನೆಗಳು ಅಂದಿನ ಜೀವನದಲ್ಲಿ ಹಾಸುಹೊಕ್ಕಾದ ಘಟನೆಗಳೇ ಆಗಿವೆ. ಅಲ್ಲಿ ಬರುವ ಭರತ-ಬಾಹುಬಲಿಯ ಯುದ್ಧದ ವರ್ಣನೆಗಳು ಈ ರೀತಿಯಲ್ಲಿಯೇ ನೋಡಬಹುದು. ಅಲ್ಲಿ ಬರುವ ಮಲ್ಲಯುದ್ಧದ ಚಿತ್ರಣದಲ್ಲಿ ಹೀಗಿದೆ:

ಜಟ್ಟಿಗಳುಬ್ಬಿ ಕೋಯೆಂದಾಲ್ತು ಭುಜಗಳ
ಗಟ್ಟಕೊಂಡೊಡೆಯ ಜೇಯೆಂದು
ಥಟ್ಟನೆ ತಿವಿದೊಬ್ಬರೊಬ್ಬರ ಗೆಗೆ
ದಿಟ್ಟಾಡಿ ಕೆಡದರೆತ್ತಿತ್ತು

ಎನ್ನುವ ಪದ್ಯವು ಮಲ್ಲಯುದ್ದದ ವರ್ಣನೆಯೇ ಆಗಿದೆ.

ಕರಕಮದೆ ವಜ್ರ ಮುಷ್ಟಿ ಮಸ್ತಕದೊಳು
ಮೆರೆವ ಕುಂಕುಮ ರಜದಿಂದ
ಕೊರಳ ಪೂಮಾನೆ ಕಸ್ತೂರಿ ಲೇಪನದ ಮಲ್ಲ
ರುರಮಣಿಸಿದರಾಹವಕೆ

ಎನ್ನುವಲ್ಲಿ ಅಂದಿನ ಮಲ್ಲರ ಚಿತ್ರಣವನ್ನು ಕೊಡುತ್ತದೆ. ಅಲ್ಲದೆ ರಾಜನು ನೂರಾರು ಮಲ್ಲರನ್ನು ಸಾಕಿದ್ದನ್ನು ಕವಿ ತಿಳಿಸುತ್ತಾನೆ. ಚಾಟುವಿಠಲ ತನ್ನ ಕಾವ್ಯದಲ್ಲಿ ಮಲ್ಲರ ವೇಷಭೂಷಣಗಳನ್ನು ತಿಳಿಸುತ್ತಾ

ಚಲ್ಲಣ ಹೊನ್ನುಡ್ಡಿಯಾಣ ಮೇಲ್ಪಗಹಿನ ಕುಲ್ಲಾಯಿ ಕುಂಕುಮ ತಿಲಕಾ
ಗೆಲ್ಲದಿ ಪಿಡಿದ ತಾವಡೆಹೊಲ್ಲಿಗಳಿಂದಮಲ್ಲರೆದ್ದರು ಸಾಧನೆಗೆ
ಮುಗಿದುಟ್ಟ ಕಾಸೆ ಚಿಮರಿ ಬಿಟ್ಟ ಜಡೆ ಪಾದ ಸರಿವಿಟ್ಟ
ಸಾಧನೆ ಬೊಟ್ಟು ಕರದಲಿ ಸಾಣಖಂಡೆಯವೊಪ್ಪ ಕೆಲವು ಸಿಂಗರಿಸಿ, ಸಾಧನೆ ಗೆದ್ದ ಪವರು

ಡೊಮಿಂಗೊ ಪಯೋಸ್ ಸ್ವತಃ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಭೇಟಿ ನೀಡಿದ್ದು ರಾಯನ ನಡಾವಳಿಗಳನ್ನು ಅರಿತವನಾಗಿದ್ದವನು. ಅವನು ಕೃಷ್ಣದೇವರಾಯನ ನಿತ್ಯ ನೈಮಿತ್ತಿಕ ಚಟುವಟಿಕೆಗಳನ್ನು ಕುರಿತು ಹೀಗೆ ಹೇಳುತ್ತಾನೆ. "ರಾಜನು ನಿತ್ಯವು ಬೆಳಕು ಹರಿಯುವ ಮುನ್ನ ಒಂದಿಷ್ಟು ಎಳ್ಳೆಣ್ಣೆಯನ್ನು ಮೈಗೂ ತಿಕ್ಕಿಸಿಕೊಳ್ಳುತ್ತಾನೆ. ಬಟ್ಟೆ ಬರೆಗಳನ್ನು ತೆಗೆದು, ಬರೀ ಚಡ್ಡಿ ಹಾಕಿಕೊಂಡು, ಬಹಳ ತೂಕದ ಮಣ್ಣಿನ ಗುಂಡುಗಳನ್ನು ಕೈಯಲ್ಲಿ ಎತ್ತಿ ಆಡಿಸುವ ಕಸರತ್ತು ಮಾಡುತ್ತಾನೆ. ಮತ್ತು ತನ್ನ ಪೈಲ್ವಾನರಲ್ಲೊಬ್ಬನೊಂದಿಗೆ ಕುಸ್ತಿ ಆಡುತ್ತಾನೆ. ನಂತರ ಮೈದಾನದಲ್ಲಿ ಬೆಳಕು ಹರಿಯುವವರೆಗೂ ಕುದುರೆ ಸವಾರಿಮಾಡುತ್ತಾನೆ.

ಕುಸ್ತಿಪಂಧ್ಯದ ಇತಿಹಾಸವನ್ನು ನೋಡಲಾಗಿ ಭಾರತ ಇದರ ಮೂಲ ಎಂದು ತಿಳಿದುಬರುತ್ತದೆ. ಭಾರತದ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳಲ್ಲಿಯೇ ಕುಸ್ತಿಪಂಧ್ಯದ ಬಗೆಗೆ ಮಹತ್ವದ ವಿವರಗಳು ಸಿಗುತ್ತವೆ. ಪುರಾಣಗಳಲ್ಲಿಯೂ ಕೂಡ ಕುಸ್ತಿಯ ಉಲ್ಲೇಖವಿದೆ. ಇದರಿಂದ ಕುಸ್ತಿಯ ಇತಿಹಾಸವನ್ನು ೫೦೦೦ ವರ್ಷಗಳಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಬಹುದು. ಭೀಮ – ಜರಾಸಂಧ, ಭೀಮ – ದುಯೋಧನ, ಶ್ರೀಕೃಷ್ಣ – ಬಲರಾಮ, ಭರತ – ಬಾಹುಬಲಿ, ಹಿಡಂಬ, ಜೀಮೂತ, ಶಲ್ಯ, ಬಕಾಸುರರೇ ಮೊದಲಾದ ಕುಸ್ತಪಟುಗಳ ಇತಿಹಾಸ ಮಹಾಕಾವ್ಯಗಳಲ್ಲಿ ಉಲ್ಲೇಖಿತಗೊಂಡಿವೆ.

ವಿಜಯನಗರ ಅರಸರಲ್ಲಿಯೇ ಪ್ರಸಿದ್ಧನಾದ ದೊರೆ ಕೃಷ್ಣದೇವರಾಯನು ಸ್ವತಃ ಗರಡಿ ಪಟುವಾಗಿದ್ದ ಎನ್ನುವುದನ್ನು ಆತನ ಕಾಲದಲ್ಲಿ ವಿಜಯನಗರಕ್ಕೆ ಬಂದ ವಿದೇಶೀ ಪ್ರವಾಸಿಗರು ತಿಳಿಸಿದ್ದಾರೆ. ಹಂಪೆಯ ಕೃಷ್ಣದೇವಾಲಯ ಹಾಗೂ ಕಮಲ ಮಹಲಿನ ಆವರಣದೊಳಗೆ ಗರಡಿಮನೆಗಳು ಇವೆ.

ವಿಜಯನಗರ ಅರಸರ ಆತಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲೆಲ್ಲಾ ಗರಡಿಮನೆಗಳು ಕಂಡುಬರುತ್ತವೆ. ಹಾಗೂ ಅವುಗಳಲ್ಲಿ ಬಹುತೇಕ ಗರಡಿಮನೆಗಳು ಇಂದಿಗೂ ಸುಸ್ಥಿತಿಯಲ್ಲಿ ಉಳಿದುಕೊಂಡಿವೆ. ಹಾಗೆ ವಿಜಯನಗರ ಅರಸರ ಆಡಳಿತಕ್ಕೊಳಪಟ್ಟ ಸಾಮಂತ ರಾಜ್ಯಗಳಾದ ಚಿತ್ರದುರ್ಗ, ಶಿವಮೊಗ್ಗ, ಪ್ರಾಂತಗಳಲ್ಲೆಲ್ಲಾ ಗರಡಿಮನೆಗಳಿದ್ದು, ಇಂದಿಗೂ ಗರಡಿಕಲೆ ಅಲ್ಲಿ ಉಳಿದುಕೊಂಡು ಬಂದಿರುವುದು ಕಂಡುಬರುತ್ತದೆ.

ಕ್ರಿ.ಶ. ೧೫೨೦-೨೨ರ ಸುಮಾರಿನಲ್ಲಿ ಹಂಪಿಗೆ ಭೇಟಿ ನೀಡಿ ಪೋರ್ಚುಗೀಸ್ ಪ್ರವಾಸಿ ಡೊಮಿಂಗೊ ಪಯಸ್‌ನು 'ವಿಜಯನಗರ' ರಾಜಧಾನಿಯಲ್ಲಿ ನಡೆಯುತ್ತಿದ್ದ 'ನವರಾತ್ರಿ ಉತ್ಸವವನ್ನು' ವರ್ಣಿಸುತ್ತ ಕುಸ್ತಿ ಆಟದ ಕುರಿತು ಉಲ್ಲೇಖಿಸುತ್ತಾನೆ.

"ನಮ್ಮ ಕುಸ್ತಿಯಂತೆ ಅವರು ಕುಸ್ತಿ ಮಾಡುವುದಿಲ್ಲ. ಅವರು ಗುದ್ದುಗಳನ್ನು ಕೊಡುತ್ತಾರೆ. ಆ ಗುದ್ದುಗಳು ಎಷ್ಟು ಭಯಂಕರವಾಗಿರುತ್ತವೆಂದರೆ ಒಮ್ಮೊಮ್ಮೆ, ಕಣ್ಣು, ಕಿವಿ, ಮುಖಗಳನ್ನು ನಾಶಪಡಿಸುತ್ತವೆ. ಕೆಲವು ಸಾರಿ ಅವರ ಸ್ನೇಹಿತರು ಪೈಲ್ವಾನರನ್ನು ಅಖಾಡದಿಂದ ಹೊತ್ತು ಹೊರದೊಯ್ಯುತ್ತಾರೆ. ನ್ಯಾಯ ನಿರ್ಣಯ ಮಾಡಲು, ಕುಸ್ತಿ ಆಡಿಸಲು ಅಲ್ಲಿ ನುರಿತ ಸರದಾರರಿರುತ್ತಾರೆ. ಈ ದಿವಸ ಕುಸ್ತಿ ಮತ್ತು ನೃತ್ಯವನ್ನು ಬಿಟ್ಟು ಬೇರೇನೂ ಇರುವುದಿಲ್ಲ (ಮರೆತುಹೋದ ಸಾಮ್ರಾಜ್ಯ ವಿಜಯನಗರ, ಕ.ವಿ.ವಿ. ಹಂಪಿ, ಪುಟ ೧೮೫).

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮಹಿಳೆಯರಿಗೂ ಮಲ್ಲಯುದ್ಧ ತಿಳಿದಿತ್ತು ಎನ್ನುವುದನ್ನು ದಾಖಲಿಸುವ ವೀರಗಲ್ಲು ಶಾಸನವೊಂದು ಶಿಕಾರಿಪುರದಲ್ಲಿದೆ. ಕ್ರಿ. ಶ. ೧೪೪೬ರ ಈ ಶಾಸನದಲ್ಲಿ ನಾಗನಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿರುವಾಗ ಮರಣ ಹೊಂದಿ ಸ್ವರ್ಗ ಸೇರಿದನು. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುಗಳೊಂದಿಗೆ ಕಾದು ತಾನೂ ಸ್ವರ್ಗ ಸೇರುತ್ತಾಳೆ. ಈ ಶಾಸನವನ್ನು ಆಕೆಯ ಚಿಕ್ಕಪ್ಪ ಚನ್ನಪ್ಪನು ಕಟ್ಟಿಸಿದನು. ಈ ವೀರಗಲ್ಲು ಶಾಸನದಲ್ಲಿ ಒಬ್ಬ ಜಟ್ಟಿ ನಿಂತಿದ್ದಾನೆ. ಅವನ ಜುಟ್ಟನ್ನು ಹಿಡಿದ ಮಹಿಳೆ ಕತ್ತಿಯ ಮೊನೆಯಿಂದ ಜಟ್ಟಿಯನ್ನು ತಿವಿಯುತ್ತಿದ್ದಾಳೆ (ಕರ್ನಾಟಕ ಶಾಸನ ಶಿಲ್ಪ, ೧೯೯೯, ಪುಟ ೨೫೦).

ಪ್ರಾಚೀನ ಭಾರತದ ಕ್ರೀಡಾ ಜೀವನವನ್ನು ಅರ್ಥ ಮಾಡಿಕೊಳ್ಳಲು ಮಹಾ ಕಾವ್ಯಗಳಾದ ರಾಮಾಯಣ, ಮಹಾಭಾರತಗಳನ್ನು ಗಮನಿಸಬಹುದು. ರಾಮಾಯಣದಲ್ಲಿ ಮಲ್ಲಯುದ್ಧ, ಮುಷ್ಟಿ ಯುದ್ಧಗಳ ಪ್ರಸ್ತಾಪ ಕಂಡುಬರುತ್ತದೆ. ಮಹಾಭಾತದಲ್ಲಿ ದುಷ್ಯಂತರ ಮೃಗಯಾ ವಿಹಾರ, ಭೀಮ-ಜರಾಸಂಧರ ದ್ವಂದ್ವ ಯುದ್ಧ, ಭೀಮ-ದುರ್ಯೋಧನರ ಮುಷ್ಟಿಯುದ್ಧ ಮುಂತಾದವುಗಳು ಪ್ರಸ್ತಾಪನೆಗೊಂಡಿದೆ.

ನಂಜುಂಡ ಕವಿ ತನ್ನ ಕುಮಾರರಾಮನ ಕಾವ್ಯದಲ್ಲಿ ಗರಡಿಗಳ ಬಗ್ಗೆ ವಿವರಿಸುತ್ತ ಹೊಸ ಮಲೆದುರ್ಗದಲ್ಲಿ ಎಂಟು ದಿಕ್ಕುಗಳಿಗೂ ಎಂಟು ಗರಡಿಗಳಿದ್ದ ಅದರಲ್ಲಿ ಗರಡಿ ಆಳುಗಳು ಸಾಧನೆ ಮಾಡುತ್ತಿದ್ದರು ಎಂದು ತಿಳಿಸುತ್ತಾನೆ. ಹಾಗೆ ಬಯಲಿನಲ್ಲಿ ಮಾಡುವ ಸಾಧನೆಯು ನೋಡಲು ಕಣ್ಣಿಗೆ ಆನಂದವನ್ನುಂಟು ಮಾಡುತ್ತಿತ್ತು ಎಂದು ವರ್ಣಿಸುತ್ತಾನೆ.

ಕರ್ನಾಟಕ ಪ್ರಸಿದ್ಧ ರಾಜ ಮನೆತನಗಳಲ್ಲಿ ಒಂದಾದ ವಿಜಯನಗರದ ವಾಸ್ತು ಶಿಲ್ಪಗಳಲ್ಲಿ – ಹಜಾರರಾಮ ದಿಬ್ಬಗಳಲ್ಲಿ ಉಬ್ಬು ಶಿಲ್ಪಗಳಿದ್ದು, ಅವು ಹಲವಾರು ಪಟ್ಟುಗಳನ್ನು ಹಾಕಿದ ಗರಡಿಯಾಳುಗಳ ಶಿಲ್ಪವನ್ನು ಒಳಗೊಂಡಿವೆ.

ಹೊಸಪೇಟೆ ತಾಲ್ಲೂಕಿನ ಗರಡಿಮನೆಗಳ ಕುಸ್ತಿಗೂ ಪುರಾತನ ನಂಟು. ಕೆದಕುತ್ತಾ ಹೋದರೆ ಇಲ್ಲಿನ ಹಿರಿಯರಿಗೆ ರಾಜ ಮಹಾರಾಜರ ಹಾಗೂ ಪ್ರಸಿದ್ಧ ವಿಜಯನಗರ ಅರಸರಲ್ಲಿ ಶ್ರೀಕೃಷ್ಣದೇವರಾಯನು ಕುಸ್ತಿಪಟುವಾಗಿದ್ದನು ಎಂಬುದು ನೆನಪಾಗುತ್ತದೆ. ದೇವರಾಯನು ತನ್ನ ಗರಡಿಮನೆಯಲ್ಲಿ ಮೈಗೆ ಎಳ್ಳೆಣ್ಣೆ ಹಚ್ಚಿಕೊಂಡು ಸಾಧಕ ಮಾಡುತ್ತಿದ್ದನು. ದಮ್ಮನ್ನ ಕಳೆಯಲು ಅನೇಕ ಸಲ ಕಷ್ಟಕರ ಸಾಧಕಗಳನ್ನು ಮಾಡುತ್ತಿದ್ದನು ಎಂದು ಇತಿಹಾಸ ಹೇಳುತ್ತದೆ. ದೇವರಾಯನು ತನ್ನ ವಿಜಯದ ಸಂಕೇತವಾಗಿ ದಸರಾ ಹಬ್ಬದಲ್ಲಿ ಹಲ ಕ್ರೀಡೆಗಳೊಂದಿಗೆ ಪ್ರಮುಖವಾದ ಕುಸ್ತಿ ಕ್ರೀಡೆ ನಂಟು ಸಹ ಬೆಳೆಯಿತು. ಇವತ್ತು ದಸರಾ ಎಂದರೆ ಬೇರೆಲ್ಲ ಕ್ರೀಡೆಗಳಿದ್ದರೂ ಮೊದಲು ನೆನಪಿಗೆ ಬರುವುದೇ ಕುಸ್ತಿ.

ಆಗ ಹಳ್ಳಿಗಳಲ್ಲಿ ಪೋಲಿಸರೂ ಇರಲಿಲ್ಲ. ಊರಿಗೊಂದು ಗರಡಿಮನೆ. ಆ ಮನೆಯೇ ಊರಿನ ಕಾವಲು ಕೋಟೆ. ಊರೊಳಗೆ ಯಾವ ಸಮಸ್ಯೆ ಬಂದರೂ ಗರಡಿಮನೆಯ ಮುಖ್ಯಸ್ಥರೇ ಸಮಸ್ಯೆ ಪರಿಹಾರ ಮಾಡಬೇಕು. ಹಬ್ಬ ಹರಿದಿನಗಳಲ್ಲಿ ಗಲಾಟೆ ಆಗದಂತೆ ಯಜಮಾನರು, ಉಸ್ತಾದರು, ಪೈಲ್ವಾನರು ಊರಿನ ರಕ್ಷಣೆಗೆ ನಿಲ್ಲುತ್ತಿದ್ದರು. ಪ್ರತಿ ಊರಲ್ಲಿ ಹೇಗೆ ಗುಡಿಗಳಿದ್ದವೋ ಹಾಗೆಯೇ ಗರಡಿಮನೆಗಳೂ ಇದ್ದವು.

ಊರಿನ ರಕ್ಷಣೆಯ ಹೊಣೆ ಹೊತ್ತಿದ್ದ ಗರಡಿಮನೆಗಳು ಇಂದು ಪಾಳು ದೇಗುಲವಾಗಿವೆ. ಹೊಸಪೇಟೆ ತಾಲೂಕಿನ ಗರಡಿಮನೆಗಳು ತೀರಾ ನಿಕೃಷ್ಟ ಸ್ಥಿತೆಗೆ ಹೋಗದೆ ಇದ್ದರೂ ಸಹ, ಅವು ತಮ್ಮ ಪೂರ್ವದ ವೈಭವದಿಂದ ವಂಚಿತವಾಗಿವೆ ಎನ್ನುವುದಂತೂ ಸತ್ಯ. ಹೊಸಪೇಟೆ ತಾಲೂಕು ಕುಸ್ತಿ ಕಲೆಗೆ ಬಹಳ ಪ್ರಸಿದ್ಧ. ಇಲ್ಲಿ ಆಡಳಿತ ನಡೆಸಿದ ವಿಜಯನಗರ ಅರಸರು ಸ್ವತಃ ಕುಸ್ತಿಪಟುಗಳಾಗಿದ್ದರು. ಅವರ ಕುರಿತು ಹಿಂದಿನ ಆಧ್ಯಾಯಗಳಲ್ಲಿ ಗಮನಿಸಲಾಗಿದೆ. ವಿಜಯನಗರ ಅರಸರ ಪೋಷಣೆ ಹಾಗೂ ರಕ್ಷಣೆಗಳಿಂದ ಈ ತಾಲೂಕಿನ ಪ್ರತಿ ಊರಿನಲ್ಲಿ ಮತ್ತು ಪಟ್ಟಣಗಳಲ್ಲಿ ಗರಡಿಮನೆಗಳು ಎಲ್ಲಿ ನೋಡಿದರೂ ಸಿಗುತ್ತವೆ. ಇವುಗಳಲ್ಲಿ ಎಷ್ಟೋ ಗರಡಿಗಳು ಇಂದು ಸರಿಯಾದ ಮೇಲ್ವಿಚಾರಣೆ ಇಲ್ಲದೆ ನಶಿಸಿ ಹೋಗಿವೆ. ಆದರೆ ಇರುವ ಗರಡಿಗಳು ತಮ್ಮ ಮೂಲ ವೈಭವವನ್ನು ತಿಳಿಸುತ್ತಾ ಇನ್ನು ಜೀವಂತವಾಗಿ ಉಳಿದಿವೆ.

"ರಾಜ ಪ್ರಭುತ್ವವು ಹೋಗಿ ಪ್ರಜಾಪ್ರಭುತ್ವ ಅಸ್ತಿತ್ವಗೊಂಡ ತರುವಾಯ ಪ್ರಜೆಗಳೇ ಪ್ರಭುಗಳಾದುದು, ಈ ನಡುವೆ ಪುರುಷತ್ವಕ್ಕೆ ಸಂಕೇತವಾಗಿದ್ದ ಗರಡಿಮನೆಗಳು ನಿರ್ಲಕ್ಷ್ಯಕ್ಕೊಳಗಾದವು. ಇವುಗಳ ಮಧ್ಯೆ ಅನೇಕ ಸಂಘಟನೆಗಳ ಮಧ್ಯೆ ವೈಮನಸ್ಸು ಮೂಡಿ ಅಧಿಕಾರಕ್ಕಾಗಿ ಕಚ್ಚಾಡುವ ಸ್ಥಿತಿಗೆ ಅವು ಬಂದವು. ಇದರಿಂದ ಅಷ್ಟೋ ಇಷ್ಟೋ ಉಸಿರಾಡುತ್ತಿದ್ದ ಗರಡಿಕಲೆ ಉಸಿರುಗಟ್ಟುವಂತೆ ಮಾಡಿದರು."

ಸಾಂಸ್ಕೃತಿಕ ಕಾರಣಗಳಿಗಾಗಿ ಇಂದು ಗರಡಿಕಲೆ ಮೂಲೆ ಗುಂಪಾಗುತ್ತಿದೆ. ಅದಕ್ಕೆ ಸರಿಯಾದ ಪ್ರೋತ್ಸಾಹ ಆರ್ಥಿಕ ಸಹಾಯ ಹಾಗೂ ಆಧುನಿಕ ಬದುಕಿಗೆ ತಕ್ಕಂತೆ ಅಲ್ಪ ಸ್ವಲ್ಪ ಬದಲಾವಣೆಗಳನ್ನು ತಂದರೆ, ಇಂದಿಗೂ ಗರಡಿಕಲೆ ತನ್ನತನವನ್ನು ಮೆರೆಯಲು ಸಾಧ್ಯವಾಗುತ್ತದೆ.

ನಾಡಹಬ್ಬ, ಹಂಪಿ ಉತ್ಸವದಲ್ಲಿ ಪ್ರಮುಖ ಆಕರ್ಷಣೆ ಎಂದರೆ ಕುಸ್ತಿ. ಆದ್ದರಿಂದಲೇ ಸಾಂಸ್ಕೃತಿಕ ಹೊಸಪೇಟೆ ತಾಲ್ಲೂಕಿನ ಕೇರಿಗೊಂದು ಗರಡಿಮನೆಗಳಿರುತ್ತಿದ್ದವು. ಹಂಪಿ ಉತ್ಸವ ಸಮೀಪಿಸುತ್ತಿದ್ದಂತೆ ಗರಡಿಗಳಲ್ಲಿ ಮಲ್ಲರೆಲ್ಲರೂ ಸೇರಿ ಮುಂಜಾನೆಯಿಂದ ರಾತ್ರಿಯವರೆಗೂ ಬಿಡುವಿಲ್ಲದೆ ಕಸರತ್ತು ನಡೆಸುತ್ತಿದ್ದರು.

ಹೊಸಪೇಟೆಯ ಗರಡಿಗಳೂ ಇಂದು ಜೀವಂತವಾಗಿ ಉಸಿರಾಡುತ್ತಿದ್ದರೆ ಅದಕ್ಕೆ ಬಹುಷಃ ಸ್ಥಳೀಯ ಬೇಡ ಜನಾಂಗವೆಂದರೆ ತಪ್ಪಾಗಲಾರದು.

ವಿಜಯನಗರದ ಅರಸರಿಗೆ ತಮ್ಮ ಪೂರ್ವಜರು ಸೈನಿಕರಾಗಿ ಕಾರ್ಯನಿರ್ವಹಿಸುತ್ತದ್ದರೆಂದು ಹೊಸಪೇಟೆಯ ಬೇಡರು ನಂಬುತ್ತಾರೆ. ಬೇಡರು ಸ್ವಭಾವತಃ ದೈಹಿಕವಾಗಿ ಬಲಾಢ್ಯರು. ಹೋರಾಟದಲ್ಲಿ ನಿಪುಣರೂ ಆಗಿದ್ದ ಬೇಡ ಹಾಗೂ ಇತರ ಜನಾಂಗದ ಪೈಲ್ವಾನರನ್ನು ವಿಜಯನಗರ ಅರಸರು ವಿಶೇಷವಾಗಿ ಗೌರವಿಸುತ್ತಿದ್ದರು. "ಗರಡಿಮನೆಗಳಲ್ಲಿ ಸಹಜವಾಗಿ ಬೇಡ ಸಮುದಾಯದವರೇ ತುಂಬಿಕೊಂಡಿರುತ್ತಿದ್ದರಂತೆ, ಇಂದಿಗೂ ಹಂಪಿಯ ರಥೋತ್ಸವದಲ್ಲಿ ಬೇಡರೆ ಮೊದಲು ರಥ ಎಳೆಯುವ ಗೌರವ ಇದೇ ಕಾರಣದಿಂದಲೇ ಅವರಿಗೆ ಲಭಿಸಿದೆಯಂತೆ." (ಹಂಪಿ ಜಾನಪದ: ೧೯೯೭: ಪುಟ ೧೦೬)

ಈ ರೀತಿ ಕುಮಾರರಾಮ ಹಾಗೂ ವಿಜಯನಗರ ಕಾಲದಲ್ಲಿ ಹೊಸಪೇಟೆ ತಾಲೂಕಿನಲ್ಲಿ ಗರಡಿಕಲೆಗೆ ಒಂದು ಭದ್ರ ಬುನಾದಿ ಹೊರೆಯಿತು. ತರುವಾಯ ಕೆಲವು ಸಮುದಾಯಗಳಲ್ಲಿ ಗರಡಿಕಲೆ ಎನ್ನುವುದು ಒಂದು ಧಾರ್ಮಿಕ ವಿಧಿಯಾಚರಣೆಆಯಾಗಿ ಬಳಕೆಗೊಳ್ಳುತ್ತಿತ್ತು. ಹಾಗೆ ಅದು ಧಾರ್ಮಿಕ ವಿಧಿಯಾಚರಣೆಗೆ ಬಳಗಾಗುವ ಮೂಲಕ ಹಲವಾರು ಸಂಪ್ರದಾಯ, ವಿಧಿ-ನಿಷೇಧಗಳನ್ನು ತನ್ನೊಂದಿಗೆ ರೂಢಿಸಿಕೊಂಡಿತು. ಗರಡಿಕಲೆಯನ್ನು ವಿಶೇಷವಾಗಿ ಕಲಿತ ಸಮುದಾಯಗಳು, ತಮ್ಮ ಮೂಲ ವ್ಯವಸ್ಥೆಯಿಂದ ದೂರಾಗಿ ತಮ್ಮದೇ ಆದ ಒಂದು ಸಮುದಾಯವಾಗಿ ಬೆಳೆಯುವಷ್ಟು ಶಕ್ತವಾದವು (ಮಲ್ಲ ಸಮುದಾಯ, ಜಟ್ಟಿ ಸಮುದಾಯ, ಬಂಟ ಸಮುದಾಯ). ಆದರೆ ಕಾಲಮಾನದ ಬದಲಾವಣೆಯಿಂದಾಗಿ ಇಂದು 'ಮಲ್ಲ' ಸಮುದಾಯವು ಪೂರ್ಣ ನಾಶಗೊಂಡಿದ್ದರೆ, ಜಟ್ಟಿ ಸಮುದಾಯವು ಕೇವಲ ಮೈಸೂರು ಹಾಗೂ ಸುತ್ತಮುತ್ತಲು ಇದೆ. ಅದು ಇನ್ನು ಕೆಲವೇ ವರ್ಷಗಳಲ್ಲಿ ಮರೆಮಾಚಿ ಹೋಗುವ ಸಾಧ್ಯತೆಯೂ ಇದೆ. ಹಾಗೆ ಬಂಟ

ಸಮುದಾಯವು ಕೇವಲ ಮಂಗಳೂರು ಪ್ರಾಂತಕ್ಕೆ ಮಾತ್ರ ಸೀಮಿತಗೊಂಡಿದ್ದು, ತಮ್ಮ ಪೂರ್ವಜರ ಮೂಲ ವೃತ್ತಿ-ಪ್ರವೃತ್ತಿಗಳನ್ನೇ ಮರೆತು ಬಿಟ್ಟಿವೆಯೇನೋ ಎನ್ನುವಷ್ಟು ಬದಲಾವಣೆಗೆ ಒಳಗಾಗಿದೆ.

ಹೀಗೆ ನಿರಂತರವಾಗಿ ಬದಲಾವಣೆಗಳಿಗೆ ಒಳಗಾಗುತ್ತಲೇ ಬಂದಿರುವ ಗರಡಿಕಲೆ ಆಧುನಿಕ ಜಗತ್ತಿನಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿರುವುದು ಇಂದು ಕಂಡು ಬರುತ್ತದೆ.

ಕುಸ್ತಿಕಲೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ವಿಚಾರ ಮಾಡುತ್ತ ಅದು ಅಸ್ತಿತ್ವ ಕಳೆದುಕೊಳ್ಳಲು ಕಾರಣಗಳೇನಿರಬಹುದು ಎನ್ನುವುದನ್ನು ಗಮನಿಸಬೇಕಾಗಿದೆ.

ಗರಡಿಕಲೆ ಪೂರ್ವದಲ್ಲಿ ಸಮರ ಕಲೆಗೆ ಪೂರಕವಾಗಿರುವ ಕಲೆಯಾಗಿದ್ದಿತು. ಸಮರ ಕಲೆ ರಾಜತ್ವವನ್ನು ಕಾಪಾಡುವ ಉದ್ದೇಶಕ್ಕೆ ಬಳಕೆಗೊಳ್ಳುತ್ತಿತ್ತು. ಆದರೆ ಇಂದು ಹಿಂದೆ ಇದ್ದ ರಾಜ ಮನೆತನಗಳು ಇಲ್ಲ.

ಗರಡಿ ಕಲೆಯೆನ್ನುವುದು ಸಮರ ಕಲೆಗೆ ಪೂರಕವಾಗಿರುವಂಥದು. ಇಂತಹ ಗರಡಿಕಲೆ ವಿಜಯನಗರ ಅರಸರ ಕಾಲದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದಿತು. ಹಾಗೆ ವಿಜಯನಗರ ಸಾಮ್ರಾಜ್ಯದ ಸಾಮಂತ ಅರಸರಾದ ಮೈಸೂರಿನ ಒಡೆಯರು ಸಹ ಗರಡಿಕಲೆ ಬೆಳೆಯಲು ತುಂಬಾ ಪ್ರೋತ್ಸಾಹ ಕೊಟ್ಟರು. ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆಯಿಂದ ಇಂದು ಹೊಸಪೇಟೆ ತಾಲೂಕಿನಲ್ಲಿ ಗರಡಿಮನೆಗಳು ಉಳಿದಕೊಂಡು ಬಂದಿವೆ. ಆದರೆ ಈ ಗರಡಿಮನೆಗಳ ಬಳಕೆ ಮಾತ್ರ ತುಂಬಾ ಕ್ವಚಿತ್ತಾಗಿ ಕಂಡುಬರುತ್ತದೆ. ಇಂದು ಗರಡಿಮನೆಗಳ ಸ್ಥಾನವನ್ನು ಆಧುನಿಕ ಜಿಮ್‌ಗಳು ಆಕ್ರಮಿಸುತ್ತಿವೆಯೆನ್ನುವುದು ಎಲ್ಲರಿಗೂ ತಿಳಿದ ವಿಚಾರ.

ನಮ್ಮ ಪರಂಪರೆಯ ಪ್ರತಿಬಿಂಬದಂತಿರುವ ಸಿರಿವಂತರ ಗರಡಿಕಲೆಯನ್ನು ನಿರ್ಲಕ್ಷಿಸಲು ಕಾರಣಗಳು ಏನಿರಬಹುದು. ಈ ಕಲೆಯನ್ನು ಕಾಪಾಡುವುದಿರಲಿ ಇದರ ಕುರಿತು ಕನ್ನಡದಲ್ಲಿ ಒಂದು ಅಧ್ಯಯನಪೂರ್ಣ ಗ್ರಂಥವೂ ದೊರೆಯದಿರುವುದು ತುಂಬಾ ಶೋಚನೀಯ ವಿಷಯವೇ ಸರಿ. ಮೈಸೂರಿನ ನಗರದ ಗರಡಿಗಳ ಕುರಿತು ಅಧ್ಯಯನ ನಡೆಯುವುದರ ಹೊರತಾಗಿ ಈ ರೀತಿಯ ಬೇರೆ ಅಧ್ಯಯನಗಳು ನಡೆದಿರುವುದು ಕಂಡು ಬರುವುದಿಲ್ಲ.

ಗರಡಿಕಲೆ ಎಂದರೆ ಕೇವಲ ಹಳೇ ಮೈಸೂರಿನ ಪ್ರಾಂತದಲ್ಲಿ ಮಾತ್ರ ಇರುವುದು ಎನ್ನುವುದು ಇಲ್ಲಿವರೆಗೆ ರೂಢಿಯಲ್ಲಿತ್ತು. ಆದರೆ ಹಳೇ ಮೈಸೂರು ಪ್ರಾಂತದ ಹೊರತಾಗಿಯೂ ಉತ್ತರಕರ್ನಾಟಕ ಹಾಗೂ ಹೈದಾಬಾದ್ ಕರ್ನಾಟಕ ಪ್ರಾಂತಗಳಲ್ಲಿಯೂ ಸಹ ಗರಡಿಕಲೆ ಜೀವಂತವಾಗಿದ್ದಿತು. ಇಂದಿಗೂ ಪೂರ್ಣವಾಗಿ ಕೊನೆಗಾಣದೆ ಅಲ್ಪ ಮಟ್ಟಿಗಾದರೂ ಜೀವಂತವಾಗಿದೆ ಎಂಬುದನ್ನು ಈ ಅದ್ಯಯನವು ಗುರುತಿಸಿದೆ.

ಅಧ್ಯಯನದ ಉದ್ದೇಶ ವ್ಯಾಪ್ತಿಗಳನ್ನು ತಿಳಿಸುವುದರೊಂದಿಗೆ ಗರಡಿ ಎನ್ನುವ ಪದ ಹೇಗೆ ಬಂದಿರಬಹುದು. ಗರಡಿಗೂ ಹಿಂದೆ ರಾಜರ ಸೇವಕರಾದ ಗರುಡರಿಗೂ ಏನಾದರೂ ಸಂಬಂಧವಿರಬಹುದೇ ಎಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಹಾಗೆ ಗರಡಿಮನೆಗಳ ಸ್ವರೂಪ, ಗರಡಿ ಪಟುಗಳು, ಅವರು ಹಾಕುವ ಪಟ್ಟುಗಳುಕ ಪಟ್ಟುಗಳನ್ನು ಬಿಡಿಸಿಕೊಳ್ಳಲು ತಿರುಗಿ ಹಾಕುವ ಪಟ್ಟುಗಳು (ತೋಡುಗಳು), ಗರಡಿ ಪಟುಗಳ ಆಹಾರ ಕ್ರಮ, ಅವರು ಜೀವಿಸು ಪರಿಸರ, ಉಡುಗೆ, ಗೊಡುಗೆ, ಸಾಂಸಾರಿಕ ಸಂಬಂಧಗಳು, ಅವರ ಆರ್ಥಿಕ ಸ್ಥಿತಿಗತಿ, ಇತರ ಸಮುದಾಯಗಳಿಗೂ ಗರಡಿಪಟುಗಳ ನಡುವಿನ ಸಂಬಂಧ, ಸಾಮಾಜಿಕವಾಗಿ ಯಾವ ಸ್ಥಾನದಲ್ಲಿರುವ ವ್ಯಕ್ತಗಳು ಗರಡಿ ಪಟುಗಳಾಗುತಗತಾರೆ, ಕುಸ್ತಿಯಾಡಲು ಅವಶ್ಯಕವಿರುವ ವೇದಿಕೆ, ಆ ವೇದಿಕೆಗೆ ಏನೆಂದು ಕರೆಯಲಾಗುತ್ತದೆ, ಅದನ್ನು (ಮಟ್ಟಿಮಣ್ಣು) ತಯಾರಿಸುವ ಕ್ರಮ ಎಂಥದ್ದು, ಅದಕ್ಕೂ ಏನಾದರು ವೈಜ್ಞಾನಿಕ ಕಾರಣಗಳಿರಬಹುದೇ ಮುಂತಾದ ವಿಚಾರಗಳನ್ನು ಗುರುತಿಸಲಾಗಿದೆ.

ಆಧುನಿಕ ಜಗತ್ತಿನಲ್ಲಿ ಗರಡಿಕಲೆ ಎದುರಿಸಬೇಕಾದ ಸಮಸ್ಯೆಗಳು ಏನೇನಿವೆ. ಅದಕ್ಕೆ ಪರಿಹಾರ ಏನಿರಬಹುದು ಮುಂತಾಗಿ ಆಧುನಿಕ ಜಗತ್ತು ಮತ್ತು ಗರಡಿಕಲೆ ಎನ್ನುವಲ್ಲಿ ಗಮನಿಸಲಾಗಿದೆ. ಹಾಗೆ ಹೊಸಪೇಟೆಯಲ್ಲಿ ಒಟ್ಟಿ ಎಷ್ಟು ಗರಡಿಮನೆಗಳಿವೆ. ನಾಶಗೊಂಡ ಗರಡಿ ಮನೆಗಳು ಎಷ್ಟಿವೆ. ಚಾಲ್ತಿಯಲ್ಲಿರುವ ಗರಡಿಮನೆಗಳು ಎಷ್ಟಿವೆ ಮುಂತಾಗಿ ಗರಡಿ ಮನೆಗಳ ಸ್ಥಿತಿಗಳನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ. ಹಾಗೆ ಹೊಸಪೇಟೆ ತಾಲೂಕಿನ ಪ್ರಮುಖ ಗರಡಿ ಪಟುಗಳು ಯಾರ್ಯಾರಿದ್ದಾರೆ, ಅವರ ಜೀವನ ಕ್ರಮ ಸಾಧನೆಗಳು ಹೇಗಿವೆ ಎಂಬುದನ್ನು ವಿವರಿಸಲಾಗಿದೆ.

ವಿಜಯನಗರದರಸರ ಕಾಲದಲ್ಲಿ ಇದು ಶ್ರೀಮಂತವಾಗಿ ಬೆಳೆದಿದ್ದನ್ನು ವಿದೇಶಿ ಪ್ರವಾಸಿಗರು ವರ್ಣಿಸಿರುವರು. ಒಂದು ಕಾಲದಲ್ಲಿ ನಮ್ಮ ಜನಪದರ ದೈನಂದಿನ ಬದುಕಿನೊಂದಿಗೆ ಬಿಡಿಸಲಾಗದ ನಂಟು ಹೊಂದಿದ್ದ ಕ್ರೀಡೆ ಎಂದರೆ ಕುಸ್ತಿ ಎಂದು ಹೇಳಬಹುದು. ದೈಹಿಕ ಶಕ್ತಿ ಯುಕ್ತಿ ಪ್ರತಿಯುಕ್ತಿಗಳ ಸಂಗಮವಾದ ಕುಸ್ತಿಯ ಬಗ್ಗೆ ಪುರಾಣಗಳಲ್ಲಿ ಉಲ್ಲೇಖವಿದೆ. ನಮ್ಮ ಹಿಂದಿನವರೆಗೆ ಅರೋಗ್ಯ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಇನ್ನೊಂದಿಲ್ಲ ಎಂಬ ಸ್ಪಷ್ಟವಾದ ತಿಳಿವಳಿಕೆ ಇತ್ತು. ಅಂತೆಯೇ ಅವರು ದೈಹಿಕ ಸಂಪತ್ತನ್ನು ವೃದ್ಧಿಸುವ ಕ್ರೀಡೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದರು. ಅವುಗಳಲ್ಲಿ ವ್ಯಕ್ತಿಯ ದೇಹ ದಾರ್ಢ್ಯದ ಬಲವರ್ಧನೆಗೆ ಪೂರಕವಾಗುವ ಗರಡಿ ಕಲೆಯಾದ ಕುಸ್ತಿ ಕಲೆಯು ಒಂದಾಗಿದೆ.

ತಿಪ್ಪಮ ನಾಯಕನು ಸಾಹಸ ಪ್ರವೃತ್ತಿಯುಳ್ಳವನಾಗಿದ್ದು ಕರ್ನಾಟಕ ದಕ್ಷಿಣ ಭಾಗದಲ್ಲಿ ಸೂಕ್ತನಾದ ಪ್ರದೇಶವನ್ನು ಹುಡುಕುತ್ತಾ ವಲಸೆ ಬಂದಿರುವ ಸಾಧ್ಯತೆಗಳು ಇರಬಹುದು. ಈ ಸಮಯದಲ್ಲಿ ಅವನು ಮಾರ್ಗ ಮಧ್ಯದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದನು. ಇದೇ ಸಮಯದಲ್ಲಿ ಮಲ್ಲಿಕ್ ಎಂಬ ಪೈಲ್ವಾನನು ಹಿಂದುಸ್ಥಾನದ ಅನೇಕ ಪ್ರಾಂತ್ಯಗಳಲ್ಲಿ ಕುಸ್ತಿ ಮಾಡಿ ವಿಜಯದುಂದುಭಿ ಮೊಳಗಿಸಿ ವಿಜಯನಗರಕ್ಕೆ ಬಂದಿದ್ದನು. ಅವನು ವಿಜಯನಗರ ಚಕ್ರವರ್ತಿಗಳ ಬಳಿಗೆ ಹೋಗಿ ತನ್ನ ಶಕ್ತಿ ಸಾಮರ್ಥ್ಯಗಳ ಬೆಗೆ ಹೇಳಿಕೊಂಡನು. ಅಲ್ಲದೆ ತನಗೆ ವಿಜಯನಗರ ಪೈಲ್ವಾನರೊಂದಿಗೆ ಶಕ್ತಿ ಪ್ರದರ್ಶಿಸಲು ಅನುಮತ ನೀಡಿ, ಇಲ್ಲವೆ ತನಗೆ ತಮ್ಮ ರಾಜಧಾನಿಯಲ್ಲಿ ವಿಜಯ ಸ್ತಂಭವನ್ನು ಸ್ಥಾಪಿಸಲು ಅಪ್ಪಣೆ ಕೊಟ್ಟು ಳಳ ಗರಡಿಗಳ ಮೇಲಿರುವ ಕಲಶ ತೆಗೆಸಿ ಎಂಬ ದುರಹಂಕಾರದ ಮಾತುಗಳನ್ನಾಡಿದನು. ಚಕ್ರವರ್ತಿ ಕೋಪ ಬಂದರೂ ಅದನ್ನು ತೋರ್ಪಡಿಸಿಕೊಳ್ಳದೆ ಜನರತ್ತ ಗಮನಹರಿಸಿದನು. ಯಾರು ಮುಂದೆ ಬರದಿದ್ದಾಗ ಅದೇ ಸಮಯದಲ್ಲಿ ತಿಪ್ಪನಾಯಕ ಮುಂದೆ ಬಂದು ದೊರೆಗಳ ಅನುಮತಿಯನ್ನು ಬೇಡಿದನು. ಅವರು ಆ ಯುವಕನ ಶೌರ್ಯದ ಬಗೆಗೆ ಸಂದೇಹ ವ್ಯಕ್ತಪಡಿಸಿದಾಗ ತಿಪ್ಪನಾಯಕ ತನ್ನ ಸಾಧನೆಯನ್ನು ರಾಜನ ಮುಂದೆ ಹೇಳಿ ಅನುಮತಿ ಪಡೆದನು. ತಿಪ್ಪನಾಯಕ ತನ್ನ ಕೈಯಲ್ಲಿದ್ದ ಕತ್ತಿಯ ಮೊನೆಗೆ ಕಸ್ತೂರಿ ಹಚ್ಚಿಕೊಂಡು ಚಮತ್ಕೃತಿಯಿಂದ ಅವನ ತಲೆಯ ಮೇಲೆ ಹೊಡೆದು ಕೊಲೆಗೈದನು. ಇದರಿಂದ ಸಂತೋಷಗೊಂಡ ಚಕ್ರವರ್ತಿ ಅವನಿಗೆ ಭೂ ಚಕ್ರದ ಕೊಡೆ ನೀಲಿಕೊಡೆ, ಪಂಚವರ್ಣದ ಥಧಾಸು, ಧವಳ, ಶಂಖ, ಚಕ್ರ ನೀಡಿ ಕಸ್ತೂರಿ ಕೋಲಾಹಲ ಕಟಾರಿ ಚಲ್ಯರಗಂಡ, ಬರ್ದರ ಮೂಲಕ ಸಪ್ತಾಂಗ ಹರಣ ಎಂಬು ಬಿರುದನ್ನು ದಯಪಾಲಿಸಿದನು. ರಾಜಕಾಲದಲ್ಲಿ ಕತ್ತಿವರಸೆ, ಕುಸ್ತಿ ಮುಂತಾದ ಶೌರ್ಯದ ಕ್ರೀಡೆಗಳು ಇದ್ದವು ಎಂಬುದನ್ನು ಇತಿಹಾಸದ ಮೂಲಕ ತಿಳಿಯುತ್ತದೆ.

ವಿಜಯನಗರದ ಸಂಸ್ಥಾನದ ಸೈನ್ಯದಲ್ಲಿ ಬೇಡರದ್ದೇ ದೊಡ್ಡ ಪಡೆಯೊಂದಿತ್ತು ಎಂದು ಬೇಡರು ಇಂದಿಗೂ ನಂಬುತ್ತಾರೆ. ಬಹಳ ಶಕ್ತಿಶಾಲಿಗಳೂ, ಹೋರಾಟದಲ್ಲಿ ನಿಪುಣರೂ ಆಗಿದ್ದ ಬೇಡರನ್ನು ಆ ಕಾಲದ ದೊರೆಗಳು ವಿಶೇಷವಾಗಿ ನಂಬುತ್ತಿದ್ದರಂತೆ, ಗರಡಿ ಮನೆಗಳಲ್ಲಿ ಯಾವಾಗಲೂ ಬೇಡರೇ ತುಂಬಿಕೊಂಡಿರುತ್ತಿದ್ದರಂತೆ, ಹಂಪಿ ರಥೋತ್ಸವದಂದು ಬೇಡರೇ ಮೊದಲು ರಥ ಎಳೆಯುವ ಗೌರವೂ ಅವರಿಗೆ ಆ ಕಾರಣದಿಂದಲೇ ಲಭಿಸಿದೆಯಂತೆ. ರಾಜರ ಗೌರವದ ಸಂಕೇತವಾಗಿ ಈವತ್ತಿಗೂ ಹೊಸಪೇಟೆ ಸುತ್ತಮುತ್ತಲಿನ ಊರುಗಳಲ್ಲಿ ರಾಜರ ಕೊಡುಗೆಯಾಗಿ ಉಳಿದಿವೆ ಎಂದರೆ ತಪ್ಪಗಾಲಿಕ್ಕಿಲ್ಲ.

ದಸರಾ ಹಬ್ಬ ಯಾವ ಕಾಲದಿಂದ ನಡೆಯುತ್ತ ಬಂದಿದೆ ಎಂಬುದಕ್ಕೆ ನಿಖರ ದಾಖಲೆಗಳಿಲ್ಲ. ಆದರೆ ವಿಜಯನಗರ ಅರಸರ ಕಾಲದಲ್ಲಿ ದಸರಾ ವಿಜೃಂಭಣೆಯಿಂದ ನಡೆಯುತ್ತಿತ್ತು ಎಂಬುದಕ್ಕೆ ದಾಖಲೆಗಳು ದೊರಕುತ್ತವೆ. ಪೋರ್ಚುಗೀಸರು ಪ್ರವಾಸಿ ಡೊಮಿಂಗೋ ಇಟಲಿಯ ಯಾತ್ರಿಕ

ನಿಕಲಾಯ್‌ಕಾಂಟಿ ೧೪೪೨ರ ಸುಮಾರಿಗೆ ವಿಜಯನಗರದ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದು. ಪರ್ಷಿಯಾದ ಪ್ರವಾಸಿ ಅಬ್ದುಲ್ ರಜಾಕ್ ದಸರಾ ಆಚರಣೆಯನ್ನು ತಮ್ಮ ಪ್ರವಾಸ ದಾಖಲೆಗಳಲ್ಲಿ ಹಾಡಿ ಹೊಗಳಿದ್ದಾರೆ. ವಿಜಯನಗರದ ಸಾಮ್ರಾಜ್ಯದ ಪತನಾನಂತರ ದಸರಾ ಆಚರಣೆ ನಡೆಯುತ್ತಿತ್ತೇ ಇಲ್ಲವೇ ಎಂಬ ಬಗ್ಗೆ ಇತಿಹಾಸದಲ್ಲಿ ಯಾವುದೇ ದಾಖಲೆಗಳು ಸಿಗುವುದಿಲ್ಲ. ಆದರೆ ಮೈಸೂರು ಅರಸರ ಕಾಲದಲ್ಲಿ ದಸರಾ ವಿಜೃಂಭಣೆಯಿಂದ ನಡೆದ ಬಗ್ಗೆ ಮಾಹಿತಿ ದೊರಕುತ್ತದೆ. ಮೈಸೂರು ಒಡೆಯರ ಆಡಳಿತ ೧೩ನೇ ಶತಮಾನದ ಅಂತ್ಯದಲ್ಲಿ ಆರಂಭವಾದರೂ ೧೬ನೇ ಶತಮಾನದವರೆಗೆ ದಸರಾ ಆರಂಭವಾದ ಬಗ್ಗೆ ಮಾಹಿತಿ ಸಿಗುವುದಿಲ್ಲ.

ಮೈಸೂರು ಸಂಸ್ಥಾನ ಸ್ಥಾಪನೆಯಾದ ನಂತರ ೧೫೬೮ರವರೆಗೆ ಅದು ವಿಜಯನಗರ ಪತನಾನಂತರ ಮೈಸೂರು ಅರಸರು ಅಲ್ಲಿ ಆಚರಿಸುತ್ತಿದ್ದ ಕೆಲವು ಆಚರಣೆಗಳನ್ನು ಮುಂದುವರಿಸಿದರು. ಅವುಗಳಲ್ಲಿ ದಸರಾ ಕೂಡಾ ಒಂದು. ೧೬೧೦ರ ವೇಳೆಗೆ ಮೈಸೂರು ಒಡೆಯರಾಗಿದ್ದ ರಾಜ ಒಡೆಯರ್ ಕಾಲದಲ್ಲಿ ದಸರಾ ಪುನರಾರಂಭವಾದ ಬಗ್ಗೆ ಮಾಹಿತಿಗಳು ಲಭ್ಯವಿದೆ. ವಿಜಯನಗರದ ಅರಸರ ರತ್ನ ಖಚಿತ ಸಿಂಹಾಸನ ಈಗಲೂ ಮೈಸೂರು ಅರಮನೆಯಲ್ಲಿದೆ. ಈ ಸಿಂಹಾಸನವೇರಿದ ರಾಜ ಒಡೆಯರ್ ಅವರು ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಆಚರಿಸಲಾಗುತ್ತಿದ್ದ ದಸರಾ ಮಹೋತ್ಸವವನ್ನು ಪುನರಾರಂಭಿಸಿದರು ಎಂದು ತಿಳಿದು ಬಂದಿದೆ. ದಸರಾದ ಸಂದರ್ಭದಲ್ಲಿ ಕುಸ್ತಿ ಕಲೆಗೆ ಹೆಚ್ಚಿಗೆ ಮನ್ನಣೆ ಕೊಟ್ಟಿದ್ದರು ಎಂಬುದು ಸಹ ಇತಿಹಾಸದಿಂದ ತಿಳಿದುಬರುತ್ತದೆ.

ಶ್ರೀಕೃಷ್ಣದೇವರಾಯ ಸ್ವತಃ ಕುಸ್ತಿಪಟು ಅನ್ನುವುದಕ್ಕೆ ದಿನ ಬೆಳಿಗ್ಗೆ ಆತನು ಗರಡಿಯಲ್ಲಿ ತಾಲೀಮು ಮಾಡುತ್ತಿದ್ದನು. ಡೊಮಿಂಗೋ ಪಿಯಸ್ ಹೀಗೆ ವರ್ಣಿಸಿದ್ದಾನೆ. “ಪ್ರತಿದಿನ ರಾಜನು ಜಂಜಲಿ ಎಣ್ಣೆಯನ್ನು ಕುಡಿಯವ ಅಭ್ಯಾಸವಿರಿಸಿಕೊಂಡಿದ್ದನು. ನಸುಕಿನಲ್ಲಿಯೋ ಎದ್ದು ಈ ಎಣ್ಣೆಯನ್ನು ಮೈಗೆ ಸವರಿಸಿಕೊಳ್ಳುತ್ತಾನೆ. ಚಿಕ್ಕ ಅಂಗವಸ್ತ್ರ (ಕಚ್ಚೆಯಾಗಿರಬೇಕು)ವನ್ನು ಧರಿಸಿ ಬಹಳ ಭಾರವಿರುವ ಮಣ್ಣಿನ ವಸ್ತ್ರಗಳನ್ನು ಬಗಲಲ್ಲಿ ಎತ್ತಿಹಿಡಿದು, ಮೈಗೆ ಹತ್ತಿದ ಎಣ್ಣೆ ಆವಿಯಾಗುವವರೆಗೆ ಖಡ್ಗ, ಗುರಾಣಿಗಳಿರುವ ಕಸರತ್ತು ಮಾಡುತ್ತಿದ್ದನು. ಅನಂತರ ಪೈಲ್ವಾನರೊಡನೆ ಕುಸ್ತಿ ಮಾಡುತ್ತಾನೆ. ಈ ಕಸರತ್ತುಗಳಾದ ನಂತರ ಸುರ್ಯೋದಯವಾಗುವವರೆಗೆ ಕುದುರೆಯ ಸವಾರಿಯನ್ನು ಮಾಡುತ್ತಾನೆ. ನಂತರ ಸ್ನಾನ ಮಾಡುತ್ತಾನೆ.

ದಸರಾ ಉತ್ಸವದ ಸಂದರ್ಭದಲ್ಲಿ ದರ್ಬಾರ ಹಾಲಿನಲ್ಲಿ ಪೈಲ್ವಾನರು ಎಲ್ಲಿ ನಿಲ್ಲುತ್ತಿದ್ದರು, ಕುಳಿತುಕೊಳ್ಳುತ್ತಿದ್ದರು ಎನ್ನುವುದಕ್ಕೆ ಉಲ್ಲೇಖವಿದೆ. “ಮಧ್ಯಾಹ್ನ ೩ ಗಂಟೆಗೆ ಪ್ರತಿಯೊಬ್ಬರು ಹಿಂತಿರುಗುತ್ತಾರೆ, ಎಲ್ಲರನ್ನೂ ಒಳಗಡೆ ಬಿಡುವುದಿಲ್ಲ. ನಮ್ಮನ್ನು ಎರಡು ದ್ವಾರಗಳ ನಡುವಿನ ಬಯಲಿನಲ್ಲಿ ಬಿಡುತ್ತಾರೆ. ಕುಸ್ತಿ ಪೈಲ್ವಾನರು, ನರ್ತಕಿಯರು, ಅಲಂಕೃತವಾದ ಕುದುರೆಗಳು ಆನೆಗಳು, ಇವುಗಳ ಸರದಾರರು ಮೊದಲಾದವರಿಗೆ ಮಾತ್ರ ಒಳಗಡೆ ಪ್ರವೇಶವಿದೆ. ಒಳಗಡೆ ಹೋದೊಡನೆ ಇವರನ್ನೆಲ್ಲಾ ತಮ್ಮ ತಮ್ಮ ಸ್ಥಳಗಳಲ್ಲಿ ಸಾಲಾಗಿ ನಿಲ್ಲಿಸುತ್ತಾರೆ. ಭವನದ ಮಧ್ಯ ಭಾಗದಲ್ಲಿರುವ ಪಾವಟಿಗಳ ಹತ್ತಿರ ಪೈಲ್ವಾನರು ನಿಂತಿರುತ್ತಾರೆ. “ರಾಜನು ಕುಳಿಗ ನಂತರ ಪೈಲ್ವಾನರು ನೆಲದ ಮೇಲೆ ಕುಳಿತುಕೊಳ್ಳುತ್ತಾರೆ.

ಕ್ರಿ.ಶ. ೧೫೨೦-೨೨ರಲ್ಲಿ ಹಂಪಿಗೆ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೋ ಪಯಸನು ನವರಾತ್ರಿ ಉತ್ಸವವನ್ನು ಸಾಕಷ್ಟು ದಾಖಲಿಸಿದ್ದಾನೆ. ಈ ಒಂಭತ್ತು ದಿನಗಳಲ್ಲಿ ನಡೆಯುತ್ತಿದ್ದ ವಿವಿಧ ಕಾರ್ಯಕ್ರಮಗಳ ಜೊತೆಯಲ್ಲಿ ಕುಸ್ತಿ ಸ್ಪರ್ಧೆಯ ಉಲ್ಲೇಖವು ಆತನ ಬರಹದಲ್ಲಿ ಸಿಗುತ್ತದೆ. ಪಯಸನು ತಾನು ನೋಡಿದ ಕುಸ್ತಿ ಪಂದ್ಯಾವಳಿಗಳನ್ನು ಹೀಗೆ ವರ್ಣಿಸುತ್ತಾನೆ. ನಮ್ಮ (ಪೋರ್ಚುಗೀಸರಂತೆ) ಕುಸ್ತಿಯಂತೆ ಅವರು ಕುಸ್ತಿಯಾಡುವುದಿಲ್ಲ. ಅವರು ಗುದ್ದುಗಳನ್ನು ಕೊಡುತ್ತಾರೆ. ಆ ಗುದ್ದುಗಳು ಎಷ್ಟು ಭಯಂಕರವಾಗಿರುತ್ತವೆಂದರೆ ಒಮ್ಮೊಮ್ಮೆ ಕಣ್ಣುಗಳನ್ನು ಕಿವಿಗಳನ್ನು ಮುಖಗಳನ್ನು ನಾಶ ಮಾಡುತ್ತವೆ. ಕೆಲವು ಸಾರಿ ಅವರ ಸ್ನೇಹಿತರು ಪೈಲ್ವಾನರನ್ನು ಅಖಾಡದಿಂದ ಹೊತ್ತು ಹೊರಗೆ ಒಯ್ಯುತ್ತಾರೆ. ನ್ಯಾಯನಿರ್ಣಯ ಮಾಡಲು ಕುಸ್ತಿಯನ್ನು ಆಡಿಸಲು ಗೌರವವನ್ನು ಸಲ್ಲಿಸಲು ಅಲ್ಲಿ ನುರಿತ ಸರದಾರರಿತ್ತಾರೆ. ಈ ದಿವಸ ಕುಸ್ತಿ ಮತ್ತು ನೃತ್ಯವನ್ನು ಬಿಟ್ಟು ಬೇರೇನ್ನೇನೂ ಮಾಡುವುದಿಲ್ಲ. ಸೂರ್ಯಹಸ್ತಗತನಾದೊಡನೆ ದೀವಟಿಕೆಗಳಿಂದ ದೀಪಗಳನ್ನುರಿಸುತ್ತಾರೆ. ಇವುಗಳನ್ನು ಅಖಾಡದ ಸುತ್ತ ನಿಲ್ಲುವುದರಿಂದ ಹಗಲಿನಂತೆ ಗೋಚರವಾಗುತ್ತದೆ. ಭವನಗಳ ಮೋಡಗಳ ಮೇಲೆ

ರಾಜ ಕುಳಿತ ವೇದಿಕೆಯ ಸುತ್ತ ದೀವಟಿಕೆಗಳಿರುತ್ತವೆ. ದೀವಟಿಕೆಗಳನ್ನು ಹಚ್ಚಿದೊಡನೆ ನಮೂನೆಯ ಆಟಗಳನ್ನು ನಾಟಕಗಳನ್ನು ಪ್ರದರ್ಶಿಸುತ್ತಾರೆ.

ಪಯಸ್ ಈ ವರ್ಣನೆಯಲ್ಲಿ ಕುಸ್ತಿ ಸ್ಪರ್ಧೆ ಮತ್ತು ಅನಂತರ ನಡೆಯುತ್ತಿದ್ದವು. ಕಾರ್ಯಕ್ರಮಗಳ ಸೃಷ್ಟಿ ಚಿತ್ರಣ ಸಿಗುತ್ತದೆ. ದೀವಟಿಗಳ ಬೆಳಕಿನಲ್ಲಿ ಈ ಸ್ಪರ್ಧೆಗಳು ಆಟಗಳು ನಡೆಯುತ್ತಿದ್ದವೆಂದು ಮೇಲೆ ಸ್ಪರ್ಧೆಯು ದೀರ್ಘಾವಧಿ ಮನರಂಜನೆಯನ್ನು ನೋಡಿಕೊಳ್ಳಬಹುದು ಎಂದು ಪಯಸ್‌ನು ತಿಳಿಸಿದ್ದಾನೆ.

ಪೋರ್ಚುಗೀಸ್ ಪ್ರವಾಸಿ, ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದಾಗ ವಿಜಯನಗರದಲ್ಲಿ ಮಹಿಳೆಯರೂ ಪೈಲ್ವಾನರಾಗಿದ್ದರು. ಆ ಕಾಲದಲ್ಲಿ ಮಹಿಳೆಯರು ಸಹ ಸದೃಢರು, ಗಂಡಸರಂತೆ ಸಮಬಲರಾಗಿದ್ದರು ಎನ್ನುವುದಕ್ಕೆ ಈ ಉಲ್ಲೇಖವಿದೆ. ಡೊಮಿಂಗೋ ಪಿಯಸ್ ಹೀಗೆ ಉಲ್ಲೇಖಿಸುತ್ತಾನೆ. “ಪ್ರತಿಯೋರ್ವ ರಾಣಿಗೂ ತನ್ನದೇ ಆದ ಅರಮನೆ, ಊಳಿಗವರ್ಗ, ಕಾವಲು ಹೆಂಗಸರು ಮೊದಲಾದವರಿದ್ದರು. ಊಳಿಗದವರೆಲ್ಲರು ಹೇಳುತ್ತಾರೆ. ಖಡ್ಗ ಗುರಾಣಿಗಳನ್ನು ಉಪಯೋಗಿಸಬಲ್ಲ, ಕುಸ್ತಿಯಾಡಬಲ್ಲ ಅನೇಕ ತರದ ವಾದ್ಯಗಳನ್ನು ನುಡಿಸಬಲ್ಲವರು ಇದ್ದರು ಎಂದು ಹೇಳುತ್ತಾನೆ.

ಮಹಿಳೆಯರು ಮತ್ತು ಮಲ್ಲಯುದ್ಧ ಕುರಿತು ವಿಜಯನಗರಕ್ಕೆ ಭೇಟಿ ನೀಡಿದ್ದು ಇನ್ನೊಬ್ಬ ಪೋರ್ಚುಗೀಸ್ ಪ್ರವಾಸಿ ಫರ್ನಾವೊ ನ್ಯೂನಿಜನು ಮಹಿಳೆಯರಿಗೆ ಮಲ್ಲಯುದ್ಧ ಗೊತ್ತಿತ್ತೆಂದು ತಿಳಿಸುತ್ತಾನೆ.

ಗರಡಿ ಕಲೆಯು ಚಾರಿತ್ರಿಕವಾಗಿ ರಾಜ ಮಹಾರಾಜರ ಕಾಲದಿಂದ ಈ ಕಲೆಯು ವೈಭವನ್ನು ಹಲವಾರು ರಾಜರ ಚರಿತ್ರೆಯಲ್ಲಿ ಕಂಡು ಬಂದಿದೆ. ಇದಕ್ಕೆ ರಾಜರು ಮಹತ್ವವನ್ನು ನೀಡಿದ್ದಾರೆ. ಈ ಹಿನ್ನಲೆಯಲ್ಲಿ ರಾಜರ ಗತವೈಭವನ್ನು ನೆನಪಿಸಿಕೊಳ್ಳಲು ಪ್ರತಿ ವರ್ಷವೂ ಹಂಪಿ ಉತ್ಸವದಲ್ಲಿ ಇತರ ಕಾರ್ಯಕ್ರಮಗಳೊಂದಿಗೆ ಕುಸ್ತಿಯ ಅಖಾಡವನ್ನು ನಿರ್ಮಿಸಿ, ನುರಿತ ಕುಸ್ತಿ ಪಟುಗಳಿಂದ ಕುಸ್ತಿಯಾಡಿಸಿ ಗೆದ್ದ ಪೈಲ್ವಾನರಿಗೆ ಬಹುಮಾನಗಳನ್ನು ನೀಡುತ್ತಾರೆ. ಇನ್ನೊಂದು ವಿಶೇಷವೇನೆಂದರೆ ರಾಜರ ಕಾಲದಲ್ಲಿ ಹೆಂಗಸರು ಸಹ ಕುಸ್ತಿ ಪಟುಗಳು ಇದ್ದಾರೆ. ಅದರಂತೆ ಹಂಪಿ ಉತ್ಸವದಲ್ಲಿ ವಿಶೇಷವಾಗಿ ಹೆಂಗಸರ ಕುಸ್ತಿಗಳನ್ನು ಆಡಿಸುತ್ತಾರೆ. ಅವರಿಗೆ ಸಹ ಪ್ರಶಸ್ತಿ ಬಹುಮಾನಗಳನ್ನು ನೀಡುತ್ತಾರೆ.

ಈ ರೀತಿ ಕುಸ್ತಿಯ ಕಲೆಯು ಚಾರಿತ್ರಿಕವಾಗಿ ಕಂಡು ಬಂದರೂ ಸಹ ಈ ಕಲೆಯನ್ನು ಮರೆದಂತೆ ಹೊಸಪೇಟೆ ನಗರದಲ್ಲಿ ಮತ್ತು ತಾಲೂಕಿನಲ್ಲಿ ಸಹ ಗರಡಿ ಕಲೆ ಪ್ರತಿಯೊಂದು ಕೇರಿಗಳಲ್ಲಿ ಗರಡಿ ಮನೆಗಳು ಇವೆ. ಇವುಗಳಲ್ಲಿ ಕೆಲವು ಹಾಳಾದ ಗರಡಿ ಮನೆಗಳನ್ನು ಪುನರ್ನಿರ್ಮಾಣ ಮಾಡಲು ಸರಕಾರ ಮುಂದಾಗಬೇಕು.

ಇಷ್ಟೆಲ್ಲ ಚಾರಿತ್ರಿಕವಾಗಿ ಗರಡಿ ಕಲೆಯು ನಡೆದು ಬಂದಿದೆ. ಇದಕ್ಕೆ ಸರ್ಕಾರ ಮತ್ತು ಯುವಜನಾಂಗ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಿಲ್ಲ. ಗರಡಿ ಕಲೆ ಅವನತಿ ಹಾದಿ ಹಿಡಿದಿದೆ. ಪ್ರತಿ ಸಾರಿ ಹಂಪಿ ಉತ್ಸವದಲ್ಲಿ ಕುಸ್ತಿ ಅಖಾಡ ನಿರ್ಮಾಣ ಮಾಡಬೇಕೆಂದು ಜನಸಮೂಹದಲ್ಲಿ ಮಂತ್ರಿಗಳ ಘೋಷಣೆ ಮಾಡುತ್ತಾರೆ ಹೊರತು ಅದರ ಬಗ್ಗೆ ಕೆಲಸ ಕಾರ್ಯ ಮಾಡಲು ಇನ್ನೂ ಪ್ರಯತ್ನ ಮಾಡುತ್ತಿಲ್ಲ. ಸರ್ಕಾರ ಈ ಸಾರಿ ಆದರೂ ಕಾಳಜಿವಹಿಸಿ ಕುಸ್ತಿ ಅಖಾಡ ನಿರ್ಮಾಣ ಮಾಡುತ್ತಾರೆಂದು ನಂಬಿಕೆ ಇಡೋಣ.

**ಆಕರ**

ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ, ೨೦೦೪, ಪಿಎಚ್.ಡಿ. ಮಹಾಪ್ರಬಂಧ ಆಯ್ದ ಭಾಗಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ೧೭. ವಿಜಯನಗರ ಕಾಲದ ಬೇಟೆ ಹಬ್ಬ

'ಬೇಟೆ' ಆದಿಮಾನವ ಆಹಾರ ಸಂಗ್ರಹಣೆಯಲ್ಲಿ ಪ್ರಮುಖ ವೃತ್ತಿಯಾಗಿತ್ತೆಂಬುದು ಗಮನಾರ್ಹ. ಗಡ್ಡೆ-ಗೆಣಸುಗಳ ನಂತರ ಪ್ರಾಣಿಗಳನ್ನು ಕೊಂದು ತಿನ್ನುವ ವಿನೂತನ ಪ್ರವೃತ್ತಿ ಮಾನವನಲ್ಲಿ ಬೆಳೆದಂತೆ ಬೇಟೆಯ ಆಯಾಮದಲ್ಲಿ ಕ್ರಾಂತಿಕಾರಿ ಬದಲಾವಣೆಯಾಯಿತು. ದುಷ್ಟ ಮೃಗಗಳ ರಕ್ಷಣೆ, ಆಹಾರ ಸಮತೋಲನ, ಮನೋರಂಜನೆ, ಅಷ್ಟಾದಶವರ್ಣನೆ, ಆತ್ಮರಕ್ಷಣೆ, ವ್ಯಾಪಾರ ಹೀಗೆ ನಾನಾ ಕಾರಣಗಳಿಗಾಗಿ ಬೇಟೆ ಇಂದಿಗೂ ಜೀವಂತಿಕೆ ಪಡೆದುಕೊಂಡಿದೆ. ಭಾರತದ ಹಲವು ಆಳರಸರ ಕಾಲಾವಧಿಯಲ್ಲಿ ಈ ಬೇಟೆ ಚಿತ್ರಣವನ್ನು ಕಾಣಬಹುದಾಗಿದೆ. ಮಧ್ಯಕಾಲ ಅಥವಾ ವಿಜಯನಗರ ಕಾಲದಲ್ಲಿ ಬೇಟೆ ಸಾಂಸ್ಕೃತಿಕ ಪರಿವರ್ತನೆ ಮತ್ತು ರಾಜಪ್ರಭುತ್ವಕ್ಕೆ ಮಹಾತಿರುವಾಗಿ ಪರಿಣಮಿಸಿದ್ದು, ಚರಿತ್ರೆಯಲ್ಲಿ ದಾಖಲಾಗಿಲ್ಲ. ತಕ್ಕಮಟ್ಟಿಗೆ ಶಾಸನ, ವಿದೇಶಿ ಯಾತ್ರಿಕರ ವರದಿ, ಕನ್ನಡ ಕಾವ್ಯ, ಸ್ಮಾರಕ ಶಿಲ್ಪಗಳಲ್ಲಿ ಬೇಟೆ ಉಲ್ಲೇಖಗೊಂಡಿದ್ದು, ಜನಸಾಮಾನ್ಯರಿಂದ ಆಳರಸರವರೆಗೆ ಇದು ತುಂಬಾ ಮಹತ್ವದ ಕ್ರೀಡೆ ಮತ್ತು ಹವ್ಯಾಸವಾಗಿದ್ದಿತು.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಹಿಂದೆ ಬೇಟೆ ಪ್ರಸಂಗ ಬರುವುದು ಅತಿಶಯೋಕ್ತಿಯಲ್ಲ. ಒಂದು ದಿನ ಸಂಗಮನ ಸಹೋದರರಲ್ಲಿ ಹಿರಿಯವರಾದ ಹರಿಹರ, ಬುಕ್ಕರಾಯರು ಬೇಟೆಗೆಂದು ಕಾಡಿಗೆ ಹೋದಾಗ ಮೊಲವೊಂದು ತನ್ನನ್ನು ಬೆನ್ನಟ್ಟಿ ಬರುತ್ತಿದ್ದ ನಾಯಿಗಳನ್ನೇ ಕಚ್ಚಿತು. ಈ ವಿಚಿತ್ರ ಘಟನೆ ಕಂಡ ಹರಿಹರ ಸಂನ್ಯಾಸಿಯೊಬ್ಬನ ಬಳಿ ತಿಳಿಸಿದನು. ಅವನು (ವಿದ್ಯಾರಣ್ಯ?) ಸಾಮ್ರಾಜ್ಯ ಕಟ್ಟಲು ಅದೇ ಒಳ್ಳೆಯ ಸ್ಥಾನ ಎಂದು ಉಪದೇಶ ಮಾಡಿದಂತೆ ಇವರು ಸಾಮ್ರಾಜ್ಯ ಸ್ಥಾಪಿಸಿದರಂತೆ. ಈ ಘಟನೆಯಂತೆ ಹೊಯ್ಸಳ, ಕುಮ್ಮಟದುರ್ಗ ಗುಡೇಕೋಟೆ, ಜರಿಮಲೆ, ಸೊಂಡೂರು, ತರೀಕೆರೆ, ಚಿತ್ರದುರ್ಗ ಮೊದಲಾದ ಸಂಸ್ಥಾನಗಳ ಉಗಮದೊಂದಿಗೆ ಬೇಟೆ ಪ್ರಸಂಗ ಹಾಸುಹೊಕ್ಕಾಗಿ ಬರುತ್ತದೆ. ಹಂಪೆ ಪರಿಸರವು ತಪೋಭೂಮಿ, ಪ್ರಾಚೀನ ವಾನರ ಕೇಂದ್ರ, ಕಿರಾತರ ನೆಲೆಯಗಿದ್ದ ಉಲ್ಲೇಖಗಳಿವೆ. ಹೊಯ್ಸಳರ ಕಾಲಕ್ಕೆ ಹಂಪೆ ಪರಿಸರದಲ್ಲಿ ಕೋಟೆ-ಕೊತ್ತಲುಗಳ ರಕ್ಷಣೆಗೆ ಕಿರಾತ ಪಡೆಯನ್ನು ನೇಮಿಸಲಾಗಿತ್ತು. ವಿಜಯನಗರದ ಅರಸರು ಬೇಟೆಯಲ್ಲಿ ಬಹು ನಿಪುಣರಾಗಿದ್ದರು. ಈ ಅರಸರು ಯುದ್ಧಕ್ಕೆ ಹೋರಾಡುವ ಸಂಭ್ರಮದಂತೆ ಬೇಟೆಗೂ ಹೋಗುವ ಪರಿಪಾಟ ಇಟ್ಟುಕೊಂಡಿದ್ದರು. ಶಿಕಾರಿಗೆ ಹೊರಡುವಾಗ ಹೆಚ್ಚಿನ ಸಂಖ್ಯೆಯಲ್ಲಿ ೧೦,೦೦೦ ಅಶ್ವಾಳು, ೫,೦೦,೦೦೦ ಕಾಲಾಳು ಮತ್ತು ೭೦೦ ಗಜಗಳ ಪರಿವಾರವನ್ನು ಒಯ್ಯುತ್ತಿದ್ದರೆಂದು ತಿಳಿದುಬರುತ್ತದೆ. ವಿಜಯನಗರದಲ್ಲಿ 'ಬೇಡ ಪಡೆ' ನಾನಾ ಕಾರಣಗಳಿಗಾಗಿ ನಿರ್ಣಾಯಕ ಪಾತ್ರ ವಹಿಸಿದ್ದಿತು. ಮೀಸಲು ಪಡೆ, ಗುರಿಕಾರರ ನೆರವಿನೊಂದಿಗೆ ಅರಸರು ಬೇಟೆಗೆ ಹೋಗುತ್ತಿದ್ದ ಉಲ್ಲೇಖಗಳಿವೆ. ಹರಿಹರ, ೨ನೇ ದೇವರಾಯ ಮೊದಲಾದವರನ್ನು ಹೆಸರಿಸಬಹುದು. ಗಜಬೇಂಟೆಕಾರ ಎಂಬ ಬಿರುದನ್ನು ಹೊಂದಿರುವುದು ಶಾಸನಗಳಿಂದ ತಿಳಿಯಬಹುದಾಗಿದೆ.

ವಿಜಯನಗರ ಕಾಲದಲ್ಲಿ ಪ್ರಚಲಿತವಿದ್ದ ಬೇಟೆಯ ಬಗ್ಗೆ ಹಂಪೆಯ ವಿರೂಪಾಕ್ಷ ದೇವಾಲಯ, ಹಜಾರರಾಮ, ವಿಜಯವಿಠಲ, ಕೃಷ್ಣ, ಅಚ್ಯುತ, ಮಾಲ್ಯವಂತ ರಘುನಾಥ, ಪಟ್ಟಾಭಿರಾಮ, ಮಹಾನವಮಿ ದಿಬ್ಬಗಳಲ್ಲಿ ನೋಡಬಹುದು. ಹಂಪೆಯ ಹೊಲರಗೂ ಬೇಟೆಯ ಉಲ್ಲೇಖಗಳ ನೆಲೆಗಳನ್ನು ಗುರುತಿಸಬಹುದು: ಶೃಂಗೇರಿ, ಮೇಲುಕೋಟೆ, ನಂದಿಬೆಟ್ಟ, ಭಾಗಮಂಡಲ, ಕಲ್ಲೂರು, ಹಿರಿಯೂರು, ಶ್ರೀಶೈಲಂ, ಯಗಂಟಿ, ಲೇಪಾಕ್ಷಿ, ಪುಷ್ಪಗಿರಿ ಮತ್ತು ಶಂಕರಗಿರಿಗಳ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣವಿದೆ. ಈ ಬೇಟೆ ಲೌಕಿಕ ಅಲೌಕಿಕ ಲಕ್ಷಣಗಳನ್ನು ಹೊಂದಿದೆ. ವಿಜಯನಗರ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣವು ಆರಾಧನಾ ವೃತ್ತಿಯಾಗಿದ್ದಿತೆಂದು ಹೇಳಬಹುದು. ಬೇಟೆಗಾರರ ಹೆಬ್ಬಾಗಿಲು ಸಹ ಬೇಟೆಯ ಔನ್ನತಿಗೆ ಸಾಕ್ಷಿ. ಇಲ್ಲಿ ಹುಲಿಬೇಟೆ (ವಿಠಲ), ಜಿಂಕೆ ಬೇಟೆ (ಮಹಾನವಮಿ ದಿಬ್ಬ), ಹಂದಿ ಬೇಟೆ, ಆನೆ ಇತರ ಪ್ರಾಣಿಗಳ ಬೇಟೆ ಚಿತ್ರಣವು ಅದ್ಭುತವೆನಿಸುತ್ತದೆ. ಲೌಕಿಕ ಬೇಟೆಯನ್ನು ಮಹಾನವಮಿ ದಿಬ್ಬದಲ್ಲಿ ಕಾಣಬಹುದು. ಅಲೌಕಿಕ ಬೇಟೆಗೆ ಕಿರಾತಾರ್ಜುನೀಯ ಪ್ರಸಂಗವನ್ನು ಉದಾಹರಿಸಬಹುದು. ಅರ್ಜುನನ ಮತ್ಸಬೇಧ, ಲೇಪಾಕ್ಷಿ ವೀರಭದ್ರ ದೇವಾಲಯ (ಕಿರಾತಾರ್ಜುನೀಯ ಪ್ರಸಂಗ) ಇತರ ಸ್ಥಳಗಳಲ್ಲಿ ಕಮಲಾಪುರ, ಮರಿಯಮ್ಮನಹಳ್ಳಿ, ಗುಡೇಕೋಟೆಗಳಲ್ಲಿಯೂ ಮೇಲಿನಂತೆ ಕಾಣಬಹುದು. ವಿಜಯನಗರ ಕಾಲದಲ್ಲಿನ ಬೇಟೆ ಉದ್ಯೋಗವಾಗಿತ್ತೇ ಅಥವಾ ಲಾಭದಾಯಕ ಉದ್ದಿಮೆಯಾಗಿತ್ತೆ ತಿಳಿಯುತ್ತಿಲ್ಲ.

ವಿದೇಶಿ ಪ್ರವಾಸಿಗರಾದ ವೇರ್ಥಮ, ಬಾರ್ಬೋಸ, ಅಬ್ದುಲ್‌ರಜಾಕ್, ಪೆರ್ನಾಂವೊ ನೂನಿಜ್‌ಇತರರು ಬೇಟೆಯ ಸ್ವರ್ಗವೇ ಹಂಪಿ, ಇಲ್ಲಿ ಒಳ್ಳೆಯ ಬೇಟೆಗಾರರಿದ್ದಾರೆ, ಆನೆ ಬೇಟೆ, ಹಂಪೆಯಲ್ಲಿ ದೇವಾಲಯ ಕಟ್ಟಲು ಬೇಟೆಯೇ ಕಾರಣವೆಂದು ತಿಳಿಸುವಾಗ ಬೇಟೆಯ ಧಾರ್ಮಿಕ ಮಹತ್ವಕ್ಕೆ ಇವರು ಗಮನಹರಿಸಿದ್ದರು. ಬೇಟೆ ವಿಧಾನ, ಬಗೆಗಳಲ್ಲಿ ಹುಲಿ, ಆನೆ, ಜಿಂಕೆ, ಮೊಲ, ಹಂದಿಗಳ ಚಿತ್ರಣ ಬಹುವಿಧದಲ್ಲಿ ಉಲ್ಲೇಖಗೊಂಡಿದೆ. ಬೇಟೆಗಾರನೊಂದಿಗೆ ಬೇಟೆ ನಾಯಿಗಳು ಸಹ ಸಹಕರಿಸಿದ್ದು ಕಂಡುಬರುತ್ತದೆ. ಹಂಪಿ ಆನೆಗೊಂದಿ ಪರಿಸರದಲ್ಲಿ ಮೇಲಿನಂತೆ ವನ್ಯಜೀವಿಗಳೊಂದಿಗೆ ಮಾನವನ ಚಿತ್ರಣವನ್ನು ಅರಾಧನಾ ನೃತ್ಯವೆಂಬಂತೆ ಚಿತ್ರಿಸಲಾಗಿದೆ. ಜನಸಾಮಾನ್ಯರಿಂದ ಅಳಿದುಳಿದು ಬಂದ ಬೇಟೆಗೆ ರಾಜ ಮನ್ನಣೆ ದೊರೆತಾಗ ಅದು ಆರಾಧನೆ, ಧಾರ್ಮಿಕ ಸ್ವರೂಪಕ್ಕೆ ಸಿಲುಕಿ ಆಚರಣೆ ಸಂಪ್ರದಾಯಗಳು ತಲೆಮಾರುಗಳಿಂದ ಚಾಲನೆಗೆ ಬಂದವು. ಇವುಗಳ ನಡುವೆಯೂ ಬೇಟೆಯನ್ನಾಡಲು ವಿಧಿ-ಆಚರಣೆ, ನಂಬಿಕೆ-ನಿಷೇಧ ಇತರ ಕಟ್ಟುಪಾಡುಗಳಿದ್ದವೆಂಬುದು ಸ್ಪಷ್ಟ. ಮೇಲೆ ಹೇಳಿದ ಪ್ರಾಣಿಗಳಲ್ಲದೆ, ಇತರ ಪ್ರಾಣಿಗಳ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ. ಕೆಲವು ಪ್ರಾಣಿಗಳಿಗೆ ನಿಷೇಧ ಹೇರಿದ್ದು, ಗೌರವದಿಂದ ಅವುಗಳ ವಧೆಯನ್ನು ಖಂಡಿಸಲಾಗುತ್ತಿತ್ತೆಂದು ತಿಳಿಯಬಹುದು. ಸಿಕ್ಕ ಬೇಟೆಯನ್ನು ಹಂಚಿಕೊಳ್ಳುವಾಗ ಅವರು ಪಡುವ ಸಡಗರ-ಸಂಭ್ರಮದಲ್ಲಿ ಆಹಾರ ವಿನಿಯಮಯವಲ್ಲದೆ, ಸಂತೋಷವಾಗಿ ಸಾಮೂಹಿಕವಾಗಿ ಕುಣಿಯುವ 'ಬೇಟೆ ನೃತ್ಯ'ವನ್ನು ಪ್ರದರ್ಶಿಸುತ್ತಿದ್ದರು. ಇದು ರಾಜನಿಗೂ ಪ್ರಜೆಗಳಿಗೂ ತುಂಬಾ ಇಷ್ಟವಾದ ಔಚಿತ್ಯ ಕಾರ್ಯಕ್ರಮವು ಆಗಿದ್ದಂತಿದೆ. ಇಂತಹ ಉತ್ಸವವನ್ನು ಇಂದು ಯುಗಾದಿ ಸಂದರ್ಭದಲ್ಲಿ ಮಾತ್ರ ನೋಡಲು ಸಾಧ್ಯ. ಆದರೆ ವಿಜಯನಗರದಲ್ಲಿ ಸಂದರ್ಭಕ್ಕೆ ತಕ್ಕಂತೆ ಆಯೋಜಿಸಲಾಗಿತ್ತು. ಹಂಪೆಯ ಮಹಾನವಮಿ ಹಬ್ಬವನ್ನು ಆಚರಿಸುವ ಪೂರ್ವದಲ್ಲಿ ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು. ಈ ಬೇಟೆ ಹಬ್ಬವು ಸಾರ್ವತ್ರಿಕವಾಗಿ ನಡೆಯುತ್ತಿತ್ತಲ್ಲದೆ, ಇಂಥ ಹಬ್ಬದಿಂದಲೇ ಮಹಾನವಮಿ ಹಬ್ಬಕ್ಕೆ ಪ್ರಾಶಸ್ತ್ಯ ಬಂದಂತಿದೆ. ಇನ್ನು ಕೆಲವು ಆಚರಣೆಗಳ ಮೂಲಕ ನೋಡುವುದಾದರೆ ಬೇಟೆಗಾರರು ತಮ್ಮ ಆಯುಧಗಳನ್ನು ಪೂಜಿಸುವುದು ಈ ಹಬ್ಬದಲ್ಲಿ ಮತ್ತು ಬೇಟೆಯನ್ನು ಆಯುಧಗಳಿಗೆ ಬಲಿ ಕೊಡಲಾಗುತ್ತದೆ.

ವಿಜಯನಗರ ಕಾಲದ ಮಹಾಯಾತ್ರಾಸ್ಥಳ, ಧಾರ್ಮಿಕ ನೆಲೆಯಾದ ತಿರುಪತಿಯಲ್ಲಿ ಬೇಟೆ ಹಬ್ಬವು ನಡೆಯುತ್ತಿದ್ದುದು ಮೊದಲ ಉದಾಹರಣೆ. ಇಲ್ಲಿರುವ ಮಹಾನವಮಿ ದಿಬ್ಬದಲ್ಲಿ ಶೇ. ೭೫ ಭಾಗ ವನ್ಯಜೀವಿಗಳ ಬಗ್ಗೆ, ಬೇಟೆ ದೃಶ್ಯಗಳ ಬಗ್ಗೆ ಇರುವ ಶಿಲ್ಪ ಪಟ್ಟಿಕೆಗಳನ್ನು ಅವಲೋಕಿಸಿದರೆ, ಬೇಟೆ ನೃತ್ಯ, ಬೇಟೆ ಹಬ್ಬ ಆಚರಿಸುವ ಬೇಟೆ ದಿಬ್ಬಣವಾಗಿರಬೇಕೆಂದು ನಂಬಬಹುದಾಗಿದೆ. ತಿರುಪತಿ ತಿರುಮಲೆಯಲ್ಲಿ ಬೇಟೆ ಹಬ್ಬವನ್ನು ಬ್ರಹ್ಮೋತ್ಸವದ ಆದ ಮೇಲೆ ೨ ದಿನ ದೀಪಾವಳಿ , ೧ ದಿನ ಕಾರ್ತಿಕ ಹಬ್ಬ, ೧ ದಿನ ಬೇಟೆ ಹಬ್ಬ ಮತ್ತು ೧ ದಿನ ಕಣುವ ಹಬ್ಬ ಮಾಡುತ್ತಿದ್ದರು. ಬೇಟೆ ಹಬ್ಬ ಬಹುತೇಕ ಬೇಸಿಗೆಯ ದಿನಗಳಿಂದಲೇ ಕೂಡಿರುತ್ತದೆ. ತಿರುಪತಿಯಲ್ಲಿ ನಡೆಯುವ ಬೇಟೆ ಹಬ್ಬಕ್ಕೆ ೧೦೦ ಹಣ್ಣು, ಕಬ್ಬು, ಬೆಲ್ಲ, ತೆಂಗಿನಕಾಯಿ, ಎಲೆ ಅಡಿಕೆ, ಹೂವು, ಪತ್ರೆ ಮೊದಲಾದ ವಸ್ತುಗಳನ್ನು ಪೂಜೆಗೆ ಬಳಸುತ್ತಿದ್ದರು . ಭಕ್ತಾದಿಗಳು ಈ ಹಬ್ಬಕ್ಕೆ ಉದಾರವಾಗಿ ದಾನಕೊಟ್ಟ ಉದಾಹರಣೆಗಳಿವೆ. ತಿಮ್ಮಪ್ಪ ದೇವರಿಗೆ ತಿಲ್ಲಪ್ಪನಾಯಕರ್ ದೇಣಿಗೆ ನೀಡಿದ್ದು ಸ್ಮರಣೀಯ. ಈ ಹಬ್ಬದಲ್ಲಿ ಸಂಪ್ರದಾಯದಂತೆ ಬೆಲ್ಲ, ಎಲೆ-ಅಡಿಕೆ, ಕಾಯಿ, ೫೦ ಅಡಿಕೆ, ೧೦೦ ಎಲೆ ಮೊದಲಾದ ವಸ್ತುಗಳನ್ನು ತಪ್ಪದೆ ಗೋವಿಂದನಿಗೆ ಅರ್ಪಿಸಿದ ಭಕ್ತಾದಿಗಳ ದೇಣಿಗೆಗೆ ಲೆಕ್ಕವಿಲ್ಲ. ಬೇಟೆ ಹಬ್ಬದ ದಿನ ಶ್ರೀ ವೆಂಕಟೇಶ್ವರನನ್ನು ಹೊರಗೆ ಆಹ್ವಾನಿಸುವ ಪ್ರಸಂಗವಿದೆ. ಬೇಸಿಗೆ ಅಥವಾ ಸುಗ್ಗಿಯ ಹಬ್ಬದಂತೆ ಬೇಟೆ ಹಬ್ಬವನ್ನು ತಿರುಪತಿ ಗೋವಿಂದರಾಜನ ಹೆಸರಿನಲ್ಲಿ ಉದಯ ಕಾಲದಿಂದ ಆಚರಿಸುತ್ತಾರೆ . ಅಲಂಕಾರ ಮಾಡಿ ದೇವಾಲಯದ ಸೌಂದರ್ಯ ಇಮ್ಮಡಿಗೊಳಿಸಿ ಬೇಟೆ ಹಬ್ಬದಂದು ೨ ಮೊರ ಅಕ್ಕಿ, ತುಪ್ಪ, ಹಣ್ಣು, ಕಾಯಿ, ೨೦೦ ಕಬ್ಬಿಣದಂಟು-ಎಲೆಗಳು, ಮೆಣಸು, ೧೦೦ ಯಾಲಕ್ಕಿ, ಲವಂಗ, ೨೦೦ ಎಲೆ-ಅಡಿಕೆ, ೪ ತಾಳೆಗರಿಗಳನ್ನು ಹಂಚಲಾಗುತ್ತದೆ. ಮಂಟಪದಲ್ಲಿ ಆ ದಿನ ಕೊಳದ ಹತ್ತಿರ ಬೇಟೆ ಹಬ್ಬ. ಅಮವಾಸ್ಯೆ ಆದ ಮೇಲೆ ಬಂಡಿಹಬ್ಬ ಆಗುತ್ತದೆ. ತೆಲುಗಿನಲ್ಲಿ ಬೇಟೆ ಹಬ್ಬಕ್ಕೆ 'ಪಾಡಿಯವೆಟ್ಟೈ' ಎಂದು ಕರೆಯುತ್ತಾರೆ. ವಿಜಯನಗರದ ಕೇಂದ್ರವಾದ ಹಂಪೆಯಲ್ಲಿ ಇತರ ಪ್ರದೇಶಗಳಲ್ಲಿ ಬುಡಕಟ್ಟು ಜನರು ಬೇಟೆ ದಿಬ್ಬ, ವೆಂಕಟಗಿರಿಪುರ ಎಂದು ಕರೆದು ಆರಾಧಿಸುತ್ತಾರೆ. ಅಡವಿಂಚೆಂಚರು ೧ ದಿನ ತಿರುಪತಿಯಲ್ಲಿ ನಡೆಸಿದಂತೆ ಬೇಟೆ ಹಬ್ಬವನ್ನು ತಾವು ಆಚರಿಸಿಕೊಂಡು ಬಂದಿರುತ್ತಾರೆ. ಹಂಪೆಯ ಬೇಟೆಕಾರರ ಹೆಬ್ಬಾಗಿಲು ಬಳಿ ತಿರುಪತಿ ಗುಡ್ಡವಿದ್ದು, ಇಲ್ಲಿ ಸಾಂಕೇತಿಕವಾಗಿ ಬೇಟೆ ಹಬ್ಬವನ್ನು ಮಾಡುತ್ತಿದ್ದರಂತೆ. ಕಾಲ ಬದಲಾದಂತೆ ಬೇಟೆ ಹಬ್ಬ ಕಣ್ಮರೆಯಾಗುವ ಬದಲು ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ ಎಂದು ಹೇಳಬಹುದು. ಇಂದು ಯುಗಾದಿ

ಅಮವಾಸ್ಯೆ ದಿನ ಕಮಲಾಪುರ ಇತರ ಗ್ರಾಮಗಳ ಬೇಡರು ಆನೆಗೊಂದಿ ರಾಜರ ಅನುಮತಿ ಮೇರೆಗೆ (ಸಮಕ್ಷಮ) ಬೇಟೆಗೆ ಹೋಗುತ್ತಾರೆ . ವಿಜಯನಗರ ಸಾಮ್ರಾಜ್ಯದಲ್ಲಿದ್ದ ಈ ಬೇಟೆ ಹಬ್ಬ ಇಂದು ಯುಗಾದಿ ಹಬ್ಬದೊಂದಿಗೆ ಸೇರಿಕೊಂಡು ಕ್ಷತ್ರಿಯ ಧರ್ಮದ ಜೀವ ಕಳೆ ತರುವುದಾಗಿದೆ ಎಂಬ ಪ್ರಾಶಸ್ತ್ಯವಿದೆ. ಇಂದಿಗೂ ಈ ಪರಿಸರದಲ್ಲಿ ಬ್ಯಾಟಿಮರದ ಆಚರಣೆಯನ್ನು ಮಾಡುತ್ತಾರೆ. ಬೇಟೆಗಾರರ ಉಡುಗೆ ತೊಡುಗೆ ಬದಲಾಗಿವೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಸಾಮ್ರಾಜ್ಯದಲ್ಲಿ ಬೇಟೆ ಕಾರ್ಯಕ್ರಮವಿತ್ತು ಎಂಬುದು ಪ್ರಮುಖ ಸಂಗತಿ. ಬೇಟೆಯಿಂದ ರಾಜಪ್ರಭುತ್ವಗಳ ಸಮೃದ್ಧತೆ ಆದದ್ದು ಆಕಸ್ಮಿಕ ೩ ರೀತಿಯಲ್ಲಿ ಇದನ್ನು ಗುರುತಿಸಬಹುದು. ಸಾಮ್ರಾಜ್ಯ ಸ್ಥಾಪನೆ, ರಾಜ್ಯಾಳ್ವಿಕೆಯಲ್ಲಿ ಬೇಟೆಗಾರರು ಮತ್ತು ಅರಸರು ನಡೆಸಿದ ಬೇಟೆ ಜೀವನ ಮತ್ತು ಸ್ವಾಭಾವಿಕವಾಗಿ ಬೇಟೆಗಾರರು ಆಹಾರಕ್ಕಾಗಿ ನಡೆಸಿದ ಬೇಟೆ ಜೀವನ. ವಿಜಯನಗರ ಪೂರ್ವದಲ್ಲಿ ಶಬರಿ, ಕಿರಾತರ, ನೆಲೆಯಾದ ಹಂಪೆಯಲ್ಲಿ ಬೇಟೆ ಇದ್ದಿತು. ಬೇಟೆ ಹಬ್ಬ ಆದ ಬಗ್ಗೆ ವರದಿಗಳಿಲ್ಲ. ಈ ಕಾಲಘಟ್ಟದಲ್ಲಿ ಬಹುಭಾಗದ ಜನರು ಬೇಟೆಯನ್ನು ವಿವಿಧ ಬಗೆಯಲ್ಲಿ ಅವಲಂಬಿಸಿದ್ದರು. ರಾಜಪ್ರಭುತ್ವದಲ್ಲಿ ಕಾರ್ತಿಕ ಹಬ್ಬದ ನಂತರ ಬೇಟೆ ಹಬ್ಬವಾದರೆ, ವಿಜಯನಗರ ಅವನತಿ ನಂತರ ಯುಗಾದಿ ಅಮವಾಸ್ಯೆಯಂದು ಆಗುತ್ತದೆ. ಅನೇಕ ನಾಯಕ-ಪಾಳೆಯಪಟ್ಟುಗಳು, ಬೇಡರು ಇಂದು ಯುಗಾದಿಯಲ್ಲಿಯೇ ಹಂದಿ ಬೇಟೆಗೆ ಹೋಗುವುದು ಗಮನಾರ್ಹ. ಹಂದಿ ಹುಲುಸು, ಇದರಿಂದ ಅಭಿವೃದ್ಧಿ ಸಂಪತ್ತು ಲಭಿಸುತ್ತದೆಂಬ ಪಾರಂಪರಿಕ ನಂಬಿಕೆಯಿದೆ.

**ಅಭ್ಯಸಿಸಿದ ಗ್ರಂಥಗಳು**


೧. ಕೊಟ್ರಯ್ಯ ಸಿ.ಟಿ.ಯಂ, ೧೯೯೭, **ಹಂಪೆ,** ಶ್ರೀ ಶರಣರ ಸುವಾಸಿನಿ ಬಳಗ, ಹೊಸಪೇಟೆ.

೨. ಚನ್ನಬಸಪ್ಪ ಎಸ್. ಪಾಟೀಲ್, ವಿನೋದಾ ಪಾಟೀಲ್(ಸಂ), ೧೯೯೮, **ವಿಜಯನಗರ ಹಂಪೆ ಶಾಸನಗಳು.**

೩. ಚೆಲುವರಾಜು, ೨೦೦೦, **ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ನರಸಿಂಹಮೂರ್ತಿ ಎ.ವಿ., ೧೯೯೬, **ವಿಜಯನಗರ ನಾಣ್ಯ ಸಂಪತ್ತು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫. ಪರಮೇಶ್ವರಪ್ಪ.ಟಿ. (ಸಂ), ೧೯೯೭, **ಹಂಪಿ ಪರಿಸರ ,** ಶ್ರೀ ವಿ.ವಿ.ಹಂ.ಹೆ.ಟ್ರಸ್ಟ್, ಆನೆಗೊಂದಿ.

೬. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, ೧೯೯೬, **ಹಂಪಿ ಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ರಾಬರ್ಟ್ ಸಿವೆಲ್(ಅನು) ಸದಾನಂದ ಕನವಳ್ಳಿ, ೧೯೯೨, **ಮರೆತು ಹೋದ ಸಾಮ್ರಾಜ್ಯ ವಿಜಯನಗರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ವಸುಂಧರಾ ಫಿಲಿಯೋಜಾ, ೧೯೯೨, **ಅಳಿದುಳಿದ ಹಂಪೆ,** ಪ್ರೇಮಸಾಯಿ ಪ್ರಕಾಶನ, ಬೆಂಗಳೂರು.


**ಆಕರ**


ವಿಜಯನಗರ ಅಧ್ಯಯನ , ಸಂ.೯. ೨೦೦೪, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೬೧-೬೫.


**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

# ೧೮. ಮೀನಗೊಂದಿಯ ಬಡಿಗೆ ಹಬ್ಬ: ವಿಜಯನಗರದ ಯೋಧ ಪರಂಪರೆಯ ಪ್ರತೀಕ?

ವಿಜಯನಗರ ಕಾಲದ ಹಬ್ಬಾಚರಣೆಗಳ ಕುರುಹಾಗಿ ಇಂದು ಕರ್ನಾಟಕದಾದ್ಯಂತ ಉಳಿದಿರುವ ಬೊಂಬೆಹಬ್ಬ ಮುಂತಾದವು ಗಮನಾರ್ಹ. ಅದೇ ತೆರನಾಗಿ ಈ ದಸರಾ ಉತ್ಸವದಲ್ಲಿ ಸೈನಿಕರಿಗೆ ಹೆಚ್ಚಿನ ಮಹತ್ವವಿತ್ತು. ರಾಯರ ಕಾಲದಲ್ಲಿ ಸೈನಿಕರು ಪ್ರದರ್ಶಿಸುತ್ತಿದ್ದ ವಿವಿಧ ಬಗೆಯ ಖಡ್ಗದಾಟ, ಬಾಣದ ಸಿಡಿತ, ಕುಸ್ತಿ ಮೊದಲಾದವು ಉತ್ಸವದಲ್ಲಿ ಹೆಚ್ಚಿನ ಮಹತ್ವವನ್ನು ಹೊಂದಿದ್ದವು. ಅದರ ಕುರುಹು ಎಂಬಂತೆ ಇಂದಿಗೂ ಮೀನಗೊಂದಿ ಮಲ್ಲಯ್ಯನ ದಸರಾ ಉತ್ಸವದಲ್ಲಿ ನಡೆಯುವ ಬಡಿಗೆ ಆಟವು ವಿಜಯನಗರ ಕಾಲದ ಯೋಧ ಪರಂಪರೆಯ ಪ್ರತೀಕ ಎಂಬುದನ್ನು ಗುರುತಿಸಬಹುದು. ವರ್ತಮಾನದಲ್ಲಿ ನಿಂತು ಗತಕಾಲವನ್ನು ಅವಲೋಕಿಸಿದರೆ ಅದೆಷ್ಟೋ ಸಾಂಸ್ಕೃತಿಕ ಚಹರೆಗಳ ರೂಪರೇಷೆಯು ನಮಗೆ ದೊರೆಯುತ್ತವೆ. ಇದರಿಂದ ಗತದ ಚರಿತ್ರೆಯು ನಮ್ಮೆದುರಿಗೆ ಕಟ್ಟಿಕೊಳ್ಳುತ್ತದೆ. ಇಂದು ಅಲ್ಲಲ್ಲಿ ಸಾಂಕೇತಿಕವಾಗಿ ಉಳಿದುಕೊಂಡಿರುವ ಹಲವಾರು ಹಬ್ಬಾಚರಣೆಗಳು ಚರಿತ್ರೆಯ ಮುಖ್ಯ ಘಟನೆಗಳನ್ನು ಪ್ರತಿನಿಧಿಸುತ್ತವೆಯೆಂಬುದನ್ನು ಗಮನಿಸಬೇಕು.

ಮೀನಗೊಂದಿಯು ಇಂದು ಆಲೂರು ತಾಲ್ಲೂಕು ಕರ್ನೂಲು ಜಿಲ್ಲೆಯಲ್ಲಿದೆ. ಇದನ್ನು 'ದೇವರಗುಡ್ಡ' ಎಂದು ಕರೆಯಲಾಗುತ್ತದೆ. ಇಲ್ಲಿನ ಮುಖ್ಯ ದೈವ ಮಲ್ಲಯ್ಯ. ಮೂಲತಃ ಇದು ಮೈಲಾರ ಕ್ಷೇತ್ರ. ಮೈಲಾರ ಕ್ಷೇತ್ರಗಳೆಲ್ಲವುಗಳಲ್ಲಿ ಕಾರಣಿಕ ಮುಂತಾದ ಆಚರಣೆಗಳಿವೆ. ಆದರೆ ಮೀನಗೊಂದಿಯಲ್ಲಿ ಈ ಬಡಿಗೆಯಿಂದ ಹೊಡೆದಾಡುವ ಅಥವಾ ಬಡಿಗೆಯಿಂದ ಉತ್ಸವ ಮೂರ್ತಿಗಳನ್ನು ಮೆರೆಸುತ್ತಾ ಬರುವ ಪದ್ಧತಿಯು ವಿಜಯನಗರೋತ್ತರ ಕಾಲಾವಧಿಯಲ್ಲಿ ರೂಢಿಯಾಗಿರಬೇಕು. ಮೀನಗೊಂದಿಯ ಪರಿಸರದ ಆದವಾನಿ, ಕೌತಾಳಂ, ಕೋಟಕಲ್ಲು, ಬೂದೂರು, ಕುರುಕುಂದೆ, ಗೂಳ್ಯ, ಚಿಪ್ಪಗಿರಿ, ಬೆಳ್ದೊಣೆ, ಬೊಳಗೋಟೆ, ಸುಳುವಾಯಿ, ಹತ್ತಿಬೆಳಗಲ್ಲುಗಳಲ್ಲಿ ದೊರೆಯುವ ವಿಜಯನಗರ ಕಾಲದ ಅನೇಕ ಶಾಸನಗಳಲ್ಲಿ ಈ ಬಡಿಗೆಹಬ್ಬ ಕುರಿತಾದ ಉಲ್ಲೇಖಗಳು ಕಂಡುಬರುವುದಿಲ್ಲ. ಆದರೂ ಮೌಖಿಕ ಕಥನಗಳು ಮತ್ತು ಸ್ಥಳೀಯ ಮೌಖಿಕ ಹೇಳಿಕೆಗಳಿಂದ ಇದನ್ನು ನಿರೂಪಿಸಿಕೊಳ್ಳಬೇಕಾಗಿದೆ. ಅಂತೆಯೇ ವಿದೇಶೀಯರು ವಿಜಯನಗರವನ್ನು ಕಂಡು ಬರೆದ ಪ್ರವಾಸಿ ಬರೆಹ, ರತ್ನಾಕರವರ್ಣಿಯ 'ಭರತೇಶ ವೈಭವಗಳು' ಇದಕ್ಕೆ ಮತ್ತಷ್ಟು ಆಧಾರಗಳನ್ನು ಒದಗಿಸುತ್ತವೆ.

ವಿಜಯನಗರದ ದಸಾರ ಉತ್ಸವವನ್ನು ಪಯಾಸ್"ವಿಜಯದಶಮಿಯ ದಿನ ರಾಜಧಾನಿಯ ಪ್ರಮುಖ ಸ್ಥಳಗಳಲ್ಲಿಯೂ ರಸ್ತೆಗಳಲ್ಲಿಯೂ ಸೈನ್ಯಗಳು ಸಾಲುಗಟ್ಟಿ ನಿಂತಿರುತ್ತಿದ್ದವು. ಸರೋವರ ಅಥವಾ ಕೆರೆಗಳಿದ್ದೆಡೆಯಲ್ಲಿಯೂ ಸೈನಿಕರು ನಿಂತಿದ್ದರು. ರಸ್ತೆಗಳು ಕಿರಿದಾಗಿದ್ದರಿಂದ ಬೆಟ್ಟ-ಗುಡ್ಡಗಳ ಹತ್ತಿರ, ಮೇಲೆ ನಿಲ್ಲಿಸುತ್ತಿದ್ದರು. ಪ್ರತಿಯೊಂದು ದಂಡಿನ ತುಕಡಿಯ ಮುಂದೆ ಒಬ್ಬ ದಂಡನಾಯಕ ಇರುತ್ತಿದ್ದ . ಆನೆ, ಕುದುರೆಗಳೂ ಇರುತ್ತಿದ್ದವು. ಯುದ್ಧಕ್ಕೆ ಹೊರಟವರಂತೆ ಕಾಣುತ್ತಿರುತ್ತಾರೆ. ಸೇನೆಗಳ ಹತ್ತಿರ ರಾಯನು ಬಂದಾಗ ಸಿಡಿಮದ್ದನ್ನು ಹಾರಿಸುತ್ತಿದ್ದರು" ಎಂದು ವರ್ಣಿಸುತ್ತಾನೆ. ಮೀನಗೊಂದಿಯ ಪರಿಸರದಲ್ಲಿಯೂ ಈ ಬಗೆಯ ಭೌಗೋಳಿಕ ಚಹರೆಯಿದ್ದು ಕೆರೆಯ ದಂಡೆ, ಬೆಟ್ಟ. ಗುಡ್ಡಗಳ ಮೇಲೆ ಬಡಿಗೆಯನ್ನಿಡಿದು ಸೈನಿಕರೋಪಾದಿಯಲ್ಲಿ ಜನರು ನಿಂತಿರುತ್ತಾರೆ. ಹೆಗ್ಗಡೆಯು ಕುದುರೆಯ ಮೇಲೆ ಬಂದನಂತರ ಇಲ್ಲಿಯೂ ಔಟನ್ನು (ಸಿಡಿಮದ್ದು) ಹಾರಿಸುತ್ತಾರೆ.

ಅದೇ ರೀತಿಯಾಗಿ ಪಯಾಸ್‌ಉಲ್ಲೇಖಿಸುವಂತೆ, 'ರಾಜನು ಸಿಂಹಾಸನದ ಮೇಲೆ ಕುಳಿತು ನಾರಿಯರ ಹಾಗೂ ನೃತ್ಯಗಾತಿಯರ, ವೇಶ್ಯಾ ಸ್ತ್ರೀಯರ ಹಲವಾರು ನೃತ್ಯ ವೀಕ್ಷಿಸುತ್ತಿದ್ದನು' ಎಂದು ಹೇಳುತ್ತಾನೆ. ಮೀನಗೊಂದಿಯಲ್ಲಿಯೂ ದೊರೆ ಎಂದೆನಿಸಿಕೊಂಡ ಹೆಗ್ಗಡೆಯು ಸಿಂಹಾಸನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾನೆ. ಆಗ ಬಸವಿಯರು ಕುಣಿದು ನೃತ್ಯ ಮಾಡುವುದನ್ನು ವೀಕ್ಷಿಸುತ್ತಾನೆ.

ವಿಜಯದಶಮಿಯ ದಿನ ದಂಡಾಳುಗಳಲ್ಲದೇ ಸಾಮಾನ್ಯ ಜನರೂ ಇದರಲ್ಲಿ ಭಾಗವಹಿಸಿ ತಮ್ಮ ಆನಂದೋತ್ಸಾಹಗಳಲನ್ನು ಗಮನಾರ್ಹವಾಗಿ ಪ್ರಕಟಿಸುತ್ತಿದ್ದರು. ದಂಡಾಳುಗಳು ಆಗಾಗ್ಗೆ ತಂಡೋಪತಂಡವಗಿ ಬೆಟ್ಟಗುಡ್ಡಗಳ ಇಳಿಜಾರಿನಿಂದ ಕೆಳಗಡೆಗೆ ನುಗ್ಗಿ ಬರುತ್ತಾ ಕೇಕೆಗಳನ್ನು ಹಾಕುತ್ತಾ ತಮ್ಮ ಕೈಗಳಲ್ಲಿದ್ದ ಗುರಾಣಿಗಳನ್ನು ಬಡಿಯುತ್ತಾ ಹಿಡಿದಿದ್ದ ಆಯುಧಗಳನ್ನು ಝಳಪಿಸುತ್ತಿದ್ದರೆಂದು

ವಿಜಯನಗರದ ಉತ್ಸವ ಕುರಿತು ಹೇಳುತ್ತಾರೆ. ಅದರಂತೆ ಮೀನಗೊಂದಿಯಲ್ಲಿಯೂ ಜನರು ತಮ್ಮ ಕೈಗಳಲ್ಲಿ ಹಿಡಿದ ಉದ್ದವಾದ ಬಡಿಗೆಗಳಲನ್ನು ತಂಡೋಪತಂಡವಾಗಿ ನಿಂತು ಬಡಿಯುತ್ತಾರೆ. ನೆರೆದ ಸಾಮಾನ್ಯ ನೋಡುಗರು ಅವರಿಗೆ ಭಂಡಾರವನ್ನು ಚೆಲ್ಲಿ ಕೇಕೆ ಹೊಡೆದು ಹುರಿದುಂಬಿಸುತ್ತಾರೆ. ಆಯಾ ಗ್ರಾಮಗಳಿಂದ ಬಂದ ಬಡಿಗೆ ಹಿಡಿದ ಗುಂಪು ಅಲ್ಲಲ್ಲಿ ಚಿಕ್ಕ ಬೆಟ್ಟಗಳ ಮೇಲಿನಿಂದ ಬಡಿಗೆಯ ನಾದವನ್ನು ಪ್ರದರ್ಶಿಸುತ್ತಾರೆ.

ಭರತೇಶ ವೈಭವದಲ್ಲಿ ದಿಗ್ವಿಜಯ ಪ್ರಕರಣದ ನವರಾತ್ರಿ ಸಂಧಿಯಲ್ಲಿ ರತ್ನಾಕರ ವರ್ಣಿಯು ರಾಯನ ಕಾಲದ ನವರಾತ್ರಿಯ ವೈಭವವನ್ನು ವರ್ಣಿಸಿದ್ದಾನೆ. ಅಲ್ಲಿ ಓಲಗ ರಾತ್ರಿ ನೆರೆಯಿತು. ಅನೇಕ ಬಗೆಯ ಬಾಣಗಳನಹ್ನು ಉರಿಸುತ್ತಿದ್ದರು. ಕತ್ತಿ, ಕಠಾರಿ, ಬೆತ್ತ, ಕಕ್ಕಡೆ, ಕೊಡಲಿ, ಚೂರಿ ಮುಂತಾದವುನ್ನು ಪ್ರದರ್ಶಿಸುತ್ತಿದ್ದ ಜನರನ್ನು ಭೂಪಾಲ ನಿಂತು ನೋಡಿದ ವಿವರಗಳಿವೆ. ಇದಕ್ಕೆ ಹೋಲುವಂತೆಯೇ ದೇವರಗುಡ್ಡ (ಮೀನಗೊಂದಿ)ದಲ್ಲಿ ಬಡಿಗೆಹಬ್ಬ ರಾತ್ರಿ ನೆರವೇರುತ್ತದೆ. ಬಂದಂತಹ ಭಕ್ತಾದಿಗಳು ತಮ್ಮ ಆಯುಧಗಳನ್ನು ಪ್ರದರ್ಶಿಸುತ್ತಾರೆ.

ಮೀನಗೊಂದಿಯಲ್ಲಿಯೂ ಹೆಗ್ಗಡೆ ಅಥವಾ ಗೊರವಪ್ಪ ಸೈನಿಕರೋಪಾದಿಯಲ್ಲಿ ನಿಂತ ಬಡಿಗೆಧಾರಿಗಳನ್ನು ನೋಡುತ್ತಾ ಬನ್ನಿಮರದ ಕಟ್ಟೆಗೆ ಬಂದು ಪೂಜೆಯಾದ ಬಳಿಕ ಮಹಾನವಮಿ ಮುಕ್ತಾಯವಾಗುತ್ತದೆ.

ವಿಜಯನಗರದಲ್ಲಿ ನಡೆಯುತ್ತಿದ್ದ ಮಹಾನವಮಿ ಹಬ್ಬದ ವಿವರಗಳನ್ನು ಮೀನಗೊಂದಿ ಹಬ್ಬಕ್ಕೆ ಹೋಲಿಸಲು ಕಾರಣವಿಷ್ಟೇ, ರಾಜಧಾನಿಯಾದ ಹಂಪಿಯಲ್ಲಿ ಚಕ್ರವರ್ತಿಯ ಸಮ್ಮುಖದಲ್ಲಿ ನಡೆಯುತ್ತಿದ್ದ ಈ ಸೈನಿಕರ ಕವಾಯತು, ಶೌರ್ಯ ಪ್ರದರ್ಶನ ಅವರ ಆಡಳಿತಕ್ಕೆ ಒಳಪಟ್ಟ ಎಲ್ಲಾ ಪ್ರದೇಶಗಳಲ್ಲಿಯೂ ಆಯಾ ರಾಜರು, ಸಾಮಂತರು, ನಾಯಕರು ಮುಂತಾದವರು ಆಚಸಿರಬೇಕು. ಅಲ್ಲದೇ ವಿಜಯನಗರದ ಈ ಸಮೃದ್ಧಿಯು ಕೃಷ್ಣದೇವರಾಯನ ದಂಡುಬೀಡು ಬಿಟ್ಟಿದ್ದ ಪಾಳೆಯದಲ್ಲಿಯೂ ಕಾಣಬಹುದು ಎಂದು ವಿದೇಶಿ ಪ್ರವಾಸಿಗ ನ್ಯೂನಿಜ್‌ಉಲ್ಲೇಖಿಸುತ್ತಾನೆ. ಬಹುಶಃ ವಿಜಯನಗರ ಕಾಲದಲ್ಲಿ ಸೈನಿಕರು ಈ ಮೀನಗೊಂದಿ ಪರಿಸರದ ವಿಶಾಲವಾದ ಬೆಟ್ಟಗಳ ನಡುವಿನ ಮೈದಾನದಲ್ಲಿ ಬೀಡುಬಿಟ್ಟಿದ್ದಿರಬೇಕು. ಅಲ್ಲದೇ ಇಲ್ಲಿರುವ 'ಮದ್ದಿನಮನೆ' ಎಂಬುದು ಅವರ ಮದ್ದುಗುಂಡು, ಆಯುಧಾಗಾರವಾಗಿದ್ದಿರಬೇಕು. ಇದನ್ನು ಜನಸಾಮಾನ್ಯರೂ ಐತಿಹ್ಯಕಟ್ಟಿ ಕೃಷ್ಣದೇವರಾಯನ ಸೈನಿಕರು ಇದ್ದ ಜಾಗ' ಎಂದು ಹೇಳುತ್ತಾರೆ. ದಂಡು ಬೀಡು ಬಿಟ್ಟಿದ್ದ ಈ ಪ್ರದೇಶದಲ್ಲಿ ವಿಜಯದಶಮಿಯ ದಿನದಂದು ಆನಂದೋತ್ಸಾಹದಿಂದ ಕುಣಿದಾಡಿರಬೇಕು. ಈ ಪರಂಪರೆಯೇ ಇಂದಿಗೂ ಉಳಿದಿರುವ ಸಾಧ್ಯತೆಯಿದೆ. ಮೂಲತಃ ಈ ಮೀನಗೊಂದಿ ಕ್ಷೇತ್ರವು ಮೈಲಾರ ಕ್ಷೇತ್ರವಾದರೂ, ವಿಜಯನಗರ ಕಾಲಕ್ಕೆ ಈ ಸೈನಿಕರು ಇಲ್ಲಿ ಬೀಡುಬಿಟ್ಟು ಇಂತಹ ಸೈನಿಕ ಹಬ್ಬಕ್ಕೆ ಕಾರಣವಾಗಿರಬಹುದು. ಇಂದು ಅದು ಬಡಿಗೆಯಿಂದ ಹೊಡೆದಾಡುವ ರೂಪದಲ್ಲಿ ವಿಜಯನಗರದ ಯೋಧ ಪರಂಪರೆಯ ಪ್ರತೀಕವಾಗಿರಬಹುದೆಂದು ಊಹಿಸಬಹುದು.

**ಆಕರ**

ವಿಜಯನಗರ ಅಧ್ಯಯನ, ಸಂ. ೯, ೨೦೦೪, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೫೪-೫೭.

# ೧೯. ಜನಪದ ಆಟಗಳು

ಜನಪದರು  ತಮ್ಮ ಬಿಡುವಿನ ವೇಳೆಯಲ್ಲಿ, ತಮ್ಮದೇ ಆದ ಹಲವಾರು ನೀತಿ ನಿಯಮಗಳ ಚೌಕಟ್ಟಿನಲ್ಲಿ ಪರಸ್ಪರ ಸ್ಪರ್ಧಾತ್ಮಕ ಮನೋಭಾವಕ್ಕಿಂತ ಹೆಚ್ಚಾಗಿ ಜಾಣ್ಮನದ ಕೆಲವು ಆಟಗಳನ್ನು ಆಡುತ್ತಾರೆ. ಇವುಗಳಾವು ಇಂದಿನ ಪಠ್ಯರೂಪಿ ಆಟಗಳಾಗಿರದೆ ಜನಪದರೆ ಸೃಷ್ಟಿಸಿಕೊಂಡು ಆಡುವಂತಹವು. ಇವುಗಳಿಗೆ ಜನಪದ ಆಟ ಎಂಬುದಾಗಿ ಕರೆಯುತ್ತೇವೆ.

ಜನಪದ ಆಟಗಳನ್ನು ಕೇವಲ ಒಂದು ಕಾಲಹರಣದ, ಸಮಯ ಕಳೆಯುವ ಆಟ, ಬಿಡುವಿನ ವೇಳೆಯ ಆಟ, ಜನಸಾಮಾನ್ಯರ ಆಟ ಎಂಬುದನ್ನು ದೂರಮಾಡಿ ಯೋಚಿಸಿದಾಗ ಮಾತ್ರ ಜನಪದ ಆಟಗಳ ಸಾಂಸ್ಕೃತಿಕ ಜಗತ್ತಿಗೆ ದಾರಿಯನ್ನು ಕಂಡುಕೊಳ್ಳಲು ಸಾಧ್ಯವಾಗುತದೆ. ಜನಪದ ಆಟಗಳು ಜನಪದರ ಬುದ್ಧಿಯನ್ನು ಸಾಣೆ ಹಿಡಿಯುವ ಕುಲುಮೆಗಳು. ಹಾಗಾಗಿ ಜನಪದ ಆಟಗಳಲ್ಲಿ ಚಮತ್ಕಾರತೆ, ತೀಕ್ಷ್ಣಬುದ್ಧಿವಂತಿಕೆ ಹಾಗೂ ದಟ್ಟವಾದ ಅರಿವು ಮಹತ್ವದ ಪಾತ್ರವಹಿಸುತ್ತದೆ. ಹಾಗೆಯೇ ಜನಪದರ ಜನಸಾಮಾನ್ಯರ ಯೋಚನೆಯ ಚಿಂತನೆಯ ವಿಷಯಗಳು ಫಲಗೊಳ್ಳುವುದು ಜನಪದ ಆಟಗಳಲ್ಲಿ. ತನ್ನ ಚಿಂತನೆ ಆಲೋಚನೆ ಹಾಗೂ ದೂರದೃಷ್ಟಿಗಳನ್ನು ಒಂದು ನಕಾಶೆ ಚೌಕಟ್ಟಿಗೆ ಜೋಡಿಸಿ ಆ ಮೂಲಕ ತನ್ನ ಫಲಯಾಚನೆಯನ್ನು ಕಂಡುಕೊಳ್ಳಲು ಮಾನವ ಪ್ರಯತ್ನಿಸಿರಬೇಕು. ಸಾಮಾನ್ಯವಾಗಿ ಗ್ರಾಮೀಣ ಬದುಕಿನ ಜನರಲ್ಲಿ ನಾವು ಸೂಕ್ಷ್ಮವಾಗಿ ಗಮನಿಸಿದರೆ ಅವರು ತಾವು ಕುಳಿತು ಮಾತನ್ನಾಡುವಾಗ ಹಲವಾರು ವಿಷಯಗಳಿಗೆ ನೆಲದ ಮೇಲೆ, ಅಥವಾ ತಾವು ಕುಳಿತ ಸ್ಥಳದಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಗೆರೆ ಎಳೆಯುತ್ತ ಗೀಚುತ್ತ ಮಾತನ್ನಾಡುತ್ತಾರೆ. ಹಾಗೆಯೇ ಹಲವು ವಿದ್ಯಾವಂತ ವರ್ಗದಲ್ಲೂ ಬೇರೆಯವರೊಡನೆ ಮಾತನ್ನಾಡುವಾಗ ತಮ್ಮ ಮುಂದಿನ ಕುರ್ಚಿ ಅಥವಾ ಮೇಜಿನ ಕಾಗದದ ಮೇಲೆ ಗೀಚುತ್ತ ಮಾತನ್ನಾಡಿಸುತ್ತಾರೆ. ಇಲ್ಲಿ ನಿರ್ಮಾಣವಾಗುವ ಒಂದೊಂದು ಗೀಚು ಗೆರೆಗಳು ಅವರು ಏನು ಹೇಳಬೇಕು ಎನ್ನುತ್ತಾರೋ ಅದರ ಸಾಂಕೇತಿಕ ಅಂಶಗಳನ್ನು ಸೂಚಿಸುತ್ತವೆ. ಇದನ್ನೇ ಆದಿಮ ಸಂಸ್ಕೃತಿಯ ಜನರಲ್ಲೂ ಕಾಣಬಹುದು. ಹೀಗೆಯೇ ಮಾನವ ತನ್ನ ಬದುಕಿನ ಹಲವಾರು ವಿಚಾರಗಳನ್ನು ಸಾಂಕೇತಿಕ ಗೆರೆಗಳ ಮೂಲಕ ರೂಪಿಸಿಕೊಂಡು ಅದಕ್ಕೆ ಕಂಡುಕೊಂಡ ಪರಿಹಾರದ ಬಗೆಗೆ ಯೋಚಿಸುತ್ತ ಮತ್ತೆಮತ್ತೆ ಅದನ್ನು ಮನನ ಮಾಡುತ್ತ ತನ್ನ ಹಿಂದಿನ ಆಲೋಚನೆಯ ಪುನಃ ಮನನವನ್ನು ಆರಂಭಿಸಿದಾಗಿನಿಂದ ಇಂತಹ ನಕಾಶೆಯ ಚಿಂತನ ಮಂಥನದ ಜನಪದ ಆಟಗಳು ಆರಂಭಗೊಂಡಿರಬಹುದೆಂದು ತೋರುತ್ತದೆ.

**ಹುಲಿಮನೆ ಆಟ**

ಜನಪದರಲ್ಲಿ ಹೆಚ್ಚಾಗಿ ಕಂಡುಬರುವ ನಕಾಶೆ ಮನೆಗಳನ್ನು ನಿರ್ಮಿಸಿಕೊಂಡು ಆಡುವ ಆಟವೆಂದರೆ ಹುಲಿಮನಿ ಆಟ, ಚಕಾರಮನಿಯಾಟ, ಕೈಲಾಸ ಪಟದಾಟ, ಪಗಡಿಮನಿ ಆಟ, ಸರಿಸೋ ಆಟ, ಇತ್ಯಾದಿ ಜನಪದ ಆಟಗಳು ಪ್ರಮುಖವಾಗಿ ಕಂಡುಬರುತ್ತವೆ. ಹುಲಿಮನೆ ಯಾಟದ ಬಗೆಗೆ ಹೀಗೆ ಅರ್ಥೈಸಬಹುದೆನಿಸುತ್ತದೆ. ಸಾಮಾನ್ಯವಾಗಿ ಎಲ್ಲಾ ಗ್ರಾಮೀಣ ಬದುಕಿನ ಜನರಲ್ಲೂ ಪ್ರಚಲಿತವಿರುವ ಆಟ 'ಹುಲಿಮನಿ' ಆಟ. ಕೃಷಿ ಹಾಗೂ ಪಶುಪಾಲಕ ಬದುಕಿನ ಸಮುದಾಯಗಳಲ್ಲಿ ಇಂದಿಗೂ ಹೆಚ್ಚಾಗಿ ಕಂಡುಬರುವುದು.  ಈ ಆಟಕ್ಕೆ ತ್ರಿಭುಜಾಕಾರದ ನಕಾಶೆಪಟ ಬರೆದು ಅದರ ಒಂದೊಂದು ಗೆರೆಗಳು ಸಂಧಿಸುವ ಸ್ಥಳಗಳಲ್ಲಿ ಒಂದು ಎರಡು, ನಾಲ್ಕು ಹೀಗೆ ಹುಲಿ ಎಂಬುದಾಗಿ ಸಂಕೇತಿಸಿ ಕೆಲವು ಕಲ್ಲುಗಳನ್ನು ಇಡುತ್ತಾರೆ. ಅನಂತರ ಹೆಚ್ಚಿನ ಸಂಖ್ಯೆಯ ಸಣ್ಣ ಸಣ್ಣ ಕಲ್ಲುಗಳನ್ನು ನಕಾಶೆಯ ಗೆರೆಗಳು ಸಂಧಿಸುವ ಸ್ಥಳಗಳಲ್ಲಿ ಇಟ್ಟಿರುತ್ತಾರೆ. ಇಲ್ಲಿ ಆಟ ನಡೆಯುವುದು ಹುಲಿ ಆಕಳುಗಳನ್ನು ತಿನ್ನಲು ಹೊಂಚು ಹಾಕುವುದು. ಅದರಿಂದ ಆಕಳು ಹೇಗೆ ತಪ್ಪಿಸಿಕೊಳ್ಳಬೇಕು ಹುಲಿಯನ್ನು ಹೇಗೆ ಬಂಧಿಸಿಡಬೇಕು ಎಂಬ ಚಿಂತನಮಂತನದ ಚಾಣಾಕ್ಷ ಆಟ ಇದಾಗಿದೆ. ಇಲ್ಲಿ ಒಬ್ಬರು ಹುಲಿಯ ಸಂಕೇತದ ಕಾಯಿ (ಕಲ್ಲು)ಗಳನ್ನು ಮತ್ತೊಬ್ಬರು ಆಕಳುಗಳ ಸಂಕೇತದ ಕಾಯಿ (ಕಲ್ಲು) ಗಳನ್ನು ನಡೆಸುತ್ತಾರೆ.  ಬಲಿಷ್ಠವಾದ ಹುಲಿಯು ರಾಸುಗಳ ಗುಂಪಿನ ಮೇಲೆ ಬೀಳದಂತೆ ಅದನ್ನು ತಡೆಯುವ ಹಾಗೂ ಕಟ್ಟಿಹಾಕುವ ಬೌದ್ಧಿಕ ಕಸರತ್ತು ಈ ಆಟದಲ್ಲಿ ಕಂಡುಬರುತ್ತದೆ. ಈ ಮೇಲಿನ ಎಲ್ಲಾ ವಿವರಗಳು ಹಾಗೂ ಆಟದ ಗುಣಧರ್ಮ, ಈ ಆಟ ಪ್ರಚಲಿತದಲ್ಲಿರುವ ಸಮುದಾಯಗಳೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಪಶುಪಾಲಕ ಸಮುದಾಯವೊಂದು

ಸೃಷ್ಟಿಸಿರಬಹುದಾದ ಆಟ ಎಂಬುದಾಗಿ ತಿಳಿದುಬರುತ್ತದೆ. ಸಾಮಾನ್ಯವಾಗಿ ಜಾನಪದ ಅಭಿವ್ಯಕ್ತಿ ಎಂಬುದು ಅನುಭವದ ಮೂಸೆಯಿಂದ ಕಾವುಗೊಂಡು ಸೃಷ್ಟಿಗೊಳ್ಳುವಂತಹದು.

ನಿರಂತರವಾಗಿ ಪಶುಪಾಲನ ವೃತ್ತಿಯನ್ನೇ ಅವಲಂಬಿಸಿ ಬದುಕುತ್ತಿದ್ದ ಜಪದರು (ಪಶುಪಾಲಕರು) ತಾವುಗಳು ಬದುಕುತ್ತಿದ್ದ ನದಿ ಕಣಿವೆ ಅಥವಾ ಬೆಟ್ಟಗುಡ್ಡ ಪ್ರದೇಶಗಳಲ್ಲಿ ತಮ್ಮ ಜೀವನ ಸಂಪತ್ತಾದ ರಾಸುಗಳನ್ನು ಸಂರಕ್ಷಿಸಿ ಉಳಿಸಿಕೊಂಡು ಬದುಕುವುದು ಅವರ ಬಹುಮುಖ್ಯ ಕೆಲಸ ಕೂಡ. ಹಾಗಾಗಿ, ಆಗಿಂದಾಗ್ಗೆ ತಮ್ಮ ರಾಸುಗಳ ಮೇಲೆ ದಾಳಿ ನಡೆಸುತ್ತಿದ್ದ ಕ್ರೂರ ಪ್ರಾಣಿಗಳನ್ನೂ ಹೇಗೆ ತಡೆಯಬೇಕು. ಹಾಗೂ ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ತಾವು ಹಾಗೂ ತಮ್ಮ ರಾಸುಗಳು ಎಂತಹ ಸ್ಥಳದಲ್ಲಿ ನೆಲೆ ನಿಲ್ಲಬೇಕು ಇತ್ಯಾದಿಯಾಗಿ ಯೋಚಿಸುತ್ತಿದ್ದ ಪಶುಪಾಲಕ ಮನಸ್ಸುಗಳ ಆಲೋಚನೆಯ ಸೃಷ್ಟಿಯೇ ಹುಲಿಮನಿ ಆಟ ಎನಿಸುತ್ತದೆ . ಏಕೆಂದರೆ ಇದೊಂದು ಆಲೋಚಿತ ಪಶುಪಾಲಕ ಮನಸ್ಸುಗಳು ಕಂಡುಕೊಳ್ಳ ಬಯಸಿದ ತಮ್ಮ ರಾಸುಗಳ ಸಂರಕ್ಷಣೆಯ ತಂತ್ರ ಶೈಲಿ ಕೂಡ. ನಂತರ ಇದು ಅವರಲ್ಲೇ ಒಂದು ಆಟವಾಗಿ ರೂಪುಗೊಂಡಿರಬಹುದೆನಿಸುತ್ತದೆ . ಇಂದಿಗೂ ಕುರಿ, ದನ, ಎಮ್ಮೆ, ಕಾಯುವವರು ತಮ್ಮ ರಾಸುಗಳನ್ನು ಮೇಯಲು ಬಿಟ್ಟು, ತಾವು ಕುಳಿತ ಬಂಡೆಕಲ್ಲಿನ ಮೇಲೆ ಹಲವಾರು ನಕಾಶೆಪಟಗಳನ್ನು ಬರೆದು ಇಂತಹ ಆಟಗಳನ್ನು ಆಡುತ್ತಿರುತ್ತಾರೆ . 'ಹುಲಿಮನಿ' ಆಟದಲ್ಲಿ ಹಲವು ಬಗೆಯ ನಕಾಶೆ ಪಟಗಳು ಕಂಡುಬರುತ್ತವೆ.

ಈ ನಕಾಶೆ ಪಟವು ಒಂಟಿ ಹುಲಿಮನಿ ಆಟದ್ದು. ಇದು ಒಂದು ಹುಲಿಯನ್ನು ಬಂಧಿಸುವ ಅಥವಾ ಕಟ್ಟಿ ಹಾಕುವ ಬಗೆಗಿನ ಈ ಆಟವನ್ನು ಸಹ ಪರಸ್ಪರ ಇಬ್ಬರು ಆಟಗಾರರು ಆಡುತ್ತಾರೆ . ಇದು ಹುಲಿಮನಿ ಆಟದ ಕಲಿಕೆಯ ಹಂತವೂ ಹೌದು.  ಈ ನಕಾಶೆ ಪಟವು ಒಂಟಿ ಬೆಟ್ಟದ ಜಾಡನ್ನು ನೆನಪಿಗೆ ತರುವಂತೆ ಕಂಡು ಬರುತ್ತದೆ.

ಒಂಟಿ ಹುಲಿಮನಿ ಆಟದ ವಿಸ್ತೃತ ರೂಪ ಈ ಜೋಡಿ ಹುಲಿಮನಿ ಆಟ. ಇಲ್ಲಿ ಎರಡು ಹುಲಿಗಳ (ಕಾಯಿ) ಕಲ್ಲುಗಳಿದ್ದು ತಮ್ಮ ಆಕಳನ್ನು ತಿನ್ನಲು ಬರುವ ಹುಲಿಯನ್ನು ಬಂಧಿಸಿ ಕಟ್ಟಿಹಾಕುವ ಚಾಣಾಕ್ಷ ಆಲೋಚನೆಯ ಮೂಲಕ ಆಟ ಆಡಲಾಗುತ್ತದೆ. ಇಲ್ಲೂ ಪರಸ್ಪರ ಇಬ್ಬರು ಆಟಗಾರರಿದ್ದು, ಹುಲಿ ಹಾಗೂ ಇತರೆ (ಕಾಯಿ) ಕಲ್ಲುಗಳನ್ನು ನಡೆಸುತ್ತಾರೆ.

ಜೋಡಿ ಹುಲಿಮನೆ ಆಟದಲ್ಲಿ ಎರಡು ಹುಲಿಗಳಿದ್ದು ಅವುಗಳು ಎರಡು ಪರಸ್ಪರ ವಿರುದ್ಧ ದಿಕ್ಕಿನಿಂದ ಕುರಿಮನೆಯನ್ನು ಪ್ರವೇಶಿಸುತ್ತವೆ. ಹೀಗೆ ಪ್ರವೇಶಿಸುವ ಎರಡು ಹುಲಿಗಳನ್ನು ನಿಯಂತ್ರಿಸುವ ಚುರುಕುತನವನ್ನು  ಈ ಆಟದಲ್ಲಿ ಪರಸ್ಪರ ಆಟಗಾರರು ಪ್ರದರ್ಶಿಸುತ್ತಾರೆ.

ಈ ನಕಾಶೆ ಪಟವು ಸಂಕೀರ್ಣವಾಗಿದ್ದು ಇಲ್ಲಿ ನಾಲ್ಕು ಹುಲಿ (ಕಾಯಿ) ಕಲ್ಲುಗಳನ್ನು ಇಟ್ಟು ಆಡಲಾಗುತ್ತದೆ. ಇಲ್ಲಿನ ನಾಲ್ಕು ದಿಕ್ಕುಗಳಲ್ಲಿನ ತ್ರಿಕೋನದ ಸಂದಿನಲ್ಲಿ ಹುಲಿಕಲ್ಲುಗಳಿರುತ್ತವೆ. ಉಳಿದಂತೆ ಚೌಕಾಕಾರದ ಗೆರೆಗಳ ಸಂದು ಸ್ಥಳಗಳಲ್ಲಿ ಆಕಳುಗಳ ಕಲ್ಲುಗಳು ಇರುತ್ತವೆ. ಹುಲಿ ಆಕಳುಗಳನ್ನು ತಿನ್ನಲು ಅವಕಾಶವಾಗದಂತೆ ಅವುಗಳನ್ನು ಮೂಲೆ ಮನೆಗಳಲ್ಲಿ ಕಟ್ಟಿಹಾಕುವ ಇಲ್ಲವೆ ಬಂಧಿಸುವ ಪ್ರಯತ್ನ ಇಲ್ಲಿ ಕಂಡು ಬರುತ್ತದೆ. ಇಲ್ಲೂ ಸಹ ಪರಸ್ಪರ ಇಬ್ಬರು  ಈ ಆಟವನ್ನು ಆಡುತ್ತಾರೆ.  ಇಲ್ಲಿ ನಾಲ್ಕು ದಿಕ್ಕಕುಗಳಲ್ಲಿನ ತ್ರಿಕೋನಗಳು ಬೆಟ್ಟಗಳ ಸಂಕೇತವನ್ನು ನಡುವಿನ ಚೌಕಾಕಾರದ ಸ್ಥಳ ಕಣಿವೆಯ ಸಮೀಪದ ಸಮತಟ್ಟಾದ ಮೈದಾನ ಪ್ರದೇಶ ಪಶುಪಾಲಕ ನೆಲೆಯನ್ನು ಸಂಕೇತಿಸುತ್ತವೆ.

ಈ ಆಟದಲ್ಲಿ ಹುಲಿ ಗುಡ್ಡದಿಂದಲೇ ಪ್ರವೇಶ ಮಾಡುತ್ತದೆ. ಹೀಗೆ ಹುಲಿಮನಿ ಆಟದ ಬೆಳವಣಿಗೆ ಹಾಗೂ ಅದರ ಸಾಂಕೇತಿಕತೆ ಪಶುಪಾಲಕ ಬದುಕನ್ನು ಕಟ್ಟಿ ಕೊಡುವಂತಿದೆ. ಹಾಗಾಗಿ ಹುಲಿಮನಿ ಆಟ ಪಶುಪಾಲನ ಬದುಕಿನಷ್ಟೇ ಪ್ರಾಚೀನವಾದ ಆಟ ಎಂಬುದಾಗಿ ಹೇಳಬಹುದು.

ಹಂಪಿಯ ದೇವಾಲಯಗಳ ಜಗಲಿ, ರಂಗಮಂಟಪದ ಹಾಸುಗಲ್ಲುಗಳ ಮೇಲೆ, ಕಲ್ಯಾಣ ಮಂಟಪಗಳ ಹಾಗೂ ಬಂಡೆಗಳ ಮೇಲೆ, ಇಂತಹ ಹಲವಾರು ಹುಲಿಮನಿ ಆಟದ ನಕಾಶೆಪಟಗಳು ಕಂಡು ಬರುತ್ತವೆ. ಇಂದಿಗೂ ಈ ಆಟ ಇಲ್ಲಿನ ಜನಸಾಮಾನ್ಯರಲ್ಲಿ ತುಂಬ ಪ್ರಚಲಿತವಿದ್ದು. ಹೆಂಗಸರು ಗಂಡಸರು ಮಕ್ಕಳಾದಿಯಾಗಿ ಆಡುವುದನ್ನು ಕಾಣಬಹುದು.

ಇಬ್ಬರು ಪರಸ್ಪರ ಎದುರು ಬದುರು ಕುಳಿತು ಆಡುವ ಆಟ. ಮೇಲಿನ ನಕಾಶೆಯಂತೆ ಬರೆದು ಎರಡು ದೊಡ್ಡ ಕಲ್ಲುಗಳು ಇವುಗಳಿಗೆ ಹುಲಿಗಳೆಂದು ಕರೆಯುತ್ತಾರೆ. ಮತ್ತೆ ಉಳಿದ ಸಣ್ಣ ಕಲ್ಲುಗಳು ಅವುಗಳನ್ನು ಕುರಿ ಅಥವಾ ಆಕಳಗಳೆಂದು ಕರೆಯುತ್ತಾರೆ. ದೊಡ್ಡ ಕಲ್ಲನ್ನು ನಡೆಸುವವನು ಸಣ್ಣಕಲ್ಲನ್ನು ನಡೆಸುವಂತಿಲ್ಲ. ಸಣ್ಣ ಕಲ್ಲುಗಳನ್ನು (ಕುರಿ ಆಕಳು) ಮತ್ತೊಬ್ಬರು ನಡೆಸುತ್ತಾರೆ. ನಕಾಶೆಯ ಎಂಟು ಮನೆಗಳ ನಡುವೆ ಒಂದು ಹುಲಿಯಿರುತ್ತದೆ. ಹೊರ ಚೌಕದ ಪೈಕಿ ಒಂದು ನಡುಮನೆಯಲ್ಲಿ ಒಂದು ಹುಲಿಯಿರುತ್ತದೆ. ಮೊದಲು ಹುಲಿ ತನ್ನ ಚಲನೆಯನ್ನು ಪ್ರಾರಂಭಿಸುತ್ತದೆ. ಹುಲಿ, ಕುರಿ, ಆಕಳಗಳನ್ನು ಹಿಡಿಯಲು ಹೊಂಚು ಹಾಕುತ್ತಾ ತನ್ನ ನೇರವಾದ ದಿಕ್ಕಿನಲ್ಲಿನ ಮುಂದಿನ ಖಾಲಿ ಮನೆಗಳಿರುವಲ್ಲಿ ಕೂರುತ್ತದೆ. ಹುಲಿಯ ಎದುರಿಗೆ ನೇರವಾಗಿ ಕುರಿ, ಆಕಳು ಇದ್ದು ಅದರ ನೇರವಾದ ಮುಂದಿನ ಮನೆ ಖಾಲಿ ಇದ್ದರೆ ಹುಲಿ ಖಾಲಿ ಮನೆಗೆ ಹಾರಿ ತನ್ನ ಎದುರಿಗೆ ಸಿಕ್ಕಿದ ಕುರಿ, ಆಕಳನ್ನು ತಿನ್ನುತ್ತದೆ. ಹೀಗೆ ಹುಲಿಗೆ ಕುರಿ ಆಕಳ ಸಿಗದಂತೆ ಖಾಲಿ ಇರುವ ಮನೆಗಳನ್ನು ಗಮನದಲ್ಲಿರಿಸಿ ಅವುಗಳನ್ನು ಬಿತ್ತುವ ಕೆಲಸ ಮಾಡುತ್ತಾನೆ. ಹೀಗೆ ಎರಡೂ ಹೊರ ಚೌಕಗಳಿಂದ ಹುಲಿಗಳು ಮಧ್ಯದ ಚೌಕಕ್ಕೆ ಪ್ರವೇಶ ಪಡೆಯಲು ಹವಣಿಸುತ್ತವೆ. ಹೀಗೆ ಹವಣಿಸುವ ಹುಲಿಗಳನ್ನು ಕುರಿಗಳನ್ನೂ ತಿನ್ನುತ್ತ ಅವುಗಳ ಸಂಖ್ಯೆ ಕಡಿಮೆಯಾಗಿ ಹುಲಿ ಕಟ್ಟಲು ಸಾಧ್ಯವಾಗದಿದ್ದಾಗ ಹುಲಿ ಕಡೆಯವರು ಗೆದ್ದಂತೆ. ಉತ್ತರ ಕರ್ನಾಟಕದ ಕೆಲವೆಡೆಗಳಲ್ಲಿ ಹುಲಿ ಆಕಳು ಆಟ, ಹುಲಿ, ಕುರಿ ಆಟ ಇತ್ಯಾದಿಯಾಗಿ ಕರೆಯಲ್ಪಡುತ್ತದೆ. ಒಟ್ಟಿನಲ್ಲಿ ಇದೊಂದು ಪಶುಪಾಲಕರ ಒಂದು ಪ್ರಮುಖ ಆಟವೆಂದೇ ಹೇಳಬೇಕು.

**ಪಗಡೆಯಾಟ**

ಪಗಡೆಯಾಟ ಉಲ್ಲೇಖ ಮಹಾಭಾರತದಲ್ಲಿ ಕಂಡುಬರುತ್ತದೆ. ಅಲ್ಲದೆ ದೇಶದಾದ್ಯಂತ ಈ ಆಟ ಪ್ರಚಲಿತವಿದ್ದರೂ ಹುಲಿಮನಿ ಆಟದಂತೆ ಜನಸಾಮಾನ್ಯರಿಂದ ಹೆಚ್ಚಾಗಿ ಆಡಲ್ಪಡುವುದಿಲ್ಲ. ಹೆಚ್ಚಾಗಿ ಮಧ್ಯಮವರ್ಗದ ಜನರಲ್ಲಿ ಈ ಆಟ ಪ್ರಚಲಿತದಲ್ಲಿದೆ. ಇದು ಪ್ರಭುತ್ವಶಾಹಿ ಜನರ ಆಟವೂ ಹೌದೆನಿಸುತ್ತದೆ. ವಿಶೇಷ ಹಬ್ಬ ಹುಣ್ಣಿಮೆಯ ಸಂದರ್ಭಗಳಲ್ಲಿ ಪಗಡೆಯ ಆಟ ಆಡುತ್ತಾರೆ. ಇದು ಜನಪದ ಆಟಗಳಲ್ಲಿ ಅತ್ಯಂತ ಜನಪ್ರಿಯವಾದದ್ದು.

ಇಲ್ಲಿ ಚೌಕಾಕೃತಿ ಎರಡು ಆರು ಮುಖ ದಾಳಗಳಿರುತ್ತವೆ. ಇವುಗಳ ಆರು ಮುಖ ದಾಳಗಳಲ್ಲಿ ನಾಲ್ಕೂ ಮುಖಗಳಲ್ಲಿ ಒಂದರಿಂದ ಆರರವರೆಗಿನ ಸಂಖ್ಯೆಗಳನ್ನೂ ಕೂಡಿದಾ ಏಳು ಬರುವಂತೆ. ಒಂದು ಜೋಡಿಯ ವಿರುದ್ಧ ಮುಖಗಳಲ್ಲಿ ಮೂರು ನಾಲ್ಕು ಇನ್ನೊಂದು ಜೋಡಿ ವಿರುದ್ಧ ಮುಖಗಳಲ್ಲಿ ಕೆತ್ತಿರುತ್ತಾರೆ. ಹೀಗಿರುವ ಎರಡು ದಾಳಗಳನ್ನು ಕೈಹಿಡಿದು ಕೆಳಕ್ಕೆ ಉರುಳಿಸಿ ಹಾಕಿದಾಗ ಒಂದು, ಒಂದು ಬಿದ್ದರೆ 'ದುಗ್ಗ' 'ಮೂರುವಿದ್ದರೆ 'ಇತ್ತಿಗ' ನಾಲ್ಕು ನಾಲ್ಕುವಿದ್ದರೆ ಎಂಟು ಹಾಗೆಯೇ ಆರು ಬಿದ್ದರೆ ಹನ್ನೆರಡು ಎಂಬುದಾಗಿ ಲೆಕ್ಕ ಮಾಡಲಾಗುತ್ತದೆ. ಇಲ್ಲಿನ ದೇವಾಲಯದ ಜಗಲಿಗಳ ಹಾಸು ಬಂಡೆಯ ಮೇಲೆ ಹಾಗೂ ರಂಗಮಂಟಪದ ಮಧ್ಯದಲ್ಲಿ ಹಾಗೂ ಬಂಡೆಗಳ ಮೇಲೆ ಪಗಡೆಯಾಟದ ನಕಾಶೆಗಳು ಕಂಡುಬರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಇವುಗಳನ್ನು ವಿವಿಧ ಬಣ್ಣಗಳ ತುಂಡು ಬಟ್ಟೆಗಳನ್ನು ಬಳಸಿ ಮೂರು ಸಾಲಿನ ಲ ಮನೆಗಳು ಇರುವಂತೆ ನಾಲ್ಕು ಪಟ್ಟಿ ಮಾಡಿ ಮಧ್ಯದ ಚೌಕುಳಿ ಮನೆಗೆ ನಾಲ್ಕು ಕಡೆಗಳಲ್ಲೂ ನಾಲ್ಕು ಪಟ್ಟಿಮಾಡಿ ಮಧ್ಯದ ಚೌಕುಳಿ ಮನೆಗೆ ನಾಲ್ಕು ಕಡೆಗಳಲ್ಲೂ ನಾಲ್ಕು ಪಟ್ಟಿಗಳನ್ನೂ ಸೇರಿಸಿ ಹೊಲಿದು ಸಿದ್ಧಗೊಳಿಸುತ್ತಾರೆ. ಇದನ್ನು ಸುಲಭವಾಗಿ ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದು. ಕೆಲವರು ಕೌದಿಯಲ್ಲಿ ಇಂತಹ ನಕಾಶೆ ಪಟವನ್ನು ಸಿದ್ಧಗೊಳಿಸುವುದು ಕಂಡು ಬರುತ್ತದೆ. ಹೀಗಾಗಿ ಹಾಸಿಗೆ, ಹೊದಿಗೆ ಹಾಗೂ ಆಟದ ನಕಾಶೆಪಟವಾಗಿ ಕೌದಿಯೊಂದು ಜನಪದರಲ್ಲಿ ಬಳಕೆಗೊಳ್ಳುತ್ತದೆ. ಅಷ್ಟೇ ಅಲ್ಲದೆ ಜನಪದರ ವಂಶಾವಳಿಯ ವರಹಾ ಗ್ರಂಥವಾಗಿಯೂ ಕೌದಿ ಕೆಲಸ ನಿರ್ವಹಿಸುತ್ತದೆ. ಹಾಸಿನ ನಕಾಶೆಪಟದ ಕೆಳಭಾಗದಿಂದ ಮೊದಲನೇ, ನಾಲ್ಕನೇ ಹಾಗೂ ದಳಾಸಿಯ ಮನೆಗಳು ಮತ್ತು ಮಧ್ಯಸಾಲಿನ ಮೂರನೇ, ಆರನೇ ಮನೆಗಳಿಗೆ X ಆಕಾರ ನೀಡಲಾಗಿರುತ್ತದೆ. ಇವುಗಳು ಕಟ್ಟೇಮನೆಗಳೆಂದು

ಗುರುತಿಸಲಾಗುತ್ತದೆ. ಇಲ್ಲಿ ಒಟ್ಟು ಹದಿನಾರು ಕಾಯಿಗಳಿರುತ್ತವೆ. ಕೈಯಿಂದ ಉರುಳುಬೀಳುವ ಆಯತಾಕಾರದ ಲೋಹ, ದಂತ ಇಲ್ಲವೆ ಕಲ್ಲಿನಿಂದ ಮಾಡಿದ ಇವುಗಳನ್ನು ದಾಳಗಳೆಂದು ಕರೆಯುತ್ತಾರೆ. ಈ ಆಟವನ್ನು ಸಾಮಾನ್ಯವಾಗಿ ಇಬ್ಬರು ಪರಸ್ಪರ ಎದುರುಬದುರಾಗಿ ಕುಳಿತು ಆಡುತ್ತಾರೆ. ಒಬ್ಬೊಬ್ಬರು ಎರಡು ಬಣ್ಣದ ನಾಲ್ಕು ನಾಲ್ಕು ಕಾಯಿಗಳನ್ನಿಟ್ಟು ನಡೆಸಬೇಕು. ದಾಳಗಳನಹ್ನು ಉರುಳಿಸಿದಾಗ ಬೀಳುವ ಸಂಖ್ಯೆಗೆ ಅನುಸಾರವಾಗಿ ಮನೆಗಳ ಕಾಯಿ ನಡೆಸಬೇಕು. ನಕಾಶೆ ಪಟದ ನಾಲ್ಕು ಮೂಲೆಗಳಲ್ಲೂ ಕಾಯಿ ಸಂಚಾರ ಮಾಡಿ ಕೊನೆಗೆ ಮೊದಲು ಕಾಯಿ ಇದ್ದ ಮನೆಯ ಮಧ್ಯಸಾಲಿನ ಮೂಲಕ ಬಳಸಾಗಿ ನಡು ಚೌಕಿಯಲ್ಲಿ ಕಾಯಿಯನ್ನು ಹಣ್ಣು ಮಾಡಬೇಕು. ಕೆಲವೊಮ್ಮೆ ನಾಲ್ಕು ದಿಕ್ಕಗಳಲ್ಲೂ ಪರಸ್ಪರ ನಾಲ್ಕು ಜನರು ಕುಳಿತು ನಾಲ್ಕು ಕಾಯಿಗಳನ್ನು ನಡೆಸಿ ಆಟವಾಟಬಹುದು ಹಾಗೂ ಈ ಜನಪದ ಆಟದಲ್ಲಿ ಒಂದೇ ಆಟವನ್ನು ವೈವಿಧ್ಯಮಯವಾದ ನೀತಿನಿಯಮಗಳನ್ನು ಅಳವಡಿಸಿ ಆಡಲಾಗುತ್ತದೆ. ಹೇಮಕೂಟದ ಜೈನ ದೇವಸ್ಥಾನದಲ್ಲಿ ಕಂಡುಬರುವ ಪಗಡೆ ಆಟದ ನಕಾಶೆ ಮನೆಗಳ ರಚನಾ ದೃಷ್ಟಿಯಿಂದ ಪಗಡೆಯಾಟದಿನ್ನೊಂದು ಸಾಧ್ಯತೆಯನ್ನು ತಿಳಿಸುವಂತಿದೆ.

**ಮೂರು ಮನೆಯಾಟ**

ಮತ್ತೊಂದು ಪ್ರಮುಖ ಆಟ ಮೂರುಮನೆಯಾಟ. ಇಲ್ಲಿ ಪ್ರಮುಖವಾಗಿ ಇಬ್ಬರು ಆಟಗಾರರು ಪರಸ್ಪರ ಎದುರುಬದುರಾಗಿ ಕುಳಿತು ಆಟವಾಡುತ್ತಾರೆ. ಒಂದು ಚೌಕದ ಒಳಗೆ ಇನ್ನೊಂದು, ಅದರೊಳಗೆ ಮತ್ತೊಂದು ಹೀಗೆ ಮೂರು ಚೌಕಗಳಿರುತ್ತವೆ. ಮೂರು ಚೌಕಗಳಿಗೂ ನಾಲ್ಕೂ ದಿಕ್ಕುಗಳಿಂದ ಮೂರು ಚೌಕಗಳನ್ನೂ ಸ್ಪರ್ಶಿಸುವಂತೆ ಗೆರೆಗಳನ್ನು ಎಳೆಯಾಗುತ್ತದೆ. ಆಟವಾಡುವಾಗ ಯಾವುದೇ ರೀತಿಯ ವಸ್ತುಗಹಳನ್ನು ಲೆಕ್ಕಚಾರಕ್ಕೆ ಅಥವಾ ಉರುಳು ಬಿಡಲು ಬಳಸುವುದಿಲ್ಲ. ಇದೊಂದು ಮಾನಸಿಕ ಕಸರತ್ತಿನ ಆಟವೇ ಸರಿ. ಮೊದಲು ಒಬ್ಬ ವ್ಯಕ್ತಿ ಎರಡು ಗೆರೆಗಳು ಕೂಡಿದ ಸ್ಥಳದಲ್ಲಿ ಒಂದು ಕಲ್ಲು ಅಥವಾ ಹರಳನ್ನು ಇಡುತ್ತಾನೆ. ಮತ್ತೊಬ್ಬ ಎದುರಿನ ವ್ಯಕ್ತಿ ಮತ್ತು ಎರಡು ಗೆರೆಗಳು ಕೂಡಿದ ಸ್ಥಳದಲ್ಲಿ ಹರಳನ್ನು ಇಡಬೇಕು. ಹೀಗೆ ಪರಸ್ಪರ ಆಡುವಾಗ ಒಬ್ಬನೇ ವ್ಯಕ್ತಿಯ ಮೂರು ಹರಳುಗಳು ಒಂದೇ ಸಾಲಿನಲ್ಲಿ (ಒಂದೇ ರೇಖೆಯಲ್ಲಿ) ಬಂದರೆ ಆ ವ್ಯಕ್ತಿ ಗೆಲವು ಸಾಧಿಸಿದಂತೆ. ಹಾಗಾಗಿ ಒಬ್ಬ ವ್ಯಕ್ತಿಯೆರಡು ಹರಳುಗಳು ಒಂದೇ ರೇಖೆಯ ಮೇಲೆ ಬಂದಾಗ ಎದುರಿನ ವ್ಯಕ್ತಿ ಮೂರನೆಯ ಮನೆಗೆ ತನ್ನ ಹರಳು ಕೂರಿಸಿ ತನ್ನ ಪ್ರತಿ ಸ್ಪರ್ಧಿಯನ್ನು ತಡೆಯುತ್ತಾನೆ. ಹೀಗೆ ಹರಳುಗಳನ್ನು ಗೆಲ್ಲುವ ಮೂಲಕ ಆಟ ಮುಕ್ತಾಯಗೊಳ್ಳುತ್ತದೆ.

**ಚನ್ನಮಣೆ ಆಟ**

ಗ್ರಾಮೀಣ ಒಳಾಂಗಣದ ಆಟಗಳಲ್ಲಿ ಚನ್ನಮಣೇ ಆಟವೂ ಒಂದು. ಸಾಮಾನ್ಯವಾಗಿ ಈ ಒಳಾಂಗಣದ ಆಟಗಳನ್ನು ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಆಡುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದ ಹಾಗೂ ಒಂದು ಅಡಿ ಅಗಲದ ಮರದ ಹಲಗೆಯ ಮೇಲೆ ಏಳೇಳು ಗುಣಿಗಳ ಎರಡು ಸಾಲುಗಳಿರುತ್ತವೆ. ಒಂದೊಂದು ಸಾಲಿನ ಗುಣಿಗಳಿಗೆ ಎದುರುಬದುರಾಗಿ ಇಬ್ಬರು ಆಟಗಾರರು ಕುಳಿತು ಈ ಆಟವಾಡುತ್ತಾರೆ. ಗುಣಿಗೆ ಸಾಮಾನ್ಯವಾಗಿ, ಹುಣಸೆ ಬೀಜ, ಅಂಟುವಾಳು, ಬೀಜ, ಗೆಜ್ಜುಗ, ಗುಲಗಂಜಿಯಂತಹ ಬೀಜಗಳನ್ನು ಬಳಸುತ್ತಾರೆ. ಪ್ರತಿ ಗುಣಿಗಳಿಗೂ ನಾಲ್ಕು ನಾಲ್ಕು ಇಲ್ಲವೆ ಐದೈದು ಹರಳುಗಳನ್ನು ಹಾಕಿರುತ್ತಾರೆ. ಮೊದಲು ಆಟ ಆರಂಭಿಸುವವರು ಒಂದು ಮನೆಯ (ಗುಣಿ) ಎಲ್ಲಾ ಹರಳುಗಳನ್ನು ತೆಗೆದುಕೊಂಡು ಅದರ ಮುಂದಿನ ಮನೆಗೆ ಒಂದೊಂದರಂತೆ ಹಾಕಬೇಕು. ಹರಳು ಹಾಕಿ ನಿಂತ ಮುಂದಿನ ಗುಣಿಯಿಂದ ಮತ್ತೆ ಹರಳು ತೆಗೆದು ಹಾಗೆಯೇ ಹಾಕುತ್ತ ಹೋಗಬೇಕು. ಕೊನೆಗೆ ಹರಳು ನಿಂತು ಮುಂದಿನ ಗುಣಿ ಖಾಲಿ ಇದ್ದರೆ ಅದರ ಮುಂದಿನ ಗುಣಿ ಹಾಗೂ ಅದರ ಎದುರು ಸಾಲಿನ ಗುಣಿಯ ಹರಳುಗಳು ಆಡುತ್ತಿದ್ದವರಿಗೆ ಸೇರುತ್ತವೆ. ಇದಕ್ಕೆ ಹೆಗ್ಗ ಎಂಬುದಾಗಿ ಕರೆಯುತ್ತಾರೆ. ಆಟ ಆಡುವಾಗ ಬಿತ್ತುವ ಹರಳುಗಳು ಮುಗಿದು ಮುಂದಿನ ಎರಡು ಗುಣಿಗಳು ಖಾಲಿ ಇದ್ದರೆ ಅವರಿಗೆ ಯಾವ ಹರಳೂ ದೊರಕುವುದಿಲ್ಲ. ಹೀಗೆ ಆಡುವಾಗ ತಮ್ಮ ಪರಸ್ಪರ ಸಾಲುಗಳಲ್ಲಿನ ಗುಣಿಗಳಲ್ಲಿ ನಾಲ್ಕು ಹರಳಲುಗಳು ಸೇರಿದಾಗ ಅದನ್ನು ಎಮ್ಮೆ ಈದಿದೆ ಎಂಬುದಾಗಿ ಎತ್ತಿಟ್ಟಕೊಳ್ಳುತ್ತಾರೆ. ಹೀಗೆ ಆಟ ಕೊನೆಗೆ ಒಂಟಿ ಮನೆಯ ಆಟದವರೆಗೆ ಸಾಗುತ್ತದೆ. ಯಾರು ಗೆಲ್ಲುತ್ತಾರೋ ಅವರು ಈ ಆಟದಲ್ಲಿ ಗೆಲ್ಲುತ್ತಾರೆ.

ಚನ್ನೇಮಣೆ ಆಟವನ್ನು, ಹರಳುಮಣೆ ಆಟ ಎಂದೂ ಕರೆಯುತ್ತಾರೆ. ಈ ಆಟದಲ್ಲೂ ಇಂದಿಗೂ ಹಲವಾರು ವೈವಿಧ್ಯತೆಯನ್ನು ಕಾಣಬಹುದು. ಹಂಪಿಯ ಸ್ಮಾರಕಗಳಲ್ಲಿ ಕಂಡುಬರುವ ಚನ್ನೇಮಣೆ ಆಟದ ಗುಣಿಗಳು ಹಾಸು ಬಂಡೆಗಳ ಮೇಲೆಲ ಕೋಟೆ ಬಾಗಿಲುಗಳ ಸಮೀಪ, ದೇವಾಲಯಗಳ ಜಗಲಿಯ ಹಾಗೂ ಬಂಡೆಗಳ ಮೇಲೆ ಕಂಡುಬರುತ್ತವೆ. ಕೆಲವು ಕುಣಿಗಳು ಸಣ್ಣವಾಗಿದ್ದು ಗುಲಗಂಜೀ ಬೀಜಗಳನ್ನು ಆಟಕ್ಕೆ ಬಳಸಿರಬಹುದಾದ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತದೆ. ಮಹಾನವಮಿ ದಿಬ್ಬದ ಎದುರಿಗಿನ ರಾಣಿ ವಾಸದ ಬುನಾದಿಯ ಹಾಸುಬಂಡೆಯ ಮೇಲಿನ ಚನ್ನೇಮಣೆ ಕುಣಿಗಳು, ರಾಜನ ಆಸ್ಥಾನದ ಮಹಿಳೆಯರಿಗೆ ಸೇವಕಿಯರಾಗಿ ಹಾಗೂ ಕಾವಲುಗಾರರಾಗಿ ನೇಮಿಸಲ್ಪಡುತ್ತಿದ್ದ (ಶಿಖಂಡಿ) ವ್ಯಕ್ತಿಗಳು ಆಟವಾಡುತ್ತಿದ್ದ ಸ್ಥಳ ಅದಾಗಿರಬಹುದೆಂದು ತೋರುತ್ತದೆ.

**ಚೌಕಾದ ಮನಿಯಾಟ**

ಇದು ಪಗಡೆಯಾಟದಷ್ಟೇ ಜನಪ್ರಿಯವಾದ ಆಟ. ಇದನ್ನು ಚೌಕದ ಮನಿ ಆಟ ಎಂಬುದಾಗಿಯೂ ಕರೆಯುತ್ತಾರೆ. ಸ್ತ್ರೀಯರು ಹೆಚ್ಚಾಗಿ ಈ ಆಟವನ್ನು ಆಡುತ್ತಾರೆ.

ಹೀಗೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಹಲವಾರು ಬಗೆಯ ಜನಪದ ಆಟಗಳ ನಕಾಶೆ ಪಟಗಳು ಕಂಡು ಬರುತ್ತವೆ. ಆದರೆ ಇವುಗಳಲ್ಲಿ ಕೆಲವು ಅಂದಿನ ದೇವಾಲಯ ಹಾಗೂ ಜಿನಾಲಯಗಳು ಪೂಜೆಗೊಳ್ಳುವ ಕಾಲಕ್ಕೆ ದೇವಾಲಯಗಳ ಜಗಲಿ ಹಾಗೂ ರಂಗಮಂಟಪದ ಹಾಸುಬಂಡೆಗಳ ಮೇಲೆ ಬಿಡಿಸಲ್ಪಟ್ಟಿವೆ. ಇನ್ನು ಕೆಲವು ಸಾಮ್ರಾಜ್ಯದ ಪತನ ನಂತರ ಪಶುಪಾಲಕ ಹಾಗೂ ಕೃಷಿ ಜನಸಮುದಾಯಗಳಿಂದ ಬಿಡಿಸಲ್ಪಟ್ಟಿವೆ ಎನ್ನಬಹುದು. ಆದರೆ ಇಲ್ಲಿ ದೊರೆತಿರುವ ಕೆಲವು ಜನಪದ ಆಟಗಳ ನಕಾಶೆ ಪಟಗಳು ಅವುಗಳ ಆಟದ ಕ್ರಮ ಇತ್ತೀಚೆಗೆ ಕಂಡುಬರುವುದಿಲ್ಲ. ಇಲ್ಲಿನ ನಕಾಶೆ ಪಟಗಳಲ್ಲಿ ಹಾಗೂ ಹಳ್ಳು ಕುಣಿ ಆಟದಲ್ಲಿ ಗುಲಗಂಜಿ ಗೆಜ್ಜುಗ ಹುಣಸೆ ಬೀಜಗಳನ್ನು ಬಳಸಿರುವ ಸಾಧ್ಯತೆ ಇದೆ. ಇಲ್ಲಿ ರಚನೆಗೊಂಡಿರುವ ಹಳ್ಳು ಕುಣಿ(ಚನ್ನೇಮಣೆ) ಆಟದ ಗುರುತುಗಳು ಅದನ್ನು ಸಾಬೀತುಪಡಿಸುತ್ತವೆ. ಸಾಮಾನ್ಯವಾಗಿ ಚನ್ನೇಮಣಿ ಆಟ ಹೆಣ್ಣುಮಕ್ಕಳು ಮನೆಗಳಲ್ಲಿ ಹುಣಸೆಬೀಜ ಅಥವಾ ಗಜ್ಜುಗಗಳನ್ನು ಬಳಸಿ ಈ ಆಟ ಆಡುತ್ತಾರೆ. ಮಳೆ ಇಲ್ಲದಾಗ ಚನ್ನೇಮಣೆ ಆಟ ಆಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಜನಪದರಲ್ಲಿ ಕಂಡು ಬರುತ್ತದೆ.

**ಆಕರ**

ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ೨೦೦೦, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೦೮-೧೧೭.

## ೧೦. ಜನಪದ ಪ್ರದರ್ಶನಾತ್ಮಕ ಕಲೆಗಳು

ವಿಜಯನಗರದ ಅರಸರ ಕಾಲಕ್ಕೆ ಶಾಸ್ತ್ರೀಯ ಸಂಗೀತ, ನೃತ್ಯ, ಶಿಲ್ಪ ಕಲೆಗಳಂತೆಯೇ ಜನಪದ ಕಲೆಗಳಿಗೂ ಹೆಚ್ಚಿನ ಮಹತ್ವ ದೊರೆತ್ತಿತ್ತು ಎಂಬುದು ಇಲ್ಲಿನ ಜನಜೀವನದ ಬಗೆಗೆ ಬೆಳಕು ಚೆಲ್ಲುವ ಆ ಕಾಲಕ್ಕೆ ರಚನೆಗೊಂಡ ಗ್ರಂಥಗಳು ಹಾಗೂ ಪ್ರವಾಸಿ ಬರಹಗಳು ಹಾಗೂ ಶಿಲ್ಪ ಸ್ಮಾರಕಗಳಿಂದ ತಿಳಿದು ಬರುತ್ತದೆ. ಇದು ಸರಿ ಎಂಬಂತೆ ಇಲ್ಲಿನ ಅನೇಕ ಉಬ್ಬುಶಿಲ್ಪಗಳಲ್ಲಿ ಅಂತಹ ವಿಚಾರಗಳು ತಿಳಿದು ಬರುತ್ತವೆ. ಅಂದಿನ ಕಾಲಘಟ್ಟದಲ್ಲಿ ಕಲೆಯೊಂದರ ಸ್ಥಿತಿಗತಿ ಹಾಗೂ ಆನಂತರ ಅದು ಬೆಳವಣಿಗೆ ಹೊಂದಿರುವ ಬಗೆಗೆ ಈಗ ಆ ಕಲಾ ಪ್ರಕಾರದ ಸ್ಥಿತಿ ಹೇಗಿದೆ, ಅದರ ಬದಲಾವಣೆಯ ಹಿಂದಿನ ಸಂಗತಿಗಳು ಇತ್ಯಾದಿ ವಿಚಾರಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಜಯನಗರದ ಉಬ್ಬುಶಿಲ್ಪಗಳು ತುಂಬ ಸಹಕಾರಿಯಾಗುತ್ತವೆ. ಪ್ರದರ್ಶನಾತ್ಮಕ ಜನಪದ ಕಲೆಗಳಲ್ಲಿ ಪ್ರಮುಖವಾಗಿ ಕೋಲಾಟ, ಕೊರವಂಜಿ ಕುಣಿತ, ಓಕುಳಿ ಆಟ, ದೊಂಬರಾಟ, ಹಾವಾಡಿಗರಾಟ ಹಾಗೂ ಇತರೆ ಜನಪದ ಗೀತಮೇಳಗಳನ್ನು ಗಮನಿಸಲಾಗಿದೆ.

**ಕೋಲಾಟ**

ಕೋಲಾಟ ಒಂದು ಸಮೂಹ ನೃತ್ಯ. ಇದರಲ್ಲಿ ಸಾಮಾನ್ಯವಾಗಿ ಹೆಣ್ಣು ಗಂಡುಗಳಿಬ್ಬರೂ ಭಾಗವಹಿಸುತ್ತಾರೆ. ದೇಶದ ಎಲ್ಲಾ ಕಡೆಯೂ ಈ ನೃತ್ಯ ಕಂಡುಬರುತ್ತದೆ. ಇದು ತುಂಬ ಪ್ರಾಚೀನ ಪಶುಪಾಲಕ, ಕೃಷಿ ಬದುಕಿನ ಜನಸಮುದಾಯಗಳಲ್ಲಿ ಅದರಲ್ಲೂ ಬುಡಕಟ್ಟು ಸಮುದಾಯಗಳಲ್ಲಿ ಈ ಕಲೆ ಹೆಚ್ಚಾಗಿ ಕಂಡು ಬರುತ್ತದೆ. ವಿಜಯನಗರ ಸಾಮ್ರಾಜ್ಯದ ಹಂಪಿ ಪರಿಸರದಲ್ಲಿ ಕಂಡುಬರುವ ಕೋಲಾಟದ ಉಬ್ಬುಶಿಲ್ಪಗಳು ಹೆಚ್ಚಾಗಿ ಹೆಂಗಸರು ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ. ಅದಕ್ಕೆ ಹೌದೆಂಬಂತೆ ಈ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಗೌರಿಹುಣ್ಣಿಮೆಯ ಸಂದರ್ಭದಲ್ಲಿ ಹೆಣ್ಣು ಮಕ್ಕಳು 'ಗೌರಿ ಕೋಲು' ಹಾಕುತ್ತ ಕುಣಿಯುತ್ತ, ಮನೆಮನೆಗೆ ಸಂಚರಿಸುವ ಸಂಪ್ರದಾಯ ವರ್ಷದ ಗೌರಿಹುಣ್ಣಿಮೆ ಸಂದರ್ಭದಲ್ಲಿ ಕಂಡುಬರುತ್ತದೆ. ಹಾಗೆಯೇ ಲಂಬಾಣಿ ಸಮುದಾಯದ ಹೆಣ್ಣು ಮಕ್ಕಳು ಹೋಳಿ ಹಬ್ಬದ ಸಂದರ್ಭದಲ್ಲಿ ಆಡುವ ಕೋಲಾಟ ಈ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಿಜಯನಗರದ ವಾಸ್ತುಶಿಲ್ಪ ಹಾಗೂ ಉಬ್ಬುಶಿಲ್ಪಗಳಲ್ಲಿ ಯಥೇಚ್ಚವಾದ ಕೋಲಾಟದ ದೃಶ್ಯಗಳನ್ನು ಕಾಣಬಹುದು.

ಅಲ್ಲದೆ ಇಲ್ಲಿನ ಕೋಲಾಟದ ಕುಣಿತಕ್ಕೆ ಹಿಮ್ಮೇಳವಾಗಿ ಮದ್ದಳೆ, ಮೃದಂಗ, ಢಕ್ಕೆ ತಾಳಗಳನ್ನು ಬಳಸಿರುವ ದೃಶ್ಯಗಳು ಕಂಡುಬರುತ್ತವೆ. ಹಾಗೂ ವಾದ್ಯ ನುಡಿಸುವವರು ಗಂಡಸರು ಹಾಗೂ ಕೋಲಾಟದಲ್ಲಿ ಕೋಬುಹಾಕಿ ಕುಣಿಯುವವರು ಹೆಣ್ಣು ಮಕ್ಕಳು. ಹೀಗಾಗಿ ಕೋಲಾಟ ಹೆಣ್ಣು ಮಕ್ಕಳ ಒಂದು ಪ್ರಮುಖ ನೃತ್ಯ ಕಲೆಯಾಗಿತ್ತೆಂದು ಇದರಿಂದ ತಿಳಿದು ಬರುತ್ತದೆ. ಅಲ್ಲದೆ ಕೋಲಾಟದ ವಿವಿಧ ಭಂಗಿಗಳು ಮಹಾನವಮಿ ದಿಬ್ಬ, ವಿಠಲ ದೇವಾಲಯ, ಹಜಾರರಾಮ ದೇವಾಲಯ, ವಿರೂಪಾಕ್ಷ ದೇವಾಲಯಗಳಲ್ಲಿ ಕಾಣಬಹುದು.

**ಕೊರವಂಜಿ ಕುಣಿತ**

'ಈ ರಾಜ ತನ್ನ ದ್ವಾರಗಳೊಳಗೆ ನಾಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಯರನ್ನು ಹೊಂದಿದ್ದಾನೆ' ಎಂಬುದಾಗಿ ಸಿವೆಲ್ ತಿಳಿಸುತ್ತಾನೆ. ಆದರೆ ಅವರೆಲ್ಲ ಸಂಗೀತ ಹಾಗೂ ನೃತ್ಯಗಾರ್ತಿಯರು, ಕಣಿ ಹಾಗೂ ಭವಿಷ್ಯ ನುಡಿಯುವ ಸ್ತ್ರೀಯರೂ ಎಂಬುದಾಗಿ ತಿಳಿದು ಬರುತ್ತದೆ. ಅಲ್ಲದೆ ಕಣಿ ಪುಟ್ಟಿ ಹಿಡಿದು ನರ್ತಿಸುತ್ತಿರುವ ಕೊರವಂಜಿಯ ಉಬ್ಬುಶಿಲ್ಪವೊಂದು ಮಾಲ್ಯವಂತ ರಘುನಾಥ ದೇವಾಲಯದ ಮುಖಮಂಟಪದಲ್ಲಿ ಕಂಡುಬರುತ್ತದೆ. ರಾಜನಿಗೆ ಸಾಮ್ರಾಜ್ಯದ ಅಭಿವೃದ್ಧಿ, ಪ್ರಜೆಗಳ ಏಳಿಗೆಗಳ ಬಗೆಗೆ ವರದಿ ಸಲ್ಲಿಸಿ ಮಾರ್ಗದರ್ಶನ ನೀಡುತ್ತಿದ್ದ ಪುರೋಹಿತಶಾಹಿಗಳಂತೆಯೇ ರಾಜನ ಕಷ್ಟ, ಸುಖ ಮುಂದೆ ಆತನ ಆಡಳಿತದಲ್ಲಿನ ಸುಧಾರಣೆ, ಮಾರ್ಪಾಡುಗಳು, ಜನಸಾಮಾನ್ಯರ ಅಭಿಪ್ರಾಯಗಳನ್ನು ಸಂಗ್ರಹಿಸುವ ಮೂಲಕ ರಾಜನಿಗೆ ಆತನ ಆಡಳಿತದ ಸುಸ್ಥಿತಿಯ ವಿಷಯದಲ್ಲಿ ಕಣಿ ಕೊರವಂಜಿಗಳು ಮಹತ್ವದ ಪಾತ್ರವಹಿಸುತ್ತಿದ್ದರು.

**ಓಕುಳಿ ಆಟ**

ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ನಡೆಯುತ್ತಿದ್ದ ಮಹಾನವಮಿ ದಿಬ್ಬದಂತಹ ದೊಡ್ಡ ದೊಡ್ಡ ಉತ್ಸವಗಳಲ್ಲಿ, ನಗರದ ಪ್ರಮುಖ ಬೀದಿಗಳಲ್ಲಿ ಅಲ್ಲಿಗಲ್ಲಿಗೆ ತುಂಬಿಟ್ಟ ಬಣ್ಣದ ನೀರಿನಿಂದ ಓಕುಳಿ ಆಡುತ್ತಿದ್ದ ಬಗೆಗೆ ಹಲವಾರು ಉಲ್ಲೇಖಗಳು ಕಂಡು ಬರುತ್ತವೆ. ಅದನ್ನು ಮಹಾನವಮಿ ದಿಬ್ಬ, ವಿಠಲ ದೇವಸ್ಥಾನಗಳಲ್ಲಿನ ಹಲವಾರು ಉಬ್ಬು ಶಿಲ್ಪಗಳಲ್ಲಿ ಕಾಣಬಹುದು. ಈ ಮೂಲಕ ವಿಜಯನಗರದಲ್ಲಿನ ಸಾಂಸ್ಕೃತಿಕ ಬದುಕಿನ ಮತ್ತೊಂದು ಮುಖದ ಪರಿಚಯ ಆಗುತ್ತದೆ. ರಾಣಿ ವಾಸದವರು, ಆಪ್ತೇಷ್ಟರು ಉದ್ಯಾನಗಳಿಗೆ ಹೋಗಿ ನೀರಾಟ, ಉಯ್ಯಾಲೆ ಆಡುತ್ತಿದ್ದರು. ಜಲಕ್ರೀಡೆಗೆಂದೇ ಈಜುಕೊಳಗಳಿರುತ್ತಿದ್ದವು. ಈ ಕೊಳಗಳನ್ನು ಕಲ್ಲುಗಳಿಂದ ಕಟ್ಟಿಸಿ ಅವುಗಳಿಗೆ ಕಾಲುವೆ ಮಾಡಿ ನೀರು ಬಿಡುವ ವ್ಯವಸ್ಥೆ ಇದ್ದಿತು. ಅಲ್ಲದೆ ಈ ಜಲಕ್ರೀಡಾ ಕುಣಿಗಳಲ್ಲಿ ರಾಣಿವಾಸದವರು ನೀರಾಟವಾಡಿದ ವರ್ಣನೆಯನ್ನು ಕನಕದಾಸರು ತಮ್ಮ ರಾಮಧಾನ್ಯಚರಿತೆಯಲ್ಲಿ ಉಲ್ಲೇಖಿಸುತ್ತಾರೆ.

**ದೊಂಬರಾಟ**

ದೊಂಬರು ಮೂಲತಹ ಒಂದು ಅಲೆಮಾರಿ ಸಮುದಾಯ. ಇವರು ತಮ್ಮ ಜೀವನ ವೃತ್ತಿಯಾಗಿ ದೈಹಿಕ ಕಸರತ್ತುಗಳನ್ನು ಮಾಡುವುದರ ಮೂಲಕ ಪ್ರದರ್ಶನ ನಡೆಸುತ್ತಾರೆ. ದೊಂಬರು ಮಾಡಿತೋರಿಸುವ ದೈಹಿಕ ಕಸರತ್ತಿನ ಆಟವನ್ನು 'ದೊಂಬರಾಟ' ಎಂದು ಕರೆಯುತ್ತಾರೆ. ವಿಜಯನಗರ ಪೂರ್ವದ ಆನೆಗೊಂದಿ ಹಾಗೂ ಕಂಪಲಿ ಪಟ್ಟಣಗಳ ಚರಿತ್ರೆಯಲ್ಲಿ ಈ ಸಮುದಾಯದ ಪಾತ್ರ ಮಹತ್ವದ್ದಾಗಿ ಕಂಡುಬರುತ್ತವೆ. ಕಂಪಿಲ ರಾಯನ ಹೆಂಡತಿ ಹರಿಯಲಾ ದೇವಿಗೆ ಮಕ್ಕಳಿಲ್ಲದ ಕಾರಣ ಕಂಪಿಲರಾಯ ರತ್ನಾಜಿಯನ್ನು ಮದುವೆಯಾಗುತ್ತಾನೆ. ಈ ರತ್ನಾಜಿಯ ವಂಶದವರು ನಾವು ಎಂಬುದಾಗಿ ದೊಂಬರು ಹೇಳಿಕೊಳ್ಳುತ್ತಾರೆ. ಕಂಪಲಿಯ ಕುಮಾರರಾಮನ ಚರಿತ್ರೆ ಜನಸಾಮಾನ್ಯರ ಮೌಖಿಕ ಸಂಸ್ಕೃತಿಯಲ್ಲಿ ಸ್ಥಾನ ಪಡೆದಂತೆ ವಿಜಯನಗರ ಸಾಮ್ರಾಜ್ಯದ ಯಾವ ರಾಜ ಮಹಾರಾಜರೂ ಜನಪದರಲ್ಲಿ ಹಾಗೂ ಅವರ ಮೌಖಿಕ ಸಂಸ್ಕೃತಿಯಲ್ಲಿ ಸ್ಥಾನ ಪಡೆಯಲ್ಲಿಲ್ಲ ಎಂಬುದು ತುಂಬ ಕುತೂಹಲದ ವಿಷಯ. ರತ್ನಾಜಿ ತನ್ನ ಸಾಕುಮಗ ಕುಮಾರರಾಮನನ್ನೇ ತನ್ನ ಕಾಮತೃಷೆಗೆ ಬಯಸಿದ ಆಶಯವಂತು ಕನ್ನಡನಾಡಿನ ತುಂಬೆಲ್ಲ ಜನಪದರ ಮೌಖಿಕ ಸಾಹಿತ್ಯ, ಆಚರಣೆಯಲ್ಲಿ ಅನನ್ಯವಾದ ಸ್ಥಾನಪಡೆದು ನೀತಿ ಬೋಧಕ ರೂಪವಾಗಿ ರಚನೆ ಗೊಂಡಿದೆ. ಈ ಪಠ್ಯ ಕುಮಾರರಾಮ, ಸೀತಾಳರಾಮ, ಚನ್ನಿಗರಾಮ, ರತ್ನಾಜಿಕಥೆ, ಸಾರಂಗಧರನ ಕಥೆ, ತೆಲುಗಿನಲ್ಲಿ ಕುಮಾರರಾಮುನಿ 'ಹೊಸ ಕುಮಾರರಾಮ' ಕಥೆ ಇತ್ಯಾದಿ ಹೆಸರುಗಳಿಂದ ಪ್ರಚಲಿತವಿದೆ. ಪಠ್ಯಗಳ ನಡುವೆ ಮೂಲ ಆಶಯವನ್ನು ಬಿಟ್ಟು ಉಳಿದಂತೆ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ. ಈ ಹಿಂದೆ ತಿಳಿಸಿರುವಂತೆ ದೊಂಬರು ವಿಜಯನಗರ ಸಾಮ್ರಾಜ್ಯದೊಡನೆ ಅನ್ಯೋನ್ಯ ಸಂಬಂಧ ಹೊಂದಿದ್ದಾರೆ.

ರತ್ನಾಕರವರ್ಣಿ ಕೊಡುವ ನಾನಾ ಕ್ರೀಡೆಗಳ ವರ್ಣನೆಯಲ್ಲಿ ದೊಂಬರಾಟವೂ ಒಂದು "ಗಣೆಯನೇರಿದ ದೊಂಬರು ಆ ಎತ್ತರದಿಂದಲೇ ರಾಜನ ಮುಖವನ್ನು ನೋಡುತ್ತಾ, ಅವನ ಕಣ್ಣ ಸೂಚನೆಯನ್ನು ಕಾಯುತ್ತ ತಟಪಟ ನುಬ್ಬಿ ತಮ್ಮ ಚಮತ್ಕಾರವನ್ನು ತೋರಿದರು" ಎಂದಿದ್ದಾನೆ. ವಚನಕಾರರಲ್ಲಿ ಹೊಟ್ಟೆಯ ಕಕ್ಕುಲತೆಗೆ ಕಷ್ಟ ಜೀವನ ಹೊರುವ ಹೆಬ್ಬೊಟ್ಟೆಯ ದೊಂಬರ ಕಂಡು ಬಟ್ಟ ಬಯಲಾದೆಯೇ (ಮೊಳಗೆ ಮಾರಯ್ಯನ ವಚನ ಪು.೧೩೨) ಅಲ್ಲದೆ ನಾಡಿನಾದ್ಯಂತ ಶಾಸನಗಳು, ಐತಿಹ್ಯಗಳಲ್ಲಿ ದೊಂಬರ ಬಗೆಗೆ ಹೆಚ್ಚಿನ ಮಾಹಿತಿಗಳು ದೊರಕುತ್ತವೆ. ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ ಹಾಗೂ ಲಿಲ್‌ಷಾಟನ್ ಎಂಬುವವರೂ ಸಹ ಇವರು ಕಲಾಪ್ರದರ್ಶನಕ್ಕೆ ಆಕರ್ಷಕರಾಗಿದ್ದಾರೆ. ಅದರ ಬಗೆಗೆ ತಮ್ಮ ದಿನಚರಿಯಲ್ಲಿ ದಾಖಲಿಸಿಕೊಂಡಿದ್ದಾರೆ ಕೂಡ. ಅಬ್ದುಲ್‌ರಜಾಕ್ ನವರಾತ್ರಿ ವೈಭವವನ್ನು ವರ್ಣಿಸುತ್ತಾ ಅದರಲ್ಲಿ ದೊಂಬರ ಅನೇಕ ಚಮತ್ಕಾರಗಳನ್ನು ಮತ್ತು ಪಳಗಿಸಿದ ಆನೆಗಳಿಂದ ಅವರು ಆಡಿಸಿದ ಅನೇಕ ಕಸರತ್ತಿನ ಆಟಗಳ ಬಗೆಗೆ ಹೇಳುತ್ತಾನೆ.

ಅಣ್ಣಾಜಿ ಕೊಡುವ ದೊಂಬರಾಟದ ಚಿತ್ರಣವೊಂದು ಹೀಗಿದೆ. "ಗಣೆಯ ತುದಿಯಲ್ಲಿ ಶಸ್ತವನಿಟ್ಟು ವುಂಗುಟದ ಕೊನೆಯಾಳ ಪುಟವೆದ್ದು ಲಾಗುಲಿದವಣಿಯ ಕೊಂಡು ಮಿಣಿಯ ಹಿಲಿಗಳ ಮೇಲೆ ಮರಗಾಲ ಕಟ್ಟಿ ದುವ್ವಾಳಿಸುತೆ ದೊಂಬತಿಯರು ಮಣಿದು ಹಿಂಗರಣ ಮಸೆಕೊಂಡು ವೊಳಿಯುಗಿದಲಗಪಣೆಯಲ್ಲಿ ಗುಂಜಿಯಗ್ರದೊಳಟ್ಟು ಬೇಯೆನುತೆ ತ್ರಿಣಯ ನಾಪರರೂಪನೇ ನೋಡು ನೋಡೆಂದು ಡೋಳು ಬಡಿದರು ದೊಂಬರು" ಎಂಬುದಾಗಿ ಹೇಳುತ್ತಾನೆ ('ಕಚ' ೭ ಪು. ೩೭). ಅಂದರೆ ದೊಂಬರ ಹೆಣ್ಣು ಮಕ್ಕಳು ಪ್ರದರ್ಶಿಸುವ ತುಂಬ ಅಪಾಯದ ಕಸರತ್ತೂ ಪ್ರದರ್ಶನದ ವಿವರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

'ದೊಂಬನ ಸಾವು ಗಣೆಯ ಮೇಲೆ' ಎಂಬ ಜನಪದರ ಹೇಳಿಕೆಯಂತೆ ಇಂತಹ ಕಸರತ್ತು ಪ್ರದರ್ಶನಗಳಲ್ಲಿ ಜೀವ ಕಳೆದುಕೊಂಡ ಹಲವಾರು ಸಾಹಸಿ ದೊಂಬರು ಜನಪದರ ಮೌಖಿಕ ಸಾಹಿತ್ಯದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ರಕ್ಕೆ ಕಟ್ಟಿಕೊಂಡು ಹಕ್ಕಿಯಂತೆ ಹಾರಿ, ಪ್ರಾಣ ಕಳೆದುಕೊಂಡ ದೊಂಬನೊಬ್ಬನ ಸಾಹಸದ ಸಾಕ್ಷಿಯಂತಿದೆ ಬೆಂಗಳೂರು ಜಿಲ್ಲೆ ರಾಮನಗರದ 'ದೊಂಬನ ಕೊಡೆಗೆ' ಪ್ರದೇಶ. ಹೀಗೆ ದೊಂಬರ ಬದುಕನ್ನು ಚಿತ್ರಿಸುವ ಹಲವಾರು ಉಬ್ಬುಶಿಲ್ಪಗಳು ಹಂಪಿ ಸ್ಮಾರಕಗಳಲ್ಲಿ ಕಾಣಬರುತ್ತವೆ.

ಆದಿಮ ಕಾಲದಿಂದಲೂ ಮಾನವ ಹಾಗೂ ಪ್ರಾಣಿಗಳ ನಡುವಿನ ಸಂಬಂಧ ಆತನ ಬದುಕಿನಷ್ಟೆ ಪುರಾತನವಾದುದು. ಮಾನವ ಪ್ರಾಣಿ ಪರಿಸರವನ್ನು ತನ್ನ ಹಿಡಿತದಲ್ಲಿ ಇರಿಸಿ ಕೊಂಡು ಪಶುಪಾಲನೆ, ಕೃಷಿಗಾಗಿ ಪಳಗಿಸಿ ಅವುಗಳನ್ನು ತನ್ನ ಬದುಕಿನ ಒಂದು ಭಾಗವಾಗಿ ಪರಿಗಣಿಸಿ ಬಳಸಿಕೊಳ್ಳತೊಡಗಿದ. ಅಲ್ಲದೆ ಕೆಲವು ಕ್ರೂರ ಪ್ರಾಣಿಗಳನ್ನು ತನ್ನ ಹಿಡಿತದಲ್ಲಿರಿಸಿಕೊಂಡು ಅವುಗಳ ಮೂಲಕ ಹಲವು ಬಗೆಯ ಪ್ರದರ್ಶನಗಳನ್ನು ನಡೆಸುತ್ತ ತನ್ನ ಜೀವನ ವೃತ್ತಿಯ ವಸ್ತುಗಳನ್ನಾಗಿ ಬಳಸಿಕೊಂಡ. ಹೀಗೆ ಬಳಸಿಕೊಂಡ ಜೀವಜಗತ್ತಿನ ಪ್ರಾಣಿಗಳಲ್ಲಿ ಹಾವುಗಳು ಬಹುಮುಖ್ಯವಾದವು. ವಿಷಜಂತುಗಳಲ್ಲಿ ಒಂದಾದ ಹಾವುಗಳನ್ನು ಹಿಡಿದು ಆಟವಾಡಿಸುವ ಹಾಗೂ ಅವುಗಳನ್ನು ಹಿಡಿದು ಚರ್ಮ ಸುಲಿದು ಮಾರಾಟಮಾಡುವ ಹಲವಾರು ಜನಸಮುದಾಯಗಳು ಇಂದಿಗೂ ಕಂಡು ಬರುತ್ತವೆ. ಆದರೆ ಹಾವನ್ನು ಹಿಡಿದು ಆಟವಾಡಿಸಿ ಜೀವನ ಸಾಗಿಸುವವರಿಗೆ ಹಾವಾಡಿಗರೆಂದು ಕರೆಯುತ್ತಾರೆ. ಹಾವು ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಜಗತ್ತಿನ ಹಲವಾರು ಬುಡಕಟ್ಟುಗಳಲ್ಲಿ ಕೃಷಿ ದೈವವಾಗಿ ಅದರಲ್ಲೂ ಫಲವಂತಿಕೆಯ ದೈವವಾಗಿ ಪೂಜೆಗೊಳ್ಳುತ್ತದೆ. ನಮ್ಮ ಪ್ರಾಚೀನ ಮಹಾಕಾವ್ಯಗಳಲ್ಲೂ ಹಲವಾರು ಉಲ್ಲೇಖಗಳು ಹಾವಾಡಿಗರಿಗೆ ಸಂಬಂಧಪಟ್ಟಂತೆ ಕಂಡುಬರುತ್ತವೆ.

‘ಉದರ ನಿಮಿತ್ತಂ ಬಹುಕೃತವೇಷಂ’ ಎಂಬಂತೆ ಹೊಟ್ಟೆಪಾಡಿಗಾಗಿ ಹತ್ತಾರುವೇಷ ಕಟ್ಟಿರುವ ಜಂಗಮ, ಜೋಗಿ, ದಾಸರನ್ನು ಹಾವಾಡಿಗರು ಈ ನಗರದಲ್ಲಿ ಇದ್ದ ಬಗ್ಗೆ ಸಾಹಿತ್ಯ ಗ್ರಂಥಗಳಲ್ಲಿ ಹಾಗೂ ವಿದೇಶಿ ಪ್ರವಾಸಿಗರ ಬರಹಗಳಿಂದ ತಿಳಿದು ಬರುತ್ತದೆ. ವಿಜಯನಗರ ಮಹಾನವಮಿ ಹಬ್ಬದ ಸಂದರ್ಭದಲ್ಲಿ ಹಾವಾಡಿಗರ ಪ್ರದರ್ಶನಗಳು ನಡೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ವಿಜಯವಿಠಲ ದೇವಸ್ಥಾನದ ಕಲ್ಲಿನ ರಥಕ್ಕೆ ಎದುರಾಗಿ, ಸಂಗೀತದ ಕಲ್ಲಿನ ಕಂಬದ ಕೆಳಗೆ ಬುನಾದಿ ಚೌಕಟ್ಟಿನ ಸಮೀಪ ಹೊರಮೈಗೆ ಪುಂಗಿ ಊದುತ್ತಾ ಹಾವು ಹಾಡಿಸುತ್ತಿರುವ ಜೊತೆಗೆ ಕೋತಿಯನ್ನು ಇಟ್ಟುಕೊಂಡಿರುವ ಹಾವಾಡಿಗರ ಅಪರೂಪದ ಉಬ್ಬುಶಿಲ್ಪ ಕಂಡು ಬರುತ್ತದೆ. ಈ ಮೂಲಕ ವಿಜಯನಗರದ ಕಾಲಕ್ಕೆ ಹಾವಾಡಿಗರು ಹಾಗೂ ಆ ಕಲೆಯ ಜೀವಂತವಾಗಿದ್ದ ಬಗೆಗೆ ತಿಳಿದು ಬರುತ್ತದೆ.

**ಆಕರ**

ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ೨೦೦೦, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬೪-೭೦.

## ೨೧. ಕಲೆಗಳು

ಹಂಪಿ ಪರಿಸರದಲ್ಲಿ ಜನಪ್ರಿಯವಾಗಿರುವ ಕಲೆಗಳೆಲ್ಲ ವಿಜಯನಗರ ವಾಸ್ತುವಿನಲ್ಲಿ ಸ್ಥಾನ ಪಡೆದಿವೆ. ಹಾಗೆ ಸ್ಥಾನ ಪಡೆದವುಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ಪರಿಚಯಿಸಲಾಗಿದೆ.

**೫.೧ ಕೋಲಾಟ**

ಕೋಲಾಟವು ಈ ಪ್ರದೇಶದ ಅತ್ಯಂತ ಜನಪ್ರಿಯ ಕಲೆ.

ಹಂಪಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೋಲಾಟ ಎಲ್ಲಾ ಜಾತಿಯ ಜನರಲ್ಲಿಯೂ ಕಂಡುಬರುವ ಒಂದು ಸಾರ್ವತ್ರಿಕ ಕಲೆ. ಮಳೆಗಾಲ ಕಳೆದು, ಹೊಲದ ಬೆಳೆ ಮನೆ ಸೇರಿ ಬಿಡುವಾದ ಕಾಲಕ್ಕೆ, ತನ್ನೆಲ್ಲಾ ಕೆಲಸಕಾರ್ಯಗಳಿಂದ ಸ್ವಲ್ಪ ಬಿಡುವು ಪಡೆದ ರೈತ ಸಮೂಹ ಕೋಲಾಟ ಆಡುತ್ತಾನೆ. ಆ ಕಾಲಕ್ಕೆ ಹೆಚ್ಚಾಗಿ ನಡೆಯುವ ಹಬ್ಬ-ಹುಣ್ಣಿಮೆ, ಜಾತ್ರೆ, ಉತ್ಸವ, ಸುಗ್ಗಿ ಆಚರಣೆಗಳಲ್ಲಿ ಕೋಲಾಟ ಪ್ರದರ್ಶನ ನಡೆಯುತ್ತದೆ.

ಹುಣ್ಣಿಮೆಯ ಕಾಲಕ್ಕೆ ಚೆಲ್ಲಿದ ಬೆಳದಿಂಗಳಲ್ಲಿ ಹನುಮಂತ ದೇವರ ಗುಡಿ, ಗರಡಿಮನೆ, ನಗರೇಶ್ವರ ಗುಡಿಯ ಮುಂದೆ ಓಣಿಯ ಯುವಕರು ಕೋಲಾಟವನ್ನು ಆಡುತ್ತಾರೆ. ಹಂಪಿಯ ಫಲಪೂಜೆ ಮತ್ತು ಜಾತ್ರೆಯ ಸಂದರ್ಭದಲ್ಲಿಯೂ ಕೋಲಾಟ ಆಡುತ್ತಾರೆ.

ಗೌರಿ ಹುಣ್ಣಿಮೆಯ ಸಂದರ್ಭದಲ್ಲಿ ಚಿಕ್ಕ ಚಿಕ್ಕ ಹೆಣ್ಣುಮಕ್ಕಳು ಗೌರಿ ಹುಣ್ಣಿಮೆಯ ಪದಗಳನ್ನೂ ಹಾಡುತ್ತಾ ಓಣಿಗಳಲ್ಲಿ ಕೋಲು ಹಾಕುತ್ತಾ ಮನೆಮನೆಗೆ ಹೋಗಿ ಹಣ ಸಂಗ್ರಹಿಸುತ್ತಾರೆ. ಹೋಳಿ ಹುಣ್ಣಿಮೆಯ ಕಾಲಕ್ಕೆ ಮರಿಯಮ್ಮನಹಳ್ಳಿ, ಹಂಪಿ, ಹೊಸಪೇಟೆ, ನಾಗಲಾಪುರ, ಮಲಪನಗುಡಿ, ರಾಮಸಾಗರ, ವೆಂಕಟಾಪುರ, ತಾಂಡ ಮುಂತಾದ ಕಡೆಗಳಲ್ಲಿ ಲಂಬಾಣಿ ಹೆಂಗಸರೇ ಪ್ರತ್ಯೇಕವಾಗಿ ಆಕರ್ಷಕವಾಗಿ ಕೋಲಾಟ ಆಡುತ್ತಾರೆ. ಇವರು ತಮ್ಮ ಕೋಲಾಟದ ಸಂದರ್ಭದಲ್ಲಿ ಹಲಗೆಯನ್ನೂ ಇರಿಸುತ್ತಾರೆ. ಲಂಬಾಣಿ ಕೋಲಾಟದಲ್ಲಿನ ಹಾಡುಗಳು ವಿಳಂಬಕಾಲದ ಲಯಗತಿಯನ್ನು ಹೊಂದಿದ್ದು ಏರಿಳಿತಗಳ ವೈವಿಧ್ಯತೆಯಿಂದ ರಂಜನೀಯವಾಗಿರುತ್ತದೆ. ಹಂಪಿಯ ಹಲವಾರು ದೇವಾಲಯಗಳಲ್ಲಿ ಉದಾ: ಮಹಾನವಮಿದಿಬ್ಬ, ಹಜಾರರಾಮಸ್ವಾಮಿ ದೇವಾಲಯ, ಹಳೆಪಟ್ಟಣದ ಕೆಲವು ಕಟ್ಟಡಗಳ ತಳಪಾಯದ ಭಾಗಗದಲ್ಲಿ ಮಹಿಳೆಯರ ಕೋಲಾಟದ ಹಲವಾರು ಭಂಗಿಗಳನ್ನು ಕೆತ್ತಲಾಗಿದ್ದು ಈ ಕಲೆ ಹೆಂಗಸರಿಂದ ಮಾತ್ರ ಪ್ರದರ್ಶನಗೊಳ್ಳುತ್ತಿತ್ತು ಎಂಬ ಊಹೆಗೆ ಎಡೆಮಾಡಿಕೊಡುತ್ತದೆ. ಹೊಸಪೇಟೆ, ಮಲಪನಗುಡಿ, ಅನಂತಶಯನ ಗುಡಿ, ಕಾಮಲಾಪುರ, ವೆಂಕಟಾಪುರ, ರಾಮಸಾಗರ, ಬುಕ್ಕಸಾಗರ, ಕಡ್ಡಿರಾಮಪುರ, ಹುಲಿಗಿ, ಮರಿಯಮ್ಮನಹಳ್ಳಿ ಇತ್ಯಾದಿ ಪ್ರದೇಶಗಳಲ್ಲಿ ಈಗಲೂ ಮಹಿಳೆಯರು ಕೋಲಾಟ ಆಡುತ್ತಾರೆ. ಇನ್ನು ಕೆಲವೆಡೆಗಳಲ್ಲಿ ಕೋಲಾಟವು ದೈವೀ ಆರಾಧನೆಗಾಗಿ ಬಳಸಲ್ಪಡುತ್ತಿದೆ. ಇಂಥ ಕಡೆ ಆಟಕ್ಕೆ ಮೊದಲು ಕೋಲುಗಳನ್ನು ಸಿದ್ಧಪಡಿಸುವುದರಿಂದ ಆರಂಭವಾಗಿ ಕೋಲಾಟ ಆಡುವವರಿಗೆ ಸಂಪ್ರದಾಯಬದ್ಧವಾಗಿ ಹಲವು ಆಚರಣೆಗಳಿರುತ್ತವೆ. ಕೋಲಾಟ ಪ್ರಾರಂಭಿಸುವ ಹದಿನೈದು ದಿನ ಮುಂಚಿತವಾಗಿ ಹುಣ್ಣಿಮೆಯಂದು ಕೋಲು ಕಡಿಯಲು ಕಾಡಿಗೆ ಹೋಗುವ ಪದ್ಧತಿಯಿದೆ. ಮರವನ್ನು ಪೂಜಿಸಿ ಪ್ರತಿ ಮರದಿಂದ ಒಂದೊಂದು ಜೊತೆ ಕೋಲುಗಳನ್ನು ಕಡಿಯುತ್ತಾರೆ. ಸಾಮಾನ್ಯವಾಗಿ ಶ್ರೀಗಂಧ, ಹೊನ್ನೆ, ಬೈನೆ, ಕೊಡಸು ಮುಂತಾದ ಮರಗಳಿಂದ ಕೋಲುಗಳನ್ನು ಕಡಿಯುತ್ತಾರೆ. ಅನಂತರ ಅವುಗಳನ್ನು ಒಣಗಿಸಿ ಒಂದೂವರೆ ಅಡಿ ಉದ್ದಕ್ಕೆ ಕತ್ತರಿಸಿ ದುಂಡಾಗಿಸಿ ಕೋಲಾಟಕ್ಕೆ ಕೋಲುಗಳನ್ನು ಸಿದ್ಧಗೊಳಿಸುತ್ತಾರೆ. ನಾಲ್ಕಾರು ದಿನಗಳ ಅಭ್ಯಾಸದ ಅನಂತರ ದೀಪಾವಳಿಯ ಮರುದಿನ ಊರದೇವರ ಗುಡಿಯ ಮುಂದೆ ಕೋಲಾಟದ ಪ್ರದರ್ಶನ ನಡೆಯುತ್ತದೆ. ಸಾಮಾನ್ಯವಾಗಿ ಕೋಲಾಟದ ಕಲಾವಿದರು ತಮ್ಮ ದೈನಂದಿನ ಉಡುಗೆ ತೊಡುಗೆಯಲ್ಲೇ ಇರುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಇತ್ತೀಚಿನ ಕೆಲವು ಯುವಕ ಮಂಡಲಗಳ ಕೋಲಾಟದ ತಂಡಗಳು ಬಣ್ಣ ಬಣ್ಣದ ಅಂಗಿ ಚಡ್ಡಿ ಬನಿಯನ್ ಹಾಗೂ ಹಣೆಪಟ್ಟಿ ಧರಿಸಿದ್ದು ತಮ್ಮ ಬನಿಯನ್‌ಗಳ ಮೇಲೆ ತಮ್ಮ ಮಂಡಲದ ಹೆಸರು, ಊರಿನ ಹೆಸರುಗಳನ್ನು ಅಚ್ಚು ಹಾಕಿಸಿರುತ್ತಾರೆ.

ಕೋಲಾಟದ ತಂಡಗಳಲ್ಲಿ ಐದು, ಎಂಟು, ಹತ್ತು ಅಥವಾ ಹನ್ನೆರಡು ಮಂದಿ ಕಲಾವಿದರಿರುತ್ತಾರೆ. ಇಲ್ಲಿನ ಕೋಲಾಟದ ತಂಡಗಳಲ್ಲಿ ಪ್ರಮುಖವಾಗಿ ಎರಡು ಗುಂಪು ಗಳಿರುತ್ತವೆ. ಮೊದಲನೆಯದು ಕೋಲಾಟ ಮಾಡುವವರದು. ಎರಡನೆಯದು ಕೋಲಾಟದ ಹಾಡುಗಳನ್ನು ಹೇಳುವವರದು. ಕೋಲಾಟದಲ್ಲಿ ಹಾಡು ಕೋಲಾಟದಷ್ಟೇ ಮುಖ್ಯ. ಇವುಗಳು ಒಂದನ್ನೊಂದು ಮೇಳೈಸುವ ಕಾರ್ಯದಲ್ಲಿ ಪರಸ್ಪರ ಸಹಕಾರಿಗಳಾಗಿವೆ. ಕೋಲಾಟದ ಗತ್ತುಲಯ, ಏರಿಳಿತಗಳಿಗೆ ಹಾಗೂ ಕೋಲಾಟದ ಕಲಾವಿದರಿಗೆ ಉತ್ಸಾಹ ತುಂಬುವಲ್ಲಿ ಕೋಲಾಟದ ಪದಗಳು ಸಹಾಯಕವಾಗುತ್ತವೆ. ಹಾಡಿಲ್ಲದ ಕೋಲಾಟಕ್ಕೆ ಶೋಭೆಯಿಲ್ಲ. ಹಾಡಿಗೆ ಹೊಂದುವಂತೆ ಕೋಲು ಕಟ್ಟಿ ಹೆಜ್ಜೆ ಹಾಕುತ್ತಾರೆ.

ಕೋಲಾಟದ ಹಾಡುಗಳಲ್ಲಿ ರಾಮಾಯಣ, ಮಹಾಭಾರತ, ಪುರಾಣ ಕಥೆಗಳು ಹಾಗೂ ಸಮಕಾಲೀನ ಜೀವನದ ಹತ್ತಾರು ಮುಖಗಳಾದ ಹಾಸ್ಯ, ಕರುಣೆ, ರೌದ್ರ, ಪ್ರೇಮ, ಕಾಮ, ಸಂತೋಷದ ಘಟನಾವಳಿಗಳ ನಿರೂಪಣೆಯಿದೆ. ಕೋಲಾಟವು ಯಾವಾಗಲೂ ಕೋಲುಗಳಿಗೆ ಕಲಾವಿದರು ಶರಣು ಮಾಡುವುದರ ಮೂಲಕ ಆರಂಭವಾಗುತ್ತದೆ.

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದ ಕಾಯೋ ಗಣನಾಯ್ಕ : ಶರಣು :

ಎಂದು ಗಣೇಶ ಸ್ತುತಿಯನ್ನು ಹಾಡುವುದರೊಂದಿಗೆ ಕೋಲಾಟ ಪ್ರಾರಂಭವಾಗುತ್ತದೆ. ಮುಂದೆ ಸರಸ್ವತಿ, ಲಕ್ಷ್ಮಿ, ಪಾರ್ವತಿ, ಈಶ್ವರ ಹಾಗೂ ಅವರ ಗ್ರಾಮದೇವತೆಗಳು ಹಾಡಿನಲ್ಲಿ ಸ್ಥಾನ ಪಡೆಯುತ್ತಾರೆ. ಮುಂದೆ ಇತರ ಕೋಲು ಪದಗಳನ್ನು ಹಾಡುತ್ತಾರೆ. ಹಂಪಿಯಲ್ಲಿಗೆ ಬೇರೆಡೆಯಿಂದ ಬಂದ ಕೋಲಾಟದ ತಂಡವು ಕೋಲು ಪ್ರಾರಂಭಿಸುವಾಗ

ಶರಣೆನ್ನಿರಣ್ಣಯ್ಯ ಶರಣೆನ್ನಿರೊ
ಹಂಪಿ ವಿರೂಪಾಕ್ಷಗೆ ಶರಣೆನ್ನಿರೊ ::

ತಾಯಿ ದುರುಗಮ್ಮಗೆ : ಶರಣೆನ್ನಿರೊ :
ತಾಯಿ ಗಾಳಮ್ಮಗೆ ಶರಣೆನ್ನಿರೊ ::
ಕೋದಂಡ ರಾಮಗೆ ಶರಣೆನ್ನಿರೊ ::
ಪಟ್ಟಣದ ಎಲ್ಲಮ್ಮಗೆ ಶರಣೆನ್ನಿರೊ :

ಎಂಬುದಾಗಿ ಇಲ್ಲಿನ ದೇವರುಗಳೆಲ್ಲವನ್ನೂ ನೆನೆಯುತ್ತಾರೆ. ಅಲ್ಲದೆ ಹಂಪಿಗೆ ಸಂಬಂಧಪಟ್ಟಂತೆ ಹಾಗೂ ಹಂಪಿಯನ್ನು ವರ್ಣಿಸುವ ಹಾಡುಗಳನ್ನೂ ಹಾಡುತ್ತಾರೆ. ಹಂಪಿಯಲ್ಲಿ ನಡೆಯುವ 'ಫಲಪೂಜೆ' ಹಾಗೂ ಹಂಪಿ ಜಾತ್ರೆಯ ಕಾಲಕ್ಕೆ ಉತ್ತರ ಕರ್ನಾಟಕದ ಹಲವಾರು ಕೋಲಾಟದ ತಂಡಗಳು ಬಂದು ಸೇರುತ್ತವೆ. ರಾತ್ರಿ ಇಡೀ ದೇವಸ್ಥಾನದ ಒಳಾಂಗಣದಲ್ಲಿ ಹಾಗೂ ಹೊರಾಂಗಣದಲ್ಲಿ ಇವರು ಪ್ರದರ್ಶನ ನೀಡುತ್ತಾರೆ. ಅಲ್ಲದೆ ಕೆಲವು ಹರಕೆ ತಂಡಗಳೂ ಸಹ ಇಲ್ಲಿ ಪ್ರದರ್ಶನ ನೀಡುತ್ತವೆ. ಕೋಲಾಟದಲ್ಲಿ ಅನೇಕ ಬಗೆಗಳನ್ನು ಕಾಣಬಹುದು. ಕತ್ರಿಕೋಲು, ತೆಕ್ಕಿಕೋಲು, ಜೋಡಿಕೋಲು, ಒಂಟಿಕೋಲು, ಚಿಟ್‌ಗೋಲು, ಚಿತ್ರಗೋಲು, ಆಳದಾಟುಕೋಲು, ಅಂಗಡಿಕೋಲು, ನಾಬಂದಿ ವಿಲಾಟ, ಬೆನ್ನಾಳಿಕೋಲು, ಬಾಗ್ಗೋಲು, ತೋಗೋಲು, ಹೂವಿನಕೋಲು, ತೊಟ್ಟಿಲಕೋಲು, ಬಿಚ್ಚುಗೋಲು ಸುತ್ತುಗೋಲು, ಬಳ್ಳಿಕೋಲು, ಪಳಿತುಕೋಲು, ಉಯ್ಯಾಲೆಕೋಲು ಜಡೆಕೋಲು ಇತ್ಯಾದಿ. ಕೋಲಾಟಕ್ಕೆ ಯಾವುದೇ ವಯಸ್ಸಿನ ಅಂತರವಿಲ್ಲದ ಅಬಾಲವೃದ್ಧ ರಾದಿಯಾಗಿ ಎಲ್ಲರೂ ಭಾಗವಹಿಸುತ್ತಾರೆ.

**೫.೨ ಅಲಾವಿ ಕುಣಿತ**

ವಿಜಯನಗರದ ದೊರೆಗಳ ಕಾಲದಲ್ಲಿ ಈ ಕುಣಿತ ಜನಪ್ರಿಯವಾಗಿತ್ತಂತೆ. ಈಗ ಹಂಪಿ ಪರಿಸರದಲ್ಲಿ ತುಂಬ ಜನಪ್ರಿಯವಾಗಿದೆ. ಇದನ್ನು ಮೊಹರಂ ತಿಂಗಳ ಹತ್ತನೇ ದಿನ ಮುಸ್ಲಿಮರು ಆಚರಿಸುತ್ತಾರೆ. ಉಳಿದವರೂ ಭಾಗವಹಿಸುತ್ತಾರೆ. ಕೆಂಡದಿಂದ ಮಾಡಿದ ಕೊಂಡವೊಂದರ ಸುತ್ತ ಕುಣಿಯುವುದರಿಂದಾಗಿ ಅದಕ್ಕೆ ಅಲಾವಿ ಕುಣಿತ ಎಂಬ ಹೆಸರು ಬಂದಿದೆ. ರಾಮಸಾಗರದ ಸುತ್ತಮುತ್ತ ಕೆಲವರು ಕೊಂಡ ಹಾಯುವುದೂ ಇದೆ.

ಹಂಪಿ ಪರಿಸರದಲ್ಲಿ ಕುಣಿತವು ಹಿಂದೂ ಮುಸ್ಲಿಮರ ಭ್ರಾತೃತ್ವದ ಸಂಕೇತವಾಗಿ ಉಳಿದುಬಂದಿದೆ. ಈ ಕುಣಿತದಲ್ಲಿ ಕಲಾವಿದರು ಪೈಗಂಬರ ಕುರಿತಾದ ಹಾಡುಗಳನ್ನು ಹಾಡುವುದರ ಜೊತೆಗೆ ವಚನಗಳನ್ನು ತತ್ತ್ವಪದಗಳನ್ನು ಹಾಡುತ್ತಾರೆ.

**೫.೩. ಹನುಮಂತ ವೇಷ**

ಹಂಪಿಯನ್ನು ಪ್ರಾಚೀನ ಕಿಷ್ಕಿಂದೆ ಎಂದು ಹೇಳಲಾಗುತ್ತಿದೆ. ಮೂಲತಃ ಇದು ಕಪಿಗಳ ಊರು. ರಾಮಾಯಣದಲ್ಲಿ ಪ್ರಸಿದ್ಧನಾದ ಆಂಜನೇಯ ಇಲ್ಲಿದ್ದನೆಂದೂ, ಆತ ಹುಟ್ಟಿದ ಅಂಜನಾದ್ರಿ ಪರ್ವತ ಹಂಪಿಯಲ್ಲಿದೆಯೆಂದು ಜನರ ನಂಬಿಕೆ. ಹಂಪಿ ಹೊಳೆಯಲ್ಲಿ ಜನರು 'ಹನುಮನ ಸೆಳವು' ಪ್ರದೇಶವನ್ನು ಗುರುತಿಸುತ್ತಾರೆ. ಇಲ್ಲಿ ಜನರು ಹರಕೆ ರೂಪದಲ್ಲಿ ಹನುಮಂತನ ವೇಷ ಹಾಕುತ್ತಾರೆ. ರಟ್ಟಿನಿಂದ ಮಾಡಿದ ಕಿರೀಟವೊಂದನ್ನು

ತಲೆಗೆ ಇರಿಸಿಕೊಂಡು, ಮುಖಕ್ಕೆ ನೀಲಿ ಬಳಿದುಕೊಂಡು, ಮೈಗೆ ಹಸಿರು ಹೊದ್ದುಕೊಂಡು, ಒಂದು ಬಾಲ ಕಟ್ಟಿಕೊಂಡು ಹನುಮಂತನ ವೇಷಧಾರಿಗಳು ಅಡ್ಡಾಡುತ್ತಾರೆ. ಕೈಯಲ್ಲಿ ಒಂದು ಗದೆ ಸಾಮಾನ್ಯವಾಗಿ ಇರುತ್ತದೆ. ಹಂಪಿ ಜಾತ್ರೆ ಮತ್ತು ಫಲಪೂಜೆಯ ದಿನಗಳಲ್ಲಿ ಇಂಥ ಹನುಮಂತ ವೇಷಧಾರಿಗಳು ಹಂಪಿಯ ತುಂಬ ಎಲ್ಲೆಡೆಯೂ ಇರುತ್ತಾರೆ. ಹನುಮಂತ ವೇಷ ಹಾಕಿದರೆ ಮೈಯಲ್ಲಿರುವ ಖಾಯಿಲೆಗಳೆಲ್ಲ ಗುಣವಾಗುತ್ತವೆ ಎಂಬ ನಂಬಿಕೆ ಸಾರ್ವತ್ರಿಕವಾಗಿದೆ.



ಹನುಮಂತ

**೫.೪. ಮಾರಮ್ಮನ ಕುಣಿತ**

ಹಂಪಿ ಪ್ರದೇಶದಲ್ಲಿರುವ ಗ್ರಾಮದೇವತೆಗಳ ಗುಡಿಯಲ್ಲಿ ಆಗಾಗ ಮಾರಮ್ಮನ ಕುಣಿತ ಕಂಡುಬರುತ್ತದೆ. ಮಾರಮ್ಮನನ್ನು ಹೊತ್ತು ತರುವ ಜನರು ಡೋಲನ್ನು ಬಾರಿಸುತ್ತಾ ಗುಡಿಯ ಎದುರಿನಲ್ಲಿ 'ಮಾರಮ್ಮ ಬಂದವಳೇ' ಎನ್ನುತ್ತಾ ಕುಣಿಯುತ್ತಾರೆ. ಕುಣಿಯುವ ಪೂಜಾರಿಗೆ ಆವೇಶ ಬಂದರೆ ಚಾಟಿಯಲ್ಲಿ ಮೈಗೆಲ್ಲಾ ಹೊಡೆದುಕೊಳ್ಳುತ್ತಾನೆ. ಜನರು ಮಾರಿಗೂ, ಪೂಜಾರಿಗೂ ಕಾಣಿಕೆ ನೀಡುತ್ತಾರೆ. ಪಟ್ಟಣದ ಎಲ್ಲಮ್ಮ, ಗಾಳೆಮ್ಮ, ಹನುಮನ ಗುಡಿಗಳೆದುರು ಇಂಥ ಮಾರಿಕುಣಿತಗಳು ಆಗಾಗ ಕಂಡು ಬರುತ್ತವೆ.

**೫.೫. ಏಕತಾರಿ ಮೇಳದವರು**

ಫಲಪೂಜೆ ಮತ್ತು ವಿರೂಪಾಕ್ಷನ ಜಾತ್ರೆಯಲ್ಲಿ ಉತ್ತರ ಕರ್ನಾಟಕದ ಬಹುತೇಕ ಏಕತಾರಿ ಮೇಳಗಳೆಲ್ಲ ಹಂಪಿಯಲ್ಲಿ ಸೇರುತ್ತವೆ. ಗುಂಪು ಗುಂಪಾಗಿ, ಹಂಪಿಗೆ ಬರುವ ಈ ಮೇಳಗಳಿಗೆ ಒಬ್ಬ ಗುರು ಇರುತ್ತಾನೆ. ಆತ ತತ್ತ್ವಪದಗಳನ್ನು ಹಾಡುತ್ತಾನೆ. ಉಳಿದವರು ಅದನ್ನು ಪುನರಾವರ್ತಿಸುತ್ತಾರೆ. ಏಕಾತರಿಯೇ ಇಲ್ಲಿ ಪ್ರಧಾನ ವಾದ್ಯ. ಜೊತೆಗೆ ತಾಳ ಮತ್ತು ಹಾರ್ಮೋನಿಯಂ ಇರುತ್ತವೆ. ಜಾತ್ರೆಯ ದಿವಸ ಇವರು ಇಡೀ ರಾತ್ರಿ ತತ್ತ್ವಪದಗಳನ್ನು ಹಾಡಿಕೊಂಡಿರುತ್ತಾರೆ. ವಿರೂಪಾಕ್ಷನನ್ನು ಸ್ತುತಿಸುವ ಅನೇಕ ಶ್ಲೋಕಗಳನ್ನು ಹಾಡುತ್ತಾರೆ.

**೫.೬. ಕಂಬಿಯವರು**

ಶಿವರಾತ್ರಿ ಸಮಯದಲ್ಲಿ ಹಂಪಿಗೆ ಬರುವ ಭಕ್ತ ಸಮೂಹದಲ್ಲಿ 'ಕಂಬಿ'ಯವರು ಇರುತ್ತಾರೆ. ಇಲ್ಲಿ 'ಕಂಬಿ' ಎಂದರೆ ಉದ್ದನೆಯ ಬಿದಿರಿನ ಗಳ. ಈ ಗಳಕ್ಕೆ ತೂಗುಹಾಕಿದ ನಂದಿ ವಿಗ್ರಹವಿರುತ್ತದೆ, ಬಣ್ಣದ ಪತಾಕೆ ಇರುತ್ತದೆ. ಬಿಳಿಭಸ್ಮ ಧರಿಸಿದ 'ಅಯ್ಯ'ಗಳು ಇದನ್ನು ಹೊರುತ್ತಾರೆ.

ಕಂಬಿ ಹೆತ್ತವರ ಸುತ್ತ ತಾಳ ಹಾರ್ಮೋನಿಯಂ ಹಿಡಿದ ಭಕ್ತರಿರುತ್ತಾರೆ. ಇವರು ವಿರೂಪಾಕ್ಷ ದೇವಸ್ಥಾನದಲ್ಲಿ ಒಂದು ರಾತ್ರಿ ಉಳಿದುಕೊಂಡು ದೇವರಿಗೆ ಪೂಜೆ ಸಲ್ಲಿಸಿ ಹಿಂದಿರುಗುತ್ತಾರೆ. ಸಾಮಾನ್ಯವಾಗಿ ಇವರು ಭಜನೆ ಹಾಡುಗಳನ್ನು ಹಾಡುತ್ತಾರೆ.

**೫.೭. ಪೋತಗಾರರು**

ಹಂಪಿ ಜಾತ್ರೆಯಲ್ಲಿ ಕಂಡುಬರುವ ಇನ್ನೊಂದು ವೇಷ. ಈ ವೇಷಧಾರಿ ಸೊಂಟದವರಿಗೆ ಮಾತ್ರ ಬಿಳಿ ಪಂಚೆ ಉಟ್ಟುಕೊಂಡಿರುತ್ತಾನೆ. ಮುಖಕ್ಕೆ ಮೈಗೆ ಎಲ್ಲಾ ಕೆಂಪು ಬಣ್ಣ ಹಾಕಿಕೊಂಡಿರುತ್ತಾನೆ. ಕೊರಳಿಗೆ ರುದ್ರಾಕ್ಷಿ ಮಾಲೆ, ಸೊಂಟಕ್ಕೆ ಚರ್ಮದ ಪಟ್ಟಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾನೆ. ದವಡೆಯ ಎಡಬದಿಯಿಂದ ಬಲ ಬದಿಯವರೆಗೆ ಒಂದು ದಬ್ಬಳವನ್ನು ಸಿಕ್ಕಿಸಿಕೊಂಡಿರುತ್ತಾನೆ. ಕೈಯಲ್ಲಿ ಒಂದು ಭಿಕ್ಷಾಪಾತ್ರೆ ಇರುತ್ತದೆ. ಜನರು ಇದನ್ನು 'ಪೋತವೇಷ' ಎಂದು ಕರೆಯುತ್ತಾರೆ. ಹಂಪಿ ಜಾತ್ರೆ ಮುಗಿಯುತ್ತಲೆ ಇವರು ಎತ್ತಲೋ ಹೊರಟು ಹೋಗುತ್ತಾರೆ.

**೫.೮. ಕರಡಿ ಮಜಲು**

ಹರಕೆ ಹೇಳಿಕೊಂಡವರು ಫಲಪೂಜೆಯಂದು ಕರಡಿ ಮಜಲು ಸೇವೆ ನಡೆಸುತ್ತಾರೆ.

**೫.೯. ಕರಡಿ ವೇಷ**

ಹನುಮತಂನ ವೇಷದ ಹಾಗೆ ಹಂಪಿಯಲ್ಲಿ ಕರಡಿ ವೇಷಗಳೂ ಜನಪ್ರಿಯ. ಮಾತಂಗ ಪರ್ವತದಲ್ಲಿ ಜಾಂಬವ ಇದ್ದ ಎಂಬ ನಂಬಿಕೆ ಇರುವುದರಿಂದ, ಕರಡಿ ವೇಷವನ್ನು ಹರಕೆ ರೂಪದಲ್ಲಿ ಹೇಳುತ್ತಾರೆ. ಈ ವೇಷ ಹಾಕಿದರೆ ಮೈಯಲ್ಲಿರುವ ರೋಗಗಳೆಲ್ಲ ವಾಸಿಯಾಗುತ್ತದೆ ಎಂಬ ನಂಬಿಕೆ ಇದೆ.

ಸಾಮಾನ್ಯವಾಗಿ ಹನುಮಂತನ ವೇಷವನ್ನು ತರುಣರೂ, ಕರಡಿ ವೇಷವನ್ನು ಮುದುಕರೂ ಹಾಕುತ್ತಾರೆ.

**೫.೧೦. ಕಾಸೆಯವರು**

ತನ್ನ ಹೆಂಡತಿಯಾದ ದಾಕ್ಷಾಯಣಿಯು ದಕ್ಷಯಜ್ಞದಲ್ಲಿ ಬೆಂದು ಹೋದ ಸುದ್ದಿ ಕೇಳಿ ಕೋಪಗೊಂಡ ಶಿವನು ವೀರಭದ್ರನನ್ನು ಸೃಷ್ಟಿಸುತ್ತಾನೆ. ಹೀಗೆ ವೀರಭದ್ರ ಸೃಷ್ಟಿಯಾದ ಸ್ಥಳ ಹೇಮಕೂಟವಂತೆ. ಶಿವನ ಮಾತು ಕೇಳಿ ವೀರಭದ್ರನು ಸಿಟ್ಟಿನಿಂದ ನರ್ತಿಸಿ, ದಕ್ಷನನ್ನು ವಧೆ ಮಾಡಲು ಹೊರಡುತ್ತಾನೆ. ಹೀಗೆ ವೀರಭದ್ರನು ಸಿಟ್ಟಿನಿಂದ ನರ್ತಿಸಿದ್ದನ್ನೇ ಕೆಲವರು 'ಕಾಸೆ ಕುಣಿತ' ಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಅವರು ಜಾತ್ರೆಯ ದಿವಸದಂದು ಹೇಮಕೂಟ ಪರಿಸರದಲ್ಲಿ ವಿಶೇಷವಾಗಿ ನರ್ತಿಸುತ್ತಾರೆ.

ಕೆಂಪು ಬಟ್ಟೆಯನ್ನು ಉಟ್ಟುಕೊಳ್ಳುವ ಈ ಕಾಸೆಯವರು, ಬಲಗೈಯಲ್ಲಿ ಖಡ್ಗ, ಹಿಡಿದಿರುತ್ತಾರೆ. ಎದೆಗೆ ರುದ್ರನ ಚಿತ್ರ ಕಟ್ಟಿರುತ್ತಾರೆ. ಕಾಲಿಗೆ ಬೆಳ್ಳಿ ಗೆಜ್ಜೆಯೂ ಇರುತ್ತದೆ. ತಲೆಗೆ ಉದ್ದನೆಯ ಕೂದಲನ್ನು ಇಳಿಬಿಟ್ಟಿರುತ್ತಾರೆ. ಇವರು ಶಿವನಿಗೆ ಮತ್ತು ವೀರಭದ್ರನಿಗೆ ಸಂಬಂಧಿಸಿದ ನಿಗೂಢ ಒಡಬುಗಳನ್ನು ಹೇಳುತ್ತ, ಖಡ್ಗದಿಂದ ಎದೆಗೆ ಅಪ್ಪಳಿಸಿಕೊಳ್ಳುತ್ತಾ ಭಯಾನಕವಾಗಿ ಕುಣಿಯುತ್ತಾರೆ. ಹೇಮಕೂಟವು ಶಿವನ ವಾಸಸ್ಥಾನವಾಗಿರುವುದರಿಂದ, ಇಲ್ಲಿ ಕಾಸೆಯವರ ಕುಣಿತ ವಿಶೇಷವಾಗಿರುತ್ತದೆ ಎಂದು ಜನ ಹೇಳುತ್ತಾರೆ.

**೫.೧೧. ಕೊಂಡಮಾಮಗಳು**

ಫಲಪೂಜೆ, ಶಿವರಾತ್ರಿ ಮತ್ತು ಹಂಪಿ ಜಾತ್ರೆಯ ದಿವಸದಂದು ತೆಲುಗು ಮಾತಾಡುವ ಅನೇಕ ಜನ ಕೊಂಡಮಾಮರು ಹಂಪಿ ಪರಿಸರದಲ್ಲಿ ಕಾಣಸಿಗುತ್ತಾರೆ. ಮುಡಿಗೆ ನವಿಲುಗರಿ, ಕೊರಳಿಗೆ ಮಣಿಸರ, ತೋಳುಗಳಿಗೆ ಲೋಹದ ಬಳೆ, ಕಿವಿಗೆ ದೊಡ್ಡದಾದ ಕುಂಡಲ, ಸೊಂಟಪಟ್ಟಿಗೆ ಮುಳ್ಳುಹಂದಿಯ ಮುಳ್ಳುಗಳನ್ನು ಸಿಕ್ಕಿಸಿಕೊಂಡಿರುವ ಇವರು ಭವಿಷ್ಯ ಹೇಳುತ್ತಾರೆ. 'ನಾವು ಕೃಷ್ಣದೇವರಾಯನ ಕಾಲದಿಂದಲೂ ಹಂಪಿ ಜಾತ್ರೆಗೆ ಬರುತ್ತಿದ್ದೆವು' ಎಂದು ಅವರು ಹೇಳಿಕೊಳ್ಳುತ್ತಾರೆ.

**೫.೧೨. ಬಸವನಾಟ**

ಕಾಮಲಾಪುರ, ಕಡ್ಡಿರಾಂಪುರ, ರಾಮಸಾಗರ, ಕಂಪ್ಲಿ, ಆನೆಗೊಂದಿ ಪರಿಸರದಲ್ಲಿ 'ಕೋಲೆ ಬಸವನಾಟ'ದ ಕಲಾವಿದರಿದ್ದಾರೆ. ಇವರನ್ನು 'ಗಂಗೆತ್ತಿನವರು' ಎಂದು ಕರೆಯುತ್ತಾರೆ. ಇವರು ಶಿವ-ಪಾರ್ವತಿಯರ ಮದುವೆಯನ್ನು ಒಂದು ಎತ್ತು ಮತ್ತು ದನದ ಮೂಲಕ ಮಾಡಿಸಿ ತೋರಿಸುತ್ತಾರೆ. ಪಾರ್ವತಿಯ ತಪಸ್ಸಿನ ಸಂದರ್ಭದಲ್ಲಿ ಭಿಕ್ಷುಕನ ವೇಷ ಧರಿಸಿ ಬಂದ ಶಿವನನ್ನು, ಪಾರ್ವತಿಯೇ ಬೈದು ಬಿಡುವ ಸಂದರ್ಭವನ್ನು ಇವರು ಬಹಳ ಮನೋಜ್ಞವಾಗಿ ಆಡಿ ತೋರಿಸುತ್ತಾರೆ.

**೫.೧೩. ಚೌಡಿಕೆಯವರು**

ಚೌಡಿಕೆ ನುಡಿಸುವ ಜೋಗಯ್ಯ ಮತ್ತು ಜೋಗತಿಯರು ಹಂಪಿಗೆ ಭೇಟಿ ನೀಡುತ್ತಾರೆ. ಜಾತ್ರೆಯಲ್ಲಿ ಜೋಗ-ಜೋಗತಿಯರು ಒಟ್ಟಿಗೇ ಹಾಡಿ ಕುಣಿಯುತ್ತಾರೆ; ಎಲ್ಲಮ್ಮನ ಕತೆಯನ್ನು ನಿರೂಪಿಸುತ್ತಾರೆ. ನಪುಂಸಕರಾದವರು ಜೋಗತಿ ಅಥವಾ ಜೋಗಮ್ಮ ದೀಕ್ಷೆ ಪಡೆಯುವ ಕೆಲಸವೂ ಹಂಪಿಯಲ್ಲಿ ನಡೆಯುತ್ತದೆ.

**೫.೧೪. ಡೊಳ್ಳಿನವರು**

ಡೊಳ್ಳಿನ ಧ್ವನಿ ಶಿವನಿಗೆ ಬಹಳ ಪ್ರಿಯವಾದುದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಫಲಪೂಜೆ ಮತ್ತು ಜಾತ್ರೆಯ ಸಮಯದಲ್ಲಿ ಅನೇಕ ಡೊಳ್ಳಿನ ಮೇಳಗಳು ಹಂಪಿಗೆ ಬರುತ್ತವೆ. ಮೇಳದವರು ರಾತ್ರಿಯಿಡೀ ಡೊಳ್ಳು ಬಾರಿಸಿ, ಹರಕೆ ಸಲ್ಲಿಸುತ್ತಾರೆ. ಬಳ್ಳಾರಿ, ರಾಯಚೂರು, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಿಂದಲೇ ಡೊಳ್ಳಿನ ತಂಡಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ.

ಕೆಲವು ನಿರೂಪಕರು 'ನಮ್ಮ ಹಿರಿಯರು ಹಿಂದಿನ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಡೊಳ್ಳು ಬಾರಿಸುತ್ತಿದ್ದರು' ಎಂದು ಹೇಳುತ್ತಾರೆ. ಹಂಪಿ ಪರಿಸರದ ಕುರುಬರು ವಿಶೇಷವಾಗಿ ಡೊಳ್ಳಿನ ಹರಕೆಯಲ್ಲಿ ಭಾಗವಹಿಸುತ್ತಾರೆ.

**೫.೧೫. ಡೊಂಬರ ಕುಣಿತ**

ಕಂಪಿಲಿಯ ಇತಿಹಾಸವನ್ನು ತಮ್ಮದೇ ಇತಿಹಾಸ ಎಂದು ಭಾವಿಸುವ ಡೊಂಬರು, ಹಂಪಿಯಲ್ಲಿ ಡೊಂಬರ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಮರದಿಂದ ಮಾಡಿದ ವಿವಿಧ ಮುಖವಾಡಗಳನ್ನು ಬಳಸುತ್ತಾರೆ. ಶೂಲದ ಮರವೊಂದನ್ನು ನೆಡುತ್ತಾರೆ. ಸಿದ್ಧರ ಕಳಸ ಮತ್ತು ಕುದುರೆಯ ಮುಖವಾಡಕ್ಕೆ ಹಬ್ಬದಲ್ಲಿ ವಿಶೇಷ ಸ್ಥಾವವಿದೆ.

ಡೊಂಬರ ಹಬ್ಬವು ಕಂಪಿಲಿಯ ಕುಮಾರರಾಮನ ಕತೆಯನ್ನು ಪುನರಭಿನಯಿಸಿ ತೋರಿಸುತ್ತದೆ. ಹಬ್ಬದಲ್ಲಿ ಬಳಕೆಯಾಗುವ ಶೂಲದ ಮರವನ್ನು ರತ್ನಾಜಿ ಎಂದು ಭಾವಿಸಲಾಗುತ್ತದೆ. ಸಿದ್ಧರ ಕಳಸವೇ ಕುಮಾರರಾಮನಂತೆ. ಹಾಗೆ ಕುದುರೆಯ ಮುಖವಾಡವು

ಕುಮಾರರಾಮನ ಪ್ರೀತಿಯ ಕುದುರೆಯಾದ ಬೊಲ್ಲನನ್ನು ಸಂಕೇತಿಸುವುದಂತೆ. ಹಬ್ಬದಲ್ಲಿ ಕುಣಿಯುವ ಡೊಂಬತಿಯರು, ಕುಣಿಯುತ್ತಲೇ ಕುಮಾರರಾಮನ ಕತೆಯನ್ನು ನಿರೂಪಿಸುತ್ತಾರೆ. ನಿರೂಪಣೆಯ ಮಧ್ಯೆ ಚೆಂಡಾಟದ ಪ್ರಕರಣ, ಯುದ್ಧ ಪ್ರಕರಣಗಳನ್ನು ಅಭಿನಯಿಸಿ ತೋರಿಸಲಾಗುತ್ತದೆ.

ಡೊಂಬರಾಟದಲ್ಲಿ ಮನರಂಜಕ ಕುಣಿತಗಳೂ, ಕಸರತ್ತುಗಳೂ ಇರುತ್ತವೆ.

**೫.೧೬. ನಗಾರಿಯವರು**

ಫಲಪೂಜೆ ಮತ್ತು ಜಾತ್ರೆಗಳಲ್ಲಿ ಹಂಪಿಯ ವಿವಿಧ ಎಡೆಗಳಲ್ಲಿ ನಗಾರಿ ಬಾರಿಸುವ ಜನರನ್ನು ಕಾಣಬಹುದು.

ಹಿಂದೆ ಅರಸರ ಕಾಲಕ್ಕೆ ವೈರಿಗಳ ಸುಳಿವು ನೀಡಲು ಉಪಯೋಗಿಸುತ್ತಿದ್ದ ನಗಾರಿಯನ್ನು ಈಗ ವಿರೂಪಾಕ್ಷ ದೇವರ ಮೆರವಣಿಗೆಗೆ ಉಪಯೋಗಿಸುತ್ತಿದ್ದೇವೆ ಎಂದು ಕೆಲವು ನಿರೂಪಕರು ಹೇಳುವುದುಂಟು. ಹಂಪಿ ಜಾತ್ರೆಯಲ್ಲಿ ಹತ್ತರಿಂದ ಹದಿನೈದು ನಗಾರಿ ತಂಡಗಳಿರುತ್ತವೆ.

**೫.೧೭. ನಂದಿಧ್ವಜ ಕುಣಿತ**

ಫಲಪೂಜೆಯಲ್ಲಿ ಹಲವು ಜನ ಕಲಾವಿದರು ನಂದಿಧ್ವಜ ಕುಣಿತ ಮಾಡುತ್ತಾರೆ. ವಿರೂಪಾಕ್ಷನಿಗೆ ಸಂಬಂಧಿಸಿಯೇ ಈ ಕುಣಿತ ಹುಟ್ಟಿದೆ ಎಂದು ಕಲಾವಿದರು ಭಾವಿಸುತ್ತಾರೆ. ಅವರ ಪ್ರಕಾರ 'ನಂದಿಧ್ವಜ ಕೋಲಿನಲ್ಲಿ ಕಾಣುವ ಬುರುಡೆಯಾಕಾರದ ರಚನೆಗಳು, ವೀರಭದ್ರನಿಂದ ಕೊಲ್ಲಲ್ಪಟ್ಟ ದಕ್ಷನ ಅನುಯಾಯಿಗಳಿದ್ದು, ಧ್ವಜಕೋಲಿನಲ್ಲಿ ಕಾಣುವ ಧ್ವಜವು ಸಿಂಹದ ಚರ್ಮದ್ದು'. ಹೀಗೆ ಈ ಕುಣಿತವು ಶಿವನಿಗೆ ಸಂಬಂಧಿಸಿರುವುದರಿಂದ, ಜಾತ್ರೆಯಲ್ಲಿ ಹೆಚ್ಚು ಜನರನ್ನು ತನ್ನೆಡೆಗೆ ಆಕರ್ಷಿಸುತ್ತದೆ. ತುಂಬ ಭಾರವಿರುವ ನಂದಿಕೋಲನ್ನು ಎತ್ತಿಕೊಂಡು ಕುಣಿಯುವ ಕಲಾವಿದರು ಚಾಕಚಕ್ಯತೆ ಮತ್ತು ಸಾಹಸಗಳಿಗೆ ಪೂರಕವಾಗಿ ನಗಾರಿ, ನಾಗಸ್ವರವನ್ನು ಬಾರಿಸುತ್ತಾರೆ.

**೫.೧೮. ಭಜನೆ ಮಾಡುವವರು**

ಹಂಪಿ ಪರಿಸರದಲ್ಲಿ ಭಜನೆ ಮಂಡಲಿಗಳು ಸಾಕಷ್ಟಿವೆ. ಇಲ್ಲಿ ವಯಸ್ಸಿನ ಅಂತರವೇನು ಇಲ್ಲ. ಗಂಡಸರೂ ಹಾಗೂ ಕೆಲವು ಕಡೆ ಹೆಂಗಸರೂ ಸಹ ಭಜನೆ ಮಂಡಲಿಗಳಲ್ಲಿ ಪಾಲ್ಗೊಳ್ಳುತ್ತಾರೆ. ಸಾಮಾನ್ಯವಾಗಿ ಭಜನೆಯನ್ನು ಪ್ರತಿದಿನ ಸಂಜೆ ದೇವಸ್ಥಾನದಲ್ಲಿ ನಡೆಸುತ್ತಾರೆ. ಅಲ್ಲದೆ ದೈವರಾಧನೆಗೆ ಪ್ರಶಸ್ತವಾದ ದಿನಗಳೆಂದು ಭಾವಿಸಲಾದ ಸೋಮವಾರ, ಶುಕ್ರವಾರ, ಶನಿಗಾರಗಳಂದು ಜನರು ವಿಶೇಷವಾಗಿ ಭಜನೆ ಮಾಡುತ್ತಾರೆ. ತಮ್ಮ ದಿನಗೆಲಸ ಮುಗಿಸಿ ಮನೆಗೆ ಬಂದು ಕೈಕಾಲು ಮುಖ ತೊಳೆದು ಹಣೆಗೆ ವಿಭೂತಿ ಧರಿಸಿ, ನಿತ್ಯದ ಉಡುಪಿನಲ್ಲೇ ದೇವಸ್ಥಾನದಲ್ಲಿ ಬಂದು ಸೇರುತ್ತಾರೆ. ಭಜನೆಯ ಹಾಡುಗಳನ್ನು ಹಾಡುವ ನುರಿತವರೆಲ್ಲ ಮುಂದೆ ಬರುತ್ತಾರೆ. ಚೆನ್ನಾಗಿ ಕಲಿತ ಹಾಡುಗಾರನೊಬ್ಬ ಮುಖ್ಯ ಹಾಡುಗಾರನಾಗುತ್ತಾನೆ. ಉಳಿದವರು ಹಿಮ್ಮೇಳದಲ್ಲಿ ಸಹಕರಿಸುತ್ತಾರೆ. ಭಜನೆ ಮೇಳಗಳಲ್ಲಿ ಹಾರ್ಮೋನಿಯಂ, ತಾಳ, ಗೆಜ್ಜೆ, ತಬಲ, ಡೋಲಾಕ್, ದಮ್ಮಡಿ, ಖಂಜರಿ, ಏಕತಾರಿ ಮುಂತಾದ ವಾದ್ಯಗಳನ್ನು ಉಪಯೋಗಿಸುತ್ತಾರೆ. ಭಜನೆಯ ತಂಡದ ಪ್ರತಿಯೊಬ್ಬನೂ ಈ ಎಲ್ಲಾ ವಾದ್ಯಗಳನ್ನು ನುಡಿಸಬಲ್ಲ ಅನುಭವ ಪಡೆದಿರುತ್ತಾನೆ. ಪ್ರತಿ ಹುಣ್ಣಿಮೆ ಅಮವಾಸೆ ಹಬ್ಬ ಹರಿದಿನಗಳ ಕಾಲಕ್ಕೆ ಹೊಸಪೇಟೆ, ಕಾಮಲಾಪುರ, ಮಲಪನಗುಡಿ ಹಾಘೂ ಹಂಪಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾತ್ರಿ ಇಡೀ ಭಜನೆ ಕಾರ್ಯಕ್ರಮ ನಡೆಯುತ್ತದೆ. ಅಲ್ಲದೆ ರಾಯಚೂರು, ಚಿತ್ರದುರ್ಗ, ಧಾಖವಾಡ ಹಾಗೂ ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಘಳಿಂದ ಹಂಪಿಗೆ ಹಬ್ಬ ಹರಿದಿನಗಳ ಕಾಲಕ್ಕೆ ಅದರಲ್ಲೂ ಫಲಪೂಜೆ, ಜಾತ್ರೆ, ಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ಪಾದಯಾತ್ರೆ ಮಾಡಿಕೊಂಡು ಭಜನೆ ತಂಡಗಳು ಬರುತ್ತವೆ. ಹೀಗೆ ಬರುವ ತಂಡಗಳಿಗೆ ಮಾರ್ಗದ ಮಧ್ಯದಲ್ಲಿನ ಹಲವು ಗ್ರಾಮಸ್ಥರು ಹಾಗೂ ಅಲ್ಲಿನ ಭಜನೆ ಮಂಡಳಿಯವರು

ಊಟ ವಸತಿ, ಹಣ ನೀಡಿ ಬೀಳ್ಕೊಡುತ್ತಾರೆ. ಸ್ಥಳೀಯರು ಮಳೆ ಬಾರದ ಕಾಲಕ್ಕೆ ಜಂಬುನಾಥನ ದೇವಸ್ಥಾನದಲ್ಲಿ ದೇವರ ಉತ್ಸವಮಾಡಿ ಒಂದು ತಿಂಗಳ ಕಾಲ ಜನರು ಭಜನೆ ಮಾಡುತ್ತಾರೆ. ಭಜನೆಗಳಲ್ಲಿ ಹೆಚ್ಚಾಗಿ ಶಿಶುನಾಳಶರೀಫರ ಪದಗಳು, ಬಸವಣ್ಣನವರ ವಚನಗಳು, ಶರಣರ ತತ್ವಪದಗಳು ಹಾಗೂ ದಾಸರ ಕೀರ್ತನೆಗಳನ್ನು ಹಾಡುತ್ತಾರೆ. ಯಾರಾದರೂ ಸತ್ತರೆ ಮರಣದ ಕಾಲದಲ್ಲಿ ಕಳೇಬರದ ಬಳಿ ಭಜನೆ ಮಾಡುವುದೂ ಉಂಟು. ಈ ಸಮಯದಲ್ಲಿ ಜೀವ, ಆತ್ಮ, ನಶ್ವರ ಬದುಕು, ಮಾನವ ಬದುಕಿನ ಜಂಜಾಟ, ಕರ್ತವ್ಯ ಜೀವನದ ಬೆಲೆಯನ್ನು ಕುರಿತಾದ ಪದಗಳನ್ನು ತುಂಬ ಮಾರ್ಮಿಕವಾದ ಅರ್ಥಪೂರ್ಣ ರೀತಿಯಲ್ಲಿ ಹಾಡಲಾಗುತ್ತದೆ.

ಮೂರು ಕಾಲಿನ ಪಕ್ಷಿ
ನೀರೊಳಗೆ ನಿಂತಾದೋ
ಶಂಭೋಲಿಂಗಾ ::

ರೆಕ್ಕಿಲ್ಲ ಪುಕ್ಕಿಲ್ಲ
ಹಾರಿತು ಗಗನಕ್ಕೆ
ಶಂಭೋಲಿಂಗಾ ::

ಅಲ್ಲದೆ ಪ್ರಾಣಿ ಪಕ್ಷಿಯನ್ನು ಕುರಿತಂತೆ

ತನುವಿನೊಳನುದಿನವಿದ್ದು
ಎನ್ನ ಮನಕ್ಕೊಂದು ಮಾತು
ಹೇಳದೆ ಹೋದೆಯ ಹಂಸ ::

ಕಾಯದ ಕೊಂಬೆ ಮ್ಯಾಲೆ
ಮಾಯಾದ ಗಿಳಿಕೂತು
ಗೂಡುಕಟ್ಟಿತು ತನ್ನ ಸುಖಕೆಂದು
ಮರಿ ಮಾಡಿ ಗೂಡು ಬಿಟ್ಟು
ಗಿಳಿ ಹಾರಿ ಹೋಗುವಾಗ
ತನ್ನ ಕೊಂಬೆಗೊಂದು ಮಾತು
ಹೇಳದೆ ಹೋದೆಯ ಹಂಸ ::

ಇತ್ಯಾದಿಯಾಗಿ ಹಾಡುತ್ತಾರೆ.

ಭಜನೆ ಮೇಳದಲ್ಲಿ ಎಲ್ಲರೂ ಒಟ್ಟಿಗೆ ಕುಳಿತು ಹಾಡುತ್ತಾರೆ. ನಿಂತು ಹಾಡುವ ಪರಿಪಾಠ ಕಡಿಮೆ. ಒಳ್ಳೆಯ ಕಂಠವಿರುವವನು ಒಂದು ಚರಣ ಹಾಡಿದರೆ ಉಳಿದವರೆಲ್ಲ ಆ ಚರಣವನ್ನೋ ಅಥವಾ ಪಲ್ಲವಿಯನ್ನೋ ಪುನರುಚ್ಚರಿಸುತ್ತಾರೆ. ಪ್ರಾರಂಭದಲ್ಲಿ ಭಜನೆಯ ಚರಣವನ್ನು ನಿಧಾನವಾಗಿ ಹಾಡಿ ನಂತರ ಹಾಡಿನ ಗತಿಯನ್ನು ತ್ವರಿತಗೊಳಿಸಿ ಮತ್ತೆ ನಿಧಾನವಾಗಿ ಹಾಡುತ್ತಾರೆ. ಅದಕ್ಕೆ ತಕ್ಕ ತಾಳ, ದಮ್ಮಡಿ, ಖಂಜರ, ಲಯಬದ್ಧ ಬಡಿತಗಳ ಏರಿಳಿತಗಳಿಂದ ಭಜನೆ ಆಕರ್ಷಕವಾಗಿರುತ್ತದೆ. ಭಜನೆ ಪ್ರಾರಂಭಿಸುವಾಗ ಮತ್ತು ಪ್ರತಿಯೊಂದು ಹಾಡು ಮುಗಿದ ಕೂಡಲೇ ಒಬ್ಬರು 'ಜಯಾ ಜಯ ನಮಃ ಪಾರ್ವತೀ ಪತೇ' ಎಂದು ಹೇಳಿದರೆ ಉಳಿದವರು 'ಹರಹರ ಮಹಾದೇವ' ಎಂದು ಒಪ್ಪಿಗೆ

ಹೇಳುತ್ತಾರೆ. ಭಜನೆಯ ಮೇಳದ ಕೊನೆಯಲ್ಲಿ ಮಂಗಳಾರತಿಯ ಪದವನ್ನು ಹಾಡಿ ಮಂಗಳಾರತಿ ಬೆಳಗುವುದರ ಮೂಲಕ ಮುಕ್ತಾಯಗೊಳಿಸುತ್ತಾರೆ.

ವಿರೂಪಾಕ್ಷನ ಜಾತ್ರೆ ಮತ್ತು ಫಲಪೂಜೆಗೆ ಬೇರೆ ಬೇರೆ ಪ್ರದೇಶಗಳಿಂದ ನೂರಾರು ಭಜನೆ ಮೇಳಗಳು ಆಗಮಿಸುತ್ತವೆ. ಇವರು ಜಾತ್ರೆಯ ಮುಖ್ಯ ಭಾಗವನ್ನು ಆಕ್ರಮಿಸಿ ಕೊಳ್ಳುತ್ತಾರೆ.

**೫.೧೯. ಬುರ್ರ ಕತೆಗಾರರು**

ಹಂಪಿಯಲ್ಲಿರುವ ತೇರುಬೀದಿಯ ಇಕ್ಕೆಲಗಳಲ್ಲಿ ವಾಸ ಮಾಡುತ್ತಿರುವ ಜನರಲ್ಲಿ ಕೆಲವು ಬುರ್ರ ಕತೆಗಳನ್ನು ನಿರೂಪಿಸುತ್ತಾರೆ. ಗಂಡ ಮತ್ತು ಹೆಂಡತಿಯರಿದ್ದರೆ, ಅದರಲ್ಲಿ ಹೆಂಡತಿ ಮದ್ದಳೆಯಂಥ ಒಂದು ವಾದ್ಯವನ್ನು ಬಾರಿಸುತ್ತಾಳೆ. ಗಂಡ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತ ಹಾಡುತ್ತಾನೆ. ಆತನ ಹಾಡು ನಿಂತಲ್ಲಿಂದ ಆಕೆ ಮುಂದು ವರಿಸುತ್ತಾಳೆ. ಹೀಗೆ ಇಬ್ಬರು ಪರಸ್ಪರ ಸೇರಿಕೊಂಡು ಇಡೀ ರಾತ್ರಿ ಹಾಡಿನ ರೂಪದ ಕತೆ ಹೇಳುತ್ತಾರೆ. ಈ ಕತೆಗಳು ಬಹುಮಟ್ಟಿಗೆ ತೆಲುಗು ಭಾಷೆಯಲ್ಲಿರುತ್ತವೆ. ಕಂಪ್ಲಿಯ ಕುಮಾರರಾಮನಿಗೆ ಸಂಬಂಧಿಸಿದ ಅನೇಕ ಕತೆಗಳನ್ನು ಇವರು ನಿರೂಪಿಸುತ್ತಾರೆ. ಕನ್ನಡದಲ್ಲಿ 'ಬಾಲನಾಗಮ್ಮ' ಕತೆಯನ್ನು ಇವರು ಆಕರ್ಷವಾಗಿ ಹೇಳುತ್ತಾರೆ.

**೫.೨೦. ಬ್ಯಾಟಿ ಮರದ ಆಚರಣೆ**

ಬೇಡರು ಕಾಳಮ್ಮನ ಹಬ್ಬ ಮಾಡುತ್ತಾರೆ. ಈ ಹಬ್ಬದ ಸಂದರ್ಭದಲ್ಲಿ ಕಾಳಮ್ಮನ ಗುಡಿಯ ಮುಂದೆ ಚಪ್ಪರ ಹಾಕಿ ಮರದ ಕೊಂಬೆಗಳನ್ನು ನೆಡುತ್ತಾರೆ. ಜೊತೆಗೆ ಬೇವು, ಆಲ, ಅತ್ತಿ, ಮಾವು, ನೀರಗನ್ನೆ, ಬಸರಿ ಮತ್ತು ಗೋಣಿ ಮರದ ಕೊಂಬೆಗಳನ್ನು ಕಡಿದು ಮೆರವಣಿಗೆ ಮಾಡುತ್ತಾರೆ ಮತ್ತು ಅದಕ್ಕೆ ಪೂಜೆ ಮಾಡುತ್ತಾರೆ. ಇದನ್ನು ಬ್ಯಾಟಿ ಮರದ ಆಚರಣೆ ಎಂದು ಕರೆಯುತ್ತಾರೆ. ಹಂಪಿ ಪರಿಸರದ ಬಹಳ ಜನಪ್ರಿಯವಾದ ಹಬ್ಬವಿದು.

**೫.೨೧. ರಿವಾಯತ್ ಪದಗಳು**

ಇವನ್ನು ಕರ್ಬಲಾ ಹಾಡುಗಳೆಂದು ಕರೆಯುತ್ತಾರೆ. ಹಂಪಿ ಜಾತ್ರೆಯಲ್ಲಿ ರಿವಾಯತ್ ಪದಗಳನ್ನು ಹಾಡುವ ಕಲಾವಿದರೂ ಕಾಣಸಿಗುತ್ತಾರೆ. ಇವರು ಪೈಗಂಬರರ ಪದಗಳನ್ನು ಹಾಡುವುದರ ಜೊತೆಗೆ ಶರಣರ ಪದ, ತತ್ತ್ವಪದಕಾರರ ಹಾಡು ಮತ್ತು ರಾಮಾಯಣ, ಮಹಾಭಾರತ ಪ್ರಸಂಗಗಳ ಪದಗಳನ್ನು ಹಾಡುತ್ತಾರೆ.

**೫.೨೨. ಸಾರುವಯ್ಯಗಳು**

ಉದ್ದನೆಯ ನಿಲುವಂಗಿ, ತಲೆಗೆ ಕೆಂಪು ಇಲ್ಲವೇ ಕಾವಿ ರುಮಾಲು, ಕೈಯಲ್ಲಿ ಕಂದೀಲು ಹಣೆಗೆ ವಿಭೂತಿ ಮತ್ತು ಕೊರಳಿಗೆ ರುದ್ರಾಕ್ಷಿ ಹಾಕಿರುವ 'ಸಾರುವಯ್ಯ'ಗಳು ಹಂಪಿ ಜಾತ್ರೆಯಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಇವರು ಜಾತ್ರೆಗೆ ಬಂದ ಜನರಿಗೆ ಭವಿಷ್ಯ ಹೇಳುತ್ತಾರೆ.

**೫.೨೩. ಮೋಡಿಯಾಟ**

ಆನೆಗೊಂದಿ ಪರಿಸರದಲ್ಲಿ ಮೋಡಿಯಾಟ ಜನಪ್ರಿಯವಾಗಿದೆ. ಈ ಮೋಡಿಯಾಟವಾಡುವ ಜನರು ತಾವು ಬಹಳ ಹಿಂದಿನಿಂದಲೂ, ಅಂದರೆ ರಾಜಮಹಾರಾಜರ ಕಾಲದಿಂದಲೂ ಈ ಆಟವನ್ನು ಆಡುತ್ತಾ ಬರುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ.

ಮೋಡಿಯಾಟವನ್ನು ಅಂಜನವಿದ್ಯೆ, ಯಕ್ಷಿಣಿವಿದ್ಯೆ, ಹಸಿರುವಿದ್ಯೆ, ಇಂದ್ರಜಾಲ, ಕಣ್ಕಟ್ಟು ವಿದ್ಯೆ, ಗಾರುಡಿ ವಿದ್ಯೆ, ಗಾರುಡಿಗರಾಟ, ಮೋಡಿಕಾರರ ಆಟ ಇತ್ಯಾದಿ ಹೆಸರುಗಳಿಂದ ಜನರು ಕರೆಯುತ್ತಾರೆ. ವಿಜಯನಗರದ ಅರಸರು ತಮ್ಮ ಮನರಂಜನೆಗಾಗಿ ಮೋಡಿಕಾರರನ್ನು ಇರಿಸಿಕೊಂಡಿದ್ದರೆಂದು ಹೇಳಲಾಗುತ್ತಿದೆ. ವಿರೋಧಿ ಅರಸನನ್ನು ಮೋಡಿಯ ಕಣಕ್ಕೆ ಆಹ್ವಾನಿಸಿ ಸೋಲಿಸುವುದು ಒಂದು ಪ್ರತಿಷ್ಠೆಯ ವಿಷಯವೇ ಆಗಿತ್ತಂತೆ. ತಮ್ಮ ಸಂಸ್ಥಾನದ ಕೆಲವು ಪ್ರದೇಶಗಳನ್ನು ಅರಸರು ಮೋಡಿ ಆಟಕ್ಕೆ ಪಣವಾಗಿ ಕಾಯ್ದಿರಿಸಿಕೊಳ್ಳುತ್ತಿದ್ದರು ಎಂದೂ ಹೇಳಲಾಗುತ್ತಿದೆ.

ವಿಜಯನಗರದಲ್ಲಿ ಪ್ರಖ್ಯಾತವಾಗಿದ್ದ ಮಹಾನವಮಿ ಹಬ್ಬದ ಸಂದರ್ಭದಲ್ಲಿ ಮೋಡಿಕಾರರು ಮೋಡಿಯಾಟ ಆಡುತ್ತಿದ್ದರೆಂಬ ನಂಬಿಕೆ ಹಂಪಿ ಪರಿಸರದಲ್ಲಿ ಜನಪ್ರಿಯವಾಗಿದೆ.

ಗೊಲ್ಲರಲ್ಲಿ ಮತ್ತು ಬೇಡರಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮೋಡಿಕಾರರಿದ್ದಾರೆ. ಗೊಲ್ಲರಲ್ಲಿ ಮೋಡಿಯ ಬಗೆಗೆ ಹಲವು ಕತೆಗಳಿವೆ. ಒಂದು ಕತೆಯ ಪ್ರಕಾರ ಮೋಡಿಕಾರರ ಗುರು ತಿರುಪತಿ ಬಳಿಯಿರುವ ಪೆದ್ದಟ್ಟಿಯವನಂತೆ. ಗುರು ಗೊಲ್ಲ ಜಾತಿಯವನಾದ್ದರಿಂದ ಅವನ ವಂಶದವರಿಗೆ ಪೆದ್ದಟ್ಟಿ ಗೊಲ್ಲರೆಂದು ಹೆಸರು ಬಂದಿತು ಎನ್ನುತ್ತಾರೆ. ಹಿಂದೆ ಈ ಪೆದ್ದಟ್ಟಿ ಗೊಲ್ಲರಿಗೆ ದೊಡ್ಡ ರಾಜ್ಯವಿತ್ತಂತೆ. ಆ ರಾಜ್ಯವನ್ನಾಳುತ್ತಿದ್ದ ರಾಜನಿಗೆ ಇಬ್ಬರು ಹೆಂಡತಿಯರು, ಹಿರಿಯವಳಿಗೆ ಒಬ್ಬ ಮಗ, ಕಿರಿಯವಳಿಗೆ ಏಳು ಜನ ಮಕ್ಕಳಾದರು. ಕಿರಿಯ ಹೆಂಡತಿಯ ಮಕ್ಕಳಿಗೆ ಹಿರಿಯ ಹೆಂಡತಿ ಮಗನನ್ನು ಕಂಡರೆ ಆಗುತ್ತಿರಲಿಲ್ಲವಂತೆ. ರಾಜ್ಯ ಅವನಿಗೆ ದೊರೆಯುತ್ತದೆ ಎಂದು ತಿಳಿದು ಹೇಗಾದರೂ ಮಾಡಿ, ಅವನನ್ನು ಸಾಯಿಸಬೇಕೆಂದು ನಿರ್ಧರಿಸುತ್ತಾರೆ. ಅದಕ್ಕಾಗಿ ಅನೇಕ ರೀತಿಯಲ್ಲಿ ತೊಂದರೆ ಕೊಟ್ಟು ಕೊನೆಗೆ ಅವನನ್ನು ಒಂದು ಆಳದ ಬಾವಿಗೆ ನೂಕುತ್ತಾರೆ. ಹಿರಿಯ ಹೆಂಡತಿಯ ಮಗ ದೇವರನ್ನು ಕೂಗಿ ಕರೆದನಂತೆ. ಆಗ ದೇವರು ಪ್ರತ್ಯಕ್ಷನಾಗಿ ಹುಡುಗನ ಬಾಯಿ ತೆರೆಸಿ ಅವನ ನಾಲಿಗೆ ಮೇಲೆ ಮಂತ್ರಜಾಲದ ಬೀಝಾಕ್ಷರ ಬರೆದು ಆಶೀರ್ವದಿಸಿದನಂತೆ. ಆ ನಂತರ ಆ ಹುಡುಗ ರಾಜ್ಯಕ್ಕೆ ಹೋಗಿ ತಾನು ಗಳಿಸಿಕೊಂಡ ಶಕ್ತಿಯಿಂದ ಏಳು ಜನ ಸಹೋರರರನ್ನು ಸೋಲಿಸಿ, ತಾನೇ ರಾಜನಾದನಂತೆ. ರಾಜನಾದ ಮೇಲೆ ತನ್ನಲ್ಲಿ ಇದ್ದ ಆ ವಿದ್ಯೆಯನ್ನು ಕೆಲವರಿಗೆ ಧಾರೆ ಎರೆದ ಎಂದೂ, ಮುಂದೇ ಇವರೇ ಮೋಡಿಕಾರರಾದರೆಂದು ಹೇಳಲಾಗುತ್ತದೆ.

ಮತ್ತೊಂದು ಕಥೆಯ ಪ್ರಕಾರ, ಹಿಂದೆ ಗೊಲ್ಲರಲ್ಲಿ ಒಂಬತ್ತು ಪಣದವರು ಮತ್ತು ಹದಿನೆಂಟು ಪಣದವರೆಂದು ಎರಡು ಪಂಗಡಗಳಿದ್ದವು. ತಮ್ಮ ತಮ್ಮ ಪಂಗಡದವರ ಹೆಚ್ಚುಗಾರಿಕೆಯ ಬಗ್ಗೆ ಒಮ್ಮೆ ಜಗಳವಾಡಿ ಹದಿನೆಂಟು ಪಣದವರು ಒಂಬತ್ತು ಪಣದವರನ್ನು ಹೊಡೆದು ಬಡಿದು ಮತ್ತೆ ತಲೆ ಎತ್ತದಂತೆ ಮಾಡುತ್ತಾರೆ. ಆ ಒಂಬತ್ತು ಪಣದವರಲ್ಲಿ ಒಬ್ಬ ಹುಡುಗ ಮಾಟ ಮಂತ್ರ ಬಲ್ಲ ಆಚಾರಿಯ ಬಳಿ ಸೇವೆಗಾಗಿ ಸೇರಿ ಅವನ ಸೇವೆ ಮಾಡುತ್ತಾ ಜೀವನ ಸಾಗಿಸುತ್ತಿದ್ದ. ಒಂದು ದಿನ ಆತ ದನ ಮೇಯಿಸಲು ಕಾಡಿಗೆ ಹೋಗಿದ್ದಾಗ ಹುಲಿಯೊಂದು ಹುಡುಗನಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಅಲ್ಲಿಯೇ ಇದ್ದ 'ಹಾಲು ಚಿಲುಮೆ' ಹಾಗೂ 'ನೀರುಚಿಲುಮೆ'ಯನ್ನು ಬತುತುವಂತೆ ಮಾಡಲು ನಿರ್ಧರಿಸಿತು. ಪ್ರತಿದಿನ ಹುಡುಗ ಹಾಲು ಚಿಲುಮೆಯಲ್ಲಿ ನೀರು ಕುಡಿದರೆ ದನಗಳು ನೀರು ಚಿಲುಮೆಯಲ್ಲಿ ನೀರು ಕುಡಿದು ಬಾಯಾರಿಕೆಯನ್ನು ಹಿಂಗಿಸಿಕೊಳ್ಳುತ್ತಿದ್ದವು. ಆ ದಿನ ಹುಡುಗ ಕಾಣದ ಹಾಗೆ ಹುಲಿಯು ಎರಡು ಬೇರೆ ಬೇರೆ ಜಾತಿಯ ಸೊಪ್ಪನ್ನು ತಂದು ಎರಡು ಚಿಲುಮೆಗಳಿಗೆ ಒಂದೊಂದು ಸೊಪ್ಪಿನ ರಸವನ್ನು ಪ್ರತ್ಯೇಕವಾಗಿ ಹಿಂಡಿದಾಗ ಚಿಲುಮೆಗಳು ಬತ್ತಿ ಹೋಗುತ್ತವೆ. ಆ ನಂತರ ಹುಲಿ ಎಡಗಡೆಗೆ ಒಂದು ಸೊಪ್ಪಿನ ರಾಶಿಯನ್ನು, ಬಲಗಡೆಗೆ ಮತ್ತೊಂದು ಸೊಪ್ಪಿನ ರಾಶಿಯನ್ನು, ಮಾಡಿ ಹೊರಟು ಹೋಗುತ್ತದೆ. ಗೊಲ್ಲರ ಹುಡುಗ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ಬೆಟ್ಟದಿಂದ ಇಳಿದು ಬಂದು ಚಿಲುಮೆಯಲ್ಲಿ ನೋಡಿದಾಗ ಅಲ್ಲಿ ನೀರಿರಲಿಲ್ಲ. ಅವನಿಗೆ ಚಿಂತೆಯಾಯಿತು. ಮುಂದೆ ಸುಮ್ಮನೆ ಕುಳಿತರಲಾರದೆ ಬಲಗಡೆಯಿದ್ದ ಸೊಪ್ಪನ್ನು ತೆಗೆದು ಚಿಲುಮೆಗೆ ಹಾಕುತ್ತಾನೆ. ಆಗ ಮೊದಲಿನಂತೆ ನೀರು ತುಂಬಿಕೊಳ್ಳುತ್ತದೆ. ಹಾಗೆಯೇ ಎಡಗಡೆ ಇದ್ದ ಸೊಪ್ಪನ್ನು ಹಾಕಿದಾಗ ಮತ್ತೆ ನೀರು ಬತ್ತಿ ಹೋಗುತ್ತದೆ. ಈ ವಿಷಯವನ್ನು ತನ್ನ ಒಡೆಯನಿಗೆ ತಿಳಿಸುತ್ತಾನೆ. ಆಗ ಆ ಆಚಾರಿ ಇವನಿಗೆ ದೇವರು ಬಂದಿದ್ದಾನೆ. ಅದೃಷ್ಟದ ಬಾಗಿಲು ತಾನಾಗಿಯೇ ತೆರೆದಿದೆ ಎಂದು ಭಾವಿಸಿ ತನಗೆ ಗೊತ್ತಿದ್ದ ಎಲ್ಲಾ ವಿದ್ಯೆಗಳನ್ನೂ ಹೇಳಿಕೊಟ್ಟು, ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಅವನಿಗೇ ಮದುವೆ ಮಾಡಿಕೊಟ್ಟು ಕಳುಹಿಸುತ್ತಾನೆ.

ಹುಡುಗ ನೆಮ್ಮದಿಯಿಂದ ಜೀವನ ನಡೆಸುತ್ತಾನೆ. ಹಿರಿಯ ಹೆಂಡತಿಗೆ ಮಕ್ಕಳಾಗದೆ ಕಿರಿಯವಳಿಗೆ ಆರು ಜನ ಮಕ್ಕಳಾಗಿ, ಮತ್ತೆ ಗರ್ಭಿಣಿಯಾಗುತ್ತಾಳೆ. ಈ ನಡುವೆ ಹದಿನೆಂಟು ಪಣದವರ ಪ್ರಾಬಲ್ಯ ಹೆಚ್ಚಾಗಿ ಒಂಬತ್ತು ಪಣದವರ ಆರಾಧ್ಯ ದೈವವಾದ ಕೃಷ್ಣದೇವರನ್ನು ರಥದ ಸಮೇತ ಪಾತಾಳಕ್ಕೆ ತಳ್ಳಿ ಬಿಡುತ್ತಾರೆ. ಆಗ ಗೊಲ್ಲರ ರಾಜ ಯಯಾತಿ ಕೋಟೆ ಬಾಗಿಲು ಹಾಕಿಸಿ ಎರಡೂ ಪಣದವರಲ್ಲಿ ಇದ್ದ ಒಳಜಗಳವನ್ನು ಬಗೆ ಹರಿಸುತ್ತಾನೆ. ಅವರಲ್ಲಿ ಯಾರು ಹೆಚ್ಚು ಎಂಬುದನ್ನು ತೋರಿಸಿಕೊಟ್ಟು 'ಕೃಷ್ಣದೇವರ ರಥವನ್ನು ಮೇಲಕ್ಕೆ ಎತ್ತಿದವರಿಗೆ ಕೇಳಿದ್ದನ್ನು ಕೊಡುತ್ತೇನೆ' ಎಂದು ದಿಕ್ಕು ದಿಕ್ಕಿಗೂ ಡಂಗೂರ ಹೊಡೆಸುತ್ತಾನೆ.

ಉತ್ತರ ದಿಕ್ಕಿನಲ್ಲಿದ್ದ ಆಚಾರಿ ಅಳಿಯನಿಗೆ ಈ ವಿಷಯ ತಿಳಿದು ಹೇಗಾದರೂ ಮಾಡಿ ಪರಿಹಾರವನ್ನು ಕಂಡುಹಿಡಿಯಲು ಬೇಕೆಂದು ನಿರ್ಧರಿಸಿ ಹೆಂಡತಿ ಮಕ್ಕಳ ಸಮೇತ ಹುಲಿಯ ಮೇಲೆ ಕುಳಿತು, ನಗಾರಿಯನ್ನು ಬಡಿಯುತ್ತಾ ರಾಜಧಾನಿಗೆ ಬಂದು, ರಾಜನನ್ನು ಕಂಡು, ಸಮಸ್ಯೆಯನ್ನು ಬಗೆಹರಿಸುವುದಾಗಿ ಹೇಳಿ ಕೃಷ್ಣನನ್ನು ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಅದಕ್ಕೆ ಕೃಷ್ಣದೇವರು 'ಗರ್ಭಿಣಿ ಹೆಂಗಸನ್ನು ಬಲಿ ಕೊಟ್ಟರೆ ನಾನು ಮೇಲಕ್ಕೆ ಬರುತ್ತೇನೆ' ಎಂದು ಹೇಳುತ್ತಾನೆ. ಗೊಲ್ಲರ ಹುಡುಗ ಎರಡು ಹರಿತವಾದ ಚಿನ್ನದ ಕತ್ತಿಗಳನ್ನು ಮಾಡಿಸಿ ಬಾಯಲ್ಲಿಟ್ಟುಕೊಂಡು ತಪಸ್ಸು ಮಾಡುತ್ತಾನೆ. ಈತನ ಸಾಧನೆಗೆ ಕಾಳಿ ಮತ್ತು ಬೇತಾಳ ಒಲಿಯುತ್ತಾರೆ. ಆಗ ಹದಿನೆಂಟು ಪಣದವರಿಗೆ ರೋಗ ರುಜಿನ ಬಂದು ನೂರಾರು ಜನ ಸಾಯುತ್ತಾರೆ. ಹುಡುಗ ರಾಜನ ಬಳಿ ಹೋಗಿ ಗರ್ಭಿಣಿ ಹೆಂಗಸನ್ನು ಬಲಿಕೊಡಬೇಕೆಂದು ಹೇಳಿದಾಗ ರಾಜ ಒಪ್ಪುವುದಿಲ್ಲ. ಆಗ ಗರ್ಭಿಣಿಯಾಗಿದ್ದ ತನ್ನ ಕಿರಿಯ ಹೆಂಡತಿಯನ್ನೆ ಪೂಜೆ ಮಾಡುವಂತೆ ಹೇಳಿ ಪೂಜೆ ಮಾಡುವ ಕಾಲಕ್ಕೆ ಆಕೆಯನ್ನೇ ಬಲಿ ಕೊಡುತ್ತಾನೆ. ಅನಂತರ ಮೂರು ಮಕ್ಕಳ ಕೊರಳ ಕೊಯ್ದು ಒಂದು ಕೊಡದ ತುಂಬ ರಕ್ತ ಹಿಡಿದು, ನೂರು ಚಿಪ್ಪುಗಳನ್ನು ತಂದು ಹೆಂಡತಿ ಉಟ್ಟಿದ್ದ ಸೀರೆ ಹರಿದು, ಬತ್ತಿ ಮಾಡಿ, ರಕ್ತ ಹಾಕಿ ದೀಪ ಹಚ್ಚಿ ಹೆಂಡತಿ ಹೊಟ್ಟೆಯನ್ನು ಬಗೆಯುತ್ತಾನೆ. ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಎರಡು ಪಿಂಡಗಳನ್ನು ತೆಗೆದು ಕಾಳಿದೇವಿಯ ಕೈಯಲ್ಲಿರುವ ಎರಡು ಕತ್ತಿಯ ತುದಿಗೆ ಅವನ್ನು ನಿಂಬೆ ಹಣ್ಣಿನಂತೆ ಚುಚ್ಚುತ್ತಾನೆ. ಕರುಳನ್ನು ತೆಗೆದು ಮಾಲೆ ಹಾಕಿಕೊಂಡು ಹಿರಿ ಹೆಂಡತಿಯನ್ನು ಪಾತಾಳಕ್ಕೆ ಕರೆದುಕೊಂಡು ಹೋಗಿ ಅವಳ ಮೂಗಿಗೆ ದಾರದ ಒಂದು ತುದಿಯನ್ನು ಕಟ್ಟಿ ಅದನ್ನು ಕೃಷ್ಣದೇವರ ರಥಕ್ಕೆ ಕಟ್ಟಿ ಪಾತಾಳದಿಂದ ರಥವನ್ನು ಎಳೆದು ತರುತ್ತಾನೆ. ರಾಜ ಸಂತೋಷದಿಂದ ಮೊದಲು ಮಾತು ಕೊಟ್ಟಂತೆ ಏನು ಬೇಕಾದರೂ ಕೇಳು ಕೊಡುತ್ತೇನೆ ಎಂದು ಹೇಳುತ್ತಾನೆ. ಆ ವೇಳೆಗೆ ಹದಿನೆಂಟು ಪಣದವರ ಸಂಖ್ಯೆ ಒಂಬತ್ತು ಪಣದವರಿಗಿಂತ ಕಡಿಮೆಯಾಗಿರುತ್ತದೆ. ಗೊಲ್ಲರ ಹುಡುಗ ಬೇರೇನನ್ನು ಕೇಳುವುದಿಲ್ಲ. ಆದರೆ 'ಉಪ್ಪು ಸಪ್ಪಗಾಗುವವರೆಗೆ, ಸೂರ್ಯ ಚಂದ್ರರಿರುವವರೆಗೆ ನಾನು ದೇಶದ ಮೇಲೆ ಮೋಡಿ ವಿದ್ಯೆ ಪ್ರದರ್ಶಿಸಿಕೊಂಡಿರುತ್ತೇನೆ. ಅದಕ್ಕಾಗಿ ನನಗೊಂದು 'ಜಯರೇಖೆ'ಯನ್ನು ಬರೆಸಿಕೊಡಿ ಸ್ವಾಮಿ ಎಂದು' ಕೇಳುತ್ತಾನೆ. ಅದರಂತೆ ರಾಜರು ಅವನು ಬಯಸಿದ 'ಜಯರೇಖೆ'ಯನ್ನು ಕೊಡುತ್ತಾರೆ. ಈ 'ಜಯರೇಖೆ' ಈಗಲೂ ಗೊಲ್ಲರ ಮೋಡಿಕಾರಲ್ಲಿ ಇದೆಯಂತೆ.

ಮೋಡಿಯಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ 'ರಾಜಮೋಡಿ' ಮತ್ತು 'ರಣಮೋಡಿ'. 'ರಾಜಮೋಡಿ' ಕೇವಲ ಮನರಂಜನೆಗಾಗಿ ಮೀಸಲಾದರೆ 'ರಣಮೋಡಿ' ಮನರಂಜನೆಯ ಜೊತೆಗೆ ಎದುರಾಳಿಯನ್ನು ಗೆಲ್ಲುವ ಸ್ಪರ್ಧೆಯಾಗಿರುತ್ತದೆ. ಹಂಪಿಯ ಆಸುಪಾಸಿನ ಕೆಲವು ಸ್ಥಳಗಳಲ್ಲಿ ಈಗಲೂ ವರ್ಷಕ್ಕೊಮ್ಮೆ ರಾಜಮೋಡಿ, ರಣಮೋಡಿಗಳು ನಡೆಯುತ್ತವೆ.

ಮೋಡಿಕಾರರಲ್ಲಿ ಪ್ರಾದೇಶಿಕ ಹಂಚಿಕೆ ಇದೆ. ಒಂದು ಗೊತ್ತಾದ ಪ್ರದೇಶದಲ್ಲಿ ಬೇರೊಬ್ಬ ಮೋಡಿಕಾರ ಬಂದು ತನ್ನ ಪ್ರದರ್ಶನ ನೀಡಬೇಕಾದರೆ ಮೊದಲು ಆ ಪ್ರದೇಶದ ಮೋಡಿಕಾರರ ಅಪ್ಪಣೆಯನ್ನು ಪಡೆಯಬೇಕಾಗುತ್ತದೆ. ಅಪ್ಪಣೆ ಪಡೆಯದೆ ತಾವು ಪ್ರದರ್ಶನ ನೀಡುವುದಾಗಿ ಸ್ಪರ್ಧೆ ಒಡ್ಡಿದರೆ, ಇಬ್ಬರ ನಡುವೆಯೂ ಸ್ಪರ್ಧೆ ನಡೆದು ಸೋತವರು ಗೆದ್ದವರಿಗೆ ತಮ್ಮ ಜೀವನದ ಕೊನೆತನಕ ಸ್ಪರ್ಧೆಗೆ ನಿಲ್ಲದಂತೆ ಶರಣಾಗಬೇಕಾಗುತ್ತದೆ. ಇಂತಹ ಹಲವಾರು ಘಟನೆಗಳು ಆನೆಗೊಂದಿಯಲ್ಲಿ ನಡೆದಿರುವುದರ ಬಗ್ಗೆ ಗೊಲ್ಲರು ಮಾಹಿತಿ ನೀಡುತ್ತಾರೆ.

ರಾಯಚೂರು ಜಿಲ್ಲೆಯ ಕೊಪ್ಪಳ, ಗಂಗಾವತಿ, ಧಾರವಾಡ ಜಿಲ್ಲೆಯ ಗದಗ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮೊದಲಾದ ಸ್ಥಳಗಳಿಂದ ಈ ಪ್ರದೇಶಕ್ಕೆ ಹಲವಾರು ಮೋಡಿಕಾರರು ಸುಗ್ಗಿ ಕಾಲಕ್ಕೆ ಬಂದು ಪ್ರದರ್ಶನ ನೀಡುತ್ತಾರೆ. ಜನರು ಇವರುಗಳನ್ನು ಊರಿನ ಒಳಗೆ ಸೇರಿಸುವುದಿಲ್ಲ. ಇವರು ರಾತ್ರಿಯ ಕಾಲಕ್ಕೆ ಊರಿನ ಹೊರಗೆ ತಂಗುತ್ತಾರೆ.

ಮೋಡಿಕಾರರು ಸಾಮಾನ್ಯವಾಗಿ ತಲೆಗೆ ಕೆಂಪು ವಸ್ತ್ರದ ಪೇಟ ಸುತ್ತಿರುತ್ತಾರೆ. ಅರ್ಧತೋಳಿನ ಅಂಗಿ, ಮೇಲೊಂದು ವಾಸ್ ಕೋಟು, ಕೆಂಪು ವಸ್ತ್ರದ ನಡುಕಟ್ಟು ಕಟ್ಟಿರುತ್ತಾರೆ. ಕಾಲಿಎ 'ಪ್ಯಾಂಡೆ'ಯನ್ನು ಹಾಕಿರುತ್ತಾರೆ. ಇದನ್ನು 'ಪೆಂಡೆ' ಎಂದೂ ಕರೆಯುವುದುಂಟು. ಇದು ಬಳಕೆಯಾಕಾರವಾಗಿದ್ದು ಟೊಳ್ಳಾಗಿ ಇರುತ್ತದೆ. ಇದನ್ನು ತಾಮ್ರ ಮತ್ತು ಹಿತ್ತಾಳೆಯ ಮಿಶ್ರಣದಿಂದ ಮಾಡಿರುತ್ತಾರೆ. ಇದನ್ನು 'ವೈರಿಗಗ್ಗರ' ಎಂದೂ ಸಹ ಕರೆಯುತ್ತಾರೆ. ಇದನ್ನು ಕಾಲಿಗೆ ಧರಿಸಿ ಯಾವುದಾದರೂ ಗ್ರಾಮಕ್ಕೆ ಹೋದಾಗ ಆ ಗ್ರಾಮದಲ್ಲಿ ಮೋಡಿ ಬಲ್ಲವರಿದ್ದರೆ, ಪ್ರತಿಸ್ಪರ್ಧಿ ಬಂದನೆಂಬ 'ಕುರುಹು' ತಿಳಿಯುತ್ತದೆ. ಆ ಊರಿನಲ್ಲಿ ಮತ್ತೊಬ್ಬ ಮೋಡಿಕಾರನಿದ್ದರೆ, ಗಗ್ಗರದ ಕಾಲಿನ ಆ ವ್ಯಕ್ತಿಯನ್ನು ಕಂಡು ಅವನ ಗಗ್ಗರವನ್ನು ಕಾಲಿನಿಂದ ಒದೆಯುತ್ತಾನೆ. ಇದು ವೈರಿಯನ್ನು ಸ್ಪರ್ಧೆಗೆ ಆಹ್ವಾನಿಸುವ ರೀತಿಯಾಗಿರುತ್ತದೆ.

ಈಗ ಒಂದು ಊರಿನಲ್ಲಿ ಮೋಡಿ ಪ್ರದರ್ಶನ ನಡೆಸಬೇಕೆಂದರೆ ಸ್ಪರ್ಧಿ ಮತ್ತು ಪ್ರತಿಸ್ಪರ್ಧಿಗಳಿಬ್ಬರು ಆ ಊರಿನ ಮುಖ್ಯಸ್ಥರಲ್ಲಿ ಹೋಗಿ 'ಊರಿನಲ್ಲಿ ಯಾವುದೇ ಗಲಭೆ ಗೊಂದಲವಿಲ್ಲದಂತೆ ಅಣ್ಣ ತಮ್ಮರಂತೆ ತಾವು ಕಲಿತ ವಿದ್ಯೆಯನ್ನು ಪ್ರದರ್ಶಿಸುತ್ತೇವೆ. ಅಪ್ಪಣೆ ಕೊಡಿ' ಎಂದು ಕೇಳಿಕೊಳ್ಳುತ್ತಾರೆ. ಮುಖಂಡರು ಒಪ್ಪಿಗೆ ನೀಡಿದ ಆ ನಂತರ ತಮ್ಮ ಪ್ರದರ್ಶನವನ್ನು ಪ್ರಾರಂಭಿಸುತ್ತಾರೆ.

**ರಾಜಮೋಡಿ**

ಹಂಪಿ ಜಾತ್ರೆ, ಫಲಪೂಜೆಗಳಲ್ಲಿ ರಾಜಮೋಡಿ ಹಾಕುವ ಜನರಿರುತ್ತಾರೆ. ಜನರಿಗೆ ಮನರಂಜನೆ ನೀಡುವುದೇ ಇವರ ಪ್ರಧಾನ ಉದ್ದೇಶ. ಈ ಆಟಕ್ಕೂ ಎರಡು ಪಕ್ಷಗಳು ಬೇಕು. ಒಂದು ಪಕ್ಷದವರು ಮೋಡಿ ಕಟ್ಟುತ್ತಾರೆ. ಇನ್ನೊಂದು ಪಕ್ಷದವರು ಮೋಡಿ ತೆಗೆಯುತ್ತಾರೆ. ಮೋಡಿ ಕಟ್ಟುವವರು ಮೊದಲು ಏಳು ಅಂಕಣದ ಮನೆ ಬರೆಯುತ್ತಾರೆ. ಇದರಲ್ಲಿ ಮೊದಲನೆಯ ಅಂಕಣದಲ್ಲಿ ನಿಂಬೆಹಣ್ಣು, ಎರಡನೆ ಅಂಕಣದಲ್ಲಿ ಕೋಳಿ ಮೊಟ್ಟೆ, ಮೂರನೇ ಅಂಕಣದಲ್ಲಿ ಮಡಕೆಯಲ್ಲಿ ತುಂಬಿಸಿಟ್ಟ ಕಳ್ಳಿ, ನಾಲ್ಕನೇ ಅಂಕಣದಲ್ಲಿ ಕುಂಬಳಕಾಯಿ, ಐದನೇ ಅಂಕಣದಲ್ಲಿ ಚಪ್ಪಲಿ, ಆರನೇ ಅಂಕಣದಲ್ಲಿ ಮಂತ್ರದಂಡ, ಏಳನೇ ಅಂಕಣದಲ್ಲಿ ನೂರು ರೂಪಾಯಿ ನೋಟ ಇಟ್ಟಿರುತ್ತಾರೆ. ಏಳನೇ ಅಂಕಣದ ಹೊರಬದಿಯಲ್ಲಿ ಬಾಯಿಯಲ್ಲಿ ಚಕ್ರವನ್ನು ಎತ್ತಿಹಿಡಿದ ಚೌಡಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಇದರ ರಚನೆ ಈ ಕೆಳಗಿನಂತಿದೆ.

| ೭ | ೬ | ೫ | ೪ | ೩ | ೨ | ೧ |
|---|---|---|---|---|---|---|
| ರೂ.೧೦೦/- ನೋಟು | ದಂಡ | ಚಪ್ಪಲಿ | ಕುಂಬಳ ಕಾಯಿ | ಮಡಿಕೆ ಮತ್ತು ಕಳ್ಳಿ | ಮೊಟ್ಟೆ | ನಿಂಬೆ |

ಈ ಅಂಕಣಗಳನ್ನು ಕಟ್ಟಿದವರು, ಅಂಕಣದಲ್ಲಿ ಇರಿಸಲಾದ ವಸ್ತುಗಳನ್ನು ಮಂತ್ರದಿಂದ ದಿಗ್ಬಂಧಿಸಿರುತ್ತಾರೆ ಮತ್ತು ಎದುರಾಳಿಗೆ ಕ್ರಮವಾಗಿ ಒಂದರಿಂದ ಏಳರವರೆಗೆ ಇರಿಸಲಾದ ವಸ್ತುಗಳನ್ನು ತೆಗೆಯಲು ಸವಾಲು ಹಾಕುತ್ತಾರೆ. ಎದುರಾಳಿಯು ವೀರಾವೇಶದಿಂದ ಒಂದೊಂದೇ ವಸ್ತುಗಳನ್ನು ತೆಗೆಯಲು ಮುಂದೆ ಬರುತ್ತಾನೆ. ಆದರೆ ವಸ್ತುಗಳನ್ನು ಮಂತ್ರದಲ್ಲಿ ದಿಗ್ಬಂಧಿಸಿರುವುದರಿಂದ ಅದನ್ನು ತೆಗೆಯಲು ಆತ ಶತ ಪ್ರಯತ್ನ ಮಾಡಬೇಕಾಗುತ್ತದೆ. ಉದಾಹರಣೆಗೆ ನಿಂಬೆ ಹಣ್ಣನ್ನು ತೆಗೆಯಲು ಅದರ ಹತ್ತಿರ ಬರುತ್ತಿರುವಂತೆ, ಆತನಿಗೆ ಅಲ್ಲಿ ಹಾವುಗಳು ಚೇಳುಗಳು ಕಾಣಬಹುದು. ಇಲ್ಲವೇ ನಿಂಬೆಯ ಹಣ್ಣೇ ದೊಡ್ಡ ಬಂಡೆಯಂತೆ ಅಲುಗಾಡದೆ ನಿಲ್ಲಬಹುದು. ಕೆಲವು ಬಾರಿ ನಿಂಬೆಹಣ್ಣನ್ನು ಮುಟ್ಟುತ್ತಿರುವಂತೆ, ಅವನ ಮೇಲೆ ಮಂತ್ರಿಸಿದ ಅಕ್ಕಿಕಾಳನ್ನು ಹಾಕಲಾಗುತ್ತದೆ. ಆ ಅಕ್ಕಿಕಾಳು ಅವನ ಮೈಗೆ ತಗುಲುತ್ತಲೇ ಅವನಿಗೆ ಮೈಯೆಲ್ಲಾ ಉರಿ ಹತ್ತುತ್ತದೆ. ಇಲ್ಲವೇ ತುರಿಕೆ ಹತ್ತುತ್ತದೆ. ಕೆಲವು ವೇಳೆ ಆತ ಅಲ್ಲಿಯೇ ಮೂರ್ಛೆ ಬೀಳುವುದು ಇದೆ. ಇಬ್ಬರು ತೆಗೆಯಲು ಬಂದರೆ ಇಬ್ಬರ ಮೈಗಳೂ ಅಂಟಿಕೊಂಡು ಬಿಡುತ್ತವೆ. ಹೆಂಗಸರು ಬಂದರೆ ಅವರ ಸೀರೆಗಳು ಗಾಳಿಯಲ್ಲಿ ಮೇಲಕ್ಕೇರುತ್ತವೆ. ಇಂಥ ಅನಾಹುತಗಳ ಮಧ್ಯೆ ಕೇವಲ ಒಂದು ನಿಂಬೆಹಣ್ಣನ್ನು ತೆಗೆಯಲು ಇದಿರಾಳಿಗಳು ಗಂಟೆಗಟ್ಲೆ ಕೆಲಸ ಮಾಡಬೇಕಾಗುತ್ತದೆ. ಇಡೀ

ರಾಜಮೋಡಿಯು ಮೂರು ದಿವಸ ಪರಿಯಂತ್ರ ನಡೆಯುತ್ತದೆ. ಕೊನೆಯ ದಿವಸದಲ್ಲಿ ಇದಿರಾಳಿಗಳು ಏಳನೇ ಅಂಕಣದಲ್ಲಿ ತಲುಪುತ್ತಾರೆ ಇಲ್ಲವೇ ಮೊದಲನೇ ಅಂಕಣದಲ್ಲಿಯೇ ಒದ್ದಾಡುತ್ತಿರುತ್ತಾರೆ. ಸಾವಿರಾರು ಜನ ಇದನ್ನು ವೀಕ್ಷಿಸುತ್ತಾರೆ.

**ರಣಮೋಡಿ**

ರಣಮೋಡಿ ತುಂಬ ಭಯಾನಕವಾದುದು. ಇದನ್ನು ಆಡುವವರ ಪ್ರಾಣಕ್ಕೆ ಅನೇಕ ಬಾರಿ ಅಪಾಯ ಬರುವುದುಂಟಂತೆ. ಹಾಗಾಗಿ ಈ ಆಟವನ್ನು ಆಉಡವ ಮುನ್ನ 'ಯಾರಾದರೂ ಸತ್ತರೆ ಯಾರ ಮೇಲೂ ಫಿರ್ಯಾದಿ ಮಾಡಕೂಡದು' ಎಂಬ ಒಪ್ಪಂದಕ್ಕೆ ಎರಡೂ ತಂಡದವರೂ ಸಹಿ ಹಾಕುತ್ತಾರೆ.

ರಣಮೋಡಿಯನ್ನು ಆಡುವವರು ಅನೇಕ ವರ್ಷಗಳ ಸಾಧನೆಯಿಂದ ಮೋಡಿ ಮಾಡುವ ಶಕ್ತಿಯನ್ನು ಪಡೆದಿರುತ್ತಾರೆ ಎಂದು ಹೇಳಲಾಗುತ್ತದೆ. ಒಂದು ನಿರೂಪಣೆಯ ಪ್ರಕಾರ ಈ ಶಕ್ತಿಯನ್ನು ಸತ್ತು ಹೋದ ಎಳೆಯ ಮಕ್ಕಳ ತಲೆ ಮತ್ತು ಕೈ ಅಥವಾ ಸತ್ತು ಹೋದ ಬಾಣಂತಿಯ ತಲೆ ಮತ್ತು ಕೈಯಿಂದ ಪಡೆಯಲಾಗುತ್ತದೆ. ಸತ್ತು ಹೋದ ಮಗುವನ್ನು ಅಥವಾ ಬಾಣಂತಿಯನ್ನು ಸಾಮಾನ್ಯವಾಗಿ ಸುಡುವುದಿಲ್ಲ. ಬದಲು ಹೊಂಡಕ್ಕೆ ಹಾಕುತ್ತಾರೆ. ಮೋಡಿ ಕಲಿಯುವವನು ಆದಿತ್ಯವಾರ ಬರುವ ಅಮವಾಸ್ಯೆಯಂದು ಹೆಣ ಹುಗಿದ ಸ್ಥಳಕ್ಕೆ ಹೋಗುತ್ತಾನೆ. ಹಾಗೆ ಹೋಗುವಾಗ ಮೈಯಲ್ಲಿ ಯಾವ ಮಂತ್ರಗಳನ್ನು ಹೇಳಬೇಕು. ಮಂತ್ರ ಹೇಳುತ್ತಲೇ ಮಣ್ಣು ಸುರಿದು ಕೊಳೆತ ಹೆಣ ಕಾಣಬರುತ್ತದೆ. ಮಂತ್ರ ಮುಂದುವರಿಯುತ್ತಲೇ ಹೆಣವು ಗುಡಿಯಿಂದ ಮೇಲೇರುತ್ತದೆ. ತಾನೇ ಕೈಯಿಂದ ಕೂದಲನ್ನು ಕತ್ತರಿಸಿ, ಮಂತ್ರ ಹೇಳುವವನ ಕೈಗೆ ಕೊಡುತ್ತದೆ. ಮತ್ತೆ ಹೊಂಡ ಸೇರುತ್ತದೆ. ಮಣ್ಣು ಮುಚ್ಚಿ ಕೊಳ್ಳುತ್ತದೆ. ಹೀಗೆ ಹೆಣ ಕೊಟ್ಟ ಕೂದಲನ್ನು ಮೋಡಿಕಾರರು ಸದಾ ತಮ್ಮ ಬಳಿಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ಹೇಳಲಾಗುತ್ತದೆ.

ಇನ್ನೊಂದು ನಿರೂಪಣೆಯ ಪ್ರಕಾರ ಮೋಡಿಕಾರರ ಓತಿಕ್ಯಾತಗಳನ್ನು ಹಿಡಿದುಕೊಂದು ಕಿತ್ತಲೆ ಕೋಣೆಯಲ್ಲಿ ತೂಗು ಹಾಕುತ್ತಾರೆ. ದಿನ ಕಳೆದಂತೆ ಅದು ಕೊಳೆತು ಅದರಿಂದ ಬಿಳಿ ದ್ರವ್ಯವೊಂದು ಸುರಿಯುತ್ತದೆ. ಈ ಬಿಳಿ ಲೋಳೆಯನ್ನು ಸಂಗ್ರಹಿಸಿ, ಅದಕ್ಕೆ ಮುಟ್ಟಾದ ಹೆಂಗಸಿನ ಮೈಯಿಂದ ಬರುವ ರಕ್ತವನ್ನು ಸೇರಿಸಬೇಕು. ಅಮವಾಸ್ಯೆ ರಾತ್ರಿ ಅದಕ್ಕೆ ಉಗುರು ಮತ್ತು ಕೂದಲು ಬೆರೆಸಿ, ಕಲಸಿ, ಸಣ್ಣ ಗುಳಿಗೆಗಳನ್ನು ಮಾಡಬೇಕು, ಈ ಗುಳಿಗೆಯನ್ನು ಕೈಯಲ್ಲಿ ಇರಿಸಿಕೊಂಡರೆ ಮೋಡಿಯ ಶಕ್ತಿ ಹೆಚ್ಚುತ್ತದೆ ಎಂಬ ನಂಬಿಕೆಯಿದೆ.

ಹೀಗೆ ರಣಮೋಡಿಗೆ ಸಂಬಂಧಿಸಿದ ಕತೆಗಳೇ ರೋಚಕವಾಗಿವೆ. ರಾಜಮೋಡಿಯಾಡುವ ಹಾಗೆ ರಣಮೋಡಿಯನ್ನು ಆಡುವವರಲ್ಲಿಯೂ ಎರಡು ಪಂಗಡಗಳಿರುತ್ತವೆ. ಒಂದು ಪಕ್ಷ ಮೋಡಿ ಕಟ್ಟುತ್ತದೆ. ಇನ್ನೊಂದು ಪಕ್ಷ ಮೋಡಿ ಬಿಡಿಸುತ್ತದೆ. ಇಲ್ಲಿ ಒಂಬತ್ತು ಅಂಕಣ ಗಳಿರುತ್ತವೆ.

ಪ್ರತಿ ಅಂಕಣದಲ್ಲಿಯೂ ಮೇಲೆ ತೋರಿಸಿದ ವಸ್ತುಗಳನ್ನು ಇಟ್ಟು, ಅವನ್ನು ಮಂತ್ರದಿಂದ ದಿಗ್ಬಂಧಿಸಲಾಗುತ್ತದೆ. ಇದಿರಾಳಿಯು ಈ ಎಲ್ಲಾ ಅಂಕಣದಲ್ಲಿರುವ ವಸ್ತುಗಳನ್ನು ಒಂದೊಂದಾಗಿ ತೆಗೆಯಲು ಆತ ಶತ ಪ್ರಯತ್ನ ಮಾಡುತ್ತಾನೆ. ಎಲ್ಲ ಅಂಕಣಗಳಿಂದಲೂ ಆತ ವಸ್ತುಗಳನ್ನು ತೆಗೆದರೆ, ಅವನು ಗೆದ್ದಂತೆ. ಆದರೆ ಮೋಡಿ ಕಟ್ಟುವವರು ಅಂಥ ಪ್ರಯತ್ನಗಳನ್ನು ವಿಫಲವಾಗಿಸುತ್ತಾರೆ. ರಣಮೋಡಿಯ ಭಯಾನಕ ಘಟನೆಗಳು ನಡೆಯುವುದು ಇಲ್ಲಿಯೇ. ಇದಿರಾಳಿ ಅಂಕಣವನ್ನು ಪ್ರವೇಶಿಸುತ್ತಿದ್ದಂತೆ, ಮೋಡಿಕಟ್ಟಿದವರು ತಮ್ಮ ಮಂತ್ರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾರೆ. ಹಾಗಾಗಿ ಇದಿರಾಳಿ ನಿಂಬೆಹಣ್ಣನ್ನು ಮುಟ್ಟಲು ಬರುತ್ತಿರುವಂತೆ ಅಲ್ಲಿ ಭಯಾನಕ ಹಾವುಗಳು, ಚೇಳುಗಳೂ ಕಾಣಿಸಿಕೊಳ್ಳುತ್ತವೆ. ಎಷ್ಟೋ ಬಾರಿ ಆತ ಅಲ್ಲಿಯೇ ಸ್ಮೃತಿ ತಪ್ಪಿ ಬೀಳುತ್ತಾನೆ. ಕೆಲವು ಬಾರಿ ಪ್ರಜ್ಞೆ ಕಳೆದುಕೊಂಡು ಕಳ್ಳಿಯನ್ನು ತಿನ್ನುತ್ತಾನೆ. ಗಾಜನ್ನು ಅಗಿಯುತ್ತಾನೆ. ಒಮ್ಮೊಮ್ಮೆ ಮೈಮೇಲೆ ಎಚ್ಚರದಪ್ಪಿ ಎಷ್ಟೋ ದೂರ ಓಡುತ್ತಾನೆ. ಈ ಮಧ್ಯೆ ಮೈಕೈಗಳಿಗೆಲ್ಲ ಶಸ್ತ್ರಾಸ್ತ್ರಗಳನ್ನು ಚುಚ್ಚಿಕೊಂಡು, ಪವಾಡ ಪ್ರದರ್ಶನ ಮಾಡುವುದೂ ಇದೆ. ಮಹಿಳೆಯರಂತೂ ವಿಕಾರವಾಗಿ ಕಿರುಚುತ್ತಾ, ಬಟ್ಟೆಯನ್ನು ಮೇಲೆತ್ತಿಕೊಂಡು ಓಡುತ್ತಾರೆ.

ಮೋಡಿಕಾರ ಮಂಡಲದಲ್ಲಿರುವ ನಿಂಬೆಹಣ್ಣನ್ನು ನಿಧಾನವಾಗಿ ಕ್ಯೊದರೆ, ಇದಿರಾಳಿಯ ಕಾಲನ್ನು ಕೊಯ್ದಂತೆ ರಕ್ತ ಬರುತ್ತದೆ. ಮಮತ್ರದಂಡವನ್ನು ಎತ್ತಿದರೆ, ತಲೆಕೆಳಗಾಗಿ ಹಿಡಿದರೆ ಇದಿರಾಳಿಯ ತಲೆಕಳಗಾಗಿ ನಿಲ್ಲುತ್ತಾನೆ. ಹೀಗೆ ಎರಡು ಕಡೆಯವರೂ ಪರಸ್ಪರ ಹೋರಾಡುತ್ತಾರೆ. ಯಾರ ಕಡೆ ಮಂತ್ರಶಕ್ತಿ ಹೆಚ್ಚಿಗೆ ಇದೆಯೋ ಅವರು ಗೆಲ್ಲುತ್ತಾರೆ.

| | | | | | | | | | | |
|---|---|---|---|---|---|---|---|---|---|---|
| ಚೌಡಿ | ೧೮<br>೧ ಮೊಟ್ಟೆ | ೧೫<br>ನಿಂಬೆ | ೧೪<br>ಕುಂಬಳಕಾಯಿ | ೧೧<br>ಮಡಿಕೆ | ೯<br>೩ ನಿಂಬೆ | ೭<br>ಎಲೆ | ೬<br>ಚಪ್ಪಲಿ | ೩<br>೨ ನಿಂಬೆ | ೨<br>೧ ಮೊಟ್ಟೆ | ಮೋಡಿಯ ಕಳ |
| | ೧೭<br>ದಂಡ | ೧೬<br>ಕುಂಬಳಕಾಯಿ | ೧೩<br>ಮಡಿಕೆ | ೧೨<br>ತೆಂಗಿನಕಾಯಿ | ೧೦<br>ತೆಂಗಿನಕಾಯಿ | ೮<br>೩ ಮೊಟ್ಟೆ | ೫<br>ಕಳ್ಳಿ | ೪<br>ಮೊಟ್ಟೆ | ೧<br>೧ ನಿಂಬೆ | |

ಮೋಡಿ ಎತ್ತುವುದು

ರಣಮೋಡಿ ಮೂರು ದಿನಗಳ ಕಾಲ ನಡೆಯುತ್ತದೆ. ದಿನದಿಂದ ದಿನಕ್ಕೆ ಹೋರಾಟ ನಿಬಿಡವಾಗುತ್ತಾ ಹೋಗುತ್ತದೆ. ಹಾಗೆ ಮಂಡಲದಿಂದ ಮಂಡಲಕ್ಕೆ ಅದು ಹೆಚ್ಚು ತೀವ್ರವಾಗುತ್ತದೆ. ರಣಮೋಡಿಯಲ್ಲಿ ನಡೆಯುವ ಘಟನೆಗಳ ಸತ್ಯಾಸತ್ಯತೆ ಏನೇ ಇರಲಿ. ಅದು ಜನರಲ್ಲಿ ರೋಮಾಂಚನ ಹುಟ್ಟಿಸುತ್ತದೆ ಮತ್ತು ಜನರ ಮಧ್ಯೆ ಅದು ಅತ್ಯಂತ ಜನಪ್ರಿಯವಾಗಿದೆ.

**ಆಕರ**

ಹಂಪಿ ಜಾನಪದ, ೧೯೯೭, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೩೯-೧೫೮.

# ಭಾಗ ೩ – ಕೌಶಲ

## ೨೨. ವಿಜಯನಗರದ ಕೋಟೆ

ವಿಜಯನಗರ ಮತ್ತು ಹಂಪೆ ಇವೆರಡರಲ್ಲಿ ಒಂದನ್ನು ಮತ್ತೊಂದರಿಂದ ಬೇರ್ಪಡಿಸುವುದು ಕಷ್ಟಕರ. ವಿಜಯನಗರ ಸ್ಥಾಪನೆಗಿಂತ ಮೊದಲು ಹಂಪೆ ಒಂದು ಪುಣ್ಯ ಕ್ಷೇತ್ರವಾಗಿದ್ದರೂ ಅದೊಂದು ಗ್ರಾಮವಾಗಿತ್ತು. ವಿಜಯನಗರ ಸ್ಥಾಪನೆಯ ನಂತರ ಹಂಪೆ ವಿಜಯನಗರ ಪಟ್ಟಣದ ಒಂದು ಭಾಗವಾಯಿತು. ರಾಜಕೀಯವಾಗಿ ಪತನಹೊಂದಿ ಹಾಳಾದ ಮೇಲೆ ವಿಜಯನಗರ ಪೊಟ್ಟಣ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಆದರೆ ಹಂಪೆಯು ಪುಣ್ಯಕ್ಷೇತ್ರವಾಗಿ ಮುಂದುವರಿಯಿತಲ್ಲದೆ ಅಳಿದುಳಿದ ವಿಜಯನಗರ ಪಟ್ಟಣವನ್ನು ತನ್ನ ಭಾಗವನ್ನಾಗಿಸಿಕೊಂಡಿತು. ಈಗ ಸಾಮಾನ್ಯವಾಗಿ ಹಂಪೆ ಎಂದರೆ ಸುಮಾರು ೨೫ ಚ.ಕಿ.ಮೀ. ಪ್ರದೇಶದಲ್ಲಿ ಹರಡಿದ ವಿಜಯನಗರ ಪಟ್ಟಣದ ಅವಶೇಷಗಳನ್ನೊಳಗೊಂಡ ಪ್ರದೇಶವೆಂದೇ ಪರಿಗಣಿಸಲಾಗುತ್ತದೆ. ವಿಜಯನಗರ ಅಥವಾ ಹಂಪೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿದೆ.

ಐತಿಹಾಸಿಕವಾಗಿ ಹಂಪೆಯ ಪ್ರಾಚೀನತೆ ಏಳನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಬಾದಾಮಿ ಬಾಲುಕ್ಯ ಅರಸ ವಿನಯಾದಿತ್ಯ ಕ್ರಿ.ಶ.೬೯೧ ರಲ್ಲಿ ಪಂಪಾ (ತುಂಗಭದ್ರ) ನದಿಯ ದಡದಲ್ಲಿ ಬೀಡು ಬಿಟ್ಟಿದ್ದನ್ನು ಅಲ್ಲಿಂದ ಮುಂದೆ ಇದು ಪುಣ್ಯಕ್ಷೇತ್ರವಾಗಿ ಬೆಳೆಯಿತು. ಅನೇಕ ಅರಸರು ಇಲ್ಲಿಗೆ ಬಂದು ವಿರೂಪಾಕ್ಷನ ಸನ್ನಿಧಿಯಲ್ಲಿ ದಾನಗಳನ್ನು ಮಾಡಿದರು. ಕ್ರಿ.ಶ. ೧೧೯೯ ರಲ್ಲಿ ಸಿಂದ ಕಲಿದೇವರಸನು ಕುರುಗೋಡಿನಿಂದ ಆಳುತ್ತಿದ್ದಾಗ ಸಾಮಂತ ಮಾದೆಯನಾಯಕರು ವಿರೂಪಾಕ್ಷ ತೀರ್ಥನ ರಕ್ಷಣಾರ್ಥವಾಗಿ ಮಾತಂತ ಪರ್ವತವನ್ನು ಪ್ರತಿಪಾಳಿಸುತ್ತಿದ್ದನು. ಹೊಯ್ಸಳ ಅರಸ ಸೋಮೇಶ್ವರನು ಕ್ರಿ.ಶ. ೧೨೩೬ ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನಿಗೆ ಒಂದು ಹಳ್ಳಿಯನ್ನು ದಾನ

ಮಾಡಿದನು. ದೋರಸಮುದ್ರವು ಮುಸ್ಲಿಮರ ದಾಳಿಯಿಂದ ನಾಶವಾದ ಮೇಲೆ ಮೂರನೆಯ ಬಲ್ಲಾಳನು ಕ್ರಿ.ಶ. ೧೩೩೦ ರಲ್ಲಿ ವಿರೂಪಾಕ್ಷ ಹೊಸದುರ್ಗದಿಂದ ಆಳುತ್ತಿದ್ದನು. ಆಗ ಮಗ ವಿರೂಪಾಕ್ಷ ಬಲ್ಲಾಳನ ಯುವರಾಜ ಪಟ್ಟಾಭಿಷೇಕವು ಹಂಪೆಯಲ್ಲಿ ನಡೆಯಿತು. ಹಂಪೆಯನ್ನು ವಿರೂಪಾಕ್ಷ ಹೊಸದುರ್ಗವೆಂದು ಕರೆದಿರುವುದರಿಂದ ಬಲ್ಲಾಳನು ಇಲ್ಲಿ ಹೊಸತಾಗಿ ಕೋಟೆಯನ್ನು ಕಟ್ಟಿಸಿರಲೇಬೇಕು.

ಕ್ರಿಶ. ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಸಂಗಮ ಸಹೋದರರಾದ ಹರಿಹರ, ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪರಿಂದ ಆಯಿತು. ಈ ವಂಶದ ಮೊದಲು ಇಬ್ಬರು ಅರಸರು ಮೊದಲನೆಯ ಹರಿಹರ (ಕ್ರಿ.ಶ. ೧೩೩೬-೧೩೫೬) ಮತ್ತು ಮೊದಲನೆಯ ಬುಕ್ಕ (ಕ್ರಿ.ಶ.೧೩೫೬-೧೩೭೭) ಆನೆಗೊಂದಿಯಿಂದ ಆಳಿದರು. ಹಂಪೆಯ ಹತ್ತಿರ ತುಂಗಭದ್ರಾ ನದಿಯ ಆಚೆಯ ದಡದ ಮೇಲಿರುವ ಈ ಪಟ್ಟಣವನ್ನು ಹಸ್ತಿನಾವತಿ ಎಂದೂ ಕರೆಯುತ್ತಿದ್ದರು. ಮೊದಲನೆಯ ಬುಕ್ಕನು ವಿಜಯನಗರ ಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ ರಾಜಧಾನಿಯನ್ನು ಆನೆಗೊಂದಿಯಿಂದ ವಿಜಯನಗರಕ್ಕೆ ಸ್ಥಳಾಂತರಿಸಿದನು. ಪ್ರಾರಂಬದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲು ಕಟ್ಟಿಸಿದ ಕೋಟೆಯು ಈಗ ಒಳಕೋಟೆಯಾಗಿದೆ. ಈ ಕೋಟೆಯು ಮಹಾನವಮಿ ದಿಬ್ಬವಿರುವ ಅರಮನೆ ಪ್ರದೇಶ, ರಾಣಿಯ ಸ್ನಾನಗೃಹ, ಆನೆಸಾಲಿನ ಹಿಂದಿನ ಜೈನ ದೈವಾಲಯ, ಭೂಮಿಯ ಕೆಳಮಟ್ಟದ ದೇವಾಲಯ ಮುಂತಾದವುಗಳ ಪ್ರದೇಶವನ್ನು ಸುತ್ತುವರಿದಿದೆ. ಈ ಕೋಟೆಯಲ್ಲಿ ಸಿಂಘಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಗಾಣಗಿತ್ತಿ ಜೈನ ದೇವಾಲಯದ ಉತ್ತರಕ್ಕಿರುವ ಬಾಗಿಲು, ಭೂಮಿಯು ಕೆಳಮಟ್ಟದ ದೇವಾಲಯದ ಉತ್ತರಕ್ಕಿರುವ ಬಾಗಿಲು, ಅದೇ ದೇವಾಲಯದ ಆಗ್ನೇಯಕ್ಕಿರುವ ಹೂವಿನ ಬಾಗಿಲು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಪ್ರದೇಶದ ಉತ್ತರಕ್ಕಿರುವ ಬಾಗಿಲು ಇವೆ. ಈ ಕೋಟೆಯು ಬುಕ್ಕನ ಕಾಲದಲ್ಲಿ ನಿರ್ಮಾಣಗೊಂಡಿದ್ದನ್ನು ಸಿಂಘಾರದ ಹೆಬ್ಬಾಗಿಲನ್ನು ಉಲ್ಲೇಖಿಸುವ ಶಾಸನವು ಪುಷ್ಟೀಕರಿಸುತ್ತದೆ. ಶಾಸನವು ಹೀಗಿದೆ. "ಶ್ರೀ ವೀರಬುಕ್ಕರಾಯನ ವಿಜಯನಗರ ಪಟ್ಟಣದ ಮೂಡಣ ಸಿಂಘಾರದ ಹೆಬ್ಬಾಗಿಲು ಬಡಗಣ ಮೂಲೆಯ ಅರೆಯ ಮೇಲಣ ಆನೆಗೊಂದಿಯ ಕೊತ್ತಣಕ್ಕೆ ಮಂಗಳಮಹಾ ಶ್ರೀ".

ಸಾಮ್ರಾಜ್ಯ ಬೆಳೆದಂತೆ ರಾಜಧಾನಿಯೂ ಬೆಳೆಯತೊಡಗಿತು. ಬೆಳೆದ ಪಟ್ಟಣದ ಸುತ್ತಲು ಎರಡನೆಯ ಕೋಟೆಯನ್ನು ಕಟ್ಟಲಾಯಿತು. ಈ ಕೋಟೆಯ ಸ್ವಲ್ಪ ಭಾಗ ಮಾತ್ರ ಆಗ್ನೇಯ ಭಾಗದಲ್ಲಿ ಕಾಣುತ್ತದೆ. ಇದರಲ್ಲಿ ಭೀಮನ ಬಾಗಿಲು ಇದೆ. ಎರಡನೆಯ ಹರಿಹರನ ಕಾಲದಲ್ಲಿ (ಕ್ರಿ.ಶ. ೧೩೭೭-೧೪೦೪) ಬೆಳೆದ ಪಟ್ಟಣದ ಸುತ್ತ ಮೂರನೆಯ ಕೋಟೆಯನ್ನು ಕಟ್ಟಲಾಯಿತು. ಇದನ್ನು ಬೇಟೆಕಾರರ ಹೆಬ್ಬಾಗಿಲನ್ನು ಮತ್ತು ಹೊದೆಯ ಬಾಗಿಲನ್ನು ಉಲ್ಲೇಖಿಸುವ ಶಾಸನಗಳು ಪುಷ್ಟೀಕರಿಸುತ್ತವೆ. ಸುಸ್ಥಿತಿಯಲ್ಲಿರುವ ಈ ಕೋಟೆಯು ಮಾಲ್ಯವಂತ ಪರ್ವತವನ್ನು ಒಳಗೊಂಡ ವಿಶಾಲ ಪ್ರದೇಶವನ್ನು ಸುತ್ತುವರಿದಿದೆ. ಇದರಲ್ಲಿ ಕೋಟೆಶಂಕರ ದೇವರ ಬಾಗಿಲು, ಜಡೆಯಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಹೊದೆಯ ಬಾಗಿಲು, ಅರೆಶಂಕರ ಬಾಗಿಲು, ರೆಮ್ಮ ದಿಡ್ಡಿ, ಉದಯಗಿರಿಯ ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಗುಮ್ಮಟ ಬಾಗಿಲು ಮುಂತಾದವುಗಳಿವೆ.

ಇಮ್ಮಡಿ ದೇವರಾಯನ ಕಾಲದಲ್ಲಿ (ಕ್ರಿ.ಶ. ೧೪೨೪-೪೬) ಪಟ್ಟಣವು ಸಮೃದ್ಧಿಯಿಂದ ವಿಜೃಂಭಿಸಿ ವಿದೇಶಿಯರನ್ನು ಆಕರ್ಷಿಸಿತು. ಕ್ರಿ.ಶ. ೧೪೪೩ ರಲ್ಲಿ ಇಲ್ಲಿಗೆ ಬಂದ ಪರ್ಶಿಯಾ ದೇಶದ ರಾಯಭಾರಿ ಅಬ್ದುಲ್‌ರಜಾಕ್, "ವಿಜಯನಗರ ಪಟ್ಟಣ ಹೇಗಿದೆಯೆಂದರೆ ಇಂತಹ ಸ್ಥಳವನ್ನು ಕಣ್ಣುಗಳು ಎಂದೂ ಕಂಡಿಲ್ಲ ಮತ್ತು ಇದಕ್ಕೆ ಸಮನಾದುದು ಜತ್ತಿನಲ್ಲಿ ಯಾವುದಾದರೂ ಇದ್ದುದರ ಸುದ್ದಿ ಕಿವಿಗೆ ಬಿದ್ದಿಲ್ಲ... ಬಚಾರಗಳು ಬಹಳ ಅಗಲವಾಗಿವೆ.... ತನ್ನ ವ್ಯಾಪಾರಿಗಳು ಮುತ್ತು, ಮಾಣಿಕ್ಯ, ಪಚ್ಚೆ ಮತ್ತು ವಜ್ರಗಳನ್ನು ಬಜಾರಗಳಲ್ಲಿ ಸಾರ್ವಜನಿಕವಾಗಿ ಮಾರುತ್ತಾರೆ" ಎಂದು ಬಣ್ಣಿಸಿದ್ದಾನೆ. ಕೃಷ್ಣದೇವರಾಯನ ಕಾಲದಲ್ಲಿ (ಕ್ರಿ.ಶ. ೧೫೧೦-೨೯) ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತವನ್ನು ಆವರಿಸಿದಾಗ ರಾಜಧಾನಿಯೂ ಗಣನೀಯವಾಗಿ ಬೆಳೆಯಿತು. ಅಚ್ಯುತರಾಯನ ಕಾಲದಲ್ಲಿ (ಕ್ರಿ.ಶ. ೧೫೨೯-೪೨) ವಿಜಯನಗರದ ಆಗ್ನೇಯಕ್ಕೆ ಆತನ ರಾಣಿಯ ಹೆಸರಿನಲ್ಲಿ ವರದಾಜಮ್ಮನ ಪಟ್ಟಣವನ್ನು ಸ್ಥಾಪಿಸಲಾಯಿತು. ನಾಲ್ಕನೆಯ ಕೋಟೆಯು ವಿಜಯನಗರದೊಂದಿಗೆ ಈ ಭಾಗವನ್ನೂ ಸುತ್ತುವರಿದಿದೆ. ಇದು ಈಗ ಆಗ್ನೇಯ ಮತ್ತು ನೈರುತ್ಯ ಭಾಗಗಳಲ್ಲಿ ಮಾತ್ರ ಉಳಿದಿದೆ. ಈ ಕೋಟೆಯಲ್ಲಿರುವ ಬಾಗಿಲನ್ನು ಅಚ್ಯುತರಾಯನ ಕ್ರಿ.ಶ. ೧೫೪೦ರ ಶಾಸನವು ಪೆನುಗೊಂಡೆ ಬಾಗಿಲು ಎಂದು ಉಲ್ಲೇಖಿಸುತ್ತದೆ.

ಹೊರಕೋಟೆಯ ಹೊರಗೆ ಇನ್ನೊಂದು ತರಹದ ಸಂರಕ್ಷಣಾ ವ್ಯವಸ್ಥೆ ಇದ್ದುದು ಕ್ರಿ.ಶ. ೧೫೨೦ ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರವಾಸಿ ಡಾಮಿಂಗೊ ಪಾಯೆಸ್‌ನಿಂದ ತಿಳಿಯುತ್ತದೆ. ಕೆಳಮಟ್ಟದಲ್ಲಿಯ ಭೂಮಿಯಲ್ಲಿ ಎದೆಮಟ್ಟದ ಚೂಪಾದ ಕಲ್ಲುಗಳನ್ನು ನೆಟ್ಟಿದ್ದರು. ಇವು ಗುಡ್ಡ ಪ್ರದೇಶವನ್ನು ತಲುಪುವವರೆಗೆ ಮುಂದುವರಿದಿದ್ದವು. ಇಂತಹ ಕಲ್ಲುಗಳನ್ನು ಕುದುರೆ ಮತ್ತು ಮನುಷ್ಯರ ಚಲನೆಯನ್ನು ತಡೆಯಲು ನೆಟ್ಟಿದ್ದುದನ್ನು ಅಬ್ದುಲ್ ರಜಾಕ್ ಸಹ ದಾಖಲಿಸಿದ್ದಾನೆ. ಈ ಕಲ್ಲುಗಳು ಈಗ ವಿಜಯನಗರದಲ್ಲಿ ಕಾಣುವುದಿಲ್ಲವಾದರೂ ಇಂತಹ ಕುದುರೆ ಕಲ್ಲುಗಳನ್ನು ಕಮ್ಮಟದುರ್ಗದಲ್ಲಿ ಕಾಣಬಹುದು.

ಇನ್ನೂರಕ್ಕೂ ಹೆಚ್ಚು ವರ್ಷಗಳ ಕಾಲ ವಿಜೃಂಭಿಸಿದ ವಿಜಯನಗರ ಅವಸಾನ ಹೊಂದುವ ಕಾಲ ಹತ್ತಿರವಾಯಿತು. ಕ್ರಿ.ಶ. ೧೫೬೫ ರಲ್ಲಿ ರಕ್ಕಸ ತಂಗಡಿಯಲ್ಲಿ ವಿಜಯನಗರದ ರಾಮರಾಯ ಮತ್ತು ಗೋಲ್ಕೊಂಡ, ಅಹ್ಮದ್‌ನಗರ, ಬೀದರ್, ಬೇರಾರ್ ಮತ್ತು ಬಿಜಾಪುರ ಸುಲ್ತಾನರ ಸಂಯುಕ್ತ ಕೂಟದ ನಡುವೆ ಭೀಕರ ಯುದ್ಧ ನಡೆಯಿತು. ಯುದ್ಧದಲ್ಲಿ ರಾಮರಾಯನು ಹತನಾದನು, ವಿಜಯನಗರ ಸೈನ್ಯ ಪರಾಜಯಗೊಂಡಿತು. ತಿರುಮಲನು ರಾಜಧಾನಿಗೆ ಹಿಂದಿರುಗು ರಾಣಿವಾಸದವರನ್ನು, ಬಂಧು ವರ್ಗದವರನ್ನು, ಸಾಧ್ಯವಾದಷ್ಟು ಧನ ಕನಕಗಳನ್ನು ೧೫೫೦ ಆನೆಗಳ ಮೇಲೆ ಹೇರಿಕೊಂಡು ಚಂದ್ರಗಿರಿಗೆ ಹೋದನು. ಬೆನ್ನಟ್ಟಿ ಬಂದ ಶತ್ರುಸೇನೆ ರಾಜಧಾನಿಯನ್ನು ಬೆಂಕಿ, ಖಡ್ಗ, ಹಾರೆ ಮತ್ತು ಕೊಡಲಿಗಳಿಂದ ಐದು ತಿಂಗಳ ಕಾಲ ಧ್ವಂಸ ಮಾಡಿ ಹಾಳುಗೆಡವಿತು. ಅಂದಿನಿಂದ ವಿಜಯನಗರವು ಹಾಳು ಹಂಪೆಯಾಗಿ ಉಳಿದಿದೆ.

ರಾಜಧಾನಿಯನ್ನು ಕಟ್ಟಲು ಈ ಸ್ಥಳವನ್ನು ಆಯ್ಕೆ ಮಾಡುವಾಗ ಸ್ವಾಭಾವಿಕವಾಗಿ ರಕ್ಷಣೆ ನೀಡುವ ನದಿ ಮತ್ತು ಗುಡ್ಡಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ರಾಜಧಾನಿಯ ಉತ್ತರಕ್ಕೆ ತುಂಗಭದ್ರಾ ನದಿ ಮತ್ತು ಗುಡ್ಡಗಳ ಸಾಲು ನೈಸಗಿಕ ರಕ್ಷಣೆಯನ್ನು ನೀಡುತ್ತವೆ. ಪೂರ್ವ ದಿಕ್ಕಿಗೂ ಅನೇಕ ಗುಡ್ಡಗಳ ಸಾಲುಗಳಿವೆ. ಅಲ್ಲದೆ ಭದ್ರವಾದ ಕೋಟೆಯು ಅನೇಕ ಸುತ್ತುಗಳಲ್ಲಿ ರಾಜಧಾನಿಯನ್ನು ರಕ್ಷಿಸುತ್ತದೆ. ಕೋಟೆಯನ್ನು ನೆಲದ ಮಟ್ಟದಲ್ಲಿ, ಗುಡ್ಡಗಳ ಮಧ್ಯದಲ್ಲಿ ಮತ್ತು ಗುಡ್ಡಗಳ ಮೇಲೆ ಸಹ ಕಟ್ಟಲಾಗಿದೆ. ಸಂಪ್ರದಾಯ ಮತ್ತು ವಿದೇಶಿ ಪ್ರವಾಸಿಗರ ಪ್ರಕಾರ ವಿಜಯನಗರ ಏಳು ಸುತ್ತಿನ ಕೋಟೆಯಿಂದ ಸುತ್ತುವರಿಯಲ್ಪಟ್ಟಿತ್ತು. ಈಗ ಕೆಲವು ಸುತ್ತುಗಳು ಮಾತ್ರ ಕಾಣುತ್ತಿವೆ.

ಕೋಟೆಗೋಡೆಗಳು ಬಹಳ ದಪ್ಪವಾಗಿದ್ದು, ಹೊರಮೈಗೆ ದಪ್ಪ ಕಲ್ಲುಗಳಿದ್ದು, ಒಳಮೈಗೆ ಮಣ್ಣಿನ ಇಳಿವೋರೆ ಇದೆ. ಹೊರಭಾಗದಲ್ಲಿ ದೊಡ್ಡ ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆಯನ್ನು ಉಪಯೋಗಿಸಿದೆ. ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ದೊಡ್ಡ ಕಲ್ಲುಗಳನ್ನು ಮೇಲಕ್ಕೆತ್ತುವಾಗ ಆಗುವ ಭಾರವನ್ನು ಕಡಿಮೆ ಮಾಡುವುದಕ್ಕಾಗಿ ಬೆಣೆಯಾಕಾರದ ಕಲ್ಲುಗಳನ್ನು ಬಹಳ ಜಾಣ್ಮೆಯಿಂದ ಆಯತಾಕಾರದ ಕಲ್ಲುಗಳ ಬದಲಿಗೆ ಉಪಯೋಗಿಸಲಾಗಿದೆ. ಇವುಗಳ ಹೊರಭಾಗ ಅಗಲವಾಗಿದ್ದು, ಒಳಭಾಗವು ಚೂಪಾಗಿರುತ್ತದೆ. ಒಳಭಾಗದಲ್ಲಿ ಕಲ್ಲುಗಳ ಮಧ್ಯದ ಸಂದುಗಳನ್ನು ಸಣ್ಣಕಲ್ಲು ಮತ್ತು ಮಣ್ಣಿನಿಂದ ತುಂಬಲಾಗಿದೆ. ಕೋಟೆಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಅಲ್ಲಲ್ಲಿ ಚೌಕಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಈ ಕೊತ್ತಳಗಳು ಚೌಕಾಕಾರದಲ್ಲಿ ಮುಂದೆ ಚಾಚಿಕೊಂಡಿರುವ ಕೋಟೆ ಗೋಡೆಯ ಭಾಗಗಳಾಗಿವೆ. ಯುದ್ಧ ಸಮಯದಲ್ಲಿ ಹೆಚ್ಚು ಸೈನಿಕರುನಿಲ್ಲಲು ಸಹ ಕೊತ್ತಳಗಳು ಉಪಯೋಗವಾಗುತ್ತವೆ. ಕೊತ್ತಳಗಳ ಮೇಲೆ ಕಾವಲಿನವರು ನಿಂತು ಕೋಟೆಯನ್ನು ಸಂರಕ್ಷಿಸುತ್ತಿದ್ದರು. ಇವರಿಗಾಗಿ ನಿರ್ಮಿಸಿದ ಚಿಕ್ಕ ಕಟ್ಟಡಗಳ ಅವಶೇಷಗಳು ಕೆಲವು ಕೊತ್ತಳಗಳ ಮೇಲೆ ಈಗಲೂ ಕಾಣುತ್ತಿವೆ. ಕೋಟೆ ಪಕ್ಕದಲ್ಲಿ ನೈಸರ್ಗಿಕವಾಗಿ ಎತ್ತರದಲ್ಲಿರುವ ಕೆಲವು ಸ್ಥಳಗಳನ್ನು ಸಹ ಕೊತ್ತಳಗಳಂತೆ ಉಪಯೋಗಿಸಲಾಗಿದೆ. ಕೋಟೆ ಪಕ್ಕದಲ್ಲಿದ್ದ ಕಂದಕ ಈಗ ಮುಚ್ಚಿ ಹೋಗಿದೆ. ಕೋಟೆಗೋಡೆಗಳಲ್ಲಿರುವ ಬಾಗಿಲುಗಳು ಒಂದೇ ವಿಧದಲ್ಲಿಲ್ಲ. ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವಿಂಗಡಿಸಿದ್ದುದು ಅಲ್ಲಿಯ ಶಾಸನಗಳಿಂದ ತಿಳಿಯುತ್ತದೆ. ಹೆಬ್ಬಾಗಿಲುಗಳು ಅತಿದೊಡ್ಡ ಬಾಗಿಲುಗಳು. ಇವುಗಳನ್ನು ಮುಖ್ಯ ಬಾಗಿಲುಗಳನ್ನಾಗಿ ಉಪಯೋಗಿಸುತ್ತಿದ್ದರು. ಬಾಗಿಲುಗಳು ಮಧ್ಯಮ ಗಾತ್ರದವು. ದಿಡ್ಡಿಗಳು ಚಿಕ್ಕ ಬಾಗಿಲುಗಳಾಗಿದ್ದು, ಜನರು ತಮ್ಮ ದಿನ ನಿತ್ಯದ ಕೆಲಗಳಿಗಾಗಿ ಪಟ್ಟಣದ ಎಲ್ಲಾ ದಿಕ್ಕಿಗೂ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ರಚಿಸಲ್ಪಟ್ಟವು. ಹೆಬ್ಬಾಗಿಲು, ಬಾಗಿಲು

ಮತ್ತು ದಿಡ್ಡಿಗಳ ವಿನ್ಯಾಸವನ್ನು ಯುದ್ಧತಂತ್ರದ ದೃಷ್ಟಿಯಿಂದ ಬಹಳ ಎಚ್ಚರಿಕೆಯಿಂದ ಮಾಡಲಾಗಿದೆ. ಕೋಟೆಯೊಳಗೆ ನೇರವಾದ ಪ್ರವೇಶವನ್ನು ಇವು ನೀಡುವುದಿಲ್ಲ. ದೂರದಿಂದ ನೋಡಿದಾಗ ಪ್ರವೇಶ ದ್ವಾರವೇ ಕಾಣುವುದಿಲ್ಲ. ಪ್ರವೇಶ ದ್ವಾರದ ಎರಡು ಪಾಶ್ವಗಳಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ಗೋಡೆಗಳನ್ನು ಕಟ್ಟಿ, ಅದನ್ನು ಮರೆಮಾಡಿ ಗೋಡೆಯಲ್ಲಿ ಎರಡನೆಯ ಪ್ರವೇಶ ದ್ವಾರವನ್ನು ಕಲ್ಪಿಸಲಾಗಿದೆ. ಎರಡನೆಯ ದ್ವಾರವು ಪಾರ್ಶ್ವದಲ್ಲಿರುವುದರಿಂದ ಇದೂ ಸಹ ದೂರದಿಂದ ಕಾಣುವುದಿಲ್ಲ. ಹೀಗಾಗಿ ಒಳಗೆ ಬರುವ ದಾರಿಯು ಅಂಕುಡೊಂಕಾಗುವುದು. ಸಾಮಾನ್ಯವಾಗಿ ಬಾಗಿಲುಗಳು ಪಾರ್ಶ್ವದಲ್ಲಿ ಎರಡು ದೊಡ್ಡ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕುಡೊಂಕಾದ ದಾರಿಯಲ್ಲಿ ಒಳ ಪ್ರವೇಶಿಸಲು ಪ್ರಯತ್ನಿಸುವ ವೈರಿ ಸೈನ್ಯವನ್ನು ಕೋಟೆಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸದೆಬಡೆಯಲು ಅನುಕೂಲವಾಗುತ್ತಿತ್ತು. ಬಾಗಿಲುಗಳಲ್ಲಿ ಕಾವಲುಗಾರರಿರುತ್ತಿದ್ದರು. ಇವರು ಖಡ್ಗ, ದೊಣ್ಣೆ ಮತ್ತು ಚಾವಟಿಗಳನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಇಂತಹ ಕೆಲವು ಶಿಲ್ಪಗಳನ್ನು ಬಾಗಿಲುಗಳ ತೋಳುಗಂಬಗಳ ಮೇಲೆ ಕೆತ್ತಲಾಗಿದೆ.

ಬಾಗಿಲುಗಳನ್ನು ಕಂಬ ಮತ್ತು ತೊಲೆಗಳಿಂದ, ಇಟ್ಟಿಗೆ ಗಾರೆ ಬಳಸದೆ, ಹಿಂದೂ ಶೈಲಿಯಲ್ಲಿ ಕಟ್ಟಲಾಗಿದೆ. ಬಾಗಿಲು ತೋಳುಗಳ ಮೇಲೆ ದ್ವಾರಪಾಲಕರು ಮತ್ತು ಅಲಂಕಾರಿಕ ಶಾಖೆಗಳನ್ನು ಕೆತ್ತಿದೆ. ಪ್ರವೇಶಕ್ಕಿಂತ ಮೊದಲು ದೊಡ್ಡ ಆವರಣವಿದೆ. ಪ್ರವೇಶದ ಇಕ್ಕೆಲಗಳಲ್ಲಿ ಕಂಬಗಳ ಅಂಕಣಗಳುಳ್ಳ ಕಟ್ಟೆಗಳಿವೆ. ಸೈನಿಕರು ಮತ್ತು ಪ್ರವಾಸಿಗರು ವಿಶ್ರಾಂತಿ ಪಡೆಯಲು ಇವು ಅನುಕೂಲವಾಗಿವೆ. ನೇರ ಪ್ರವೇಶದ ಕದಗಳನ್ನು ಹಾಕಿದಾಗ ಬಳಸಲು ಪಕ್ಕದಲ್ಲಿ L ಅಥವಾ U ಆಕಾರದ ಉಪ ಪ್ರವೇಶವನ್ನು ಒದಗಿಸಿದೆ. ಕೆಲವು ಬಾಗಿಲುಗಳ ರಚನೆಯಲ್ಲಿ ಮುಸ್ಲಿಮ್ ವಾಸ್ತುವಿನ ಪ್ರಭಾವವು ಕಾಣುತ್ತದೆ. ಗುಮ್ಮಟದ ಬಾಗಿಲೆಂದೇ ಕರೆಯುವ ಬಾಗಿಲು ಮೇಲಿನ ಗುಮ್ಮಟ ಮತ್ತು ಬೇಟೆಕಾರರ ಹೆಬ್ಬಾಗಿಲ ಮತ್ತು ಅರೆಶಂಕರ ಬಾಗಿಲುಗಳ ಮೇಲಿನ ಕಮಾನುಗಳು ಮುಸ್ಲಿಮ್ ಶೈಲಿಯಲ್ಲಿವೆ. ಕೆಲವು ಬಾಗಿಲುಗಳ ಗೋಡೆಗಳನ್ನು ಶಿಲ್ಪಗಳಿಂದ ಅಲಂಕರಿಸಿದೆ ಮತ್ತು ಕೆಲವು ಬಾಗಿಲುಗಳ ಆವರಣಗಳಲ್ಲಿ ದೇವಾಲಯಗಳಿವೆ.

ವಿಶಾಲವಾದ ಕೋಟೆಯ ಭಾಗಗಳನ್ನು ತೀವ್ರವಾಗಿ ಗುರುತಿಸುವುದು ಯುದ್ಧ ಸಮಯದಲ್ಲಿ ಅತ್ಯವಶ್ಯಕವಾಗುತ್ತದೆ. ಯಾವುದೇ ಒಂದು ಭಾಗಕ್ಕೆ ಸೈನಿಕರನ್ನು ಕಳುಹಿಸುವಾಗ ಅವರು ಯಾವುದೇ ಗೊಂದಲಕ್ಕೊಳಪಡದೆ, ನೇರವಾಗಿ ತೀವ್ರಗತಿಯಲ್ಲಿ ಹೋಗಿ ಆ ಭಾಗವನ್ನು ಸೇರುವಂತೆ ಕೋಟೆಯ ವಿವಿಧ ಭಾಗಗಳಿಗೆ ಹೆಸರುಗಳನ್ನು ಕೊಟ್ಟು ಗುರುತಿಸುವುದು ಅತಿಮುಖ್ಯವಾದ ವಿಷಯ. ವಿಜಯನಗರ ಕೋಟೆಯಲ್ಲಿ ಇಂತಹ ವ್ಯವಸ್ಥೆ ಇದ್ದುದು ಇತ್ತೀಚೆಗೆ ಸಂಶೋಧನೆ ಮಾಡಿ ಹೊರೆತಂದ ಅನೇಕ ಶಾಸನಗಳಿಂದ ಬೆಳಕಿಗೆ ಬಂದಿದೆ. ಕೋಟೆಯ ಬಾಗಿಲುಗಳಿಗೆ ಮತ್ತು ಕೊತ್ತಳಗಳಿಗೆ ಹೆಸರುಗಳನ್ನಿಟ್ಟು, ಅವುಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಶಾಸನಗಳ ಆಧಾರದ ಮೇಲೆ ಇದುವರೆಗೆ ಪತ್ತೆ ಹಚ್ಚಿದ ಬಾಗಿಲು ಮತ್ತು ಕೊತ್ತಳಗಳ ಹೆಸರುಗಳು ಹೀಗಿವೆ. ಸಿಂಘಾರದ ಹೆಬ್ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಸೋಮವಾರದ ಬಾಗಿಲು, ಉಪ್ಪರಿಗೆ ಬಾಗಿಲು, ಉದಯಗಿರಿಯ ಬಾಗಿಲು, ಅರೆಶಂಕರ ಬಾಗಿಲು, ಪೆನುಕೊಂಡೆ ಬಾಗಿಲು, ಕೋಟಿಶಂಕರದೇವರ ಬಾಗಿಲು, ಅರೆಶಂಕರ ಬಾಗಿಲು, ಪೆನುಕೊಂಡ ಬಾಗಿಲು, ಕೋಟಿಶಂಕರದೇವರ ಬಾಗಿಲು, ಹೊದೆಯ ಬಾಗಿಲು, ಕೊಠಾರದ ಬಾಗಿಲು, ಹೂವಿನ ಬಾಗಿಲು, ಜಡೆಯಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಮತಂಗೇಶ್ವರದೇವರ ದಿಡ್ಡಿ, ರೆಮ್ಮ್ಮ ದಿಡ್ಡಿ, ಪ್ರತಾಪ ಕೊತ್ತಳ, ಸ್ವಾಮಿದ್ರೋಹರಗಂಡನ ಕೊತ್ತಳ, ಮಾತಂಗದೇವರ ಕೊತ್ತಳ, ಮಳಲ ವಿನಾಯಕ ಕೊತ್ತಳ, ಜಲಸೇನದೇವರ ಕೊತ್ತಳ, ಹಂಪೆಯ ಕೊತ್ತಳ, ಹನುಮನ ಕೊತ್ತಳ, ಶಂಕರದೇವರ ಕೊತ್ತಳ, ಮದನ ಕೊತ್ತಳ, ಮೀಸರಗಂಡನ ಕೊತ್ತಳ, ಆನೆಗೊಂದಿಯ ಕೊತ್ತಳ ಮತ್ತು ಸಮಯ ದೇವರ ಕೊತ್ತಳ ಇಂತಹ ಸುವ್ಯವಸ್ಥಿತವಾದ ಮತ್ತು ಭದ್ರವಾದ ಕೋಟೆಯಿಂದ ವಿಜಯನಗರ ಸಾಮ್ರಾಜ್ಯವು ಬಹುಕಾಲ ವಿಜೃಂಭಿಸಿತು.

**ಆಕರ**

ಕರ್ನಾಟಕದ ಕೋಟೆಗಳು, ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯೧-೯೯

# ೧೩. ಹಂಪಿಯ ರಕ್ಷಣಾವಾಸ್ತು (೧)

ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ಸಂಗಮ ಸಹೋದರರಾದ ಹರಿಹರ, ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪರಿಂದ ಆಯಿತು. ಈ ವಂಶದ ಮೊದಲ ಅರಸ ಒಂದನೇ ಹರಿಹರ (ಕ್ರಿ.ಶ. ೧೩೩೬-೧೩೫೬) ಮತ್ತು ಮೊದಲನೆಯ ಬುಕ್ಕ (ಕ್ರಿ.ಶ. ೧೩೫೬-೧೩೭೭) ಆನೆಗೊಂದಿಯಿಂದ ಆಳಿದರೆಂಬ ಪ್ರತೀತಿ ಇದೆ.[1] ಆದರೆ ಕ್ರಿ.ಶ. ೧೩೪೦ರ ಹಂಪೆಯ ಶಾಸನವು ವಿಜಯ ಎಂಬ ಹೆಸರಿನ ಪಟ್ಟಣದಲ್ಲಿ ಒಂದನೆಯ ಹರಿಹರ ಮತ್ತು ಬುಕ್ಕನು ಆಳುತ್ತಿದ್ದಂತೆಯೂ ಅದು ಇಂದ್ರನ ಅಮರಾವತಿಯಂತೆ ಇತ್ತೆಂದೂ ವರ್ಣಿತವಾಗಿದೆ.[2] ಆದರೆ ಹರಿಹರ ಮತ್ತು ಬುಕ್ಕರಾಯನ ರಾಜಧಾನಿಯು ಪಂಪಾಕ್ಷೇತ್ರದ ಬಳಿಯಿದ್ದ 'ವಿಜಯ' ಎಂಬ ಪಟ್ಟಣವೆಂದಾಗುವುದು. ಈ ವಿಜಯ ವಿರೂಪಾಕ್ಷಪುರವೇ ತನ್ನ ಹೆಸರನ್ನು ಮೊಟಕು ಮಾಡಿಕೊಂಡು ವಿಜಯನಗರವಾಗಿ ಬೆಳೆಯಿತು. ಈ ವಿಜಯನಗರದಲ್ಲಿ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶಗಳು ಸುಮಾರು ೩೦೦ ವರ್ಷಗಳ ಕಾಲ ಆಳ್ವಿಕೆ ಮಾಡಿದವು. ಈ ವಂಶಗಳಲ್ಲಿ ಹರಿಹರ, ಪ್ರೌಢದೇವರಾಯ, ಕೃಷ್ಣದೇವರಾಯರು ಪ್ರಸಿದ್ಧಿ ಅರಸರು.

**ಕೋಟೆಯ ಲಕ್ಷಣಗಳು**

ಪ್ರಾರಂಭದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲೂ ಕಟ್ಟಿಸಿದ ಕೋಟೆಯು ಈಗ ಒಳಕೋಟೆಯಾಗಿದೆ. ಈ ಕೋಟೆಯು ಮಹಾನವಮಿ ದಿಬ್ಬವಿರುವ ಅರಮನೆ ಪ್ರದೇಶ, ಹಜಾರ ರಾಮಸ್ವಾಮಿ ದೇವಾಲಯ, ರಾಣಿ ಸ್ನಾನಗೃಹ, ಆನೆಸಾಲಿನ ಹಿಂದಿನ ಜೈನ ದೇವಾಲಯ, ಭೂಮಿಯ ಕೆಳಮಟ್ಟದ ದೇವಾಲಯ ಮುಂತಾದವುಗಳ ಪ್ರದೇಶವನ್ನು ಸುತ್ತುವರೆದಿದೆ. ಈ ಕೋಟೆಯಲ್ಲಿ ಸಿಂಘಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಗಾಣಿಗಿತ್ತಿ, ಜೈನದೇವಾಲಯದ ಉತ್ತರಕ್ಕಿರುವ ಬಾಗಿಲು, ಭೂಮಿಯ ಕೆಳಮಟ್ಟದ ದೇವಾಲಯದ ಉತ್ತಕ್ಕಿರುವ ಬಾಗಿಲು, ಅದೇ ದೇವಾಲಯದ ಆಗ್ನೇಯ ದಿಕ್ಕಿಗಿರುವ ಹೂವಿನ ಬಾಗಿಲು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಪ್ರದೇಶದ ಉತ್ತರಕ್ಕಿರುವ ಬಾಗಿಲುಗಳಿಗೆ. ಈ ಕೋಟೆಯ ಸುತ್ತು ಬುಕ್ಕನ ಕಾಲದಲ್ಲಿ ನಿರ್ಮಾಣಗೊಂಡಿರುವುದಕ್ಕೆ ಸಿಂಘಾರದ ಹೆಬ್ಬಾಗಿಲನ್ನು ಉಲ್ಲೇಖಿಸುವ ಶಾಸನವು ಪುಷ್ಟಿಕರಿಸುತ್ತದೆ. ಶಾಸನವು ಹೀಗಿದೆ"[3]

ಶ್ರೀ ವೀರ ಬುಕ್ಕರಾಯನ ವಿಜಯ
ನಗರ ಪಟ್ಟಣದ ಮೂಡಣ ಸಿಂ
ಘಾರದ ಹೆಬ್ಬಾಗಿಲ ಬಡಗಣ ಮೂಲೆ
ಯ ಅರೆಯ ಮೇಲಣ ಆನೆಯ ಗೊಂದಿಯ ಕೊತ್ತಣಕ್ಕೆ ಮಂಗಳಮ
ಹಾ ಶ್ರೀ ಶ್ರೀ..........

ಜೈನ ಬಸದಿಯ ಸಮೀಪದ ಸೋಮವಾರ ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಗುಂಡಿನ ಶಾಸನದಲ್ಲಿ ಬರುವ "ಶ್ರೀ ವೀರಬುಕ್ಕರಾಯನ ವಿಜಯನಗರ ಪಟ್ಟಣದ ಮೂಡಣ ಸೋಮವಾರದ ಬಾಗಿಲ ಬಡಗಣ ಬೆಟ್ಟ ಸೋಮಯ ದೇವರ ಕೊತ್ತಳದ ಎಂಬ ವಿಷಯವು ಈ ಮೇಲಿನ ಅಂಶಕ್ಕೆ ಒತ್ತು ನೀಡುತ್ತದೆ."[4]

ಸಾಮ್ರಾಜ್ಯ ಬೆಳೆದಂತೆ ರಾಜಧಾನಿಯೂ ಬೆಳೆಯತೊಡಗಿತು. ಬೆಳೆದ ಪಟ್ಟಣದ ಸುತ್ತಲೂ ಎರಡನೆಯ ಸುತ್ತಿನ ಕೋಟೆಯನ್ನು ಕಟ್ಟಲಾಯಿತು. ಈ ಸುತ್ತಿನ ಸ್ವಲ್ಪ ಭಾಗ ಮಾತ್ರ ಆಗ್ನೇಯ ಭಾಗದಲ್ಲಿ ಕಾಣುತ್ತದೆ. ಇದರಲ್ಲಿ ಭೀಮನ ಬಾಗಿಲು ಇರುತ್ತದೆ. ಎರಡನೆಯ ಹರಿಹರನ ಕಾಲದಲ್ಲಿ (ಕ್ರಿ.ಸ. ೧೩೭೭-೧೪೦೪) ಬೆಳೆದ ಪಟ್ಟಣದ ಸುತ್ತ ಮೂರನೆಯ ಕೋಟೆಯನ್ನು ಕಟ್ಟಲಾಯಿತು. ಈ ಕೋಟೆಯ ಸುತ್ತನ್ನು, ಬೇಟೆಕಾರರ ಹೆಬ್ಬಾಗಿಲು ಹಾಗೂ ಹೊದೆಯ ಬಾಗಿಲನ್ನು ಉಲ್ಲೇಖಿಸುವ ಶಾಸನಗಳು ದೃಢೀಕರಿಸುತ್ತವೆ. ಮಾಲ್ಯವಂತ

ರಘುನಾಥ ದೇವಾಲಯದ ಆಗ್ನೇಯ ದಿಕ್ಕಿನ ಕಣಿವೆಯಲ್ಲಿರುವ ಬೇಟೆಕಾರರ ಹೆಬ್ಬಾಗಿಲಿನ ಪೂರ್ವಕ್ಕಿರುವ ಗುಂಡಿನ ಮೇಲಿನ ಕ್ರಿ.ಶ. ೧೩೮೦ರ ಶಾಸನದಲ್ಲಿ[5] ಈ ಮೊದಲೇ ಇಲ್ಲಿ ಕೋಟೆ ಇದ್ದುದನ್ನು ಸ್ಪಷ್ಟಪಡಿಸುತ್ತದೆ. ಸುಸ್ಥಿತಿಯಲ್ಲಿರುವ ಈ ಕೋಟೆಯು ಮಾಲ್ಯವಂತ ಪರ್ವತವನ್ನು ಒಳಗೊಂಡ ವಿಶಾಲ ಪ್ರದೇಶವನ್ನು ಸುತ್ತುವರೆದಿದೆ. ಇದರಲ್ಲಿ ಕೋಟಿಶಂಕರ ದೇವರ ಬಾಗಿಲು, ಜಡೆಶಂಕರ ದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಹೊದೆಯ ಬಾಗಿಲು, ಅರೆಶಂಕರ ಬಾಗಿಲು ರೆಮ್ಮುದಿಡ್ಡಿ, ಉದಯಗಿರಿ ಬಾಗಿಲು ಮತ್ತು ಗುಮ್ಮಟದ ಹೆಬ್ಬಾಗಿಲುಗಳಿವೆ.

ಎರಡನೆಯ ದೇವರಾಯನ ಕಾಲದಲ್ಲಿ (ಕ್ರಿ.ಸ. ೧೪೨೪-೧೪೪೬) ಪಟ್ಟಣವು ಸಮೃದ್ಧಿಯಿಂದಿ ವಿಜೃಂಭಿಸಿತು. ಆಗಲೇ ರಾಜ್ಯದ ವಿಸ್ತಾರ ಹೆಚ್ಚುತ್ತಾ ಹೋಯಿತು. ಹಾಗಾಗಿ ಇಮ್ಮಡಿ ದೇವರಾಯನು ಕೋಟೆಯ ನಾಲ್ಕನೆಯ ಸುತ್ತನ್ನು ಕಟ್ಟಿಸಿರಬಹುದು.[6] ಇದು ಪ್ರಸ್ತುತ ಆಗ್ನೇಯ ಹಾಗೂ ನೈರುತ್ಯ ಭಾಗಗಳಲ್ಲಿ ಮಾತ್ರ ಉಳಿದುಕೊಂಡಿದೆ. ಇದರೊಳಗೆ ವರದರಾಜಮ್ಮನ ಪಟ್ಟಣವಿತ್ತು. ಈ ಕೋಟೆಯ ಸುತ್ತಿನಲ್ಲಿ ಪೆನುಗೊಂಡ ಬಾಗಿಲು ಇರುವುದನ್ನು ಶಾಸನದಲ್ಲಿ ಕಾಣಬಹುದು.[7]

ಕೋಟೆಯ ಕೊನೆಯ ಸುತ್ತಿನ ಹೊರಗೆ ಇನ್ನೊಂದು ತೆರನಾದ ಸಂರಕ್ಷಣಾ ವ್ಯವಸ್ಥೆ ಇದ್ದುದು ಕ್ರಿ.ಶ. ೧೫೦೨ ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಪೋರ್ಚ್‌ಗೀಸ್ ಪ್ರವಾಸಿ ಡಾಮಿನಿಗೊ ಪಾಯಸ್‌ನಿಂದ ತಿಳಿಯುತ್ತದೆ. ಕೆಳಮಟ್ಟದಲ್ಲಿಯ ಭೂಮಿಯಲ್ಲಿ ಎದೆಮಟ್ಟದ ಚೂಪಾದ ಕಲ್ಲುಗಳನ್ನು ನೆಟ್ಟಿದ್ದರು. ಇವು ಗುಡ್ಡ ಪ್ರದೇಶಗಳನ್ನು ತಲುಪುವವರೆಗೆ ಮುಂದುವರೆದಿದ್ದವು. ಇಂತಹ ಕಲ್ಲುಗಳನ್ನು ಕುದುರೆ ಮತ್ತು ಮನುಷ್ಯನ ಚಲನೆಯನ್ನು ತಡೆಯಲು ನೆಟ್ಟಿದುದನ್ನು ಅಬ್ದುಲ್ ರಜಾಕ್ ಸಹ ದಾಖಲಿಸಿದ್ದಾನೆ. ಈ ಕಲ್ಲುಗಳು ಈಗ ಹಂಪಿ ಪರಿಸರದಲ್ಲಿ ಕಾಣದಿದ್ದರೂ ಕಂಪಿಲ, ಕುಮಾರರಾಮರ ಕಮ್ಮಟದುರ್ಗದಲ್ಲಿ ಕಾಣಬಹುದು.

ಕೋಟೆಯ ಕೊನೆಯ ಸುತ್ತು ಕಮಲಾಪುರದ ರಾಯರ ಕೆರೆಯ ಹಿಂಭಾಗದಿಂದ ಸಾಗಿ ಮಲಪನಗುಡಿಯ ಮೂಲಕ ಹೊಸಪೇಟೆಯನ್ನು ಬಳಸಿಕೊಂಡು ಈಗಿನ ತುಂಗಭದ್ರಾ ಆಣೆಕಟ್ಟಿನ ಹಿಂಭಾಗದವರೆಗೂ ವಿಸ್ತಾರಿಸುವುದನ್ನು ಗುರುತಿಸಬಹುದು. ಇದಕ್ಕೆ ಪೂರಕವೆಂಬಂತೆ ಮಲಪನಗುಡಿ ಹಾಗೂ ತುಂಗಭದ್ರಾ ಆಣೆಕಟ್ಟಿನ ಹಿಂಬದಿಯಲ್ಲಿ ಪ್ರವೇಶದ್ವಾರಗಳಿವೆ. ಆಣೆಕಟ್ಟಿನ ಹಿಂಬದಿಯ ದ್ವಾರಕ್ಕೆ ಗೋವಾ ಗೇಟ್ ಎಂದು ಕರೆಯಲಾಗುತ್ತಿದೆ. ಅದು ಇಂದಿಗೂ ಸುಸ್ಥಿತಿಯಲ್ಲಿದೆ. ಪ್ರಾಯಶಃ ವಿಜಯನಗರದಿಂದ ಗೋವಾಕ್ಕೆ ಹೋಗುವವರಿಗೆ ಹಾಗೂ ಬರುವವರಿಗಾಗಿ ಈ ಗೇಟ್ ಬಳಕೆಯಾಗುತ್ತಿದ್ದರಿಂದ ಗೋವಾ ಗೇಟ್ ಎಂದೇ ಖ್ಯಾತಿಯಾಗಿದೆ. ಇದು ಹಂಪಿಯ ಹಿಂಭಾಗದಿಂದ ನಗರಕ್ಕೆ ಪ್ರವೇಶವನ್ನು ಕೊಡುತ್ತಿತ್ತು.

ಸುಮಾರು ಮುನ್ನೂರು ವರ್ಷಗಳ ಕಾಲ ವಿಜೃಂಭಿಸಿದ ವಿಜಯನಗರ ಅವಸಾನ ಹೊಂದುವ ಕಾಲ ಹತ್ತಿರವಾಯಿತು. ಕ್ರಿಶ. ೧೫೬೫ ರಲ್ಲಿ ರಕ್ಕಸತಂಗಡಿಯಲ್ಲಿ ನಡೆದ ನಿರ್ಣಾಯಕ ಕದನದಲ್ಲಿ ವಿಜಯನಗರ ಪರಾಜಯ ಹೊಂದಿತು. ಆಗ ಅಳಿಯ ರಾಮರಾಯ ಹತನಾದ ಉಳಿದ ತಿರುಮಲ ರಾಜಧಾನಿಗೆ ಹಿಂದಿರುಗಿ ರಾಣಿವಾಸದವರನ್ನು ಹಾಗೂ ಬಂಧು ವರ್ಗದವರನ್ನು ಸಾಧ್ಯವಾದಷ್ಟು ಧನಕನಕಗಳನ್ನು ಸಾವಿರಾರು ಆನೆಗಳ ಮೇಲೆ ಹೇರಿಕೊಂಡು ಚಂದ್ರಗಿರಿಗೆ ಹೋದನೆಂದು ಕಂಡುಬರುತ್ತದೆ. ಬೆನ್ನಟ್ಟಿ ಬಂದ ಶತ್ರುಸೇನೆ ರಾಜಧಾನಿಯನ್ನು ಬೆಂಕಿ, ಖಡ್ಗ, ಹಾರೆ ಮತ್ತು ಕೊಡಲಿಗಳಿಂದ ಐದು ತಿಂಗಳು ಕಾಲ ಧ್ವಂಸ ಮಾಡಿ ಹಾಳುಗೆಡುವಿತಂತೆ. ಆಗ ಕೋಟೆಯ ಬಹುತೇಕ ಭಾಗಗಳು ಭಗ್ನಗೊಂಡಿವೆ.

ಸ್ವಾಭಾವಿಕವಾಗಿ ರಾಜಧಾನಿಯನ್ನು ಕಟ್ಟುವಾಗ, ಈ ಸ್ಥಳವನ್ನು ಆಯ್ಕೆ ಮಾಡಲು ರಕ್ಷಣೆ ನೀಡುವ ನದಿ ಮತ್ತು ಗುಡ್ಡಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ರಾಜಧಾನಿಯ ಉತ್ತರಕ್ಕೆ ತುಂಗಭದ್ರಾನದಿ ಮತ್ತು ಗುಡ್ಡಗಳ ಸಾಲು ನೈಸರ್ಗಿಕ ರಕ್ಷಣೆಯನ್ನು ನೀಡುತ್ತವೆ. ಪೂರ್ವ ದಿಕ್ಕಿಗೂ ಅನೇಕ ಗುಡ್ಡಗಳ ಸಾಲುಗಳಿವೆ. ಈ ಗುಡ್ಡಗಳ ಮಧ್ಯದಲ್ಲಿ, ಮೇಲೆ ಕೆಲವೆಡೆ ನೆಲಮಟ್ಟದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಭದ್ರವಾದ ಕೋಟೆಯು ಅನೇಕ ಸುತ್ತುಗಳಲ್ಲಿದ್ದು, ರಾಜಧಾನಿಯನ್ನು ರಕ್ಷಿಸುತ್ತಿತ್ತು. ಈ ಮೇಲಿನ ಅಂಶಗಳಿಂದ ಇದು ನೆಲ, ಗಿರಿ ಮತ್ತು

ಜಲದುರ್ಗದ ಲಕ್ಷಣಗಳನ್ನು ಹೊಂದಿದೆ. ಸಂಪ್ರದಾಯ ಹಾಗೂ ವಿದೇಶಿ ಪ್ರವಾಸಿಗರ ಪ್ರಕಾರ ವಿಜಯನಗರ ಏಳುಸುತ್ತಿನ ಕೋಟೆಯಿಂದ ಸುತ್ತುವರೆಯಲ್ಪಟ್ಟಿತು. ಈಗ ಕೆಲವು ಸುತ್ತುಗಳು ಮಾತ್ರ ಕಾಣುತ್ತವೆ.

ಆಳ್ವೇರಿಗಳು ಬಹಳ ದಪ್ಪವಾಗಿದ್ದು, (ಆಳ್ವೇರಿ ಎಂದರೆ ಕೋಟೆ ಗೋಡೆ) ಹೊರಮೈಗೆ ದಪ್ಪ ಕಲ್ಲುಗಳಿದ್ದು, ಒಳಮೈಗೆ ಮಣ್ಣಿನ ಇಳಿವೊರೆ (ramp) ಇದೆ. ಹೊರಭಾಗದಲ್ಲಿ ದೊಡ್ಡ ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆಯನ್ನು ಉಪಯೋಗಿಸದೆ ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ದೊಡ್ಡ ಕಲ್ಲುಗಳನ್ನು ಮೇಲೆಕ್ಕೆತ್ತಲು ಆಗುವ ಭಾರವನ್ನು ಕಡಿಮೆ ಮಾಡುವುದಕ್ಕಾಗಿ ಬೆಣೆಯಾಕಾರದ (wedge-shaped) ಕಲ್ಲುಗಳನ್ನು ಬಹಳ ಜಾಣ್ಮೆಯಿಂದ ಆಯಾತಾಕಾರದ ಕಲ್ಲುಗಳ ಬದಲಿಗೆ ಉಪಯೋಗಿಸಲಾಗಿದೆ. ಇವುಗಳ ಹೊರಭಾಗ ಅಗಲವಾಗಿದ್ದು, ಒಳಭಾಗವು ಚೂಪಾಗಿರುತ್ತದೆ. ಒಳಭಾಗದಲ್ಲಿ ಕಲ್ಲುಗಳ ಮಧ್ಯದ ಸಂದುಗಳನ್ನು ಸಣ್ಣಕಲ್ಲು ಮತ್ತು ಮಣ್ಣಿನಿಂದ ತುಂಬಲಾಗಿದೆ. ವಿಜಯನಗರದ ಅರಸರ ಈ ತಂತ್ರಜ್ಞಾನದ ಫಲವಾಗಿ ಗಾರೆ, ಸಿಮೆಂಟ್‌ಗಳಿಲ್ಲದೆ ಬೃಹತ್‌ಗಾತ್ರದ ಕೋಟೆಗೋಡೆ ಇಂದಿಗೂ ಉಳಿದಿದೆ. ಕೋಟೆಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಅಲ್ಲಲ್ಲಿ ಚೌಕಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಕೊತ್ತಳಗಳ ಹೊರಗಿನ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸುವ ವೀಕ್ಷಣಾ ಕೇಂದ್ರವಾಗಿದ್ದರಿಂದ ಅದರೊಳಗೆ ಅಂಬುಗುಂಡಿಯಿದ್ದಿರಬೇಕು. ಅಪಾಯಕಾರಿ ವ್ಯಕ್ತಿಗಳನ್ನು ಕಂಡೊಡನೆ ಕೊತ್ತಳದೊಳಗಿಂದಲೇ ಪ್ರಹರಿಸಿ ಬಿಡುತ್ತಿದ್ದರು. ಅಂಬುಗಂಡಿ ಮತ್ತು ಕೊತ್ತಳ ಬೇರೆ ಬೇರೆ ಅಲ್ಲ. ಕೊತ್ತಳದೊಳಗೇ ಅಂಬುಗಂಡಿಯಿರುತ್ತಿತ್ತು. ವಿರಾಜಿತ ಗೊಂಟುಗೊಂಡಿನೊಳ್‌ಬಳಸಿದ ಕೊತ್ತಳಂ ಹರಿಹರನ ವರ್ಣನೆಯಾಗಿದೆ. ಈ ಕೊತ್ತಳಗಳು ಚೌಕಾಕಾರದಲ್ಲಿದ್ದು ಮುಂದೆ ಚಾಚಿಕೊಂಡಿರುವ ಕೋಟೆ ಗೋಡೆಯ ಭಾಗಗಳಗಿವೆ. ಯುದ್ಧದ ಸಮಯದಲ್ಲಿ ಹೆಚ್ಚು ಸೈನಿಕರು ನಿಲ್ಲಲು ಸಹ ಕೊತ್ತಳಗಳು ಉಪಯೋಗವಾಗುತ್ತವೆ. ಕೊತ್ತಳಗಳ ಮೇಲೆ ಕಾವಲಿನವರು ನಿಂತು ಕೋಟೆಯನ್ನು ಸಂರಕ್ಷಿಸುತ್ತಿದ್ದರು. ಇವರಿಗಾಗಿ ನಿರ್ಮಿಸಿದ ಚಿಕ್ಕ ಕಟ್ಟಡಗಳ ಅವಶೇಷಗಳು ಕೆಲವು ಕೊತ್ತಳಗಳ ಮೇಲೆ ಈಗಲೂ ಕಾಣುತ್ತಿವೆ. ಕೋಟೆ ಪಕ್ಕದಲ್ಲಿ ನೈಸರ್ಗಿಕವಾಗಿ ಎತ್ತರದಲ್ಲಿರುವ ಕೆಲವು ಸ್ಥಳಗಳನ್ನು ಸಹ ಕೊತ್ತಳಗಳಂತೆ ಉಪಯೋಗಿಸಲಾಗಿದೆ. ಕೋಟೆಯ ಪಕ್ಕದಲ್ಲಿದ್ದ ಅಗಳು ಎಂದರೆ ಕಂದಕ ಅಥವಾ ತಗ್ಗಾದ ಪ್ರದೇಶ ಕಂದಕಕ್ಕೆ ಅಗಳು, ನಿರ್ಗಾದಿಗೆ ಪರಿಖೆ ಎಂಬ ಪದಗಳನ್ನು ಪರ್ಯಾಯವಾಗಿ ಬಳಸಿದೆ. ಈಗ ಮುಚ್ಚಿಹೋಗಿದೆ.

ಸಾಮಾನ್ಯವಾಗಿ ಬಾಗಿಲುಗಳ ಪಾರ್ಶ್ವದಲ್ಲಿ ಎರಡು ದೊಡ್ಡ ಕೊತ್ತಳಗಳಿವೆ. ಬಾಗಿಲನ ಮೂಲಕ ಅಂಕುಡೊಂಕಾದ ದಾರಿಯಲ್ಲಿ ಒಳಪ್ರವೇಶಿಸಲು ಪ್ರಯತ್ನಿಸುವ ವೈರಿ ಪಡೆಯನ್ನು ಕೋಟೆ ಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸೆದೆ ಬಡಿಯಲು ಅನುಕೂಲವಾಗುತ್ತಿತ್ತು. ಈ ಬಗ್ಗೆ ಹಾನಗಲ್ಲು, ಲಕ್ಷ್ಮೇಶ್ವರ ಇತ್ಯಾದಿ ಶಾಸನಗಳಲ್ಲಿ ಹಾಗೂ ಮಧ್ಯಕಾಲೀನ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು. ಬಾಗಿಲುಗಳಲ್ಲಿ ಕಾವಲುಗಾರರಿರುತ್ತಿದ್ದರು. ಇವರು ಖಡ್ಗ, ದೊಣ್ಣೆ ಮತ್ತು ಚಾವಟಿಗಳನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಇಂತಹ ಕೆಲವು ಶಿಲ್ಪಗಳನ್ನು ಬಾಗಿಲುಗಳ ತೋಳಗಂಬಗಳ ಮೇಲೆ ಕೆತ್ತಲಾಗಿದೆ. ಈ ವಿಶಾಲವಾದ ರಾಜಧಾನಿಯ ರಕ್ಷಣೆಗಾಗಿ ಬಲಾಢ್ಯವಾದ ಕೋಟೆಯನ್ನು ಹಂಪಿಯಲ್ಲಿ ವಿಜಯನಗರದರಸರು ನಿರ್ಮಿಸಿಕೊಂಡಿದ್ದರು. ದೇಶೀಯ ಹಾಗೂ ವಿದೇಶಿಯರ ಸಾಹಿತ್ಯಾಧಾರಗಳಲ್ಲಿ ಹಂಪಿಯು ಏಳುಸುತ್ತಿನ ಕೋಟೆಯನ್ನು ಹೊಂದಿರುವ ಬಗ್ಗೆ ಮಾಹಿತಿಗಳಿವೆ. ಪ್ರಸ್ತುತ ನಮಗೆ ಕಂಡುಬರುವುದು ಹರಕುಮುರುಕು ನಾಲ್ಕು ಸುತ್ತುಗಳು ಮಾತ್ರ.

ಈ ಕೋಟೆಯ ಪ್ರವೇಶಕ್ಕೆ ಯೋಗ್ಯವಾದ ಹಾಗೂ ಕೆಲವು ಸೂಕ್ಷ್ಮ ಸ್ಥಳಗಳನ್ನು ರಕ್ಷಣೆಗೆ ಯೋಗ್ಯ ರೀತಿಯಲ್ಲಿ ಗುರುತಿಸಿ ಪ್ರವೇಶದ್ವಾರಗಳನ್ನು ನಿರ್ಮಿಸಲಾಗಿದೆ. ಪ್ರತಿ ಮನೆಗೂ ಬಾಗಿಲುಗಳು ಇದ್ದಹಾಗೆ ಪ್ರತಿ ಕೋಟೆಗೂ ಪ್ರವೇಶ ದ್ವಾರಗಳಿರುತ್ತವೆ. ಕೋಟೆಗಳಿರುವ ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು, ದಿಡ್ಡಿಬಾಗಿಲು ಎಂದು ಹೆಸರಿಸಲಾಗಿದೆ. ಪುಲಿಮೊಗ (ಪುಲಿಮೊಗದ ಬಗ್ಗೆ ಸಾಕಷ್ಟು ಸಾಹಿತ್ಯಿಕ ಆಧಾರಗಳಿವೆ) ಇದು ಕೋಟೆಗೆ ಇರುವ ಹೆಬ್ಬಾಗಿಲನ್ನು ಸೂಚಿಸುತ್ತದೆ. ಹೆಬ್ಬಾಗಿಲು ಐದು ಕೈಗಳ ಉದ್ದ, ಐದು ಕೈಗಳ ಅಗಲ

ಮಾಡಬೇಕು. ಕುದುರೆ ಹತ್ತಿ ಬರುವವನ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆ ದ್ವಾರವನ್ನು ಮಾಡಬೇಕೆಂದು ಈ ಕೆಳಗಿನ ಶ್ಲೋಕ ಹೇಳುತ್ತದೆ.

ಅಶ್ವಾರೂಢ ಸಮಾಯಾತೇತಸೊ ಪರಿತಥೋಭಯಂ
ಹಸ್ತ ಮಾತ್ರ ಪ್ರಾಮಣೇನದ್ವಾರಂ ಕುರ್ಯಾದ್ವಿಚಕ್ಷಣಃ ||[8]

ಕೋಟೆಗೆ ಚೋರಕಿಂಡಿಗಳನ್ನು ಜೋಡಿಸಿರುತ್ತಿದ್ದರು, ಪೂರ್ವಾದಿ ದಿಕ್ಕುಗಳಾಗಲಿ ಅಗುಳಿಯ ಬಾಗಿಲವುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತಕವಿಗಳಿಗೂ ಅಸಾಧ್ಯವಾದುದು ಎಂದು ಮೋಹನ ತರಂಗಣಿಯಲ್ಲಿ ವರ್ಣಿತವಾಗಿದೆ.

ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆ
ರ್ಗದ ವಜ್ರಲಾಳ ವಿಂಡಿಗೆಯ
ಅದಟನ ದ್ವಾರಷ್ಟಕವ ವರ್ಣಿಸುವೊಡೆ
ಪದಕವಿ ಗಳಿ ಗೋಚರವು[9]

ಮಹತ್ವದ ವಿಜಯನಗರದ ರಾಜಧಾನಿ ಹಂಪಿ ಕೋಟೆಯ ದ್ವಾರಬಾಗಿಲು, ವಿಶೇಷಣೆಯ ಉದ್ದೇಶವನ್ನು ಇಲ್ಲಿ ವಿವರಿಸಲಾಗಿದೆ. ಮುಖ್ಯವಾದ ಹಂಪಿಕೋಟೆಯ ಪ್ರವೇಶ ದ್ವಾರಗಳಲ್ಲಿ ಸಿಂಘಾರದ ಹೆಬ್ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಗುಮ್ಮಟ್ಟದ ಹೆಬ್ಬಾಗಿಲು, ಕೋಟೆಶಂಕರದೇವರ ಬಾಗಿಲು, ಭೀಮನ ಹೆಬ್ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಹರೆಶಂಕರ ಬಾಗಿಲು, ಪೆನುಗೊಂಡಬಾಗಿಲು ೧. ಪೆನುಗೊಂಡೆ ಬಾಗಿಲು, ೨. ಜಡೆಯ ಶಂಕರ ದೇವರದಿಡ್ಡಿ, ಹಂಪಾದೇವಿ ದಿಡ್ಡಿ, ರೆಮ್ಮ ದಿಡ್ಡಿ ಮುಖ್ಯವಾಗಿವೆ.

ಕೋಟೆ ಗೋಡೆಗಳಲ್ಲಿರುವ ಬಾಗಿಲುಗಳು ಒಂದೇ ತೆರನಾಗಿಲ್ಲ. ಪ್ರಾಮುಖ್ಯತೆ ಹಾಗೂ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಬಾಗಿಲುಗಳನ್ನು ವಿಜಯನಗರದವರು, ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವಿಂಗಡಿಸಿದ್ದುದು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಹೆಬ್ಬಾಗಿಲುಗಳು ಅತಿದೊಡ್ಡವು ಇವುಗಳನ್ನು ಮುಖ್ಯಪ್ರವೇಶ ದ್ವಾರಗಳಾಗಿ ಉಪಯೋಗಿಸುತ್ತಿದ್ದರು. ಬಾಗಿಲುಗಳ ಮಧ್ಯಮಗಾತ್ರದವು ದಿಡ್ಡಿಗಳು ಚಿಕ್ಕ ಬಾಗಿಲುಗಳಾಗಿದ್ದು ಜನರು ತಮ್ಮ ದಿನನಿತ್ಯದ ಕೆಲಸಗಳಿಗಾಗಿ ಪಟ್ಟಣದ ಎಲ್ಲಾ ದಿಕ್ಕಿಗೂ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ನಿರ್ಮಿಸಲ್ಪಟ್ಟಿದೆ. ವಿನ್ಯಾಸವನ್ನು ಯುದ್ಧ ತಂತ್ರದ ದೃಷ್ಟಿಯಿಂದ ಬಹಳ ಎಚ್ಚರಿಕೆಯಿಂದ ಮಾಡಲಾಗಿದೆ. ಕೋಟೆಯೊಳಗೆ ನೇರವಾದ ಪ್ರವೇಶವನ್ನು ಇವು ನೀಡುವುದಿಲ್ಲ. ದೂರದಿಂದ ನೋಡಿದಾಗ ಪ್ರವೇಶ ದ್ವಾರವೇ ಕಾಣುವುದಿಲ್ಲ. ಪ್ರವೇಶದ್ವಾರದ ಎರಡೂ ಪಾರ್ಶ್ವದಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ತೆರೆಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಎರಡನೆಯ ಪ್ರವೇಶದ್ವಾರವನ್ನು ಕಲ್ಪಿಸಲಾಗಿದೆ. ಹೀಗಾಗಿ ಒಳಗೆ ಬರುವ ದಾರಿ ಅಂಕುಡೊಂಕಾಗಿರುವುದು. ಸಾಮಾನ್ಯವಾಗಿ ಬಾಗಿಲುಗಳ ಪಾರ್ಶ್ವದಲ್ಲಿ ಎರಡು ದೊಡ್ಡ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕುಡೊಂಕಾದ ದಾರಿಯಲ್ಲಿ ಒಳ ಪ್ರವೇಶಿಸಲು ಪ್ರಯತ್ನಿಸುವ ವೈರಿ ಸೈನ್ಯವನ್ನು ಕೋಟೆ ಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸದೆ ಬಡಿಯಲು ಅನುಕೂಲವಾಗುತ್ತಿತ್ತು. ಬಾಗಿಲುಗಳಲ್ಲಿ ಕಾವಲುಗಾರರಿರುತ್ತಿದ್ದರು. ಇವರು ಖಡ್ಗ, ದೊಣ್ಣೆ ಮತ್ತು ಚಾವಟಿಗಳನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಇಂತಹ ಕೆಲವು ಶಿಲ್ಪಗಳನ್ನು ಬಾಗಿಲುಗಳ ತೋಳಗಂಬಗಳ ಮೇಲೆ ಕೆತ್ತಲಾಗಿದೆ.

ಪ್ರವೇಶದ್ವಾರಗಳನ್ನು ಕಂಬ ಮತ್ತು ತೊಲೆಗಳಿಂದ, ಇಟ್ಟಿಗೆ, ಗಾರೆ, ಬಳಸದೆ, ಹಿಂದೂ ಶೈಲಿಯಲ್ಲಿ ಕಟ್ಟಲಾಗಿದೆ. ಬಾಗಿಲು ತೋಳುಗಳು ಮೇಲೆ ದ್ವಾರಪಾಲಕರು ಮತ್ತು ಆಲಂಕಾರಕ ಶಾಖೆಗಳನ್ನು ಕೆತ್ತಿದೆ. ಪ್ರವೇಶಕ್ಕಿಂತ ಮೊದಲು ದೊಡ್ಡ ಆವರಣವಿದೆ. ಪ್ರವೇಶದ ಇಕ್ಕೆಲಗಳಲ್ಲಿ

ಕಂಬಗಳ ಅಂಕಣಗಳುಳ್ಳ ಕಟ್ಟೆಗಳಿವೆ. ಸೈನಿಕರು ಮತ್ತು ಪ್ರವಾಸಿಗರು ವಿಶ್ರಾಂತಿ ಪಡೆಯಲು ಇವು ಅನುಕೂಲವಾಗಿವೆ. ಮುಖ್ಯ ಪ್ರವೇಶದ ಕದಗಳನ್ನು ಹಾಕಿದಾಗ ದಾರಿಯನ್ನು ಪಕ್ಕದಲ್ಲಿ ಇಂಗ್ಲಿಷ್‌ನ U – ಆಕಾರದ ಉಪ ಪ್ರವೇಶಗಳನ್ನು ಒದಗಿಸಿವೆ. ಕೆಲವು ಪ್ರವೇಶ ದ್ವಾರಗಳ ರಚನೆಯಲ್ಲಿ ಮುಸ್ಲಿಂ ವಾಸ್ತುವಿನ ಪ್ರಭಾವವು ಕಾಣುತ್ತದೆ. ಗುಮ್ಮಟದ ಬಾಗಿಲೆಂದೆ ಕರೆಯುವ ಪ್ರವೇಶದ್ವಾರದ ಮೇಲಿನ ಗುಮಟ್ಟದ ಮತ್ತು ಬೇಟೆಕಾರರ ಹೆಬ್ಬಾಗಿಲುಮತ್ತು ಅರೆಶಂಕರ ಬಾಗಿಲುಗಳ ಮೇಲಿನ ಕಮಾನುಗಳು ಮುಸ್ಲಿಂ ಶೈಲಿಯಲ್ಲಿವೆ. ಕೆಲವು ಬಾಗಿಲುಗಳ ಗೋಡೆಗಳನ್ನು ಶಿಲ್ಪಗಳಿಂದ ಅಲಂಕರಿಸಿದೆ. ಹಾಗೂ ಕೆಲವು ಬಾಗಿಲುಗಳ ಆವರಣದಲ್ಲಿ ದೇವಾಲಯಗಳಿವೆ.

ವಿಜಯನಗರದ ಕೋಟೆಯು ಬಹುದೊಡ್ಡದಿದೆ. ಇದರ ಭಾಗಗಳನ್ನು ವೇಗವಾಗಿ ಪತ್ತೆ ಹಚ್ಚುವುದು ಯುದ್ಧ ಸಮಯದಲ್ಲಿ ಅತ್ಯವಶ್ಯಕವಾಗುತ್ತದೆ. ಕೋಟೆಯ ಯಾವುದಾದರೊಂದು ಭಾಗಕ್ಕೆ ಸೈನಿಕರನ್ನು ಕಳುಹಿಸುವಾಗ ಅವರು ಯಾವುದೇ ಗೊಂದಲಕ್ಕೊಳಪಡದೆ ನೇರವಾಗಿ ವೇಗದಲ್ಲಿ ಹೋಗಿ ಆ ಭಾಗವನ್ನು ಸೇರುವಂತೆ ಕೋಟೆಯ ವಿವಿಧ ಭಾಗಗಳಿಗೆ ಹೆಸರುಗಳನ್ನು ಕೊಟ್ಟು ಗುರುತಿಸುವುದು ಅತಿಮುಖ್ಯವಾದ ವಿಷಯ. ಹಂಪಿ ಕೋಟೆಯಲ್ಲಿ ಇಂತಹ ವ್ಯವಸ್ಥೆ ಇದ್ದುದು ಇತ್ತೀಚೆಗಷ್ಟೆ ಪತ್ತೆ ಮಾಡಿ ಹೊರತಂದ ಹಲವಾರು ಶಾಸನಗಳಿಂದ ಬೆಳಕಿಗೆ ಬಂದಿದೆ. ಕೋಟೆಯ ಬಾಗಿಲುಗಳಿಗೆ ಹಾಗೂ ಕೊತ್ತಳಗಳಿಗೆ ಹೆಸರುಗಳನ್ನಿಟ್ಟು ಅವುಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಶಾಸನ ಮತ್ತು ಇತರೆ ಆಧಾರದ ಮೇಲೆ ಇದುವರೆಗೆ ಪತ್ತೆ ಹಚ್ಚಿದ ಬಾಗಿಲು ಹಾಗೂ ಕೊತ್ತಳಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

**ಸಿಂಘಾರದ ಹೆಬ್ಬಾಗಿಲು**

ರಾಜಧಾನಿ ಸಿಂಘಾಪುರಕ್ಕೆ ಈ ಹೆಬ್ಬಾಗಿಲು ಪ್ರವೇಶ ನೀಡುವುದರಿಂದ ಇದನ್ನು ಸಿಂಘಾರದ ಹೆಬ್ಬಾಗಿಲೆಂದು ಕರೆಯಲಾಗಿದೆ. ಹಿಂಭಾಗದಲ್ಲಿ ಈ ಹೆಬ್ಬಾಗಿಲು ಬರುತ್ತದೆ. ಇದರ ಉಲ್ಲೇಖವು ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕಿರುವ ಚಿಕ್ಕ ಬೆಟ್ಟವೊಂದರ ಬಂಡೆಯ ಮೇಲಿರುವ ಶಾಸನಗಳಲ್ಲಿ ಬರುತ್ತದೆ.[10] ದೂರದಿಂದ ನೋಡಿದಾಗ ಈ ಹೆಬ್ಬಾಗಿಲು ಕಾಣುವುದಿಲ್ಲ. ಪ್ರವೇಶ ದ್ವಾರದ ಎರಡೂ ಬದಿಗೆ ಬಲಿಷ್ಠವಾದ ಗೋಡೆಗಳಿವೆ. ಮುಂಭಾಗದಲ್ಲಿಯೂ ಇದೇ ರೀತಿಯ ಗೋಡೆಗಳಿವೆ. ಹಾಗಾಗಿ ಒಳಗೆ ಬರುವ ದಾರಿಯು ಅಂಕುಡೊಂಕಾಗುವುದು. ಮಧ್ಯದಲ್ಲಿ ವಿಶಾಲವಾದ ಆವರಣವಿದೆ. ಈ ಆವರಣದ ಎಡಭಾಗದ ವೇದಿಕೆಯ ಮೇಲೆ ವೈಷ್ಣವ ದೇವಾಲಯವಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರವೇಶದ್ವಾರದ ಎರಡೂ ಬದಿಗೆ ಬಾಗಿಲು ತೋಳುಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬದಲ್ಲಿ ಯಾಳಿ, ಆಂಜನೇಯ ಇತ್ಯಾದಿ ಉಬ್ಬುಗೆತ್ತನೆಗಳಿವೆ. ಆವರಣದ ಪಶ್ಚಿಮದ ಗೋಡೆಯಲ್ಲಿ ಗಣೇಶ, ಸಿಂಗಾರ ಮಾಡಿಕೊಳ್ಳುವ ಸ್ತ್ರೀ, ನಂದಿ, ಆನೆ, ವೀರರ ಉಬ್ಬುಶಿಲ್ಪಗಳಿವೆ. ಬಾಗಿಲು ತೋಳುಗಳಲ್ಲಿ ಎರಡೂಬದಿಗೆ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಪ್ರವೇಶದ್ವಾರದ ಉಪಬಾಗಿಲನ್ನು ನಿರ್ಮಿಸಲಾಗಿದೆ. ಈ ದ್ವಾರದ ಮೂಲಕ ಪಶ್ಚಿಮಕ್ಕೆ ಸಾಗಿದರೆ ಸಿಂಘಾರಪುರ ಪ್ರವೇಶ ಸಿಗುವುದು. ಸಿಂಘಾರಪುರದ ಉಲ್ಲೇಖ ಬರುವ ಶಾಸನವು ವಿಠ್ಠಲಸ್ವಾಮಿ ದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿದೆ.[11]

**ಬೇಟೆಕಾರರ ಹೆಬ್ಬಾಗಿಲು**

ವಿಜಯನಗರ ಕಾಲದಲ್ಲಿ ಬೇಟೆಗೆ ಪ್ರಧಾನ ಪಾತ್ರವಿತ್ತು. ಅಂತೆಯೇ ಅರಸರು ತಮ್ಮ ಮನೋರಂಜನೆಗಾಗಿ ಬೇಟೆಯಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಅಡವಿಯಲ್ಲಿ ಬೇಟೆಯಾಡಿ ಈ ದ್ವಾರದ ಮೂಲಕ ನಗರದೊಳಕ್ಕೆ ಪ್ರವೇಶ ಮಾಡಲಾಗುತ್ತಿತ್ತು. ಹಾಗಾಗಿ ಇದನ್ನು ಬೇಟೆಕಾರರ ಹೆಬ್ಬಾಗಿಲೆಂದು ಕರೆಯಲಾಗಿದೆ. ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯ ದಿಕ್ಕಿಗೆ ಬೇಟೆಕಾರರ ಹೆಬ್ಬಾಗಿಲು ಕಂಡುಬರುತ್ತದೆ. ಹೆಬ್ಬಾಗಿಲಿನ ಪೂರ್ವಕ್ಕಿರುವ ಕಲ್ಲು ಗುಂಡಿನ ಮೇಲಿರುವ ಶಾಸನವು ಈ ಕೆಳಗಿನಂತಿದೆ.

ಶ್ರೀ ಶಕ ವರುಷ ೧೩೧೨ರ ಉದ್ರಿ ಸಂವತ್ಸರದ ಆಶ್ವೀಜ ಸು ರಾ ಗು ಶ್ರೀ ಮನ್ಮಹಾರಾಹಾಧಿರಾಜ ರಾಜ ಪರಮೇಶ್ವರ ಶ್ರೀವೀರ ಪ್ರತಾಪ ಹರಿಹರ ಮಹಾರಾಯರರಮನೆಯ ಎಡವಂಕದ ಬೇಟೆಕಾರ ಮಲಗೆಯ ನಾಯ್ಕನ ಮಗ ಬಥ್ಥೆಯನಾಯ್ಕನು 'ಬೇಟೆಕಾರರ ಹೆಬ್ಬಾಗಿಲ' ಮೂಡಣ ದಿಕ್ಕಿನ ಒರತೆಯ ಮೈಲಾರದೇವರ ಪುತಿಷ್ಠೆ ಅಗ್ನಿ ದಿಸೆಯ ಆಲದ ಅರವೆ ಆ ದೇವರ ಹಿಂದಣ ವಾಯುವ್ಯದ ದಿಕ್ಕಿ[12]ನ ಒರತೆಯ್ಯ್ಕ ಕೊಂಡವನು ಮಾಡಿದನು ಮಂಗಳ ಮಹಾ ಶ್ರೀ ಶ್ರೀ ಶ್ರೀ

ಈ ಶಾಸನವು ಭೇಟೆಕಾರರ ಹೆಬ್ಬಾಗಿಲಿನ ಪರಿಚಯವನ್ನು ಸ್ಪಷ್ಟವಾಗಿ ಮಾಡಿಕೊಡುತ್ತದೆ. ಈ ಹೆಬ್ಬಾಗಿಲು ಸಿಂಘಾರದ ಹೆಬ್ಬಾಗಿಲಿನಂತೆ ಪ್ರಧಾನವಾದ ಮಹಾದ್ವಾರವೆನಿಸಿದೆ. ಸಿಂಘಾರದ ಹೆಬ್ಬಾಗಿಲು ೩ನೇ ಹಂತಕ್ಕೆ ಪೂರ್ವದಿಂದಲೇ ನಗರಕ್ಕೆ ಪ್ರವೇಶಕೊಟ್ಟರೆ, ಹೊರ ಕೋಟೆಯ ಬೇಟೆಕಾರರ ಹೆಬ್ಬಾಗಿಲು ಮೊದಲಿಗೆ ಪೂರ್ವದಿಂದಲೇ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ. ಇದರ ಸುತ್ತಲೂ ಬೆಟ್ಟ, ಗುಡ್ಡ ಮತ್ತು ಕಾಡು ಆವರಿಸಿದೆ. ಎರಡೂ ಬೆಟ್ಟಗಳ ಸಂಧುಗಳ ಕಣಿವೆ ಉಪಯೋಗಿಸಿ ಬಹು ಜಾಣ್ಮೆಯಿಂದ ಈ ಹೆಬ್ಬಾಗಿಲನ್ನು ಕಟ್ಟಲಾಗಿದೆ. ದೂರದಿಂದ ನೋಡಲು ಕಾಣದಂತೆ ಗೋಡೆಗಳ ಮರೆಯಲ್ಲಿದೆ. ಪ್ರವೇಶದ್ವಾರದ ಪಾರ್ಶ್ವದಲ್ಲಿರುವ ಗೋಡೆಗಳು ವಿಶಾಲ ಆವರಣವನ್ನು ನಿರ್ಮಿಸಿ ಮುಂದೆ ಹಾಗೆಯೇ ಗೋಡೆಗಳನ್ನು ಉತ್ತರಕ್ಕೆ ತಿರುಗಿಸಲಾಗಿದೆ. ಮಧ್ಯದಲ್ಲಿರುವ ವಿಶಾಲವಾದ ಆವರನದಲ್ಲಿ ದಕ್ಷಿಣಾಭಿಮುಖವಾದ ದೇಗುಲವಿದೆ. ಇದು ಗರ್ಭಗೃಹ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಸಭಾಮಂಟಪದಲ್ಲಿ ಆಂಜನೇಯನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಸಭಾಮಂಟಪದ ಮೇಲೆ ಕೈಪಿಡಿ, ಗೋಡೆಯಲ್ಲಿ ದೇವ ಕೋಷ್ಠಕಗಳಿವೆ.

ಬೇಟಕಾರರ ಹೆಬ್ಬಾಗಿಲು ಪೂರ್ಣವಾಗಿ ಗೋಚರಿಸದಿದ್ದರೂ ಇಟ್ಟಿಗೆ ಗಾರೆ ಕಲ್ಲಿನ ಅವಶೇಷಗಳು ವ್ಯಾಪಕವಾಗಿ ಕಂಡುಬರುತ್ತವೆ. ಬೇಟೆಕಾರರಿಗೆ ಪ್ರತ್ಯೇಕ ಹೆಬ್ಬಾಗಿಲನ್ನು ನಿರ್ಮಿಸಿರುವ ವಿಜಯನಗರದರಸನು ಬೇಟೆಗೆ ಬಹು ಪ್ರಾಮುಖ್ಯತೆಯನ್ನು ನೀಡಿದ್ದರು. ಅಂತೆಯೇ ವಿದೇಶಿ ಯಾತ್ರಿಕರಾದ ಅಬ್ದುಲ್ ರಜಾಕ್ ನ್ಯೂನಿಜ್ ಮತ್ತು ಬಾರ್ಬೋಸರು ಬೇಟೆ ಸಂದರ್ಭಗಳನ್ನು ವಿಸ್ತೃತವಾಗಿ ಹೇಳಿದ್ದಾರೆ.[13]

**ಗುಮ್ಮಟದ ಬಾಗಿಲು**

ಕಮಲಾಪುರದ ಈಶಾನ್ಯದಿಕ್ಕಿಗೆ ಸುಮಾರು ೧ ಕಿ.ಮೀ. ದೂರದಲ್ಲಿ ಹೆಚ್.ಪಿ.ಸಿ.ಯ ಬಳಿ ಈ ಗುಮ್ಮಟದ ಬಾಗಿಲಿದೆ. ಗುಮ್ಮಟದಂತಿರುವುದರಿಂದ ಇದನ್ನು ಗುಮ್ಮಟದ ಬಾಗಿಲೆಂದು ಗುರುತಿಸುತ್ತಾರೆ. ಬೃಹದಾಕಾರದ ಆಗೂ ಸುಸ್ಥಿತಿಯಲ್ಲಿರುವ ಹೆಬ್ಬಾಗಿಲುಗಳನ್ನು ಇದು ಒಂದು. ಪೆನುಗೋಡದಿಂದ ಬರುವವರು ಮೊದಲು ಪೆನುಗೊಂಡೆ ಬಾಗಿಲನ್ನು ಬಳಸಿಕೊಂಡು ಗುಮ್ಮಟ ಹಾಗೂ ಭೀಮನ ಹೆಬ್ಬಾಗಿಲುಗಳ ಮೂಲಕ ನಗರ ಪ್ರವೇಶ ಮಾಡುತ್ತಿದ್ದರು. ಹಿಂದೂ ಮುಸ್ಲಿಮ್ ಶೈಲಿಯಲ್ಲಿ ನಿರ್ಮಾಣವಾಗಿರುವ ಸ್ಮಾರಕಗಳಲ್ಲಿ ಗುಮ್ಮಟದ ಬಾಗಿಲು ಒಂದು.

ಪ್ರವೇಶ ದ್ವಾರದ ಮುಂಭಾಗಕ್ಕೆ ೨೦ ಅಡಿ ಅಗಲ ಅಂತರದಲ್ಲಿ ಅಭಿಮುಖವಾದ ಎರಡು ಗೋಡೆಗಳು ದಕ್ಷಿಣಕ್ಕೆ ಮುಂಚಾಚಿವೆ. ಇವುಗಳ ಮುಂದಿರುವುದೇ ವಿಶಾಲವಾದ ಆವರಣ. ಈ ಆವರಣದ ಪಶ್ಚಿಮ ಗೋಡೆಯಲ್ಲಿ ಉಪಬಾಗಿಲನ್ನು ಜೋಡಿಸಲಾಗಿದೆ. ಈ ಆವರಣವನ್ನು ಸುತ್ತುವರೆದಿರುವ ಗೋಡೆಯು ಪೂರ್ವದಿಕ್ಕಿಗೆ ಸುಮಾರು ೧೦೦ ಅಡಿಗಳಷ್ಟು ಉದ್ದವಾಗಿದೆ. ಇದಕ್ಕೆ ಅಭಿಮುಖವಾದ ಇನ್ನೊಂದು ಗೋಡೆ ಇದೆ. ಇದರಲ್ಲಿ ಮೀನು ಮೊಸಳೆ ಉಬ್ಬುಗೆತ್ತನೆಗಳಿವೆ.

ಇದಕ್ಕೆ ಹೊಂದುಕೊಂಡು ಆಂಜನೇಯ ಗುಡಿಯನ್ನು ನಿರ್ಮಿಸಲಾಗಿದೆ. ಇದು ಗರ್ಭಗೃಹ ಮಾತ್ರ ಹೊಂದಿದ್ದು ಅದರಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಈ ಗುಡಿಯ ಎದುರಿನ ಗೋಡೆಯಲ್ಲಿ ಇಮ್ಮಡಿ ದೇವರಾಯನನ್ನು ಪ್ರತಿನಿಧಿಸುವ ಉಬ್ಬುಶಿಲ್ಪವಿದೆ.[14] ಇಲ್ಲಿ ದೊರೆಯು ವಿಜಯನಗರ ಕಾಲದ ಸಾಂಪ್ರದಾಯಿಕ ಉಡುಗೆಯಲ್ಲಿ ಅಂಜಲಿ ಬದ್ಧನಾಗಿ ಶಿವಲಿಂಗ ಎದುರು ನಿಂತಿದ್ದಾನೆ. ಇವೆರಡು ಶಿಲ್ಪಗಳ ನಡುವೆ ನಂದಿ ವಿಗ್ರಹವಿದೆ. ಪೂರ್ವದಿಂದ ಈ ಬಾಗಲಿನೊಳಗೆ ಮೊದಲು ಪ್ರವೇಶ ಮಾಡುವಾಗ ಇಕ್ಕೆಲಗಳಲ್ಲಿ ಬೃಹದಾಕಾರದ ಗೋಡೆಗಳಿವೆ. ಈ ಗೋಡೆಗಳಲ್ಲಿ ಮೀನು, ವಿಜಯನಗರ ಲಾಂಛನವಾದ ವರಾಹದ ಉಬ್ಬುಗೆತ್ತನೆಗಳಿವೆ. ಈ ಪ್ರದೇಶದ ಮೇಲೆ ಕಮಾನಿನಾಕಾರದ ಗುಮ್ಮಟವಿದೆ. ಇದು ಮೂರು ಸ್ತರಗಳಲ್ಲಿದ್ದು, ಪ್ರಥಮ ಹಂತದಲ್ಲಿ ನಾಲ್ಕು ದಿಕ್ಕುಗಳಿಗೆ ಕಮಾನುಗಳಿವೆ. ಇದರ ಮೇಲೆ ಅಡ್ಡಪಟ್ಟಿಕೆ ಹಾಕಲಾಗಿದೆ. ಎರಡನೆಯ ಹಂತದಲ್ಲಿ ವೃತ್ತಾಕಾರದ ಗುಮ್ಮಟವಿದೆ. ಗೋಡೆಗೆ ಹಾಗೂ ಬಾಗಿಲಿನ ಪ್ರಥಮ ಹಂತಕ್ಕೆ ಮಧ್ಯಮ ಹಂತಕ್ಕೆ ಮಧ್ಯಮ ಗಾತ್ರದ ಕಲ್ಲು ಹಾಗೂ ಗಾರೆಯನ್ನು ಬಳಸಲಾಗಿದೆ. ಕಮಾನಿನ ಎರಡು ಮತ್ತು ಮೂರನೆಯ ಹಂತದಲ್ಲಿ ಇಟ್ಟಿಗೆ ಗಾರೆಯನ್ನು ಬಳಕೆ ಮಾಡಿದ್ದಾರೆ.

**ಭೀಮನ ಹೆಬ್ಬಾಗಿಲು**

ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆ ಬದಿಯಲ್ಲಿ ಬರುವ ಗಾಣಗಿತ್ತಿ ದೇವಾಲಯದ ಆಗ್ನೇಯ ದಿಕ್ಕಿಗೆ ಈ ಹೆಬ್ಬಾಗಿಲಿದೆ. ಸುಸ್ಥಿತಿಯಲ್ಲಿರುವ ಬೃಹದಾಕಾರದ ಬಾಗಿಲುಗಳಲ್ಲಿ ಇದು ಒಂದು. ಇದರ ಆಕಾರದ ಕಾರಣದಿಂದಾಗಿಯೇ ಇದಕ್ಕೆ ಭೀಮನ ಹೆಬ್ಬಾಗಿಲೆಂದು ಹೆಸರು ಬಂದಿರಬಹುದು. ಈ ಬಾಗಿಲು ಸುಮಾರು ೨೦ ಅಡಿ ಎತ್ತರ ಹಾಗೂ ೧೫ ಅಡಿ ಅಗಲವಾಗಿದೆ. ಇಳಿಬಿದ್ದ ಪದ್ಮದ ಮೊಗ್ಗುಗಳಿವೆ. ಹೆಬ್ಬಾಗಿಲ ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಇದು ದಕ್ಷಿಣಕ್ಕೆ ಹೆಚ್ಚು ವಿಸ್ತರಿಸಿದೆ. ಇಲ್ಲಿ ಸುಮಾರು ೮ ಅಡಿ ಎತ್ತರದ ಭೀಮನ ಬಿಡಿ ಶಿಲ್ಪ ಹಾಗೂ ಶಾಸನಗಳಿವೆ. ಹತ್ತಿರದ ಗೋಡೆಯಲ್ಲಿ ಭೀಮನು ಕೀಚಕನನ್ನು ಸಂಹಾರ ಮಾಡುವ ದೃಶ್ಯವನ್ನು ಕೆತ್ತಲಾಗಿದೆ. ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳು ಕಂಡುಬರುವುದು ಈ ಹೆಬ್ಬಾಗಿಲಿನ ವಿಶೇಷತೆ. ದಕ್ಷಿಣದ ಗೋಡೆಗೆ ಹೊಂದಿಕೊಂಡು ಉತ್ತರಾಭಿಮುಖವಾಗಿರುವ ಮೂರು ಗರ್ಭಗೃಹಗಳಿವೆ. ಇವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಪ್ರವೇಶದ ಇಕ್ಕೆಲದ ತೋಳುಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಗೆತ್ತನೆಗಳಿವೆ. ಇದೇ ಗೋಡೆ ಉಪಬಾಗಿಲನ್ನು ತೆರೆಯಲಾಗಿದೆ. ಈ ಭೀಮನ ಹೆಬ್ಬಾಗಿಲಿಗೆ ಪ್ರವೇಶ ಮಾಡಲು ಮೊದಲು ಉತ್ತರದಿಂದ ದಕ್ಷಿಣಕ್ಕೆ ಬಂದು ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಪೂರ್ವದಿಂದ ಮುಖ್ಯ ಪ್ರವೇಶದ್ವಾರಕ್ಕೆ ಪ್ರವೇಶಿಸಬೇಕಾಗುತ್ತದೆ.

**ಸೋಮವಾರದ ಬಾಗಿಲು**

ವಿಜಯನಗರದಲ್ಲಿ ಕೃಷಿ ಪ್ರಧಾನ ಸಂಸ್ಕೃತಿ ಇತ್ತು. ಕೃಷಿಕರಿಗೆ ಸೋಮವಾರ ಬಿಡುವಿನ ದಿನ. ಅಂದು ಬೇಸಾಯಕ್ಕೆ, ದನಗಳನ್ನು ಬಳಸುತ್ತಿರಲಿಲ್ಲ. ಆ ಸಂಸ್ಕೃತಿ ಇಂದಿಗೂ ಇದೆ. ಈ ಬಾಗಿಲಿನ ಸುತ್ತಮುತ್ತಲು ವಿಶಾಲವಾದ ಬಯಲು ಜಾಗವಿದೆ. ಇಲ್ಲಿಯೇ ಬೇಸಾಯದ ಹೊಲಗಳು, ತೋಟಗಳು ಇದ್ದವೆಂದು ಅಬ್ದುಲ್ ರಜಾಕ್ ಅಭಿಪ್ರಾಯ ಪಡುತ್ತಾನೆ.[15] ಈ ಹಿನ್ನೆಲೆಯಲ್ಲಿ ಕೃಷಿಕರಿಗೆ ಶ್ರೇಷ್ಠ ದಿನವಾದ ಸೋಮವಾರವೇ ಬಾಗಿಲಿಗೆ ಈ ನಾಮ ಅನ್ವರ್ಥವಾಗಿರಲು ಸಾಧ್ಯತೆಗಳಿವೆ. ಅಥವಾ ಸೋಮಯ್ಯ ಎನ್ನುವ ದೇವರ ಹೆಸರಿನಿಂದ ಈ ಬಾಗಿಲನ್ನು ಕರೆದಿರಬಹುದು. ಇದಕ್ಕೆ ಪೂರಕವೆಂಬಂತೆ ಈ ಬಾಗಿಲು ಮುಂಭಾಗದಲ್ಲಿ ಶೈವದೇಗುಲವಿದೆ. ಇಲ್ಲಿ ಸೋಮವಾರ ಸಂತೆ ನಡೆಯುತ್ತಿರಬಹುದು. ಈ ಹಿನ್ನೆಲೆಯಲ್ಲಿಯೂ ಈ ಹೆಸರು ಬಂದಿದೆಯೇ? ಯೋಚಿಸಬೇಕು. ಈ ಬಾಗಿಲು ಸಿಂಘಾರದ ಹೆಬ್ಬಾಗಿಲಿನ ದಕ್ಷಿಣಭಾಗದಲ್ಲಿದೆ.

ಇಲ್ಲಿಯೇ ಉತ್ತರದ ಬೆಟ್ಟದ ಮೇಲೆ ಗುಂಡಿನಲ್ಲಿರುವ ವೀರ ಬುಕ್ಕರಾಯನ ಶಾಸನವು ಸೋಮವಾರದ ಬಾಗಿಲ ಹೆಸರನ್ನು ಉಲ್ಲೇಖಿಸುತ್ತದೆ.[16] ಈ ಬಾಗಿಲು ಭಾಗಶಃ ಹಾಳಾಗಿದೆ. ಸುಮಾರು ೨೦ ಅಡಿ ಅಗಲ, ೨೦ ಅಡಿ ಎತ್ತರವಾಗಿರುವ ಬಾಗಿಲಿನ ಪಾರ್ಶ್ವದ ಗೋಡೆಗಳಲ್ಲಿ ಆಂಜನೇಯ, ಆನೆ, ಹಂಸ, ಗಣೇಶ, ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವ ವೀರನ ಉಬ್ಬುಗೆತ್ತನೆಗಳಿವೆ. ಮುಂಭಾಗದಲ್ಲಿ

ದಕ್ಷಿಣಾಭಿಮುಖವಾಗಿರುವ ಶೈವ ದೇಗುಲವಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದ ಪ್ರವೇಶದ ಇಕ್ಕೆಲಗಳಲ್ಲಿ ಶೈವದ್ವಾರ ಪಾಲಕರ ಉಬ್ಬುಗೆತ್ತನೆಗಳಿವೆ. ಸೋಮವಾರದ ಬಾಗಿಲು ಪೂರ್ವಾಭಿಮುಖವಾಗಿದೆ.

**ಉದಯಗಿರಿ ಬಾಗಿಲು**

ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿ, ಈ ಬಾಗಿಲಿದೆ ಇದನ್ನು ಎರಡು ಬೆಟ್ಟಗಳ ನಡುವಿನ ಕಣಿವೆಯನ್ನು ಬಳಸಿ ಕಟ್ಟಲಾಗಿದೆ. ಉದಯಗಿರಿಯಿಂದ ವಿಜಯನಗರಕ್ಕೆ ಬರುವವರು ಈ ಬಾಗಿಲನ್ನು ಬಳಸಿಕೊಂಡೇ ಬರಬೇಕು. ಹಾಗಾಗಿ ಇದಕ್ಕೆ ಉದಯಗಿರಿಯ ಬಾಗಿಲೆಂದೇ ಹೆಸರು ಬಂದಿದೆ. ವಿಠ್ಠಲ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿ ಬಾಗಿಲನ್ನು ಉಲ್ಲೇಖಿಸುತ್ತದೆ.[17] ಪೂರ್ವಾಭಿಮುಖವಾಗಿರುವ ಈ ಬಾಗಿಲು ದೂರದಿಂದ ನೋಡಲು ಕಾಣದಂತೆ ಗೋಡೆಗಳನ್ನು ಮರೆಮಾಡಲಾಗಿದೆ. ಇತರೆ ಬಾಗಿಲುಗಳ ಲಕ್ಷಣಗಳನ್ನೇ ಇದು ಹೋಲುತ್ತದೆ. ಇಲ್ಲಿ ದೇವಾಲಯವು ಪಾಳು ಬಿದ್ದಿದೆ.

**ಹರಶಂಕರ ಬಾಗಿಲು**

ಕಮಲಾಪುರದಿಂದ ಆನೆಗೊಂದಿಗೆ ಹೋಗುವಾಗ ದಾರಿಯಲ್ಲಿ ಸುಮಾರು ೪ ಕಿ.ಮೀ. ದೂರದಲ್ಲಿದೆ ಈ ಬಾಗಿಲಿದೆ. ದಕ್ಷಿಣಾಭಿಮುಖವಾಗಿರುವ ಇದು ಸಂಪೂರ್ಣ ಹಾಳಾಗಿದೆ. ಇದನ್ನು ತಳವಾರಘಟ್ಟದ ಹೆಬ್ಬಾಗಿಲು (Talari gatha gateway) ಆನೆಗೊಂದಿ ಬಾಗಿಲು ಎಂತಲೂ ಕರೆಯುತ್ತಾರೆ. ಒಳಭಾಗದಲ್ಲಿ ಪೂರ್ವಾಭಿಮುಖವಾಗಿರುವ ಆಂಜನೇಯ ದೇಗುಲವಿದೆ. ಕಲ್ಲು ಗೋಡೆ ಹಾಗೂ ಹಿಂದೂ ಮುಸ್ಲಿಂ ಶೈಲಿಯ ಕಿಟಕಿಗಳದ್ದವೆಂದು ತಿಳೀದುಬರುತ್ತದೆ. ಪ್ರಸ್ತುತ ಮೂರು ಅಂತಸ್ತುಗಳ ಅವಶೇಷಗಳು ಗೋಚರಿಸುತ್ತವೆ. ಉದಯಗಿರಿ ಹೆಬ್ಬಾಗಿಲಿಂದ ಹರಶಂಕರಬಾಗಿಲು ಬಳಸಿಕೊಂಡು ವಿಜಯ ವಿಠ್ಠಲ ದೇವಾಲಯ ಹಾಗೂ ಮಾರುಕಟ್ಟೆಗೆ ಹೋಗಬಹುದಾಗಿತ್ತು. ಜೊತೆಗೆ ಆನೆಗೊಂದಿಗೂ ಪ್ರವೇಶವನ್ನು ಕೊಡುತ್ತದೆ.

**ಒಂದನೆಯ ಪೆನುಗೊಂಡ ಬಾಗಿಲು**

ಬಾಗಿಲು ಹೊರಬದಿ ಕೋಟೆಯ ಈ ಬಾಗಿಲು ಕಮಲಾಪುರದ ಆಗ್ನೇಯ ದಿಕ್ಕಿಗಿರುವ ಪಟ್ಟಾಭಿರಾಮ ದೇವಾಲಯದ ಹತ್ತಿರದಲ್ಲಿದೆ. ಇದು ಪೆನುಗೊಂಡದಿಂದ ವರದರಾಜಮ್ಮನ ಪಟ್ಟಣಕ್ಕೆ ಪ್ರವೇಶವನ್ನು ಕಲ್ಪಿಸುತ್ತದೆ. ವರದಾದೇವಿ ಶ್ರೀ ಅಚ್ಯುತರಾಯನ ಪಟ್ಟದರಸಿ ಈಕೆಯ ನೆನಪಿಗಾಗಿ ಕಟ್ಟಿಸಿದ ಪಟ್ಟಣವೇ ವರದರಾಜಮ್ಮನ ಪಟ್ಟಣ. ವರದಾದೇವಿ ಪೆನುಗೊಂಡದವಳೆಂದು ಕಾಣುತ್ತದೆ. ಈ ಕಾರಣಗಳಿಂದಾಗಿ ಪೆನುಗೊಂಡೆಯ ಬಾಗಿಲೆಂದು ಕರೆದಿರಬಹುದಾಗಿದೆ.

ಕ್ರಿ.ಶ. ೧೫೪೦ರ ಅಚ್ಯುತರಾಯನ ಶಾಸನದಲ್ಲಿ ಪೆನುಗೊಂಡ ಬಾಗಿಲು ಹಾಗೂ ಅಲ್ಲಿ ಪ್ರತಿಷ್ಠಾಪಿಸಿದ ರಘುನಾಥದೇವರ ಉಲ್ಲೇಖಗಳಿವೆ.[18] ಪೆನುಗೊಂಡ ಬಾಗಿಲಿಗೆ ಸಣ್ಣಕ್ಕಪ್ಪನ ಅಗಸೆಯೆಂದು ಸ್ಥಳೀಯರು ಅಭಿಪ್ರಾಯಿಸುವರು. ಬಾಗಿಲ ಹೊರಭಾಗದಲ್ಲಿ ಈಗಲೂ ಸಣ್ಣಕ್ಕಿ ವೀರಭದ್ರ ದೇವಾಲಯ ಇರುವಿಕೆಯನ್ನು ನೋಡಬಹುದು. ಅದರ ಹೆಸರನ್ನೆ ಈ ಬಾಗಿಲಿಗೆ ಅನ್ವಯಿಸಿರುವರು. ಇದರ ಹಿಂಬದಿ ಮುಂಬಂದಿಗೆ ಸಾಲುಮಂಟಪಗಳು ಮಧ್ಯದಲ್ಲಿ ಬೀದಿ ಇದೆ. ಇದನ್ನೇ ವರದರಾಜಮ್ಮನ ಬಜಾರು ಎಂದು ಕರೆಯುತ್ತಾರೆ. ಬಾಗಿಲು ಮತ್ತು ಕೋಟೆ ಗೋಡೆಗೆ ಹೊಂದಿಕೊಂಡು ಮೂರು ದೇವಾಲಯಗಳಿವೆ. ಅವುಗಳಲ್ಲಿ ಒಂದನೇ ಅಚ್ಯುತರಾಯನ ಕಾಲದಲ್ಲಿ ಕಟ್ಟಲಾದ ರಘುನಾತ ದೇವಾಲಯವೆಂದು ಶಾಸನವು ಸ್ಪಷ್ಟವಾಗಿ ಹೇಳಿದರೂ, ಸ್ಥಳೀಯರೂ ಮಾತ್ರ ಕಳ್ಳರ ಗುಡಿಯೆಂದು ಗುರುತಿಸುತ್ತಾರೆ. ಉತ್ತರಾಭಿಮುಖವಾಗಿರುವ ಈ ದೇಗುಲವು ಗರ್ಭಗೃಹಕ್ಕಿಂತ ಕೆಳಮಟ್ಟದಲ್ಲಿ ನಿರ್ಮಿಸಿದ ಪ್ರದಕ್ಷಿಣಾಪಥವಿದೆ. ಎದುರು ಭಾಗದಲ್ಲಿ ಒಂದೇ ದೇವಾಲಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದ ಬಾಗಿಲು

ತೋಳುಗಳಲ್ಲಿರುವ ವೈಷ್ಣವದ್ವಾರ ಪಾಲಕರಿಂದ ಇದು ವೈಷ್ಣವ ದೇವಾಲಯವೆಂದು ದೃಢಪಟ್ಟರೂ ಗರ್ಭಗೃಹ ಖಾಲಿ ಇದೆ. ರಘುನಾಥ ದೇವಾಲಯದ ಬಲಬದಿಗೆ ಕೋಟೆ ಬಾಗಿಲಿಗೆ ಹೊಂದಿಕೊಂಡಿರುವ ಚಿಕ್ಕ ದೇವಾಲಯದ ಗರ್ಭಗೃಹದಲ್ಲಿ ಇಲಿಯನ್ನು ಕಡೆದಿರುವ ಪೀಠದ ಮೇಲೆ ಗಣೇಶನ ಭಗ್ನ ಶಿಲ್ಪವಿದೆ. ಹಾಗಾಗಿ ಇದು ಗಣೇಶನ ಗುಡಿಯೆಂದು ಖಚಿತವಾಗುವುದು. ಬಾಗಿಲಿನ ಮುಂಭಾಗದಲ್ಲಿ ವೀರಭದ್ರ ದೇವಾಲಯವಿದೆ. ಇದನ್ನು ಸಣ್ಣಕ್ಕಿ ವೀರಭದ್ರನೆಂದು ಕರೆಯುವರು. ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಯಿದೆ. ಈ ದೇವಾಲಯಕ್ಕೆ ಕಣಶಿಲೆ, ಶಿಖರ ಹಾಗೂ ಕೈಪಿಡಿ ಗೋಡೆಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ. ಈಗ ಗೋಚರಿಸುವ ಬಾಗಿಲು ಎರಡು ಮಹಡಿಗಳನ್ನು ಹೊಂದಿದೆ. ಪ್ರವೇಶದ ಪಾರ್ಶ್ವದಲ್ಲಿ ಮಂಟಪಗಳಿವೆ. ಗ್ರೀನ್ ಲಾ (A. Green law, 1856) ಅವರು ೧೫೦ ವರ್ಷಗಳ ಹಿಂದೆ ತೆಗೆದಿರುವ ಈ ಬಾಗಿಲಿನ ಚಿತ್ರವು ಇತರೆ ಬಾಗಿಲುಗಳಂತೆಯೇ ದೊಡ್ಡ ಪ್ರಮಾಣದಲ್ಲಿರುವುದನ್ನು ತೋರಿಸುತ್ತದೆ. ಒಳಭಾಗದಲ್ಲಿ ಪೂರ್ವಾಭಿಮುಖವಾಗಿರುವ ಆಂಜನೇಯ ದೇಗುಲವಿದೆ. ಕಲ್ಲು ಗೋಡೆ ಹಾಗೂ ಹಿಂದೂ ಮುಸ್ಲಿಂ ಶೈಲಿಯ ಕಿಟಕಿಗಳದ್ದವೆಂದು ತಿಳಿದುಬರುತ್ತದೆ. (Splendours of the vijayanagara empire Hampi, p.26)

**ಎರಡನೇ ಪೆನುಗೊಂಡ ಬಾಗಿಲು**

ಇದು ಕಮಲಾಪುರದ ಆಗ್ನೇಯಕ್ಕೆ ಸುಮಾರು ೨ ಕಿ.ಮೀ. ಅಂತರದಲ್ಲಿದೆ. ಪೆನುಗೊಂಡೆಗೂ ವಿಜಯನಗರಕ್ಕೂ ನಿಕಟವಾದ ಸಂಬಂಧಗಳಿವೆ. ಪೆನುಗೊಂಡೆಯಿಂದ ಬರುವವರು ಈ ಮಾರ್ಗವಾಗಿಯೂ ಹೋಗಬೇಕಿತ್ತು. ಹಾಗಾಗಿ ಇದನ್ನು ಪೆನುಗೊಂಡೆ ಬಾಗಿಲು ಎಂದು ಗುರುತಿಸಿದ್ದಾರೆ.

ಕಮಲಾಪುರದ ಬಳಿ ಇರುವ ಚಿಕ್ಕ ಹುಡೇ ದೇವಾಲಯದ ದಕ್ಷಿಣಕ್ಕಿರುವ ಶಾಸನವು ಪೆನುಗೊಂಡೆ ಬಾಗಿಲನ್ನು ಹಾಗೂ ಅಲ್ಲಿ ಪ್ರತಿಷ್ಠಾಪಿಸಿದ ರಘುನಾಥ ದೇವರನ್ನು ಉಲ್ಲೇಖಿಸುತ್ತದೆ. ಕಳ್ಳರ ಗುಡಿ ಹತ್ತಿರ ಪೆನುಗೊಂಡ ಬೀದಿ ಇದೆ. ಇದರ ದಕ್ಷಿಣಕ್ಕೆ ಪೆನುಗೊಂಡ ಬಾಗಿಲು ಇರುತ್ತದೆ. ಪೆನುಗೊಂಡೆ ಬೀದಿಯ ಒಂದು ಮಾರ್ಗವು ಗುಮ್ಮಟದ ಬಾಗಿಲಿಗೆ ಹೋಗಿ ಅಲ್ಲಿಂದ ಭೀಮನ ಅಗಸಿ ಮೂಲಕ ವಿಜಯನಗರದತ್ತ ಕರೆದೊಯ್ಯುತ್ತದೆ. ಪೆನುಗೊಂಡ ಬಾಗಿಲಿಗೆ ಹೊಂದಿಕೊಂಡ ಗೋಡೆ ಮಲಪನಗುಡಿ ಕೋಟೆ ಗೋಡೆಗೆ ಹತ್ತಿಕೊಂಡಿದೆ ಎಂದು ಡಾ. ವಸುಂಧರ ಫಿಲಿಯೋಜ ಅವರು ಅಭಿಪ್ರಾಯಪಡುತ್ತಾರೆ.[19] ಪ್ರಸ್ತುತ ಪೆನುಗೊಂಡ ಬಾಗಿಲಿನಿಂದ ಕಮಲಾಪುರದ ಕೆರೆಯ ಹಿಂಭಾಗದವರೆಗೆ ಕೋಟೆಗೋಡೆ ಗೋಚರಿಸುತ್ತದೆ. ಪೂರ್ವಾಭಿಮುಖವಾಗಿರುವ ಈ ಬಾಗಿಲು ಸುಮಾರು ೧೫ ಅಡಿ ಅಗಲ, ೨೦ ಅಡಿ ಎತ್ತರವಾಗಿದೆ. ಬಾಗಿಲ ತೋಳುಗಳಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳು, ಲಲಾಟಬಿಂಬದ ಎರಡೂ ಬದಿಯ ಕೆಳಗೆ ಇಳಿ ಬಿದ್ದ ಮೊಗ್ಗುಗಳಿವೆ. ಎಡಭಾಗದಲ್ಲಿ ಉಪಬಾಗಿಲು, ಬಲಭಾಗದ ಗೋಡೆಯಲ್ಲಿ ಶಿವಲಿಂಗ, ನಂದಿ ಅಂಜನ ಮುದ್ರೆಯಲ್ಲಿ ನಿಂತಿರುವ ರಾಜನ (ಇತನನ್ನು ಪ್ರೌಢದೇವ ರಾಯನೆಂದು ಕರೆದಿರುವರು) ಉಬ್ಬುಶಿಲ್ಪಗಳಿವೆ. ಪ್ರವೇಶದ ಎರಡೂ ಬದಿಗೆ ಕಟ್ಟೆಯ ಮೇಲೆ ಮಂಟಪವನ್ನು ನಿರ್ಮಿಸಿರುವರು. ಹತ್ತಿರದಲ್ಲಿ (ಒಳಭಾಗದಲ್ಲಿ) ಆಂಜನೇಯ, ರಘುನಾತ ಮತ್ತು ಗಣೇಶನ ದೇವಾಲಯಗಳಿವೆ.

[1] ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯೧

[2] ದೇವರಕೊಂಡಾರೆಡ್ಡಿ ಮತ್ತು ಇತರರು,೨೦೦೧, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ೩, ಪೂರ್ವೋಕ್ತ, ಪು. ೭೭

[3] ಅದೇ ಪು. ೨೪೫

[4] ಅದೇ ಪು. ೨೪೨

[5] ಅದೇ ಪು. ೨೬೨

[6] ಪೆನುಗೊಂಡ ಮತ್ತು ಗುಮ್ಮಟದ ಬಾಗಿಲುಗಳ ಬಲಭಾಗದ ಗೋಡೆಗಳಲ್ಲಿ ನಂದಿ, ಶಿವಲಿಂಗ ಇದರ ಮುಂದೆಕೈಮುಗಿದು ನಿಂತಿರುವ ರಾಜ (ಪ್ರೌಢದೇವರಾಯ?)ನ ಉಬ್ಬುಶಿಲ್ಪಗಳಿವೆ.

[7] VPR.NO.2 of 1983-84; ವಿಶಾ, ಪು. ૩૪೬

[8] ಕೊಟ್ರೇಶ ಎಂ., ೨೦೦೨, ಕೋಟೆಕೊತ್ತಳಗಳು ಒಂದು ಅಧ್ಯಯನ ಅಪ್ರಕಟಿತ ಪಿಎಚ್.ಡಿ. ಪ್ರೌಢಪ್ರಬಂಧ, ಪು. ೨೨, ಹಂಪಿ, ಕನ್ನಡ ವಿಶ್ವವಿದ್ಯಾಲಯ

[9] ಕೋತಿನ ಎಸ್.ಎಸ್. ೧೯೮೪, ಅನು. ಮೋಹನ ತರಂಗಿಣಿ, ಪು.. ೨೯೫, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

[10] ದೇವರಕೊಂಡಾರೆಡ್ಡಿ ಮತ್ತು ಇತರರು, ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಹಂಪಿ೩, ಪು.... ಹಂಪಿ ಕನ್ನಡ ವಿಶ್ವವಿದ್ಯಾಲಯ

[11] ಅದೇ ಪು. ೧೬೪

[12] ಅದೇ ಪು. ೧೬೨

[13] ರಾಮರಾವ್ಜಿ.ಎನ್., ವಿದೇಶಿಯರು ಕಂಡ ವಿಜಯನಗರ, ಬೆಂಗಳೂರು, ಐ.ಬಿ.ಎಚ್. ಪ್ರಕಾಶನ

[14] ದೀಕ್ಷಿತ್ಜಿ.ಎಸ್., ಮತ್ತು ವಿಶ್ವೇಶ್ವರಯ್ಯಎಂ.ಪಿ., ೧೯೭೧, ಸಂಗಮರ ಕಾಲದ ವಿಜಯನಗರ, ಪು. ೯೪, ೯೫, ಬೆಂಗಳೂರು ಬಿ.ಎಂ.ಶ್ರೀ ಪ್ರತಿಷ್ಠಾನ

[15] ಬಾಲಸುಬ್ರಹ್ಮಣ್ಯಂ, ಅನು. ಮರೆಯಲಾಗದ ಮಹಾಸಾಮ್ರಾಜ್ಯ, ಪು. ೩೫೦, ಹಂಪಿ, ಕನ್ನಡ ವಿಶ್ವವಿದ್ಯಾಲಯ,

[16] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಪೂರ್ವೋಕ್ತ, ಪು. ೨೪೩

[17] ಅದೇ, ಪು. ೧೪೧

[18] ಅದೇ, ಪು. ೨೩೮-೩೯

[19] ವಸುಂಧರ ಫಿಲಿಯೋಜಾ, ೧೯೮೨, ಅಳಿದುಳಿದ ಹಂಪೆ, ಪು. ೧೦೪, ಬೆಂಗಳೂರು, ಮಾನಸೋಲ್ಲಾಸ ಪ್ರಕಾಶನ

# ೧೩. ಹಂಪಿಯ ರಕ್ಷಣಾವಾಸ್ತು (೨)

**ಕೋಟೆ ಶಂಕರ ದೇವರ ಬಾಗಿಲು**

ಕಮಲಾಪುರದಿಂದ ಹಂಪಿಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕಿತಂಗಿಯರ ಗುಂಡಿನ ಹಿಂಬದಿಗೆ ಕೋಟೆ ಶಂಕರ ದೇವರ ಬಾಗಿಲಿದೆ. ಕೋಟೆಗೆ ಹೊಂದಿಕೊಂಡು ಶಂಕರದೇವರ ಗುಡಿ ಇದೆ. ತುಂಗಭದ್ರಾ ನದಿಯ ಕಲ್ಲುಬಂಡೆಯ ಮೇಲೆ ಲಿಂಗಗಳ ಸಮೂಹವೇ ಇದೆ. ಈ ಹಿನ್ನೆಲೆಯಲ್ಲಿ ಬಾಗಿಲಿಗೆ ಆ ಹೆಸರೇ ರೂಢಿಗತವಾಗಿ ಬಂದಿದೆ. ಪ್ರಸನ್ನ ವಿರೂಪಾಕ್ಷ ದೇವಾಲಯದ ಹತ್ತಿರವಿರುವ ಗುಂಡಿನ ಮೇಲಿರುವ

[1] ಹಾಗೂ ಇದರ ಪಕ್ಕದಲ್ಲಿರುವ ಬಂಡೆಯ ಶಾಸನಗಳಲ್ಲಿ[2] ಕೋಟೆ ಶಂಕರ ದೇವರ ಬಾಗಿಲಿನ ಪ್ರಸ್ತಾಪಗಳಿವೆ.
ಈ ಬಾಗಿಲು ದಕ್ಷಿಣಾಭಿಮುಖವಾಗಿದ್ದು, ಪ್ರವೇಶದ ಆರಂಭದಲ್ಲಿ ಬೃಹದಾಕಾರದ ಬಂಡೆಯ ಮೇಲೆ ಕೆತ್ತನೆಯಿದೆ. ಭಗ್ನಾವಸ್ಥೆಯಲ್ಲಿರುವ ಈ ಬಾಗಿಲು ಸುಮಾರು ೧೦ ಅಡಿ ಅಗಲ ಹಾಗೂ ೨೦ ಅಡಿ ಎತ್ತರವಾಗಿದೆ.

**ಹೊದೆಯ ಬಾಗಿಲು**

ಇದು ಉತ್ತರಾಭಿಮುಖವಾಗಿದ್ದು ಅರಮನೆ ಪ್ರದೇಶದಿಂದ ಮಾತಂಗ ಗುಡ್ಡ ಪರ್ವತಕ್ಕೆ ಹೋಗುವುದಕ್ಕಾಗಿ ನಿರ್ಮಿಸಿರುವುದು. ಮಾಲ್ಯಾವಂತ ಪರ್ವತದ ಪಶ್ಚಿಮಕ್ಕಿರುವ ಶಾಸನದಲ್ಲಿ ಹೊದೆಯ ಬಾಗಿಲು ವಿನಾಯಕನಿಗೆ ವೀರ ಹರಿಹರ ರಾಯನು ದಾನ ನೀಡಿದಂತೆ ಉಲ್ಲೇಖವಿದೆ.[3]

**ಹೂವಿನ ಬಾಗಿಲು**

ಕೋಟೆಯ ನೈರುತ್ಯದಿಕ್ಕಿನಲ್ಲಿ ಹೂವಿನ ಬಾಗಿಲಿದೆ. ದಕ್ಷಿಣಾಭಿಮುಖವಾಗಿರುವ ಇದು ನೇರ ಅಂತಃಪುರಕ್ಕೆ ಪ್ರವೇಶವನ್ನು ಕೊಡುತ್ತದೆ. ಸಂಡೂರು ತಾಲೂಕಿನ ಹೊಸಮಲ್ಲೈದುರ್ಗದ ರಾಮನ ದೇಗುಲದ ಮುಂದಿರುವ ಶಾಸನದಲ್ಲಿ ಹೂವಿನ ಬಾಗಿಲ ವಿಜಯನಗರದ ಆಂಜನೇಯ ದೇವಾಲಯದ ಪೂಜಾರಿಯ ಪ್ರಸ್ತಾಪಗಳಿವೆ.[4] ಇದಕ್ಕೆ ಪೂರಕವೆಂಬಂತೆ ಹೂವಿನ ಬಾಗಿಲ ಮುಂಭಾಗದಲ್ಲಿ ಆಂಜನೇಯ ಗುಡಿ ಇದೆ. ಇದು ವಿಜಯನಗರದ ಅರಸ ಮಲ್ಲಿಕಾರ್ಜುನ (ಕ್ರಿ.ಶ. ೧೪೪೭-೧೪೬೬) ಅವಧಿಯಲ್ಲಿ ನಿರ್ಮಾಣಗೊಂಡಿದೆ.[5]

ದೂರದಿಂದ ಈ ಬಾಗಿಲು ಗೋಚರಿಸುವುದಿಲ್ಲ. ೧೦ ಅಡಿ ಅಗಲ, ೨೦ ಅಡಿ, ಎತ್ತರವಾಗಿರುವ ಇದರ ಲಲಾಟದ ಬಿಂಬದ ಕೆಳಬದಿಗೆ ಇಳಿಬಿದ್ದ ಮೊಗ್ಗುಗಳಿವೆ. ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಈ ಆವರಣದಿಂದ ಪೂರ್ವಕ್ಕೆ ಆಂಜನೇಯ ಶಿಲ್ಪವಿದೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳಲ್ಲಿ ಆನೆ, ಯಾಳಿ, ಆಂಜನೇಯ, ಗಣೇಶ ಇತ್ಯಾದಿ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಮೇಲೆ ಇಟ್ಟಿಗೆ ಗಾರೆಯಿಂದ ಶಿಖರವನ್ನು ನಿರ್ಮಿಸಲಾಗಿದೆ. ಸಭಾಮಂಟಪದ ಮೇಲಿರುವ ಕೈಪಿಡಿ ಗೋಡೆಯಲ್ಲಿ ದೇವರ ಕೋಷ್ಠಗಳಿವೆ. ಹೊಸಪೇಟೆಯ ಅಮರಾವತಿ, ಹಿಂದೆ ಹೂವಿನ ತೋಟವಾಗಿದ್ದ ಉಲ್ಲೇಖವು ಶಾಸನ (ಅಮರಾಮ ಪೂಜಾರ ಹನುಮಂತಪ್ಪನ ಹಿತ್ತಲಿನಲ್ಲಿ ಶಾಸನ ಇದೆ) ದಲ್ಲಿದೆ ಇಲ್ಲಿಂದ ಹೂವನ್ನು ಈ ಬಾಗಿಲ ಮೂಲಕವೆ. ಅಂತಃಪುರ ಹಾಗೂ ವಿರೂಪಾಕ್ಷ ದೇವಾಲಯಕ್ಕೆ ಸಾಗಿಸುತ್ತಿರಬಹುದು. ಈ ಹಿನ್ನೆಲೆಯಲ್ಲಿಯೂ ಹೂವ್ವಿನವಾಗಿಲೆಂದು ಹೆಸರು ಬಂದಿರುವ ಸಾಧ್ಯತೆ ಇದೆ.

**ಕೊಠಾರದ ಬಾಗಿಲು**

ಕೋಟೆಯ ಈಶಾನ್ಯದಿಕ್ಕಿಗೆ ಈ ಬಾಗಿಲಿದೆ. ಪೂರ್ವಾಭಿಮುಖವಾಗಿರುವ ಈ ಬಾಗಿಲು ಇಂದು ಪೂರ್ವ ಭಗ್ನಾವಸ್ಥೆಯಲ್ಲಿದೆ. ಕೋಷ್ಠಾಗಾರ ಎಂದರೆ ಕೊಟ್ಯಗಾರ, ಸಂಗ್ರಹಾಲಯ, ಖಜಾನೆ, ಕಣಜ ಎಂಬರ್ಥಗಳಿವೆ.

ಖಜಾನೆ, ಕಣಜಗಳು ಇದ್ದಿರುವ ಈ ಕಾರಣವಾಗಿಯೇ ಇದಕ್ಕೆ ಕೋಠಾರದ ಬಾಗಿಲೆಂದು ಕರೆದಿರಬೇಕು. ನಿಂಬಾಪುರದ ಕಪಿಲಾಶ್ರಮದ ಬಳಿಯ ಶಾಸನದಲ್ಲಿ ಈ ಬಾಗಿಲಿನ ಉಲ್ಲೇಖವಿದೆ.[6]

**ಜಡೆಯಶಂಕರದೇವರ ದಿಡ್ಡಿ**

ಇದು ಕಮಲಾಪುರದಿಂದ ಹಂಪೆಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕತಂಗಿಯರ ಗುಂಡಿನ ಹಿಂಬದಿಗೆ ಇದೆ. ಶಾಸನದಲ್ಲಿ ಜಡೆಯಶಂಕರದೇವರ ದಿಡ್ಡಿ ಸ್ಥಳ ನಿರ್ದೇಶನವನ್ನು ನೀಡುತ್ತದೆ.[7]

**ಹಂಪಾದೇವಿಯ ದಿಡ್ಡಿ**

ಜಡೆಯಶಂಕರದೇವರ ದಿಡ್ಡಿ ಬಾಗಿಲನ ಉತ್ತರಕ್ಕೆ ಸ್ವಲ್ಪ ಅಂತರದಲ್ಲಿಯೇ ಹಂಪಾದೇವಿಯ ದಿಡ್ಡಿ ಬಾಗಿಲಿದೆ. ಈಗ ಪೂರ್ವ ಭಗ್ನಾವಸ್ಥೆಯಲ್ಲಿದೆ. ಬಂಡೆಯ ಮೇಲಿರುವ ಶಾಸನದಲ್ಲಿ ಹಂಪಾದೇವಿಯ ದಿಡ್ಡಿ ಎಂದಿದೆ.[8]

**ರೆಮ್ಮು ದಿಡ್ಡಿ**

ಬೇಟೆಕಾರ ಹಾಗೂ ಹರೆಶಂಕರ ಹೆಬ್ಬಾಗಿಲುಗಳ ಮಧ್ಯದ ಬೆಟ್ಟಗಳ ಕಣಿವೆಯಲ್ಲಿ ರೆಮ್ಮು ದಿಡ್ಡಿಬಾಗಿಲಿದೆ. ಪೂರ್ವಾಭಿಮುಖವಾಗಿರುವ ಇದು ಸಂಪೂರ್ಣ ಹಾಳಾಗಿದೆ. ಪ್ರಸ್ತುತ ಎರಡು ಮಂಟಪಗಳು ಮಾತ್ರ ಗೋಚರಿಸುತ್ತವೆ. ಇಲ್ಲಿಯೇ ಇರುವ ಬಂಡೆಯ ಮೇಲಿನ ಶಾಸನದಲ್ಲಿ ಈ ದಿಡ್ಡಿ ಉಲ್ಲೇಖವಿದೆ.[9]

ಉಪ್ಪರಿಗೆ ಬಾಗಿಲು ಮತ್ತು ಮತಂಗೇಶ್ವರದೇವರ ದಿಡ್ಡಿ ಬಾಗಿಲುಗಳು ಕೂಡಾ ಮುಖ್ಯವಾಗಿವೆ.

**ಕೊತ್ತಳಗಳು**

ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳ ಇಕ್ಕೆಲಗಳಲ್ಲಿ, ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ, ಕೋಟೆ ಗೋಡೆಯ ಮೇಲೆ ನಿಂತು ಹೋರಾಟ ಮಾಡಲು ಅನುಕೂಲವಾಗುವಂತೆ ಮತ್ತು ಕೆಲವು ಗುಪ್ತ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇವುಗಳ ಲಕ್ಷಣಗಳನ್ನು ಈಗಾಗಲೇ ಮೇಲೆ ತಿಳಿಸಲಾಗಿದೆ. ಇಲ್ಲಿ ಶಾಸನೋಕ್ತ ಮತ್ತು ಇತರೆ ಕೊತ್ತಳಗಳ ವಿವರಣೆಗಳನ್ನು ನೀಡಲಾಗಿದೆ.

**ಪ್ರತಾಪ ಕೊತ್ತಳ :** ಪ್ರತಾಪ ಕೊತ್ತಳವು ಕೋಟೆ ಶಂಕರ ಬಾಗಿಲು ಮುಂಭಾಗದಲ್ಲಿದ್ದು, ಅಕ್ಕತಂಗಿಯರ ಗುಂಡುಗಳ ಪಶ್ಚಿಮದ ಬಂಡೆಯ ಮೇಲಿನ ಶಾಸನವು ಇದನ್ನು ಗುರುತಿಸುತ್ತದೆ.[10] ಪ್ರತಾಪ ಎನ್ನುವುದು ವಿಜಯನಗರದ ಅರಸರುಗಳಿಗಿದ್ದ ಬಿರುದು.

**ಸ್ವಾಮಿ ದ್ರೋಹರ ಗಂಡನ ಕೊತ್ತಳ :** ಹಂಪಾದೇವಿ ದಿಡ್ಡಿಬಾಗಿಲು ಹಾಗೂ ಜಡೆಯಶಂಕರ ದೇವರ ದಿಡ್ಡಿಬಾಗಿಲುಗಳ ಮಧ್ಯದಲ್ಲಿರುವುದೇ ಸ್ವಾಮಿದ್ರೋಹರ ಗಂಡನ ಕೊತ್ತಳ, ಕೋಟೆ ಗೋಡೆಯಲ್ಲಿರುವ ಶಾಸನವು ಈ ಕೊತ್ತಳವನ್ನು ಸೂಚಿಸುತ್ತದೆ.[11]

**ಮಾತಂಗದೇವರ ಕೊತ್ತಳ :** ಹೊದೆಯ ಬಾಗಿಲ ಪಶ್ಚಿಮ ದಿಕ್ಕಿಗಿರುವುದೇ ಮತಂಗ ದೇವರ ಕೊತ್ತಳ. ಹಂಪಾದೇವಿ ದಿಡ್ಡಿಯ ಉತ್ತರಕ್ಕಿರುವ ಬಂಡೆ ಶಾಸನವು ಮತಂಗದೇವರ ಕೊತ್ತಳವನ್ನು ಹೆಸರಿಸುತ್ತದೆ.[12] ಮಾತಂಗಿ ವಿಜಯನಗರದ ಅರಸರ ಆರಾಧ್ಯ ದೇವತೆ. ಮಾತಂಗ ಪರ್ವತದ ಮೇಲೆ ಈ ದೇವತೆಯ ಗುಡಿ ಇದೆ. ಮತಂಗ ಪರ್ವತದ ಉಲ್ಲೇಖಗಳು ಕ್ರಿ.ಶ.೧೧ನೇ ಶತಮಾನದ ಶಾಸನಗಳಲ್ಲಿದೆ. ಅಲ್ಲದೆ ಸಾಹಿತ್ಯಿಕ ಹಾಗೂ ಪುರಾಣದ ಉಲ್ಲೇಖಗಳು ಮತಂಗ ಪರ್ವತದ ಪ್ರಾಚೀನತೆಯನ್ನು ರಾಮಾಯಣ ಕಾಲಕ್ಕೆ ತೆಗೆದುಕೊಂಡು ಹೋಗುತ್ತವೆ.

**ಮಳಲ ವಿನಾಯಕ ಕೊತ್ತಳ:** ಇದು ಮತಂಗ ದೇವರ ಕೊತ್ತಳದ ಉತ್ತರ ದಿಕ್ಕಿಗಿದೆ. ಇಲ್ಲಿಯೇ ಕೋಟೆ ಗೋಡೆಯಲ್ಲಿರುವ ಶಾಸನವು ಮಳಲ ವಿನಾಯಕ ಕೊತ್ತಳವನ್ನು ಹೆಸರಿಸಿದೆ.[13]

**ಜಲಸೇನದೇವ ಕೊತ್ತಳ:** ಇದು ಮಳಲ ವಿನಾಯಕ ಕೊತ್ತಳದ ಆಗ್ನೇಯ ದಿಕ್ಕಿಗಿದೆ. ಜಲಸೇನ ವಿಜಯನಗರ ಅರಸರು ಆರಾಧಿಸುತ್ತಿದ್ದ ದೇವರು. ಈ ಕೊತ್ತಳವನ್ನು ಹೆಸರಿಸುವ ಶಾಸನವು ಉದ್ದಾರ ವೀರಭದ್ರ ದೇವಾಲಯದ ಪೂರ್ವದ ಕೋಟೆಗೋಡೆಯಲ್ಲಿದೆ.[14]

**ಹಂಪೆಯ ಕೊತ್ತಳ:** ಕೋಟಿ ಶಂಕರ ದೇವರ ಬಾಗಿಲಿನ ಪೂರ್ವ ದಿಕ್ಕಿಗಿದೆ. ಹಂಪಿ ವಿಜಯನಗರದ ಅರಸರ ರಾಜಧಾನಿ, ಇಂದು ಪ್ರಸಿದ್ಧ ಪ್ರವಾಸಿ ತಾಣ.

**ಹನುಮನ ಕೊತ್ತಳ:** ಹೊದೆಯ ಬಾಗಿಲಿನ ಆಗ್ನೇಯ ದಿಕ್ಕಿಗಿರುವುದೇ ಹನುಮನ ಕೊತ್ತಳ. ಹನುಮನ ಇನ್ನೊಂದು ಹೆಸರು ಆಂಜನೇಯ. ರಾಮಾಯಣದಲ್ಲಿ ಶ್ರೀರಾಮಚಂದ್ರನ ಭಕ್ತ, ಸೇವಕ ಹಂಪಿಯಲ್ಲಿ ಆಂಜನೇಯರ ಗುಡಿಗಳು ಸಾಕಷ್ಟಿವೆ.

**ಶಂಕರದೇವರ ಕೊತ್ತಳ:** ಈ ಕೊತ್ತಳವು ಹನುಮನ ಕೊತ್ತಳದ ಪೂರ್ವ ದಿಕ್ಕಿಗಿದೆ. ಶಂಕರ ದೇವರ ಕೊತ್ತಳವನ್ನು ಹೆಸರಿಸುವ ಶಾಸನವು ಈ ಕೊತ್ತಳದ ದಕ್ಷಿಣದ ಬಂಡೆಯ ಮೇಲಿದೆ.[15] ಶಂಕರ ದೇವರ ಹೆಸರನ್ನು ಈ ಕೊತ್ತಳಕ್ಕೆ ಇಡಲಾಗಿದೆ.

**ಮದನ ಕೊತ್ತಳ :** ಮತಂಗೇಶ್ವರ ದೇವರ ದಿಡ್ಡಿ ಬಾಗಿಲಿನ ಆಗ್ನೇಯ ದಿಕ್ಕಿಗಿರುವುದೇ ಮದನ ಕೊತ್ತಳ. ರಾಣಿವಾಸದ ಆವರಣದ ಉತ್ತರಕ್ಕೆ ಬೆಟ್ಟದ ಮೇಲೆ ನಾಲ್ಕು ಕಂಬಗಳುಳ್ಳ ಕಾವಲು ಗೋಪುರದ ಕೆಳಬಂಡೆಯ ಮೇಲಿನ ಶಾಸನದಲ್ಲಿ ಇದರ ಉಲ್ಲೇಖವಿದೆ.[16]

**ಮೀಸರಗಂಡನ ಕೊತ್ತಳ :** ಈ ಕೊತ್ತಳವು ಮದನ ಕೊತ್ತಳದ ಪೂರ್ವ ದಿಕ್ಕಿಗಿದೆ. ಹತ್ತಿರದ ಬಂಡೆಯ ಮೇಲೆ ಮೀಸರ ಗಂಡನ ಕೊತ್ತಳವೆಂದು ಕಡೆಯಲಾಗಿದೆ.[17]

**ಆನೆಗೊಂದಿಯ ಕೊತ್ತಳ :** ಈ ಕೊತ್ತಳವು ಸಿಂಘಾಪುರದ ಹೆಬ್ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಮೇಲಿದೆ. ಆನೆಗೊಂದಿ ವಿಜಯನಗರದ ಅರಸರ ಎರಡನೆಯ ರಾಜಧಾನಿ. ಈಗಲೂ ವಿಜಯನಗರದ ವಂಶಸ್ಥರು ಇಲ್ಲಿದ್ದಾರೆ. ಗಜಶಾಲೆಯಲ್ಲಿ ಹಿಂಭಾಗದ ಬೆಟ್ಟದಲ್ಲಿರುವ ಬಂಡೆಯಮೇಲೆ ಆನೆಗೊಂದಿ ಕೊತ್ತಳವೆಂದು ಕೆತ್ತಲಾಗಿದೆ.[18]

**ಸೋಮಯ ದೇವರ ಕೊತ್ತಳ :** ಈ ಕೊತ್ತಳವು ಸಿಂಘಾರದ ಹಾಗೂ ಸೋಮವಾರದ ಬಾಗಿಲುಗಳ ಮಧ್ಯಭಾಗದಲ್ಲಿದೆ. ಇಲ್ಲಿಯೇ ಉತ್ತರಕ್ಕಿರುವ ಬೆಟ್ಟದ ಮೇಲೆ ಸೋಮಯ್ಯ ದೇವರ ಕೊತ್ತಳವೆಂದು ಕಡೆಯಲಾಗಿದೆ.[19] ಸೋಮಯ್ಯ ದೇವರ ಹೆಸರಿನಿಂದ ಅಥವಾ ಸೋಮವಾರ ಮಾರುಕಟ್ಟೆ ಸಂತೆ ನಡೆಯುವ ದಿನವೆಂದು, ಈ ಹೆಸರಿನಿಂದಲೇ ಕೊತ್ತಳಕ್ಕೆ ಸೋಮಯ್ಯದೇವರ ಕೊತ್ತಳವೆಂದು ಕರೆದಿರುವುದು.

**ಕೋಟೆಯಲ್ಲಿ ನೀರಿನ ಪೂರೈಕೆ**

ವಿಜಯನಗರ ಕೋಟೆಯೊಳಗೆ ಉತ್ತಮವಾದ ನೀರಿನ ಸೌಕರ್ಯವಿದ್ದುದು ಇತಿಹಾಸಕಾರರಿಗೆ ತಿಳಿದಿರುವ ವಿಷಯವೆ. ಕೋಟೆಯಲ್ಲಿ ವಾಸಿಸುವ ಜನರ ದೈನಂದಿನ ಉಪಯೋಗಕ್ಕೆ ಹೊಲಗದ್ದೆ ತೋಟಗಳಿಗೆ ಮತ್ತು ಪ್ರವಾಸಿಗಳಿಗೆ ಒದಗಿಸಿದ್ದ ನೀರಿನ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಆಣೆಕಟ್ಟು, ಕಾಲುವೆ, ಕೆರೆ ಬಾವಿ ಅರವಟ್ಟಿಗೆಗಳನ್ನು ಕಟ್ಟಿಸಿದ್ದರು.

ಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿತ್ತೆಂಬುದಕ್ಕೆ ಹಂಪಿಯ ಕಡಲೆಕಾಳು ಗಣೇಶನ ಗುಡಿಯ ಮುಂದಿರುವ ಶಾಸನವು ಮುಖ್ಯ ಸಾಕ್ಷಿಯಾಗುತ್ತದೆ. ಕ್ರಿ.ಶ. ೧೪೧೧ರ ಪ್ರೌಢದೇವರಾಯನ ಶಾಸನದಲ್ಲಿ ಈತನ ಮಂತ್ರಿಯಾದ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾ ಕಿವಿಯಲ್ಲಿ ಹೇಳಿದ ಒಂದು ಪದ್ಯ ಹೀಗಿದೆ.[20]

ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಗಾರಮಂ ಮಾಡಿಸಜ್ಜೆರೆ ಯೊಳ್ಸಿಲ್ಕಿದರನಾಥರಂ ಬಿಡಿಸು ಮಿತ್ರರ್ಗ್ಗಿಬುಕೆಯಿ ನಂಬಿದರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂ ತೆಲ್ಲವಂ ಪಿಂದೆ ತಾಂಯೆರದಳ್ವಾಲೆರವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ

**ಆಣೆಕಟ್ಟು ಮತ್ತು ಕಾಲುವೆಗಳು :** ವಿಜಯನಗರ ಪಟ್ಟಣದ ಪಕ್ಕದಲ್ಲಿಯೇ ಹರಿಯುತ್ತಿರುವ ತುಂಗಭದ್ರಾ ನದಿಗೆ ಆಣೆಕಟ್ಟನ್ನು ಕಟ್ಟಿ ಅಲ್ಲಿಂದ ಕಾಲುವೆ ಮುಖಾಂತರ ಕೋಟೆಯೊಳಗೆ ನೀರು ಹರಿಸಲಾಗಿತ್ತು. ಇಂದಿಗೂ ಅಂಥ ಕಾಲುವೆಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಮುಖ್ಯವಾದ ಕಾಲುವೆಗಳಲ್ಲಿ ವಿಜಯನಗರ ತುರ್ತಾ ಕಾಲುವೆ[21]ಯೂ ಒಂದು. ಇದನ್ನು ಶಾಸನಗಳು ಹಿರಿಯ ಕಾಲುವೆ ಎಂದು ಕರೆದಿವೆ. ಈ ಕಾಲುವೆಯು ಆಣೆಕಟ್ಟಿನಿಂದ ಪ್ರಾರಂಭವಾಗಿ ೬.೨ ಕಿ.ಮೀ. ದೂರದಲ್ಲಿ ಮಾತಂಗ ಪರ್ವತದ ಕಲ್ಲು ಬಂಡೆಯನ್ನು ಸೀಳಿಕೊಂಡು ಮುಂದೆ ಸಾಗುತ್ತದೆ. ಬಂಡೆಯನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದ್ದು, ಶಾಸನಗಳಿಂದ ತಿಳಿಯುತ್ತದೆ. ಈ ಕಾಲುವೆಯು ಕೋಟೆಯೊಳಗಿನ ಉದ್ದಾನ ವೀರಭದ್ರ ದೇವಾಲಯದ ಹತ್ತಿರ ಹರಿದು ಕೃಷ್ಣಾಪುರದ ಪೇಟೆಗೆ ನೀರನ್ನು ಒದಗಿಸಿದೆ.[22] ಊಟದ ಕಾಲುವೆಯ ಮಹಾನವಮಿ ದಿಬ್ಬವಿರುವ ಆವರಣದ ಬಳಿ ರಸ್ತೆಯ ಎಡಕ್ಕೆ ಭೋಜನಶಾಲೆಯೆಂದು ಕರೆಯುವ ಸ್ಥಳದ ಬಳಿ ಹರಿದಿದೆ. ಇಲ್ಲಿ ಒಂದು ಚಿಕ್ಕ ಕಾಲುವೆಯ ದಂಡೆಯ ಮೇಲೆ ಹಸಿರು ಬಣ್ಣದ ಕಲ್ಲುಚಪ್ಪಡಿಗಳನ್ನು ಜೋಡಿಸಿದೆ. ಚಪ್ಪಡಿಗಳ ಮಧ್ಯದಲ್ಲಿ ತಟ್ಟೆ ಮತ್ತು ಬಾಳೆ ಎಲೆಯ ಆಕಾರದ ತಗ್ಗು ಇದ್ದು ಸುತ್ತಲೂ ಬಟ್ಟಲಿನಾಕಾರದ ತಗ್ಗುಗಳಿವೆ. ಇವುಗಳನ್ನು ಊಟಕ್ಕೆ ಉಪಯೋಗಿಸುತ್ತಿದ್ದರೆಂಬುದು ಸ್ಥಳಿಯ ಪ್ರತೀತಿ. ಹಾಗಾಗಿ ಇದರ ಪಕ್ಕದಲ್ಲಿ ಹರಿದಿರುವ ಕಾಲುವೆಗೆ ಊಟದ ಕಾಲುವೆ ಎಂದು ಹೆಸರು ಬಂದಿದಿದೆ. ಹಿಗೆ ತುರ್ತಾ ಹಾಗೂ ಊಟದ ಕಾಲುವೆಗಳು ಕೋಟೆಯೊಳಗಿನ ಜನರ ದಾಹವನ್ನು ಇಂಗಿಸಿವೆ.

**ಕೆರೆಗಳು :** ವಿಜಯನಗರದ ರಾಜಧಾನಿಯಲ್ಲಿ ಕೆರೆಗಳು ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ. ಅರಸರು ಈ ಭಾಗದ ಮಳೆಯ ವೈಪರೀತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸಿದ್ದಾರೆ.[23] ವಿಜಯನಗರ ಕೆರೆಗಳ ಬಗ್ಗೆ ಎಂ.ಎಲ್. ಸರಸ್ವತಿಯವರು, ಜಿ.ಎಸ್.ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಸಿ.ಟಿ.ಎಂ. ಕೊಟ್ರಯ್ಯ, ಡಾ. ವಾಸುದೇವನ್, ಎಂ.ಕೊಟ್ರೇಶ್ ಇವರು ಸಂಶೋಧನೆ ಮಾಡಿರುವರು. ರಾಜಧಾನಿಯ ಕೋಟೆಯ ಒಳಗೂ ನೀರಿನ ವ್ಯವಸ್ಥೆಗಾಗಿ ಕೆರೆಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುವ ಅಂಶ. ಇಲ್ಲಿ ಭೂಪತಿ ಕೆರೆ,[24] ಕಮಲಾಪುರದ ಕೆರೆ,[25] ಕೃಷ್ಣರಾಯ ಸಮುದ್ರದ ಕೆರೆ,[26] ಕೋಟೆಯೊಳಗಿರುವ ಮುಖ್ಯ ಕೆರೆಗಳಾಗಿವೆ. ಇವುಗಳಲ್ಲಿ ಕಮಲಾಪುರದ ಕೆರೆ ಮಾತ್ರ ಉಳಿದುಕೊಂಡಿದೆ.

**ಕೊಂಡಗಳು :** ನಿಸರ್ಗದತ್ತ ಕಲ್ಲುಬಂಡೆಗಳನ್ನು ಕಡಿದು ನೀರಿನ ವ್ಯವಸ್ಥೆಗಾಗಿ ಕೊಂಡಗಳನ್ನು ನಿರ್ಮಿಸಿಕೊಂಡಿದ್ದರು. ಅವುಗಳಲ್ಲಿ ನರಸಿಂಹ ದೇವಾಲಯದ ಉತ್ತರಕ್ಕೆ ನದಿಯ ದಡದಲ್ಲಿರುವ ಸೀತಾಕೊಂಡ.[27] ಬೇಟೆಕಾರರ ಹೆಬ್ಬಗಿಲಿನ ಹಿಂದೆ ಇರುವ ಒರತೆಯ ಕೊಂಡ[28] ಮುಖ್ಯವಾಗಿವೆ.

ಬಂಡೆಯ ಮೇಲೆ ಪ್ರಕೃತಿ ನಿರ್ಮಿತ ಚಿಕ್ಕ ತೊಟ್ಟಿಯಾಕಾರದ ತಗ್ಗುಗಳನ್ನು ನೀರಿನ ಸಂಗ್ರಹಣೆಗಾಗಿ ಉಪಯೋಗಿಸಿಕೊಂಡಿದ್ದರು. ಇಂಥ ತೊಟ್ಟಿಗಳನ್ನು ರಾಜಧಾನಿಯ ಅನೇಕ ಭಾಗಗಳಲ್ಲಿ ಕಾಣಬಹುದು ಮತ್ತು ಕೆಲವು ತೊಟ್ಟಿಗಳನ್ನು ಸಮಾಜದ ಬಗ್ಗೆ ಕಾಳಜಿ ಇರುವವರು ಮಾಡಿಸಿರುವಂತೆ ಶಾಸನಗಳು ಹೇಳುತ್ತವೆ. ವಿರೂಪಾಕ್ಷ ತೇರುಬೀದಿಯಲ್ಲಿ ಕಂಪ್ಲಿಮಠದ ಪಕ್ಕದಲ್ಲಿರುವ ತೊಟ್ಟಿಯನ್ನು ಅಬರಾಜು ತಿಮಪ ಮಾಡಿಸಿದ.[29] ಕೋದಂಡರಾಮ ದೇವಾಲಯದ ಹತ್ತಿರವಿರುವ ತೊಟ್ಟಿಯನ್ನು ತುಳು ಬನವಾಸಿಯ ಮಗ ಕತ್ತಲಬಯ್ಯನು ಮಾಡಿಸಿದ.[30] ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತಾ ಕಾಲುವೆಯ ಬಲದಂಡೆಯ ಹತ್ತಿರ ದೊಡ್ಡ ಕಲ್ಲಿನೊಳಗೆ ತೊಟ್ಟಿಯನ್ನು[31] ಕಟ್ಟಿಸಿರುವಂತೆ ತಿಳಿದುಬರುವುದು.

**ಬಾವಿಗಳು :** ಬಾವಿಗಳು ಮಾನವ ನಿರ್ಮಿತವಾದವು. ಇವುಗಳಲ್ಲಿ ಎರಡು ಪ್ರಕಾರಗಳಿವೆ, ಕುಡಿಯುವ ನೀರಿನ ಬಾವಿ ಮತ್ತು ಬಳಸುವ ನೀರಿನ ಬಾವಿಗಳೆಂದು. ವಿಜಯನಗರ ರಾಜಧಾನಿಯಲ್ಲಿ ನೂರಾರು ಬಾವಿಗಳು ಇದ್ದವಾದರೂ ಇಲ್ಲಿ ಶಾಸನಗಳಲ್ಲಿ ಬರುವ ಬಾವಿಗಳನ್ನು ಮಾತ್ರ ಹೇಳಲಾಗಿದೆ. ಮಾತಂಗ ಪರ್ವತದ ಹತ್ತಿರ ದೊಡ್ಡಬಾವಿ ಇದೆ. ಇದನ್ನು ಶಾಸನಗಳಲ್ಲಿ ಮಹಾದೇವಿ ಅಕ್ಕನ ಬಾವಿ ಮತ್ತು ಕೆಳಬಾವಿಯೆಂದು ಉಲ್ಲೇಖಿಸಿದೆ.[32] ಹೊದೆಯ ಬಾಗಿಲ ಉತ್ತರಕ್ಕೆ ಗುಡ್ಡದ ಪಕ್ಕದಲ್ಲಿರುವ ಬಾವಿಯನ್ನು ದೇವರಾಯನು ಕ್ರಿ.ಶ. ೧೪೧೧ ರಲ್ಲಿ ಕಟ್ಟಿಸಿದಂತೆ ಶಾಸನವು ಹೇಳುತ್ತದೆ.[33] ಸಿಂಗಾಪುರದ ಹೆಬ್ಬಾಗಿಲಿನ ಈಶಾನ್ಯಕ್ಕೆ ಕಟ್ಟಿಗೆ ಅಹ್ಮದ್ ಖಾನನ ಧರ್ಮಶಾಲೆ ಇರುವುದು ಇದರ ಪಕ್ಕದಲ್ಲಿ ಬಾವಿ ಇದೆ. ಇದನ್ನು ಅಹ್ಮದ್ ಖಾನನು ಕ್ರಿ.ಶ. ೧೪೩೯ ರಲ್ಲಿ ನಿರ್ಮಿಸಿದಂತೆ ಶಾಸನವಿದೆ.[34] ಬೇಟೆಕಾರರ ಹೆಬ್ಬಾಗಿಲಿನ ಈಶಾನ್ಯಕ್ಕೆ ಲಿಂಗನಬಾವಿ ಮತ್ತು ರಂಗನಾಥನ ಬಾವಿಗಳಿವೆ.[35] ಇವುಗಳು ಕೋಟೆಯೊಳಗಿನ ಜನತೆಯ ಜೀವಸೆಲೆಯಾಗಿದ್ದವು.

**ವಿದೇಶಿಯರು ಕಂಡ ವಿಜಯನಗರದ ಕೋಟೆ**

ವಿಶ್ವವಿಖ್ಯಾತ ಹಂಪಿಗೆ ಕ್ರಿ.ಶ. ೧೪ನೆಯ ಶತಮಾನದಿಂದ ಇಂದಿನವರೆಗೂ ವಿದೇಶಿ ಪ್ರವಾಸಿಗರು, ಸಂಶೋಧಕರು, ವ್ಯಾಪಾರಿಗಳು, ಸಂದರ್ಶಕರು, ರಾಯಭಾರಿಗಳು ಬರುತ್ತಲೇ ಇದ್ದು, ಅವರು ತಮಗಾದ ಅನುಭವಗಳನ್ನು ದಾಖಲಿಸುತ್ತಲೇ ಬಂದಿದ್ದಾರೆ. ವಿಜಯನಗರದ ಸಮಕಾಲೀನ ಪಾಶ್ಚಾತ್ಯ ಬರಹಗಾರರು ಮತ್ತು ಪ್ರವಾಸಿಗರು ತಾವು ಇಲ್ಲಿ ಕಂಡುಂಡ ಅನುಭವ ಕಥನಗಳನ್ನು ತಮ್ಮ ಬುದ್ಧಿಮತಕ್ಕೆ ಅನುಸಾರವಾಗಿ ಆತ್ಮಕಥನಗಳಲ್ಲಿ, ದಿನಚರಿಗಳಲ್ಲಿ ಬರೆದಿಟ್ಟಿದ್ದಾರೆ. ಅಂಥವರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದವರೆಂದರೆ ನೀಕೋಲೆ ಕೌಂಟಿ, ಅಬ್ದುಲ್ ರಜಾಕ್, ನಿಕೇಟಿನ್, ಡ್ಯೂರಾಟೆ ಬಾರ್ಬೋಸ್, ಡಾಮಿನಿಗೊ ಪೇಸ್, ವಾರ್ಥಿಮಾ, ನ್ಯೂನಿಜ್ ಇವರುಗಳು ತಾವು ಕಂಡ ವಿಜಯನಗರದ ಕೋಟೆಯ ಬಗ್ಗೆ ಈ ಕೆಳಗಿನಂತೆ ವರ್ಣಿಸಿದ್ದಾರೆ.

**ನೀಕೋಲೆ ಕೌಂಟಿ :** ಇವನು ದಕ್ಷಿಣ ಯುರೋಪಿನ ವೆನಿಸ್ ಪಟ್ಟಣದವನು. ಈತ ತನ್ನ ಹೆಂಡತಿಯೊಡನೆ ಕ್ರಿ.ಶ. ೧೪೨೦ ರಲ್ಲಿ ಎರಡನೇ ದೇವರಾಯನ ಆಳ್ವಿಕೆಯಲ್ಲಿ ವಿಜಯನಗರಕ್ಕೆ ಬಂದಿದ್ದನು. ಈತನು ಕೋಟೆಯ ಬಗ್ಗೆ ಈ ಕೆಳಗಿನಂತೆ ಹೇಳಿದ್ದಾನೆ. ದೊಡ್ಡಪಟ್ಟಣವಾದ ವಿಜಯನಗರವು ಕಡಿದಾದ ಗುಡ್ಡಗಳ ಹತ್ತಿರ ಇದೆ. ಈ ಪಟ್ಟಣದ ಸುತ್ತಳತೆ ೬೦ ಮೈಲಿಗಳು. ಪಟ್ಟಣದ ಕೋಟೆ ಗೋಡೆಗಳನ್ನು ಗುಡ್ಡದ ಮೇಲೆಯೂ ಏರಿಸಲಾಗಿದೆ. ಆ ಪಟ್ಟಣದಲ್ಲಿ ೯೦,೦೦೦ ಸೈನಿಕರಿದ್ದಾರೆ.[36]

“The great city of Bijenegalia is situated near very steep mountains. The circumtrance of the city si sixty miles, its walls are carried up to mountains and Enclose the valleys at their foot, so that its Extent is there by increased in this city there are ninety thousand men fit to bear arms.”[37]

**ಅಬ್ದುಲ್ ರಜಾಕ್ :** ಇವನು ಪರ್ಶಿಯಾದ ರಾಯಭಾರಿ. ಕ್ರಿಶ. ೧೪೪೩ ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಆತ ತನ್ನ ಪ್ರವಾಸ ಕಥನದ ಅನುಭವದಲ್ಲಿ ವಿಜಯನಗರದ ಕೋಟೆಯ ಬಗ್ಗೆ ಹೀಗೆ ಹೇಳುತ್ತಾನೆ. ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ.

ಒಂದನೆಯದುರ್ಗದ ಸುತ್ತ ಮನುಷ್ಯನ ಎತ್ತರದ ಕಲ್ಲು ಕಂಬಗಳನ್ನು ಭೂಮಿಯಲ್ಲಿ ಅರ್ಧ ಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಹೇಗ ಹೂತಿದ್ದಾರೆಂದರೆ ರಾವುತನಾಗಲೀ ಪದಾತಿಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ ದುರ್ಗದ ಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಳು ಬಹು ಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನೂ ಸಂಪೂರ್ಣ ಪರೀಕ್ಷೆ ಮಾಡದೇ ಒಳಗೆ ಬಿಡುವುದಿಲ್ಲ. ಇವರು ಸುಂಕವಸೂಲಿಯನ್ನು ಮಾಡುತ್ತಾರೆ ಎರಡನೆಯ ಕೋಟೆ ವಿಶಾಲವಾದ ಜಾಗವನ್ನು ಆಕ್ರಮಿಸಿದೆ. ಇದರಂತೆ ನಾಲ್ಕು ಐದು ಮತ್ತು ಆರನೆಯ ಕೋಟೆಗಳಿವೆ. ಎಲ್ಲಾ ಕೊಟೆಗಳ ಮಧ್ಯದಲ್ಲಿರುವ ಏಳಣೆಯ ಕೋಟೆ ಆಕ್ರಮಿಸಿಕೊಂಡಿರುವ ಜಾಗ ಹೆರಾತ್ ನಗರದ ಮಾರ್ಕೆಟ್ ಜಾಗದ ಹತ್ತರಷ್ಟು ವಿಶಾಲವಾಗಿದೆ. ಇಲ್ಲಿ ರಾಜನು ವಾಸಮಾಡುವ ಅರಮನೆಯಿದೆ. ಉತ್ತರದಿಕ್ಕಿನಲ್ಲಿ ಮೊದಲನೆ ಕೋಟೆಯ ಹೆಬ್ಬಾಗಿಲಿನಿಂದ ಹಿಡಿದು ದಕ್ಷಿಣದಲ್ಲಿರುವ ಹೆಬ್ಬಾಗಿಲಿಗೆ ಎರಡು ಪರಸಾಂಗುಗಳಷ್ಟು ದೂರವಿದೆ. ಪೂರ್ವದಿಂದ ಪಶ್ಚಿಮಕ್ಕೂ ಅಷ್ಟೇ ದೂರ.[38]

ಮೊದಲನೆಯ ಕೋಟೆಗೂ ಎರಡನೆಯಕೋಟೆಗೂ ಮಧ್ಯ ಇರುವ ಜಾಗದಲ್ಲಿ ಅಂದರೆ ಮೂರನೆ ಕೋಟೆವರೆಗೆ ಇರುವ ಜಾಗದಲ್ಲಿ ಬೇಸಾಯದ ಹೊಲಗಳೂ, ಮನೆಗಳೂ ಮತ್ತು ತೋಟಗಳಿವೆ. ಮೂರನೆ ಕೋಟೆಯಿಂದ ಎರಡನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನು ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಗಳನ್ನೂ ನೋಡಬಹುದು. ರಾಜನ ಅರಮನೆಯ ಹೆಬ್ಬಾಗಿಲಿನಲ್ಲಿ ಎದುರು ಬದಿರಾಗಿ ನಾಲ್ಕು ಅಂಗಡಿ ಬೀದಿಗಳಿವೆ. ಉತ್ತರದಲ್ಲಿ ರಾಯ್‌ನ ಅರಮನೆಯ ಮಹಾದ್ವಾರವಿದೆ.[39]

“The city of Bidinagar is such that the pupil of the eye has never seen a place like it,and the year of interlligence has never been informed that there existed any thing to equal it in the wold. it is build in such a manner that seven citadels and the same number of walls enclose each other. Around the first citadel are stones of the height of a man, one half of which sunk in the ground while the other half rises above it. These are fixed one beside other in such a manner that no horse or foot soldier could boldly or with ease approach the citadel”

“Other citadel appaered like round shape build on summit of mountain and constructed of stone and lime. It has very solid gates, the guards of which are constantly at thair post and examine every thing with severe inspection.”

“The seventh fortress is to north and is the place of the king. The space which seperates the first fortress, is filled with the third fields and with ouses and gardens. In the space from the third to the seventh, one meets a numberless crowed of people, many shops and bazars. By the king’s palace are four bazars, placed opposite each other. On the north is the portico of ‘Rai’. Above eac bazar is lofty arcode with magnificante gallery, but the audiancehall of the king’s palace is elevated above all the rest. The bazars are extremely long and Broad.”

“Each elephant has seperate compartment, the walls of which are solid, and roof compose of strong pieces of wood… opposite the mint is the house of the Governor, where are stationed twele thousand soldiers on guards.”[40]

**ನಿಕೆಟಿನ್ :** ಈತ ರಷ್ಯಾದ ಪ್ರವಾಸಿ. ವ್ಯಾಪಾರಕ್ಕಾಗಿ ಕ್ರಿ.ಶ ೧೪೭೦ ರಲ್ಲಿ ಭಾರತಕ್ಕೆ ಬಂದ. ಬೀದರ್‌ನಲ್ಲಿ ನಾಲ್ಕು ವರ್ಷಗಳಿದ್ದು, ಬಹುಮನಿ ರಾಜ್ಯದ ಬಗ್ಗೆ ತನ್ನ ಅನುಭವಗಳನ್ನು ಹೇಳುತ್ತಾ ವಿಜಯನಗರದ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ. ವಿಜಯನಗರದಲ್ಲಿ ಒಂದು ಲಕ್ಷ ಸೈನಿಕರು ಮತ್ತು ೫೦,೦೦೦ ಕುದುರೆಗಳುಳ್ಳ ಅಶ್ವದಳವೂ ಇದೆ. ಇಲ್ಲಿ ಹಿಂದೂ ಸುಲ್ತಾನನಾದ ಕದಮ್ ಬಹಳ ಬಲಶಾಲಿಯಾಗಿದ್ದಾನೆ. ಅವನಲ್ಲಿ ದೊಡ್ಡ ಸೈನ್ಯವಿರುವುದರಿಂದ ವಿಜಯನಗರದ ಸುತ್ತಲೂ ಮೂರು ಕೋಟೆಗಳಿವೆ. ಒಂದು ಬದಿಗೆ ನದಿ ಹರಿಯುತ್ತಿದೆ. ಇನ್ನೊಂದು ಬದಿಗೆ ದಟ್ಟವಾದ ಕಾಡು ಇದೆ.[41]

Vijayanagara City is surrounded by theree Forts and interesected by a River, bordering on the side by a dreadful jungle and on the other a dale, the town is impregnable.[42]

**ಡ್ಯೂರಾಟೆ ಬಾರ್ಬೋಸ್:** ಇವನು ಕ್ರಿ.ಶ. ೧೫೧೪೧೫ ರಲ್ಲಿ ಕೃಷ್ಣದೇವರಾಯನ ಆಳ್ವಿಕೆ ಅವಧಿಯಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಪೋರ್ಚುಗಲ್ಲಿನಿಂದ ಬಂದಿದ್ದನು. ವಿಜಯನಗರದ ಬಗ್ಗೆ ಹೇಳುವಾಗ ಕೋಟೆಯನ್ನು ಕುರಿತು ಪರ್ವತಗಳಿಂದ ೪೫ ರಹದಾರಿ ದೂರದಲ್ಲಿ ಬಿಜನಗರ ಎಂಬ ಬಹುದೊಡ್ಡ ನಗರವಿದೆ. ಅದು ವಿಪುಲ ಜನಸಂಖ್ಯೆ ಉಳ್ಳದ್ದೂ, ಒಂದು ಬದಿಯಲ್ಲಿ ಉತ್ತಮ ಗೋಡೆಯಿಂದ ಇನ್ನೊಂದು ಬದಿಯಲ್ಲಿ ನದಿಯಿಂದ ಮತ್ತೊಂದು ಬದಿಯಲ್ಲಿ ಪರ್ವತದಿಂದ ಸುತ್ತುವರೆಯಲ್ಪಟ್ಟಿದೆ. ನಗರವು ಸಮತಲ ನೆಲದ ಮೇಲಿದೆ[43] ಎಂದು ದಾಖಲಿಸಿದ್ದಾನೆ.

“Forty five leauges from these mountains, there is very large city, which is called Bijanagar, Very populaors and surrounded on one side by a very good wal and another by river and on the another by mountain. The city is on a level ground….” “The King keeps at all times nine hundred elephants and more twenty thousand houses, all are brought with his own money.[44]

**ಡಾಮಿನಿಗೊ ಪೇಸ್** : ಈತನು ಕ್ರಿಶ. ೧೫೨೦ ರಲ್ಲಿ ವಿಜಯನಗರಕ್ಕೆ ಭೇಟಿಕೊಟ್ಟ ಪೋರ್ಚ್‌ಗೀಸ್ ಪ್ರವಾಸಿಗ. ವಿಜಯನಗರ ಕೋಟೆಯ ಬಗ್ಗೆ ಇಲ್ಲಿಯ ನಗರ ಮತ್ತು ಪಟ್ಟಣಗಳು ಕೋಟೆಗಳನ್ನು ಹೊಂದಿದ್ದು, ಅವು ಸ್ವಾವಲಂಬಿಯಾಗಿದ್ದು, ಸುಂದರವಾಗಿದೆ. ಪಶ್ಚಿಮಾ ಕರಾವಳಿಯಿಂದ ವಿಜಯನಗರಕ್ಕೆ ಮಾರ್ಗದ ಬಗೆಗೆ ಹೇಳುತ್ತಾ ಪ್ರಥಮಶ್ರೇಣಿ ಅರ್ಥಾತ್ ಬಯಲಿನಿಂದ ಮೇಲೆ ಕಾಣುವ ಶ್ರೇಣಿಯನ್ನು ವರ್ಣಿಸುತ್ತಾ ಈ ಗುಡ್ಡಗಳಲ್ಲಿ ಆ ಬದಿಯಿಂದ ಮುಖ್ಯ ಪ್ರವೇಸ ಮಾರ್ಗವಿತ್ತು ಎಂದು ಹೇಳುತ್ತಾನೆ. ಇದನ್ನು ಸೇರಿದಂತೆ ಇಲ್ಲಿಯ ಗೋಡೆಯನ್ನು ರಾಜಾಕೃಷ್ಣ ಕಟ್ಟಿಸಿದನೆಂದು ಹೇಳುತ್ತಾನೆ.[45]

“Bisanga (Hampi-Vijayanagara) is the capital of all the kinglond where the kind always resides, inside the city, very beautiful rows of building made after their manner with flat roofs…. and on the pillers are other images, smaller images, yet more subordinable, between these images and piller run a desing oif ofliage.”[46]

**ವಾರ್ಥಿಮಾ :** ವಿಜಯನಗರಕ್ಕೆ ಕ್ರಿ.ಶ. ೧೫೦೫ ರಲ್ಲಿ ಬಂದ ಇಟಾಲಿಯನ್ ಪ್ರವಾಸಿಯಾಗಿದ್ದಾನೆ. ವಿಜಯನಗರವನ್ನು ಬಲ ಮತ್ತು ಭದ್ರ ಗೋಡೆಗಳುಳ್ಳ ಮಹಾನಗರವೆಂದು ವರ್ಣಿಸಿದ್ದಾನೆ. ಅದು ಗುಡ್ಡದ ಬದಿಯಲ್ಲಿ ಸ್ಥಾಪಿತವಾಗಿದೆ ಮತ್ತು ಅದರ ಸುತ್ತಳತೆ ೭ ಮೈಲು ಇದೆ. ಅದಕ್ಕೆ ಗೋಡೆಗಳ ಮುಮ್ಮಡಿ ವೃತ್ತಕವಿದೆ ಎಂದಿದ್ದಾನೆ.[47]

“A very large and strongly walled city, seven miles in circumference, well sheltered by mountains, very wealthy and well equipped city situated on a beautiful site and enjoying and excellent climate”[48]



ಹಂಪಿ ಕೋಟೆಯ ನಕ್ಷೆ: ೧. ಸಿಂಘಾರದ ಹೆಬ್ಬಾಗಿಉಲ, ೨. ಸೋಮವಾರದ ಬಾಗಿಲು, ೩. ಅರಮನೆ ಪ್ರದೇಶ, ೪. ಕೋಟಿಶಂಕರದೇವರ ಬಾಗಿಲು, ೫. ಭೀಮನ ಹೆಬ್ಬಾಗಿಲು, ೬. ಗುಮ್ಮಟದ ಬಾಗಿಲು, ೭. ಬೇಟೆಕಾರರ ಹೆಬ್ಬಾಗಿಲು, ೮. ಉದಯಗಿರಿ ಬಾಗಿಲು, ೯. ಅರೆಶಂಕರ ಬಾಗಿಲು, ೧೦. ಎರಡನೆಯ ಪೆನುಗೊಂಡ ಬಾಗಿಲು, ೧೧. ಒಂದನೆಯ ಪೆನುಗೊಂಡ ಬಾಗಿಲು, ೧೨. ಹೂವಿನ ಬಾಗಿಲು ೧೩. ಆನೆಗೊಂದಿ, ೧೪. ಹೇಮಕೂಟ, ೧೫. ಮಾತಂಗ ಪರ್ವತ, ೧೬. ಮಲ್ಯವಂತ ಪರ್ವತ, ೧೭. ದೇವಾಲಯದ ಪುಷ್ಕರಣಿಗಳು, ೧೮. ಅಚ್ಯುತಪುರದ ಅಚ್ಯುತಪೇಟೆ, ೧೯. ರೆಮ್ಮುದಿಡಡಿ, ೨೦. ಮೀಸರಗಂಡನ ಕೊತ್ತಳ, ೨೧. ಮದನ ಕೊತ್ತಳ, ೨೨. ಆನೆಗೊಂದಿ ಕೊತ್ತಳ, ೨೩. ಪ್ರತಾಪ ಕೊತ್ತಳ, ೨೪. ಮಾತಂಗ ದೇವರ ಕೊತ್ತಳ, ೨೫. ಮಳಲ ವಿನಾಯಕ ಕೊತ್ತಳ, ೨೬. ಹಂಪೆಯ ಕೊತ್ತಳ.

**ನ್ಯೂನಿಜ್ :** ಪೋರ್ಚುಗೀಸ್ ಪ್ರವಾಸಿಯಾದ ಈತನು ಕ್ರಿ.ಶ. ೧೫೩೫-೩೬ ರಲ್ಲಿ ಅಂದರೆ ಅಚ್ಯುತದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿನೀಡಿದ್ದನು. ೨ನೇ ಹರಿಹರನ ಉತ್ತರಾಧಿಕಾರಿ ಹೊಸ ಗೋಡೆಗಳು ಮತ್ತು ಗೋಪುರಗಳನ್ನು ಕಟ್ಟಿ ಅದರ ವ್ಯಾಪ್ತಿಯನ್ನು ವಿಸ್ತರಿಸಿ ಮತ್ತು ಕೋಟೆಗಳು ಇನ್ನು ಹೆಚ್ಚು ಸುತ್ತುಗಳನ್ನು ಕಟ್ಟಿಸಿ ವಿಜಯನಗರ ಪಟ್ಟಣವನ್ನು ಬಹಳ ಅಭಿವೃದ್ಧಿ ಪಡಿಸಿದನೆಂದು ಹೇಳಿದ್ದಾನೆ.[49]

“His Cronick is more historical than descriptive of the empire or its capital. He laboured to gather full History of Vijayanagara empire right from the days of its foundation by Harihara and his brothers. He says it was best provided city in the wolrd.[50]

**ಸಮಾರೋಪ**

ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಕಾಲದ ಕೋಟೆಯ ರಚನೆಯಲ್ಲಿ ಹಲವು ವ್ಯತ್ಯಾಸಗಳನ್ನು ನೋಡಬಹುದು. ಈ ವ್ಯತ್ಯಾಸವು ಹಂಪಿ ಕೋಟೆಯ ಬಾಗಿಲುಗಳಲ್ಲಿ ಗುರುತಿಸಬಹುದು. ಈ ಕೋಟೆಯ ಬಾಗಿಲುಗಳು ಕಂಬ ತೊಲೆಗಳಿಂದ ರಚಿತವಾದ ಚೌಕಟ್ಟುಗಳನ್ನು ಹೊಂದಿವೆ. ಈ ಚೌಕಟ್ಟು ಮುಟ್ಟುವ ಮೊದಲು ಪ್ರವೇಶವು ಹಲವು ಕೊನೆಗಳಲ್ಲಿ ತಿರುಗಿ ಅಂಕುಡೊಂಕಾಗಿದೆ. ಬಾಗಿಲು ಮುಂದಿನ ದೊಡ್ಡ

ಆವರಣ ಕೋಟೆಯಷ್ಟೇ ಎತ್ತರವಾದ ಗೋಡೆಗಳಿಂದ ಸುತ್ತುವರೆದಿವೆ. ಚೌಕ ಮತ್ತು ಆಯತಾಕಾರದ ಕೊತ್ತಳಗಳ ಮೇಲೆ ಕಾವಲುಗಾರ ಮಂಟಪ ತಾಣಗಳಿವೆ. ಭೀಮನ ಹೆಬ್ಬಾಗಿಲು ಸಿಂಘಾರದ ಹೆಬ್ಬಾಗಿಲು, ಹೂವಿನ ಹೆಬ್ಬಾಗಿಲುಗಳಲ್ಲಿ ಮೇಲಿನ ಕೆಲವು ಲಕ್ಷಣಗಳನ್ನು ನಾವಿಂದು ಕಾಣಬಹುದು. ಬಾಗಿಲುಗಳಿಗೆ ಅಲಂಕರಿಸುವ ಗಾರೆಯ ಕಮಾನು ಮತ್ತು ಗುಮ್ಮಟಗಳನ್ನು ವಿಜಯನಗರ ಕಾಲದ ಮಧ್ಯಾವಧಿಯಲ್ಲಿ ಅಳವಡಿಸಿದೆ. ಇದಕ್ಕೆ ಉದಾಹರಣೆ ಎಂದರೆ ಹರೆಶಂಕರ ಹಾಗೂ ಗುಮ್ಮಟದ ಬಾಗಿಲುಗಳು. ಇದರಿಂದ ಹಂಪಿಕೋಟೆಯ ರಚನೆಯಲ್ಲಿ ಮುಸ್ಲಿಂ ಪ್ರಭಾವವನ್ನು ಗುರುತಿಸಬಹುದು. ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು, ದಿಡ್ಡಿ ಬಾಗಿಲುಗಳೆಂದು ವಿಂಗಡಿಸಿದುದು ವಿಶೇಷ. ಕ್ರಿ.ಶ. ೧೩೯೯ರ ಹಂಪಿ ಶಾಸನವು ಬೇಟೆಕಾರರ ಬಾಗಿಲನ್ನು ಹೆಬ್ಬಾಗಿಲೆಂದು ಸೂಚಿಸುತ್ತದೆ. ವಿಜಯ ವಿಠ್ಠಲ ದೇವಾಲಯ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿಯ ಪ್ರವೇಶದ್ವಾರವನ್ನು ಬಾಗಿಲೆಂದು ಕರೆದಿದೆ. ಬಹುಪಾಲು ಶಾಸನಗಳು ದಿಡ್ಡಿ ಹಾಗೂ ಕೊತ್ತಳಗಳನ್ನು ಹೆಸರಿಸುತ್ತವೆ. ಯುದ್ಧದ ಸಮಯದಲ್ಲಿ ಈ ಬೃಹದಾಕಾರದ ಕೋಟೆಯ ವಿವಿಧ ಭಾಗಗಳನ್ನು ಶೀಘ್ರದಲ್ಲಿ ಗುರುತಿಸುವ ಉದ್ದೇಶದಿಂದಾಗಿ ಹೆಸರುಗಳನ್ನು ಇಟ್ಟಿರಬಹುದು. ಇದೇ ರೀತಿ ವಿಜಯನಗರ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಮುದಗಲ್ಲು ಕೋಟೆಯ ಭಾಗಗಳನ್ನು ಗುರುತಿಸುವುದಕ್ಕಾಗಿ ಹೆಸರುಗಳನ್ನು ಇಟ್ಟುಕೊಂಡಿರುವುದು ಅಲ್ಲಿಯ ಶಾಸನಗಳಿಂದ ತಿಳಿಯುವುದು.

**ಆಕರ**

ಕೋಟೆ ಕೊತ್ತಳಗಳು : ಒಂದು ಅಧ್ಯಯನ (ಬಳ್ಳಾರಿ ಜಲ್ಲೆ), ೨೦೦೨, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಉ. ೨೩೦-೨೬೨

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಪೂರ್ವೋಕ್ತ, ಪು. ೧೮೯

[2] ಅದೇ, ಪು. ೧೮೯

[3] Supra Ins. No. 124 Pp.23-24

[4] ದೇವರಕೊಂಡಾರೆಡ್ಡಿ ಮತ್ತು ಇತರರು, ೧೯೮೮, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ಪು. ೨೦೩, ಹಂಪಿ. ಕನ್ನಡ ವಿಶ್ವವಿದ್ಯಾಲಯ

[5] ಹೂವಿನ ಬಾಗಿಲು ಮುಂದಿರು ಆಂಜನೇಯ ದೇವಾಲಯದ ಗರ್ಭಗೃಹ ಪ್ರವೇಶದ್ವಾರದ ಪಾರ್ಶ್ವಗಳಲ್ಲಿರುವ ಬಾಗಿಲು ತೋಳಿನ ಮೇಲಿನ ಶಾಸನದಲ್ಲಿ

[6] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ ಪೂರ್ವೋಕ್ತ ಪು. ೨೮೨

[7] ಅದೇ ಪು. ೧೮೮

[8] ಅದೇ ಪು. ೧೮೬

[9] ಅದೇ ಪು. ೨೭೦

[10] ಅದೇ ಪು.೧೮೯

[11] ಅದೇ ಪು.೧೮೮

[12] ಅದೇ ಪು.೧೮೫

[13] ಅದೇ ಪು. ೧೮೫

[14] ಅದೇ ಪು. ೧೨೦

[15] ಅದೇ ಪು. ೨೧೫

[16] ಅದೇ ಪು. ೨೧೫

[17] ಅದೇ ಪು. ೨೧೬

[18] ಅದೇ ಪು. ೨೪೫

[19] ಅದೇ ಪು.೨೪೨

[20] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಪೂರ್ವೋಕ್ತ, ಪು. ೫೬

[21] ಅದೇ, ಪು.೧

[22] ಅದೇ, ಪು.೮೨

[23] ಕೊಟ್ರೇಶ್ ಎಂ., ೧೯೯೭, ವಿಜಯನಗರ ಕೆರೆಗಳು, ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಪು. ೮೨, ಆನೆಗೊಂದಿ, ಹೊಸಪೇಟೆ, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್

[24] ಚನ್ನಬಸಪ್ಪ, ಎಸ್.ಪಾಟೀಲ್, ೧೯೯೬, ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ವಿಜಯನಗರ ಅಧ್ಯಯನ ಸಂಪುಟ ೨, ಪು. ೮೨, ಮೈಸೂರು ಪ್ರಾಚ್ಯವಾಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

[25] ಅದೇ, ಪು. ೬೩

[26] ಅದೇ, ಪು. ೬೩

[27] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಪೂರ್ವೋಕ್ತ, ಪು. ೬೮

[28] ಅದೇ, ಪು. ೮೭

[29] ಅದೇ, ಪು. ೯೨

[30] ಅದೇ, ಪು. ೬೮

[31] ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ಪೂರ್ವೋಕ್ತ ಪುಟ.೬೪

[32] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಪೂರ್ವೋಕ್ತ ಪು. ೯೩

[33] ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ಪೂರ್ವೋಕ್ತ, ಉಪ.೬೫

[34] SII ix (pt II), No. 447

[35] ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ಪೂರ್ವೋಕ್ತ, ಪು.೬೫

[36] ಬಾಲಸುಬ್ರಹ್ಮಣ್ಯ, ಅನುವಾದ, ೨೦೦೦, ಮರೆಯಲಾಗದ ಮಹಾಸಾಮ್ರಾಜ್ಯ, ಪು. ೩೨೫, ಹಂಪಿ, ಕನ್ನಡ ವಿಶ್ವವಿದ್ಯಾಲಯ

[37] Major, India in the 15 th Century, Kaklayuts, London, 1857, p.12

[38] ಅದೇ, ಪು. ೩೫೦

[39] ನಾಗೇಗೌಡ ಎಚ್.ಎಲ್., ೧೯೯೬, ಪ್ರವಾಸಿ ಕಂಡ ಇಂಡಿಯಾ, ಪು. ೧೫೫, ಮೈಸೂರು, ವಿಶ್ವವಿದ್ಯಾಲಯ

[40] Suresh K.M. 1993, Sculptural Art of Hampi, p.9, Mysore: Directorate of Archealog and Museums

[41] ಅಪರಂಜಿ, ಎನ್.ಆರ್.೧೯೮೨, ಕರ್ನಾಟಕ ಇತಿಹಾಸ, ಪು. ೧೭೪, ಗದಗ, ವಿಜಯ ಬುಕ್ ಡಿಪೊ

[42] Sewell Robert, 1962, Forgatton Empire, p. 138, New Delhi.

[43] ಸದಾನಂದ ಕನವಳ್ಳಿ, ಅನುವಾದ, ೧೯೯೨, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೧೩೮, ಹಂಪಿ, ಕನ್ನಡ ವಿಶ್ವವಿದ್ಯಾಲಯ

[44] ಅದೇ, ಪು. ೧೨೯

[45] ಅದೇ, ಪು. ೧೭೬

[46] ಅದೇ, ಪು. ೨೪೩, ೨೭೭

[47] ಅದೇ, ಪು. ೧೨೭

[48] ಅದೇ, ಪು. ೧೦೮

[49] ಅದೇ, ಪು. ೫೪

[50] ಅದೇ, ಪು. ೩೦೧, ೩೦೩

# ೨೪. ಕಮಲಾಪುರದ ಕೋಟೆ

ಹೊಸಪೇಟೆ ತಾಲೂಕಿನ ವಿಶ್ವವಿಖ್ಯಾತ ಸ್ಮಾರಕವೆಂದು ಮನ್ನಣೆ ಪಡೆದ ಹಂಪಿಗೆ ಹೊಂದಿಕೊಂಡಿರುವ ಕಮಲಾಪುರವು ಒಂದು ಪಟ್ಟಣ ಪ್ರದೇಶ. ಹೊಸಪೇಟೆಯಿಂದ ಇದು ೧೧ ಕಿ.ಮೀ. ದೂರದಲ್ಲಿದೆ. ಇದರ ತೀವ್ರತರ ಬೆಳವಣಿಗೆಗೆ ಪ್ರವಾಸಿ ತಾಣವಾದ ಹಂಪಿಯು ಒಂದು ಕಾರಣ. ಹಂಪಿಗೂ ಕಮಲಾಪುರಕ್ಕೂ ನಿಕಟವಾದ ಸಂಬಂಧಗಳಿವೆ. ಹಾಗಾಗಿ ವಿಜಯನಗರ ಕಾಲದ ಕೋಟೆ ಈ ಪಟ್ಟಣದ ದಕ್ಷಿಣ ಭಾಗದಲ್ಲಿದೆ.

ಕಮಲಾದೇವಿ ಎಂಬ ಇಲ್ಲಿಯ ಆರಾಧ್ಯ ದೇವತೆಯ ಹೆಸರಿನಿಂದ ಈ ಗ್ರಾಮವನ್ನು ಕಮಲಾಪುರವೆಂದು ಕರೆದಿರುವುದಾಗಿ ಕೈಫಿಯತ್ತು ಹೇಳುತ್ತದೆ.[1] ಕಂಪಿಲನ ನಾಲ್ಕು ಜನ ಹೆಂಡತಿಯರಲ್ಲಿ ಕಮಲಾಜಿ ಎಂಬುವವಳು ಒಬ್ಬಳು. ಆ ಹಿನ್ನೆಲೆಯಲ್ಲಿ ಕಂಪಿಲನ ರಾಜ್ಯದ ಹೃದಯಭಾಗದಲ್ಲಿದ್ದ ಈ ಗ್ರಾಮಕ್ಕೆ ಆ ಹೆಸರು ಅನ್ವರ್ಥವಾಗಿರಬಹುದೆ?[2] ವಿಜಯನಗರ ಕಾಲದಲ್ಲಿ ವರದರಾಜಮ್ಮನ ಪಟ್ಟಣವೆಂದು ಕರೆಯುತ್ತಿದ್ದುದು ತಿಳಿಯುವುದು.[3] ಕ್ರಿ.ಶ. ೧೫೧೮ರ ಕೃಷ್ಣದೇವರಾಯನ ಶಾಸನದಲ್ಲಿ ಕೃಷ್ಣದೇವರಾಯನ ಹಿರಿಯರಾಣಿ ತಿರುಮಲದೇವಿ ಹಂಪಿ ಹತ್ತಿರದ ಅಂಜನಗಿರಿಯ ಕುಮಾರಗುಂಟೆ ತಿರುವೆಂಗಲನಾಥ ದೇವರ ಸೇವೆಗಾಗಿ ಒಂದು ಮತ್ತರು ಭೂಮಿದಾನ ಮಾಡಿದ ಉಲ್ಲಖವಿದೆ. ಇದರಲ್ಲಿ ಬರುವ ಕುಮಾರಗುಂಟೆ ಮುಂದೆ ಕಮಲಾಪುರವಾಯಿತ್ತೆಂದು ಕುಂ.ಬಾ., ಸದಾಶಿವಪ್ಪ ಅಭಿಪ್ರಾಯಪಡುತ್ತಾರೆ.[4] ಕ್ರಿಶ. ೧೫೩೧ರ ಶಾಸನದಲ್ಲಿ ಕಮಲಾಪುರವು ಕೊಂಡಮಾರಸಯ್ಯನ ಪಾಳ್ಯದಲ್ಲಿರುವುದು ಪ್ರಸ್ತಾಪವಾಗುತ್ತದೆ.[5]

ಮೊದಲನೆಯದಾಗಿ ಈ ಗ್ರಾಮವು ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವುದು ಖಚಿತವಾಗುತ್ತದೆ. ಏಕೆಂದರೆ ಈ ಮುಂಚೆ ಕಮಲಾಪುರ ಇದ್ದ ಬಗ್ಗೆ ಯಾವುದೇ ಆಧಾರವಿಲ್ಲ. ಎರಡನೆಯದಾಗಿ ವಿಜಯನಗರ ಅವಧಿಯಲ್ಲಿ ಸ್ಥಾಪನೆಗೊಂಡ ಬಹುತೇಕ ಗ್ರಾಮಗಳಿಗೆ ವಿಜಯನಗರದ ಅರಸರು ಮತ್ತವರ ರಾಣಿಯರು ಹಾಗೂ ಮಕ್ಕಳುಗಳ ಹೆಸರುಗಳನ್ನೆ ಇಡುತ್ತಿದ್ದುದು ವಾಡಿಕೆ. ಉದಾಹರಣೆಗಾಗಿ ತಿರುಮಲದೇವಿ ಪಟ್ಟಣ (ಹೊಸಪೇಟೆ), ಚಿನ್ನಾಪುರ, ನಾಗಲಾಪುರ, ಕೃಷ್ಣಾನಗರ, ಸಾಲೆ ತಿರುಮಲಪಟ್ಟಣ ಇತ್ಯಾದಿಯಾಗಿ ಈ ಹಿನ್ನೆಲೆಯಲ್ಲಿ ಕಮಲಾ ಎಂದರೆ ಲಕ್ಷ್ಮಿ, ಉತ್ತಮ ಸ್ತ್ರೀ, ಕುಮಾರ, ಲಕ್ಷ್ಮಿಯ ಮಗ, ಮನ್ಮಥ ಇತ್ಯಾದಿ ಅರ್ಥಗಳಿವೆ.

ಕಮಲಾದೇವಿ ಎಂಬುವವಳು ಉತ್ತಮ ಸ್ತ್ರೀ ಇದ್ದು, ಇವಳು ವಿಜಯನಗರದ ಅರಸರೊಂದಿಗೆ ಸಂಬಂಧ ಹೊಂದಿದವಳಾಗಿರಬೇಕು. ಹೀಗಾಗಿ ಅವಳ ಹೆಸರಿನಿಂದಲೇ ಈ ಗ್ರಾಮಕ್ಕೆ ಕಮಲಾಪುರುವೆಂದು ಕರೆದಿರಬಹುದು. ಇದಕ್ಕೆ ಪೂರಕವೆಂಬಂತೆ ವಿಜಯನಗರದ ಅರಸರ "ಗಾಣ (ಸೇವಕಿಯಾದ) ಗಿತ್ತಿ" ಹೆಸರಿನಲ್ಲಿಯೇ ಒಂದು ದೇವಾಲಯ ನಿರ್ವಿಸಿರುವುದು ಕಾಣಬಹುದು.[6]

ಪ್ರಾಚೀನ ಮಾನವನ ಅವಾಸ ಸ್ಥಾನವಾಗಿ ಇತಿಹಾಸ ಕಾಲದಿಂದಲೂ ಇಂದಿನವರೆಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಅಸ್ತಿತ್ವದಲ್ಲಿರುವ ಕಮಲಾಪುರದಲ್ಲಿ ವಿಜಯನಗರ ಕಾಲದ ಕೋಟೆಯೊಂದು ಈ ಗ್ರಾಮ ರಕ್ಷಣೆಗಾಗಿ ನಿರ್ಮಾಣಗೊಂಡಂತೆ ಕಂಡುಬರುತ್ತದೆ.

**ಕೋಟೆಯ ಲಕ್ಷಣಗಳು**

ಕಮಲಾಪುರವು ಬೆಳೆದಂತೆ ಇಲ್ಲಿಯ ಕೋಟೆ ಹಾಳಾಗಿದೆ. ಈಗ ಉಳಿದಿರುವ ಕೆಲವು ಅವಶೇಷಗಳಿಂದ ಈ ಕೋಟೆಯ ಲಕ್ಷಣಗಳನ್ನು ಅರಿಯಲು ಯತ್ನಿಸಿದೆ.

ಸುಮಾರು ೨೦ ಎಕರೆ ಪ್ರದೇಶಗಳಲ್ಲಿ ವಿಸ್ತರಿಸುವ ಈ ಕೋಟೆಯು ಪರಿಘಾ ನೆಲದುರ್ಗ ಪ್ರಕಾರಕ್ಕೆ ಸೇರುತ್ತದೆ. ಚೌಕಾಕಾರದ ಕೋಟೆಯನ್ನು ಬೃಹತ್ ಮತ್ತು ಮಧ್ಯಗಾತ್ರದ ಕಲ್ಲುಹಾಗೂ ಗಾರೆಯಿಂದ ಕಟ್ಟಿದೆ. ಕೋಟೆಯ ಮೇಲ್ಭಾಗದಲ್ಲಿ ಕೈಪಿಡಿ ಗೋಡೆಯನ್ನು ಇಟ್ಟಿಗೆ ಹಾಗೂ ಗಾರೆಯಿಂದ ಕಟ್ಟಿರಬಹುದಾದರೂ ಈಗ ಗೋಚರಿಸುವುದಿಲ್ಲ. ಕೋಟೆಯ ಉತ್ತರ ದಿಕ್ಕಿನಲ್ಲಿ ಗೋಡೆಯ ಮಧ್ಯದಲ್ಲಿ ದೊಡ್ಡ ಬಾಗಿಲಿದೆ. ದಕ್ಷಿಣ ದಿಕ್ಕಿನ ಗೋಡೆಯ ಮಧ್ಯದಲ್ಲಿ ಚಿಕ್ಕ ದಿಡ್ಡಿ ಇದ್ದ ಬಗ್ಗೆ ಪ್ರತೀತಿ ಇದೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳಿವೆ. ಕೋಟೆಯ ಸುತ್ತಲೂ ಕಂದಕವಿದ್ದ ಬಗ್ಗೆ ಅನುಮಾನವಿದೆ.

ಉತ್ತರ ದಿಕ್ಕಿನ ಬಾಗಿಲಿನ ಮೇಲಿನ ಕೈಪಿಡಿ ಗೋಡೆಯಲ್ಲಿ ಚಿಕ್ಕ ಚಿಕ್ಕ ರಂಧ್ರಗಳಿವೆ. ಇಕ್ಕೆಲದ ಗೋಡೆಗಳಲ್ಲಿ ಮೀನು, ಮೊಸಳೆ, ನವಿಲು, ಹಂಸಗಳ ಉಬ್ಬುಗೆತ್ತನೆಗಳಿವೆ. ಈ ಬಾಗಿಲಿನ ಎರಡೂ (ಪೂರ್ವ ಮತ್ತು ಪಶ್ಚಿಮ) ದಿಕ್ಕಿಗೆ ವೃತ್ತಾಕಾರದ ಕೊತ್ತಳಗಳಿವೆ. ಪ್ರವೇಶದ ಎರಡೂ ಬದಿಗೂ ಎತ್ತರವಾದ ಕಟ್ಟೆಗಳಿವೆ. ಈ ಕಟ್ಟೆಗಳಿಗೆ ಹೊಂದಿಕೊಂಡು ನಗರೇಶ್ವರ ದೇವಾಲಯವಿದೆ. ಕೋಟೆಯ ಒಳಗೆ ಕಮಲಾಪುರದ ಗ್ರಾಮವಿದೆ. ಈ ಪ್ರದೇಶವನ್ನು ಕ್ವಾಟೆ, ಕೋಟೆ ಎಂದು ಸ್ಥಳೀಯರು ಈಗಲೂ ಗುರುತಿಸುತ್ತಾರೆ. ಇದರ ಮಧ್ಯಭಾಗದಲ್ಲಿ ಬೃಹದಾಕಾರದ ಕೊತ್ತಳವಿದೆ. ಇದು ೬೦ ಅಡಿ ಎತ್ತರ, ಸುಮಾರು ೧೫೦ ಅಡಿ ಸುತ್ತಳತೆಯನ್ನು ಹೊಂದಿದೆ. ಕೊತ್ತಳದ ಮೇಲೇರಲು ಅನುಕೂಲವಾಗುವಂತೆ ಪಶ್ಚಿಮಾ ದಿಕ್ಕಿಗೆ ಮೆಟ್ಟಿಲುಗಳನ್ನು ನಿರ್ಮಿಸಿ, ಇದಕ್ಕೆ ಚಿಕ್ಕ ಬಾಗಿಲನ್ನು ಜೋಡಿಸಲಾಗಿದೆ. ಈ ಎತ್ತರದ ಕೊತ್ತಳದ ಮೇಲಿಂದ ಇಡೀ ಹಂಪೆ ಪ್ರದೇಶವಲ್ಲದೆ ಸುತ್ತಮುತ್ತಲಿನ ಬಹುತೇಕ ಪ್ರದೇಶಗಳು ಕಂಡುಬರುತ್ತವೆ. ಇದರಿಂದ ಈ ಕೊತ್ತಳದ ಉದ್ದೇಶವನ್ನು ತಿಳಿಯಬಹುದು. ಕೊತ್ತಳದ ಕಾಂಡಭಾಗದಲ್ಲಿ ಚಿಕ್ಕ ಗೂಡೊಂದು ನಿರ್ಮಿಸಿ, ಇದರಲ್ಲಿ ಕಲ್ಲು ಗುಂಡನ್ನಿಟ್ಟು ತಾಯಾಮ್ಮನೆಂದು ಆರಾಧಿಸುತ್ತಾರೆ.

**ಕೋಟೆಯ ನಿರ್ಮಾಣ**

ಕ್ರಿಶ. ೧೫೬೫ರ ನಂತರ ವಿಜಯನಗರ ಅವಸಾನದತ್ತ ನಡೆದಿರುವಾಗ ಅನೇಕ ಪಾಳೆಯಗಾರರು ಸ್ವತಂತ್ರರಾದರು. ಈ ಹಿನ್ನೆಲೆಯಲ್ಲಿ ಕುರುಗೋಡಿನ ಪರಗಣೆಯಲ್ಲಿ ಕಮಲಾಪುರವು ಸೇರಿತ್ತು. ಆಗ ಕುರುಗೋಡಿನ ಪರಗಣೆಯನ್ನು ಆಳುತ್ತಿದ್ದ ಚೆನ್ನರಾಯ ಕ್ರಿ.ಶ. ೧೭೦೩ ರಲ್ಲಿ ಕಮಲಾಪುರ ಕೋಟೆ, ಹುಲಿಮುಖ, ಹುದೇವುಗಳನ್ನು ಕಟ್ಟಿಸಿದನೆಂದು ಕೈಫಿಯತ್ತಿನಲ್ಲಿ ಹೇಳಲಾಗಿದೆ.[7] ಕಮಲಾಪುರದ ಕೋಟೆಯ ಲಕ್ಷಣಗಳಿಗೂ ಮತ್ತು ವಿಜಯನಗರದ ಕೋಟೆ ಹಂಪಿಯ ಲಕ್ಷಣಗಳಿಗೂ ವ್ಯತ್ಯಾಸಗಳು ಬಹಳ ಕಡಿಮೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಕೋಟೆಯು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಪಾಳೆಯಗಾರರ ಅವಧಿಯಲ್ಲಿ ಜೀರ್ಣೋದ್ಧಾರ ಕಂಡಿದೆ.

**ಆಕರ**

ಕೋಟೆ ಕೊತ್ತಳಗಳು : ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ), ೨೦೦೨, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೨೦-೨೨೨

[1] ಕಲಬುರ್ಗಿ ಎಂ.ಎಂ., ಸಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಉಪ. ೪೩೧, ಹಂಪಿ, ಕನ್ನಡ ವಿಶ್ವವಿದ್ಯಾಲಯ

[2] ನಾಗಯ್ಯ ಜೆ.ಎಂ., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಉಪ. ೧೨೧, ಬಳ್ಳಾರಿ ಲೋಹಿಯಾ ಪ್ರಕಾಶನ

[3] ಸುರೇಶ್ ಕೆ.ಎಂ. ಮತ್ತು ಇತರರು, ೧೯೯೮, ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪು. ೬೫, ಹಂಪಿ, ಕನ್ನಡ ವಿಶ್ವವಿದ್ಯಾಲಯ

[4] ಕುಂಬಾಸ, ೧೯೯೦, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಪು. ೨೫, ಕುಂಚೂರು, ಮಾಲತೇಶ ಪ್ರಕಾಶನ

[5] SII, IX (pt. II), No. 533

[6] ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿ ಅಂದರೆ ಕಮಲಾಪುರದಿಂದ ೧ ಕಿ.ಮೀ. ಅಂತರದಲ್ಲಿ ಈ ದೇಗುಲವಿದೆ.

[7] ಕಲಬುರ್ಗಿ, ಎಂ.ಎಂ., ಸಂ. ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು. ४३೬, ಹಂಪಿ ಕನ್ನಡ ವಿಶ್ವವಿದ್ಯಾಲಯ.

## ೨೫. ರಾಮಸಾಗರದ ಕೋಟೆ

ರಾಮಸಾಗರವು ಹೊಸಪೇಟೆಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ರಾಮಸಾಗರದ ಈಶಾನ್ಯ ದಿಕ್ಕಿನ ಬೆಟ್ಟದ ಮೇಲೆ ಈ ಕಿರಿದಾದ ಕೋಟೆ ಇದೆ. ಇದರ ಬಗ್ಗೆ ಯಾವುದೇ ನಿಖರವಾದ ಆಧಾರಗಳಿಲ್ಲ ಆದರೂ ಸಿಕ್ಕಿರುವ ಕೆಲವು ಅಲ್ಪ ಮಾಹಿತಿಗಳಿಂದ ಈ ಕೋಟೆಯ ಬಗ್ಗೆ ಚರ್ಚಿಸಲಾಗಿದೆ.

ತೆಲುಗು ಭಾಷೆಯ ಕನ್ನಡ ಲಿಪಿಯ ತಾಮ್ರಶಾಸನವೊಂದು ತಿಳಿಸುವಂತೆ[1] ಭೀಮಾಜೆಟ್ಟಿ ಎಂಬುವವನು, ಬಲಿಷ್ಠರಾದ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರ ಬಾಗಿಲಿಗೆ ತನ್ನ ಇಜಾರವನ್ನು ಕಟ್ಟಿಸಿ ಮೆರೆಯುತ್ತಿದ್ದನು. ಜೋಡಿ ಮಲ್ಲಪ್ಪನಾಯಕ ಎನ್ನುವವನು, ಈ ಭೀಮಾಜೆಟ್ಟಿಯನ್ನು ಸೋಲಿಸಿದ್ದಕ್ಕಾಗಿ ಆನೆಗೊಂದಿ ಅರಸ ರಾಮರಾಯ ತಲಮಲರಾಜ ದೇವನು, ಬುಕ್ಕಸಾಗರ ಹರಿಯ ಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ ಗ್ರಾಮವನ್ನು ಅದರ ಸಮೀಪವೇ ಇದ್ದ ಕಮಲಾಪುರದ ಕೆರೆಯ ಕೆಳಗಿನ ೩ ಖಂಡುಗದ ಬೀಜಾವರ್ರಿಭೂಮಿಯನ್ನು ಉಂಬಳಿಯಾಗಿ ಕೊಟ್ಟನು. ಅಲ್ಲದೆ ಜೋಡಿಮಲ್ಲಪ್ಪನಾಯಕನಿಗೆ ಭೀಮ ಎಂಬ ಬಿರುದನ್ನು ನೀಡಿದರು. ಈ ಬಿರುದು ನೀಡಿದ ನೆನಪಿಗಾಗಿ ಭೀಮನಕೆರೆ, ಹಿರೇಕೆರೆ, ಚಿಕ್ಕಕೆರೆ, ಹೊಸಕೆರೆ ಹಾಗೂ ರಾಮಸಾಗರದ ಕೆರೆಯನ್ನು ನಿರ್ಮಿಸಿದರು. ಕೆರೆಗಳನ್ನು ಕಟ್ಟಿಸುವುದರ ಮೂಲಕ ಜನಪರ ಕಾರ್ಯಗಳನ್ನು ಮಾಡಿದುದಲ್ಲದೆ ಆನೆಗೊಂದು ರಾಜರ ಹೆಸರಿನಲ್ಲಿ ತಿಮ್ಮಾಪುರಹಳ್ಳಿ, ರಾಮಸಾಗರ ಗ್ರಾಮಗಳನ್ನು ಕಟ್ಟಿಸಿರುವಂತೆ, ಆನೆಗೊಂದಿ ಅರಸರೇ ಈ ಗ್ರಾಮವನ್ನು ಅಸ್ತಿತ್ವಕ್ಕೆ ತಂದರೆಂದು ಮೇಲಿನ ತಾಮ್ರಶಾಸನ ಹೇಳುತ್ತದೆ.[2]

ಕ್ರಿ.ಶ. ೧೫೬೧ರ ಸದಾಶಿವರಾಯನ ಶಾಸನದಲ್ಲಿ ವಿಠ್ಠಲ ದೇವರ ಅಮೃತ ಪಡಿಗೆ ರಾಮಸಾಗರದಲ್ಲಿ ಹತ್ತು ಕೊಳಗ ಗದ್ದೆ ನೀಡಿದಂತೆ ವ್ಯಕ್ತವಾಗುತ್ತದೆ.[3] ಬುಕ್ಕರಾಯನ ಶಾಸನವು ಇಂದಿನ ರಾಮಸಾಗರದ ಪಶ್ಚಿಮಾ ಭಾಗದಲ್ಲಿ ದೊರೆತಿದೆ ಆದರೂ ಅದರಲ್ಲಿ ರಾಮಸಾಗರದ ಉಲ್ಲೇಖವಿಲ್ಲ.[4] ಈ ಮೇಲಿನ ಆಧಾರಗಳಿಂದ ರಾಮಸಾಗರವು ಕ್ರಿ.ಶ. ೧೫೬೧ಕ್ಕಿಂತಲೂ ಮೊದಲೇ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಏಕೆಂದರೆ ತಾಮ್ರಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ ಮತ್ತು ಬುಕ್ಕರಾಯನ ಶಾಸನದಲ್ಲಿ ರಾಮಸಾಗರದ ಪ್ರಸ್ತಾಪವೂ ಇಲ್ಲ.

ಈ ಮೇಲಿನ ಆಧಾರಗಳನ್ನು ಇಟ್ಟುಕೊಂಡು ಮುಂದುವರೆದಂತೆ ಕೋಟೆ ನಿರ್ಮಾಣವನ್ನು ಚರ್ಚಿಸಲಾಗುವುದು. ರಾಮಸಾಗರದ ಕೋಟೆಯ ಪ್ರವೇಶದಲ್ಲಿ ಮೊದಲು ಕಂಡುಬರುವುದು ಭೀಮೇಶ್ವರ ದೇವಸ್ಥಾನ. ಆನೆಗೊಂದಿ ಅರಸರು ಕಷ್ಟಕಾಲದಲ್ಲಿ ಸಹಾಯ ಮಾಡಿದ ಜೋಡಿ ಮಲ್ಲಪ್ಪನಾಯಕನಿಗೆ 'ಭೀಮಾ' ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. ಈ ಸಹಾಯಾರ್ಥ ನೆನಪಿಗಾಗಿ 'ಭೀಮಾ' ಎಂಬ ಬಿರುದಿನ

ಹೆಸರಿನಿಂದಲೇ ಭೀಮೇಶ್ವರ ದೇವಸ್ಥಾನ ನಿರ್ಮಾಣವಾಗಿರಬಹುದು. ಪ್ರಾಯಶಃ ಆಗಲೇ ಅಲ್ಲಿ ಕೋಟೆ ನಿರ್ಮಾಣ ಮಾಡಿರಬೇಕು. ಇಂಥಹ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟಿವೆ.

**ಕೋಟೆಯ ಲಕ್ಷಣಗಳು**

ರಾಮಸಾಗರದ ಈಶಾನ್ಯಕ್ಕಿರುವ ಚಿಕ್ಕ ಬೆಟ್ಟವೊಂದರ ಮೇಲೆ ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಇದು ಗ್ರಾಮರಕ್ಷಣೆಯ ಗಿರಿದುರ್ಗವಾಗಿದೆ. ಕೋಟೆ ಇರುವ ಬೆಟ್ಟದ ಪೂರ್ವಕ್ಕೆ ಕಣಿವೆ ಇದ್ದು ಇದರಲ್ಲಿ ಹೊಲಗಳಿವೆ. ಇದು ಹಿಂದೆ (ವಿಜಯನಗರ ಕಾಲದಲ್ಲಿ) ಉದಯಗಿರಿಗೆ ದಾರಿಯಾಗಿರಬಹುದು. ಏಕೆಂದರೆ ಈ ಕಣಿವೆ ನೈರುತ್ಯಕ್ಕೆ ಸಾಗಿದರೆ ಉದಯಗಿರಿ (ವಿಜಯನಗರ ಕೋಟೆಯ) ಹೆಬ್ಬಾಗಿಲು ಸಿಗುತ್ತದೆ.

ಪಶ್ಚಿಮ ದಿಕ್ಕಿಗೆ ರಾಮಸಾಗರ ಗ್ರಾಮವಿದೆ. ಉತ್ತರಕ್ಕೆ ಇತ್ತೀಚೆಗೆ ನಿರ್ಮಾಣವಾದ ಮನೆಗಳಿವೆ. ದಕ್ಷಿಣಕ್ಕೆ ರಾಮಸಾಗರ ಗ್ರಾಮವು ವಿಸ್ತರಿಸಿದೆ. ಈ ಕೋಟೆಯು ಉತ್ತರಾಭಿಮುಖವಾಗಿದ್ದು, ಸರಳ ಬಾಗಿಲುವಾಡವನ್ನು ಹೊಂದಿದೆ. ಒಳ ಮಧ್ಯಭಾಗದಲ್ಲಿ ದೊಡ್ಡ ಕೊತ್ತಳವಿದೆ. ಇದು ಸುಮಾರು ೩೦ಅಡಿ ಸುತ್ತಳತೆ ಹಾಗೂ ೩೦ ಅಡಿ ಎತ್ತರವಾಗಿದೆ. ವೃತ್ತಾಕಾರದಲ್ಲಿರುವ ಈ ಕೊತ್ತಳವನ್ನು ಮೇಲೇರಿ ಶತ್ರುಗಳನ್ನು ಗಮನಿಸಲು ಅನುಕೂಲವಾಗುವಂತೆ ಕಟ್ಟಲಾಗಿದೆ. ಇದೇ ಲಕ್ಷಣಗಳನ್ನು ಹೋಲುವ ಆರು ಕೊತ್ತಳಗಳು ಕೋಟೆ ಗೋಡೆಗಳಲ್ಲಿವೆ. ಕೋಟೆಯು ಸರಿ ಸುಮಾರು ೧೦ ಅಡಿ ಎತ್ತರವಾಗಿದೆ. ಇದು ೩ರಿಂದ ೫ ಅಡಿಗಳಷ್ಟು ಅಗಲವಾಗಿದ್ದು, ಸುಮಾರು ೩೦೦೦ ಮೀಟರುಗಳಷ್ಟು ಸುತ್ತಳತೆಯನ್ನು ಹೊಂದಿದ್ದು ಬಹು ಕಿರಿದಾದ ಕೋಟೆಯಾಗಿದೆ. ತಳಪಾಯವಿಲ್ಲದೆ ಹಾಸುಬಂಡೆಯ ಮೇಲೆ ಮಧ್ಯಮ ಗಾತ್ರದ ಕಲ್ಲುಗಳಿಂದ ಕೋಟೆಯನ್ನು ನಿರ್ಮಿಸಲಾಗಿದೆ. ಮಧ್ಯದಯಲ್ಲಿ ಕೆಲವು ವಾಸದ ಮನೆಗಳಿದ್ದ ಅವಶೇಷಗಳಿವೆ. ಇಲ್ಲಿ ವಾಸಿಸುತ್ತಿದ್ದ ಜನರಿಗಾಗಿ ಬಾವಿಯೊಂದನ್ನು ನಿರ್ಮಿಸಲಾಗಿತ್ತು. ಇಂದಿಗೂ ಬಾವಿಯಲ್ಲಿ ನೀರು ಇರುವುದು. ಕೋಟೆಯಲ್ಲಿ ಆಂಜನೇಯ ಹಾಗೂ ಭೀಮೇಶ್ವರ ದೇಗುಲಗಳಿವೆ. ಆಂಜನೇಯನ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಉತ್ತರದ ಕೋಟೆಗೋಡೆಗೆ ಹೊಂದಿಕೊಂಡಿದೆ. ಇದರಲ್ಲಿ ಗರ್ಭಗೃಹ ಹಾಗೂ ತೆರೆದ ಸಭಾಮಂಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಗೆತ್ತನೆಯ ಶಿಲ್ಪ ಹಾಗೂ ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಭೀಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಲ್ಲುಗುಂಡನಿಟ್ಟು ಆರಾಧಿಸುತ್ತಾರೆ. ಇಂದಿಗೂ ನಿತ್ಯ ಪೂಜೆ ನಡೆಯುತ್ತದೆ.

ಈ ಪ್ರದೇಶದ ಸುತ್ತಲೂ ಇರುವ ಬೆಟ್ಟಗಳಿಗಿಂತ ಇದು ಎತ್ತರವಾಗಿದೆ. ಮತ್ತು ಮೇಲ್ತುದಿಯಲ್ಲಿ ವಿಶಾಲ ಪ್ರದೇಶವನ್ನು ಹೊಂದಿದೆ. ಈ ಕಾರಣವಾಗಿಯೇ ಇಲ್ಲಿ ಕೋಟೆ ಕಟ್ಟಿರಬೇಕು. ಪ್ರಾಯಶಃ ವಿಜಯನಗರಕ್ಕೆ ಪೂರ್ವದಿಂದ ಶತ್ರುಗಳನ್ನು ತಡೆಹಿಡಿಯುವದಕ್ಕಾಗಿಯೇ ಈ ಚಿಕ್ಕ ಕೋಟೆಯನ್ನು ನಿರ್ಮಿಸಿ ಇಲ್ಲೊಂದು ಸೈನಿಕ ಠಾಣೆಯನ್ನು ಸ್ಥಾಪಿಸಿರಬಹುದಾಗಿದೆ. ಕ್ರಿ.ಶ.೧೮ನೇ ಶತಮಾನದಲ್ಲಿ ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿ ಪುನಃ ಉಪಯೋಗ ಮಾಡಿರುವ ಸಾಧ್ಯತೆಗಳು ಇರುವುವು.

ಆಕರ

ವಿಜಯನಗರ ಅಧ್ಯಯನ ಸಂ.೭, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು.೧೨೦-೧೨೩

[1] ಮೀರಾಸಾಬಿಹಳ್ಳಿ ಶಿವಣ್ಣ, ೨೦೦೧, ನಾಯನಹಟ್ಟಿ ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು (ಸಂ ವಸು ಎಂ.ವಿ.) ಪು.೮೦, ಹಂಪಿ ಕನ್ನಡ ವಿಶ್ವವಿದ್ಯಾಲಯ

[2] ಅದೇ, ಪು.೮೧

[3] ದೇವರಕೊಂಡಾರೆಡ್ಡಿ ಮತ್ತು ಇತರರು, ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಹಂಪಿ ೩, ಪು.೧೩೫, ಹಂಪಿ ಕನ್ನಡ ವಿಶ್ವವಿದ್ಯಾಲಯ

[4] ದೇವರಕೊಂಡಾರೆಡ್ಡಿ ಮತ್ತು ಇತರರು ೧೯೯೮ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಬಳ್ಳಾರಿ ಜಿಲ್ಲೆ ೧, ಪು.೧೬೭, ಹಂಪಿ ಕನ್ನಡ ವಿಶ್ವವಿದ್ಯಾಲಯ

## ೨೬. ಹೊಸಪೇಟೆ ಕೋಟೆ

ಹೊಸಪೇಟೆಯು ಒಂದು ತಾಲೂಕು ಕೇಂದ್ರ. ಹೊಸಪೇಟೆ ತಾಲೂಕು ಇತಿಹಾಸ ಎಂಬುವುದರಲ್ಲಿ ನಗರದ ಇತಿಹಾಸದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ನಗರದ ದಕ್ಷಿಣ ಭಾಗಕ್ಕೆ ಇರುವ ಹಳೇ ಊರಿನ ಜನವಸತಿ ಪ್ರದೇಶವನ್ನು ಈಗಲೂ ಕ್ವಾಟೆ, ಕೋಟೆ ಎಂದು ಕರೆಯುವರು. ಆದರೆ ಕೋಟೆ ಕೊತ್ತಳಗಳ ಯಾವುದೇ ಅವಶೇಷಗಳು ಇಂದು ಅಲ್ಲಿ ಕಾಣುವುದಿಲ್ಲ. ನಗರವು ವೇಗವಾಗಿ ಬೆಳೆಯುತ್ತಿರುವುದರಿಂದ ಇಲ್ಲಿನ ಕೋಟೆ ಕೊತ್ತಲಾವಶೇಷಗಳನ್ನು ನುಂಗಿ ಹಾಕಿದೆ. ಇಲ್ಲಿಯ ಭೌಗೋಳಿಕ ಲಕ್ಷಣಗಳು ಹಾಗೂ ಸ್ಥಳೀಯರ ಹೇಳಿಕೆಯಿಂದಾಗಿ ಕೋಟೆಯ ಉತ್ತರಾಭಿಮುಖವಾಗಿದಂತೆ ತಿಳಿದುಬರುವುದು.

ಹೊಸಪೇಟೆ ಪಟ್ಟಣದ ಇಂದಿರಾನಗರ ಬಡಾವಣೆಯ ಈಶ್ವರನ ಗುಡಿಯಲ್ಲಿರುವ ಶಾಸನದಲ್ಲಿ ಹೊಸಪೇಟೆ ಪ್ರದೇಶದಲ್ಲಿ ಕೋಟೆ ಇದ್ದುದಕ್ಕೆ ಪೂರಕವಾಗಿ ಪ್ರಸ್ತಾಪವು ಕೆಳಗಿನಂತಿದೆ.[1]

ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ
ಶಕ ವರ್ಷಗಳು ೧೪೪೩ನೆಯ ವಿಷು ಸಂವತ್ಸರ ಕಾರ್ತಿ
ಕ ಶು ೧೧ ಪುಣ್ಯಕಾಲದಲ್ಲು ಶ್ರೀಮನ್ಮಹಾರಾಜಾಧಿ ರಾ
ಜಾ ರಾಜಪರಮೇಶ್ವರ ಶ್ರೀ ವೀರ ಪ್ರತಪ ಶ್ರೀ ವೀರ ಕೃಷ್ಣರಾಯಮ
ಹರಾಯರು ಪೃಥವಿ ರಾಜ್ಯಂ ಗೈಉತಯಿರಲು ತಿರುಮ
ಲದೇವಿಯರ ಪಟ್ಟಣದ ನಾಲ್ಕು ಬಾಗಿಲು ಬಳಿಯ ಶ್ರೀ ಕಾಸಿ ವಿ
ಶ್ವೇಶ್ವರನಂ ಪ್ರತಿಷ್ಠಾಕಾಲದಲ್ಲು ಅಭಿಷೇಕ ಪೂಜಾ ನೈವೇದ್ಯಕ್ಕೆ
ತಿರುಮಲದೇವಿ ಪಟ್ಟಣಕ್ಕೆ ಸಲ್ಲುವ ಕೋಟೆಗೆ ಬಡಗಲು ನ
ಯಲ್ಲಂಪಣನ ಕೆರೆಯನು ಶ್ರೀ ಕಾಸಿ ವಿಶ್ವನಾಥ ದೇವರಿಗೆ….

ಈ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಯಲ್ಲಪಣ್ಣನ ಕೆರೆಯ ದಕ್ಷಿಣಕ್ಕೆ ಕೋಟೆ ಇರುವುದನ್ನು ಸೂಚಿಸುತ್ತದೆ. ಯಲ್ಲಪಣ್ಣನ ಕೆರೆಯು ಇಂದು ಬಸವೇಶ್ವರ ಬಡಾವಣೆಯಾಗಿದೆ. ಈಗ ಕೋಟೆಯೆಂದು ಕರೆಯುವ ಪ್ರದೇಶವು ಬಸವೇಶ್ವರ ಬಡಾವಣೆಯಿಂದ ದಕ್ಷಿಣ ದಿಕ್ಕಿಗೆ ೧ ಕಿ.ಮೀ. ದೂರದಲ್ಲಿದೆ. ಕೋಟೆಯಲ್ಲಿ ವಿಜಯನಗರ ಕಾಲದ ರಾಮಲಿಂಗೇಶ್ವರ, ಈಶ್ವರ, ಒಡಕರಾಯ ಆಂಜನೇಯನ ಗುಡಿಗಳಿಲ್ಲದೆ, ಒಂದೆರಡು ಕಡೆ ಕೋಟೆಗೆ ಬಳಸಿದ್ದ ಮಧ್ಯಮಗಾತ್ರದ ಕಣಶಿಲೆಗಳು ಕಂಡುಬಂದಿದೆ.

ವಾಸ್ತವವಾಗಿ ಹೊಸಪೇಟೆಯ ಚಾರಿತ್ರಿಕ ಮಹತ್ವ ಕಳಚೂರಿ ಬಿಜ್ಜಳ ದೇವನ ಕಾಲದಿಂದ ಅಥವಾ ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ.[2] ಹೊಸಪೇಟೆಯ ಸಣ್ಣಕ್ಕಿ ವೀರಭದ್ರ ದೇವಾಲಯದ ಹಿಂಭಾಗದಲ್ಲಿರುವ ಮರದ ಬುಡದಲ್ಲಿ ಕಲ್ಯಾಣ ಚಾಳುಕ್ಯರ ಶಾಸನ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿ ಕೋಟೆ ಇದ್ದುದರ ಬಗ್ಗೆ ಚಾಳುಕ್ಯರ ಶಾಸನಗಳು ಏನು ಹೇಳುವುದಿಲ್ಲ. ಆಗ ಹೊಸಪೇಟೆಯ ಚಿಕ್ಕ ಗ್ರಾಮವಾಗಿತ್ತೆಂದು ತಿಳಿಯುವುದು.[3]

ಹೊಸಪೇಟೆಯ ಜಂಬುನಾಥ ದೇವಾಲಯದ ಪೂಜಾರಿ ವೀರಯ್ಯಸ್ವಾಮಿ ಅವನ ವಶದಲ್ಲಿದ್ದ ತಾಮ್ರಶಾಸನದ ಕಾಗದ ಪ್ರತಿಯಲ್ಲಿ ಚೋಳರಾಯನ ಹೊಸಪೇಟೆಯ ಕೋಟೆ ಕಟ್ಟಿಸಿ, ಜೋಳದ ರಾಶಿ ಗುಡ್ಡದ ಬಳಿಯ ಕೆರೆಗಳನ್ನು ಕಟ್ಟಿಸಿದನೆಂದು ಹೇಳಿದೆ.[4] ಈ ತಾಮ್ರ ಪತ್ರವು ಇತ್ತೀಚೆಗೆ ಅಂದರೆ ೨೦ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರಲ್ಲಿ ವಿಷಯಗಳು ಕ್ರಮಬದ್ಧವಾಗಿಲ್ಲ. ಕ್ರಿ.ಶ. ೧೫೨೧ರ ಕೃಷ್ಣದೇವರಾಯನ ಕಾಲದಲ್ಲಿ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಕೋಟೆ ಇದ್ದುದನ್ನು ಹೇಳುತ್ತದೆ. ಆದರೆ ಕಲ್ಯಾಣ ಚಾಳುಕ್ಯರ ಇಲ್ಲಿಯ ಶಾಸನಗಳಲ್ಲಿ ಕೋಟೆಯ ಯಾವುದೇ ಉಲ್ಲೇಖಗಳು ಬರುವುದಿಲ್ಲ. ಹಾಗಾಗಿ ಇವೆರಡರ ಮಧ್ಯದ ಅವಧಿಯಲ್ಲಿ ಹೊಸಪೇಟೆ ತಿರುಮಲದೇವಿ ಪಟ್ಟಣದಲ್ಲಿ ಕೋಟೆ ನಿರ್ಮಾಣವಾಗಿರಬಹುದು.

ಸ್ಥಳೀಯ ಮಾಹಿತಿಯನ್ನು ಗಮನಿಸಿದಾಗ ದ್ವಾರಸಮುದ್ರದ ಅರಸನಾದ ೩ನೇ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಕಿರಾತಪಡೆಗಳನ್ನು ಸ್ಥಾಪಿಸಿದನೆಂದು ಅವೇ ಕಾಲಕ್ರಮದಲ್ಲಿ ಗ್ರಾಮಗಳಾದವೆಂದು ತಿಳಿದುಬರುತ್ತದೆ.[5] ಅವುಗಳೆಂದರೆ ಇಂದಿನ ಹೊಸಪೇಟೆಯ ಶ್ರೀ ಜಗಳೀ ಕಟ್ಟೆರಾಯನೆಂಬ ಆಂಜನೇಯ ಗುಡಿಯ ಹತ್ತಿರ ಜಗಳೀಕಟ್ಟೆ, ಬೈಲುಹನುಮಪ್ಪನ ಗುಡಿಯ ಹತ್ತಿರ ಹಂದಿಗನೂರು, ಉತ್ತರಾದಿ ಮಠದ ಹತ್ತಿರ ವಿರೂಪಾಕ್ಷಪುರ, ಸಣ್ಣಕ್ಕಿ ವೀರಭದ್ರನ ಗುಡಿಯ ಹತ್ತಿರ ತಿರುಮಲಾಪುರ ಮತ್ತು ಶ್ರೀ ವೇಣುಗೋಪಾಲಕೃಷ್ಣ ದೇವಾಲಯದ ಹತ್ತಿರ ವಿಜಯಪುರ ಗ್ರಾಮಗಳು ಮತ್ತೊಂದು ಮಾಹಿತಿಯಂತೆ ಹರಪನಹಳ್ಳಿ ಸೋಮಶೇಖರ ನಾಯಕನ (೧೭೪೨-೬೮) ಕಾಲದಲ್ಲಿ ಜಗಳೀಕಟ್ಟೆ ವಿರೂಪಾಕ್ಷಪುರ, ವಿಜಯಪುರ, ತಿರುಮಲಪುರ ಮತ್ತು ಹಂದಿಗನೂರು ಗ್ರಾಮಗಳನ್ನು ಒಂದುಗೂಡಿಸಿ ಹೊಸಪೇಟೆಯನ್ನಾಗಿ ಪರಿವರ್ತಿಸಲಾಯಿತ್ತೆಂದು ತಿಳಿದುಬರುತ್ತದೆ.[6] ಹೊಸಪೇಟೆಯ ಹಳೆಯ ವಸತಿ ಸ್ಥಾನಗಳಲ್ಲಿ ಕೋಟೆಯ ಪ್ರದೇಶ ಮುಖ್ಯವಾಗಿದ್ದು, ಪ್ರಾಯಶಃ ವಿಜಯನಗರ ಕಾಲದ ತಿರುಮಲದೇವಿ ಪಟ್ಟಣವೇ ಇದಾಗಿದೆ. ಇದರ ಮೇರೆಗಳು ಪೂರ್ವಕ್ಕೆ ಮುದಿಯಪ್ಪನ ಗುಡಿ, ಉತ್ತರಕ್ಕೆ ಬಳ್ಳಾರಿ ದುರ್ಗಮ್ಮನ ಗುಡಿ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೋಟೆ ಗೋಡೆಯಿದ್ದು, ಉತ್ತರದಲ್ಲಿ ಗೋಡೆಯ ಹೊರಗೆ ಕಬ್ಬೇರ, ಅಗಸ ಮತ್ತು ಕುರುಬರ ಕೇರಿಗಳಿವೆಯೆಂದು ಹೇಳಲಾಗುತ್ತದೆ. ಇಲ್ಲಿನ ದೇಸಾಯಿ ಮನೆತನದ ನರಸಪ್ಪನಿಗೆ ಸಹಾಯಕರಾಗಿದ್ದ ೭೦೦೦ ಬೇಡರಿಗೆ ಹೊಸಪೇಟೆ ಕೋಟೆಯ ಸುತ್ತಲೂ ವಾಸಿಸಲು ನಿವಾಸಗಳನ್ನು ಏರ್ಪಡಿಸಲಾಯಿತು. ನಂತರದ ಕಾಲದಲ್ಲಿ ಸಂಭವಿಸಿದ ಮಲೇರಿಯಾ ಕಾಯಿಲೆ ಪರಿಣಾಮವಾಗಿ ಸಮೀಪದ ಗ್ರಾಮಗಳಿಂದ ಎತ್ತರದ ಹೊಸಪೇಟೆಗೆ ಜನರ ವಲಸೆ ಬಂದಿತು. ಹಾಗೂ ಪ್ಲೇಗ್‌ನಂತಹ ಕಾಯಿಲೆ ನಿಯಂತ್ರಣಕ್ಕೆ ಇಲ್ಲಿನ ಕೋಟೆಗಳನ್ನು ಕೆಡವಿ ಹಳ್ಳಕೊಳ್ಳಗಳನ್ನು ಮುಚ್ಚಲಾಯಿತೆಂದು ಸ್ಥಳೀಯರು ಹೇಳುತ್ತಾರೆ. ಈ ಮೇಲಿನ ವಿಷಯಕ್ಕೆ ಪೂರಕವೆಂಬಂತೆ ಈ ಕೋಟೆಯ ಪ್ರದೇಶದ ಪಶ್ಚಿಮಕ್ಕೆ ಸಂಪೂರ್ಣವಾಗಿ ನಾಯಕರ ಮನೆಗಳೇ ಇವೆ. ಕೋಟೆಯೊಳಗೆ ದೇಸಾಯಿಗಳು, ಪಾಂಡೆಯವರ ವಂಶದವರು ಈಗಲೂ ತಮ್ಮ ಪುರಾತನ ಸ್ಥಳದಲ್ಲಿಯೇ ಇದ್ದಾರೆ. ಹೊಸಪೇಟೆ ಎಂಬ ಗ್ರಾಮವು ಪೂರ್ವಕಾಲದಲ್ಲಿ ವಿಜಯನಗರ ರಾಜ್ಯದ ರಕ್ಷಾದುರ್ಗವಾಗಿದ್ದಿತು. ಇದೊಂದು ಚಿಕ್ಕಹಳ್ಳಿಯಾಗಿದ್ದರೂ ಭದ್ರತರವಾದ ಕೋಟೆ ಕೊತ್ತಲಗಳಿಂದ ಸುರಕ್ಷಿತವಾಗಿತ್ತೆಂದು ಚಿಕ್ಕೋಡೂರು ಗೋವಿಂದಚಾರ್ಯರು ಅಭಿಪ್ರಾಯಪಡುತ್ತಾರೆ.[7] ಹೊಸಪೇಟೆಯ ದುರ್ಗವನ್ನು ಮಾತ್ರ ಅಚ್ಚಳಿಯದೇ ಉಳಿಸಿಕೊಂಡು ಇಲ್ಲಿಯೇ ಕೋಟೆಯಲ್ಲಿ ಒಂದು ಸಿಂಹಾಸನವನ್ನು ಸ್ಥಾಪಿಸಿಕೊಂಡು ಒಂದನೇ ಬುಕ್ಕನು ಆಳ್ವಿಕೆ ಮಾಡಿದಂತೆ ತಿಳಿದುಬರುತ್ತದೆ.[8] "ಹಾಳು ಬಿದ್ದ ಕಂದಕ ಕೋಟೆ ಕೊತ್ತಳಗಳು ಕ್ರಿ.ಶ.೧೯೫೭ರ ವರೆಗೆ ಇದ್ದವೆಂದು ತಿಳಿಯುವುದು."[9]

**ಆಕರ**

ಕೋಟೆ-ಕೊತ್ತಳಗಳು: ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ), ೨೦೦೨, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೬೩-೨೬೫


[1] ದೇವರಕೊಂಡಾರೆಡ್ಡಿ ಮತ್ತು ಇತರರು, ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಬಳ್ಳಾರಿ ಜಿಲ್ಲೆ ೧, ಪು.೧೪೧, ಹಂಪಿ, ಕನ್ನಡ ವಿಶ್ವವಿದ್ಯಾಲಯ

[2] Annual Report on Indian Epigraphy, No. 122, Date About 12th Century A.D. 1980-81, Hospet

[3] ಗೋವಿಂದಚಾರ್ಯ ಚಿಕ್ಕೋರೂರು, ೧೯೯೭, ಹೊಸಪೇಟೆ ಐತಿಹ್ಯ, ಹೊಸಪೇಟೆ ಚಾರಿತ್ರಿಕ ವಿವೇಚನೆ ಐತಿಹ್ಯ, ಪರಿಶೀಲನೆ, ಪು. ೧೨, ಹೊಸಪೇಟೆ, ಶರಣರ ಸುವಾಸಿನಿ ಬಳಗ

[4] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಪೂರ್ವೋಕ್ತ, ಪು.೧೪೮

[5] ಮಹದೇವ ಸಿ. ೧೯೯೭, ಹೊಸಪೇಟೆ ಐತಿಹ್ಯ, ಹೊಸಪೇಟೆ ಚಾರಿತ್ರಿಕ ವಿವೇಚನೆ, ಐತಿಹ್ಯ, ಪರಿಶೀಲನೆ, ಪು.೨೦, ಹೊಸಪೇಟೆ, ಶರಣರ ಸುವಾಸಿನಿ ಬಳಗ

[6] ಅದೇ, ಪು.೨೦

[7] ಗೋವಿಂದಚಾರ್ಯ ಚಿಕ್ಕೇರೂರು, ೧೯೯೭, ಪೂರ್ವೋಕ್ತ, ಪು.೧೨

[8] ಅದೇ, ಪು.೧೩

[9] ಅದೇ, ಪು.೧೫


## ೨೭. ಕುದುರೆಕಲ್ಲು

**ಕುದುರೆಕಲ್ಲು**: ವಿಜಯನಗರದ ರಕ್ಷಣಾ ವ್ಯವಸ್ಥೆಗೆ ಕುದುರೆ ಕಲ್ಲುಗಳು ಒಂದು ಉತ್ತಮ ಉದಾಹರಣೆ. ನೂರಾರು ಕಲ್ಲುಗಳನ್ನು ಒಂದೆಡೆ ಕಾಣಬಹುದು. ಸಾಕಷ್ಟು ದೊಡ್ಡದಾದ ಕಲ್ಲುಗಳನ್ನು ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ಅಡ್ಡಲಾಗಿ ನೆಡಲಾಗಿದೆ. ಇವುಗಳ ಅನೇಕ ಸಾಲುಗಳು ಕಂಡುಬರುತ್ತವೆ. ಕುಮ್ಮಟದುರ್ಗದ ಹಿರೇ ಕಣಿವೆಯ ಪ್ರದೇಶದಲ್ಲಿ ಕುದುರೆ ಕಲ್ಲುಗಳ ಸಾಲುಗಳು ಇರುವುದನ್ನು ಕಾಣಬಹುದು. ಹಂಪಿಯಲ್ಲಿ ಈ ಕಲ್ಲುಗಳು ಮೊದಲನೆಯ ಕೋಟೆಯ ಹೊರಭಾಗದಲ್ಲಿ ಅಂದರೆ ಪುರಪ್ರವೇಶದ ಮೊದಲ ಕೋಟೆಯ ಹೊರಭಾಗದಲ್ಲಿ ನೆಟ್ಟಿರಲಾಗುತ್ತಿತ್ತು. ಈ ಕಲ್ಲುಗಳನ್ನು ನೋಡಿದ್ದಲ್ಲಿ ಒಂದು ಕಲ್ಲಿನ ಹಿಂದೆ ಇನ್ನೊಂದು ಕಲ್ಲು ನೇರವಾಗಿರದೆ ಪಕ್ಕದಲ್ಲಿರುವುದು ಸಾಮಾನ್ಯ. ಈ ರೀತಿ ಒಂದ ಪಕ್ಕದಲ್ಲೊಂದು ಸಾಲಾಗಿ ಕಲ್ಲುಗಳನ್ನು ಜೋಡಿಸಿರುವುದರಿಂದ ಶತ್ರುಸೈನ್ಯದ ಮುನ್ನಡೆ, ಅದರಲ್ಲೂ ಆಶ್ವದಳದ ಮುನ್ನಡೆಯನ್ನು ಸಮರ್ಥವಾಗಿ ತಡೆಯುವಲ್ಲಿ ಸಹಾಯಕರವಾಗುತ್ತಿತ್ತು. ವೈರಿಯು ನಗರ ಪ್ರವೇಶ ಮಾಡಲು ಗುಡ್ಡ ಕಣಿವೆ ಅಥವಾ ಕೋಟೆ ದ್ವಾರಗಳನ್ನು ದಾಟಿ ಮುನ್ನಡೆಯಬೇಕಾಗಿತ್ತು. ಕೋಟೆಗಳನ್ನು ಹೊರತುಪಡಿಸಿ ಕಣಿವೆಯ ಪ್ರದೇಶದಲ್ಲಿ ಒಳನುಗ್ಗಲು ಪ್ರಯತ್ನಿಸಿದರೆ ಈ ಕುದುರೆ ಕಲ್ಲುಗಳು ಉತ್ತಮವಾದ ತಡೆಗೋಡೆಗಳಾಗುತ್ತಿದ್ದವು. ಆ ಸಂದರ್ಭದಲ್ಲಿ ಎರಡೂ ಕಡೆಯ ಗುಡ್ಡಗಳ ಮೇಲಿಂದ ಶತ್ರುಪಡೆಯ

ಸೈನಿಕರ ಮೇಲೆ ಬಿಲ್ಲು ಬಾಣ ಭರ್ಜಿಗಳಿಂದ ಆಕ್ರಮಣ ಮಾಡಿ ಅವರನ್ನು ನಾಶಮಾಡಲಾಗುತ್ತಿತ್ತು. ದೊಡ್ಡ ಗುಡ್ಡಗಳನ್ನು ಸುತ್ತುವರಿದು ಕಣಿವೆಗಳನ್ನು ಹುಡುಕಿಕೊಂಡು ಅವುಗಳ ಮೂಲಕ ಒಳನುಗ್ಗಲು ಪ್ರಯತ್ನಿಸಿದರೆ ಅಲ್ಲಿ ಮೊದಲು ಅಡ್ಡಬರುತ್ತಿದುದು ಕುದರೆ ಕಲ್ಲುಗಳು. ಭಾರತದ ಯುದ್ಧ ತಂತ್ರದಲ್ಲಿ ಇವು ವಿಶಿಷ್ಟ ಸ್ಥಾನ ಪಡೆದಿವೆ.

ಕುಮ್ಮಟದುರ್ಗದಲ್ಲಿ ದೊಡ್ಡ ಉಂಡೆಕಲ್ಲುಗಳನ್ನು ಎರಡು ಭಾಗವಾಗಿ ನೇರವಾಗಿ ಸೀಳಿ ಒಂದರ ಪಕ್ಕದಲ್ಲಿ ಒಂದರಂತೆ ಭೂಮಿಯಲ್ಲಿ ಹೂಳಲಾಗುತ್ತಿತ್ತು. ಒಂದು ಸಾಲಿನ ಕಲ್ಲಿಗೂ ಇನ್ನೊಂದು ಸಾಲಿನ ಕಲ್ಲಿಗೂ ಸಮಾನ ಅಂತರವಿದ್ದರೂ ವಿವಿಧ ಎತ್ತರಗಳಿದ್ದುದರಿಂದ ಸೈನ್ಯವು ಈ ಕಲ್ಲುಗಳನ್ನು ದಾಟಿಹೋಗಲು ತೀವ್ರ ಶ್ರಮಪಡಬೇಕಾಗುತ್ತಿತ್ತು. ಈ ರೀತಿಯ ಕುದುರೆ ಕಲ್ಲುಗಳು ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಸೈನಿಕ ಯುದ್ಧ ಕಲೆಗೆ ಉತ್ತಮವಾದ ಉದಾಹರಣೆಗಳಾಗಿವೆ.

ವಿಜಯನಗರದಲ್ಲಿ ಇಂತಹ ಕಲ್ಲುಗಳು ಇದ್ದ ಬಗ್ಗೆ ವಿದೇಶೀ ಪ್ರವಾಸಿಗರಾದ ಅಬ್ದುಲ್‌ರಜಾಕ್‌ಹಾಗೂ ಡೊಮೆಂಗೋ ಪಯಾಸ್‌ಉಲ್ಲೇಖ ಮಾಡಿದ್ದಾರೆ. ಬಹುಶಃ ಕುದುರೆ ಕಲ್ಲುಗಳ ತಂತ್ರಗಾರಿಕೆ ವಿಜಯನಗರ ಪೂರ್ವಕಾಲದಿಂದಲೂ ಮುಂದುವರೆದಿದೆ ಎಂಬುದಕ್ಕೆ ಹಂಪೆ ಹತ್ತಿರವಿರುವ ವಿಜಯನಗರವನ್ನು ೧೪೪೨-೪೩ರಲ್ಲಿ ಸಂದರ್ಶಿಸಿ ಇಲ್ಲಿನ ವೈಭವವನ್ನು ತಿಳಿಸಿದ್ದಾನೆ. ಮೊದಲನೆಯ ಕೋಟೆಯ ಹೊರಭಾಗದಲ್ಲಿ ಸುಮಾರು ಮನುಷ್ಯನೆತ್ತರದ ಕಲ್ಲುಗಳಿದ್ದು, ಅರ್ಧಭಾಗವನ್ನು ಭೂಮಿಯಲ್ಲಿ ಹೂತಿದ್ದು ಉಳಿದರ್ಧ ಭಾಗ ಮೇಲೆ ಇದ್ದ ಬಗ್ಗೆ ತಿಳಿಸಿದ್ದಾರೆ. ಈ ಕಲ್ಲುಗಳು ಹಲವು ಸಾಲುಗಳಲ್ಲಿದ್ದು ಪ್ರತೀ ಎರಡನೇ ಸಾಲಿನ ಕಲ್ಲು ಅದರ ಮುಂದಿನ ಸಾಲಿನ ಎರಡು ಕಲ್ಲುಗಳ ಮಧ್ಯೆ ಬರುವಂತೆ ನೆಟ್ಟಿರುವುದನ್ನು ಗಮನಿಸಿ ಉಲ್ಲೇಖಿಸಿದ್ದಾನೆ. ಇದರಿಂದಾಗಿ ಸೈನ್ಯವೂ, ಅಶ್ವದಳವೂ ಸುಲಭವಾಗಿ ನಗರಪ್ರವೇಶ ಮಾಡುವುದನ್ನು ನಿರ್ಬಂಧಿಸಿದಂತೆ ಆಗುತ್ತಿತ್ತು ಎಂದು ತಿಳಿಸಿದ್ದಾನೆ.

೧೫೨೦ರಲ್ಲಿ ಬಂದ ಪೋರ್ಚುಗೀಸ್‌ಪ್ರವಾಸಿ ಡೊಮೆಂಗೋ ಪಾಯಸ್‌ಹೆಚ್ಚಾಗಿ ಮೇಲಿನ ರೀತಿಯ ವಿವರಣೆಯನ್ನೇ ನೀಡಿದ್ದಾನೆ. ಇಲ್ಲಿಯ ರಕ್ಷಣಾ ವ್ಯವಸ್ಥೆಗೆ ಕೋಟೆಗಳು ಅತೀ ಮುಖ್ಯವಾಗಿದ್ದು, ನಗರದ ಹೊರ ಕೋಟೆಯ ಹೆಬ್ಬಾಗಿಲ ಬಳಿ ಬಂದರೆ ಹಿಂದಿನ ಸುತ್ತಿನ ಕೋಟೆಗಳು ಒಂದರ ಹಿಂದೆ ಬಂದಿರುವಂತೆ ಕಾಣುತ್ತಿತ್ತು. ಅಲ್ಲದೆ ಕೋಟೆಗೋಡೆಯನ್ನು ಬೃಹತ್‌ಬಂಡೆಗಳನ್ನು ಸೀಳಿ ಚೌಕಾಕಾರದ ಅಥವಾ ಆಯತಾಕಾರದ ಕಲ್ಲುಗಳಾಗಿ ಒಡೆದು ನಿರ್ಮಿಸಲಾಗುತ್ತಿತ್ತು. ಈ ರೀತಿಯ ಕೋಟೆ ಕೆಲವು ಕಡೆ ಹಾಳಾಗುವತ್ತ ಸಾಗಿದೆ ಎನ್ನುವುದನ್ನು ಉಲ್ಲೇಖಿಸಿದ್ದಾನೆ. ಈ ಕೋಟೆಗೋಡೆಯು ತಗ್ಗಿನ ಪ್ರದೇಶಗಳಲ್ಲಿ ಹಾಯ್ದು ಹೋಗಬೇಕಾದರೆ ಮತ್ತು ಕೆಲವು ಕಡೆ ಕಂದಕಗಳಿದ್ದು ಅಲ್ಲಿ ನೀರಿನಿಂದ ತುಂಬಿಕೊಂಡಿರುವುದನ್ನು ಕಂಡಿರುವುದಾಗಿ ತಿಳಿಸಿದ್ದಾನೆ. ಈ ರೀತಿಯ ತಡೆಗಳಲ್ಲದೆ ಕೆಲವು ಚೂಪಾದ ಕಲ್ಲುಗಳನ್ನು ಭೂಮಿಯಲ್ಲಿ ನೆಟ್ಟು, ಅದರ ಮೇಲ್ಭಾಗವು ಸುಮಾರು ಮನುಷ್ಯನ ಎದೆಮಟ್ಟದವರೆಗೂ ಬರುವಂತೆ ವ್ಯವಸ್ಥೆಗೊಳಿಸಿರುವುದನ್ನು ತಿಳಿಸಿದ್ದಾನೆ. ಈ ಕಲ್ಲುಗಳು ಭರ್ಜಿಯ ಹಿಡಿಯ ಒಂದರಿಂದ ಒಂದೂವರೆ ಪಟ್ಟು ಅಗಲವನ್ನು ಹೊಂದಿದ್ದವು ಎಂದು ಹೇಳಿದ್ದಾನೆ. ಈ ಕಲ್ಲುಗಳು ಹಲವು ಸಾಲುಗಳಲ್ಲಿದ್ದು, ಕೋಟೆ ಗೋಡೆಯಿಂದ ಮತ್ತು ಸಾಲುಗಳ ಮಧ್ಯೆ ಒಂದು ಸಮಾನ ಅಂತರವಿದ್ದ ಬಗ್ಗೆ ಗಮನಿಸಲಾಗಿದೆ. ಅಲ್ಲದೆ ಕಣಿವೆಯ ಪ್ರದೇಶದಿಂದ ಬೆಟ್ಟದ ತಪ್ಪಲಿನವರೆಗೂ ವ್ಯವಸ್ಥಿತವಾಗಿ ನಡೆಲಾಗಿತ್ತು ಎಂದು ತಿಳಿಸಲಾಗಿದೆ.

ರಾಬರ್ಟ್‌ಸೀವೆಲ್‌ರವರು, ಡೊಮೆಂಗೋ ಪಯಾಸ್‌ಮತ್ತು ಅಬ್ದುಲ್‌ರಜಾಕ್‌ಕುದುರೆ ಕಲ್ಲುಗಳ ಬಗೆಗೆ ಪ್ರಸ್ತಾಪ ಮಾಡಿದ್ದಾರೆ ಎಂದು ತಮ್ಮ ಕೃತಿ 'ಫರ್ಗಟಾನ್‌ಎಂಪೈರ್'ನಲ್ಲಿ ತಿಳಿಸಿದ್ದಾರೆ. ಆದರೆ ತಾವು ಆ ಕಲ್ಲುಗಳನ್ನು ನೋಡಿಲ್ಲವೆಂದು ಹೇಳುತ್ತಾರೆ.

ವಿಜಯನಗರಕ್ಕೆ ಏಳುಸುತ್ತಿನ ಕೋಟೆಗಳಿದ್ದು, ಅದರಲ್ಲಿ ಒಳಸುತ್ತಿನ ಕೋಟೆಯ ಹೆಬ್ಬಾಗಿಲಿನ ಕಾವಲುಗಾರರು ಸುಂಕದ ವಸೂಲಿ ಮಾಡುತ್ತಿದ್ದ ಬಗ್ಗೆ ತಿಳಿಸಿದ್ದಾರೆ. ಅಲ್ಲದೆ ಕೋಟೆಗಳನ್ನು ಕಾಯಲು ಸದೃಢವಾದ ಕಾವಲುಗಾರರು ಇದ್ದ ಬಗ್ಗೆ ಉಲ್ಲೇಖಿಸಿದ್ದಾರೆ.

ವಿಜಯನಗರ ಪಟ್ಟಣ ಮತ್ತು ಅದರ ಸುತ್ತಮುತ್ತ ಬೆಟ್ಟಗುಡ್ಡಗಳ ಪ್ರಾಕೃತಿಕ ರಕ್ಷಣೆ ಇದ್ದ ಬಗ್ಗೆ ಗಮನಿಸಬಹುದಾಗಿದೆ. ಪಟ್ಟಣದ ಸುತ್ತ ಗುಡ್ಡಗಳ ಪ್ರಾಕೃತಿಕ ರಕ್ಷಣೆ ಇದ್ದ ಬಗ್ಗೆ ಗಮನಿಸಬಹುದಾಗಿದೆ. ಪಟ್ಟಣದ ಸುತ್ತ ಗುಡ್ಡಗಳಿದ್ದು, ಕಣಿವೆ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಿ ಅಬೇಧ್ಯವಾದ ಪಟ್ಟಣವನ್ನು ನಿರ್ಮಿಸಲಾಗಿತ್ತು. ಪ್ರವಾಸಿಗರು ಏಳುಸುತ್ತಿನ ಕೋಟೆಯ ಬಗ್ಗೆ ತಿಳಿಸಿದ್ದರೂ ಈಗ ಕೆಲವು ಸುತ್ತುಗಳು ಮಾತ್ರ ಇರುವುದನ್ನು ಗಮನಿಸಬಹುದು. ಪ್ರಾಕೃತಿಕವಾಗಿ ಈ ಪ್ರದೇಶವು ಬೃಹತ್‌ಬಂಡೆಗಳನ್ನು ಹಾಗೂ ಬೆಟ್ಟಗಳನ್ನು ಹೊಂದಿದ್ದರಿಂದ ಕೋಟೆಯನ್ನು ನಿರ್ಮಿಸುವುದು ಸುಲಭವಾಗಿತ್ತು. ದೊಡ್ಡ ಕಲ್ಲುಗಳನ್ನು ಆಯತಾಕಾರ ಅಥವಾ ಚೌಕಾಕಾರದ ಮುಂಭಾಗವನ್ನು ಹೊಂದಿ ಬೆಣೆಯ ರೂಪದಲ್ಲಿ ಸಿದ್ಧಪಡಿಸಿ ಒಂದರಮೇಲೊಂದನ್ನಿಟ್ಟು ಅಗಲವು ಕಿರಿದಾಗುತ್ತಾ ಸಾಗಿ ಮೇಲ್ಭಾಗವು ಚೂಪಾಗಿರುವಂತೆ ನಿರ್ಮಿಸಲಾಗಿದೆ. ಈ ಕಲ್ಲುಗಳ ಮಧ್ಯೆ ಯಾವುದೇ ರೀತಿಯ ಸುಣ್ಣ ಅಥವಾ ಗಾರೆಯನ್ನು ಉಪಯೋಗಿಸದೇ ಇರುವುದನ್ನು ಕಾಣಬಹುದು. ಕೋಟೆಯ ಹೊರಭಾಗ ಎತ್ತರವಾಗುತ್ತಾ ಸಾಗಿದರೆ ಹಿಂಭಾಗ ಇಳಿಜಾರಾಗಿರುವುದನ್ನು ಅನೇಕ ಕಡೆ ಇಂದೂ ಗಮನಿಸಬಹುದು. ಕೋಟೆಯ ಮಧ್ಯೆ ಸಮಾನಾಂತರದಲ್ಲಿ ಕೊತ್ತಳಗಳನ್ನು ನಿರ್ಮಿಸಿ ಅಲ್ಲಿ ಕಾವಲುಗಾರರನ್ನು ಇರಿಸಲಾಗುತ್ತಿತ್ತು. ಈ ಕೋಟೆ ಗೋಡೆಗಳಲ್ಲಿ ಅಲ್ಲಲ್ಲಿ ವಿವಿಧ ಬಗೆಯ ಬಾಗಿಲುಗಳಿದ್ದವು. ನೇರ ಪ್ರವೇಶದ ನಿಯಂತ್ರಣ ಮಾಡಿದ್ದಲ್ಲದೆ ಅಂಕುಡೊಂಕಾದ ದಾರಿಗಳಿಂದ ಪುರಪ್ರವೇಶ ಅಷ್ಟು, ಸುಲಭ ಸಾಧ್ಯವಾಗದೆ ತೀವ್ರ ನಿಗಾಕ್ಕೆ ಒಳಪಟ್ಟಿತ್ತು ಎಂಬುದನ್ನು ಗಮನಿಸಬಹುದು.

ವಿಜಯನಗರದ ಕೋಟೆಗೋಡೆಗಳ ನಿರ್ಮಾಣ, ನಗರದ ಬೆಳವಣಿಗೆಯಾದಂತೆ ಹಲವು ಸುತ್ತುಗಳಾಗಿ ವರ್ಧಿಸುತ್ತಾ ಕಾಲಕಾಲಕ್ಕೆ ವಿಸ್ತಾರಗೊಂಡು ಹಲವು ಸುತ್ತುಗಳಾಗಿ ಬೆಳೆದಿರುವುದನ್ನು ಶಾಸನಗಳಿಂದ ಗುರುತಿಸಬಹುದಾಗಿದೆ. ಕೋಟೆಬಾಗಿಲುಗಳು, ಕೊತ್ತಳಗಳು, ಉಪನಗರಗಳು ಅಲ್ಲದೆ ಕೆಲವು ಪ್ರದೇಶಗಳಿಗೆ ನಿರ್ದಿಷ್ಟವಾದ ಹೆಸರನ್ನಿಟ್ಟಿದ್ದರಿಂದ ಅವುಗಳನ್ನು ಗುರುತಿಸಲು ಸುಲಭ ಸಾಧ್ಯವಾದ ಉಪಾಯವನ್ನು ಮಾಡಿಕೊಂಡಿದ್ದರು. ಈ ಬಗ್ಗೆ ಅನೇಕ ಶಾಸನಗಳು ಉಲ್ಲೇಖಿಸಿವೆ.

ಅಂದಿನ ವಿಜಯನಗರ ಪೂರ್ವ ದಿಕ್ಕಿನ ಕಣಿವೆಯಲ್ಲಿ ಅಂದರೆ ಇಂದಿನ ಕಮಲಾಪುರದ ಪೂರ್ವಕ್ಕೆ ಈ ಕುದುರೆ ಕಲ್ಲುಗಳು ಕಂಡುಬರುತ್ತವೆ. ಉದ್ದನೆಯ ಕಲ್ಲುಗಳನ್ನು ಎರಡೂ ಕಡೆಯ ತುದಿಯಲ್ಲಿ ನೆಟ್ಟು ಮಧ್ಯಭಾಗದಲ್ಲಿ ವಿವಿಧ ಗಾತ್ರದ ಸ್ವಾಭಾವಿಕವಾಗಿ ದೊರಕುವ ದುಂಡನೆಯ ಕಲ್ಲುಗಳನ್ನು ನೆಟ್ಟಿದ್ದಾರೆ. ಈ ಉಂಡೆ ಕಲ್ಲುಗಳನ್ನು ಗೊತ್ತಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಿಲ್ಲಿಸಲಾಗಿದೆ. ಅದರೊಡನೆ ಕೆಲವು ಪ್ರದೇಶದಲ್ಲಿ ಚದುರಿದಂತೆಯೂ ನಡೆಲಾಗಿದೆ. ಇವು ಸುಮಾರು ಹತ್ತುಮೀಟರ್ ಅಗಲದವರೆಗೂ ಹರಡಿಕೊಂಡಿವೆ.

**ಆಕರ**

ವಿಜಯನಗರ ಅಧ್ಯಯನ, ಸಂ.೯, ೨೦೦೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು.೨೮೧-೨೮೪

## ೨೮. ಹಂಪೆಯ ಶ್ರೀ ಶಾಸನಗಳು ಮತ್ತು ವಿಜಯನಗರ ಪಟ್ಟಣ

‘...ಈ ಭುವಿಯಲ್ಲೆಲ್ಲೂ ಕಣ್ಣುಗಳು ಕಂಡರಿಯದಂಥ ಅಥವಾ ಕಿವಿಗಳು ಕೇಳರಿಯದಂಥ ವೈಭವಯುಕ್ತವಾಗಿತ್ತು. ಈ ವಿಜಯನಗರ ಮಹಾ ಪಟ್ಟಣವು ಎಂದು ಪರ್ಶಿಯಾ ದೇಶದಿಂದ ರಾಯಭಾರಿಯಾಗಿ ಆಗಮಿಸಿ ವಿಜಯನಗರವನ್ನು ಸಂದರ್ಶಿಸಿದ್ದಲ್ಲದೇ ಅಲ್ಲಿ ಕೆಲ ದಿನ ತಂಗಿದ್ದ ಅಬ್ದುಲ್ ರಝಾಕನೆಂಬವನು, ಕ್ರಿ.ಶ.೧೪೪೩ರಲ್ಲಿಯೇ ಹೊಗಳಿ ಬರೆದಿಟ್ಟಿರುವುದು ಸರ್ವವಿದಿತಷ್ಟೆ? ಅಲ್ಲದೆ ಇವನಂತೆಯೇ ವಿಜಯನಗರವನ್ನು ಸಂದರ್ಶಿಸಿದ ಇತರ ಪರದೇಶಿಯರು ಸಹ ಈ ಮಹಾನಗರದ ವರ್ಣನೆಯನ್ನು ಅದರ ವೈಭವವನ್ನು, ಸಂಪತ್ತು ಸಮೃದ್ಧಿಗಳನ್ನು, ಉಚ್ಚಮಟ್ಟದ ಜನಜೀವನವನ್ನು, ಅದರ ಚರಿತ್ರೆಯನ್ನು ಅನೇಕ ವಿವರಗಳೊಂದಿಗೆ ಮತ್ತು ವಿಶೇಷ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರೊಂದಿಗೆ ಬರೆದ ದಾಖಲೆಗಳನೇಕ ಸಿಕ್ಕಿರುತ್ತವೆ. ಹೀಗೆ ಸಂದರ್ಶಿಸಿದ ವಿದೇಶಿ ಪ್ರವಾಸಿಗರಲ್ಲಿ ಮುಖ್ಯರಾದವರ

ಹೆಸರುಗಳು, ಅವರ ಮಾತೃದೇಶ, ಅವರು ವಿಜಯನಗರವನ್ನು ಸಂದರ್ಶಿಸಿದ ಕಾಲ, ಅವರು ಸಂದರ್ಶಿಸಿದ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವನ್ನಾಳುತ್ತಿದ್ದ ಮಹಾರಾಜರುಗಳ ಹೆಸರು ಮುಂತಾದ ವಿವರಗಳು ಮುಂದಿನ ಪುಟದಲ್ಲಿ ಕೊಟ್ಟಿರುವ ಪಟ್ಟಿಯಿಂದ ತಿಳಿಯುತ್ತವೆ.

ಈ ವಿದೇಶಿಯರ ದಾಖಲೆಗಳಲ್ಲದೇ, ವಿಜಯನಗರ ಸಾಮ್ರಾಜ್ಯದ ಸಮಕಾಲೀನ ರಾಜ್ಯಗಳಾದ ಬಹುಮನಿ ರಾಜ್ಯಗಳಲ್ಲಿದ್ದ ಚರಿತ್ರಕಾರರು ಮತ್ತು ಸಾಹಿತಿಗಳು ಬರೆದಿರುವುದೂ ಸಹ ವಿಫುಲವಾಗಿದೆ. ಆದರೆ ಇವರುಗಳ ದಾಖಲೆಗಳಲ್ಲಿ ಒಂದು ವ್ಯತ್ಯಾಸವನ್ನು ಕಾಣುತ್ತೇವೆ ಎಂದರೆ, ಅವರೆಲ್ಲರೂ ತಮಗೆ ಆಶ್ರಯದಾತರಾದ ಮುಸಲ್ಮಾನ ದೊರೆಗಳನ್ನು ಹೆಚ್ಚಾಗಿ ಹೊಗಳಿ ಬರೆದಿರುತ್ತಾರೆ. ಆದರೂ ಅವರ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಲ್ಲಿ ವಿಜಯನಗರ ಸಾಮ್ರಾಜ್ಯ ಮತ್ತು ಅದರ ರಾಜಧಾನಿಗಳ ವೈಭವಗಳ ವಿವರಣೆಗಳನ್ನು ಗ್ರಹಿಸುವಲ್ಲಿ ಶ್ರಮವೇನೂ ಬೇಕಾಗುವುದಿಲ್ಲ. ನಂತರ ದೇಶೀಯ ಸಾಹಿತ್ಯವೂ ಸಾಕಷ್ಟು ವಿವರಣೆಗಳನ್ನೊದಗಿಸುತ್ತದೆ. ವಿಜಯನಗರ ಸಾಮ್ರಾಜ್ಯವು, ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳಿ ಭಾಷೆಯ ಪ್ರದೇಶಗಳನ್ನೆಲ್ಲಾ ಒಳಗೊಂಡಿದ್ದುದರಿಂದ, ಈ ಎಲ್ಲ ಭಾಷೆಗಳಲ್ಲಿ ಮತ್ತು ಸಂಸ್ಕೃತದಲ್ಲಿ ರಚಿತವಾದ ಸಮಕಾಲೀನ ಸಾಹಿತ್ಯ ಗ್ರಂಥಗಳಲ್ಲಿ ಕೆಲವುಗಳಲ್ಲಿಯಾದರೂ ವಿಜಯನಗರ ಕುರಿತಾದ ವಿವರಣೆಗಳನ್ನು ಕಾಣಬಹುದು. ಕೆಲವು ಬಾರಿ ಕಥಾವಸ್ತು ನಿರೂಪಣೆಗನುಗುಣವಾಗಿ, ನಗರವನ್ನು ಬೇರೆ ಹೆಸರಿನಿಂದ ಕರೆದು ವಿವರಿಸಿದ್ದರೂ, ಆ ವಿವರಣೆಗಳೆಲ್ಲವೂ ಅವರ ಸಮಕಾಲೀನ ನಗರವಾದ ವಿಜಯನಗರ ಮಹಾಪಟ್ಟಣಕ್ಕೆ ಅನ್ವಯಿಸುತ್ತಿದ್ದವೆಂದು ಬೇರೆ ಹೇಳಬೇಕಾಗಿಲ್ಲ. ಉದಾಹರಣೆಗೆ ಚೆನ್ನಬಸವಪುರಾಣದ ಕರ್ತೃ ಕವಿ ವಿರೂಪಾಕ್ಷ ಪಂಡಿತನು ಹಂಪೆಯ ಹಿರಿಯಮಠದಲ್ಲಿ ವಾಸವಾಗಿದ್ದುಕೊಂಡು ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದ್ದನಷ್ಟೇ? ಆ ಬೃಹದ್ ಪುರಣಾವನ್ನು ಕವಿ ವಿರೂಪಾಕ್ಷ ಪಂಡಿತನು ಕ್ರಿ.ಶ. ೧೫೮೫ರಲ್ಲಿ ಪೂರ್ತಿಗೊಳಿಸಿದನೆಂದು ಉಲ್ಲೇಖಿಸಲಾಗಿದೆ. ಆತನು ಕಥಾ ಸಂದರ್ಭಗಳಿಗನುಗುಣವಾಗಿ ಬಿಜ್ಜಳ ಮತ್ತು ಬಸವೇಶ್ವರ ಕಾಲದ ಕಲ್ಯಾಣವನ್ನು ವರ್ಣಿಸುತ್ತಾನೆ. ಆ ಕಲ್ಯಾಣವಾದರೂ ಕೆಲ ಶತಮಾನಗಳ ಮೊದಲೇ ಮೆರೆದು ಅವನತಿಗೊಂಡುದಾಗಿತ್ತಲ್ಲವೇ? ಎಂದ ಬಳಿಕ, ದಾರ್ಶನಿಕ, ಶರಣ ಮತ್ತು ಕವಿಯೂ ಆಗಿದ್ದ ವಿರೂಪಾಕ್ಷ ಪಂಡಿತನು ತಾನು ವಾಸವಾಗಿದ್ದು ದಿನವೂ ನೋಡುತ್ತಿದ್ದ ವಿಜಯನಗರ ಪರಿಸರವನ್ನು ಕಲ್ಯಾಣವೆಂದು ಹೆಸರಿಸಿ ವರ್ಣಿಸಿರಬೇಕೆಂಬುದು ಸಮಂಜಸವಾಗಿ ಕಾಣುವುದಲ್ಲವೇ? ಅದೇ ರೀತಿಯಲ್ಲಿ ಕೃಷ್ಣದೇವರಾಯ ಮಹಾರಾಜನು ರಚಿಸಿದ ತೆಲಗು ಕೃತಿಗಳಾದ 'ಅಮುಕ್ತಮಾಲ್ಯದ' ಮುಂತಾದ ಗ್ರಂಥಗಳಲ್ಲಿನ ಬರುವ ನಗರಗಳ ವರ್ಣನೆಯೂ ಕೂಡ, ತನ್ನ ರಾಜಧಾನಿಯಾದ ವಿಜಯನಗರದಲ್ಲಿ ದಿನವೂ ನೋಡುತ್ತಿದ್ದುದೇ ಆಗಿರಬೇಕು.

| ಕ್ರ. ಸಂ. | ಪ್ರವಾಸಿಗರ ಹೆಸರು | ಅವರ ಮಾತೃದೇಶ | ವಿಜಯನಗರವನ್ನು ಸಂದರ್ಶಿಸಿದ ಕಾಲ | ಆಗ ಆಳುತ್ತಿದ್ದ ಮಹಾರಾಜರ ಹೆಸರು | ಇತರ ವಿವರ |
|---|---|---|---|---|---|
| ೧. | ನಿಕೊಲೊ-ಡಿ-ಕೊಂಟಿ | ಇಟಲಿ ದೇಶ | ಕ್ರಿ.ಶ. ೧೪೨೦ | ಮೊದಲನೇ ದೇವರಾಯ ಮಹಾರಾಜ | |
| ೨. | ಅಬ್ದುಲ್ ರಝಾಕ | ಪರ್ಶಿಯಾ | ಕ್ರಿ.ಶ.೧೪೪೩ | ಎರಡನೇ ದೇವರಾಯ ಮಹಾರಾಜ | ಇವನು ಪರ್ಶಿಯಾ ದೇಶದ ರಾಯಭಾರಿ |
| ೩. | ಅಥನೇಶಿಯಸ ನಿಕಟನ | ರಶಿಯಾ | ಕ್ರಿ.ಶ.೧೪೬೮ರಿಂದ ೧೪೭೪ರ ವರೆಗೆ | ಮಲ್ಲಿಕಾರ್ಜುನ ಮಹಾರಾಜ | |
| ೪. | ವಾರ್ಥೆಮ್ | ಇಟಲಿ | ಕ್ರಿ.ಶ.೧೫೦೫ | ಎರಡನೇ ನರಸಿಂಹ ಮಹಾರಾಜ | |
| ೫. | ಡುರೇಟ ಬಾರ್ಬೋಸ್ | ಪೋರ್ಚುಗಲ್ | ಕ್ರಿ.ಶ.೧೫೧೪ | ಕೃಷ್ಣದೇವರಾಯ ಮಹಾರಾಜ | |

| | | | | |
|---|---|---|---|---|
| ೬. | ಡಾಮಿಂಗೊ ಪೀಸ್ | ಪೋರ್ಚುಗಲ್ | ಕ್ರಿ.ಶ.೧೫೨೦ | ಕೃಷ್ಣದೇವರಾಯ ಮಹಾರಾಜ |
| ೭. | ನೂನಿಝ | ಪೋರ್ಚುಗಲ್ | ಕ್ರಿ.ಶ.೧೫೩೫ ಮತ್ತು ೧೫೩೭ರ ಮಧ್ಯದಲ್ಲಿ | ಅಚ್ಯುತರಾಯ ಮಹಾರಾಜ |
| ೮. | ಸಿಸಿರೋ ಫ್ರೆಡರಿಕ್ | ಇಟಲಿ | ಕ್ರಿ.ಶ.೧೫೬೫-೬೬ | ಸದಾಶಿವರಾಯ ಮಹಾರಾಜ |

ಮೊದಲಿಗೆ ವಿಜಯನಗರ ಸ್ಥಾಪನೆಯ ಬಗ್ಗೆ ಲಭ್ಯವಿರುವ ಮುಖ್ಯ ವಿವರಣೆಗಳನ್ನು ನೋಡೋಣ.

ಅ. ಶಿವಪ್ಪ ಕವಿ ವಿರಚಿತ ಕೆಳದಿ ನೃಪವಿಜಯ ಗ್ರಂಥದಲ್ಲಿ;

'.... ಮಾಧವಭಟ್ಟನೆಂಬಾತಂ ದಕ್ಷಿಣ ದೇಶಕ್ಕೆ ಬಂದು ಕುಂತಳ ದೇಶದೊಳಗಣ ಪಂಪಾಕ್ಷೇತ್ರದಲ್ಲಿ ನಿಂದು.... ವಿದ್ಯಾರಣ್ಯರಂದು ಪ್ರಸಿದ್ಧ ನಾಮಾಂಕಿತರಾಗಿರುತ್ತ ವಿರಲಾಗಿ.... ವಿದ್ಯರಣ್ಯರು ಹರಹರಬುಕ್ಕರಂ ಕರದು.... ಸದ್ಧರ್ಮದಿಂದ ರಾಜ್ಯವನ್ನಳಿ ಕೂಂಡಿರ್ಪುದಂದು ಕಟ್ಟಳಯಂ ರಚಿಸಿ.... ವಿದ್ಯಾನಗರವೆಂಬ ಪಟ್ಟಣಮಂ ನಿರ್ಮಾಣ ಮಾಡಿಸುವ ಕಾಲದಲ್ಲಿ.... ಆ ವಿದ್ಯಾರಣ್ಯರು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೨೫೮ನೆಯ ಸಂವತ್ಸರದಲ್ಲಿ ಆ ವಿದ್ಯಾನಗರೀ ರತ್ನ ಸಿಂಹಾಸನದಲ್ಲಿ ಹರಿಹರ ರಾಯಂಗ ಪಟ್ಟಮಂ ಕಟ್ಟಿ ನಿಲಿಸಿದರ್ ....

ಬ. ಕಂದನವೋಲು ಕೈಫಿಯತರನದಲ್ಲಿ (ತೆಲಗು ಭಾಷೆಯಲ್ಲಿದೆ):

'..... ತರುವಾತ ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮುಲವಾರು. ಕರ್ನಾಟಕ ದೇಶ ಮಂದಲಿ ತುಂಗಭದ್ರಾ ತೀರಮ್ಮನ ವಿರೂಪಾಕ್ಷ ಮಹಾ ಕ್ಷೇತ್ರಮುನ ತಮ ಪೇರಟ ವಿದ್ಯಾನಗರ ಮನೇಃ ಪಟ್ನಂ ನಿರ್ಮಾಣಂ ಚೇಸಿ....'

'ಕ. ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ:

..... ಆಲಿಸ್ಯೆ ಶಾಲಿವಾಹನಶಕದ ಸಾವಿರದ |
ಮೇಲದಿನ್ನೂರೈವತೆಂಟರಿಂದಂ ಮುಂದ |
ಪೇಳಲೇಂ ಧಾತುಸಂವತ್ಸರದ ವೈಶಾಖ
ಶುದ್ಧ ಸಪ್ತಮಿ ಸುದಿನದ್ಧೆ ||
ಲೀಲೆಯಿಂ ಹರಿಹರಗ ಪಟ್ಟವಂ ಕಟ್ಟಲವ |
..... ಹರಿಹರ ನೈ |
ಪಾಲವಂಶೋದ್ಭವಂ ಪಂಪಾವಿರೂಪಾಕ್ಷ |
ನಾಲಯ ಸಮೀಪದೂಳ ವಿದ್ಯಾನಗರಿಯೆಂಬ
ಪಟ್ಟಣವ ರಚಿಪನಿತ್ತ ||
ಲೀಲೆಯಿಂ.....'

ಈಗ ಮಹಾನಗರದ ವಿವಿಧ ಬಡಾವಣೆಗಳಿಗೆ ಏನೆಲ್ಲ ಹೆಸರುಗಳಿದ್ದುವು ಎಂಬುದನ್ನು ತಿಳಿಯುವುದು ಕುತೂಹಲಕಾರಿ ವಿಷಯವಲ್ಲವೇ? ಈ ವಿವರಣೆಗಳಿಗೆಲ್ಲಾ, ಈಗಲೂ ಈ ನಿವೇಶನದಲ್ಲಿ ಕಾಣಬರುವ ಶಿಲಾಶಾಸನಗಳೇ ಆಧಾರಗಳೆಂದ ಬಳಿಕ ಮತ್ತಷ್ಟು ಕುತೂಹಲಕಾರಿಯಾದ

ಮತ್ತು ಖಚಿತವಾಗಿ ತಿಳಿದುಬರುವಂಥ ವಿಷಯವಾಗುತ್ತದೆಯಲ್ಲವೇ? ಈ ಶಾಸನಗಳಾದರೂ ವಿಪುಲವಾಗಿ ಕಾಣಬರುತ್ತಿದ್ದ, ವಿಜಯನಗರ ಪಟ್ಟಣದ ವಿಶಾಲತೆಯನ್ನು ಸೂಚಿಸುತ್ತವೆಯಲ್ಲದೇ ಆ ಉಪನಗರಗಳ ವಿವಿಧ ಹೆಸರುಗಳು, ಅಲ್ಲಿರುವ ಕೆಲ ಕಟ್ಟಡಗಳು, ಮುಂತಾದವುಗಳ ಬಗ್ಗೆ ವಿವರಣೆಗಳನ್ನು ನೀಡುತ್ತವೆ.

ಮೊದಲಿಗೆ, ಈಗಾಗಲೇ ತಿಳಿಸಿರುವ ಬಾಗೇಪಲ್ಲಿ ಶಾಸನದಲ್ಲಿ ಉಲ್ಲೇಖಗೊಂಡಿರುವಂತ, ವಿಜಯನಗರ ಪಟ್ಟಣವು ವಿದ್ಯಾನಗರವೆಂದು ಕರೆಯಲ್ಪಡುತ್ತಿತ್ತು. ಬಹುಶಃ ಆರಂಭದಲ್ಲಿ ಅದಕ್ಕೆ ವಿದ್ಯಾನಗರವೆಂದೂ ನಾಮಕರಣ ಮಾಡಲ್ಪಟ್ಟಿರಬೇಕು. ಆ ವಿದ್ಯಾನಗರವು ವಿದ್ಯಾರಣ್ಯಯತಿಗಳ ತಪೋಬಲ, ಸಂಘಟನಾಬಲ, ಧಾರ್ಮಿಕ ಮತ್ತು ನೈತಿಕ ಬಲಗಳ ಸಹಾಯದಿಂದ ಸ್ಥಾಪಿತವಾಯಿತೆಂಬುದು ಕೆಲವು ವಿದ್ವಾಂಸರ ಮತವಾಗಿದೆ. ಹೀಗಿರುವಾಗ ಈ ಅರಸರು ತಮ್ಮ ರಾಜಧಾನಿಯನ್ನು ತಮ್ಮ ರಾಜಗುರುಗಳ ಹೆಸರಿನಲ್ಲಿ ಕರೆದಿದ್ದಲ್ಲಿ ಅಚ್ಚರಿಯೇನೂ ಅಲ್ಲ. ತದನಂತರ ಈ ಅರಸರ ಸೇನಾಶಕ್ತಿ, ಸಂಪದಭಿವೃದ್ಧಿಗಳು, ವಿಸ್ತೃತ ಅಧಿಕಾರ ಸಾಮ್ರಾಜ್ಯ, ಇತರ ಸಮಕಾಲೀನ ಅರಸರ ಮೇಲೆ ಪ್ರಭಾವ ಮುಂತಾದವುಗಳು ವಿಸ್ತಾರಗೊಂಡಂತೆ, ಎಂದರೆ ಸರ್ವತೋಮುಖ ವಿಜಯವು ಇವರದಾದನಂತರ, ಅದರ ಸಂಕೇತವಾಗಿ, ಈ ಅರಸರು ತಮ್ಮ ರಾಜಧಾನಿಯನ್ನು ಹೆಮ್ಮೆಯಿಂದ ವಿಜಯನಗರವೆಂದು ಕರೆಯಲು ಆರಂಭಿಸಿರಬೇಕು. ಅದರೂ, ಈ ಎರಡೂ ಹೆಸರುಗಳು, ಎಂದರೆ ವಿದ್ಯಾನಗರ ಮತ್ತು ವಿಜಯನಗರ, ಏಕಕಾಲದಲ್ಲಿ ಅದರ ಕೊನೆಯ ವರ್ಷಗಳವರೆಗೂ ಪ್ರಚಲಿತದ್ದಲಿದ್ದಂತೆ ಶಿಲಾಶಾಸನಗಳಲ್ಲಿ ಮತ್ತು ತಾಮ್ರ, ಪತ್ರಗಳಲ್ಲಿ ಕಾಣಬರುವ ಉಲ್ಲೇಖನಗಳಿಂದ ತಿಳಿದುಬರುತ್ತದೆ. ಇಲ್ಲಿ ನಾವು ಒಂದು ವಿಷಯವನ್ನು ಗಮನದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಎಂದರೆ, 'ವಿದ್ಯಾನಗರ' ವೆಂಬುದು ಆರಂಭದ ದೆಸೆಯಲ್ಲಿದ್ದ ಪಟ್ಟಣ, ಎಂದರೆ ಈಗ ಹಾಳು ಪಟ್ಟಣವೆಂದು ಕರೆಯಲ್ಪಡುವ ಭಾಗಕ್ಕೆ ಮಾತ್ರ ಅನ್ವಯವಾಗುತ್ತಿದ್ದಿರಬೇಕು. ಕಾಲಾಂತರದಲ್ಲಿ, ನಗರವು ವಿಸ್ತಾರಗೊಂಡಂತೆ ಮತ್ತು ಹಾಗೆ ಬೆಳೆದು ಬಂದಂಥ ಮಹಾನಗರಕ್ಕೆ ವಿಜಯನಗರವೆಂದು ಕರೆಯಲು ಆರಂಭಿಸಬೇಕು. ಹಾಗೆ ಕರೆಯಲ್ಪಟ್ಟ ವಿಜಯನಗರ ಮಹಾನಗರವು ಅನೇಕ ಬಡವಾಣೆಗಳನ್ನು ಒಳಗೊಂಡಿದ್ದಿತೆಂಬುದು ಇತರ ವಿವರಣೆಗಳಿಂದ ವೇದ್ಯವಾಗುತ್ತದೆ.

a. ಈಗಿನ ಹಂಪೆಯ ವಿಭಾಗವು, ವಿವಿಧ ಮೂಲಾಧಾರಗಳಲ್ಲಿ ಉಲ್ಲೇಖಗೊಂಡಿರುವಂಥ ಪಂಪಾಕ್ಷೇತ್ರ, ಭಾಸ್ಕರಕ್ಷೇತ್ರ, ಪಂಪಾತೀರ್ಥ, ವಿರೂಪಾಕ್ಷ ಮಹಾಕ್ಷೇತ್ರ, ಎಂದು ಮುಂತಾಗಿ ಕರೆಯಲ್ಪಡುತ್ತಿತ್ತು ಮತ್ತು ಹಂಪೆಯ ಹೇಮಕೂಟದ ಮೇಲಿರುವ ಕಡಲೆಕಾಳು ಗಣೇಶನ ಮಂದಿರದ ಹತ್ತಿರುವಿರುವ ರಾಜಮಾರ್ಗದ ದ್ವಾರ ಮಂಟಪದಲ್ಲಿ ಕಾಣಬರುವ ಶಿಲಾಶಾಸನದ ಪ್ರಕಾರ ಹಂಪೆಯನ್ನು ಪಂಪಾಪುರವೆಂದು ಹಾಗೂ ಪಂಪಾಕ್ಷೇತ್ರವೆಂದು ಕರೆಯಲಾಗುತ್ತಿತೆಂದು ತಿಳಿದುಬರುತ್ತದೆ. ಈ ಒಂದು ಪ್ರಸಿದ್ಧವಾದ, ಹಂಪೆಯ (ಪಂಪಾಕ್ಷೇತ್ರದ) ಪರಿಸರದಲ್ಲಿ ಆಗ್ನೇಯ ದಿಕ್ಕಿನಲ್ಲಿ, ವಿದ್ಯಾನಗರ (ವಿಜಯನಗರ) ನಿವೇಶನವು ಸ್ಥಾಪನೆಗೊಂಡಿತು. ಅದು, ಸಂಗಮ ವಂಶದ ಹರಿಹರನೆಂಬ ರಾಜನಿಂದ, ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಶಾ.ಶ. ೧೨೫೮, ಧಾತು ಸಂವತ್ಸರದ, ವೈಶಾಖ ಶುದ್ಧ ೭ ಆದಿತ್ಯವಾರ, ಮಘನಕ್ಷತ್ರದ ಯೋಗದಲ್ಲಿ ಸ್ಥಾಪನೆಯಾಯಿತು. ಇದೇ ವಿಷಯವನ್ನು ಶರಣ ಕವಿ ವಿರೂಪಾಕ್ಷ ಪಂಡಿತನು ಸಹ, ತನ್ನ ಕಾವ್ಯ 'ಚನ್ನಬಸವ ಪುರಾಣ'ದಲ್ಲಿ ದೃಢೀಕರಿಸುತ್ತಾನೆ. ನಗರವು, ರಾಜಗುರುಗಳಾದ ವಿದ್ಯಾರಣ್ಯರ ಹೆಸರಿನಲ್ಲಿ ಕರೆಯಲಾಯಿತು. ಕೆಲವೇ ವರ್ಷಗಳ ನಂತರ, ನಿಶ್ಚಯವಾಗಿಯೂ ಕ್ರಿ.ಶ. ೧೩೫೩ರಿಂದ, ಈ ರಾಜರು ಸರ್ವತೋಮುಖ ಅಭಿವೃದ್ಧಿ, ಜಯ ಗಳಿಸಕೊಂಡು ನಂತರ, ಈ ನಗರಕ್ಕೆ ವಿಜಯನಗರವೆಂದು ಕರೆಯಲು ಆರಂಭಿಸಿರಬೇಕು. ನಾವು ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಈ ಮಹಾನಗರಕ್ಕೆ ಎರಡೂ ಹೆಸರುಗಳು, ವಿದ್ಯಾನಗರ ಮತ್ತು ವಿಜಯನಗರ, ಪ್ರಚಲಿತದಲ್ಲಿದ್ದುದು. ಕ್ರಿ.ಶ. ೧೩೫೩ರಲ್ಲಿ ಹೊರಡಿಸಲಾದ ಒಂದು ಕೈಬರಹದ ಸಾಕ್ಷ್ಯಧಾರದ ಪ್ರಕಾರ ವಿಜಯನಗರವೆಂಬುದು ವಿದ್ಯಾನಗರ ಎಂಬುದಕ್ಕೆ ಪ್ರತಿನಾಮ ಎಂದರೆ ಎರಡನೆಯ ಹೆಸರು ಎಂದು ತಿಳಿಸುತ್ತದೆ. ಅದು ತೆಲುಗು ಭಾಷೆಯಲ್ಲಿದೆ. ಅದರ ಒಕ್ಕಣೆಯು ಈ ರೀತಿಯಾಗಿದೆ: 'ಶಕವರ್ಷಂಬುಲು ೧೨೭೫.......ಹರಿಹರರಾಯಲುಗಾರು ವಿದ್ಯಾನಗರ ಮುನಕು ಪ್ರತಿನಾಮುಗಲ ಶ್ರೀವಿಜಯನಗರಮಂದು ವಜ್ರಸಿಂಹಾಸನೂಥುಲೈ....' ಮುಂತಾಗಿ.

ಈ ಎರಡೂ ಹೆಸರುಗಳು ಆ ನಗರದ ಕೊನೆಯ ದಿನಗಳವರೆಗೂ ಬಳಕೆಯಲ್ಲಿದ್ದವು. ಈ ವಿಷಯವನ್ನು ಸ್ಪಷ್ಟೀಕರಿಸುವಲ್ಲಿ, ನೂರಾರು ಶಿಲಾಶಾಸನಗಳಲ್ಲಿ ಕಾಣಬರುವ ಉಲ್ಲೇಖನಗಳೇ ಸಾಕ್ಷಿ.

ತದನಂತರ, ಅಧಿಕಾರ, ಐಶ್ವರ್ಯ, ನಗರ ವೈಶಾಲ್ಯ, ಜನಸಂಖ್ಯೆ ಮುಂತಾದವುಗಳು ವಿಸ್ತೃತಗೊಂಡಂತೆ, ಅನೇಕ ಉಪನಗರಗಳು ಅಸ್ತಿತ್ವಕ್ಕೆ ಬಂದು, ಅವುಗಳೆಲ್ಲಾ ಮೂಲ ನಗರಕ್ಕೆ ಪೂರಕವಾದವು. ಹಾಗೆ ಬೆಳೆದು ವಿಶಾಲವಾದ ನಗರಕ್ಕೆ ವಿಜಯನಗರವೆಂದು ಕರೆಯಲಾಗುತ್ತಿದ್ದಿರಬೇಕು. ಆದರೂ ವಿದ್ಯಾನಗರವೆಂದು ಕರೆದಾಗ ಈಗಿನ ಹಾಳುಪಟ್ಟಣ (ಆಗಿನ ರಾಜವಾಡೆಗೆ) ಅನ್ವಯಿಸುತ್ತಿದ್ದಿರಬೇಕು. ಶಾಸನಗಳನ್ನು ಬರೆಯುವಾಗ, ಅವರವರ ಅಭಿಲಾಷೆಗನುಸಾರವಾಗಿ ಯಾವುದಾರೊಂದನ್ನು ಬಳಸಿಕೊಳ್ಳಲಾಗಿದೆ.

b. ಮೇಲೆಯೇ ತಿಳಿಸಿದಂತೆ, ರಾಜಧಾನಿಯ ಕೇಂದ್ರಭಾಗವು ಅಥವಾ ರಾಜವಾಡೆಯು, ಈಗಲೂ ಕಾಣಬರುವ ಹಜಾರರಾಮ ದೇವಸ್ಥಾನದ ಸುತ್ತಲಿನ ಪ್ರದೇಶವಾಗಿತ್ತು. ಈ ಪರಿಸರದಲ್ಲಿ ಈಗಲೂ ಕಾಣಬರುವ ಅರಮನೆಗಳ ನೆಲಕಟ್ಟುಗಳು, ರಾಣಿವಾಸದ ಆವರಣದಲ್ಲಿ ಕಾಣಬರುವ ನೆಲಗಟ್ಟುಗಳು, ಮಹಾನವಮಿ ದಿಬ್ಬಗಳೇ ಇದಕ್ಕೆ ಮುಖ್ಯ ಆಧಾರಗಳಾಗಿವೆ. ಈ ದಿಸೆಯಲ್ಲಿ ಇನ್ನೊಂದು ಆಧಾರವೆಂದರೆ, ಪಟ್ಟಣದ ಎಲ್ಲಮ್ಮನ ಗುಡಿಯು ಸಹ ಇದೇ ಭಾಗದಲ್ಲಿ, ರಾಣಿವಾಸದಿಂದ ಕೇವಲ ಅರವತ್ತು ಗಜಗಳಷ್ಟು ದೂರದಲ್ಲಿ ಈಗಲೂ ಕಾಣಬರುತ್ತದೆ. ಹೆಸರೇ ಸೂಚಿಸುವಂತೆ ಈ ಭಾಗಕ್ಕೆ ಪಟ್ಟಣವೆಂದಿತ್ತೆಂಬುದು ಖಚಿತವಾಗುತ್ತದಲ್ಲವೆ? ನಂತರ, ಹಜಾರರಾಮ ಚಂದ್ರದೇವರ ಗುಡಿಯಿಂದ ಹೊರಡುವ ಮುಖ್ಯ ಬೀದಿಗೆ, ಪಾನಸುಪಾರಿ ಬಜಾರವೆಂದು ವದಂತಿ. ಬಹುಶಃ ಈ ಹೆಸರು ಬಹುಮನೀ ಸೈನಿಕರು ವಿಜಯನಗರವನ್ನು ಆಕ್ರಮಿಸಿದ್ದ ಕಾಲದಲ್ಲಿ ಪ್ರಚಲಿತಕ್ಕೆ ಬಂದಿರಬೇಕು. ಇದೇ ಆಗಿನ ಕಾಲದಲ್ಲಿ ಮುಖ್ಯ ಬೀದಿಯಾಗಿತ್ತು. ಈ ಬೀದಿಯ ಇಕ್ಕೆಲಗಳಲ್ಲಿ, ಮಹಡಿಗಳನ್ನು ಹೊಂದಿರುವ ಕಟ್ಟಡಗಳ ಅವಶೇಷಗಳನ್ನು ಈಗಲೂ ನೋಡಬಹುದು. ಅಲ್ಲದೇ ಈ ಬೀದಿಯಿಂದ ಕೆಲವೇ ಅಡಿಗಳ ದೂರದಲ್ಲಿರುವ ರಂಗನ ಗುಡಿಯಲ್ಲಿ ಈಗಲೂ ಕಾಣಬರುವ ತೆಲುಗು ಶಿಲಾಶಾಸನದ ಪ್ರಕಾರ ಇದಕ್ಕೆ 'ಪೆದ್ದ ಅಂಗಡಿ ವೀದಿ' (ದೊಡ್ಡ ಅಂಗಡಿ ಬೀದಿ) ಎಂದು ಕರೆಯಲಾಗುತ್ತಿತ್ತು. ಇದೇ ಬಜಾರದಲ್ಲಿ ಇನ್ನೂ ಸ್ವಲ್ಪ ಮುಂದೆ ಹೋದಲ್ಲಿ ಒಂದು ಪಕ್ಕದಲ್ಲಿ ಜೈನರ ಶಾಂತಿನಾಥ ಸ್ವಾಮಿಯ ದೇವಸ್ಥಾನವೊಂದು ಈಗಲೂ ಕಾಣಬರುತ್ತದೆ. ಇಲ್ಲಿರುವ ಒಂದು ಶಿಲಾಶಾಸನವು, ಕ್ರಿ.ಶ. ೧೫೫೪ರಲ್ಲಿ ಹೊರಡಸಲಾಗಿದ್ದು ಏಳು ಅಂಕಣಗಳ ಮಂಟಪವನ್ನು ಕಟ್ಟಿಸಿದುದರ ಬಗ್ಗೆ ತಿಳಿಸುತ್ತದೆ. ಅದು ಮುಂದುವರಿಯುತ್ತಾ ಆ ಮಂಟಪದ ಉತ್ತರಕ್ಕೆ 'ರಾಜಬೀದಿ.' ಪಶ್ಚಿಮಕ್ಕೆ ಉಪ್ಪರಿಗೆ ಬೀದಿ, ದಕ್ಷಿಣಕ್ಕೆ ದೇವರ ಗುಡಿಯ (ಶಾಂತನಾಥ ಸ್ವಾಮಿಯ) ಪೌಳಿ ಇದ್ದುದಾಗಿ ತಿಳಿಸುತ್ತದೆ ಎಂದ ಬಳಿಕ ಮೇಲೆ ಹೇಳಿದ ದೊಡ್ಡ ಅಂಗಡಿ ಬೀದಿಯೇ ಈ ರಾಜಬೀದಿ ಎಂದ ಹಾಗಾಯಿತು. ಈ ಸ್ಥಳಗಳನ್ನು ಪರಿಶೀಲಿಸಿದಲ್ಲಿ, ಈ ವಿಷಯವು ವೇದ್ಯವಾಗುತ್ತದೆ. ಈ ಎಲ್ಲ ಕಾರಣಗಳಿಂದ ಹಜಾರರಾಮಚಂದ್ರ ದೇವಾಲಯದ ಮುಂದಿನಿಂದ ಹೊರಡುವ ಬೀದಿಗೆ ರಾಜಬೀದಿ ಎಂದು ಖಚಿತವಾಗಿ ಹೇಳಬಹುದು.

ಇನ್ನೊಂದು ವಿಷಯವೆಂದರೆ, ಈಗಿನ ಹಜಾರರಾಮನ ಗುಡಿಗೆ ರಾಮಚಂದ್ರ ದೇವಾಲಯವೆಂದು ಮಾತ್ರ ಹೆಸರಿದ್ದುದಾಗಿ, ಅಲ್ಲಿ ಈಗಲೂ ಕಾಣಬರುವ ಶಿಲಾಶಾಸನಗಳಿಂದ ತಿಳಿದುಬರುತ್ತದೆ.

c. ಈ ರಾಜವಾಡೆಯಿಂದ ಈಗ ಹಂಪೆಯ ಕಡೆಗೆ ಸ್ವಲ್ಪದೂರ ಹೋದ ನಂತರ ಉದ್ದಾನ ವೀರಭದ್ರಸ್ವಾಮಿಯ ದೇವಸ್ಥಾನವು ಕಾಣಸಿಗುತ್ತದೆ. ಅಲ್ಲಿ ಪೂಜಾಕಾರ್ಯಗಳು ಈಗಲೂ ಜರುಗುತ್ತವೆ. ಈ ದೇವಸ್ಥಾನದ ಆವರಣದಲ್ಲಿಯೆ ಈಗಲೂ ಕಾಣಸಿಗುವ ಒಂದು ಶಿಲಾಶಾಸನದ ಪ್ರಕಾರ, ಈ ಭಾಗಕ್ಕೆ ಕೃಷ್ಣಾಪುರವೆಂದು ಕರೆಯಲಾಗುತ್ತಿತ್ತು. ಮತ್ತು ಈಗಲೂ ಕೆಲವರು ಹಾಗೆಯೆ ಕರೆಯುತ್ತಾರೆ. ಸ್ಥಾಪನೆಯಾದ ಸಮಯದಲ್ಲಿ ಈ ಮೂರ್ತಿಗೆ ಮುದುವೀರಣ್ಣನೆಂದು ಹೆಸರು. ಈ ದೇವಸ್ಥಾನದ ಪಕ್ಕದಲ್ಲಿ ಒಂದು ದೊಡ್ಡ ಮಠವಿದ್ದುದಾಗಿಯೂ ತಿಳಿಯುತ್ತದೆ. ಅದರ ಅವಶೇಷಗಳು ಈಗಲೂ ಕಾಣಬರುತ್ತಿದ್ದು, ಸುಮಾರು ೬೦೦ಕ್ಕಿಂತಲೂ ಹೆಚ್ಚು ಸ್ತಂಭಗಳುಳ್ಳ ಮತ್ತು ಭಾಗಶಃ ಛಾವಣಿಯುಳ್ಳ ಮಠದ ಕಟ್ಟಡವು ಈಗಲೂ ಕಾಣಬರುತ್ತದೆ. ಶಾಸನದ ರೀತ್ಯ ಇದರ ಹೆಸರು 'ಹಿರಿಯ ಸತ್ರ'ವೆಂದು ಅದರ ವಿನ್ಯಾಸವು ಸಹ, ಅದನ್ನೇ ನಿವೇದಿಸುತ್ತದೆ. ಈ ದೇವಸ್ಥಾನದ ಸಮೀಪದಲ್ಲಿಯೇ ತುರ್ತುಕಾಲುವೆ ಹರಿಯುತ್ತದೆ. ಈ ಕಾಲುವೆಯ ಹಿಂದಿನ ಹೆಸರು 'ಹಿರಿಯ ಕಾಲುವೆ'. ಈ ಕಾಲುವೆಯು, ಇದರ ಉಪಕಾಲುವೆಯ ಮತ್ತು ಇವುಗಳಿಗೆ ನೀರನ್ನೊದಗಿಸುವ ಆಣೆಕಟ್ಟೆ (ತುರ್ತು ಕಾಲುವೆ

ಆಣೆಕಟ್ಟೆ) ಇವೆಲ್ಲವೂ ವಿಜಯನಗರ ಸ್ಥಾಪನಾನಂತರ ನಿರ್ಮಾಣಗೊಂಡವು ಎಂಬುದು ಆಗಲೇ ತಿಳಿದಿದೆ. ಈಗಾಗಲೇ ತಿಳಿಸಿರುವಂತೆ, ಈ ಭಾಗಕ್ಕೆ ಮತ್ತು ಮುಂದೆ ಕಾಣಬರುವ ಕೃಷ್ಣದೇವಸ್ಥಾನದ ಭಾಗಕ್ಕೆಲ್ಲಾ ಕೃಷ್ಣಾಪುರವೆಂದು ಕರೆಯಲಾಗುತ್ತಿತ್ತು. ಬಹುಶಃ ಈ ಹೆಸರು ಕ್ರಿ.ಶ. ೧೫೧೩ರಿಂದ ಪ್ರಚಲಿತದಲ್ಲಿ ಬಂದಿರಲು ಸಾಕು, ಏಕೆಂದರೆ, ಅರಸ ಕೃಷ್ಣದೇವರಾಯ ಮಹಾರಾಜನು, ತನ್ನ ದಿಗ್ವಿಜಯದಿಂದ ಹಿಂತಿರುಗಿದ ನಂತರ, ಉದಯಗಿರಿಯಿಂದ ತಂದ 'ಬಾಲಕೃಷ್ಣ ಮೂರ್ತಿಯನ್ನು' ಈ ದೇವಸ್ಥಾನದಲ್ಲಿ ಸ್ಥಾಪಿಸಿದನೆಂದು ತಿಳಿಸುವ ಒಂದು ಶಾಸನವು ದೊರೆತಿದೆ. ಈ ದೇವಸ್ಥಾನ ಮುಂದೆ ಯಥಾ ಪ್ರಕಾರವಾಗಿ ಸಾಲು ಮಂಟಪಗಳನ್ನು ಹೊಂದಿರುವ ತೇರು ಬಜಾರ ಇದೆ. ಅದನ್ನು ಕೃಷ್ಣಾಪುರ ಪೇಟೆ ಎಂದು ಕರೆಯಲಾಗುತ್ತದೆ.

d. ಈ ಕೃಷ್ಣಾಪುರ ಪೇಟೆಯ ಮೂಲಕ ಮುಂದೆ ಹೋಗಿ, ಮತಂಗ ಪರ್ವತವನ್ನು ಸುತ್ತು ಬಳಸಿ, ಉತ್ತರಕ್ಕೆ ತಿರುಗಿದರೆ ಅಚ್ಯುತರಾಯನ ಗುಡಿ ಸಿಗುತ್ತದೆ. ಇದರ ಉತ್ತರ ಮಹಾದ್ವಾರದ ಒಂದು ಗೋಡೆಯ ಮೇಲೆ ಕಾಣಬರುವ ಶಿಲಾಶಾಸನದ ಪ್ರಕಾರ, ಇದು ತಿರುವೆಂಗಳನಾಥನ ಗುಡಿಯಾಗಿದ್ದಿತೆಂದು ತಿಳಿಸುತ್ತದೆ ಮತ್ತು ಅಚ್ಯುತಾಪುರವೆಂಬ ಉಪನಗರಕ್ಕೆ ಸೇರಿದುದಾಗಿತ್ತು. ಈ ಭಾಗಕ್ಕೆ ಅಚ್ಯುತಾಪುರವೆಂದು ಕರೆಯಲಾಗುತ್ತಿದ್ದಿತೆಂಬ ವಿಷಯವು, ಈ ಗುಡಿಯ ಹಿಂದೆ ಈಗಲೂ ಕಾಣಬರುವ ಒಂದು ಅಪ್ರಕಟಿತ ಶಿಲಾಶಾಸನದಿಂದ ತಿಳಿಯುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ಪ್ರಚಲಿತವಿದ್ದ ಪ್ರಕಾರ ಈ ತಿರುವೆಂಗಳನಾಥ (ಅಚ್ಯುತರಾಯನ) ಗುಡಿಯ ಮುಖ್ಯದ್ವಾರದ ಮುಂದೆ (ಇದು ಉತ್ತರಾಭಿಮುಖವಾಗಿದೆ) ಸಾಲು ಮಂಟಪಗಳ ಪೇಟೆ ಬೀದಿ ಇರುತ್ತದೆ. ಇದಕ್ಕೆ 'ಸೂಳೆ ಬಜಾರು' ಎಂದು ಜನವಾಡಿಕೆ. ಇದು ಸಂಪೂರ್ಣವಾಗಿ ತಪ್ಪಾದ ಹೆಸರೆಂದು ತಿಳಿಸುವಲ್ಲಿ ಒಂದು ಶಿಲಾಶಾಸನವು ಸಹಾಯಕವಾಗುತ್ತದೆ. ಈ ಶಾಸನದ ಪ್ರಕಾರ, ಇದಕ್ಕೆ ಅಚ್ಯುತರಾಯ ಪೇಟೆಯೆಂದು ಹೆಸರು. ಈ ಅಚ್ಯುತರಾಯ ಪೇಟೆಯನ್ನು ಮಹಾಮಂಡೇಶ್ವರರಲ್ಲೊಬ್ಬನು, ಸಕಲ ರಾಜ ಒಡೆಯರರ ಮಗನೂ ಹಿರಿಯ ತಿರುಮಲರಾಜನೆಂಬವನು ನಿರ್ಮಿಸಿದನು. ಈ ಶಾಸನವು ಈ ಅಚ್ಯುತರಾಯ ಪೇಟೆಗೆ ಇದ್ದ ಮೇರೆಗಳನ್ನು ತಿಳಿಸಿ, ನಮಗೆ ಇನ್ನಷ್ಟು ಸಹಾಯ ಮಾಡುತ್ತದೆ. ಅದರ ಪ್ರಕಾರ ಮೇರೆಗಳು ಈ ರೀತಿ ಇದ್ದವು: ಪಶ್ಚಿಮಕ್ಕೆ ಮತಂಗ ಪರ್ವತ ಪರ್ವತ, ಪೂರ್ವಕ್ಕೆ ತಿಪ್ಪರಾಜನ ತೋಟ, ಉತ್ತರಕ್ಕೆ ಸೀತೆಯ ಕುಂಡ ಮತ್ತು ದಕ್ಷಿಣಕ್ಕೆ ಭೂಪತಿ ಕರೆ, ತಿಪ್ಪರಾಜನ ತೋಟವೊಂದನ್ನು ಬಿಟ್ಟರೆ, ಇತರೆ ವೈಶಿಷ್ಟ್ಯಗಳೆಲ್ಲಾ ಈಗಲೂ ಕಾಣಬರುತ್ತಿರುವದರಿಂದ, ಇದು 'ಇದು ನಿಶ್ಚಿತವಾಗಿಯೂ ಸೂಳೆ ಬಜಾರು ಅಲ್ಲ ಮತ್ತು ಇದು 'ಅಚ್ಯುತರಾಯ ಪೇಟೆ' ಎಂದು ತಿಳಿದಂತಾಯಿತು.

e. ಅಲ್ಲಿಂದ ನದಿಯ ಬಲದಂಡೆಯ ಮೇಲೆ ಮುಂದೆ ಸಾಗಿದಲ್ಲಿ, ವಿಠಲನ ಗುಡಿ ಕಾಣಸಿಗುತ್ತದೆ. ಅದರ ಸುತ್ತಲಿನ ಉಪನಗರಕ್ಕೆ ವಿಠಲಾಪುರವೆಂದು ಕರೆಯಲಾಗುತ್ತಿತ್ತು. ಈ ವಿಷಯವನ್ನು, ಅದೇ ದೇವಸ್ಥಾನದಲ್ಲಿ ಕಾಣಬರುವ ಅನೇಕ ಶಿಲಾಶಾಸನಗಳು ತಿಳಿಸುತ್ತವೆ. ಈ ದೇವಸ್ಥಾನದ ಪೂರ್ವಕ್ಕೆ ಮಹಾದ್ವಾರದ ನಂತರ ಕಾಣಬರುವ ಸಾಲು ಮಂಟಪಗಳ ತೇರು ಬೀದಿಗೆ, ವಿಠಲ ಪೇಟೆ ಎಂದು ಶಿಲಾಲೇಖನಗಳಲ್ಲಿ ಉಲ್ಲೇಖನವಿದೆ. ಈ ಪೇಟೆಯ ಇನ್ನೊಂದು ಕೊನೆಯಲ್ಲಿರುವ ಸುಂದರವಾದ ಮಂಟಪಕ್ಕೆ 'ಶ್ರೀ ಪರಾಂಕುಶ ಮಂಟಪ'ವೆಂದು ಹೆಸರು. ಈ ವಿಷಯವನ್ನು ತಿಳಿಸುವ ಶಾಸನವು, ಇನ್ನೂ ಅನೇಕ ವಿವರಗಳನ್ನು ಎಂದರೆ, ಭಾವಿಗಳ, ಕಾಲುವೆಗಳ, ತೋಟಗಳ ಮುಂತಾದವುಗಳ ಹೆಸರುಗಳನ್ನು ತಿಳಿಸುತ್ತದೆ. ಆದರೆ ಅನೇಕ ಮಾರ್ಪಾಟುಗಳಿಂದಾಗಿ ಅವುಗಳನ್ನು ಈಗ ಗುರುತಿಸಲು ಸಾಧ್ಯವಾಗುತ್ತಿಲ್ಲ.

f. ಈ ಪರಾಂಕುಶ ಮಂಟಪದಿಂದ ದಕ್ಷಿಣಕ್ಕೆ, ಈಗಿನ ತಳವಾರು ಕಟ್ಟೆಯ ರಸ್ತೆಯಿಂದ ಆಚೆಗೆ, ಜನ ನಿಬಿಡ ನಿವೇಶನವಿದ್ದುದಾಗಿ ತಿಳಿಯುತ್ತದೆ. ಈ ಭಾಗಕ್ಕೆ ಗೋರಿ ಕೆಳಗಣ ಗ್ರಾಮವೆಂದು ಹೆಸರಿತ್ತು.

ಈ ನಿವೇಶನದ ಮೇಲಕ್ಕೆ ಎಂದರೆ ಪಶ್ಚಿಮಕ್ಕೆ, ಅನತಿ ದೂರದಲ್ಲಿಯೇ ಚಿಕ್ಕ ಗುಡ್ಡಗಳ ಮೇಲೆ, ಮುಸಲ್ಮಾನರ ಅನೇಕ ಗೋರಿಗಳನ್ನು ಈಗಲೂ ನೋಡಬಹುದು. ಆದುದರಿಂದ ಈ ಗೋರಿ ಕೆಳಗಣ ಗ್ರಾಮದ ನಿವಾಸಿಗಳನ್ನು ಬಹುಶಃ ಮುಸಲ್ಮಾನರಾಗಿದ್ದಿರಬೇಕೆಂದು ತರ್ಕಿಸಬಹುದು. ವಿಜಯನಗರದ ಇತರ ಉಪನಗರಗಳೆಲ್ಲಾ ಯಾವುದಾದರೊಂದು ಹಿಂದೂ ದೇವರ ಹೆಸರನ್ನು ಹೊಂದಿದ್ದರೆ, ಇದಕ್ಕೆ ಮಾತ್ರ ಯಾವ ಹೆಸರನ್ನೂ ಕೊಡದೆ, ಗೋರಿ ಕೆಳಗಣ ಗ್ರಾಮವೆಂದು ಕರೆಯಲಾಗಿದೆ.

ಮೇಲೆಯೇ ತಿಳಿದು ಬಂದಿರುವಂತೆ, ಅನೇಕ ಶಾಸನಗಳಲ್ಲಿ ಈ ಉಲ್ಲೇಖನವಿದ್ದು, ಅವುಗಳೆಲ್ಲವೂ, ತಾಳಿಕೋಟೆಯ ಕದನಕ್ಕಿಂತ ಮೊದಲಿನವು ಎಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೇ ಇತರ ಆಧಾರಗಳ ಪ್ರಕಾರ ಮುಸಲ್ಮಾನರು ವಿಜಯನಗರ ವಿಜಯನಗರ ಅರಸರ ಕೈ ಕೆಳಗೆ ಅಧಿಕಾರಿಗಳಾಗಿಯೋ, ಸೈನಿಕರಾಗಿಯೋ ಅನೇಕರು ಇದ್ದರು. ಅದರಲ್ಲೂ ಎರಡನೇ ದೇವರಾಯನ ಆಳ್ವಿಕೆಯ ಕಾಲದಿಂದ, ಮುಸಲ್ಮಾನರಿಗೆ ಹೆಚ್ಚಿನ ಪ್ರೋತ್ಸಾಹ ದೊರೆತು, ಅನೇಕರು ವಿಜಯನಗರದಲ್ಲಿಯೇ ವಾಸವಾಗಿದ್ದರು. ಇದೇ ಪರಿಸರದಲ್ಲಿ ಈಗಲೂ ಕಾಣಬರುವ ಒಂದು ಶಿಲಾಶಾಸನದ ಪ್ರಕಾರ, ಎರಡನೇ ದೇವರಾಯನ ಅಡಿಯಲ್ಲಿ ಅಧಿಕಾರಿಯಾಗಿದ್ದ ಅಹಮ್ಮದಖಾನನೆಂಬವನು ತನ್ನ ಒಡೆಯನಿಗೆ ಪುಣ್ಯವಾಗಬೇಕೆಂದು, ಮಸೀದೆಯೊಂದರ ಪಕ್ಕದಲ್ಲಿ ಒಂದು ಭಾವಿಯನ್ನು ತೋಡಿಸಿ ಮತ್ತು ಒಂದು ಅನ್ನ ಛತ್ರವನ್ನು ಕಟ್ಟಿಸಿ ದಾನ ಮಾಡಿದನು. ಈ ಉಪನಗರವು, ಈ ದಿಕ್ಕಿನಲ್ಲಿ, ಮಹಾನಗರದ ಕೊನೆಯಾಗಿದ್ದಿರಬೇಕು. ಈ ವಿಷಯವನ್ನು ಸಮರ್ಥಿಸುವಲ್ಲಿ ಪೀಸ ಎಂಬ ಪೋರ್ಚುಗೀಸ ಪ್ರವಾಸಿಗರು ಬರೆದಿರುವುದೂ ಸಹ ತಾಳೆಯಾಗುತ್ತದೆ. ಅವನ ಪ್ರಕಾರ '.... ಬೀದಿಯ ಕೊನೆಯಲ್ಲಿ ಮೂರಿಷರ (ಮುಸಲ್ಮಾನರ) ಮನೆಗಳಿವೆ. ಅದೇ ನಗರದ ಕೊನೆ....' ಎಂದು. ಇದೇ ಈ ಗೋರಿ ಕೆಳಗಣ ಗ್ರಾಮವಾಗಿರಬೇಕಲ್ಲವೇ?

g. ಅಲ್ಲಿಂದ ದಕ್ಷಿಣಕ್ಕೆ ಹೋದರೆ ಈಗಿನ ಕಾಮಲಾಪುರ ಗ್ರಾಮವು ಸಿಗುತ್ತದೆ. ಈ ಗ್ರಾಮವು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ ಸಹ ಇದೇ ಹೆಸರಿನಿಂದ ಕರೆಯಲ್ಪಡುತ್ತಿದ್ದಿತೆಂದು, ಕಾಮಲಾಪುರದಲ್ಲಿರುವ ಒಂದು ಶಿಲಾಶಾಸನವು ತಿಳಿಸುತ್ತದೆ. ಇಂತಹುದೇ ಇನ್ನೊಂದು ಶಿಲಾಶಾಸನವು ಈ ಗ್ರಾಮದ ಹೆಸರನ್ನು ಉಲ್ಲೇಖಿಸುವುದಲ್ಲದೇ, ಅದರ ಪರಿಸರದಲ್ಲಿರುವ ಯಾವಾಗಲೂ ಬತ್ತದ ದೊಡ್ಡ ಕೆರೆ ಮತ್ತು ಅದಕ್ಕೆ ನೀರನ್ನೊದಗಿಸುವ ನಿರಂತರ ಏರ್ಪಾಟಿನ ಬಗ್ಗೆಯೂ ತಿಳಿಸುತ್ತದೆ.

h. ಕಾಮಲಾಪುರದಿಂದ ಪೂರ್ವಕ್ಕೆ ಮತ್ತು ಪಟ್ಟಾಭಿರಾಮ ದೇವಸ್ಥಾನಕ್ಕಿಂತಲೂ ಮೊದಲು ಕಾಣಬರುವ ಪ್ರದೇಶವು ಆ ಕಾಲದಲ್ಲಿ ಒಂದು ಜನವಸತಿ ಕೇಂದ್ರವಾಗಿದ್ದು, ಅದಕ್ಕೆ ಕೊಂಡಮರಸಯ್ಯನ ಪಾಳ್ಯವೆಂದು ಹೆಸರಿದ್ದುದಾಗಿ ತಿಳಿದುಬರುತ್ತದೆ. ಕ್ರಿ.ಶ.೧೫೩೧ರಲ್ಲಿ, ಎಂದರೆ ಅಚ್ಯುತದೇವ ಮಹಾರಾಜನು ಆಳುತ್ತಿದ್ದ ಕಾಲದಲ್ಲಿ, ಹೊರಡಿಸಲಾದ ಒಂದು ಶಿಲಾಶಾಸನವು ಈ ವಿಷಯವನ್ನು ತಿಳಿಸುತ್ತದೆ.

i. ಅಲ್ಲಿಂದ ಇನ್ನೂ ಮುಂದೆ ಪೂರ್ವಕ್ಕೆ ಹೋದಲ್ಲಿ ವರದರಾಜಮ್ಮನ ಪಟ್ಟಣವೆಂಬ ಉಪನಗರವಿದ್ದುದಾಗಿ ತಿಳಿಯುತ್ತದೆ. ಈಗಿನ 'ಹಂಪಿ ಪವರ್ ಹೌಸ್‌ಕ್ಯಾಂಪ್' ಪ್ರದೇಶವೇ ಆ ಉಪನಗರವಾಗಿತ್ತು. ಈ ಭಾಗದಲ್ಲಿ ಒಂದು ಹಾಳು ದೇವಸ್ಥಾನವಿದೆ. ಈಗ ಅದಕ್ಕೆ ಕಳ್ಳರ ಗುಡಿ ಎಂದು ಪ್ರತೀತಿ, ಆದರೆ ಶಾಸನಗಳ ಪ್ರಕಾರ ಆ ಗುಡಿಯು ರಘುನಾಥ ದೇವರ ಗುಡಿಯ ಬಳಿಯಲ್ಲಿ ಒಂದು ಕೋಟೆ ದ್ವಾರವಿದೆ. ಈ ದ್ವಾರಕ್ಕೆ ಪೆನುಗೊಂಡೆ ಬಾಗಿಲು ಎಂದು ಹೆಸರಿದ್ದುದಾಗಿ ತಿಳಿಯುತ್ತದೆ. ಎಂದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ, ಪೆನುಗೊಂಡೆ ಎಂಬುದು ಮುಖ್ಯ ಮಾಂಡಲೀಕನೊಬ್ಬನ ಪಟ್ಟಣವಾಗಿದ್ದು ಈ ದ್ವಾರವು, ಆ ಪೆನುಗೊಂಡೆಗೆ ಹೋಗುವ ರಾಜಮಾರ್ಗದಲ್ಲಿತ್ತೆಂಬುದು. ಆದರೆ ಆಗಿನ ರಾಜಮಾರ್ಗವು ಈಗ ಹಾಳಾಗಿದ್ದು ಬಳಕೆಯಲ್ಲಿರುವುದಿಲ್ಲ.

ಈ ಪೆನುಗೊಂಡೆ ಬಾಗಿಲಿನಿಂದ ಸ್ವಲ್ಪದೂರ ಉತ್ತರಕ್ಕೆ,ಎಂದರೆ ಈಗಿನ ಕಂಪಲಿ ರಸ್ತೆಗೆ ಹತ್ತಿರದಲ್ಲಿ, ಇದೇ ಸುತ್ತಿನ ಕೋಟೆಗೋಡೆಗೆ ಸೇರಿದ ಇನ್ನೊಂದು ಕೋಟೆದ್ವಾರವಿದೆ. ಇದರ ಹೆಸರು 'ಉದಯಗಿರಿ ಬಾಗಿಲು' ಎಂದಿತ್ತೆಂದು ಕ್ರಿ.ಶ.೧೫೫೪ರಲ್ಲಿಯ ಶಿಲಾಶಾಸನದಿಂದ ತಿಳಿದುಬರುತ್ತದೆ.

j. ಇಲ್ಲಿಂದ ಹೊಸಪೇಟೆಗಭಿಮುಖವಾಗಿ ಮಾರ್ಗಕ್ರಮಣ ಮಾಡಿದಂತೆ, ಮಲಪನಗುಡಿ ಗ್ರಾಮವು ಸಿಗುತ್ತದೆ. ಆ ಗ್ರಾಮದ ಹೊರವಲಯದಲ್ಲಿ 'ಸೂಳೆಭಾವಿ' ಎಂದು ಕರೆಯಲಾಗುತ್ತಿರುವ ಭಾವಿ ಇದೆಯಷ್ಟೇ? ಇದೂ ಸಹ ಅಸಂಬದ್ಧವಾದ ಹೆಸರಾಗಿದೆ. ಹಿಂದೆ ಈ ಭಾವಿಗೆ 'ಮಾಳಿಗೆ ಕೂಪಾರಾಮ'ವೆಂದು ಹೆಸರಿದ್ದುದಾಗಿ, ಶಿಲಾಶಾಸನವೊಂದರಿಂದ ತಿಳಿದುಬರುತ್ತದೆ. ಎಂದರೆ, ಮಾಳಿಗೆಯ ಅಥವಾ ಭಾವಣಿಯಿಂದ ಹೊದಿಸಿದ್ದು, ಭಾವಿಚಿತ್ರ, ಇಲ್ಲಿ ಛತ್ರವು ಭಾವಿಯಿಂದ ಪ್ರತ್ಯೇಕವಾಗಿ ಇರದೆ, ಭಾವಿಯ ಸುತ್ತಲೂ, ಕಮಾನುಗಳು ಮತ್ತು ಭಾವಣಿಗಳಿಂದ ಕೂಡಿದ್ದು, ಸಾಕಷ್ಟು ಅಗಲವಾದ ತಂಗುದಾಣವನ್ನು ನಿರ್ಮಿಸಿ, ಪ್ರವಾಸಿಗಳು ಅಲ್ಲಿ ತಂಗುವುದಕ್ಕೂ ಮಧ್ಯದಲ್ಲಿ ಭಾವಿಯಲ್ಲಿದ್ದ ನೀರನ್ನು ಉಪಯೋಗಿಸಲಿಕ್ಕೂ ಅನುಕೂಲವಾಗುವಂತೆ ಇದರ ವಿನ್ಯಾಸವನ್ನು ಏರ್ಪಡಿಸಲಾಗಿದೆ. ಈ ಏರ್ಪಾಟು ಎರಡು ಅಂತಸ್ತು (ಮಜಲು)ಗಳಲ್ಲಿದೆ. ಎಂದರೆ ಋತು ಧರ್ಮಕ್ಕನುಗುಣವಾಗಿ ಬದಲಾಗುವ ನೀರಿನ ಮಟ್ಟಕ್ಕನುಗುಣವಾಗಿ, ಅನುಕೂಲವಾದ ಮಜಲನ್ನೇ ದಾರಿಹೋಕರು ಉಪಯೋಗಿಸಿಕೊಳ್ಳಬೇಕಂಬ ಉದ್ದೇಶದಿಂದ ಹಾಗೆ ಏರ್ಪಡಿಸಲಾಗಿದೆ.

ಇಂಥ ಏರ್ಪಾಟಿನ ಬಾವಿಗಳು, ಆ ಕಾಲದಲ್ಲಿ ಸಾಮಾನ್ಯವಾಗಿ ರಾಜಮಾರ್ಗಗಳ ಬದಿಯಲ್ಲಿ, ದಾರಿಹೋಕರ ಅನುಕೂಲತೆಗಳಿಗಾಗಿ ನಿರ್ಮಾಣಗೊಳ್ಳುತ್ತಿದ್ದವು. ಈ 'ಸೂಳೆ ಭಾವಿ'ಯಾದರೋ, ಆ ಕಾಲದಲ್ಲಿ ಉಪಯೋಗದಲ್ಲಿದ್ದ ವಿವಿಧ ರಾಜಮಾರ್ಗಗಳ ಕೂಟ ಕೇಂದ್ರದಲ್ಲಿ ನಿರ್ಮಾಣಗೊಂಡಿತ್ತು. ಎಂದರೆ, ಪಶ್ಚಿಮ ಕರಾವಳಿಯ ಬಸರೂರು, ಬಾರಕೂರು, ಭಟ್ಕಳ, ಗೋವ ಮುಂತಾದ ವ್ಯಾಪಾರೀ ಕೇಂದ್ರಗಳಿಗೆ, ವಾಣಿಜ್ಯ ರಾಜಮಾರ್ಗವು ಇಲ್ಲಿಂದಲೇ ಹೋಗುತ್ತಿದ್ದವು. ಸೊಂಡೂರಿನ ಕಡೆಗೆ ಹೋಗುತ್ತಿದ್ದ, ಬಿಸಿಲಹಳ್ಳಿ ಕಣಿವೆ ಮಾರ್ಗವೂ ಸಹ ಇಲ್ಲಿಂದಲೇ ಇತ್ತು. ಅಲ್ಲದೇ ಇದೇ ಸ್ಥಳದಲ್ಲಿ, ವಿಜಯನಗರ ಶೈಲಿಯಲ್ಲಿ ಕಟ್ಟಲಾಗಿರುವ ರಾಜಮಾರ್ಗದ ವಿರಾಮ ದ್ವಾರವೊಂದು ಈಗಲೂ ಕಾಣಬರುತ್ತದೆ. ಈ ವಿವರಗಳೆಲ್ಲಾ ಮೇಲೆ ತಿಳಿಸಿರುವ ಶಾಸನದಿಂದ ವೇದ್ಯವಾಗುತ್ತದೆ.

k. ಅಲ್ಲಿಂದ ಮುಂದೆ ಸಾಗಿದಲ್ಲಿ ಈಗಿನ ಅನಂತಶಯನ ಗುಡಿ ಗ್ರಾಮವು ಬರುತ್ತದೆ. ಈ ಹೆಸರೇ ಸೂಚಿಸುವಂತೆ, ಈ ಗ್ರಾಮದಲ್ಲಿ ಒಂದು ಬೃಹದಾಕಾರದ 'ಶಾಲಶಿಖರ'ವನ್ನು ಹೊಂದಿರುವ ಮತ್ತು ಅದಕ್ಕನುಗುಣವಾದ ವಿನ್ಯಾಸದ ಗರ್ಭಗೃಹವಿರುವ ದೇವಾಲಯವಿದೆ. ಅದು ಶೇಷಶಾಯಿಯಾದ ವಿಷ್ಣುಮೂರ್ತಿಗಾಗಿ ನಿರ್ಮಾಣವಾದುದು. ಈಗ ಅದರಲ್ಲಿ ಮೂರ್ತಿ ಇರುವುದಿಲ್ಲ. ಈ ವಿಷಯದ ಬಗ್ಗೆ ಇಲ್ಲಿಯ ಜನರಲ್ಲಿ ಬೇರೆಯೇ ವದಂತಿ ಇದೆ. ಮೂರ್ತಿ ಸ್ಥಾಪನೆಯೇ ಈ ಗುಡಿಯಲ್ಲಿ ಜರುಗಲಿಲ್ಲ. ಅದಕ್ಕಾಗಿ ಕಟೆಯಲಾದ ಮೂರ್ತಿಯು ಈಗಿನ ಹೊಳಲು ಗ್ರಾಮದಲ್ಲಿಯೇ ಉಳಿದುಹೋಗಿದೆ ಎಂದು ಮುಂತಾಗಿ, ಆದರೆ ಈ ದೇವಾಲಯದಲ್ಲಿಯೇ ಕಾಣಬರುವ ಶಿಲಾಶಾಸನಗಳ ಪ್ರಕಾರ, ಮೂರ್ತಿ ಸ್ಥಾಪನೆಯಾಗಿದ್ದು, ಅದರ ಆರಾಧನೆ ಮುಂತಾದ ಕಾರ್ಯಗಳಿಗಾಗಿ ನೀಡಲಾದ ದಾನಗಳ ಬಗ್ಗೆ ವಿವರಗಳು ಸಾಕಷ್ಟು ಇವೆ. ಈ ವಿಷಯವೇ ಬೇರೆ.

ಇಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ವಿವರವೆಂದರೆ, ಈ ದೇವಾಲಯವಿರುವ ಉಪನಗರಕ್ಕೆ, ಆ ಕಾಲದಲ್ಲಿ 'ಸಾಲೆ ತಿರುಮಲರಾಯನ ನಗರ'ವೆಂದು ಹೆಸರಿದ್ದುದು. ಈ ವಿಷಯವನ್ನು ಸಹ, ಮೇಲೆ ತಿಳಿಸಿದ ಶಿಲಾಶಾಸನವೇ ಹೇಳುತ್ತದೆ. ಈ ಸಾಲೆ ತಿರುಮಲರಾಯನು ಅಪ್ರಾಪ್ತ ವಯಸ್ಸಿನಲ್ಲೇ ಮರಣಹೊಂದಿದ ಕೃಷ್ಣದೇವರಾಯ ಮಹಾರಾಜನ ಏಕಮಾತ್ರ ಪುತ್ರನಾಗಿದ್ದನು. ಅವನ ಮಗನ ಹೆಸರಿನಲ್ಲಿ ಈ ಉಪನಗರವು ನಾಮಕರಣವನ್ನು ಹೊಂದಿತತೆಂಬುದು ಖಚಿತವಾಗಿ ತಿಳಿದಂತಾಯಿತು.

ಅಲ್ಲದೇ ಕೃಷ್ಣದೇವರಾಯ ಮಹಾರಾಜನು ಆತ್ಮೀಯ ಹೆಸರಿನಲ್ಲಿ, ಉಪನಗರಗಳಿಗೆ ನಾಮಕರಣ ಮಾಡುವುದು ಬಹುವಾಗಿ ಕಂಡುಬರುತ್ತದೆ. ಈ ವಿಷಯ ಕುರಿತು ಲಭ್ಯವಿರುವ ಇನ್ನು ಕೆಲವು ವಿವರಗಳು ಕೆಳಗಿನ ಉದಾಹರಣೆಗಳಿಂದಲೂ ತಿಳಿಯುತ್ತವೆ.

l. ಈ ಅನಂತಶಯನ ಗುಡಿ ಗ್ರಾಮದಿಂದ ತುಸು ಉತ್ತರಕ್ಕೆ ನಡೆದರೆ ನಾಗೇನಹಳ್ಳಿ ಎಂಬ ಚಿಕ್ಕ ಗ್ರಾಮವು ಕಾಣಬರುತ್ತದೆ. ಈ ಗ್ರಾಮವು ಹಿಂದೆ ನಾಗಲಾಪುರವೆಂದು ಪ್ರಸಿದ್ಧಿಯಾಗಿದ್ದು, ಕೃಷ್ಣದೇವರಾಯ ಮಹಾರಾಜನ ತಾಯಿಯಾದ ನಾಗಲಾದೇವಿಯ ಹೆಸರಿನಲ್ಲಿ, ನಾಮಕರಣ ಹೊಂದಿತ್ತು. ಇದೇ ಗ್ರಾಮದಲ್ಲಿ ಈಗಲೂ ಕಾಣಬರುವ ರಂಗನಾಥ ದೇವಾಲಯದಲ್ಲಿ ಒಂದು ಶಿಲಾಶಾಸನವಿದ್ದು ಅದು ಕ್ರಿ.ಶ. ೧೫೧೬ರಲ್ಲಿ

ಹೊರಡಿಸಲಾದುದಾಗಿದೆ. ಈ ಶಾಸನವು ಇನ್ನೂ ತಿಳಿಸುವುದೇನೆಂದರೆ, ಈ ಗ್ರಾಮವು ನಾಗಲಾಪುರವೆಂಬ ಅಗ್ರಹಾರವೆಂದು ತಿಳಿಸುತ್ತಾ, ಈ ಅಗ್ರಹಾರವನ್ನು ರಂಗನಾಥ ದೀಕ್ಷಿತರೆಂಬ ಬ್ರಾಹ್ಮಣರಿಗೆ ದಾನವಾಗಿ ಕೊಡಲ್ಪಟ್ಟಿತ್ತು ಮತ್ತು ಕೃಷ್ಣದೇವರಾಯ ಮಹಾರಾಯನ ತಾಯಿಯಾದ ನಾಗಲಾದೇವಿಗೆ ಪುಣ್ಯಾಗಲೆಂದು ಹಾಗೆ ದಾನವಾಗಿ ಕೊಡಲ್ಪಟ್ಟಿತ್ತು ಎಂದು ಮುಂತಾಗಿ, ತದನಂತರ ಆ ರಂಗನಾಥ ದೀಕ್ಷಿತರು ಈ ಅಗ್ರಹಾರದಲ್ಲಿಯೇ ಒಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ನಾಗೇಶ್ವರನೆಂದು ಮತ್ತು ಒಂದು ವಿಷ್ಣು ದೇವಾಲಯವನ್ನು ಕಟ್ಟಿಸಿ ಅದಕ್ಕೆ ನಾಗೇಂದ್ರಶಯನ (ರಂಗನಾಥ)ವೆಂದು ನಾಮಕರಣ ಮಾಡಿ, ಕೆಲವು ದತ್ತಿಗಳನ್ನು ಬಿಟ್ಟನು. ಹೀಗೆ ಈ ಉಪನಗರವು, ನಾಗಲಾಪುರವೆಂಬ ಅಗ್ರಹಾರವಾಗಿ ಪ್ರಸಿದ್ಧಿಯಾಗಿತ್ತು.

m. ಈಗ ಹೊಸಪೇಟೆಯ ಬಗ್ಗೆ ವಿವೇಚಿಸೋಣ. ಆ ಹೆಸರೇ ತಿಳಿಸುವಂತೆ, ಅದು ಹಿಂದಿನಿಂದಲೂ ವ್ಯಾಪಾರೀ ಕೇಂದ್ರವಾಗಿ ಮತ್ತು ಕಾಲಗತಿಗನುಗುಣವಾದ ಮಾರ್ಪಾಟುಗಳೊಂದಿಗೆ ಬೆಳೆದು ಬಂದುದಾಗಿರಬೇಕು. ಆದರೆ ಹಿಂದಿನ ಜನ ನಿಬಿಡವಾದ ಉಪನಗರವು ಈಗಿನ ಸಣ್ಣಕ್ಕಿ ವೀರಭದ್ರದೇವರ ಗುಡಿ ಮತ್ತು ಕೋಟೆ ಎಂದು ಕರೆಯಿಸಿಕೊಳ್ಳುವ ಭಾಗಕ್ಕೆ ಸೀಮಿತವಾಗಿದ್ದಿರಬೇಕು. ಅಲ್ಲದೇ ಈ ಉಪನಗರಕ್ಕೆ ತಿರುಮಲಾದೇವಿ ಪಟ್ಟಣವೆಂದು ಕರೆಯಲಾಗುತ್ತಿತ್ತೆಂದು, ಇಲ್ಲಿ ದೊರೆತಿರುವ ಎರಡು ಶಿಲಾಶಾಸನಗಳಿಂದ ವೇದ್ಯವಾಗುತ್ತದೆ. ಇವುಗಳಲ್ಲಿ ಒಂದು ತಿರುವೆಂಗಳನಾಥ ದೇವರಗುಡಿ ಈಗ ಕಾಣಬರುತ್ತಿಲ್ಲ. ಮತ್ತು ಈಗಿನ ಸಣ್ಣಕ್ಕಿ ವೀರಭದ್ರ ದೇವರ ಗುಡಿಯು ಮೊದಲಿಗೆ ಗೌರೀಶ್ವರ ದೇವರಗುಡಿಯಾಗಿದ್ದಿರಬೇಕು. ಈ ಗುಡಿಯ ವಿನ್ಯಾಸ, ಅಲ್ಲಿಯ ಈಗಿನ ಮೂರ್ತಿ ಮುಂತಾದ ಅವಶೇಷಗಳನ್ನು ಪರಿಶೀಲಿಸಿದಲ್ಲಿ ಈ ವಿಷಯವು ಖಚಿತವಾಗಿ ತಿಳಿದುಬರುತ್ತದೆ.

ಈ ತಿರುಮಲಾದೇವಿಯು, ಕೃಷ್ಣದೇವರಾಯ ಮಹಾರಾಜನ ಪಟ್ಟದರಸಿಯರಲ್ಲೊಬ್ಬಳಾಗಿದ್ದಳೆಂಬುದು ನಿಸ್ಸಂದೇಹವಾದ ವಿಷಯ. ಏಕೆಂದರೆ ಈ ಬಗ್ಗೆ ಅನೇಕ ದಾಖಲೆಗಳು ದೊರೆತಿವೆ.

ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮೇಲಿನ ಎರಡೂ ಶಾಸನಗಳಲ್ಲಿ, ವ್ಯಾಪಾರೀ ಬಣಗಳಾದ ಶೆಟ್ಟಿ ಪಟ್ಟಣದ ಸ್ವಾಮಿಗಳು (ತಿರುಮಲಾದೇವಿ ಪಟ್ಟಣ, ವರದರಾಜಮ್ಮನ ಪಟ್ಟಣ ಮತ್ತು ಕೃಷ್ಣಾಪುರ ಶೆಟ್ಟಿ ಪಟ್ಟಣಗಳ ಸ್ವಾಮಿಗಳು ವಣಿಜಕರು) ದಾನಗಳನ್ನು ನೀಡಿದ ಉಲ್ಲೇಖನವಿದೆ ಎಂದ ಬಳಿಕ, ಇಲ್ಲಿ ವ್ಯಾಪಾರಿಗಳು (ವಣಿಜಕರು) ಪ್ರಾಮುಖ್ಯತೆಯಿಂದ ಇದ್ದುದಕ್ಕೆ, ಹೊಸಪೇಟೆ ಎಂಬುದು ವ್ಯಾಪಾರೀ ಕೇಂದ್ರವಾಗಿದ್ದಿತೆಂಬ ತರ್ಕ ಸರಣಿಗೂ, ತಾಳೆಯಾದಂತಾಯಿತಲ್ಲವೇ? ಇದೇ ಕಾರಣದಿಂದಾಗಿ ಕಾಲಾಂತರದಲ್ಲಿ, ತಿರುಮಲಾದೇವಿ ಪಟ್ಟಣವೆಂಬ ಹೆಸರು ಒಂದಾಗಿ, ಬರಿಯೆ ಪೇಟೆ ಅಥವಾ ಹೊಸಪೇಟೆ ಎಂಬುದಾಗಿ ಉಳಿದುಬಂದಿದೆ.

n. ಕೊನೆಯಲ್ಲಿ ಈಗಿನ ಚಿತ್ತವಾಡಿಗಿಯ ಬಗ್ಗೆಯೂ ವಿವೇಚಿಸೋಣ. ಈಗಾಗಲೇ ತಿಳಿದುಬಂದಂತೆ, ಕೃಷ್ಣದೇವರಾಯ ಮಹಾರಾಜನು ತನಗೆ ಆತ್ಮೀಯರೂ ಮತ್ತು ಹತ್ತಿರದ ಸಂಬಂಧಿಗಳೂ ಆದ ತಾಯಿ ಮಗ ಮತ್ತು ಒಬ್ಬ ಪಟ್ಟದರಸಿ ಅವರುಗಳ ಹೆಸರಿನಲ್ಲಿ, ಉಪನಗರಗಳಿಗೆ ನಾಮಕರಣ ಮಾಡಿದ್ದನು. ಹೀಗಿರುವಾಗ, ಅವನಿಗೆ ಹೆಚ್ಚಲ್ಲದಿದ್ದರೂ ಅಷ್ಟೇ ಆತ್ಮೀಯಳಾದ ಮತ್ತು ಅವನ ಅನುರಾಗಗಳಿಗೆ ಪಾತ್ರಳಾದ ಇನ್ನೊಬ್ಬ ಪಟ್ಟದರಸಿಯುಳಿದ್ದಳಷ್ಟೇ? ಅವಳೇ ಚಿನ್ನಾದೇವಿ. ಈ ವಿಷಯದ ಬಗ್ಗೆಯೂ ಅನೇಕ ದಾಖಲೆಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದುದೆಂದರೆ, ತಿರುಮಲೆಯ ವೆಂಕಟೇಶ್ವರ ಸ್ವಾಮಿಯ ಸಾನ್ನಿಧ್ಯದಲ್ಲಿರುವ ಮೂರು ಕಂಚಿನ ಮೂರ್ತಿಗಳು, ಅವುಗಳಲ್ಲಿ ಮಧ್ಯದಲ್ಲಿ ಕೃಷ್ಣದೇವರಾಯನದಿದ್ದರೆ, ಎಡಬಲಗಳಲ್ಲಿ ತಿರುಮಲಾದೇವಿ ಮತ್ತು ಚಿನ್ನಾದೇವಿಯರ ಮೂರ್ತಿಗಳಿವೆ. ಈ ಮೂರ್ತಿಗಳ ಮೇಲೆ, ಅವರವರುಗಳ ಹೆಸರುಗಳನ್ನು ಕೆತ್ತಲಾಗಿದೆ. ಇವೆಲ್ಲವೂ ಭಕ್ತ ವಿಗ್ರಹಗಳು. (ಇವುಗಳ ಪ್ರತೀಕಗಳನ್ನು ಹಂಪೆಯಲ್ಲಿರುವ ಪುರಾತತ್ವ ಸಂಗ್ರಹಾಲಯದಲ್ಲಿ ನೋಡಬಹುದು.) ಎಂದರೆ ಈ ಇಬ್ಬರು ಅರಸಿಯರನ್ನು ಅರಸನು ಸಮನಾಗಿ ಕಾಣುತ್ತಿದ್ದನು. ಅದುದರಿಂದ ಈ ಚಿನ್ನಾದೇವಿಯನ್ನು, ಕೃಷ್ಣದೇವರಾಯ ಮಹಾರಾಜನು, ಉಪೇಕ್ಷೆ ಮಾಡಿರಲಾರನಲ್ಲವೇ? ಎಂದೇ ಈಗಿನ ಚಿತ್ತವಾಡ್ಗಿಯನ್ನು, ಈ ಇನ್ನೊಬ್ಬ ಪಟ್ಟದರಸಿಯಾದ ಚಿನ್ನಾದೇವಿಯ ಹೆಸರಿನಲ್ಲಿ ನಾಮಕರಣ ಮಾಡಿದ್ದನೆಂದು ತರ್ಕಿಸಬಹುದು. ಈ ತರ್ಕಕ್ಕೆ ಸಹಾಯವಾಗುವಂತೆ,

ಶಿಲಾಶಾಸನವೊಂದು ಚಿಕ್ಕವಾಡಿ ಎಂಬ ಉಪನಗರವನ್ನು ಸೂಚಿಸುತ್ತದೆ. ಅದು ಈಗಿನ ಚಿತ್ತವಾಡ್ಗಿಯಾಗಿ ಏರ್ಪಾಟಾಗಿರಬೇಕೆಂದು ಹೇಳಬಹುದು. ಎಂದರೆ ಅದು ಆರಂಭದಲ್ಲಿ ಚಿನ್ನಾದೇವಿವಾಡವಾಗಿದ್ದುದು, ಜನರ ಬಾಯಲ್ಲಿ ಬರಬರುತ್ತಾ ಚಿಕ್ಕದೇವಿವಾಡ, ಚಿಕ್ಕವಾಡ್ಗಿಯಾಗಿ ಉಳಿದು ಬಂದಿರಬೇಕು. ಈ ಸಂದರ್ಭದಲ್ಲಿ ಈ ಎಲ್ಲ ಉಪನಗರಗಳು, ಅದರಲ್ಲೂ ಕೃಷ್ಣದೇವರಾಯ ಮಹಾರಾಜನಿಗೆ ಆತ್ಮೀಯರಾದವರುಗಳ ಹೆಸರಿನಲ್ಲಿದ್ದ ನಾಗಲಾಪುರ (ನಾಗೇನಹಳ್ಳಿ), ಸಾಲೆ ತಿರುಮಲ ರಾಯಪುರ (ಅನಂತಶಯನ ಗುಡಿ), ವರದರಾಜಮ್ಮನ ಪಟ್ಟಣ (ಹೊಸಪೇಟೆ), ಚಿನ್ನಾದೇವಿವಾಡ (ಚಿತ್ತವಾಡ್ಗಿ) ಹತ್ತಿರ ಹತ್ತಿರದಲ್ಲಿದ್ದು, ಒಂದಕ್ಕೊಂದು ಪೂರಕವಾದುವುಗಳಾಗಿದ್ದಿರಬೇಕು. ಆದರೆ ಈಗ ಮಾತ್ರ ಹೊಸಪೇಟೆಯ ವಿಸ್ತೃತಗೊಳ್ಳುತ್ತದೆ ಕಾಲಧರ್ಮಕ್ಕನುಗುಣವಾಗಿ.

(The Metropolis of the Vijayanagara Empire by C.T.M. Kotraiah, Published in the Vijayanagara Urbanity Published by National Symposium Urban Development Edited by Dr. K.R. Basavaraj, Hospet, 1978)

**ಆಕರ**

ಹಂಪೆ, ೧೯೯೫, ಶರಣರ ಸುವಾಸಿನಿ ಬಳಗ, ಹೊಸಪೇಟೆ, ಪು.೧೪-೨೭

## ೨೯. ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಸಿದ್ಧಿಯನ್ನು ಪಡೆದ ಅರಸು ಮನೆತನಗಳಲ್ಲಿ ಒಂದು. ಮಧ್ಯಕಾಲೀನ ಐತಿಹಾಸಿಕ ನೆಲೆಗಳಾದ ಚಂಪಾನೀ ಮತ್ತು ಫತೇಪು ಸಿಕ್ರಿ (ಅಗ್ರಾ) ಸಹ ವಿಜಯನಗರ ಸಾಮ್ರಾಜ್ಯದ ಸಮಕಾಲೀನ ನೆಲೆಗಳಾಗಿದ್ದರೂ ವಿಜಯನಗರ ಸಾಮ್ರಾಜ್ಯವು ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿರುವುದು ಗಮನಾರ್ಹ. ಬಳ್ಳಾರಿ ಜಿಲ್ಲೆಯಲ್ಲಿರುವ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿಜಯನಗರದ ಅರಸರು ಇಡೀ ದಕ್ಷಿಣ ಭಾರತವನ್ನೇ ಸುಮಾರು ಮೂರು ಶತಮಾನಗಳಿಗೂ ಅಧಿಕವಾಗಿ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಪ್ರಾಚೀನ ಭಾರತದ ಅರಸು ಮನೆತನಗಳು ತಮ್ಮ ರಾಜ್ಯಗಳನ್ನು ಶ್ರೇಣೀಕೃತ ವಿಭಾಗಗಳನ್ನಾಗಿ ವಿಭಜಿಸಿ ಆಡಳಿತವನ್ನು ನಡೆಸಿದಂತೆಯೇ ವಿಜಯನಗರದ ಅರಸು ಸಹ-ತಮ್ಮ ರಾಜ್ಯವನ್ನು ವಿಭಾಗಿಸಿ ಆಳಿದುದು ಇತಿಹಾಸಕಾರರು ಬಲ್ಲ ವಿಷಯವಷ್ಟೆ. ಇಂತಹ ಶ್ರೇಣೀಕೃತ ವಿಭಾಗದ ಒಂದು ವಿಭಾಗವೇ ನಗರ ಅಥವಾ ಪಟ್ಟಣ. ಈ ಲೇಖನದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನು ಮತ್ತು ಅದರೊಂದಿಗೆ ಸಾವಯವ್ಯ ಸಂಬಂಧಗಳನ್ನು ಹೊಂದಿದ್ದಂತಹ ಉಪನಗರಗಳನ್ನು ಕುರಿತು ಚರ್ಚಿಸಲಾಗುವುದು.

ವಿಜಯನಗರ ಸಾಮ್ರಾಜ್ಯದ ಇತಿಹಾಸದೊಂದಿಗೆ, ಕಲೆ, ವಾಸ್ತುಶಿಲ್ಪ, ಸಮಾಜ ಮತ್ತು ಸಾಂಸ್ಕೃತಿಕ ಮಜಲುಗಳನ್ನು ಅರಿಯುವ ಪ್ರಯತ್ನವನ್ನು ವಿದ್ವಾಂಸರು ಸತತವಾಗಿ ಮಾಡುತ್ತಲೇ ಬಂದಿದ್ದಾರೆ. ವಿಜಯನಗರದ ಇತಿಹಾಸವನ್ನು ಸಂಪೂರ್ಣವಾಗಿ ಅರಿಯುವ ದಿಸೆಯಲ್ಲಿ ವಿಜಯನಗರದ ಅರಸರ ರಾಜಧಾನಿಯಾದ ಹಂಪೆಯನ್ನು ಭಾರತ ಮತ್ತು ವಿದೇಶದ ವಿದ್ವಾಂಸರುಗಳು ಅತೀ ಹೆಚ್ಚಿನ ಅಧ್ಯಯನಕ್ಕೆ ಗುರಿಪಡಿಸಿರುತ್ತಾರೆ. ಹಂಪೆಯನ್ನು ಶಾಸನಗಳಲ್ಲಿ ವಿಜಯನಗರಪಟ್ಟಣ ಎಂದು ಕರೆಯಲಾಗಿದೆ. ಈ ಪಟ್ಟಣಕ್ಕೆ ಭೇಟಿಯನ್ನಿತ್ತು ಅಂದಿನ ವೈಭವಗಳನ್ನು ದಾಖಲಿಸಿರುವ ವಿದೇಶಿ ಪ್ರವಾಸಿಗರ ಬರಹಗಳು ಮತ್ತು ವಿಜಯನಗರ ಕಾಲದ ಇತಿಹಾಸದಲ್ಲಿ ಆಸಕ್ತಿಯುಳ್ಳ ಪ್ರಾಕ್ತನ ಅನ್ವೇಷಣಕಾರರು ಮತ್ತು ಚರಿತ್ರಕಾರರು ವಿಜಯನಗರ ಪಟ್ಟಣವನ್ನು ಕುರಿತು ಒಂದು ದಶಕದಿಂದಲೂ ವಿಶೇಷ ಆಸಕ್ತಿಯನ್ನು ವಹಿಸಿ ಉತ್ಖನನ ಮತ್ತು ಸರ್ವೇಕ್ಷಣೆಯನ್ನು ನಡೆಸಿ ಅನೇಕ ಹೊಸ ವಿಚಾರಗಳನ್ನು ನಮ್ಮ ಮುಂದಿಟ್ಟಿರುವರು. ಇತ್ತೀಚೆಗೆ ಸಿ.ಎಸ್.ಪಾಟೀಲ್‌ರವರು ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆಯನ್ನು ಕುರಿತಂತೆ ಅಧ್ಯಯನವನ್ನು ನಡೆಸಿರುವರು.[1] ಬಿ.ಎಸ್. ನಾಗರಾಜ್‌ರವರು ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆಯನ್ನು ಕುರಿತಂತೆ ಅಧ್ಯಯನವನ್ನು ನಡೆಸಿರುವರು. ಬಿ.ಎಸ್.

ನಾಗರಾಜ್‌ರವರು ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆಯನ್ನು ಕುರಿತಂತೆ ಅಧ್ಯಯನವನ್ನು ಕೈಗೊಂಡಿರುವರು.[2] ನಾಗರಾಜ್‌ರವರು ಮುಖ್ಯವಾಗಿ ಶಾಸನಗಳ ಆಧಾರಗಳಿಂದ ವಿಜಯನಗರ ಸಾಮ್ರಾಜ್ಯದಲ್ಲಿ, ಅಂದರೆ, ಇಡೀ ದಕ್ಷಿಣ ಭಾರತದಲ್ಲಿ ವ್ಯಾಪಿಸಿದ್ದ, ನಗರಗಳನ್ನು ಕುರಿತಂತೆ ತಮ್ಮ ವಿಚಾರಗಳನ್ನು ಮಂಡಿಸಿರುತ್ತಾರೆ. ಈ ಲೇಖನದ ವ್ಯಾಪ್ತಿಯನ್ನು ವಿಜಯನಗರ ಪಟ್ಟಣಕ್ಕೆ (ಹಂಪೆ) ಮಾತ್ರ ಸೀಮಿತಗೊಳಿಸಲಾಗಿದೆ.

'ನಗರ' ಎಂದರೆ ನಾಗರೀಕರು ವಾಸಿಸುವ ಸ್ಥಳ ಅಥವಾ ಪ್ರದೇಶಕ್ಕೆ ನಗರ ಎಂದು ಅರ್ಥೈಸಬಹುದು. ನಗರ ಎಂದರೆ ಮುಖ್ಯ ಪಟ್ಟಣ ಅಥವಾ ಪುರ ಎಂದು ಕರೆಯುವುದು ವಾಡಿಕೆಯಲ್ಲಿದೆ. ವಡ್ಡಾರಾಧನೆಯಲ್ಲಿ "ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಮುಖಂಗಳಂ ವಿಹಾರಿಸುತ್ತಂ"[3] ಎಂದಿದ್ದರೆ, ಕ್ರಿ.ಶ.೧೦೩೧ರ ಒಂದು ಶಾಸನದಲ್ಲಿ "ಆಲಂದೆಯ ನಗರಂ ದೇವರಿಗೆ ಮಾಳೆದ ಪೇಳೆಂಗಯ್ಯುವತ್ತೆಲೆಯಂ ಬಿಟ್ಟರಿಂತಿ ನಿತುಮಂ ನಗರ ಮಹಾಜನ ಪಂಚ ಮಠ ಸ್ಥಾನಮಾಚಂದ್ರಾರ್ಕ್ಯ ಸ್ಥಾಯಿವರಂ ನಡೆಯಿಸುವರು" ಎಂದು ನಗರವನ್ನು ಕುರಿತು ಉಲ್ಲೇಖಿಸಿದೆ.[4] ಹಲವಾರು ಶಾಸನಗಳಲ್ಲಿ ಇಂತಹ ಉಲ್ಲೇಖಗಳು ಇಲ್ಲದಿಲ್ಲ. ನಗರವನ್ನು ಅದರ ವ್ಯಾಪಕತೆ ಮತ್ತು ಅದರಲ್ಲಿ ವಾಸಿಸುವ ಜನಸಂಖ್ಯೆಯನ್ನು ಆಧರಿಸಿ ಆ ವಸತಿ ಪ್ರದೇಶವನ್ನು ನಗರ ಅಥವಾ ಪಟ್ಟಣ ಎಂದು ವರ್ಗೀಕರಿಸಬಹುದು. ಮತ್ತೊಂದು ವರ್ಗೀಕರಣದಂತೆ ನಗರದಲ್ಲಿ ಸುಸಂಸ್ಕೃತರು, ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿರುವರು, ಆಡಳಿತಗಾರರು ಮತ್ತು ಸಮಾಜದ ಶ್ರೇಷ್ಠಿಗಳು ವಾಸಿಸುವ ಜನವಸತಿ ಪ್ರದೇಶಕ್ಕೆ ನಗರ ಎಂದು ವರ್ಗೀಕರಿಸಿರುತ್ತಾರೆ.

ಒಂದು ಅರಸು ಮನೆತನದ ಆಳ್ವಿಕೆಗೆ ಒಳಪಟ್ಟ ಪ್ರದೇಶದ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಆ ಪ್ರದೇಶವನ್ನು ಶ್ರೇಣೀಕೃತ ವಿಭಾಗಗಳನ್ನಾಗಿ ವಿಂಗಡಿಸಿರುವುದು ಚರಿತ್ರೆಯಿಂದ ತಿಳಿದ ವಿಷಯವೇ ಸರಿ, ಇಂತಹ ಶ್ರೇಣೀಕೃತ ವಿಭಾಗಗಳು ಯಾವುವೆಂದರೆ ರಾಜ್ಯ, ರಾಷ್ಟ್ರ, ನಾಡು, ಮಹಾನಾಡು, ಸೀಮೆ, ವೇಂಟೆ, ಸ್ಥಳ, ವಳಿತ, ಪಟ್ಟಣ, ನಗರ, ಪುರ, ಗ್ರಾಮ, ಹಳ್ಳಿ ಮುಂತಾದವುಗಳೇ ಆಗಿವೆ. ಸಾಮಾನ್ಯವಾಗಿ ರಾಜಧಾನಿಯನ್ನು ನಗರ ಅಥವಾ ಪುರ ಎಂದು ಗುರುತಿಸುತ್ತಾರೆ. ಇದಲ್ಲದೇ ರಾಜ್ಯದಲ್ಲಿನ ಮುಖ್ಯ ಪ್ರದೇಶದಲ್ಲಿ, ವಾಣಿಜ್ಯ ವ್ಯವಹಾರ, ನಾಗರೀಕ ಸೌಲಭ್ಯಗಳನ್ನು ಹೊಂದಿರುವಂತಹ ಪ್ರದೇಶಕ್ಕೆ ಸಹ ನಗರ ಎಂದಿರುವುದನ್ನು ಕಾಣಬಹುದು. ಅದರಂತೆಯೇ ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಪಡೆದ ಪ್ರದೇಶವು ಸಹ ನಗರವಾಗಿರುವುದನ್ನು ನೋಡಬಹುದಾಗಿದೆ. ಇಂತಹ ನಗರಗಳು ವಿಜಯನಗರ ಕಾಲದಲ್ಲಿ ಪಟ್ಟಣ ಸ್ವಾಮಿಗಳು ಎಂಬ ಅಧಿಕಾರಿಗಳ ಉಸ್ತುವಾರಿಯಲ್ಲಿ ಇರುತ್ತಿದ್ದವೆಂಬುದು ಶಾಸನಗಳಿಂದ ತಿಳಿದುಬರುತ್ತದೆ.

ಭಾರತದಲ್ಲಿ ನಗರೀಕರಣದ ಪ್ರಕ್ರಿಯೆಯನ್ನು ನವಶಿಲಾಯುಗ ಕಾಲದಿಂದಲೂ ಕಾಣಬಹುದು. ಈ ಪ್ರಕ್ರಿಯೆಯು ಸ್ಪಷ್ಟವಾಗಿ ಗುರುತಿಸಲ್ಪಡುವುದು ಸಿಂಧೂ ಕಣಿವೆ ಸಂಸ್ಕೃತಿಯಲ್ಲಿಯೇ. ಈ ಸಂಸ್ಕೃತಿಗೆ ಸೇರಿದ ನೆಲೆಗಳ ಉತ್ಖನನಗಳಿಂದ ನಮಗೆ ಅನೇಕ ನಗರಗಳು ಉಪಲಬ್ಧವಾಗಿದ್ದು, ಇವುಗಳು ತಮ್ಮ ಎಲ್ಲಾ ಅಗತ್ಯಗಳನ್ನು ಪೂರೈಸಿಕೊಳ್ಳುವಂತಹ ಘಟಕಗಳಾಗಿದ್ದವೆಂಬುದು ತಿಳಿದುಬರುತ್ತದೆ.[5] ಸಿಂಧೂ ಕಣಿವೆ ಸಂಸ್ಕೃತಿಯ ನೆಲೆಗಳ ನಗರ ರಚನಾ ವಿಧಾನ ಮತ್ತು ಶೈಲಿಯು ಮುಂದೆ ಆದಿ ಇತಿಹಾಸ ಮತ್ತು ಇತಿಹಾಸ ಕಾಲದಲ್ಲಿಯೂ ಮುಂದುವರೆದು ಮಧ್ಯಕಾಲೀನ ಯುಗದಲ್ಲಿ ಪ್ರಬುದ್ಧವಾಗಿ ಬೆಳೆಯಿತು. ಇಲ್ಲಿಯವರೆಗೆ, ಭಾರತದ ವಿವಿಧೆಡೆಗಳಲ್ಲಿ ನಡೆದಂತಹ ಉತ್ಖನನದಲ್ಲಿ ಅನೇಕ ನಗರಗಳನ್ನು ಹೊರ ತೆಗೆಯಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಿದ ನಗರ ರಚನಾ ವಿನ್ಯಾಸದಂತಹ ಕೆಲವು ನಗರಗಳನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. ಇನಾಂಗಾವ್, ಶಿಶುಪಾಲ್‌ಗಡ್, ಕೌಸಾಂಬಿ, ಪಾಟಲೀಪುತ್ರ, ಅಹಿಚ್ಛತ್ರ, ಅಯೋಧ್ಯ, ಶ್ರಿಂಗವೇಪುರ್, ನಾಗಾರ್ಜುನಕೊಂಡ, ಇತ್ಯಾದಿಯಾಗಿ ಆದಿ ಇತಿಹಾಸ ಕಾಲದ ನೆಲೆಗಳ ಉತ್ಖನನಗಳಿಂದ ನಗರ ರಚನಾ ವಿಧಾನ, ರಕ್ಷಣಾ ವಿನ್ಯಾಸ ಮುಂತಾದ ವಿಷಯಗಳು ಬೆಳಕಿಗೆ ಬಂದಿವೆ.[6] ಆದುದರಿಂದ ಭಾರತದಲ್ಲಿ ನಗರೀಕರಣದ ಪ್ರಕ್ರಿಯೆಯು ಸುಮಾರು ನಾಲ್ಕು ಸಾವಿರ ವರ್ಷಗಳಿಂದ ನಿರಂತರವಾಗಿ ನಡೆದು ಬಂದಿರುವುದನ್ನು ಕಾಣಬಹುದು.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಪಟ್ಟಣವು ಪಂಪಾಕ್ಷೇತ್ರದಲ್ಲಿ ಇದ್ದ ಕಾರಣ ಮುಂದೆ ಇದುವೇ ಹಂಪೆಯಾಗಿ ಮಾರ್ಪಾಡಾಯಿತು. ಇದಕ್ಕೂ ಮುಂಚಿತವಾಗಿ ಪ್ರಾರಂಭಿಕ ವಿಜಯನಗರ ಸಾಮ್ರಾಜ್ಯದ ಕೆಲವು ಅರಸರು ಇಂದಿನ ರಾಯಚೂರು

ಜಿಲ್ಲೆಯಲ್ಲಿರುವ ಆನೆಗೊಂದಿಯನ್ನು ರಾಜಧಾನಿಯನ್ನಾಗಿರಿಸಿಕೊಂಡಿದ್ದರು. ನಂತರದಲ್ಲಿ ಆನೆಗೊಂದಿಯಲ್ಲಿದ್ದ ರಾಜಧಾನಿಯನ್ನು ಇಂದಿನ ಹಂಪೆಗೆ ವರ್ಗಾಯಿಸಲ್ಪಟ್ಟ ತರುವಾಯವೇ ಹಂಪೆಯು ನಗರವಾಗಿ ಬೆಳೆದು ಪ್ರಸಿದ್ಧಿಯನ್ನು ಹೊಂದಿತು. ವಿಜಯನಗರ ಪಟ್ಟಣಕ್ಕೆ ಒಟ್ಟು ಏಳು ಸುತ್ತುಗಳ ಕೋಟೆ ಇದ್ದವೆಂದು ನಮಗೆ ವಿದೇಶಿ ಪ್ರವಾಸಿಗರ ಬರಹಗಳಿಂದ ತಿಳಿದುಬರುತ್ತದೆ. ಇಂದು ವಿಜಯನಗರ ಪಟ್ಟಣವನ್ನು ಅದರ ಅವಶೇಷಗಳಿಂದ ಗುರುತಿಸಿ ಸುಮಾರು ಇಪ್ಪತ್ತೈದು ಚದುರ ಕಿ.ಮೀ.ಗಳಷ್ಟು ಪ್ರದೇಶಗಳಲ್ಲಿ ವ್ಯಾಪಿಸಿತ್ತೆಂದು ಅಭಿಪ್ರಾಯಪಡಲಾಗಿದೆ. ಕೋಟೆಯ ಏಳು ಸುತ್ತುಗಳನ್ನು ಇಲ್ಲಿಯವರೆಗೆ ಸ್ಪಷ್ಟವಾಗಿ ಗುರುತಿಸಲಾಗದಿದ್ದರೂ ಐದು ಸುತ್ತುಗಳನ್ನು ಖಚಿತವಾಗಿ ಗುರುತಿಸಲಾಗಿದೆ.

ವಿಜಯನಗರ ಪಟ್ಟಣವು ಏಳು ಸುತ್ತುಗಳನ್ನು ಒಳಗೊಂಡ ಕೋಟೆಯಾಗಿದ್ದರೂ, ಹಂಪೆಯನ್ನು ಮಾತ್ರವೇ ಪಟ್ಟಣವೆಂದು ಗುರುತಿಸಲಾಗಿದೆ. ಇಲ್ಲಿಯೇ ಅರಸರು ಮತ್ತು ಸಮಾಜದ ಉನ್ನತ ವ್ಯಕ್ತಿಗಳು ವಾಸಿಸಿದ ಪ್ರದೇಶವಾಗಿದ್ದರಿಂದ ಇದನ್ನು ರಾಜಧಾನಿಯೆಂದು ಗುರುತಿಸಲಾಗಿದೆ. ಈ ಏಳು ಸುತ್ತಿನ ಕೋಟೆಯೊಳಗೆ ವಿಜಯನಗರ ಪಟ್ಟಣಕ್ಕೆ ಹೊಂದಿಕೊಂಡಿದ್ದ ಚಿಕ್ಕ ಜನವಸತಿಯ ಪ್ರದೇಶಗಳನ್ನು ಉಪನಗರಗಳೆಂದು ಗುರುತಿಸಬಹುದು. ಈ ಉಪನಗರಗಳು, ಗಾತ್ರ, ವ್ಯಾಪ್ತಿ ಮತ್ತು ರಚನಾ ವಿನ್ಯಾಸದಲ್ಲಿ ನಗರಗಳಿಗಿಂತ ಚಿಕ್ಕವಾಗಿದ್ದು ಇವುಗಳನ್ನು ವಿಜಯನಗರ ಪಟ್ಟಣದ ಉಪನಗರಗಳೆಂದು (Suburb) ಕರೆಯಬಹುದು. ವಿಜಯನಗರ ಪಟ್ಟಣದ ಉಪನಗರಗಳು ಯಾವುವೆಂದರೆ;

೧. ಕಾಮಲಾಪುರ

೨. ಕೃಷ್ಣಾಪುರ

೩. ಅಚ್ಯುತಾಪುರ

೪. ವಿಠ್ಠಲಾಪುರ

೫. ಮಲಪನಗುಡಿ

೬. ಅನಂತಶಯನಗುಡಿ (ಶಾಲೆ ತಿರುಮಲರಾಯ ಪಟ್ಟಣ)

೭. ತಿರುಮಲಾದೇವಿ ಪಟ್ಟಣ

೮. ವರದರಾಜಮ್ಮನ ಪಟ್ಟಣ (ಅನಂತಾಪುರ)

೯. ವೆಂಕಟಾಪುರ

೧೦. ಆನೆಗೊಂದಿ

೧೧. ನಿಂಬಾಪುರ

೧೨. ನಾಗಲಾಪುರ ಇತ್ಯಾದಿ

ಈ ಉಪನಗರಗಳನ್ನು, ಭೌಗೋಳಿಕ ವ್ಯಾಪ್ತಿಯನ್ನು ಮಾನದಂಡವಾಗಿಟ್ಟುಕೊಂಡು ಪರಿಶೀಲಿಸಿದಾಗ ಇವು ಮೂರು ಖಚಿತವಾದ ವಲಯಗಳಲ್ಲಿರುವುದನ್ನು ಗಮನಿಸಬಹುದು. ಇವು ಯಾವುವೆಂದರೆ

೧. ಕೇಂದ್ರ ವಲಯ (Nucleus Region)

೨. ವ್ಯವಸಾಯ ಅಥವಾ ಕೃಷಿ ವಲಯ (Agro Region) ಮತ್ತು

೩. ಹೊಲ ವಲಯ (Distal Region)

ರಾಜಧಾನಿ, ಅರಮನೆ, ರಾಜರ ವಾಸಸ್ಥಾನ, ಅಧಿಕಾರಿಗಳು, ಮಂತ್ರಿಗಳು, ಪ್ರಮುಖರು ವಾಸಿಸುವ ಸ್ಥಳವನ್ನು ಕೇಂದ್ರ ವಲಯವೆಂದು ಗುರುತಿಸಿದ್ದೇನೆ. ಈ ವಲಯದಲ್ಲಿಯೇ ಕೆಲವು ಪ್ರಮುಖ ದೇವಾಲಯಗಳೂ ಸಹ ಇವೆ. ಈ ವಲಯದಲ್ಲಿಯೇ ವಾಣಿಜ್ಯ ಚಟುವಟಿಕೆಗಳು ಬಿರುಸಿನಿಂದ ಸಾಗಿದ್ದವು ಎಂಬುದಕ್ಕೆ ನಮಗೆ ಆಧಾರಗಳು ದೊರಕಿವೆ. ಕೇಂದ್ರ ವಲಯಕ್ಕೆ ಒಳಪಟ್ಟಂತಹ ಉಪನಗರಗಳೆಂದರೆ

೧. ಅಚ್ಯುತಾಪುರ

೨. ಕೃಷ್ಣಾಪುರ

೩. ವಿಠ್ಠಲಾಪುರ

೪. ವಿಜಯನಗರ ಪಟ್ಟಣ (ಹಂಪೆ)

ಮೇಲೆ ಉಲ್ಲೇಖಿಸಿದ ಉಪನಗರಗಳು ಹಂಪೆಯ ಅಥವಾ ವಿಜಯನಗರ ಪಟ್ಟಣದ ಪರಿಧಿಯಲ್ಲಿದ್ದ ಕಾರಣ, ಹಂಪೆಯನ್ನು ಹೊರತುಪಡಿಸಿ, ಇವುಗಳನ್ನು ನಾವು ರಾಜಧಾನಿಯ ಪ್ರತಿಷ್ಠಿತ ಉಪನಗರಗಳೆಂದರೆ ತಪ್ಪಾಗಲಾರದು. ಅಚ್ಯುತಾಪುರ, ವಿಠ್ಠಲಾಪುರ ಮತ್ತು ಕೃಷ್ಣಾಪುರಗಳು ಅರಸರು ನಿರ್ಮಿಸಿದಂತಹ ಪುರ ಅಥವಾ ಅಗ್ರಹಾರಗಳಾಗಿದ್ದವು. ಈ ಎಲ್ಲಾ ಉಪನಗರಗಳಲ್ಲಿಯೂ ಒಂದೊಂದು ದೇವಾಲಯವನ್ನು ಕಟ್ಟಿಸಿ ಅದಕ್ಕೆ ಪೂರಕವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಬಜಾರುಗಳನ್ನು ಸಹ ಪ್ರಾರಂಭಿಸಿದ ಉಲ್ಲೇಖಗಳು ನಮಗೆ ಶಾಸನಗಳಿಂದ ತಿಳಿದುಬರುತ್ತವೆ. ಇವುಗಳಲ್ಲದೆ ಕೆಲವು ಉಪನಗರಗಳಾದ ವರದರಾಜಮ್ಮನ ಪಟ್ಟಣ, ಅನಂತಶಯನಗುಡಿ (ಶಾಲೆ ತಿರುಮಲರಾಯ ಪಟ್ಟಣ) ಮತ್ತು ನಾಗಲಾಪುರಗಳನ್ನು ಅರಸರೇ ನಿರ್ಮಿಸಿದ್ದರೂ, ಈ ಉಪನಗರಗಳು ರಾಜಧಾನಿ ಪಟ್ಟಣದ ಹೊರವಲಯಗಳಲ್ಲಿರುವುದು ಕುತೂಹಲಕರ ಸಂಗತಿ. ಇದಕ್ಕೆ ಕಾರಣವೇನೆಂದರೆ ರಾಜಧಾನಿ ಪ್ರದೇಶದಲ್ಲಿ ವಾಸಿಸಲು ಅನುಕೂಲವಾದ ಭೌಗೋಳಿಕ ಪ್ರದೇಶದ ಅಭಾವವಿದ್ದುದೇ ಕಾರಣ. ಈಗಾಗಲೇ ಹಂಪೆಯ ಪ್ರದೇಶದಲ್ಲಿ ಕೆಲವು ಉಪನಗರಗಳು ಅಸ್ತಿತ್ವದಲ್ಲಿ ಇದ್ದುದು ಎರಡನೆಯ ಕಾರಣ. ಹಂಪೆಯ ಪ್ರದೇಶವು ಬಂಡೆಗಲ್ಲುಗಳಿಂದ ಕೂಡಿದ್ದು ಸಮತಟ್ಟಾದ ಪ್ರದೇಶದ ಕೊರತೆಯಿದೆ. ಆದ್ದರಿಂದ ನಗರ ನಿರ್ಮಾಣಕ್ಕೆ ಅತ್ಯಲ್ಪ ಭೌಗೋಳಿಕ ಪ್ರದೇಶವು ಉಪಲಬ್ಧವಿರುವುದು ಹಂಪೆಯ ಪರಿಸರವನ್ನು ಪರಿವೀಕ್ಷಿಸಿದಾಗ ಕಂಡುಬರುವ ಸ್ಪಷ್ಟ ಅಂಶವಾಗಿದೆ.

ಎರಡನೆಯ ವಲಯದಲ್ಲಿ ಕಾಮಲಾಪುರ, ಮಲಪನಗುಡಿ, ವರದರಾಜಮ್ಮನ ಪಟ್ಟಣ, ಶಾಲೆ ತಿರುಮಲರಾಯಪಟ್ಟಣ, ವೆಂಕಟಾಪುರ, ನಾಗಲಾಪುರ ಮತ್ತು ನಿಂಬಾಪುರಗಳು ಇವೆ. ಈ ವಲಯವನ್ನು ಕೃಷಿ ಉತ್ಪನ್ನ ವಲಯವೆಂದು ಗುರುತಿಸಲಾಗಿದ್ದು ಇಲ್ಲಿಯ ಭೌಗೋಳಿಕ ಪರಿಸರವನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಿದಾಗ ಇದು ವ್ಯವಸಾಯ ಉತ್ಪನ್ನಗಳನ್ನು ಉತ್ಪಾದಿಸುವ ಕ್ಷೇತ್ರವಾಗಿರುವುದು ಸ್ಪಷ್ಟವಾಗಿರುತ್ತದೆ. ಇಲ್ಲಿ ಉತ್ಪನ್ನವಾಗುವ ಕೃಷಿ ಪದಾರ್ಥಗಳು ಬಹುತೇಕವಾಗಿ ವಿಜಯನಗರ ಪಟ್ಟಣದ ಅಗತ್ಯಗಳನ್ನು ಪೂರೈಸುತ್ತಿದ್ದವು ಎಂದು ಹೇಳಬಹುದು. ಹೊರ ವಲಯಗಳಿಂದಲೂ ಹಂಪೆಯ ಕೇಂದ್ರ ಸ್ಥಳಕ್ಕೆ ಅಗತ್ಯ ವಸ್ತುಗಳು ಪೂರೈಸಲ್ಪಟ್ಟರೂ, ನಿರಂತರವಾಗಿ ದೈನಂದಿನ ಅಗತ್ಯ ವಸ್ತುಗಳನ್ನು ಈ ಉಪನಗರಗಳೇ ಪೂರೈಸುತ್ತಿದ್ದವು ಎಂಬುದರಲ್ಲಿ ಯಾವ ಸಂಶಯವಿಲ್ಲ.[7] ಈ ಉಪನಗರಗಳಲ್ಲಿ ಭತ್ತ, ಕಬ್ಬು, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬದು ಶಾಸನಗಳಿಂದ ತಿಳಿಯಬಹುದಾಗಿದೆ.

ಇದರೊಂದಿಗೆ ಉಲ್ಲೇಖಿಸಲ್ಪಟ್ಟ, ಉಪನಗರಗಳಲ್ಲಿ ತುಂಗಭದ್ರಾ ನದಿಯ ಕೆಲವು ಮುಖ್ಯ ಕಾಲವೆಗಳು ಹಾದು ಹೋಗುತ್ತವೆ.[8] ಇವು ವ್ಯವಸಾಯಕ್ಕೆ ಮತ್ತು ಕುಡಿಯುವುದಕ್ಕೆ ನೀರನ್ನು ಸಹ ಪೂರೈಸುತ್ತಿದ್ದವು. ಈ ಉಪನಗರಗಳಿಗಿರುವ ಪ್ರದೇಶಗಳು ಹೆಚ್ಚಾಗಿ ಸಮತಟ್ಟಾಗಿದ್ದು ಅಧಿಕಾಂಶವಾಗಿ ಪ್ರತಿ ಉಪನಗರವೂ ತನ್ನದೇ ಆದ ಕೆರೆಯನ್ನು ಹೊಂದಿದ್ದವು. ಇಂತಹ ಒಂದು ಉಪನಗರವಾದ ಕಾಮಲಾಪುರದ ಕೆರೆಯಿಂದ ವಿಜಯನಗರ ಪಟ್ಟಣಕ್ಕೆ ನೀರನ್ನು ಪೂರೈಸಲಾಗುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೂರನೆಯ ವಲಯವನ್ನು ಹೊರವಲಯವೆಂದು ಗುರುತಿಸಲಾಗಿದ್ದು, ಇದರ ವ್ಯಾಪ್ತಿಯ ಅತಿ ಹೆಚ್ಚಾಗಿದ್ದು ಕೋಟೆಗೋಡೆಯ ಹೊರಗಿರುವ ಎಲ್ಲಾ ಪ್ರದೇಶಗಳು ಮತ್ತು ರಾಜ್ಯದೊಳಗಿನ ಊರು, ನಗರ ಮುಂತಾದ ಪ್ರದೇಶಗಳು ಅಡಕಗೊಳ್ಳುತ್ತವೆ. ಈ ವಲಯವು ವಿಜಯನಗರ ಪಟ್ಟಣಕ್ಕೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳನ್ನು ಕಾಲಕಾಲಕ್ಕೆ ಪೂರೈಸುತ್ತಿತ್ತು. ತಿಮ್ಮಲಾಪುರ, ದರೋಜಿ, ಮುಂತಾದ ಪ್ರದೇಶಗಳು ಈ ವಲಯದ ವ್ಯಾಪ್ತಿಗೆ ಬರುತ್ತವೆ.

ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳನ್ನು ಭೌಗೋಳಿಕವಾಗಿ ಪರಿಶೀಲಿಸಿದಾಗ ನಮಗೆ ಕೆಲವು ಕುತೂಹಲಕಾರಿ ಮತ್ತು ಮಹತ್ವದ ಸಂಗತಿಗಳು ಸ್ಪಷ್ಟವಾಗುತ್ತವೆ. ಎರಡನೆಯ ವಲಯದಲ್ಲಿ ಅಂದರೆ ಕೃಷಿ ವಲಯದಲ್ಲಿ ಅಡಕಗೊಂಡಂತಹ ಉಪನಗರಗಳು ಸುಮಾರು ೪ ರಿಂದ ೬ ಕಿಲೋಮೀಟರ್ ಅಂತರಗಳಲ್ಲಿ ಇದ್ದು, ಇವು ವ್ಯವಸಾಯ ಉತ್ಪನ್ನಗಳನ್ನು ಉತ್ಪಾದಿಸುವ ಕ್ಷೇತ್ರವಾಗಿದ್ದವು. ಅಧಿಕಾಂಶವಾಗಿ ಈ ಎಲ್ಲಾ ಉಪನಗರಗಳಲ್ಲಿಯೂ ಒಂದೊಂದು ಕೆರೆಯಿರುವುದನ್ನು ಕಾಣಬಹುದಾಗಿದೆ.[9] ಅದರಂತೆಯೇ ಈ ಉಪನಗರಗಳೆಲ್ಲವೂ ಸರಾಸರಿಯಾಗಿ ಸಮುದ್ರ ಮಟ್ಟದಿಂದ ೫೦೦ ಮೀಟರ್ ನೈಸರ್ಗಿಕ ಕ್ಷಿತಿಜ ಭೂಮಟ್ಟದ (Contour) ಎತ್ತರದಲ್ಲಿಯೇ ಇವೆ. ಉಪನಗರಗಳ ಕೆರೆಗಳು ಸಹಾ ಇದೇ ೫೦೦ ಮೀಟರ್ ಎತ್ತರದಲ್ಲಿರುವುದು ವಿಶೇಷ ಸಂಗತಿ. ಇನ್ನು ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳ ಜನಸಂಖ್ಯೆಯನ್ನು ಪರಿಶೀಲಿಸಿದಾಗ ನಮಗೆ ಖಚಿತವಾದ ಅಂಕಿಅಂಶಗಳು ದೊರಕುವುದಿಲ್ಲ.[10] ಅಂದಾಜಿನಂತೆ ಅಂದು ವಿಜಯನಗರ ಪಟ್ಟಣದ ಜನಸಂಖ್ಯೆಯು ಸುಮಾರು ಒಂದು ಲಕ್ಷದಷ್ಟು ಇತ್ತೆಂದು ಗಣಿಸಲಾಗಿದೆ. ವಿದೇಶಿ ಪ್ರವಾಸಿಗರ ಬರಹಗಳಿಂದಲೂ ನಮಗೆ ಕೆಲವು ಸುಳಿವುಗಳು ದೊರಕುತ್ತವೆ. ಆದರೆ ಅವುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಕಷ್ಟದ ಸಂಗತಿ. ವಿಜಯನಗರ ಪಟ್ಟಣದಲ್ಲಿ ಸಂಪೂರ್ಣವಾಗಿ ಉತ್ಖನನವನ್ನು ನಡೆಸದ ಕಾರಣ ನಾವು ಪ್ರಾಚೀನ ಜನಗಣತಿಯನ್ನು ಗಣಿಸಲಿಕ್ಕೆ ಕಷ್ಟವಾಗುತ್ತದೆ. ಸಾಂಖಿಕ ವಿಧಾನದಿಂದ ಮತ್ತು ಮಡಕೆ ಚೂರುಗಳ ಆಧಾರದಿಂದ ಸ್ವಲ್ಪಮಟ್ಟಿಗೆ ಮಾತ್ರ ಈ ದಿಸೆಯಲ್ಲಿ ಪ್ರಯತ್ನಪಡಬಹುದಾಗಿದೆ. ಹೀಗಿದ್ದರೂ ವಿಜಯನಗರ ಪಟ್ಟಣದ ಖಚಿತವಾದ ಜನಗಣತಿಯನ್ನು ಮಾಡುವುದು ಕಠಿಣವಾದ ಕೆಲಸವೇ ಸರಿ.

ಈ ಮೇಲೆ ಚರ್ಚಿಸಿದ ವಿಷಯಗಳನ್ನು ನಾವು ಪುನರಾವಲೋಕಿಸಿದಾಗ ಕಂಡುಬರುವ ಅಂಶಗಳು ಏನೆಂದರೆ ರಾಜಧಾನಿ ಪಟ್ಟಣಕ್ಕೆ ಹೊಂದಿಕೊಂಡಂತಹ ಉಪನಗರಗಳು ರಾಜಧಾನಿ ಬೇಡಿಕೆಯನ್ನು ಪೂರೈಸುತ್ತಿದ್ದವು. ಇದರೊಂದಿಗೆ ಹೊರವಲಯದಲ್ಲಿ ಇದ್ದಂತಹ ನಗರಗಳು ಮತ್ತು ಉಪನಗರಗಳು ಸಹ ರಾಜಧಾನಿಯೊಂದಿಗೆ ಸಂಬಂಧವನ್ನು ಇಟ್ಟುಕೊಂಡು ರಾಜಧಾನಿಯ ಉಪನಗರಗಳಿಗೆ ಪೂರಕವಾಗಿ ಕೆಲಸವನ್ನು ಮಾಡುತ್ತಿದ್ದವು. ವಿಜಯನಗರ ಪಟ್ಟಣವು ಮುಖ್ಯವಾಗಿ ದೊಡ್ಡ ವಾಣಿಜ್ಯ ಕೇಂದ್ರವಾಗಿಯೂ ಸಹ ಇತ್ತು. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ನಗರ ಮತ್ತು ಜನವಸತಿಯ ನೆಲೆಗಳನ್ನು ಅರಸರು ಮತ್ತು ವಾಸ್ತುಶಾಸ್ತ್ರಜ್ಞರು ನಿಸರ್ಗವನ್ನು ಪರಿಶೀಲಿಸಿ ಪ್ರದೇಶಗಳನ್ನು ಆಯ್ಕೆ ಮಾಡಿರುವುದು ಅವರ ಭೌಗೋಳಿಕ ಪ್ರಜ್ಞೆಯನ್ನು ನಮಗೆ ಪರಿಚಯಿಸುತ್ತದೆ.

**ಆಕರಗಳು**

ವಿಜಯನಗರ ಅಧ್ಯಯನ, ಸಂ.೨, ೧೯೯೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು.೯೯-೧೦೪

[1] ಪಾಟೀಲ ಚನ್ನಬಸಪ್ಪ ಎಸ್., 'ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ', ವಿಜಯನಗರ ಅಧ್ಯಯನ, ಸಂಪುಟ ೧, (ಸಂ), ಡಿ.ವಿ.ದೇವರಾಜ್ಮತ್ತು ಚನ್ನಬಸಪ್ಪ ಎಸ್.ಪಾಟೀಲ, ಪು.೬೨-೭೫

[2] ನಾಗರಾಜ್ ಬಿ.ಎಸ್., 'ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ' ವಿಜಯನಗರ ಅಧ್ಯಯನ, ಸಂ.೨, ಪು.೯೪-೯೮

[3] ವಡ್ಡಾರಾಧನೆ ೭-೯

[4] ಎಫಿಗ್ರಾಫಿಯಾ ಇಂಡಿಯಾ, ಸಂ. XXVIII ಪು.೩೫-೩೮

[5] ಗೋರ್ಡಾನ್‌ಚೈಲ್ಡ್‌ರವರು ನಗರವನ್ನು ಕುರಿತು ಈ ರೀತಿಯಾಗಿ ಅರ್ಥೈಸುವರು. 1.Size, 2. Inclusion of additional Class – Craftsmen, Artisans 3. Centralization of Surplus food 4. Monumental Public building 5.

Formulation of ruling Class, 6. System of recording administration (Script) 7. Exact and predictive Science regulating agricultural operation 8. Style of Art 9. Long distance trade 10. Social Organisation based on Kinship.

Shaffer ರವರು "Reurbanisation: The Eastern Punjab and beyond" ಎಂಬ ಲೇಖನವನ್ನು Urban Form and Meaning in South Asia: The Shaping of cities and Prehistoric to Pre Colonial Times ಎಂಬ ಪುಸ್ತಕದಲ್ಲಿ ಪ್ರಕಟಿಸಿರುತ್ತಾರೆ. ಅದರಲ್ಲಿ ನಗರವನ್ನು ಈ ರೀತಿಯಾಗಿ ಅರ್ಥೈಸುತ್ತಾರೆ.

An Economy incorporating agriculture and pastoralists 2. Large urban settlement 3. Use of stone, mud and fired bricks 4. Public architecture (Wells and tanks) 5. Development of Public and Private hydraulic features 6. Highly developed craft industry 7. Homogenous material Culture distributed over a large geographic region 8. Long distance trade 9. A unified system of weight and measure and 10. Written script. ಅಲ್‌ಚಿನ್‌ಎಫ್.ಆರ್., ಆರ್ಕಿಯಾಲಜಿ ಆಫ್ ಅರ್ಲಿ ಹಿಸ್ಟಾರಿಕ್‌ಸೌತ್‌ಏಷಿಯಾ ದಿ ಎಮರ್ಜೆನ್ಸ್‌ಆಫ್ ಸಿಟೀಸ್‌ಅಂಡ್‌ಸ್ಟೇಟ್ಸ್, ಪು. ೫೪-೭೨

[6] ಅಲ್‌ಚಿನ್‌ರವರು ಈ ಪುಸ್ತಕದಲ್ಲಿ ನಗರೀಕರಣವನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಚರ್ಚಿಸಿದ್ದಾರೆ.

[7] ಅಲ್‌ಚಿನ್, ಅದೇ, ಪು.೬೫-೬೭ ಒಂದು ಸಾಂಖಿಕ ಸವೇಕ್ಷಣೆಯಂತೆ ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ ೭,೦೬,೬೪೦ ಕ್ಯಾಲೋರಿಗಳನ್ನು ನೀಡಬಲ್ಲ ಆಹಾರ ಪದಾರ್ಥಗಳು ಬೇಕಾಗುತ್ತವೆ ಎಂದು ಗಣಿಸಲಾಗಿದೆ. ಅಂದರೆ ೭೨೧ರಷ್ಟು ಆಹಾರ ಪದಾರ್ಥಗಳು ಬೇಕಾಗುತ್ತವೆ. ಒಬ್ಬ ಮನುಷ್ಯನಿಗೆ ವರ್ಷಕ್ಕೆ ೧೪೪.೬ ಕೆ.ಜಿ.ಗಳಷ್ಟು ಆಹಾರ ಪದಾರ್ಥಗಳು ೭,೦೬,೬೪೦ ಕ್ಯಾಲೋರಿಗಳು ಒದಗಿಸುತ್ತವೆ. ಒಣ ಹವಾಮಾನ ವ್ಯವಸಾಯ, ಅಂದರೆ ಹೊಲಗಳಲ್ಲಿ ೧೮೦ ರಿಂದ ೨೩೦ ಕೆ.ಜಿ.ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆಯಬಲ್ಲದು ಎಂದು ಗಣಿಸಲಾಗಿದೆ.

[8] ತುರ್ತುಕಾಲುವೆ, ಬಸವಣ್ಣ ಕಾಲುವೆ ಮತ್ತು ರಾಯಕಾಲುವೆಗಳು ಹಂಪೆಯ ಸಮೀಪವೇ ಹಾದು ಹೋಗುತ್ತವೆ.

[9] ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು

[10] ಅಲ್‌ಚಿನ್, ಅದೇ. ಪು. ೬೭, ಹಸನ್‌ಎಫ್.ಎ., ಡೆಮೊಗ್ರಾಫಿಕ್‌ಮೆಥಡ್ಸ್‌ಇನ್‌ಅರ್ಕಿಯಾಲಜಿ,

ಅಡ್ವಾನ್ಸಸ್‌ಇನ್‌ಆರ್ಕಿಯಾಲಜಿಕಲ್‌ಮೆಥಡ್‌ಅಂಡ್‌ಥಿಯರಿ, ಸಂಪುಟ ೧, (ಸಂ.), ಮೈಕೇಲ್‌ಶಾಫ್, ಪು.೪೮-೯೦

## ೩೦. ವಿಜಯನಗರದಲ್ಲಿ 'ಪುರ'ಗಳು

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೊದಲೇ ಹಂಪೆ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಇದರ ಪ್ರಾಮುಖ್ಯತೆ ಹೆಚ್ಚಿದ್ದು ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಮತ್ತು ವಿಜಯನಗರದ ಸಂಗಮ ಮನೆತನದ ಅರಸರ ಆಳ್ವಿಕೆಯಲ್ಲಿ, ಈ ಮನೆತನದ ಆಳ್ವಿಕೆಯ ಆರಂಭದ ಕಾಲದಲ್ಲಿ ಒಂದು ಚಿಕ್ಕ ಕೇಂದ್ರವಾಗಿದ್ದ ಹಂಪೆ ಮುಂದೆ ರಾಜಧಾನಿಯಾಗಿ ಹಿಂದೂ ಮಹಾಸಾಮ್ರಾಜ್ಯದ ನಿರ್ಮಾಣಕ್ಕೆ ಸ್ಫೂರ್ತಿ ಚೇತನವನ್ನು ಒದಗಿಸಿತ್ತು. ಚರಿತ್ರಾರ್ಹ 'ವಿಜಯನಗರ' ಸಾಮ್ರಾಜ್ಯದ ರಾಜಧಾನಿಯಾಗಿ ಕ್ರಿ.ಶ.೧೫೩೧ರ ನಂತರದ ಶಾಸನಗಳಲ್ಲಿ 'ವಿದ್ಯಾನಗರ' ಅಥವಾ 'ವಿದ್ಯಾನಗರಿ' ಎಂದು ಕರೆಯಲಾಗಿದೆ.[1]

ರಾಜಧಾನಿ ವಿಜಯನಗರವು ಪಟ್ಟಣ ಆನೆಗುಂದಿ, ಹೊಸಪೇಟೆ, ಹಂಪೆ, ಕಮಲಾಪುರ, ಬುಕ್ಕಸಾಗರ, ಶಿವಪುರ, ನೆಲ್ಲಾಪುರ, ದರೋಜಿ ಗ್ರಾಮಗಳನ್ನು ಒಳಗೊಂಡಿತ್ತು. ಈ ವಿಶಾಲ ಗಡಿಗಳ ನಡುವೆ ವಿಜಯನಗರವು ಹಲವು 'ಪುರ'ಗಳಿಂದ ಕೂಡಿತ್ತು. ಆ ಪುರಗಳೆಂದರೆ 'ವಿರೂಪಾಕ್ಷಪುರ', 'ಕೃಷ್ಣಾಪುರ', 'ವಿಠ್ಠಲಾಪುರ', 'ಅಚ್ಯುತಾಪುರ', 'ಕಡೆರಾಂಪುರ', 'ಕಮಲಾಪುರ', 'ವರದಾದೇವಿ ಅಮ್ಮನ ಪಟ್ಟಣ' ಇವಲ್ಲದೆ ನಗರದ ಸುತ್ತಮುತ್ತಲಿನಲ್ಲಿ ನಿರ್ಮಾಣಗೊಂಡ ಉಪನಗರಗಳಾದ 'ಮಲಪನಗುಡಿ', 'ಸಾಲೆ ತಿರುಮಲರಾಯ ಪಟ್ಟಣ, 'ನಾಗಲಾದೇವಿಪುರ', 'ತಿರುಮಲದೇವಿ ಅಮ್ಮನ ಪಟ್ಟಣ', 'ಚೆನ್ನವಾಡಿ' ಅಥವಾ 'ಚಿತ್ತವಾಡಿ'ಗಳಿಂದ ಕೂಡಿತ್ತು. ವಿರೂಪಾಕ್ಷಪುರ, ಅಚ್ಯುತಾಪುರ, ವಿಠ್ಠಲಾಪುರಗಳು ಕೃಷ್ಣಾಪುರ, ಕಮಲಾಪುರ, ಕಡೆರಾಂಪುರ, ವರದಾದೇವಿ ಅಮ್ಮನ ಪಟ್ಟಣಗಳು ಬೆಳೆದುಬಂದಿವೆ.

ವಿರೂಪಾಕ್ಷಪುರ, ಕೃಷ್ಣಾಪುರ, ವಿಠ್ಠಲಾಪುರ, ಅಚ್ಯುತಾಪುರ, ಕಮಲಾಪುರ, ವರದಾದೇವಿ ಅಮ್ಮನ ಪಟ್ಟಣಗಳು ಪರ್ವತಗಳಿಂದ ಅವೃತವಾಗಿದ್ದು, ನದಿ, ಕೆರೆ, ಕಾಲುವೆ ತೋಟ, ಕೋಟೆ ಕೊತ್ತಳಗಳಿಂದ ಕೂಡಿವೆ. ಹೇಮಕೂಟ, ಮಾತಂಗ, ಕಿಷ್ಕಿಂಧ, ಮಾಲ್ಯವಂತದ, ಋಷ್ಯಮೂಕ ಪರ್ವತಗಳು ಪ್ರಕೃತಿದತ್ತವಾಗಿ ನಿರ್ಮಾಣವಾದ ಬೃಹತ್ ಭದ್ರಕೋಟೆಗಳಂತಿವೆ. ವಿರೂಪಾಕ್ಷಪುರದಿಂದ ಪೆನುಗೊಂಡೆ ಬಾಗಿಲವರೆಗೆ, ಕಮಲಾಪುರ ಕೆರೆಯಿಂದ ತಳವಾರ ಘಟ್ಟದವರೆಗೂ ಇರುವ ಅಂತರ ೭ ಕಿ.ಮೀ. ಇದೆ. ಇದೇ ರೀತಿ ಕಮಲಾಪುರ, ಹೊಸಪೇಟೆ ರಸ್ತೆಯಲ್ಲಿ ಬರುವ ನೈರುತ್ಯ ದಿಕ್ಕಿನ ಐದು ಹೊರವಲಯಗಳ ಅಂತರವೂ ಸುಮಾರು ೭ ಕಿ.ಮೀ. ಇದ್ದು, ನಗರ ಯೋಜಕರು ಮುಂದೆ ಬೆಳೆಯಬಹುದಾಗಿದ್ದ ನಗರದ ಬೆಳವಣಿಗೆಯನ್ನು ಗಮನವಿರಿಸಿಕೊಂಡೇ ಉಪನಗರಗಳನ್ನು ವಿಜಯನಗರದ ಸುತ್ತಮುತ್ತಲು ನಿರ್ಮಿಸಿದ್ದರು.

ವಿಜಯನಗರದ ಪುರಗಳಲ್ಲೇ ಪ್ರಾಚೀನ ಪುರ ವಿರೂಪಾಕ್ಷಪುರ, ಹಂಪೆಯ ಪ್ರಮುಖ ದೇವಾಲಯವೆಂದರೆ ಪಂಪಾ ವಿರೂಪಾಕ್ಷನದು. ತುಂಗಭದ್ರಾ ನದಿಯ ತೀರದಲ್ಲಿದ್ದು ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಕ್ಷೇತ್ರಗಳಲ್ಲೊಂದಾಗಿದೆ. ಶ್ರೀ ವಿರೂಪಾಕ್ಷ ಹಂಪೆಯ ಪಾಲಕದೇವರಾಗಿದ್ದ[2] ವಿಜಯನಗರದ ಪೂರ್ವ ಶಾಸನಗಳು ೭ನೇ ಶತಮಾನದಿಂದ ೧೪ನೇ ಕ್ರಿ.ಶ.ದ ಶಾಸನಗಳು ಹಂಪೆಯನ್ನು ವಿವಿಧ ಹೆಸರುಗಳಿಂದ ಕರೆದಿವೆ. ವಿರೂಪಾಕ್ಷ ದೇವಾಲಯ ಕ್ರಿ.ಶ.೬೮೯ರ ವಿನಯಾದಿತ್ಯನ ಕಾಲದಲ್ಲಿತ್ತೆಂದು ಶಾಸನದಿಂದ ತಿಳಿಯಬಹುದಾಗಿದೆ.[3] ಈ ಶಾಸನದಲ್ಲಿ ಹಂಪೆಯನ್ನು 'ಪಂಪಾತೀರ್ಥ' ಎಂದು ಕರೆಯಲಾಗಿದೆ. ಇನ್ನೂ ಕೆಲವು ಶಾಸನಗಳು 'ಪಂಪಾ', 'ಪಂಪಾಕ್ಷೇತ್ರ', 'ಪಂಪಾಪುರ', 'ಪಂಪಾಸ್ಥಳ', 'ವಿರೂಪಾಕ್ಷತೀರ್ಥ', 'ಹಂಪೆ', 'ವಿರೂಪಾಕ್ಷಪುರ', ಎಂದು ಕರೆದಿರುವುದನ್ನು ತಿಳಿಸುತ್ತವೆ. ವಿರೂಪಾಕ್ಷಪುರವು ವಿಜಯನಗರ ಕಾಲಕ್ಕಿಂತಲೂ ಮುಂಚೆ ಸುದೀರ್ಘ ಇತಿಹಾಸವನ್ನು ಹೊಂದಿತ್ತೆಂದರೆ ತಪ್ಪಾಗಲಿಕ್ಕಿಲ್ಲ.

ಸಂಗಮ ಮನೆತನದ ಅರಸರ ಆಳ್ವಿಕೆ ಆರಂಭವಾಗಿ ಹಂಪೆ ರಾಜಧಾನಿಯಾದ ನಂತರ ಬೆಳವಣಿಗೆ ಹೊಂದಿತು. ಈ ಅವಧಿಯಲ್ಲಿ ವಿರೂಪಾಕ್ಷ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಗೋಪುರ, ಮಂಟಪಗಳನ್ನು ಸೇರಿಸಿ ವಿಶಾಲವಾಗಿಸಿದರು. ಎರಡನೇ ಪ್ರೌಢದೇವರಾಯ ವಿರೂಪಾಕ್ಷಪುರದ ಬೆಳವಣಿಗೆಯ ಬಗ್ಗೆ ಆಸಕ್ತಿ ವಹಿಸಿದ್ದರ ಬಗ್ಗೆ ಲಕ್ಕಣದಂಡೇಶನು ತನ್ನ 'ಶಿವತತ್ವ, ಚಿಂತಾಮಣಿ'ಯಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.[4] ಇದೇ ರೀತಿ ಮುಂದೆ ತುಳುವ ಮನೆತನದ ಕೃಷ್ಣದೇವರಾಯನ ತನ್ನ ಪಟ್ಟಾಭಿಷೇಕೋತ್ಸದ ನೆನಪಿಗಾಗಿ ಸಿಂಗಿನಾಯಕನಹಳ್ಳಿಯನ್ನು ವಿರೂಪಾಕ್ಷ ದೇವಾಲಯಕ್ಕೆ ದತ್ತಿ ಬಿಟ್ಟು, ಮಹಾಮಂಟಪ ಮತ್ತು ರಾಯ ಗೋಪುರವನ್ನು ಕಟ್ಟಿಸಿದರ ಬಗ್ಗೆ ಕ್ರಿ.ಶ. ೧೫೧೦ರ ಶಾಸನ ವಿವರವಾಗಿ ತಿಳಿಸುತ್ತದೆ.[5] ವಿರೂಪಾಕ್ಷ ದೇವಾಲಯದ ಮುಂಭಾಗದಿಂದ ಪ್ರಾರಂಭವಾಗಿ ಕೊನೆಗೆ ಎದುರು ಬಸವಣ್ಣನ ಮಂಟಪದವರೆಗೂ ಇರುವ ಉದ್ದನೆಯ ಬೀದಿಯೇ ವಿರೂಪಾಕ್ಷ ಬಜಾರು ಇದನ್ನೇ 'ಪಂಪಾರಥವೀಧಿ', 'ತೇರುಬೀದಿ', 'ಹಂಪೆ ಬಜಾರು' ಎಂದು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ವಿರೂಪಾಕ್ಷ ಬಜಾರು ವಿರೂಪಾಕ್ಷ ದೇವಾಲಯದಷ್ಟೇ ಪ್ರಾಚೀನ. ಈ ಬಜಾರದ ಉದ್ದ ೭೨೦ ಮೀಟ್‌ಅಗಲ ದೇವಾಲಯದ ಹತ್ತಿರ ೩೦ ಮೀಟರ್ ಇದ್ದು ಬಜಾರದ ಕೊನೆಯಲ್ಲಿ ೩೮ ಮೀಟರ್ ಇದೆ.[6] ಬಜಾರದ ಎಡಬಲಗಳಲ್ಲಿ ಪ್ರಾರಂಭದಿಂದ ಕೊನೆಯ ಮಂಟಪದವರೆಗೂ ಸಾಲುಕಲ್ಲಿನ ಮಂಟಪಗಳನ್ನು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಕೆಲವು ಮಂಟಪಗಳು ಎರಡು ಅಂಕಣಗಳಿಂದ ಕೂಡಿದ್ದರೆ ಇನ್ನೂ ಕೆಲವು ಎರಡು ಅಂಕಣಗಳಿಗಿಂತ ಹೆಚ್ಚು

ವಿಸ್ತಾರವಾಗಿದೆ. ಈ ಬೀದಿಯಲ್ಲಿದ್ದ ಕಲ್ಲು ಮುಳ್ಳುಗಳನ್ನು ತೆಗೆದು ಹಾಕಿಸಿ ವಿಶಾಲವಾಗಿಸಿದುದರ ಬಗ್ಗೆ ಮತ್ತು ವೀಥಿ (ಬೀದಿ)ಯನ್ನು ಯಾವ ಉದ್ದೇಶಕ್ಕಾಗಿ ಪ್ರೌಢದೇವರಾಯನು ನಿರ್ಮಿಸಿದನೆಂದು, ವಿರೂಪಾಕ್ಷ, ಪಂಪಾಂಬಿಕಾ ಮತ್ತು ಗಣಾಧಿಪರ ರಥ ಎಳೆಯುತ್ತಿದ್ದುದರ ಬಗ್ಗೆ ತನ್ನ ಗ್ರಂಥದಲ್ಲಿ ತಿಳಿಸುತ್ತಾನೆ. ವಿದೇಶಿ ಪ್ರವಾಸಿಗರಾದ ನಿಕೋಲೊ-ದಿ-ಕಾಂಟಿ ಮತ್ತು ಡೊಮಿಂಗೊ ಪಾಯೇಸ ಸಹಾ ರಥಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಈ ಬೀದಿ ಆರಂಭದಲ್ಲಿ ಕೇವಲ ತೇರುಬೀದಿಯಾಗಿ ಕಾರ್ಯನಿರ್ವಹಿಸಿದ್ದು, ಅನಂತರ ರಥೋತ್ಸವಗಳೂ, ಮೆರವಣಿಗೆಗಳೂ ನಡೆಯುತ್ತಿದ್ದವು. ನಿಕೋಲೆ-ದಿ-ಕಾಂಟಿ ಹೋಳಿ ಹಬ್ಬದಲ್ಲಿ ಹೋಳಿಯನ್ನು (ಬಣ್ಣವನ್ನು) ಬೀದಿಯ ಎರಡೂ ಬದಿಯಲ್ಲಿಟ್ಟು ರಾಜ-ರಾಣಿಯರನ್ನು ಬಿಡದೆ ಎಲ್ಲರ ಮೇಲೆ ಎರಚುತ್ತಿದ್ದರೆಂದು ವಿವರಣೆ ನೀಡುತ್ತಾನೆ.

ವಿರೂಪಾಕ್ಷ ದೇವಾಲಯದ ಸುತ್ತಮುತ್ತಲೂ ಬಜಾರನ್ನು ಒಳಗೊಂಡಂತೆ ವಿರೂಪಾಕ್ಷಪುರ ಬೆಳೆದು, ವಿರೂಪಾಕ್ಷ ಬಜಾರು ಮಾರುಕಟ್ಟೆಯಾಗಿದ್ದಿತು. ಬೀದಿಯ ಎಡ-ಬಲಗಳಲ್ಲಿ ಕಟ್ಟಲಾದ ಮಂಟಪಗಳು ಅಂದಿನ ವ್ಯಾಪಾರದ ಮಳಿಗೆಗಳಾಗಿದ್ದವು.

ವಿರೂಪಾಕ್ಷ ಬಜಾರು ಕೇವಲ ಧಾರ್ಮಿಕ ಆಚರಣೆಗಳ ಮತ್ತು ವ್ಯಾಪಾರಗಳ ಕೇಂದ್ರವಾಗಿರದೆ ಅನೇಕ ಮಠಗಳು ಇಲ್ಲಿದ್ದವು. ಈ ಬಜಾರದಲ್ಲಿ ನಿತ್ಯದಾಸೋಹ ಮಾಡುತ್ತ ಪಂಪಾಪತಿ ರಥವೀಥಿಯಲ್ಲಿ ನೆಲೆಸಿದ್ದ ಗುರುಮೂರ್ತಿ ಒಂದೊತ್ತಿನಯ್ಯಗಳು, ಅಲ್ಲದೆ ಕ್ರಿಯಾಶಕ್ತಿ ಒಡೆಯತಿರಾಯ, ದಕ್ಷಿಣಾಮೂರ್ತಿ ಯತಿಚಕ್ರವರ್ತಿಗಳ ಉಲ್ಲೇಖವನ್ನು ಲಕ್ಕಣ ದಂಡೇಶ ಪ್ರಸ್ತಾಪಿಸಿರುವುದನ್ನು ತಿಳಿಯಬಹುದಾಗಿದೆ.[7] ಈ ವಿರೂಪಾಕ್ಷ ಬಜಾರದಲ್ಲೇ ಕೆಲವು ವೀರಶೈವ ಮಠಗಳನ್ನು ಮಂಟಪದ ರೂಪದಲ್ಲಿ ನೋಡಬಹುದುದಾಗಿದ್ದು, ಕೆಲವೊಂದು ಮಠಗಳಲ್ಲಿ ಎರಡು ಮಹಡಿಯನ್ನು ಕಾಣಬಹುದಾಗಿದೆ.[8] ಮಠಗಳು ಅಂದು ವಿದ್ಯಾದಾನದ ಕೇಂದ್ರಗಳಾಗಿದ್ದವು. ಕನಕದಾಸರು ತಮ್ಮ 'ಮೋಹನ ತರಂಗಿಣಿ'ಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಉಚಿತ ಊಟ-ಬಟ್ಟೆಗಳ ವ್ಯವಸ್ಥೆಯನ್ನು ಮಠಗಳಲ್ಲಿ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸುತ್ತಾರೆ.[9] ಒಟ್ಟಾರೆ ವಿರೂಪಾಕ್ಷಪುರ ಕೇವಲ ಪವಿತ್ರ ಧಾರ್ಮಿಕ ಶಿಕ್ಷಣ ವಾಣಿಜ್ಯ ಕೇಂದ್ರವಾಗಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದು ವಿಜಯನಗರದ ಏಳಿಗೆಗೆ ತನ್ನದೇ ಆದ ವಿಶಿಷ್ಟ ರೀತಿಯ ಕೊಡುಗೆಯನ್ನು ನೀಡಿದೆ.

ವಿರೂಪಾಕ್ಷಪುರಕ್ಕಿರುವಂತೆ ಕೃಷ್ಣಾಪುರ[10], ವಿಠ್ಠಲಾಪುರ[11], ಅಚ್ಯುತಾಪುರ[12], ವರದಾದೇವಿ ಅಮ್ಮನಪಟ್ಟಣ[13], ಕಮಲಾಪುರ[14], ಸಾಲೆ ತಿರುಮಲರಾಯ ಪಟ್ಟಣ[15], ನಾಗಲಾದೇವಿಪುರ[16], ತಿರುಮಲಾದೇವಿ ಅಮ್ಮನ ಪಟ್ಟಣ[17], ಚಿಕ್ಕವಾಡಿ ಅಥವಾ ಚೆನ್ನಾದೇವಿವಾಡ[18] ಗಳಿಗೆ ಶಾಸನಗಳ ಉಲ್ಲೇಖ ಇರುವುದು ನಿಚ್ಚಳವಾಗಿ ಕಂಡುಬರುತ್ತದೆ.

ಈ ಎಲ್ಲಾ ಪುರಪಟ್ಟಣಗಳು ಶಾಸನ ಉಲ್ಲೇಖ ಹೊಂದಿದ್ದು ಕೆಳಕಂಡ ಮುಖ್ಯ ಲಕ್ಷಣಗಳನ್ನು ಹೊಂದಿವೆ:

೧. ಪುರ ಪಟ್ಟಣಗಳು ಮುಖ್ಯ ದೇವಾಲಯದ ಸುತ್ತಮುತ್ತಲು ಬೆಳೆದಿದ್ದವು.

೨. ಒಂದೊಂದು ಪುರದಲ್ಲೂ ಮಾರುಕಟ್ಟೆ ಇದ್ದು, ವಿವಿಧ ಅಂಗಡಿಗಳನ್ನು ರಸ್ತೆಯ (ಬೀದಿಯ) ಎರಡೂ ಬದಿಯಲ್ಲಿ ಕಾಣಬಹುದಾಗಿದೆ.

೩. ಎಲ್ಲಾ ಪುರಗಳ ಮುಖ್ಯ ದೇವಾಲಯಗಳ ಎಡ ಭಾಗದಲ್ಲಿ ಪುಷ್ಕರಿಣಿ, ಕೊಳ ಅಥವಾ ಹೊಂಡಗಳನ್ನು ಕಾಣಬಹುದು.

೪. ಪುರದ ದೇವಾಲಯಗಳು ವಿದ್ಯಾಪ್ರಸಾರಾದ ಕೇಂದ್ರಗಳಾಗಿದ್ದವು.

೫. ಈ ಎಲ್ಲಾ ಪುರಗಳ ಮುಖ್ಯ ದೇವಾಲಯಗಳಲ್ಲಿ ಧಾರ್ಮಿಕ ಹಬ್ಬ ಹರಿದಿನಗಳ ಆಚರಣೆಗಳನ್ನು ನಿರಂತರವಾಗಿ, ನಿಯಮಿತವಾಗಿ ಆಚರಿಸಲಾಗುತ್ತಿತ್ತು. ಕಾಲಾಂತರದಲ್ಲಿ ಮಠಗಳು ಸಹಾ ಪುರಗಳಲ್ಲಿ ತಲೆ ಎತ್ತಿದವು.

೬. ಪುರಗಳು ವ್ಯಾಪಾರ-ವಾಣಿಜ್ಯೋದಮದ ಕೇಂದ್ರಗಳಷ್ಟೇ ಆಗಿರದೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳೂ ಆಗಿದ್ದವು.

೭. ಪುರಗಳು ವಿವಿಧ ಜನಾಂಗಕ್ಕೆ ಸೇರಿದ ಜನವಸತಿಯ ತಾಣಗಳಾಗಿದ್ದವು.

೮. ಪುರಗಳ ಬೆಳವಣಿಗೆಯಿಂದಾಗಿ ಅಗ್ರಹಾರಗಳು ಹುಟ್ಟಿಕೊಂಡವು.

೯. ಪುರಗಳು ಯಾವುದೇ ದೇವರ ಹೆಸರಲ್ಲಿ ಇದ್ದರೂ ರಾಜರು ಅಲ್ಲಿ ಸಾಮಾಜಿಕ ಸೌಹಾರ್ದತೆಯನ್ನು ರಕ್ಷಿಸಿ ರಾಜ್ಯದ ಅಭಿವೃದ್ಧಿಗೆ ಕಾರಣರಾಗಿದ್ದರು.

೧೦. ಈ ಎಲ್ಲಾ ಪುರಗಳ ಆಡಳಿತ ನಗರ ನಿಯಂತ್ರಣಾಡಳಿತಕ್ಕೆ ಒಳಪಟ್ಟಿದ್ದವು. ಈ ಎಲ್ಲಾ ಲಕ್ಷಣಗಳನ್ನು ಕೂಲಂಕಷವಾಗಿ ಅವಲೋಕಿಸಿದಾಗ ತಿಳಿದುಬರುವ ಮುಖ್ಯ ವಿಚಾರಗಳು.

ಅ. ವಿಜಯನಗರದ ಎಲ್ಲಾ ಪುರ ಮತ್ತು ಪಟ್ಟಣಗಳನ್ನು ರಾಜಧಾನಿಯ ಒಳಗೋ ಅಥವಾ ಹೊರಗೋ ರಾಜನಿಂದಾಗಲಿ ಅಥವಾ ಅವನ ಸಂಬಂಧಿಗಳಿಂದ ಇಂತಹ ಪುರ ಅಥವಾ ಪಟ್ಟಣ ಸ್ಥಾಪಿಸಿದ್ದು ತಿಳಿದುಬರುತ್ತದೆ.

ಆ. ಈ ಪುರ ಅಥವಾ ಪಟ್ಟಣಗಳು ಇಷ್ಟ ದೈವದ ಹೆಸರಲ್ಲಿ ಅಥವಾ ತಾಯಿಯ ಜ್ಞಾಪಕಾರ್ಥವಾಗಿ ಅಥವಾ ಮಡದಿಗಾಗಿ ಅಥವಾ ಮಕ್ಕಳ ಹೆಸರಲ್ಲಿ ನಿರ್ಮಿಸಿದ್ದು ಕಂಡುಬರುತ್ತದೆ. ಉದಾ. ಕೃಷ್ಣದೇವರಾಯ ತಾಯಿಗಾಗಿ ನಾಗಲಾದೇವಿಪುರವನ್ನು, ಮಗನಿಗಾಗಿ ಸಾಲೆ ತಿರುಮಲರಾಯ ಪಟ್ಟಣವನ್ನು ಮುಖ್ಯ ಮಡದಿಗಾಗಿ ತಿರುಮಲದೇವಿ ಅಮ್ಮನ ಪಟ್ಟಣ, ಚಿಕ್ಕ ಮಡದಿಗಾಗಿ ಚಿಕ್ಕವಾಡಿ ಅಥವಾ ಚಿನ್ನಾದೇವಿವಾಡ ಸ್ಥಾಪಿಸಿದ್ದನ್ನು ನೋಡಬಹುದಾಗಿದೆ.

ಇ. ತುಳವ ಮನೆತನದ ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯ ವಿಜಯನಗರದಲ್ಲಿ ಒಂದಕ್ಕಿಂತ ಹೆಚ್ಚು ಪುರ-ಪಟ್ಟಣಗಳನ್ನು ಸ್ಥಾಪಿಸಿ ವಿಜಯನಗರದ ವಿಸ್ತಾರದ ಕೀರ್ತಿಗೆ ಪಾತ್ರರಾಗಿದ್ದಾರೆ.

ಈ. ಪುರಗಳು ಮುಖ್ಯ ದೇವಾಲಯದ ಸುತ್ತಮುತ್ತಲು ಬೆಳೆದರೂ ಆಯಾ ಧರ್ಮಕ್ಕನುಗುಣವಾಗಿಯೇ ಸ್ಥಾಪಿಸಲಾಗಿತ್ತು.

ಉ. ಹೆಚ್ಚುತ್ತಿದ್ದ ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡೇ ಉತ್ತಮ ಸೌಲಭ್ಯಗಳನ್ನು ನೀಡುವ ದೃಷ್ಟಿಯಿಂದ ಪುರ-ಪಟ್ಟಣಗಳನ್ನು ರಾಜಧಾನಿಯ ಎಲ್ಲಾ ದಿಕ್ಕುಗಳಲ್ಲಿ ಸ್ಥಾಪಿಸಿ ಅಭಿವೃದ್ಧಿಪಡಿಸಲಾಗಿತ್ತು.

ದೇವಾಲಯದ ಸುತ್ತ-ಮುತ್ತ ಅಥವಾ ದೇವಾಲಯದ ಬಜಾರುಗಳ ಸುತ್ತ-ಮುತ್ತಲೇ ಪುರ ಅಥವಾ ಪಟ್ಟಣಗಳೇಕೆ ಬೆಳೆದು ಬಂದವು ಎನ್ನುವುದು ಅತ್ಯಂತ ಕುತೂಹಲ ಮೂಡಿಸುತ್ತದೆ.

ದೇವಾಲಯಗಳು ವಿದ್ಯಾ ಪ್ರಸಾರಾಂಗದ ಕೇಂದ್ರಗಳಾಗಿದ್ದು ಪುರಗಳಲ್ಲಿ ಕ್ರಮೇಣ ಅಗ್ರಹಾರಗಳು, ಮಠಗಳು ಬೆಳೆದುಬಂದವು. ಕೃಷ್ಣಾಪುರ[19], ನೆಳಲಹುಣಸೆ[20], ನಾಗಲಾದೇವಿಪುರ[21], ಕುಮಾರಗಿರಿ[22],ಅಗ್ರಹಾರಗಳು ರಾಜಧಾನಿ ವಿಜಯನಗರದಲ್ಲಿ ಬೆಳೆದುಬಂದಿದ್ದವು. ಕಲಿಯುವ ಮತ್ತು ಕಲಿಸುವ ವಿಚಾರಕ್ಕಾಗಿ ಸಾಮ್ರಾಜ್ಯದ ನಾನಾ ಭಾಗಗಳಿಂದ ಪಂಡಿತರು ಮತ್ತು ವಿದ್ಯಾರ್ಥಿಗಳು ಬಂದು ವಿವಿಧ ಪುರಗಳಲ್ಲಿ ನೆಲೆಸಿದರು. ರಾಜರು, ಅಧಿಕಾರಿಗಳು, ವರ್ತಕರು ಇಂತಹ ಅಗ್ರಹಾರಗಳ ಬೆಳವಣಿಗೆಗೆ ಉದಾರ ದಾನದತ್ತಿ ಕೊಡುಗೆಗಳನ್ನು ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತುವೆ.[23] ಇದು ಸಾಮಾಜಿಕವಾಗಿ ಅಗ್ರಹಾರಗಳ ಸ್ಥಾನಮಾನವನ್ನು ಹೆಚ್ಚಿಸಿದ್ದವು. ಕನಕದಾಸರು ‘ಮೋಹನ ತರಂಗಿಣಿ’ ಯಲ್ಲಿ ಇತಿಹಾಸ, ವೇದ, ವೇದಾಂತ, ಆಗಮ, ಗಣಿತ, ಖಗೋಳಶಾಸ್ತ್ರ, ವ್ಯಾಕರಣ, ತರ್ಕ,

ಆಯುರ್ವೇದ, ಕಾವ್ಯ, ನಾಟಕ, ಸಂಗೀತಗಳಲ್ಲಿ ಪರಿಣಿತರಾದವರನ್ನು ಶಿಕ್ಷಕರೆಂದು ಅಗ್ರಹಾರಗಳಲ್ಲಿ ನೇಮಕ ಮಾಡುತ್ತಿದ್ದರ ಬಗ್ಗೆ ಗಮನ ಹರಿಸುತ್ತಾರೆ. ಅಗ್ರಹಾರಗಳಷ್ಟೇ ಮಠಗಳು ಸಹ ವಿದ್ಯಾಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ವಿಜಯನಗರದ ಸಾಮ್ರಾಜ್ಯ ಸ್ಥಾಪನಾಪೂರ್ವ ಹಂಪೆ ಶೈವ ವಿದ್ಯಾಕೇಂದ್ರವಾಗಿತ್ತು.[24] ಮಠಗಳಲ್ಲಿ ಅಲ್ಲದೆ ದೇವಾಲಯಗಳಲ್ಲೂ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಊಟ ಮತ್ತು ವಸತಿಗಳನ್ನು ಉಚಿತವಾಗಿ ಏರ್ಪಡಿಸಲಾಗಿರುತ್ತಿತ್ತು. ಈ ದೆಸೆಯಲ್ಲಿ ವಿರೂಪಾಕ್ಷ ದೇವಾಲಯದ ಬಗ್ಗೆ ಶಾಸನ ಮಾಹಿತಿ ಸಿಗುತ್ತದೆ.[25] ಸಾಮಾನ್ಯವಾಗಿ ಮಠ ದೇವಾಲಯಗಳಲ್ಲಿನ ಶಿಕ್ಷಕರೇ ಜನತೆಗೆ ಧಾರ್ಮಿಕ ಆಚರಣೆಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು.

ಜನತೆಗೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳನ್ನು ಯಾವುದೇ ಒಂದು ಸ್ಥಳದಲ್ಲಿ ಬೆಳೆಯಲು ಸಾಧ್ಯವಾಗದು ಅಥವಾ ತಯಾರಿಸಲಾಗದು. ಹಾಗಾಗಿ ಈಗಾಗಲೆ ಬಂದು ನೆಲೆಸಿದ ಮತ್ತು ಇನ್ನಿತರ ಜನತೆಯ ಬೇಡಿಕೆಗಳನ್ನು ಈಡೇರಿಸಲು ಮಾರುಕಟ್ಟೆಗಳು ವಿವಿಧ ಪುರಗಳಲ್ಲಿ ಅಸ್ತಿತ್ವಕ್ಕೆ ಬಂದವು. ವ್ಯಾಪಾರ ವಹಿವಾಟಿಗಾಗಿ ಸಾಮ್ರಾಜ್ಯದ ನಾನಾ ಭಾಗಗಳಿಂದ ವ್ಯಾಪಾರಿಗಳು ತಮ್ಮ ವಿವಿಧ ವಸ್ತುಗಳೊಂದಿಗೆ ಬಂದು ಪುರದಲ್ಲಿ ನೆಲೆಸಿದರು. ಹೀಗೆ ಬೇರೆ ಬೇರೆ ಪುರಗಳಲ್ಲಿ ಬೇರೆ ಬೇರೆ ದಿನದಂದು ಮಾರುಕಟ್ಟೆಯ ದಿನಗಳು ನಗದಿಯಾಗಿ ನಿರಂತರವಾಗಿ ನಡೆದಿದ್ದವು. ಉದಾಹರಣೆಗೆ ಹೇಳುವುದಾದರೆ ಡೊಮಿಂಗೊ ಪಾಯೇಸ್‌ತಿಳಿಸುವಂತೆ ದಿನಾಲು ನಗರದ ಬೇರೆ ಬೇರೆ ಭಾಗಗಳಲ್ಲಿ ಸಂತೆ ಜರುಗುತ್ತಿತ್ತು. ಕೃಷ್ಣಾಪುರದಲ್ಲಿ ಪ್ರತಿ ಸೋಮವಾರ[26] ಅಚ್ಯುತಾಪುರದಲ್ಲಿ ಪ್ರತಿ ಮಂಗಳವಾರ, ಸಂತೆ ನಡೆಯುತ್ತಿದ್ದುದರ ಬಗ್ಗೆ ಶಾಸನಗಳು ವಿವರಣೆಗಳನ್ನು ನೀಡುತ್ತವೆ. ಕಾಲಾಂತರದಲ್ಲಿ ಈ ಪುರಗಳ ಮಾರುಕಟ್ಟೆಗಳ ಮೂಲಕವೇ ವಿದೇಶಿ ವ್ಯಾಪಾರ ನಡೆದು ರಾಜ್ಯದ ಸಮಗ್ರ ಸಮೃದ್ಧ ಅಭಿವೃದ್ಧಿ ವೈಭವಕ್ಕೆ ಕಾರಣವಾಗಿದ್ದವು.

ಒಟ್ಟಾರೆ ಈ ಎಲ್ಲಾ ಪುರಗಳು ವಿಜಯನಗರದ ಅವಿಭಾಜ್ಯ ಅಂಗಗಳಾಗಿದ್ದವು. ಈ ಪುರಗಳು ಇಂದಿನ ಆಧುನಿಕ ಪಟ್ಟಣಗಳಲ್ಲಿ ಬೇರೆ ಬೇರೆ ಬಡಾವಣೆಗಳಿರುವಂತೆ ಅಂದು ವಿಜಯನಗರದಲ್ಲಿದ್ದವು. ದೇವಾಲಯಗಳು ಹಲವಿದ್ದು, ಮಠಗಳೂ ಸಹ ಆಯಾ ಧರ್ಮಕ್ಕನುಗುಣವಾಗಿ ವಿರೂಪಾಕ್ಷಪುರದಲ್ಲಿ ಶೈವಮಠಗಳು, ವಿಠ್ಠಲಾಪುರದಲ್ಲಿ ಶ್ರೀ ವೈಷ್ಣವಮಠಗಳು ಇದ್ದುದರ ಬಗ್ಗೆ ಶಾಸನಗಳು ತಿಳಿಸುತ್ತವೆ. ಇವು ಅಂದಿನ ವಿದ್ಯಾದಾನದ ಕೇಂದ್ರಗಳಾಗಿದ್ದವು. ಕನಕದಾಸರು ತಮ್ಮ 'ಮೋಹನ ತರಂಗಿಣಿ' ಯಲ್ಲಿ ಸೋಮಸೂರಿಯ ಬೀದಿಯಲ್ಲಿದ್ದ ಅಂಗಡಿಗಳು, ವಿವಿಧ ಪುರಗಳಲ್ಲಿ ಸಂತೆ ನಡೆಯುತ್ತಿದ್ದು, ಎತ್ತಿನಗಾಡಿಗಳು ಸಾಗಾಣಿಕೆಯ ಮುಖ್ಯ ಅಂಗಗಳಾಗಿದ್ದವು. ಹೇರುಗಳು ಸಾಗಾಟಕ್ಕೆ ಎತ್ತು ಎಮ್ಮೆ-ಕತ್ತೆಗಳಲ್ಲದೆ ಕುದರೆ-ಕೋಣ-ಆನೆಗಳನ್ನು ಬಳಸುತ್ತಿದ್ದುದರ ಬಗ್ಗೆ ವಿದೇಶಿ ಪ್ರವಾಸಿಗರ ಬರಹಗಳು ತಿಳಿಸುತ್ತವೆ. ಪುರಗಳು ಪ್ರಮುಖ ವ್ಯಾಪಾರ ಕೇಂದ್ರಗಳೂ ಆಗಿ ರಾಜಧಾನಿಯ ಸಮೃದ್ಧತೆಗೆ ಸಮರ್ಥವಾಗಿ ಬೆಂಬಲಿಸಿ ಸಂಪತ್ತಿನ ಕೇಂದ್ರಗಳಾಗಿದ್ದವು.

**ಆಕರ**

ವಿಜಯನಗರ ಅಧ್ಯಯನ, ಸಂ.೮, ೨೦೦೩, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೦೯-೧೧೫

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] Saletore, B.A: Social and Political life in the Vijayanagara Empire, Vol. I. P. 112, S.I.I. Vol. IV, Nos. 248, 265, etc.

[2] EI, III, P.22, V.p. 42

[3] ಲಕ್ಕಣ್ಣ ದಂಡೇಶ- ಶಿವತತ್ವ ಚಿಂತಾಮಣಿ

[4] Kannada University Epigraphical Series-III, No.34, AR No. 29 of 1889

[5] Nagaraja Rao, M.S. (Ed)- Vijayanagar Porgress of Research, 1979-83, p.9
[6] ಭೂಸನೂರಮಠ- ಸಂ.ಶಿ. ವಿಜಯಕಲ್ಯಾಣ, ಪು. ೭೫-೭೬
[7] ಕೊಟ್ರಯ್ಯ ಸಿ.ಟಿ. ಎಂ., ಹಂಪೆ ವೀರಶೈವ ಮಠಗಳು ಮತ್ತು ಸಾಹಿತ್ಯ ಪರಂಪರೆ, ಪು. ೨೦
[8] ಕೃಷ್ಣಶರ್ಮ ಬಿ, ಕರ್ನಾಟಕ ಜನಜೀವನ, ಪು. ೯೦-೯೩
[9] S.I.I. Vol. IV, No. 254, p. 44
[10] S.I.I. Vol. IV, No. 272, p. 68; No. 280, pp. 74-75
[11] S.I.I. Vol. IX, pt-II, No. 564,
[12] S.I.I. Vol. IX, pt-II, No.573,595,No.245
[13] S.I.I. Vol. IX, pt-II, No. 533
[14] A.R. on S.I. epigraphy, 1922,No.573
[15] S.I.I. Vol. IX, pt-II, No. 504,
[16] S.I.I. Vol. IX, pt-II, No.539,No.573
[17] S.I.I. Vol. IX, pt-II, No.636
[18] ARSIE 1935-36, No. 377, S.I.I.Vol-IV, No. 254, p. 44
[19] S.I.I. Vol. IV, No.255
[20] S.I.I. Vol. IV, pt-II, No.504
[21] S.I.I. Vol. IV, pt-II, No.533, S.I.I. Vol. XVI, No.26
[22] S.I.I. Vol. IV, No. 55, A.R. No. 24 of 1903
[23] S.I.I. Vol. IV, No.260,
[24] Ibid
[25] ಸದಾನಂದ ಕನವಳ್ಳಿ (ಅನು.) ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೭೪
[26] Ibid

## ೩೧. ವಿಜಯನಗರ ಸಾಮ್ರಾಟರ ಓಲಗ ಶಾಲೆಯ ವ್ಯವಸ್ಥೆಗಳು: ಒಂದು ಪರಿಕಲ್ಪನೆ

ಪೂರ್ವಕಾಲದಿಂದಲೂ ರಚಿತವಾಗಿರುವ ಪುರಾಣ, ಕಾವ್ಯ, ಮತ್ತಿತರ ಸಾಹಿತ್ಯ ಕೃತಿಗಳಲ್ಲಿ, ರಾಜಮಹಾರಾಜರ ಅರಮನೆಗಳು, ಅವರ ಓಲಗ ಶಾಲೆಗಳು, ಸಭಾಮಂಟಪಗಳು, ಮಹಲುಗಳು, ಮುಂತಾದ ವಾಸ್ತು ರಚನೆಗಳು, ಅವುಗಳಲ್ಲಿ ಏರ್ಪಡಿಸಲಾಗಿರುತ್ತಿದ್ದ ವ್ಯವಸ್ಥೆಗಳು ಮತ್ತು ಅಲ್ಲಿ ಜರುಗುತ್ತಿದ್ದ ವೈಭವಯುಕ್ತ ಸಭೆ ಸಮಾರಂಭಗಳನ್ನು ಕುರಿತು, ಸಾಮಾನ್ಯವಾಗಿ ಉತ್ಪ್ರೇಕ್ಷಣೆಗಳಿಂದ ಕೂಡಿದ್ದರೂ ವಿಸ್ಮಯವನ್ನುಂಟು ಮಾಡುವ ರೀತಿಯಲ್ಲಿ ವಿಫುಲವಾಗಿ ಮತ್ತು ವಿಶೇಷವಾಗಿ ವರ್ಣಿತವಾಗಿರುವುದನ್ನು ನೋಡುತ್ತೇವೆ. ಆದರೆ ಆ 'ವಿಷಯಾಂಶಗಳಲ್ಲಿ ಹಲವನ್ನಾದರೂ ಸ್ಥಿರೀಕರಿಸಿ, ಸಮರ್ಥಿಸುವಂತಹ ವಾಸ್ತು ಕಟ್ಟಡಗಳು ಕಾಣಬರುವುದು ವಿಜಯನಗರದ ಕಾಲದಿಂದೀಚೆಗೆ ಮಾತ್ರ ಎಂದರೆ ಕ್ರಿ.ಶ.೧೪ನೇ ಶತಮಾನದಿಂದೀಚೆಗೆ ಅವುಗಳಲ್ಲಿಯೂ ಹಲವೇ ಹಲವು ಉಳಿದು ಬಂದಿರುತ್ತದೆ. ಅವುಗಳನ್ನು ಮತ್ತು ಅವುಗಳು ನಿರ್ವಹಿಸಿದ ವಿದ್ಯುಕ್ತ ಕಾರ್ಯಾಚರಣೆಗಳು, ಸಂಪ್ರದಾಯಗಳ ಪಾತ್ರ ಪ್ರಕಾರಗಳ ವೈವಿಧ್ಯತೆಯನ್ನು ಗುರುತಿಸಿ, ವಿಶ್ಲೇಷಿಸಿ, ಸರಿಸಮಾನವಾದ ಚಿತ್ರಣವನ್ನು ಪಡೆಯಬೇಕಾದರೆ, ಸಮಕಾಲೀನ ದೇಶೀಯ ಸಾಹಿತ್ಯ ಕೃತಿಗಳನ್ನು ಮತ್ತು ಅವುಗಳ ಜೊತೆಗೆನೇ ವಿದೇಶೀ ಪ್ರವಾಸಿಗಳು ಸಂದರ್ಶಿಸಿ ಬರೆದು ದಾಖಲಿಸಿರುವ ವಿವರಣಗಳನ್ನೇ ಅವಲಂಬಿಸಬೇಕಾಗುತ್ತದೆ. ಪ್ರಸ್ತುತದಲ್ಲಿ, ವಿಜಯನಗರದ ಅರಮನೆ ಪ್ರದೇಶ (citadel) ಈಗಲೂ ಕಾಣಬರುತ್ತಿರುವ ಓಲಗ ಶಾಲೆ ಅಥವಾ ಸಭಾಮಂಟಪದ (audience hall) ಎಂದು ಗುರುತಿಸಲಾಗಿರುವ ವಾಸ್ತುಸ್ಮಾರಕ ಮತ್ತು ಅಲ್ಲಿ ಏರ್ಪಡಿಸಿದ್ದಿರಬಹುದಾದ ವಿಶೇಷ ವ್ಯವಸ್ಥೆಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

ಆ ಓಲಗ ಶಾಲೆಯ ಕಟ್ಟಡದ ಅಧಿಷ್ಠಾನದ ಭಾಗ ಮಾತ್ರ ಈಗ ಕಾಣಬರುತ್ತಿದ್ದು ಅದರ ಮೇಲಿದ್ದಿರಬಹುದಾದ ವಾಸ್ತು ಮತ್ತು ಮರಮುಟ್ಟುಗಳಿಂದ ರಚನೆಯಾಗಿದ್ದ ಭಾಗಗಳು ಅಲಂಕಾರ ವ್ಯವಸ್ಥೆಗಳು ಮತ್ತಿತರ ಏರ್ಪಾಟುಗಳು ಮುಸಲ್ಮಾನ ಸೈನಿಕರ ಸುಲಿಗೆ, ವಿಧ್ವಂಸಕ ಕೃತ್ಯಗಳಿಗೆ ಗುರಿಯಾಗಿ, ಹಾಳಾಗಿ, ಸುಟ್ಟು ನಾಶವಾಗಿ ಹೋಗಿರುತ್ತದೆ. ಆದರೂ, ಅದು ಒಂದು ವಿಶಾಲವಾದ, ಬೃಹತ್‍ಪ್ರಮಾಣದ ಮತ್ತು ನೂರು ಸ್ತಂಭಗಳನ್ನು ಹೊಂದಿದ್ದ ಸಭಾ ಮಂಟಪವಾಗಿದ್ದಿತೆಂದು ಖಚಿತವಾಗಿ ಸಾರಿ ಹೇಳುವ ಕುರುಹುಗಳೆಂದರೆ, ಅಲ್ಲಿ ಈಗಲೂ ಕಾಣಬರುವ ಆ ನೂರು ಸ್ತಂಭಗಳ ಅಡಿಗಲ್ಲುಗಳು, ಆ ಕಟ್ಟಡವು ಚೌಕದ ೪೦ ಮೀಟರು x ೪೦ ಮೀಟರು ಅಳತೆಗಳ ತಳ ವಿನ್ಯಾಸವನ್ನು ಹೊಂದಿದ್ದು (೧೬೦೦ ಚ.ಮೀಟರುಗಳು) ಉತ್ತರಾಭಿಮುಖವಾಗಿ ನಿರ್ಮಿತವಾದುದಾಗಿದೆ. ಅದನ್ನು ಎರಡು ಹಂತಗಳಲ್ಲಿ ಅಥವಾ ಕಾಲಾಂತರಗಳಲ್ಲಿ ನಿರ್ಮಿಸಲಾಗಿರುವ ಸಾಧ್ಯತೆಗಳನ್ನೂ ಗುರುತಿಸಬಹುದು. ಎಂದರೆ ಮೊದಲನೆ ಹಂತಕ್ಕೆ ಸಂಬಂಧಿಸಿದ್ದೆಂದು ಹೇಳಬಹುದಾದ ಜಗಲಿಯು (ಅದರ ಅಗಲ ಸುಮಾರು ಒಂದು ಮೀಟರು) ಮೂರು ಪಾರ್ಶ್ವಗಳಲ್ಲಿ ಕಾಣಬರುತ್ತಿದ್ದು, ಸುತ್ತಲೂ ಜನರು (ಸೇವಕರು, ಪರಿಚಾರಕರು) ಕಾರ್ಯನಿಮಿತ್ತ ನಡೆದಾಡುವುದಕ್ಕೆ ಮಾತ್ರ ಉಪಯೋಗಿಸಲು ರಚಿತವಾಗಿದ್ದಂತೆ ವೇದ್ಯವಾಗುತ್ತದೆ. ಅದರಿಂದ ಮೇಲೆ, ಸುಮಾರು ಒಂದು ಮೀಟರು ಎತ್ತರದಲ್ಲಿ ನಿರ್ಮಿತವಾಗಿರುವುದೇ; ಆ ಸಭಾಮಂಟಪದ ತಲಭಾಗ (floor level) ಅಥವಾ ಒಳಾಂಗಣ, ಅಲ್ಲಿಯೇ ಕಣಶಿಲೆಯಲ್ಲಿ ನಿರ್ಮಿತವಾಗಿರುವ ಒಂದು ನೂರು ಕಂಭಗಳ ಅಡಿಗಲ್ಲುಗಳು ಈಗಲೂ ಕಾಣಬರುತ್ತವೆ. ಅವುಗಳೆಲ್ಲವೂ ಒಂದು ನಿರ್ದಿಷ್ಟ ಯೋಜನೆಗನುಗುಣವಾಗಿ, ಎಂದರೆ ಒಂದೊಂದು ಸಾಲಿನಲ್ಲಿ ಹತ್ತರಂತೆ ಹತ್ತು ಸಾಲುಗಳಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿದ್ದುವೆಂಬ ವಿಷಯವನ್ನು ಅವುಗಳ ತಲವಿನ್ಯಾಸದ ಚಿತ್ರವು ತಿಳಿಸುತ್ತದೆ. ಆ ಅಡಿಗಲ್ಲುಗಳ ಮೇಲೆ ಮರದಿಂದ ತಯಾರಿಸಲಾಗಿದ್ದ ಸ್ತಂಭಗಳನ್ನು ಭದ್ರವಾಗಿ ನೆಲೆಗೊಳಿಸಲು ಅನುಕೂಲವಾಗುವಂತೆ ೮೦-೮೫ ಸೆಂಟಿಮೀಟರು ಅಳತೆಗಳಲ್ಲಿ, ಚೌಕಾಕಾರದ, ಅಷ್ಟಾಗಿ ಆಳವಾಗಿಲ್ಲದ ತಗ್ಗುಗಳು ಮತ್ತು ಅವುಗಳ ಮಧ್ಯದಲ್ಲಿ ಚೌಕಾದ ಗೂಟಗಳಿಗೆ\ ಬೆಣೆಗಳಿಗೆ ಸರಿ ಹೊಂದುವ ರಂಧ್ರಗಳನ್ನೂ ನೋಡುತ್ತೇವೆ. ಆ ಅಳತೆಗಳಿಂದಲೇ, ಆ ಸ್ತಂಭಗಳ ಗಾತ್ರ, ಅವುಗಳಿಗನುಗುಣವಾದ ಎತ್ತರ ಮತ್ತು ಬೃಹದಾಕಾರಗಳನ್ನು ಕಲ್ಪಿಸಿಕೊಳ್ಳಬಹುದು ಮತ್ತು ಮುಂದೆ ವಿವರಿಸಲಾಗುವಂತೆ, ಅವುಗಳೆಲ್ಲವೂ ರಾಜರ ಕಲಾಭಿರುಚಿ, ರಸಿಕತನ, ಸಂಪತ್ತು ಮತ್ತು ಪ್ರತಿಷ್ಠೆಗನುಗುಣವಾಗಿ ಚಿನ್ನ, ಬೆಳ್ಳಿಗಳ ತಗಡುಗಳ ಹೊದಿಕೆಗಳಿಂದ, ಕುಸುರಿ ಕೆತ್ತನೆಗಳಿಂದ, ಸುಂದರಮೂರ್ತಿ ಶಿಲ್ಪಗಳಿಂದ, ಅಮೂಲ್ಯ ಮತ್ತು ಮಾಣಿಕ್ಯಗಳಿಂದ ಅಲಂಕೃತ ವಾಗಿದ್ದಿರಬೇಕು.

ಪೂರ್ವದಲ್ಲಿರಬಹುದಾದ ಒಳಾಂಗಣದ ಗಾರೆ ನೆಲ, ಮತ್ತಿತರ ಅಲಂಕಾರಿಕ ಗಾರೆ ಕೆಲಸಗಳು ಈಗ ಕಾಣಬರುತ್ತಿಲ್ಲ. ಅದಿಷ್ಠಾನದ ಮೇಲಕ್ಕೇರಿ ಹೋಗಲು ಉತ್ತರದ (ಪ್ರಮುಖ ಪ್ರವೇಶ) ಮತ್ತು ಪೂರ್ವದ ಪಾರ್ಶ್ವಗಳಿಗೆ ಹೊಂದಿಕೊಂಡಂತೆ, ಕ್ರಮವಾಗಿ ಎರಡು ಕಡೆ ಮತ್ತು ಒಂದು ಕಡೆ ಮೆಟ್ಟಿಲುಗಳ ಏರ್ಪಾಟುಗಳನ್ನು ಈಗಲೂ ನೋಡಬಹುದು. ಅಲ್ಲದೆ ದಕ್ಷಿಣದ ಕಡೆಯಿಂದ, ಬಹುಶಃ ರಾಜನ ಮತ್ತು ಆತನ ಆಪ್ತಪರಿವಾರದವರ ಉಪಯೋಗಕ್ಕಾಗಿಯೇ ನಿರ್ಮಿತವಾಗಿದ್ದಿರಬಹುದಾದ, ಬಹು ಎತ್ತರಕ್ಕೆ ಕೊಂಡು ಹೋಗುವ (ಈಗ ಕಾಣಬರುವ ಅಳಿದುಳಿದಿರುವ ಮೆಟ್ಟಿಲುಗಳು ೪.೫ ಮೀಟರು ಎತ್ತರದವರೆಗಿವೆ) ಸೋಪಾನಗಳನ್ನು ನೋಡಬಹುದು. ಬಹುಶಃ ಅವು ರಾಜನು ಆಸೀನವಾಗಿರುತ್ತಿದ್ದ ಉಪ್ಪರಿಗೆ ಕೈಸಾಲೆ (balcony) ವರೆಗೆ ನಿರ್ಮಿತವಾಗಿದ್ದಿರಬೇಕು. ಆ ಎಲ್ಲಾ ಸೋಪಾನ ವ್ಯವಸ್ಥೆಗಳು ಆಧುನಿಕ ದುರಸ್ತಿ ಕಾರ್ಯಾಚರಣೆಗಳ ಸಮಯದಲ್ಲಿ ಬಹುವಾಗಿ ವ್ಯತ್ಯಾಸಗೊಂಡಿರುವ ಸಾಧ್ಯತೆಗಳೂ ಇವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಈ ಕಟ್ಟಡದ ಹೊರಮೈಯ ಭಾಗದ ಕಲ್ಲುಗಳು, ರಾಜನ ಅಭಿರುಚಿಗನುಗುಣವಾಗಿ ಬಹು ನುಣುಪಾಗಿಸಿ ಕಡೆದು ನಿರ್ಮಿಸಲಾದವುಗಳಾಗಿವೆಯಲ್ಲದೆ, ಒಂದು ವಿಶಿಷ್ಟ ಅಲಂಕಾರದ ವಿನ್ಯಾಸವನ್ನು ಹೊಂದಿರುವ ಆಕರ್ಷಕ ಅಧಿಷ್ಠಾನವಾಗಿದೆ.

ಆ ಸ್ಮಾರಕ ಕಟ್ಟಡದ ಅಕ್ಕಪಕ್ಕಗಳಲ್ಲಿ ಕಪ್ಪು ಹಸಿರು ಕಲ್ಲಿನಲ್ಲಿ (chlorite schist) ನಿರ್ಮಾಣವಾಗಿದ್ದು, ಆದರೆ ಈಗ ವಿಕೃತವಾಗಿರುವ ವಾಸ್ತು ಶಿಲ್ಪ ಭಾಗಗಳು, ಹಾಳಾಗಿರುವ ನಾಲ್ಕಾರು ಚಿಕ್ಕ ಮಂಟಪಗಳ ವೇದಿಕೆಗಳ ಅವಶೇಷಗಳು, ವಿವಿಧ ಆಕಾರ ಮತ್ತು ಪ್ರಮಾಣಗಳ ನೀರು ಶೇಖರಣೆ ವ್ಯವಸ್ಥೆಗಳು ನೀರು ಸರಬರಾಜಿಗೆ ಉಪಯೋಗವಾಗುತ್ತಿದ್ದ ಸುಟ್ಟ ಮಣ್ಣಿನ ಕೊಳವೆಗಳು ೧೨ ಮೀಟರು ಉದ್ದದ ಏಕಶಿಲಾ ನಿರ್ಮಿತ ನೀರಿನ ತೊಟ್ಟಿ, ಪ್ರವೇಶದ್ವಾರಗಳ ಶೇಷ ಭಾಗಗಳು ಮತ್ತಿತರ ಪುರಾತತ್ವ ಅವಶೇಷಗಳ ಲಭ್ಯತೆಯನ್ನು ಪರಿಗಣಿಸಿದಾಗ,

ಅರಮನೆ ಪ್ರವೇಶದ ಈ ಕಟ್ಟಡವು ಹಿಂದೆ ಬಹು ಪ್ರಾಮುಖ್ಯವಾದುದಾಗಿತ್ತು ಮತ್ತು ರಾಜ ಪ್ರೋತ್ಸಾಹ ಮತ್ತು ಪೋಷಣೆಗಳಿಂದಾಗಿ, ರಾಜ ಪ್ರೇರಿತ ವಿವಿಧ ಚಟುವಟಿಕೆಗಳ ಕೇಂದ್ರವಾಗಿತ್ತೆಂದು ತರ್ಕಿಸಬಹುದಾಗಿದೆ. ಆ ಎಲ್ಲಾ ಕಾರಣಗಳಿಂದಾಗಿ ಅದು ಹಿಂದಿನ ಕಾಲದಲ್ಲಿ ರಾಜವೈಭವದಿಂದ ವಿಜೃಂಭಸುತ್ತಿದ್ದ ಕಟ್ಟಡಗಳಲ್ಲೊಂದಾಗಿತ್ತೆಂದು ಹೇಳಬಹುದು.

ಮೇಲಿನ ವಿಷಯವನ್ನು ಸಮರ್ಥಿಸುವಲ್ಲಿ ಸಮಕಾಲೀನ ವಿದೇಶಿ ಪ್ರವಾಸಿಗರು ವಿಜಯನಗರವನ್ನು ಸ್ವತಃ ಸಂದರ್ಶಿಸಿ ದಾಖಲಿಸಿರುವ ವಿವರಣೆಗಳೂ ಸಹಾಯಕ್ಕೆ ಬರುತ್ತವೆ. ಅವರುಗಳಲ್ಲಿ ಪರ್ಶಿಯಾ ದೇಶದ ರಾಯಭಾರಿ ಅಬ್ದುಲ್‌ರಜಾಕ್, ಪೋರ್ಚುಗಲ್‌ದೇಶದವರಾದ ದುಆರ್ತೆ ಬಾರ್ಬೊಸಾ, ಡೊಮಿಂಗೋ ಪಾಯೆಸ್, ಫರ್ನಾವೋ ನೋನಿಜ್‌ರ ಬರವಣಿಗೆಗಳು ಪ್ರಮುಖವಾದವುಗಳಾಗಿವೆ. ರಾಜನ ಆ ಓಲಗ ಶಾಲೆಯನ್ನು, ‘Hall of Victory’ ಎಂದು ಕರೆಯಲಾಗಿತ್ತೆಂದು ಡೊಮಿಂಗೋಪಾಯಸನು ಹೇಳಿ ಅದು ಅನೇಕ ಸ್ತಂಭಗಳನ್ನು ಹೊಂದಿದ್ದ, ಹೊರಗೋಡೆಗಳಿಲ್ಲದ, ಆದರೆ ಎಲ್ಲಾ ಪಾರ್ಶ್ವಗಳಲ್ಲಿ ಎತ್ತರದಿಂದ ಇಳಿಬಿಟ್ಟ ಬಣ್ಣ ಬಣ್ಣಗಳಿಂದ ರಂಜಿತ ಪರದೆಗಳ ಏರ್ಪಾಟುಗಳಿಂದ ಹೊಂದಿದ್ದ, ಹೊರಗೋಡೆಗಳಿಲ್ಲದ, ಮತ್ತಿತರ ವೈಭಯುಕ್ತ ಅಲಂಕಾರಗಳಿಂದ ಮನೋಹರವಾಗಿ ನಿರ್ಮಿತವಾದುದಾಗಿತ್ತೆಂದು ವಿವರಿಸಿರುತ್ತಾನೆ. ಅಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಸ್ತಂಭಗಳೋ, ಆನೆ, ಸಿಂಹ ಮುಂತಾದವುಗಳನ್ನು ಹೋಲುವ ಮತ್ತು ಕಾಲದಲ್ಲಿ ಪ್ರಚಲಿತದಲ್ಲಿದ್ದ ಆಕರ್ಷಕ ವಾಸ್ತು ಶಿಲ್ಪಶೈಲಿಯ ಕೆತ್ತನೆಗಳಿಂದ ಕೂಡಿದ್ದವು. ಅದು ಉನ್ನತವಾದ ಕಟ್ಟಡವಾಗಿದ್ದುದರಿಂದ ಮೇಲೇರಿ ಹೋಗಲು ಅವಶ್ಯಕವಾದ ಸೋಪಾನಗಳ ಏರ್ಪಾಟುಗಳು ಇದ್ದವು. ಆ ಭವ್ಯವಾದ ವಾಸ್ತು ರಚನೆಯನ್ನು (ಕೃಷ್ಣದೇವರಾಯನು) ಓರಿಯಾ ರಾಜ್ಯದ ಮೇಲೆ ಸಾಧಿಸಿದ ವಿಜಯದ ಜ್ಞಾಪಕಾರ್ಥವಾಗಿ, ವಿಶೇಷ ಸಂತೋಷದಿಂದ ನಿರ್ಮಿಸಿದ್ದುದರಿಂದಾಗಿ, ‘House of Victory’ (ಭುವನ ವಿಜಯ) ಎಂದು ಕರೆಯಲಾಗುತ್ತಿತ್ತು. ಆ ಮಂಟಪದಲ್ಲಿ, ರಾಜನ ಆಸನವು ಅಲ್ಲಿ ಜರುಗುತ್ತಿದ್ದ ಕಾರ್ಯಕಲಾಪಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಬಹುಶಃ ದಕ್ಷಿಣದ ಕೊನೆಯಲ್ಲಿ, ಎತ್ತರದಲ್ಲಿ ನಿರ್ಮಿತವಾಗಿತ್ತು. ಆ ಸಭಾಮಂಟಪದಲ್ಲಿ, ರಾಯನು ಪ್ರತಿ ದಿನ ಬೆಳಿಗ್ಗೆ, ಆಸೀನನಾಗಿ ಮಂತ್ರಿ, ಅಮಾತ್ಯರು, ದಂಡನಾಯಕರು, ಮಂಡಲಾಧಿಪರು, ಪ್ರಜಾ ಪ್ರಮುಖರು ಮುಂತಾದವರೊಡನೆ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಮತ್ತಿತರ ವಿಷಯಗಳ ಕುರಿತು ಸಮಾಲೋಚನೆ ನಡೆಸುತ್ತಾ ಒಡ್ಡೈಸುತ್ತಿದ್ದನೆಂದು ಮುಂತಾಗಿ ದಾಖಲಿಸಿರುತ್ತಾರೆ. ಈಗ ಕಾಣಬರುವ ಆ ಮಹಾಸಭಾಮಂಟಪವು ವಿಜಯನಗರದ ಸ್ಥಾಪನೆ ಕಾಲದಿಂದಲ್ಲದಿದ್ದರೂ ಒಂದು ಮಿತ ಪ್ರಮಾಣದಲ್ಲಿ ಪರ್ಶಿಯಾ ದೇಶದ ಅಬ್ದುಲ್‌ರಾಜಕನು ಸಂದರ್ಶಿಸಿದ ವರ್ಷ ಕ್ರಿ.ಶ.೧೪೪೨ರಿಂದಲೇ ಅಸ್ತಿತ್ವದಲ್ಲಿದ್ದುದು ಖಚಿತವಾಗಿ ತಿಳಿದುಬರುತ್ತದೆ. ಅವನು ಬರೆದಿಟ್ಟಿರುವ ಪ್ರಕಾರ ಅದು ಅರಮನೆಯೋಪಾದಿಯಲ್ಲಿ ಕಾಣುವ ಬಹು ದೊಡ್ಡ, ಎತ್ತರವಾದ, ರಾಜ ವೈಭವಗಳಿಂದ ಕೂಡಿದ್ದ ದಿವಾನ ಖಾನೆಯಾಗಿತ್ತು.

ಈಗ ಸಮಕಾಲೀನ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಒಂದೆರಡು ಪ್ರಸಂಗೋಚಿತ ವಿವರಣೆಗಳನ್ನು ಪರಿಶೀಲಿಸೋಣ. ಅವುಗಳನ್ನು ರಚಿಸಿದ ಕವಿಗಳು, ಆಗಲೇ ಬಹುವಾದ ಪ್ರಸಿದ್ಧಿ, ಪ್ರತಿಷ್ಠೆ ಮತ್ತು ಪ್ರಚಾರಗಳನ್ನು ಪಡೆದಿದ್ದ ಆ ವಿಜಯನಗರ ಮಹಾಪಟ್ಟಣ ಅಥವಾ ಇನ್ನಾವುದೇ ಸಮಕಾಲೀನ ಪ್ರಮುಖ ನಗರವನ್ನು ಮತ್ತು ಅಲ್ಲಿ ಸಾಮ್ರಾಟರಿಂದ ಅಥವಾ ಸಾಮಂತರಿಂದ, ಪೋಷಿತ, ವೈಭವಾಡಂಬರಗಳಿಂದ ವಿಜೃಂಭಸುತ್ತಿದ್ದ ಕಾರ್ಯಕಲಾಪಗಳನ್ನು ನೋಡಿ ಅಥವಾ ಕೇಳಿ ತಿಳಿದು ಪ್ರಭಾವಿತರಾಗಿದ್ದಿರಬೇಕು. ತತ್ಪರಿಣಾಮವಾಗಿ, ಅವರ ಕಾವ್ಯ ಗ್ರಂಥಗಳಲ್ಲಿ, ವಿಶೇಷ ಕುತೂಹಲಕಾರಿಯಾದ ವಿವರಣೆಗಳಿಂದ ಕೂಡಿರುವ ಚಿತ್ರಣವು ಕಾಣಬರುತ್ತದೆ. ಇಲ್ಲಿ ದೇವರಾಜನ ಸೊಬಗಿನ ಸೋನೆ, ಕನಕದಾಸರ ‘ಮೋಹನ ತರಂಗಿಣಿ’, ರತ್ನಾಕರ ವರ್ಣಿಯ ‘ಭರತೇಶ ವೈಭವ’ ಎಂಬ ಗ್ರಂಥಗಳಲ್ಲಿ ಬರುವ, ವಿಜಯನಗರ ಕಾಲಕ್ಕೆ ಸಂಬಂಧಿಸಿದ ವಿಶೇಷ ವರ್ಣನೆಗಳನ್ನು ಗಮನಿಸಬೇಕಾಗುತ್ತದೆ. ಎಂದರೆ ಆ ಗ್ರಂಥ ರಚನಾಕಾರರು, ತಮ್ಮ ಗ್ರಂಥಗಳ ವಿಷಯಕ್ಕೆ ಪ್ರಸಂಗಗಳಿಗೆ ಅನುಗುಣವಾಗುವಂತೆ ತಮ್ಮ ಅನುಭವ ಅಥವಾ ತಿಳುವಳಿಕೆಗಳನ್ನು ಅಳವಡಿಸಿಕೊಂಡು ವಿಸ್ತಾರವಾದ ವಿವರಣೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಎಂದರೆ, ವಿಜಯನಗರ ಸಾಮ್ರಾಟರ ಓಲಗ ಶಾಲೆಯನ್ನು ಕುರಿತಂತೆ ನೇರವಾಗಿ ಪ್ರಸ್ತಾಪಿಸಿರುವುದಿಲ್ಲವಾದರೂ, ಪ್ರಸ್ತುತದಲ್ಲಿ ಆ ವಿವರಣೆಗಳು ಪ್ರಸಂಗೋಚಿತ ಹಾಗೂ ಉಪಯುಕ್ತ ಎಂಬುದು ವ್ಯಕ್ತವಾಗುತ್ತದೆ.

ಬಾಹುಬಲಿ ಪಂಡಿತನು ತನ್ನ ಕವಿತಾಗ್ರಂಥ, 'ಧರ್ಮನಾಥಪುರಾಣ', (೧೪ನೇ ಶತಮಾನ)ದಲ್ಲಿ ರಾಜನ ಓಲಗ ಶಾಲೆಯನ್ನು ಮಹಾಮಂಡಪ, ಸಭಾಮಂಡಪ, ಸಭಾಸದನ, ಆಸ್ಥಾನರಂಗಂ, ಧರಣೀಶನೋಲಗದ ಶಾಲೆ, ಎಂದು ಮುಂತಾಗಿ ಕರೆದಿರುತ್ತಾನೆ. (ಬಾಹುಬಲಿ) ವಿರಚಿತ 'ಧರ್ಮನಾಥ ಪುರಾಣ', ಸಂಪಾದಕ: ಎನ್.ಬಸವರಾಧ್ಯ, ಮೈಸೂರು ವಿಶ್ವವಿದ್ಯಾಲಯ ೧೯೭೫, ಆಶ್ವಾಸ-೬ ಪುಟ ೧೦೯ ಮತ್ತು ಅದು ವಿಶಾಲವಾಗಿದ್ದು ಕೆಂಪು ಕಲ್ಲಿನ ಅಥವಾ ಹರಳುಗಳಿಂದಲಂಕರಿಸಿದ ಕಂಬಗಳ ಸಾಲುಗಳಿಂದ, ಹರಿನೀಳಗಳಿಂದ ಶೋಭಿಸುವ ವಿಸ್ತಾರವಾದ ಗೋಡೆಗಳಿಂದ, ಅಲ್ಲಲ್ಲಿಗೆ ಮುತ್ತುಗಳ ಗೊಂಡೆ, ಕುಚ್ಚುಗಳು ಹಾಗೂ ಹೊಳೆಯುತ್ತಿರುವ ಪುತ್ಥಳಿಗಳಿಂದ, ಮನೋಹರಕ ವ್ಯವಸ್ಥೆಗೊಂಡಿದ್ದು ಸದಾ ಥಳಥಳಿಸುತ್ತಿತ್ತೆಂದು ವಿವರಿಸುತ್ತಾನೆ (ಆಶ್ವಾಸ ೬, ಪದ್ಯ ೨ ರಿಂದ ೪ ಪುಟ ೧೦೯-೧೧೦), ಅಲ್ಲದೆ ಸಭಾಮಂಟಪದಲ್ಲಿ ಕರ್ಪೂರದ ಹುಡಿಯನ್ನು ಅಪರಿಮಿತತೆಯಿಂದ ಹರಡಿ, ಸುವಾಸನಾಯುಕ್ತ, ಆಹ್ಲಾದಕರ ಪರಿಸರವನ್ನು ನಿರ್ಮಿಸಲಾಗಿತ್ತು. ಮತ್ತು ಆ ಓಲಗ ಶಾಲೆಯಲ್ಲಿ, ಧರಣೀಶನ ಉಪಯೋಗಕ್ಕಾಗಿಯೇ ಕನಕಮಯವಾದ ಸಿಂಹಾಸನವನ್ನು ಇರಿಸಲಾಗಿತ್ತು. ರಾಜನ ಆ ಓಡ್ಡೋಲಗದಲ್ಲಿ ಆಸೀನರಾಗಿರುತ್ತಿದ್ದ ಮಂತ್ರಿಗಳು, ಪ್ರತಿಷ್ಠಿತರು, ಅಧಿಕಾರಿಗಳು, ಪರಿಚಾರಕರು ಮತ್ತಿತರು, ಅವರಿಗಾಗಿ ಏರ್ಪಡಿಸಲಾಗಿರುತ್ತಿದ್ದ ಪೀಠೋಪಕರಣ ವ್ಯವಸ್ಥೆಗಳು, ಅಲ್ಲಿ ಜರುಗುತ್ತಿದ್ದ ಕಾರ್ಯಕಲಾಪಗಳು ಮುಂತಾದ ವಿವರಗಳು ಈ ಲೇಖನದಲ್ಲಿ ಅಪ್ರಸ್ತುತ.

ಈಗ ಪ್ರಸ್ತುತ ವಿಷಯಕ್ಕೆ ಬಹು ಉಪುಯಕ್ತವಾದ ಸಮಕಾಲೀನ ಕನ್ನಡ ಸಾಹಿತ್ಯ ಗ್ರಂಥವೆಂದರೆ, ಕನ್ನಡದ ಪ್ರಸಿದ್ಧ ಕವಿಗಳಲ್ಲೊಬ್ಬರು ಲಕ್ಷ್ಮೀಶ ಕವಿಯು ರಚಿಸಿರುವ 'ಜೈಮಿನಿ ಭಾರತ'ವೆಂಬ ಕವಿತಾಗ್ರಂಥವು ಕವಿಯ ಜೀವಿತಕಾಲವು ೧೪-೧೫ನೇ ಶತಮಾನವಾಗಿರಬೇಕೆಂದು ಮತ್ತು ಆತನು ಈಗಿನ ಚಿಕ್ಕಮಗಳೂರು ಜಿಲ್ಲೆಗೆ ಸೇರಿರುವ ದೇವನೂರು ಎಂಬ ಗ್ರಾಮದಲ್ಲಿ ವಾಸವಾಗಿದ್ದು ಗ್ರಂಥರಚನೆ ಮಾಡಿರಬೇಕೆಂದು ವಿಮರ್ಶಕರಿಂದ ಹೇಳಲಾಗುತ್ತದೆ. ಆ ಗ್ರಂಥದ ೧೭ನೇ ಸಂಧಿಯ, ಪದ್ಯ ೨೨ರಿಂದ ೨೭ರ ವರೆಗೆ ವರ್ಣಿತವಾಗಿರುವ ವಿವರಗಳನ್ನಾಧರಿಸಿ, ರಾಜನ ಓಲಗ ಶಾಲೆಯು ಒಂದು ಆಕರ್ಷಕ ಕಲಾ ಸಂಗ್ರಹಾಲಯದೋಪಾದಿಯಲ್ಲಿ ವ್ಯವಸ್ಥೆಗೊಳಿಸಲಾಗಿತ್ತೆಂದು ವಿಶ್ಲೇಷಿಸಿ ಹೇಳಬಹುದು. ಇಲ್ಲಿ ಕೊಡಲಾಗಿರುವ ವಿವರಣೆಗಳೆಲ್ಲವೂ ಒಬ್ಬ ರಾಜನ (ಕಥಾ ಪ್ರಸಂಗದಲ್ಲಿ, ಬಬ್ರುವಾಹನ) ಸಭಾಸ್ಥಾನ (ಓಲಗಮಂಟಪ – audience hall)ದಲ್ಲಿ ಕಾಣಬರುತ್ತಿದ್ದ ವ್ಯವಸ್ಥೆಗಳನ್ನು ಕುರಿತು ವರ್ಣಿಸಿದವುಗಳಾಗಿರುತ್ತವೆ.

ನಮ್ಮ ನಾಡಿನ ಪೂರ್ವಕಾಲದ ಕಾವ್ಯ ಗ್ರಂಥದಲ್ಲಿ ಸಾಮಾನ್ಯವಾಗಿ ಕಾಣಬರುವ ಉತ್ಪ್ರೇಕ್ಷಿತ ವರ್ಣನೆಗಳು ಈ ಗ್ರಂಥಗಳಲ್ಲಿಯೂ ಇವೆಯಾದರೂ ಅವುಗಳಿಗೆ, ಹೆಚ್ಚಿನ ಗಮನ ಕೊಡದೆ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಮೂಲ, ಸೂಚಿತ ಮತ್ತು ವಿವಕ್ಷಿತ ಅಂಶಗಳನ್ನು ಮಾತ್ರ ಪರಿಗಣಿಸಿ ವಿಶ್ಲೇಷಿಸಿ ನಿವೇದಿಸಲಾಗಿದೆ. ಲಕ್ಷ್ಮೀಶನು ವಿವರಿಸಿರುವ ನಿವೇಶನವು ಹತ್ತು ಸಾವಿರ ಕಂಬಗಳಿಂದ ಕೂಡಿದ್ದು, ಬಹು ವಿಶಾಲವಾದ ಮತ್ತು ಅನುಕೂಲವಾದ ("…. ಪತ್ತು ಸಾಸಿರ ಕಂಬದೆಸ ಕದಾಸ್ಥಾನಮಂಟಪ…") ಚೌಕಾಕಾರದ ರಾಜನ ಓಲಗ ಮಂಟಪವಾಗಿತ್ತು ("…. ಚೌರಸದ ಚಾವಡಿ…") ಆ ಕಾರಣದಿಂದಾಗಿ ಅದನ್ನು ರಾಜನ ಅಭಿರುಚಿಗನುಗುಣವಾಗಿ ನಿರ್ಮಿಸಿ ಮತ್ತು ವಿಶೇಷವಾಗಿ ಅಲಂಕರಣಗೊಳಿಸಲಾಗಿತ್ತು. ಎಂದರೆ, ಗ್ರಂಥದಲ್ಲಿ ವಿವರಿಸಿರುವಂತೆ ಅದರ ನೆಲೆಗಟ್ಟನ್ನು ಅಮೃತ ಶಿಲೆಯಿಂದ ನಿರ್ಮಿಸಲಾಗಿತ್ತು; ಜಗುಲಿಯನ್ನು ಮರಕತ (ಹಸಿರು ರತ್ನ)ಗಳಿಂದ, ಗೋಡೆಗಳನ್ನು ನೀಲರತ್ನಗಳಿಂದ, ಕಂಬಗಳನ್ನು ವಜ್ರಗಳಿಂದ, ಮದನಕ್ಕೆಗಳನ್ನು ಹೊಳೆಯುವ ವೈಢೂರ್ಯಗಳಿಂದ, ಬೋದಿಗೆಗಳನ್ನು ಗೋಮೇದಿಕ ರತ್ನಗಳಿಂದ, ತೊಲೆಗಳನ್ನು ಪುಷ್ಯರಾಗಗಳಿಂದ, ಲೋವೆಗಳನ್ನು ಹೊಳೆಯುವ ಮಾಣಿಕಗಳಿಂದ ಅಲಂಕರಿಸಲಾಗಿತ್ತು ಮತ್ತು ಮುತ್ತುಗಳ ಗೊಂಡೆ, ಕಟ್ಟುಗಳಿಂದ ಬಂಗಾರದ ತಗಡಿನ ಹೊದಿಕೆಯಿಂದ ಆ ಓಲಗ ಮಂಟಪವು (ಚಾವಡಿಯು) ರಂಜಿಸುತ್ತಿತ್ತು (ಸಂಧಿ ೧೭, ಪದ್ಯ ೨೩). ಇಲ್ಲಿ ಉತ್ಪ್ರೇಕ್ಷೆಗಳಿಂದ ಕೂಡಿರುವ ವರ್ಣನೆಗಳನ್ನು ಕಡೆಗಣಿಸಿ, ಆ ನಿವೇಶನವು ಒಂದು ವಿಶಾಲವಾದ, ಸೂಕ್ತವಾದ ಮತ್ತು ರಮಣೀಯವಾದ ಓಲಗ ಮಂಟಪವಾಗಿತ್ತೆಂದು ಮಾತ್ರ ಗ್ರಹಿಸಬೇಕು ಎಂದರೆ ಅದು ವಿಚಾರ ಮಾಡದೇ ಅಡ್ಡಾದಿಡ್ಡಿಯಾಗಿ ನಿರ್ಮಿತವಾದ ನಿವೇಶನವಾಗಿರಲಿಲ್ಲ. ಇಲ್ಲಿ ಆರಂಭದಲ್ಲಿ ವಿವರಿಸಲಾಗಿರುವ ಹಂಪೆಯ ನೂರು ಕಂಬಗಳ ಚತುರಾಕಾರದ ಓಲಗಶಾಲೆಯ ವಿನ್ಯಾಸವನ್ನು ಸ್ಮರಿಸಿಕೊಳ್ಳಬಹುದು.

**ಅಲ್ಲಿ ಪ್ರದರ್ಶಿತ ಕಲಾಕೃತಿಗಳು**

೧. "…. ಮಿಸುಪ ಪ

ವಳದ ಪುತ್ಥಳಿ ಪೊನ್ನ ಪೊದಕೆ ರಂಜಿಸಿತು ಚಾವಡಿಯು

ಚೌರಸದೆಡೆಯೋಳು ||೨೩||

ಸಜ್ಜುಕಂ ಮುಡಿವ ತಿಲಕಮ ನಿಡುವ ಮೊಗಮುರಿವ |

ಕಜ್ಜಳಂ ಬರೆವ ಕನ್ನಡಿಯ ನಿಟ್ಟಿಪ ಪಾಡು |

ವುಜ್ಜುಗಲ ನರ್ತನದ ಕೋಪುಗಳ ವೀಣಾದಿ ವಾದ್ಯಮಂ ಬಿತ್ತರಿಸುವ ||

ಕಜ್ಜದ ಪಲವು ಕಲೆಗಳಂ ತೋರುವಭಿನವದ |

ಸಜ್ಜೀವ ಮಾಗಿರ್ದ ಪುತ್ಥಳಿಗಳ ವಯವದ |

ಪಜ್ಜಳಿಪ ನವರತ್ನ ಭೂಷಣದ ಕಾಂತಿಗಳಕ್ಕಣ್ಗೆಸೆದುವಾ ಸಭೆಯೊಳು ||೨೪||

ರಾಜನ ಆ ಸಭಾಸ್ಥಾನದಲ್ಲಿ ಏರ್ಪಡಿಸಲಾಗಿದ್ದ ಕಲಾಕೃತಿಗಳಲ್ಲಿ ಬಹುಮುಖ್ಯವಾದವುಗಳೆಂದರೆ ಲೋಹಗಳಿಂದ ಮಾಡಲಾದ ಬೊಂಬೆಗಳು ಅಥವಾ ಪುತ್ಥಳಿಗಳು. ಬಹುಶಃ ಆಗ ಪ್ರಚಲಿತದಲ್ಲಿದ್ದ ಪದ್ಧತಿಯ ಪ್ರಕಾರ, ಕಂಚು, ತಾಮ್ರ ಅಥವಾ ಹಿತ್ತಾಳೆ ಲೋಹಗಳಲ್ಲಿ ಎರಕಹೊಯ್ಯುವ ಕ್ರಮದಲ್ಲಿ ಅವು ತಯಾರಾದವುಗಳಾಗಿರಬೇಕು. ಅವುಗಳೆಲ್ಲವೂ ಸುಂದರ ಸ್ತ್ರೀರೂಪದ ಬೊಂಬೆಗಳಾಗಿದ್ದು, ಸಜೀವವಾಗಿದ್ದವುಗಳಂತೆ ವಿವಿಧ ರೀತಿಯಲ್ಲಿ ಕಾಣಿಸುತ್ತಿದ್ದವು. ಎಂದರೆ, ಅವುಗಳನ್ನು ಅಷ್ಟೊಂದು ಕುಶಲತೆಯಿಂದ ಮತ್ತು ಬೇರೆ ಬೇರೆ ಭಾವನೆ, ಭಂಗಿಗಳನ್ನು ಪ್ರಕಟಪಡಿಸುತ್ತಿರುವಂತೆ ತಯಾರಿಸಲಾಗಿತ್ತು. ಅವುಗಳಲ್ಲಿ ಓರ್ವಳು ಹೂವುಗಳಿಂದ ತನ್ನ ಮುಡಿಯನ್ನು ಅಲಂಕರಿಸಿಕೊಳ್ಳುವ ಭಂಗಿಯಲ್ಲಿದ್ದರೆ, ಇತರರು ಹಣೆಯ ಮೇಲೆ ಕುಂಕುಮದ ತಿಲಕವನ್ನು ಇಟ್ಟುಕೊಳ್ಳುವಂತೆ, ವೈಯ್ಯಾರದಿಂದ ಮೊಗಮುರಿದು ತಿರುಗಿ ನಿಂತಿರುವಂತೆ, ಕಣ್ಣಿಗೆ ಕಾಡಿಗೆಯನ್ನು ಹಚ್ಚಿಕೊಳ್ಳುತ್ತಿರುವಂತೆ, ಕನ್ನಡಿಯಲ್ಲಿ ಮುಖವನ್ನಿಟ್ಟು ನಿಟ್ಟಿಸಿ ನೋಡುತ್ತಿರುವಂತೆ ಅಥವಾ ಮೆಲ್ಲಗೆ ಹಾಡೊಂದನ್ನು ಗುನುಗುನಿಸುತ್ತಿರುವಂತೆ, ಹೀಗೆ ನಾನಾ ವಿವಿಧ ಕ್ರಿಯೆ ಮತ್ತು ಭಂಗಿಗಳಲ್ಲಿ ನಿರಾತರಾಗಿದ್ದವಂತೆ ಕಾಣಬರುತ್ತಿದ್ದವು. ಮತ್ತೆ ಕೆಲವು, ಶಾಸ್ತ್ರೀಯ ನರ್ತನದ ಪ್ರದರ್ಶನಾ ಸಮಯದಲ್ಲಿ ಹಾಗೂ ಕೊನೆಯಲ್ಲಿ ತೋರಿಸುವ ಭಾವಾಭಿನಯಗಳನ್ನು ಪ್ರಕಟಪಡಿಸುವ ಭಂಗಿಗಳಲ್ಲಿ ಇದ್ದವು. ಇನ್ನೂ ಹಲವು ವೀಣೆ, ಮುಂತಾದ ವಾದ್ಯ ವಿಶೇಷಗಳನ್ನು ನುಡಿಸುವುದರಲ್ಲಿ ತಲ್ಲೀನರಾಗಿರುವಂತೆ ಕಾಣಿಸುತ್ತಿದ್ದವು. ಅಲ್ಲದೆ, ಆ ಪುತ್ಥಳಿಗಳೆಲ್ಲವೂ ನವರತ್ನ ಖಚಿತವಾದ ಆಭರಣಗಳಿಂದ ಅಲಂಕೃತವಾಗಿದ್ದು ಬಹು ಆಕರ್ಷಣೀಯವಾಗಿದ್ದವು. ಹೀಗೆ, ಆ ಸುಂದರ ಪುತ್ಥಳಿಗಳು ನಾನಾ ವಿಧದ ಕಲಾಪ್ರಕಾರಗಳನ್ನು ಪ್ರಕಟಪಡಿಸಿ, ನಿವೇದಿಸುತ್ತಿರುವಂತೆ ಮತ್ತು ಸಜೀವವಾಗಿಯೇನೋ ಎಂಬಂತೆ ನಿರ್ಮಾಣಗೊಂಡವುಗಳಾಗಿದ್ದವು. ಆ ನಿವೇಶನವು ಮುಖ್ಯವಾಗಿ ರಾಜಸಭಾ ಭವನವಾಗಿದ್ದುದರಿಂದ ಆ ಪುತ್ಥಳಿಗಳೆಲ್ಲವೂ, ಒಳಗಿನ ಗೋಡೆಗಳಿಗೆ ಅಥವಾ ಸ್ತಂಭಗಳಿಗೆ ಹೊಂದಿಕೊಂಡಂತೆ ಸೂಕ್ತ ಪೀಠಗಳ ಮೇಲೆ ಪ್ರದರ್ಶಿತವಾಗಿದ್ದಿರಬೇಕು.

ಅವುಗಳಲ್ಲದೆ ಪ್ರತಿ ಸ್ತಂಭಕ್ಕೆ ಹೊಂದಿಕೊಂಡಂತೆ ವೈಡೂರ್ಯಗಳಿಂದ ಅಲಂಕಾರಗೊಂಡಿದ್ದ ಮದನ ಕೈಗಳು (bracket figures) ಸಹ ಅಲ್ಲಿ ಶೋಭಿಸುತ್ತಿದ್ದವೆಂದು ಕವಿಯು ತಿಳಿಸಿರುತ್ತಾನೆ.

೨. ಅಂಚೆಗಳ್ಕೊಳರ್ವಕ್ಕಿಗ ಳ್ಜೊನ್ನವಕ್ಕಿಗ |

ಳ್ವಿಂಚೆಗಳ್ಗಿಳಿಗ ಳೆಣೆವಕ್ಕಿಗ ಳ್ಪರಮೆಗ |

ಳ್ಕೊಂಚೆಗೆ ಳ್ಕೋಗಿಲೆಗ ಳಲ್ಲಲ್ಲಿಗೊಪ್ಪಿದುವು ಸಜೀವ ಭಾವದಿಂದ …. ||೨೫||

ಮೇಲೆ ವಿವರಿಸಿದ ಕಲಾತ್ಮಕ ಪುತ್ಥಳಿಗಳಲ್ಲದೆ, ಅದೇ ಸಭಾಭವನದಲ್ಲಿ ಬಹು ಜಾಣ್ಮೆಯಿಂದ ತಯಾರಿಸಲಾಗಿದ್ದ ವಿವಿಧ ಪಕ್ಷಿ ಸಂಕುಲದ ಪ್ರತಿಕೃತಿಗಳು ಸಹ ಪ್ರದರ್ಶಿತವಾಗಿದ್ದವು. ಅವು ಕೂಡಾ ಜೀವಂತ ಪಕ್ಷಿಗಳೇನೋ ಎಂದು ಭಾಸವಾಗುವಂತೆ ಬಹುವಾದ ಕುಶಲತೆಯಿಂದ ತಯಾರಿಸಲ್ಪಟ್ಟವುಗಳಾಗಿದ್ದವು. ಅವುಗಳಲ್ಲಿ, ಅಂಚೆಗಳು, ಕೊಳರ್ವಕ್ಕಿಗಳು, ಚಕೋರಗಳು, ನವಿಲುಗಳು, ಗಿಳಿಗಳು, ಚಕ್ರವಾಕಗಳು, ಪರಮೆಗಳು ಭ್ರಮರಗಳು, ಕ್ರೌಂಚಗಳು, ಕೋಗಿಲೆಗಳೇ ಮುಖ್ಯವಾದವುಗಳಾಗಿದ್ದವು.

೩. "…. ಪಂಚಾನನಾದಿ ಮೃಗತತಿ ಗಜಹಯಾಳಿ ವಿ |
ರಿಂಚಿ ಸೃಷ್ಟಿಯೊಳುಳ್ಳ ಮೂಜಗದ ನಾನಾ |
….. ಳೆಸಗಿರ್ದುವಾ ಸಭೆಯೊಳ್ಮ ನೋಹರ ಮನೆ ||೧೫||

ನಂತರ, ಅದೇ ನಿವೇಶನದಲ್ಲಿ ಪ್ರಸ್ತುತಪಡಿಸಲಾಗಿದ್ದ ಇತರ ವಸ್ತುಗಳೆಂದರೆ ವನ್ಯ ಮೃಗಗಳ ಮತ್ತು ಸಾಕುಪ್ರಾಣಿಗಳ ಪ್ರಕೃತಿಗಳಾಗಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸಿಂಹ, ಮತ್ತಿತರ ವನ್ಯಮೃಗಗಳು ಮತ್ತು ಸಾಕುಪ್ರಾಣಿಗಳಾದ ಆನೆ ಮತ್ತು ಕುದುರೆ ಮುಂತಾದವುಗಳು.

೪. "….ವಿರಿಂಚ ಸೃಷ್ಟಿಯೊಳುಳ್ಳ ಮೂಜಗದ ನಾನಾ ಪ್ರ |
ಪಂಚಗಳ ಚಿತ್ರಪತ್ರಂಗಳೆಸೆದಿರ್ದುವಾ ಸಬೆಯೊಳ್ಮ ನೋಹರಮನೆ ||೧೫||

ಈಗ, ಅದೇ ಓಲಗಶಾಲೆಯಲ್ಲಿ ಪ್ರದರ್ಶಿತವಾಗಿದ್ದ ಬಹು ಮುಖ್ಯ ಶ್ರೇಣಿಯ ಕಲಾಕೃತಿಗಳೆಂದರೆ ವರ್ಣ ಚಿತ್ರಗಳ ಸಮೂಹವು. ಅವುಗಳೋ ಪ್ರಪಂಚದ (ಮೂರು ಜಗತ್ತಿನ) ನಾನಾ ದೇಶಗಳಿಂದ ಸಂಗ್ರಹಿಸಲ್ಪಟ್ಟಂತಹುಗಳಾಗಿದ್ದವು. ಅವು ಪತ್ರಗಳ (ಎಲೆ, ಬಟ್ಟೆ ಅಥವಾ ಕೋರೆ ಕಾಗದಗಳ) ಮೇಲೆ ನುರಿತ ಪರಿಣಿತರಿಂದ ಚಿತ್ರಿತವಾದವುಗಳಾಗಿದ್ದಿರಬೇಕು.

ಮೇಲೆ ವಿವರಿಸಿದಂತೆ ನಾಲ್ಕು ಶ್ರೇಣಿಗಳ ಕಲಾಕೃತಿಗಳು ಆ ಓಲಗ ಮಂಟಪದಲ್ಲಿ ಪ್ರದರ್ಶಿತವಾಗಿದ್ದುವೆಂದು ಖಚಿತವಾಯಿತು.

**ದೀಪ ಅಥವಾ ಬೆಳಕಿನ ವ್ಯವಸ್ಥೆ**

ನೀಲ ಮಣಿಕಾಂತಿಗಳ ಕತ್ತಲೆಯ ಮುತ್ತುಗಲ |
ಡಾಳಗಳ ಕೌಮುದಿಯ ಮಾಣಿಕದ ರಶ್ಮಿಗಳ |
ಬಾಲಾತಪದ ವಿದ್ರುಮಚ್ಛವಿಯ ಸಂಜೆಗಂಪಿನ ಪಗಲಿರುಳ್ಗಳಲ್ಲಿ |
ತೇಲದಿಹುವಲ್ಲದೆ ದಿವಾರಾತ್ರಿಯುಂ ಟೆಂಬ |
ಕಾಲಭೇದವನರಿಯದಾ ಮಹಾಸಭೆ ಸುರುಪ |
ನೋಲಗದ ಮಂಟಪದ ಸೌಭಾಗ್ಯಕೆಂಟುಮಡಿಯಾಗಿರ್ದುದಚ್ಚರಿಯೆನೆ ||೧೬||

ಎಂದರೆ, ಆ ಸಭಾಭವನದಲ್ಲಿ ಪರಿಣಾಮಕಾರಿಯಾದ ಬೆಳಕಿನ (ಪ್ರಕಾಶದ) ವ್ಯವಸ್ಥೆಯನ್ನು ಏರ್ಪಡಿಸುವ ದಿಸೆಯಲ್ಲಿ ನಾನಾ ವಿಧದ ವಜ್ರ ಮುಂತಾದ ಅಮೂಲ್ಯ ಹರಳುಗಳನ್ನು ಸೂಕ್ತ ರೀತಿಯಲ್ಲಿ ಅಲ್ಲಲ್ಲಿಗೆ ಅಳವಡಿಸಿದ್ದರು. ಅವುಗಳು ಹೊರಸೂಸುತ್ತಿದ್ದ ವಿವಿಧ ಮತ್ತು ನಸುಬಣ್ಣಗಳಿಂದ ಕೂಡಿದ ಹೊಳಪು, ಪ್ರಕಾಶಗಳಿಂದಾಗಿ ಆ ಶಾಲೆಯಲ್ಲಿ ಒಂದು ವಿಶಿಷ್ಟ ರೀತಿಯ, ಸೌಮ್ಯವಾದ, ಬೆಳಕಿನ ಪ್ರಕಾಶದ ಹರವು ಏರ್ಪಾಟಾಗಿ, ಬಹು ಆನಂದದಾಯಕವಾಗಿದ್ದು, ಪ್ರದರ್ಶನವನ್ನು ವೀಕ್ಷಿಸುವವರಿಗೆ ಪ್ರೋತ್ಸಾಹದಾಯಕ ವಾದುದಾಗಿಯೂ ಇದ್ದಿರಬೇಕು. ಹಾಗೆ ಜೋಡಿಸಲ್ಪಟ್ಟ ಆ ಅಮೂಲ್ಯ ಹರಳುಗಲೋ ಹಲವು, ನೀಲಮಣಿ, ಮಾಣಿಕಗಳು, ಹವಳುಗಳು, ಮುತ್ತುಗಳು

ಮುಂತಾದವುಗಳಾಗಿದ್ದವು. ಇವುಗಳ ಜೊತೆಗೆ ಸೂರ್ಯನ ನೇರವಲ್ಲದ ಬೆಳಕು (ಪ್ರಕಾಶ) ಇದ್ದಿರಲೇಬೇಕಲ್ಲವೇ? ಆ ಎಲ್ಲಾ ಏರ್ಪಾಟುಗಳಿಂದಾಗಿ ಅಲ್ಲಿ ಉಂಟಾದ ಪ್ರಕಾಶದ ಸಮಗ್ರ ಪರಿಣಾಮವು ರಾತ್ರಿಯಾಗುವುದು ಎಂಬ ಭೇದವೇ ಅರಿವಿಗೆ ಬಾರದಂತಿತ್ತು. ಎಂದರೆ ಬೆಳಕಿನ ಪ್ರಕಾಶವು ಅಷ್ಟೊಂದು ಪರಿಣಾಮಕಾರಿಯೂ, ಆಹ್ಲಾದಕರವಾಗಿಯೂ ಇತ್ತು. ಅಂತಹ ಪರಿಣಾಮಕಾರಿ ವ್ಯವಸ್ಥೆಯ ಯಾವುದೇ ಕಲಾಪ್ರದರ್ಶನ ಶಾಲೆಯಲ್ಲಿ ಶ್ಲಾಘನೀಯವಾದುದಲ್ಲವೇ?

ಮೇಲಿನ ಏರ್ಪಾಟುಗಳ ಜೊತೆಗೆ ಅದೇ ಸಭಾಮಂಟಪದಲ್ಲಿ, ಅಲ್ಲಲ್ಲಿ ಕರ್ಪೂರ ತೈಲದಿಂದ ಉರಿಯುತ್ತಿದ್ದ ಕೈದೀವಿಗೆಗಳನ್ನು ದೀಪ ಲಕ್ಷ್ಮಿಗಳು ಬೊಂಬಾಳಂಗಳು ಸಹ ಅಳವಡಿಸಿದ್ದರು.

"…. ವಿಸ್ತರದ ಕರ್ಪೂರ ತೈಲದಿಂದಲ್ಲಲ್ಲಿಗುರಿವ ಬೊಂಬಾಳಂಗಳ ||
ಶಸ್ತರತ್ನಪ್ರದೀಪ ಜ್ವಾಲೆಗಳ ಸಭೆ ಸ |
ಮಸ್ತ ಸೌಭಾಗ್ಯದಿಂದೊಪ್ಪುತಿರಲಾಗ…. ||೧೭||

ಆ ದೀಪಲಕ್ಷ್ಮಿಗಳು ಸಹಾ ಹೆಚ್ಚಾದ ಪ್ರಕಾಶವನ್ನು ನೀಡುತ್ತಿದ್ದುದರ ಜೊತೆಗೆ, ನಮಗೆಲ್ಲಾ ತಿಳಿದಿರುವಂತೆ, ಕಲಾ ಪ್ರತೀಕಗಳಾಗಿಯೂ ಶೋಭಿಸುತ್ತಿದ್ದವು. ಅವುಗಳನ್ನು ಅಲ್ಲಲ್ಲಿ, ಸೂಕ್ತ ಸ್ಥಳಗಳಲ್ಲಿ, ಬಹುಶಃ ಸಾಲಾಗಿ, ಪ್ರದರ್ಶಿಸಿ ಹೆಚ್ಚಿನ ಆಕರ್ಷಣೆಯನ್ನು ಕಲ್ಪಿಸಿದ್ದರು. ಹಾಗೂ ಸುವಾಸನೆಯುಕ್ತ ವಾತಾವರಣವನ್ನು ನಿರ್ಮಿಸಲಾಗಿತ್ತು.

ಹೀಗೆ, ಕಲಾ ಪ್ರದರ್ಶನಾಲಯಗಳಲ್ಲಿ ಬೆಳಕಿನ ಸುವ್ಯವಸ್ಥೆಯೂ ಒಂದು ಅವಶ್ಯಕ ವಿಷಯವೆಂಬುದರ ಪರಿಜ್ಞಾನ ಆ ಕಾಲದಲ್ಲಿಯೇ ಗಮನದಲ್ಲಿದ್ದು, ಅದನ್ನು ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ಹೇಗೆ ನಿರ್ವಹಿಸಲಾಗುತ್ತಿತ್ತೆಂಬುದು ಮೇಲಿನ ವಿವರಣೆಗಳಿಂದ ವೇದ್ಯವಾಗುತ್ತದೆ.

**ಇತರ ಏರ್ಪಾಟುಗಳು**

ಮೇಲೆ ವಿವರಿಸಲಾದ ಏರ್ಪಾಟುಗಳ ಜೊತೆಗೆ, ಅದೇ ನಿವೇಶನದಲ್ಲಿ ಸುವಾಸನಾಯುಕ್ತವಾದ ಮತ್ತು ಆಹ್ಲಾದಕರವಾದ ವಾತಾವರಣವನ್ನು ನಿರ್ಮಿಸುವ ವಿಷಯಕ್ಕೂ ಸಾಕಷ್ಟು ಗಮನ ಕೊಡಲಾಗಿತ್ತೆಂಬುದು ಕೆಳಗೆ ಉಲ್ಲೇಖಿಸಿರುವ ಪದ್ಯದಿಂದ ತಿಳಿದುಬರುತ್ತದೆ.

ಕಸ್ತೂರಿ ಜವಾದಿಗಳ ಸಾರಣೆಯ ಕುಂಕುಮ ಪ |
ದಿಸ್ತರಣದಗರು ಚಂದನ ಧೂಪವಾಸಿತದ |
….. ಸಭೆ ಸಮಸ್ತ ಸೌಭಾಗ್ಯದಿಂದೊಪ್ಪತಿರ ಲಾಗ…. ||೧೭||

ಎಂದರೆ ಆ ಓಲಗ ಶಾಲೆಯಲ್ಲಿ ಸೂಕ್ತ ರೀತಿಯಲ್ಲಿ ಕಸ್ತೂರಿ, ಜವಾದಿಗಳಿಂದ ಸಾರಣೆ, ಕಾರಣಿಗಳನ್ನು ಮಾಡಿ ಹೆಚ್ಚಿನ ಸುಂದರ ಮತ್ತು ಆಕರ್ಷಕ ಪರಿಸರವನ್ನು ನಿರ್ಮಿಸಲಾಗಿತ್ತು. ಅಷ್ಟಲ್ಲದೆ ಅಗರು, ಚಂದನ ಮುಂತಾದವುಗಳ ಸುಗಂಧ ಪರಿಮಳಯುಕ್ತ ಧೂಪದಿಂದ ವಾತಾವರಣವನ್ನು ಸಮೃದ್ಧಗೊಳಿಸಿದ್ದರು. ಆಗಲೇ ವಿವರಿಸಿರುವಂತೆ ಸುವಾಸನೆಯಿಂದ ಕೂಡಿದ, ಕರ್ಪೂರ ತೈಲದಿಂದ ಉರಿಯುತ್ತಿದ್ದ ದೀಪಲಕ್ಷ್ಮಿ ಪುತ್ಥಳಿಗಳ ಸಮೂಹವನ್ನು ಅಲ್ಲಿ ಸಜ್ಜುಗೊಳಿಸಲಾಗಿತ್ತು.

ಹೀಗೆ, ಸಮಸ್ತ ಸೌಭಾಗ್ಯದಿಂದೊಪ್ಪುತ್ತಿದ್ದ ಆ ಓಲಗ ಶಾಲೆಯು ಮೇಲೆ ವಿವರಿಸಿದಂತೆ ಅನೇಕ ವಿಷಯಾಂಶಗಳಲ್ಲಿ ಆಧುನಿಕ ಕಲಾಸಂಗ್ರಹಾಲಯವನ್ನು ಹೋಲುವಂತಿತ್ತೆಂದು ಪರಿಕಲ್ಪಿಸಿ ಹೇಳಬಹುದಲ್ಲವೇ? ಮತ್ತು ಆ ವೈಭವಯುಕ್ತ ಕಲಾತ್ಮಕ ವ್ಯವಸ್ಥೆಗಳನ್ನು

ವಿಜಯನಗರದ ಸಾಮ್ರಾಟರು ಹೊಂದಿದ್ದ ವೈಯಕ್ತಿಕ ಪ್ರತಿಷ್ಠೆ, ಅಭಿಲಾಷೆಗಳ ಜೊತೆಗೆ ಅವರ ಕುಶಲಕಲಾ ಪ್ರಜ್ಞೆ, ಸಾಂಸ್ಕೃತಿಕ ಅಭಿಮಾನ, ಅವುಗಳ ಪಾಲನೆ ಪೋಷಣಾಭಿವೃದ್ಧಿಗಳಲ್ಲಿ ಆಸಕ್ತಿ, ಮುಂತಾದ ಉದಾತ್ತ ಸುಸಂಸ್ಕೃತ, ವಿನೂತನ ಗುಣವಿಶೇಷಗಳು ಪ್ರದರ್ಶಿತವಾಗಿದ್ದುವೆಂದು ಹೇಳಬಹುದು.

**ಆಧಾರ ಸಾಹಿತ್ಯ**


೧. Devakunjari D., 1970, Hampi, Archaeological Survey or India, Delhi

೨. John M. Fritz, George Michell and M.S.Narayana Rao, 1984, The Royal Centre of Vijayangara – Preliminary Report, University of Melborne, Victoria

೩. Narasimhaiah B., 1992, Metropolis Vijayangara, Book India pub. Co., Delhi.

೪. George Michell, 1992, The Vijayangara; Courtly Style, Manohar, American Institute of India Studies, Delhi

೫. Vasundhara Filliozat (Ed.), 1999, Vijayangara, National Book Trust of India, NewDelhi

೬. ಎನ್.ಬಸವಾರಾಧ್ಯ, ಸಂ., ೧೯೭೫, ಬಾಹುಬಲಿ ಪಂಡಿತ ವಿರಚಿತ ಧರ್ಮನಾಥ ಪುರಾಣ, ಮೈಸೂರು ವಿಶ್ವವಿದ್ಯಾಲಯ.

೭. ಭೀಮಶೇನ ರಾವ್.ಬಿ. ಸಂ., ೧೯೭೩, ಲಕ್ಷ್ಮೀಶನ ಜೈಮಿನಿ ಭಾರತ, ಬೆಂಗಳೂರು.


**ಆಕರ**


ವಿಜಯನಗರ ಅಧ್ಯಯನ, ಸಂ.೬, ೨೦೦೨ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೬೬-೭೩


## ೩೨. ವಿಜಯನಗರ ಪಟ್ಟಣದಲ್ಲಿಯ ಆನೆಯ ಸಾಲೆ

ವಿಜಯನಗರ ಕಾಲದಲ್ಲಿ ಆನೆಗಳನ್ನು ಯುದ್ಧ, ದೇವಾಲಯಗಳ ಉತ್ಸವ, ರಾಜ ಪರಿವಾರದವರ ಉತ್ಸವ, ಬೇಟೆ ಮುಂತಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದು, ಅಂತಹ ಆನೆಗಳ ಸಾಲಿನ ಶಿಲ್ಪಗಳನ್ನು ರಾಮಚಂದ್ರ ದೇವಾಲಯದ ಗೋಡೆಯ ಮೇಲೆ ಕಾಣಬಹುದು. ದೇವಾಲಯದ ಮೆಟ್ಟಿಲುಗಳ ಬದಿಯಲ್ಲಿ ಮತ್ತು ಅರಮನೆ ಕಟ್ಟಡಗಳ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಕೆಲವೊಮ್ಮೆ ಆನೆಯ ಪೂರ್ಣ ಆಕಾರದ ಶಿಲ್ಪಗಳನ್ನು ಅಥವಾ ಆನೆಯ ಸೊಂಡಿಲು ಭಾಗದ ಶಿಲ್ಪಗಳನ್ನು ಕಾಣಬಹುದಾಗಿದೆ. ವಿವಿಧ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ಆನೆಗಳಲ್ಲಿ ಕೆಲವೊಂದು ವಿಂಗಡಣೆಗಳನ್ನು ಮಾಡಿರುವ ಅಂಶಗಳನ್ನು ಕಾಣಬಹುದು.

ವಿಜಯನಗರ ಪಟ್ಟಣದಲ್ಲಿ ಈಗಿರುವ ಆನೆ ಸಾಲೆಯ ಕಟ್ಟಡವನ್ನು ಆನೆಯ ಸಾಲೆ ಎಂದು ಒಪ್ಪಿಕೊಂಡರೂ ಸಹ ಅಲ್ಲಿರುವ ಸ್ಥಳಾವಕಾಶವೂ ಕೇವಲ ಹನ್ನೊಂದು ಆನೆಗಳಿಗೆ ಮಾತ್ರ ಇರುವುದನ್ನು ಕಾಣಬಹುದಾಗಿದೆ.[1] ಈ ಆನೆಗಳು ರಾಜಪರಿವಾರದವರಿಗೆ ಮೀಸಲಾಗಿದ್ದವೆಂದು ತೋರುತ್ತದೆ. ಆದರೆ ಉಳಿದ ಆಗಾಧ ಸಂಖ್ಯೆಯ ಸಾಮಾನ್ಯ ಆನೆಗಳಿಗಾಗಿ ಬೇರೊಂದು ಆನೆಯ ಸಾಲೆಯನ್ನು ನಿರ್ಮಿಸಿರಲೇಬೇಕು.[2] ಈ ದಿಸೆಯಲ್ಲಿ ಆನೆಯ ಸಾಲೆಯ ಸಂಶೋಧನೆಯೂ ಸಹ ಅಗತ್ಯವಾಗಿದೆ. ಒಂದು ಶಿಲಾಶಾಸನವು ಅಂತಹ ಒಂದು ಆನೆಯ ಸಾಲೆಯನ್ನು ಉಲ್ಲೇಖಿಸುತ್ತದೆ. ಆನೆಯ ಸಾಲೆಯ ಬಳಿಯ ನರಸಿಂಹ ದೇವರಿಗೆ ದಾನ ಕೊಟ್ಟದ್ದನ್ನು ಇದು ಉಲ್ಲೇಖಿಸುತ್ತದೆ. ಶಾಸನದ ಪಾಠ ಹೀಗಿದೆ.[3]

೧. ಶುಭಕೃತು ಸಂವಚರದ ಚೈತ್ರಶುದ್ಧ ೭ಲು

೨. ಶ್ರೀಮತು ಆನೆಯ ಸಾಲೆಯ ಬಳಿಯಣ ನಾರ

೩. ಸಿಂಹ್ಯ ದೇವರಿಗೆ ಕೋನಮರ್ಸಯನವರು

೪. ಕೊಟ್ಟ ಧರ್ಮಸಾಸನದ ಕ್ರಮವೆಂತೆಂದ
೫. ರೆ ಸ್ವಾಮಿ ನಮಗೆ ಪಾಲಿಸಿದ ವಿಜಯನಾಗ
೬. ರದ ತಳವಾರಿಕೆಗೆ ಸಲುವ ಕಂದಾಯ | (ಕೊ)
೭. ಟಟ್ ಮಾಲ ಕಾಣಿಕ್ಕೆ ಅಡಿಕಾಸು | ಕಂದಾಯವು
೮. ಸಹಾರಾಯರಿಗೆ ಧರ್ಮವಾಗಬೇಕದು ನಾವು

ಈ ಶಾಸನವು ಹಂಪೆಯ ಅವಶೇಷಗಳ ಮಧ್ಯದಲ್ಲಿರುವ ಟೂರಿಸ್ಟ್‌ಕ್ಯಾಂಟೀನ್‌ಕಟ್ಟಡದ ಹಿಂಭಾಗದಲ್ಲಿ ಸಿಕ್ಕಿದ್ದು ಪ್ರಸ್ತುತ ಕ್ಯಾಂಟೀನಿನ ಆವರಣದಲ್ಲಿದೆ. ಈ ಟೂರಿಸ್ಟ್ ಕ್ಯಾಂಟೀನ ಕಟ್ಟಡವು ಒಂದು ದೊಡ್ಡದಾದ ಕೋಟೆ ಗೋಡೆಯ ಆವರಣದಲ್ಲಿದ್ದು, ಕಮಲ ಮಹಲ್‌ಮತ್ತು ರಾಮಚಂದ್ರ ದೇವಾಲಯದ ಮಧ್ಯ ಭಾಗದಲ್ಲಿದೆ. ಈ ಆವರಣವು ಉತ್ತರ-ದಕ್ಷಿಣವಾಗಿ ೧೬೮ ಮೀಟರ್ ಗಳಷ್ಟು ಉದ್ದವಾಗಿಯೂ, ಪೂರ್ವ ಪಶ್ಚಿಮ ೧೧೫ ಮೀಟರ್ ಗಳಷ್ಟು ಅಗಲವಾಗಿಯೂ ಇದ್ದು, ದಕ್ಷಿಣ ಭಾಗದಲ್ಲಿ ಬಾಗಿಲು ಇದೆ. ಈ ಆವರಣದ ದಕ್ಷಿಣ ದಿಕ್ಕಿನಲ್ಲಿ ಸ್ವಲ್ಪ ಭಾಗದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಉತ್ಖನನ ಕೆಲಸವನ್ನು ಕೈಗೊಂಡಿದ್ದು ಮಹತ್ವಪೂರ್ಣವಾದ ಅಂಶಗಳು ಬೆಳಕಿಗೆ ಬಂದಿವೆ. ಉತ್ಖನನದ ವರದಿಯಲ್ಲಿ ಆನೆಯ ಅಸ್ಥಿ ಪಂಜರ ಹಾಗೂ ಮಾನವರ ೨೮ ಅಸ್ಥಿ ಪಂಜರದ ಭಾಗಗಳು, ದ್ವಾರ ಬಾಗಿಲೂ, ನೀರಿನ ತೊಟ್ಟಿಗಳು ಮತ್ತು ಇತರ ಕಲ್ಲಿನ ದೀಪಸ್ತಂಭ ಮುಂತಾದ ಅವಶೇಷಗಳ ವಿವರಗಳು ಇವೆ.

ಈ ದೊಡ್ಡದಾದ ಆವರಣವನ್ನು ಸಾಮಾನ್ಯ ಆನೆಗಳಿಗಾಗಿ ಉಪಯೋಗಿಸಿರುವ ಸಾಧ್ಯತೆಗಳಿವೆ. ನೂರಾರು ಆನೆಗಳ ನಿರ್ವಹಣೆಗಾಗಿ ಈ ಆವರಣವು ಉಪಯುಕ್ತವೆಂದು ತೋರುತ್ತದೆ. ಈ ಆವರಣದ ಬಾಗಿಲಿನಲ್ಲಿ ಚಿಕ್ಕದೊಂದು ದೇವಾಲಯವೂ ಇದ್ದಂತೆ ತೋರುತ್ತದೆ. ಕಾರಣ ಅಲ್ಲಿರುವ ಪೀಠ ಮತ್ತು ದ್ವಾರದಲ್ಲಿ ಬಿದ್ದಿರುವ ದೀಪ ಸ್ತಂಭವೂ, ದೀಪಸ್ತಂಭದ ಎರಡೂ ಬದಿಗಳಲ್ಲಿ ಆನೆಯ ಚಿತ್ರಗಳು, ಒಂದು ಕಡೆ ಹಂಸ ಪಕ್ಷಿಯ ಚಿತ್ರವೂ, ಮತ್ತೊಂದು ಕಡೆ ನಾಮದ ಚಿತ್ರಗಳೂ ಇವೆ. ದ್ವಾರದ ಬದಿಯಲ್ಲಿರುವ ನೀರಿನ ತೊಟ್ಟಿಯು ಒಂದು ಮೀಟರ್ ನಷ್ಟು ಸ್ಥಳಾವಕಾಶವಿದೆ. ಬಾಗಿಲಿನ ಮೂಲಕ ಹಾಯ್ದು ಬರುವ ನೀರಿನ ಸಂಗ್ರಹಣೆಗಾಗಿ ಇರುವ ನೀರಿನತೊಟ್ಟಿಯಿದ್ದು ಅದರ ಮೇಲೆ ಗಣೇಶನ ಶಿಲ್ಪವಿದೆ. ಅಲ್ಲದೆ ಪೂರ್ವ ದಿಕ್ಕಿನ ಆವರಣದ ಗೋಡೆಯಲ್ಲಿ ಕಲ್ಲಿನ ನೀರಿನ ತೊಟ್ಟಿಯೂ ಇತ್ತೀಚೆಗೆ ಬೆಳಕಿಗೆ ಬಂದಿರುತ್ತದೆ. ಈ ಆವರಣದಲ್ಲಿರುವ ಅವಶೇಷಗಳು ಕೆಳಗಿನಂತಿವೆ.

೧. **ಕಪ್ಪುಬೂದಿ ಮಣ್ಣು:** ಆನೆಗಳ ಮೇವಿಗಾಗಿ ಶೇಖರಿಸಲಾಗಿದ್ದ ಹುಲ್ಲು, ಬಣವೆಗಳು, ಸೊಪ್ಪು ಮತ್ತು ಆನೆಯ ತ್ಯಾಜ್ಯ ವಸ್ತು ಲದ್ದಿ ಮುಂತಾದ ವಸ್ತುಗಳು ವಿಜಯನಗರದ ಪತನದ ಕಾಲದಲ್ಲಿ ಬೆಂಕಿಯಿಂದ ಸುಟ್ಟು ಹೋಗಿದ್ದು, ಹೇರಳವಾಗಿ ಕಪ್ಪು ಬೂದಿಯು ಈ ಸ್ಥಳದಲ್ಲಿ ಶೇಖರಣೆಗೊಂಡಿರಬಹುದು.

೨. **ಆನೆಯ ಅಸ್ಥಿಪಂಜರ:** ಆವರಣದ ಬಾಗಿಲಿನ ಪಶ್ಚಿಮ ಭಾಗದಲ್ಲಿ ಆನೆಯ ಅಸ್ಥಿಪಂಜರವು ದೊರಕಿದ್ದು, ಸತ್ತುಹೋದ ಆನೆಯನ್ನು ಹೊರಗೆ ಸಾಗಿಸಲು ಸಾಧ್ಯವಾಗದೆ ಆವರಣದ ಮೂಲೆಯಲ್ಲಿ ಹೂಳಿದ್ದಾರೆ.

೩. **ಆನೆಯ ಸರಪಳಿ:** ಉತ್ಖನನ ಮಾಡಿದ ಸ್ಥಳದಲ್ಲಿ ಒಂದು ಮೀಟರ್‌ನಷ್ಟು ಉದ್ದದ ಸರಪಳಿಯು ದೊರೆತಿದ್ದು ಇದು ಆನೆಯ ಕೊರಳು ಅಥವಾ ಕಾಲಿಗೆ ಕಟ್ಟಲು ಉಪಯೋಗಿಸಿರಬಹುದಾಗಿದೆ.

೪. **ಗೋದಲಿಗಳು:** ಬಾಗಿಲಿನ ಪಕ್ಕದಲ್ಲಿ ನೀರಿನ ತೊಟ್ಟಿಯ ಸಮೀಪದಲ್ಲಿರುವ ಕಟ್ಟಡಗಳಲ್ಲಿ ಆನೆಗಳಿಗೆ ತಿನ್ನಲು ಹುಲ್ಲು ಸೊಪ್ಪುಗಳನ್ನು ಹಾಕುವ ಸ್ಥಳಗಳಾಗಿರಬಹುದಗಿದೆ. ೧.೫ಮೀ. ಅಗಲ, ೬.೦ಮೀ.ಗಳಷ್ಟು ಉದ್ದ ಮತ್ತು ೧ಮೀ.ನಷ್ಟು ಎತ್ತರವಿರುವ ಕಟ್ಟಡಗಳು ಮಾನವನ ವಾಸಕ್ಕಾಗಿ ಉಪಯೋಗವಾಗವುದಿಲ್ಲ.

೫. **ನೀರಿನ ಕಾಲುವೆ:** ಆನೆಗಳಿಗೆ ಕುಡಿಯಲು ಬೇಕಾಗುವ ನೀರನ್ನು ನೀರಿನ ಕಾಲುವೆಗಳಿಂದ ಹೊರಗಿನಿಂದ ಪೂರೈಕೆ ವ್ಯವಸ್ಥೆ ಮಾಡಿದ್ದು, ಆನೆಗಳ ನಿರ್ವಹಣೆಗೆ ಅತಿ ಹೆಚ್ಚು ನೀರು ಅವಶ್ಯಕವಿರುವುದರಿಂದ ಹೊರ ಭಾಗದಿಂದ ನೀರಿನ ಸರಬರಾಜು ವ್ಯವಸ್ಥೆ ಮಾಡಿರಬಹುದಾಗಿದೆ.

೬. **ನೀರಿನ ತೊಟ್ಟಿ:** ನೀರಿನ ತೊಟ್ಟಿಯು ೫ ಮೀಟರ್‌ಗಳಷ್ಟು ಉದ್ದವಾಗಿದ್ದು ಇನ್ನೂ ಸ್ವಲ್ಪ ಭಾಗವು ಭೂಮಿಯಲ್ಲಿ ಮುಚ್ಚಿರುತ್ತವೆ. ಇದು ಕೇವಲ ೧ ಮೀಟರ್‌ನಷ್ಟು ಆಳವಿದ್ದು, ಒಂದು ಮೆಟ್ಟಿಲು ಮಾತ್ರವಿದೆ. ಆನೆಗಳು ಇಲ್ಲಿ ಬಂದು ನೀರು ಕುಡಿದು ಹೋಗುವುದಕ್ಕಾಗಿ ನಿರ್ಮಿಸಿರಬಹುದಾಗಿದೆ.

೭. **ಮಾನವ ಆಸ್ಥಿಪಂಜರದ ಅವಶೇಷಗಳು:** ೨೮ ಮಾನವರ ಆಸ್ಥಿಪಂಜರಗಳ ಅವಶೇಷಗಳು ದೊರತಿದ್ದು, ಇವುಗಳು ೧೦ ರಿಂದ ೬೦ ವರ್ಷದ ವಯೋಮಾನದ ವ್ಯಕ್ತಿಗಳವಾಗಿವೆ ಎಂದು ನ್ಯಾನ್ಸಿ ಮಾಲ್‌ವಿಲ್ಲೆ ಇವರು ಮೂಲೆಗಳ ಅಧ್ಯಯನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಈ ಆನೆಗಳ ನಿರ್ವಹಣೆಗಾಗಿ ಇದ್ದಂತಹ ವ್ಯಕ್ತಿಗಳ ಆಸ್ಥಿಪಂಜರಗಳಾಗಿರಬಹದು. ಬಹಳಷ್ಟು ಸಂಖ್ಯೆಯ ಆನೆಗಳನ್ನು ನಿರ್ವಹಿಸಬೇಕಾದರೆ ಕೆಲಸಗಾರರು ಯಾವಾಗಲೂ ಆನೆಗಳ ಬಳಿಯಲ್ಲೇ ಇರಬೇಕಾಗುತ್ತದೆ.

೮. **ರಂಧ್ರಗಳಿರುವ ಕಲ್ಲಿನ ಕಂಬಗಳು:** ಮುಖ್ಯದ್ವಾರದ ಒಳಭಾಗದ ಎರಡೂ ಬದಿಗಳಲ್ಲಿ ಎರಡೆರಡು ರಂಧ್ರಗಳಿರುವ ಕಲ್ಲಿನ ಕಂಬಗಳಿವೆ ಇವುಗಳನ್ನು ಆನೆಗಳು ಹೊರಹೋಗದಂತೆ ಮರದ ಉದ್ದನೆಯ ಕಟ್ಟಿಗೆಗಳನ್ನು ಇರಿಸಲು ಉಪಯೋಗಿಸಿರಬಹುದಾಗಿದೆ. ಇದರ ಮಾದರಿಯಲ್ಲಿರುವ ಕಂಬಗಳು ಆವರಣದ ಉತ್ತರ ದಿಕ್ಕಿನ ಭಾಗದಲ್ಲಿಯೂ ಇವೆ. ಇವುಗಳಲ್ಲಿಯೂ ಇವೆ. ಇವುಗಳನ್ನು ಆನೆಗಳನ್ನು ಪಳಗಿಸಲು ಉಪಯೋಗ ಮಾಡಿರಬಹುದಾಗಿದೆ.

ಮೇಲಿನ ಈ ಎಲ್ಲಾ ಅಂಶಗಳನ್ನು ಕೂಲಂಕಶವಾಗಿ ಅಧ್ಯಯನ ಮಾಡಿದಾಗ ಮತ್ತು ಶಿಲಾಶಾಸನದಲ್ಲಿ ಉಲ್ಲೇಖಗೊಂಡ ವಿಷಯ, ಇಲ್ಲಿನ ಅವಶೇಷಗಳು, ಉತ್ಖನನ ಮಾಡಿದ ಸ್ಥಳದಲ್ಲಿ ದೊರೆತಿರುವ ಆನೆಯ ಆಸ್ಥಿ ಪಂಜರ, ಆನೆ ಕಟ್ಟುವ ಸರಪಳಿ, ನೀರಿನ ಕಾಲುವೆಗಳು, ನೀರಿನ ಶೇಖರಣೆಯ ತೊಟ್ಟಿಗಳು, ಗೋದಲಿಗಳು, ಕಟ್ಟಡದ ಅತೀ ಕಡಿಮೆ ಅವಶೇಷಗಳು, ಬೂದಿ, ದೊಡ್ಡದಾದ ಆವರಣಕ್ಕೆ ಒಂದು ಭಾಗದಲ್ಲಿ ಮಾತ್ರವಿರುವ ಬಾಗಿಲು, ದೀಪ ಸ್ತಂಭದ ಮೇಲೆ ಎರಡೂ ಬದಿಯಲ್ಲಿರುವ ಆನೆಯ ಚಿತ್ರಗಳು, ಸುತ್ತಲೂ ಇರುವ ಅರಮನೆಯ ಆವರಣದ ಅವಶೇಷಗಳಿಂದ ಪ್ರಸ್ತುತ ಕಟ್ಟಡವು ಆನೆ ಸಾಲೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಆವರಣದಲ್ಲಿ ಉಳಿದ ಭಾಗವನ್ನು ಪೂರ್ಣವಾಗಿ ಉತ್ಖನನ ಮಡಿದಲ್ಲಿ ಆನೆಯ ಸಾಲೆಗೆ ಬೇಕಾದ ಇನ್ನೂ ಹೆಚ್ಚಿನ ಮಹತ್ವವುಳ್ಳ ಅವಶೇಷಗಳು ದೊರೆತು ವಿಜಯನಗರದ ಇತಿಹಾಸದ ಹೆಚ್ಚಿನ ಬೆಳಕನ್ನು ಚೆಲ್ಲಬಹುದಾಗಿದೆ. ಈ ಆವರಣದ ಕೋಟೆ ಗೋಡೆಯ ಅರ್ಧದಷ್ಟು ಭಾಗವನ್ನು ಈಗಾಗಲೇ ಸಂರಕ್ಷಣೆ ಮಾಡಿದ್ದು ಉಳಿದ ಭಾಗವನ್ನು ಸಂರಕ್ಷಿಸಿದಲ್ಲಿ ಇದೊಂದು ಉತ್ತಮ ಕಾರ್ಯವಾಗುತ್ತದೆ.

**ಆಕರ**

ವಿಜಯನಗರ ಅಧ್ಯಯನ, ಸಂ.೫, ೨೦೦೦, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೩೭-೪೩

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] Longhurst A.H., 1982 (Reprint), Hampi Ruins described and illustrated, pp. 82-84,; Devakunjari 1983, Hampi, p. 40; Fritz John M., George Michell and M.S. Nagaraja Rao, The Royal Centre Vijayanagara: Preliminary Report, pp. 17, 18, 33

[2] Sewell Robert, 1982 (Reprint), A Forgotten Empire, pu. ೧೫೦. ೪೦೦೦ ಆನೆಗಳ ಬಲವಿದ್ದುದನ್ನು ನ್ಯೂನಿಚ್‌ತಿಳಿಸುತ್ತಾನೆ ಪು. ೧೧೮, ವರ್ತೆಮಾ ೪೦೦ ಆನೆಗಳಿದ್ದವೆಂದು ಹೇಳುತ್ತಾನೆ ಪು. ೩೭೩, ಅಚ್ಯುತರಾಯನ ಆಳ್ವಿಕೆಯಲ್ಲೂ ೪೦೦ ಆನೆಗಳಿದ್ದವು.

[3] Nagaraja Rao M.S., (Ed), 1985, Vijyayanagara: Proress of Research 1983-84, P.34, Ins. No. 29; Channabasappa S. Patil and Vinoda C. Patil (Eds.) 1992. Inscriptions at Vijayanagara (Hampi), No.331

## ೩೩. ವಿಜಯನಗರ ಪಟ್ಟಣದ ಪ್ರಮುಖರ ಮನೆಗಳು

ಹಂಪಿಯಲ್ಲಿ ನಡೆದಿರುವ ಉತ್ಖನನಗಳಲ್ಲಿ ವಿಜಯನಗರದ ಅರಸರ ಅರಮನೆಗಳು, ಶ್ರೇಷ್ಠಿಗಳ ಮನೆಗಳು, ಧಾರ್ಮಿಕ, ಲೌಕಿಕ ಹಾಗೂ ಬಹುಉಪಯೋಗಿ ಕಟ್ಟಡಗಳು ಬೆಳಕಿಗೆ ಬಂದಿವೆ. ಕೇಂದ್ರ ಸರ್ಕಾರದ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯವರು ಮತ್ತು ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದವರು ೧೯೭೯ ರಿಂದ ಸತತವಾಗಿ ಹಂಪಿಯ ಬಗ್ಗೆ ಕುರಿತು ಸಂಶೋಧನೆ ಮತ್ತು ಉತ್ಖನನಗಳನ್ನು ಕೈಗೊಳ್ಳುತ್ತಾ ಬಂದಿದ್ದಾರೆ. ಈ ಯೋಜನೆಯು ಇಂದಿಗೂ ಮುಂದುವರಿದಿರುವುದು ಗಮನಾರ್ಹ. ಮಧ್ಯಕಾಲೀನ ಯುಗದಲ್ಲಿ ವಿಜಯನಗರವು ಅತ್ಯಂತ ವೈಭವದಿಂದ ಕೂಡಿದ್ದ ಸಾಮ್ರಾಜ್ಯವಾಗಿದ್ದು ಇಡೀ ದೇಶದ ಗಮನವನ್ನು ತನ್ನಡೆ ಸೆಳೆದಿತ್ತು. ಇದರೊಂದಿಗೆ ವಿದೇಶಿಯರನ್ನು ಸಾಕಷ್ಟು ಆಕರ್ಷಿಸಿತ್ತು. ಪಯಾಸ್, ನ್ಯೂನಿಜ್, ಅಬ್ದು ರಜಾಕ್‌ರಂತಹವರು ಇಲ್ಲಿಗೆ ಭೇಟಿ ನೀಡಿ ವಿಜಯನಗರದ ವೈಭವ ಹಾಗೂ ಜನಜೀವನ ದಾಖಲಿಸಿರುವ ಕೆಲವು ಅಂಶಗಳು ಉತ್ಖನನಗಳಿಂದಲೂ ದೃಢಪಟ್ಟಿದೆ.

ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಆನೆಗೊಂದಿಯು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾಗಿತ್ತು. ಅಲ್ಲಿಂದ ಬಲದಂಡೆಯಲ್ಲಿರುವ ಪಂಪಾಕ್ಷೇತ್ರಕ್ಕೆ ವರ್ಗಾಯಿಸಲಾಯಿತು. ಸುಮಾರು ೨೫ ಚದುರ ಮೈಲಿಗಳಷ್ಟು ವಿಸ್ತಾರವಾಗಿರುವ ವಿಜಯನಗರ ಪಟ್ಟಣಕ್ಕೆ ಏಳು ಸುತ್ತುಗಳ ಕೋಟೆಯಿದ್ದ ಬಗೆಗೆ ಉಲ್ಲೇಖಗಳಿವೆ. ಆದರೆ ಇಂದು ಐದು ಸುತ್ತುಗಳು ಮಾತ್ರ ಉಳಿದುಬಂದಿದೆ. ವಿಜಯನಗರ ಕಾಲದ ಅವಶೇಷಗಳು ಕಮಲಾಪುರ ಗ್ರಾಮಕ್ಕೆ ಸಮೀಪದಲ್ಲಿದ್ದು ಅದನ್ನು ಅರಮನೆಯ ವಾಸಸ್ಥನ (citadel) ಎಂದು ಗುರುತಿಸಲಾಗಿದೆ. ಕಟ್ಟಡಗಳ ಅವಶೇಷಗಳಿರುವ ಸ್ಥಳವನ್ನು ಸ್ಥಳೀಯವಾಗಿ ಹಾಳುಪಟ್ಟಣವೆಂದು ಕರೆಯಲಾಗುತ್ತದೆ. ಈ ಪ್ರದೇಶದಲ್ಲಿಯೇ ಪುರಾತತ್ವ ಅನ್ವೇಷಣೆಯ ಮುಂದುವರಿಯುತ್ತಾ ಬಂದಿದೆ.


ಇಲ್ಲಿನ ಅವರ ಕಾಲದ ಕಟ್ಟಡಗಳಲ್ಲಿ ಕೆಲವು ಉತ್ತಮ ಸ್ಥಿತಿಯಲ್ಲಿದ್ದು, ಬಹುತೇಕ ಕಟ್ಟಡಗಳು ಹಲವಾರು ಕಾರಣಗಳಿಂದ ನಾಶವಾಗಿದೆ. ಕಟ್ಟಡಗಳು ಅವಶೇಷಗಳಲ್ಲಿ ಅಧಿಷ್ಠಾನ ಅಥವಾ ತಳಪಾಯದ ಭಾಗಗಳು ಮಾತ್ರವೇ ಇಂದು ಕಾಣಸಿಗುತ್ತವೆ. ಗೋಡೆಗಳು ಮತ್ತು ಸೂರಿನ ಭಾಗಗಳು ನಶಿಸಿವೆ. ಪಟ್ಟಣದ ದಕ್ಷಿಣ ಭಾಗವು ನಗರ ಭಾಗವಾಗಿದ್ದು, ಕೋಟೆ ಗೋಡೆಯಿಂದ ಸುತ್ತವರಿಯಲ್ಪಟ್ಟಿದೆ. ಇಲ್ಲಿಯ ಕಟ್ಟಡಗಳು ಧಾರ್ಮಿಕೇತರ ಕಟ್ಟಡಗಳಾಗಿವೆ. ಸುಮಾರು ೨೦೦ ಎಕರೆಗೂ ಅಧಿಕವಾದ ಸ್ಥಳದಲ್ಲಿ ಕಟ್ಟಡಗಳ ಅವಶೇಷಗಳು ಇಂದು ಕಾಣಸಿಗುತ್ತೆ. ಅವುಗಳನ್ನು ೧೯೮೦ರಿಂದಲೂ ಉತ್ಖನನ ಮಾಡಲಾಗುತ್ತಿದೆ. ಇಲ್ಲಿರುವ ಜಾಗಗಳನ್ನು ಹಲವಾರು ಹೆಸರುಗಳಿಂದ ಗುರುತಿಸಲಾಗುತ್ತದೆ. ವಿದ್ವಾಂಸರು ಮತ್ತು ಜನಪದರು ತಮ್ಮ ಅನುಕೂಲತೆಗಾಗಿ ಪಟ್ಟಣದ ವಿವಿಧ ಭಾಗಗಳನ್ನು ವಿವಿಧ ಹೆಸರುಗಳಿಂದ ಗುರುತಿಸುತ್ತಾರೆ. ಆ ಹೆಸರುಗಳು ಇಂತಿವೆ: ಟಂಕಶಾಲೆ (mint), ಡಣಾನಾಯಕನ ಆವರಣ, ಜನಾನ ಆವರಣ, ಗುಹಾಂತರ ದೇವಾಲಯದ ಸಮೀಪದ ಅಷ್ಟಕೋನಾಕೃತಿಯ ನೀರಿನ ಕಾರಂಜಿ, ಕೋಟೆಯ ಉತ್ತರ ಪ್ರವೇಶದ್ವಾರ, ಗಜಶಾಲೆ ಆವರಣ ಮತ್ತು ಶ್ರೇಷ್ಠರ ಮನೆ ಅಥವಾ ಅರಮನೆ ಪ್ರದೇಶಗಳು. ಟಂಕಸಾಲೆಯ ಬಳಿ ನೂರು ಕಂಬಗಳಿರುವ ಸಭಾಂಗಣ ಮತ್ತು ಮಧ್ಯದಲ್ಲಿ ನಾಲ್ಕು ಅರಮನೆಗಳ ಅವಶೇಷಗಳಿವೆ. ಪೂರ್ವಾಭಿಮುಖ ದೊಡ್ಡ ಅರಮನೆಯ ದಕ್ಷಿಣಕ್ಕೆ ನಾಲ್ಕು ಕಿರು ಅರಮನೆಗಳು ಪೂರ್ವ, ಉತ್ತರ ಮತ್ತು ಪಶ್ಚಿಮಾಭಿಮುಖವಾಗಿವೆ. ಇವುಗಳಲ್ಲಿ ಉತ್ತರ ಮತ್ತು ಪಶ್ಚಿಮಾಭಿಮುಖವಾಗಿರುವ ಅರಮನೆಗಳು ಸಾಕಷ್ಟು ನಶಿಸಿವೆ.

[1]
**ದಣಾಯಕನ ಆವರಣ**

ಈ ಆವರಣದಲ್ಲಿ ಉತ್ತರ ಮತ್ತು ಪಶ್ಚಿಮಾಭಿಮುಖಾಗಿರುವ ಎರಡು ಅರಮನೆಗಳಿವೆ. ಮೂರು ಅರಮನೆಗಳು ನೆಲದಲ್ಲಿ ಹುದುಗಿರುವುದು ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ಕಟ್ಟಡ ಸಂಕೀರ್ಣಕ್ಕೆ ಪ್ರವೇಶದ್ವರವಾಗಿದ್ದು, ಇದರಲ್ಲಿ ಸಭಾಂಗಣಗಳ ಶೃಂಖಲೆಯಿದೆ. ಇದರ ದಕ್ಷಿಣಕ್ಕೆ ಉತ್ತರ ದಿಕ್ಕಿಗೆ ಮುಖ ಮಾಡಿರುವ ಅರಮನೆಯೊಂದಿದೆ. ಇದರ ಸಮೀಪವೇ ಎರಡು ಅಂತಸ್ತಿನ ಅಷ್ಟಕೋನಾಕೃತಿಯ ರಚನೆಯಿದೆ. ಈ ಆವರಣದಲ್ಲಿಯೇ ಎರಡು ಕಾವಲುಗೋಪುರಗಳು ವಾಯವ್ಯ ಮತ್ತು ಆಗ್ನೇಯ ಮೂಲೆಗಳಲ್ಲಿವೆ.

**ಜನಾನ ಆವರಣ**

ಇದು ನಿರ್ಧಿಷ್ಟ ಆಕಾರದಲ್ಲಿ ಇಲ್ಲ. ವಾಯವ್ಯ ದಿಕ್ಕಿಗೆ ಒಂದು ದೊಡ್ಡ ಅರಮನೆಯ ತಳಪಾಯವು ದೊರಕಿದೆ. ಇದು ಈ ಆವರಣದಲ್ಲಿರುವ ದೊಡ್ಡ ಅರಮನೆಯಾಗಿದೆ. ಇದರ ದಕ್ಷಿಣಕ್ಕೆ ಒಂದು ಕೊಳ ಮತ್ತು ಅರಮನೆಯಿದೆ. ದೊಡ್ಡ ಅರಮನೆಯ ವಾಯವ್ಯಕ್ಕೆ ಆಯತಾಕಾರವಾಗಿರುವ ಒಂದು ಕಟ್ಟಡವಿದ್ದು ಅದಕ್ಕೆ ಕೋನಾಕೃತಿಯ ಸೂರಿದೆ. ಗಾಳಿ ಮತ್ತು ಬೆಳಕು ಬರಲು ಅನುಕೂಲವಾಗಿರುವಂತೆ ಗವಾಕ್ಷಿಗಳಿವೆ. ಈ ಆವರಣದಲ್ಲಿ ಎರಡು ಅಂತಸ್ಥಿನ ಕಮಲ್‌ಮಹಲಿದೆ.ಉತ್ತರ ದಿಕ್ಕಿನಲ್ಲಿ ಗುಮ್ಮಟವಿರುವ ಕಟ್ಟಡವು ಕಾವಲುಗಾರರ ಉಪಯೋಗಕ್ಕೆ ಇದ್ದಿರಬಹುದೆಂದು ಊಹಿಸಲಾಗಿದೆ.


ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

**ಶ್ರೇಷ್ಠರ ಅರಮನೆ ಆವರಣ**

ಈ ಆವರಣದಲ್ಲಿ ೧ಲಕ್ಕೂ ಅಧಿಕ ಶ್ರೇಷ್ಠರ ಅಥವಾ ಪ್ರಮುಖರ ಮನೆಗಳಿದ್ದು ಅವುಗಳಲ್ಲಿ ಕೆಲವನ್ನು ಉತ್ಖನನ ಮಾಡಲಾಗಿದೆ. ಡಣಾಯಕನ ಆವರಣದ ಉತ್ತರಕ್ಕಿರುವ ಭಾಗದಲ್ಲಿ ಈ ರಚನೆಗಳು ಕಂಡುಬಂದಿದ್ದು, ಆವರಣವು ಆಯತಾಕಾರವಾಗಿರುವ ಎತ್ತರದ ಗೋಡೆಯಿಂದ ಆವರಿಸಿದೆ. ಮುಖ್ಯ ಕಟ್ಟಡ ಮತ್ತು ಗೋಡೆಗಳ ನಡುವೆ ಒಂದು ಪ್ರವೇಶದ್ವಾರವಿದೆ.

**ಗುಹಾಂತರ ದೇವಾಲಯದ ಸಮೀಪವಿರುವ ಅರಮನೆ**

ಮಹಾನವಮಿ ದಿಬ್ಬದ ಪೂರ್ವಕ್ಕೆ ಇರುವ ಈ ಪ್ರದೇಶದಲ್ಲಿ ಪೂರ್ವಾಭಿಮುಖವಾಗಿರುವ ನಾಲ್ಕು ಅರಮನೆಗಳನ್ನು ಉತ್ಖನನ ಮಾಡಲಾಗಿದೆ. ಶ್ರೇಷ್ಠರ ಅರಮನೆಗಳನ್ನು ಹೋಲುತ್ತವೆ. ಇದರ ದಕ್ಷಿಣಕ್ಕೆ ಗುಹಾಂತರ ದೇವಾಲಯವಿದ್ದು, ಅದರ ಮುಂದೆ ಅಷ್ಟಕೋನಾಕೃತಿಯ ಸ್ನಾನದ ಮನೆಯಿದೆ. ಸಿಂಘಾರದ ಹೆಬ್ಬಾಗಿಲು ಮತ್ತು ಗಜಶಾಲೆಯ ಆಗ್ನೇಯದಲ್ಲಿ ಕಟ್ಟಡಗಳ ಕುರುಹುಗಳು ಕಂಡುಬಂದಿದೆ. ಇವುಗಳಲ್ಲಿ ಕೆಲವನ್ನು ಉತ್ಖನನಕ್ಕೆ ಒಳಪಡಿಸಿದರೆ, ಇನ್ನೂ ಕೆಲವನ್ನು ಅದರ ಮೇಲಿರುವ ಕಲ್ಲು ಮತ್ತು ಮಣ್ಣನ್ನು ತೆಗೆದು ಬೆಳಕಿಗೆ ತರಲಾಗಿದೆ. ಅರಮನೆಗಳು ಎಲ್ಲಾ ಪ್ರದೇಶಗಳಲ್ಲಿದ್ದರೂ ಶ್ರೇಷ್ಠರ ಅರಮನೆ ಆವರಣ ಮತ್ತು ಟಂಕಸಾಲೆಯ ಆವರಣದಲ್ಲಿರುವ ಅರಮನೆಗಳು ಮುಖ್ಯವಾಗಿದ್ದು, ಅದರ ರಚನಾ ಶೈಲಿಯ ಎಲ್ಲಾ ಅರಮನೆಗಳ ರಚನಾ ಶೈಲಿಯನ್ನು ಪ್ರತಿನಿಧಿಸುತ್ತವೆ.

ದಣಾಯಕನ ಆವರಣದ ಉತ್ತರಕ್ಕಿರುವ ಶ್ರೇಷ್ಠರ ಅರಮನೆಗಳ ಆವರಣದಲ್ಲಿನ ಮನೆಗಳಲ್ಲಿ ಯಾರು ವಾಸಿಸುತ್ತಿದ್ದರು ಎಂಬುದು ಇನ್ನೂ ಖಚಿತವಾಗಿಲ್ಲ. ಬಹುಶಃ ಈ ಮನೆಗಳನ್ನು ಶ್ರೇಷ್ಠರು ಅಥವಾ ಅತಿಥಿಗಳು ಬಳಸುತ್ತಿದ್ದರು ಎಂದು ಊಹಿಸಲಾಗಿದೆ. ಮಧ್ಯಕಾಲದಲ್ಲಿ ಧಾರ್ಮಿಕ ಕಟ್ಟಡಗಳು ದೊರೆಯುತ್ತವೆಯಾದರೂ ಧಾರ್ಮಿಕೇತರ ಕಟ್ಟಡಗಳಲ್ಲಿ ಬಳಸುವ ವಸ್ತುಗಳು ಬಹುಬೇಗ ನಶಿಸುವದರಿಂದ, ಅವುಗಳು ಇಂದು ನಮಗೆ ದೊರೆಯುತ್ತಿಲ್ಲ. ಈ ಕಟ್ಟಡಗಳಿಗೆ ಕಲ್ಲಿನ ತಳಪಾಯವಿದ್ದು, ಅವುಗಳು ಮಾತ್ರವೇ ನಮಗೆ ಲಭ್ಯವಿದೆ. ಸುಮಾರು ೧೩೦ ಎಕರೆಯಷ್ಟು ವಿಸ್ತಾರ ಆವರಣದಲ್ಲಿನ ಶ್ರೇಷ್ಠರ ಮನೆಗಳ ೧೭ ಅರಮನೆಗಳನ್ನು ಉತ್ಖನನ ಮಾಡಲಾಗಿದೆ. ಈ ಅರಮನೆಗಳನ್ನು ರಾಜರ ವಂಶಸ್ಥರು, ಶ್ರೇಷ್ಠರು ಅಥವಾ ಮುಖ್ಯ ಅತಿಥಿಗಳು ವಾಸಮಾಡಿರಬಹುದೆಂದು, ಅವುಗಳ ವಿಸ್ತಾರತೆ ಮತ್ತು ರಚನಾಶೈಲಿ ಆಧರಿಸಿ ತರ್ಕಿಸಲಾಗಿದೆ.


ಶ್ರೇಷ್ಠರ ಅರಮನೆಗಳಲ್ಲಿ ಎನ್‌ಎಂಕ್ಯೂ ೧, ೨, ಮತ್ತು ೪ ಇಲ್ಲಿ ವಿವರಿಸಲಾಗಿದೆ. ಅರಮನೆ ೧ ದೊಡ್ಡ ಆವರಣ ಗೋಡೆಯ ಒಳಭಾಗದಲ್ಲಿದೆ. ಇದನ್ನು ಕಂಡರಿಸಿದ ಕಲ್ಲುಗಳಿಂದ ಕಟ್ಟಲಾಗಿದೆ. ಮುಖ್ಯ ಕಟ್ಟಡವು ಉತ್ತರಾಭಿಮುಖವಾಗಿದ್ದು, ೬೪.೫ x ೫೬.೫ ಮೀಟರ್‌ಉದ್ದವಿದೆ. ಕಟ್ಟಡದ ಇಕ್ಕೆಲಗಳಲ್ಲಿಯೂ ಕಂಬಗಳಿರುವ ಸಭಾಂಗಣವಿದೆ. ಅದರ ವಾಯವ್ಯದಲ್ಲಿ ಒಂದು ಬಾವಿಯಿದೆ. ನೈರುತ್ಯಕ್ಕೆ ನೀರಿನ ಕೊಳವು ಸಹ ಇದೆ. ಹೊರಭಾಗದಲ್ಲಿರುವ ಗೋಡೆಯನ್ನು ಸುಂದರವಾಗಿ ರೂಪಿಸಲಾಗಿದ್ದು, ಕಲ್ಲುಗಳನ್ನು ಒಂದಕ್ಕೊಂದು ಹೊಂದಿಕೊಂಡಿರುವಂತೆ ಇಟ್ಟು ರಚಿಸಲಾಗಿದೆ. ಹೊರ ಮತ್ತು ಒಳಭಾಗದ ಕಲ್ಲುಗಳ ನಡುವೆ ಮಣ್ಣು ಮತ್ತು ಚಿಕ್ಕ ಕಲ್ಲುಗಳಿಂದ ತುಂಬಲಾಗಿದೆ. ಇದು ಗೋಡೆಯನ್ನು ಮತ್ತಷ್ಟು ಬಲಪಡಿಸುವಲ್ಲಿ ಸಹಕಾರಿಯಾಗಿದೆ. ಉತ್ತರದ ಆವರಣ ಗೋಡೆಗೆ ಸೇರಿದಂತೆ ೧೩ ಮೆಟ್ಟಿಲುಗಳಿವೆ. ಇದರ ಮೇಲಿನ ಮೂರು ಮೆಟ್ಟಿಲುಗಳ ಇಕ್ಕೆಲಗಳ ಯಾಳಿಯನ್ನು ಇರಿಸಿ ಸಿಂಗರಿಸಲಾಗಿದೆ. ಕೈಪಿಡಿ ಗೋಡೆಯ ಬದಲು ಯಾಳಿಯನ್ನು ಇಟ್ಟು ರಚಿಸಲಾಗಿದೆ. ಈ ಮೆಟ್ಟಿಲುಗಳು ಮನೆಯ ಒಳ ಮೊಗಸಾಲೆಗೆ ದಾರಿ ಮಾಡಿಕೊಡುತ್ತವೆ. ಮನೆಯ ಒಳ ಆವರಣ ಗೋಡೆಯು ಮೂರು ಕಡೆಗಳಲ್ಲಿ ಆವರಿಸಿದೆ. ಗೋಡೆಯ ಹೊರ ಭಾಗದಲ್ಲಿ ದೊಡ್ಡ ಕಲ್ಲುಗಳನ್ನು ಇಡಲಾಗಿದ್ದರೆ, ಒಳಭಾಗಕ್ಕೆ ಸಣ್ಣಕಲ್ಲುಗಳನ್ನು ಇರಿಸಿ ರಚಿಸಲಾಗಿದೆ.

ಮನೆಯ ಎರಡೂ ಕಡೆಗಳಲ್ಲಿ, ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ, ಕಂಬಗಳಿರುವ ಸಭಾಂಗಣಗಳಿವೆ. ಒಂದು ಸಭಾಂಗಣದಲ್ಲಿ ಕಂಬಗಳ ತಳಭಾಗಗಳು ಕಂಡುಬಂದಿದೆ. ಪೂರ್ವದ ಸಭಾಂಗಣವು ೨೦.೦ x ೧೧.೧೦ ಮೀಟರ್‌ಅಳತೆಯದ್ದಾಗಿದೆ. ಅದಕ್ಕೆ ಅಧಿಷ್ಠಾನ ಮತ್ತು ಮೆಟ್ಟಿಲುಗಳಿವೆ. ಅಧಿಷ್ಠಾನವಿರುವ ಪಶ್ಚಿಮದ ಸಭಾಂಗಣವು ೧೧.೧೦ x ೮.೪೫ ಮೀಟರ್‌ಅಳತೆಯಷ್ಟು ಇದೆ. ಅರಮನೆಯ ದಕ್ಷಿಣಕ್ಕೆ ತೆರೆದ ಸಭಾಂಗಣ ಅಥವ ಮೊಗಸಾಲೆಯಿದೆ. ದಕ್ಷಿಣ ಗೋಡೆಯ ಬಳಿ ನೀರಿನ ನಾಲೆಗಳು ಇದ್ದು ಅದರಲ್ಲಿ ಹಾಯುವ ನೀರು ನೈರುತ್ಯ ಭಾಗದಲ್ಲಿರುವ ದೊಡ್ಡ ತೊಟ್ಟಿಯೊಂದರಲ್ಲಿ ಸಂಗ್ರಹವಾಗುವಂತೆ ರೂಪಿಸಲಾಗಿದೆ.


ಮುಖ್ಯ ಅರಮನೆಯು ಉತ್ತರಾಭಿಮುಖವಾಗಿದ್ದು, ಅಲ್ಲಿಂದ ಪ್ರವೇಶಿಸಿದರೆ ಮನೆಯ ಮೊಗಸಾಲೆಗೆ ಬಂದು ನಿಲ್ಲಬಹುದು. ವಾಯವ್ಯಕ್ಕೆ ಕಾವಲುಗಾರರ ಕೊಠಡಿಯಿದ್ದು, ಅದರ ಸಮೀಪವೇ ಕಲ್ಲಿನಿಂದ ನಿರ್ಮಿಸಿದ ಚೌಕಾಕಾರದ ಬಾವಿಯಿದೆ. ಈ ಮನೆಗೆ ಎರಡು ಅಧಿಷ್ಠಾನಗಳು, ಒಂದರ ಮೇಲೊಂದು ನಿರ್ಮಿಸಲಾಗಿದೆ. ನೆಲಮಟ್ಟದ ಅಧಿಷ್ಠಾನದಲ್ಲಿ ಹೂವಿನ ಎಲೆ, ದಳಗಳು ಮತ್ತು ಕೀರ್ತಿಮುಖದ ಅಲಂಕರಣೆಗಳಿವೆ.

ಇದರ ಮೇಲಿರುವ ಅಧಿಷ್ಠಾನದಲ್ಲಿ ಸುಂದರ ಅಲಂಕರಣಗಳಿವೆ. ಮನೆಯ ಮೊದಲ ಹಂತವನ್ನು ಐದು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಇದರ ಪೂರ್ವ ಮತ್ತು ಪಶ್ಚಿಮಗಳ ಎರಡು ಕೊಠಡಿಗಳು ಎತ್ತರದ ಅಧಿಷ್ಠಾನ ಅಥವಾ ವೇದಿಕೆಯ ಮೇಲಿದೆ.

ಎರಡನೆಯ ಹಂತವನ್ನು ಯಾಳಿಗಳಿರುವ ಐದು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಯಾಳಿಯನ್ನು ಇಟ್ಟಿಗೆ ಮತ್ತು ಗಚ್ಚುಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಈ ಹಂತದ ಗೋಡೆಗಳಲ್ಲಿ ಕೂಡುಗಳಿವೆ. ಇಂತಹ ಕೂಡು ರಚನೆಗಳು ರಂಗಶಾಲೆಯ ಕಟ್ಟಡದಲ್ಲಿ ದೊರಕಿವೆ. ಮೂರನೆಯ ಹಂತವನ್ನು ಪೂರ್ವ ಮತ್ತು ಪಶ್ಚಿಮದ ಎರಡೂ ಕಡೆಗಳಲ್ಲಿರುವ ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಅಲಂಕರಣಗಳಿರುವ ಗೋಡೆಗಳಿವೆ. ಮೂರನೆಯ ಹಂತಕ್ಕೆ ಸಹ ಎಲೆಗಳ ಅಲಂಕರಣಗಳಿರುವ ಅಧಿಷ್ಠಾನವಿದೆ. ಇದರೊಂದಿಗೆ ಮಧ್ಯದ ಭಾಗದಲ್ಲಿ ಕೋಲಾಟ ಆಡುತ್ತಿರುವ ನರ್ತಕಿಯರ ಚಿತ್ರಣವಿದೆ. ಮೂರನೆಯ ಹಂತದಲ್ಲಿ ನಾಲ್ಕು ಕೊಠಡಿಗಳಿವೆ. ಮಧ್ಯ ಭಾಗದಲ್ಲಿರುವ ಆಯತಾಕಾರವಾಗಿರುವ ಕೊಠಡಿಯು ೫.೭೫ x ೩.೮೫ ಮೀ. ಉದ್ದಗಲವಿದೆ. ಈ ಕೊಠಡಿಯ ಸುತ್ತ ಒಂದು ಹಾದಿಯಿದೆ. ಇದರ ಪೂರ್ವ ಮತ್ತು ಪಶ್ಚಿಮಕ್ಕಿರುವ ಎರಡು ಕೊಠಡಿಗಳ ಅಳತೆಯು ೫.೮೫ x ೩.೯೦ ಮೀ. ದಕ್ಷಿಣಕ್ಕೆ ಇನ್ನೊಂದು ಕೊಠಡಿಯು ೫.೭೫ x ೧.೯೦ ಮೀ. ಅಳತೆಯದ್ದಾಗಿದೆ. ಈಶಾನ್ಯದ ಮೂಲೆಯಲ್ಲಿ ಸ್ನಾನದ ಗೃಹವಿದ್ದು ಇದರ ದಕ್ಷಿಣಕ್ಕೆ ಕೈತೊಳೆಯುವ ಸ್ಥಳವಿದೆ. ಮಧ್ಯ ಕೊಠಡಿಯ ಆಗ್ನೇಯ ಭಾಗದಲ್ಲಿ L ಆಕಾರದ ಕೊಠಡಿಯಿದ್ದು ಅದಕ್ಕೆ ಉತ್ತರ ಮತ್ತು ಪೂರ್ವಕ್ಕೆ ಪ್ರವೇಶ ದ್ವಾರಗಳಿವೆ.



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಅರಮನೆಯ ಗೋಡೆಗಳನ್ನು ಒರಟು ಕಲ್ಲುಗಳಿಂದ ರಚಿಸಿ, ಕಲಸುಮಣ್ಣಿನ ಲೇಪನವನ್ನು ನೀಡಲಾಗಿದೆ. ಇದರ ಮೇಲೆ ಗಾರೆಯ ಲೇಪನವಿರುವುದು ಕಂಡುಬಂದಿದೆ. ಮುಂದಿರುವ ಮೊಗಸಾಲೆಯಲ್ಲಿ ಮರದ ಕಂಬಗಳನ್ನು ನೆಡುವ ಕಂಬಗುಳಿ ಅಥವಾ ಕಟ್ಟೆಗಳಿವೆ. ಕಂಬಗಳಿರುವ ಸಭಾಂಗಣದಲ್ಲಿ ಗಾರೆಯ ಲೇಪನಗಳು ದೊರೆತಿದೆ. ಎರಡನೆಯ ಹಂತದಲ್ಲಿ ಅರೆಯುವ ಕಲ್ಲು, ಚೀನ ಮೂಲದ ಪೋರ್ ಸಲೀನ್ ಮೃತ್ಪಾತ್ರೆಗಳು ದೊರಕಿವೆ. ಈ ಮೃತ್ಪಾತ್ರೆಗಳು ವಿವಿಧ ಆಕಾರಗಳಿದ್ದು ಅಧಿಕವಾಗಿ ಬೋಗುಣಿಗಳು ದೊರಕಿವೆ. ಮೃತ್ಪಾತ್ರೆಯ ಒಳ ಮತ್ತು ಹೊರ ಭಾಗಗಳಲ್ಲಿ ಕೆಂಪು, ನೀಲಿ ಹಸಿರು ಬಣ್ಣಗಳಿಂದ ಚಿತ್ರಿಸಲಾಗಿದೆ. ಜೊತೆಗೆ ಜಾಮಿತಿ, ಹೂವುಗಳು ಮತ್ತು ಮಾನವರ ಚಿತ್ರಗಳನ್ನು ಕಾಣಬಹುದು.


**ಅರಮನೆ ೧**

ಈ ಅರಮನೆಯು (ಎಂಎನ್‌ಕ್ಯೂ ೨) ಪ್ರಸನ್ನ ವಿರೂಪಾಕ್ಷ ದೇವಾಲಯದ ಆಗ್ನೇಯಕ್ಕೆ ಇದೆ. ಪೂರ್ವಾಭಿಮುಖವಾಗಿರುವ ಈ ಅರಮನೆಯ ಅಧಿಷ್ಠಾನ ಭಾಗಗಳು ಮೂರು ಕಡೆಗಳಲ್ಲಿ ಕಂಡುಬರುತ್ತವೆ. ಅರಮನೆಗೆ ಆವರಣ ಗೋಡೆಯಿದೆ. ಇದು ನಿರ್ದಿಷ್ಟ ಆಕಾರದಲ್ಲಿ ಇಲ್ಲ. ೪೭.೮೦ x ೪೨ ಮೀಟರ್ ಅಳತೆಯ ಗೋಡೆಯನ್ನು ಕಂಡರಿಸಿದ (dressed) ಕಲ್ಲುಗಳಿಂದ ರಚಿಸಲಾಗಿದೆ. ಪೂರ್ವದ ಗೋಡೆಯು ಸಾಕಷ್ಟು ನಶಿಸಿದೆಯಾದರೂ ಪಶ್ಚಿಮ ಮತ್ತು ಉತ್ತರ ಗೋಡೆಗಳು ಅಷ್ಟಾಗಿ ಹಾಳಾಗಿಲ್ಲ. ಮುಖ್ಯ ಅರಮನೆಗೆ ಎರಡು ಅಧಿಷ್ಠಾನಗಳಿದ್ದು, ಅವುಗಳನ್ನು ಸುಣ್ಣದ ಗಾರೆಯಿಂದ ಲೇಪಿಸಲಾಗಿದೆ. ಕೆಳ ಅಧಿಷ್ಠಾನವು ನಾಲ್ಕು ಹಂತ ಅಥವಾ ಭಾಗಗಳನ್ನು ಹೊಂದಿದೆ. ಆ ಭಾಗಗಳಲ್ಲಿ ಸುಂದರವಾದ ಕೂಡು ಮತ್ತು ಅಷ್ಟಕೋನಾಕೃತಿಯ ಚಿತ್ರಣಗಳಿಂದ ಅಲಂಕರಿಸಲಾಗಿದೆ. ಮೇಲಿರುವ ಅಧಿಷ್ಠಾನದ ಭಾಗದಲ್ಲಿ ಯಾವ ಅಲಂಕರಣಗಳೂ ಇಲ್ಲ. ಅರಮನೆಯು ಪೂರ್ವಾಭಿಮುಖವಾಗಿದ್ದು, ಸುತ್ತಲಿನ ಮೂರು ಗೋಡೆಗಳ ಹೊರಭಾಗವನ್ನು ದೊಡ್ಡ ಕಲ್ಲುಗಳಿಂದ ಮತ್ತು ಒಳಭಾಗವನ್ನು ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕಟ್ಟಡವು ನಾಲ್ಕು ಹಂತಗಳಲ್ಲಿದ್ದು, ಅವುಗಳು ಒಂದರ ಮೇಲೆ ಇನ್ನೊಂದು ಬರುವಂತೆ ಕಟ್ಟಲಾಗಿದೆ. ಪ್ರತಿ ಹಂತವೂ ಒಂದು ಚಿಕ್ಕ ಅಧಿಷ್ಠಾನವನ್ನು ಹೊಂದಿದೆ. ನಾಲ್ಕನೆಯ ಹಂತವು ಮನೆಯ ಎತ್ತರದ ಭಾಗವಾಗಿದ್ದು ಪಶ್ಚಿಮಾಭಿಮುಖವಾಗಿದೆ. ನಾಲ್ಕೂ ಹಂತಗಳ ನೆಲಗಳನ್ನು ಗಾರೆಯಿಂದ ಲೇಪಿಸಲಾಗಿದೆ.

ಮನೆಯ ಮುಂಭಾಗದ ನೆಲಕ್ಕೆ ಗಾರೆಯ ದಪ್ಪ ಲೇಪನವಿದೆ. ಕೈಪಿಡಿಯ ಯಾಳಿ ಮೆಟ್ಟಿಲುಗಳಿಂದ ಮನೆಯನ್ನು ಪ್ರವೇಶಿಸಬಹುದು. ಇದರ ಪಶ್ಚಿಮಕ್ಕೆ ಎರಡನೆಯ ಹಂತದ ಭಾಗವಿದ್ದು ಇದು ಉತ್ತರ ಮತ್ತು ದಕ್ಷಿಣದ ಭಾಗಗಳಿಗೆ ವಿಸ್ತರಿಸುತ್ತದೆ. ಎರಡನೆಯ ಹಂತಕ್ಕೆ ಸಹ ಎರಡು ಮೆಟ್ಟಿಲುಗಳಿದ್ದು, ಆನೆಯ ಶಿಲ್ಪಗಳು ಅದರ ಇಕ್ಕೆಲಗಳಲ್ಲಿವೆ. ಈ ಆನೆಗಳು ಕಮಲಗಳನ್ನು ತಮ್ಮ ಸೊಂಡಿಲಿನಿಂದ ಎತ್ತುತ್ತಿರುವಂತೆ ರೂಪಿಸಲಾಗಿದೆ. ಆನೆಯ ಸೊಂಡಿಲು, ಬಹುಶಃ ಅಗ್ನಿಯ ಆಹುತಿಗೆ ಒಳಗಾಗಿರುವುದರಿಂದ ಮುರಿದಿದೆ. ಮೊದಲ ಹಂತದಲ್ಲಿರುವಂತೆ ಈ ಹಂತದಲ್ಲಿಯೂ ನಾಲ್ಕು ಕಂಬಗಳಿರುವ ಗುಳಿಗಳನ್ನು ಪೂರ್ವ ಮತ್ತು ಪಶ್ಚಿಮದ ನೆಲದಲ್ಲಿ ಕಾಣಬಹುದು. ಮೂರನೆಯ ಹಂತವನ್ನು ಪಶ್ಚಿಮದ ಕಡೆಯಿರುವ ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಇದಕ್ಕೆ ಸಹ ಯಾಳಿಯಿರುವ ಮೆಟ್ಟಿಲುಗಳಿವೆ. ಅಧಿಷ್ಠಾನ ಭಾಗದಲ್ಲಿ ಮೂರು ಹಂತಗಳು ಇದ್ದು, ಅವುಗಳಲ್ಲಿ ಅಷ್ಟಾಕೃತಿ ಮತ್ತು ಕಂಡರಿಸಿದ ಕೂಡು ಅಲಂಕರಣವಿದೆ. ಉತ್ತರ ಮತ್ತು ದಕ್ಷಿಣಗಳಲ್ಲಿ ಎರಡು ಕಿರಿದಾದ ಅಧಿಷ್ಠಾನಗಳಿವೆ.

ಪಶ್ಚಿಮದ ಮೂಲೆಯಲ್ಲಿ ಎರಡು ಮೆಟ್ಟಿಲುಗಳಿದ್ದು, ಅಲ್ಲಿಂದ ಮನೆಯ ನಾಲ್ಕನೆಯ ಹಂತವನ್ನು ತಲುಪಬಹುದು. ಈ ಮೆಟ್ಟಿಲುಗಳನ್ನು ಸಹ ಯಾಳಿ ಕೈಪಿಡಿಗೋಡೆಯಂತೆ ರೂಪಿಸಲಾಗಿದೆ. ಹಿಂದಿನ ಹಂತದಲ್ಲಿರುವಂತೆ ನೆಲದಲ್ಲಿ ಕಂಬದ ಪೀಠಗಳು ಮತ್ತು ಅಧಿಷ್ಠಾನದಲ್ಲಿ ಅಲಂಕರಣಗಳಿವೆ. ಆಯುತಾಕಾರವಾಗಿರುವ ಒಂದು ಕೊಠಡಿಯು ಮನೆಯ ತುತ್ತತುದಿಯ ಹಂತದಲ್ಲಿದೆ. ಈ ಕೊಠಡಿಯು ಪೂರ್ವಾಭಿಮುಖವಾಗಿದ್ದು ಅದರ ಸುತ್ತ ಹಾದಿಯಿದೆ. ಇಟ್ಟಿಗೆಯಿಂದ ನಿರ್ಮಿಸಿದ ಕಮಾನಿನ ಪ್ರವೇಶ ದ್ವಾರವು ಪೂರ್ವ ಮತ್ತು ಪಶ್ಚಿಮದ ಭಾಗಗಳಲ್ಲಿವೆ. ಸುಮಾರು ೧ x ೦.೭೧ ಮೀಟರ್ ಅಗಲದ ಗಾರೆಯ ಪೀಠವಿದೆ. ಬಹುಶಃ ಇದು ಮೇಲಿನ ಅಂತಸ್ತಿಗೆ ತೆರಳಲು ಬಳಸುವ ಮರದ ಏಣಿಯನ್ನು ಇಡಲು ರಚಿಸಿರುವ ಸಾಧ್ಯತೆಯಿದೆ. ಮರದ ದಿಬ್ಬಗಳು ಅಥವಾ ಪಟ್ಟಿಗಳನ್ನು ಇರಿಸಲು ಪೂರ್ವ, ಪಶ್ಚಿಮ, ಉತ್ತರ ಮತ್ತು

ದಕ್ಷಿಣ ಭಾಗದ ಗೋಡೆಗಳಲ್ಲಿ ಕೂಡುಗಳಿವೆ. ಇವು ಮೇಲಿನ ಅಂತಸ್ತನ್ನು ಹೊತ್ತಿರುವ ಸಾಧ್ಯತೆಗಳಿವೆ. ಮುಖ್ಯ ಅರಮನೆಯ, ದಕ್ಷಿಣ, ಪಶ್ಚಿಮ ಮತ್ತು ಉತ್ತರದ ಮೂರು ಕಡೆಗಳಲ್ಲಿ ಕೊಠಡಿಗಳ ಶೃಂಖಲೆಯಿದೆ. ಈ ಕೊಠಡಿಗಳ ನೆಲಗಳ ಹಾಸುಗಳನ್ನು ಗಾರೆಯಿಂದ ಲೇಪಿಸಲಾಗಿವೆ. ಇವುಗಳ ಮೇಲೆ ಎತ್ತರದಲ್ಲಿ ಒಂದು ಅಧಿಷ್ಠಾನವಿರುವ ಮೊಗಸಾಲೆಯಿದ್ದು ಅವುಗಳಲ್ಲಿ ಕಂಬಗಳನ್ನು ನೆಡುವ ಪೀಠಗಳ ಇದ್ದು, ಅದರಲ್ಲಿ ಕಬ್ಬಿಣದ ಕಂಬಗಳನ್ನು ಬಳಸಿರುವ ಕುರುಹುಗಳಿವೆ. ಇವುಗಳ ಪೂರ್ವ ಮತ್ತು ಉತ್ತರಕ್ಕಿರುವ ಕೊಠಡಿಗಳು ನೆಲದಲ್ಲಿ ಹುದುಗಿದ್ದು, ಸಾಕಷ್ಟು ನಾಶವಾಗಿದೆ. ದಕ್ಷಿಣ ಭಾಗದಲ್ಲಿರುವ ಕೊನೆಯಲ್ಲಿರುವ ಸಣ್ಣ ಕೊಠಡಿಯ, ಹಿಂದೆ ದೊಡ್ಡದೊಂದು ಕೊಠಡಿ ಮತ್ತು ಮೊಗಸಾಲೆಯಿದೆ. ದೊಡ್ಡ ಕೊಠಡಿಯ ನೆಲದಲ್ಲಿ ಮರದ ಅಡ್ಡಗೋಡೆಯಿದ್ದಿರುವ ಸಾಧ್ಯತೆಗಳಿವೆ. ಇದರಿಂದ ಕೊಠಡಿಯು ಮೂರು ಭಾಗವಾಗುತ್ತದೆ. ಅದರ ಪಕ್ಕಕ್ಕೆ ಇನ್ನೊಂದು ಕೊಠಡಿ ಮತ್ತು ಪ್ರವೇಶ ದ್ವಾರವಿದೆ. ಮುಂದೆ, ಪಶ್ಚಿಮಕ್ಕೆ ಒಂದು ಹಾದಿಯಿದೆ. ಆ ಸಾಲಿನಲ್ಲಿ ಮೂರು ಕೊಠಡಿಗಳಿವೆ. ಈ ಎಲ್ಲಾ ಕೊಠಡಿಗಳು ಮತ್ತು ಹಾದಿಯನ್ನು ಗಚ್ಚುಗಾರೆಯಿಂದ ನಿರ್ಮಿಸಲಾಗಿದೆ. ನೈರುತ್ಯಕ್ಕೆ ಎರಡು ನಾಲೆಗಳು ಪೂರ್ವದಿಂದ ಪಶ್ಚಿಮಕ್ಕೆ ಸಾಗಿದೆ. ಕೊಠಡಿಗಳಲ್ಲಿ ನೀರಿನ ನಾಲೆಗಳು ಇವೆ. ಬಹುಶಃ ಇದರ ಪಕ್ಕಕ್ಕೆ ಇರುವ ಕೊಠಡಿಯು ಸ್ನಾನದ ಮನೆಯಾಗಿರುವ ಸಾಧ್ಯತೆಗಳಿವೆ. ಈ ಸಂಕೀರ್ಣದಲ್ಲಿ ದೊರಕಿರುವ ಅವಶೇಷಗಳಿಂದ ಪ್ರಸ್ತುತ ಮನೆಯು ವಾಸಗೃಹವಾಗಿರುವ ಸಾಧ್ಯತೆಯನ್ನು ದೃಢಪಡಿಸುತ್ತದೆ.



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

**ಅರಮನೆ ೪**

ಈ ಮನೆಯು (ಎನ್‌ಎಂಕ್ಯೂ ೪) ಒಂದನೆಯ ಅರಮನೆಯ ವಾಯವ್ಯಕ್ಕಿದೆ. ಸದರಿ ಮನೆಯನ್ನು ಈ ಹಿಂದೆ ರಚಿಸಿರುವ ಮನೆಯ ಅವಶೇಷಗಳ ಮೇಲೆ ನಿರ್ಮಿಸಲಾಗಿದೆ. ಹಿಂದಿನ ಮನೆಯ ಅವಶೇಷಗಳು ಸಹ ಕಂಡುಬರುತ್ತವೆ. ಪ್ರಸ್ತುತ ಮನೆಯು ೧೫ x ೧೪.೧೦ ಮೀ. ಉದ್ದಗಲವಿದೆ. ಇದು ಕಲ್ಲುಗಳಿಂದ ಕಟ್ಟಿದ ಆವರಣದ ಗೋಡೆಯಲ್ಲಿದೆ. ಮನೆಯ ಮೊದಲ ಹಂತವನ್ನು ಮೂರು ಮೆಟ್ಟಿಲುಗಳ ಮೂಲಕ ಪ್ರವೇಶಿಸಿದರೆ ವರಾಂಡದ ಭಾಗವು ದೊರಕುತ್ತದೆ. ಮನೆಯ ಎರಡನೆಯ ಹಂತದ ಇಕ್ಕೆಲಗಳಲ್ಲಿ ಎರಡು ಕೊಠಡಿಗಳಿವೆ. ಇವುಗಳ ಮಧ್ಯೆ ಎತ್ತರದ ವೇದಿಕೆಯ ಭಾಗವಿದೆ. ತೆರೆದಿರುವ ಮೊಗಸಾಲೆಯನ್ನು ಪೂರ್ವದ ಆವರಣ ಗೋಡೆಯ ಕಡೆಯಿಂದ, ಪ್ರವೇಶ ಮಾಡಬಹುದು. ಉತ್ತರದ ಆವರಣ ಗೋಡೆಯ ಭಾಗದಿಂದ ಕೊಠಡಿ ಮತ್ತು ಶೌಚಾಲಯವನ್ನು ಪ್ರವೇಶಿಸಬಹುದು.

ಮನೆಯ ಮೊದಲ ಹಂತದಲ್ಲಿ ಸರಳ ಭಾಗಗಳಿರುವ ಅಧಿಷ್ಠಾನವಿದೆ. ಇದಕ್ಕೆ ಮೂರು ಮೆಟ್ಟಿಲುಗಳಿವೆ. ಇವುಗಳ ಮಧ್ಯೆ ಉತ್ತರ ಮತ್ತು ದಕ್ಷಿಣದಲ್ಲಿ ಸುಮಾರು ೦.೯೧ ಮೀಟರ್ ಎತ್ತರದಲ್ಲಿ ಮೊದಲ ನೆಲಗಟ್ಟು ಕಂಡುಬಂದಿದೆ. ಮೊದಲ ಹಂತದಲ್ಲಿ ಎರಡು ವರಾಂಡಗಳು


ಅಕ್ಕಪಕ್ಕದಲ್ಲಿವೆ. ನಾಲ್ಕು ದೊಡ್ಡ ಕಂಬದ ಪೀಠಗಳಿವೆ. ಇವುಗಳು ಸೂರನ್ನು ಆಧಾರಿಸುವಲ್ಲಿ ಸಹಕಾರಿಯಾಗಿದ್ದವು. ಈ ವರಾಂಡಗಳು ಎತ್ತರದ ಜಗತಿಯ ಮೇಲಿದ್ದು, ಜಗತಿಯನ್ನು ಸಹ ಗಾರೆಯಿಂದ ಲೇಪಿಸಲಾಗಿದೆ. ಕಬ್ಬಿಣವನ್ನು ಕಂಬಕ್ಕೆ ಬಳಸಿರುವ ಕುರುಹುಗಳಿವೆ. ಮನೆಯ ಎರಡನೆಯ ಹಂತದಲ್ಲಿನ ಅಧಿಷ್ಠಾನವು ಸರಳವಾಗಿದೆ. ಈ ಹಂತವನ್ನು ಎರಡು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಮೆಟ್ಟಿಲುಗಳು ಇಟ್ಟಿಗೆ, ಕಲ್ಲು, ಕಲಸುಮಣ್ಣು ಮತ್ತು ಗಾರೆಯ ಲೇಪನಗಳನ್ನು ಹೊಂದಿದೆ. ಎರಡನೆಯ ಹಂತದ ಸೂರನ್ನು ಪೀಠದಲ್ಲಿದ್ದ ಮರದ ಕಂಬಗಳು ಹೊತ್ತಿರುವ ಸಾಧ್ಯತೆಗಳಿವೆ. ಮರದ ಕಂಬಗಳ ಪೀಠಗಳು ಮುಂಭಾಗದಲ್ಲಿದ್ದು, ಉಳಿದವು ಗೋಡೆಗೆ ಅನಿಸಿದಂತೆ ಇವೆ. ಆರು ಮರದ ಕಂಬಗಳು ದಕ್ಷಿಣ, ಉತ್ತರ ಮತ್ತು ಪಶ್ಚಿಮದ ಗೋಡೆಗಳಲ್ಲಿದ್ದು, ಅಗ್ನಿಯ ದುರಂತದಿಂದ ನಶಿಸಿರುವುದು ಕಂಡುಬಂದಿದೆ. ಈ ಹಂತದಲ್ಲಿ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಕೊಠಡಿಗಳಿವೆ. (೨.೭೫ x ೩.೫೦ ಮೀಟರ್) ಕೊಠಡಿಯ ಗೋಡೆಗಳನ್ನು ಕಂಡರಿಸಿದ ಕಲ್ಲು ಮತ್ತು ಕಲಸುಮಣ್ಣಿನಿಂದ ಕಟ್ಟಲಾಗಿದೆ. ಹೊರಭಾಗದ ನೆಲವನ್ನು ಗಾರೆಯಿಂದ ಲೇಪಿಸಲಾಗಿದೆ. ಮನೆಗೆ ಅಲಂಕರಿಸಿದ ಪ್ರವೇಶ ದ್ವಾರವಿದ್ದ ಕುರುಹುಗಳಿವೆ. ದ್ವಾರದ ಮಧ್ಯಭಾಗದಲ್ಲಿ ಹೂವಿನ ಅಲಂಕರಣೆ, ಕೀರ್ತಿಮುಖ, ಯಾಳಿ ಮತ್ತು ಸಿಂಹದ ತಲೆಗಳು ತೊಲೆಯ ಭಾಗದಲ್ಲಿದ್ದುದು ಕಂಡುಬಂದಿದೆ. ದಕ್ಷಿಣ ಕೊಠಡಿಯಲ್ಲಿ ಆಯತಾಕಾರವಾಗಿರುವ, ೦.೬೦ x ೦.೪೨ ಮೀ. ಅಳತೆಯ ಒಂದು ಕ್ವಾರ್ಟ್ಜ್‌ಕಲ್ಲು ಕೊರಕಿದೆ. ಇಂತಹ ಉದಾಹರಣೆಗಳು ಎನ್‌ಎಂಕ್ಯೂ ೧ ಮತ್ತು ೧೨೮ ಅರಮನೆಗಳಲ್ಲಿ ದೊರಕಿವೆ.

ಎರಡನೆಯ ಹಂತದಲ್ಲಿನ ಮಧ್ಯಭಾಗದಲ್ಲಿ ಚೌಕಾಕಾರದ ವೇದಿಕೆಯಿದ್ದು, ಅದನ್ನು ನಾಲ್ಕು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಮೆಟ್ಟಿಲುಗಳನ್ನು ಇಟ್ಟಿಗೆ, ಕಲ್ಲು ಮತ್ತು ಸುಣ್ಣದ ಗಾರೆಯಿಂದ ನಿರ್ಮಿಸಲಾಗಿದೆ. ಈ ಹಂತದಲ್ಲಿ ಸುಮಾರು ೫.೩೫ ಚದುರ ಮೀ. ಭಾಗವು ಸುಣ್ಣದ ಗಾರೆಯಿಂದ ಲೇಪಿಸಲಾಗಿದೆ. ವೇದಿಕೆಯಲ್ಲಿದ್ದ ನಾಲ್ಕು ಮರದ ಕಂಬಗಳು ಸೂರನ್ನು ಹೊತ್ತಿರುವ ಸಾಧ್ಯತೆಯಿದೆ. ಕಂಬಗಳ ಪೀಠಗಳು ನಾಲ್ಕು ಮೂಲೆಗಳಲ್ಲಿ ಕಂಡುಬರುತ್ತವೆ.


ಈ ಮನೆಗಳಲ್ಲಿ ದೊರಕಿರುವ ಅವಶೇಷಗಳಲ್ಲಿ ಕಬ್ಬಿಣದ ಮೊಳೆಗಳು ಮತ್ತು ಗೂಟಗಳು ಮುಖ್ಯವಾಗಿದೆ. ಇವುಗಳು ಮರದ ತೊಲೆಯ ಭಾಗಗಳಲ್ಲಿ ಹುದುಗಿರುವಂತೆ ದೊರಕಿವೆ. ತಾಮ್ರದ ನಾಣ್ಯಗಳು, ಗಾಜಿನ ಬಳೆಗಳು, ವಿವಿಧ ಆಕಾರದ ಸುಡಾವೆ ಮಣ್ಣಿನ ಮಣಿಗಳು, ಬಳಪದ ಕಲ್ಲು, ಕವಡೆ, ಚೀನಾ ಮೂಲದ ಪೋರ್ ಸಲೀನ್‌ಮೃತ್ಪಾತ್ರೆಗಳು, ಎರಡು ಚಿನ್ನದ ಆಭರಣಗಳು, ಚಿನ್ನದ ತಗಡು, ಮೂಗುತಿ ಮತ್ತು ಇತರೆ ಅವಶೇಷಗಳು ದೊರಕಿವೆ. ಇಲ್ಲಿ ದೊರಕಿರುವ ಅವಶೇಷಗಳಿಂದ ಇದು ಸಾರ್ವಜನಿಕರ ಸಭಾಂಗಣವಾಗಿ ಅಥವಾ ಶ್ರೇಷ್ಠರ ಅತಿಥಿಗೃಹವಾಗಿ ಉಪಯೋಗಿಸಿರುವ ಸಾಧ್ಯತೆಗಳಿವೆ.

ಅರಮನೆಗಳ ನಿರ್ಮಾಣ ವೈಶಿಷ್ಟ್ಯವನ್ನು ಒಟ್ಟಾರೆಯಾಗಿ ಹೇಳುವುದಾದರೆ, ಬಹುತೇಕ ಎಲ್ಲಾ ಮನೆಗಳನ್ನು ಉತ್ತರ ಅಥವಾ ಪೂರ್ವಭಿಮುಖವಾಗಿ ನಿರ್ಮಿಸಲಾಗಿದೆ. ಇದಕ್ಕೆ ಅಪವಾದಗಳೆಂಬಂತೆ ಕೆಲವು ದಕ್ಷಿಣ ಮತ್ತು ಪಶ್ಚಿಮಾಭಿಮುಖವಾದ ಮನೆಗಳು ಸಹ ಇವೆ. ಎಲ್ಲಾ ಮನೆಗಳಿಗೂ ಮೆಟ್ಟಿಲುಗಳಿದ್ದು, ಮಧ್ಯದ ಹಂತವು 'U' ಆಕಾರದ ವೇದಿಕೆ ಭಾಗವನ್ನು ಹೊಂದಿದ್ದು, ಸರಳ ಅಥವಾ ಅಲಂಕರಣಗಳಿಂದ ಕೂಡಿದ ಒಂದು, ಎರಡೂ ಅಥವಾ ಮೂರು ಭಾಗಗಳಿರುವ ಅಧಿಷ್ಠಾನವಿದೆ. ಮನೆಗಳಿಗೆ ಆವರಣ ಗೋಡೆಗಳಿದ್ದು, ಗೋಡೆಯ ತುದಿಯು ಕಿರಿದಾಗುತ್ತ ಸಾಗುತ್ತದೆ. ಮನೆಗಳಿಗೆ ಗಾರೆಯ ಲೇಪನವಿರುವುದರಿಂದ ಇವುಗಳು ಸಾಕಷ್ಟು ಕಾಲದವರೆಗೆ ಬಳಕೆಯಲ್ಲಿದ್ದವೆಂದು ಹೇಳಬಹುದು. ಎರಡು ಅಥವಾ ಮೂರು ಹಂತಗಳಿರುವ ಮನೆಗಳಿಗೆ ಮೆಟ್ಟಿಲುಗಳ ಮೂಲಕ ಪ್ರವೇಶ ಮಾಡಬಹುದು. ಮೆಟ್ಟಿಲುಗಳಿಗೆ ಕೈಪಿಡಿ ಗೋಡೆಗಳ ಬದಲಿಗೆ ಯಾಳಿ, ಆನೆ ಅಥವಾ ಹೂವಿನ ಅಲಂಕರಣಗಳನ್ನು ಬಳಸಲಾಗಿದೆ. ಅದರ ಮೂಲಕ ಪ್ರವೇಶಿಸಿದಾಗ ತೆರೆದ ಮೊಗಸಾಲೆಯು ದೊರಕುತ್ತದೆ. ಇಲ್ಲಿಂದ ಮೇಲಿನ ಹಂತಗಳನ್ನು ಮೆಟ್ಟಿಲುಗಳ ಮೂಲಕವೇ ಪ್ರವೇಶ ಪಡೆಯಬೇಕು. ಎತ್ತರದ ಮನೆಯ ಭಾಗವು ಹಿಂಭಾಗದಲ್ಲಿದ್ದು ಅವುಗಳ ಸಾಮಾನ್ಯವಾಗಿ ಪಶ್ಚಿಮ ಅಥವಾ ದಕ್ಷಿಣದಲ್ಲಿರುತ್ತದೆ. ಈ ಎಲ್ಲಾ ಹಂತಗಳಲ್ಲಿ ಕಂಬಗಳಿದ್ದು, ಅವುಗಳು ಸೂರನ್ನು ಹೊತ್ತಿರುತ್ತಿದ್ದವು. ಮನೆಯ ಭಾಗದಿಂದ ಗಾಳಿ ಮತ್ತು ಬೆಳಕು ಹಾಯ್ದು ಬರುವಂತೆ ಅನುಕೂಲ ಮಾಡಲಾಗಿದೆ. ಮಧ್ಯದ ಕೊಠಡಿಯು ಎತ್ತರದ ಭಾಗದಲ್ಲಿದ್ದು ಅವುಗಳ ಪಕ್ಕದಲ್ಲಿ ಹಾದಿ ಮತ್ತು ಇನ್ನೂ ಕೆಲವು ಕೊಠಡಿಗಳು ಕಂಡುಬಂದಿವೆ.

ಇವುಗಳಲ್ಲಿ ಕೆಲವುಗಳನ್ನು ಶೌಚಾಲಯ ಮತ್ತು ಸ್ನಾನದ ಗೃಹಗಳಾಗಿ ಬಳಸಲಾಗಿದೆ. ಗಾರೆಯನ್ನು ಬಳಸಿರುವುದರಿಂದ ಈ ಮನೆಗಳು ವಾಸಕ್ಕಾಗಿ ರೂಪಿಸಲಾಗಿದೆ ಎಂದು ತಿಳಿಯಬರುತ್ತದೆ. ಎಲ್ಲ ಮನೆಗಳನ್ನು ಕಲ್ಲು, ಕಲಸುಮಣ್ಣು, ಇಟ್ಟಿಗೆಗಳಿಂದ ಕಟ್ಟಿ, ಸುಣ್ಣವನ್ನು ಲೇಪಿಸಲಾಗಿದೆ. ಮೆಟ್ಟಿಲು ಮತ್ತು ಗೂಡುಗಳನ್ನು ಇಟ್ಟಿಗೆ ಮತ್ತು ಕಲಸು ಮಣ್ಣಿನಿಂದ ರಚಿಸಲಾಗಿದೆ.





ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಕೆಲವು ಅರಮನೆಗಳ ಗೋಡೆಗಳಲ್ಲಿ ವರ್ಣ ಲೇಪನ ಅಥವಾ ವರ್ಣಚಿತ್ರಗಳಿವೆ. ಇದನ್ನು ಪೋರ್ಚುಗೀಸರ ಬರಹಗಳು ದೃಢಪಡಿಸಿವೆ. ಗಚ್ಚುಗಾರೆಯ ಮಾನವ ಮತ್ತ ಹೂವಿನ ಅಲಂಕರಣಗಳು ಇರುವುದರಿಂದ ಈ ಮನೆಗಳನ್ನು ಸಮಾಜದ ಪ್ರತಿಷ್ಠಿತರು ಉಪಯೋಗಿಸಿರಬಹುದೆಂದು ತೋರುತ್ತದೆ. ಮನೆಯ ವಿವಿಧ ಹಂತಗಳಲ್ಲಿ ಕಂಬಗಳಿಗಾಗಿ ಪೀಠಗಳು ಇವೆ. ಇವುಗಳಲ್ಲಿ ಮರದ ಕಂಬಗಳು ಇದ್ದಿರುವ ಸಾಧ್ಯತೆಗಳಿವೆ. ಅವುಗಳು ಸೂರನ್ನು ಆಧರಿಸಿರುತ್ತಿದ್ದವು. ಮನೆಯ ಹಾದಿಗಳು ಅಥವಾ ಪಡಸಾಲೆಯ ಹಾದಿಗಳಲ್ಲಿ ಕಂಬಗಳ ಸಾಲುಗಳು ಇದ್ದುದು ಕಂಡುಬರುತ್ತದೆ. ಮಹಡಿಯ ಮೆಟ್ಟಿಲುಗಳು ಇರುವುದರಿಂದ, ಮನೆಗಳು ಒಂದು ಅಥವಾ ಎರಡು ಅಂತಸ್ತುಗಳನ್ನು ಹೊಂದಿದ್ದವು ಎಂದು ಹೇಳಬಹುದು. ಮೇಲಿನ ಅಂತಸ್ತು ಸಾಮಾನ್ಯವಾಗಿ ಮರದಿಂದ ನಿರ್ಮಿಸಿರುವುದು ಕಂಡುಬಂದಿದೆ. ಅಂತಸ್ತಿನ ಮನೆಗಳು ಇದ್ದವೆಂಬುದು ಪಯಾಸ್‌ನ ವರ್ಣನೆಯಿಂದಲೂ ತಿಳಿದುಬರುತ್ತದೆ. ಮನೆಗಳ ಸೂರುಗಳು ದೇವಾಲಯದ ಗೋಪುರದಂತೆ ರಚಿಸಿರುವ ಸಾಧ್ಯತೆಗಳಿವೆಯೆಂದು, ಉತ್ಖನನದಲ್ಲಿ ದೊರಕಿರುವ ಅವಶೇಷಗಳಿಂದ ತರ್ಕಿಸಲಾಗಿದೆ. ಕೆಲವು ಶಿಲ್ಪಗಳಲ್ಲಿಯೂ ಮನೆಗಳಿಗೆ ಅಂತಹ ಸೂರು ಮತ್ತು ರಚನೆಗಳಿದ್ದವು ಎಂಬುದು ತಿಳಿಯಬರುತ್ತದೆ. ಈ ಮನೆಗಳು ಅಗ್ನಿಯ ದುರಂತದಿಂದ ನಾಶವಾಗಿರುವುದಕ್ಕೆ ಸಾಕ್ಷಿಯಾಗಿ ಉತ್ಖನನದಲ್ಲಿ ಇದ್ದಿಲು, ಬೂದಿ ಮತ್ತು ತ್ರುಟಿತ ಕಲ್ಲುಗಳು ದೊರಕಿವೆ.[2]

ಹಂಪೆಯ ಟಂಕಸಾಲೆಯ ಪ್ರದೇಶವು ಮುಖ್ಯವಾಗಿದ್ದು ಇಲ್ಲಿ ರಾಜರ ನಿವಾಸಗಳು, ಸಭಾಂಗಣಗಳು ಹಾಗೂ ಕೆಲವು ಧಾರ್ಮಿಕ ಕಟ್ಟಡಗಳು ಉತ್ಖನನದಲ್ಲಿ ಶೋಧವಾಗಿವೆ. ಈ ರಾಜ ಸಭಾಂಗಣ ಪ್ರದೇಶದ ಹಿಂಭಾಗದಲ್ಲಿ ಉತ್ಖನನ ಕೈಕೊಂಡಾಗ, ಅಧಿಷ್ಠಾನಯುಕ್ತ ಕಲ್ಲಿನ ಕಟ್ಟಡಗಳ ಅವಶೇಷಗಳು ಬೆಳಕಿಗೆ ಬಂದವು. ಗೋಡೆಯ ಭಾಗಗಳು ದೊರಕಿಲ್ಲ. ಈ ಕಟ್ಟಡವನ್ನು ಮೂರು ಹಂತಗಳಲ್ಲಿ ನಿರ್ಮಿಸಿದ ಪುರಾವೆಗಳಿವೆ. ಮೊದಲ ಎರಡು ಹಂತಗಳನ್ನು ಸುಂದರವಾಗಿ ಕೆತ್ತಿದ ಅಥವಾ ನಯಗೊಳಿಸಿದ ಕಲ್ಲುಗಳನ್ನು ಬಳಸಿ ಕಟ್ಟಲಾಗಿದ್ದು, ಅವುಗಳನ್ನು ಆಶ್‌ಲ್ಯಾರ್ (Ashlar) ಪದ್ಧತಿಯಿಂತೆ ಕಲಾತ್ಮಕವಾಗಿ ರಚಿಸಲಾಗಿದೆ. ಈ ಕಟ್ಟಡದ ಪಕ್ಕದಲ್ಲಿ ಒಂದು ಚಿಕ್ಕ ದ್ವಾರವಿರುವ ಕಂಬಗಳುಳ್ಳ ಒಂದು ಗುಡಿಯ ರಚನೆಯು ಬೆಳಕಿಗೆ ಬಂದವು. ಒಂದು ಚಿಕ್ಕ ಕೊಳವನ್ನು (tank) ಮತ್ತು ಪತ್ತೆ ಹಚ್ಚಲಾಯಿತು. ಸುತ್ತಲೂ ಮಂಟಪದಂತಿರುವ (cloister) ಒಂದು ರಚನೆಯನ್ನು ಉತ್ಖನನದಲ್ಲಿ ಪತ್ತೆ ಹಚ್ಚಲಾಯಿತು. ಇದು ರಂಗಮಹಲ್ ಎಂದು ಹೆಸರಿಸಿರುವ ಸ್ಥಳದ ಸಮೀಪ ದೊರಕಿದೆ. ಇದರ ಒಂದು ಪಕ್ಕದಲ್ಲಿ ಕಂಬಗಳು ಇರುವ ಮೊಗಸಾಲೆಯು ಕಂಡುಬಂದಿದೆ. ಇಲ್ಲಿರುವ ಒಂದು ಕೋಣೆಯಲ್ಲಿ ಕಕ್ಕಸು ಗುಂಡಿಯನ್ನು ಮತ್ತು ಅದರ ನಾಲೆಯನ್ನು ಪತ್ತೆಹಚ್ಚಲಾಗಿದೆ. ರಂಗಮಹಲಿನ ಪೂರ್ಣ ಸ್ವರೂಪವನ್ನು ಉತ್ಖನನದಲ್ಲಿ ಬಹಿರಂಗಗೊಳಿಸಲಾಯಿತು. ಚಿನ್ನದ ಉಂಗುರು, ಸೂಡಾವೆ ಮಣ್ಣಿನ ಮುದ್ರೆಯು ಈ ಉತ್ಖನನದಲ್ಲಿ ದೊರಕಿದ ಪ್ರಮುಖದ ಅವಶೇಷಗಳಾಗಿವೆ.[3]



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ರಾಜ ಸಭಾಂಗಣ (King’s Audience Hall) ಮತ್ತು ಮಹಾನವಮಿ ದಿಬ್ಬದ ಬಳಿಯ ಟಂಕಸಾಲೆಯ ಪ್ರದೇಶದಲ್ಲಿನ ಉತ್ಖನನದಲ್ಲಿ ಮೂರು ಕಟ್ಟಡಗಳನ್ನು ಬೆಳಕಿಗೆ ತರಲಾಯಿತು. ಮೂರು ಹಂತಗಳಲ್ಲಿ ರಚಿಸಿರುವ ಕಟ್ಟಡದ ಮೊದಲ ಎರಡು ಹಂತಗಳಲ್ಲಿ ಕಂಡರಿಸಿದ ಕಲ್ಲು ಮತ್ತು ಮೂರನೆಯ ಹಂತದಲ್ಲಿ ಒರಟು ಕಲ್ಲುಗಳನ್ನು ಬಳಸಿ ಅದರ ಮೇಲೆ ಸುಣ್ಣದ ಗಾರೆಯ ದಪ್ಪ ಲೇಪನವನ್ನು ಮಾಡಲಾಗಿದೆ. ಕಂಬಗಳುಳ್ಳ ಆಯತಾಕಾರದ ಒಂದು ಉದ್ದನೆಯ ಸಭಾಂಗಣವನ್ನು ಬೆಳಕಿಗೆ ತರಲಾಯಿತು. ಇದರ ಉದ್ದವು ಪೂರ್ವ ಪಶ್ಚಿಮವಾಗಿ ೪೦ ಮೀಟರ್ ಉತ್ತರ ದಕ್ಷಿಣವಾಗಿ ೩೧.೩೫ ಅಗಲ, ಮಹಾನವಮಿ ಮತ್ತು ಭೂಗತ ಕೊಠಡಿಯ ಬಳಿಯ ಈ ಕಟ್ಟಡಕ್ಕೆ ಮೆಟ್ಟಿಲುಗಳು ಇರುವುದು ಕಂಡುಬಂದಿದೆ. ಈ ಸಭಾಂಗಣವನ್ನು ಮಧ್ಯದಿಂದ ಬೇರ್ಪಡಿಸದಂತೆ ಎರಡು ಭಾಗಗಳು ಇದ್ದು ಪ್ರತಿಯೊಂದು ಭಾಗದಲ್ಲಿಯೂ ನಾಲ್ಕು ಕೋಣೆಗಳು ಇವೆ. ಸಭಾಂಗಣಕ್ಕೆ ಗಚ್ಚುಗಾರೆಯ ನೆಲ ಸಮೀಪವೇ ಕಂಬಗಳಿರುವ ಸಭಾಂಗಣಗಳ ಸಾಲುಗಳು ಬೆಳಕಿಗೆ ಬಂದವು. ಇವುಗಳಿಗೆ ಅಲಂಕೃತ ಅಧಿಷ್ಠಾನ ಭಾಗಗಳು ಇವೆ. ಎರಡು ಸಭಾಂಗಣಗಳ ನಡುವೆ ನಡೆದಾಡುವ ಹಾದಿಯಿದೆ. ಇವುಗಳಲ್ಲಿ ಮೂರು

ಕಟ್ಟಡಗಳ ಅಳತೆಗಳು ಹೀಗಿವೆ. ಉತ್ತರ-ದಕ್ಷಿಣವಾಗಿ ೨೧ ಮೀಟರ್, ಉದ್ದ, ೧೬.೫೦ ಅಗಲ ಮತ್ತು ೨.೫ ಮೀಟರ್ ಗಳ ಸಮಾನಂತರದಲ್ಲಿ ಕಂಬಗುಳಿಗಳು ಇವೆ. ಎರಡನೆಯ ಕಟ್ಟಡವು ಪೂರ್ವ-ಪಶ್ಚಿಮವಾಗಿ ೧೬.೩೦ ಮೀ. ಉತ್ತರ-ದಕ್ಷಿಣವಾಗಿ ೬.೮೨ ಮೀ. ಇದ್ದರೆ ಮೂರನೆಯದು ಪೂರ್ವ-ಪಶ್ಚಿಮವಾಗಿ ೩೯.೭೦ ಮೀ. ಮತ್ತು ಉತ್ತರ ದಕ್ಷಿಣವಾಗಿ ೧೯.೧೦ ಮೀ.ಳತೆಯಷ್ಟಿದೆ. ಈ ಕಟ್ಟಡಗಳ ಸಮೀಪವೇ, ಮುಚ್ಚಿದ ನಾಲೆ ಅಥವಾ ಚರಂಡಿಯನ್ನು ಬೆಳಕಿಗೆ ತರಲಾಯಿತು. ಚರಂಡಿಯ ಉದ್ದವು ೭೦ ಸೆಂ.ಮೀ. ಮತ್ತು ೫೦ ಸೆಂ.ಮೀ. ಅಗಲ ಇನ್ನೊಂದು ಚರಂಡಿಯನ್ನು ಸಹ ಈ ಕಟ್ಟಡಗಳ ಸಂಕೀರ್ಣದಲ್ಲಿ ಪತ್ತೆಹಚ್ಚಲಾಗಿದೆ. ಇವುಗಳನ್ನು ವಿವಿಧ ಹಂತ ಮತ್ತು ಕಾಲಘಟ್ಟಗಳಲ್ಲಿ ರಚಿಸಲಾಗಿದೆ. ಟಂಕಸಾಲೆ ಪ್ರದೇಶದಲ್ಲಿಯೇ ಹಲವು ಪೆರಿಸ್ಟೈಲಾರ್ (peristylar) ಆವರಣವಿರುವ ದೊಡ್ಡ ನಿರ್ಮಿತಿಗಳ ಅಧಿಷ್ಠಾನ ಭಾಗಗಳನ್ನು ಹೊರತೆಗೆಯಲಾಗಿದೆ. ಈ ನಿರ್ಮಿತಿಗಳ ಕೊಠಡಿಗಳು ವಿವಿಧ ಅಳತೆಯಲ್ಲಿದ್ದುದು ಕಂಡುಬಂದಿದೆ. ಇಲ್ಲಿ ಸುಡಾವೆ ಮಣ್ಣಿನ ಕೊಳವೆಗಳು ಪತ್ತೆಯಾದವು. ಮೆಟ್ಟಿಲುಗಳಿರುವ ಬಾವಿ, ಇಂಗುಗುಳಿಗಳು (sockpit) ಸಹ ಉತ್ಖನನದಲ್ಲಿ ಪತ್ತೆಯಾಗಿದೆ.[4]

ಈ ಪ್ರದೇಶದಲ್ಲಿ ಒಂದು ದೊಡ್ಡ ಮನೆಯನ್ನು ಉತ್ಖನನದಲ್ಲಿ ಬೆಳಕಿಗೆ ತರಲಾಯಿತು. ರಾಜ ಸಭಾಂಗಣದ ಸಮೀಪದಲ್ಲಿರುವ ಈ ಮನೆಯಲ್ಲಿ ಆರು ಕೊಠಡಿಗಳು ಇದ್ದು, ಇದನ್ನು ರಾಜರು ತಮ್ಮ ಖಾಸಗಿ ಸಭೆಗಳಿಗೆ ಉಪಯೋಗಿಸುತ್ತಿದ್ದರು ಎಂದು ಊಹಿಸಲಾಗಿದೆ. ಮನೆಯು ರಾಜ ಸಭಾಂಗಣದ ಸಮೀಪವಿರುವದರಿಂದ ಇದು ಖಾಸಗಿ ಸಭಾಂಗಣವೆಂದು ಅಭಿಪ್ರಾಯಪಡಲಾಗಿದೆ. ಒರಟು ಕಲ್ಲುಗಳಿಂದ ಕಟ್ಟಿರುವ ಗೋಡೆಯು ೦.೬೦ ಮೀ. ಎತ್ತರ ಮತ್ತು ೦.೬೦-೦.೯೦ ಮೀ. ನಷ್ಟು ದಪ್ಪವಿದೆ. ಗೋಡೆಯ ಹೊರ ಮತ್ತು ಒಳಭಾಗಗಳನ್ನು ಕಲಸುಮಣ್ಣಿನಿಂದ ಲೇಪಿಸಿರುವುದು ಗಮನಾರ್ಹ. ಇದರ ಸಮೀಪವೇ ಮೆಟ್ಟಿಲುಗಳಿರುವ ಕೊಳವನ್ನು ಸಹ ಉತ್ಖನನ ಮಾಡಲಾಯಿತು. [5] ೭.೨೫ x ೭.೨೫ ಮೀ. ಉದ್ದಗಲದ ಇನ್ನೊಂದು ಕೊಳವನ್ನು ಬೆಳಕಿಗೆ ತರಲಾಯಿತು. ಇದನ್ನು ಕಣಶಿಲೆಯ ಮೇಲೆ ನಿರ್ಮಿಸಿದೆ. ಮೇಲಿನಿಂದ ಕೆಳಭಾಗದವರೆಗಿನ ಮೆಟ್ಟಿಲುಗಳ ಅಳತೆಯು ಕ್ರಮವಾಗಿ ಕಿರಿದಾಗುವಂತೆ ರಚಿಸಿರುವುದು ಗಮನಾರ್ಹ. ಕೊಳದ ಕೆಲಭಾಗಕ್ಕೆ ಇಟ್ಟಿಗೆಗಳನ್ನು ಬಳಸಲಾಗಿದೆ. ಅದರ ಅಳತೆಯ ೨೨ x ೧೮ x ೬ ಸೆ.ಮೀ. ಕೊಳದ ಕೆಳಭಾಗದ ಮೆಟ್ಟಿಲುಗಳಿಗೆ ದಪ್ಪವಾದ ಗಚ್ಚುಗಾರೆಯ ಲೇಪನವಿದೆ. ಕೊಳಗಳಿಗೆ ನೀರು ಹರಿಯಲು ಕಾಲುವೆಗಳನ್ನು ಸಹ ನಿರ್ಮಿಸಲಾಗಿದೆ. [6]

**ಆಕರ**


ಪುರಾತತ್ತ್ವ ಸಂಪುಟ ಯೋಜನೆ, ಸಂ. ೩, (ಆದಿ ಇತಿಹಾಸ ಮತ್ತು ಮಧ್ಯಕಾಲೀನ ಯುಗ), ೨೦೦೧, ಕನ್ನಡ ವಿಶ್ವವಿದ್ಯಾಲಯ ಹಂಪಿ.


[1]*ವಿಜಯನಗರ ಪ್ರೊಗ್ರೆಸ್‌ರಿಪೋರ್ಟ್*, ೧೯೭೯ ರಿಂದ ೧೯೮೩ ರವರೆಗೆ,*ಇಂಡಿಯನ್‌ಆರ್ಕಿಯಾಲಜಿ ಎ ರಿವ್ಯೂ*, ೧೯೭೮-೭೯ ರಿಂದ ೧೯೮೯-೯೦ ರವರೆಗೆ.

[2] ಅದೇ,*ವಿಜಯನಗರ ಪ್ರೋಗ್ರಸ್‌ರಿಪೋರ್ಟ್*, ೧೯೭೯ ರಿಂದ ೧೯೮೩ ರವರೆಗೆ.

[3] ಐಎಆರ್, ೧೯೭೯-೮೦ ಮತ್ತು ೧೯೮೦-೮೧, ಪು. ೩೩ ಮತ್ತು ೨೬-೨೭

[4] ಅದೇ, ೧೯೮೦-೮೧ ಮತ್ತು ೧೯೮೧-೮೨, ಪು. ೨೭ ಮತ್ತು ೨೫-೨೬

[5] ಅದೇ, ೧೯೮೧-೮೨, ಪು. ೨೫-೨೬

[6] ಅದೇ, ಪು. ೧೯೮೨-೯೩, ಪು. ೩೨-೩೫

# ೩೪. ಹಂಪೆಯ ಬಜಾರುಗಳು (೧)

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆಯು ದಕ್ಷಿಣ ಭಾರತ ಪ್ರಮುಖ ಪಟ್ಟಣ ಮತ್ತು ವ್ಯಾಪಾರ ಕೇಂದ್ರವಾಗಿದ್ದಿತು. ವಿಜಯನಗರ ಅರಸರು ಆರ್ಥಿಕ ಚಟುವಟಿಕೆಗಳನ್ನು ಅಪಾರವಾಗಿ ಪ್ರೋತ್ಸಾಹಿಸಿದರು. ಹಂಪೆಯ ಪ್ರಮುಖ ದೇವಾಲಯಗಳ ಮುಂಭಾಗದ ಸಾಲುಮಂಟಪಗಳು ವ್ಯಾಪಾರದ ತಾಣಗಳಾಗಿದ್ದವು. ಒಂದು ವಿಧದಲ್ಲಿ ವಿಜಯನಗರದ ಆರ್ಥಿಕ ಚಟುವಟಿಕೆಗಳನ್ನೂ ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳನ್ನೂ ಹಿಡಿತದಲ್ಲಿರಿಸಿಕೊಂಡಿದ್ದವೆನ್ನಬಹುದು.

ಸಾಲುಮಂಟಪಗಳಿಂದ ಕೂಡಿದ ಸ್ಥಳವನ್ನು ಇಲ್ಲಿ 'ಬಜಾರ' ಎಂದು ಸಂಬೋಧಿಸಲಾಗಿದೆ. ಬಜಾರ್ ಪದವು ಪರ್ಶಿಯನ್‌ಮೂಲದ್ದು ಹಾಗೂ ವ್ಯಾಪಾರ ಸಂಪರ್ಕಗಳ ಮೂಲಕ ನಮ್ಮಲ್ಲಿ ಬಳಕೆಗೆ ಬಂದಿದೆನ್ನುವುದು ಸ್ಪಷ್ಟ. ಇದು ಹಂಪೆಯ ರಥಬೀದಿ ಅಥವಾ ಮುಖ್ಯಬೀದಿಗಳಿಗೆ ಸಂಬಂಧಿಸಿದಂತೆ ಈಚಿನ ವರುಷಗಳಲ್ಲಿ ಕನ್ನಡದೊಡನೆ ಬಳಸಲ್ಪಡುತ್ತಿದೆ. ಸ್ಥಳೀಯವಾಗಿಯೂ ಬಜಾರ ಪದವು ಹೆಚ್ಚು ಪ್ರಚಲಿತವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಅವಧಿಯಲ್ಲಿ ಬಳಕೆಯಿದ್ದ'ಪೇಟೆ' ಅಥವಾ 'ಅಂಗಡಿ ಬೀದಿ' ಗಳಿಗೆ ಸಂವಾದಿಯಾಗಿ ಪ್ರಸ್ತುತ ಅಧ್ಯಯನದಲ್ಲಿ ಬಜಾರ್ ಪದವನ್ನೇ ಪ್ರಯೋಗಿಸಲಾಗಿದೆ.

ಹಂಪೆಯಲ್ಲಿ ಮುಖ್ಯವೆನಿಸಿದ್ದ ಏಳು ಬಜಾರುಗಳನ್ನು ಕುರಿತು ಅಧ್ಯಯನಿಸಲಾಗಿದ್ದು, ಉಳಿದ ಕೆಲವನ್ನು ಕುರಿತು ಆನುಷಂಗಿಕವಾಗಿ ಚರ್ಚಿಸಲಾಗಿದೆ. ವಿಜಯನಗರ ಕಾಲದ ಬಜಾರುಗಳ ಬೆಳವಣಿಗೆ, ಅವುಗಳ ಪಾತ್ರ, ಮಹತ್ವಗಳನ್ನು ಕಂಡುಕೊಳ್ಳುವುದರೊಡನೆ ಬಜಾರ್‌ಗಳಿಗೂ, ದೇವಾಲಯಗಳಿಗೂ, ಅರಸರಿಗೂ ಇದ್ದ ನಿಕಟ ಸಂಬಂಧಗಳನ್ನು ಗುರುತಿಸಲು ಪ್ರಯತ್ನಿಸಿದೆ.

ಬಜಾರುಗಳು ಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದರಿಂದ, ಸಾಮ್ರಾಜ್ಯದಲ್ಲಿ ಹೇರಳವಾಗಿ ಉತ್ಪಾದನೆಗೊಳ್ಳುತ್ತಿದ್ದ ವಸ್ತುಗಳನ್ನು ಇಲ್ಲಿ ಮಾರಾಟ ಮಾಡಲಾಗುತ್ತಿತ್ತು. ಬೆಲೆಬಾಳುವ ಮುತ್ತು, ರತ್ನ, ವಜ್ರ, ಹರಳು ಮುಂತಾದುವನ್ನು ಬೀದಿಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರೆಂದು ವಿದೇಶಿ ಪ್ರವಾಸಿಗರ ವರದಿಗಳಿಂದಲೂ, ಸಮಕಾಲೀನ ಸಾಹಿತ್ಯ ಕೃತಿಗಳಿಂದಲೂ ತಿಳಿದುಬರುವುದು. ಇಂತಹ ಅಮೂಲ್ಯ ಸರಕನ್ನು ವಿಪುಲವಾಗಿ, ನಿರಾತಂಕವಾಗಿ, ಸಾರ್ವಜನಿಕವಾಗಿ ಮಾರಾಟಮಾಡುತ್ತಿದ್ದುದನ್ನು ಗಮನಿಸಿದರೆ, ಅವುಗಳು ದೊರೆಯುತ್ತಿದ್ದ ಮೂಲಗಳು ಸಾಮ್ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದುವೆಂದೂ, ಈ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದವರ ಸಂಖ್ಯೆಯೂ ಹೆಚ್ಚಿದ್ದಿತೆಂದೂ ಭಾವಿಸಲು ಅಸ್ಪದವಾಗುತ್ತದೆ.

ವಿಜಯನಗರವು ಅನೇಕ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಇಟ್ಟುಕೊಂಡಿದ್ದಿತು. ಅಂತಹ ದೇಶಗಳಿಂದ ಸರಕನ್ನು ಆಮದು ಮಾಡಿಕೊಳ್ಳುತ್ತಿದ್ದುದಲ್ಲದೆ, ಇಲ್ಲಿಂದಲೂ ವಿವಿಧ ಪದಾರ್ಥಗಳನ್ನು ರಫ್ತು ಮಾಡಲಾಗುತ್ತಿದ್ದಿತು. ವಿದೇಶಿ ವ್ಯಾಪಾರಕ್ಕೆ ವಿಜಯನಗರದ ಅರಸರು ನೀಡಿದ ಪ್ರೋತ್ಸಾಹದಿಂದಾಗಿ ಹಂಪೆಯ ಬಜಾರುಗಳು ವಿಜಯನಗರ ಸಾಮ್ರಾಜ್ಯದ ಔನ್ನತ್ಯಕ್ಕೆ ಸಹಾಯಕವಾಗಿದ್ದವು. ಹಾಗೆಯೇ, ಸಾಮ್ರಾಜ್ಯದ ಅವನತಿಗೂ ಇವುಗಳೇ ಕಾರಣವಾಗಿದ್ದವು ಎಂಬುದೂ ಕುತೂಹಲಕಾರಿ ಅಂಶ.

ಪ್ರಸ್ತುತ ಅಧ್ಯಯನದ ಇನ್ನೊಂದು ಉದ್ದೇಶವೇನೆಂದರೆ, ವಿಜಯನಗರದ ಬಗೆಗೆ ಇದುವರೆಗೆ ವಿಪುಲ ಸಂಶೋಧನೆ ನಡೆದು ಹಲವಾರು ಗ್ರಂಥಗಳು ಹೊರಬಂದಿದ್ದರೂ ಹಂಪೆಯ ಬಜಾರುಗಳು ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ, ಹಂಪಿಯ ಪ್ರಮುಖ ಬಜಾರುಗಳನ್ನು ಗುರುತಿಸಿ, ವಿಜಯನಗರದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವು ನಿರ್ವಹಿಸಿದ ಪಾತ್ರವನ್ನು ಚಿತ್ರಿಸಲು ಪ್ರಯತ್ನಿಸಿದೆ; ಇದೊಂದು ಸ್ಥೂಲ ಚಿತ್ರವೆನ್ನಬಹುದು.

ಧಾರ್ಮಿಕವಾಗಿ, ವಿಜಯನಗರದ ರಾಜಧಾನಿಯಲ್ಲಿ ಆಯಾಯ ಧರ್ಮದ ಜನರಿಗೆ ಪ್ರತ್ಯೇಕ ಸ್ಥಳ ಮೀಸಲಿದ್ದಿತು. ಶೈವ, ವೈಷ್ಣವ ಪಂಥದ ಪ್ರಾಬಲ್ಯ ಹೆಚ್ಚಿದ್ದಿತು. ಆದರೂ ಈ ಪಂಥಗಳವರೊಡನೆ ಜೈನ ಮತ್ತು ಮುಸ್ಲಿಮರೂ ವಾಸವಾಗಿದ್ದರು. ಮುಸ್ಲಿಮರ ಪ್ರತ್ಯೇಕ ಸ್ಥಳವನ್ನು ಗೋರಿ ಕೆಳಗಣ ಗ್ರಾಮವೆಂದೇ ಶಾಸನಗಳು ಹೇಳಿವೆ. ಮುಸ್ಲಿಮರಿಗೂ ಸಮಾನ ಸ್ಥಾನ-ಮಾನಗಳನ್ನು ನೀಡಲಾಗಿದ್ದಿತು.

ಆರ್ಥಿಕವಾಗಿ, ವಿಜಯನಗರ ಸಾಮ್ರಾಜ್ಯವು ಅತ್ಯುನ್ನತ ಸ್ಥಿತಿಯನ್ನು ತಲುಪಿದ್ದಿತು. ವ್ಯವಸಾಯಕ್ಕೆ ಪ್ರೋತ್ಸಾಹವಿದ್ದು, ಕೆರೆ-ಕಾಲುವೆಗಳನ್ನು ಕಟ್ಟಿಸಿದ್ದರೆಂಬುದಕ್ಕೆ ಹಂಪೆಯ ತುರ್ತುಕಾಲುವೆ ಮುಖ್ಯ ಉದಾಹರಣೆ. ವ್ಯವಸಾಯದಿಂದ ರಾಜ್ಯಕ್ಕೆ ಯಥೇಚ್ಚ ಆದಾಯವಿದ್ದಿತು. ದವಸ-ಧಾನ್ಯ, ಹಣ್ಣು-ಹಂಪಲು, ಹೂ-ತರಕಾರಿ ಮುಂತಾದುವನ್ನು ಮಾರಾಟ ಮಾಡಲು ಬಜಾರುಗಳು ಸಹಾಯಕವಾಗಿದ್ದವು. ವ್ಯಾಪಾರಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದರಿಂದ ಬಜಾರುಗಳು ಪ್ರಗತಿ ಹೊಂದಿದ್ದವು. ಅರಸರು ತಮಗೆ ಅವಶ್ಯಕವಾಗಿದ್ದ ಯುದ್ಧ ಸಾಮಗ್ರಿಗಳನ್ನು ವಿದೇಶಿಯರಿಂದ ಕೊಳ್ಳುತ್ತಿದ್ದರು. ರಜಾಕ್, “ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ”[1] ಎಂದು ಹೇಳಿರುವುದು, ವಿಜಯನಗರ ವಿದೇಶಗಳೊಂದಿಗೆ ಹೊಂದಿದ್ದ ವ್ಯಾಪಾರ ಸಂಬಂಧ ಕುರಿತು ಪರೋಕ್ಷ ಸೂಚನೆ ನೀಡುತ್ತದೆ. ವಿದೇಶಗಳಿಂದ ಮುಖ್ಯವಾಗಿ ಆನೆ, ಕುದುರೆ ಮುಂತಾದವುವನ್ನು ಆಮದು ಮಾಡಿಕೊಳ್ಳುತ್ತಿದ್ದರೆಂದು ಪ್ರವಾಸಿಗರು ಹೇಳಿದ್ದಾರೆ. ಇವು ಸೈನ್ಯದ ಬಲವರ್ಧನೆಗೆ ಅಗತ್ಯವೆನಿಸಿದ್ದವು. ಅರಬ್, ಪರ್ಶಿಯಾ, ಯುರೋಪ್‌ಗಳಿಂದ ಕುದುರೆಗಳನ್ನೂ ಶ್ರೀಲಂಕಾ ಮತ್ತಿತರ ರಾಜ್ಯಗಳಿಂದ ಆನೆ, ಇತ್ಯಾದಿಯನ್ನೂ ತರಸುತ್ತಿದ್ದರು. ಸಾಮ್ರಾಜ್ಯದ ಹಣಕಾಸು ವ್ಯವಸ್ಥೆ, ತೆರಿಗೆ, ಇತ್ಯಾದಿಗಳನ್ನು ನಿರ್ಧರಿಸುವ ಕಾರ್ಯವನ್ನು ಈ ಬಜಾರುಗಳೇ ನಿರ್ವಹಿಸುತ್ತಿದ್ದವೆನ್ನಬಹುದು.

ಸಾಂಸ್ಕೃತಿಕವಾಗಿಯೂ ಬಜಾರುಗಳು ಬಹುಮುಖ್ಯ ಪಾತ್ರ ನಿರ್ವಹಿಸುತ್ತಿದ್ದವು. ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪೆಯು ಹಬ್ಬ ಹರಿದಿನ, ಉತ್ಸವ, ಮೆರವಣಿಗೆ, ರಥೋತ್ಸವಗಳ ಜೊತೆಗೆ ಶಿಕ್ಷಣ, ಸಂಗೀತ, ನೃತ್ಯ, ಕಲೆ ವಾಸ್ತುಶಿಲ್ಪ ಮುಂತಾದವುಗಳ ಆಗರವಾಗಿದ್ದು, ಬಜಾರುಗಳೇ ಇವುಗಳ ಕೇಂದ್ರವೆನಿಸಿದ್ದವು.

ಹಂಪೆಯಲ್ಲಿ ಏಳು ಪ್ರಮುಖ ಬಜಾರುಗಳನ್ನು ಕಾಣಬಹುದು:

ಅ. ವಿರೂಪಾಕ್ಷ ಬಜಾರು

ಆ. ಪಾನ್‌ಸುಪಾರಿ ಬಜಾರು

ಇ. ವಿಠ್ಠಲ ಬಜಾರು

ಈ. ಕೃಷ್ಣ ಬಜಾರು

ಉ. ಅಚ್ಯುತ ಬಜಾರು

ಊ. ಮಾಲ್ಯವಂತ ಬಜಾರು

ಋ. ವರದರಾಜಮ್ಮನ ಬಜಾರು

ವಿಜಯನಗರದ ರಾಜಧಾನಿ ಹಂಪೆಯಲ್ಲಿರುವ ಈ ಬಜಾರುಗಳಲ್ಲದೆ, ಉಳಿದೆಡೆಗಳಲ್ಲಿಯೂ ಇಂತಹ ಕೆಲವು ಬಜಾರುಗಳಿದ್ದುದನ್ನು ಗುರುತಿಸಬಹುದು. ಇಂದಿನ ಹೊಸಪೇಟೆ ಮತ್ತು ನಾಗೇನಹಳ್ಳಿಗಳೂ ಬಜಾರುಗಳೆನಿಸಿದ್ದವು. ಹಂಪೆಯ ಬಜಾರುಗಳು ವಿಜಯನಗರ ಸಾಮ್ರಾಜ್ಯ ಬೆಳವಣಿಗೆ ಹೊಂದಲು ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆಯಲು ಹೇಗೆ ನೆರವಾಗಿದ್ದವೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಗಮನಿಸಲಾಗಿದೆ.

**ಅ. ವಿರೂಪಾಕ್ಷ ಬಜಾರು**

ಹಂಪೆಯ ಪ್ರಾಚೀನ ಮತ್ತು ಪ್ರಮುಖ ದೇವಾಲಯವೆಂದರೆ ಪಂಪಾವಿರೂಪಾಕ್ಷನದು. ಇದು ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾಕ್ಷೇತ್ರಗಳಲ್ಲೊಂದು, ತುಂಗಭದ್ರಾ ನದಿಯ ಬಲ ದಂಡೆಯ ಮೇಲಿದೆ. ಈ ದೇವಾಲಯದ ದಕ್ಷಿಣಕ್ಕೆ ಹೇಮಕೂಟ, ಪೂರ್ವಕ್ಕೆ ಮತಂಗ ಪರ್ವತಗಳಿವೆ. ಸುತ್ತಲೂ ಪ್ರಕೃತಿದತ್ತವಾಗಿ ನಿರ್ಮಾಣವಾದ ಭದ್ರ ಕೋಟೆಗಳಂತೆ ಈ ಪರ್ವತಗಳು ನಿಂತಿವೆ. ತುಂಗಭದ್ರಾ ನದಿಯು ದೇವಾಲಯಕ್ಕೆ ರಕ್ಷಣೆ ಒದಗಿಸಿದೆ.

ವಿರೂಪಾಕ್ಷ ದೇವಾಲಯ ಕ್ರಿ.ಶ. ೬೮೯ರ ವಿನಯಾದಿತ್ಯನ ಕಾಲದಲ್ಲಿತ್ತೆಂದು ಶಾಸನವೊಂದು ತಿಳಿಸುವುದು.[2] ಅದರಲ್ಲಿ ಹಂಪೆಯನ್ನು ‘ಪಂಪಾತೀರ್ಥ’ ಎಂದು ಕರೆದಿದೆ. ಇದರಿಂದ ಚಾಳುಕ್ಯರ ಕಾಲದಲ್ಲಿ ಈ ದೇವಾಲಯದ ನಿರ್ಮಾಣವಾಗಿರಬೇಕು. ಇದಕ್ಕೂ ಮುಂಚೆಯೇ ಇಲ್ಲಿ ದೇವಾಲಯವಿತ್ತೆಂದು ಊಹಿಸಬಹುದಾಗಿದೆ. ಇದನ್ನು ಬಿಟ್ಟರೆ ನಮಗೆ ದೊರೆಯುವ ಶಾಸನ ಕ್ರಿ.ಶ. ೧೧೯೯ರದು. ದುರ್ಗಾ ದೇವಾಲಯದಲ್ಲಿಯ ಈ ಶಾಸನವು ಹಂಪೆಯನ್ನು ‘ಪಂಪಾತೀರ್ಥ’, ‘ವಿರೂಪಾಕ್ಷ ತೀರ್ಥ’ ಎಂಬುದಾಗಿ ಕರೆದಿರುವುದನ್ನು ಕಾಣಬಹುದು. ಹೊಯ್ಸಳ ಸೋಮೇಶ್ವರನ ಕಾಲದ ಶಾಸನವೊಂದು ವಿರೂಪಾಕ್ಷ ದೇಗುಲಕ್ಕೆ ದಾನ ಮಾಡಿದುದನ್ನು ತಿಳಿಸುವುದು.[3] ಆ ನಂತರ ಬಂದ ಹೊಯ್ಸಳ ವೀರಬಲ್ಲಾಳನು ಕ್ರಿ.ಶ. ೧೩೩೯ರಲ್ಲಿ ವೀರ ವಿಜಯ ವಿರೂಪಾಕ್ಷಪುರಕ್ಕೆ ಭೇಟಿ ನೀಡಿ, ತನ್ನ ಮಗ ವಿರೂಪಾಕ್ಷ ಬಲ್ಲಾಳನನ್ನು ಹಂಪೆಯ ಒಡೆಯನನ್ನಾಗಿ ನೇಮಿಸಿ ಹಂಪೆಯನ್ನು ವಿರೂಪಾಕ್ಷ ಹೊಸಪಟ್ಟಣವೆಂದು ಕರೆದನು.[4]

ಹೀಗೆ ವಿರೂಪಾಕ್ಷ ದೇವಾಲಯವು ವಿಜಯನಗರ ಕಾಲಕ್ಕಿಂತ ಮುಂಚೆ ದೀರ್ಘ ಇತಿಹಾಸವನ್ನು ಹೊಂದಿತ್ತು. ವಿಜಯನಗರ ಅರಸರ ಆಳ್ವಿಕೆ ಪ್ರಾರಂಭವಾಗಿ ಅವರ ರಾಜಧಾನಿಯಾದ ನಂತರ ಹಂಪೆಯು ಬೆಳವಣಿಗೆ ಹೊಂದಿತು. ಈ ಸಮಯದಲ್ಲಿ ವಿರೂಪಾಕ್ಷ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ, ಗೋಪುರಗಳು, ಮಂಟಪಗಳನ್ನು ಸೇರಿಸಿ ವಿಶಾಲಗೊಳಿಸಿದರು. ಸಂಗಮ ವಂಶದ ಅರಸನಾದ ಪ್ರೌಢದೇವರಾಯನು ಗೋಪುರಗಳನ್ನು ತನ್ನ ಅಧಿಕಾರಿಯಾದ ಪ್ರೋಳುಗಂಟಿ ತಿಪ್ಪನಿಂದ ಕಟ್ಟಿಸಿದನೆಂದು ಉತ್ತರ ನರಸಿಂಹಪುರಾಣದಿಂದ ತಿಳಿಯುತ್ತದೆ. ಶಿವತತ್ತ್ವ ಚಿಂತಾಮಣಿಯಿಂದಲೂ ಗೋಪುರಗಳನ್ನು ಕಟ್ಟಿಸಿದ ಬಗೆಗೆ ತಿಳಿಯುವುದು.[5] ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕೋತ್ಸವ ಕಾಲದಲ್ಲಿ ಸಿಂಗಿನಾಯಕನಹಳ್ಳಿಯನ್ನು ವಿರೂಪಾಕ್ಷ ದೇವಾಲಯಕ್ಕೆ ದತ್ತಿ ಬಿಟ್ಟನು. ಜೊತೆಗೆ ದೇವಾಲಯದ ಮಹಾಮಂಟಪ ಮತ್ತು ರಾಯಗೋಪುರಗಳನ್ನು ಕಟ್ಟಿಸಿ ಹಿರಿಯ ಗೋಪುರಗಳನ್ನು ಜೀರ್ಣೋದ್ಧಾರಗೊಳಿಸಿದನೆಂದು ಅಲ್ಲಿಯ ಶಾಸನವು ಹೇಳುತ್ತದೆ. ಹೀಗೆ ಕಾಲಾಂತರದಲ್ಲಿ ಈ ದೇವಾಲಯಕ್ಕೆ ಅನೇಕ ಮಂಟಪಗಳು ಸೇರ್ಪಡೆಯಾದವು.

ವಿರೂಪಾಕ್ಷ ದೇವಾಲಯದ ಪೂರ್ವಗೋಪುರದ ಮುಂಭಾಗದಿಂದ ಎದುರು ಬಸವಣ್ಣ ಮಂಟಪದವರೆಗೆ ಇರುವ ಬೀದಿಯೇ ವಿರೂಪಾಕ್ಷ ಬಜಾರು, ಬಜಾರದ ಉದ್ದ ೭೧೭ಮೀ. ಅಗಲ ದೇವಾಲಯದ ಬಳಿ ೩೦ಮೀ. ಇದ್ದು, ಕೊನೆಯಲ್ಲಿ ೩೮ ಮೀಟರುಗಳಷ್ಟು ವಿಸ್ತಾರವಾಗಿದೆ.[6] ಕ್ರಿ.ಶ. ೧೯೭೯-೮೩ರ ಉತ್ಖನನ ವರದಿಯ ಪ್ರಕಾರ, ಬಜಾರದ ಉದ್ದ ೭೨೦ಮೀ. ಅಗಲ ೩೫ ಮೀಟರು,[7] ಬಜಾರದ ಇಕ್ಕೆಲಗಳಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಕಟ್ಟಿಸಿರುವ ಸಾಲುಮಂಟಪಗಳು ಮೂರು ಅಡಿಗಳೆತ್ತರದ ಅಧಿಷ್ಠಾನದ ಮೇಲಿವೆ. ಸಾಲುಮಂಟಪಗಳು ಎರಡು ಅಂಕಣಗಳಿಂದ ಕೂಡಿದ್ದು, ಕೆಲವು ಮಂಟಪಗಳು ಎರಡಕ್ಕಿಂತ ಹೆಚ್ಚು ಅಂಕಣಗಳನ್ನು ಹೊಂದಿವೆ.

ವಿರೂಪಾಕ್ಷ ಬಜಾರನ್ನು ವಿರೂಪಾಕ್ಷಪುರ, ಪಂಪಾರಥವೀಧಿ, ಹಂಪೆ ಬಜಾರು, ತೇರುಬೀದಿ, ಇತ್ಯಾದಿಯಾಗಿ ಕರೆಯಲಾಗಿದೆ. ಇಲ್ಲಿಯ ಬಜಾರು ವಿರೂಪಾಕ್ಷ ದೇವಾಲಯದಷ್ಟೇ ಹಳೆಯದು. ಆದರೆ ಆರಂಭದಲ್ಲಿ ಇದು ಕಾರ್ಯನಿರ್ವಹಿಸುತ್ತಿದ್ದುದು ಕೇವಲ ತೇರು ಬೀದಿಯಾಗಿ ಮಾತ್ರ. ಪ್ರೌಢದೇವರಾಯನು ಈ ಬೀದಿಯಲ್ಲಿದ್ದ ಕಲ್ಲು ಮುಳ್ಳುಗಳನ್ನು ತೆಗೆಸಿ ವಿಶಾಲವಾಗಿಸಿದುದನ್ನು ಕುರಿತು ಲಕ್ಕಣ್ಣದಂಡೇಶನು ಶಿವತತ್ತ್ವ ಚಿಂತಾಮಣಿಯಲ್ಲಿ ಹೀಗೆ ಹೇಳಿದ್ದಾನೆ.

ತ್ರಿಪುರ ವಿಜಯಿತ ವಿರೂಪಾಕ್ಷನ ಮನೋರಥಕೆ
ಸುಪಥವಾದುದು ದೇವರಾಜೇಂದ್ರನುದಯದಿಂ

ವಿಪುಳೆಯೊಳುದೃಷ್ಟವಿದೆಯಿಂದೆಂಬ ಮಾಳ್ಕೆಯಿಂ ಪಂಪಾಪುರದೊಳನುದಿನಂ
ಅಪರಿಮಿತಗೋಪುರಂಗಳ ಮಧ್ಯವೀಥಿಯಿಂ
ರಿಪುಕಂಟಕಂಗಳಂ ಸವರುವಂದದಿ ಸವರಿ
ಸುಪವತ್ರವೆನಿಸಿದಂ ರಥಪಥವನರುವವರ ಚರಣಾಂಬುಜಕ್ಕೆ ಶರಣು.

ಈ ಬೀದಿಯನ್ನು ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಯಿತೆಂಬುದು ಸಹಾ ಇದೇ ಗ್ರಂಥದಿಂದ ತಿಳಿಯುವುದು:

ಪಂಪಾಪತಿಯ ಮನೋರಥರೂಪ ತಾನಾದ
ಪಂಪಂ ಜಗಕ್ಕರೂಪಿ ತೋರಿದನೋ ಎಂಬಂತೆ
ಸೊಂಪೇರಿ ಮೆರೆಸುವ ವಿರೂಪಾಕ್ಷನತುಳರಥ ಪಂಪಾಂಬಿಕಾರಥವನು
ಝುಂಪಳಿಪ ನಾನಾ ರಸದ ಗಣಾಧಿಪ ರಥವ
ಗುಂಪರಿವರಳಲ್ಲವೆನೆ ರೂಡಿವರಸಿದನ
ದೇಂ ಪ್ರತಾಪನೊ ದೇವರಾಜೇಂದ್ರನವರುವವರ ಚರಣಾಂಬುಜಕ್ಕೆ ಶರಣು.[8]

ವಿರೂಪಾಕ್ಷ ದೇವಾಲಯದಲ್ಲಿ ನಡೆಯುತ್ತಿದ್ದ ಹಬ್ಬಗಳಲ್ಲಿ ಉತ್ಸವಗಳು, ರಥೋತ್ಸವಗಳನ್ನು ಆಚರಿಸುತ್ತಿದ್ದುದು ಇಲ್ಲಿ ತಿಳಿದುಬರುತ್ತದೆ. ಇಲ್ಲಿ ವಿರೂಪಾಕ್ಷ ಪಂಪಾಂಬಿಕೆ ಮತ್ತು ಗಣಾಧಿಪ (ಗಣೇಶ) ರ ಮೂರು ರಥಗಳನ್ನು ಎಳೆಯುತ್ತಿದ್ದುದನ್ನು ಲಕ್ಕಣ್ಣ ದಂಡೇಶನು ಹೇಳಿದ್ದಾನೆ. ಆದರೆ ಈ ಕುರಿತು ಬೇರೆಲ್ಲೂ ಮಾಹಿತಿ ದೊರೆತಿಲ್ಲ. ಆದರೆ ವೆನಿಷಿಯಾದ ವರ್ತಕ ನಿಕೊಲೊ ದೆ ಕೊಂತಿಯು, ಬಿಜನೆಗೇಲಿಯಾದಲ್ಲಿಯೂ ಕೂಡ ವರ್ಷಕ್ಕೊಮ್ಮೆ ದೇವರ ವಿಗ್ರಹವನ್ನು ಎರಡು ರಥಗಳ ಮಧ್ಯೆ ಇಟ್ಟು ಮೆರವಣಿಗೆ ಮಾಡುತ್ತಾರೆ ಎಂದು ಬರೆದಿದ್ದಾನೆ. ಇಲ್ಲಿ ಕೊಂತಿಯು ಎರಡು ರಥಗಳೆಂದು ಹೇಳಿರುವುದು ಗಮನಾರ್ಹ. ಪಾಯೇಸನೂ ಈ ಕುರಿತು ಸೂಚನೆ ನೀಡಿದ್ದಾನೆ.

ಈ ರಥೋತ್ಸವ ಪದ್ಧತಿಯು ಹಂಪೆಯಲ್ಲಿ ಇಂದಿಗೂ ನಡೆಯುತ್ತಿದೆ. ಪಂಪಾ ವಿರೂಪಾಕ್ಷರನ್ನು ಹೊತ್ತ ರಥ ಮತ್ತು ವಿದ್ಯಾರಣ್ಯರ ಗುರುಗಳದೆಂದು ಹೇಳುವ ಚಂದ್ರಮೌಳೀಶ್ವರ ರಥ. ಈ ಎರಡು ರಥೋತ್ಸವಗಳು ವಿರೂಪಾಕ್ಷ ಬಜಾರಿನಲ್ಲಿ ನೆರವೇರುತ್ತವೆ. ಇದು ವರ್ಷಕ್ಕೊಂದು ಬಾರಿ ದವನದ ಹುಣ್ಣಿಮೆಯೆಂದು ನೇರವೇರುವ ಉತ್ಸವ. ಈ ಹುಣ್ಣಿಮೆಯು ಈ ಪ್ರದೇಶದಲ್ಲಿ ಹಂಪೆ ಹುಣ್ಣಿಮೆಯೆಂದೇ ಪ್ರಸಿದ್ಧವಾಗಿದೆ. ಅಂದರೆ ಈ ಬೀದಿಯು ನಿರ್ಮಾಣವಾದುದು ರಥೋತ್ಸವಗಳಿಗೆಂದೇ. ಹಿಂದೆ ಈ ಬೀದಿಯಲ್ಲಿ ರಥೋತ್ಸವಗಳ ಜೊತೆಗೆ ಹಬ್ಬಾಚರಣೆಯ ಸಂದರ್ಭದಲ್ಲಿ ಇನ್ನಿತರ ಉತ್ಸವಗಳೂ, ಮೆರವಣಿಗೆಗಳೂ ನಡೆಯುತ್ತಿದ್ದವು. ಹೋಳಿಹಬ್ಬದಲ್ಲಿ ಹೋಳಿಯನ್ನು ಬೀದಿಯ ಎರಡೂ ಕಡೆಗಳಲ್ಲಿಟ್ಟು, ಎಲ್ಲರ ಮೇಲೂ-ರಾಜ ರಾಣಿಯರನ್ನೂ ಬಿಡದೆ ಎರಚುತ್ತಾರೆಂದು ಕೊಂತಿ ಹೇಳಿದ್ದಾನೆ. ಈ ಅಂಶಗಳು ವಿರೂಪಾಕ್ಷ ಬಜಾರು ನಿರ್ಮಾಣವಾದುದು ಧಾರ್ಮಿಕ ಆಚರಣೆಗಳಿಗಾಗಿಯೇ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ವಿರೂಪಾಕ್ಷ ಬಜಾರು ಮಾರುಕಟ್ಟೆಯೂ ಆಗಿದ್ದಿತು. ಆದರೆ ವ್ಯಾಪಾರವು ಇಲ್ಲಿ ಪ್ರಾರಂಭವಾದುದು ಕೇವಲ ದೇವಾಲಯಕ್ಕೆ ಅವಶ್ಯಕತೆಯಿರುವ ವಸ್ತುಗಳ ಸಂಬಂಧದಿಂದ ಎಂಬುದು ಮುಖ್ಯ. ಹಂಪೆಯು ರಾಜಧಾನಿಯಾದ ಮೇಲೆ ವಸತಿ ಪ್ರದೇಶಗಳು ನಿರ್ಮಾಣವಾಗಿ, ಹೆಚ್ಚು ಹೆಚ್ಚು ಜನು ಈ ಪರಿಸರದಲ್ಲಿ ವಾಸಮಾಡಲು ಪ್ರಾರಂಭಿಸಿದರು. ಅಲ್ಲದೇ, ಬೀದಿಯ ಇಕ್ಕೆಲಗಳಲ್ಲಿ ಸಾಲುಮಂಟಪಗಳು ನಿರ್ಮಾಣವಾದವು. ದೇವಾಲಯದ ಬಳಿ ಬಜಾರನ್ನು ಒಳಗೊಂಡಂತೆ ಒಂದು ಉಪನಗರವು ಇತ್ತು. ಇದನ್ನು ವಿರೂಪಾಕ್ಷಪುರ ಎಂದೂ ಕರೆಯುತ್ತಿದ್ದರು.

ಡೊಮಿಂಗೋ ಪಾಯೇಸನು ವಿರೂಪಾಕ್ಷ ಬಜಾರನ್ನು ಕುರಿತು, ಈ ದೇವಾಲಯದಲ್ಲಿ, ಪೂರ್ವಕ್ಕಿರುವ ಅದರ ಪ್ರಧಾನ ಹೆಬ್ಬಾಗಿಲಿಗೆ ಎದುರಾಗಿ ಉಪ್ಪರಿಗೆಯ ಮೊಗಸಾಲೆ ಹಾಗೂ ಕಮಾನುದಾರಿಗಳುಳ್ಳ ಬಲು ಸುಂದರ ಮನೆಗಳ ಬಲು ಸುಂದರ ಬೀದಿಯಿದೆ. ಇವುಗಳಲ್ಲಿ ಅಲ್ಲಿಗೆ ಬರುವ ಯಾತ್ರಿಗಳಿಗೆ ಆಶ್ರಯ ನೀಡಲಾಗುತ್ತದೆ ಎಂದು ಹೇಳಿರುವುದು, ಈ ಸಾಲುಮಂಟಪಗಳು ಯಾತ್ರಾರ್ಥಿಗಳು ಉಳಿದುಕೊಳ್ಳಲು ಮಾತ್ರ ಉಪಯೋಗಿಸಲ್ಪಡುತ್ತಿದ್ದವೆಂಬುದನ್ನು ಸಮರ್ಥಿಸುತ್ತದೆ. ಆದರೆ ಇವುಗಳನ್ನು ಧಾರ್ಮಿಕ ಆಚರಣೆಗಳಿಗಲ್ಲದೆ, ವ್ಯಾಪಾರ ಚಟುವಟಿಕೆಗಳಿಗೂ ಉಪಯೋಗಿಸಲಾಗುತ್ತಿತ್ತು ಎನ್ನುವುದಕ್ಕೆ ಆಧಾರಗಳಿವೆ.

ಪ್ರಾಚೀನ ಕಾಲದಿಂದಲೂ ಕೇವಲ ತೇರುಬೀದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ವಿರೂಪಾಕ್ಷ ಬಜಾರು ವಿಜಯನಗರಾವಧಿಯಲ್ಲಿ ವ್ಯವಸ್ಥಿತವಾದ ಸಾಲುಮಂಟಪಗಳ ನಿರ್ಮಾಣದ ಮೂಲಕ ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳವಣಿಗೆ ಹೊಂದಿದ್ದಿತು. ಆರ್ಥಿಕವಾಗಿ ಪ್ರಸಿದ್ಧ ಹೊಂದಿದ ಈ ಬಜಾರು ಧಾರ್ಮಿಕವಾಗಿಯೂ, ಪ್ರಾಮುಖ್ಯತೆ ಪಡೆದಿದ್ದುದು ಅಂದಿನ ಮಠ-ಮಾನ್ಯಗಳು ಹಾಗೂ ಪ್ರವಾಸಿಗರ ಹೇಳಿಕೆಗಳಿಂದ ತಿಳಿದು ಬರುವ ಸಂಗತಿ. ಅಂತೆಯೇ ವಿಜಯನಗರ ಕಾಲದ ಉತ್ಸಾವಾಚರಣೆಗಳು ಇಂದಿಗೂ ಜೀವಂತವಾಗಿದ್ದು, ಅಂದಿನ ಆಚರಣೆಗಳನ್ನು ನೆನೆಪಿಸಿಕೊಡುತ್ತಿರುವದನ್ನು ಹಂಪೆಯಲ್ಲಿ ಕಾಣಬಹುದಾಗಿದೆ.

ವಿರೂಪಾಕ್ಷ ಬಜಾರು ಇತರ ಬಜಾರುಗಳಿಗಿಂತ ವಿಶಿಷ್ಟತವಾದುದು. ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರವಾಗಿ ಹಿಂದಿನಂತೆಯೇ ಇಂದಿಗೂ ಜೀವಂತವಾಗಿರುವುದು ಇದನ್ನು ಎತ್ತಿ ತೋರುತ್ತದೆ. ವಿಜಯನಗರ ಸಾಮ್ರಾಜ್ಯದ ವೈಭವಪೂರ್ಣ ಸಂದರ್ಭವನ್ನು ನೆನಪಿಗೆ ತರುವುದಿಲ್ಲವಾದರೂ, ಇಂದಿನ ಪರಿಸ್ಥಿತಿಯ ಮಟ್ಟಿಗೆ ಈ ಬಜಾರು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

**ಆ. ಪಾನ್‌ಸುಪಾರಿ ಬಜಾರು**

ವಿಜಯನಗರದ ಕೇಂದ್ರ ಹಾಗೂ ರಾಯರ ವಾಸಸ್ಥಾನವೆಂದು ಗುರುತಿಸಿರುವ ಅರಮನೆಯ ಆವರಣದಲ್ಲಿರುವುದೇ ರಾಮಚಂದ್ರ ಅಥವಾ ಹಜಾರರಾಮ ದೇಗುಲ. ಈ ದೇವಾಲಯದಿಂದ ಈಶಾನ್ಯಕ್ಕೆ ಶೃಂಗಾರದ ಹೆಬ್ಬಾಗಿಲಿನ ಆಚೆಯವರೆಗೂ ವಿಸ್ತರಿಸಿದ್ದ ಬೀದಿಯೇ ಪಾನ್‌ಸುಪಾರಿ ಬಜಾರು. ಇದು ನಿರ್ಮಾಣಗೊಂಡುದು ವಿಶಾಲವಾದ ಮೈದಾನ ಪ್ರದೇಶದಲ್ಲಿ. ಅರಮನೆ ಪ್ರದೇಶದಲ್ಲಿದ್ದ ಈ ಬಜಾರಿಗೆ ವಿಶಿಷ್ಟವಾದ ಸ್ಥಾನಮಾನ. ಹಂಪೆಯ ಮುಖ್ಯ ವಸತಿ ಪ್ರದೇಶ ಇದರ ಸುತ್ತಮುತ್ತ ಆವರಿಸಿತ್ತು. ಇದು ಹಂಪೆಯ ಬಜಾರುಗಳಲ್ಲಿ ಪ್ರಮುಖ ಮಾರುಕಟ್ಟೆಯಾಗಿತ್ತು. ಈ ಬಜಾರದ ಉದ್ದ ಸುಮಾರು ೯೩೦ ಮೀ. ಅಗಲ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ ಇದು ರಾಮಚಂದ್ರ ದೇವಾಲಯದ ಮುಂಬದಿಯ ಮಂಟಪಗಳ ಬಳಿ ೧೫ ಮೀ. ಇರುವುದು ಕಂಡುಬರುತ್ತದೆ.[9] 'ಪಾನಸುಪಾರಿ' ಎಂಬುದು ಕನ್ನಡ ಮೂಲದ್ದಲ್ಲ, ಹಿಂದಿ ಭಾಷೆಯಿಂದ ಬಂದುದು, ಇದರಲ್ಲಿರುವ ಶಬ್ದಗಳಲ್ಲಿ 'ಪಾನ್' ಎಂಬುದು ವೀಳೆಯದೆಲೆಯನ್ನೂ, 'ಸುಪಾರಿ'ಯೆಂಬುದು ಅಡಕೆಯನ್ನೂ ಸೂಚಿಸುತ್ತದೆ.

ಹಂಪೆಯಲ್ಲಿ ಪ್ರಚಲಿತವಿದ್ದ ಪಾನ್‌ಸುಪಾರಿ ಬಜಾರವೆಂಬುದು ಕ್ರಿ.ಶ.೧೪೨೬ರ ಪಾರ್ಶ್ವನಾಥ ಜಿನಾಲಯದ ಶಾಸನದಲ್ಲಿ ಹೇಳಿರುವ 'ಕ್ರಮುಕಪರ್ಣಾಪಣ' (ಕ್ರಮುಕ = ಅಡಕೆ, ಪರ್ಣ = ಎಲೆ, ಆಪಣ=ಅಂಗಡಿ) ಅಥವಾ 'ಪರ್ಣಪೂಗಿ ಫಲಾಪಣ' (ಪರ್ಣ = ಎಲೆ, ಪೂಗಿ = ಅಡಕೆ)ದ ಹಿಂದಿ ರೂಪಾಂತರ. ಕ್ರಿ.ಶ. ೧೮೯೦ರ 'ಸೌತ್‌ಇಂಡಿಯನ್‌ಇನ್‌ಸ್ಕ್ರಿಪ್ಷನ್ಸ್' ಸಂಪುಟದ ಮೊದಲನೇ ಭಾಗದಲ್ಲಿ ಅಚ್ಚು ಮಾಡಲಾದ ಈ ಶಾಸನದ ಅನುವಾದದಲ್ಲಿ 'ಪಾನ್‌ಸುಪಾರಿ ಬಜಾರ' ಎಂದೇ ಕಾಣಿಸಿದೆ. ಮೂಲ ಹೆಸರಾದ ಕ್ರಮುಕಪರ್ಣಾಪಣ ಬೀದಿಯು ಹೆಚ್ಚಾಗಿ ಬಳಕೆಗೆ ಬಾರದುದರಿಂದ, ಕ್ರಮೇಣ ಅದು ಮರೆಯಾಗಿ ಇಂದಿನ ಹೆಸರೇ ಸ್ಥಿರವಾಯಿತು.

ಪಾನ್‌ಸುಪಾರಿ ಬಜಾರನ್ನು ಆ ನಂತರದ ಶಾಸನಗಳಲ್ಲಿ ಪೆದ್ದಂಗಡಿ ಅಥವಾ ದೊಡ್ಡ ಅಂಗಡಿಬೀದಿ ಹಾಗೂ ರಾಜಬೀದಿ ಎಂತಲೂ ಕರೆಯಲಾಗಿದೆ. ಇದು ಪ್ರೌಢದೇವರಾಯನ ಪೂರ್ವದಲ್ಲಿ ನಿರ್ಮಾಣಗೊಂಡುದೆಂದು ಹೇಳಬಹುದು. ಕ್ರಿ.ಶ.೧೪೨೬ರ ಪಾಶ್ವನಾಥ

ಜಿನಾಲಯದ ಶಾಸನವು ಪ್ರೌಢದೇವರಾಯನ ಕಾಲಕ್ಕೆ ಸೇರಿದ್ದು,[10] ಇದರಲ್ಲಿ ಕ್ರಮುಕಪರ್ಣಾಪಣ ಬೀದಿಯಲ್ಲಿ ಪಾರ್ಶ್ವನಾಥ ಜಿನಾಲಯವನ್ನು ಕಟ್ಟಿಸಿದ ಬಗೆಗೆ ಹೇಳಿರುವದರಿಂದ, ಕ್ರಿ.ಶ. ೧೪೨೬ಕ್ಕಿಂತ ಮುಂಚೆಯೇ ಈ ಬೀದಿಯು ಪ್ರಚಲಿತವಿದ್ದರಬೇಕೆಂದು ತಿಳಿಯಬಹುದು. ಕ್ರಿ.ಶ. ೧೫೪೫ರ ರಂಗಾ (ಮಾಧವ) ದೇವಾಲಯದ ಶಾಸನವು ಸದಾಶಿವರಾಯನ ಆಳ್ವಿಕೆಯದು. ತಿಮ್ಮರಾಜನೆಂಬುವನು ವಿದ್ಯಾನಗರದ ಪೆದ್ದಂಗಡಿ ಬೀದಿಯಲ್ಲಿ ಮಾಧವ ದೇವರಿಗೆ ೨೫ ಅಂಕಣದ ರಂಗಮಂಟಪವನ್ನು ಸ್ಥಾಪಿಸಿದನೆಂದು ತಿಳಿಸುತ್ತದೆ.[11] ಇದೇ ಬೀದಿಯನ್ನು ಕ್ರಿ.ಶ. ೧೫೫೭ರ ಗಾಣಗಿತ್ತಿ ಜಿನಾಲಯದ ಶಾಸನದಲ್ಲಿ ರಾಜಬೀದಿಯೆಂದಿರುವುದನ್ನು ಗುರುತಿಸಬಹುದು. ಶಾಂತಿನಾಥ ಬಸದಿಯ ಸೀಮಾ ವಿವರವನ್ನು ಕುರಿತಂತೆ ಶಾಸನವು,

....... ಮೂಡಲು ಕುಂಗು ತೋಟಲು ಬಡಗಲು
ರಾಜಾಬೀದಿ ಪಡುವಲು ಉಪ್ಪರಿಗೆ ಬಾಗಿಲು
ತೆಂಕಲು ದೇವರಗುಡಿ ಪವುಳಿ ಮೇರೆ

ಎಂದು ಹೇಳಿದೆ. ಇಲ್ಲಿಯ ರಾಜಬೀದಿಯನ್ನು ಪಾನ್‌ಸುಪಾರಿ ಬಜಾರ್ ಎಂದೇ ಗುರುತಿಸಬಹುದು. ಡೊಮಿಂಗೋ ಪಾಯೇಸನು ಅರಮನೆಯ ಮುಂಬದಿಯನ್ನು ಕುರಿತು ಹೇಳುವಾಗ, "........ ಕೋಟೆಯನ್ನು ಪ್ರವೇಶಿಸಿದರೆ ಹೆಬ್ಬಾಗಿಲು ಸಿಕ್ಕುತ್ತದೆ. ಇಲ್ಲಿಂದ ಒಳಗೆ ಹೋದರೆ ರಾಜನ ಅರಮನೆಯವರೆಗೂ ದಳವಾಯಿಗಳ, ಶ್ರೀಮಂತರ ಮತ್ತು ವರ್ತಕರ ಸುಂದರವಾದ ಬೀದಿಗಳೋ ಬೀದಿಗಳು, ಮನೆಗಳೋ ಮನೆಗಳು. ರಾಜಬೀದಿಯನ್ನೇ ಹಿಡಿದು ಹೋದರೆ ಅರಮನೆಯ ಮುಂಭಾಗದ ದ್ವಾರವಿದೆ"[12] ಎನ್ನುತ್ತಾರೆ; ರಾಜಬೀದಿಯ ಪ್ರಸ್ತಾಪವನ್ನೂ ಮಾಡುತ್ತಾನೆ. ಅಂದರೆ, ಕ್ರಿ.ಶ. ೧೪೨೬ರ ಕ್ರಮುಕಪರ್ಣಾಪಣ ಬೀದಿಯನ್ನು ಕ್ರಿ.ಶ.೧೪೪೫ರ ಶಾಸನದಲ್ಲಿ ರಾಜಾಬೀದಿಯೆಂದೂ ಕರೆಯಲಾಗಿದೆ.

ಹಂಪೆಯು ಕ್ರಿ.ಶ. ೧೫೦೦ ರ ನಂತರ ಪ್ರಬುದ್ಧಮಾನಕ್ಕೆ ಬಂದಂತೆಯೇ, ಇಲ್ಲಿ ವ್ಯಾಪಾರ, ವಹಿವಾಟು ಯಥೇಚ್ಛವಾಗಿ ನಡೆಯುತ್ತಿತ್ತು. ಇದರಿಂದ ಶಾಸನೋಕ್ತ ಪೆದ್ದಂಗಡಿ ಬೀದಿಯು ದೊಡ್ಡ ಅಂಗಡಿ ಬೀದಿಯಾಗಿಯೇ ಬೆಳೆದುದು ಅನ್ವರ್ಥಕವಾಗಿದೆ. ಇದು ರಾಜನ ವಾಸಸ್ಥಾನದ ಮುಂಭಾಗದಲ್ಲಿರುವುದರಿಂದಲೂ, ರಾಜನು ಯುದ್ಧಕ್ಕೆ ಅಥವಾ ಇತರ ಕೆಲಸ ಕಾರ್ಯಗಳಿಗೆ ಹೋಗಬೇಕಾದರೆ ಈ ಬೀದಿಯಲ್ಲೇ ಸೈನ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರಿಂದಲೂ, ಇದನ್ನು ರಾಜಬೀದಿಯೆಂದು ಕರೆದುದರಲ್ಲಿ ಔಚಿತ್ಯವಿದೆ.

ಪಾನ್‌ಸುಪಾರಿ ಬಜಾರು ಇತರ ಎಲ್ಲಾ ಬಜಾರುಗಳಿಗಿಂತಲೂ ಭಿನ್ನವಾಗಿ ತೋರುತ್ತದೆ. ವಿರೂಪಾಕ್ಷ ಬಜಾರದಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು, ಮಠಗಳು ಇವೆ. ಶಯವರು, ವೈಷ್ಣವರು ಮಾತ್ರವಲ್ಲದೆ, ಜೈನರು, ಮುಸ್ಲಿಮರು ಮತ್ತು ಇತರ ಧರ್ಮಗಳವರ ಸಂಗಮವೆನಿಸಿದ್ದಿತು. ಇಲ್ಲಿರುವ ಪಟ್ಟಣದ ಯಲ್ಲಮ್ಮಳು ವಿಜಯನಗರ ಅರಸ ಮುಖ್ಯ ದೇವತೆಯಾಗಿದ್ದಳು. ರಾಜರು ಯುದ್ಧಗಳಿಗೆ ಹೋಗುವಾಗ ಇಲ್ಲಿ ರಣವೀಳ್ಯವನ್ನು ಪಡೆದು ಮುನ್ನಡೆಯುತ್ತಿದ್ದರೆಂದು ಜನಪದರು ಹೇಳುವರು. ಈ ಪಟ್ಟಣದ ಯಲ್ಲಮ್ಮನಗುಡಿ ಹಾಗೂ ಶಿವಾಲಯಗಳು ಶೈವಧರ್ಮದವು. ರಂಗಾ ದೇವಾಲಯ ಹಾಗೂ ಇತರ ಮಂಟಪಗಳು ವೈಷ್ಣವ ಧರ್ಮದವು. ಜೈನಬಸದಿಗಳು ಹಾಗೂ ಗೋರಿ ಮತ್ತು ಅಹಮದಖಾನನ ಧರ್ಮ ಶಾಲೆಗಳು ಆಯಾ ಧರ್ಮಗಳನ್ನು ಧರ್ಮಗಳನ್ನು ಪ್ರತಿನಿಧಿಸುವಂಥವು.

ಅಬ್ದುಲ್‌ರಜಾಕನು, "ರಾಜನ ಅರಮನೆಯ ಹೆಬ್ಬಾಗಿಲಿನಲ್ಲಿ ಎದುರು ಬದಿರಾಗಿ ನಾಲ್ಕು ಅಂಗಡಿ ಬೀದಿಗಳಿವೆ. ..... ಪ್ರತಿಯೊಂದು ಅಂಗಡಿಯ ಸಾಲಿನ ಮೇಲುಗಡೆ ಭವ್ಯವಾದ ಉಪ್ಪರಿಗೆಯುಳ್ಳ ಕಮಾನು ಹಾದಿ ಇದೆ. .... ಅಂಗಡಿ ಬೀದಿಗಳು ಬಹು ಉದ್ದವಾಗಿಯೂ, ಅಗಲವಾಗಿಯೂ ಇವೆ"[13] ಎಂದಿದ್ದಾನೆ.

ಇಲ್ಲಿಯ ಬೀದಿಗಳಲ್ಲಿ ಒಂದು ಸೋಮವಾರದ ಬಾಗಿಲ ಕಡೆಗೂ, ಎರಡನೆಯದು ರಾಣಿಯ ಜನಾನಾದ ಕಡೆಗೂ ಇದ್ದುವೆಂದು ತಿಳಿದುಬರುತ್ತದೆ. ಮೂರನೆಯದು ಗಾಣಗಿತ್ತಿ ಜಿನಾಲಯದ ಶಾಸನದಲ್ಲಿ ಉಲ್ಲೇಖಿಸಲಾದ ಭೀಮಾ ಬಾಗಿಲವರೆಗಿದ್ದ ಮಣಿಕುಟ್ಟಿಮ ಬೀದಿಯೆಂದೂ, ನಾಲ್ಕನೆಯದು ಪಾನ್‌ಸುಪಾರಿ ಬಜಾರು ಎಂದೂ ತಿಳಿಯುತ್ತದೆ.

ಪಾನ್‌ಸುಪಾರಿ ಬಜಾರು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿಯ ಕುಶಲಕರ್ಮಿಗಳು, ವ್ಯಾಪಾರಿಗಳು ಇಲ್ಲಿ ಮಾರಾಟವಾಗುತ್ತಿದ್ದ ವಸ್ತುಗಳು ಹಾಗೂ ಮಾರಾಟ ಮಾಡುತ್ತಿದ್ದ ಬಗೆಗಳನ್ನು ಕುರಿತು ಸಮಕಾಲೀನ ಸಾಹಿತ್ಯ ಕೃತಿಗಳಾದ ಮೋಹನ ತರಂಗಿಣಿ, ಸನತ್ಕುಮಾರಚರಿತೆಗಳಲ್ಲದೆ, ವಿದೇಶಿ ಬರಹಗಳೂ ತಿಳಿಸುತ್ತವೆ. ಪುರಾತತ್ವ ವಿಭಾಗದವರು ನಡೆಸಿದ ಉತ್ಖನನದಲ್ಲಿ ಇತರ ಬಜಾರುಗಳಲ್ಲಿರುವಂತೆ ಕಲ್ಲುಹಾಸಿನ ದಾರಿಯು ಇಲ್ಲಿ ಸಿಕ್ಕಿಲ್ಲ. ಆದರೆ ಇಲ್ಲಿ ೩೫೦ ತಾಮ್ರದ ನಾಣ್ಯಗಳು ದೊರೆತಿರುವುದು ಗಮನಾರ್ಹ. ಇದರ ಜೊತೆಗೆ ಕ್ರಮುಕಪರ್ಣಾಪಣ ಬೀದಿಯೆಂದು ಕರೆದಿರುವುನನು ಸಮರ್ಥಿಸಲು ಅಡಕೆಯ ಅವಶೇಷಗಳು ದೊರೆತಿರುವುದು ಮಹತ್ವದ ಅಂಶವಾಗಿದೆ.

ಪಾನ್‌ಸುಪಾರಿ ಬಜಾರಿನಲ್ಲಿ ಕೇವಲ ಎಲೆ – ಅಡಕೆಗಳಲ್ಲದೆ ; ವಜ್ರವೈಢೂರ್ಯಗಳು; ಕುದುರೆ, ಆನೆ, ಕೋಳಿ, ಕುರಿ ಇತ್ಯಾದಿಗಳನ್ನೂ ಮಾರಾಟ ಮಾಡಲಾಗುತ್ತಿತ್ತು. ಇಲ್ಲಿ ದೊರೆಯುತ್ತಿದ್ದ ದೇಶೀಯ ವಸ್ತುಗಳ ಜೊತೆಗೆ ವಿದೇಶಿ ವಸ್ತುಗಳನ್ನೂ ಕಾಣಬಹುದಿತ್ತು. ಅರಬ್, ಪರ್ಶಿಯಾ, ಓರ್ಮಸ್, ಶ್ರೀಲಂಕಾ, ಪೆಗು, ಬರ್ಮಾ, ಚೀನಾ ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ವಿಜಯನಗರ ಹೊಂದಿತ್ತು. ಪಾಯೇಸನು ಅರಮನೆ ಮುಂಬದಿಯ ಬೀದಿಯಲ್ಲಿ ಮಾರಾಟವನ್ನು ಕುರಿತು ಹೇಳಿರುವುದು. "... ಶ್ರೀಮಂತರ ಮನೆಗಳುಳ್ಳ ಅಗಲವಾದ ಹಾಗೂ ಸುಂದರವಾದ ಬೀದಿ ಇದೆ. ಇಲ್ಲಿ ಅನೇಕ ವರ್ತಕರು ವಾಸಮಾಡುತ್ತಾರೆ. ವಜ್ರ ವೈಢೂರ್ಯಗಳೂ, ಮುತ್ತು ಮಾಣಿಕ್ಯಗಳನ್ನೂ, ತಟ್ಟು (ಈ 'ತಟ್ಟು' ಎಂಬುದು 'ತೊತ್ತು' ಇರಬಹುದೇ?) ಗಳನ್ನೂ, ಕಿತ್ತಳೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಮಾದಳ ಮುಂತಾದ ಹಣ್ಣುಗಳನ್ನೂ ಮಾರುತ್ತಾರೆ."

ಅರಮನೆಯ ಮುಂಬದಿಯ ಬೀದಿಯೇ ಪಾನ್‌ಸುಪಾರಿ ಬಜಾರು ಎಂಬುದರಲ್ಲಿ ಸಂಶಯವಿಲ್ಲ. ಪಾನ್‌ಸುಪಾರಿ ಬಜಾರು ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿ ಅನೇಕ ಉಪಬೀದಿಗಳನ್ನೂ ಕಾಣಬಹುದು. ವ್ಯಾಪಾರಿಗಳು ಬೀದಿಗಳಲ್ಲಿ, ಪ್ರತ್ಯೇಕ ಸ್ಥಳಗಳಲ್ಲಿ ಆಯಾಯ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಪಾಯೇಸನು, ಕುಶಲಗಾರರು ವಾಸಮಾಡುವ ಪ್ರತ್ಯೇಕ ಬೀದಿ ಇದ್ದು, ಅವರು ನಾನಾ ತರ ಸಾಮಾನುಗಳನ್ನು ತಯಾರಿಸಿ ಮಾರುತ್ತಾರೆ ಎಂದಿದ್ದಾನೆ. ಇದನ್ನು ಸಮರ್ಥಿಸುವಂತೆ, ಕನಕದಾಸರು ತಮ್ಮ ಮೋಹನತರಂಗಿಣಿಯಲ್ಲಿ, 'ಸೋಮಸೂರಿಯ ವೀಧಿ' ಯನ್ನು ಪ್ರಸ್ತಾಪಿಸಿದ್ದಾರೆ. ಈ ಬೀದಿಯು ಯಾವುದೆಂದು ಖಚಿತವಾಗದಿದ್ದರೂ ಇಲ್ಲಿಯ ಹೋಲಿಕೆಗಳನ್ನನುಸರಿಸಿ ಇದು ಪಾನ್‌ಸುಪಾರಿ ಬಜಾರು ಎಂದೇ ಹೇಳಬೇಕಾಗುತ್ತದೆ. ಪಾಯೇಸನು ಪ್ರಸ್ತಾಪಿಸಿರುವ ಕುಶಲಗಾರರನ್ನು ಕುರಿತು ಕನಕದಾಸರು,

ಕಂಚುಗಾರರು ಕೈದುಗಾರರು ಹೊಳೆವ ಹೊಂ
ಮಂಚಗಾರರು ಶಿಲ್ಪಿಗರು
ಸಂಚುಗಾರರು ಸದ್ವಿದ್ಯಾಧಿಕರಾದ
ಪಂಚಾಳರಿರ್ದರಿಕ್ಕೆಲದಿ

ಎಂದು ಹೇಳಿದ್ದಾರೆ. ಇವರೇ ಅಲ್ಲದೆ, ಬಟ್ಟೆಯ ಮಳಿಗೆಗಳು, ದವಸದ ಅಂಗಡಿಗಳು, ಬಳೆಗಳನ್ನು ಮಾರುತ್ತಿದ್ದ ವ್ಯಾಪಾರಿಗಳೂ, ಸೆಟ್ಟಿಗಳೂ ಇದ್ದರೆಂದು ತಿಳಿಸುತ್ತಾರೆ.

ವಾರದಲ್ಲಿ ಒಂದೊಂದು ದಿನ ಎಲ್ಲಾ ಬಜಾರುಗಳಲ್ಲೂ ಸಂತೆ ನಡೆಯುತ್ತಿತ್ತು. ಅದರಂತೆ ಪಾನ್‌ಸುಪಾರಿ ಬಜಾರ್‌ನಲ್ಲಿ ಸಂತೆ ಸೇರುತ್ತಿದ್ದ ದಿನವನ್ನು ಕುರಿತು ಪಾಯೇಸನು ದಾಖಲಿಸಿರುವುದು : "ಪ್ರತಿ ಶುಕ್ರವಾರ ಇಲ್ಲಿ ಸಂತೆಯಾಗುತ್ತದೆ. ಸಂತೆಯಲ್ಲಿ ಅನೇಕಾನೇಕ ಹಂದಿ, ಕೋಳಿ, ಸಮುದ್ರದಿಂದ ತಂದ ಒಣ ಮೀನು, ಇನ್ನೂ ಇತರ ಈ ದೇಶದ ನನಗೆ ಗೊತ್ತಿಲ್ಲದ ಸಾಮಾನುಗಳನ್ನು ಮಾರುತ್ತಾರೆ. ಇದೇ ರೀತಿ ನಗರದ ನಾನಾ ಭಾಗಗಳಲ್ಲಿ ದಿನಕ್ಕೊಂದು ಕಡೆ ವಾರವೆಲ್ಲಾ ಸಂತೆ ನಡೆಯುತ್ತದೆ."[14] ಇಲ್ಲಿ ಹೇಳಿರುವಂತೆ, ಪಾನ್‌ಸುಪಾರಿ ಬಜಾರದಲ್ಲಿ ಶುಕ್ರವಾರದಂದು ವಿಶೇಷ ಸಂತೆ ನಡೆಯುತ್ತಿದ್ದಿತು. ಈ ಬಜಾರು ರಾಜಧಾನಿಯ ಕೇಂದ್ರದಲ್ಲಿದ್ದುದು ಹಾಗೂ ರಾಯರ ವಾಸಸ್ಥಾನದ ಬಳಿಯಿದ್ದುದರಿಂದ ಶುಕ್ರವಾರ ಮಾತ್ರವಲ್ಲದೆ, ಪ್ರತಿದಿನದ ಸಂಜೆ ಸಂತೆ ಸೇರುತ್ತಿದ್ದುದು ಪಾಯೇಸನಿಂದಲೇ ತಿಳಿದುಬರುವ ಅಂಶ.

ಪಾನ್‌ಸುಪಾರಿ ಬಜಾರು ರಾಜಧಾನಿಯ ಮುಖ್ಯ ಪ್ರದೇಶದಲ್ಲಿದ್ದುದರಿಂದ ಇತರ ಬಜಾರುಗಳಿಗಿಂತ ಮಹತ್ವದ ಸ್ಥಾನ ಪಡೆದಿದ್ದಿತು. ಮೊದಲನೆಯದಾಗಿ, ಹಂಪೆಯ ಇತರ ಬಜಾರುಗಳಲ್ಲಿ ಒಂದೇ ಧರ್ಮಕ್ಕೆ ಸಂಬಂಧಿಸಿದ ಕಟ್ಟಡಗಳು ಕಂಡುಬಂದರೆ, ಇಲ್ಲಿ ಎಲ್ಲಾ ಧರ್ಮಗಳಿಗೆ ಸೇರಿದ ಕಟ್ಟಡಗಳನ್ನೂ ಕಾಣಬಹುದು. ಇದರಿಂದ ಪಾನ್‌ಸುಪಾರಿ ಬಜಾರು ಸರ್ವಧರ್ಮಗಳ ಸಂಗಮಸ್ಥಾನವಾಗಿದ್ದುದು ತಿಳಿದುಬರುವ ಸಂಗತಿ. ಸಮಾಜದ ಎಲ್ಲಾ ವರ್ಗಗಳಗೂ ಸಮಾನ ಅವಕಾಶವಿದ್ದುದನ್ನು ಇಲ್ಲಿ ಕಾಣಬಹುದು. ಎರಡನೆಯದಾಗಿ, ಇತರೆ ಬಜಾರುಗಳಲ್ಲಿ ವಾರದ ಒಂದು ದಿನ ಸಂತೆ ನಡೆಯುತ್ತಿದ್ದರೆ, ಇಲ್ಲಿ ವಿಶೇಷ ಸಂತೆಯ ಜೊತೆಗೆ ಪ್ರತಿದಿನದ ಸಂಜೆ ವೇಳೆಯಲ್ಲಿಯೂ ಸಂತೆ ಸೇರಿ ವ್ಯಾಪಾರ-ವಹಿವಾಟು ನಡೆಯುತ್ತಿದ್ದಿತು. ಹಂಪೆಯು ವಿಜಯನಗರ ಕಾಲದ ಪ್ರಸಿದ್ಧ ವ್ಯಾಪಾರ ಕೇಂದ್ರವೆಂದು ಹೇಳುವುದಾದರೆ, ಅಷ್ಟೊಂದು ಅಗಾಧವಾದ ವ್ಯಾಪಾರ ನಡೆಯುತ್ತಿದ್ದುದು ಪಾನ್‌ಸುಪಾರಿ ಬಜಾರದಲ್ಲೆ ಎಂಬುದಂತೂ ಸ್ಪಷ್ಟ.

[1] ಪ್ರ.ಕಂ.ಸಂ.೨, ಪು.೧೫೪

[2] ಇಂಡಿಯನ್ ಆಂಟಿಕ್ವೆರಿ ಸಂ.೬, ಪು.೮೫

[3] ವಿಜಯನಗರ – ಸಿಟಿ ಅಂಡ್‌ಎಂಪೈರ್, ಸಂ.೧, ಪು.೧೧೭

[4] ವಿಜಯನಗರ ಸಿಟಿ ಅಂಡ್‌ಎಂಪೈ, ಪು.೧೦೨

[5] ಶಿವತತ್ತ್ವ ಚಿಂತಾಮಣಿ, ಸಂಧಿ ೩೮, ಪದ್ಯ ೨೫೧, ಪು.೪೪೦

[6] ಕ್ಷೇತ್ರಕಾರ್ಯದಲ್ಲಿ ಕಂಡುಬಂತೆ.

[7] ಇನ್‌ವಿಜಯನಗರ : ಪ್ರೋಗ್ರೆಸ್ ಆಫ್‌ರಿಸರ್ಚ್, ೧೯೭೯ ೮೩, ಪು.೯

[8] ಶಿವತತ್ತ್ವ ಚಿಂತಾಮಣಿ, ಸಂಧಿ ೩೫, ಪದ್ಯ ೨೫೪, ಪು.೪೪೦

[9] ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ.

[10] ಎಸ್.ಐ.ಐ., ಸಂ.೧, ಸಂಖ್ಯೆ ೧೫೩

[11] ಎಸ್.ಐ.ಐ., ಸಂ.೪, ಸಂಖ್ಯೆ ೨೪೮

[12] ಪ್ರ.ಕಂ.ಇಂ.ಸಂ.೨, ಪು.೩೬೭

[13] ಪ್ರ.ಕಂ.ಇಂ.ಸಂ. ಪು.೩೧೫೫-೧೫೬

[14] ಪ್ರ.ಕಂ.ಇಂ.ಸಂ. ಪು.೩೬೮

# ೩೪. ಹಂಪೆಯ ಬಜಾರುಗಳು (೨)

**ಇ. ವಿಠ್ಠಲ ಬಜಾರು**

ಹಂಪೆಯ ಕಲಾತ್ಮಕತೆಗೆ ಕನ್ನಡಿಯಂತಿದ್ದು, ವಿಶ್ವ ಪ್ರಸಿದ್ಧಿ ಪಡೆದ ಕಲ್ಲಿನ ರಥವನ್ನುಳ್ಳದ್ದು ವಿಠ್ಠಲ ದೇವಾಲಯ. ಹಂಪೆಯ ಇತರ ದೇವಾಲಯಗಳಿಗಿಂತ ಇದು ವಿಶಿಷ್ಟವಾದುದು. ದೇವಾಲಯದಲ್ಲಿ ನಿಲ್ಲಿಸಿರುವ ಕಂಬಗಳು ಸಪ್ತಸ್ವರಗಳನ್ನು ಹೊಮ್ಮಿಸುವ ವಾದ್ಯಗಳು; ಸಂಗೀತ ಕಂಬಗಳು; ವಿಜಯನಗರ ಕಾಲದಲ್ಲಿ ಸಂಗೀತ, ನೃತ್ಯಗಳಿಗೆ ನೀಡಲಾದ ಪ್ರೋತ್ಸಾಹದ ಪ್ರತೀಕಗಳು. ಈ ದೇವಾಲಯದ ಪೂರ್ವ ಗೋಪುರದ ಮುಂಭಾಗದಿಂದ ಪರಾಂಕುಶ ಮಂಟಪದವರೆಗೆ ವಿಸ್ತಾರವಾಗಿ ನೆಲೆಗೊಂಡಿರುವ ಬೀದಿಯೇ ವಿಠ್ಠಲ ಬಜಾರು. ಇದನ್ನು ವಿಠ್ಠಲದೇವರ ತೇರುಬೀದಿಯೆಂತಲೂ, ವಿಠ್ಠಲಾಪುರವೆಂತಲೂ ಕರೆಯಲಾಗಿದೆ.

ವಿಠ್ಠಲ ಬಜಾರು ತುಂಗಭದ್ರಾ 'ನದಿಯ ಬಲದಂಡೆಯ ವಿಶಾಲ ಬಯಲಿನಲ್ಲಿ ನಿರ್ಮಾಣವಾಗಿದೆ. ಇದರ ಉದ್ದ ೯೪೫ ಮೀ., ಅಗಲ ೩೯೬ ಮೀ. ಹಂಪೆಯ ಇತರ ಬಜಾರುಗಳಿಗಿಂತ ವಿಶಾಲವಾಗಿಯೂ, ಉದ್ದವಾಗಿಯೂ ಇರುವುದು ಇದರ ವಿಶೇಷ. ಇದು ದೇವಾಲಯದ ಎಡಬಾಗದಲ್ಲೂ ವಿಸ್ತರಿಸಿದ್ದು, ಬೃಹವಿಠ್ಠಲ ದೇವಾಲಯದವರೆಗೂ ಮುಂದುವರೆದಿದೆ. ಇಲ್ಲಿ ಈ ಬಜಾರಿನ ಉದ್ದ ೧೨೨ಮೀ., ಅಗಲ ೧೬.೩ ಮೀ. ಬೀದಿಯ ಇಕ್ಕೆಲಗಳಲೂ ಸಾಲುಮಂಟಪಗಳನ್ನು ನಿರ್ಮಿಸಲಾಗಿದ್ದು, ಇಂದು ಇವುಗಳ ಅವಶೇಷಗಳು ಮಾತ್ರ ಕಂಡುಬರುತ್ತವೆ.

ವಿಠ್ಠಲ ಬಜಾರು ಸ್ಥಾಪನೆಯಾಗಿರುವುದು ವಿಠ್ಠಲ ದೇವಾಲಯದ ನಂತರ. ವಿಠ್ಠಲ ದೇವಾಲಯವು ವಿಶಾಲವಾದ ಪ್ರಾಂಗಣದಲ್ಲಿ ಗರ್ಭಗೃಹ, ಪ್ರದಕ್ಷಿಣಪಥ, ಸುಕನಾಸಿ, ನವರಂಗ, ಮಹಾಮಂಟಪಗಳಲ್ಲದೆ, ಎಡಬದಿಯಲ್ಲಿ ಅಮ್ಮನವರ ಗುಡಿ, ಮುಂದೆ ಕಲ್ಲಿನ ರಥ, ಕಲ್ಯಾಣಮಂಟಪ, ಭೋಜನಮಂಟಪ ಮತ್ತು ನೂರಕಾಲ ಮಂಟಪಗಳನ್ನೊಳಗೊಂಡಿದೆ. ದೇವಾಲಯಕ್ಕೆ ಮೂರು ಗೋಪುರಗಳಿದ್ದು, ಈ ಗೋಪುರಗಳನ್ನು ಕೃಷ್ಣದೇವರಾಯನ ಪಟ್ಟದರಸಿಯರಾದ ತಿರುಮಲಾದೇವಿ ಮತ್ತು ಚೆನ್ನಾದೇವಿಯರು ಕ್ರಿ.ಶ. ೧೫೧೩ ರಲ್ಲಿ ಕಟ್ಟಿಸಿದರೆಂದು ಶಾಸನದಿಂದ ತಿಳಿಯುವುದು.[1] ಕೃಷ್ಣದೇವರಾಯನಿಂದ ಸದಾಶಿವರಾಯನ ಕಾಲದವರೆಗೂ ಈ ದೇವಾಲಯಕ್ಕೆ ಮಂಟಪಗಳು ಹಾಗೂ ಉಳಿದ ಭಾಗಗಳನ್ನು ಸೇರಿಸುವ ಕಾರ್ಯ ನಡೆದೇ ಇತ್ತು. ದೇವಾಲಯದ ಮಹಾಮಂಟಪದ ಕಂಬಗಳು ಅತ್ಯುನ್ನತ ಕಲಾತ್ಮಕತೆ ಪಡೆದಿವೆ. ಶಿಲ್ಪಿಗಳು ಕಂಬಗಳಲ್ಲಿ ಸಪ್ತಸ್ವರಗಳು ಬರುವಂತೆ ಮಾಡಿದ್ದಾರೆ. ಕಂಬಗಳ ಗಾತ್ರಕ್ಕನುಗುಣವಾಗಿ ಸ್ವರ ಬದಲಾವಣೆಯಾಗುತ್ತದೆಂಬ ತಂತ್ರವನ್ನು ಶಿಲ್ಪಿಗಳು ಅರಿತಿದ್ದುದನ್ನು ಕಾಣಬಹುದು.

ವಿಠ್ಠಲ ದೇವಾಲಯದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತಿದ್ದ ಬಗೆಗೆ ಅಲ್ಲಿಯ ಶಾಸನವೊಂದರಲ್ಲಿ ಹೇಳಿದೆ.[2] ಮಹಾನವಿ, ಮಕರ ಸಂಕ್ರಾಂತಿ, ಗೋಕುಲಾಷ್ಟಮಿ ಇನ್ನಿತರ ಹಬ್ಬಗಳನ್ನು ಈ ಶಾಸನದಲ್ಲಿ ಹೇಳಲಾಗಿದೆ. ಈ ಹಬ್ಬ ಸಂದರ್ಭಗಳಲ್ಲಿ ವಿಠ್ಠಲದೇವರ ಉತ್ಸವ, ರಥೋತ್ಸವ, ತೆಪ್ಪೋತ್ಸವಗಳು ನಡೆಯುತ್ತಿದ್ದವು. ಶಾಸನವೊಂದು, ರಥದ ಶೃಂಗಾರಕ್ಕೆ ಸೀರೆ ಮತ್ತು ಬಣ್ಣಬಣ್ಣದ ದಾರಗಳನ್ನು, ಕರಮಣಿಗಳನ್ನು ಉಪಯೋಗಿಸುತ್ತಿದ್ದರೆಂದು ತಿಳಿಸುವುದು:

ಪರಾಂಕುಶ ಮಂಟಪದ ಮುಂದೆ ಚಪ್ಪರ ಹಾಕಲು
ಹಾಗೂ ಅದನ್ನು ಶೃಂಗಾರ ಮಾಡುವುದಕ್ಕೆ, ವಿಠ್ಠಲ
ದೇವರ ರಥದ ಶೃಂಗಾರಕ್ಕೆ ಬೇಕಾದ ಸೀರೆಗಳು,
ಬಣ್ಣ ಬಣ್ಣದ ಕರೆಗಳು, ಕರಮಣಿಗಳಿಗೆ ಮತ್ತು
ವಾದ್ಯದವರ ವಿನಿಯೋಗಕ್ಕಾಗಿ ಬಿಟ್ಟುಕೊಟ್ಟ ಗದ್ದೆ,

ಇದರಿಂದ ವಿಠ್ಠಲ ಬಜಾರದಲ್ಲಿ ರಥೋತ್ಸವ ನಡೆಯುತ್ತಿದ್ದು, ದೇವಾಲಯದ ಮುಂಬದಿಯಿಂದ ಪರಾಂಕುಶ ಮಂಟಪದವರೆಗೂ ರಥವನ್ನು ಎಳೆದು ತರುತ್ತಿದ್ದರೆಂಬುದು ಸ್ಪಷ್ಟ.

ವಿಠ್ಠಲ ಬಜಾರು ಸಹ ಇತರ ಬಜಾರುಗಳಂತೆ ಮಾರುಕಟ್ಟೆ ಪ್ರದೇಶವಾಗಿತ್ತು. ಸರಕು ಸಾಮಗ್ರಿಗಳು ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬರುತ್ತಿದ್ದವು. ವಿಠ್ಠಲ ಬಜಾರದ ವಾಯವ್ಯಕ್ಕೆ ತುಂಗಭದ್ರಾ ನದಿಯಲ್ಲಿ ಕಲ್ಲುಕಂಬದ ಸೇತುವೆಯನ್ನು ಎರಡನೇ ಹರಿಹರನ ಸಹೋದರ ಕಂಪಭೂಪನು ಕಟ್ಟಿಸಿದ್ದು,[3] ಉತ್ತರದಲ್ಲಿದ್ದ ಪ್ರದೇಶಗಳಿಗೆ ನೇರ ಸಂಪರ್ಕವನ್ನು ಕಲ್ಪಿಸುವುದರೊಡನೆ ವಿಠ್ಠಲ ಬಜಾರು ಹಾಗೂ ಹಂಪೆಯ ಇತರ ಬಜಾರುಗಳಿಗೆ ಉತ್ತರದಿಂದ ಸರಕು ಸಾಮಗ್ರಿಗಳ ಸಾಗಣೆಗೆ ಅನುಕೂಲ ಕಲ್ಪಿಸುವುದು ಇದರ ಉದ್ದೇಶವಾಗಿದ್ದಿತು.

ವ್ಯಾಪಾರಿಗಳು ಮತ್ತಿತರರಿಗೆ ದೇವಾಲಯಗಳು ಸಾಲ ನೀಡುತ್ತಿದ್ದವೆಂಬುದನ್ನು ಶಾಸನಗಳಲ್ಲಿಯ ಅಂಶಗಳಿಂದ ಗುರುತಿಸಬಹುದು. ರಾಜರು, ಶ್ರೀಮಂತರು, ವ್ಯಾಪಾರಿಗಳು ದೇವಾಲಯಗಳಿಗೆ ನೀಡುತ್ತಿದ್ದ ದಾನ-ದತ್ತಿಗಳ ಮೂಲದಿಂದಲೇ ದೇವಾಲಯದ ಬೊಕ್ಕಸದಿಂದ ಸಾಲ ಕೊಡಲಾಗುತ್ತಿತ್ತು; ಇದರಿಂದ ಬಂದ ಬಡ್ಡಿಯನ್ನು ದೇವಾಲಯದ ನಿತ್ಯ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ವಿಠ್ಠಲ ದೇವಾಲಯದ ಕ್ರಿ.ಶ. ೧೫೩೯ ರಲ್ಲಿಯ ಶಾಸನವು.

......... ದೇವರ ಭಂಡಾರಕ್ಕೆ ಸಮರ್ಪಿಸಿದ ರೊಕ್ಕ
ಘಟ್ಟಿವರಹ ಯಿನ್ನೂರು ವರಹನೂ ಇ ವರಹಕಂ
ಬಡ್ಡಿ ತಿಂಗಳು ೧ಕ್ಕೆ ಘಟಿ ವರಹ ೫ಕ್ಕ ಸಲೆ
ಚಕ್ರಗ ೫೦[4]

ಎಂದು ತಿಳಿಸುತ್ತದೆ. ಇದರಲ್ಲಿ ಹೇಳಿರುವ ಬಡ್ಡಿಯು ಸಾಲವಾಗಿ ಕೊಟ್ಟಿದ್ದ ಹಣದಿಂದ ಬಂದುದಿರಬೇಕು. ವ್ಯಾಪಾರ-ವ್ಯವಹಾರಗಳಿಗೆ ದೇವಾಲಯಗಳು ಪ್ರೋತ್ಸಾಹ ನೀಡುತ್ತಿದ್ದುದೂ ಇಲ್ಲಿ ವ್ಯಕ್ತವಾಗುತ್ತದೆ. ವ್ಯಾಪಾರಿಗಳು ದೇವಾಲಯಗಳಿಗೆ, ಮಠಗಳಿಗೆ, ಮಂಟಪಗಳನ್ನು ಕಟ್ಟಿಸುವುದಕ್ಕೆ ಹಣದ ನೆರವು ನೀಡುತ್ತಿದ್ದರು. ಅಂಥವರಲ್ಲಿ ಗಂಧದ ತಿಪ್ಪಿಸೆಟ್ಟಿಯೆಂಬುವನು ವಿಠ್ಠಲ ದೇವಾಲಯದ ಉತ್ತರ ಭಾಗದಲ್ಲಿಯ ನಾಲ್ಕು ಅಂಕಣದ ಮಂಟಪದಲ್ಲಿ ಆಳ್ವಾರರ ಪ್ರತಿಮೆಗಳನ್ನು ಮಾಡಿಸಿದನೆಂದು ಶಾಸನವೊಂದು ಹೇಳುತ್ತದೆ:

...ವಾಣಿಜ್ಯ ವೈಶ್ಯನಗರದ ಶೆಟ್ಟ್ಯಣದರುಶಿಗೋತ್ರದ
ಅಧಿಕಾರಿಯ ತಿಪ್ಪಿಸೆಟ್ಟಿಯರ ಮಗ ಗಂಧದ ತಿಪ್ಪಿ
ಸೆಟ್ಟಿಯರು ಅಚ್ಯುತಮಹಾರಾಯರಿಗೆ ಪುಣ್ಯವಾಗ
ಬೇಕೂ ಎಂದು ಪ್ರತಿಷ್ಠೆಯ ಮಾಡಿದ ಆಳ್ವಾರ
ದೇವರು ೧೨ ತಿರುಕಚಿ ನಂಬಿಯಾಳ್ವಾರು ೧ ಉಭಯಂ
ದೇವರು ಹದಿಮೂರು….[5]

ಎಂದು ಹೇಳಿದೆ. ಜೊತೆಗೆ ಇವುಗಳ ನಿತ್ಯ ನೈವೇದ್ಯ ಮುಂತಾದ ಪೂಜಾಕಾರ್ಯಗಳಿಗೆ ನೂರು ವರಹಗಳನ್ನು ನೀಡದವನೆಂದು ತಿಳಿಯುವುದು. ಇಂತಹ ಅನೇಕ ದಾನ ದತ್ತಿಗಳನ್ನು ವ್ಯಾಪಾರಿಗಳು ನೀಡುತ್ತಿದ್ದರು.

ಈ ಎಲ್ಲ ಅಂಶಗಳು ದೇವಾಲಯಗಳಿಗೂ, ಬಜಾರಗಳಲ್ಲಿ ವ್ಯಾಪಾರ ಮಾಡುತ್ತಿದ್ದ ವರ್ತಕರಿಗೂ ಇದ್ದ ನಿಕಟ ಸಂಬಂಧದ ಬಗೆಗೆ ಬೆಳಕು ಚೆಲ್ಲುತ್ತವೆ. ವಿಠ್ಠಲ ಬಜಾರು ಸಾಂಸ್ಕೃತಿಕವಾಗಿ ಮುಂದುವರಿದಿದ್ದಂತೆಯೇ, ಆರ್ಥಿಕವಾಗಿಯೂ ಉನ್ನತಿಯನ್ನು ಸಾಧಿಸಿತ್ತೆನ್ನುವುದು ಸ್ಪಷ್ಟ.

**ಈ. ಕೃಷ್ಣ ಬಜಾರು**

ಹಂಪೆಯ ಮುಖ್ಯ ದೇವಾಲಯಗಳಲ್ಲಿ ಬಾಲಕೃಷ್ಣ ದೇವಾಲಯವೂ ಒಂದು. ವಿರೂಪಾಕ್ಷ ಬಜಾರದ ದಕ್ಷಿಣಕ್ಕೆ ಕಮಲಾಪುರಕ್ಕೆ ಹೋಗುವ ರಸ್ತೆಯಲ್ಲಿದೆ. ಈ ದೇವಲಾಯದ ಮುಂಭಾಗ ಪ್ರದೇಶವೇ ಕೃಷ್ಣ ಬಜಾರು. ಈಗ ಗದ್ದೆಗಳಿಂದ ಆವೃತವಾಗಿದೆ.

ಬಾಲಕೃಷ್ಣ ದೇವಾಲಯಕ್ಕೆ ಐತಿಹಾಸಿಕ ಮಹತ್ವವಿದೆ. ಕೃಷ್ಣದೇವರಾಯನು ಕ್ರಿ.ಶ.೧೫೧೩ರಲ್ಲಿ ಒರಿಸ್ಸಾದ ಮೇಲೆ ದಂಡೆತ್ತಿ ಹೋಗಿ ಗಜಪತಿಯನ್ನು ಸೋಲಿಸಿ, ಉದಯಗಿರಿಯಿಂದ ತನ್ನ ವಿಜಯದ ನೆನಪಿಗೆ ಬಾಲಕೃಷ್ಣನ ಪ್ರತಿಮೆಯನ್ನು ತಂದನಲ್ಲದೆ, ಅದನ್ನು ತನ್ನ ರಾಜಧಾನಿ ಹಂಪೆಯಲ್ಲಿ ಪ್ರತಿಷ್ಠಾಪಿಸುವುದಕ್ಕಾಗಿ ಕಟ್ಟಿಸಿದ ಬೃಹತ್ ದೇವಾಲಯವೇ ಬಾಲಕೃಷ್ಣ ದೇವಾಲಯ. ಕ್ರಿ.ಶ.೧೫೧೯ರ ವೇಳೆಗೆ ಈ ದೇವಾಲಯ ಪೂರ್ಣಗೊಂಡ ಮೇಲೆ ಬಾಲಕೃಷ್ಣನನ್ನು ಇಲ್ಲಿ ಪ್ರತಿಷ್ಠಾಪಿಸಲಾಯಿತು. ದೇವಾಲಯದ ನಂತರ ಕೃಷ್ಣ ಬಜಾರು ನಿರ್ಮಾಣಗೊಂಡಿತು.

ದೇವಾಲಯವು ವಿಶಾಲವಾದ ಪ್ರಾಂಗಣದಲ್ಲಿ ದಕ್ಷಿಣ, ಉತ್ತರ ಮತ್ತು ಪೂರ್ವ ಗೋಪುರಗಳನ್ನು ಹೊಂದಿದೆ. ಗರ್ಭಗೃಹ, ಸುಕನಾಸಿ, ಪ್ರದಕ್ಷಿಣ ಪಥ, ನವರಂಗ ಮತ್ತು ಮಹಾಪಂಟಗಳು ದೇಗುಲದ ಪ್ರಮುಖ ಭಾಗಗಳು. ಎಡಭಾಗಗಳಲ್ಲಿ ಅಮ್ಮನವರ ಗುಡಿ, ಗರುಡಮಂಟಪ ಇನ್ನಿತರ ಮಂಟಪಗಳಿವೆ. ದೇವಾಲಯದ ಬಲಭಾಗದಲ್ಲಿ ದವಸ-ಧಾನ್ಯಗಳನ್ನು ಸಂಗ್ರಹಿಸಿಡುತ್ತಿದ್ದ ಉಗ್ರಾಣವಿದೆ. ಕೃಷ್ಣ ಬಜಾರನ್ನು ಶಾಸನಗಳಲ್ಲಿ ಕೃಷ್ಣಾಪುರ ಪೇಟೆ, ಬಾಲಕೃಷ್ಣದೇವರ ತೇರುಬೀದಿಯೆಂದು ಕರೆಯಲಾಗಿದೆ. ಕೃಷ್ಣ ಬಜಾರನ್ನು ಒಳಗೊಂಡಂತೆ ಇದರ ಸುತ್ತಮುತ್ತಲಿನ ಪ್ರದೇಶವನ್ನು ಕೃಷ್ಣಾಪುರವೆಂದು ಹೆಸರಿಸಲಾಗಿದೆ. ಕನಕದಾಸರು ದ್ವಾರಕಾಪುರ ವರ್ಣನೆಯಲ್ಲಿ,

ತಂಡ ತಂಡದೆ ಕೃಷ್ಣನಗರಿಯೊಳ್ ಚಲಿಸುವ
ಮಂಡಳಿಕರ ಕಾಲಕಡಗ
ಪೆಂಡೆಯ ತಾಟಾಡಿ ರತ್ನಗಳ ಕ್ಕೆ
ದಂಡೆಯೊಳ್ ಸಿಕ್ಕಿ ಬಾಚುವರು[6]

ಇಲ್ಲಿ ಹೇಳಿರುವ 'ಕೃಷ್ಣನಗರಿ' ಕೃಷ್ಣಾಪುರವೇ ಇರಬೇಕು. ಕೃಷ್ಣ ಬಜಾರದ ಉದ್ದ ೫೭೦ಮೀ., ಅಗಲ ೪೯.೫ಮೀ. ಇಕ್ಕೆಲಗಳಲ್ಲಿ ಮೂರು ಅಡಿಗಳೆತ್ತರದ ಅಧಿಷ್ಠಾನದ ಮೇಲೆ ಸಾಲು ಮಂಟಪಗಳನ್ನು ಕಟ್ಟಲಾಗಿದೆ.[7] ಸಾಲುಮಂಟಪಗಳು ಎರಡು ಅಂಕಣಗಳನ್ನು ಹೊಂದಿವೆ. ಇವುಗಳಲ್ಲಿ ಕೆಲವು ಎಂಟು ಅಂಕಣಗಳಷ್ಟು ವಿಶಾಲವಾಗಿದೆ. ಇವು ಶ್ರೀ ವೈಷ್ಣವ ಪಂಥದ ಮಠಗಳು ಇದ್ದಿರಬೇಕು. ಬಜಾರದ ಎಡಭಾಗದಲ್ಲಿ ತಪ್ಪೋತ್ಸವದ ಕೊಳವಿದೆ. ಮಧ್ಯ ಇರುವ ಉತ್ಸವ ಮಂಟಪವು ಗೋಪುರವನ್ನು ಹೊಂದಿದೆ. ಕೃಷ್ಣ ಬಜಾರದಲ್ಲಿಯೂ ಮಠಗಳಿದ್ದುದನ್ನು ಅಲ್ಲಿಯ ಅವಶೇಷಗಳಿಗಿಂದಲೂ ಉಬ್ಬುಶಿಲ್ಪಗಳಿಂದಲೂ ಗುರುತಿಸಬಹುದು. ಈ ಬಜಾರು ತೇರುಬೀದಿಯಾಗಿದ್ದು, ಬಾಲಕೃಷ್ಣನ ಪ್ರತಿಮೆಯನ್ನು ರಥದಲ್ಲಿಟ್ಟು ಬೀದಿಯಲ್ಲಿ ಎಳೆಯುತ್ತಿದ್ದರು. ಇದು ಬಜಾರದ ಕೊನೆಯಲ್ಲಿದ್ದ ಉತ್ಸವಮಂಟಪ (ಪಾದಗಟ್ಟೆ)ದವರೆಗೂ ಹೋಗುತ್ತಿತ್ತು. ಈ ಉತ್ಸವ ಮಂಟಪವು ಈಗ ನಾಶವಾಗಿದ್ದು, ಕೇವಲ ಅವಶೇಷಗಳು ಮಾತ್ರ ಉಳಿದಿವೆ.

ಕೃಷ್ಣಾಪುರವು ದೇವಾಲಯದ ಬಲಭಾಗಕ್ಕೆ ಉದ್ದಾನ ವೀರಭದ್ರ ದೇಗುಲ ಮತ್ತು ಎಡಕ್ಕೆ ವಿರೂಪಾಕ್ಷ ಬಜಾರಗಳವರೆಗೂ ವಿಸ್ತರಿಸಿದ್ದಿತು. ಅಲ್ಲಿಯ ಮಂಟಪಗಳ ಅವಶೇಷಗಳಿಂದ ಇದನ್ನು ಸ್ಪಷ್ಟವಾಗಿ ತಿಳಿಯಬಹುದು.

ಕೃಷ್ಣ ಬಜಾರು ವಿಜಯನಗರ ಆಳ್ವಿಕೆಯ ಕಾಲದಲ್ಲಿ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳ ಕೇಂದ್ರವಾಗಿರದೆ, ಪ್ರಮುಖ ವ್ಯಾಪಾರ ಕೇಂದ್ರವೂ ಆಗಿದ್ದಿತು. ಆದರೆ ಬಜಾರನ್ನು ಕಟ್ಟುವುದಕ್ಕೆ ಮೊದಲು ಈ ಪ್ರದೇಶವು ಇಂದಿನಂತೆ ಗದ್ದೆಯಾಗಿತ್ತು. ಶಾಸನದಲ್ಲಿ ಹೇಳಿರುವ ಹಾಗೆ, ಕ್ರಿ.ಶ.೧೫೧೩ರಲ್ಲಿ ಬಾಲಕೃಷ್ಣ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ ನಂತರ,

ಶ್ರೀ ಬಾಲಕೃಷ್ಣದೇವರ ತಿರುವೀಧಿ ವಿನಿಯೋಗಕ್ಕಾಗಿ
ಬಿಟ್ಟುಕೊಟ್ಟ ಗದ್ದೆ ಬಗ್ಗೆ, ಬ್ರಾಹ್ಮಣರ ನಿವೇಶನಗಳು
ಪೇಟೆಯ ಮಳಿಗೆಮನೆಗಳು ಸ್ಥಾನಿಕರು, ಸ್ಥಳಸೇನ
ಬೋವರು ಮುಂತಾದವರಿಗೆ ಬಿಟ್ಟುಕೊಟ್ಟ ಗದ್ದೆ[8]

ಎಂದು ತಿಳಿಸುವುದರಿಂದ, ಈ ಕುರಿತು ಖಚಿತ ವಿವರ ಸಿಕ್ಕುತ್ತದೆ. ಶಾಸನದಲ್ಲಿ ಪೇಟೆಯ ಮಳಿಗೆಗಳು ಎಂದು ಹೇಳಿರುವುದರಿಂದ, ಕೃಷ್ಣ ಬಜಾರು ಮಾರುಕಟ್ಟೆಯೆಂಬುದರಲ್ಲಿ ಸಂಶಯವಿಲ್ಲ. ಅಲ್ಲದೆ, ಈ ಬಜಾರಿನಲ್ಲಿ ದವಸದ ಅಂಗಡಿಗಳೇ ಹೆಚ್ಚಾಗಿ ಇದ್ದವೆಂಬುದು ಗಮನಾರ್ಹ. ಇನ್ನೊಂದು ಮುಖ್ಯಾಂಶವೆಂದರೆ, ಅಚ್ಯುತರಾಯ ಹಾಕಿಸಿರುವ ಶಾಸನವೊಂದಲ್ಲಿ,

.... ಕೃಷ್ಣಾಪುರದ ಪೇಠೆಯ ದವಸದಂಗಡಿಗಳ ತೊಡೆಯದ ಬಗೆಯಲೂ ಸಲುವ ಘಟಿ ವರಹ[9]

ಎಂದಿದೆ. ಇದರಿಂದ ಕೃಷ್ಣಾಪುರವು ದವಸ-ಧಾನ್ಯಗಳ ಮಾರುಕಟ್ಟೆಯಾಗಿತ್ತೆಂದು ಸ್ಪಷ್ಟ ಪಡುತ್ತದೆ. ಅಲ್ಲದೆ, ದವಸ ಸಂಗ್ರಹಿಸಿಡುವುದಕ್ಕಾಗಿ ಕೃಷ್ಣ ದೇವಾಲಯದ ಬಲಭಾಗದಲ್ಲಿ ಉಗ್ರಾಣವನ್ನು ನಿರ್ಮಿಸಿದುದೂ ಇದನ್ನು ಇನ್ನಷ್ಟು ಸಮರ್ಥಿಸುತ್ತದೆ. ಈ ಅಂಗಡಿಗಳಿಂದ ಬರುತ್ತಿದ್ದ ಆದಾಯವನ್ನು ಕೃಷ್ಣ ದೇವಾಲಯಕ್ಕೆ ಬಿಡಲಾಗಿದ್ದಿತೆಂದು ಮೇಲಿನ ಶಾಸನದಲ್ಲಿ ಹೇಳಿದೆ. ದವಸ ಧಾನ್ಯಗಳನ್ನು ಮಾತ್ರವಲ್ಲದೆ, ಇತರ ವಸ್ತುಗಳೂ ಈ ಬಜಾರ್ ನಲ್ಲಿ ಮಾರಾಟವಾಗುತ್ತಿದ್ದವು. ಪುರಾತತ್ತ್ವ ಇಲಾಖೆಯು ನಡೆಸಿದ ಉತ್ಖನನದಿಂದ ಈ ಬಗೆಗೆ ಹೆಚ್ಚಿನ ಆಧಾರಗಳು ದೊರೆತಿವೆ.[10] ಕೃಷ್ಣ ದೇವಾಲಯದ ಬಳಿಯಲ್ಲಿ ನಡೆದ ಉತ್ಖನನದಲ್ಲಿ ದೊರೆತ ವಸ್ತುಗಳಲ್ಲಿ ಚೀನಾದೇಶದ ಪಿಂಗಾಣಿ ಪಾತ್ರೆಗಳು ಮುಖ್ಯವಾದುವು. ಇವು ನೀಲಿಯ ಬಣ್ಣದವಾಗಿದ್ದು, ಅವುಗಳ ಮೇಲೆ ಹೂಬಳ್ಳಿ, ಮಂಡಲ, ಇನ್ನಿತರ ಸುಂದರ ವಿನ್ಯಾಸಗಳಿವೆ. ಚೀನಾ ದೇಶಗಳೊಂದಿಗೆ ವಿಜಯನಗರ ಸಾಮ್ರಾಜ್ಯವು ಇಟ್ಟುಕೊಂಡಿದ್ದ ವ್ಯಾಪಾರ ಸಂಬಂಧವನ್ನು ಇದು ಸಮರ್ಥಿಸುತ್ತದೆ. ಇದಕ್ಕೆ ಪೂರಕವಾಗಿ, ವಿಜಯನಗರದಲ್ಲಿ ಮಾರಾಟವಾಗತ್ತಿದ್ದ ವಸ್ತುಗಳು ಕುರಿತು ಬಾರ್ಬೋಸಾ ಹೀಗೆ ಹೇಳಿದ್ದಾನೆ; "....ಓರ್ಮಸ್ ಮತ್ತು ಕಾಯೆಲ್‌ಗಳಿಂದ ತಂದ ಮುತ್ತುಗಳೂ ಅಪಾರವಾಗಿದೆ. ಚೀನಾ ಮತ್ತು ಅಲೆಗ್ಸಾಂಡ್ರಿಯಾದಿಂದ ಬಂದ ನಾನಾ ತರಹ ರೇಷ್ಮೆ ಮತ್ತು ಸಾಧಾರಣ ಕಿಂಕಾಪು ಬಟ್ಟೆಗಳನ್ನು ಹೆಚ್ಚಾಗಿ ಜನ ಉಪಯೋಗಿಸುತ್ತಾರೆ." ಇದರಿಂದ ಚೀನಾ ಮತ್ತಿತರ ದೇಶಗಳಿಂದ ವಿಜಯನಗರಕ್ಕೆ ಬರುತ್ತಿದ್ದ ವಸ್ತುಗಳ ಪರಿಚಯ ಉಂಟಾಗುತ್ತದೆ.

ಕೃಷ್ಣ ಬಜಾರು ಪ್ರಮುಖ ವ್ಯಾಪಾರ ಮಾರುಕಟ್ಟೆಯಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಆದಾಯ ಯಥೇಚ್ಛವಾಗಿ ಬರುತ್ತಿತ್ತು. ಕೃಷ್ಣದೇವರಾಯನ ಕಾಲಕ್ಕೆ ಭೇಟಿ ನೀಡಿದ ಡೊಮಿಂಗೋ ಪಾಯೇಸನು, ಕೃಷ್ಣಾಪುರದ ಆದಾಯ ಒಂದು ನೂರು ಬಂಗಾರದ ಪರ್ದಾವೋಗಳೆಂದು, ಈ ಆದಾಯವು ಕೃಷ್ಣದೇವಾಲಯಕ್ಕೆ ಸೇರುತ್ತಿತ್ತೆಂದು ಹೇಳಿದ್ದಾನೆ.[11] ಅಚ್ಯುತರಾಯನು ಸಹಾ ಕೃಷ್ಣದೇವಾಲಯಕ್ಕೆ ಬಜಾರದ ಉತ್ಪನ್ನವನ್ನು ಬಿಟ್ಟುಕೊಟ್ಟಿದ್ದನು. ಬಜಾರದಲ್ಲಿಯ ಅಂಗಡಿಗಳಲ್ಲದೆ, ಹೇರೆತ್ತು (ಎತ್ತಿನ ಗಾಡಿ)ಗಳಿಂದಲೂ ಸುಂಕ ವಸೂಲಿ ಮಾಡುತ್ತಿದ್ದರು. ಸದಾಶಿವರಾಯನ ಕಾಲದ ಕ್ರಿ.ಶ.೧೫೪೫ರ ಶಾಶನವು.

ಕೃಷ್ಣಾಪುರದ ಪೇಟೆಯಲು ಮೂಲೆ ವೀಸ ನಾನಹೇರು
೧ಕ್ಕೆ ಸಲುವ ಕಾಸು ೧. ಸೋಮವಾರದಲು ಅಂಗಡಿ
೧ಕ್ಕೆ ಸಲುವ ಕಾಸು[12] ಎಂದು ತಿಳಿಸುತ್ತದೆ.

ವಸೂಲಿಯಲ್ಲಿ ವಸ್ತುಗಳ ಮೇಲೆ ಸುಂಕವನ್ನು ಎತ್ತಿನಗಾಡಿಗೆ ಒಂದು ಕಾಸು, ಸೋಮವಾರದ ದಿನ ಅಂಗಡಿ ಒಂದಕ್ಕೆ ಒಂದು ಕಾಸನ್ನು ಪಡೆಯುತ್ತಿದ್ದರೆಂದು ಶಾಸನದಲ್ಲಿ ಹೇಳಿದೆ. ಆದರೆ ಇಲ್ಲಿ ಸೋಮವಾರದ ದಿನವೇ ಅಂಗಡಿಗಳಿಂದ ಸುಂಕ ವಸೂಲಿ ಮಾಡುತ್ತಿರುವುದಕ್ಕೆ ಕಾರಣ, ಅಂದು ಕೃಷ್ಣ ಬಜಾರದಲ್ಲಿ ಸಂತೆ ನಡೆಯುತ್ತಿದ್ದು, ವ್ಯಾಪಾರಕ್ಕೆ ಅಂಗಡಿಗಳು ಸೇರುತ್ತಿದಿರಬೇಕು. ಇದರಿಂದ ಸೋಮವಾರದಂದೇ ಸುಂಕ ವಸೂಲಿಮಾಡುತ್ತಿದ್ದುದು ಸ್ಪಷ್ಟ, ಹಾಗೆಯೇ, ಅಚ್ಯುತಾಪುರದ ಪೇಟೆಯಲ್ಲಿ ಮಂಗಳವಾರದಂದು ಅಂಗಡಿಯೊಂದಕ್ಕೆ ಒಂದು ಕಾಸನ್ನು ಸುಂಕವಾಗಿ ಪಡೆಯುತ್ತಿದ್ದರೆಂದು ಇದೇ ಶಾಸನದಿಂದ ಗೊತ್ತಾಗುವುದು. ಪಾಯೇಸನು ಹೇಳಿರುವಂತೆ, ‘ನಗರದ ನಾನಾ ಭಾಗಗಳಲ್ಲಿ ದಿನಕ್ಕೊಂದು ಕಡೆ ವಾರವೆಲ್ಲಾ ಸಂತೆ ನಡೆಯುತ್ತದೆ’ ಎಂದಿರುವುದು ಈ ಮೇಲಿನ ಅಂಶಗಳಿಗೆ ಪುಷ್ಟಿ ನೀಡುತ್ತದೆ.

ಕೃಷ್ಣ ಬಜಾರು ವಿಜಯನಗರದ ಪ್ರಮುಖ ಬಜಾರುಗಳಲ್ಲಿ ಒಂದಾಗಿತ್ತೆನ್ನುವುದು ದಿಟ. ಇದು ಕೃಷ್ಣದೇವರಾಯನಿಂದ ಕಟ್ಟಿಸಲ್ಪಟ್ಟು ಉಳಿದ ಅರಸರ ಪ್ರೋತ್ಸಾಹ ಪಡೆದು ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸಿತು. ಕೃಷ್ಣಾಪುರದ ಪೇಟೆಯು ದವಸ-ಧಾನ್ಯಗಳನ್ನು ಮಾರಾಟ ಮಾಡಲಾಗುತ್ತಿದ್ದ ವಿಶೇಷ ಮಾರುಕಟ್ಟೆಯಾಗಿದ್ದಿತು. ಆದರೆ ಇಂದು ನೋಡಸಿಗುವುದು ಮೂರ್ತಿಯಿಲ್ಲದ ದೇವಾಲಯ, ಗದ್ದೆಗಳಾಗಿ ಮಾರ್ಪಾಟು ಹೊಂದಿರುವ ಬಜಾರು ಪರಿಸರ ಹಾಗೂ ನೆಲಕಚ್ಚಿರುವ ಸ್ಮಾರಕಗಳು.

**ಉ. ಅಚ್ಯುತ ಬಜಾರು**

ವಿರೂಪಾಕ್ಷ ಬಜಾರದ ಪೂರ್ವಕ್ಕೆ ಮೆಟ್ಟಿಲುಗಳಿಂದ ಕೂಡಿದ ದಾರಿಯನ್ನು ಅನುಸರಿಸಿ ಮುಂದೆ ನಡೆದರೆ ಕಾಣಸಿಕ್ಕುವುದೇ ತಿರುವೇಂಗಳನಾಥ ದೇವಾಲಯ. ಆದರೆ ಇದನ್ನು ಅಚ್ಯುತರಾಯ ದೇವಾಲಯವೆಂದೇ ಕರೆಯಲಾಗುತ್ತದೆ. ಈ ದೇವಾಲಯದ ಉತ್ತರಕ್ಕೆ ತುಂಗಭದ್ರಾ ನದಿಯ ದಂಡೆಯವರೆಗೆ ಹರಡಿರುವ ವಿಶಾಲವಾದ ಬೀದಿಯೇ ಅಚ್ಯುತ ಬಜಾರು. ಇದನ್ನು ಶಾಸನಗಳಲ್ಲಿ ಅಚ್ಯುತಾಪೇಟೆ, ತಿರುವೇಂಗಳನಾಥ ತೇರುಬೀದಿ, ‘ಸೂಳೆ ಬಜಾರು’ ಎಂದು ಕರೆಯಲಾಗಿದೆ. ಅಚುತ್ಯರಾಯನ ಆಳ್ವಿಕೆಯಲ್ಲಿ ನಿರ್ಮಾಣವಾದ ಕಾರಣ ಇದಕ್ಕೆ ಅಚ್ಯುತಾಪೇಟೆ ಎಂಬ ಹೆಸರು ಬಂದಿದೆ. ಆದರೆ ಈ ದೇವಾಲಯ ತಿರುವೇಂಗಳನಾಥನದೆಂದೇ ಶಾಸನಗಳು ತಿಳಿಸುತ್ತವೆ.

ದೇವಾಲಯವು ಎರಡು ಸುತ್ತಿನ ಗೋಡೆಗಳನ್ನು ಹೊಂದಿ ಗರ್ಭಗೃಹ, ಪ್ರದಕ್ಷಿಣ ಪಥ, ಸುಕನಾಸಿ, ನವರಂಗ, ಮಹಾಮಂಟಪಗಳನ್ನು ಒಳಗೊಂಡಿದೆ. ದೇವಾಲಯಕ್ಕೆ ನಾಲ್ಕು ಮುಖ್ಯ ಗೋಪುರಗಳು. ದೇವಾಲಯದ ಹಿರಿಯ ಗೋಪುರದ ಉತ್ತರಕ್ಕೆ ಅಚ್ಯುತ ಬಜಾರು ಮತ್ತು ಎಡಕ್ಕೆ ನೃತ್ಯತಮಂಟಪ ಅಥವಾ ನೃತ್ಯಶಾಲೆಗಳು ಇವೆ. ಅಚ್ಯುತ ಬಜಾರದ ಉದ್ದ ೩೯೮.೩ಮೀ. ಬಜಾರದಲ್ಲಿ ಕಂಡಬರುವ ಕಲ್ಲುಹಾಸಿನ ದಾರಿಯ ಅಗಲ ೨೨ಮೀ. ಈಗ ಮುಚ್ಚಿಹೋಗಿದೆ. ಅಚ್ಯುತ ಬಜಾರು ಈ ದೇವಾಲಯದ ಕಾಲದಲ್ಲೇ ನಿರ್ಮಾಣವಾದುದು.

ಶಾಸನಗಳಲ್ಲಿ “ಹಂಪೆಕಟ್ಟೆ ತಿರುಮಲೇಶ”,[13] “ನಾಲ್ಕು ಬಾಗಿಲ ತಿರುಮಲೇಶ”[14]ಗಳೆಂದು ಉಲ್ಲೇಖವಾಗಿರುವುದು ಅಚ್ಯುತಾಪೇಟೆಯ ತಿರುವೇಂಗಳನಾಥನ ದೇವಾಲಯವಿದ್ದಿರುವ ಸೂಚನೆಯನ್ನು ನೀಡುತ್ತದೆ. ಆದರೆ ಈ ಮೊದಲೇ ದೇವಾಲಯವಿದ್ದರೂ ಇದರ ಸಂಪೂರ್ಣ ಬೆಳವಣಿಗೆ ಆದುದು ಹಾಗೂ ಬಜಾರದ ನಿರ್ಮಾಣವಾದುದು ಅಚ್ಯುತರಾಯನ ಕಾಲದಲ್ಲೆ. ಈ ಹಿನ್ನೆಲೆಯಲ್ಲಿಯೇ ಅಚ್ಯುತಾಪೇಟೆಯೆಂಬುದಾಗಿ ಶಾಸನದಲ್ಲಿ ಕರೆದಿರುವುದು. ಇದೇ ಅಂದಿನ ಮಾರುಕಟ್ಟೆಯಾಗಿದ್ದುದಕ್ಕೆ ಸಾಕ್ಷಿ. ಈ ಅಚ್ಯುತಾಪೇಟೆಯ ಸೀಮಾವಿವರವನ್ನು ಶಾಸನದಲ್ಲಿ,

..... ಪಡುವಲು ಮತಂಗಪರ್ವತ
ಮೂಡಲು ತಿಪರಾಜ ತೋ(ಟ)
ಬಡಗ ತುಂಗಭದ್ರಾ ತೀರದ ಸೀತಾಕೊಂಡ
(ಟೆಂಕ)ಲು ಭೂಪತಿಕೆರೆ[15]

ಎಂದು ಗುರುತಿಸಿದ್ದು, ಅಚ್ಯುತಬಜಾರದ ಸ್ಪಷ್ಟ ಕಲ್ಪನೆ ಇಲ್ಲಿ ಮೂಡುತ್ತದೆ.

ಅಚ್ಯುತ ಬಜಾರು ಅಥವಾ ಅಚ್ಯುತಾಪೇಟೆಯು ಮಾರುಕಟ್ಟೆಯಾಗಿದ್ದು, ವಾರಕ್ಕೊಂದು ದಿನ ಇಲ್ಲಿ ಸಂತೆ ನೆರವೇರುತ್ತಿದ್ದಿತು. ಈ ಸಂತೆಯಲ್ಲಿ ಎಲ್ಲಾ ಕಡೆಗಳಿಂದ ತಂದಂತಹ ವಸ್ತುಗಳ ಮಾರಾಟ ಮಾಡಲಾಗುತ್ತಿದ್ದಿತು. ಈ ಸಂತೆಯಲ್ಲಿ ಎಲ್ಲಾ ಕಡೆಗಳಿಂದ ತಂದಂತಹ ವಸ್ತುಗಳ ಮಾರಾಟ ಮಾಡಲಾಗುತ್ತಿದ್ದಿತು. ಇಲ್ಲಿ ಮಂಗಳವಾರದಂದು ಸಂತೆ ಸೇರುತ್ತಿತ್ತೆಂದು ಉದ್ದಾನ ವೀರಭದ್ರ ದೇವಾಲಯದ ಶಾಸನದಲ್ಲಿ ಉಕ್ತವಾದ,

........ ಅಚ್ಯುತಾಪುರದ ಪೇಟೆಯಲು ಮೂಲೆವೀಸ
ಒಳಹೇರು ೧ಕ್ಕೆ ಸಲು ಉದು ಕಾಸು ೧ ಮಂಗಳವಾರದಲೂ
ಅಂಗಡಿ ೧ಕ್ಕೆ ಸಲುವ ಕಾಸು[16]

ಎಂಬ ಸಾಲುಗಳಲ್ಲಿ ಗುರುತಿಸಲಾಗಿದೆ. ಮಂಗಳವಾರದಂದು ಇಲ್ಲಿಯ ಪ್ರತಿಯೊಂದು ಅಂಗಡಿಯಿಂದ ಒಂದೊಂದು ಕಾಸು ವಸೂಲಿ ಮಾಡುತ್ತಿದ್ದರೆಂದು ಹೇಳಿರುವುದು ಸಹ ಅಂದೇ ಸಂತೆ ನಡೆಯುತ್ತಿದ್ದಿತೆಂಬುದನ್ನು ಸಮರ್ಥಿಸುತ್ತದೆ. ಇಲ್ಲಿ ಕೂಡ ಹಂಪೆಯ ಇತರ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿದ್ದ ಎಲ್ಲ ವಸ್ತುಗಳೂ ದೊರೆಯುತ್ತಿದ್ದವು.

ಸಾಂಸ್ಕೃತಿಕವಾಗಿಯೂ ಈ ಬಜಾರು ಮಹತ್ವವನ್ನು ಹೊಂದಿದ್ದಿತು. ಎಲ್ಲಾ ದೇವಾಲಯಗಳಲ್ಲಿ ನಡೆಸುತ್ತಿದ್ದ ಹಬ್ಬಗಳು, ರಥೋತ್ಸವಗಳು, ಉತ್ಸವಗಳನ್ನು ಇಲ್ಲಿಯೂ ಏರ್ಪಡಿಸಲಾಗುತ್ತಿದ್ದಿತು. ‘ತಿರುವೆಂಗಳನಾತಾನ ತೇರುಬೀದಿ’ಯೆಂದು ಶಾಸನದಲ್ಲಿ ಕರೆದಿರುವುದು, ಇಲ್ಲಿ ರಥೋತ್ಸವ ನಡೆಯುತ್ತಿದ್ದುದಕ್ಕೆ ಸ್ಪಷ್ಟ ಸೂಚನೆ. ಅಚ್ಯುತ ಬಜಾರದ ವಿಶೇಷತೆಯೆಂದರೆ ನೃತ್ಯಕ್ಕಾಗಿಯೇ ಇಲ್ಲಿ ಪ್ರತ್ಯೇಕವಾದ ಮಂಟಪವಿರುವುದು. ಇದು ಅಂದಿನ ನೃತ್ಯಶಾಲೆ. ರಾಜರು ಇದನ್ನು ಪ್ರತ್ಯೇಕವಾಗಿ ಕಟ್ಟಿಸಿರುವುದನ್ನು ನೋಡಿದರೆ, ನೃತ್ಯ-ಸಂಗೀತಗಳಿಗೆ ಅರಸರು ನೀಡಿದ ಪ್ರೋತ್ಸಾಹ ವ್ಯಕ್ತಪಡುತ್ತದೆ.

ಅಚ್ಯುತ ಬಜಾರನ್ನು ಲಾಂಗ್‌ಹರ್ಸ್ಟ್‌ಮುಂತಾದ ವಿದ್ವಾಂಸರು ‘ಸೂಳೆ ಬಜಾರು’ ಎಂದು ಕರೆದಿರುವದನ್ನು ಇಲ್ಲಿ ಚರ್ಚಿಸಬಹುದು. ನರ್ತಕಿಯರು ಇಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರೆಂದೂ ವಿದ್ವಾಂಸರು ಹೇಳಿದ್ದಾರೆ. ಸೂಳೆ ಬಜಾರು ಎಂಬುದು ಇಂದಿಗೂ ಇಲ್ಲಿ ಪ್ರಚಲಿತವಿರುವುದು ಗಮನಾರ್ಹ. ಆದರೆ ಷ. ಶೆಟ್ಟರ್, ವಸುಂಧರಾ ಫಿಲಿಯೋಜಾ ಮುಂತಾದವರು ಈ ಬೀದಿಯು ಸೂಳೆ ಬಜಾರು ಆಗಿರಲಿಲ್ಲವೆಂದು ವಾದಿಸಿದ್ದಾರೆ.

ಸೂಳೆ ಬಜಾರು ಎಂಬ ಅಭಿಪ್ರಾಯವನ್ನು ಅಲ್ಲಗೆಳೆಯುವಂತಿಲ್ಲವೆಂಬುದಕ್ಕೆ ಹಲವಾರು ಕಾರಣಗಳಿವೆ. ಪ್ರಮುಖ ಉದಾಹರಣೆಯೆಂದರೆ, ವಿಜಯನಗರದಲ್ಲಿ ಎಲ್ಲಾ ಪ್ರಮುಖ ದೇವಾಲಯಗಳಿಗೂ ದೇವರ ಅಂಗ ರಂಗ ವೈಭೋಗ ಅಮೃತಪಡಿ ನೈವೇದ್ಯಕ್ಕೆಂದು ದಾನ ದತ್ತಿಗಳನ್ನು ನೀಡಿರುವುದು ಹಲವಾರು ಶಾಸನಗಳಲ್ಲಿ ಕಂಡುಬರುತ್ತದೆ.[17] ಅಂಗ ಭೋಗವು ದೇವರ ವಿಗ್ರಹಕ್ಕೆ ಸಲ್ಲುವ ಪೂಜೆ-ಪುನಸ್ಕಾರಗಳಾದರೆ, ರಂಗಭೋಗವು ಗರ್ಭಗೃಹದ ಮುಂದಿನ ರಂಗದ ಮೇಲೆ ಸುಂದರವಾದ ನರ್ತಕಿಯರಿಂದ ನಡೆಸುತ್ತಿದ್ದ ನರ್ತನ.[18] ಈ

ಅಂಗಭೋಗಕ್ಕೆಂದೇ ನರ್ತಕಿಯರು ಅಥವಾ ದೇವದಾಸಿಯರನ್ನು ನೇಮಿಸಿಕೊಳ್ಳುತ್ತಿದ್ದರು. ದೇವಾಲಯದಲ್ಲಿರುವ ಆದಾಯದ ಒಂದು ಪಾಲನ್ನು ಇವರಿಗೂ ನೀಡುತ್ತಿದ್ದರು.[19] ನರ್ತಕಿಯರು ಅಥವಾ ದೇವದಾಸಿಯರಿಗೆ ದೇವಾಲಯದ ಹತ್ತಿರದಲ್ಲಿ ಪ್ರತ್ಯೇಕ ವಾಸಸ್ಥಳಗಳನ್ನು ಕಟ್ಟಿಕೊಡುತ್ತಿದ್ದರು. ಅಬ್ದುಲ್‌ರಜಾಕ್‌ಹೇಳಿರುವಂತೆ, "ದರಬ್‌ಖಾನೆಯ ಹಿಂಭಾಗದಲ್ಲಿ ಮುನ್ನೂರು ಗಜಕ್ಕಿಂತಲೂ ಹೆಚ್ಚು ಉದ್ದವಾದ, ಇಪ್ಪತ್ತು ಗಜಕ್ಕಿಂತಲೂ ಅಗಲವಾದ ಒಂದು ತರಹ ಅಂಗಡಿ ಬೀದಿಯಿದೆ. ....ಯಾರು ಬೇಕಾದರೂ ಈ ಬೀದಿಗೆ ಬಂದು ತನಗೆ ಮೆಚ್ಚಿಗೆಯಾದ ವೇಶ್ಯೆಯನ್ನು ಆರಿಸಿಕೊಂಡು ಅವಳೊಡನೆ ಕಾಲ ಕಳೆಯಬಹುದು."[20]

ಇಲ್ಲಿ ಹೇಳಿರುವ ಬೀದಿ ಅಚ್ಯುತ ಬಜಾರಂತೂ ಅಲ್ಲ. ಅಚ್ಯುತ ಬಜಾರ್ ನಿರ್ಮಾಣಕ್ಕೆ ಮೊದಲೇ ರಜಾಕನು ವಿಜಯನಗರಕ್ಕೆ ಭೇಟಿ ನೀಡಿದ್ದನು. ಆದರೆ ಅವನು ಹೇಳಿರುವ ದರಬ್‌ಖಾನೆಯ ಹತ್ತಿರ ಎಂದಿರುವುದು ಅರಮನೆ ಪ್ರದೇಶದಲ್ಲಿ ಇದ್ದಿರಬಹುದು. ಪಾಯೇಸನು, ವೇಶ್ಯೆಯರನ್ನು ಸಮಾಜದಲ್ಲಿ ಗೌರವ ಭಾವನೆಯಿಂದ ಕಾಣಲಾಗುತ್ತಿತ್ತೆಂದು ತಿಳಿಸಿರುವುದರಿಂದ ವೇಶ್ಯಾಪದ್ಧತಿಯು ರಾಜ್ಯದಲ್ಲಿ ಸಾಮಾನ್ಯವಾಗಿತ್ತೆಂಬುದು ಸ್ಪಷ್ಟ. ತಿರುವೇಂಗಳನಾಥ ದೇವಾಲಯದಲ್ಲಿರುವ ನೃತ್ಯಮಂಟಪದಲ್ಲಿ ಮಿಥುನ ಶಿಲ್ಪಗಳು, ನರ್ತನದ ವಿವಿಧ ಬಗೆಗಳನ್ನು ಉಬ್ಬುಶಿಲ್ಪಗಳಲ್ಲಿ ತೋರಿಸಿರುವುದರಿಂದ ಇದು ನೃತ್ಯಶಾಲೆ ಅಥವಾ ನೃತ್ಯ ಪ್ರದರ್ಶನದ ಸ್ಥಳವಾಗಿದ್ದಿತೆಂಬುದು ಖಚಿತ. ಅಚ್ಯುತ ಬಜಾರನ್ನು ಇಂದಿಗೂ ಸೂಳೆ ಬಜಾರು ಎಂದು ಕರೆಯುತ್ತಿರುವುದು ಈ ಅಂಶಗಳ ಹಿನ್ನೆಲೆಯಲ್ಲಿ ಇರಬಹುದು. ಆದರೆ ಶಾಸನಗಳಲ್ಲಿ, ಇತರ ಮೂಲ ಆಧಾರಗಳಲ್ಲಿ ಸೂಳೆ ಬಜಾರು ಎಂಬುದನ್ನು ಇಲ್ಲಿಯೂ ಪ್ರಸ್ತಾಪಿಸಿರುವುದು ಕಂಡುಬಂದಿಲ್ಲ.

ಅಚ್ಯುತ ಬಜಾರು ಅಥವಾ ಅಚ್ಯುತಾಪೇಟೆಯು ಆರ್ಥಿಕವಾಗಿ, ವ್ಯಾಪಾರ ವಹಿವಾಟು ಮುಂತಾದವುಗಳಲ್ಲಿ ಪ್ರಸಿದ್ಧಿ ಹೊಂದಿದ್ದಂತೆಯೇ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿದ್ದಿತು. ಹಬ್ಬ, ರಥೋತ್ಸವ, ನೃತ್ಯ, ಸಂಗೀತ ಮುಂತಾದವು ಇಲ್ಲಿ ಆಚರಣೆಯಲ್ಲಿದ್ದವು.

**ಊ. ಮಾಲ್ಯವಂತ ಬಜಾರು**

ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆಯಲ್ಲಿ ಮೂರು ಕಿ.ಮೀ.ಗಳ ಅಂತರದಲ್ಲಿ ಮಾಲ್ಯವಂತೆ ಬೆಟ್ಟವಿದೆ. ಈ ಬೆಟ್ಟದ ಮೇಲಿರುವ ದೇವಾಲಯ ರಘುನಾಥನದು. ಇದು ಮಾಲ್ಯವಂತ ರಘುನಾಥ ದೇವಾಲಯವೆಂದೇ ಪ್ರಸಿದ್ಧಿ. ವಿಜಯನಗರ ಕಾಲದ ವೈಷ್ಣವ ದೇವಾಲಯಗಳ ಪೈಕಿ ಇಂದಿಗೂ ಸುಸ್ಥಿತಿಯಲ್ಲಿರುವ ದೇವಾಲಯವಿದು. ಹಂಪೆಯ ಇತರ ಸ್ಮಾರಕಗಳಿಗಾದ ಯಾವ ಹಾನಿಯೂ ಇದಕ್ಕೆ ತಟ್ಟದಿರುವುದರಿಂದ ಸುರಕ್ಷಿತವಾಗಿದೆ. ಇದಕ್ಕೆ ಹಂಪೆಯಿಂದ ದೂರವಾಗಿ ಮಾಲ್ಯವಂತ ಬೆಟ್ಟದ ಮೇಲಿರುವುದೂ ಕಾರಣವಿರಬಹುದು.

ಮಾಲ್ಯವಂತ ಬೆಟ್ಟದ ಮೇಲಿನ ವಿಶಾಲವಾದ ಪ್ರಾಂಗಣದಲ್ಲಿ ಈ ದೇವಾಲಯವನ್ನು ನಿರ್ಮಿಸಿದ್ದಾರೆ. ಪ್ರಾಂಗಣ ಗೋಡೆಯಲ್ಲಿ ಎರಡು ಪ್ರಮುಖ ಗೋಪುರಗಳಿದ್ದು, ಉತ್ತರಕ್ಕೆ ಚಿಕ್ಕದಾದ ಬಾಗಿಲು ಮಾತ್ರವಿದೆ. ಪೂರ್ವ ಗೋಪುರವು ಮೂರು ತಲಗಳನ್ನು ಹೊಂದಿದ್ದರೆ, ದಕ್ಷಿಣ ದಿಕ್ಕಿನದು ಐದು ತಲಗಳಿಂದ ಕೂಡಿದೆ. ರಘುನಾಥ ದೇವಾಲಯವು ಗರ್ಭಗೃಹ, ಸುಕನಾಸಿ, ಪ್ರದಕ್ಷಿಣ ಪಥ, ನವರಂಗ, ಮಹಾಮಂಟಪಗಳಲ್ಲದೆ ಎಡಬದಿಗೆ ಅಮ್ಮನವರ ಗುಡಿಯನ್ನೂ, ಬಲಬದಿಯಲ್ಲಿ ಕಲ್ಯಾಣಮಂಟಪವನ್ನೂ ಹೊಂದಿದೆ. ಗರ್ಭಗೃಹದಲ್ಲಿ ರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯರ ಶಿಲ್ಪಗಳನ್ನು ಹುಟ್ಟುಬಂಡೆಯ ಮೇಲೆ ಕೆತ್ತಲಾಗಿದ್ದು, ಅದೇ ಬಂಡೆಯ ಮೇಲೆಯೇ ದೇವಾಲಯದ ವಿಮಾನವನ್ನೂ ನಿರ್ಮಿಸಿರುವುದು. ಇಂದಿಗೂ ಪೂಜೆ-ಪುನಸ್ಕಾರಗಳು ಮುಂದುವರೆದಿರುವುದನ್ನು ಇಲ್ಲಿ ಕಾಣಬಹುದು. ಕಲ್ಯಾಣಮಂಟಪವನ್ನು ವ್ಯವಸ್ಥಿತವಾಗಿಯೂ, ಉತ್ತಮ ಕಲಾವಂತಿಕೆಯಿಂದಲೂ ನಿರ್ಮಿಸಲಾಗಿದೆ. ಎತ್ತರವಾದ ಅಧಿಷ್ಠಾನದಲ್ಲಿ ಕುದುರೆ ಸವಾರರ ಹಾಗೂ ಅರಬ್ ವರ್ತಕರು ಕುದುರೆ ಹಿಡಿದು ನಿಂತಿರುವ, ಇನ್ನು ಮುಂತಾದ ದೃಶ್ಯಗಳನ್ನು ಕಾಣಬಹುದು. ಕಲ್ಯಾಣ ಮಂಟಪವು ಎತ್ತರವಾದ ವೇದಿಕೆಯನ್ನು ಹೊಂದಿದೆ.

ಕ್ರಿ.ಶ.೧೫೪೫ರಲ್ಲಿ ಆಗಿನ್ನು ಹಿರಿಯೂರಿನಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿದ್ದ ಕಾಮಗೇತಿ ತಿಮ್ಮಣ್ಣ ನಾಯಕನು (ಚಿತ್ರದುರ್ಗ ನಾಯಕ ಸಂಸ್ಥಾನದ ಮೂಲಪುರುಷ) ಮಾಲ್ಯವಂತ ರಘುನಾಥದೇವರ ನೈವೇದ್ಯಕ್ಕೆಂದು ಬಿಟ್ಟುಕೊಟ್ಟ ದತ್ತಿಯ ವಿವರ ಹಿರಿಯೂರು ತಾಲೂಕಿನ ಶಾಸನವೊಂದರಲ್ಲಿ ಕಂಡುಬರುತ್ತದೆ.[21] ಕ್ರಿ.ಶ.೧೫೫೯ರ ಇನ್ನೊಂದು ಶಾಸನ ಸಹ ಕೂಡ ಮಾಲ್ಯವಂತ ರಘುನಾಥನಿಗೆ ಬಿಟ್ಟ ದಾನ-ದತ್ತಿಯ ವಿವರ ನೀಡುವುದು.[22]

ಮಾಲ್ಯವಂತ ಬೆಟ್ಟದಿಂದ ದಕ್ಷಿಣಕ್ಕೆ ಇಳಿದುಬಂದರೆ, ವಸತಿ ನೆಲೆ ಹಾಗೂ ಸಾಲುಮಂಟಪಗಳ ಅವಶೇಷಗಳು ಕಂಡುಬರುತ್ತದೆ. ಇತರ ಬಜಾರುಗಳಂತೆ ಇಲ್ಲಿಯೂ ಸಾಲುಮಂಟಪಗಳಿಂದ ಕೂಡಿದ ವಿಶಾಲ ಬೀದಿಯಿದೆ. ಇಲ್ಲಿ ಬಜಾರು ಅಥವಾ ಪೇಟೆ ಇತ್ತೆಂಬುದನ್ನು ಕ್ಷೇತ್ರಕಾರ್ಯದ ಮೂಲಕವಷ್ಟೇ ಗುರುತಿಸಬಹುದು. ಮಾಲ್ಯವಂತ ಬೆಟ್ಟದ ಕೆಳ ಭಾಗದಲ್ಲಿದ್ದ ಬಜಾರನ್ನು ಕುರಿತ ವಿವರ ಎಲ್ಲಿಯೂ ಕಂಡುಬಂದಿಲ್ಲ. ಬೀದಿಯ ಇಕ್ಕೆಲಗಳಲ್ಲಿ ಸುಮಾರು ೮೦೦ ಮೀಟರುಗಳಷ್ಟು ಉದ್ದ ಸಾಲುಮಂಟಪಗಳಿಂದ್ದುದನ್ನು ಅಲ್ಲಿಯ ಅವಶೇಷಗಳಿಂದ ಗುರುತಿಸಬಹುದಾಗಿದೆ. ಬೀದಿಯ ಬಲಬದಿಯಲ್ಲಿ ಇಂದು ಗೋಶಾಲೆಯಾಗಿ ಪರಿವರ್ತನೆಗೊಂಡಿರುವ ವಿಶಾಲ ಮಂಟಪವಿದೆ. ಇದು ವಿಜಯನಗರ ಅವಧಿಯಲ್ಲಿ ಮಠವಾಗಿದ್ದಿತೆಂಬುದನ್ನು ಅಲ್ಲಿನ ಬಾಗಿಲುವಾಡದಲ್ಲಿರುವ ವೈಷ್ಣವ ದ್ವಾರಪಾಲಕ ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ಈ ಮಂಟಪದಿಂದ ಪೂರ್ವಕ್ಕೆ ಕಂಪ್ಲಿ ರಸ್ತೆಯ ಬಲಬದಿಯಲ್ಲಿ ಕಾಣಬರುವ ಉದಯಗಿರಿ ಬಾಗಿಲವರೆಗೆ ಇದ್ದ ವಿಶಾಲ ಬೀದಿಯೇ ಮಾಲ್ಯವಂತ ಬಜಾರು ಆಗಿರುವುದು.

ಮಾಲ್ಯವಂತ ಬಜಾರದ ಬೀದಿಯು ರಘುನಾಥನ ತೇರುಬೀದಿಯೂ ಆಗಿದ್ದಿತು. ಇದಕ್ಕೆ ಇಂದಿಗೂ ನಡೆಯುತ್ತಿರುವ ರಥೋತ್ಸವ ಪ್ರಮುಖ ಸಾಕ್ಷಿ. ಧಾರ್ಮಿಕವಾಗಿ ಮಹತ್ವ ಹೊಂದಿದ್ದುದನ್ನು ಇಂದಿಗೂ ಉಳಿದು ಬಂದಿರುವ ಅಲ್ಲಿಯ ಮಠ ಹಾಗೂ ಗೇಣೇಶ, ಬೈರವ, ಆಂಜನೇಯ ಮತ್ತಿತರ ಶಿಲ್ಪಗಳು ಸಮರ್ಥಿಸುತ್ತವೆ. ಅಲ್ಲದೆ ಇವುಗಳಿಗೆ ಪ್ರತ್ಯೇಕ ಮಂಟಪ ಹಾಗೂ ದೇವಾಲಯಗಳನ್ನು ನಿರ್ಮಿಸಿದ್ದುದೂ ಕಂಡುಬರುತ್ತವೆ.

[1] ಎಸ್.ಐ.ಐ., ಸಂ.೪, ಸಂಖ್ಯೆ ೨೭೮

[2] ಎಸ್.ಐ.ಐ., ಸಂ.೯-ii, ಸಂಖ್ಯೆ ೬೬೮

[3] ದೇವಕುಂಜರಿ, ಹಂಪಿ, ಪು.೬೨

[4] ಎಸ್.ಐ.ಐ., ಸಂ.೯-ii ಸಂಖ್ಯೆ ೬೬೮

[5] ಎಸ್.ಐ.ಐ., ಸಂಖ್ಯೆ ೫೬೬

[6] ಮೋಹನ ತರಂಗಿಣಿ, ಪದ್ಯ ೬೧, ಪು.೩೪

[7] ಕ್ಷೇತ್ರಕಾರ್ಯದಲ್ಲಿ ಕಂಡುಬಂದತೆ.

[8] ಎಸ್.ಐ.ಐ., ಸಂ.೪, ಸಂಖ್ಯೆ ೨೫೫

[9] ಎಸ್.ಐ.ಐ., ಸಂಖ್ಯೆ ೨೬೨

[10] ಇನ್‌ವಿಜಯನಗರ : ಪ್ರೋಗ್ರೆಸ್‌ಆಫ್‌ರಿಸರ್ಚ್, ೧೯೭೯-೮೩, ಪು.೩೦

[11] ಮ.ಹೋ.ಸಾ.ವಿಜಯನಗರ, ಪು.೩೦೩

[12] ಎಸ್.ಐ.ಐ., ಸಂ.೪, ಸಂಖ್ಯೆ ೨೬೬

[13] ಎಸ್.ಐ.ಐ., ಸಂ.೪, ಸಂಖ್ಯೆ ೨೫೪

[14] ಎಸ್.ಐ.ಐ., ಸಂಖ್ಯೆ ೨೫೫

[15] ಎಸ್.ಐ.ಐ., ಸಂ. ೯-ii, ಸಂಖ್ಯೆ ೫೬೪
[16] ಎಸ್.ಐ.ಐ., ಸಂ.೪, ಸಂಖ್ಯೆ ೨೬೬
[17] ಎಸ್.ಐ.ಐ., ೯-ii ಸಂಖ್ಯೆ ೪೯೦, ೫೧೦, ೫೬೪
[18] ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೮೧
[19] ಎಸ್.ಐ.ಐ., ಸಂ.೯-ii, ಸಂಖ್ಯೆ ೬೦೭ : ವಿಠ್ಠಲ ದೇವಾಲಯಕ್ಕೆ ನೀಡಿದ ದತ್ತಿಯಲ್ಲಿನ ಒಂದು ಭಾಗವನ್ನು ನಟುವ ರಂಗ್ಯಪಾಲು ನೀಡುತ್ತಿದ್ದರೆಂದು ತಿಳಿಯುತ್ತದೆ.
[20] ಪ್ರ.ಕಂ.ಇಂ.ಸಂ.೨, ಪು.೧೬೦
[21] ವಿಜಯನಗರ ಇನ್‌ಸ್ಕ್ರಿಪ್ಷನ್ಸ್, ಸಂ.೨, ಕೆ.ಎನ್.೫೮೬
[22] ಎಸ್.ಐ.ಐ., ೯-ii, ಸಂಖ್ಯೆ ೬೭೦

## ೩೪. ಹಂಪೆಯ ಬಜಾರುಗಳು (೩)

**ಋ. ವರದರಾಜಮ್ಮನ ಬಜಾರು**

ವಿಜಯನಗರದ ಪ್ರಮುಖ ದೇವಾಲಯಗಳಲ್ಲಿ ಕಮಲಾಪುರ ಬಳಿಯಿರುವ ರಘುನಾಥ ದೇವಾಲಯವೂ ಒಂದು. ಇದನ್ನು ಸ್ಥಳೀಯರು ಪಟ್ಟಾಭಿರಾಮ ದೇವಾಲಯವೆಂದೇ ಕರೆಯುತ್ತಾರೆ. ಶಾಸನಗಳು ರಘುನಾಥನೆಂದು ಹೇಳಿವೆ.[1] ರಘುನಾಥ ದೇವಾಲಯವು ಅಚ್ಯುತರಾಯನ ಕಾಲದಲ್ಲಿ ನಿರ್ಮಾಣವಾಗಿದೆ. ದೇವಾಲಯವನ್ನು ಮೂರು ಗೋಪುರುಗಳನ್ನೊಳಗೊಂಡ ವಿಶಾಲ ಪ್ರಾಂಗಣದಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಎಡಬದಿಗೆ ಅಮ್ಮನವರ ಗುಡಿ ಇದ್ದರೆ, ಬಲಬದಿಗೆ ಸ್ವಲ್ಪ ಮುಂಭಾಗದಲ್ಲಿ ಕಲ್ಯಾಣಮಂಟಪವಿರುವುದು.

ರಘುನಾಥ ದೇವಾಲಯದ ಪೂರ್ವ ಗೋಪುರವನ್ನು ದಾಟಿದರೆ ಸಿಗುವುದು ವರದರಾಜಮ್ಮನ ಪಟ್ಟಣ. ಇದು ದೇವಾಲಯದ ಸುತ್ತಮುತ್ತಲೂ ಆವರಿಸಿದ್ದಿತು. ಈ ಪಟ್ಟಣವನ್ನು ಶಾಸನಗಳಲ್ಲಿ ವರದಾದೇವಿ ಅಮ್ಮನವರ ಪಟ್ಟಣ, ವರದರಾಜಮ್ಮನ ಪಟ್ಟಣ.[2] ವರದರಾಜಿಯಮ್ಮನ ಪಟ್ಟಣ[3]ವೆಂದು ಉಲ್ಲೇಖಿಸಲಾಗಿದೆ. ಡೊಮಿಂಗೋಪಾಯೇಸನು, ವಿಜಯನಗರದ ಪೂರ್ವದಿಕ್ಕಿನಲ್ಲಿ “Ardegema” ಎಂಬ ಪಟ್ಟಣವನ್ನು ರಾಜನು ತನ್ನ ರಾಣಿಯ ಮೇಲಿನ ಪ್ರೀತಿಗಾಗಿ ಕಟ್ಟಿಸಿದನೆಂದು ತಿಳಿಸಿದ್ದಾನೆ[4] ನ್ಯೂನಿಜ್‌ಇದನ್ನು “Ondegema” ಎಂಬುದಾಗಿ ಉಲ್ಲೇಖಿಸಿದ್ದು, ಈ ಹೊಸ ನಗರಕ್ಕೆ ನರ್ವರನೆಂಬುವನು ರತ್ನ ಭಂಡಾರಿಯೂ, ಮುಖ್ಯಾಧಿಕಾರಿಯೂ ಆಗಿದ್ದಾನೆಂದು ತಿಳಿಸಿದ್ದಾನೆ.[5] ಇವರು ಉಲ್ಲೇಖಿಸಿರುವ ಪಟ್ಟಣವು ವಿಜಯನಗರ ಪಟ್ಟಣದ ಪೂರ್ವಕ್ಕಿದ್ದ ವರದರಾಜಮ್ಮನ ಪಟ್ಟಣವೆಂಬುದಾಗಿಯೂ ಅಭಿಪ್ರಾಯಪಡಲಾಗಿದೆ.[6]

ಅಚ್ಯುತರಾಯನ ಪಟ್ಟದರಸಿಯಾದ ವರದಾದೇವಿಯ ನೆನಪಿಗಾಗಿ ಕಟ್ಟಿಸಿದ ಪಟ್ಟಣವೇ ವರದರಾಜಮ್ಮನ ಪಟ್ಟಣ. ಈ ಪಟ್ಟಣವು ಪ್ರಮುಖ ವ್ಯಾಪಾರ ಕೇಂದ್ರವೂ ಆಗಿದ್ದಿತು. ಇದಕ್ಕೆ ಪುಷ್ಟಿಯಾಗಿ ಶಾಸನಗಳು ವರದರಾಜಮ್ಮನ ಪೇಟೆಯೆಂದು ಕರೆದಿವೆ.[7] ಶಾಸನದಲ್ಲಿ ಕರೆದಿರುವ ವರದರಾಜಮ್ಮನ ಪೇಟೆಯನ್ನು ಪ್ರಸ್ತುತ ಅಧ್ಯಯನದಲ್ಲಿ ವರದರಾಜಮ್ಮನ ಬಜಾರೆಂದು ಸಂಬೋಧಿಸಲಾಗಿದೆ. ಸಾಮಾನ್ಯವಾಗಿ ಇತರ ಪೇಟೆಗಳೂ ಬಜಾರು ಎಂದು ವಿದ್ವಾಂಸರಿಂದ ಗುರುತಿಸಲ್ಪಟ್ಟಿರುವುದರಿಂದ ಈ ಅಧ್ಯಯನದಲ್ಲೂ ಪೇಟೆಯನ್ನು ಬಜಾರು ಎಂತಲೇ ಗುರುತಿಸಲಾಗಿದೆ. ವರದರಾಜಮ್ಮನ ಬಜಾರು ರಘುನಾಥ ದೇವಾಲಯದಿಂದ ಪೂರ್ವಕ್ಕೆ ವಿಜಯನಗರದ ಹೊರಬದಿಯ ಕೋಟೆ ಬಾಗಿಲಾದ ಪೆನುಗೊಂಡ ಬಾಗಿಲಿನವರೆಗೂ ವಿಸ್ತರಿಸಿದ್ದಿತು. ಈ ಬಾಗಿಲನ್ನು ಶಾಸನದಲ್ಲಿ ಪೆನುಗೊಂಡ ಬಾಗಿಲೆಂದು ಕರೆದರೆ, ಇಂದು

‘ಸಣ್ಣಕ್ಕಿಪ್ಪನ ಅಗಸೆ’ ಯೆಂದು ಸ್ಥಳೀಯರು ಕರೆಯುತ್ತಿರುವರು. ಪೆನುಗೊಂಡ ಬಾಗಿಲ ಹೊರ ಭಾಗದಲ್ಲಿ ಸಣ್ಣಕ್ಕಿ ವೀರಭದ್ರ ದೇವಾಲಯವು ಇಂದಿಗೂ ಅಸ್ತಿತ್ವದಲ್ಲಿರುವುದರಿಂದ, ದೇವಾಲಯದ ಹೆಸರನ್ನೇ ಬಾಗಿಲಿಗೂ ಅನ್ವಯಿಸಿರುವುದನ್ನು ಇಲ್ಲಿ ಕಾಣಬಹುದು.

ವರದರಾಜಮ್ಮನ ಬಜಾರದಲ್ಲಿ ಸಾಲು ಮಂಟಪಗಳಿದ್ದುದನ್ನು ಇಕ್ಕೆಲಗಳಲ್ಲಿ ಬಿದ್ದಿರುವ ಅವಶೇಷಗಳಿಂದ ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಬಜಾರದ ಪರಿಸರವನ್ನು ತೋಟಗಳಾಗಿ ಮಾರ್ಪಡಿಸಿರುವುದು ಹಾಗೂ ಬಜಾರದ ಮಧ್ಯೆ ಇತ್ತೀಚೆಗೆ ಹೊಸದಾಗಿ ನೀರಿನ ಕಾಲುವೆಯನ್ನು ನಿರ್ಮಿಸಿರುವುದರಿಂದ ಸಾಲು ಮಂಟಪಗಳು ಭಗ್ನಗೊಂಡಿವೆ. ಬೀದಿಯ ಇಕ್ಕೆಲಗಳಲ್ಲಿ ಸಾಲು ಮಂಟಪಗಳ ಜೊತೆಗೆ ನೀರಿನ ಕೊಳ, ದೇವಾಲಯ ಹಾಗೂ ಇತರ ಧಾರ್ಮಿಕ ಕಟ್ಟಡಗಳು ಕಂಡುಬರುತ್ತವೆ. ಅವುಗಳಲ್ಲಿ ನೀರಿನ ಕಾಲುವೆಯ ಆಚೆ ಪೆನುಗೊಂಡ ಬಾಗಿಲವರೆಗೆ ಅನೇಕ ದೇವಾಲಯಗಳ ಅವಶೇಷಗಳು ಕಾಣಬರುವವು.

ವಿಜಯನಗರ ಕಾಲದ ವರದರಾಜಮ್ಮನಪೇಟೆಯು ಆರ್ಥಿಕವಾಗಿ, ಹಂಪೆಯ ಇತರ ಬಜಾರುಗಳಷ್ಟೇ ಮಹತ್ವ ಹೊಂದಿದ್ದಿತು. ಇಲ್ಲಿಯೂ ಕೂಡ ವಿವಿಧೆಡೆಗಳಿಂದ ತಂದಂತಹ ವಸ್ತುಗಳ ವ್ಯಾಪಾರ ನಡೆಯುತ್ತಿದ್ದಿತು. ವರದರಾಜಮ್ಮನ ಪಟ್ಟಣವನ್ನು ನೋಡಿಕೊಳ್ಳಲು ಪಟ್ಟಣಸ್ವಾಮಿಯೊಬ್ಬನನ್ನು ನೇಮಿಸಲಾಗಿತ್ತು. ಇವನನ್ನು ಸೆಟ್ಟಿಪಟ್ಟಣಸ್ವಾಮಿಯೆಂದು ಕರೆಯಲಾಗಿದೆ.[8] ಇವರು ಪಟ್ಟಣದ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಿದ್ದುದಲ್ಲದೆ, ವರದರಾಜಮ್ಮನಪೇಟೆಯ ಮೇಲೆಯೂ ತಮ್ಮ ಹಿಡಿತವನ್ನು ಇರಿಸಿಕೊಂಡಿದ್ದರು. ಪೇಟೆಗೆ ಬರುತ್ತಿದ್ದ ವ್ಯಾಪಾರ ವಸ್ತುಗಳ ಮೇಲಿನ ತೆರಿಗೆಯನ್ನು ವಸೂಲಿ ಮಾಡುವ ಕಾರ್ಯವೂ ಇವರದೇ ಆಗಿದ್ದಿತು. ಇದರಿಂದ ಸೆಟ್ಟಿ-ವ್ಯಾಪಾರಿಗಳು ಇಲ್ಲಿ ಹೆಚ್ಚು ವಾಸವಾಗಿದ್ದುದೂ ಗೊತ್ತಾಗುತ್ತದೆ.

ಸಾಂಸ್ಕೃತಿಕವಾಗಿಯೂ ಬೆಳವಣಿಗೆ ಹೊಂದಿದ್ದುದನ್ನು ಬೀದಿಯ ಉದ್ದಕ್ಕೂ ಇರುವ ದೇವಾಲಯ, ಮಂಟಪ ಹಾಗೂ ಲೋಕಪಾವನ ಕೊಳಗಳಿಂದ ಕಾಣಬಹುದು. ಹಬ್ಬ ಹರಿದಿನಗಳ ಸಮಯದಲ್ಲಿ ರಘುನಾಥ ದೇವಾಲಯದಲ್ಲಿ ಉತ್ಸವಾಚರಣೆಗಳು ಜರುಗುತ್ತಿದ್ದವು. ಈ ಬಗೆಯ ಎಲ್ಲ ಉತ್ಸವಗಳಿಗೆ ಕೇಂದ್ರಬಿಂದುವಾಗಿದ್ದುದು ವರದರಾಜಮ್ಮನಪೇಟೆ ಬೀದಿಯೇ. ಇದು ರಘುನಾಥನ ತೇರುಬೀದಿಯೂ ಆಗಿದ್ದಿತು. ಬಜಾರದ ಎಡಬದಿಯಲ್ಲಿರುವ ಲೋಕಪಾವನ ಕೊಳವನ್ನು ತೆಪ್ಪೋತ್ಸವಕ್ಕೆಂದೇ ವಿಶಾಲವಾಗಿ ಕಟ್ಟಿಸಲಾಗಿದ್ದು, ಸುತ್ತಲೂ ಸಾಲುಮಂಟಪಗಳನ್ನು ಹಾಗೂ ಕೊಳದ ಮಧ್ಯಭಾಗದಲ್ಲಿ ಉತ್ಸವಮಂಟಪವನ್ನು ನಿರ್ಮಿಸಿರುವರು. ಉತ್ಸವಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ವಿಮಾನವನ್ನು ಒಳಗೊಂಡಿದೆ. ಈ ಮೇಲಿನ ಅಂಶಗಳಿಂದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಂದಿನ ಜನರು ನೀಡಿದ್ದ ಪ್ರಾಶಸ್ತ್ಯವು ವ್ಯಕ್ತವಾಗುತ್ತದೆ.

ಹಂಪೆಯಲ್ಲಿದ್ದ ಈ ಮೇಲಿನ ಬಜಾರುಗಳಲ್ಲದೆ ಇತರೆಡೆಗಳಲ್ಲಿಯೂ ಬಜಾರುಗಳಿದ್ದವು. ಕೃಷ್ಣದೇವರಾಯನ ಕಾಲದಲ್ಲಿ ತನ್ನ ತಾಯಿ ನಾಗಲಾಂಬಿಕೆ ಮತ್ತು ರಾಣಿ ತಿರುಮಲಾ ದೇವಿಯರಿಗಾಗಿ ಅಂದಿನ ಹೊಸಪೇಟೆ ಮತ್ತು ನಾಗೇನಹಳ್ಳಿಗಳನ್ನು ಕಟ್ಟಿಸಲಾಯಿತು. ಅಂದು ಹೊಸಪಟ್ಟಣ ಅಥವಾ ತಿರುಮಲಾಂಬ ಪಟ್ಟಣದಲ್ಲೂ ಅಂಗಡಿ ಬೀದಿ ಇದ್ದಿತೆಂದು ನ್ಯೂನಿಜ್ ಹೇಳಿದ್ದಾನೆ. ಇಲ್ಲಿಯ ಅಂಗಡಿ ಬೀದಿಗಳು ಹಂಪೆಯಲ್ಲಿಯ ಬಜಾರುಗಳಂತೆ ವ್ಯವಸ್ಥಿತವಾಗಿ ಸಾಲುಮಂಟಪಗಳ ಸಹಿತ ಸಜ್ಜುಗೊಂಡುದು ಕಂಡುಬರುವುದಿಲ್ಲ.

**ಬಜಾರುಗಳ ಕಾರ್ಯವೈಖರಿ**

ಹಂಪೆಯ ಬಜಾರುಗಳು ವಿಜಯನಗರ ಸಾಮ್ರಾಜ್ಯದ ಪ್ರಮುಖ ಅಂಗಗಳು. ಇವುಗಳ ಮೂಲಕ ಅಂದಿನ ಸಾಮಾಜಿಕ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಗುರುತಿಸುವುದರ ಜೊತೆಗೆ ಪರಿಣಾಮಗಳನ್ನು ಅರಿಯುವುದು ಮುಖ್ಯ.

ಬಜಾರುಗಳು ಬೆಳವಣಿಗೆ ಹೊಂದಿದ್ದುದು ವಿಜಯನಗರದ ಅರಸರು ಹಂಪೆಯನ್ನು ತಮ್ಮ ರಾಜಧಾನಿಯಾಗಿ ಸ್ವೀಕರಿಸಿದ ನಂತರವೆಂಬುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಬಜಾರುಗಳು ದೇವಾಲಯಗಳ ಮುಂಭಾಗದಲ್ಲಿ ನಿರ್ಮಾಣವಾಗಲು ಹಲವಾರು ಕಾರಣಗಳಿವೆ. ಮೊದಲನೆಯದು, ಹಂಪೆಯು ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ. ಎರಡನೆಯದು, ದೇವಾಲಯಗಳು ಪ್ರಮುಖ ಸ್ಥಳಗಳಾಗಿದ್ದು, ವಸತಿ ಪ್ರದೇಶಗಳನ್ನು ತಮ್ಮ ಸುತ್ತಲೂ ಹೊಂದಿದ್ದವು. ರಾಜಧಾನಿಯಾದ ಮೇಲೆ ಜನಸಂದಣಿ ಹೆಚ್ಚಾಗಿ ವ್ಯಾಪಾರ ವಹಿವಾಟು ಪ್ರಾರಂಭವಾಯಿತು. ಇದನ್ನು ಸುವ್ಯವಸ್ಥೆಗೊಳಿಸಲು ಪ್ರೌಢದೇವರಾಯನ ಕಾಲದಿಂದ ಸಾಲುಮಂಟಪಗಳನ್ನು ಕಟ್ಟಿ ವ್ಯಾಪಾರಕ್ಕೆ ಅನುವು ಮಾಡಿಕೊಡಲಾಯಿತು. ಇಲ್ಲಿಯವರೆಗೆ ಬಜಾರುಗಳು ರಥವೀಧಿಗಾಗಿ ರಥೋತ್ಸವ, ತೆಪ್ಪೋತ್ಸವ ಇನ್ನಿತರ ಉತ್ಸಾವಾಚರಣೆಗಳನ್ನು ಆಚರಿಸುವ ಸ್ಥಳಗಳಾಗಿದ್ದವು.

ಹೀಗೆ ನಿರ್ಮಾಣವಾದ ಬಜಾರುಗಳು ಒಂದೊಂದು ಉಪನಗರಗಳಾಗಿ ಮಾರ್ಪಾಟು ಹೊಂದಿ ಪ್ರಮುಖ ವ್ಯಾಪಾರ ಮಾರುಕಟ್ಟೆಗಳಾಗಿದ್ದವು. ಇಂದಿನ ಆಧುನಿಕ ನಗರಗಳನ್ನು ಹೇಗೆ ಪ್ರತ್ಯೇಕ ಬಡಾವಣೆಗಳು, ಉಪನಗರಕ್ಕಾಗಿ ವಿಂಗಡಿಸಿ ಹೆಸರುಗಳನ್ನು ಸೂಚಿಸಿದ್ದಾರೆಯೋ, ಇದೇ ಪದ್ಧತಿಯನ್ನು ಐದನೂರು ವರ್ಷಗಳ ಹಿಂದೆ ಹಂಪೆಯ ತನ್ನಲ್ಲಿ ಅನುಸರಿಸಿತ್ತು.

ಬಜಾರುಗಳು ಪ್ರಮುಖ ಊರುಗಳಾಗಿ ಆಯಾಯ ದೇವಾಲಯದ ಹೆಸರನ್ನು ಹೊಂದಿದ್ದವು. ಈ ರೀತಿ ವಿಭಾಗಿಸಲ್ಪಟ್ಟ ಉಪನಗರಗಳನ್ನು ಪುರಗಳೆಂಬುದಾಗಿ ಕರೆಯುತ್ತಿದ್ದರು. ಅವೇ ವಿರೂಪಾಕ್ಷಪುರ, ಅಚ್ಯುತಾಪುರ, ವಿಠ್ಠಲಾಪುರ, ಕೃಷ್ಣಾಪುರಗಳು. ಉಪನಗರಗಳಾದ ಈ ಎಲ್ಲಾ ಪುರಗಳನ್ನು ಒಳಗೊಂಡ ನಗರವೇ ವಿದ್ಯಾನಗರ ಅಥವಾ ವಿಜಯನಗರ ಪಟ್ಟಣ. ದೇವಾಲಯಗಳೇ ಪುರಗಳ ಕೇಂದ್ರವೆನಿಸಿದ್ದವು. ದೇವಾಲಯಗಳ ಮುಂದಿನ ಬೀದಿಗಳು ವ್ಯಾಪಾರಸ್ಥಗಳೆಂಬುದು ಸ್ಪಷ್ಟ. ಈ ಬೀದಿಗಳು ವಿಶಾಲವಾದ ಬಯಲಿನಲ್ಲಿ ನೇರವಾದ, ಅಚ್ಚುಕಟ್ಟಾದ ಸಾಲುಮಂಟಪಗಳಿಂದ ಕೂಡಿವೆ. ವಿಜಯನಗರ ಕಾಲಕ್ಕೆ ಮುಂಚೆ ಇಷ್ಟೊಂದು ಅಚ್ಚುಕಟ್ಟಾಗಿ ವ್ಯಾಪಾರಕ್ಕೆಂದು ಕಟ್ಟಿಸಿರುವ ಸಾಲುಮಂಟಪಗಳು ಎಲ್ಲಿಯೂ ಕಂಡಬರುವದಿಲ್ಲ.

ಕ್ರಿ.ಶ. ೬೪೦ ರ ಸಮಯದಲ್ಲಿ ಭೇಟಿ ನೀಡಿದ್ದ ಚೀನಾದ ಪ್ರವಾಸಿ ಹೂ-ಯೆನ್‌ತ್ಸಾಂಗ್‌ನು ಇಂಡಿಯಾ ದೇಶದ ಅಂಗಡಿಗಳನ್ನು ಕುರಿತು, "ಪಟ್ಟಣಗಳ ಮತ್ತು ಹಳ್ಳಿಗಳ ಸುತ್ತ ದಪ್ಪವಾದ ಹಾಗೂ ಎತ್ತರವಾದ ಕೋಟೆಯ ಗೋಡೆಗಳಿವೆ. ಆದರೆ ಬೀದಿಗಳು ಕಿರಿದಾಗಿದ್ದು ಸೊಟ್ಟ ಸೊಟ್ಟವಾಗಿವೆ; ಅಲ್ಲದೆ ಹೊಲಸು, ತಿರುಗಾಡುವುದಕ್ಕೆ ಬಹುತೊಂದರೆ. ಅಂಗಡಿ ಮಳಿಗೆಗಳು ರಾಜಮಾರ್ಗದ ಉದ್ದಕ್ಕೂ ಎರಡೂ ಕಡೆಯೂ ಇವೆ. ಯಾವ ತರಹ ಅಂಗಡಿ ಮಳಿಗೆಗಳೆಂದು ಗುರುತಿಸಲು ಸೂಕ್ಷ್ಮವಾದ ಗುರುತುಗಳಿವೆ" ಎಂದಿದ್ದಾನೆ. ಈ ವಿವರಣೆಯನ್ನು ಗಮನಿಸಿದರೆ, ಚರಿತ್ರೆಯಲ್ಲಿ ವಿಜಯನಗರದಷ್ಟು ಅಚ್ಚುಕಟ್ಟಾದ ಬಜಾರುಗಳು ಇತರೆಡೆ ಕಂಡುಬರುವುದು ವಿರಳ.

ಹಂಪೆಯ ಬಜಾರುಗಳಲ್ಲಿ ಮಾತ್ರವಲ್ಲದೆ, ಪಟ್ಟಣದ ವಿವಿಧ ಭಾಗಗಳಲ್ಲಿದ್ದ ಬಿಡಿ ಬಿಡಿಯಾದ ಅಂಗಡಿಗಳ ಮೂಲಕವೂ ವ್ಯಾಪಾರ ನಡೆಯುತ್ತಿದ್ದಿತು. ಇದಕ್ಕೆ ಪುಷ್ಟಿಯಾಗಿ ಕ್ರಿ.ಶ.೧೫೨೫ರ ಶಾಸನವೊಂದು "ಆದಿನಾರಾಯಣ ದೇವರಿಗೆ ಬಿಟ್ಟ ಮಾನ್ಯದಂಗಡಿ" ಎಂದಿದೆ.[9] ಇದರಿಂದ ಬಜಾರುಗಳು ಒಂದು ನಿರ್ದಿಷ್ಟ ದಿನದಂದು ಕಾರ್ಯನಿರ್ವಹಿಸುತ್ತಿದ್ದರೆ, ಇಂತಹ ಅಂಗಡಿಗಳು ದಿನನಿತ್ಯವೂ ಅವಶ್ಯಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದವೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಬಜಾರುಗಳು ದೇವಾಲಯದೊಂದಿಗೆ ಇರಿಸಿಕೊಂಡಿದ್ದ ಸಂಬಂಧಗಳನ್ನು ಅಲ್ಲಿ ನಡೆಯುತ್ತಿದ್ದ ರಥೋತ್ಸವ, ತೆಪ್ಪೋತ್ಸವ, ಇತರ ಉತ್ಸವಗಳಿಂದ ಅರಿಯಬಹುದು. ಮಠಗಳು ಹಾಗೂ ಬಜಾರದ ಸಾಲುಮಂಟಪಗಳು ಅಕ್ಕ-ಪಕ್ಕದಲ್ಲಿದ್ದವು. ವಿರೂಪಾಕ್ಷ ಬಜಾರ್ ನಲ್ಲಿ ಮಹಮಂತಿನ ಮಠ, ಕರಿಸಿದ್ದೇಶ್ವರ ಮಠಗಳು ಮತ್ತು ವಿಠ್ಠಲ ಬಜಾರದಲ್ಲಿ ರಾಮಾನುಜಮಠಗಳಿದ್ದವೆಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಇವುಗಳಲ್ಲದೆ ಇನ್ನೂ ಅನೇಕ ಮಠಗಳು ಇದ್ದವು. ಇವು ಅಂದಿನ ವಿದ್ಯಾಕೇಂದ್ರಗಳಾಗಿದ್ದರೂ ಜನಸಾಮಾನ್ಯರಿಗೆ ಶಿಕ್ಷಣ ನೀಡುತ್ತಿರಲಿಲ್ಲವೆಂಬುದು ಕಾಣಬರುವ ಅಂಶ.

ಮಠಗಳು ಹಾಗೂ ಬಜಾರುಗಳು ಜಾತ್ರೆ ಅಥವಾ ರಥೋತ್ಸವಗಳ ಸಮಯದಲ್ಲಿ ಭಕ್ತಾದಿಗಳು ಮತ್ತು ಯಾತ್ರಾರ್ಥಿಗಳಿಗೆ ಹೇಗೆ ತಂಗುದಾಣಗಳಾಗಿರುತ್ತಿದ್ದವೆಂಬುದನ್ನು ಸಿದ್ದೇಶ್ವರ ಪುರಾಣವು ಹೀಗೆ ವರ್ಣಿಸುತ್ತದೆ ; "ಗುಡಿಗಳೊಳು ಗೋಪುರಗಳೊಳು ಪುರದ ಬೀದಿಯಂಗಡಿಗಳೊಳು ಮಠಗಳೊಗಾರವೆಗಳೊಳು ಕೆರೆಯ ತಡಿಗಳೊಳಗಡೆಯಿಲ್ಲವೆಂಬಂತೆ ಬೀಡುಗಳ ಬಿಟ್ಟ ಪರಿಸೆಯ ಮನುಜರು"[10]. ಇದು ಪಾಯೇಸನಿಂದಲೂ ತಿಳಿದು ಬರುವ ಅಂಶ.

ಬಜಾರುಗಳ ಮತ್ತೊಂದು ಮುಖ್ಯ ಲಕ್ಷಣವೆಂದರೆ, ಪ್ರತಿಯೊಂದು ಬಜಾರ್ ನಲ್ಲಿ ಆಯಾ ಧರ್ಮದ ದೇವಾಲಯಗಳು, ಮಠಗಳು ಇರುವುದು. ವಿರೂಪಾಕ್ಷ ಬಜಾರದಲ್ಲಿ ಶೈವ ಮಠಗಳು ; ಕೃಷ್ಣ, ವಿಠ್ಠಲ, ಮಾಲ್ಯವಂತ, ವರದರಾಜಮ್ಮ ಮತ್ತು ಅಚ್ಯುತ ಬಜಾರುಗಳಲ್ಲಿ ಶ್ರೀ ವೈಷ್ಣವ ಮಠಗಳು, ದೇವಾಲಯಗಳು ಇವೆ. ಈ ಸ್ಥಳಗಳಲ್ಲಿ ಕೇವಲ ಆ ಧರ್ಮದ ಸಂಬಂಧಿಸಿದ ಜನರು ಮಾತ್ರ ವಾಸಿಸಿದ್ದರೇ? ಆದರೆ ಇವು ಮಾರುಕಟ್ಟೆಗಳೂ ಆಗಿದ್ದುದರಿಂದ ವ್ಯಾಪಾರ ಚಟುವಟಿಕೆಗಳಲ್ಲಿ ಎಲ್ಲಾ ಧರ್ಮದವರೂ ಭಾಗವಹಿಸುತ್ತಿದ್ದುದು ಸಹಜ. ಪಾನ್‌ಸುಪಾರಿ ಬಜಾರು ಸರ್ವಧರ್ಮಗಳ ಸಂಗಮಸ್ಥಾನವಾಗಿದ್ದುದನ್ನು ಇಲ್ಲಿ ಉದಾಹರಿಸಬಹುದು. ರಾಮಚಂದ್ರ (ಹಜಾರರಾಮ) ದೇವಾಲಯವು ವೈಷ್ಣವ ಪಂಥಕ್ಕೆ ಸೇರಿದ್ದರೂ, ಅದರ ಮುಂದಿನ ಬಜಾರ್ ನಲ್ಲಿ ಪಟ್ಟಣದ ಯಲ್ಲಮ್ಮನ ಗುಡಿ, ಶಿವಾಲಯಗಳು, ಜಿನಾಲಯಗಳು, ಮುಸ್ಲಿಮರ ಗೋರಿ, ಧರ್ಮಶಾಲೆ, ಇತ್ಯಾದಿಗಳನ್ನು ನೋಡಬಹುದು.

ಪಾನ್‌ಸುಪಾರಿ ಬಜಾರ್ ಎಲ್ಲ ವರ್ಗದವರನ್ನು ಒಳಗೊಂಡಿದ್ದರೂ ರಜಾಕ್ ಮತ್ತು ಕನಕದಾಸರು ಹೇಳಿರುವಂತೆ, ಆಯಾಯ ಕುಶಲ ಕೆಲಸಗಾರರು ತಮಗೆ ಹಂಚಿಕೊಟ್ಟ ಸ್ಥಳಗಳಲ್ಲಿ ನೆಲೆಸಿದ್ದರು. ಶೈವ, ವೈಷ್ಣವ, ಜೈನಧರ್ಮಗಳ ದೇಗುಲಗಳು ಬಜಾರದಲ್ಲಿ ಒಂದೆಡೆ ಕಂಡುಬಂದರೆ, ಮುಸ್ಲಿಮರು ಬಜಾರದ ಕೊನೆಯಲ್ಲಿ ನೆಲೆಸಿದ್ದರು. ಇದು ಹಿಂದೂ ಮತ್ತು ಮುಸ್ಲಿಮರ ಮಧ್ಯೆ ಇದ್ದ ಅಂತರವೆಂಬಂತೆ ಕಂಡುಬಂದರೂ, ಅವರಿಗೆ ಸಾಮ್ರಾಜ್ಯದಲ್ಲಿ, ಸೈನ್ಯದಲ್ಲಿ ಪ್ರಾಶಸ್ತ್ಯ ನೀಡಿದ್ದುದು ನಿಜ. ಎಲ್ಲ ವರ್ಗದವರಿಗೂ ಆಯಾ ಧರ್ಮಗಳಿಗನುಗುಣವಾಗಿ ಸ್ಥಾನ-ಮಾನಗಳನ್ನು ನೀಡಿದ್ದರೆನ್ನುವುದು ಇಲ್ಲಿ ವ್ಯಕ್ತಪಡುತ್ತದೆ.

ಸಾಮ್ರಾಜ್ಯಕ್ಕೆ ಬರುತ್ತಿದ್ದ ಆದಾಯಗಳೆಂದರೆ ಭೂಕಂದಾಯ, ಮಾರುಕಟ್ಟೆಗಳ ಮೇಲಿನ ತೆರಿಗೆ ಹಾಗೂ ಸಾಗಾಟ ತೆರಿಗೆಗಳು. ಇವುಗಳಲ್ಲದೆ ಕಪ್ಪ-ಕಾಣಿಕೆ, ಯುದ್ಧಗಳಲ್ಲಿಯ ಕೊಳ್ಳೆಗಳಿಂದಲೂ ಅಪಾರ ಸಂಪತ್ತು ಸೇರುತ್ತಿದ್ದಿತು. ಈ ಆದಾಯವನ್ನು ವ್ಯವಸಾಯ, ಕೆರೆ-ಕಾಲುವೆಗಳ ನಿರ್ಮಾಣ ಮುಂತಾದವುಗಳಿಗೆ ವೆಚ್ಚ ಮಾಡಿರುವುದನ್ನು ಹಂಪೆಯಲ್ಲಿ ನೋಡಬಹುದು. ಅಷ್ಟೇ ಅಲ್ಲದೆ, ವಿದೇಶಿ ಪ್ರವಾಸಿಗಳು ಹೇಳಿರುವಂತೆ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ಬೀದಿಗಳಲ್ಲಿಟ್ಟು, ಮಾರಾಟ ಮಾಡಲಾಗುತ್ತಿತ್ತು. ಆದರೆ ಇಷ್ಟೊಂದು ಸಂಪತ್ತು ಎಲ್ಲಿ ದೊರೆಯುತ್ತಿತ್ತೆಂಬುದಕ್ಕೆ ಪ್ರವಾಸಿಗಳ ಹೇಳಿಕೆಗಳು ಉತ್ತರಿಸುತ್ತವೆ. ವಿಜಯನಗರಕ್ಕೆ ವ್ಯಾಪಾರಿ ವರ್ತಕನಾಗಿ ಬಂದ ರಷ್ಯಾದ ನಿಕಿಟಿನ್ ಹೇಳುವಂತೆ, ರಾಯಚೂರಿನಲ್ಲಿ ವಜ್ರಗಳು ಸಿಕ್ಕುತ್ತವೆ. ವಜ್ರಗಳು ಕಲ್ಲುಬಂಡೆಯ ಬೆಟ್ಟದ ಮೇಲೆ ಸಿಕ್ಕುತ್ತವೆ. ಈ ಬಗೆಗೆ ವಸುಂಧರ ಫಿಯೋಜಾ ಅವರು ಹಸ್ತಪ್ರತಿಯೊಂದನ್ನಾಧರಿಸಿ ತಿಳಿಸಿರುವಂತೆ, ಜಂಭುಕೇಶ್ವರದಲ್ಲಿ ಕಬ್ಬಿಣದ ಖನಿಜಗಳಿವೆ. ದರೋಜಿಯ ಬಳಿ ತಾಮ್ರದ ಖನಿ, ಮಾಲ್ಯವಂತದಲ್ಲಿ ವಜ್ರದ ಖನಿ ಇವೆ. ಇದನ್ನು ಸಮರ್ಥಿಸುವಂತೆ ಬಾರ್ಬೋಸಾ ಹೇಳಿರುವುದು ; "ನರಸಿಂಗ ರಾಜ್ಯದಲ್ಲಿ ಒಂದು, ಮತ್ತು ದಖನಿ ರಾಜ್ಯದಲ್ಲಿ ಒಂದು ವಜ್ರದ ಗಣಿಗಳಿವೆ."[11].

ಈ ಮೇಲಿನ ಹೇಳಿಕೆಗಳು ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಚಿನ್ನ, ವಜ್ರದ ಗಣಿಗಳಿದ್ದ ಬಗೆಗೆ ಸುಳಿವು ನೀಡುತ್ತವೆ. ಪ್ರಸ್ತುತ ಹಂಪೆ ಪರಿಸರವು ಭಾರತದಲ್ಲೇ ಯಥೇಚ್ಛವಾಗಿ ಕಬ್ಬಿಣದ ಅದಿರು ದೊರೆಯುವ ಸ್ಥಳ, ಹೇರಳ ಕಬ್ಬಿಣದ ಅದಿರುಗಳನ್ನು ಒಳಗೊಂಡ ಬೆಟ್ಟದ ಸಾಲುಗಳೇ ಇಲ್ಲಿ ಇವೆ. ಇವುಗಳಲ್ಲದೆ, ಪ್ರೌಢದೇವರಾಯನ ಕಾಲದಲ್ಲಿ ಶ್ರೀಮಂತ, ಪುಲಿಕಾಟ್, ಪೆಗು, ತೆನ್ನಾಸರಿ ಮತ್ತು ಇತರ ರಾಜ್ಯಗಳಿಂದ ಕಪ್ಪ-ಕಾಣಿಕೆ ಬರುತ್ತಿದ್ದಿತೆಂದು ನ್ಯೂನಿಜ್‌ಹೇಳಿದ್ದಾರೆ. ಶ್ರೀಲಂಕಾದಲ್ಲಿ ವಜ್ರದ ಗಣಿ ಇದ್ದು, ಅಲ್ಲಿಂದ ಬಂದ ವಜ್ರವೈಢೂರ್ಯಗಳು ಹಂಪೆಯಲ್ಲಿ ದೊರೆಯುತ್ತಿದ್ದವೆಂದು ಬಾರ್ಬೋಸಾ ತಿಳಿಸಿದ್ದಾನೆ. ಕಪ್ಪಗಳಲ್ಲದೆ, ಯುದ್ಧ ಕೊಳ್ಳೆಗಳಿಂದಲೂ ಸಂಪತ್ತು ಬರುತ್ತಿದ್ದುದನ್ನು ರಾಯಚೂರು ಯುದ್ಧದಲ್ಲಿ ದೊರೆತ ಕೊಳ್ಳೆಯನ್ನು ಉಲ್ಲೇಖಿಸಿ ನ್ಯೂನಿಜ್ ಹೀಗೆ ಹೇಳಿರುವನು; "ಮೂರರಿಗೆ ಸೇರಿದುದನ್ನೆಲ್ಲ

ಕೊಳ್ಳೆ ಹೊಡೆಯುವ ಕೆಲಸ ಪ್ರಾರಂಭವಾಯಿತು….. ರಾಯನಿಗೆ (ಕೃಷ್ಣದೇವರಾಯ) ಓರ್ಮಸ್‌ನ ನಾಲ್ಕುಸಾವಿರ ಕುದುರೆಗಳೂ, ನೂರು ಆನೆಗಳೂ, ನೂರಾರು ಭಾರಿ ಫಿರಂಗಿಗಳೂ, ಇವನ್ನು ಹೊರುವ ಒಂಭೈನೂರು ಗಾಡಿಗಳೂ, ಅನೇಕ ಡೇರೆಗಳೂ ಸಿಕ್ಕಿದವು".[12]

ಈ ರೀತಿಯಲ್ಲಿ ಸಂಪಾದಿಸಿದ ಸಂಪತ್ತನ್ನು ವಿಜಯನಗರದಸರು ತಮಗೆ ಅಗತ್ಯವಿದ್ದ ಯುದ್ಧ ಸಾಮಗ್ರಿ ಮತ್ತು ಸೈನ್ಯದ ಬಲವರ್ಧನೆಗೆ ಬೇಕಾದ ಉತ್ತಮ ತಳಿಯ ಕುದುರೆ, ಆನೆಗಳನ್ನು ಕೊಳ್ಳಲು ಬಳಸುತ್ತಿದ್ದರು. ಯುದ್ಧಗಳಲ್ಲಿ ಸೈನಿಕರು ದೋಚಿದ ಸಂಪತ್ತನ್ನು ವ್ಯಾಪಾರಿಗಳಿಗೆ ಹಾಗೂ ಇತರರಿಗೆ ನೀಡುತ್ತಿದ್ದು, ಅದನ್ನು ವ್ಯಾಪಾರಿಗಳು ಬಜಾರಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದಿರಬೇಕು. ಇನ್ನೊಂದು ಅಂಶವೆಂದರೆ, ಪ್ರಸ್ತುತ ಸಮಾಜದೊಡನೆ ಹೋಲಿಸಿ ನೋಡಿದರೆ, ಪ್ರಮುಖ ನಗರಗಳಲ್ಲಿ ಲೋಹ, ಆಭರಣಗಳ ಪ್ರತ್ಯೇಕ ಅಂಗಡಿಬೀದಿಗಳಿರುವಂತೆಯೇ, ಹಂಪೆಯಲ್ಲಿ ವಿಫುಲವಾಗಿ ಲಭ್ಯವಿದ್ದ ಸಂಪತ್ತನ್ನು ಬಜಾರಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದುದು ಸಹಜ.

ವಿಜಯನಗರದ ಅರಸರು ವಿದೇಶಗಳೊಂದಿಗೆ ನಿಕಟ ವ್ಯಾಪಾರ ಸಂಪರ್ಕವಿಟ್ಟು ಕೊಂಡಿದ್ದರು. ಹಾಗೆಯೇ ಸಾಮ್ರಾಜ್ಯದಲ್ಲಿ ಅನೇಕ ಸಗಟು ವ್ಯಾಪಾರಿಗಳಿದ್ದರು. ಅವರು ವಿದೇಶಗಳಿಂದ ಪ್ರಮುಖ ವಸ್ತುಗಳನ್ನು ಆಮದು ಮಾಡಿಕೊಂಡು ರಾಜರಿಗೆ, ಶ್ರೀಮಂತರಿಗೆ ಹಾಗೂ ಇತರರಿಗೆ ಮಾರಾಟ ಮಾಡುತ್ತಿದ್ದರು. ಅಂತಹ ವ್ಯಾಪಾರಿಯೊಬ್ಬನ ಬಗೆಗೆ ಶ್ರೀನಾಥನ ಹರವಿಲಾಸಮು ಹೀಗೆ ಹೇಳಿದೆ; ನೆಲ್ಲೂರಿನ ಅವಚಿ ತಿಪ್ಪಯ್ಯಸೆಟ್ಟಿ ಎಂಬುವನು ವಿದೇಶಿ ವ್ಯಾಪಾರ ವರ್ತಕನಾಗಿದ್ದು, ಈತನು ಜಲನಾಗಿಯಿಂದ ಚಿನ್ನ, ಪಂಜಾಬಿನಿಂದ ಕರ್ಪೂರ, ಶ್ರೀಲಂಕಾದಿಂದ ಆನೆ, ಓರ್ಮಜ್‌ನಿಂದ ಕುದುರೆ, ಚೋಟಂಗಿಯಿಂದ ಕಸ್ತೂರಿ, ಚೀನಾದಿಂದ ರೇಷ್ಮೆ[13] ಇನ್ನು ಮುಂತಾದ ವಸ್ತುಗಳನ್ನು ಆಮದು ಮಾಡಿಕೊಂಡು ವಿಜಯನಗರದ ಹರಿಹರರಾಯನಿಗೂ, ಬಹುಮನಿ ಸುಲ್ತಾನ ಫಿರೋಜ ಷಾನಿಗೂ, ಒರಿಸ್ಸಾದ ಗಜಪತಿಗೂ ಮಾರಾಟ ಮಾಡುತ್ತಿದ್ದನು.

ಇದರಿಂದ ತಿಪ್ಪಯ್ಯಸೆಟ್ಟಿಯು ಉತ್ತಮ ವ್ಯಾಪಾರಿಯೆಂಬುದು ದಿಟ. ಅಲ್ಲದೆ, ಇಂತಹ ಇನ್ನೂ ಅನೇಕ ಪ್ರಮುಖ ವ್ಯಾಪಾರಿಗಳು ವಿಜಯನಗರದಲ್ಲಿ ಇದ್ದರೆಂಬುದು ಗೊತ್ತಾಗುತ್ತದೆ. ಅಂದು ಕುದುರೆಗಳಿಗೆ ಹೆಚ್ಚಿನ ಬೇಡಿಕೆಯಿದ್ದ ಬಗೆಗೆ ಬಾರ್ಬೋಸನು, ಓರ್ಮಸ್ ರಾಜ್ಯದಿಂದ ಕುದುರೆಗಳನ್ನು ಹೊತ್ತುಕೊಂಡು ಅನೇಕ ಹಡಗುಗಳು ಇಲ್ಲಿಗೆ (ಗೋವಾ) ಬರುತ್ತವೆ. ಕುದುರೆಗಳನ್ನು ಕೊಳ್ಳಲು ನರಸಿಂಗುವಾ ಮತ್ತು ದಖನ್ ರಾಜ್ಯಗಳಿಂದ ಅನೇಕ ವರ್ತಕರು ಇಲ್ಲಿಗೆ ಬರುತ್ತಾರೆ.[14] ಎಂದಿರುವುದು, ಗೋವಾ ಪ್ರಮುಖ ಬಂದರು ಆಗಿದ್ದುದು ಮತ್ತು ಅಲ್ಲಿಗೆ ದಖನ್ ರಾಜ್ಯಗಳ ವರ್ತಕರು ಬರುತಿದ್ದುದರ ಬಗೆಗೆ ಸಮರ್ಥನೆ ನೀಡುತ್ತದೆ. ವಿಜಯನಗರದ ರಾಯರ ಕಾಲದಲ್ಲಿ ಪ್ರಸಿದ್ಧಿ ಹೊಂದಿದ್ದ ಗೋವಾದ ಬಂದರನ್ನು ರಾಯ್ ಬಂದರ್ ಎಂದೇ ಇಂದಿಗೂ ಕರೆಯುತ್ತಿರುವುದು ಗಮನಾರ್ಹ. ವಿಜಯನಗರದ ಅರಸರು ಕುದರೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕೊಳ್ಳುತ್ತಿದ್ದರು. ಹಾಗೆಯೇ ಆನೆ ಮತ್ತು ಯುದ್ಧಥ ಸಾಮಗ್ರಿಯನ್ನು ಕೊಳ್ಳಲು ಚಿನ್ನ ಮತ್ತು ಇತರ ಲೋಹಗಳ ನಾಣ್ಯಗಳು, ವೈಢೂರ್ಯಗಳನ್ನು ಕೊಡುತ್ತಿದ್ದರು. ಹೀಗೆ ಸಂಪತ್ತು ಹೇರಳವಾಗಿ ವಿದೇಶಗಳಿಗೆ ಹರಿದು ಹೋಗಿರುವುದನ್ನು ಕಾಣಬಹುದು. ವಿಜಯನಗರದೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದ ದೇಶಗಳೆಂದರೆ ಶ್ರೀಲಂಕಾ, ಪೆಗು, ಬರ್ಮಾ, ಓರ್ಮಸ್, ಅರೇಬಿಯಾ, ಪೋರ್ಚುಗಲ್, ಚೀನಾ, ಅಲೆಗ್ಸಾಂಡ್ರಿಯಾ ಮತ್ತಿತರ ರಾಜ್ಯಗಳು. ವಿಜಯನಗರದ ಪ್ರಮುಖ ವ್ಯಾಪಾರ ಕೇಂದ್ರ ಹಂಪೆಯಲ್ಲಿ ಈ ಎಲ್ಲ ದೇಶಗಳಿಂದ ಬಂದ ವಸ್ತುಗಳ ಮಾರಾಟ ನಡೆಯುತ್ತಿತ್ತು.

ಇವುಗಳಲ್ಲದೆ, ರಾಜ್ಯದಲ್ಲಿ ಬೆಳೆಯುತ್ತಿದ್ದ ದವಸ-ಧಾನ್ಯ, ಹಣ್ಣು-ಹೂ, ತರಕಾರಿಗಳನ್ನು ದಿನನಿತ್ಯವೂ ಪ್ರತಿಯೊಂದು ಬಜಾರದಲ್ಲಿ ನಡೆಯುತ್ತಿದ್ದ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಕನಕದಾಸರು ಮೋಹನ ತರಂಗಿಣಿಯಲ್ಲಿ ಸೋಮಸೂರಿಯ ಬೀದಿಯಲ್ಲಿದ್ದ ಅಂಗಡಿಗಳಲ್ಲೂ, ಅಲ್ಲಿ ಮಾರಾಟವಾಗುತ್ತಿದ್ದ ವಸ್ತುಗಳನ್ನೂ ಮನಸಾರೆ ವರ್ಣಿಸಿದ್ದಾರೆ. ಸುರಗಿ, ಸೇವಂತಿಗೆ, ಕುಂದ, ಮಂದಾರ, ಪಾದರಿ, ಕಂಚಿ, ಕಣಗಿಲೆಯಂತಹ ಹೂಗುಳು ; ಇವುಗಳಲ್ಲದೆ, ಕುಲಗಾರರು ತಯಾರಿಸಿದ ವಸ್ತುಗಳು; ತರಕಾರಿ ಇನ್ನಿತರ ಜೀವನಾವಶ್ಯಕ ವಸ್ತುಗಳು ಹೇಳಿರುವಂತೆ, ಬಜಾರುಗಳಲ್ಲಿ ಅಕ್ಕಿ, ಗೋಧಿ, ರಾಗಿ, ಅವರೆ, ಹೆಸರು, ಬೇಳೆ, ಹುರುಳಿ ಮತ್ತು ತರಕಾರಿಗಳು, ಹಣ್ಣು, ಹೂಗಳಲ್ಲಿ ಗುಲಾಬಿಯನ್ನು ಹೆಚ್ಚಾಗಿ ಮಾರಾಟ ಮಾಡುತ್ತಿದ್ದರು.

ಬಜಾರುಗಳಲ್ಲಿ ನಿತ್ಯವೂ ಒಂದೊಂದು ಕಡೆ ಸಂತೆ ನಡೆಯುತ್ತಿತ್ತೆಂದು ಪಾಯೇಸನು ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ವಿವಿಧ ಮೂಲಗಳಿಂದ ಗ್ರಹಿಸಲಾದಂತೆ, ಕೃಷ್ಣ ಬಜಾರದಲ್ಲಿ ಸೋಮವಾರ, ಅಚ್ಯುತ ಬಜಾರದಲ್ಲಿ ಮಂಗಳವಾರ ಹಾಗೂ ಪಾನ್‌ಸುಪಾರಿ ಬಜಾರದಲ್ಲಿ ಶುಕ್ರವಾರಗಳಂದು ಸಂತೆ ನಡೆಯುತ್ತಿದ್ದಿತು. ವಿರೂಪಾಕ್ಷ, ಮಾಲ್ಯವಂತ, ವರದರಾಜಮ್ಮ ಮತ್ತು ವಿಠ್ಠಲ ಬಜಾರುಗಳಲ್ಲಿ ಇನ್ನುಳಿದ ದಿನಗಳಲ್ಲಿ ಸಂತೆಯು ಸೇರುತ್ತಿದ್ದಿರಬೇಕು.

ಬಜಾರುಗಳಿಗೆ ದವಸ-ಧಾನ್ಯಗಳನ್ನು ತರುತ್ತಿದ್ದ ಸಾಗಣೆ ಮಾಧ್ಯಮಗಳನ್ನು ಕುರಿತಂತೆ ಪಾಯೇಸನು, ದವಸ-ಧಾನ್ಯಗಳನ್ನು ಹೇರಿಕೊಂಡು ಬಂದ ಲೆಕ್ಕವಿಲ್ಲದಷ್ಟು ಎತ್ತಿನಗಾಡಿಗಳು ಬೀದಿಯಲ್ಲಿ ಕಿಕ್ಕಿರುದು ಹೋಗಿರುತ್ತವೆ ಎಂದು ಹೇಳಿದ್ದಾನೆ. ನ್ಯೂನಿಜ್‌ನು, ಪ್ರತಿದಿನ ಎರಡು ಸಾವಿರ ಹೇರೆತ್ತುಗಳು ವಿಜಯನಗರಕ್ಕೆ ಪ್ರವೇಶಿಸುತ್ತವೆ. ಪ್ರತಿಯೊಂದು ಎತ್ತಿಗೂ ಮೂರು ವಿಂತೆಂ ಸುಂಕ. ಆದರೆ ಕೊಂಬಿಲ್ಲದ ಎತ್ತುಗಳಿಗೆ ರಾಜ್ಯದಲ್ಲಿ ಎಲ್ಲಿಯೂ ಸುಂಕವಿಲ್ಲ[15] ಎಂದು ಹೇಳಿರುವುದರಲ್ಲಿ, ಎತ್ತಿನ ಗಾಡಿಗಳು ಸಾಗಾಣಿಕೆಯ ಪ್ರಮುಖ ಅಂಗಗಳೆಂಬುದು ಅರಿವಾಗುವುದು. ಆದರೆ ಕೊಂಬಿಲ್ಲದ ಎತ್ತುಗಳೆಂದು ಹೇಳಿರುವ ಪ್ರಾಣಿಗಳು ಪ್ರಾಯಶಃ ಕತ್ತೆಗಳೇ ಇರಬೇಕು. ಕತ್ತೆಗಳು ಅಂದಿನ ಸಾಗಾಟದ ಮಾಧ್ಯಮಗಳೆಂದು ಬಾರ್ಬೋಸನಿಂದಲೂ ತಿಳಿಯುತ್ತದೆ. ಅವನು ಹೇಳಿರುವ ಹಾಗೆ, ಮೆಣಸನ್ನು ಎತ್ತು ಮತ್ತು ಕತ್ತೆಗಳ ಮೇಲೆ ಹೇರಿಕೊಂಡು (ವಿಜಯನಗರಕ್ಕೆ) ಬರುತ್ತಾರೆ. ಇದು ನ್ಯೂನಿಜ್‌ನ್ನು ಹೇಳಿಕೆಯನ್ನು ಸಮರ್ಥಿಸುತ್ತದೆ. ಹೇರುಗಳ ಸಾಗಾಟಕ್ಕೆ ಎತ್ತು ಕತ್ತೆಗಳಲ್ಲದೆ, ಕುದುರೆ, ಕೋಣ, ಆನೆಗಳನ್ನೂ ಬಳಸುತ್ತಿದ್ದರು. ಎತ್ತಿನ ಆಡಿಗಳಿಗೆ ಮೂರು ವಿಂತೆಂ ಸುಂಕವನ್ನು ಹಾಕುತ್ತಿದ್ದರೆಂದು ನ್ಯೂನಿಜ್‌ನಿಂದ ತಿಳಿದುಬಂದರೆ, ಪ್ರತಿ ಎತ್ತಿನ ಗಾಡಿಗೂ ಒಂದೊಂದು ಕಾಸು ವಸೂಲಿ ಮಾಡುತ್ತಿದ್ದರೆಂಬುದಾಗಿ ಇಶಾಸನಗಳು ಹೇಳುವುವು. ಇಷ್ಟೊಂದು ದವಸ-ಧಾನ್ಯ, ಆಭರಣ, ಮತ್ತಿತರ ಸಾಮಗ್ರಿಗಳ ವ್ಯಾಪಾರ ವಹಿವಾಟು ನಡೆಯುತ್ತಿದ್ದುದನ್ನು ಗಮನಿಸಿದರೆ, ವಿಜಯನಗರ ಪಟ್ಟಣದಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಯ ಅಗಾಧತೆ ಎಷ್ಟಿತ್ತೆಂಬುದನ್ನು ಅರಿಯುವುದೂ ಮುಖ್ಯ. ವಿಜಯನಗರದ ಜನಸಂಖ್ಯೆಯನ್ನು ಪ್ರವಾಸಿಗರು ತಮ್ಮ ಬರವಣಿಗೆಗಳಲ್ಲಿ ಉಲ್ಲೇಖಿಸಿದ್ದಾರೆ. ಅಬ್ದುಲ್ ರಜಾಕ್ ಈ ಬಗೆಗೆ, “ವಿಜಯನಗರವು ಬಹಳ ದೊಡ್ಡದಾದ ಜನವಸತಿಯುಳ್ಳ ಊರು…. ಸೈನ್ಯದಲ್ಲಿ ಹನ್ನೊಂದು ಲಕ್ಷದಷ್ಟು ಯೋಧರಿದ್ದಾರೆ ಎಂಬುದಾಗಿ ಹೇಳಿದ್ದಾನೆ. ಅಲ್ಲದೆ, ವಿಜಯನಗರವನ್ನು ಕುರಿತು, ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ, ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳೂ, ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ಮೂರನೆಯ ಕೋಟೆಯಿಂದ ಏಳನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನೂ, ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಯನ್ನೂ ನೋಡಬಹುದು ಎಂದಿದ್ದಾನೆ.”[16] ಡೊಮಿಂಗೋ ಪಾಯೇಸನ್‌ನು, “ಈ ಊರಿನ ಜನಸಂಖ್ಯೆ ಹೇಳಲಸಾಧ್ಯ. ಹಾಗೇನಾದರೂ ಹೇಳಿದರೆ ಉತ್ಪ್ರೇಕ್ಷೆ ಎಂದು ನೀವು ಹೇಳಬಹುದೆಂದು ಹೆದರಿಕೆಯಿಂದ ಹೇಳಲು ಹಿಂಜರಿಯುತ್ತೇನೆ” ಎಂದಿರುವನು. ವಿಜಯನಗರದಲ್ಲಿ ಕಟ್ಟಲಾಗಿದ್ದ ಮನೆಗಳನ್ನು ಕುರಿತು ಅವನೇ ಹೇಳುವಂತೆ, “ಬಿಸ್ನಗರದಲ್ಲಿ ಒಂದು ಲಕ್ಷ ಮನೆಗಳಿಗಿಂತಲೂ ಹೆಚ್ಚು ವಾಸದ ಮನೆಗಳಿವೆ ಎಂದು ಹೇಳುತ್ತಾರೆ”[17] ಎಂದಿರುವುದು ಅಂದಿನ ಜನಸಂಖ್ಯೆಯನ್ನು ತಿಳಿಯಲು ನೆರವಾಗುವ ಪ್ರಮುಖ ಅಂಗವಾಗಿದೆ. ಬಾರ್ಬೋಸಾ ಈ ಬಗೆಗೆ, “ಪರ್ವತಗಳಿಂದಾಚೆ ನಲವತ್ತು ಹರಿದಾರಿಗಳು ಒಳನಾಡಿಗೆ ಹೋದರೆ ಬಿಜನಗರ್ ಎಂಬ ಬಹು ದೊಡ್ಡ ನಗರ ಸಿಕ್ಕುತ್ತದೆ. ಈ ನಗರದಲ್ಲಿ ಅಸಂಖ್ಯಾತ ಜನ ವಾಸಮಾಡುತ್ತಾರೆ.[18] ಎಂಬುದಾಗಿ ತಿಳಿಸಿದ್ದಾನೆ. ಈ ಮೇಲಿನ ಪ್ರವಾಸಿಗರ ಹೇಳಿಕೆಗಳಿಂದ ವಿಜಯನಗರ ಪಟ್ಟಣದಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಯನ್ನು ಸ್ಪಷ್ಟವಾಗಿ ಗುರುತಿಸಲಾಗದಿದ್ದರೂ, ಅಂದಿನ ಜನಸಾಂದ್ರತೆಯ ಸಾಮಾನ್ಯ ಚಿತ್ರಣವನ್ನು ಕಂಡುಕೊಳ್ಳಬಹುದು.

ಇಷ್ಟೊಂದು ದವಸ-ಧಾನ್ಯ ಬಜಾರುಗಳಿಗೆ ಬರಬೇಕಾದರೆ ರಾಜರು ಕೃಷಿಗೆ ನೀಡಿದ್ದ ಆದ್ಯತೆಯೇ ಕಾರಣ. ಕೆರೆ-ಕಾಲುವೆಗಳನ್ನು ತೋಡಿಸಿ ನೀರಾವರಿ ವ್ಯವಸ್ಥೆಗೆ ಅನುವು ಮಾಡಿದ್ದರೆಂಬುದಕ್ಕೆ ತುರ್ತುಕಾಲುವೆ ಪ್ರಮುಖ ಉದಾಹರಣೆ. ರೈತರಿಗೆ ಸೌಕರ್ಯಗಳನ್ನು ಒದಗಿಸಿ ಅವರಿಂದ ಭೂ-ಕಂದಾಯವನ್ನು ಆಯಾಯ ಭೂಮಿಯ ಫಲವತ್ತತೆಗನುಗುಣವಾಗಿ ಪಡೆಯುತ್ತಿದ್ದರು. ಹೀಗೆ ಬಜಾರುಗಳು ರಾಜ್ಯದ ಸಂಪತ್ತನ್ನು ತಮ್ಮನ್ನು ಬರಮಾಡಿಕೊಂಡು ಸಂಪತ್ತಿನ ಕೇಂದ್ರಗಳಾಗಿದ್ದವು. ಸಾಂಸ್ಕೃತಿಕ ಚಟುವಟಿಕೆಗಳ ರಂಗಭೂಮಿಯಾಗಿ ಮೆರೆದವು.

ಸಾಮ್ರಾಜ್ಯದ ಏಳಿಗೆಯಲ್ಲಿ ಹಂಪೆಯ ಬಜಾರುಗಳು ಮಹತ್ವದ ಪಾತ್ರ ವಹಿಸಿದ್ದಂತೆಯೇ, ಈ ಸಂಪತ್ತಿನ ಕಾರಣದಿಂದಲೇ ವಿರೋಧಿ ರಾಜ್ಯಗಳು ವಿಜಯನಗರದತ್ತ ತಮ್ಮ ಗಮನವನ್ನು ಹರಿಸಲು ಕಾರಣವಾಗಿದ್ದಿತು.

**ಆಕರ**

ಹಂಪೆಯ ಬಜಾರುಗಳು, ೧೯೯೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಆಯ್ದ ಭಾಗಗಳು.

[1] ಅದೇ, ಸಂಖ್ಯೆ ೫೯೫

[2] ಅದೇ,

[3] ಅದೇ, ಸಂ.೪, ಸಂಖ್ಯೆ ೨೪೫

[4] ಎ.ಆ.ಎಸ್.ಐ.ಇ., ೧೯೯೨, ಸಂಖ್ಯೆ ೯೬೮

[5] ಎ ಫರ್ಗಾಟನ್‌ಎಂಪೈರ್, ೧೯೮೮, ಪು.೨೯೦

[6] ಅದೇ, ಪು. ೩೮೬

[7] ಮಹದೇವ ಸಿ., ೧೯೯೬, ವಿಜಯನಗರದಲ್ಲಿ ಅರ್ದ್ಯೆಗೆಮಾ ಅಥವಾ ಒಂದೆಗೆಮಾ ಪಟ್ಟಣ ಯಾವುದು?

[8] ಎ.ಆ.ಎಸ್.ಐ.ಇ., ಸಂ.೭೩೦

[9] ಇನ್‌ವಿಜಯನಗರ : ಪ್ರೋಗ್ರೆಸ್‌ಆಫ್ ರಿಸರ್ಚ್, ೧೯೮೪-೮೭, ಪು.೪೬

[10] ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೨೬೮

[11] ಅಳಿದುಳಿದ ಹಂಪೆ, ಪು.೩

[12] ಪ್ರ.ಕಂ.ಇಂ.ಸಂ.೨, ಪು.೨೯೧

[13] ಸೋರ್ಸ್‌ಆಫ್ ವಿಜಯನಗರ ಹಿಸ್ಟರಿ, ಪು.೫೭

[14] ಪ್ರ.ಕಂ.ಇಂ.ಸಂ. ೨, ಪು.೨೯೧

[15] ಪ್ರ.ಕಂ.ಇಂ.ಸಂ. ಪು.೪೧೨

[16] ಪ್ರ.ಕಂ.ಇಂ.ಸಂ. ಪು.೧೫೪-೧೫೫

[17] ಪ್ರ.ಕಂ.ಇಂ.ಸಂ. ಪು.೩೮೩

[18] ಪ್ರ.ಕಂ.ಇಂ.ಸಂ. ಪು.೨೯೦

## ೩೫. ರಾಜ ಪ್ರಾಂಗಣದ ದಾರಿಗಳು

ವಿಜಯನಗರ ಪಟ್ಟಣ ಸುಮಾರು ೨೬ ಚ.ಕಿ.ಮೀ.ಗೂ ಮಿಕ್ಕಿದ್ದು, ಅದರಲ್ಲಿ ಅನೇಕ ಬಗೆಯ ಬೀದಿಗಳು ಇದ್ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ದೊರಕುತ್ತದೆ. ಈ ಎಲ್ಲಾ ಬೀದಿಗಳನ್ನು ಸ್ಥಳ ಪರಿವೀಕ್ಷಣೆಯ ಮೂಲಕ ಗುರುತಿಸಬಹುದಾಗಿದೆ. ಪಟ್ಟಣದ ಕೇಂದ್ರ ಭಾಗದಲ್ಲಿ ಅನೇಕ ರೀತಿಯ ಚಟುವಟಿಕೆಗಳಿದ್ದು, ಸಮರ್ಪಕ ಸಂಪರ್ಕಕ್ಕೆ ಬೀದಿಗಳು ಬಹು ಮುಖ್ಯಪಾತ್ರ ವಹಿಸಿದ್ದವು. ಇದರ ಬಗ್ಗೆ ಅರಿಯಲು ವಿಜಯನಗರ ವೈಭವವನ್ನು ಕಣ್ಣಾರೆ ಕಂಡು ವರ್ಣಿಸಿದ ವಿದೇಶಿ ಪ್ರವಾಸಿಗರ ಬರವಣಿಗೆಗಳು ಬಹು ಮುಖ್ಯವಾದವು. ವಿಜಯನಗರವನ್ನು ಸಂದರ್ಶಿಸಿದ ಅಬ್ದುಲ್ ರಜಾಕ್, ಡೊಮಿಂಗೊ ಪೆಯಾಸ್‌ರು ಇಲ್ಲಿನ ರಸ್ತೆಗಳು, ಬಜಾರುಗಳು ಮತ್ತು ಮಾರಾಟ ಮಾಡುತ್ತಿದ್ದ ವಸ್ತುಗಳ ದೊಡ್ಡ ಪಟ್ಟಿಯನ್ನು

ನೀಡಿದ್ದಾರೆ. ಇತ್ತೀಚೆಗೆ ಇಲ್ಲಿನ ದಾರಿಗಳನ್ನು ಗುರುತಿಸಲಾಗಿದೆ. (Fritz, 1984, pp. 48-50) ಕೆಲವು ದಾರಿಗಳ ಬಗ್ಗೆ ಮರು ವಿಶ್ಲೇಷಣೆ ಮಾಡಬೇಕಾಗಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಅಬ್ದುಲ್ ರಾಜಕ್ ನೀಡಿರುವ ವಿವರಣೆಯಂತೆ ಇಲ್ಲಿ ಅರಮನೆಯ ಎದುರು, ಎದುರು ಬದಿರಾದ ನಾಲ್ಕು ಅಂಗಡಿ ಬೀದಿಗಳು, ಉಪ್ಪರಿಗೆ, ಕಮಾನುಗಳನ್ನು ಹೊಂದಿದ ಉದ್ದವಾದ ಮತ್ತು ಅಗಲವಾದ ಬೀದಿಗಳಿರಬೇಕು. ಆದರೆ ವಾಸ್ತವದಲ್ಲಿ ಎರಡು ರಸ್ತೆಗಳು ಒಂದನ್ನೊಂದು ಛೇದಿಸಿದಲ್ಲಿ ಆಗ ನಾಲ್ಕು ರಸ್ತೆಗಳಾಗುತ್ತವೆ. (Mator, R.H. 1855, p. 24)

ರಾಜ ಪ್ರಾಂಗಣ ಎಂದರೆ ಸಾಮಾನ್ಯವಾಗಿ ಅರ್ಥೈಸುವ ಒಂದು ರಾಜರ ಅರಮನೆಗಳಿರುವ ಜಾಗ ಮತ್ತು ಅದರ ಪಶ್ಚಿಮಕ್ಕಿರುವ ಟಂಕಸಾಲೆ, ಟಂಕಸಾಲೆಯ ಉತ್ತರಕ್ಕಿರುವ ದಂಡನಾಯಕನ ಕೋಟೆ ಮತ್ತು ಈಶಾನ್ಯದಲ್ಲಿರುವ ಜನಾನದ ಕೋಟೆ. ಈ ಹೆಸರುಗಳು ಸರಿಸುಮಾರು ಕಳೆದ ಶತಮಾನದಿಂದ ಚಾಲ್ತಿಯಲ್ಲಿದ್ದು, ಹಾಗೆಯೇ ಇಂದೂ ಸಹ ಕರೆಯಲ್ಪಡುತ್ತದೆ. ಈ ಮೇಲೆ ತಿಳಿಸಿದ ಪ್ರತಿಯೊಂದು ಪ್ರದೇಶವು ತನ್ನದೇ ಆದ ಹೆಗ್ಗುರುತುಗಳು ಮತ್ತು ಕಟ್ಟಡಗಳನ್ನು ಹಾಗೂ ಇತರ ಸೌಲಭ್ಯಗಳನ್ನು ಹೊಂದಿದೆ. ಅದರ ಸುತ್ತಲೂ ಪ್ರಾಕಾರ ಗೋಡೆಗಳಿವೆ. ಇಲ್ಲಿನ ಭಾಗಗಳು ಒಂದಕ್ಕೊಂದು ಹೊಂದಿಕೊಂಡಿದ್ದು ಕೆಲವು ಸ್ಥಳಗಳ ಸುತ್ತ ಎರಡು ಸುತ್ತಿನ ಕೋಟೆ ಗೋಡೆಗಳು ಇರುವ ನಿದರ್ಶನಗಳುಂಟು. ಇದಕ್ಕೆ ಉತ್ತಮ ಉದಾ. ರಾಜ ಪ್ರಾಂಗಣ. ಇಲ್ಲಿ ಪಶ್ಚಿಮ, ಪೂರ್ವ ಹಾಗೂ ದಕ್ಷಿಣ ಭಾಗಕ್ಕೆ ಬೇರೆ ಕೋಟೆಗಳ ಸಾಲುಗಳಿರುವುದರಿಂದ ೨ ಕೋಟೆಗಳ ನಡುವೆ ಸ್ಥಳ ಒಂದು ಬೀದಿಯಾಗಿ ಅಥವಾ ದಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ರಾಜ ಪ್ರಾಂಗಣದ ಪಶ್ಚಿಮ ಭಾಗ ಹಾಗೂ ಟಂಕಸಾಲೆಯ ಪೂರ್ವಭಾಗದ ಕೋಟೆ ಗೋಡೆಗಳ ಮಧ್ಯ ದಾರಿಯಿದೆ. ರಾಜ ಪ್ರಾಂಗಣದ ಪಶ್ಚಿಮ ಕೋಟೆ ಗೋಡೆಯಲ್ಲಿರುವ ಬಾಗಿಲಿನಿಂದ ರಾಜ ಪ್ರಮುಖರು ಯಾವುದೇ ಅಡೆತಡೆಯಿಲ್ಲದೆ ನೇರವಾಗಿ ಹಜಾರರಾಮ ದೇವಸ್ಥಾನದ ದಕ್ಷಿಣ ಭಾಗವನ್ನು ಕಿರಿದಾದ ಬಾಗಿಲ ಮೂಲಕ ಪ್ರವೇಶಿಸಬಹುದಾಗಿದೆ. ಹಾಗೆಯೇ ಹಜಾರಮದ ವಾಯವ್ಯ ಗೋಡೆಯು ಮುಂದುವರಿದಿದ್ದು ಉತ್ತರದ ತುದಿಯಲ್ಲಿರುವ ದ್ವಾರದ ಮೂಲಕ ಹಜಾರರಾಮ ದೇವಾಲಯದ ಹಿಂಭಾಗಕ್ಕೆ ಅಂದರೆ ಪಶ್ಚಿಮ ಭಾಗದಲ್ಲಿರುವ ಮಂಟಪಗಳು ಸನಿಹದಿಂದ ಇನ್ನೆರಡು ದ್ವಾರಗಳ ಮೂಲಕ ದಕ್ಷಿಣಾಭಿಮುಖವಾಗಿ ಒಂದು ಪಶ್ಚಿಮಕ್ಕೆ ಸುಮಾರು ೩೦ ಕಿ.ಮೀ. ಚಲಿಸಿ ಪುನಃ ಉತ್ತರಕ್ಕೂ ಅಷ್ಟೇ ಚಲಿಸಿ ಮತ್ತೆ ಪಶ್ಚಿಮಕ್ಕೆ ತಿರುಗಿ ನಂತರ ದಕ್ಷಿಣದ ದ್ವಾರದ ಮೂಲಕ ಟಂಕಸಾಲೆಯ ಮುಖ್ಯ ಅರಮನೆಯ ಹಾಗೂ ಅದರ ಪಶ್ಚಿಮಕ್ಕಿರುವ ಎರಡು ಚಿಕ್ಕ ಅರಮನೆಗಳು ಮತ್ತು ಅದಕ್ಕಿರುವ ವ್ಯವಸ್ಥೆ ಇತ್ತೀಚಿನ ಉತ್ಖನನಗಳಿಂದ ಹೊರಬಂದಿದೆ. ಟಂಕಸಾಲೆಯ ದಕ್ಷಿಣದ ಗೋಡೆಯಲ್ಲಿ ೩ ಬಾಗಿಲುಗಳಿದ್ದು ಅವು ದಕ್ಷಿಣಕ್ಕಿರುವ ಮತ್ತೊಂದು ಪ್ರಾಂಗಣಕ್ಕೆ ಹಾದಿಯನ್ನು ಒದಗಿಸಿದೆ.

ಈಗಾಗಲೆ ತಿಳಿಸಿರುವ ಹಜಾರರಾಮದ ಉತ್ತರದಲ್ಲಿರುವ ದ್ವಾರದ ಮೂಲಕ ಪಶ್ಚಿಮಾಭಿಮುಖವಾಗಿ ಒಂದು ದಕ್ಷಿಣಕ್ಕೆ ಸುಮಾರು ೩೦ ಕಿ.ಮೀ.ಗಳಷ್ಟು ನಡೆದು ಪುನಃ ಪಶ್ಚಿಮ-ದಕ್ಷಿಣ, ಪಶ್ಚಿಮ, ಉತ್ತರ-ಪಶ್ಚಿಮದ ಮೂಲಕ ದಂಡನಾಯಕನ ಕೋಟೆಯ ಈಶಾನ್ಯದಲ್ಲಿರುವ ದೊಡ್ಡ ಕಟ್ಟಡದ (ಅರಮನೆಯ) ಭಾಗಕ್ಕೆ ಹೋಗಬಹುದಾಗಿದೆ. ಈ ಅರಮನೆಯು ಬಹಳಷ್ಟು ರಕ್ಷಣಾ ವ್ಯವಸ್ಥೆಯನ್ನು ಹೊಂದಿರುವುದರಿಂದ ದಂಡನಾಯಕ ಅಥವಾ ರಾಜರಿಗೆ ಸೇರಿದೆ ಎನ್ನಬಹುದಾಗಿದೆ. ಕೆಲವು ಹಾದಿಗಳು ಬಹಳ ಅಂಕುಡೊಂಕಾಗಿದ್ದು ಕೆಲವು ತಡೆಗಳನ್ನು ದಾಟಿಬರುವುದರಿಂದ ಇದರ ಪ್ರಾಮುಖ್ಯತೆ ಅರಿವಾಗುತ್ತದೆ.

ದಂಡನಾಯಕನ ಕೋಟೆಯ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿರುವ ಬೃಹತ್ ಗೋಡೆ ದಂಡನಾಯಕನ ಕೋಟೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ. ದಂಡನಾಯಕನ ಕೋಟೆ ವಾಯವ್ಯದಲ್ಲಿರುವ ಅರಮನೆಗೆ ಭದ್ರವಾದ ಕೋಟೆ ಗೋಡೆಯನ್ನು ನಾಲ್ಕು ಪಕ್ಕದಲ್ಲಿರುವ ಅರಮನೆಗೆ ಭದ್ರವಾದ ಕೋಟೆಯ ಗೋಡೆಯನ್ನು ನಾಲ್ಕು ಪಕ್ಕದಲ್ಲಿ ಕಾಣಬಹುದು. ಮೇಲೆ ಹೇಳಿದ ಉತ್ತರ ದಕ್ಷಿಣದ ಗೋಡೆ ಈ ಅರಮನೆಗೆ ಪಶ್ಚಿಮ ಭಾಗದಲ್ಲಿದ್ದು ಇದರ ಮಧ್ಯದಲ್ಲಿ ಸಣ್ಣ ಬಾಗಿಲಿರುವುದರಿಂದ ಎರಡೂ ಪಕ್ಕದಲ್ಲಿ ಸಂಚರಿಸಲು ಉತ್ತಮವಾದ ದಾರಿಯನ್ನು ಹೊಂದಿದೆ. ದಂಡನಾಯಕನ ಕೋಟೆಯ ವಾಯವ್ಯದಲ್ಲಿ ಗುಮ್ಮಟವಿರುವ ಕಾವಲು ಗೋಪುರವಿದೆ. ಇದು ದಂಡನಾಯಕನ ಕೋಟೆಗೆ ಉತ್ತರ ಬಾಗಿಲಿನಿಂದ ಬರುವ ಜನರನ್ನು ನಿಯಂತ್ರಿಸಲು ಅನುಕೂಲವಾಗಿರುತ್ತದೆ. ದಂಡನಾಯಕನ ಕೋಟೆಯ ದಕ್ಷಿಣದ ಭಾಗ ತುದಿಯಲ್ಲಿ ಮತ್ತೊಂದು ಅರಮನೆಯ ಬುನಾದಿಯಿದೆ. ಇದರ ಆಗ್ನೇಯಕ್ಕೆ ಕಾವಲು ಗೋಪುರ ಹಾಗೂ ಇಸ್ಲಾಮಿಕ್ ಶೈಲಿಯ ಕಟ್ಟಡವಿದೆ.

ಆದುದರಿಂದ ಇವುಗಳ ಮಧ್ಯೆ ಸಂಚರಿಸಲು ಪೂರ್ವ ಪಶ್ಚಿಮದ ದಾರಿ ಇರಲೇಬೇಕು. ಹಾಗೆಯೇ ದಂಡನಾಯಕನ ಕೋಟೆಯ ವಾಯವ್ಯದಲ್ಲಿರುವ ಬಾಗಿಲಿನಿಂದ ಈ ದಾರಿಗೆ ಸೇರಲು ಮತ್ತೊಂದು ದಾರಿ ಇರಲೇಬೇಕು.

ರಾಜ ಪ್ರಾಂಗಣದ ಮೂರು ಭಾಗದಲ್ಲಿ ಅಂದರೆ ಪೂರ್ವ ಪಶ್ಚಿಮ ದಕ್ಷಿಣದಲ್ಲಿ ಸುಗಮವಾಗಿ ಸಂಚರಿಸಲು ದಾರಿಯಿದೆ. ಈ ಮೂರು ಪಕ್ಕದಲ್ಲಿ ಸ್ವತಂತ್ರವಾದ ಆವರಣಗಳಿವೆ. ಈ ಹೊರ ಸುತ್ತಿನ ದಾರಿಯಿಂದ ಮಹಾನವಮಿ ದಿಬ್ಬಕ್ಕೆ ಉತ್ತರ ಮೆಟ್ಟಿಲುಗಳಿಂದ ಏರು ದಿಬ್ಬದ ಪಶ್ಚಿಮ ಭಾಗಕ್ಕೆ ಬಂದು ಅಲ್ಲಿಂದ ಮಹಾನವಮಿ ದಿಬ್ಬದ ಮೆಟ್ಟಿಲನ್ನೇರುವ ವ್ಯವಸ್ಥೆ ಇರಬೇಕು. ಮೇಲೆ ಹೇಳಿದ ಪಶ್ಚಿಮದ ಸಮತಟ್ಟು ಪ್ರದೇಶದಿಂದ ದಕ್ಷಿಣಕ್ಕೆ ಚಲಿಸಿ ಪೂರ್ವಕ್ಕೆ ತಿರುಗಿ, ಪೂರ್ವದಲ್ಲಿರುವ ಮೆಟ್ಟಿಲುಗಳನ್ನೇರುವ ಇನ್ನೊಂದು ದಾರಿಯೂ ಮಹಾನವಮಿ ದಿಬ್ಬಕ್ಕಿದೆ. ಮಹಾನವಮಿ ದಿಬ್ಬದಿಂದ ದಕ್ಷಿಣಕ್ಕಿರುವ ಕೊಳಕ್ಕೆ ಹಾಗೂ ನೈಋತ್ಯದಲ್ಲಿರುವ ಮಂಟಪಗಳ ಸಾಲಿಗೆ ಹೋಗಲು ದಾರಿ ಇರಬೇಕು. ಮಹಾನವಮಿ ದಿಬ್ಬದಿಂದ ಪಬ್ಲಿಕ್‌ಆಡಿಯನ್ಸ್‌ಹಾಲ್‌ಗೆ ಹೋಗಲು ಮತ್ತೊಂದು ದಾರಿಯಿದೆ. ಇವು ಡೊಮೆಂಗೋ ಪಯಾಸ್‌ತಿಳಿಸಿರುವ ಅರಮನೆಯ ಪ್ರದೇಶದಿಂದ ಹಾದು ಹೋಗುತ್ತದೆ. ಪಬ್ಲಿಕ್‌ಆಡಿಯನ್ಸ್‌ಹಾಲ್‌ನ ಪೂರ್ವಕ್ಕಿರುವ ಹೆಬ್ಬಾಗಿಲಿನಿಂದ ಹಜಾರರಾಮದ ಮುಂಭಾಗಕ್ಕೆ ಬರಲು ಎರಡು ಹೆಬ್ಬಾಗಿಲುಗಳನ್ನು, ಅಂದರೆ ಎರಡು ಆವರಣಗಳನ್ನು ಹಾಯ್ದು ಬರಬೇಕಾಗುತ್ತದೆ. ಹಜಾರರಾಮನಿಂದ ಮುಂದಕ್ಕೆ ಈ ಹಾದಿಯು ಇಂದಿನ ಕ್ಯಾಂಟೀನ್‌ನ ಹಿಂಭಾಗದಲ್ಲಿರುವ ಹಾದಿಗೆ ದಾರಿಯಾಗುತ್ತದೆ. ಇಂದಿನ ಕ್ಯಾಂಟೀನ್‌ಭಾಗಕ್ಕೆ ಬರಲು ಈ ಹಾದಿಯ ಸಂಪರ್ಕವಿರಲೇಬೇಕು. ಈ ಉತ್ತರ ದಕ್ಷಿಣದ ದಾರಿಗೆ ಪಶ್ಚಿಮದಿಂದ ಇನ್ನೊಂದು ದಾರಿಯೂ ಲಂಬವಾಗಿ ಬಂದು ಸೇರುತ್ತದೆ. ಹೀಗೆ ಸೇರುವ ದಾರಿಯ ದಂಡನಾಯಕನ ಕೋಟೆಯ ಉತ್ತರ ಭಾಗದಿಂದ ಅಂದರೆ ಹೆಚ್ಚು ಕಡಿಮೆ ಇವತ್ತಿನ ದಾರಿಯನ್ನೇ ಅನುಸರಿಸಿ ಹಜಾರರಾಮನ ದಕ್ಷಿಣದ ಪಕ್ಕದಲ್ಲಿ ಅಂದರೆ ಈಗಿರುವ ಬೋರ್‌ವೆಲ್‌ನ ಹತ್ತಿರ ಸೇರಿರಬೇಕು.



ಕೃಪೆ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಹಜಾರಾಮ ದೇವಸ್ಥಾನದಿಂದ ಪೂರ್ವಕ್ಕೆ ಪೆದ್ದಂಗಡಿ ಬೀದಿಗೆ ಸೇರುವ ದೊಡ್ಡದಾರಿಯಿದೆ. ಈ ದಾರಿಯು ಹಜಾರರಾಮ ದೇವಸ್ಥಾನದ ಕೊಳದ ಹಿಂಬದಿಯಲ್ಲಿ ಕವಲೊಡೆದು ದಕ್ಷಿಣಕ್ಕೆ ತಿರುಗಿ ಪೂರ್ವದಲ್ಲಿರುವ ಹೆಬ್ಬಾಗಿಲಿನ ಮೂಲಕ ಬಂದು ಆವರಣಕ್ಕೆ ಹೋದರೆ, ಮೊದಲನೇ ದಾರಿಯೂ ಹಾಗೇ ಮುಂದುವರಿದು ರಾಜ ಪ್ರಾಂಗಣದ ಉತ್ತರದ ಕೋಟೆ ಗೋಡೆಯ ಪಕ್ಕದಲ್ಲಿ ಹೋಗಿ ಮಹಾನವಮಿ ದಿಬ್ಬದ ದಾರಿಗೆ ಸೇರುತ್ತದೆ ಹಜಾರರಾಮ ದೇವಸ್ಥಾನದ ಮುಂದೆ ಅಡ್ಡಲಾಗಿ ಅಂದರೆ ಉತ್ತರ ದಕ್ಷಿಣ ದಾರಿಯ ಒಂದು ಟಿಸಿಲು ಇಂದಿನ ಈ ಕ್ಯಾಂಟೀನ್‌ಆವರಣಕ್ಕೆ ಬರುತ್ತದೆ.

ಇಲ್ಲಿಯ ಆವರಣದ ಈಶಾನ್ಯ ಭಾಗದಲ್ಲಿ ಒಂದು ಸಣ್ಣ ದ್ವಾರದ ಮೂಲಕ ಜನರು ಆವರಣಕ್ಕೆ ಪಶ್ಚಿಮದ ಮೂಲಕ ಸೇರುವ ವ್ಯವಸ್ಥೆಯನ್ನು ಹೊಂದಿರಬೇಕು.

ಜನಾನ ಆವರಣಕ್ಕೆ ಪಶ್ಚಿಮದಲ್ಲಿ ಈಗಾಗಲೇ ಹೇಳಿರುವ ಒಂದು ಬಾಗಿಲಿದ್ದರೆ, ಉತ್ತರಕ್ಕೆ ಮೂರು ಬಾಗಿಲುಗಳಿವೆ. ಉತ್ತರದ ೩ ಬಾಗಿಲುಗಳಲ್ಲಿ ಮಧ್ಯದ ಬಾಗಿಲು ಸಾಕಷ್ಟು ದೊಡ್ಡದಿದ್ದು ಕಾವಲುಗಾರರು (ಇದು ಬೃಹತ್) ಸಣ್ಣ ಗೋಪುರದ ಮೂಲಕ ಜನಾನ ಆವರಣದಲ್ಲಿರುವ ಅರಮನೆಗೆ ಪ್ರವೇಶವನ್ನು ಒದಗಿಸುತ್ತದೆ. ಹಾಗೆಯೇ ಪಶ್ಚಿಮದ ತುದಿಯಲ್ಲಿರುವ ಬಾಗಿಲಿನಿಂದ ಜನಾನದ ಆವರಣದಲ್ಲಿರುವ ಗಾರ್ಡ್‌ಕ್ವಾರ್ಟಸ್‌ಗೂ ಬರಬಹುದಾಗಿದೆ. ಪೂರ್ವದ ತುದಿಯಲ್ಲಿರುವ ಬಾಗಿಲಿನಿಂದ ಆನೆಸಾಲೆ ಎದುರಿನ ಆಯತಾಕಾರದ ಇನ್ನೊಂದು ಆವರಣಕ್ಕೆ ಹೋಗಬಹುದಾಗಿದೆ. ಜನಾನದ ಉತ್ತರ ಭಾಗದ ಈ ಮೂರು ಬಾಗಿಲುಗಳು ಹಜಾರರಾಮ ದೇವಸ್ಥಾನದಿಂದ ಬರುವ ದಕ್ಷಿಣೋತ್ತರ ದಾರಿಗೆ ಸೇರುತ್ತದೆ.

ಆನೆಯ ಸಾಲೆಯ ಎದುರು ಒಂದು ಹೆಬ್ಬಾಗಿಲಿದ್ದು ಅದರ ಮೂಲಕ ಹೋಗುವ ದಾರಿ ಜನಾನದ ಉತ್ತರ ದಿಕ್ಕಿಗಿರುವ ದಾರಿಗೆ ಸೇರಿ ಮುಂದೆ ಹಜಾರರಾಮದ ದಕ್ಷಿಣೋತ್ತರದ ದಾರಿಯನ್ನೇ ಸೇರುತ್ತದೆ.

ಪ್ರತಿಷ್ಠಿತ ವ್ಯಕ್ತಿಗಳ ಅರಮನೆಯ ಪಕ್ಕದಲ್ಲಿ ದಕ್ಷಿಣೋತ್ತರ ದಾರಿಯಿದ್ದು ಇದು ಹಂಪಾದೇವಿ ದಿಡ್ಡಿ ಮೂಲಕ ಹಾಯ್ದು ದಂಡನಾಯಕನ ಕೋಟೆಯ ವಾಯವ್ಯ ಬಜಾರ್, ಗೋರಿಕೆಳಗಣ ಮಾಗಣೆಯ ಹಾದಿ, ಸೋಮವೀದಿ ಹೀಗೆ ಅನೇಕ ಹೆಸರುಗಳಿವೆ. ಈ ರೀತಿಯ ಹೆಸರುಗಳು ಇಲ್ಲಿಯೂ ಇರಬೇಕು. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಶೋಧನೆಯಿಂದ ಇವು ತಿಳಿಯಬಹುದಾಗಿದೆ. ಪ್ರಸ್ತುತ ಇಲ್ಲಿರುವ ಆವರಣಗಳಿಗೆ ದಾರಿಗಳಿದ್ದು, ಅವು ಹಿಂದಿನ ದಾರಿಗಳನ್ನು ಕೆಲವೊಮ್ಮೆ ಸಂಧಿಸಿ, ಭಾಗಶಃ ಅವುಗಳ ಮೇಲಿದ್ದ ಕೆಲವೊಮ್ಮೆ ಭಿನ್ನವಾದ ಹೊಸ ದಾರಿಯಾಗಿದೆ. ಇತ್ತೀಚಿನ ಉತ್ಖನನಗಳಿಂದ ಅನೇಕ ಹೆಬ್ಬಾಗಿಲುಗಳು, ಬಾಗಿಲುಗಳು, ದಾರಿ, ದಾರಿಯ ಕೆಲವು ಭಾಗ ದೊರಕಿದೆ. ಇವೆಲ್ಲವನ್ನೂ ಸರಿಯಾಗಿ ಅಧ್ಯಯನ ಮಾಡಿ ಒಂದು ನಕ್ಷೆಯ ಮೇಲೆ ವಿನ್ಯಾಸಗೊಳಿಸಿದರೆ, ವಿಜಯನಗರದ ಕಾಲದ ರಾಜಪ್ರಾಂಗಣದ ದಾರಿಗಳು ಹೆಚ್ಚು ಸ್ಫುಟುಗೊಳ್ಳುತ್ತವೆ.

**ಆಧಾರ ಗ್ರಂಥಗಳು**

John Fritz: The Royal centre at Vijayanagara

Suryanarayana Rao: A History of Vijayanagara the never to be

Forgotton empire

Robert Sewell: A Forgetten Empire.

ಎಚ್.ಎಲ್.ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ, ಭಾಗ-೧

**ಆಕರ**

ವಿಜಯನಗರ ಅಧ್ಯಯನ, ಸಂ.೧೦, ೨೦೦೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು.೧೮೨-೧೮೬

# ೩೬. ವಿಜಯನಗರ ಪಟ್ಟಣದ ಜಲಸಾರಿಗೆ ವ್ಯವಸ್ಥೆ

ಯಾವುದೇ ರಾಜ್ಯ ಅಥವಾ ರಾಷ್ಟ್ರದ ಅಭಿವೃದ್ಧಿಗೆ ಸಾರಿಗೆ ವ್ಯವಸ್ಥೆಯು ಬಹುಮುಖ್ಯ ಆರ್ಥಿಕ ಅಭಿವೃದ್ಧಿ ಹಾಗೂ ಸಾಂಸ್ಕೃತಿ ಕೊಡುಕೊಳ್ಳುವಿಕೆಗೆ ಸಮರ್ಪಕ ಸಾರಿಗೆ ವ್ಯವಸ್ಥೆಯ ಮುಖ್ಯ ಕಾರಣವಾಗುತ್ತದೆ ಎಂಬುದರಲ್ಲಿ ಯಾವ ಸಂಶಯವಿಲ್ಲ. ಪ್ರಾಚೀನ ಭಾರತದ ಹರಪ್ಪಾ ಸಂಸ್ಕೃತಿಯ ಕಾಲದಿಂದಲೂ ನಮಗೆ ಸಾರಿಗೆ ವ್ಯವಸ್ಥೆಯ ಬಗೆಗೆ ಮಾಹಿತಿಗಳು ಲಭ್ಯವಿದೆ. ನಗರೀಕರಣ ಪ್ರಕ್ರಿಯೆಯು ಪ್ರಾರಂಭಗೊಂಡ ಕಾಲದಿಂದಲೂ ನಗರ, ಗ್ರಾಮ, ಹಳ್ಳಿ ಮುಂತಾದ ಮಾನವನ ನೆಲೆಗಳಲ್ಲಿ ರಸ್ತೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ದೊರಕಿವೆ. ಆದಿ ಇತಿಹಾಸ ಕಾಲದ ಅನೇಕ ನೆಲೆಗಳಲ್ಲಿ ರಸ್ತೆಗಳು ಇದ್ದುದಕ್ಕೆ ಸಾಕ್ಷ್ಯಾಧಾರಗಳು ಲಭ್ಯವಿದೆ. ಹರಪ್ಪಾ ಸಂಸ್ಕೃತಿಯ ನೆಲೆಗಳಲ್ಲಿ ಒಂದಾದ ಕಾಳಿಬಂಗಾನ್‌ನ ಉತ್ಖನನದಲ್ಲಿ ರಸ್ತೆಗಳು ದೊರಕಿವೆ. ಅವುಗಳ ಅಳತೆಯ ನಿರ್ದಿಷ್ಟವಾದ ೧:೨:೩:೪ರ ಪ್ರಮಾಣದಲ್ಲಿ ಇರುವುದು ಕುತೂಹಲಕಾರಿಯಾದ ಸಂಗತಿ.[1]

ಕರ್ನಾಟಕದಲ್ಲಿ ಹಲವಾರು ಪ್ರಾಚೀನ ನೆಲೆಗಳಿದ್ದರೂ ಅವುಗಳ ಸಂಪೂರ್ಣ ಉತ್ಖನನಗಳು ಆಗಿರುವುದಿಲ್ಲ. ಇದರಿಂದ ನಗರ ಅಥವಾ ಗ್ರಾಮಗಳ ರಚನೆ, ವಿನ್ಯಾಸ ಮತ್ತು ವಿಸ್ತೀರ್ಣತೆಗಳು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೆ ಪ್ರತಿ ನೆಲೆಯಲ್ಲಿಯೂ ಜನರ ಮತ್ತು ವಾಹನಗಳ ಓಡಾಟಕ್ಕೆ ಅವಶ್ಯಕವಾದ ಬೀದಿಗಳು ಇತ್ತೆಂಬುದು ಸಾಮಾನ್ಯವಾದ ಗ್ರಹಿಕೆಯೆಂದರೆ ತಪ್ಪಾಗಲಾರದು. ಕರ್ನಾಟಕದ ಆದಿಇತಿಹಾಸ ಕಾಲದ ನೆಲೆಗಳಲ್ಲಿ ಒಂದಾದ ವಡಂಗಾವ್‌ಮಾಧವಪುರದಲ್ಲಿ ಒಂದು ಸುಂದರ ರಸ್ತೆಯು ದೊರಕಿರುವುದು ಗಮನಾರ್ಹ. ವಡಗಾಂವ್‌ಮಾಧವಪುರವು ಪ್ರಸ್ತುತ ಬೆಳಗಾವಿ ನಗರದ ಹೊರವಲಯ ಪ್ರದೇಶವಾಗಿದ್ದು, ಸರಿಸುಮಾರು ೧೫ ಹೆಕ್ಟೇರ್ ನಷ್ಟು ಪ್ರದೇಶದಲ್ಲಿ ವಿಸ್ತರಿಸಿದ್ದು ಅಲ್ಲಿ ಆದಿಇತಿಹಾಸ ಕಾಲದ ಅವಶೇಷಗಳು ದೊರಕಿವೆ. ಈ ನೆಲೆಯನ್ನು ವಿದ್ವಾಂಸರು ಉತ್ಖನನ ನಡೆಸಿ ಆ ಕಾಲದ ಅನೇಕ ಕಟ್ಟಡ, ಬಾವಿ, ಧಾನ್ಯಗಳ ಕಣಜ, ವಿವಿಧ ಪ್ರಕಾರದ ನಾಣ್ಯ, ಮಣ್ಣಿನ ಗೊಂಬೆ, ಆಭರಣ, ಮಣಿ, ತಾಮ್ರದ ಸಾಮಾನು ಮತ್ತು ಮೃತ್ಪಾತ್ರೆಗಳನ್ನು ಬೆಳಕಿಗೆ ತಂದಿದ್ದಾರೆ.

ಈ ಪ್ರಾಚೀನ ನೆಲೆಯ ದಕ್ಷಿಣ ಭಾಗದಲ್ಲಿ ಸುಮಾರು ಒಂದನೆಯ ಶತಮಾನದ ರಸ್ತೆಯ ಕೆಲವು ಭಾಗಗಳು ಉತ್ಖನನದಲ್ಲಿ ಶೋಧವಾಗಿದೆ. ಇವು ಗಚ್ಚಿನ ಹಾಗೆ ಗಟ್ಟಿಯಾಗಿರುವ ಪದರುಗಳುಳ್ಳ ನೆಲದ ಭಾಗಗಳಾಗಿದ್ದು ಒಂದೇ ಅಕ್ಷರೇಖೆಯಲ್ಲಿದೆ. ಸುಮಾರು ೧.೪ ಕಿ.ಮೀ. ಉದ್ದದಷ್ಟು ಭಾಗಗಳು ಬೆಳಕಿಗೆ ಬಂದಿವೆ. ಇದರ ಎರಡು ಬದಿಗಳಲ್ಲಿ ಕಟ್ಟಡಗಳ ಅವಶೇಷಗಳು ಹಾಗೂ ಸೂರಿನ ಹೆಂಚುಗಳು ಇದ್ದುದರಿಂದ ಇವು ನಗರದ ಒಂದು ಪ್ರಮುಖ ಬೀದಿಯೇ ಆಗಿರಬೇಕು ಎಂದು ಅಭಿಪ್ರಾಯಪಡಲಾಗಿದೆ. ಪ್ರಸ್ತುತ ರಸ್ತೆಯನ್ನು ಆಗಿಂದ್ದಾಗ್ಗೆ ಸರಿಮಾಡುತ್ತಿದ್ದುದರ ಕುರುಹಾಗಿ ರಸ್ತೆಯಲ್ಲಿ ಒಂದು ಪದರದ ಮೇಲೆ ಇನ್ನೊಂದನ್ನು ಹಾಕಲಾಗಿದೆ. ಬೀದಿಯಲ್ಲಿ ಗಾಡಿಗಳು ಓಡಾಡಿದ ಗುರುತುಗಳು ಇಲ್ಲದ ಕಾರಣ ಈ ಬೀದಿಯನ್ನು ಜನರು ಕಾಲ್ನಡಿಗೆಗೆ ಬಳಸುತ್ತಿದ್ದರು ಎಂದು ಉತ್ಖನನಕಾರರು ತರ್ಕಿಸಿದ್ದಾರೆ. ರಸ್ತೆಯನ್ನು ಸುಮಾರು ೧ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿಸಿದ್ದು ೨ನೆಯ ಶತಮಾನದ ಅಂತ್ಯದವರೆಗೆ ಉಪಯೋಗದಲ್ಲಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಉತ್ಖನನಕಾರರಾದ ಅ.ಸುಂದರ ಅವರ ಪ್ರಕಾರ "ಇಷ್ಟು ಉದ್ದಗಲದ ಉತ್ತಮ ತರಗತಿಯ ಪ್ರಾಚೀನ ಬೀದಿ ಸಿಕ್ಕಿರುವುದು ದಕ್ಷಿಣ ಭಾರತದಲ್ಲೇ ಇದೇ ಪ್ರಪ್ರಥಮ."[2]

ಮಧ್ಯಕಾಲೀನ ಯುಗಕ್ಕೆ ಸೇರಿದ ವಿಜಯನಗರ ಸಾಮ್ರಾಜ್ಯದಲ್ಲಿಯೂ ವ್ಯಾಪಕವಾದ ಸಾರಿಗೆ ವ್ಯವಸ್ಥೆಯು ಇತ್ತೆಂಬುದು ತಿಳಿದ ವಿಷಯವೇ ಸರಿ. ಸಾಹಿತ್ಯಿಕ ಮತ್ತು ಶಾಸನಾಧಾರಗಳು ವಿಜಯನಗರ ಸಾಮ್ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಕುರಿತ ಮಾಹಿತಿಗಳನ್ನು ಒದಗಿಸುತ್ತವೆ. ರಾಜಧಾನಿಯಾದ ವಿಜಯನಗರ ಪಟ್ಟಣ ಅಥವಾ ಹಂಪೆಯು ರಾಜ್ಯದ ಇತರ ಪ್ರದೇಶಗಳೊಂದಿಗೆ ರಸ್ತೆಯ ಸಂಪರ್ಕವನ್ನು ಹೊಂದಿತ್ತು. ಆದರೆ ಅವುಗಳನ್ನು ನಿಖರವಾಗಿ ಗುರುತಿಸುವಲ್ಲಿ ಹಲವಾರು ತೊಡಕುಗಳಿವೆ. ಅಂದಿನಿಂದ ಇಂದಿನವರೆಗೆ ಸಾಗಿ ಬಂದಿರುವ ನಗರೀಕರಣ

ಪ್ರಕ್ರಿಯೆ, ವ್ಯವಸಯ, ಭೂಕಬಳಿಕೆ, ಪ್ರಾಕೃತಿಕ ವಿಕೋಪ ಮತ್ತು ಮುಂತಾದ ಹಲವಾರು ಕಾರಣಗಳಿಂದಾಗಿ ರಾಜಧಾನಿ ಮತ್ತು ಇತರೆ ಪ್ರದೇಶಗಳೊಂದಿಗಿನ ರಸ್ತೆಯ ಸಂಪರ್ಕ ಜಾಲವನ್ನು ಗುರುತಿಸಲು ಸಾಧ್ಯವಾಗಿಲ್ಲ.

ವಿಜಯನಗರ ಪಟ್ಟಣ ಅಥವಾ ಹಂಪೆಯಲ್ಲಿ ನಡೆಸಿದ ಉತ್ಖನನದಲ್ಲಿ ಪ್ರಾಚೀನ ರಸ್ತೆಗಳನ್ನು ಬೆಳಕಿಗೆ ತರಲಾಗಿದೆ. ಈ ರಸ್ತೆಯು ಬಹಳ ಸುಂದರವಾಗಿದ್ದು, ಹಲವಾರು ಭಾಗಗಳಿಗೆ ಉತ್ತಮವಾದ ಸಂಪರ್ಕ ಜಾಲವನ್ನು ಏರ್ಪಡಿಸಿತ್ತು.[3] ರಾಜಧಾನಿಯು ಒಂದು ವ್ಯವಸ್ಥಿತ ಕೋಟೆಯ ಒಳಭಾಗದಲ್ಲಿದ್ದು, ಅದಕ್ಕೆ ಅನೇಕ ಪ್ರದೇಶ ದ್ವಾರಗಳಿದ್ದವು ಹಾಗೂ ಅವುಗಳಿಗೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು ಎಂಬುದು ಶಾಸನ ಮತ್ತು ಸಾಹಿತ್ಯ ಆಧಾರಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಸಿಂಗಾರದ ಹೆಬ್ಬಾಗಿಲು, ಪೆನಗೊಂಡೆ ಹೆಬ್ಬಾಗಿಲು, ಅರೆಯಶಂಕರ ಹೆಬ್ಬಾಗಿಲು, ಬೇಟೆಗಾರರ ಹೆಬ್ಬಾಗಿಲು ಮುಂತಾದವುಗಳು. ಅವುಗಳ ಪಳೆಯುಳಿಕೆಗಳು ಹಂಪೆಯಲ್ಲಿ ಇಂದಿಗೂ ಕಾಣಸಿಗುತ್ತವೆ. ಹಂಪೆಯಲ್ಲಿ ನಡೆಸಲಾಗುತ್ತಿರುವ ಉತ್ಖನನಗಳಲ್ಲಿ ರಸ್ತೆಯ ಭಾಗಗಳು ಇಂದಿಗೂ ದೊರಕುತ್ತಲಿವೆ. ಉತ್ಖನನ ಕಾರ್ಯ ಸಂಪೂರ್ಣಗೊಂಡಾಗ ರಾಜಧಾನಿ ಪಟ್ಟಣದ ಸಮಗ್ರ ಸಂಪರ್ಕ ಜಾಲವನ್ನು ಅರಿಯಬಹುದು.

ಸಾರಿಗೆ ವ್ಯವಸ್ಥೆಯಲ್ಲಿ ರಸ್ತೆಯಷ್ಟೇ ಪ್ರಮುಖವಾದುದು ಜಲಸಾರಿಗೆ ವ್ಯವಸ್ಥೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಜಲಸಾರಿಗೆ ವ್ಯವಸ್ಥೆ ಇತ್ತೆಂಬುದು ಉತ್ಖನನಗಳಿಂದ ದೃಢಪಟ್ಟಿದೆ. ಹರಪ್ಪ ಸಂಸ್ಕೃತಿಯ ನೆಲೆಗಳಲ್ಲಿ ಒಂದಾದ ಲೋಥಲ್‌ನಲ್ಲಿ (ಗುಜರಾತ್‌ರಾಜ್ಯದಲ್ಲಿದೆ) ಒಂದು ಬಂದರು ಉತ್ಖನನದಿಂದ ಬೆಳಕಿಗೆ ಬಂದಿದೆ.[4] ಇದರಿಂದ ಆ ಸಂಸ್ಕೃತಿಗೆ ಸೇರಿದವರು ಸಾಗರೋತ್ತರ ವಾಣಿಜ್ಯ ಚಟುವಟಿಕೆಗಳಲ್ಲಿ ಭಾಗಿಗಳಾಗುತ್ತಿದ್ದರು ಹಾಗೂ ಜಲಸಾರಿಗೆ ವ್ಯವಸ್ಥೆಯು ಸುವ್ಯವಸ್ಥಿತವಾಗಿ ನಡೆಯುತ್ತಿದ್ದವು. ಎಂದು ಗ್ರಹಿಸಬಹುದು. ದೊರಕಿರುವ ಅಲ್ಪ ಆಧಾರಗಳಿಂದ ಆಂತರಿಕ ಜಲಸಂಪರ್ಕವು ಸಹ ಅಂದು ಪ್ರಚಲಿತವಾಗಿದ್ದವು ಎಂದು ಊಹಿಸಿದರೆ ತಪ್ಪಾಗಲಾರದು. ಆದಿ ಇತಿಹಾಸಕಾಲದಲ್ಲಿ ಮತ್ತು ಚಾರಿತ್ರಿಕ ಕಾಲಗಳಲ್ಲಿಯೂ ನದಿಗಳು ಮತ್ತು ಕಡಲುಗಳಿದ್ದು ಪ್ರದೇಶಗಳಲ್ಲಿ ಜಲಸಾರಿಗೆಯು ಸುಗಮವಾಗಿ ಸಾಗುತ್ತಿದ್ದವು ಎಂಬುದು ಅಂದಿನ ಕಾಲದ ಶಾಸನ, ಶಿಲ್ಪ, ನಾಣ್ಯ ಮತ್ತು ಸಾಹಿತ್ಯಿಕ ಆಧಾರಗಳಿಂದ ತಿಳಿದುಬರುವ ಸಂಗತಿಯಾಗಿದೆ.[5] ಇನಾಮ್‌ಗಾವ್[6] ಮತ್ತು ಬೆಸನಗರಗಳಲ್ಲಿಯೂ ಕೃತಕ ಕಾಲುವೆಗಳನ್ನು ನಿರ್ಮಿಸಿ ಜಲಸಂಪರ್ಕ ಸಾಧಿಸಿದ್ದರು ಎಂದು ಉತ್ಖನಗಳಿಂದ ತಿಳಿದುಬಂದಿದೆ. ಇದರಂತೆಯೇ ಆದಿಇತಿಹಾಸ ಕಾಲದ ನೆಲೆಯಾದ ಕುಮ್ರುಹಾರದಲ್ಲಿ (ಇಂದಿನ ಪಾಟ್ನ) ೧೩ ಮೀ ಅಗಲ ೩ ಮೀ. ಆಳದ ಕಾಲುವೆಯು, ಅಶೋಕನ ಕಾಲದ (ಮೌರ್ಯರ ಕಾಲ) ಕಂಬಗಳುಳ್ಳ ಮಂಟಪದ ಪಕ್ಕಕ್ಕೆ ಹಾಯ್ದುಹೋಗಿದೆ. ಇದನ್ನು ಗಂಗಾನದಿಗೆ ಜೋಡಿಸಲಾಗಿದೆ. ಸಭಾಮಂಟಪಕ್ಕೆ ಬೇಕಾದ ವಸ್ತುಗಳನ್ನು ಮತ್ತು ಚುನಾರ್ ಗಣಿಗಳಲ್ಲಿ ರೂಪಸಿದ ಕಲ್ಲಿನ ಬೃಹತ್‌ಕಂಬಗಳನ್ನು ಗಂಗಾ ನದಿಯಲ್ಲಿ ಸಾಗಿಸಿ ನಂತರ ಮೇಲೆ ಉಲ್ಲೇಖಿಸಿದ ಕಾಲುವೆಯ ಮೂಲಕ ಸಭಾಮಂಟಪಕ್ಕೆ ತರಲಾಗುತ್ತಿತ್ತು ಎಂದು ತರ್ಕಿಸಲಾಗಿದೆ.[7] ನಾಗಾರ್ಜುನಕೊಂಡದಲ್ಲಿಯೂ ಸಹ ಇಂತಹ ವ್ಯವಸ್ಥೆಯು ಇತ್ತೆಂಬುದು ಉತ್ಖನನದಿಂದ ತಿಳಿದುಬಂದಿದೆ. ಕ್ರಿ.ಶ.೩ ನೇ ಶತಮಾನಕ್ಕೆ ಸೇರಿದ ೮೦೦ಮೀ. ಉದ್ದ, ೧೫ ಮೀ. ಅಗಲ ಮತ್ತು ೩ ಮೀ. ಆಳದ ಕಾಲುವೆಯು ಉತ್ಖನನದಲ್ಲಿ ದೊರಕಿದೆ. ಅದರ ಎರಡೂ ಓ ಬದಿಗಳನ್ನು ಒರಟುಕಲ್ಲು ಮತ್ತು ಗಟ್ಟಿಸುಣ್ಣದ ಗಾರೆಯಿಂದ ಗಟ್ಟಿ ಮಾಡಲಾಗಿದೆ. ನೀರಿನ ರಭಸವನ್ನು ತಡೆಯಲು ಇಂತಹ ವ್ಯವಸ್ಥೆ ಮಾಡಲಾಗಿದೆ ಎಂದು ಉತ್ಖನನಕಾರರು ಅಭಿಪ್ರಾಯಪಡುತ್ತಾರೆ. ಅಲ್ಲಿರುವ ಬೆಟ್ಟದಿಂದ ಉರುಳುವ ಕಲ್ಲು ಮತ್ತು ಮಣ್ಣಿನಿಂದ ಆಗಬಹುದಾದ ಸವಕಳಿಯನ್ನು ತಡೆಯಲು ಇದೇ ಕಾಲುವೆಯ ಉತ್ತರ ಬದಿಯನ್ನು ಸಹ ಒರಟುಕಲ್ಲುಗಳನ್ನು ಬಳಸಿ ಗೋಡೆಯನ್ನು ಕಟ್ಟಲಾಗಿದೆ.[8] ವಿಜಯನಗರ ಪಟ್ಟಣದಲ್ಲಿ ಜಲಸಾರಿಗೆ ವ್ಯವಸ್ಥೆ ಇದ್ದ ಬಗ್ಗೆ ಸಾಹಿತ್ಯ, ಶಾಸನ ಮತ್ತು ಶಿಲ್ಪಗಳು ತಿಳಿಸುತ್ತವೆ. ವಿಜಯನಗರ ಪಟ್ಟಣವು ತುಂಗಾಭದ್ರ ನದಿಯ ಬಲದಂಡೆಯ ಮೇಲಿದೆ. ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ದಿನಗಳಲ್ಲಿ ತುಂಗಭದ್ರಾ ಎಡದಂಡೆಯಲ್ಲಿರುವ ಆನೆಗೊಂದಿಯು ರಾಜಧಾನಿಯಾಗಿತ್ತು. ಕಾಲಕ್ರಮದಲ್ಲಿ ರಾಜಧಾನಿಯನ್ನು ಅಲ್ಲಿಂದ ವಿಜಯನಗರ ಅಥವಾ ವಿದ್ಯಾನಗರ ಅಥವಾ ವಿಜಯನಗರ ಪಟ್ಟಣಕ್ಕೆ (ಇಂದಿನ ಹಕಂಪೆಗೆ) ಸ್ಥಳಾಂತರಿಸಲಾಯಿತು. ಜನಸಾಮಾನ್ಯರು ನದಿಯನ್ನು ದಾಟಲು ಅಂದು ಪುಟ್ಟ ದೋಣಿಗಳು ಮತ್ತು ಹರಗೋಲುಗಳನ್ನು ಬಳಸುತ್ತಿದ್ದರು. ಇದು ಅತ್ಯಂತ ಅಲ್ಪವೆಚ್ಚ ಮತ್ತು ಸಮಯದಲ್ಲಿ ನದಿ ದಾಟಬಹುದಾದದ ವ್ಯವಸ್ಥೆಯಾಗಿದೆ. ಇದನ್ನು ಬಳಸದಿದ್ದರೆ, ಅವರು ಬಳಸು ಮಾರ್ಗಗಳನ್ನು ಅನುಸರಿಸಿ ತೆರಳಬೇಕಾಗುತ್ತಿತ್ತು. ವಿಠ್ಠಲ

ದೇವಾಲಯದ ಬಳಿ ಇಂದಿಗೂ ವಿಜಯನಗರ ಕಾಲದ ಸಂಪರ್ಕ ಸೇತುವೆಯ ಪಳೆಯುಳಿಕೆಗಳನ್ನು ಕಾಣಬಹುದು. ಆಂತರಿಕ ಸಂಪರ್ಕಕ್ಕಾಗಿ ಜನರು ನದಿಯನ್ನು ಅವಲಂಬಿಸುತ್ತಿದ್ದರು ಎಂಬುದು ಗಮನಾರ್ಹ. ಈ ವ್ಯವಸ್ಥೆಯು ಇಂದಿಗೂ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವುದು ಗಮನಿಸಬೇಕಾದ ಸಂಗತಿ.[9] ನದಿ ದಂಡೆಯ ಆಚೆಗಿರುವ ಊರುಗಳಾದ ಆನೆಗೊಂದಿ, ಹುಲಗಿ, ಗಂಗಾವತಿ ಮತ್ತು ಇತರೆ ಸ್ಥಳಗಳಿಗೆ ನದಿಯ ಮೂಲಕ ಸಾಗಿದರೆ ಸಮಯ ಹಾಗೂ ಹಣವನ್ನು ಉಳಿಸಬಹುದು.

ವಿದೇಶಿ ಪ್ರವಾಸಿಗರು ಅಂದಿನ ವಿಜಯನಗರಕ್ಕೆ ಭೇಟಿ ನಿಡಿ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. ವಿದೇಶಿ ಪ್ರವಾಸಿಗರು ಹರಗೋಲಿನ ಮೂಲಕ ತಳವಾರಘಟ್ಟದಿಂದ ಆನೆಗೊಂದಿಗೆ ತೆರಳುತ್ತಿದ್ದರು ಎಂಬ ವಿಷಯ ಒಂದು ಮೂಲದಲ್ಲಿ ದಾಖಲಾಗಿದೆ. ಇದರೊಂದಿಗೆ ನದಿ ದಂಡೆಯಲ್ಲಿದ್ದ ಸ್ಥಳಗಳಾದ ವಾಲಿಭಂಡಾರ, ಶಬರಿ ಆಶ್ರಮ ಹಾಗೂ ಕೇವಟ ಎಂದು ಕರೆಯಲಾದ ಗುಹೆ ಮುಂತಾದವುಗಳನ್ನು ಕುರಿತು ಉಲ್ಲೇಖಿಸಲಾಗಿದೆ.[10] ಡೋಮಿಂಗೊ ಪಯಾಸ್ಈ ರೀತಿಯಾಗಿ ತಿಳಿಸುತ್ತಾನೆ.[11] " ಈ ನಗರದಲ್ಲಿ ರಾಜನ ಪರವಾಗಿ ಒಬ್ಬ ದಳವಾಯಿ ಇರುತ್ತಾನೆ. ಜನರು ಈ ಊರಿಗೆ ಬುಟ್ಟಿಗಳಂತೆ ದುಂಡಾಗಿರುವ ದೋಣಿಗಳಲ್ಲಿ ದಾಟಿ ಬರುತ್ತಾರೆ. ಅವುಗಳನ್ನು ಒಳಗಡೆ ಬೆತ್ತದಿಂದ ಮಾಡಿ ಹೊರಮೈಗೆ ಚರ್ಮ ಹೊದಿಸಿರುತ್ತಾರೆ. ಅವುಗಳು ೧೫-೨೦ ಜನರನ್ನು ಒಯ್ಯಬಲ್ಲವು ಮತ್ತು ಅಗತ್ಯಬಿದ್ದರೆ ಕುದುರೆ ಮತ್ತು ಎತ್ತಗಳು ಅವುಗಳಲ್ಲಿ ದಾಟುತ್ತವೆ. ಆದರೆ, ಬಹುಮಟ್ಟಿಗೆ ಈ ಪ್ರಾಣಿಗಳು ಈಜಿ ದಾಟುತ್ತವೆ, ಜನರು ಅವುಗಳನ್ನು ಒಂದು ಮೋಟು ಹುಟ್ಟಿನಿಂದ ಹುಟ್ಟು ಹಾಕುತ್ತಾರೆ ಮತ್ತು ಅವು ಇತರ ದೋಣಿಗಳಂತೆ ನೇರವಾಗಿ ಹೋಗಲಾರವಾದುದರಿಂದ ಈ ದೋಣಿಗಳು ಯಾವಾಗಲೂ ದುಂಡಗೆ ತಿರುಗುತ್ತವೆ. ರಾಜ್ಯದಲ್ಲಿ ನದಿಗಳಿರುವೆಡೆಗಳೆಲ್ಲ ಇವುಗಳನ್ನು ಬಿಟ್ಟರೆ ಬೇರೆ ದೋಣಿಗಳಿಲ್ಲ." ಮತ್ತೊಬ್ಬ ವಿದೇಶಿ ಪ್ರವಾಸಿಗ ಬಾರ್ಬೋಸಾನು ವ್ಯಾಪಾರ ಮತ್ತು ವಾಣಿಜ್ಯವನ್ನು ಕುರಿತು ವಿವರಿಸುವಾಗ ದಬುಲ್‌ನಿಂದ ದಕ್ಷಿಣಕ್ಕೆ ಮುಂದೆ ಹೋದರೆ ಬೆಕಲ ನದಿಯ ಅಕ್ಕ ಪಕ್ಕದ ಸುಂದರ ತೋಟಗಳಿಂದ ವೀಳೆದೆಲೆ ಕೊಯ್ದು ಸಣ್ಣ ದೋಣಿಗಳ ಮೂಲಕ ನಾನಾ ಸ್ಥಳಗಳಿಗೆ ಸಾಗಿಸುತ್ತಿದ್ದರು ಎಂದು ದಾಖಲಿಸಿದ್ದಾನೆ. [12]

ನದಿಯಲ್ಲಿ ಪ್ರವಾಹ ಬಂದಾಗ ಮತ್ತು ನೀರು ಅತಿ ಕಡಿಮೆ ಇದ್ದಾಗ ಅಶ್ವದಳ ಮತ್ತು ಆನೆಗಳ ಮೂಲಕ ಸವಾರಿ ಮಾಡಿ ನದಿ ದಾಟುತ್ತಿದ್ದರು ಎಂದು ಫೆರಿಸ್ತಾ ತಿಳಿಸಿದ್ದಾನೆ. ವಿಜಯನಗರದ ಅರಸರ ಕಾಲದಲ್ಲಿ ಜರುಗುತ್ತಿದ್ದ ಯುದ್ಧಗಳಲ್ಲಿಯೂ ನದಿಯನ್ನು ದಾಟಲು ದೋಣಿ ಮತ್ತು ಹರಗೋಲುಗಳನ್ನು ಬಳಸುತ್ತಿದ್ದರು ಎಂದು ಪ್ರವಾಸಿ ಕಥಾನಕಗಳಲ್ಲಿ ದಾಖಲಾಗಿವೆ. ಅದರಂತೆ ಸುಲ್ತಾನನು ನದಿ ದಾಟಲು ಸುದೀರ್ಘವಾಗಿ ಆಲೋಚಿಸಿ ತನ್ನ ಅಧಿಕಾರಿಗಳ ಸಹಾಯದದಿಂದ ಅನುಕೂಲವಾದ ನೂರಾರು ಅಡ್ಡಪಟ್ಟಿಗಳನ್ನು ಸಿದ್ಧಗೊಳಿಸುತ್ತಾನೆ. ಇವುಗಳ ಚರ್ಮದಿಂದ ಆವೃತಗೊಂಡಿವೆಯೆಂದು ವಿವರಿಸಲಾಗಿದೆ. ಬುಟ್ಟಿಯಾಕಾರದ ಹರಗೋಲು ಅಂದು ಮತ್ತು ಇಂದು ಸಹ ಬಳಕೆಯಲ್ಲಿವೆ. ಈ ಹರಗೋಲುಗಳು ಬಿದಿರಿನ ಸೀಳಿನಿಂದ ಒಂದರೊಳಗೆ ಇನ್ನೊಂದು ಬರುವಂತೆ ಹೆಣೆದು ಹೊರಮೈಯನ್ನು ಚರ್ಮದಿಂದ ಪೂರ್ತಿಯಾಗಿ ಹೊದಿಸಲಾಗುತ್ತದೆ. ಬ್ರಿಟಿಷ್‌ಸೈನ್ಯದ ಒಂದು ಪಡೆ ೧೮೧೨ರಲ್ಲಿ ಈ ಹರಗೋಲುಗಳಲ್ಲಿ ಫಿರಂಗಿಗಳನ್ನು ವಾಹನಗಳಿಂದ ಇಳಿಸದೆ ತುಂಗಭದ್ರಾ ನದಿ ದಾಟಿಸಿತಂತೆ ಎಂದು ಕರ್ನಲ್‌ಬ್ರಿಗ್ಜ್‌ರವರು ದಾಖಲಿಸಿರುವುದನ್ನು ರಾಬರ್ಟ್‌ಸಿವಲ್‌ರವರು ಪ್ರಸ್ತಾಪಿಸಿರುತ್ತಾರೆ.[13] ವಿಜಯನಗರದ ದೇವರಾಯನ ಮೇಲೆ ದಾಳಿ ಮಾಡಿದ ಗುಲ್ಬರ್ಗದ ಫಿರೋಜಷಾ ಸುಲ್ತಾನನ ಸುಮಾರು ೪೦೦೦ ಸೈನಿಕರು ಅದಕ್ಕಾಗಿಯೇ ಸಿದ್ಧಪಡಿಸಲಾಗಿದ್ದ ದೋಣಿ ಮತ್ತು ತೆಪ್ಪಗಳಲ್ಲಿ ನದಿಯನ್ನು ದಾಟಿದ್ದರೆಂದು ಹಾಗೂ ಯುದ್ಧದ ಸಂದರ್ಭದಲ್ಲಿ ಬಳಸಲಾಗುತ್ತಿದ್ದ ದೋಣಿ, ತೆಪ್ಪ ಮತ್ತು ಅಂಬಿಗರ ಮಹತ್ವದ ಪಾತ್ರವನ್ನು ಕುರಿತು ವಿದೇಶಿ ಯಾತ್ರಿಕನು ವಿವರಿಸಿದ್ದಾನೆ.[14]

ಹಂಪಿ ಹೊಳೆಯ (ತುಂಗಭದ್ರಾ ನದಿ) ಉತ್ತರಕ್ಕೆ, ಆಚೆ ದಡದಲ್ಲಿ ಆನೆಗೊಂದಿಯ ಪ್ರವೇಶ ದ್ವಾರವಿದೆ. ಅಂಬಿಗರ ಎರಡು ವೀರಗಲ್ಲುಗಳು ಕೋಟೆಯ ಪ್ರವೇಶ ದ್ವಾರದಲ್ಲಿ ಪಶ್ಚಿಮಾಭಿಮುಖವಾಗಿದೆ. ಇದರಲ್ಲಿ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪಗಳನ್ನು ಬಿಡಲಾಗಿದೆ. ಇವುಗಳಲ್ಲಿ ಶಾಸನಗಳಿಲ್ಲ. ಶಿಲ್ಪದಲ್ಲಿ ತೋರಲಾಗಿರುವ ವ್ಯಕ್ತಿಗಳನ್ನು ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿ ನೀರಿನಲ್ಲಿ ಮಡಿದಿರಬಹುದಾದ ವೀರರು ಎಂದು ಶೇಷಶಾಸ್ತ್ರೀಯವರು

ಅಭಿಪ್ರಾಯಪಟ್ಟಿರುತ್ತಾರೆ.[15] ಇಂದಿಗೂ ಅಂಬಿಗರು ವಿಶೇಷ ಸಂದರ್ಭಗಳಲ್ಲಿ ಈ ವೀರಗಲ್ಲುಗಳನ್ನು ಆರಾಧಿಸುತ್ತಾರೆ ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ.[16]

ವಿಜಯನಗರದ ಅರಸರುಗಳು ಗಮನಾರ್ಹವಾದ ಕೆಲಸಗಳನ್ನು ಮಾಡಿ ಜಲಸಾರಿಗೆ ವ್ಯವಸ್ಥೆಯನ್ನು ರೂಪಿಸಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ರಾಜ್ಯದ ಇತರೆಡೆಗಳಲ್ಲಿಯೂ ಇಂತಹ ವ್ಯವಸ್ಥೆಯನ್ನು ಮಾಡಿದ್ದರು.[17] ಹಂಪೆಯ ಮತ್ತು ಅದರ ಸುತ್ತಲಿನ ಪರಿಸರದ ಕೆಲವು ಶಾಸನಗಳು ನೇರವಾಗಿ ಇಂತಹ ವ್ಯವಸ್ಥೆಯನ್ನು ಕುರಿತು ಉಲ್ಲೇಖಿಸುವುದು ಗಮನಾರ್ಹ. ಕ್ರಿ.ಶ. ೧೫೧೭ರ ಒಂದು ಶಾಸನವು ಶ್ರೀಕೃಷ್ಣದೇವರಾಯನು ತನ್ನ ಪಟ್ಟದ ಕಾಲದಲ್ಲಿ ವಿಠ್ಠಲೇಶ್ವರ ದೇವರ ಅಮೃತಪಡಿ ನೈವೇದ್ಯಕ್ಕೆ ಅಂಗರಂಗಭೋಗ ವೈಭವ, ಮಾಸ ಪೂಜೆ, ಮಾಸೋತ್ಸವ, ನಿತ್ಯನೈಮಿತ್ತಿಕ, ದೀಪಾರಾಧನೆ ಪಂಚಪರ್ವ ಮುಂತಾದ ಕಾಲಗಳಲ್ಲಿ ಮಾಡುವ ಮಹಾಪೂಜೆ, ನೈವೇದ್ಯಕ್ಕಾಗಿ, ಮಳಲಕೋಟೆಯ ಗೋರಿಯ ಕೆಳಗಣ ಸಿಂಘಾರಪುರ, ಹುಲಿಗೆಯ ಮಾಗಣೆಯ ಹರಿಯಲಾಪುರವನ್ನು ದಾನವಾಗಿ ನೀಡುತ್ತಾನೆ. ಮುಂದೆ ಬಾವ ಸಂವತ್ಸರದಲ್ಲಿ ತಿಪ್ಪರಾಜನ ತೋಟವನ್ನು, ಪ್ರಮಾದಿ ಸಂವತ್ಸರದಲ್ಲಿ ರಾಯದುರ್ಗದ ಸೀಮೆಯಲ್ಲಿನ ದೇವಸಮುದ್ರ, ಉರುತಹಾಳ, ಮುರುವಡಿ, ದಡಗೂರು, ಪೋಕುಕೆ, ಜಂಬಲಮಡಿಕೆ, ದಾಕವಾಡಿ ಮತ್ತು ಬಡಲಾಪುರವನ್ನು ಸಮರ್ಪಿಸಿದ. ಅದೇ ವರ್ಷ ಪುಶ್ಯ ಮಾಸದಲ್ಲಿ ಹೊವೂರ ಮಾಗಣೆಯ ವಿರುಪಾಪುರ, ಜೆಂತಗಲ ಮಾಗಣೆಯ ಮುಷ್ಟೂರು ಮತ್ತು ಕುಂಟಜಿಯನ್ನು ದಾನ ನೀಡಿದ. ವ್ಯಯ ಸಂವತ್ಸರದ ಶು. ಆಷಾಢ ೧೫ರಲ್ಲಿ ಹೊಳೆಯಲ್ಲಿ ಎಂಟು ಜಾಗಗಳಿಂದ ಹರಿಗೋಲುಗಳನ್ನು ಬಿಟ್ಟನೆಂದು ಶಾಸನವು ತಿಳಿಸುತ್ತದೆ. ಅವುಗಳ ವಿವರ ಇಂತಿದೆ. ವಿಠಲದ ಬಳಿ ಸಂಕಲಾಪುರ ಹೊಳೆ ಮತ್ತು ಕಾಳಗಟಿಯ ಹೊಳೆ, ಹುಲಿಗೆಯ ಹೊಳೆ, ಹೊಂನ್ನೂರ ಹೊಳೆ, ಹಂಪೆಯ ಹೊಳೆ ಮತ್ತು ಕೊರಗಲ ಹೊಳೆಗಳು ಪಶ್ಚಿಮದ ಹೊಳೆಗಳು. ಮುಷ್ಟೂರು ಮತ್ತು ಕಂಪಿಲೆಯ ಹೊಳೆಗಳು ಪೂರ್ವದ ಹೊಳೆಗಳು. ತುಂಗಭದ್ರಾ ಹೊಳೆಯಲ್ಲಿ ಉಲ್ಲೇಖಿತ ಸ್ಥಳಗಳಿಂದ ಹರಿಗೋಲುಗಳನ್ನು ಬಿಡುತ್ತಿದ್ದರು. ಇದರೊಂದಿಗೆ ಸುಂಕಗಳಾದ ಸುವರ್ಣಾದಾಯ, ಸಕಲ ಭತ್ತಾದಾಯ, ಸ್ಥಳ ಸುಂಕ, ತಳವಾರಿಕೆ, ಸಾಮ್ಯ, ಹಾರಿಕಾ, ಜೋಡಿಬಿರಾಡ ಮತ್ತು ಕಾಲುವೆಯ ನೀರ ಬಿರಾಡಗಳನ್ನು ದೇವಾಲಯಕ್ಕೆ ದಾನ ನೀಡುತ್ತಾನೆ. ಹೊಳೆಗಳಲ್ಲಿ ಆಯ್ದ ಪ್ರದೇಶಗಳಿಂದ ಮಾತ್ರವೇ ಹರಿಗೋಲುಗಳನ್ನು ಬಿಡುತ್ತಿದ್ದರು ಎಂದು ಹಾಗೂ ಅವುಗಳಿರುವ ಪ್ರದೇಶ ನಿರ್ದೇಶನಳಾದ ಪಡುವಣ ಮತ್ತು ಮೂಡಣ ಹೊಳೆಗಳೆಂದು ಶಾಸನದಲ್ಲಿ ಉಲ್ಲೇಖಿಸಿರುವುದು ಕುತೂಹಲಕಾರಿ ಸಂಗತಿಯಾಗಿದೆ.[18] ಈ ಜಾಗಗಳಿಂದ ಹರಿಗೋಲುಗಳನ್ನು ಬಿಡಲು ಅನುಮತಿಯನ್ನು ನೀಡಿ ಬಹುಶಃ ಹರಿಗೋಲು ನಡೆಸುವವರಿಂದ ಸುಂಕವನ್ನು ಸಂಗ್ರಹಿಸುತ್ತಿದ್ದರು ಎಂದು ಅಭಿಪ್ರಾಯಪಡಬಹುದು. ದೇವಾಲಯಕ್ಕೆ ದಾನ ನೀಡುವ ಸಂದರ್ಭದಲ್ಲಿ ಹರಿಗೋಲುಗಳನ್ನು ಬಿಡಲು ಅನುವು ಮಾಡಿಕೊಟ್ಟಿರುವುದು ರಾಜಧಾನಿಗೆ ಹಾಗೂ ಅಲ್ಲಿದ್ದ ದೇವಾಲಯಗಳ ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ದೃಢಪಡಿಸುವ ಸಲುವಾಗಿ ಎಂದು ಪ್ರಸ್ತುತ ಶಾಸನದಿಂದ ತಿಳಿಯಬಹುದು.

ಈ ಶಾಸನವು ಹರಿಗೋಲುಗಳನ್ನು ಬಿಡುತ್ತಿದ್ದ ಸ್ಥಳಗಳನ್ನು ತಿಳಿಸಿದರೆ, ಅವನ ಕಾಲಕ್ಕೆ ಸೇರಿದ ಮತ್ತೊಂದು ಶಾಸನವು ಹರಿಗೋಲುಗಳ ವೈವಿಧ್ಯತೆಯತ್ತ ಬೆಳಕು ಚೆಲ್ಲುತ್ತದೆ.[19] ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಬಾಲಕೃಷ್ಣ ದೇವರನ್ನು ಹಂಪೆಯಲ್ಲಿ ಪ್ರತಿಷ್ಠಾಪಿಸಿ ದೇವರ ನಿತ್ಯ ಪೂಜೆಗೆ, ಅಂಗರಂಗಭೋಗ, ಪಂಚಪರ್ವಗಳಿಗಾಗಿ ಅನೇಕ ದಾನ, ನವರತ್ನ ಖಚಿತ ಆಭರಣಗಳು, ಗ್ರಾಮ, ಭೂಮಿ, ಗದ್ದೆ, ಸುಂಕ, ಮೊದಲಾದವುಗಳನ್ನು ನೀಡುತ್ತಾನೆ. ಶಾಸನವು ಜೋಡಿ, ಬಿರಾಡ, ಸಾಮ್ಯ, ನಾಡ ತಳವಾರಿಕೆ, ಸುಂಕ ಕರಣಿಕರ ಮಾನ್ಯದ ಗದ್ದೆಗಳು, ಸುವರ್ಣಾದಾಯ, ಸಕಲ ಭತ್ತಾದಾಯ, ಹಲವು ಕುರ್ವಗಳ ಆದಾಯ ಎಂಬ ತೆರಿಗೆಗಳೊಂದಿಗೆ ಕಟಿಗೆ ಪಣಬಿನ ಹರುಗೋಲವರು, ಹರಿಗೋಲು ನಡೆಸಲು ತೆರಿಗೆಗಳನ್ನು ರಾಜ್ಯಕ್ಕೆ ನೀಡುತ್ತಿದ್ದರು ಎಂದು ತಿಳಿದುಬರುತ್ತದೆ. ಜೊತೆಗೆ ಕಟಿಗೆ ಪಣಬಿನ ಹರಗೋಲು ಎಂದು ತಿಳಿಸುವುದರಿಂದ ಹರಗೋಲುಗಳು, ಕನಿಷ್ಟ ಎರಡು ಪ್ರಕಾರಗಳಿದ್ದವು ಎಂದು ತರ್ಕಿಸಬಹುದು. ಮೊದಲನೆಯದಾಗಿ ಜನಸಾಮಾನ್ಯರು ಓಡಾಡಲು ಅನುಕೂಲವಾಗುವಂತಹದಾದರೆ ಮತ್ತೊಂದು, ಬಗೆಯದು ಸರಕು ಸಾಗಾಣೆ ಮಾಡಲು ಬಳಸುತ್ತಿದ್ದ ಹರಗೋಲುಗಳು. ಪ್ರಸ್ತುತ ಶಾಸನವು 'ಹೊಳೆಯಾಥೆ ಅನುಪು ಕಟಿಗೆ ಪಣಬಿನ ಹರುಗೋಲುವರು ಕೊಡುವ ತೆರಿಗೆ' ಎಂದು ಉಲ್ಲೇಖಿಸುತ್ತದೆ. ಹೊಳೆಯಾಥೆ ಅನುಪು ಎಂಬ ಪದದ ಅರ್ಥವು ಸ್ಪಷ್ಟವಾಗುವುದಿಲ್ಲ. ಕಟ್ಟಿಗೆಗಳ ಹೇರು ಪಣಬುಗಳನ್ನು ನಿಯಮಿತವಾಗಿ

ಸಾಗಾಣೆ ಮಾಡುತ್ತಿದ್ದರು ಎಂದು ಗ್ರಹಿಸಬಹುದು. ಈ ಶಾಸನವನ್ನು ಕ್ರಿ.ಶ.೧೫೧೭ರಿಂದ ಪ್ರಾರಂಭಿಸಿ ೧೫೧೯, ೧೫೨೨ ಮತ್ತು ೧೫೨೫ರವರೆಗೆ ಮುಂದುವರಿಸಲಾಗಿದೆ.

ಕ್ರಿ.ಶ. ೧೫೩೧ರ ಶಾಸನವು ಅಚ್ಯುತರಾಯನು ವಿಠಲ ದೇವರ ನಿತ್ಯಕಟ್ಟೆಳೆಗೆ ಗ್ರಾಮವೊಂದನ್ನು ಸಮರ್ಪಿಸಿದಂತೆ ತಿಳಿಸುತ್ತದೆ.[20] ಗ್ರಾಮದ ಹೆಸರು ತಿಳಿಸಿಲ್ಲ. ಇದರೊಂದಿಗೆ ಆನೆಗೊಂದಿಯ ಅಂಬಿಗ ಬೋಉಗಣ್ಣನು ವಿಠಲಾಹುತಿಗೆ, ಅಂದರೆ ವಿಠಲದೇವರ ನೈವೇದ್ಯಕ್ಕೆ, ಹೊಂನೂರು, ಕೊಳೆಗಟೆ, ಕಂಪಿಲಾಪುರಗಳ ಬಳಿಯ ಹರಿಗೋಲುಗಳ ಸಾಮ್ಯವನ್ನು ಆತನು ವಿಠಲ ದೇವರಿಗೆ ನೀಡುತ್ತಾನೆ. ಇದು ಅಂದಿನ ಕಾಲದ ಅಂಬಿಗರಿಗೆ ಇದ್ದ ಸ್ವಾತಂತ್ರ್ಯವನ್ನು ತಿಳಿಸುತ್ತದೆ. ದೇವರ ಸೇವೆಯಲ್ಲಿ ಅವರೂ ಸಹ ಪಾಲ್ಗೊಳ್ಳುತ್ತಿದ್ದರು ಎಂದು ತಿಳಿಯಬಹುದು.

ಸದಾಶಿವರಾಯನ ಕಾಲಕ್ಕೆ ಸೇರಿದ ಕ್ರಿ.ಶ.೧೫೫೮ರ ಒಂದು ಶಾಸನವು ಹರುಗೋಲುಗಳ ಗಾತ್ರದ ಬಗೆಗೆ ಪರಿಚಯಿಸುತ್ತದೆ.[21] ಈ ಶಾಸನವು ತಳವಾರಘಟ್ಟದ ಬಂಡೆಯ ಮೇಲಿದೆ. ಸದಾಶಿವರಾಯನ ಕಾಲದಲ್ಲಿ ಆನೆಗೊಂದಿ ಹೊಳೆಯ ೧೪ ಬೋವರು ೩೦೦ ಮಂದಿ ಅಂಬಿಗರು ಅಂಬಲಿಯ ಮಹಲಿಂಗವೊಡೆಯರಿಗೆ ತಾವು ಹೊಳೆಯಲ್ಲಿ ಬಿಡುವ ಚಿಕ್ಕ ಹರಗೋಲು, ದೊಡ್ಡ ಹರುಗೋಲುಗಳ ಮೇಲಿನ ಹಣವನ್ನು ನೀಡುವುದಾಗಿ ತಿಳಿಸುತ್ತದೆ. ಶಾಸನವು 'ಕವದರ ಹರಗೋಲುವೊಂದಕ್ಕೆ ಒಂದು ತಾರ, (ಹಣ) ದೊಡ್ಡ ರೊಕವದು, ಸು(ಂಕ) ಎರಡು ಕಾಸು, ಚಿಕ್ಕಹರಗೋಲುವೊಂದಕ್ಕೆ ಕಾಸು, ಒಂದು' ಎಂದು ಉಲ್ಲೇಖಿಸುತ್ತದೆ. ಹರಿಗೋಲಿನ ಗಾತ್ರವನ್ನು ಆಧರಿಸಿ ಅವುಗಳ ಮೇಲೆ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ದೊಡ್ಡ ಹರಿಗೋಲಿಗೆ ಒಂದು ತಾರವಾದರೆ ಚಿಕ್ಕದಕ್ಕೆ ಒಂದು ಕಾಸು ಎಂದು ತಿಳಿಯಬಹುದು. ತಾರೆಯ (ಹಣದ) ಅಂದಿನ ಸಮಕಾಲೀನ ಮೌಲ್ಯವನ್ನು ಅರಿಯುವುದು ಪ್ರಸ್ತುತ ಕಷ್ಟ. ಆನೆಗೊಂದಿಯ ಅಂಬಿಗರಿಗೆ ತಿಮರಾಜೆಯನ ಕಾಲದಲ್ಲಿ ರಾಮಾಪುರದಲ್ಲಿ ಒಂದು ಖಂಡುಗ ಗದ್ದೆಯನ್ನು ನೀಡಿದ್ದು ಅದನ್ನು ಶ್ರೀರಂಗರಾಜನು ಮುಂದುವರಿಸಿದಂತೆ ಇದೇ ಜಾಗದಲ್ಲಿರುವ ಮತ್ತೊಂದು ಶಾಸನವು ತಿಳಿಸುತ್ತದೆ.[22]

ಆನೆಗೊಂದಿ ಅಂಬಿಗರ ದೊಡ್ಡ ತಾಯಣ್ಣ ಬಳಿ ಸದಾಶಿವರಾಯನ ಕಾಲದ ಒಂದು ತಾಮ್ರಪಟ ಶಾಸನವಿದೆ. ಅದರಲ್ಲಿರುವ ತೇದಿಯು ಕ್ರಿ.ಶ.೧೪೭೮ (ಕ್ರಿ.ಶ.೧೫೫೬) ಎಂದಿದೆ.[23] ಆದರೆ ಭಾಷೆ ಮತ್ತು ಲಿಪಿಯ ಆಧಾರಗಳ ಮೇಲೆ ಅದನ್ನು ೧೭-೧೮ನೆಯ ಶತಮಾನದ್ದೆಂದು ಹೇಳಬಹುದು. ಆ ಶಾಸನದಂತೆ ಸದಾಶಿವರಾಯನು ತುಂಗಭದ್ರಾ ನದಿಯ ಆನೆಗೊಂದಿ ತಳವಾರ ಕಟ್ಟೆಯಲ್ಲಿ ೧೦ ಹರಗೋಲು ೧೦ ಅಂಬಿಗರು ನಿರಂತರವಾಗಿ ಸಹಕಾರದ ಸೇವೆಯಲ್ಲಿ ಕಾರ್ಯನಿರತರಾಗಿದ್ದು, ರಾಜನಿಗೆ ವಿಜ್ಞಾಪನೆ ಮಾಡಿಕೊಂಡರು. ಅದರಂತೆ ರಾಜನು ಇವರಿಗೆ ಆನೆಗೊಂದಿಯಲ್ಲಿ ೧೫ ಕೊಳಗ ನೀರು ಭೂಮಿ, ತಳವಾರ ಕೋಟೆಯಲ್ಲಿ ೧೫ ಕೊಳಗ ಒಟ್ಟು ೩೦ ಕೊಳಗ ನೀರು ಭೂಮಿ, ತಳವಾರ ಕೋಟೆಯಲ್ಲಿ ೧೫ ಕೊಳಗ ಒಟ್ಟು ೩೦ ಕೊಳಗ ನೀರು ಭೂಮಿಯನ್ನು ನಾಗಜೋಗಿ ಮತ್ತು ಬಸವಜೋಗಿಗೆ ನೀಡಿ ಅದರ ಆದಾಯವನ್ನು ಅವರು ಅನುಭವಿಸುತ್ತಾ ಬ್ರಾಹ್ಮಣ, ಸಾಧುಸಂತರ ಸೇವೆ ಮಾಡಿಕೊಂಡಿರಬೇಕೆಂದು ಷರತ್ತು ವಿಧಿಸುತ್ತಾನೆ. ಅಂಬಿಗರಿಗೆ ಕಟೆಮಣೆ ಅಧಿಕಾರವಿದ್ದರೂ ಕುಲಾಚಾರದ ನ್ಯಾಯ ಬಹಷಕಾರ ಸುದ್ಧಪತ್ರ ಕೊಡಲಿಕ್ಕೆ ಅಧಿಕಾರ ಇದೆ ಎಂದು ಶಾಸನ ತಿಳಿಸುತ್ತದೆ. ಇವುಗಳ ಆಧಾರದ ಮೇಲೆ ಈ ಶಾಸನವು ಇತ್ತೀಚಿನದು, ಅಂದರೆ ೧೭-೧೮ನೆಯ ಶತಮಾನದ್ದೆಂದು ಹೇಳಬಹುದು. ಈ ಭಾಗದಲ್ಲಿ ಸುಮಾರು ೧೦ ಹರಿಗೋಲುಗಳು ಅಥವಾ ಅವುಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಹರಗೋಲುಗಳು ಜಲಸಾರಿಗೆಯಲ್ಲಿ ತೊಡಗಿದ್ದವು ಎಂದು ತರ್ಕಿಸಬಹುದು.

ಇನ್ನೊಂದು ಹಿತ್ತಾಳೆ ಶಾಸನವು ಅದೇ ದೊಡ್ಡ ತಾಯಣ್ಣನ ವಶದಲ್ಲಿದ್ದು, ಅದು ಆನೆಗೊಂದಿ ಸಂಸ್ಥಾನದವರ ಕಾಲಕ್ಕೆ ಸೇರಿದ್ದಾಗಿದೆ.[24] ಶಕ ೧೬೫೦ರ (ಕ್ರಿ.ಶ.೧೭೨೧) ಶಾಸನವು ತೆಲುಗು ಲಿಪಿ ಮತ್ತು ಭಾಷೆಯಲ್ಲಿದೆ. ಆನೆಗೊಂದಿ ಸಂಸ್ಥಾನದವರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ನೀಡಿದ ಸನ್ನದು. ಇವರು ಸಂಸ್ಥಾನದ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸುತ್ತಿರುವುದರಿಂದ ಅವುಗಳಲ್ಲಿ ಎರಡು ಹುಟ್ಟುಗಳನ್ನು ಇನಾಂ ಆಗಿ ನೀಡಿರುತ್ತಾರೆ. ಇದರೊಂದಿಗೆ ಅವರಿಗೆ ತುಂಗಭದ್ರಾ ನದಿಯಲ್ಲಿ ಐದು ಹುಟ್ಟುಗಳಾಗುತ್ತವೆ. ಹಾಗೆಯೇ ಇವರು

ಕಟೆ ಮನೆಯರಾಗಿದ್ದು ಅವರ ಜಾತಿಯ ರೀತಿ ರಿವಾಜುಗಳನ್ನು ನಿಯಂತ್ರಿಸುವವರೂ ಆಗಿರುತ್ತಾರೆಂದು ಶಾಸನವು ತಿಳಿಸುತ್ತದೆ. ಈ ಶಾಸನವು ಮೇಲೆ ಉಲ್ಲೇಖಿಸಿದ ಶಾಸನದಂತೆಯೇ ಇರುವುದು ಗಮನಾರ್ಹ.

ಅಂಬಿಗರು ರಾಜ್ಯದ ಆಡಳಿತಕ್ಕೆ ಸೇರಿದ್ದು ಅವರ ಸೇವೆಗೆ ಸೂಕ್ತವಾಗಿ ದಾನ ಅಥವಾ ಆದಾಯವನ್ನು ಪಡೆಯುತ್ತಿದ್ದರು ಎಂದು ತಿಳಿದುಬರುತ್ತದೆ. ಇದರೊಂದಿಗೆ ಅವರದೇ ಆದ ಕೆಲವು ಸಂಪ್ರದಾಯಗಳು, ರೀತಿ ರಿವಾಜುಗಳು ಸಹ ಪ್ರಚಲಿತದಲ್ಲಿದ್ದವು ಎಂಬ ಅಂಶವು ಸ್ಪಷ್ಟವಾಗುತ್ತದೆ. ಇದರೊಂದಿಗೆ ಈ ಕಾಯಕವು ವಂಶಪಾರಂಪರ್ಯವಾಗಿ ಸಾಗಿಬರುತ್ತಿದ್ದವು ಎನ್ನುವುದರಲ್ಲಿ ಅನುಮಾನಗಳಿಲ್ಲ.

**ಕೃತಜ್ಞತೆ:** ಮಾಹಿತಿ ಒದಗಿಸಿದ ಡಾ.ಟಿ.ಎಂ.ಮಂಜುನಾಥಯ್ಯ, ಡಾ.ಕಲವೀರ ಮನ್ವಾಚಾರ್ ಮತ್ತು ಛಾಯಾಚಿತ್ರ ಒದಗಿಸಿದ ಶ್ರೀ ಗಣೇಶ್‌ಯಾಜಿ ಅವರಿಗೆ ಕೃತಜ್ಞತೆಗಳು.

**ಆಕರ**

ವಿಜಯನಗರ ಅಧ್ಯಯನ, ಸಂ.೯, ೨೦೦೪, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು.೨೯೧-೩೦೨

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಎನ್‌ಸೈಕ್ಲೋಪಿಡಿಯಾ ಆಫ್‌ಇಂಡಿಯನ್‌ಆರ್ಕಿಯಾಲಜಿ (ಇನ್ನು ಮುಂದೆ ಇ.ಐ.ಎ.ಸಂ.೧, ಪು.೮೧.)

[2] ಸುಂದರ ಅ. "ವಡಗಾಂವ್‌ಮಾಧವಪುರದಲ್ಲಿಯ ೨೦೦೦ ವರ್ಷ ಹಿಂದಿನ ವ್ಯಾಪಾರ ಕೇಂದ್ರದ ಮಹಾನಗರ" ವೇಣುನಾದ, ವಿಶೇಷ ಸಂಪುಟ, ಅಖಿಲ ಭಾರತ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ, ಫೆಬ್ರವರಿ, ೧೯೮೦. ಪು.೩-೫, ವಾಸುದೇವನ್‌ಸಿ.ಎಸ್., ಪುರಾತತ್ವ ಸಂಪುಟ, ಸಂಪುಟ ೩, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಯೋಜನೆ, ೨೦೦೦, ಅಪ್ರಕಟಿತ)

[3] ನಾಗರಾಜರಾವ್‌ಎಂ.ಎಸ್. ವಿಜಯನಗರ ಪ್ರೋಗ್ರೆಸ್‌ಆಫ್ ರಿಸರ್ಚ್, ೧೯೮೩ ವಿದೇಶಿ ಪ್ರವಾಸಿಗರು ವಿಜಯನಗರ ಪಟ್ಟಣವನ್ನು ವಿವರಿಸುವಾಗ ಅವರ ಬಹುಪಾಲು ವರ್ಣನೆಗಳಲ್ಲಿ ಇಲ್ಲಿಯ ಬೀದಿಗಳ ವಿನ್ಯಾಸ ಮತ್ತು ವೈಭವಗಳನ್ನು ಪದೇ ಪದೇ ತಮ್ಮ ಪ್ರವಾಸಿ ಕಥಾನಕಗಳಲ್ಲಿ ವಿವರಿಸಿದ್ದಾರೆ. ಅವರು ರಾಜಧಾನಿಯ ಪೇಟೆ, ಅರಮನೆ ಮತ್ತು ಬೀದಿಗಳಲ್ಲಿ ಜರುಗುತ್ತಿದ್ದ ದೈನಂದಿನ ಜೀವನಶೈಲಿಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ನೋಡಿ ಸದಾನಂದ ಕನವಳ್ಳಿ (ಅನುವಾದ,) ರಾಬರ್ಟ್‌ಸೀವೆಲ್(ಮೂಲ) ಮರೆತು ಹೋದ ಮಹಾಸಾಮ್ರಾಜ್ಞ, ಪು.೬೫ ಮತ್ತು ಬಾಲಸುಬ್ರಹ್ಮಣ್ಯ (ಅನುವಾದ,) ಬಿ.ಸೂರ್ಯನಾರಾಯಣರಾವ್ (ಮೂಲ,) ಮರೆಯಲಾಗದ ಮಹಾಸಾಮ್ರಾಜ್ಯ, ಪು.೨೧

[4] ಮಹದೇವಯ್ಯ ಎಂ.ಪಿ. "ಪ್ರಾಚೀನ ಕರ್ನಾಟಕದಲ್ಲಿ ನೌಕಯುದ್ಧಗಳು", ಇತಿಹಾಸ ದರ್ಶನ, ಸಂ.೧೧, ಪು.೧೫೮-೧೬೧. ವ್ಯಾಪಾರ, ನೌಕಾ ಪಡೆಗಳಿಗೆ ಮತ್ತು ಸಾಗರೋತ್ತರ ಚಟುವಟಿಕೆಗಳಿಗೆ ನೌಕೆಗಳನ್ನು ಬಳಸಲಾಗುತ್ತಿತ್ತು.

[5] ಇ ಐ ಎ, ಸಂ.೧, ಪು.೮೨ ಮತ್ತು ಸಂ.೨, ಪು.೨೯೭

[6] ಅದೇ, ಸಂ.೧, ಪು.೨೯೬ ಮತ್ತು ಸಂ.೨, ಪು.೧೭೨-೧೭೫

[7] ಇ ಐ ಎ, ಸಂ.೧, ಪು.೨೬೯-೨೯೭

[8] ಅದೇ

[9] ವಿರೂಪಾಕ್ಷಿ ಪೂಜಾರಹಳ್ಳಿ, 'ವಿಜಯನಗರ ಕಾಲದ ಮೀನಗಾರಿಕೆ ಮತ್ತು ಅಂಬಿಗತನ', ವಿಜಯನಗರ ಅಧ್ಯಯನ, ಸಂ.೬, ಪು.೭೪-೮೩, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಆನೆಗೊಂದಿ ತಳವಾರಘಟ್ಟ ಸೇತುವೆ ಪೂರ್ಣಗೊಂಡರೆ, ವಂಶಪಾರಂಪರ್ಯವಾಗಿ ನಡೆಸುವ ಅಂಬಿಗರ ಜೀವನಕ್ಕೆ ತೊಂದರೆಯಾಗುವ ಸಾಧ್ಯತೆಗಳತ್ತ ಲೇಖಕರು ಗಮನ ಸೆಳೆದಿದ್ದಾರೆ. ಹರಗೋಲು ಮತ್ತು ಹರಿಗೋಲು ಎರಡೂ ಪದಗಳು (ಹರು>ಹರಿ) ಬಳಕೆಯಲ್ಲಿವೆ.

[10] ಸದಾನಂದ ಕನವಳ್ಳಿ (ಅನು.) ಪೂರ್ವೋಕ್ತ, ಪು.೨೭೭

[11] ಅದೇ

[12] ಸೋಮಶೇಖರ ಎಸ್.ವೈ. ಹಂಪೆಯ ಬಜಾರುಗಳು, ಪು.೧೩

[13] ಸದಾನಂದ ಕನವಳ್ಳಿ (ಅನು.) ಪೂರ್ವೋಕ್ತ, ಪು.೫೯, ಟಿಪ್ಪಣಿ ೧೨

[14] ಅದೇ, ಪು.೫೭

[15] ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಪು.೧೨೭

[16] ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು.೮೨. ಲೇಖಕರು ಇಂದಿನ ಹಂಪಿ ಪರಿಸರದ ಅಂಬಿಗರ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಸಾಂದರ್ಭಿಕವಾಗಿ ಹರಗೋಲುಗಳನ್ನು ಬಿಡಲಾಗುವ ಇಂದಿನ ಕೆಲವು ಸ್ಥಳಗಳನ್ನು ಗುರುತಿಸಿದ್ದಾರೆ. ಇಂದಿನ ಪುರಂದರ ಮಂಟಪ ಮತ್ತು ಚಕ್ರತೀರ್ಥದ ಕಡೆಯಿಂದ ನದಿಯಲ್ಲಿ ಇಳಿಮುಖವಾಗಿ, ಅಂದರೆ ನೀರು ಹರಿಯುವ ದಿಕ್ಕಿನಲ್ಲಿ ಸಾಗಿ, ಆನೆಗೊಂದಿ ತಲುಪಲು ಸುಲಭ ಸಾಧ್ಯವಿದೆ. ಇವುಗಳಲ್ಲಿ ನದಿಯ ಎರಡೂ ಕಡೆಗಳಿಂದ ಹಲವಾರು ಸ್ಥಳಗಳಲ್ಲಿ ಹರಗೋಲುಗಳನ್ನು ಬಿಡಲಾಗುತ್ತದೆ. ಆದರೆ ಕೆಲವು ಕಡೆ ಮಾತ್ರ ನದಿಯಲ್ಲಿ ಬಂಡೆಗಳಿಲ್ಲದೆ ಹರಗೋಲು ಹಾಯಲು ಸ್ಥಳಗಳು ಸೂಕ್ತವಾಗಿವೆ ಮತ್ತು ನದಿ ದಂಡೆಯಲ್ಲಿ ಹರಗೋಲು ಹಾಯಲು ಸ್ಥಳಗಳು ಸೂಕ್ತವಾಗಿವೆ. ಮತ್ತು ನದಿ ದಂಡೆಯಲ್ಲಿ ಹರಗೋಲು ಹತ್ತಲು ಹಾಗೂ ಇಳಿಯಲು ಕೆಲವು ಆಯ್ದ ಜಾಗಗಳೇ ಪ್ರಶಸ್ತವಾಗಿದೆ. ನೋಡಿ ವಸುಂಧರಾ ಫಿಲಿಯೋಜಾ, ಅಳಿದುಳಿದ ಹಂಪೆ, ಪು.೯೩

[17] ವಸಂತಮಾಧವ ಕೆ.ಜಿ. "ವಿಜಯನಗರ ಅರಸರ ಸಾಗರೋತ್ತರ ವ್ಯಾಪಾರ ಒಂದು ಅಧ್ಯಯನ," ವಿಜಯನಗರ ಅಧ್ಯಯನ, ಎಂ.ವಿ.ಕೃಷ್ಣಪ್ಪ ಮತ್ತು ಹೆಚ್.ಡಿ.ತಳವಾರ (ಸಂ) ಸಂ.೬, ಪು.೧೦೪-೧೦೮

[18] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಸಂ.೨೦೮ (ಇನ್ನು ಮುಂದೆ ಕವಿಶಾ) ಮತ್ತು ಸೌಥ್ಇಂಡಿಯನ್ಇನ್ಸ್‌ಕ್ರಿಪ್ಶನ್(ಇನ್ನು ಮುಂದೆ ಎಸ್.ಐ.ಐ.), ಸಂ., ಸಂ.೨೭೭

[19] ಕವಿಶಾ, ಸಂ.೩, ಸಂ.೭೪, ಮತ್ತು ಎಸ್.ಐ.ಐ, ಸಂ.IV, ಸಂ.೨೫೫; ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.೧೩

[20] ಕವಿಶಾ, ಸಂ.೩, ಸಂ.೧೯೨, ಎಸ್.ಐ.ಐ.ಸಂ.IX, ಭಾಗ ii, ಸಂ.೫೩೪ ಮತ್ತು ಸಂ. Xviii, ಸಂ.೩

[21] ಕವಿಶಾ, ಸಂ.೨, ಗಂಗಾವತಿ ಸಂ.೩೭, ಕ್ವಾಟರ್ನರಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ.೭; ಅನ್ಯುಯಲ್ ರಿಪೋರ್ಟ್‌ನ್ಯೂ ಆನ್‌ಎಫಿಗ್ರಾಫಿ, ೧೯೫೮-೫೯, ಸಂ.೬೮೩

[22] ಕವಿಶಾ, ಸಂ.೨, ಗಂಗಾವತಿ ಸಂ.೩೮

[23] ಕವಿಶಾ, ಸಂ.೨, ಗಂಗಾವತಿ ಸಂ.೨೬

[24] ಕವಿಶಾ, ಸಂ.೨, ಸಂ.೨೭

## ೩೭. ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ

ದಕ್ಷಿಣ ಭಾರತದಾದ್ಯಂತ ವ್ಯಾಪಿಸಿದ್ದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ವಿಜಯನಗರ ಪಟ್ಟಣವು ಸುಮಾರು ೨೫ ಚ.ಕಿ.ಮೀ.ಗಳಷ್ಟು ದೊಡ್ಡದಾಗಿತ್ತು. ಪಟ್ಟಣದ ಸುತ್ತ ಅನೇಕ ಜನನಿಬಿಡ ಉಪನಗರ ಪ್ರದೇಶಗಳೂ ಇದ್ದವು. ರಾಜಧಾನಿ ಮತ್ತು ಸುತ್ತಲಿನ ಉಪನಗರ ಪ್ರದೇಶಗಳಿಗೆ ಉತ್ತಮವಾದ ನೀರಿನ ಸೌಕರ್ಯವಿದ್ದುದು ಇತಿಹಾಸಕಾರರಿಗೆ ತಿಳಿದಿರುವ ವಿಷಯವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಗಳ ಕಡೆಗೆ ಗಮನ ಹರಿಸುವುದೇ ಈ ಪ್ರಬಂಧದ ಉದ್ದೇಶ. ಜನರ ದೈನಂದಿನ ಉಪಯೋಗಕ್ಕೆ, ಹೊಲ, ಗದ್ದೆ, ತೋಟಗಳಿಗೆ ಮತ್ತು ಪ್ರವಾಸಿಗಳಿಗೆ ಒದಗಿಸಿದ್ದ ನೀರಿನ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಆಣೆಕಟ್ಟು, ಕಾಲುವೆ, ಕೆರೆ, ಬಾವಿ ಅರವಟ್ಟಿಗೆ ಮುಂತಾದವುಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿತ್ತೆಂಬುದು ಹಂಪೆಯ ಕಡಲೆಕಾಳು ಕಣೇಶನ ಗುಡಿಯ ಮುಂದಿರುವ ಅಗುಸೆಯಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ವಿಜಯನಗರದ ಪ್ರೌಢ ಪ್ರತಾಪ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನ ಶಾಸನವೆಂದು ಪ್ರಸಿದ್ಧವಾಗಿರುವ ಈ ಶಾಸನದ ಕಾಲ ಕ್ರಿ.ಶ.೧೪೧೧. ದೇವರಾಯನ (ಕ್ರಿ.ಶ.೧೪೦೬-೨೨) ಮಂತ್ರಿಗಳಾದ ಮಾದರಸ ಮತ್ತು ಸಾಯಣರ ಬಗ್ಗೆ ಶಾಸನವು ಕೆಳಗಿನಂತೆ ಉಲ್ಲೇಖಿಸುತ್ತದೆ.[1]

"ತೋಡದ ಬಾವಿಯಲ್ಲಿ ಮರೆಕಟದ್ದ ಪೆರ್ಗ್ಗೆರೆಯಿಲ್ಲ ಲೀಲೆಯಿಂ ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ ಲ್ಲಾಡಲದೇನೊ ಭೂಭುವನಭುಂಭುಕಮಾದುದು ಕೀರ್ತಿಬಾಪು ನಾ ಪಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ ||"

ಇದೇ ಶಾಸನದಲ್ಲಿ ಲಕ್ಷ್ಮೀಧರ ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾ ಕಿವಿಯಲ್ಲಿ ಹೇಳಿದ ಒಂದು ಪದ್ಯ ಹೀಗಿದೆ

"ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ವಿತ್ರರ್ಗ್ಗಿಂಬುಕೆಯಿ ನಂಬಿದರ್ಗ್ಗೆರೆವೆಟ್ಟಾಗಿರುವ ಶಿಷ್ಟರಂ ಪೊರೆಯೆನ್ನುತ್ತಿಂತೆಲ್ಲವಂ

ಪಿಂದೆ ತಾಯೆರದಳ್ಪಲೆರವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ |”

**ಆಣೆಕಟ್ಟು**

ವಿಜಯನಗರ ಪಟ್ಟಣದ ಪಕ್ಕದಲ್ಲಿಯೇ ಹರಿಯುತ್ತಿರುವ ತುಂಗಭದ್ರಾ ನದಿಗೆ ವಿಜಯನಗರ ಕಾಲದಲ್ಲಿ ಕಟ್ಟಿದ ಅನೇಕ ಆಣೆಕಟ್ಟುಗಳು ಈಗಲೂ ಉಪಯೋಗದಲ್ಲಿವೆ. ಇವುಗಳಲ್ಲಿ ಈಗ ವಿಜಯನಗರ ತುರ್ತಾ ಕಾಲುವೆ ಆಣೆಕಟ್ಟು ನಂ.೧ ಎಂದು ಕರೆಯಲಾಗುವ ಆಣೆಕಟ್ಟನ್ನು ಚೆಂತಾಯಕ ದೇವಣ್ಣನು ಕಟ್ಟಿಸಿದನೆಂದೂ ಮತ್ತು ಕಟ್ಟಿದವನು ಬೊಮ್ಮೋಜನೆಂದೂ ಅಲ್ಲಿಯ ಶಾಸನದಿಂದ ತಿಳಿಯುತ್ತದೆ.[2] ಈ ಆಣೆಕಟ್ಟು ಹಂಪೆಯಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿದ್ದು, ಈಗಲೂ ಸುಸ್ಥಿತಿಯಲ್ಲಿದೆ.

**ಕಾಲುವೆಗಳು**

ವಿಜಯನಗರ ತುರ್ತಾ ಕಾಲುವೆ ಆಣೆಕಟ್ಟಿನಿಂದ ಪ್ರಾರಂಭವಾಗುವ ಕಾಲುವೆ ಆಣೆಕಟ್ಟಿನಿಂದ ೬.೨ ಕಿ.ಮೀ. ದೂರದಲ್ಲಿ ಮತಂಗ ಪರ್ವತದ ಪೂರ್ವಕ್ಕೆ ಒಂದು ಕಲ್ಲು ಗುಂಡನ್ನು ಸೀಳಿಕೊಂಡು ಮುಂದೆ ಸಾಗುತ್ತದೆ. ಗುಂಡನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದ್ದು ಪಕ್ಕದಲ್ಲಿಯ ಮತ್ತೊಂದು ಗುಂಡಿನ ಮೇಲಿರುವ ಶಾಸನದಿಂದ ತಿಳಿಯುತ್ತದೆ. ವಿಜಯನಗರ ಅರಸ ವಿರೂಪಾಕ್ಷರಾಯರ (ಕ್ರಿ.ಶ.೧೪೦೪-೦೬) ಆದೇಶದ ಮೇರೆಗೆ ಹೆಗಡೆ ಹಿತ್ತಲಬಾಗಿಲ ಬಸವಣ್ಣ ಅಣ್ಣ ಗುಂಡನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ.[3] ಕಾಲುವೆಯನ್ನು ಗುಡ್ಡದ ಬದಿಯಲ್ಲಿ ನಿರ್ಧಾರಿತ ಮಟ್ಟದಲ್ಲಿಯೇ ಹರಿಸಬೇಕಾದುದರಿಂದ ಕಾಲುವೆಗೆ ಅಡ್ಡ ಬಂದ ಗುಂಡನ್ನು ಒಡೆಸಿ ಕಾಲುವೆಯನ್ನು ನಿರ್ಮಿಸಲಾಗಿದೆ. ಕಲ್ಲನ್ನು U ಆಕಾರದಲ್ಲಿ ಒಡೆದಿರುವುದರಿಂದ ಉಳಿದ ಭಾಗವನ್ನು ಕಾಲುವೆಯ ಎರಡೂ ಬದಿಗಳಲ್ಲೂ ಮತ್ತು ತಳಭಾಗದಲ್ಲಿಯೂ ನೋಡಬಹುದು.

ಈಗಿನ ತುರ್ತಾ ಕಾಲುವೆಯ ಮೂಲ ಹೆಸರು ಹಿರಿಯ ಕಾಲುವೆ ಆಗಿತ್ತೆಂಬುದು ಶಾಸನಗಳಿಂದ ತಿಳಿಯುತ್ತದೆ. ಕಡ್ಡಿರಾಂಪುರ-ಹಂಪೆ ರಸ್ತೆಯ ಪೂರ್ವಕ್ಕೆ ತುರ್ತಾ ಕಾಲುವೆಗೆ ಸೇತುವೆಯನ್ನು ನಿರ್ಮಿಸಿ ಅದರ ಮೇಲೆ ದೇವಾಲಯವನ್ನು ಕಟ್ಟಲಾಗಿದೆ. ಈ ಕಾಲುವೆ ಮತ್ತು ದೇವಾಲಯದ ಬಗ್ಗೆ ಉಲ್ಲೇಖಿಸುವ ಶಾಸನವು ಪಕ್ಕದಲ್ಲಿಯೇ ಇದೆ. ವಿಜಯನಗರದ ಅರಸ ಕೃಷ್ಣದೇವರಾಯನ ಕ್ರಿ.ಶ.೧೫೨೪ರ ಈ ಶಾಸನದ ಪಾಠ ಹೀಗಿದೆ

“.... ತೆರಕಣಂಬಿಯ ವಿರೂಪಾಕ್ಷ ಭಟರ ಮಕ್ಕಳು ಗೋಪಿನಾಥ ದೀಕ್ಷಿತರು ಹಿರಿಯ ಕಾಲುವೆಯಲ್ಲಿ ಪ್ರತಿಷ್ಠೆಯ ಮಾಡಿದ ರಘುನಾಥಗೆ ಪಂಪಾ ವಿರೂಪಾಕ್ಷ ದೇವರು ಮಾಡಿದ ಅಮೃತಪಡಿ ಕಟ್ಟಳೆ ದಿನ ೧ಕ್ಕೆ...”

ಅದೇ ಕಲ್ಲಿನ ಮತ್ತೊಂದು ಬದಿಗೆ ಇರುವ ಶಾಸನವು ಈ ದೇವರನ್ನು ಹಿರಿಯ ಕಾಲುವೆಯ ರಘುನಾಥ ಎಂದು ಸಂಬೋಧಿಸುತ್ತದೆ.[4] ಇಲ್ಲಿಂದ ಕಾಲುವೆಯ ಪೂರ್ವಾಭಿಮುಖವಾಗಿ ಹರಿದು ಉದ್ದಾನ ವೀರಭದ್ರ ದೇವಾಲಯದ ಹತ್ತಿರ ಸಾಗುತ್ತದೆ. ಉದ್ದಾನ ವೀರಭದ್ರ ದೇವಾಲಯದಲ್ಲಿರುವ ಸದಾಶಿವರಾಯನ ಕಾಲದ ಕ್ರಿ.ಶ.೧೫೪೫ರ ಶಾಸನವು ಕೃಷ್ಣಾಪುರದ ಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿಯಲೂ ಕಟೆಸ್ತಂಥಾ ಮುದುವೀರಂಣನ ಪ್ರತಿಷ್ಠೆಯನೂ ಮಾಡಿ... ಒಂದು ಉಲ್ಲೇಖಿಸುತ್ತದೆ.[5] ಇದೇ ಸ್ಥಳದಲ್ಲಿರುವ ಚಂಡಿಕೇಶ್ವರ ದೇವಾಲಯದಲ್ಲಿರುವ ಇದೇ ಕಾಲದ ಶಾಸನವು ಕೃಷ್ಣಾಪುರದ ಪೇಟೆಯ ಹಿರಿಯಕಾಲುವೆಯ ಛತ್ರದ ಬಳಿಯಲು ಕಟೆಸ್ತಂಥಾ ತಿರು .... ಎಂದು ಉಲ್ಲೇಖಿಸುತ್ತದೆ.[6] ಉದ್ದಾನ ವೀರಭದ್ರ (ಮೂಲ ಹೆಸರು ಮುದುವೀರಂಣ) ಮತ್ತು ಚಂಡಿಕೇಶ್ವರ (ಮೂಲ ಹೆಸರು

ತಿರುವೆಂಗಳನಾಥ) ದೇವಾಲಯಗಳ ಪಕ್ಕದಲ್ಲಿ ಸುಮಾರು ಆರು ನೂರು ಕಂಬಗಳಿರುವ ದೊಡ್ಡ ಮಂಟಪವಿದೆ. ಇದೇ ಹಿರಿಯ ಕಾಲುವೆಯ ಛತ್ರ. ಹತ್ತಿರದಲ್ಲಿಯೇ ಹರಿಯುವ ತುರ್ತಾ ಕಾಲುವೆಯೇ ಹಿರಿಯ ಕಾಲುವೆ.

ಕ್ರಿ.ಶ.೧೫೫೯ರಲ್ಲಿ ವಿಠಲ ದೇವಾಲಯಕ್ಕೆ ದಾನವಾಗಿ ಕೊಟ್ಟ ತೋಟದ ಚತುಸ್ಸೀಮೆಯ ವಿವರ ನೀಡುವಾಗ ಪೂರ್ವಕ್ಕೆ ಬೊಮ್ಮದೇವರ ಗುಡಿ ಮುಂದಣ ಕಾಲುವೆ, ದಕ್ಷಿಣಕ್ಕೆ ಅಗಸರ ಕಾಲುವೆ ಮತ್ತು ಉತ್ತರಕ್ಕೆ ಅನಂತನ ಕಾಲುವೆ ಇದ್ದುದನ್ನು ಶಾಸನವು ತಿಳಿಸುತ್ತದೆ.[7] ಈ ಕಾಲುವೆಗಳನ್ನು ಈಗ ಗುರುತಿಸಲು ಆಗುವುದಿಲ್ಲ.

ಕಮಲಾಪುರಂದಿಂದ ಹಂಪೆಗೆ ಹೋಗುವ ದಾರಿಯಲ್ಲಿ ಮಹಾನವಮಿ ದಿಬ್ಬವಿರುವ ಆವರಣದ ಬಳಿ ರಸ್ತೆಯ ಎಡಕ್ಕೆ ಭೋಜನಶಾಲೆಯೆಂದು ಕರೆಯುವ ಸ್ಥಳವಿದೆ. ಇಲ್ಲಿ ಒಂದು ಚಿಕ್ಕ ಕಾಲುವೆಯ ದಂಡೆಯ ಮೇಲೆ ಹಸಿರು ಬಣ್ಣದ ಕಲ್ಲು ಚಪ್ಪಡಿಗಳನ್ನು ಜೋಡಿಸಿದೆ. ಚಪ್ಪಡಿಗಳ ಮಧ್ಯದಲ್ಲಿ ತಟ್ಟೆ ಮತ್ತು ಬಾಳೆ ಎಲೆಯ ಆಕಾರದ ತಗ್ಗು ಇದ್ದು ಸುತ್ತಲೂ ಬಟ್ಟಲಿನಾಕಾರದ ತಗ್ಗುಗಳಿವೆ. ಇವುಗಳನ್ನು ಊಟಕ್ಕೆ ಉಪಯೊಗಿಸುತ್ತಿದ್ದರೆಂಬುದು ನಿಸ್ಸಂದೇಹ. ಈ ಕಾಲುವೆಯನ್ನು ಊಟದ ಕಾಲುವೆಯೆಂದು ಕರೆಯುತ್ತಿದ್ದರೆಂದು ತೋರುತ್ತದೆ. ಇಂತಹ ಊಟದ ಕಾಲುವೆಯ ಉಲ್ಲೇಖ ಪೆನುಗೊಂಡೆ ಬಾಗಿಲ ಹತ್ತಿರವಿರುವ ಶಾಸನದಲ್ಲಿದೆ. ಕ್ರಿ.ಶ.೧೫೪೦ರ ಈ ಶಾಸನ ರಘುನಾಥ ದೇವರಿಗೆ ದಾನವಾಗಿ ಕೊಟ್ಟ ಭೂಮಿಯ ವಿವರವನ್ನು ಕೊಡುವಾಗ "ಮಾದಲಾಪುರದ ಗ್ರಾಮದ ಕೆರೆವೊಳಗೆ ಊಟಕಾಲುವೆ ಸ್ಥಳದಲ್ಲೂ ಲಕುಮಯ್ಯ ಹೊಂನ್ನಯ್ಯ ಮಲ್ಲಯ್ಯಗಳ ಗದ್ದೆ ಖ ೧" ಎಂದು ಉಲ್ಲೇಖಿಸುತ್ತದೆ.[8] ಮೇಲೆ ವಿವರಿಸಿದ ಊಟದ ಕಾಲುವೆಯೇ ಶಾಸನದಲ್ಲಿ ಉಲ್ಲೇಖಗೊಂಡಿರುವ ಊಟಕಾಲುವೆಯೆಂದು ಹೇಳುವುದಕ್ಕೆ ಆಧಾರವಿಲ್ಲ. ಆದರೆ ಶಾಸನದಲ್ಲಿ ಉಲ್ಲೇಖಗೊಂಡ ಊಟ ಕಾಲುವೆ ಮೇಲೆ ವಿವರಿಸಿದ ಊಟದ ಕಾಲುವಂತೆಯೇ ಇದ್ದಿರಬಹುದೆಂದು ನಿರ್ಧರಿಸಬಹುದು. ಇದೇ ಶಾಸನದಲ್ಲಿ ಮತ್ತೊಂದು ಭೂಮಿಯ ವಿವರವನ್ನು "ಕಳಸಾಪುರದ ಮಾಗಣಿಗೆ ಸಲುವ ರೇವತಾಪುರದ ಗ್ರಾಮದಲ್ಲೂ ಹಾಳ ಕಾಲುವೆಯ ಕೆಳಗೆ ಸೇನಬೋವ ವಿರುಪರಸನು ಮಾಡುವ ಜುಗಿನಗದ್ದೆ ಸ್ಥಳ ಉಖ ೧" ಎಂದು ಉಲ್ಲೇಖಿಸುತ್ತದೆ. ಕಳಸಾಪುರವು ಮೌಲ್ಯವಂತ ಪರ್ವತದ ಹತ್ತಿರವಿರುವ ಉದಯಗಿರಿ ಬಾಗಿಲ ಪೂರ್ವಕ್ಕೆ ಇದೆ. ರೇವತಾಪುರವನ್ನು ಈಗ ಗುರುತಿಸಲಾಗುವುದಿಲ್ಲ. ಇಲ್ಲಿರುವ ಕಾಲುವೆಯು ವಿಜಯನಗರ ಕಾಲದಲ್ಲಿಯೇ ಹಾಳಾಗಿದ್ದುದು ಶಾಸನದಿಂದ ತಿಳಿಯುತ್ತದೆ.

ಕಲ್ಲನ್ನು ಕಡಿಸಿ ಕಾಲುವೆ ಮಾಡಿಸಿದ ಉದಾಹರಣೆ ಬುಕ್ಕಸಾಗರದಲ್ಲಿದೆ. ಇಲ್ಲಿಯ ಕ್ರಿ.ಶ.೧೫೨೮ರ ಶಾಸನವು ಜಮಾನಖಾನನ ಮಯಿಕದ ರಾಮಸಾಗರದ ಅವಿಕಥವಿತರಸನು-ಅರೆಕಡಿಸಿ ಕಾಲುವೆ ಮಾಡಿಸಿದನೆಂದು ತಿಳಿಸಿ ಸಕಲ ಪ್ರಾಣಿಗಳು ಸುಖದಲಿ ಅನುಭವಿಸಲೆಂದು ತಿಳಿಸುತ್ತದೆ.[9]

**ಕೆರೆಗಳು**

ಅಚ್ಯುತರಾಯ ದೇವಾಲಯದ ದಕ್ಷಿಣಕ್ಕೆ ಭೂಪತಿ ಕೆರೆ ಇದ್ದುದು ದೇವಾಲಯದಲ್ಲಿಯ ಕ್ರಿ.ಶ. ೧೫೩೪ರ ಶಾಸನದಿಂದ ತಿಳಿಯುತ್ತದೆ.[10] ಈ ಕೆರೆಯು ಈಗ ಹೂತುಹೋಗಿ ಗದ್ದೆಗಳಾಗಿ ಮಾರ್ಪಾಡಾಗಿದೆ. ಮತಂಗ ಪರ್ವತದ ದಕ್ಷಿಣಕ್ಕಿರುವ ಮಂಟಪದಲ್ಲಿಯ ಶಾಸನ[11] ಮತ್ತು ಕೃಷ್ಣದೇವಾಲಯದಲ್ಲಿರುವ ಕ್ರಿ.ಶ.೧೫೧೫ರ ಶಾಸನ[12] ಸಹ ಈ ಕೆರೆಯನ್ನು ಉಲ್ಲೇಖಿಸುತ್ತವೆ. ವಿಜಯನಗರದಲ್ಲಿಯ ಅತಿ ದೊಡ್ಡ ಕೆರೆ ಕಮಲಾಪುರ ಕೆರೆ. ಪೆನುಗೊಂಡೆ ಬಾಗಿಲ ಹತ್ತಿರದ ರಘುನಾಥ ದೇವಾಲಯದಲ್ಲಿರುವ ಕ್ರಿ.ಶ.೧೫೪೦ರ ಶಾಸನವು ಕಮಲಾಪುರದ ಕೆರೆಯ ಕೆಳಗೆ ಗದ್ದೆಯನ್ನು ದೇವರಿಗೆ ದಾನವಾಗಿ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.[13] ಇದೇ ಶಾಸನವು ಅನಂತಾಪುರದ ಕೆರೆಯನ್ನೂ ಉಲ್ಲೇಖಿಸುತ್ತದೆ. ಮೌಲ್ಯವಂತ ಪರ್ವತದ ಈಶಾನ್ಯಕ್ಕೆ ಕಾಲುವೆಯ ದಂಡೆಯ ಮೇಲಿರುವ ಶಾಸನದಿಂದ ಅಲ್ಲಿ ಕೃಷ್ಣರಾಯ ಸಮುದ್ರವೆಂಬ ಕೆರೆ ಇತ್ತೆಂಬುದು ತಿಳಿಯುತ್ತದೆ.[14] ಕೆರೆಗಳಿದ್ದ ಸ್ಥಳದಲ್ಲೀಗ ಗದ್ದೆಗಳಿವೆ. ಕಡ್ಡಿರಾಂಪುರದ ಹತ್ತಿರವಿದ್ದ ಕೆರೆಯನ್ನು ರಾಮಾಪುರ ಕೆರೆಯೆಂದು

ಕರೆಯುತ್ತಿದ್ದುದು ಪ್ರಸನ್ನ ವಿರೂಪಾಕ್ಷ (ಭೂಮಿಯ ಕೆಳಮಟ್ಟದ) ದೇವಾಲಯದ ಹತ್ತಿರ ಹೊಲದಲ್ಲಿರುವ ಕ್ರಿ.ಶ.೧೩೮೮ರ ಶಾಸನದಿಂದ ತಿಳಿಯುತ್ತದೆ.[15]

ಕಮಲಾಪುರದ ಪೂರ್ವಕ್ಕೆ ಸೀತಾರಾಮ ತಾಂಡದ ಹತ್ತಿರವಿರುವ ಕ್ರಿ.ಶ.೧೫೩೯ರ ಶಾಸನವು ನಲತಿಂಮಬೋಯಿಯ ಅಚ್ಯುತರಾಯನ ಮಗ ವೆಂಕಟಾದ್ರಿ ಚಿಕ್ಕರಾಯನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[16] ಕೆರೆ ಇರಬೇಕಾಗಿದ್ದ ಸ್ಥಳದಲ್ಲಿ ಈಗ ಹೊಲಗಳಿವೆ.

ಹೊಸಪೇಟೆಯ ಈಶಾನ್ಯಕ್ಕಿರುವ ನಾಗೇನಹಳ್ಳಿಯ ಬಳಿ ಒಂದು ದೊಡ್ಡ ಕೆರೆಯಿದೆ. ಈ ಕೆರೆಯ ಹೆಸರು ನಾಗಾಂಬಿಕಾಸಮುದ್ರ ಅಥವಾ ನಾಗಸಮುದ್ರ. ಇದನ್ನು ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ಕ್ರಿ.ಶ.೧೫೧೮ರಲ್ಲಿ ರಂಗನಾಥ ದೀಕ್ಷಿತನು ಕಟ್ಟಿಸಿದನೆಂದು ನಾಗೇನಹಳ್ಳಿಯ ರಂಗನಾಥ ದೇವಾಲಯದಲ್ಲಿನ ಶಾಸನದಿಂದ ತಿಳಿಯುತ್ತದೆ.[17]

**ಪಂಪಾಸರಸ್ಸು**

ವಿಠಲ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಸೀತಾಕೊಂಡದ ಹತ್ತಿರ ನರಸಿಂಹ ದೇವಾಲಯವಿದೆ. ದೇವಾಲಯದ ಹತ್ತಿರವಿರುವ ಕೊಂಡದ ದಡದಲ್ಲಿರುವ ಕ್ರಿ.ಶ.೧೪೦೦ರ ಶಾಸನವು ತುಂಗಭದ್ರಾ ತೀರದಲ್ಲಿ ಭಾಸ್ಕರ ಕ್ಷೇತ್ರದಲ್ಲಿ ಪಂಪಾಸರಸ್ಸಿನ ಸಮೀಪವಾದ ನರಸಿಂಹದೇವರ ಸನ್ನಿಧಿಯಲ್ಲಿ ನಾಗೆಯನಾಯಕನು ಕೇಶವಗುಂಡವನ್ನು ಮಾಡಿಸಿದನೆಂದು ತಿಳಿಸುತ್ತದೆ.[18] ಪಂಪಾಸರಸ್ಸು ನರಸಿಂಹ ದೇವಾಲಯದ ಹತ್ತಿರವಿರುವುದೆಂದು ಈ ಶಾಸನ ಸ್ಪಷ್ಟಪಡಿಸುತ್ತದೆ. ಆದರೆ ಈಗಿನ ಪಂಪಾಸರಸ್ಸು ನದಿಯ ಆಚೆಗೆ ಎಡದಂಡೆಯಿಂದ ದೂರವಿದೆ. ನರಸಿಂಹ ದೇವಾಲಯವಿರುವುದು ನದಿಯ ಬಲದಂಡೆಯ ಹತ್ತಿರ. ಈಗಿನ ಪಂಪಾಸರಸ್ಸಿನಿಂದ ಮತಂಗ ಪರ್ವತ ಮತ್ತು ಕೋಟಿಲಿಂಗದವರೆಗಿನ ಎಲ್ಲಾ ಪ್ರದೇಶವು ರಾಮಾಯಣ ಕಾಲದಲ್ಲಿ ಜಲಮಯವಾಗಿದ್ದು. ಈ ಪ್ರದೇಶವನ್ನು ಪಂಪಾಸರಸ್ಸೆಂದು ಕರೆಯುತ್ತಿದ್ದರೆಂದು ಸಿ.ಟಿ.ಎಂ.ಕೊಟ್ರಯ್ಯನವರು ಅಭಿಪ್ರಾಯಪಡುತ್ತಾರೆ.[19]

**ಕೊಂಡಗಳು**

ಮೇಲೆ ಉಲ್ಲೇಖಿಸಿದ ಶಾಸನವಿರುವ ಕೊಂಡವನ್ನು ನಾಗೆಯನಾಯಕನು ತನ್ನ ತಂದೆಯ ಹೆಸರಿನಲ್ಲಿ ಕೇಶವಗುಂಡವಾಗಿ ಮಾಡಿಸಿದನೆಂಬುದು ತಿಳಿಯುತ್ತದೆ. ಕಲ್ಲನ್ನು ಕಡೆದು ಈ ಕೊಂಡವನ್ನು ಮಾಡಿದೆ. ನರಸಿಂಹ ದೇವಾಲಯದ ಉತ್ತರಕ್ಕೆ ನದಿಯ ದಡದಲ್ಲಿ ಸೀತಾಕೊಂಡವಿದೆ. ಅಚ್ಯುತರಾಯ ಪೇಟೆಯ ಉತ್ತರಕ್ಕೆ ಸೀತಾಕೊಂಡದವರೆಗೆ ವಿಸ್ತರಿಸಿತ್ತೆಂಬುದು ಅಚ್ಯುತರಾಯ ದೇವಾಲಯದಲ್ಲಿಯ ಕ್ರಿ.ಶ.೧೫೩೪ರ ಶಾಸನದಿಂದ ತಿಳಿಯುತ್ತದೆ.[20] ಬೇಟೆಕಾರರ ಹೆಬ್ಬಾಲಿನ ಪೂರ್ವಕ್ಕಿರುವ ಒರತೆಯ ಮೈಲಾರದೇವರ ದೇವಾಲಯದ ಹತ್ತಿರ ಒಂದು ಕೊಂಡವಿದೆ. ಕೊಂಡದ ದಡದಲ್ಲಿರುವ ಹರಿಹರರಾಯನ ಕಾಲದ ಕ್ರಿ.ಶ.೧೩೮೦ರ ಶಾಸನವು ಬೇಟೆಕಾರ ಮಲಗೆಯ ನಾಯಕನ ಮಗ ಬಢೆಯ ನಾಯಕನು ಬೇಟೆಕಾರರ ಹೆಬ್ಬಾಗಿಲ ಪೂರ್ವ ದಿಕ್ಕಿಗೆ ಒರತೆಯ ಮೈಲಾರ ದೇವರನ್ನು ಪ್ರತಿಷ್ಟೆ ಮಾಡಿ ದೇವರ ವಾಯವ್ಯ ದಿಕ್ಕಿಗೆ ಒರತೆಯ ಕೊಂಡವನ್ನು ಮಾಡಿಸಿದನೆಂದು ತಿಳಿಸುತ್ತದೆ.[21]

**ತೀರ್ಥಗಳು**

ಮೇಲೆ ಉಲ್ಲೇಖಿಸಿದ ನರಸಿಂಹ ದೇವಾಲಯದ ಪಕ್ಕದಲ್ಲಿ ಬಂಡೆಯ ಮೇಲೆ ನೈಸರ್ಗಿಕವಾಗಿರುವ ಚಿಕ್ಕ ತೊಟ್ಟಿಯಾಕಾರದ ತಗ್ಗಿದೆ. ಪಕ್ಕದಲ್ಲಿರುವ ಶಾಸನವು ಈ ತೊಟ್ಟಿಯನ್ನು ಭವನಾಸಿ ತೀರ್ಥವೆಂದು ಉಲ್ಲೇಖಿಸುತ್ತದೆ.[22] ಇದೇ ರೀತಿ ಬೇಟೆಕಾರರ ಹೆಬ್ಬಾಗಿಲ

ಈಶಾನ್ಯಕ್ಕಿರುವ ಒಂದು ದೇವಾಲಯದ ಹತ್ತಿರವಿರುವ ನೈಸರ್ಗಿಕ ಒರತೆಯನ್ನು ಪಕ್ಕದಲ್ಲಿರುವ ಶಾಸನವು ಮುಕ್ತಿಋಣ ನಿರ್ಮಲ ತೀರ್ಥವೆಂದು ಉಲ್ಲೇಖಿಸುತ್ತದೆ.[23]

**ಬಾವಿಗಳು**

ಹೇಮಕೂಟದ ಪಶ್ಚಿಮಕ್ಕೆ ಇರುವ ಕ್ರಿ.ಶ.೧೩೭೭ ಮತ್ತು ೧೩೯೦ರ ಎರಡು ಶಾಸನಗಳಲ್ಲಿ[24] ಭಕ್ತರ ನಾಗಪ್ಪನು ಒಂದು ಬಾವಿಯನ್ನು ಕಟ್ಟಿಸಿದ ಉಲ್ಲೇಖವಿದೆ. ವಿರೂಪಾಕ್ಷ ದೇವಾಲಯದ ತೇರುಬೀದಿಯ ಎದುರು ಬಸವನ ದಕ್ಷಿಣಕ್ಕೆ ಮತಂಗ ಪರ್ವತದ ಹತ್ತಿರ ಒಂದು ಬಾವಿಯಿದೆ. ದೊಡ್ಡ ಗುಂಡೊಂದು ಬಾವಿಯನ್ನು ಭಾಗಶಃ ಮುಚ್ಚಿದೆ. ಬಾವಿಯ ಹೆಸರನ್ನು ಗುಂಡಿನ ಮೇಲಿರುವ ಶಾಸನದಲ್ಲಿ ಮಹಾದೇವಿಯಕ್ಕ ಬಾವಿ ಮತ್ತು ಕೆಳಬಾವಿ ಎಂದು ಉಲ್ಲೇಖಿಸಿದೆ.[25] ಹೊದೆಯ ಬಾಗಿಲ ಉತ್ತರಕ್ಕೆ ಗುಡ್ಡದ ಪಕ್ಕದಲ್ಲಿ ಒಂದು ಬದಿಗೆ ಮೆಟ್ಟಿಲಿರುವ ಚಿಕ್ಕ ಬಾವಿಯಿದೆ. ಬಾವಿಯ ಹತ್ತಿರವಿರುವ ಗುಂಡಿನ ಮೇಲಿನ ಶಾಸನದಿಂದ ನರಹರಿದೇವನ ಮಗ ದೇವರಾಯನು ಕ್ರಿ.ಶ.೧೪೧೧ರಲ್ಲಿ ಈ ಬಾವಿಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ. ಇದನ್ನು ಬೆನಕನ ಬಾವಿಯೆಂದು ಕರೆಯುತ್ತಿದ್ದುದು ಶಾಸನದಿಂದ ತಿಳಿಯುತ್ತದೆ. ಶಾಸನದ ಪಕ್ಕದಲ್ಲಿ ಗಣೇಶನ ಅಪೂರ್ಣವಾದ ಶಿಲ್ಪವಿದೆ.[26]

ಸಿಂಘಾರದ ಹೆಬ್ಬಾಗಿಲಿನಿಂದ ಈಶಾನ್ಯಕ್ಕೆ ಹೋದಾಗ ಮುಸ್ಲೀಮರು ವಾಸವಾಗಿದ್ದ ಪ್ರದೇಶವನ್ನು ಸೇರುತ್ತೇವೆ. ಇಲ್ಲಿ ಅನೇಕ ಗೋರಿಗಳು ಮತ್ತು ಎರಡು ಮಸೀದಿಗಳಿವೆ. ಒಂದು ಮಸೀದಿಯಲ್ಲಿರುವ ಶಾಸನದಿಂದ ಅದೊಂದು ಧರ್ಮಶಾಲೆಯಾಗಿತ್ತೆಂಬುದು ತಿಳಿಯುತ್ತದೆ. ಈ ಶಾಸನದ ಪ್ರಕಾರ ಈ ಧರ್ಮಶಾಲೆ ಮತ್ತು ಪಕ್ಕದಲ್ಲಿರುವ ಬಾವಿಯನ್ನು ಕಟಿಗೆಯ ಅಹ್ಮದ್‌ಖಾನನು ತನ್ನ ಅರಸ ದೇವರಾಯನಿಗೆ ಧರ್ಮವಾಗಬೇಕೆಂದು ಕ್ರಿ.ಶ.೧೪೩೯ರಲ್ಲಿ ಕಟ್ಟಿಸಿದನು.[27] ಮಸೀದಿ ಅಥವಾ ಧರ್ಮಶಾಲೆಗೆ ಬರುವವರ ಉಪಯೋಗಕ್ಕಾಗಿ ಈ ಬಾವಿಯನ್ನು ಕಟ್ಟಿಸಿದೆ. ಅಹ್ಮದ್‌ಖಾನನ ಧರ್ಮಶಾಲೆಯ ಪಶ್ಚಿಮಕ್ಕೆ ಗುಡ್ಡದ ಮೇಲಿರುವ ಬಾವಿಯನ್ನು ದೇವರಪಲ್ಲಿ ಮುಮ್ಮಡಿಸೆಟ್ಟಿಗೆ ಪುಣ್ಯವಾಗಲೆಂದು ನಂಜೇದೇವರ ನಿರಾಸಿಮಠಕ್ಕೆ ದಾನಮಾಡಿದ್ದು ಬಾವಿಯ ಪಕ್ಕದಲ್ಲಿರುವ ಶಾಸನದಿಂದ ತಿಳಿಯುತ್ತದೆ.[28] ಅಹ್ಮದ್‌ಖಾನನ ಧರ್ಮಶಾಲೆಯ ದಕ್ಷಿಣಕ್ಕಿರುವ ಶಾಸನವು ಮತ್ತೊಂದು ಬಾವಿಯನ್ನು ಕಬಿರಾವುತನ ಮಗ ಪಿಲಿಕುಂಚಲಕನು ಬಯಿರಾವುತನಿಗೆ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[29]

ಈಗ ತಳವಾರಘಟ್ಟ ಬಾಗಿಲೆಂದು ಕರೆಯುವ ಬಾಗಿಲಿನ ಮೂಲ ಹೆಸರು ಅರೆಶಂಕರಬಾವಿ ಬಾಗಿಲು ಎಂಬುದು ವಿಠಲ ದೇವಾಲಯದಲ್ಲಿರುವ ಕ್ರಿ.ಶ.೧೫೫೯ರ ಶಾಸನದಿಂದ ತಿಳಿಯುತ್ತದೆ.[30] ಬಾಗಿಲ ಹತ್ತಿರ ಅರೆಶಂಕರಬಾವಿ ಇತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ಅಗಸರ ಬಾವಿ ಇದ್ದುದು ಇದೇ ಶಾಸನದಿಂದ ತಿಳಿಯುತ್ತದೆ. ಉದಯಗಿರಿಯ ಬಾಗಿಲ ಹತ್ತಿರವಿರುವ ಶಾಸನವು ಆ ಪ್ರದೇಶದಲ್ಲಿ ಒಂದು ಬಾವಿ ಇದ್ದುದನ್ನು ಉಲ್ಲೇಖಿಸುತ್ತದೆ.[31] ಸರಸ್ವತಿ ದೇವಾಲಯದ ಹತ್ತಿರವಿರುವ ಶಾಸನದಿಂದ ಒಬ್ಬ ಮಹಿಳೆಯು ಒಂದು ಬಾವಿಯನ್ನು ಕಟ್ಟಿಸಿದ್ದು ತಿಳಿಯುತ್ತದೆ.

ಬೇಟೆಕಾರರ ಹೆಬ್ಬಾಗಿಲ ಈಶಾನ್ಯಕ್ಕೆ ಎರಡು ಬಾವಿಗಳಿವೆ. ಒಂದರ ಹೆಸರು ಲಿಂಗಬಾವಿ ಮತ್ತು ಇನ್ನೊಂದರ ಹೆಸರು ರಂಗನಾಥ ಬಾವಿ ಎಂಬುದು ಅಲ್ಲಿರುವ ಶಾಸನಗಳಿಂದ ತಿಳಿಯುತ್ತದೆ.[32] ರಂಗನಾಥ ಬಾವಿಯನ್ನು ತಿರಿವಿದ ಚಿಟಿನಾಗಿನೆನಿಯ ಮಗ ಚೆನ್ನಪನಾಯಂಡು ಕಟ್ಟಿಸಿದನು.

**ದೇವಾಲಯಗಳ ಕೊಳಗಳು**

ಸಾಮಾನ್ಯವಾಗಿ ದೇವಾಲಯಗಳು ತಮ್ಮದೇ ಆದ ಕೊಳ ಅಥವಾ ಬಾವಿಗಳನ್ನು ಹೊಂದಿವೆ. ಹೇಮಕೂಟದ ಮೇಲಿನ ಎರಡು ಶಾಸನಗಳು ಮಾತ್ರ ದೇವಾಲಯದೊಂದಿಗೆ ಕೊಳವನ್ನು ಅಗೆಸಿದ್ದನ್ನು ಉಲ್ಲೇಖಿಸುತ್ತವೆ. ರಾಘವಪಂಡಿತ ಮತ್ತು ಕಮಲಾಂಬರ ಮಕ್ಕಳು ವಿರೂಪಾಕ್ಷ ಪಂಡಿತ ಮತ್ತು ವಿನಾಯಕ ಪಂಡಿತರು ವಿರೂಪಾಕ್ಷ ಸಿದ್ಧ ಶ್ರೀಪಾದ ಶ್ರೀವಲ್ಲಭರ ದೇವಾಲಯವನ್ನು ಕಟ್ಟಿಸಿ ದೇವಾಲಯದ ಎಡಭಾಗದಲ್ಲಿ ಕೊಳವನ್ನು ಅಗೆಸಿದರು.[33]

**ಮಾಳಿಗೆಕೂಪಾರಾಮ**

ಹೊಸಪೇಟೆಯಿಂದ ವಿಜಯನಗರಕ್ಕೆ ಬರುವ ದಾರಿಯಲ್ಲಿ ಮಲಪನಗುಡಿಯ ಹತ್ತಿರ ರಸ್ತೆ ಬದಿಗೆ ಒಂದು ಬಾವಿಯಿದೆ. ಈ ಬಾವಿಯನ್ನು ಸೂಳೆಬಾವಿ ಅಥವಾ ಸುಳಿಬಾವಿಯೆಂದು ಕರೆಯುತ್ತಾರೆ. ಆದರೆ ಊರೊಳಗಿನ ಮಲ್ಲಿಕಾರ್ಜುನ ದೇವಾಲಯದ ಮುಂದಿರುವ ಶಾಸನ ಇದನ್ನು ಅರ್ಥಪೂರ್ಣವಾಗಿ ಮಾಳಿಗೆಕೂಪಾರಾಮವೆಂದು ಉಲ್ಲೇಖಿಸುತ್ತದೆ.[34] ವಿಜಯನಗರದ ಅರಸ ಒಂದನೇ ದೇವರಾಯನ ಕಾಲದಲ್ಲಿ ಕ್ರಿ.ಶ.೧೪೧೨ರಲ್ಲಿ ಬಿಸಿಲಹಳ್ಳಿಯ ಕಣಿವೆ ಮತ್ತು ಬಡವಲಿಯ ಕಣಿವೆ ಹಾದಿ ಕೂಡಿದ ಮಹಾಪಥದಲ್ಲಿ ಬುಳ್ಳೆನಾಯ್ಯನ ಮಗ ಹೆಗ್ಗಡೆ ಸೋವಣ್ಣ ಅಣ್ಣ ಅರವಟಿಗೆಯನ್ನಿಕ್ಕಿಸಿ ಮಾಳಿಗೆಕೂಪಾ ರಾಮವನ್ನು ಮಾಡಿಸಿದನು.

ಮಾಳಿಗೆಕೂಪಾರಾಮವು ಮಾಳಿಗೆ, ಕೂಪ ಮತ್ತು ಆರಾಮ ಅಶಬ್ದಗಳಿಂದ ಕೂಡಿದೆ. ಮಾಳಿಗೆ ಎಂದರೆ ಮೇಲ್ಛಾವಣಿ ಅಥವಾ ಮನೆಯ ಮೇಲಿನ ಹೊದಿಕೆ, ಕೂಪ ಎಂದರೆ ಬಾವಿ ಮತ್ತು ಆರಾಮ ಎಂದರೆ ವಿಶ್ರಾಂತಿಗಾಗಿ ಮಾಡಿದ ತೋಟ ಅಥವಾ ವನ. ಈಗ ಸ್ಥಳದಲ್ಲಿ ನಮಗೆ ಕಾಣುವುದು ಮಾಳಿಗೆ ಮತ್ತು ಕೂಪ ಮಾತ್ರ. ಸುತ್ತಲೂ ಇರಬೇಕಾಗಿದ್ದ ಅರಾಮ ಈಗಿಲ್ಲ. ಆಳವಾದ ಬಾವಿಗೆ ಪೂರ್ವಕ್ಕೆ ಮೆಟ್ಟಿಲುಗಳಿವೆ. ಬಾವಿಯ ಕೆಳಭಾಗ ಚೌಕಾಕಾರವಾಗಿದ್ದು, ಮೇಲ್ಭಾಗ ಅಷ್ಟಭುಜಾಕಾರವಾಗಿದೆ. ಅಷ್ಟಭುಜಾಕಾರದ ಭಾಗದಲ್ಲಿ ಸುತ್ತಲೂ ಕೈಸಾಲೆಯಿದೆ. ಮೆಟ್ಟಿಲುಗಳ ಮೂಲಕ ಕೈಸಾಲೆಯ ಒಳಗೆ ಹೋಗಬಹುದು. ಕೈಸಾಲೆಯಿಂದ ಕಮಾನುಗಳು ಬಾವಿಯೊಳಕ್ಕೆ ತೆರೆದುಕೊಳ್ಳುತ್ತವೆ. ಕೈಸಾಲೆಯ ಮೇಲಿನ ಮಾಳಿಗೆಯಿಂದ ಮಾಳಿಗೆ ಶಬ್ದವು ಕೂಪದೊಂದಿಗೆ ಸೇರಿ ಸುತ್ತಲೂ ಇದ್ದ ಅರಾಮದೊಂದಿಗೆ ಮಾಳಿಗೆಕೂಪಾರಾಮವಾಗಿದೆ.

ಸೋವಣ್ಣ ಅಣ್ಣನು ಮಾಡಿದ ಭೂದಾನದಿಂದ ಮಾಳಿಗೆಕೂಪಾರಾಮ ಮತ್ತು ಅರವಟ್ಟಿಗೆಯನ್ನು ಹೇಗೆ ನಿರ್ಮಿಸಬೇಕೆಂಬುದನ್ನು ಶಾಸನದಲ್ಲಿ ವಿವರಿಸಲಾಗಿ ತಿಳಿಸಲಾಗಿದೆ.

“ಯೀ ಮೂರು ವ್ರಿತ್ತಿಯ ಬೆಳೆಯ ಆದಾಯವನು ಮೂರು ಭಾಗವಮಾಡಿ ಆ ಅರವಟ್ಟಿಗೆ ನಡೆಸುವ ವಿರುಪಂಣಗಳಿಗೆ ವೊಂದು ಭಾಗೆ ಅರವಟ್ಟಿಗೆಗೆ ನೀರ ಹೊಯಿವುದಕ್ಕೆ ಮರಗಳಿಗೆ ನೀರನೆರವದಕ್ಕೆ ಮಾಳಿಗೆ ಗಿಳಿಲಾದರೆ ಕಟ್ಟುವದಕ್ಕೆ ಅರವಟ್ಟಿಗೆಗೆ ಗುಡಾಣ ಬಿಂದಿಗೆ ಕರಗ ಮಾಘೆಗಳ ಕ್ರಯಕ್ಕೆ ಸುತ್ತಣ ಮನಿ ಅಣಿಮಾಡಿಕೊಂಡು ಯಿಹದಕ್ಕೆ ಬಾವಿ ಹೊಳಿದರೆ ತೋಡುವುದಕ್ಕೆ ಯಿಷ್ಟರ ಉಪಕ್ಷಯಕ್ಕೆ ಮಿಕ್ಕ ಎರಡು ಭಾಗೆ ಸಲುಉದು ಯೀ ಮರಿಯಾದೆಯಲು ಆ ವಿರುಪಂಣಗಳು ತಂನ ಮಕ್ಕಳು ಮಕ್ಕಳು ತಪ್ಪದೆ ಅರವಟಿಗೆಯ ಧಂರ್ಮವನು ನಡೆಸದೆ ಉಳಿದರೆ ಆರಾದರೆ ಧಂಮ್ಮಿಷ್ಟರಾಗಿ ಯಿದ್ದವರು ಯೀ ಶಾಸನವನು ವೋದಿಸಿ, ನೋಡ ಆ ವ್ರಿತ್ತಿಗಳನೂ ವಿಚಾರವ ಮಾಡಿ ಮುಂದೆ ಆ ಅರವಟಿಗೆಯ ಧಂರ್ಮ್ಮವ ನಡೆಸುವಾತಗೆ ವೊಂದು ಭಾಗ ಸಲುಉದು

ಅರವಟಿಗೆಗೆ ನೀರನೆರವರ ಜೀವಿತ ಮೊದಲಾದ ಎಲ್ಲಾ ಉಪಕ್ಷಯಕ್ಕೆ ಆ ಉಳಿದ ಎರಡು ಭಾಗೆ ಸಲುಉದು.”

ಪ್ರವಾಸಿಗಳಿಗೆ ರಸ್ತೆ ಬದಿಯ ಸೌಲಭ್ಯಗಳು ಹೇಗಿರಬೇಕೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

**ತೊಟ್ಟಿಗಳು**

ವಿಜಯನಗರದಲ್ಲಿ ಏಕಶಿಲೆಯಲ್ಲಿ ಮಾಡಿದ ತೊಟ್ಟಿಗಳನ್ನು ಅಲ್ಲಲ್ಲಿ ಕಾಣುತ್ತೇವೆ. ಇವುಗಳಲ್ಲಿ ಮೂರರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ವಿರೂಪಾಕ್ಷ ತೇರು ಬೀದಿಯಲ್ಲಿ ಕಂಪ್ಲಿಮಠದ ಪಕ್ಕದಲ್ಲಿರುವ ತೊಟ್ಟಿಯನ್ನು ಅಬರಾಜು ತಿಮಪ ಮಾಡಿಸಿದನು.[35] ಕೋದಂಡರಾಮ ದೇವಾಲಯದ ಹತ್ತಿರವಿರುವ ತೊಟ್ಟಿಯನ್ನು ತುಳುಬನನಾಸಿಯ ಮಗ ಕತ್ತೆಲಬಯ್ಯನು ಮಾಡಿಸಿದನು.[36] ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತಾ ಕಾಲುವೆಯ ಬಲದಂಡೆಯ ಹತ್ತಿರ ದೊಡ್ಡ ಕಲ್ಲಿನೊಳಗೆ ಮಾಡಿದ ತೊಟ್ಟಿಯನ್ನು ಓಬಯವ್ವೆಯು ದುರಗಂಟು ರಘುನಾಥ ದೇವರಿಗೆ ಮಾಡಿಸಿದಳು.[37]

**ಅರವಟ್ಟಿಗೆ**

ಯಾತ್ರಿಕರ ಅನುಕೂಲಕ್ಕಾಗಿ ರಸ್ತೆ ಬದಿಯಲ್ಲಿ ಅರವಟ್ಟಿಗೆಗಳನ್ನಿಡುವ ಪದ್ಧತಿಯಿತ್ತು. ಮಲಪನಗುಡಿಯಲ್ಲಿದ್ದ ಅರವಟ್ಟಿಗೆಯನ್ನು ಈಗಾಗಲೇ ಗಮನಿಸಿದ್ದೇವೆ. ಆನೆಗೊಂದಿಯ ಉತ್ತರಕ್ಕಿರುವ ಸುಂಕದ ಬಾಗಿಲಿನ ಹತ್ತಿರ ಇದ್ದ ಅರವಟ್ಟಿಗೆಗೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದು ಅಲ್ಲಿಯ ಎರಡು ಶಾಸನಗಳಿಂದ ತಿಳಿಯುತ್ತದೆ.[38]

ನೀರಿನ ವ್ಯವಸ್ಥೆಗೆ ಸಂಬಂಧಿಸಿದಂತೆ ವಿವಿಧ ಮಹತ್ವಪೂರ್ಣ ಮಾಹಿತಿಯನ್ನೊಳಗೊಂಡ ಶಾಸನಗಳು ವಿಜಯನಗರದ ನೀರಿನ ವ್ಯವಸ್ಥೆಯನ್ನು ಕೂಲಂಕಷವಾಗಿ ಅಧ್ಯಯನ ನಡೆಸುವುದಕ್ಕೆ ಅತ್ಯಗತ್ಯವಾದ ಪೂರಕ ಮಾಹಿತಿಯನ್ನು ಒದಗಿಸುತ್ತವೆ.

**ಆಕರ**

ವಿಜಯನಗರ ಅಧ್ಯಯನ, ಸಂ.೧ ೧೯೯೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೬೨-೭೫.

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಸೌಇಂಇ, ४, ಸಂ. ೨೬೭

[2] ವಿಪ್ರೊರೀ., ೧೯೮४-८೭, ಸಂ.೧

[3] ಅದೇ, ಸಂ.೭३

[4] ಅದೇ, ಸಂ. ೧८

[5] ಸೌಇಂಇ, ४, ಸಂ. ೨೬೬

[6] ಅದೇ, ಸಂ. ೨೬೫

[7] ಅದೇ, ೯(೨), ಸಂ. ೬೬८

[8] ಅದೇ, ೪, ಸಂ. ೨೪೫

[9] ವಿಪ್ರೋರೀ, ೧೯೮೮-೯೧, ಸಂ.೨

[10] ಸೌಇಂಇ, ೯(೨), ಸಂ. ೫೦೪

[11] ವಿಪ್ರೊರೀ, ೧೯೮೩-೮೪, ಸಂ.೪೩

[12] ಸೌಇಂಇ, ೪, ಸಂ. ೨೫೫

[13] ಅದೇ, ಸಂ. ೨೪೫

[14] ವಿಪ್ರೊರೀ, ೧೯೮೪-೮೭, ಸಂ. ೧೨೯

[15] ಅದೇ, ಸಂ. ೮೯

[16] ಅದೇ.ಸಂ. ೧೪೫

[17] ಸೌಇಂಇ, ೯(೨), ಸಂ. ೫೦೪

[18] ವಿಪ್ರೊರೀ, ೧೯೮೩-೮೪, ಸಂ. ೧೨

[19] ಸಿ.ಟಿ.ಎಂ. ಕೊಟ್ರಯ್ಯ, ೧೯೯೫, ಪಂಪಾ ಸರಸ್ಸು, ಕಿಷ್ಕಿಂದ ಅಂಡ್ ಹಂಪಿ ಎಪಿಗ್ರಾಫಿ, ನ್ಯೂಮಿಸ್ಮ್ಯಾ ಅಂಡ್ ಅದರ್ ಅಸ್ಪಕ್ಟ್ಸ್ ಇನ್ ಕರ್ನಾಟಕ, (ಸಂ.) ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. ೧೪೩-೧೪೮.

[20] ಸೌಇಂಇ, ೯(೨), ಸಂ. ೫೬೪

[21] ವಿಪ್ರೊರೀ, ೧೯೮೪-೮೭, ಸಂ. ೧೦೫

[22] ಅದೇ, ೧೯೮೩-೮೪, ಸಂ.೫೮

[23] ಅದೇ, ೧೯೮೪-೮೭, ಸಂ. ೧೦೯

[24] ಅದೇ, ೧೯೮೪-೮೭, ಸಂ. ೨೬, ೨೭

[25] ಅದೇ, ೧೯೮೪-೮೭, ಸಂ. ೨೮

[26] ಅದೇ, ೧೯೮೪-೮೭, ಸಂ. ೧೫

[27] ಸೌಇಂಇ, ೯(೨), ಸಂ. ೪೪೭

[28] ವಿಪ್ರೊರೀ, ೧೯೮೪-೮೭, ಸಂ.೯೮

[29] ಅದೇ, ಸಂ.೯೯

[30] ಸೌಇಂಇ, ೯(೨), ಸಂ. ೬೬೮

[31] ವಿಪ್ರೊರೀ, ೧೯೮೪-೮೭, ಸಂ. ೧೩೮

[32] ವಿಪ್ರೊರೀ, ೧೯೮೪-೮೭, ಸಂ. ೧೦೭, ೧೦೮, ೧೧೦

[33] ಆರಿಇಂಎ, ೧೯೩೪-೩೫, ಸಂ.ಬಿ. ೩೫೧

[34] ಸೌಇಂಇ, ೯(೨), ಸಂ.೪೩೬

[35] ವಿಪ್ರೊರೀ, ೧೯೮೪-೮೭, ಸಂ.೩೩

[36] ಅದೇ, ಸಂ. ೬೮

[37] ಅದೇ, ಸಂ. ೧೨೮

[38] ಅದೇ, ಸಂ. ೧೬೬-೧೬೭

# ೩೮. ರಾಜಧಾನಿ ವಿಜಯನಗರದ ನೀರು ಪೂರೈಕೆಗಳು

ವಿಜಯನಗರವು ಮಧ್ಯಕಾಲೀನ ಇತಿಹಾಸದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ. ಈ ಪಟ್ಟಣದ ಸಿರಿವಂತಿಕೆಯನ್ನು ಹೊಗಳಿ ಅಂದು ಭೇಟಿ ನೀಡಿದ ವಿದೇಶಿಯ ಪ್ರವಾಸಿಗರಿಂದ ಅರಮನೆ, ಭವ್ಯ ದೇವಾಲಯಗಳು, ಮಹಾದ್ವಾರಗಳು, ಉಪನಗರಗಳು, ಬಜಾರುಗಳು, ತೋಟ, ಹೊಲ, ಗದ್ದೆಗಳು ಬಹಳಷ್ಟು ಹೆಗ್ಗಳಿಕೆಯನ್ನು ಗಳಿಸಿವೆ. ೧೬ನೇ ಶತಮಾನದಲ್ಲಿ ಈ ಪಟ್ಟಣವು ರೋಮ್‌ನಷ್ಟು ಜನಸಂಖ್ಯೆಯನ್ನು ಹೊಂದಿತ್ತೆಂದು ವರ್ಣಿಸಿರುವುದನ್ನು ಸಾಹಿತ್ಯದಲ್ಲಿ ಕಾಣಬಹುದು. ಅಪಾರ ಜನಸಂಖ್ಯೆಯನ್ನು ಹೊಂದಿದ್ದ ಈ ಪ್ರಖ್ಯಾತ ರಾಜಧಾನಿಯಲ್ಲಿ ನಾಗರೀಕ ವ್ಯವಸ್ಥೆ ಅದರಲ್ಲೂ ದಿನನಿತ್ಯದ ಬಳಕೆಗೆ ಮೂಲ ಆಧಾರವಾದ ನೀರಾವರಿ ವ್ಯವಸ್ಥೆಯ ಬಗೆಗೆ ಕೈಗೊಂಡ ಕ್ರಮಗಳು ಅಧ್ಯಯನ ಯೋಗ್ಯವಾಗಿವೆ. ನಗರದ ನೀರು ಸರಬರಾಜು ವ್ಯವಸ್ಥೆಯ ಬಗೆಗೆ ಅನೇಕ ಮಾಹಿತಿಗಳು ಈಗಲೂ ಕಂಡುಬರುತ್ತವೆ. ಅಳಿದುಳಿದಿರುವ ಈ ಕುರುಹುಗಳು ನೀರು ಸರಬರಾಜು ವ್ಯವಸ್ಥೆಗೆ ಅಂದು ನೀಡಿರುವ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅಲ್ಲದೆ ನೋಡುಗರ ಗಮನವನ್ನು ಈಗಲೂ ಸೆಳೆಯುತ್ತವೆ.

ನೀರು ಸರಬರಾಜು ವ್ಯವಸ್ಥೆಯ ಸ್ಪಷ್ಟ ಕುರುಹುಗಳು ರಾಜ ಪ್ರಾಂಗಣದಲ್ಲಿ ಮಾತ್ರ ವಿಶೇಷವಾಗಿ ಕಾಣಬರುತ್ತವೆ. ಆದರೆ ನಗರದ ಇತರ ಭಾಗಗಳಲ್ಲಿ ಕುರುಹುಗಳು ಹೆಚ್ಚಾಗಿ ದೊರೆತಿಲ್ಲ. ನಗರದ ಕೆಲವು ಮುಖ್ಯ ಸ್ಥಳಗಳು ಹಾಗೂ ಉಪನಗರಗಳ ಕೆಲವು ಆಯ್ದ ಪ್ರದೇಶಗಳಲ್ಲಿ ನೀರಾವರಿ ಸರಬರಾಜು ವ್ಯವಸ್ಥೆ ಇರುವುದನ್ನು ಗುರುತಿಸಬಹುದಾಗಿದೆ.

ವಿಜಯನಗರ ಪಟ್ಟಣದ ಪ್ರದೇಶ ಬಹು ವಿಶಾಲವಾದುದು. ಸಮಗ್ರವಾಗಿ ನೀರು ಸರಬರಾಜು ಮಾಡುವ ಕೇಂದ್ರ ಸರಬರಾಜು ವ್ಯವಸ್ಥೆಯಿರಲಿಲ್ಲ. ಉಪನಗರಗಳಲ್ಲಿರುವ ಬೃಹತ್ ದೇವಾಲಯ ಸಮುಚ್ಛಯದಲ್ಲಿರುವ ಕೊಳ, ಬಾವಿಗಳು ದೇವಾಲಯದ ನೀರಿನ ಅವಶ್ಯಕತೆಯನ್ನು ಪೂರೈಸುವುದರಲ್ಲಿ ಮಾತ್ರ ಸೀಮಿತವಾಗಿತ್ತು. ಸದ್ಯ ಇರುವ ಕುರುಹುಗಳನ್ನು ಆಧರಿಸಿ ಹೇಳುವುದಾದರೆ, ಈ ನೀರು ಸರಬರಾಜು ವ್ಯವಸ್ಥಿತ ವಿಜಯನಗರದ ರಾಜ ಮಹಾರಾಜರಿಗೆ ಅವರ ಪರಿವಾರದವರಿಗೆ, ಮಂತ್ರಿ ಮಹೋದಯರಿಗೆ, ಅರಮನೆಗಳಿಗೆ ಅನುಕೂಲ ಕಲ್ಪಿಸಿತ್ತು. ಈ ಪ್ರದೇಶದಲ್ಲಿ ಮಳೆಯು ಹೆಚ್ಚಾಗಿ ಬೀಳದಿರುವುದರಿಂದ ಬಿದ್ದ ಮಳೆಯನ್ನು ಸಂರಕ್ಷಿಸಿ ಇತರ ಮೂಲಗಳಿಂದ ದೊರಕುವ ನೀರನ್ನು ವ್ಯವಸ್ಥಿತವಾಗಿ ಸಂಚಯಿಸಲು ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಇಲ್ಲಿ ವರ್ಷಕ್ಕೆ ಸುಮಾರು ೫೧ ಸೆಂ.ಮೀ.ಬೀಳುತ್ತಿದ್ದು, ಬಿದ್ದ ಮಳೆಯ ಶೇಖರಣೆ ಮುಖ್ಯವಾಗಿರುತ್ತದೆ.[1]

ನೀರಾವರಿ ವ್ಯವಸ್ಥೆಗೆ ಮತ್ತು ಸತತವಾದ ನೀರು ಪೂರೈಕೆಗೆ ದೊಡ್ಡ ಮತ್ತು ಸಣ್ಣ ಕೆರೆಗಳನ್ನು ಕಟ್ಟಲಾಗಿತ್ತು. ಇವುಗಳಲ್ಲಿ ಕೆಲವು ನೀರಿನ ಸೆಲೆಯ ಅಭಾವದಿಂದ ಬೇಸಿಗೆಯಲ್ಲಿ ಬತ್ತಿಹೋಗುತ್ತಿತ್ತು. ಆದರೆ ಕೆಲವು ಕೊಳಗಳು ನೀರನ್ನು ಹೊಂದಲು ಸರಿಯಾದ ನೀರಿನ ಅಂತರ್ಜಲದ ಮಟ್ಟ ಹಾಗೂ ಸೆಲೆಯ ವ್ಯವಸ್ಥೆ ಹೊಂದಿದ್ದವು. ದೇವಾಲಯದ ಸಮುಚ್ಚಯಗಳಲ್ಲಿರುವ ಅದರಲ್ಲೂ ದೇವಾಲಯದ ರಥ ಬೀದಿಗಳಲ್ಲಿರುವ ಬಾವಿಗೆ ನೀರನ್ನು ಸತತವಾಗಿ ಹರಿಸಲು ಒಂದು ಪ್ರತ್ಯೇಕವಾದ ವ್ಯವಸ್ಥೆ ಇದ್ದಿತು. ಹಿರಿಯ ಕಾಲುವೆಯಿಂದ ಕೊಳವೆಗಳನ್ನು ಈ ಕೊಳಕ್ಕೆ ಜೋಡಿಸುವ ಮೂಲಕ ನೀರು ಈ ಕೊಳಕ್ಕೆ ಹರಿದು ವರ್ಷವಿಡಿ ಅಲ್ಲಿ ಲಭಿಸುವಂತೆ ಮಾಡಲಾಗಿತ್ತು. ಅದಲ್ಲದೆ ಕಾಲುವೆಗಳ ನೀರನ್ನು ನದಿಯಿಂದ ಹೊಂದುತ್ತಿದ್ದವು. ಇದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಕಮಲಾಪುರದ ಕೆರೆ ಮತ್ತು ಭೂಪತಿ ಕೆರೆ.

**ಹಿರಿಯ ಕಾಲುವೆ**

ಹಿರಿಯ ಕಾಲುವೆಯಿಂದ ಅಂದರೆ ಇಂದಿನ ತುರ್ತಾ ಕಾಲುವೆಯಿಂದ ಭೂಪತಿ ಕೆರೆಗೆ ನೀರು ಬರುತ್ತಿತ್ತು. ಭೂಪತಿ ಕೆರೆಯು ಕೆಳಭಾಗಕ್ಕೆ ಬರುವುದರಿಂದ ನೀರು ಹರಿಯಲು ಅನುಕೂಲವಾಗಿತ್ತು. ಇಲ್ಲಿಂದ ಮುಂದೆ ಈ ಕೆರೆಯ ನೀರನ್ನು ತಿರುವೆಂಗಳನಾಥ (ಅಚ್ಯುತರಾಯ)

ದೇವಾಲಯಕ್ಕೆ ಮತ್ತು ಅಸುಪಾಸಿನಲ್ಲಿ ಬರುವ ಕೆಲವು ಸ್ಥಳಗಳಿಗೂ ಹರಿಸಲಾಗುತ್ತಿತ್ತು. ಹೀಗೆ ಸತತವಾದ ನೀರು ಪೂರೈಕೆಯಿಂದ ದೇವಾಲಯದ ಬಜಾರಿನಲ್ಲಿರುವ ಬರುವ ದೇವಾಲಯದ ಕೊಳ ತುಂಬಿರುತ್ತಿತ್ತು.

ಹಿರಿಯ ಕಾಲುವೆಯಿಂದ[2] ಭೂಪತಿಯ ಕೆರೆಯ ಮೂಲಕ ಹರಿದ ನೀರು ತಿರುವೆಂಗಳನಾಥ ದೇವಾಲಯ ಸಮುಚ್ಚಯಕ್ಕೆ ಹರಿದು ಬರುವಾಗ ಸಣ್ಣ, ಸಣ್ಣ ಟಿಸಿಲುಗಳಾಗಿ ಸುತ್ತಣ ಪ್ರದೇಶದ ಜನರಿಗೆ, ಪುರ ಪ್ರಮುಖರ ವಾಸ ಸ್ಥಳಗಳಿಗೆ ನೀರಿನ ಸರಬರಾಜಾಗುತ್ತಿತ್ತು. ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಗಣ್ಯ ವ್ಯಕ್ತಿಗಳಿಗೆ ಇದರ ಉಪಯೋಗ ಹೆಚ್ಚಾಗಿ ದೊರಕಿರಬೇಕು. ಇದು ಅಲ್ಲಲ್ಲಿ ದೊರಕುವ ಗಾರೆಯಿಂದ ನಿರ್ಮಿಸಿದ ಸಣ್ಣ ಕಾಲುವೆಗಳಿಂದ ತಿಳಿದುಬರುತ್ತದೆ. ಈ ರೀತಿ ನಗರ ಪ್ರದೇಶದಲ್ಲಿ ದೊರಕುತ್ತಿದ್ದ ನೀರು ಅಲ್ಲಿನ ಭೌಗೋಳಿಕ ಅನುಕೂಲತೆಯ ಮೇಲೆ ಅವಲಂಬಿಸಿರುತ್ತಿತ್ತು. ಕಾರಣ ಸಣ್ಣ ಕಾಲುವೆಗಳಲ್ಲಿ ನೀರಿನ ಹೆಚ್ಚಿನ ಒತ್ತಡವಿಲ್ಲದ್ದರಿಂದ ಎತ್ತರದ ಪ್ರದೇಶಗಳಿಗೆ ಅಥವಾ ಸಣ್ಣ ದಿಬ್ಬಗಳ ಮೂಲಕ ಹರಿಯುವುದು ಸಾಧ್ಯವಾಗುತ್ತಿರಲಿಲ್ಲ. ಹಾಗೆಯೇ ಈ ವ್ಯವಸ್ಥೆ ಸಂಪೂರ್ಣವಾಗಿ ಗುರುತ್ವಾಕರ್ಷಣದ ಮೇಲೆ ನಡೆಯುತ್ತಿದ್ದುದರಿಂದ ಸಮತಟ್ಟಾದ ಒಂದೇ ಎತ್ತರದಲ್ಲಿ ಮಾತ್ರ ಹರಿಯಲು ಅನುಕೂಲವಿತ್ತು. ಹೀಗೆ ದೇವಾಲಯ ಸಮುಚ್ಚಯದಲ್ಲಿ ಹರಿವ ನೀರು ದೇವಸ್ಥಾನ ಮತ್ತು ಜನಗಳ ಅವಶ್ಯಕತೆಯನ್ನು ಪೂರೈಸುತ್ತಿತ್ತು. ಹಿರಿಯ ಕಾಲುವೆಯ ಮೇಲೆ ಇಕ್ಕಟ್ಟಾದ ಪ್ರದೇಶದಲ್ಲಿ ಕಲ್ಲು ಹಾಸುಗಳನ್ನು ಕಾಲುವೆಯ ಮೇಲೆ ಹಾಸಿ ದೇವಾಲಯದ ಕೆಲಭಾಗಗಳನ್ನು ನಿರ್ಮಿಸಿದ ನಿದರ್ಶನಗಳಿವೆ.[3] ಇದರಿಂದಾಗಿ ದೇವಾಲಯದ ದೈನಂದಿನ ಅವಶ್ಯಕತೆಗಳನ್ನು ಪೂರೈಸಲು ಬೇಕಾಗುವ ಯತೇಚ್ಛ ನೀರಿನ ಪೂರೈಕೆಯಾಗುತ್ತಿತ್ತು. ನೀರು ದೊರಕುವಿಕೆಯಿಂದಾಗಿ ಹಿರಿಯ ಕಾಲುವೆಯ ದಡದಲ್ಲಿ ಉದ್ದಕ್ಕೂ ಅಲ್ಲಲ್ಲಿ ದೇವಾಲಯಗಳು, ದೇವಾಲಯಗಳ ಸಣ್ಣ ಸಮುಚ್ಚಯಗಳನ್ನು ಕಾಣಬಹುದು.

**ಬಾವಿಗಳು**

ವಿಜಯನಗರದಲ್ಲಿ ದೊಡ್ಡ, ಸಣ್ಣ ಬಾವಿಗಳು ಜನರ ಅವಶ್ಯಕತೆಯನ್ನು ಪೂರೈಸುತ್ತಿದ್ದವು. ಕೆಲವು ಪ್ರದೇಶಗಳಲ್ಲಿ ಮನೆಗೊಂದರಂತೆ ಬಾವಿಯಿರುವುದನ್ನು ಕಾಣಬಹುದು. ದೊಡ್ಡ ಬಾವಿಗಳಿಂದ ನೀರನ್ನು ಮೇಲಕ್ಕೆತ್ತಿ ಸಣ್ಣ ಮಣ್ಣಿನ ಕೊಳವೆಗಳ ಮೂಲಕ ಮಧ್ಯದ ಗಾತ್ರದ ಮೆಟ್ಟಿಲುಗಳಲ್ಲಿ ಶೇಖರಿಸಿ ಕೊಳವೆಗಳ ಮೂಲಕ ಗೊತ್ತಾದ ಸ್ಥಳಗಳಿಗೆ ಸರಬರಾಜು ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಮಾಲ್ಯವಂತ ದೇವಾಲಯದ ಉತ್ತರಕ್ಕಿರುವ ಪ್ರದೇಶ. ಇಲ್ಲಿ ಈ ವ್ಯವಸ್ಥೆಯ ಕುರುಹುಗಳಿವೆ.

ಬಾವಿಗಳು ನೀರಾವರಿಗೆ ಉತ್ತಮವಾದ ಸಾಧನವಾಗಿದೆ. ಬಾವಿಯನ್ನು ಘೋಷಿಸುವುದು ಧರ್ಮದ ಕಾರ್ಯವೆಂದು[4] ತಿಳಿದು ರಾಜ ಮಹಾರಾಜರಾದಿಯಾಗಿ ಎಲ್ಲರೂ ಭಾಗಿಯಾಗಿರುವುದನ್ನು ಶಾಸನಗಳು ಹಾಗೂ ಜನಪದ ಸಾಹಿತ್ಯದಿಂದಾಗಿ ತಿಳಿದುಬರುತ್ತದೆ. ಅಹಮದ್‌ಖಾನ್‌ಧರ್ಮಶಾಲೆಯ ಬಾವಿಯನ್ನು ತನ್ನ ಸ್ವಾಮಿ ಪ್ರೌಢದೇವರಾಯನಿಗೆ ಒಳಿತಾಗಲೆಂದು ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ.[5] ಎರಡನೇ ಹರಿಹರನ ಕಾಲದಲ್ಲಿ ಒರತೆಯ ಕುಂಡ ಬಾವಿಯನ್ನು ಕಟ್ಟಿಸಿ ಮೈಲಾರ ದೇವರನ್ನು ಪ್ರತಿಷ್ಠಾಪಿಸಿ ದಾರಿಯ ಪಕ್ಕ ಗಿಡ, ಮರಗಳನ್ನು ನಡೆಸಿದ ಬಗ್ಗೆ ಉಲ್ಲೇಖಿಸಲಾಗಿದೆ. ಹೀಗೆ ಈ ಬಾವಿಯ ನೀರನ್ನು ಭಕ್ತಾದಿಗಳು ಉಪಯೋಗಿಸುವಂತೆ ಮಾಡಿರುವುದು ತಿಳಿದುಬರುತ್ತದೆ.[6] ಕ್ರಿ.ಶ.೧೩೯೦ರ ಇನ್ನೊಂದು ಶಾಸನದಲ್ಲಿ ಬಾವಿಯನ್ನು ತೋಡಿಸಿದ ಬಗ್ಗೆ ಉಲ್ಲೇಖಿಸಲಾಗಿದೆ.[7] ಇದೇ ಕಾಲದ ಮತ್ತೊಂದು ಶಾಸನದಲ್ಲಿ ಬಾವಿಯನ್ನು ತೋಡಿಸಿ ಅಶ್ವಥ್ಥ ಮರವನ್ನು ನೆಡಸಿದ ಬಗ್ಗೆ ತಿಳಿಸಲಾಗಿದೆ.[8] ಈ ರೀತಿ ಪ್ರತಿಷ್ಠಿತ ವ್ಯಕ್ತಿಗಳು ಬಾವಿಯನ್ನು ತೋಡಿಸಿದ ಜನರಿಗೆ ಅನುಕೂಲ ಮಾಡಿದ ಅಂಶಗಳನ್ನು ತಿಳಿಯಬಹುದಾಗಿದೆ.[9] ಕೆಲವು ಬಾವಿಗಳನ್ನು ಭಕ್ತರ ಅನುಕೂಲಕ್ಕೆ ತೋಡಿಸಿದ್ದು, ಆ ಬಾವಿಗಳನ್ನು ಮೂಲದೇವರ ಹೆಸರಿನೊಡನೆ ಸೇರಿಸಿರುವುದು ಕಂಡುಬರುತ್ತದೆ. ರಂಗನಾಥ ಬಾವಿ, ಲಿಂಗದ ಬಾವಿ, ಇಲ್ಲಿನ ರಂಗನಾಥ ಹಾಗೂ ಲಿಂಗದ ಹೆಸರಿನೊಡನೆ ಬಾವಿಯನ್ನು ಸೇರಿಸಿರುವುದನ್ನು ಗಮನಿಸಬಹುದಾಗಿದೆ.[10] ನಾಡ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ತಾಂತ್ರಿಕ ಸಾಧನದ ಅವಶ್ಯಕತೆಯಿರುತ್ತದೆ. ಚರ್ಮದ ಚೀಲ ಅಥವಾ ಕಬ್ಬಿಣದ ದೊಡ್ಡ ಪಾತ್ರೆಗಳ ಸಹಾಯದಿಂದ ಎತ್ತುಗಳನ್ನು ಬಳಕೆ ಮಾಡಿ ನೀರನ್ನು ಎತ್ತುತ್ತಿದ್ದರು. ಈ ತೆರನಾದ ಬಾವಿಯ ವರ್ಣನೆಯನ್ನು ಶಾಸನಗಳಲ್ಲಿ ಕಾಣಬಹುದಾಗಿದೆ.[11]

ಜನರ ಸೌಕರ್ಯಕ್ಕಾಗಿ ತೊಟ್ಟಿಗಳನ್ನು ಕಟ್ಟಿಸಿ ಶಾಸನವನ್ನು ಬರೆಸಿರುವ ಉಲ್ಲೇಖಗಳಿವೆ.[12] ಊರುಗಳ ಮಧ್ಯೆ ಸಂಪರ್ಕ ಕಲ್ಪಿಸುವ ಸಲುವಾಗಿ ರಸ್ತೆ ನಿರ್ಮಿಸುವಾಗ ಅಲ್ಲಲ್ಲಿ ದಾರಿಹೋಕರ ಅನುಕೂಲಕ್ಕಾಗಿ ಅವರವಟ್ಟಿಗೆಗಳನ್ನು ನಿರ್ಮಿಸಿ ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗಲು ದಾನವನ್ನು ನೀಡಿದ ಬಗ್ಗೆ ಉಲ್ಲೇಖವಿದೆ.[13] ಪ್ರಾಕೃತಿಕ ಚಿಲುಮೆಗಳ ಉಲ್ಲೇಖವನ್ನು ಶಾಸನದಲ್ಲಿ ಕಾಣಬಹುದು. ಇಂತಹ ಚಿಲುಮೆಗಳಿಗೆ ಉತ್ತಮವಾದ ಉದಾಹರಣೆ ಮುಕ್ತಿಋಣ ನಿರ್ಮಲ ತೀರ್ಥ ಇದು ಕಲಮಾಪುರದ ಆಗ್ನೇಯ ದಿಕ್ಕಿಗಿದೆ.[14]

**ಕಾಲುವೆಗಳು**

ವಿಜಯನಗರದ ಕಾಲದಲ್ಲಿ ಅನೇಕ ಕಾಲುವೆಗಳು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತಿದ್ದವು. ಈ ಕಾಲುವೆಗಳು ಪಟ್ಟಣದ ಮಧ್ಯಭಾಗದಲ್ಲಿ ಕೆಲವೊಮ್ಮೆ ಪಟ್ಟಣದ ಅಂಚಿನ ಭಾಗದಲ್ಲಿ ಹಾಯ್ದು ಹೋಗುತ್ತಿದ್ದವು. ಕೆಲವು ನಿಗದಿತ ಸ್ಥಳಗಳಲ್ಲಿ ಜನರ ಅನುಕೂಲಕ್ಕಾಗಿ ನೀರನ್ನು ತೆಗೆಯಲು ಸೋಪಾನಗಳು ಹಾಗೂ ಸಣ್ಣ ಸೇತುವೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ದೈನಂದಿನ ಉಪಯೋಗಕ್ಕೆ ಕಾಲುವೆಯ ನೀರನ್ನು ಬಳಸಿಕೊಳ್ಳಲಾಗುತ್ತಿತ್ತು.[15] ಹಿರಿಯ ಕಾಲುವೆ ಹಾಗೂ ಇನ್ನಿತರ ಕಾಲುವೆಗಳಿಂದ ಸಣ್ಣ ಕಾಲುವೆಗಳಿಗೆ ನೀರನ್ನು ಹರಿಯಬಿಡಲಾಗುತ್ತಿತ್ತು. ಕೆಲವು ಕಾಲುವೆಗಳನ್ನು ಇಂದೂ ಗುರುತಿಸಬಹುದಾಗಿದೆ. ಕೆಲವನ್ನು ಗುರುತಿಸುವುದು ಕಷ್ಟಕರವಾಗಿರುತ್ತದೆ.[16] ಕೆಲವು ವಿಶಿಷ್ಟ ಕಾಲುವೆಗಳ ಉಲ್ಲೇಖವನ್ನು ಶಾಸನಗಳಲ್ಲಿ ಕಾಣಬಹುದು. ಇದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಪೆನುಕೊಂಡು ಬಾಗಿಲು ಬಳಿಯ ಊಟದ ಕಾಲುವೆ[17] ಹೀಗೆಯೆ ಇನ್ನೊಂದು ಊಟದ ಕಾಲುವೆಯು ಮಹಾನವಮಿ ದಿಬ್ಬದ ದಕ್ಷಿಣಕ್ಕೆಯಿದ್ದು,[18] ಇಂದೂ ಜನಪದರು ಹಾಗೆಯೇ ಕರೆಯುತ್ತಾರೆ. ನದಿಯಿಂದ ಸಣ್ಣ ಕಾಲುವೆಗಳ ಮೂಲಕ ವಿದ್ಯಾರಣ್ಯ ಮಠ ಹಾಗೂ ವಿರೂಪಾಕ್ಷ ದೇವಾಲಯದ ಉಗ್ರಾಣ ಹಾಗೂ ಭಕ್ತಾದಿಗಳು ಉಪಯೋಗಕ್ಕೆ ದೇವಾಲಯದ ಹೊರ ಪ್ರಾಂಗಣದ ಮೂಲಕ ಹರಿದು, ಮುಂದೆ ದೇವಾಲಯದ ಉತ್ತರದ ಪ್ರಾಕಾರವನ್ನು ದಾಟಿ ಹೂದೋಟಕ್ಕೆ ಹರಿದಿರಬೇಕು.

**ಕೆರೆಗಳು**

ಕೆಲವು ಕಣಿವೆಗಳ ಪ್ರದೇಶಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ಶೇಖರಿಸಲಾಗುತ್ತಿತ್ತು. ಹೀಗೆ ಶೇಖರಿಸಿದ ನೀರನ್ನು ಸಣ್ಣ ಕಾಲುವೆಗಳ ಮೂಲಕ ಹಾಯಿಸಿ ಆಯಾಕಟ್ಟಿನ ಕೆಳಭಾಗದ ಪ್ರದೇಶದಲ್ಲಿ ವಾಸಿಸುವ ಜನರಿಗೆ ಒದಗಿಸಲಾಗುತ್ತಿತ್ತು. ಕೆಲವು ಪ್ರದೇಶಗಳಲ್ಲಿ ಸರಣಿ ಕಟ್ಟೆಗಳ ನಿರ್ಮಾಣವನ್ನು ಕಾಣಬಹುದು. ಇವುಗಳಿಂದ ಹರಿದ ನೀರು ದೊಡ್ಡ ಕೆರೆಯನ್ನು ಸೇರುತ್ತಿತ್ತು. ವಿಜಯನಗರದ ಅನೇಕ ಕೆರೆಗಳು ಹೂಳು ತುಂಬಿದ್ದು ಹೆಚ್ಚಿನ ಕೆರೆಗಳನ್ನು ಗುರುತಿಸುವುದು ಕಷ್ಟಕರವಾಗಿದೆ. ಅಲ್ಲದೆ ಕೆರೆಯ ಪ್ರದೇಶಗಳನ್ನು ಗದ್ದೆ ಹಾಗೂ ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ. ಶಾಸನಗಳಲ್ಲಿ ಹಲವಾರು ಕೆರೆಗಳ ಬಗೆಗೆ ಉಲ್ಲೇಖವಿದೆ. ಇವುಗಳಲ್ಲಿ ಮುಖ್ಯವಾದುದು ಭೂಪತಿ ಕೆರೆ,[19] ಅನಂತಾಪುರದಕೆರೆ,[20] ಕೃಷ್ಣರಾಯ ಸಮುದ್ರ,[21] ನಾಗಸಮುದ್ರ, ಕನ್ನಡಿಕೆರೆ.[22]

**ರಾಜಪ್ರಾಂಗಣದ ನೀರಿನ ವ್ಯವಸ್ಥೆ**

ರಾಜ ಪ್ರಾಂಗಣದಲ್ಲಿ ದೈನಂದಿನ ಬಳಕೆಗೆ ವ್ಯವಸ್ಥಿತವಾದ ನೀರಿನ ಸಂಪರ್ಕ ಜಾಲ ಹೊಂದಿದ್ದರು. ಇಲ್ಲಿ ನೀರನ್ನು ಸಣ್ಣ ಕಾಲುವೆಗಳ ಮೂಲಕ ಬೇಕಾದ ಸ್ಥಳಗಳಿಗೆ ತೆಗೆದುಕೊಳ್ಳಲಾಗುತ್ತಿತ್ತು. ಕೆಲವೊಮ್ಮೆ ನೀರನ್ನು ಸಣ್ಣ ಕೊಳವೆಗಳ ಮೂಲಕ ನಿಗದಿತ ಸ್ಥಳಗಳಿಗೆ ಹರಿಸಲಾಗುತ್ತಿತ್ತು. ನಗರದೊಳಗೆ ಸಣ್ಣ ಶೇಖರಣಾ ಕಟ್ಟೆಗಳನ್ನು ಆಯಾಕಟ್ಟಿನ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿತ್ತು. ಇಲ್ಲಿಗೆ ಸುತ್ತಲೂ ಪ್ರದೇಶದಿಂದ ಮಳೆಯ ನೀರು ಹರಿದು ಅಲ್ಲಿ ಶೇಖರಣೆಯಾಗುತ್ತಿತ್ತು. ನಂತರ ಅದನ್ನು ಬೇಕಾದಾಗ ಉಪಯೋಗಿಸುತ್ತಿದ್ದರು. ಈ ರೀತಿಯ ಕುರುಹುಗಳನ್ನು ಹಳ್ಳಿಕೆರೆ ಹಾಗೂ ಅದಕ್ಕೆ ಪೂರ್ವಕ್ಕಿರುವ ಸಣ್ಣ ಕಟ್ಟೆಗಳಿಂದ ಗುರುತಿಸಬಹುದಾಗಿದೆ. ಈ ಸಣ್ಣ ಕಟ್ಟೆಗಳು ಮಳೆಯ ನೀರು

ಸಣ್ಣ ಹಳ್ಳವಾಗಿ ಹರಿಯುವ ಪ್ರದೇಶಕ್ಕೆ ಅಡ್ಡಲಾಗಿ ನಿರ್ಮಾಣ ಮಾಡಿರುವುದನ್ನು ಕಾಣಬಹುದು ಈ ರೀತಿಯ ಕಟ್ಟೆಗಳಿಂದಾಗಿ ಆ ಪರಿಸರದ ಅಂತರ್ಜಲ ವೃದ್ಧಿಯಾಗಿದ್ದು ಕಂಡುಬರುತ್ತದೆ. ಕಮಲಾಪುರದ ಕೆರೆಯ ನೀರು ಮುಖ್ಯವಾದ ನೀರಿನ ಆಸರೆಯಾಗಿದ್ದು, ಅದರೊಡನೆ ಮನೆಗಳ ಸನಿಹದಲ್ಲಿ ಬಾವಿಗಳು, ಇಳಿಜಾರು ಪ್ರದೇಶಕ್ಕೆ ಅಡ್ಡಲಾಗಿ ಕಟ್ಟಿದ ಕಟ್ಟೆಗಳು ನೀರಿನ ಮುಖ್ಯ ಆಸರೆಯಾಗಿದ್ದವು.

ರಾಜ ಪ್ರಾಂಗಣಕ್ಕೆ ನೀರನ್ನು ಕಮಲಾಪುರದ ಕೆರೆಯಿಂದ ನೇರವಾಗಿ ಕಾಲುವೆಗಳ ಮೂಲಕ ಕೊಂಡೊಯ್ಯಲಾಗುತ್ತಿತ್ತು. ಅಂದು ನಿರ್ಮಿಸಿದ ನೀರಾವರಿಯ ಸಣ್ಣ ಕಾಲುವೆಗಳ ಕುರುಹುಗಳನ್ನು ಅಲ್ಲಲ್ಲಿ ಇಂದೂ ಕಾಣಬಹುದಾಗಿದೆ. ಕಲ್ಲಿನಲ್ಲಿ ನಿರ್ಮಿಸಿದ ಗೋಡೆ ಎರಡೂ ಪಕ್ಕದಲ್ಲಿ ಗಾರೆಯಿಂದ ಗಿಲಾವು ಮಾಡಿದ್ದು, ನೀರು ಸೋರಿಕೆಗೆ ಯಾವುದೇ ಅವಕಾಶವಿರಲಿಲ್ಲ. ಇದರಿಂದ ಅವ್ಯಾಹತವಾಗಿ ನೀರು ರಾಜಪ್ರಾಂಗಣಕ್ಕೆ ಹರಿಯುತ್ತಿತ್ತು. ಅಲ್ಲಿ ನೀರನ್ನು ಶೇಖರಣಾ ತೊಟ್ಟಿಗಳಲ್ಲಿ ಸಂಗ್ರಹಿಸಿ, ಮುಂದೆ ಅವಶ್ಯವಿದ್ದ ಸ್ಥಳಗಳಿಗೆ ಸಣ್ಣ ಕಾಲುವೆಗಳ ಮೂಲಕ ಹರಿಸಲಾಗುತ್ತಿತ್ತು. ಕೆಲವೊಮ್ಮೆ ಸಣ್ಣ ಕಾಲುವೆಗಳನ್ನು ಏಕಶಿಲೆಗಳಿಂದ ನಿರ್ಮಿಸಿರುವುದನ್ನು ಕಾಣಬಹುದು. ರಾಜಪ್ರಾಂಗಣದ ಅನೇಕ ಸಮುಚ್ಚಯಗಳಲ್ಲಿ ಬೇಕಾಗುವಷ್ಟು ನೀರನ್ನು ಸಂಗ್ರಹಿಸಲು ವಿವಿಧ ಅಳತೆಯ ಸಂಗ್ರಹಣಾ ತೊಟ್ಟಿಗಳಿವೆ. ಹೀಗೆ ಸಂಗ್ರಹಿಸಿದ ನೀರು ಅವರ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ ದೈನಂದಿನ ಇತರ ಕಾರ್ಯಗಳಿಗೂ ಅನುಕೂಲವಾಗುತ್ತಿತ್ತು. ಇಲ್ಲಿ ಉಪಯೋಗಿಸಿದ ನಂತರ ಬಂದ ಮಲಿನ ನೀರನ್ನು ಸಣ್ಣ ಕಾಲುವೆಗಳ ಮೂಲಕ ದೊಡ್ಡ ಚರಂಡಿಗೆ ಹರಿಸಲಾಗುತ್ತಿತ್ತು. ಸಣ್ಣ ಕಾಲುವೆಗಳಲ್ಲಿ ನೀರು ವೃಥಾ ವ್ಯಯವಾಗದಂತೆ ಎಚ್ಚರ ವಹಿಸಿದ್ದರು. ಸಣ್ಣ ಕಲ್ಲಿನ ಗೋಡೆಗಳಿಗೆ ಗಾರೆಯ ಗಿಲಾವು ಮಾಡಿ ಅದರ ಮೇಲೆ ಸಣ್ಣ ಚಪ್ಪಡಿಯ ಕಲ್ಲುಗಳ ಹೊದಿಕೆಯನ್ನು ಹೊದಿಸಲಾಗಿತ್ತು. ಕಮಲಾಪುರದ ಕೆರೆಯಿಂದ ಗಾರೆಯ ಕಾಲುವೆಗಳ ಮುಖಾಂತರ ರಾಜಪ್ರಾಂಗಣದ ಶೇಖರಣಾ ತೊಟ್ಟಿಗಳು, ಕಾರಂಜಿ, ಜಲಕ್ರೀಡಾ, ಸೌಧಗಳು ಹೀಗೆ ಹಲವು ಪ್ರದೇಶಗಳಿಗೆ ನೀರನ್ನು ಹರಿಸಿ ಅದರ ಉಪಯೋಗ ಪಡೆಯುತ್ತಿದ್ದರು.

ರಾಜ ಪ್ರಾಂಗಣದಲ್ಲಿರುವ ಬೃಹತ್‌ತೊಟ್ಟಿ, ಇತ್ತೀಚೆಗೆ ಉತ್ಖನನದಲ್ಲಿ ದೊರಕಿದ ಪುಷ್ಕರಣಿ, ಹಾಗೂ ಅವುಗಳಿಗೆ ನೀರನ್ನು ಹಾಯಿಸಲು ನಿರ್ಮಿಸಿರುವ ಏಕಶಿಲಾ ತೊಟ್ಟಿಗಳು ಗಮನಾರ್ಹ. ಈ ಪುಷ್ಕರಣಿಯು ಚಚ್ಚೌಕವಾಗಿದೆ. ಮೇಲಿನಿಂದ ಕೆಳಗಿನವರೆವಿಗೂ ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಈ ಪುಷ್ಕರಣಿಯನ್ನು ಹಸಿರು ಬಳಪದ ಕಲ್ಲಿನಿಂದ ಕಟ್ಟಲಾಗಿದೆ. ಇಲ್ಲಿನ ಹಲವು ಮೆಟ್ಟಿಲುಗಳನ್ನು ಗುಂಪು, ಗುಂಪಾಗಿ ಒಂದರ ಮೇಲೆ ಒಂದರಂತೆ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಇಲ್ಲಿ ಪ್ರತಿಯೊಂದು ಕಲ್ಲಿಗೂ ಅದರ ದಿಕ್ಕು ಮತ್ತು ಸಂಖ್ಯೆಯನ್ನು ನೀಡಲಾಗಿದೆ. ಬಹುಶಃ ಕಲ್ಲಿನ ಗಣಿಯ ಬಳಿಯೆ ಇವುಗಳಿಗೆ ಸಂಖ್ಯೆಗಳನ್ನು ನೀಡಿ, ಪ್ರತಿಯೊಂದು ಕಲ್ಲು ಯಾವ ಸ್ಥಳದಲ್ಲಿ ಸೇರಬೇಕು ಎನ್ನುವುದನ್ನು ನಿರ್ಧರಿಸಲಾಗಿತ್ತು ಎಂದು ತೋರುತ್ತದೆ. ಕಲ್ಲು ಗಣಿಯಲ್ಲೇ ನಿಗದಿತ ಸಂಖ್ಯೆ ನೀಡಿದ್ದರಿಂದ ಪ್ರತಿಯೊಂದು ಕಲ್ಲಿಗೂ ಒಂದು ಗೊತ್ತಾದ ಸ್ಥಳವನ್ನು ಪೂರ್ವಭಾವಿಯಾಗಿ ನಿರ್ಧರಿಸಿರುವುದು ತಿಳಿಯುತ್ತದೆ. ಈ ರೀತಿ ಬಳಪದ ಕಲ್ಲಿನ ನಿರ್ಮಿತಿಗಳನ್ನು ಕಲ್ಯಾಣಿ ಚಾಲುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಕಾಣಬಹುದು.

ಈ ಪುಷ್ಕರಣಿಗೆ ನೀರನ್ನು ಕಲ್ಲಿನ ದೋಣಿಯ ಮೂಲಕ ಒದಗಿಸಲಾಗುತ್ತಿತ್ತು. ಅಲ್ಲದೆ ಈ ಕೊಳವು ಸಾಕಷ್ಟು ಆಳದಲ್ಲಿರುವುದರಿಂದ ಅಂತರ್ಜಲದಿಂದಾಗಿ ಪುಷ್ಕರಣಿಯಲ್ಲಿ ನೀರು ಒಂದು ಗೊತ್ತಾದ ಮಟ್ಟದವರೆಗೂ ಇರುತ್ತಿತ್ತು.[23] ಈ ಪುಷ್ಕರಣಿಯು ಆಯಾಕಟ್ಟಿನ ಸ್ಥಳದಲ್ಲಿದೆ. ಇದರ ವಾಸ್ತುವಿನ್ಯಾಸವನ್ನು ಗಮನಿಸಿದಲ್ಲಿ ಈ ನೀರನ್ನು ಧಾರ್ಮಿಕ ಕ್ರಿಯೆಗಳಿಗೆ ಉಪಯೋಗಿಸಿರುವುದನ್ನು ಕಾಣಬಹುದು. ಉತ್ಖನನದಲ್ಲಿ ದೊರೆತ ಸಣ್ಣ ಅಲಂಕಾರಿಕ ಮಡಿಕೆಗಳು ಈ ಪುಷ್ಕರಣಿಯ ಉಪಯೋಗದ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲವು. ಇಂದಿಗೂ ಹಬ್ಬ, ದೇವರ ಎಡೆ ಮುಂತಾದ ಸಂದರ್ಭಗಳಲ್ಲಿ ಇವುಗಳನ್ನು ಉಪಯೋಗಿಸಲಾಗುತ್ತಿದೆ. ಹಾಗಾಗಿ ಈ ನೀರನ್ನು ಒಂದು ನಿಗದಿತ ಆಚರಣೆಗೆ ಅಂದರೆ ಪವಿತ್ರ ಸ್ನಾನ ಅಥವಾ ದೇವತಾ ಕಾರ್ಯಗಳಿಗೆ ಉಪಯೋಗಿಸಿರಬಹುದು. ನೀರಿನ ಸೌಲಭ್ಯವು ರಾಜ್ಯ ಪ್ರಾಂಗಣದ ಕಟ್ಟಡಗಳಲ್ಲಿ ವಾಸಿಸುವ ಜನರಿಗೆ ಮುಖ್ಯವಾಗಿ ಬೇಕಾಗಿದ್ದು ಅದರ ವ್ಯವಸ್ಥಿತ ಸರಬರಾಜಿಗೆ ಬೇಕಾಗುವ ಅನುಕೂಲತೆಯನ್ನು ಕಟ್ಟಿಸಿಕೊಂಡಿದ್ದರು. ನೀರು ಇದ್ದ ಸ್ಥಳಗಳಿಗೆ ನಿಗದಿತವಾಗಿ ಹರಿದುಬರುವುದು ಇದರ ವೈಶಿಷ್ಟ್ಯ. ಇಲ್ಲಿಗೆ ನೀರನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹರಿಯಿಸುತ್ತಿದ್ದರೆಂದು ತಿಳಿಯಲಾಗಿದೆ. ಅಲ್ಲದೆ ಅರಮನೆಗೆ ವಿಶೇಶ ಅತಿಥಿಗಳು ಆಗಮಿಸಿದಾಗ ಹಬ್ಬದ ದಿನಗಳಲ್ಲಿ

ಮಾತ್ರ ಉಪಯೋಗಿಸುತ್ತಿದ್ದರೆಂದು ಅಭಿಪ್ರಾಯಪಡಲಾಗಿದೆ. ಇಲ್ಲಿಯ ಅಗತ್ಯತೆ ಹಾಗೂ ಕುರುಹುಗಳನ್ನು ನೋಡಿದಲ್ಲಿ ಈ ಅಭಿಪ್ರಾಯವು ಸರಿಯಲ್ಲವೆನಿಸುತ್ತದೆ. ರಾಜ ಪ್ರಾಂಗಣದಲ್ಲಿ ನೀರು ತೀವ್ರವಾದ ಅಗತ್ಯತೆ ಹೊಂದಿದ್ದರಿಂದ ಸದಾ ನೀರಿನ ಅನುಕೂಲತೆಬೇಕಾಗಿತ್ತು. ಅಲ್ಲದೆ ದೊಡ್ಡ ಸಂಗ್ರಹಣಾ ತೊಟ್ಟಿಗಳನ್ನು ಶುಚಿಗೊಳಿಸಿದಾಗ ಮಲಿನ ನೀರು ಹೊರ ಹೋಗಲು ದ್ವಾರಗಳಿರುವುದನ್ನು ಗಮನಿಸಿದಲ್ಲಿ ನೀರಿನ ಪ್ರಾಮುಖ್ಯತೆ ತಿಳಿಯುತ್ತದೆ.

ರಾಜ ಪ್ರಾಂಗಣದಲ್ಲಿ ನೀರನ್ನು ಹರಿಬಿಡಲು ಕಲ್ಲಿನ ದೋಣಿಗಳು ಕೆಲವು ಕಟ್ಟಡದ ಬಳಿಯಿರುವ ತೊಟ್ಟಿಗಳು ಸಂಗ್ರಹಣಾ ವ್ಯವಸ್ಥೆಗಳು ನೀರನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಉಪಯೋಗಿಸಿದ ಬಗೆಗೆ ಉತ್ತಮ ಉದಾಹರಣೆಯಾಗಿವೆ. ರಾಜ ಪ್ರಾಂಗಣದ ಮಧ್ಯದಲ್ಲಿರುವ ಬೃಹತ್ ಬಾವಿ, ಕಲ್ಲಿನ ದೋಣಿಯ ಹರಿವು ದಿಕ್ಕುಬದಲಿಸುವ ಮೂಲೆಯಲ್ಲಿದೆ. ಹೊರಗಿನ ನೀರು ಸರಬರಾಜು ವ್ಯತ್ಯಯವಾದಾಗ ಈ ಬಾವಿಗೆ ರಾಟೆಯನ್ನು ಹೊಂದಿಸಲು ಬಾವಿಯ ಎರಡು ಪಕ್ಕದಲ್ಲಿ ಚಪ್ಪಡಿ ಕಲ್ಲುಗಳಿದ್ದು ಮೇಲ್ಭಾಗದಲ್ಲಿ ದೊಡ್ಡ ರಂಧ್ರವಿದೆ. ಇದರ ಮೂಲಕ ಅಡ್ಡ ತೊಲೆಗಳನ್ನು ಹಾಕಿ ರಾಟೆಯನ್ನು ಕೂಡಿಸಿರಬೇಕು. ಈ ರಾಟೆಯಿಂದ ನೀರನ್ನು ಮೇಲೆತ್ತಿ ಕಲ್ಲಿನ ದೋಣಿಗಳ ಮೂಲಕ ಹರಿಯಬಿಡಲಾಗುತ್ತಿತ್ತು. ಈ ಬಾವಿಯ ಪಕ್ಕದಲ್ಲಿರುವ ಪುಷ್ಕರಣಿಯಂತೆ ಈ ಬಾವಿಯಲ್ಲೂ ಉತ್ತಮ ಅಂತರ್ಜಲದ ಸೆಲೆಯಿದ್ದು ಪರಿಪೂರ್ಣ ನೀರಿನ ಸರಬರಾಜಿಗೆ ಉತ್ತಮ ಸಾಧನವಾಗಿತ್ತು. ರಾಜಪ್ರಾಂಗಣದಲ್ಲಿ ಬಾವಿಗಳ ಪ್ರಮಾಣ ಕಡಿಮೆಯಿದೆ. ಆದರೆ ನೀರು ಶೇಖರಣಾ ತೊಟ್ಟಿಗಳು ಹೇರಳವಾಗಿ ಕಂಡುಬಂದಿವೆ. ಅಂದರೆ ಹೊರಗಿನಿಂದ ಸರಬರಾಜದ ನೀರನ್ನು ಸಂಗ್ರಹಿಸಿ ಉಪಯೋಗಿಸಲಾಗುತ್ತಿತ್ತು. ಮಳೆ ನೀರು ಒಂದು ಕಡೆ ಹರಿದು ಅದನ್ನು ಸಂಗ್ರಹಿಸಲು ನೀರಿನ ತೊಟ್ಟಿಗಳನ್ನು ಮಾಡಲಾಗಿತ್ತು. ಕೆಲವು ಕಟ್ಟಡಗಳ ಗಾರೆಯಿಂದ ಲೇಪಿಸಿದ ಸಣ್ಣ ಕಾಲುವೆಗಳು ನಿರ್ದಿಷ್ಟ ತೊಟ್ಟಿಗೆ ಜೋಡಣೆಯಾಗಿವೆ. ಇವು ಕಟ್ಟಡದ ಬಳಿ ಇದ್ದ ನೀರನ್ನು ಒಯ್ಯುವ ವ್ಯವಸ್ಥೆಯಾಗಿರಬೇಕು. ಇಲ್ಲಿ ಸಂಗ್ರಹವಾದ ನೀರನ್ನು ದಿನಬಳಕೆಗೆ ಉಪಯೋಗಿಸಿರಬಹುದು.

ನೀರನ್ನು ಹರಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ಗಾರೆಯಿಂದ ಭದ್ರಪಡಿಸಿರುವುದರಿಂದ ಈ ಕೊಳವೆಗಳು ಒಡೆದ ಹೋಗುವ ಅಥವಾ ಹಾಳಾಗುವುದನ್ನು ತಡೆಯಬಹುದಾಗಿದೆ. ಅಲ್ಲದೆ ನೀರು ಒತ್ತಡದಲ್ಲಿ ಹರಿಯುವ ಅನುಕೂಲವಾಗಿದೆ. ಒತ್ತಡ ಹಾಗೂ ಗುರುತ್ವಾಕರ್ಷಣೆಯಿಂದ ರಭಸವಾಗಿ ಹರಿಯುವ ನೀರನ್ನು ಕಾರಂಜಿ ಕೃತಕ ನೀರಿನ ಹರಿವುಗಳನ್ನು ನಿರ್ಮಿಸಲು ಉಪಯೋಗಿಸಲಾಗುತ್ತಿತ್ತು.[24] ಜಲಕ್ರೀಡಾ ಸೌಧಗಳಿಗೆ ನೀರನ್ನು ಹರಿಸುವಾಗ ಕೆಸರು ಸಂಗ್ರಹಕ್ಕಾಗಿ ಅಲ್ಲಲ್ಲಿ ಸಣ್ಣ ತೊಟ್ಟಿಗಳಿದ್ದು, ಆಗಿಂದಾಗ್ಗೆ ಸಂಗ್ರಹವಾದ ಕೆಸರನ್ನು ತೆಗೆಯಲಾಗುತ್ತಿತ್ತು. ಇದೇ ರೀತಿಯ ವ್ಯವಸ್ಥೆ ಸುಟ್ಟ ಮಣ್ಣಿನ ಕೊಳವೆಗಳಲ್ಲಿ ನೀರು ಹಾಯಿಸುವಾಗಲೂ ಮಾಡಿರುವುದು ಕಂಡುಬರುತ್ತದೆ. ಈ ವ್ಯವಸ್ಥೆಯಿಂದ ಕೆಸರನ್ನು ಹೊರತುಪಡಿಸಿದ ತಿಳಿನೀರು ಉಪಯೋಗಕ್ಕೆ ದೊರಕುತ್ತಿತ್ತು. ಅಲ್ಲದೆ ಕೊಳವೆಗಳಲ್ಲಿ ಕೆಸರು ಸಂಗ್ರಹವಾಗುವದನ್ನು ತಡೆಯಲು ಉತ್ತಮ ಮಾರ್ಗವಾಗಿತ್ತು.

ಸುಟ್ಟಮಣ್ಣಿನ ಕೊಳವೆಗಳ ಮುಖಾಂತರ ನೀರನ್ನು ಹಾಯಿಸುವುದನ್ನು ವಿಜಯನಗರ ಕಾಲದ ಪೂರ್ವದಲ್ಲಿ ಹೇರಳವಾಗಿ ಬಳಸಿರುವುದು ಕಂಡುಬಂದಿಲ್ಲ. ಆದರೆ ವಿಜಯನಗರದ ಪಕ್ಕದ ರಾಜ್ಯವಾದ ಬಹಮನಿ ಸುಲ್ತಾನರ ಹಾಗೂ ಅವರ ವಾಸ್ತು ವಿನ್ಯಾಸಗಳಲ್ಲಿ ಬಳಸಿದ್ದಾರೆ. ವಾಸ್ತು ಮತ್ತು ತಾಂತ್ರಿಕತೆಯಲ್ಲಿ ಪರಸ್ಪರ ಕೊಡುಕೊಳ್ಳುವಿಕೆಯಿಂದ ಸುಟ್ಟ ಮಣ್ಣಿನ ಕೊಳವೆಗಳ ಬಳಕೆ ಹೆಚ್ಚಾಗಿತ್ತೆಂದು ಕಾಣುತ್ತದೆ.

**ನೀರಾವರಿ ವ್ಯವಸ್ಥೆಯ ಕಾಲಮಾನ**

ರಾಜ ಪ್ರಾಂಗಣದ ನೀರಾವರಿ ಸೌಲಭ್ಯಗಳ ಬಗೆಗೆ ಅಧಿಕೃತವಾಗಿ ಕಾಲಮಾನವನ್ನು ನಿರ್ಧರಿಸಲಾಗುವುದಿಲ್ಲ. ಇಲ್ಲಿಯ ರಚನೆಗಳ ಬಗೆಗೆ ಶಾಸನಗಳಲ್ಲಿ ಮಾಹಿತಿ ಸಿಗುವುದಿಲ್ಲ. ಅಥವಾ ಇನ್ನಾವುದೇ ಮೂಲದಿಂದಲೂ ತಿಳಿಯುವುದು ಕಷ್ಟಕರವಾಗುತ್ತದೆ. ಸ್ತರ ವಿಂಗಡನೆಯ ಮೂಲಕ ದಾಖಲಿಸುವುದಕ್ಕೆ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ನೀರಿನ ಸೌಕರ್ಯದ ಪ್ರದೇಶಗಳು ಹಾಗೂ ಕಟ್ಟಡಗಳು ಹಲವಾರು ಬದಲಾವಣೆಗಳನ್ನು ಹೊಂದಿವೆ. ಕೆಲವು ಸಂದರ್ಭಗಳಲ್ಲಿ ಉಪಯೋಗಿಸಲು ಯೋಗ್ಯವಾದ ವಿಜಯನಗರದ ಪ್ರಾರಂಭಿಕ ಹಂತದ ಕಟ್ಟಡದ

ಕೆಲವು ವಸ್ತುಗಳು ಬಳಕೆಗೆ ಯೋಗ್ಯವಾದುದರಿಂದ ಪುನಃ ಉಪಯೋಗಿಸಲಾಗಿದೆ. ಇದರಿಂದಾಗಿ ಈ ನೀರಾವರಿ ವ್ಯವಸ್ಥೆಯ ಕಾಲವನ್ನು ನಿರ್ಧರಿಸಲಾಗಿಲ್ಲ. ರಾಜಪ್ರಾಂಗಣದ ಬೃಹತ್‌ನೀರಿನ ತೊಟ್ಟಿ, ಅಷ್ಟಕೋನಾಕೃತಿಯ ಕಾರಂಜಿ ಮತ್ತು ಅಷ್ಟಕೋನಾಕೃತಿಯ ಜಲಸೌಧಗಳ ವಾಸ್ತುವಿನ್ಯಾಸ ಆಕರ್ಷಕವಾಗಿವೆ. ಉತ್ತಮವಾಗಿ ಸಿದ್ಧಪಡಿಸಿದ ಕಲ್ಲುಗಳು ಹಾಗೂ ಗಾರೆಯ ಲೇಪನ ಇಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣಗಳು. ಈ ಕಟ್ಟಡಗಳಲ್ಲಿ ಸ್ವಲ್ಪ ರೀತಿಯ ಬದಲಾವಣೆಗಳನ್ನು ಮಾಡಲಾಗಿದೆ. ಮೇಲೆ ತಿಳಿಸಿದ ರೀತಿಯ ಕಟ್ಟಡಗಳು ತಮ್ಮ ವೈಭವದ ಸಂಕೇತವಾಗಿ ನಿಲ್ಲುವುದರಿಂದ ರಾಜ್ಯದಲ್ಲಿ ಸಮೃದ್ಧಿ, ಸುಭಿಕ್ಷೆ, ಆರ್ಥಿಕ ಸಬಲತೆಯಿದ್ದಾಗ ನಿರ್ಮಿಸಿರಬಹುದೆಂದು ತೋರುತ್ತದೆ. ಒಟ್ಟಾರೆ ಹೇಳುವುದಾದರೆ ವಿಜಯನಗರದಲ್ಲಿ ಉತ್ತಮವಾದ ನೀರಿನ ಪೂರೈಕಾ ವ್ಯವಸ್ಥೆ ಇದ್ದಿತೆಂದು ಹೇಳಬಹುದು.

**ಆಕರ**

ವಿಜಯನಗರ ಅಧ್ಯಯನ, ಸಂ.೮, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೧೬-೧೨೫

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಸಿಂಗ್‌ಆರ್. ಎಲ್., ಮತ್ತು ಇತರರು, ಕರ್ನಾಟಕ ಪ್ಲೆಟೊ ಇನ್‌ಇಂಡಿಯಾ ಎ. ರೀಜನಲ್‌ಜಿಯಾಗ್ರಫಿ, ನ್ಯಾಷನಲ್‌ಜಿಯಾಗ್ರಫಿಕ್‌ಸೊಸೈಟಿ ಆಫ್‌ಇಂಡಿಯಾ, ವಾರಣಾಸಿ, ೧೯೭೧.

[2] ವಿಪ್ರೊರಿ, ೧೯೮೩-೮೪, ಸಂ. ೭೩

[3] ಅದೇ, ಸಂ. ೧೮

[4] ಕೊಟ್ರಯ್ಯ, ಸಿಟಿ.ಎಂ., ಇರಿಗೇಷನ್‌ಸಿಸ್ಟಮ್‌ಇನ್‌ವಿಜಯನಗರ, ಮೈಸೂರು, ೧೯೯೫, ಪು. ೯೬

[5] ಸೌ. ಇಂ. ಇ., ೯(೨), ಸಂ. ೪೪೭

[6] ವಿಪ್ರೊರಿ ३, ೧೯೯೧, ಪು. ೧೦೫, ಸಂ. ೪೯-೫೦

[7] ಅದೇ, ಸಂ. ೨೬, ಪು. ೩೨

[8] ಅದೇ, ಸಂ. ೨೭, ಪು. ೩೩

[9] ಜಂಕಿನ್ಸ್‌ಡಿ.ಡಿ., ರಿಗೇಷನ್‌ಅಂಡ್‌ವಾಟ್‌ಸಪ್ಲೈ ಸಿಸ್ಟಮ್‌ಇನ್‌ವಿಜಯನಗರ ಎಂಪೈಯ್, ನ್ಯೂಡೆಲ್ಲಿ, ೧೯೭೭, ಪು. ೯೮

[10] ವಿಪ್ರೊರಿ, ೧೯೮೪-೮೭, ಸಂ. ೧೦೮-೧೧೦, ಪು. ೫೦ ಮತ್ತು ೫೧

[11] ಸೌ. ಇಂ. ಇ. ೯(೨) ಪು. ೫೩೩, ೫೪೮

[12] ವಿಪ್ರೂರಿ, ೮೪-೮೭, ಸಂ. ೩೩ ೧೨೮

[13] ಅದೇ, ಸಂ. ೧೦೬-೧೬೭

[14] ಅದೇ, ಸಂ. ೧೦೯

[15] ಸೀವೆಲ್‌ಫ್‌ರ್‌ಗಾಟನ್‌ಎಂಪೈಯ್, ಲಂಡನ್; ೧೯೦೦, ಪು. ೫೧ ಮತ್ತು ೩೦೧

[16] ಸೌ. ಇಮ. ಇ. ೫, ಸಂ. ೬೬೮

[17] ಅದೇ, ೪, ಸಂ. ೨೪೫

[18] ವಿಜಯನಗರ ಅಧ್ಯಯನ ೧,೧೯೯೬, ಪು. ೬೪

[19] ಸೌ. ಇಂ.ಇ ೯(೨), ಸಂ, ೫೦೪ ೨೧

[20] ಸೌ. ಇಂ.ಇ ೯(೨), ಸಂ. ೨೪೫

[21] ವಿಪ್ರೂರಿ ೮೪ ೮೭, ಸಂ. ೧೨೬

[22] ಅದೇ, ಸಂ. ೮೯

[23] ಜಂಕಿನ್ಸ್‌ಡಿ.ಡಿ. ಇರಿಗೇಷನ್‌ಅಂಡ್‌ವಾಟ್‌ಸಪ್ಲೈ ಸಿಸ್ಟಮ್‌ಇನ್‌ವಿಜಯನಗರ ಎಂಪೈಯ್, ನ್ಯೂಡೆಲ್ಲಿ, ೧೯೭೭, ಪು. ೭೮

[24] ಕೊಟ್ರಯ್ಯ ಸಿ.ಟಿ.ಯಂ. ಇರಿಗೇಷನ್‌ಸಿಸ್ಟಮ್‌ಇನ್‌ವಿಜಯನಗರ ಮೈಸೂರು, ೧೯೯೫, ಪು. ೧೦೨

## ೩೯. ಹಂಪಿ ಮೆಟ್ಟಿಲು ಪುಷ್ಕರಣಿಯ ನಿರ್ಮಾಣ ತಾಂತ್ರಿಕತೆ

ಹಂಪಿ ಮೆಟ್ಟಿಲು ಪುಷ್ಕರಣಿಯು ಪರಿಪೂರ್ಣ ಪ್ರಮಾಣಬದ್ಧ ಸುಂದರ ನಿರ್ಮಾಣವಾಗಿದೆ. ಈ ಮೆಟ್ಟಿಲು ಪುಷ್ಕರಣಿಯು ನೆಲಮಟ್ಟಕ್ಕಿಂತ ಕೆಳಗೆ ಇದ್ದು ಇದನ್ನು ಕೇಂದ್ರ ಪುರಾತತ್ವ ಇಲಾಖೆಯವರು ೧೯೮೪-೮೫ನೇ ಸಾಲಿನಲ್ಲಿ ಶೋಧಿಸಿದ್ದಾರೆ. ಪುಷ್ಕರಣಿಯು ಐದು ಹಂತಗಳಲ್ಲಿದೆ. ಪ್ರತಿ ಮೇಲಿನ ಹಂತವು ಕೆಳಗಿನ ಹಂತಕ್ಕಿಂತ ಹೆಚ್ಚು ವಿಸ್ತಾರವಾಗಿದೆ. ಪ್ರತಿ ಹಂತವೂ ಚೌಕಾಕಾರವಾಗಿದೆ.

ಮೊದಲನೇ ಹಂತವು ೬.೯೦ x ೬.೯೦ ಮೀಟರ್‌ಇದ್ದು, ಆಳವು ೨.೪೫ ಮೀಟ್‌ರ್‌ಇದೆ. ಇದರ ನಾಲ್ಕೂ ದಿಕ್ಕಿನಲ್ಲಿ ೧೧ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳು ಅಗಲ ಮಾತ್ರ ಹೆಚ್ಚಾಗುತ್ತಾ, ಕೊಳದ ಆಳಕ್ಕೆ ಪಕ್ಕಕ್ಕೆ ಚಲಿಸುತ್ತಾ ಇಳಿಯಬೇಕಾಗುತ್ತದೆ. ಎರಡನೇ, ಮೂರನೇ ನಾಲ್ಕನೇ ಮತ್ತು ಐದನೇ ಹಂತಗಳು ೬.೨೦ x ೬.೨೦ ಮೀ, ೧೨.೬೫ x ೧೨.೬೫ ಕಿ.ಮೀ, ೧೬.೧೦ x ೧೬.೧೦ ಮೀ. ಮತ್ತು ೨೦.೭೦ x ೨೦.೭೦ಮೀಟರ್‌ಕ್ರಮವಾಗಿ ಇದೆ. ಪ್ರತಿ ಹಂತದಲ್ಲಿ ಪಿರಾಮಿಡ್‌ಆಕಾರದ ೦೬ ಮೆಟ್ಟಿಲುಗಳಿವೆ. ಇವು ಅಗಲದಲ್ಲಿ ಮತ್ತು ಉದ್ದದಲ್ಲಿ ಹೆಚ್ಚಾಗುತ್ತಾ, ಪಕ್ಕಕ್ಕೂ ಮತ್ತು ಮುಂದಕ್ಕೂ ಚಲಿಸಲು ಅನುವು ಮಾಡಿಕೊಡುತ್ತವೆ.

ಎರಡನೇ ಹಂತದಲ್ಲಿ ಪ್ರತಿ ದಿಕ್ಕಿನಲ್ಲೂ ಮೂರು ಪಿರಮಿಡ್‌ಆಕಾರದ ಮೆಟ್ಟಿಲುಗಳಿವೆ. ಮೂರನೇ, ನಾಲ್ಕನೇ ಮತ್ತು ಐದನೇ ಹಂತದ ಪ್ರತಿ ದಿಕ್ಕಿನಲ್ಲಿ ಐದು, ಏಳು ಮತ್ತು ಒಂಭತ್ತು ಪಿರಾಮಿಡ್‌ಆಕಾರದ ಮೆಟ್ಟಿಲುಗಳಿವೆ. ಕೋಷ್ಟಕ ರೂಪದಲ್ಲಿ ಮೆಟ್ಟಿಲುಗಳ ವಿವರ ಹೀಗಿದೆ.

| ಹಂತ | ಹಂತದಲ್ಲಿರುವ ಮೆಟ್ಟಿಲು | ನಾಲ್ಕು ದಿಕ್ಕಿನ ಮೆಟ್ಟಿಲುಗಳು |
|---|---|---|
| ೧ | ೧ | ೪ |
| ೨ | ೩ | ೧೨ |
| ೩ | ೫ | ೨೦ |
| ೪ | ೭ | ೨೮ |
| ೫ | ೯ | ೩೬ |
| | ಒಟ್ಟು | ೧೦೦ |

ಮೆಟ್ಟಿಲು ಪುಷ್ಕರಣಿಯ ಪ್ರತಿ ಹಂತದ ಆಳವು ಸುಮಾರು ೧.೦೫ ಮೀಟರ್‌ಇದ್ದು ಒಟ್ಟು ಆಳವು ೬.೩೫ ಮೀಟರ್‌ಇದೆ. ಪುಷ್ಕರಣಿಯ ತಳಭಾಗದಲ್ಲಿ ಕಲ್ಲುಗಳನ್ನು ಹಾಸಿದ್ದು ಅದರ ಕೆಳಗಡೆ ಮರಗಳನ್ನು ಒದಗಿಸಲಾಗಿದೆ. ಮರಳಿನ ಕವಚದಿಂದ ತಿಳಿನೀರು (ಶುದ್ಧ ನೀರು) ಮಾತ್ರ ಕೊಳದೊಳಗೆ ಬರಲು ಸಹಕಾರಿಯಾಗಿದೆ. ಮೆಟ್ಟಿಲು ಪುಷ್ಕರಣಿಯು ಪೂರ್ವನಿಯೋಜಿತ ಕಟ್ಟಡವಾಗಿದ್ದು, ಇದಕ್ಕೆ ಸಂಬಂಧಿಸಿದ ಕಲ್ಲುಗಳನ್ನು ಮೊದಲೇ ಸಿದ್ಧಪಡಿಸಲಾಗಿತ್ತೆಂದು ಕಂಡುಬರುತ್ತದೆ. ಏಕೆಂದರೆ, ಪ್ರತಿಯೊಂದು ಕಲ್ಲಿನ ಮೇಲೆ ಸಂಖ್ಯೆ, ಚಿಹ್ನೆ ಮತ್ತು ಅಕ್ಷರಗಳು ಇವೆ. ಇದರ ನಿರ್ಮಾಣ ತಾಂತ್ರಿಕತೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

**೧. ಅಕ್ಷರಗಳು:** ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳನ್ನು ಆಯಾದಿಕ್ಕಿನ ಮೊದಲ ಅಕ್ಷರವನ್ನು ಬರೆದು ಸೂಚಿಸಲಾಗಿದೆ. ಅವು ಕ್ರಮವಾಗಿ ಉ, ದ, ತು ಮತ್ತು ಪ ಎಂದು ಸೂಚಿಸಲಾಗಿದೆ. ದಕ್ಷಿಣ ದಿಕ್ಕಿನ ಕೆಲವು ಕಲ್ಲುಗಳ ಮೇಲೆ ತೆಕ ಎಂದು ಸೂಚಿಸಲಾಗಿದೆ. ಇದು ತೆಂಕಣ(ದಕ್ಷಿಣ) ಪದದ ಸಂಕ್ಷಿಪ್ತ ರೂಪವಾಗಿದೆ. ಪೂರ್ವದಿಕ್ಕಿನ ಕಲ್ಲುಗಳ ಮೇಲೆ ಪು ಬದಲಾಗಿ ತು ಎಂದು ಬರೆಯಲಾಗಿದೆ. ತೆಲುಗಿನಲ್ಲಿ ಪೂರ್ವದಿಕ್ಕನ್ನು ತೂರ್ಪು ಎಂದು ಕರೆಯುತ್ತಾರೆ. ಆದ್ದರಿಂದ ತು ತೆಲುಗು ತೂರ್ಪು ಪದದ ಸಂಕ್ಷಿಪ್ತ ರೂಪವಾಗಿದೆ.

ಐದು ಹಂತಗಳಲ್ಲಿ ಒಟ್ಟು ೩೬೬ ಮೆಟ್ಟಿಲುಗಳಿವೆ. ಪ್ರತಿ ಮೆಟ್ಟಿಲಿಗೂ ಒಂದು ಕನ್ನಡದ ವರ್ಣಮಾಲೆಯನ್ನು ಬಳಸಲಾಗಿದೆ. ಐದನೇಯ ಹಂತದ ಮೇಲೆ ಸುತ್ತಲೂ ಸಣ್ಣ ಒರಗು ದಿಂಬಿನಾಕಾರದ ಕಲ್ಲುಗಳಿವೆ. ಇದಕ್ಕೆ ಠ ಅಕ್ಷರವನ್ನು ಬಳಸಲಾಗಿದೆ. ನಾವು ಪುಷ್ಕರಣಿಯ ಆಳಕ್ಕೆ ಇಳಿಯುತ್ತಾ ಹೋದಂತೆ, ಪ್ರತಿ ಮೆಟ್ಟಿಲಿಗೆ ವರ್ಣಮಾಲೆ ಠ ನಂತರದ ಅಕ್ಷರಗಳನ್ನು ಕ್ರಮವಾಗಿ ಬಳಸಲಾಗಿದೆ. ಇದನ್ನು ಕೋಷ್ಟಕ ರೂಪದಲ್ಲಿ ಹೀಗೆ ಕೊಡಬಹುದು.

| ಪುಷ್ಕರಣಿಯ ಹಂತ | ಮೆಟ್ಟಿಲು ಹಂತ | ಮೆಟ್ಟಿಲು ಸಂಖ್ಯೆ | ಕನ್ನಡ ಅಕ್ಷರ |
|---|---|---|---|
| ಆರನೇ ಹಂತ | ಒರಗು ದಿಂಬು | ೧ | ಠ |
| | ಒಂದನೇ ಮೆಟ್ಟಿಲು | ೨ | ಡ |
| | ಎರಡನೇ ಮೆಟ್ಟಿಲು | ೩ | ಢ |
| | ಮೂರನೇ ಮೆಟ್ಟಿಲು | ೪ | ಣ |
| | ನಾಲ್ಕನೇ ಮೆಟ್ಟಿಲು | ೫ | ತ |
| | ಐದನೇ ಮೆಟ್ಟಿಲು | ೬ | ಥ |
| | ಆರನೇ ಮೆಟ್ಟಿಲು | ೭ | ದ |

| | | | |
|---|---|---|---|
| ನಾಲ್ಕನೇ ಹಂತ | ಒಂದನೇ ಮೆಟ್ಟಿಲು | ೮ | ಧ |
| | ಎರಡನೇ ಮೆಟ್ಟಿಲು | ೯ | ನ |
| | ಮೂರನೇ ಮೆಟ್ಟಿಲು | ೧೦ | ಪ |
| | ನಾಲ್ಕನೇ ಮೆಟ್ಟಿಲು | ೧೧ | ಫ |
| | ಐದನೇ ಮೆಟ್ಟಿಲು | ೧೨ | ಬ |
| | ಆರನೇ ಮೆಟ್ಟಿಲು | ೧೩ | ಭ |
| ಮೂರನೇ ಹಂತ | ಒಂದನೇ ಮೆಟ್ಟಿಲು | ೧೪ | ಮ |
| | ಎರಡನೇ ಮೆಟ್ಟಿಲು | ೧೫ | ಯ |
| | ಮೂರನೇ ಮೆಟ್ಟಿಲು | ೧೬ | ರ |
| | ನಾಲ್ಕನೇ ಮೆಟ್ಟಿಲು | ೧೭ | ಲ |
| | ಐದನೇ ಮೆಟ್ಟಿಲು | ೧೮ | ವ |
| | ಆರನೇ ಮೆಟ್ಟಿಲು | ೧೯ | ಸ |
| ಎರಡನೇ ಹಂತ | ಒಂದನೇ ಮೆಟ್ಟಿಲು | ೨೦ | ಷ |
| | ಎರಡನೇ ಮೆಟ್ಟಿಲು | ೨೧ | ಹ |
| | ಮೂರನೇ ಮೆಟ್ಟಿಲು | ೨೨ | ಳ |
| | ನಾಲ್ಕನೇ ಮೆಟ್ಟಿಲು | ೨೩ | ಕ್ಷ |
| | ಐದನೇ ಮೆಟ್ಟಿಲು | ೨೪ | ಜ್ಞ |
| ಮೊದಲನೇ ಹಂತ | ಆರನೇ ಮೆಟ್ಟಿಲು | ೨೫ | ತಿ |

**೨. ಚಿಹ್ನೆಗಳು:** ಈಗಾಗಲೇ ಪುಷ್ಕರಣಿಯು ಐದು ಹಂತಗಳಲ್ಲಿ ಇರುವುದನ್ನು ಮೇಲೆ ತಿಳಿಸಲಾಗಿದೆ. ಪ್ರತಿ ಹಂತದ, ಪ್ರತಿ ಕಲ್ಲಿನ ಮೇಲೂ ವಿವಿಧ ಚಿಹ್ನೆಗಳಿವೆ. ಇವು ಕೂಡಾ ಒಂದೊಂದು ದಿಕ್ಕಿಗೆ ಮತ್ತು ಹಂತಕ್ಕೆ ಬೇರೆ ಬೇರೆಯಾಗಿವೆ. ಮೂರನೇ ಹಂತದಲ್ಲಿ ಶಂಕ, ನಕ್ಷತ್ರ ಮತ್ತು ಸ್ವಸ್ತಿಕ ಚಿಹ್ನೆಗಳಿವೆ. ನಾಲ್ಕನೇ ಹಂತದಲ್ಲಿ ವೃತ್ತದ ವಿವಿಧ ರೂಪಗಳಾಗಿ, ವೃತ್ತ, ಅರ್ಧ, ವೃತ್ತ, ಹೊರಗಡೆ ಸರಳ ರೇಖೆ ಇರುವ ವೃತ್ತ ಮತ್ತು ಪರಸ್ಪರ ಲಂಭಗಳನ್ನುಳ್ಳ ವೃತ್ತಗಳು ಇವೆ. ಐದನೇ ಹಂತದಲ್ಲಿ ಸರಳ ರೇಖೆಯ ವಿವಿಧ ರೂಪಗಳಾಗಿ, ಎರಡು ಸಮನಾಂತರ ಸರಳ ರೇಖೆಗಳು, ಎರಡು ಸಮನಾಂತರ ರೇಖೆಗಳನ್ನು ವಿಭಜಿಸಿದ ಅಡ್ಡರೇಖೆ, ಪರಸ್ಪರ ಲಂಭವಾಗಿರುವ ಎರಡು ರೇಖೆಗಳು ಮತ್ತು ತ್ರಿಕೋಣಾಕಾರದ ಚಿಹ್ನೆಗಳಿವೆ. ಹಂತ, ದಿಕ್ಕು ಮತ್ತು ಚಿಹ್ನೆಗಳನ್ನು ಕೋಷ್ಟಕ ರೂಪದಲ್ಲಿ ಹೀಗೆ ನೀಡಬಹುದು.

| ಹಂತ | ಉತ್ತರ | ದಕ್ಷಿಣ | ಪೂರ್ವ | ಪಶ್ಚಿಮ |
|---|---|---|---|---|
| ಐದನೇ ಹಂತ | | | | |
| ನಾಲ್ಕನೇ ಹಂತ | | | | |
| ಮೂರನೇ ಹಂತ | | | | |
| ಎರಡನೇ ಹಂತ | | | | |
| ಮೊದಲನೇ ಹಂತ | | | | |

**೩. ಪಿರಮಿಡ್‌ಆಕಾರದ ಮೆಟ್ಟಿಲುಗಳು:** ಪುಷ್ಕರಣಿಯಲ್ಲಿ ಪಿರಮಿಡ್‌ಆಕಾರದ ನೂರು ಮೆಟ್ಟಿಲುಗಳ ಸಮೂಹವಿದೆ. ಪ್ರತಿ ಸಮೂಹದಲ್ಲಿ ಆರು ಮೆಟ್ಟಿಲುಗಳು ಮತ್ತು ಪ್ರತ್ಯೇಕ ಗುರುತಿನ ಸಂಖ್ಯೆ ಇದೆ. ಎರಡನೇ ಹಂತದಲ್ಲಿ ಮೂರು ಪಿರಮಿಡ್‌ಆಕಾರದ ಮೆಟ್ಟಿಲುಗಳ ಸಮೂಹವಿದ್ದು, ಎಡದಿಂದ ಬಲಕ್ಕೆ ಅವುಗಳ ಸಂಖ್ಯೆಯನ್ನು ನೀಡಲಾಗಿದೆ. ಇದೇ ಕ್ರಮವನ್ನು ಮೂರು, ನಾಲ್ಕು ಮತ್ತು ಐದನೇ ಹಂತದ ಮೆಟ್ಟಿಲುಗಳ ಸಮೂಹಕ್ಕೆ ಅಳವಡಿಸಲಾಗಿದೆ.

ನೂರು ಮೀಟರ್‌ಆಕಾರದ ಮೆಟ್ಟಿಲುಗಳಲ್ಲಿ ನಾಲ್ಕು ದಿಕ್ಕಿನ ಮಧ್ಯದ ಮೆಟ್ಟಿಲುಗಳ ಸಮೂಹ ಹೆಚ್ಚು ಅಲಂಕಾರಿಕವಾಗಿದೆ. ಇವು ಪಕ್ಕದ ಮೆಟ್ಟಿಲುಗಳ ಸಮೂಹಕ್ಕೆ ಹೋಲಿಸಿದಾಗ ಸ್ವಲ್ಪ ಅಗಲದಲ್ಲಿಯೂ ಮತ್ತು ಉದ್ದದಲ್ಲಿಯೂ ಹೆಚ್ಚು ಅಳತೆ ಹೊಂದಿದೆ. ಪ್ರತಿ ಮೆಟ್ಟಿಲಿನ ಮೂಲೆಯ ಸ್ವಲ್ಪ ಒಳ ಬಂದಂತೆ (Recessed Corner) ಇದೆ. ಮೆಟ್ಟಿಲು ಒಂದೇ ಕಲ್ಲಿನಿಂದ ಕೂಡಿದ್ದರೆ ಅದರ ಸಂಖ್ಯೆಯನ್ನು ಒಂದು ಎಂದು ನೀಡಲಾಗಿದೆ. ಮೂರು, ನಾಲ್ಕು ಮತ್ತು ಐದನೇ ಮೆಟ್ಟಿಲುಗಳ ಅಗಲ ಜಾಸ್ತಿ ಇದ್ದು ಇವು ಎರಡು, ಮೂರು ಕಲ್ಲುಗಳಿಂದ ಕೂಡಿರುತ್ತದೆ. ಆಗ ಕ್ರಮಸಂಖ್ಯೆಯನ್ನು ಎಡದಿಂದ ಬಲಕ್ಕೆ ೧, ೨, ೩ ಎಂದು ಬಳಸಿ ಜೋಡಣೆಯ ಕ್ರಮವನ್ನು ತಿಳಿಸಲಾಗಿದೆ. ಪೂರ್ವ ದಿಕ್ಕಿನ ನಾಲ್ಕನೇ ಹಂತದ ಮಧ್ಯದ ನಾಲ್ಕನೇ ಪಿರಮಿಡ್‌ಮೆಟ್ಟಿಲಿನ ಸಮೂಹದ ಕ್ರಮಸಂಖ್ಯೆ (ಪು.೧೨೬) ಗಳು ಹೀಗಿವೆ.

೪. ಅಳತೆ ಗುರುತುಗಳು ಎರಡನೇ ಮತ್ತು ಐದನೆ ಹಂತದ ಕಲ್ಲುಗಳ ಮೇಲೆ ಅಳತೆ ಗುರುತುಗಳಿವೆ. ಗುರುತುಗಳನ್ನು ತ್ರಿಶೂಲಾಕಾರವಾಗಿದ್ದು, ಮಧ್ಯದ ಗೆರೆಯನ್ನು ಕಲ್ಲಿನ ಲಂಭ ಭಾಗದಲ್ಲೂ ಮೂಡಿಸಲಾಗಿದೆ. ಈ ಗುರುತುಗಳು ಪುಷ್ಕರಣಿಯ ಮಧ್ಯಭಾಗದಲ್ಲಿ ಮತ್ತು ಪ್ರತಿ ಹಂತವು ಕೊನೆಗೊಳ್ಳುವಿಕೆಯನ್ನು ಸೂಚಿಸಲು ಬಳಸಲಾಗಿದೆ. ಈ ಗುರುತುಗಳು ೧.೩೦ ಮೀಟರ್‌ಅಂತರದಲ್ಲಿವೆ. ಐದನೇ ಹಂತದ ಉತ್ತರ ದಿಕ್ಕಿನ ಗುರುತುಗಳು ಮಧ್ಯಭಾಗದಿಂದ ಎಡ ಮತ್ತು ಬಲಗಳಲ್ಲಿ ಕ್ರಮವಾಗಿ ೪.೭೦ ಮೀ. ೬.೯೦ ಮೀ. ಮತ್ತು ೯.೧೦ ಮೀ. ದೂರದಲ್ಲಿವೆ. ಐದನೇ ಹಂತದ ಪೂರ್ವ ದಿಕ್ಕಿನ ಅಳತೆಗಳು ಮಧ್ಯಭಾಗದಿಂದ ಎಡ ಮತ್ತು ಬಲಗಳಲ್ಲಿ ಕ್ರಮವಾಗಿ ೪.೭೦ ಮೀ. ೬.೯೦ ಮೀ. ಮತ್ತು ೯.೧೦ ಮೀ. ದೂರದಲ್ಲಿದೆ. ಐದನೇ ಹಂತದ ಪೂರ್ವ ದಿಕ್ಕಿನ ಅಳತೆಗಳು ಮಧ್ಯಭಾಗದಿಂದ ಎಡಕ್ಕೆ ೧.೩೦ ಮೀ. ೪.೭೦ ಮೀ. ೯.೧೦ ಮೀ. ಹಾಗೂ ಬಲಭಾಗದಲ್ಲಿ ೪.೭೦ ಮೀ. ೬.೯೦ ಮೀ. ಮತ್ತು ೯.೧೦. ದೂರದಲ್ಲಿದೆ. ಐದನೇ ಹಂತದ ಪೂರ್ವ ದಿಕ್ಕಿನ ಅಳತೆಗಳು ಮಧ್ಯಭಾಗದಿಂದ ಎಡಕ್ಕೆ ೧.೩೦ ಮೀ. ೪.೭೦ ಮೀ. ೬.೧೦ ಮೀ. ಹಾಗೂ ಬಲಭಾಗದಲ್ಲಿ ೪.೭೦ ಮೀ. ೬.೯೦ ಮೀ. ಮತ್ತು ೯.೧೦. ದೂರದಲ್ಲಿದೆ. ಇದೇ ರೀತಿಯಾಗಿ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲೂ ಹಾಗೂ ಎರಡನೇ ಹಂತದ ನಾಲ್ಕೂ ದಿಕ್ಕುಗಳಲ್ಲಿ ಅಳತೆ ಗುರುತುಗಳು ಇವೆ.

ನೆಲ ಮಟ್ಟದಲ್ಲಿ ಈ ಗುರುತಗಳನ್ನು ಅನುಸರಿಸಿ ಅಡ್ಡ ಮತ್ತು ಉದ್ದ ದಾರಗಳನ್ನು ಕಟ್ಟಿದರೆ ಅವುಗಳಿಂದ ತೂಗು ಗುಂಡು ಬಿಟ್ಟು (Plumb Line) ಪ್ರತಿ ಹಂತವು ಸರಿಯಾದ ಸ್ಥಳದಲ್ಲಿಯೇ ಎಂದು ಪರೀಕ್ಷಿಸಬಹುದು.

ಈ ರೀತಿಯ ಅಳತೆ ಗುರುತುಗಳನ್ನು ನಾವು ದೇವಾಲಯಗಳಲ್ಲಿನ ಅಳತೆ ಪಟ್ಟಿಗಳಲ್ಲೂ ಕಾಣುತ್ತೇವೆ. ಗದಗ ಜಿಲ್ಲೆ, ಡಂಬಳದಲ್ಲಿನ ಸೋಮೇಶ್ವರ ದೇವಾಲಯ (ಡಬ್ಬಗುಡಿ) ಕಕ್ಷಾಸನದಲ್ಲಿ ಕಾಣಬಹುದು. ಮಾದವೇಶ್ವರ ದೇವರ ಗಡಿಂಬ ಎಂದು ಬರೆಯಲಾಗಿರುವ ಶಾಸನದ ಅಕ್ಕ ಪಕ್ಕದಲ್ಲಿ ೧೨ ಅಡಿ ದೂರದಲ್ಲಿ ತ್ರಿಶೂಲಾಕಾರದ ಗುರುತುಗಳಿವೆ. ಪ್ರಸ್ತುತದಲ್ಲಿ ಪುಷ್ಕರಣಿಯ ಅಳತೆ ಗುರುತುಗಳು ೧.೩೦ ಮೀ. ಅಂತರದಲ್ಲಿದ್ದು ಇದರ ಎರಡು, ಮೂರು, ಮತ್ತು ನಾಲ್ಕರ ಗುಣಾಕಾರದಲ್ಲಿ ಅಳತೆ ಗುರುತುಗಳನ್ನು ನಾವು ಕಾಣಬಹುದು.

೫. ನಿರ್ಮಾಣ ತಾಂತ್ರಿಕತೆ ಸಂಪೂರ್ಣ ತಾಂತ್ರಿಕ ವಿವರಗಳನ್ನುಳ್ಳ ಸುಂದರ ಮೆಟ್ಟಿಲು ಪುಷ್ಕರಣಿ ಇದಾಗಿದೆ. ಪ್ರತಿ ದಿಕ್ಕೂ, ಹಂತ, ಮೆಟ್ಟಿಲುಗಳಿಗೆ ಅಕ್ಷರ ಚಿಹ್ನೆ ಮತ್ತು ಸಂಖ್ಯೆಗಳನ್ನು ಬಳಸಲಾಗಿದೆ. ಅದರ ಸ್ಥಳ ಮತ್ತು ಹಂತವನ್ನು ಮೊದಲೇ ನಿರ್ಧರಿಸಿ ಕೆಲಸವನ್ನು ಬೇರೆಡೆಯಲ್ಲಿ ನೆಲದ ಮೇಲೆ ಮಾಡಲಾಗಿದೆ. ಪ್ರತಿ ಹಂತವನ್ನು ಕರಾರುವಕ್ಕಾಗಿ ಮೊದಲೇ ನಿರ್ಧರಿಸಲಾಗಿದೆ. ನಕ್ಷೆ ಮತ್ತು ವಿನ್ಯಾಸ ಹಾಗೂ ಶಿಲ್ಪಿಗಳ ಕುಶಲತೆ ಒಂದುಗೂಡಿದಾಗ ಸುಂದರ ನಿರ್ಮಾಣ ಸಾಧ್ಯವೆಂದು ರೂಪಿಸಲು ಈ ಮೆಟ್ಟಿಲು ಪುಷ್ಕರಣಿಯೂ ಸಾಕ್ಷಿಯಾಗಿದೆ.

ಲಕ್ಕುಂಡಿಯ ಮಾಣಿಕೇಶ್ವರ ದೇವಾಲಯದ ಮುಂದೆ ಇರುವ ಮಾಣಿಕೇಶ್ವರ ಕುಂಡದ ಪುಷ್ಕರಣಿ ಮಧ್ಯದ ಹಂತದಲ್ಲಿ ಕೆಲವು ದೇವರ ಗೂಡುಗಳಿವೆ. ಹೊಯ್ಸಳರ ಕಾಲದ ಹಳೇಬೀಡಿನ ಬಳಿಯ ಪುಷ್ಕರಣಿಯಲ್ಲಿ ೨೭ ದೇವರ ಗೂಡುಗಳಿದ್ದವು. ಇವುಗಳ ೨೭ ನಕ್ಷತ್ರಗಳನ್ನು ಸೂಚಿಸುತ್ತಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ. ಹುಂಚ ಬಳಿಯ ಬಿಲ್ಲೇಶ್ವರ ಬೆಟ್ಟದಲ್ಲಿ ಕುಮದ್ವತಿ ನದಿಯು ಉಗಮವಾಗುತ್ತದೆ. ಉಗಮ ಸ್ಥಳದಲ್ಲಿರುವ ಬಿಲ್ಲೇಶ್ವರ ತೀರ್ಥದಲ್ಲಿ ಮೆಟ್ಟಿಲಿನ ಕಲ್ಲಿನ ತೊಟ್ಟಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಕೂಡಾ ಮಧ್ಯದ ಹಂತದಲ್ಲಿ ಮೆಟ್ಟಿಲುಗಳ ಮುಂಚಾಚು ಇದೆ.

ಹಂಪಿಯ ಮೆಟ್ಟಿಲು ಪುಷ್ಕರಣಿಯ ದಕ್ಷಿಣ ದಿಕ್ಕಿಗೆ ಒಂದು ದೇವಾಲಯವಿದೆ. ಇದು ಯಾವುದೆಂಬುದು ತಿಳಿದಿಲ್ಲ. ಈ ಪುಷ್ಕರಣಿಯನ್ನು ನಿರ್ಮಿಸಿದ ನಂತರ ಕಲ್ಲಿನ ತೊಟ್ಟಿಲು ಕಾಲುವೆಗಳ ಮೂಲಕ ನೀರು ಪೂರೈಕೆಯಾಗುತ್ತಿತ್ತು. ಮೆಟ್ಟಿಲು ಪುಷ್ಕರಣಿ ವರ್ಷ ಪೂತಿರ ಬಳಕೆಯಲ್ಲಿತ್ತೆಂದು ತೋರುತ್ತದೆ. ಋತುಮಾನಕ್ಕೆ ಅನುಸಾರವಾಗಿ ನೀರಿನ ಮಟ್ಟ ಕಡಿಮೆಯಾದಾಗ ಈ ಮೆಟ್ಟಿಲುಗಳು ನೀರಿನ ಹಂತವನ್ನು ತಲುಪಲು ಸಹಾಯಕವಾಗಿದ್ದವು ನೆಲ ಮಟ್ಟದಲ್ಲಿ ಒರಗು ದಿಂಬು ಕಲ್ಲು ಇರುವುದು ಈ ಪುಷ್ಕರಣಿಯಲ್ಲಿ ದೇವರ ತೆಪ್ಪೋತ್ಸವ ಇತ್ಯಾದಿ ಆಚರಣೆಗಳನ್ನು ವೀಕ್ಷಿಸಲು ಮಾಡಿದ ಅನುಕೂಲವಿರಬಹುದೆಂದು ಊಹಿಸಬಹುದು.

**ಟಿಪ್ಪಣಿಗಳು**

೧. ಈ ಪ್ರಬಂಧವನ್ನು ಸಿದ್ಧಪಡಿಸಲು ಅಗತ್ಯ ಮಾಹಿತಿ ಪ್ರೋತ್ಸಾಹವನ್ನು ನೀಡಿದ ಡಾ.ಚೆನ್ನಬಸಪ್ಪ ಎಸ್.ಪಾಟೀಲ್ ಅವರಿಗೆ ನನ್ನ ಕೃತಜ್ಞತೆಗಳು

೨. ಸ್ಥಳ ವೀಕ್ಷಣೆಗೆ ಮತ್ತು ಫೋಟೋ ಪಡೆಯಲು ಅನುಮತಿ ನೀಡಿದ ಕೇಂದ್ರ ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳು

೩. Indian Archaeology 1984-85, A Review

೪. B. Narasimhaiah, A Decade of E x cavation at Vijayangara (Hampi, Early Vijayanagara Studies in its History and Culture, Edited by G.S. Dikshit, B.M.S. Memorial foundation, Bangalore – 19 (Proceedings of S. SrikantayaCentenary Seminar) 1988, pp-191-207.

**ಆಕರ**

ವಿಜಯನಗರ ಅಧ್ಯಯನ, ಸಂ.೭, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು.೧೨೪-೧೩೧

## ೪೦. ಕಾರಂಜಿ ಹಾಗೂ ಜಲಕ್ರೀಡಾ ಸೌಧಗಳು

ಹಂಪಿಯ ಕೇಂದ್ರ ಬಿಂದುವಿನಲ್ಲಿ ಕೆಲವು ಲೌಕಿಕ ಕಟ್ಟಡಗಳಿವೆ. ಇವು ಇಸ್ಲಾಂ ವಾಸ್ತುಶಿಲ್ಪದ ಲಕ್ಷಣವನ್ನು ಹೊಂದಿದೆ. ಈ ಸ್ಮಾರಕಗಳ ಬಗೆಗೆ ಚಾರಿತ್ರಿಕ, ಶಾಸನಾಧಾರಿತ, ಜನಪದ ಅಥವಾ ಸಾಹಿತ್ಯಕ ಆಧಾರಗಳು ದೊರೆತಿಲ್ಲ. ಈ ಸ್ಮಾರಕಗಳಲ್ಲಿ ಕೆಲವು ಅರಮನೆಗಳಾದರೆ, ಕೆಲವು ಸ್ನಾನಗೃಹ, ಕಾರಂಜಿ, ಆನೆಶಾಲೆ ಮತ್ತು ಜಲಕ್ರೀಡಾ ಸೌಧಗಳು. ಇವುಗಳೆಲ್ಲ ಒಂದೇ ರೀತಿಯ ವಿಶಿಷ್ಟ ವಾಸ್ತು ಲಕ್ಷಣವನ್ನು ಹೊಂದಿವೆ. ಸ್ಮಾರಕಗಳಲ್ಲಿ ಕೆಲವು ಮೂಲರೂಪದಲ್ಲಿದ್ದರೆ ಇನ್ನುಳಿದವುಗಳಲ್ಲಿ ಕಲ್ಲಿನ ತಳಪಾಯ ಮಾತ್ರ ಕಾಣಸಿಗುತ್ತವೆ. ಹೆಚ್ಚಿನ ಸ್ಮಾರಕಗಳ ಹೆಸರನ್ನು ಸಿವೆಲ್, ಲಾಂಗ್‌ಹರ್ಸ್ಟ್‌ಅವರು ನೀಡಿದ್ದಾರೆ. ಈ ಎಲ್ಲಾ ಸ್ಮಾರಕಗಳನ್ನು ವಿಜಯನಗರದರಸರು ನಿರ್ಮಿಸಿದ್ದಾರೆ. ಈ ನಿರ್ಮಿತಿಗಳನ್ನು ವಿಜಯನಗರದ ಅರಸರು, ಅಮಾತ್ಯರು, ಪ್ರತಿಷ್ಠಿತರು ಉಪಯೋಗಿಸಿರಬೇಕು.[1] ಇಲ್ಲಿಯ ಕೆಲವು ಕಟ್ಟಡಗಳು ಕ್ರಿ.ಶ. ೧೫೬೫ರ ನಂತರ

ಅಂದರೆ ರಕ್ಕಸತಂಗಡಿ ಯುದ್ಧದ ನಂತರ ನಿರ್ಮಿಸಲಾಗಿದೆ ಎಂದು ಗುರುತಿಸಿದ್ದಾರೆ. ವಿಜಯನಗರದ ರಾಜಕೀಯ ಇತಿಹಾಸವನ್ನು ನೋಡಿದರೆ, ರಕ್ಕಸತಂಗಡಿಯ ನಿರ್ಣಾಯಕ ಯುದ್ಧದ ನಂತರ ವಿಜಯನಗರ ಪಟ್ಟಣದಲ್ಲಿ ಯಾವುದೇ ಭವ್ಯ ಕಟ್ಟಡ ಕಟ್ಟುವ ಪ್ರಕ್ರಿಯೆ ನಡೆದಿಲ್ಲವೆಂದು ಕಂಡುಬರುತ್ತದೆ. ಇದರಿಂದ ಈ ಕಟ್ಟಡಗಳನ್ನು ಕ್ರಿ.ಶ. ೧೫೬೫ರ ನಂತರ ನಿರ್ಮಾಣ ಮಾಡದೆ, ಅದಕ್ಕೂ ಮೊದಲೇ ಅಂದರೆ ವಿಜಯನಗರದ ಪ್ರಖ್ಯಾತ ರಾಜರ ಆಳ್ವಿಕೆಯಲ್ಲೇ ನಿರ್ಮಾಣವಾಗಿದೆ ಎಂದು ಹೇಳಬಹುದು.

ಕ್ರಿ.ಶ. ೧೪ನೇ ಶತಮಾನದಲ್ಲಿ ದೌಲತಾಬಾದ್ ಹಾಗೂ ಗುಲ್ಬರ್ಗಾಗಳಲ್ಲಿ ಮುಸ್ಲಿಂ ರಾಜರು ನೆಲಗಳನ್ನು ಹೊಂದಿದ್ದರು. ನಂತರದ ಎರಡು ಶತಮಾನಗಳಲ್ಲಿ ಇನ್ನೂ ಕೆಲವು ಪ್ರದೇಶಗಳಲ್ಲಿ ಮುಸ್ಲಿಂ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಇವುಗಳಿಗೆ ಉತ್ತಮ ಉದಾಹರಣೆ ಎಂದರೆ ಬೀದರ್ ಹಾಗೂ ಫಿರೋಜಾಬಾದ್, ಕ್ರಿ.ಶ. ೧೬೧೭ರಲ್ಲಿ ಬಿಜಾಪುರ ಹಾಗೂ ಗೋಲ್ಕಂಡ ರಾಜ್ಯಗಳು ಪ್ರಖ್ಯಾತಿ ಹೊಂದಿದವು. ಹೊಸದಾಗಿ ಸ್ಥಾಪನೆಯಾದ ಎಲ್ಲ ಪ್ರದೇಶಗಳಲ್ಲಿ ಮುಸ್ಲಿಂ ಶೈಲಿಯ ಕಟ್ಟಡಗಳು, ಅರಮನೆ, ಹೆಬ್ಬಾಗಿಲು, ಗೋರಿಗಳು, ಗುಮ್ಮಟಗಳ ನಿರ್ಮಾಣವನ್ನು ಕಾಣಬಹುದು.

೧೫ನೇ ಶತಮಾನದ ಮುಸ್ಲಿಂ ವಾಸ್ತುಶಿಲ್ಪ ಸರಳವಾಗಿದ್ದು ಅಲಂಕರಣಾ ರಹಿತವಾಗಿದೆ. ಇಲ್ಲಿ ಕಂಬಗಳ ಮೇಲೆ ಕಮಾನುಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಅಲ್ಲದೆ ಇಲ್ಲಿಯ ಗೋಡೆಗಳು ಇಳಿಜಾರು ಮೇಲ್ಮೈಯನ್ನು ಹೊಂದಿದೆ. ಕ್ರಿ.ಶ.೧೬ನೇ ಶತಮಾನದಲ್ಲಿ ಈ ವಾಸ್ತುವಿನಲ್ಲಿ ಹಲವು ಬದಲಾವಣೆಗಳನ್ನು ಕಾಣಬಹುದು. ಈ ಬದಲಾವಣೆಗಳು ಕಮಾನುಗಳ ನಿರ್ಮಾಣ, ಗುಮ್ಮಟ, ಗುಮ್ಮಟದ ಮೂಲೆಯ ಕಮಾನುಗಳು ಹೆಚ್ಚಾಗಿ ಕಾಣಸಿಗುತ್ತವೆ. ಇವುಗಳಲ್ಲದೆ ಕಟ್ಟಡದ ಮೇಲೆ ಇರುವ ಕೈಪಿಡಿ ಗೋಡೆ ಮತ್ತು ನಿಗದಿತ ಅಳತೆಯಲ್ಲಿ ನಿರ್ಮಿಸಿರುವ ಸಣ್ಣ ಮಿನಾರ್ ಗಳನ್ನು ಕಾಣಬಹುದು.

ವಿಜಯನಗರದ ವಾಸ್ತುಶಿಲ್ಪಿಗಳು ಮುಸ್ಲಿಂ ಶೈಲಿಯ ವಾಸ್ತುವಿನ ಬಗೆಗೆ ಅರಿವನ್ನು ಹೊಂದಿದ್ದರು. ವಿಜಯನಗರ ಹಾಗೂ ನೆರೆಯ ಬಹುಮನಿ ಸುಲ್ತಾನರೊಡನೆ ಆಗಿಂದಾಗ್ಗೆ ಯುದ್ಧ ನಡೆಯುತ್ತಿದ್ದವು. ಕೆಲವು ವಿಜಯನಗರದ ಅರಸರು ತಮ್ಮನ್ನು ಹಿಂದೂರಾಜ ಸುರತ್ರಾಣ ಎಂದು ಕರೆದುಕೊಂಡಿದ್ದಾರೆ. ಅಂದರೆ ಸುಲ್ತಾನ ಎನ್ನುವುದು ರಾಜತ್ವದ ಪರಾಕಾಷ್ಠೆ ಎಂದು ತಿಳಿದಿದ್ದರಿಂದ ಆ ಹೆಸರನ್ನು ಹೊಂದಿದ್ದರೆಂದು ತೋರುತ್ತದೆ. ಪದೇಪದೇ ಯುದ್ಧಗಳು ನಡೆಯುತ್ತಿದ್ದರಿಂದ ಉತ್ತಮ ಬಿಲ್ಲುಗಾರರು ಹಾಗೂ ಕುದುರೆ ಸವಾರರ ಅವಶ್ಯಕತೆ ಮನಗಂಡು ತಮ್ಮ ಸೈನ್ಯದಲ್ಲಿ ಪರಿಣಿತ ಕುದುರೆ ಸವಾರರು ಹಾಗೂ ಬಿಲ್ಲುಗಾರರನ್ನು ಸೇರಿಸಿಕೊಂಡಿದ್ದರು. ಈ ದಿಸೆಯಲ್ಲಿ ಮೊದಲು ಕಾರ್ಯಪ್ರವೃತ್ತನಾದವನು ಎರಡನೇ ದೇವರಾಯ, ಹಲವಾರು ಜನ ಮುಸ್ಲಿಂ ಸೈನಿಕರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡಿದ್ದನು. ಇವರಲ್ಲಿ ಮುಖ್ಯರಾದವರು ಮತ್ತು ಪ್ರಭಾವಿಗಳು ವಿಶಿಷ್ಟ ಶೈಲಿಯ ಕಟ್ಟಡಗಳ ನಿರ್ಮಾಣವನ್ನು ಮಾಡಿದರು. ಇಲ್ಲಿರುವ ಕೆಲವು ಗೋರಿಗಳು ೧೪೧೫ನೇ ಶತಮಾನದ ಗೋರಿಗಳ ಶೈಲಿಯನ್ನು, ಅಲ್ಲದೆ ಕೆಲವು ಗುಲ್ಬರ್ಗ ಗೋರಿಗಳ ಶೈಲಿಯನ್ನೂ ಹೋಲುತ್ತವೆ. ಇಲ್ಲಿರುವ ಕಟ್ಟಡಗಳು ರಾಜನಿಗೆ ಹಾಗೂ ರಕ್ಷಣ ವ್ಯವಸ್ಥೆಗೆ ಪೂರಕವಾಗಿವೆ.

ಈ ರೀತಿಯ ರಕ್ಷಣ ವ್ಯವಸ್ಥೆಗೆ ಅನುಕೂಲ ಕಲ್ಪಿಸುವ ಕಟ್ಟಡಗಳು ವಿಜಯನಗರದಲ್ಲಿ ಕ್ರಿ.ಶ.ಚ ೧೫೬೫ರ ನಂತರ ವಿಜಯನಗರದಲ್ಲಿ ಕಾಣಬರದಿದ್ದರೂ ಮುಂದೆ ಇವು ಚಂದ್ರಗಿರಿ ಹಾಗೂ ಪೆನುಗೊಂಡೆಯಲ್ಲಿ ವೃದ್ಧಿಯಾಗಿರುವುದನ್ನು ಕಾಣಬಹುದು.

ಕಮಲಾಪುರದಿಂದ ಹಂಪಿಗೆ ಹೋಗುವ ದಾರಿಯಲ್ಲಿ ಅಷ್ಟಕೋನಾಕೃತಿಯ ನೀರಿನ ಕಾರಂಜಿ ಮಂಟಪವಿದೆ. ಈ ಮಂಟಪದ ಮಧ್ಯದಲ್ಲಿ ಕೆಳಭಾಗಕ್ಕೆ ಹೊಂದಿಕೊಂಡಂತೆ ಕೆಲವು ಮೆಟ್ಟಿಲುಗಳಿವೆ. ಮೊದಲನೆಯದು ಅಷ್ಟಕೋನಾಕೃತಿಯಿದ್ದರೆ, ನಂತರದ್ದು ಕಮಲದ ದಳಗಳನ್ನು ಹೊಂದಿದೆ. ಅದರ ನಂತರ ಕೆಳಭಾಗ ಚೌಕಾಕೃತಿಯಲ್ಲಿನ ಕಾರಂಜಿಯ ವ್ಯವಸ್ಥೆ ಹೊಂದಿದೆ. ಈ ಅಷ್ಟಕೋನಾಕೃತಿಯ ಮಧ್ಯಭಾಗದಿಂದ ನಾಲ್ಕು ದಿಕ್ಕಿಗೂ ಚೂಪಾದ ಕಮಾನಿನ ದ್ವಾರಗಳಿವೆ. ಎರಡು ದ್ವಾರಗಳ ಮಧ್ಯೆ ಮೂಲೆಯ ಮೇಲೆ ಗೋಡೆಯಿದ್ದು, ಮಧ್ಯಭಾಗಕ್ಕೆ ಕಮಾನಿನ ಕಿಟಕಿಯಿದೆ. ಈ ಕಿಟಕಿಯ ಮೇಲೆ ಮತ್ತೊಂದು ಕಮಾನಿನ ಮಾದರಿಯನ್ನು ಗಾರೆಯಿಂದ ಮೂಡಿಸಲಾಗಿದೆ. ಒಟ್ಟು ನಾಲ್ಕು

ಕಮಾನಿನ ಆಕಾರಗಳನ್ನು ಕಾಣಬಹುದು. ಇವುಗಳ ಮೇಲೆ ಗುಮ್ಮಟದ ಕೆಳಭಾಗದಲ್ಲಿ ಬಹು ಕಮಾನಿನ ಆಕಾರದ ಗೂಡುಗಳ ಪಟ್ಟಿಕೆಯಿದೆ. ಈ ಪಟ್ಟಿಕೆಗಳ ಕೆಳಭಾಗದಲ್ಲಿ ಬಾಣದ ಮೊನೆಯ ಅಲಂಕರಣೆಯಿದ್ದರೆ ಪಟ್ಟಿಕೆಯ ಮೇಲು ಭಾಗದಲ್ಲಿ ಜಾಲಂದ್ರದ ಸಣ್ಣ ಪಟ್ಟಿಕೆಯಿದೆ. ಇದರ ಮೇಲಿರುವ ಗುಮ್ಮಟದ ಒಳಭಾಗವು ಯಾವುದೇ ಅಲಂಕರಣೆ ಹೊಂದಿಲ್ಲ. ಇಲ್ಲಿರುವ ಏಕಶಿಲಾ ತೊಟ್ಟಿಯಲ್ಲಿ ಹಾಲನ್ನು ತುಂಬಿ ಹಬ್ಬದ ದಿನಗಳಲ್ಲಿ ಬಡವರಿಗೆ ನೀಡುತ್ತಿದ್ದರು ಎಂದು ಹೇಳಲಾಗಿದೆ.[2]

ಕಾರಂಜಿಯ ಮಧ್ಯಭಾಗದ ಸುತ್ತ ಪ್ರಾಂಗಣವಿದೆ. ಮಧ್ಯ ಕಮಾನುಗಳು ಮತ್ತು ಅಷ್ಟಕೋನಾಕೃತಿಯ ಗುಮ್ಮಟವಿದೆ. ಮಧ್ಯದ ಕಾರಂಜಿಯ ಸುತ್ತ ನಾಲ್ಕು ಬಾಗಿಲು ಹಾಗೂ ಕಿಟಕಿ ಹೊಂದಿದ ಗೋಡೆಯಿದೆ. ನಾಲ್ಕು ಬಾಗಿಲಿನ ಮುಂದಿರುವ ಪ್ರಾಂಗಣದ ಚತ್ತಿಗೆ ಅಷ್ಟಕೋನಾಕೃತಿಯ ಗುಮ್ಮಟವಿದೆ. ಅದೇ ರೀತಿ ಗೋಡೆಯ ಮಧ್ಯೆ ಕಿಟಕಿ ಹೊಂದಿರುವ ಪ್ರಾಂಗಣದ ಚತ್ತಿನಲ್ಲಿ ಷಡ್ಕೋನಾಕೃತಿಯ ಮೇಲ್ಛಾವಣಿ ಚೂಪಾಗಿದೆ.

ಈ ಕಟ್ಟಡದ ಹೊರಭಾಗ ಯಾವುದೇ ಅಲಂಕರಣೆ ಹೊಂದಿರುವುದಿಲ್ಲ. ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಕಮಾನಿನ ಹೊರಭಾಗದಲ್ಲಿ ಬಹು ಕಮಾನಿನ ಗುಚ್ಛದ ಗಾರೆಯ ಉಬ್ಬು ಅಲಂಕರಣೆಯಿದೆ. ಕಟ್ಟಡದ ಮೇಲೆ ಕೈಪಿಡಿ ಗೋಡೆಯಿದೆ. ಇಲ್ಲಿ ಬಾಣದ ಮೊನೆಯ ಹಾಗೆಯೆ ಮೊನೆಯ ಹೊರ ತುದಿಯಲ್ಲಿ ದುಂಡನೆಯ ಮಣಿಗಳ ಅಲಂಕರಣವಿದೆ. ಮೂಲೆಗಳ ಮೇಲೆ ಅರೆ ಕಂಬಗಳಿವೆ. ಅದರ ಮೇಲೆ ಕಳಸದ ಅಲಂಕರಣೆಯಿದ್ದಿರಬೇಕು, ಆದರೆ ಇತ್ತೀಚಿನ ದಿನಗಳಲ್ಲಿ ಈ ಭಾಗ ಹಾಳಾಗಿದೆ ಎಂದು ತೋರುತ್ತದೆ. ಮುಖ್ಯ ಗೋಪುರದ ಹೊರಭಾಗವು ಅಲಂಕರಣೆಯಿಂದ ಕೂಡಿದೆ. ಇದರ ಮಧ್ಯಭಾಗವು ಅಷ್ಟಕೋನಾಕೃತಿಯ ಗುಮ್ಮಟವನ್ನು ಹೊಂದಿದ್ದು[3] ಅದರ ಮೇಲೆ ದುಂಡನೆಯ ಗೋಪುರ ಹಾಗೂ ಅದರ ತುದಿಯಲ್ಲಿ ಕಳಸವಿದ್ದಿರಬೇಕು.

ಈ ಕಾರಂಜಿಗೆ ನೀರನ್ನು ಸುಟ್ಟ ಮಣ್ಣಿನ ಕೊಳವೆಯ ಮೂಲಕ ಹಾಯಿಸಲಾಗುತ್ತಿತ್ತು. ಈ ರೀತಿ ನೀರು ಹಾಯಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಉಪಯೋಗಿಸುತ್ತಿದ್ದು, ಅವುಗಳ ಕುರುಹನ್ನು ಪೂರ್ವದಲ್ಲಿರುವ ಕೊಳವೆಗಳಿಂದ ಗುರುತಿಸಬಹುದಾಗಿದೆ. ಈ ಕಾರಂಜಿಗೆ ಪೂರ್ವ ದಿಕ್ಕಿನಲ್ಲಿ ಗಾರೆಯ ಒಂದು ದೊಡ್ಡ ತೊಟ್ಟಿಯಿದೆ. ಈ ತೊಟ್ಟಿಯಿಂದ ಮೂರು ಕೊಳವೆಗಳು ಬಂದಿವೆ. ಇವುಗಳಲ್ಲಿ ಒಂದನ್ನು ಉಪಯೋಗಿಸಿಕೊಂಡು ನೀರನ್ನು ಕಾರಂಜಿಗೆ ತಂದಿರಬೇಕು. ಇನ್ನುಳಿದ ಎರಡು ಕೊಳವೆಗಳು, ಈ ಕಟ್ಟಡದ ಮುಂಭಾಗದಿಂದ ಹಾಯ್ದು ಹೋಗುತ್ತದೆ. ಇಲ್ಲಿ ಕುರುಹುಗಳು ಹಾಳಾಗಿರುವುದರಿಂದ ಗುರುತಿಸುವುದು ಕಷ್ಟಕರವಾಗಿದೆ. ಈ ಜೋಡು ಕೊಳವೆಗಳನ್ನು ಇಟ್ಟಿಗೆ ಹಾಗೂ ಗಾರೆಯಿಂದ ವ್ಯವಸ್ಥಿತವಾಗಿ ಜೋಡಿಸಿ ಭದ್ರಪಡಿಸಲಾಗಿದೆ. ಈ ರೀತಿ ಮಾಡಿರುವುದರಿಂದ ಮಣ್ಣಿನ ಕೊಳವೆಗಳು ಗಟ್ಟಿಯಾಗಿ ಇರುವುದಲ್ಲದೆ, ಶೀಘ್ರವಾಗಿ ಹಾಳಾಗದ ರೀತಿ ಎಚ್ಚರವಹಿಸಲಾಗಿದೆ.

ಈ ಚೌಕಾಕಾರದ ತೊಟ್ಟಿಗೆ ಹೊರಗಿನಿಂದ ಅಂದರೆ, ಮಹಾನವಮಿ ದಿಬ್ಬದ ಬಳಿಯಿರುವ ನೀರಿನ ಕಾಲುವೆಯಿಂದ ನೀರನ್ನು ಒದಗಿಸುವ ವ್ಯವಸ್ಥೆ ಹೊಂದಿರಬೇಕು. ಇದಕ್ಕೆ ಸಂಬಂಧಿಸಿದಂತೆ ಅಲ್ಲಲ್ಲೆ ಮುರಿದು ಬಿದ್ದಿರುವ ಕೊಳವೆಗಳನ್ನು ಗುರುತಿಸಬಹುದಾಗಿದೆ.

ರಾಜಪ್ರಾಂಗಣದ ಪೂರ್ವಕ್ಕೆ ಮಂಟಪದ ಮಾದರಿಯ ಅಷ್ಟಕೋನಾಕೃತಿಯ ಕಟ್ಟಡವಿದೆ. ಇಲ್ಲಿ ಎರಡು ಸಾಲಿನ ಕಂಬಗಳಿದ್ದು ಪ್ರತಿ ಸಾಲಿನಲ್ಲಿಯೂ ೨೪ ಕಂಬಗಳಿವೆ. ಮಧ್ಯದಲ್ಲಿ ಅಷ್ಟಕೋನಾಕೃತಿಯ ವೇದಿಕೆಯಿದೆ. ತೊಟ್ಟಿಯ ಅಧಿಷ್ಠಾನದ ಭಾಗ ಹಾಗೂ ವೇದಿಕೆಯ ಅಧಿಕಷ್ಠಾನದ ಭಾಗವನ್ನು ದೇವಸ್ಥಾನಗಳ ಅಧಿಷ್ಠಾನದ ರೀತಿ ಸಿಂಗರಿಸಲಾಗಿದೆ.

ಈ ಅಷ್ಟಕೋನಾಕೃತಿಯ ಕಟ್ಟಡದ ಹೊರಭಾಗದಲ್ಲಿ ಯಾವುದೇ ರೀತಿಯ ಅಲಂಕರಣೆಯಿರುವುದಿಲ್ಲ. ಆದರೆ ಒಳಭಾಗದಲ್ಲಿ ಹೂ ಮತ್ತು ಬಳ್ಳಿಯ ಅಲಂಕರಣೆಯಿದೆ. ಮಧ್ಯದ ತೊಟ್ಟಿಗೆ ನೀರನ್ನು ಸಣ್ಣ ಕಾಲುವೆಗಳ ಮೂಲಕ ನೀರನ್ನು ಹಾಯಿಸಲು ವ್ಯವಸ್ಥೆಯಿದೆ. ಈ ಸ್ಥಳಕ್ಕೆ ನೀರನ್ನು ಎಲ್ಲಿಂದ ಹಾಯಿಸುತ್ತಿದ್ದರು ಎಂದು ಹೇಳುವುದು ಕಷ್ಟಕರ. ರಾಜಪ್ರಾಂಗಣಕ್ಕೆ ನೀರನ್ನು ಹಾಯಿಸುವ ಪ್ರಮುಖ ಕೊಳವೆಗಳ ಒಂದು ಟಿಸಿಲು ಕೊಳವೆ ಮೂಲಕ ಇಲ್ಲಿಗೆ ನೀರನ್ನು ಹಾಯಿಸಲಾಗುತ್ತಿತ್ತು ಎಂದು ತೋರುತ್ತದೆ. ಈ ಸ್ನಾನಗೃಹದ ಸುತ್ತ ಉತ್ಖನನ ಮಾಡಿದಾಗ

ಮಾತ್ರ ಈ ಬಗ್ಗೆ ಹೆಚ್ಚಿನ ಮಾಹಿತಿ ದೊರಕಬಹುದೆಂದು ತೋರುತ್ತದೆ. ತೊಟ್ಟಿಯ ಕೆಳಭಾಗ, ಪಕ್ಕದ ಗೋಡೆ, ವೇದಿಕೆಯ ಮೇಲ್ಭಾಗ ಹಾಗೂ ಪಕ್ಕದ ಗೋಡೆಗಳನ್ನು ಗಾರೆಯಿಂದ ಸಿಂಗರಿಸಲಾಗಿದೆ. ಈ ಗೃಹದ ಪೂರ್ವಕ್ಕೆ ಆಯಾತಕಾರದ ಕಟ್ಟಡವಿದೆ. ಈ ಕಟ್ಟಡಕ್ಕೆ ಆ ಉತ್ತರದಲ್ಲಿ ಬಾಗಿಲಿದೆ. ಇದರ ಮೇಲ್ಛಾವಣಿ ಹಾಳಾಗಿದೆ. ಬಹುಶಃ ಇದು ಕಮಾನಿನಾಕೃತಿಯ ಮೇಲ್ಛಾವಣಿ ಹೊಂದಿರಬೇಕು ಎನಿಸುತ್ತದೆ. ಈ ಮಂಟಪದ ಹೊರಭಾಗ ಸಂಪೂರ್ಣ ಹಾಳಾಗಿದ್ದು ಯಾವುದೇ ಅಲಂಕರಣೆಯಿರುವುದಿಲ್ಲ.

ರಾಣಿಯರ ಸ್ನಾನಗೃಹ ಎಂದು ಕರೆಯುವ ಕಟ್ಟಡವು ಕಮಲಾಪುರ ಹಂಪಿ ರಸ್ತೆಯ ಬದಿಯಲ್ಲಿದೆ. ಈ ಸ್ನಾನಗೃಹ ಅಥವಾ ಜಲಕ್ರೀಡಾ ಸೌಧ ನಿರ್ಮಾಣದ ಬಗೆಗೆ ನಿಖರವಾದ ಮಾಹಿತಿಲ್ಲ. ಈ ಕಟ್ಟಡವನ್ನು ಯಾರು ನಿರ್ಮಾಣದ ಮಾಡಿದರು ಮತ್ತು ಇದರ ಉಪಯೋಗ ಮಾಡಿದ ಬಗೆಗೆ ನಿಖರವಾದ ದಾಖಲೆಗಳಿಲ್ಲ. ಈ ಕಟ್ಟಡವು ಚೌಕಾಕಾರವಾಗಿದ್ದು, ಅದರ ಸುತ್ತಲೂ ನೀರಿನ ಕಾಲುವೆ ಇದೆ.[4] ಪೂರ್ವ ಭಾಗದಲ್ಲಿರುವ ಸಣ್ಣ ದೋಣಿಯ ಮೂಲಕ ನೀರನ್ನು ಹರಿಸಲಾಗುತ್ತಿತ್ತು. ಈ ಕಟ್ಟಡದ ಮಧ್ಯದಲ್ಲಿರುವ ಚೌಕಾಕಾರದ ತೊಟ್ಟಿಯ ಸುತ್ತ ಸುಮಾರು ೪ ಮೀಟರ್ ಅಗಲದ ಪ್ರಾಂಗಣವಿದೆ. ಇಲ್ಲಿ ೨೪ ಕಾಮಾನಿನ ಚಾವಣಿ ಹಾಗೂ ಕಂಬಗಳಿವೆ.[5] ಪ್ರತಿ ಅಂಕಣದ ತುದಿಯಲ್ಲಿರುವ ಹೊರಗೋಡೆಯಲ್ಲಿ ಸಣ್ಣ ಕಮಾನುಗಳ ಕಿಟಕಿಗಳನ್ನು ನಿರ್ಮಿಸಲಾಗಿದೆ. ಪೂರ್ವ, ಪಶ್ಚಿಮ, ಉತ್ತರ ಗೋಡೆಗಳ ಮಧ್ಯಭಾಗದಲ್ಲಿ ದೊಡ್ಡದಾದ ತೆರೆದ ಕಮಾನುಗಳಿವೆ. ದಕ್ಷಿಣದ ಮಧ್ಯಭಾಗವು ಮುಂಚಾಚಿದ ಅಟ್ಟಣಿಗೆಯನ್ನು ಹೊಂದಿದೆ. ಇದು ಮುಂದಿರುವ ಕಾಲುವೆಯ ಮೇಲೆ ಚಾಚಿಕೊಂಡಿದೆ. ಈ ಅಟ್ಟಣಿಗೆಯ ಪಕ್ಕದಲ್ಲಿ ಚಿಕ್ಕಚಿಕ್ಕ ಕಮಾನುಗಳುಳ್ಳ ಪ್ರವೇಶದ್ವಾರವಿದೆ. ಈ ಪ್ರವೇಶದ್ವಾರದ ಪಕ್ಕದಲ್ಲಿ ಗೋಡೆಯು ಸ್ವಲ್ಪ ಮುಂಚಾಚನ್ನು ಹೊಂದಿದೆ ಇಲ್ಲಿ ಒಳಭಾಗಕ್ಕೆ ಹೊಂದಿಕೊಂಡಂತೆ ಉಪ್ಪರಿಗೆಯ ಮೇಲೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

ಈ ಕಟ್ಟಡದ ಒಳಭಾಗದಲ್ಲಿನ ಅಂಕಣದ ಸುತ್ತಲೂ ಚೂಪಾದ ಕಮಾನುಗಳನ್ನು ಮೂರು ಭಾಗದಲ್ಲಿ ಕಾಣಬಹುದು. ಈ ಕಮಾನುಗಳಲ್ಲಿರುವ ಮುಂಬೆಣೆ, ಹಿಂಬಣೆಗಳು ಆಧಾರವಾಗಿರುವ ಕಂಬದಲ್ಲೂ ಮುಂದುವರಿದಿದೆ. ಇಲ್ಲಿರುವ ಗುಮ್ಮಟಗಳು ಹಾಗೂ ಕಮಾನು ಛಾವಣಿಗಳು ಹಲವು ಬಗೆಯವು. ಕೆಲವು ಅಷ್ಟಕೋನಾಕೃತಿ, ದುಂಡಾಕೃತಿ ಮತ್ತು ಇತರ ಬಗೆಯದಾಗಿದೆ. ದುಂಡನೆಯ ಮತ್ತು ಅಷ್ಟಕೋನಾಕೃತಿಯ ಗುಮ್ಮಟಗಳು, ಅದರ ಕೆಳತುದಿಯಲ್ಲಿ ಅರೆಗಂಬಗಳು, ಪುಷ್ಪಾಕೃತಿಯ ಫಲಕಗಳು, ಕಮಲದ ಮೊಗ್ಗುಗಳು, ಹಂಸದ ಸಾಲು ಮತ್ತು ಕುಳಿತಿರುವ ಯಾಳಿಗಳು ಇಲ್ಲಿ ಮುಂತಾದ ಅಲಂಕಾರವಿದೆ. ಅಲ್ಲದೆ ಕಮಲದ ಹೂವಿನ ಗಾರೆಯ ಅಲಂಕರಣೆಯೂ ಇದೆ. ಗುಮ್ಮಟಗಳ ಒಳಭಾಗದಲ್ಲಿ ಬಾಗಿರುವಂತೆ ಹಲವು ಪಟ್ಟಿಕೆಗಳ ಸಮೂಹ, ಒಂದೆಡೆ, ಸೇರುವ ಪುಷ್ಪಾಕೃತಿ, ವಿಸ್ತ್ರತವಾದ ದಳಗಳು, ಮೂರು ದಗಳಗಳ ಆಕೃತಿಗಳು, ಗಿಳಿಗಳ ಸಾಲು, ಹಲವು ಬಗೆಯ ಬಳ್ಳಿಗಳು, ಲತಾಹಾರಗಳು, ಪರಸ್ಪರ ಛೇದಿಸುವ ಕೋನಾಕೃತಿಯವು, ಅಷ್ಟಕೋನಾಕೃತಿಯವು ಗುಮ್ಮಟವನ್ನು ಹೊತ್ತಿರುವಂತೆ ನಿರ್ಮಿಸಲಾಗಿದೆ. ಗೋಪುರದ ರೀತಿಯ ಕಮಾನುಗಳು ಉದ್ದನೆಯ ಅಲಂಕರಣಗಳ ಪಟ್ಟಿಕೆಗಳನ್ನು ಹೊಂದಿವೆ. ಇವುಗಳೊಡನೆ ಸರಪಳಿಗಳ ಪಟ್ಟಿಕೆಗಳೂ ಇವೆ. ಉತ್ತರ ಹಾಗೂ ಪಶ್ಚಿಮದ ಮಧ್ಯದ ಗುಮ್ಮಟಗಳು ಎತ್ತರವಾಗಿದ್ದು ಎರಡು ಸುತ್ತಿನ ಪಟ್ಟಿಕೆಗಳ ಅಲಂಕರಣೆಯಿದೆ. ಈ ಗುಮ್ಮಟಗಳ ಮಧ್ಯದ ಭಾಗ ಸಮತಟ್ಟಾಗಿದೆ. ಈ ಗುಮ್ಮಟಗಳ ಮಧ್ಯ ಭಾಗದಲ್ಲಿ ದೊಡ್ಡದಾದ ಕಮಲದ ಹೂಗಳ ಫಲಕವಿದೆ.

ಕಿಟಕಿಗಳು ಹಾಗೂ ಬಾಗಿಲಿನ ಕಮಾನುಗಳು ಚೂಪಾಗಿವೆ. ಮುಂಚಾಚಿದ ಅಟ್ಟಣಿಗೆ ಒಳಭಾಗದಲ್ಲಿ ಅತೀ ನಾಜೂಕಿನ ಗಾರೆಯಿಂದ ನಿರ್ಮಿಸಿದ ಜ್ಯಾಮಿತಿಯ ಮಾದರಿಗಳು, ಪುಷ್ಪ ಮಾಲೆ, ಹೆಂಸಗಳ ಸಾಲು, ಹೀಗೆ ಅನೇಕ ಮಾದರಿಗಳಿವೆ. ಈ ಅಟ್ಟಣಿಗೆಗಳು ಮುಂಭಾಗದ ಹಾಗೂ ಎರಡೂ ಪಕ್ಕದ ಭಾಗದಲ್ಲಿ ಎರಡು ಸಾಲಿನ ಕಿಟಕಿಗಳಿವೆ. ಈ ಸಾಲುಗಳ ಮಧ್ಯದಲ್ಲಿ ಉಬ್ಬಿದ ಅಲಂಕೃತ ಪಟ್ಟಿಕೆ ಎದ್ದು ಕಾಣುತ್ತದೆ. ಈ ಎರಡೂ ಸಾಲಿನ ಕಿಟಕಿಗಳೂ ಒಂದು ಆಯತಾಕಾರದ ನಿರ್ಮಿತಿಯೊಳಗಿವೆ. ಈ ಅಟ್ಟಣಿಗೆಯ ಒಳಭಾಗದಲ್ಲಿ ಚಿಕ್ಕದಾದ ಗುಮ್ಮಟದ ಮಾದರಿಗಳಿವೆ. ಕೆಲವು ದುಂಡಗೆ, ಚೌಕಾಕಾರವಾಗಿ, ಕೋನಾಕೃತಿಯಲ್ಲಿವೆ.

ಈ ಕಟ್ಟಡದ ಮಧ್ಯದಲ್ಲಿರುವ ನೀರಿನ ತೊಟ್ಟಿಗೆ ನೀರನ್ನು ಹಾಯಿಸುವ ಹರನಾಳದ ತುದಿಯು ಕಮಲದ ಹೂವಿನ ಆಕಾರವನ್ನು ಹೊಂದಿದೆ. ಈ ಅಟ್ಟಣಿಗೆಗಳನ್ನು ನಾಲ್ಕು ಉದ್ದನೆಯ ಮುಂಚಾಚಿದ ತೊಲೆಗಳ ಮೇಲೆ ನಿರ್ಮಿಸಲಾಗಿದೆ. ಒಳಭಾಗದಂತೆ ಈ ಅಟ್ಟಣಿಗೆಯ

ಹೊರಭಾಗದಲ್ಲಿಯೂ ಸಹ ಅಲಂಕರಣೆಯಿದೆ. ಇಲ್ಲಿರುವ ಎರಡು ಸಾಲಿನ ಕಿಟಕಿಗಳಲ್ಲಿ ಮೇಲಿನವು ಚೂಪು ಕಮಾನನ್ನು ಹೊಂದಿದ್ದರೆ ಕೆಳಭಾಗದವು ಚೂಪು ಕಮಾನು ಹಾಗೂ ಆಯತಾಕಾರವನ್ನು ಹೊಂದಿವೆ. ಈ ಕಿಟಕಿಗಳ ಸುತ್ತ ನಿರ್ಮಿಸಲಾದ ಅಲಂಕರಣೆ ನೋಡುಗರ ಗಮನ ಸೆಳೆಯುತ್ತವೆ. ಕಿಟಕಿಗಳ ಮೇಲೆ ಸಣ್ಣ ಚಜ್ಜಾವಿದ್ದು ಅದನ್ನು ಹಾರುವ ಯಾಳಿಗಳು ಹೊತ್ತಿರಬೇಕು. ಇಲ್ಲಿ ಕೆಲವು ಹಾರುವ ಯಾಳಿಯ ಕುರುಹುಗಳಿವೆ. ಈ ಚಜ್ಜಾದ ಮೇಲಿನ ಸಣ್ಣ ಕೈಪಿಡಿ ಗೋಡೆಯ ಮೇಲೆ ಕಮಾನು, ಅರೆಗಂಬಗಳನ್ನು ಗಾರೆಯಲ್ಲಿ ಮೂಡಿಸಲಾಗಿದೆ. ಈ ಕಟ್ಟಡದ ಮಧ್ಯದ ನೀರಿನ ತೊಟ್ಟಿಗೆ ಇಳಿಯಲು ಉತ್ತರ ಭಾಗದಲ್ಲಿ ಮೆಟ್ಟಿಲುಗಳಿವೆ. ಈ ಕಟ್ಟಡದ ಒಳಭಾಗದ ಗೋಡೆಯ ಮೇಲೆ, ಅಂದರೆ ಅಟ್ಟಣಿಗೆಗಳ ಮೇಲೆ ದೊಡ್ಡ ಚಜ್ಜಾವನ್ನು ನಿರ್ಮಿಸಲಾಗಿದ್ದು, ಅವು ಹಾಳಾಗಿರುವುದರಿಂದ, ಚಜ್ಜಾಗೆ ಉಪಯೋಗಿಸಿದ ಅಡ್ಡ ತೊಲೆಗಳು ಒಂದು ಮೇಲೆ ಒಂದಿರುವುದನ್ನು ಕಾಣಬಹುದು. ಈ ಚಜ್ಜಾವನ್ನು ನೆಗೆಯುವ ಯಾಳಿಗಳು ಹೊತ್ತಂತೆ ನಿರ್ಮಿಸಲಾಗಿದೆ. ಈಗ ಅಲ್ಲಲ್ಲಿ ಅವುಗಳ ಕುರುಹುಗಳು ಗೋಡೆಯಲ್ಲಿವೆ. ಒಳಭಾಗದ ಗೋಡೆಯ ಮೇಲು ತುದಿಯಲ್ಲಿ ಕೈಪಿಡಿ ಗೋಡೆಯಿದೆ. ಇವುಗಳಲ್ಲಿ ಕಮಾನುಗಳು ಮತ್ತು ಕಮಾನಿನ ಸಣ್ಣ ಕಿಟಕಿಗಳನ್ನು ಇಟ್ಟು ಸಿಂಗರಿಸಲಾಗಿದೆ. ಇವುಗಳ ಮಧ್ಯೆ ಅಲ್ಲಲ್ಲಿ ಅರೆಗಂಬಗಳಿವೆ. ಈ ಕಮಾನುಗಳು ಹಾಗೂ ಅರೆಗಂಬಗಳ ಮೇಲೆ ತೆನೆಗಳ ಸಾಲನ್ನು ನಿರ್ಮಿಸಲಾಗಿದೆ.

ಈ ಕಟ್ಟಡವನ್ನು ಗಾರೆಶಿಲ್ಪಗಳಿಂದ ಸಿಂಗರಿಸಲಾಗಿತ್ತು. ಈ ಕಟ್ಟಡವು ರಾಜ ಪರಿವಾರದವರ ಉಪಯೋಗಕ್ಕೆ ಇದ್ದಿರಬೇಕು. ಈ ಕಟ್ಟಡದ ಅಲಂಕರಣೆಯ ಕೆಲವು ಕುರುಹುಗಳನ್ನು ಇಂದಿಗೂ ಅಲ್ಲಲ್ಲಿರುವ ಶಿಲ್ಪದ ತುಣುಕುಗಳಿಂದ ಗುರುತಿಸಬಹುದಾಗಿದೆ. ಈ ಕಟ್ಟಡವು ೧೯ನೇ ಶತಮಾನದಲ್ಲಿ ಈಗಿರುವುದಕ್ಕಿಂತ ಭಿನ್ನವಾಗಿತ್ತೆಂದು ತಿಳಿಯಲು ಕೆಲವು ದಾಖಲೆಗಳಿವೆ. ಉತ್ತರ ಭಾಗದ ಮಧ್ಯದ ಗುಮ್ಮಟ, ಉಪ್ಪರಿಗೆಗೆ ಹೋಗುವ ಮೆಟ್ಟಿಲುಗಳ ಮೇಲ್ಭಾಗದಲ್ಲಿ ಎರಡು ಅಂತಸ್ತಿನ ಮಾಳಿಗೆ ಹಾಗೂ ಚಜ್ಜಾಗಳಿದ್ದ ಬಗ್ಗೆ ಆಧಾರಗಳಿವೆ. ಈ ಕಟ್ಟಡಕ್ಕೆ ನೀರನ್ನು ಸಮೀಪದಲ್ಲೇ ಇರುವ ಚಂದ್ರಶೇಖರ ದೇವಸ್ಥಾನದ ಬಳಿಯಿರುವ ಗಾರೆಯಿಂದ ನಿರ್ಮಿಸಿದ ಸಣ್ಣ ಕಾಲುವೆಗಳಿಂದ ಹರಿಸಿರಬೇಕು.

ನೀರು ಹಾಯಿಸುವ ವ್ಯವಸ್ಥೆ, ಮಲಿನ ನೀರು ಹೊರಹೋಗಲು ಸಣ್ಣ ಕೊಳವೆಗಳ ಬಳಕೆ, ಇವು ವಿಜಯನಗರ ಕಾಲದ ತಾಂತ್ರಿಕತೆಗೆ ಉತ್ತಮ ಉದಾಹರಣೆಯಾಗಿವೆ.

ಕಾರಂಜಿ ಹಾಗೂ ಜಲ ಸೌಧಗಳು ಹಲವು ವಾಸ್ತು ಸಾಮೀಪ್ಯವನ್ನು ಹೊಂದಿವೆ. ಈ ಕಟ್ಟಡಗಳ ಕಾಲಮಾನವನ್ನು ನಿರ್ಧರಿಸುವುದು ಸುಲಭ ಸಾಧ್ಯವಾಗಿಲ್ಲ. ಈ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಶಾಸನ ಮತ್ತು ಉಲ್ಲೇಖಗಳು ದೊರಕಿಲ್ಲ. ಈ ಕಟ್ಟಡಗಳು ಹಾಗೂ ಪೂರಕ ವ್ಯವಸ್ಥೆಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿವೆ.

ಕಾರಂಜಿಗಳು, ರಾಣಿಯರ ಸ್ನಾನಗೃಹ ಅಥವಾ ಜಲಕ್ರೀಡಾ ಸೌಧ ಇವುಗಳ ಹಲವು ರೀತಿಯ ಸಮಾನ ವಿನ್ಯಾಸ, ವಾಸ್ತು ವಿಶೇಷತೆಗಳನ್ನು ಹೊಂದಿವೆ. ಕಮಾನುಗಳು, ಗುಮ್ಮಟ, ಪ್ರಾಂಗಣ, ಹೊರಭಾಗ ಹಾಗೆಯೆ ಒಳಭಾಗದ ಗೋಡೆಗಳು, ಗಾರೆಶಿಲ್ಪ, ನೀರಿನ ಪೂರೈಕಾ ವ್ಯವಸ್ಥೆ, ಇವು ಗಮನಿಸಬೇಕಾದ ಅಂಶಗಳು. ಇಲ್ಲಿ ಕೆಲವು ಭಾಗಗಳು ಹಲವು ಸಂದರ್ಭಗಳಲ್ಲಿ ಅನೇಕ ಬದಲಾವಣೆಗೆ ಒಳಪಟ್ಟಿವೆ. ವಿಶಿಷ್ಟ ಶೈಲಿಯ ವಾಸ್ತುಶಿಲ್ಪದ ನಿರ್ಮಾಣವು ಸಾಮಾಜಿಕ ಶಾಂತಿ, ಸುವ್ಯವಸ್ಥೆ, ಭದ್ರತೆ, ನೆಲೆಸಿದ್ದಾಗ ಆಗಿರಬಹುದಾಗಿದೆ. ಅಲ್ಲದೆ ೧೬ನೇ ಶತಮಾನದ ವಿಜಯನಗರ ಸಾಹಿತ್ಯದಲ್ಲಿ ಹಲವು ಸೌಧಗಳ ವರ್ಣನೆಗಳಿವೆ. ಈ ಕಾಲವು ವಿಜಯನಗರದ ಉಚ್ಛ್ರಾಯ ಕಾಲವಾಗಿದೆ. ಇವುಗಳ ಹಿನ್ನೆಲೆಯಲ್ಲಿ ಈ ಕಟ್ಟಡಗಳೂ ಸಹ ೧೬ನೇ ಶತಮಾನದ ನಿರ್ಮಾಣವಾಗಿರಬಹುದೆಂದು ತೋರುತ್ತದೆ.

**ಆಕರ**

ವಿಜಯನಗರ ಅಧ್ಯಯನ, ಸಂ.೭, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೧೦-೧೧೯

[1] Longhurst A.H., Hampi Ruins, Asia Educational Series, New Delhi, p.56, 1982

[2] Ibid, p. 56

[3] Deva Kunjari, H. Archacological Survey of India, New Delhi, p.43, 1983

[4] Dominic J. Devankins, Hydulic works in New light on Hampi, Marg publications, pp.

[5] Setter S., Hampi, Bangalore, p.74

## ೪೧. ವಿಜಯನಗರ ಕಾಲದ ತುಂಗಭದ್ರಾ ನದಿಯ ಆಣೆಕಟ್ಟೆಗಳು (೧)

**ನೀರಾವರಿಯ ಅವಶ್ಯಕತೆ:** ಪುರಾತನ ಕಾಲದಿಂದಲೂ ನಮ್ಮದು ವ್ಯವಸಾಯ ಪ್ರಧಾನ ದೇಶವಾಗಿದ್ದು, ಪ್ರಜೆಗಳ ಕಲ್ಯಾಣವು ವ್ಯವಸಾಯೋತ್ಪನ್ನಗಳ ಮೇಲೆ ಆಧಾರಿತವಾಗಿದೆಯಷ್ಟೇ? ಎಂದರೆ ಆ ಸಮೃದ್ಧವಾದ ವ್ಯವಸಾಯೋತ್ಪನ್ನಗಳಿಗಾಗಿ ದೇಶವು ಮಳೆಯನ್ನವಲಂಬಿಸಿದೆ.[1] ಆದರೆ ಈ ವಿಶಾಲ ದೇಶದಲ್ಲಿ ಪ್ರತಿ ವರ್ಷವೂ ಒಂದಿಲ್ಲೊಂದು ಭಾಗವು ಅನಾವೃಷ್ಟಿ, ಅನಿಶ್ಚಿತವೃಷ್ಟಿ, ಅಕಾಲವೃಷ್ಟಿ ಮತ್ತು ಅತಿವೃಷ್ಟಿಗಳಿಗೆ ಬಲಿಯಾಗಿ ಅದರಿಂದಾಗಿ ವ್ಯವಸಾಯೋತ್ಪನ್ನಗಳು ಕುಂಠಿತಗೊಂಡು ಪ್ರಜೆಗಳು ಸಂಕಷ್ಟಗಳಿಗೀಡಾಗುತ್ತಿದ್ದ ನಿದರ್ಶನಗಳು ವಿಫುಲವಾಗಿ ತಿಳಿದುಬರುತ್ತವೆ. ರಾಮಾಯಣ ಮತ್ತು ಮಹಾಭಾರತಗಳ ಕಾಲಗಳಲ್ಲಿ ಸಹ ಅನಾವೃಷ್ಟಿ ಮತ್ತು ಕ್ಷಾಮಗಳ ಬಗ್ಗೆ ಉಲ್ಲೇಖನಗಳಿವೆ. ಮತ್ತು ಅವುಗಳ ನಿವಾರಣೆಗಾಗಿ ಅರಸರು ಹಾಗೂ ಇತರ ಅಧಿಕಾರಿಗಳು ಕೈಗೊಂಡ ವಿವಿಧ ಕ್ರಮಗಳ ಬಗ್ಗೆಯೂ ಉಲ್ಲೇಖನಗಳಿವೆ. ಇಂಥ ನಿವಾರಣಾ ಕ್ರಮಗಳಲ್ಲಿ ಮುಖ್ಯವಾದು ಅದು ನೀರಾವರಿ ಬೇಸಾಯಕ್ಕೆ ಬೇಕಾದ ಅನುಕೂಲತೆಗಳನ್ನೊದಗಿಸುವುದು. ಅಂಥ ಕ್ರಮಗಳಿಂದಾಗಿ, ಅನಾವೃಷ್ಟಿ ಮುಂತಾದ ಕಾರಣಗಳಿಂದಾಗಿ ಒದಗಬಹುದಾದ ದುಷ್ಪರಿಣಾಮಗಳನ್ನು ನಿವಾರಿಸುವಲ್ಲಿ ಅಥವಾ ಅವುಗಳ ಭೀಕರತೆಯನ್ನಾದೂ ಕನಿಷ್ಠಗೊಳಿಸುವಲ್ಲಿ ಸಾಧ್ಯವಾಗುತ್ತಿತ್ತು. ಆದುದರಿಂದ ನೀರಾವರಿ ಬೇಸಾಯಕ್ಕೆ ಯಾವಾಗಲೂ ಹೆಚ್ಚಿನ ಪ್ರಾಧಾನ್ಯತೆಯನ್ನು ರಾಜರೂ ಮತ್ತು ಪ್ರಜೆಗಳೂ ನೀಡುತ್ತಾ ಬಂದಿದ್ದಾರೆ.

**ನೀರಾವರಿಯ ವಿಧಾನಗಳು:** ನೀರಾವರಿ ಬೇಸಾಯವು ಸಾಮಾನ್ಯವಾಗಿ ಮೂರು ತೆರನಾಗಿದೆ. ಮೊದಲನೆಯದು ಕೆರೆ ಏರಿಗಳನ್ನು ನಿರ್ಮಿಸಿ ಮತ್ತು ಮಳೆಗಾಲದಲ್ಲಿ ನೀರನ್ನು ಕೆರೆಗಳಲ್ಲಿ ಶೇಖರಿಸಿ, ಬೇಕಾದಾಗ ಆ ನೀರನ್ನು ಜಮೀನುಗಳಿಗೆ ಕಾಲುವೆಗಳ ಮೂಲಕ ಹಾಯಿಸಿ ಬೆಳೆಗಳನ್ನು ಬೆಳೆಯುವುದು. ಬಾವಿಗಳನ್ನು ತೋಡಿ, ಏತ ಅಥವಾ ಕಪಿಲೆ ಮುಂತಾದ ಸಾಧನಗಳಿಂದ, ನೀರನ್ನು ಮೇಲಕ್ಕೆ ಎತ್ತಿ ಜಮೀನುಗಳಿಗೆ ಕೊಡುವುದರಿಂದ ಬೇಸಾಯ ಮಾಡುವುದು, ಮತ್ತೊಂದು ಪದ್ಧತಿ. ಕೊನೆಯದು ಹಾಗೂ ಬಹು ಲಾಭದಾಯಕವಾದ ವಿಧಾನವೆಂದರೆ, ನದಿಗಳಿಗೆ ಆಣೆಕಟ್ಟೆಗಳನ್ನು ಕಟ್ಟುವುದರ ಮೂಲಕ ನದಿಯ ನೀರಿನ ಮಟ್ಟವನ್ನು ಎತ್ತರಿಸಿದ ನಂತರ ಆ ನೀರಿನ ಕೆಲಭಾಗವನ್ನು ಕಾಲುವೆಗಳ ಮೂಲಕ ಜಮೀನುಗಳಿಗೆ ಹರಿಸುವುದು.

**ಈ ವಿಧಾನಗಳ ಪ್ರಾಚೀನತೆ:** ಮೇಲೆ ತಿಳಿಸಿದ ಎಲ್ಲಾ ವಿಧಾನಗಳೂ ನಮ್ಮ ದೇಶದಲ್ಲಿ ವೇದ ಉಪನಿಷತ್ತುಗಳ ಕಾಲದಿಂದಲೂ ಮಿತ ಪ್ರಮಾಣದಲ್ಲಿ ಬಳಕೆಯಲ್ಲಿದ್ದುದಾಗಿ ತಿಳಿದುಬರುತ್ತದೆ. ಅಥರ್ವ ವೇದದಲ್ಲಿ ನದಿಯಿಂದ ಕಾಲುವೆಗಳನ್ನು ತೋಡಿ ನೀರನ್ನು ಬೇಕಾದ ಸ್ಥಳಕ್ಕೆ ಹರಿಸಿಕೊಳ್ಳುತ್ತಿದ್ದ ವಿವರಣೆಯನ್ನು ಕಾಣಬಹುದು.[2] ಅರ್ಥಶಾಸ್ತ್ರದ ಕರ್ತೃವಾದ ಕೌಟಿಲ್ಯ ಚಾಣಕ್ಯನು ಸಹ ನೀರಾವರಿ ಬೇಸಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾನೆ. ಅವನ ಸಮಕಾಲೀನನೂ ಹಾಗೂ ಮೌರ್ಯ ವಂಶದ ಪ್ರಸಿದ್ಧ ಅರಸರಲ್ಲೊಬ್ಬನಾದ ಚಂದ್ರಗುಪ್ತನು (ಕ್ರಿ.ಪೂ.೩೨೦ ರಿಂದ ೨೯೭ ರವರೆಗೆ ಆಳಿದ) ಗುಜರಾತಿನ ಗಿರಿನಾರದ ಬಳಿ ಕೆಲವು ಹಳ್ಳಿಗಳಿಗೆ ಅಡ್ಡಲಾಗಿ ಏರಿಯನ್ನು ಹಾಕಿಸುವುದರಿಂದ ನಿರ್ಮಾಣವಾದ ಕೆರೆಗೆ 'ಸುದರ್ಶನ' ವೆಂದು ಹೆಸರಿಸಲಾಗಿತ್ತು. ನಂತರ ಮತ್ತು ಅದೇ ವಂಶದ ಬಹು ಖ್ಯಾತಿವೆತ್ತ

ಅಶೋಕ ಚಕ್ರವರ್ತಿಯು (ರಿ.ಪೂ.೨೬೩ ರಿಂದ ೨೩೨ ರವರೆಗೆ ಆಳಿದ) ಅದೇ ಸುದರ್ಶನ ಕೆರೆಗೆ ಕೆಲವು ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿಸಿದನೆಂದು ಪ್ರತೀತಿ.[3] ಹೀಗೆ ನೀರಾವರಿ ಬೇಸಾಯದ ಬಗ್ಗೆ ಪ್ರಯತ್ನಗಳು ಮೊದಲಿನಿಂದಲೂ ನಡೆಯುತ್ತಾ ಬಂದು, ಚರಿತ್ರೆಯ ಮಧ್ಯಯುಗದಲ್ಲಿ ಈ ಪ್ರಯತ್ನಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಬೇಕಾಯಿತು. ಬಹುಶಃ ಆ ವೇಳೆಗಾಗಲೇ ಜನಸಂಖ್ಯೆಯಲ್ಲಿ ಗಮನಾರ್ಹ ಬೆಳವಣಿಗೆಯಾಗಿ, ಅಧಿಕ ವ್ಯವಸಾಯೋತ್ಪನ್ನಗಳ ಅವಶ್ಯಕತೆ ಹೆಚ್ಚಾಗಿದ್ದಿರಬೇಕು. ಆದುದರಿಂದ ಚರಿತ್ರೆಯ ಮಧ್ಯಯುಗದಲ್ಲಿ, ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಳುಕ್ಯರು, ಹೊಯಿಸಳರು ಮುಂತಾದ ಅರಸು ಮನೆತನಗಳು, ನೀರಾವರಿ ಬೇಸಾಯಕ್ಕೆ ಆದ್ಯತೆ ನೀಡಿ, ಈ ಭಾಗದಲ್ಲಿ ಕೆರೆಗಳನ್ನು ಭಾವಿಗಳನ್ನು ಕೆಲವು ಆಣೆಕಟ್ಟುಗಳನ್ನು ನಿರ್ಮಿಸಿದರು. ಈಗಲೂ ಬಾದಾಮಿ, ಹಳೇಬೀಡುಗಳ ಹೊರವಲಯಗಳಲ್ಲಿ ಕಾಣಬರುವ ವಿಶಾಲ ಕೆರೆಗಳು, ಅಲ್ಲಿಯ ರಾಜರು ನೀರಾವರಿ ಕಾಮಗಾರಿಗಳಿಗೆ ನೀಡಿದ ಆದ್ಯತೆಯ ಮುಖ್ಯ ನಿದರ್ಶನಗಳಾಗಿವೆ. ಹೀಗಾಗಿ ದಕ್ಷಿಣ ಭಾರತವೇ, ಅತೀ ಪುರಾತನ ಕಾಲದಿಂದಲೂ ನೀರಾವರಿ ಬೇಸಾಯ ಕ್ರಮಗಳನ್ನು ಅನುಸರಿಸಿದ ಪ್ರದೇಶವೆಂದು ಪರಿಗಣಿಸಲಾಗಿದೆ.

**ವಿಜಯನಗರದ ಅರಸರ ಕಾಲದಲ್ಲಿ:** ವಿಜಯನಗರದ ಅರಸರ ಆಡಳಿತ ಕಾಲದಲ್ಲಿ, ಇಂಥ ಕೆಲಸಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಲಾಯಿತು. ಈ ಕಾರ್ಯಗಳಲ್ಲಿ ಅರಸರೂ, ಅಧಿಕಾರಿಗಳೂ, ದೇವಮಂದಿರ, ಮಠ ಮುಂತಾದ ಸಂಸ್ಥೆಗಳೂ, ಪ್ರಜೆಗಳೂ ಭಾಗವಹಿಸಲು ಮುಂದಾಗುತ್ತಿದ್ದರು. ಈ ವಿಷಯವನ್ನು ದೃಢೀಕರಿಸುವಲ್ಲಿ, ವಿಫುಲವಾಗಿ ದೊರೆಯುವ ಸಮಕಾಲೀನ ಶಾಸನ ಮತ್ತು ಗ್ರಂಥ ಸಾಹಿತ್ಯಗಳು ನೆರವಾಗುತ್ತವೆ. ಉದಾಹರಣೆಗೆ, ಅನಂತಪುರ ಜಿಲ್ಲೆಯ ಗೊರ್ರೆಪಲ್ಲಿ ಗ್ರಾಮದ ಲಕ್ಷ್ಮೀದೇವಿ ಗುಡಿಯಲ್ಲಿ ಕಾಣಬರುವ ಶಾಸನವು[4] '....ಮೊದೆಯಕ್ಕೆ ಪ್ರತಿನಾಮವಾದ ಅಚ್ಯುತರಾಯಪುರವೆಂಬ ಗ್ರಾಮದ ಉತ್ತರ ಭಾಗದಲ್ಲಿ ತಲಪರಿಗೆಯನು ತೆಗೆಸಿ ನೂತನ ತುಂಗಭದ್ರೆಯೆಂಬ ಹೆಸರುಳ್ಳ ಕಾಲುವೆಯನೂ ತಂದು ಈ ಕಾಲುವೆಯ ನೀರು ಹರಿದು ಬೆಳೆವಷ್ಟು....' ಎಂದು ಮುಂತಾಗಿ ತಿಳಿಸುತ್ತದೆ. ಎಂದರೆ ಒಂದು ಕಾಲುವೆಗೆ 'ನೂತನ ತುಂಗಭದ್ರೆ' ಎಂದು ಕರೆಯುವಂತೆ ಅವರ ಸಂತೋಷ ಮತ್ತು ಉತ್ಸಾಹಗಳಿದ್ದುದು ವ್ಯಕ್ತವಾಗುತ್ತದೆ. ಹೀಗೆ ನೀರಾವರಿ ಅಭಿವೃದ್ಧಿಗಾಗಿ ಕೈಗೊಂಡ ವಿವಿಧ ಕ್ರಮಗಳನ್ನು ಉಲ್ಲೇಖಿಸುವ ಶಾಸನಾಧಾರಗಳನ್ನು ಸಾವಿರಾರು ಸಂಖ್ಯೆಯ ಸಂಖ್ಯೆಯಲ್ಲಿ ಉದಾಹರಿಸಬಹುದು.

ಹಾಗೆಯೇ ಗ್ರಂಥ ಸಾಹಿತ್ಯಾಧಾರಗಳು ಸಹ ವಿಫುಲವಾಗಿವೆಯಾದರೂ ಪ್ರಸ್ತುತದಲ್ಲಿ ಅತಿ ಮುಖ್ಯವಾದ ಒಂದು ಉದಾಹರಣೆಯನ್ನು ತಿಳಿಯೋಣ. ವಿಜಯನಗರದ ಶ್ರೇಷ್ಠ ಅರಸರುಗಳಲ್ಲೊಬ್ಬನಾದ ಕೃಷ್ಣದೇವರಾಯ ಮಹಾರಾಯನು ತಾನೇ ಬರೆದ 'ಅಮುಕ್ತಮಾಲ್ಯದ'[5] ಎಂಬ ಗ್ರಂಥದಲ್ಲಿ ಯಾವುದೇ ರಾಜ್ಯದ ಆಥಿಕ ಸಮೃದ್ಧಿಯು ಅದರ ಕೆರೆ ಮತ್ತು ಕಾಲುವೆಗಳ ನೀರಿನಿಂದಾಗುವ ಬೇಸಾಯದ ಪ್ರಮಾಣವನ್ನು ಅವಲಂಬಿಸಿದೆಯೆಂದು ಪ್ರತಿಪಾದಿಸಿರುತ್ತಾನೆ.

ಅಂತೆಯೇ ವಿಜಯನಗರ ಸಾಮ್ರಾಜ್ಯವನ್ನು ಸಂದರ್ಶಿಸಿ ವಿದೇಶಿ ಪ್ರವಾಸಿಗರೂ ಸಹ, ಆ ರಾಜ್ಯದಲ್ಲಿನ ನೀರಾವರಿ ಕ್ರಮಗಳನ್ನು ಕುರಿತು ವಿಶೇಷವಾಗಿ ಹೊಗಳಿ ಬರೆದಿರುತ್ತಾರೆ. ಅಲ್ಲದೇ ವಿದೇಶಿ ತಂತ್ರಜ್ಞ (engineers)ರನ್ನೂ ಇಂತಹ ಯೋಜನೆಗಳಿಗಾಗಿ ನಿಯಮಿಸಿಕೊಳ್ಳುತ್ತಿದ್ದರೆಂದೂ ತಿಳಿದುಬರುತ್ತದೆ. ಜೊಡೆಲ್ಲಾ ಪೊಂಟ (Jao Della Ponte).[6] ಎಂಬ ಪೋರ್ಚುಗಲ್‌ದೇಶದ ತಂತ್ರಜ್ಞನನ್ನು ಕೃಷ್ಣದೇವ ಮಹಾರಾಯನು ಒಂದು ದೊಡ್ಡ ಕೆರೆಯ ನಿರ್ಮಾಣ ಕಾರ್ಯಕ್ಕಾಗಿ ನಿಯಮಿಸಿಕೊಂಡಿದ್ದನೆಂದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಕೊಟ್ಟಿರುವ ವಿವರಣೆಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಹೋಲಿಸಿದ್ದಲ್ಲಿ, ಹೊಸಪೇಟೆಗೆ ಪಶ್ಚಿಮಕ್ಕೆ ಈಗಲೂ ಕಾಣಬರುವ ರಾಯರ ಕೆರೆಯೇ ಆ ದೊಡ್ಡ ಕೆರೆ ಮತ್ತು ಈ ಕೆರೆಯ ನಿರ್ಮಾಣದಲ್ಲಿಯೇ ಮೇಲೆ ತಿಳಿಸಿದ ಪೋರ್ಚುಗೀಸ್‌ತಂತ್ರಜ್ಞನು ನಿರತನಾಗಿದ್ದನೆಂದು ಹೇಳಬಹುದು.

ಪ್ರಜೆಗಳ ಕಲ್ಯಾಣ ಮತ್ತು ಆರ್ಥಿಕ ಸಮೃದ್ಧಿಯನ್ನು ಧ್ಯೇಯವಾಗಿಟ್ಟುಕೊಂಡು ನೀರಾವರಿ ಅಭಿವೃದ್ಧಿ ಕಾರ್ಯಗಳು ಎಷ್ಟು ಬಿರುಸಿನಿಂದ ನಡೆದುವೆಂದರೆ, ಕೆಲ ಶತಮಾನಗಳ ನಂತರ ಆಡಳಿತಾಧಿಕಾರಿಗಳಾಗಿ ಬಂದ ಇಂಗ್ಲೀಷು ಅಧಿಕಾರಿಗಳು, ಅವುಗಳನ್ನು ನೋಡಿ ಅಚ್ಚರಿ

ಪಟ್ಟುದಲ್ಲದೇ ಮೆಚ್ಚಿ ಹೊಗಳಿ ಬರೆದಿಟ್ಟಿರುತ್ತಾರೆ. ಕ್ರೋಲ್[7] ಎಂಬ ಇಂಗ್ಲೀಷ್ಅಧಿಕಾರಿಯು ವಿಜಯನಗರದ ನೀರಾವರಿ ಕ್ರಮಗಳನ್ನು ಕುರಿತು '……..ನೀರಿನ ಲಭ್ಯತೆ ಎಷ್ಟೇ ಚಿಕ್ಕ ಪ್ರಮಾಣದಲ್ಲಿರಲಿ, ಅಲ್ಲೆಲ್ಲಾ ಒಂದು ಕಟ್ಟೆಯನ್ನು ಕಟ್ಟಲಾಯಿತ್ತಲ್ಲದೇ, ಹೆಚ್ಚು ನೀರಾವರಿ ಬೆಳೆಗಳನ್ನು ಬೆಳೆಯಿಸಲು ಉಪಯೋಗಿಸಿಕೊಳ್ಳಲಾಯಿತ್ತಲ್ಲದೇ, ಹೆಚ್ಚು ನೀರಾವರಿ ಬೆಳೆಗಳನ್ನು ಬೆಳೆಯಿಸಲು ಉಪಯೋಗಿಸಿಕೊಳ್ಳಲಾಗಿತ್ತು ಎಂದು ಹೇಳಿರುತ್ತಾನೆ. ಸರ್‌ಥಾಮಸ್‌ಮನ್ರೋ[8] ಎಂಬ ಇನ್ನೊಬ್ಬ ಆಂಗ್ಲ ಅಧಿಕಾರಿಯು ಬರೆದಿರುವುದು ಸಹ ಸೂಕ್ತ ಮೆಚ್ಚುಗೆಯದಾಗಿದೆ. '……….. ನಾವು ಹೊಸದಾಗಿ ಕಟ್ಟೆಗಳನ್ನು ನೀರಾವರಿಗಾಗಿ ನಿರ್ಮಿಸಬೇಕೆಂಬ ಮಾತು ನಿರರ್ಥಕವಾದದ್ದು, ಏಕೆಂದರೆ ನೀರಾವರಿಗಾಗಿ ಅನುಕೂಲವಿರುವ ನಿವೇಶನಗಳಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಈ ಪೂರ್ವದಲ್ಲಿಯೇ ಉಪಯೋಗ ಮಾಡಿಕೊಳ್ಳಲಾಗಿದೆ. ಇಂತಹ ಸಂದರ್ಭದಲ್ಲಿ ಮಾಡಬೇಕಾಗಿ ಉಳಿದಿರುವ ಪ್ರಜೋಪಯೋಗಿ ಕೆಲಸವೆಂದರೆ, ಪೂರ್ವದ ಈ ಕಟ್ಟೆಗಳಿಗೆ ದುರಸ್ತಿ ಕಾರ್ಯಗಳು ಮತ್ತು ಹೂಳು ತೆಗೆಯುವುದು. ತತ್ಪರಿಣಾಮವಾಗಿ ನೀರಾವರಿ ಸೌಲಭ್ಯವು ಮೊದಲಿನಂತೆ ಅಥವಾ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವಂತೆ ಏರ್ಪಡಿಸುವುದಾಗಿದೆ…..' ಹೀಗೆ ಜನತೆಯ ಆರ್ಥಿಕ ಸಮೃದ್ಧಿಯನ್ನು ಗುರಿಯಾಗಿರಿಸಿಕೊಂಡು ಪೂರ್ವದಿಂದಲೂ ನೀರಾವರಿ ವ್ಯವಸಾಯಕ್ಕೆ ಅವಶ್ಯವಿದ್ದ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ.

**ನೀರಾವರಿಗೆ ಧಾರ್ಮಿಕ ಸಮ್ಮತಿ:** ನೀರಾವರಿ ಬೇಸಾಯದ ದಿಸೆಯಲ್ಲಿ ನಡೆದ ಸತತ ಪ್ರಯತ್ನಗಳಿಗೆ ಹಿಂದೂ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಮತ್ತು ಈಗಲೂ ಇರುವ ಧಾರ್ಮಿಕ ಸಮ್ಮತಿ ಮತ್ತು ನಂಬಿಕೆಗಳೂ ಸಹ ಮುಖ್ಯ ಕಾರಣಗಳಾಗಿವೆ. ನೀರನ್ನು ಸಂಗ್ರಹಿಸುವುದಕ್ಕಾಗಿ ಕೆರೆ ಕಟ್ಟೆಗಳನ್ನು ಕಟಟಿಸುವುದರಿಂದ ವಿಶೇಷ ಪುಣ್ಯ ಲಭಿಸುತ್ತದೆಂದು ನಮ್ಮ ಧಾರ್ಮಿಕ ಗ್ರಂಥಗಳು ಸಾರುತ್ತವೆ. ಕೆರೆಯನ್ನು ಕಟ್ಟಿಸುವುದು ಏಳು ಮಹಾಪುಣ್ಯ ಕಾರ್ಯಗಳಲ್ಲಿ ಅತಿಮುಖ್ಯವಾದುದೆಂದು ಹೇಳಲಾಗಿದೆ. ಏಕೆಂದರೆ, ಈ ನಿರ್ಮಾಣ ಕಾರ್ಯಗಳಿಂದ ಶೇಖರಿಸಲ್ಪಟ್ಟ ನೀರು ಭೂಮಿಯ ಮೇಲೆ ವಾಸಿಸುವ ಚರಾಚರ ಪ್ರಾಣಿಗಳೆಲ್ಲವುಗಳಿಂದಲೂ ಉಪಯೋಗಿಸಲ್ಪಡುತ್ತದೆ. ಆದುದರಿಂದ ಇಂಥ ಕಾರ್ಯಗಳನ್ನು ಕೈಗೊಳ್ಳುವುದರಿಂದ ಲಭ್ಯವಾಗುವ ಪುಣ್ಯ ವಿಶೇಷವನ್ನು ಬ್ರಹ್ಮನೂ ಸಹಾ ಎಣಿಕೆ ಮಾಡಲು ಅಶಕ್ತನೆಂದು ಕಡಪಾ ಜಿಲ್ಲೆಯ ಶಿಲಾಶಾಸನದಿಂದ[9] ತಿಳಿದುಬರುತ್ತದೆ.

ಹನ್ನೆರಡನೇ ಶತಮಾನದವನಾದ ಸೊನ್ನಲಾಪುರ (ಈಗಿನ ಸೊಲ್ಲಾಪುರ)ದ ಸಿದ್ಧರಾಮನಂತಹ[10] ಶಿವಯೋಗಿಯು ತನ್ನ ಅನುಚರರೊಂದಿಗೆ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿ ಆ ಮೂಲಕ ಜನಾಂಗದ ಶ್ರೇಯೋಭಿವೃದ್ಧಿಗೆ ಕಾರಣರಾಗಿ ಮೋಕ್ಷವನ್ನು ಕಂಡುಕೊಂಡರು. ಹೀಗೆ ನೀರಾವರಿ ಕಾಮಗಾರಿಗಳಲ್ಲಿ ಧಾರ್ಮಿಕ ಭಾವನೆಗಳೂ ಸಹ ಅಡಗಿದ್ದುದರಿಂದಾಗಿ, ಅವುಗಳ ನಿರ್ಮಾಣ ಕಾರ್ಯಗಳಲ್ಲಿ ಸಮಾಜದ ಎಲ್ಲಾ ವರ್ಗಗಳ ಅದರಲ್ಲೂ ದಕ್ಷಿಣ ಭಾರತದಲ್ಲಿ, ನೀರಾವರಿಯ ಏರ್ಪಾಟಿನ ಕುರುಹುಗಳು ಈಗಲೂ ವಿಶೇಷವಾಗಿ ಕಾಣಬರುತ್ತವೆ.

ಆಗಾಗ್ಗೆ ಕೆಲವು ದುರಸ್ತಿ ಕಾರ್ಯಗಳು ನಡೆದು ಮತ್ತು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಕೆಲವು ಹೊಂದಾಣಿಕೆಗಳೊಂದಿಗೆ ಬಹುತೇಕವಾಗಿ ಎಲ್ಲವೂ ಈಗಲೂ ಉಪಯೋಗದಲ್ಲಿದೆ.

**ಆಣೆಕಟ್ಟೆಗಳ ಪರಂಪರೆ:** ಇದುವರೆಗೆ ನೀರಾವರಿ ಬೇಸಾಯಕ್ಕಾಗಿ ಮಾಡಿದ ಏರ್ಪಾಡುಗಳ ಬಗ್ಗೆ ಸಾಮಾನ್ಯವಾಗಿ (in general) ತಿಳಿಯಲಾಯಿತಲ್ಲವೆ? ಈಗ ಈ ಲೇಖನದ ವಿಷಯವಾದ ಆಣೆಕಟ್ಟೆಗಳ ಕುರಿತು ನೋಡೋಣ. ಇತರ ನೀರಾವರಿ ಕ್ರಮಗಳಂತೆ, ನದಿಯ ನೀರನ್ನು ನೀರಾವರಿಗೆ ಉಪಯೋಗಿಸುವ ಪದ್ಧತಿಯು ಸಹ ಹಿಂದಿನಿಂದಲೂ ಪ್ರಚಲಿತದಲ್ಲಿದ್ದಂತೆ, ಈಗಾಗಲೇ ಮೇಲೆ ಸೂಚ್ಯವಾಗಿ ಹೇಳಿರುವ ಪ್ರಕಾರ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಅತ್ಯಂತ ಹಳೆಯದಾದ ನದೀ ಆಣೆಕಟ್ಟೆ ಹೊಯಿಸಳ ಅರಸರ ಕಾಲದಲ್ಲಿ ಕಾವೇರಿ ನದಿಗೆ ತಲಕಾಡಿನ[11] ಹತ್ತಿರ ಕಟ್ಟಲಾಯಿತು. ಅದೇ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಇತರೆ ಆಣೆಕಟ್ಟೆಗಳು ತಲಕಾಡಿನದಕ್ಕಿಂತಲೂ ಈಚಿನವೆಂದು ಹೇಳಲಾಗುತ್ತಿದೆ.

ಹೀಗೆ ವಿಜಯನಗರ ಸಾಮ್ರಾಜ್ಯದ ಕಾಲಕ್ಕಿಂತಲೂ ಮೊದಲೇ ನದಿಗಳಿಗೆ ಆಣೆಕಟ್ಟೆಗಳನ್ನು ಕಟ್ಟುವ ಕ್ರಮಗಳು ಪ್ರಚಲಿತದಲ್ಲಿದ್ದವು. ಅದೇ ಪದ್ಧತಿಯನ್ನು ವಿಜಯನಗರದ ಅರಸರು, ಅವರ ಅಧಿಕಾರಿಗಳು ಮತ್ತು ಪ್ರಜೆಗಳು ಮುಂದುವರಿಸಿಕೊಂಡು ಬಂದುದದಲ್ಲದೆ, ತಮಗೆ ಹೆಚ್ಚು ಅನುಕೂಲವೂ, ಲಾಭದಾಯವಕವೂ ಮತ್ತು ಅವಶ್ಯವೆನಿಸಿದ ನಿವೇಶನಗಳಲ್ಲಿ ಇಂತಹ ನಿರ್ಮಾಣ ಕಾರ್ಯಗಳನ್ನು ಹೆಚ್ಚಿನ ಉತ್ಸಾಹದಿಂದ ಕೈಗೊಂಡರು.

ವಿಜಯನಗರದ ರಾಜರು ಕೆಲ ವಿಶಿಷ್ಟ ಕಾರಣಗಳಿಗಾಗಿ ತಮ್ಮ ರಾಜಧಾನಿಯನ್ನು ಹಂಪೆಯ ಪರಿಸರದಲ್ಲಿ ಕಟ್ಟಬೇಕಾಯಿತಲ್ಲವೆ? ಆ ನಿವೇಶನವೋ ಗುಡ್ಡ ಗಾಡುಗಳಿಂದ, ಗುಂಡು ಬಂಡೆಗಳಿಂದ ತುಂಬಿ ಹರಡಿದುದಾಗಿದ್ದುದರಿಂದಲೂ ಮತ್ತು ನಗರವು ಅತಿ ಶೀಘ್ರದಲ್ಲಿಯೇ ಬೆಲೆಯತೊಡಗಿದ್ದರಿಂದಲೂ, ಆ ನಗರಕ್ಕೆ ಬೇಕಾದ ನೀರಿನ ಸರಬರಾಜಿನ ಏರ್ಪಾಟು ಮಾಡುವುದು ಅತ್ಯವಶ್ಯಕವೆನಿಸಿತು. ಆ ನೀರು ಕುಡಿಯುವುದಕ್ಕೂ, ಜಾನುವಾರಗಳ ಉಪಯೋಗಕ್ಕೂ ಮತ್ತಿತರ ಬಳಕೆಗಳಿಗೂ ಬೇಕಾಗಿದ್ದುದರಿಂದ, ಹೆಚ್ಚಿನ ಪ್ರಮಾಣದಲ್ಲಿಯೇ ಏರ್ಪಾಡು ಮಾಡಬೇಕಾಗಿ ಬಂದಿತು. ಎಂದರೆ ಕೆರೆಕುಂಟೆ ಮತ್ತು ಭಾವಿಗಳ ನೀರು ಸಾಕಾಗದಂತಾಯಿತು. ಅಲ್ಲದೆ ಸುಭದ್ರ ಸರಕಾರ, ಸುವ್ಯವಸ್ಥೆಯಿಂದ ಕೂಡಿದ ಆಡಳಿತ ಮತ್ತ ಇತರೆ ಪ್ರಜೋಪಯೋಗಿ ಕಾಮಗಾರಿಗಳಿಂದಾಗಿ ರಾಜ್ಯದಲ್ಲಿ ಶಾಂತಿ ಸೌಖ್ಯಗಳು ನೆಲೆಸಿ, ಅದರ ಜನಸಂಖ್ಯೆಯು ವಿಶೇಷವಾಗಿ ಬೆಳೆಯಿತು. ಅದಕ್ಕನುಗುಣವಾಗಿ ವ್ಯವಸಾಯೋತ್ಪನ್ನಗಳನ್ನು ವೃದ್ಧಿಪಡಿಸುವುದು ಅನಿವಾರ್ಯವಾಯಿತು. ಆಗ ಅರಸರು ವಿಪುಲ ನೀರಿನಿಂದ ಸತತವಾಗಿ ಮತ್ತು ಹತ್ತಿರದಲ್ಲಿಯೇ ಹರಿಯುತ್ತಿದ್ದ ತುಂಗಭದ್ರೆಯನ್ನು ಆಶ್ರಯಿಸಬೇಕಾಯಿತು. ಸಾಹಸೀ ಪ್ರವೃತ್ತಿ, ಜಾಣ್ಮೆ, ಶ್ರಮ, ತಾಂತ್ರಿಕ ಕುಶಲತೆ, ಪ್ರಜಾಶ್ರೇಯೋಭಿವೃದ್ಧಿಯೇ ಗುರಿ ಮುಂತಾದ ಸದುದ್ದೇಶಗಳ ಪರಿಣಾಮವಾಗಿ, ತುಂಗಭದ್ರಾ ನದಿಗೆ ಅನೇಕ ಕಡೆ ಆಣೆಕಟ್ಟೆಗಳನ್ನು ವಿಜಯನಗರದ ಅರಸರ ಕಾಲದಲ್ಲಿ ಕಟ್ಟಲಾಯಿತು. ಈ ನಿರ್ಮಾಣಗಳಿಗೆ ಅವರು ಆರಿಸಿದ ನಿವೇಶನಗಳನ್ನು ಪರಿಶೀಲಿಸಿದಲ್ಲಿ, ಈ ವಿಷಯದಲ್ಲಿ ಅವರಿಗಿದ್ದ ತಾಂತ್ರಿಕ ಜ್ಞಾನ, ಪರಿಪೂರ್ಣ ಕುಶಲತೆ ಮತ್ತು ಸಾಹಸೀ ಪ್ರವೃತ್ತಿಗಳು ವೇದ್ಯವಾಗಿ ವೀಕ್ಷಕರಿಗೆ ಅಚ್ಚರಿಯನ್ನುಂಟು ಮಾಡದೆ ಇರವು ಅವುಗಳ ನಿರ್ಮಾಣದಲ್ಲಿ ಪ್ರದರ್ಶಿತವಾಗಿರುವ ತಾಂತ್ರಿಕ ಕುಶಲತೆ, ಈಗಿನ ಜಲತಂತ್ರಜ್ಞರನ್ನೂ ಸಹ ಬೆರಗುಗೊಳಿಸುವಂತಿದೆ.

ಪರಂಪರಾನುಗತವಾಗಿ ಬಂದಿರುವ ಹೇಳಿಕೆಯ ಪ್ರಕಾರ, ಈ ಆಣೆಕಟ್ಟೆಗಳೆಲ್ಲವೂ, ವಿಜಯನಗರದ ಕೃಷ್ಣದೇವ ಮಹಾರಾಯನಲ್ಲಿ ದಣ್ಣಾಯಕ ಅಥವಾ ದಂಡನಾಯಕನಾಗಿದ್ದ (ಈಗಿನ ಮಹಾಸೇನಾಧಿಪತಿಯಂತೆ) ಮುದ್ದನೆಂಬ[12] ಹೆಸರಿನ ಅಧಿಕಾರಿಯಿಂದ ಕಟ್ಟಲ್ಪಟ್ಟವು. ಈಗಲೂ ಹೊಸಪೇಟೆಯಿಂದ ಸುಮಾರು ಹನ್ನೆರಡು ಮೈಲು ದೂರದಲ್ಲಿರುವ ವಿಶಾಲವಾದ ದಣ್ಣಾಯಕನ ಕೆರೆಯು, ಹೆಸರಿನ ಅನ್ಯೋನ್ಯತೆಯಿಂದಾಗಿ ಹೇಳುವುದಾದರೆ, ಆ ಮುದ್ದನು ಕಟ್ಟಿಸುದಾಗಿರಬೇಕು. ಆ ಮುದ್ದನು ಕೆರೆಗಳನ್ನು ಮತ್ತು ಆಣೆಕಟ್ಟುಗಳನ್ನು ಕಟ್ಟಿಸಿದುದಲ್ಲದೆ, ಅನೇಕ ಕಾಲುವೆಗಳನ್ನು ತೋಡಿಸಿ, ನೀರನ್ನು ಅವುಗಳ ಮೂಲಕ ಅವಶ್ಯಕತೆ ಇರುವಲ್ಲಿಗೆ ಹರಿಸಿಕೊಂಡು ಹೋಗುವಲ್ಲಿ ಕಾರಣನಾಗಿದ್ದನೆಂದು ಸಹ ಹೇಳಲಾಗುತ್ತಿದೆ. ಮತ್ತು ಹೊಸಪೇಟೆಯ ಹತ್ತಿರದಲ್ಲಿರುವ ರಾಯರ ಕೆರೆಯ ಬೃಹತ್ ಪ್ರಮಾಣದ ಏರಿಯಲ್ಲಿ ಅವನ ಮೃತ ದೇಹವನ್ನು ಹೊಳಲಾಗಿದೆ ಎಂಬುದು ಇಲ್ಲಿಯ ಪ್ರತೀತಿ. ಈ ಪರಂಪರಾನುಗತ ಹೇಳಿಕೆಗಳಲ್ಲದೆ, ಅದೇ ಹೆಸರಿನಿಂದ ಆರಂಭವಾಗುವ ಹೆಸರುಗಳನ್ನು (ಉದಾಹರಣೆಗೆ ಮುದ್ದಾಪುರ, ಮುದ್ದಲಾಪುರ ಮುಂತಾದವುಗಳು) ಮತ್ತು ಅವುಗಳ ಪರಿಸರದಲ್ಲಿ ಈಗಲೂ ಕಾಣಬರುವ ನೀರಾವರಿ ಸೌಲಭ್ಯಗಳನ್ನು ಪರಿಶೀಲಿಸಿದಲ್ಲಿ, ಮುದ್ದನೆಂಬ ಅಧಿಕಾರಿಯೊಬ್ಬನು ಇಂತಹ ಜಲ ಪ್ರತಿಬಂಧನ ಕಾರ್ಯಗಳಲ್ಲಿ ಆಸಕ್ತಿಯುಳ್ಳವನೂ, ಜಾಣ್ಮೆಯುಳ್ಳವನೂ ಮತ್ತು ಕೃತಕೃತ್ಯನೂ ಆದವನು ನಿಜವಾಗಿಯೂ ಇದ್ದಿರಬೇಕೆಂದು ಹೇಳಲು ಅವಕಾಶವಿದೆ.

ವಿಜಯನಗರದ ಬುಕ್ಕರಾಯನು ಕ್ರಿ.ಶ.೧೩೮೮ರಲ್ಲಿ ಪೆನ್ನಾರು ನದಿಗೆ ಆಣೆಕಟ್ಟೆಯನ್ನು ನಿರ್ಮಿಸಿದ ವಿಷಯವು ಶಿಲಾಶಾಸನವೊಂದರಿಂದ ತಿಳಿದುಬರುತ್ತದೆ.[13] ಇದರಿಂದ ಹೊರಟ ಕಾಲುವೆಯು ಸುಮಾರು ಹತ್ತು ಮೈಲು ಉದ್ದವಾಗಿಯೂ ಇದ್ದಂತೆ ತಿಳಿದುಬರುತ್ತದೆ. ಹರಿಹರದ ಹತ್ತಿರ ಹರಿದ್ರಾನದಿಗೆ ಸಹ ಒಂದು ಆಣೆಕಟ್ಟೆಯನ್ನು ಕ್ರಿ.ಶ.೧೪೧೦ರಲ್ಲಿ ಕಟ್ಟಲಾಯಿತು. ಕಾರಣಾಂತರಗಳಿಂದ ಕ್ರಿ.ಶ.೧೪೯೨ರಲ್ಲಿ ಅದಕ್ಕೆ ದುರಸ್ತಿ ಮಾಡಬೇಕಾಯಿತು.[14]

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ (ಕ್ರಿ.ಶ.೧೩೩೬ ರಿಂದ ೧೫೬೫ರ ವರೆಗೆ) ಹಂಪೆಯ ಪರಿಸರದಲ್ಲಿ ಸುಮಾರು ೧೧ ಆಣೆಕಟ್ಟೆಗಳನ್ನು ಕಟ್ಟಲಾಯಿತು. ಅವುಗಳ ಪೈಕಿ ಎರಡನ್ನು ಬಿಟ್ಟರೆ, ಉಳಿದವುಗಳನ್ನು ಕಟ್ಟಿದ ಕಾಲ, ಅರಸು, ಮುಂತಾದವುಗಳನ್ನು ಕುರಿತಾದ ವಿವರಣೆಗಳು ಖಚಿತವಾಗಿ ತಿಳಿದುಬರುತ್ತಿಲ್ಲ. ಅವುಗಳ ನಿವೇಶನ, ಉಪಯೋಗ, ಅವುಗಳಲ್ಲಡಕವಾಗಿರುವ ತಾಂತ್ರಿಕ ಕುಶಲತೆ, ನಿರ್ಮಾಣ ಪದ್ಧತಿ, ಪ್ರಯೋಜನ ಪಡೆಯುತ್ತಿರುವ ಅಚ್ಚುಕಟ್ಟು ಪ್ರದೇಶ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಮತ್ತು ಅವುಗಳಲ್ಲಿರುವ ಅನ್ಯೋನ್ಯತೆಯಿಂದಾಗಿ, ಇವುಗಳೆಲ್ಲವೂ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕಟ್ಟಲಾಗಿರಬೇಕೆಂದು ನಿಃಸಂದೇಹವಾಗಿ ಹೇಳಬಹುದು.

ಹಂಪೆಯ ವಿರೂಪಾಕ್ಷಸ್ವಾಮಿಯ ದೇವಸ್ಥಾನದಿಂದ ಕೆಲದೂರದಲ್ಲಿ ಕಟ್ಟಲಾಗಿರುವ ತುರ್ತು ಆಣೆಕಟ್ಟೆ ಎರಡನೆಯ ಬುಕ್ಕಮಹಾರಾಜನಿಂದ (ಕ್ರಿ.ಶ.೧೩೯೯ರಿಂದ ೧೪೦೬ರ ವರೆಗೆ ರಾಜ್ಯಭಾರ ಮಾಡಿದನು) ಕಟ್ಟಲ್ಪಟ್ಟಿತು.[15] ಅದರಿಂದ ಹೊರಟ ತುರ್ತು ಕಾಲುವೆಯ ನೀರು, ರಾಜಧಾನಿಯ ಜನತೆಗೆ ಉಪಯೋಗವಾಯಿತು. ಹೀಗೆ ವಿಜಯನಗರ ರಾಜಧಾನಿಯ ಪ್ರಜೆಗಳಿಗೆ ಮೊದಲನೇ ಬಾರಿಗೆ ನೀರು ಸರಬರಾಜಿನ ವ್ಯವಸ್ಥೆಯ ಸಮರ್ಪಕವಾಗಿ ಎರಡನೇ ಬುಕ್ಕಮಹಾರಾಜನಿಂದ ಜರುಗಿತು. ಈಗಲೂ ಈ ತುರ್ತು ಕಾಲುವೆಯು ಮತ್ತು ಅದರ ಉಪಕಾಲುವೆಗಳು ಹರಿಯು ಪ್ರದೇಶವನ್ನು ಗಣನೆಗೆ ತೆಗೆದುಕೊಂಡಲ್ಲಿ, ಮೇಲಿನ ವಿಷಯವು ದೃಢವಾಗಿ ವೇದ್ಯವಾಗುತ್ತದೆ. ಅಲ್ಲದೆ ಈ ಕಾಲುವೆಗಳ ನೀರು ತೋಟ ಗದ್ದೆಗಳಿಗೂ ಸಹ ಉಪಯೋಗವಾಯಿತು. ಇದೇ ರೀತಿಯಾಗಿ ವಿಜಯಿನಗರದ ಅರಸರು ತಮ್ಮ ರಾಜ್ಯಾದ್ಯಂತ ಜನೋಪಯೋಗೀ ನೀರಾವರಿ ಕಾಮಗಾರಿಗಳನ್ನು ಕೈಗೊಂಡರು ಮತ್ತು ಇತರರಿಗೂ, ಈ ದಿಸೆಯಲ್ಲಿ ಪ್ರೊತ್ಸಾಹವನ್ನಿತ್ತರು. ತತ್ಫಲವಾಗಿ ರಾಜಧಾನಿಯಲ್ಲಿ ಮಾತ್ರವಲ್ಲದೆ ರಾಜ್ಯಾದ್ಯಂತ ಆರ್ಥಿಕ ಸಮೃದ್ಧಿಯು ಗಮನಾರ್ಹ ಪ್ರಮಾಣದಲ್ಲಿ ಕಂಡುಬಂದಿತು. ಹೀಗೆ ಕಂಡುಬಂದ ಮಹತ್ಸಾಧನೆಯನ್ನು ವಿಶೇಷವಾಗಿ ಪರದೇಶೀ ಪ್ರವಾಸಿಗರು ಅನೇಕ ವಿವರಗಳೊಂದಿಗೆ ವಿಫುಲವಾಗಿ ಹೊಗಳಿ ಬರೆದಿಟ್ಟಿರುವುದು ಈಗಾಗಲೇ ಸರ್ವವಿದಿತವಾದ ವಿಷಯವಾಗಿದೆ.

ಈಗ ಈ ಆಣೆಕಟ್ಟುಗಳ ಬಗ್ಗೆ ಲಭ್ಯವಿರುವ ವಿವರಗಳನ್ನು ಒಂದೊಂದಾಗಿ ತಿಳಿಯೋಣ. ಮೊದಲಿಗೆ ಬಲದಂಡೆಯ (ಬಳ್ಳಾರಿ ಜಿಲ್ಲೆಯ ಭಾಗ) ಆಣೆಕಟ್ಟೆಗಳನ್ನು ಕುರಿತು ತಿಳಿಯೋಣ.[16]

**ವಲ್ಲಭಾಪುರದ ಆಣೆಕಟ್ಟೆ:** ಇದು ಈಗಿನ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿದೆ. ಕ್ರಿ.ಶ.೧೫೨೧ರಲ್ಲಿ ಎಂದರೆ ಕೃಷ್ಣದೇವರಾಯ ಮಹಾರಾಯನ ಆಳ್ವಿಕೆಯ ಕಾಲದಲ್ಲಿ ಕಟ್ಟಲಾಗಿದ್ದಿತೆಂದು ಅದರ ಪರಿಸರದಲ್ಲಿಯೇ ಇದ್ದ ಒಂದು ಶಿಲಾಶಾಸನದಿಂದ[17] ತಿಳಿದುಬಂದಿದೆ. ಇದನ್ನು ಹೊಸಪೇಟೆಯಿಂದ ಪಶ್ಚಿಮಕ್ಕೆ ಸುಮಾರು ೧೨ ಮೈಲುಗಳು ದೂರದಲ್ಲಿ ಕಟ್ಟಲಾಗಿತ್ತು. ಇದನ್ನು ಬಲದಂಡೆ ಮತ್ತು ನದಿಪಾತ್ರದಲ್ಲಿದ್ದ ಒಂದು ದೊಡ್ಡ ನಡುಗಡ್ಡೆ, ಇವುಗಳ ನಡುವೆ ಸುಮಾರು ೯೦೦ ಅಡಿಗಳಷ್ಟು ಉದ್ದಕ್ಕೆ ಕಟ್ಟಲಾಗಿತ್ತು. ಈ ವಲ್ಲಭಾಪುರದ ಆಣೆಕಟ್ಟೆಗೆ ಎದುರಾಗಿ, ಎಂದರೆ ಎಡದಂಡೆಯಿಂದ (ರಾಯಚೂರು ಜಿಲ್ಲೆಯ ಭಾಗ) ಕಟ್ಟಲಾದ ಭಾಗಕ್ಕೆ ಕೊರಗಲ್ಲು ಆಣೆಕಟ್ಟೆ ಎಂದು ಹೆಸರಿತ್ತು. ಈ ವಲ್ಲಭಾಪುರದ ಆಣೆಕಟ್ಟೆಯಿಂದ ಆರಂಭವಾಗುತ್ತಿದ್ದ ಕಾಲುವೆಗೆ ಬಸವಣ್ಣ ಕಾಲುವೆ ಎಂದು ಹೆಸರು. ಈ ಕಾಲುವೆಯು ಹೊಸಪೇಟೆ ನಗರದ ಮೂಲಕವಾಗಿ ಈಗಲೂ ಹರಿಯುತ್ತದಲ್ಲದೇ, ಮೊದಲಿನ ಆಯಕಟ್ಟಿನ ಕೆಲಭಾಗಗಳಿಗೆ ನೀರನ್ನೊದಗಿಸುತ್ತದೆ. ಆದರೆ ಈ ಕಾಲುವೆಗೆ ಬೇಕಾದ ನೀರನ್ನು, ಈಗಿನ ತುಂಗಭದ್ರಾ ಜಲಾಶಯವು ನಿರ್ಮಾಣವಾದಂದಿನಿಂದ, ಅದರಿಂದ ಬಿಡುವಂತೆ ಏರ್ಪಾಟು ಮಾಡಲಾಗಿದೆ. ಮೊದಲಿನ ಆಣೆಕಟ್ಟೆ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿದೆ ಎಂಬ ಕಾರಣದಿಂದಾಗಿ ಕೆಲವು ಅವಶ್ಯಕ ಬದಲಾವಣೆ ಮತ್ತು ಸುಧಾರಣೆಗಳಿಮದಾಗಿ, ಈ ಬಸವಣ್ಣ ಕಾಲುವೆಯಿಂದ ಪ್ರಯೋಜನ ಪಡೆಯುವ ಅಚ್ಚುಕಟ್ಟು ಪ್ರದೇಶ ಹೆಚ್ಚಾಗಿದೆಯೆಂದೂ ಹೇಳಬಹುದು.

**ರಾಮಣ್ಣ, ಕುರುದಗಡ್ಡೆ ಅಥವಾ ಹೊಸಕೋಟೆ ಆಣೆಕಟ್ಟೆ:** ಇಲ್ಲಿ ವಾಸ್ತವಿಕವಾಗಿ ಎರಡು ಆಣೆಕಟ್ಟುಗಳು ನಿರ್ಮಾಣವಾದವು. ಎಂದರೆ ಮೊದಲು ಎಡದಂಡೆಯಿಂದ ಆರಂಭವಾಗಿ, ನದೀ ಪಾತ್ರದಲ್ಲಿದ್ದ ಕುರುದಗಡ್ಡೆ ಎಂಬ ನದೀ ದ್ವೀಪದ ಮೇಲಣ ತುದಿಯ ವರೆಗೆ ಕಟ್ಟಲಾಯಿತು. ಅದರಿಂದಾಗಿ ಬಲದಂಡೆಗೂ ಮತ್ತು ಕುರುದಗಡ್ಡೆಗೂ ಮಧ್ಯದಲ್ಲಿ ಹರಿಯುತ್ತಿದ್ದ ನದಿಯ ಒಂದು ಶಾಖೆಯಲ್ಲಿ ನೀರಿನ ಪ್ರಮಾಣವು ಹೆಚ್ಚಾದಂತಾಯಿತು. ಅದೇ ಉದ್ದೇಶಕ್ಕಾಗಿ ಹಾಗೆ ಕಟ್ಟಲಾಯಿತು. ಅನಂತರ ಈ ಅನುಕೂಲತೆಯನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ,

ಇನ್ನೂ ಕೆಳಗಿನ ನಿವೇಶನವೊಂದರಲ್ಲಿ, ಎಂದರೆ ಬಲದಂಡೆಗೂ ಮತ್ತು ಅದೇ ಕುರುದಗಡ್ಡೆಯ ಕೆಳತುದಿಗೂ ಮಧ್ಯದಲ್ಲಿ ಮತ್ತೊಂದು ಕಟ್ಟೆಯನ್ನು ನಿರ್ಮಿಸಿದರು. ತದನಂತರ ಅಲ್ಲಿ ಶೇಖರವಾದ ನೀರನ್ನು ಕಾಲುವೆಗಳ ಮೂಲಕ ವ್ಯವಸಾಯಕ್ಕಾಗಿ ಬಳಸಿಕೊಳ್ಳಲಾಯಿತು. ಇಲ್ಲಿಂದ ಹೊರಟ ಕಾಲುವೆಗೆ ರಾಯ ಕಾಲುವೆ ಎಂದು ಹೆಸರು. ಇದೂ ಸಹ ಹೊಸಪೇಟೆ ನಗರದ ಪರಿಸರದಲ್ಲಿ ಈಗಲೂ ಕಾಣಬರುತ್ತದೆಯಲ್ಲದೆ, ಈಗಲೂ ನೀರಾವರಿ ಬೇಸಾಯಕ್ಕೆ ಉಪಯೋಗವಾಗುತ್ತದೆ. ಅನಂತರ ಈ ಕಾಲುವೆಯ ನೀರು ಕಮಲಾಪುರದ ದೊಡ್ಡ ಕೆರೆಗೆ ಸೇರುತ್ತದೆ. ಈ ಏರ್ಪಾಟಿನಿಂದಾಗಿ ಕಮಲಾಪುರದ ಕೆರೆಯು ಮಳೆಯ ನೀರನ್ನೇ ಆಧರಿಸಬೇಕಾಗಿಲ್ಲ. ಹೀಗಾಗಿ ಈ ಕೆರೆಯು ಸದಾ ನೀರಿನಿಂದ ತುಂಬಿರುತ್ತದೆ. ಇಲ್ಲಿ ಶೇಖರವಾದ ನೀರು ಈಗಲೂ ಜನರಿಗೂ, ಬೇಸಾಯಕ್ಕೂ ಮತ್ತು ಪಶುಪಕ್ಷಿಗಳಿಗೂ ಉಪಯೋಗವಾಗುತ್ತಲಿದೆ. ಅಲ್ಲದೆ ಇಲ್ಲಿಯ ನೀರನ್ನೇ ಕಾಲುವೆಗಳ ಮೂಲಕ ಹಿಂದಿನ ಕಾಲದಲ್ಲಿ ವಿಜಯನಗರ ಪಟ್ಟಣಕ್ಕೂ ಸರಬರಾಜಾಗುವಂತೆ ಏರ್ಪಡಿಸಲಾಗಿತ್ತು. ರಾಜಧಾನಿಯಲ್ಲಿ ಎತ್ತರದಲ್ಲಿದ್ದ ಸೌಧಗಳಿಗೆ, ಇದೇ ನೀರನ್ನು ಏತಗಳ ಮೂಲಕ ಮೇಲಕ್ಕೆತ್ತಿ, ತದನಂತರ ಅವಶ್ಯವಿದ್ದೆಡೆಗಳಿಗೆಲ್ಲಾ ಒದಗಿಸಿಕೊಳ್ಳಲಾಗಿತ್ತು. ಈ ಏರ್ಪಾಟಿನ ಅವಶೇಷಗಳನ್ನು ಈಗಲೂ ಹಾಳಾಗಿರುವ ಹಂಪೆಯಲ್ಲಿ ನೋಡಬಹುದು. ಈ ಒಂದು ನಿದರ್ಶನದಿಂದ, ವಿಜಯನಗರದ ಜಲತಂತ್ರಜ್ಞರು ಆಣೆಕಟ್ಟೆಗಳ ನಿರ್ಮಾಣದಲ್ಲಿ ಮಾತ್ರವಲ್ಲದೆ, ಅವುಗಳ ಪ್ರಯೋಜನಗಳನ್ನು ವಿವಿಧೋದ್ದೇಶಗಳಿಗೆ ಪಡೆದುಕೊಂಡು ಜನಕಲ್ಯಾಣವನ್ನು ಸಾಧಿಸುವಲ್ಲಿ ಪರಿಗಣಿತರಿದ್ದರೆಂಬುದು ವೇದ್ಯವಾಗುತ್ತದೆ.

ಈ ಆಣೆಕಟ್ಟೆಯು ಸಹ ಪ್ರಸಕ್ತ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿರುವುದರಿಂದ ಇದರ ಕಾಲುವೆಗೆ ನೀರನ್ನು ಮೇಲಿನ ಜಲಾಶಯದಿಂದಲೇ ಕೊಡಲಾಗುತ್ತಿದ್ದು, ಅದು ತನ್ನ ಹಿಂದಿನ ವಿವಿಧೋದ್ದೇಶಿತ ಪಾತ್ರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗಿದೆ. ಅಷ್ಟೇ ಅಲ್ಲದೆ ಕೆಲ ಅವಶ್ಯಕ ಮಾರ್ಪಾಟುಗಳಿಂದಾಗಿ, ಈ ಕಾಲುವೆ ಕೆಳಗಣ ನೀರಾವರಿ ಪ್ರದೇಶವು ಜಾಸ್ತಿಯಾಗಿದೆಯೆಂದೂ ಹೇಳಬಹುದು.

**ಬೆಲ್ಲ ಅಥವಾ ಹೊಸೂರು ಆಣೆಕಟ್ಟೆ:** ಈ ಆಣೆಕಟ್ಟೆಯನ್ನು ಈಗಿನ ತುಂಗಭದ್ರಾ ಡ್ಯಾಮಿನಿಂದ ಸುಮಾರು ಎರಡು ಮೈಲು ಕೆಳಗೆ ಮತ್ತು ಹೊಸೂರಮ್ಮನ ಗುಡಿಗೆ ಹತ್ತಿರದಲ್ಲಿ ಕಟ್ಟವಾಗಿದ್ದು, ಅದನ್ನು ಈಗಲೂ ನೋಡಬಹುದು. ಇಲ್ಲಿಯ ಕಟ್ಟೆಯನ್ನು ಸುಮಾರು ಅರ್ಧ ದೂರದವರೆಗೆ, ಎಂದರೆ ನದೀ ಪಾತ್ರದಲ್ಲಿರುವ ಒಂದು ನಡುಗಡ್ಡೆಯವರೆಗೆ ಕಟ್ಟಲಾಗಿದೆ. ಉಳಿದರ್ಧ ಭಾಗದಲ್ಲಿ ನೈಸರ್ಗಿಕವಾಗಿ ದೊಡ್ಡ ಬಂಡೆಗಲ್ಲುಗಳಿರುವ ಅನುಕೂಲತೆಯನ್ನು ಉಪಯೋಗಿಸಿಕೊಂಡು, ಕಾಲುವೆಗಳಿಗೆ ನೀರನ್ನು ಒದಗಿಸಿಕೊಳ್ಳಲಾಗಿದೆ. ಈ ಕಟ್ಟೆಯನ್ನು ಸುಮಾರು ಒಂದು ಸಾವಿರ ಅಡಿಗಳಷ್ಟು ಉದ್ದ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ಕಾಲುವೆಗೆ ಬೆಲ್ಲ ಕಾಲುವೆಯೆಂದು ಹೆಸರು.

**ತುರ್ತು ಆಣೆಕಟ್ಟೆ:** ಇಲ್ಲಿಂದ ಹೊರಡುವ ಕಾಲುವೆಯಲ್ಲಿಯ ನೀರು ಬಹು ರಭಸದಿಂದ ಎಂದರೆ ತುರ್ತಾಗಿ ಹರಿಯುತ್ತಿರುವುದರಿಂದಾಗಿ, ಮೇಲಿನ ಹೆಸರನ್ನು ಈ ಆಣೆಕಟ್ಟೆಗೂ ಹಾಗೂ ಕಾಲುವೆಗೂ ಕೊಡಲಾಗಿರಬೇಕು. ಇವುಗಳ ಇತ್ತೀಚಿನ ಹೆಸರುಗಳಾಗಿರಬೇಕು. ಏಕೆಂದರೆ ಹಂಪೆಯ ಕೃಷ್ಣಾಪುರದ ಭಾಗದಲ್ಲಿ ಕಾಣಬರುವ ಮೂರು ಶಿಲಾಶಾಸನಗಳಲ್ಲಿ, ಈ ಕಾಲುವೆಗೆ ಹಿರಿಯ ಕಾಲುವೆ ಮತ್ತು ಅದರ ಆಣೆಕಟ್ಟೆ ಬಹು ಮುಖ್ಯವಾದವುಗಳಿದ್ದಿರಬೇಕು. ಈ ಆಣೆಕಟ್ಟೆಯಿಂದ ಹೊರಡುವ ಮುಖ್ಯ ಕಾಲುವೆ ಮತ್ತು ಅದರ ಶಾಖೋಪಶಾಖೆಗಳು ಹಿಂದಿನ ವಿಜಯನಗರ ಪಟ್ಟಣ ಪ್ರದೇಶದಲ್ಲೆಲ್ಲಾ ಈಗಲೂ ಹರಿಯುತ್ತಿರುವುದನ್ನು ಗಣನೆಗೆ ತೆಗೆದುಕೊಂಡಲ್ಲಿ, ಅವುಗಳ ಪ್ರಾಮುಖ್ಯತೆಯ ಅರಿವಾಗದೆ ಇರದು.

ಅಲ್ಲದೆ ಈ ಮೊದಲೇ ತಿಳಿಸಿರುವಂತೆ, ಈ ಆಣೆಕಟ್ಟೆಯು ವಿಜಯನಗರದ ಅರಸ ಎರಡನೇ ಬುಕ್ಕ ಮಹಾರಾಜನ (ಕ್ರಿ.ಶ.೧೩೯೯ ರಿಂದ ಕ್ರಿ.ಶ.೧೪೦೬ರ ವರೆಗೆ ಅಳಿದ) ಕಾಲದಲ್ಲಿ ನಿರ್ಮಾಣಗೊಂಡಿತು. ಈ ಅರಸನು ರಾಜಧಾನಿಯ ನಿರ್ಮಾಣದಲ್ಲಿ ಕೆಲವೊಂದು ಸುಧಾರಣೆಗಳನ್ನು ಮಾಡಿದ್ದಲ್ಲದೆ ರಾಜಧಾನಿಯ ನಿವಾಸಿಗಳಿಗೆ ನೀರಿನ ಸರಬರಾಜಿನ ವ್ಯವಸ್ಥೆಯನ್ನು ಏರ್ಪಡಿಸದನೆಂದು ತಿಳಿದುಬಂದಿದೆ. ಮೇಲಿನ ವಿವರಣೆಗಳಿಂದ, ಎರಡನೇ ಬುಕ್ಕಮಹಾರಾಜನ ಈ ಕಾರ್ಯ ಸಾಧನೆಯು ದೃಢಪಟ್ಟಂತಾಯಿತಲ್ಲವೇ.

ಇದರ ನಿರ್ಮಾಣದ ಬಗ್ಗೆ ಪ್ರಚಲಿತದಲ್ಲಿರುವ ಒಂದು ಕೂತೂಹಲಕಾರಿ ದಂತ ಕಥೆಯನ್ನು[18] ಇಲ್ಲಿ ತಿಳಿಯಬಹುದು. ಆ ಕಥೆಯ ಪ್ರಕಾರ, ಎರಡನೇ ಬುಕ್ಕ ಮಹಾರಾಜನ ಆಜ್ಞೆ ಮೇರೆಗೆ ಒಂದು ಬೃಹತ್‌ಗಾತ್ರದ ಕಲ್ಲುಗುಂಡನ್ನು ಅನೇಕ ಆನೆಗಳ ಸಹಾಯದಿಂದ, ಈ ನಿವೇಶನದ ಒಂದು ಆರಿಸಿದ ಆಯಕಟ್ಟಿನ ಸ್ಥಳಕ್ಕೆ ಎಳೆದು ತರಲಾಯಿತು. ನಿರ್ದಿಷ್ಟ ಸುಮುಹೂರ್ತದಲ್ಲಿ ಆ ಗುಂಡನ್ನು ನದೀ ಪಾತ್ರಕ್ಕೆ, ತಳ್ಳಿಸಲಾಯಿತು. ಅಷ್ಟರಿಂದಲೇ ನದೀ ನೀರು, ಅರಸನು ಇಚ್ಛಿಸಿದ ಪ್ರಕಾರ, ಆಗಲೇ ತಯಾರಾಗಿದ್ದ ಕಾಲುವೆಗಳನ್ನು ಪ್ರವೇಶಿಸಿತು. ಆ ನೀರನ್ನು ಕಾಲುವೆ ಮತ್ತು ಉಪಕಾಲುವೆಗಳ ಮೂಲಕ ರಾಜಧಾನಿಯ ಎಲ್ಲಾ ಎಡೆಗಳಿಗೆ ಕೊಂಡೊಯ್ಯಲಾಯಿತು. ಅದರಿಂದ ಅನೇಕ ಹೂ ಹಣ್ಣುಗಳ ತೋಟಗಳು, ಗದ್ದೆಗಳು, ಇತರ ಜಮೀನುಗಳು ಲಾಭವನ್ನು ಪಡೆದವು.

ಈ ಆಣೆಕಟ್ಟೆಯ ವೈಶಿಷ್ಟ್ಯಗಳು ಬಹು ಕುತೂಹಲಕಾರಿಯಾಗಿದ್ದು ಉತ್ತಮ ಮಟ್ಟದ ತಾಂತ್ರಿಕ ಕುಶಲತೆಯನ್ನು ನಿರೂಪಿಸುವಂತವುಗಳಾಗಿವೆ. ಎಂದರೆ, ಈ ಕಟ್ಟೆಯನ್ನು ಮುಖ್ಯವಾಗಿ ನದೀ ಪಾತ್ರದಲ್ಲಿರತಕ್ಕಂಥ ನಡುಗಡ್ಡೆಗಳನ್ನು, ದೊಡ್ಡದಾದ ಕಲ್ಲುಗುಂಡುಗಳನ್ನು, ಹಾಸುಬಂಡೆಗಳನ್ನು ಉಪಯೋಗಿಸಿಕೊಳ್ಳುತ್ತಾ, ಅಲ್ಲಲ್ಲಿಗೆ ಎಂಟು ವಿಭಾಗಗಳಲ್ಲಿ ಕಟ್ಟಲಾಗಿದೆ. ಈ ಬಗೆಗೆ ಕೊಟ್ಟಿರುವ ನಕಾಶೆಯನ್ನು ನೋಡಬಹುದು. ಇದರ ಉದ್ದ ಸುಮಾರು ೧೨೨೭ ಅಡಿಗಳಷ್ಟಾಗಿದೆ.


[1] ಬಲದಂಡೆಯ ಜಮೀನಿಗೆ, ಎಂದರೆ ಬಳ್ಳಾರಿ ಜಿಲ್ಲೆಯ ಭಾಗಕ್ಕೆ ಉಪಯೋಗವಾಗುತ್ತಿದ್ದ ಆಣೆಕಟ್ಟೆಗಳನ್ನು ಕುರಿತು, ಇದೇ ಲೇಖಕನಿಂದ ಇಂಗ್ಲೀಷ್ ಭಾಷೆಯಲ್ಲಿ ಬರೆಯಲ್ಪಟ್ಟು The Indian Journal of Power and River Valley Development-Tungabhadra Project Number (Feb ೧೯೫೯ ಪುಟ ೪೫ ರಿಂದ ೫೩) ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಪ್ರಸ್ತುತ ಲೇಖನವು ಎರಡೂ ದಂಡೆಗಳಿಗೆ ಸಂಬಂಧಪಟ್ಟುದಾಗಿದ್ದು, ವಿಸ್ತೃತಪಡಿಸಿದುದಾಗಿದೆ.

[2] Satya Srava M: Irrigation in India Through the Ages.

[3] History and Culture of the Indian People (Bhavans). Vol. II. PP.87

[4] (South Indian Inscriptions, Vol, I X , pt-II, No. 583, pp. 599. ಇದು ಕ್ರಿ.ಶ.೧೫೩೮ರಲ್ಲಿ, ಎಂದರೆ ವಿಜಯನಗರದ ಅಚ್ಯುತರಾಯನ ಕಾಲದ ಶಾಸನ.

[5] ವಿಜಯನಗರದ ಅತಿಶ್ರೇಷ್ಠ ಅರಸರಲ್ಲೊಬ್ಬನಾದ ಕೃಷ್ಣದೇವಮಹಾರಾಯನು ಬರೆದ ಆಮುಕ್ತಮಾಲ್ಯದ ಎಂಬ ತೆಲಗು ಕಾವ್ಯ ಗ್ರಂಥದಲ್ಲಿ IV; V; ೨೩೬ ನೋಡುವುದು.

[6] R.Sewll: Forgotten Empire, pp.266

[7] ತಮಿಳುನಾಡಿನಲ್ಲಿರುವ ಈ ಚಂಗಲ್‌ಪೇಟೆ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದೊಳಗಿನ ಒಂದು ಪ್ರಮುಖ ಪ್ರದೇಶವಾಗಿತ್ತು.

[8] Quoted by T.V. Mahalingam in his book `Economic Life in Vijayanagara' (Madras) pp.93

[9] E.I, Vol.I, X IV No.4, pp. 108

[10] ಕರ್ನಾಟಕ ಕವಿಚರಿತೆ ೧೯೭೨ ಆ.ನರಸಿಂಹಾಚಾರ್ಯ ಭಾಗ ೧, ಪುಟ ೧೯೭

[11] Mysore Gazetteer of Hayavadana Rao Vol.I, pp. 10 & Vol. III, pp. 164

[12] W.Francis: Bellary District Gazetteer (1916) pp. 95

[13] E.C. VOL. X GB-6

[14] Mysore Gazetteer Vol. II, Pt. I, pp.385 and E.C. Vol, X I DVG, 23 and 29

[15] Sewell: Forgotten Empire pp. 51, 301 etc.

[16] ಇಲ್ಲಿ ಕೊಟ್ಟಿರುವ ವಿವರಣೆಗಳನ್ನು Bellary District Gazetteer (೧೯೧೬) ದಿಂದ ತೆಗೆದುಕೊಳ್ಳಲಾಗಿದೆ.


[17] Bellary District Manual pp. 231 and Bellary District Gazetteer (1916) pp.95

[18] Francis: Bellary District Gazetteer (1916) pp.97

# ೪೧. ವಿಜಯನಗರ ಕಾಲದ ತುಂಗಭದ್ರಾ ನದಿಯ ಆಣೆಕಟ್ಟೆಗಳು (೨)

**ರಾಮಸಾಗರ ಆಣೆಕಟ್ಟೆ:** ಇದು ಬುಕ್ಕಸಾಗರ ಗ್ರಾಮದ ಹತ್ತಿರದಲ್ಲಿ ನಿರ್ಮಾಣಗೊಂಡಿದ್ದರೂ, ಇದಕ್ಕೆ ಈ ಹೆಸರು ಬಂದಿದೆ. ಇದನ್ನು ಬಲದಂಡೆಯಿಂದ ಎಡದಂಡೆಯ ವರೆಗೆ ಕಟ್ಟಲಾಗಿದೆ. ಎಡದಂಡೆಯಲ್ಲಿ ಇದೇ ಆಣೆಕಟ್ಟೆಗೆ ಹಿರೇ ಜಂತಗಲ್ಲು ಆಣೆಕಟ್ಟೆ ಎಂದು ಕರೆಯಲಾಗುತ್ತದೆ. ಈ ನಿವೇಶನದಲ್ಲೂ ಸಹ ನೇರವಾಗಿ ಕಟ್ಟದೆ, ನದೀ ಪಾತ್ರದಲ್ಲಿರುವ ನಡುಗಡ್ಡೆಗಳನ್ನೂ, ಗುಂಡುಬಂಡೆಗಳನ್ನೂ ಉಪಯೋಗಿಸಿಕೊಳ್ಳುತ್ತಾ ಎರಡೂ ದಂಡೆಗಳ ಕಡೆಗಳಿಂದ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ಕಾಲುವೆಗೆ ರಾಮಸಾಗರ ಕಾಲುವೆ ಎಂದು ಕರೆಯಲಾಗುತ್ತದೆ. ಕೆಲವು ಸ್ಥಳಗಳಲ್ಲಿ, ಈ ಕಾಲುವೆಯ ನೀರು ಎತ್ತರ ಪ್ರದೇಶದಲ್ಲಿರುವ ಹೆಚ್ಚಿನ ಜಮೀನುಗಳಿಗೆ ಉಪಯೋಗವಾಗಲೆಂಬ ಉದ್ದೇಶಕ್ಕಾಗಿ, ಕಂಪಲಿ ಆಣೆಕಟ್ಟೆಯ ಕಾಲುವೆಯ ಮೇಲಿನಿಂದ, ಕಲ್ಲಿನದೋಣಿ ಕಾಲುವೆಗಳ ಮೂಲಕ ಹಾದು ಹೋಗುವ ಏರ್ಪಾಟನ್ನು ಮಾಡಲಾಗಿದೆ. ಈ ಏರ್ಪಾಡಿನಲ್ಲಿಯೂ ಸಹ ಹಿಂದಿನ ಜಲತಂತ್ರಜ್ಞರ ಪರಿಣತೆಯು ವೇದ್ಯವಾಗುತ್ತದೆ.

**ಕಂಪಲಿ ಆಣೆಕಟ್ಟೆ:** ಹೊಸಪೇಟೆ ತಾಲೂಕಿನ ಪ್ರದೇಶದಲ್ಲಿ ತುಂಗಭದ್ರಾ ನದಿಗೆ ಕಟ್ಟಲಾಗಿರುವ ಆಣೆಕಟ್ಟೆಗಳಲ್ಲಿ ಇದು ಕೊನೆಯದಾದರೂ ಬಹು ಮುಖ್ಯವಾದುದು. ಮೇಲಿನದರಂತೆ ಇದನ್ನು ಸಹ ಬಲದಂಡೆಯಿಂದ ಎಡದಂಡೆಯವರೆಗೆ ಪೂರ್ತಿಯಾಗಿ ಕಟ್ಟಲಾಗಿದೆ. ಎಡದಂಡೆಯಲ್ಲಿ ಇದಕ್ಕೆ ಚಿಕ್ಕ ಜಂತಗಲ್ಲು ಆಣೆಕಟ್ಟೆಂದು ಪ್ರತೀತಿ. ಇದು ಕೆಲ ದೂರ ಓರೆಯಾಗಿ ನದೀ ಮಧ್ಯದವರೆಗೆ ಸಾಗಿ ಅನಂತರ ನೇರವಾಗಿ ಎಡದಂಡೆಯನ್ನು ತಲುಪುತ್ತದೆ. ಇದು ಸುಮಾರು ಒಂದೂವರೆ ಮೈಲು ಉದ್ದವಾಗಿದೆ. ಇದು ಕಂಪಲಿ ಪರಿಸರದಲ್ಲಿರುವ ಭೂಮಿಗೆ ನೀರನ್ನೊದಗಿಸುತ್ತದೆ. ಈಗಾಗಲೇ ತಿಳಿಸಿರುವಂತೆ, ಈ ಕಾಲುವೆ ಮತ್ತು ರಾಮಸಾಗರದ ಕಾಲುವೆ ವಿಶಿಷ್ಟ ಏರ್ಪಾಟಿನಿಂದಾಗಿ ಒಂದನ್ನೊಂದು ದಾಟಿ ಹೋಗುತ್ತವೆ. ಹೀಗಾಗಿ ಇವುಗಳು ಹೆಚ್ಚಿನ ಪ್ರದೇಶಗಳಿಗೆ ನೀರನ್ನೊದಗಿಸಿ, ಹೆಚ್ಚು ಪ್ರಮಾಣದಲ್ಲಿ ಬೆಳೆಗಳನ್ನು ಬೆಳೆಸುವಲ್ಲಿ ಸಹಾಯಕವಾಗಿದೆ.




ರಾಮಸಾಗರ ಆಣೆಕಟ್ಟು

**ಶಿರಗುಪ್ಪೆ ಆಣೆಕಟ್ಟೆ:** ಇದನ್ನು ಕೆಂಚನಗುಡ್ಡದ ಎದುರಿನಲ್ಲಿ ಕಟ್ಟಲಾಗಿದೆ. ಈ ಸ್ಥಳದಲ್ಲಿ ನದಿಯು ಏಳು ಶಾಖೆಗಳಾಗಿ ಹರಿಯುತ್ತಿರುವುದರಿಂದ, ಏಳು ಕಟ್ಟೆಗಳನ್ನು ನಿರ್ಮಿಸಿ, ಅದರಿಂದಾಗಿ ಶೇಖರವಾಗುವ ನೀರನ್ನು ಕಾಲುವೆಗಳ ಮೂಲಕ ಉಪಯೋಗಿಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಕಟ್ಟೆಗಳು, ಗುಡ್ಡಗಳು ಮತ್ತು ಬಂಡೆಗಳೆಲ್ಲಾ ಸೇರಿ ಈ ಆಣೆಕಟ್ಟೆ ಸುಮಾರು ಮೂರು ಮೈಲಿ ಉದ್ದವಾಗಿದೆ.

**ದಾಸನೂರ ಆಣೆಕಟ್ಟೆ:** ತಾಂತ್ರಿಕ ದೃಷ್ಟಿಯಿಂದ ಈ ಕಟ್ಟೆಯು ಸಹ ಮುಖ್ಯವಾದುದಾಗಿದೆ. ದಾಸನೂರು ಎಂಬುದು ತುಂಗಭದ್ರಾ ನದಿಯ ಪಾತ್ರದಲ್ಲಿ ಕಾಣಬರುವ ನದೀ ದ್ವೀಪಗಳೆಲ್ಲಾ ಅತೀ ದೊಡ್ಡದಾಗಿದೆ. ಈ ನಿವೇಶನದಲ್ಲಿ ಸಹ ನದಿಯು ಏಳು ಶಾಖೆಗಳಾಗಿ ಹರಿಯುತ್ತದೆ. ಆದರೆ ದಾಸನೂರು ಆಣೆಕಟ್ಟೆಯನ್ನು ನಾಲ್ಕು ಶಾಖೆಗಳಿಗೆ ಮಾತ್ರ ಅಡ್ಡವಾಗಿ ಕಟ್ಟಲಾಗಿದ್ದು, ಅದರಿಂದಾಗಿ ಶೇಖರವಾಗುವ ನೀರನ್ನು ದಾಸನೂರು ಕಾಲುವೆಯ ಮೂಲಕ ಜಮೀನುಗಳಿಗೆ ತೆಗೆದುಕೊಳ್ಳಲಾಗುತ್ತದೆ. ಎಂದರೆ ಈ ಕಾಲುವೆಯು ದಾಸನೂರು ನಡುಗಡ್ಡೆಯ ಜಮೀನುಗಳಿಗೆ ಮಾತ್ರ ಉಪಯೋಗವಾಗುತ್ತಲಿದೆ. ತದನಂತರ ಈ ಕಾಲುವೆಯು ದ್ವೀಪದ ಕೆಳಗಡೆ ಪುನಃ ನದಿಯನ್ನು ಸೇರುತ್ತದೆ. ಹೀಗೆ ಈ ಆಣೆಕಟ್ಟೆ ಮತ್ತು ಅದರಿಂದ ಹೊರಡುವ ಕಾಲುವೆಗಳು, ನದೀ ಪಾತ್ರದಲ್ಲಿರುವ ವಿಶಾಲ ದ್ವೀಪದ ಜಮೀನುಗಳು ಮತ್ತು ಜನಗಳ ಉಪಯೋಗಕ್ಕಾಗಿ ನಿರ್ಮಿಸಲ್ಪಟ್ಟುದಾಗಿದೆ. ಹೀಗೆ ವಿಜಯನಗರದ ಕಾಲದ ಜಲತಂತ್ರಜ್ಞರು, ಅನುಕೂಲವಿದ್ದ ನಿವೇಶನಗಳನ್ನೆಲ್ಲ ನೀರಾವರಿ ಬೇಸಾಯಕ್ಕಾಗಿ ಬಳಸಿಕೊಂಡಿರುವ ವಿಷಯವು ಎಲ್ಲೆಡೆಯೂ ವೇದ್ಯವಾಗುತ್ತದೆ.

**ರಾಮಪುರ ಆಣೆಕಟ್ಟೆ**

**[1]:**ಇದು ಸುಮಾರು ಒಂದು ಮೈಲು ಉದ್ದವಾಗಿದೆ. ಆದರೆ ಇಲ್ಲಿ ನಿರ್ಮಾಣಕಾರರ ಉದ್ದೇಶವು ಅಷ್ಟೊಂದು ಸಫಲವಾಗಿಲ್ಲ ಏಕೆಂದರೆ, ಈ ಕಟ್ಟೆಯ ಎತ್ತರವು ಒಂದೇ ಸಮನಾಗಿರದೆ, ಕೆಲವು ಸ್ಥಳಗಳಲ್ಲಿ ಬಹಳ ಕಡಿಮೆ ಇರುವುದರಿಂದ ಬೇಸಿಗೆಯಲ್ಲೂ ಸಹ ಇಲ್ಲಿ ಹೆಚ್ಚು ನೀರು ಸಂಗ್ರಹವಾಗದೆ, ಮುಂದಕ್ಕೆ ಹರಿದು ಹೋಗುತ್ತದೆ. ಅಲ್ಲದೆ ಈ ಕಟ್ಟೆಯಿಂದ ಹೊರಡುವ ಕಾಲುವೆಗೂ ಮತ್ತು ನದಿಯ ದಂಡೆಗೂ ಹೆಚ್ಚು ಅಂತರವಿಲ್ಲದೆ ಇರುವುದರಿಂದ, ಮಹಾಪೂರಗಳ ಸಮಯದಲ್ಲಿ, ಇವೆರಡೂ ನೀರಿನಿಂದ ಆವರಿಸಿಕೊಂಡು ಒಂದಾಗಿ ಕಾಣಿಸುತ್ತವೆ. ಹೀಗಾಗಿ ಇದರಿಂದ ಹೆಚ್ಚಿನ ಉಪಯೋಗವಿಲ್ಲದಾಗಿದೆ.
ಈಗ ಎಡದಂಡೆಯಿಂದ (ರಾಯಚೂರು ಜಿಲ್ಲೆಯ ಭಾಗ) ಕಾಣಬರುವ ಆಣೆಕಟ್ಟೆಗಳ ಬಗ್ಗೆ ಲಭ್ಯವಿರುವ ವಿವರಣೆಗಳನ್ನು ತಿಳಿಯೋಣ.[2]

**ಕೊರಗಲ್ಲು ಆಣೆಕಟ್ಟೆ:** ಇದೇ ಆಣೆಕಟ್ಟೆಗೆ ಬಲದಂಡೆಯಲ್ಲಿ 'ವಲ್ಲಭಾಪುರ ಆಣೆಕಟ್ಟೆ' ಎಂದು ಕರೆಯಲಾಗುತ್ತಿದ್ದ ವಿಷಯವು ಈ ಮೊದಲೇ ತಿಳಿದುಬಂದಿದೆ. ಇದನ್ನು ಕ್ರಿ.ಶ.೧೫೨೧ರಲ್ಲಿ ಕಟ್ಟಲಾಯಿತೆಂಬ ವಿಷಯವನ್ನು ತಿಳಿಸಲಾಗಿದೆ. ಮತ್ತು ಇದೂ ಸಹ ಈಗಿನ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿರುವುದರಿಂದ ಹೆಚ್ಚಿನ ವಿವರಗಳು ಲಭ್ಯವಿರುವುದಿಲ್ಲ.

**ಹುಲಗಿ ಆಣೆಕಟ್ಟೆ:** ಇದನ್ನು ಸುಮಾರು ನಾಲ್ಕು ಸಾವಿರ ಅಡಿಗಳಷ್ಟು, ಉದ್ದವಾಗಿ ಕಟ್ಟಲಾಗಿದೆ. ಈ ಕಟ್ಟೆಯಿಂದ ಹೊರಡುವ ಹುಲಗಿ ಕಾಲುವೆಯು ಸುಮಾರು ಏಳು ಮೈಲಿಗಳವರೆಗೆ ಹರಿದು, ಸುಮಾರು ೭೫೫ ಎಕರೆ ಜಮೀನಿಗೆ ನೀರನ್ನೊದಗಿಸುವಲ್ಲಿ ಸಫಲವಾಗಿದೆ.

**ಶಿವಪುರ ಆಣೆಕಟ್ಟೆ:** ಈ ಆಣೆಕಟ್ಟೆಯನ್ನು ಕೊಪ್ಪಳ ತಾಲೂಕಿನ ಶಿವಪುರದ ಹತ್ತಿರ ನಿರ್ಮಿಸಲಾಗಿದೆ. ಈ ಜಲಾಶಯದಿಂದ ಹೊರಡುವ ಶಿವಪುರ ಕಾಲುವೆಯು ಸುಮಾರು ಒಂಭತ್ತು ಮೈಲಿಗಳವರೆಗೆ ಹರಿಯುತ್ತಾ, ಕೆಲವೆಡೆ ಹುಲಗಿ ಕಾಲುವೆಯೊಂದಿಗೆ ಕೂಡಿಕೊಂಡು, ೯೯೭ ಎಕರೆ ಜಮೀನಿಗೆ ನೀರನ್ನೊದಗಿಸುತ್ತದೆ. ಈಗಿನ ಅವಶ್ಯಕತೆಗಳಿಗನುಗುಣವಾಗಿ ಕೆಲವು ಮಾರ್ಪಾಟುಗಳು ಮತ್ತು ಸುಧಾರಣೆಗಳೊಂದಿಗೆ, ಈ ಕಾಲುವೆಯ ನೀರು ಬಹು ಪ್ರಯೋಜನಕಾರಿ ಎನಿಸಿಕೊಂಡಿದೆ.

**ಸಾಣಾಪುರ ಆಣೆಕಟ್ಟೆ:** ಇದು ಎಡದಂಡೆಯ ಆಣೆಕಟ್ಟೆಗಳಲ್ಲೆಲ್ಲಾ ಬಹು ಮುಖ್ಯುವಾದುದಾಗಿದೆ. ಇದನ್ನು ತುಂಗಭದ್ರಾ ನದಿಯ ಒಂದು ಶಾಖೆಗೆ ಮಾತ್ರ ಅಡ್ಡವಾಗಿ ಕಟ್ಟಲಾಗಿದೆ. ಇಲ್ಲಿಂದ ಹೊರಡುವ ಕಾಲುವೆಗೆ ಆನೆಗೊಂದಿ ಕಾಲುವೆ ಎಂದು ಹೆಸರು. ಇದು ಸುಮಾರು ಹನ್ನೆರಡು ಮೈಲಿಗಳವರೆಗೆ ಹರಿಯುತ್ತಾ ಬೇಸಾಯಕ್ಕಾಗಿ ಜಮೀನುಗಳಿಗೆ ನೀರನ್ನೊದಗಿಸುತ್ತದೆ. ಈ ಕಾಲುವೆಯ ನೀರಿನಿಂದ ಲಾಭ ಪಡೆಯುತ್ತಿರುವ ಪ್ರದೇಶವು ಸುಮಾರು ೨೨೨೦ ಎಕರೆಗಳು. ಈ ಕಟ್ಟೆಯ ನಿರ್ಮಾಣದಿಂದಾಗಿ ಜಲಾಶಯದ ಪ್ರಯೋಜನವನ್ನು ಈಗಲೂ ಪಡೆಯುತ್ತಿರುವ ಗ್ರಾಮಗಳೆಂದರೆ ಸಾಣಾಪುರ, ವಿರುಪಾಪುರಗಡ್ಡೆ, ಹನುಮನಹಳ್ಳಿ, ಆನೆಗೊಂದಿ, ರಾಮದುರ್ಗ, ಬರಮನದುರ್ಗ, ಕೃಷ್ಣಾಪುರ, ಸಂಗಾಪುರ, ಸಂಗನಗುಂಡು ಮತ್ತು ರಾಜಾಪುರ.

**ಹಿರೇಜಂತಗಲ್ಲು ಮತ್ತು ಚಿಕ್ಕ ಜಂತಗಲ್ಲು ಆಣೆಕಟ್ಟೆಗಳು:** ಇವೆರಡೂ ಗಂಗಾವತಿ ತಾಲೂಕಿನಲ್ಲಿವೆ. ಇವು ಕ್ರಮವಾಗಿ ಬಲದಂಡೆಯ ರಾಮಸಾಗರ ಆಣೆಕಟ್ಟೆ ಮತ್ತು ಕಂಪಲಿ ಆಣೆಕಟ್ಟೆಯ ಭಾಗಗಳಾಗಿವೆ. ಇವುಗಳ ಬಗ್ಗೆ ಹೆಚ್ಚಿನ ವಿವರಣೆಗಳು ಇನ್ನೂ ದೊರೆಯಬೇಕಾಗಿದೆ.

**ಮೊದಲುಗಟ್ಟೆ ಸೂಗೂರ ಮತ್ತು ಮಂಟಸಾಲ ಆಣೆಕಟ್ಟೆಗಳು:** ಇದುವರೆಗೂ ವಿವರಿಸಲಾದ ಆಣೆಕಟ್ಟೆಗಳಲ್ಲದೆ, ವಿಜಯನಗರದ ಸಾಮ್ರಾಜ್ಯ ಕಾಲದಲ್ಲಿಯೇ ಅಂಥ ಕೆಲ ಪ್ರಯತ್ನಗಳು ವಿಫಲಗೊಂಡ ನಿದರ್ಶನಗಳೂ ಇವೆ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮೊದಲಗಟ್ಟೆ, ಬಳ್ಳಾರಿ ತಾಲೂಕಿನ ಸೂಗೂರು ಮತ್ತು ಆದವಾನಿ ತಾಲೂಕಿನ ಮಂಟಸಾಲ ಗ್ರಾಮಗಳ ಬಳಿ ಅದೇ ತುಂಗಭದ್ರಾ ನದಿಗೆ ಆಣೆಕಟ್ಟೆಗಳ ನಿರ್ಮಾಣದ ಪ್ರಯತ್ನಗಳು ನಡೆದರೂ, ಫಲಪ್ರದವಾಗಲಿಲ್ಲವಾಗಿ ತಿಳಿದುಬರುತ್ತದೆ. ಮೊದಲುಗಟ್ಟೆ ಎಂಬುದು, ಹೆಸರೇ ಸೂಚಿಸುವಂತೆ, ವಿಜಯನಗರದವರು ತುಂಗಭದ್ರಾನದಿಗೆ ಅಡ್ಡವಾಗಿ ಕಟ್ಟಲು ಪ್ರಯತ್ನಿಸಿದ ಮೊಟ್ಟ ಮೊದಲನೇ ಆಣೆಕಟ್ಟೆಗಾಗಿದ್ದಿರಬೇಕು. ಈ ನಿವೇಶನದಲ್ಲಿ ನಿರ್ಮಾಪಕರು ವಿಫಲಗೊಂಡರೂ ನಿರಾಶರಾಗದೆ ಇತರೆ ನಿವೇಶನಗಳಲ್ಲಿ ಪ್ರಯತ್ನಿಸಿ ಸಫಲರಾದರು.

**ತಾತ್ಕಾಲಿಕ ಆಣೆಕಟ್ಟೆಗಳು:** ಇದೇ ಕಾಲದಲ್ಲಿ, ಶಾಶ್ವತ ಆಣೆಕಟ್ಟೆಗಳಲ್ಲದೆ ತಾತ್ಕಾಲಿಕ ಆಣೆಕಟ್ಟೆಗಳಲ್ಲದೆ ತಾತ್ಕಾಲಿಕ ಆಣೆಕಟ್ಟೆಗಳ ಬಳಕೆಯೂ ಸಹ ಜನಾದರಣೀಯವಾದ್ದಿತು. ಇವುಗಳನ್ನು ಬಹುತೇಕವಾಗಿ ಪ್ರವಾಹದ ಪ್ರಮಾಣ ಕಡಿಮೆಯಾಗಿರುತ್ತಿದ್ದ ಸಣ್ಣ ಪುಟ್ಟ ಹಳ್ಳಿಗಳಿಗೆ ಅಡ್ಡವಾಗಿ ಹಾಕಲಾಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಹತ್ತಿರದಲ್ಲಿಯೇ ಲಭ್ಯವಿರುತ್ತಿದ್ದ ಮರದ ದಿಮ್ಮೆಗಳನ್ನು ಗಿಡಗಳ ಕೊಂಬೆರೆಂಬೆಗಳನ್ನು, ಸೊಪ್ಪುಸೆದೆಗಳನ್ನು, ಕಲ್ಲು, ಮರಳು, ಕೆಸರು ಮುಂತಾದವುಗಳನ್ನು ಉಪಯೋಗಿಸಿ ನೀರನ್ನು ಕಾಲುವೆಗಳ ಮೂಲಕ ಜಮೀನುಗಳಿಗೆ ತೆಗೆದುಕೊಂಡು ಹೋಗುತ್ತಿದ್ದರು. ಸ್ವಲ್ಪ ಜಾಸ್ತಿ ಪ್ರಮಾಣದ ಮಳೆ ಬಿದ್ದರಾಗಲೀ, ಅತೀ ಕಡಿಮೆ ಪ್ರಮಾಣದ ಪ್ರವಾಹವು ಬಂದರಾಗಲೀ, ಈ ತಾತ್ಕಾಲಿಕ ಕಟ್ಟೆಗಳು ಕೊಚ್ಚಿ ಹೋಗುತ್ತಿದ್ದವು. ಪುನಃ ಅಂತಹುದೇ ತಾತ್ಕಾಲಿಕ ಕಟ್ಟೆಗಳು, ಪ್ರವಾಹ ಕಡಿಮೆಯಾದ ಮೇಲೆ ನಿರ್ಮಾಣವಾಗುತ್ತಿದ್ದವು. ಹೀಗೆ ಇಂತಹ ತಾತ್ಕಾಲಿಕವಾದವುಗಳನ್ನು ಒಂದೇ ವರ್ಷದಲ್ಲಿ ಅನೇಕ ಬಾರಿ ನಿರ್ಮಿಸಬೇಕಾಗುತ್ತಿತ್ತು. ಈ ಕ್ರಮಗಳಿಂದಾಗಿ ಹಣ ಮತ್ತು ಜನಶಕ್ತಿ ವಿಫುಲವಾಗಿ ವ್ಯಯವಾಗುತ್ತಿದ್ದವು. ಆದರೂ ಜನರು ಧೃತಿಗೆಡದೆ, ಇಂತಹ ಕಾರ್ಯಗಳಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದರು ಹಾಗೂ ಸಫಲರೂ ಆಗುತ್ತಿದ್ದರು. ಆರ್ಥಿಕಾಭಿವೃದ್ಧಿಯೇ ಗುರಿಯಾಗಿದ್ದುದರಿಂದ, ಚಿಕ್ಕ ಪುಟ್ಟ ವಿಫಲತೆಗಳಿಂದ ನಿರಾಶರಾಗುತ್ತಿರಲಿಲ್ಲ.

ಇನ್ನೂ ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಹೊಂದಿದ್ದ ಹಳ್ಳ ತೊರೆಗಳಿಗೆ, ಕಟ್ಟೆಗಳನ್ನು, ಕಟ್ಟುವುದರಿಂದ, ಕೆರೆಗಳು ನಿರ್ಮಾಣವಾಗುತ್ತಿದ್ದವು. ಇದೇ ಜಿಲ್ಲೆಯ ದೊಡ್ಡ ಕೆರೆಗಳಲ್ಲೊಂದಾದ ದರೋಜಿ ಕೆರೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇದು ಸೊಂಡೂರಿನ ಗುಡ್ಡಗಳಿಂದ ದೊಡ್ಡ ಪ್ರಮಾಣದಲ್ಲಿ ಮಳೆ ನೀರನ್ನು ಹರಿಸಿಕೊಂಡು ಬರುವ ನಾರೀಹಳ್ಳದ ನೀರಿನಿಂದ ನಿರ್ಮಾಣವಾಗಿದೆ. ಈ ಕೆರೆಯು ತುಂಬಿ ಅನಂತರ ಹೆಚ್ಚಾದ ನೀರು ಮುಂದಕ್ಕೆ ಹರಿದು, ಅದಕ್ಕೆ ಅಡ್ಡಲಾಗಿ ಅಲ್ಲಲ್ಲಿ ಕಟ್ಟಿರುವ ಚಿಕ್ಕ ಪ್ರಮಾಣದ ಏಳು ಕಟ್ಟೆಗಳಿಂದಾಗಿ ಏಳು ಕಡೆ ನೀರಾವರಿಗೆ ಉಪಯೋಗವಾಗಿದೆ. ಹೀಗೆ ನೀರಾವರಿ ಬೇಸಾಯಕ್ಕಾಗಿ ಬಹುವಿಧ ಪ್ರಯತ್ನಗಳು ನಡೆಯುತ್ತಿದ್ದವು.

ಈ ಕಟ್ಟೆಗಳ ನಿರ್ಮಾಣಗಳಿಗಾಗಿ ವಿಶೇಷ ಧನಬಲ ಮತ್ತು ಜನಬಲಗಳಿಂದ ಪ್ರಯತ್ನಗಳು ನಡೆದಾಗ್ಯೂ ಅವುಗಳಿಗನುಗುಣವಾಗಿ ಪ್ರತಿಫಲ ದೊರೆಯುತ್ತಿತ್ತೆಂದು ಯಾವಾಗಲೂ ಹೇಳುವುದಕ್ಕಾಗದು. ಏಕೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ನದಿಯ ಪಾತ್ರವು ಬಹು ತಗ್ಗಿನಲ್ಲಿದ್ದು ಮತ್ತು ಬೇಸಾಯ ಯೋಗ್ಯ ಜಮೀನು ಎತ್ತರದಲ್ಲಿರುವುದರಿಂದ, ಈ ಕಟ್ಟೆಗಳ ನೀರು ಮಿತ ಪ್ರಮಾಣದಲ್ಲಿ ಉಪಯೋಗವಾಯಿತು. ಮೇಲೆ ಕಾಣಿಸಿದ ಬಲದಂಡೆಯ ಎಲ್ಲಾ ಆಣೆಕಟ್ಟೆಗಳಿಂದ, ಕ್ರಿ.ಶ.೧೯೦೪ರ ಒಂದು ಸರಕಾರೀ ದಾಖಲೆಯ[3] ಪ್ರಕಾರ, ಸುಮಾರು ೧೬೪೦೦ ಎಕರೆಗಳು ನೀರಾವರಿ ಸೌಲಭ್ಯವನ್ನು ಪಡೆಯುತ್ತಿದ್ದವು. ಈ ಕಟ್ಟೆಗಳ ನಿರ್ಮಾಣ ಸಮಯದಲ್ಲಿ ಎಷ್ಟೋ ಬಾರಿ ದುರ್ಘಟನೆಗಳು ಜರುಗಿ ಜನ ದನಗಳು ಪ್ರಾಣಹಾನಿಗೀಡಾಗುತ್ತಿತ್ತು. ಅಲ್ಲದೆ ಪ್ರಚಲಿತದಲ್ಲಿದ್ದ ನಂಬಿಕೆಗಳ ಪ್ರಕಾರ ಕೆಲವು ಬಾರಿ ಪ್ರಾಣಿಗಳನ್ನು ಬಲಿಕೊಡುವುದೂ ಇತ್ತು. ಆದರೂ ಅವರ ಉತ್ಸಾಹ ಮತ್ತು ಪ್ರಯತ್ನಶೀಲತೆಗೆ ಯಾವ ಕೊರತೆಯೂ ಇರಲಿಲ್ಲ. ಜನಕಲ್ಯಾಣದ (Welfare) ಉದ್ದೇಶದಿಂದ ಪ್ರಯತ್ನಗಳು ಅನವರತವಾಗಿ ನಡೆದೇ ಇರುತ್ತಿದ್ದವು ತತ್ಫಲವಾಗಿ, ತುಂಗಭದ್ರಾನದಿಯ ಆಣೆಕಟ್ಟೆಗಳು ವೀಕ್ಷಕರಿಗೆ ಅಚ್ಚರಿಯನ್ನುಂಟು ಮಾಡುತ್ತಾ ಮತ್ತು ಅವರ ಮಹತ್ಸಾಧನೆಯ ಕುರುಹುಗಳಾಗಿ ಈಗಲೂ ಕಾಣಬರುತ್ತದೆ.

**ಇವುಗಳ ತಾಂತ್ರಿಕ ವಿಶಿಷ್ಟತೆಗಳು:** ಈಗ ಈ ಆಣೆಕಟ್ಟಿನ ಕೆಲವು ತಾಂತ್ರಿಕ ವಿಶಿಷ್ಟತೆಗಳನ್ನು ತಿಳಿಯೋಣ. ಮೊದಲಿಗೆ, ಈ ಕಟ್ಟೆಗಳನ್ನು ಕಟ್ಟಿರುವ ನಿವೇಶನಗಳ ಆಯ್ಕೆಯಲ್ಲಿಯೇ, ಆ ಕಾಲದ ಜಲಸೂತ್ರ ತಜ್ಞರ (hydraulic engineers) ಕುಶಲತೆಯು ತಿಳಿದುಬರುತ್ತದೆ. ಸಾಮಾನ್ಯವಾಗಿ ನದೀ ಪಾತ್ರವು ಬಹು ಕಿರಿದಾಗಿದ್ದ ನಿವೇಶನವನ್ನು, ಈ ನಿರ್ಮಾಣ ಕಾರ್ಯಗಳಿಗಾಗಿ ಆಯ್ಕೆ ಮಾಡುತ್ತಿದ್ದರು. ಹಾಗೆ ಆಯ್ಕೆಯಾದ ನಿವೇಶನದಲ್ಲಿ, ಭದ್ರ ಬುನಾದಿಗಾಗಿ ಹುಟ್ಟುಕಲ್ಲು ಅಥವಾ ಹಾಸುಬಂಡೆಗಳು ಅವಶ್ಯವಾಗಿರುತ್ತಿದ್ದುದು ಮತ್ತೊಂದು ವೈಶಿಷ್ಟ್ಯವಾಗಿದೆ. ಇವುಗಳಲ್ಲದೆ ನದೀಗಡ್ಡೆ (river islands) ಗಳನ್ನು ಸಹ ಅವಶ್ಯವಾಗಿ ಉಪಯೋಗಿಸಿಕೊಳ್ಳಲಾಯಿತು. ಉದಾಹರಣೆಗೆ, ತುರ್ತು ಆಣೆಕಟ್ಟೆಯ ನಕಾಶೆಯನ್ನು[4] ಪರಿಶೀಲಿಸಿದಲ್ಲಿ, ಆ ಕಾಲದ ಜಲಸೂತ್ರಜ್ಞರು ತಾವು ಆರಿಸಿದ ನಿವೇಶನದಲ್ಲಿ ಲಭ್ಯವಿದ್ದ ನೈಸರ್ಗಿಕ ಅನುಕೂಲತೆಗಳನ್ನೆಲ್ಲಾ ಉಪಯೋಗಿಸಿಕೊಂಡು, ಅವಶ್ಯವಿದ್ದ ಎಡೆಗಳಲ್ಲಿ ಮಾತ್ರ ಕಟ್ಟೆಗಳನ್ನು ನಿರ್ಮಿಸಿ, ಇಚ್ಛಿತ ನೀರಾವರಿ ಸೌಕರ್ಯವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಹೊಂದುತ್ತಿದ್ದರೆಂಬುದು ವೇದ್ಯವಾಗುತ್ತದೆ. ನಾವು ತುರ್ತು ಆಣೆಕಟ್ಟೆಯ ನಿವೇಶನಕ್ಕೆ ಹೋಗಿ ಬಲದಂಡೆ (ಬಳ್ಳಾರಿ ಜಿಲ್ಲೆಯ ಭಾಗ)ಯಿಂದ ಆರಂಭಿಸಿದಲ್ಲಿ ಮೊದಲಿಗೆ, ಕಡೆಯದ ಒರಟು ಗುಂಡುಕಲ್ಲುಗಳಿಂದ ನಿರ್ಮಿಸಿದ ಕಟ್ಟೆ (೨೫೮ ಅಡಿಗಳಷ್ಟು ದೂರ) ಕಾಣಬರುತ್ತವೆ. ಆ ನಂತರ ಕ್ರಮವಾಗಿ[5] ದೊಡ್ಡ ಹುಟ್ಟುಬಂಡೆ, ಕಟ್ಟಡ (೧೩ ಅಡಿ), ಚಿಕ್ಕಗುಡ್ಡ, ಕಟ್ಟಡ, ಕಟ್ಟಡ ಮತ್ತು ಗುಂಡುಗಳು (೨೧೦ ಅಡಿ,) ದೊಡ್ಡ ಗುಂಡುಗಳು (೨೧೦ ಅಡಿ) ಗುಂಡುಗಳು, ಕಟ್ಟಡ (೧೫ ಅಡಿ), ಎತ್ತರವಾದ ಹುಟ್ಟು ಬಂಡೆ ಕಟ್ಟಡ (೪೦ ಅಡಿ), ಎತ್ತರವಾದ ಬಂಡೆಗಲ್ಲಿನಿಂದ ಕೂಡಿದ ನೆಲ, ಕಟ್ಟಡ ೧೫೦ ಅಡಿ, ಎತ್ತರವಾದ ನೆಲ, ಕಟ್ಟಡ (೬೩ ಅಡಿ) ಬಂಡೆಗಲ್ಲು, ಕಟ್ಟಡ (೨೩೧ ಅಡಿ), ಬಂಡೆಗಲ್ಲು, ಕಟ್ಟಡ (೧೫.೫ ಅಡಿ), ಬಂಡೆಗಲ್ಲು ಕಟ್ಟಡ (೬೦ ಅಡಿ), ಚಿಕ್ಕ ಗುಡ್ಡ, ಕಟ್ಟಡ (೧೦೯ ಅಡಿ), ಚಿಕ್ಕಗುಡ್ಡ, ತದನಂತರ ಎಡದಂಡೆಗಳು (ರಾಯಚೂರು ಜಿಲ್ಲೆಯ ಭಾಗ) ಕಾಣಬರುತ್ತದೆ. ಹೀಗೆ ಈ ಆಣೆಕಟ್ಟೆಗಳ ನಿರ್ಮಾಪಕರು ಸ್ಥಳದಲ್ಲಿಯೇ ಲಭ್ಯವಿದ್ದ ನೈಸರ್ಗಿಕ ಅನುಕೂಲತೆಗಳ ಗರಿಷ್ಠ ಪ್ರಯೋಜನವನ್ನು ಪಡೆಯುವಲ್ಲಿ ಹಿಂದಾಗುತ್ತಿರಲಿಲ್ಲವೆಂಬುದು ಇತರೆ ಆಣೆಕಟ್ಟುಗಳ ವೈಶಿಷ್ಟ್ಯಗಳನ್ನು ಪರಿಶೀಲಿಸಿದಾಗಲೂ ತಿಳಿದುಬರುತ್ತದೆ.

ಈ ಮೊದಲೇ ತಿಳಿದಿರುವಂತೆ, ಬಹುತೇಕವಾಗಿ ಆಣೆಕಟ್ಟೆಗಳನ್ನು ನೇರವಾಗಿ ಒಂದು ದಂಡೆಯಿಂದ ಇನ್ನೊಂದು ದಂಡೆಯವರೆಗೆ ಯಾವಾಗಲೂ ಕಟ್ಟುತ್ತಿರಲಿಲ್ಲ. ಅವುಗಳನ್ನು ಓರೆ ಕೋರೆಯಾಗಿ (Zig Zag manner) ಕಟ್ಟಲಾಗುತ್ತಿತ್ತು. ಈ ಪದ್ಧತಿಯನ್ನು ಅನುಸರಿಸಿದ ಪರಿಣಾಮವಾಗಿ, ಈ ಕಟ್ಟೆಗಳು ಪ್ರವಾಹದ ರಭಸಕ್ಕೆ ನಾಳವಾಗದೆ, ಶತಮಾನಗಳು ಕಳೆದರೂ, ಉಳಿದುಬಂದಿವೆ. ಈ ವೈಶಿಷ್ಟ್ಯವು ಅವರ ಪರಿಣತ ಕುಶಲತೆಯ ಉದಾಹರಣೆಯಾಗಿದೆ.

ಈ ಆಣೆಕಟ್ಟೆಗಳನ್ನು ಕಟ್ಟುವಲ್ಲಿ ಆಳವಾದ ಬುನಾದಿಗಳನ್ನು ಯಾವಾಗಲೂ ತೋಡಲಿಲ್ಲ. ಸಾಮಾನ್ಯವಾಗಿ ತಳದಲ್ಲಿ ಕಲ್ಲುಬಂಡೆಗಳಿರುವ ನಿವೇಶನಗಳನ್ನೇ ಆಯ್ಕೆ ಮಾಡುತ್ತಿದ್ದರೆಂಬುದನ್ನು ಈಗಾಗಲೇ ವಿವರಿಸಲಾಗಿದೆ. ಬಂಡೆಗಳ ಸ್ತರಗಳಲ್ಲಿಯೇ ಸ್ವಲ್ಪ ಆಳದವರೆಗೆ ಕೊರೆದು,

ಅದರಲ್ಲಿಯೇ ದೊಡ್ಡ ದೊಡ್ಡ ಕಲ್ಲುಗಳನ್ನು ಕೊರೆಸುತ್ತಿದ್ದರು. ಕೊರೆಯುವಿಕೆಯು ಮತ್ತು ಹೊಂದಿಸುವಿಕೆಯು ಕಳಸ ಮಾಡಿದಂತಿರುತ್ತಿತ್ತು. ಈ ರೀತಿಯಾಗಿ ಕಲ್ಲುಗಳನ್ನು ಕೂಡಿಸುವ ಪದ್ಧತಿಯಿಂದಾಗಿ ಮತ್ತು ಉಪಯೋಗ ಮಾಡಲ್ಪಟ್ಟ ಕಲ್ಲುಗಳು ಭಾರವಾದವುಗಳಾಗಿದ್ದುದರಿಂದಾಗಿ, ನೀರಿನ ರಭಸದಿಂದಾಗಲೀ ಅಥವಾ ಪ್ರವಾಹದ ಪ್ರಮಾಣದಿಂದಾಗಲೀ ಕಟ್ಟೆಗೆ ಧಕ್ಕೆಯಾಗುತ್ತಿರಲಿಲ್ಲ. ಕೆಲವೆಡೆ ಬುನಾದಿಯ ಕಲ್ಲುಗಳನ್ನು ಕೂಡಿಸುವ ಸಮಯದಲ್ಲಿ ಗಾರೆ ಮತ್ತು ಕಲ್ಲುಗಳ ಮಿಶ್ರಣವನ್ನು ಉಪಯೋಗಿಸಲಾಗಿದೆ. ಆ ಕಾಲದ ಗಾರೆಯು, ಈಗಲೂ ಕೆಲವೆಡೆಗಳಲ್ಲಿ ಕಾಣಬರುವಂತೆ ಬಹು ಗಟ್ಟಿಯಾಗಿರುವುದಲ್ಲದೆ, ನೂರಾರು ವರ್ಷಗಳವರೆಗೆ ಬಾಳುವಂತಹ ಉತ್ತಮ ಗುಣಮಟ್ಟದ್ದಾಗಿದೆ.

ಈ ಕಟ್ಟೆಗಳ ನಿರ್ಮಾಣದಲ್ಲಿ ಉಪಯೋಗಿಸಲಾಗಿರುವ ಕಲ್ಲಗಳೂ ಸಹ ಬಹು ದೊಡ್ಡ ಗಾತ್ರದವುಗಳೂ ಮತ್ತು ಒಂದೊಂದು ಹಲವು ಟನ್ನುಗಳಷ್ಟು ಭಾರವಾದವುಗಳೂ ಆಗಿವೆ. ಅವುಗಳ ಗಾತ್ರ ಮತ್ತು ಬಾರಗಳನ್ನು ಗಣನೆಗೆ ತೆಗೆದುಕೊಂಡಲ್ಲಿ, ಅವುಗಳನ್ನು ಈ ನಿವೇಶನಗಳವರೆಗೆ ತಂದಿರುವ ವಿಷಯವೇ ಅಚ್ಚರಿಯನ್ನುಂಟು ಮಾಡುವುದು. ಸಾಮಾನ್ಯವಾಗಿ ತಳಭಾಗದಲ್ಲಿ ದೊಡ್ಡ ಗಾತ್ರದವುಗಳನ್ನು ಮತ್ತು ಮೇಲಿನ ಸ್ತರಗಳಲ್ಲಿ ಸ್ವಲ್ಪ ಕಡಿಮೆ ಗಾತ್ರದ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಇದೇ ಕುಶಲತೆ ತಂತ್ರಜ್ಞತೆಗಳನ್ನು ಕೋಟೆಗೋಡೆಗಳನ್ನು ನಿರ್ಮಿಸುವಾಗಲೂ ಸಹ ಬಳಸಿಕೊಳ್ಳಲಾಗಿದೆ ಎಂಬುದನ್ನು ಈಗಲೂ ಹಂಪೆ ಮೊದಲಾದ ಸಮಕಾಲೀನ ಸ್ಥಳಗಳಲ್ಲಿ ನೋಡಿ ತಿಳಿದುಕೊಳ್ಳಬಹುದು.

ದೊಡ್ಡ ಪರಿಮಾಣದ ಕಲ್ಲುಗಳಿಂದ ಕಟ್ಟೆಗಳನ್ನು ಕಟ್ಟುವಲ್ಲಿ ಅವುಗಳನ್ನು ಜೋಡಿಸುವಾಗ ಉಂಟಾದ ಸಂದುಗಳಲ್ಲಿ ಗಾರೆಯನ್ನು ಉಪಯೋಗಿಸಿದೆ. ಆ ಸಂದುಗಳ ಮೂಲಕ ನೀರು ಹರಿದು ಹೋಗುವಂತೆ ಅವಕಾಶವನ್ನು ಉದ್ದೇಶಪೂರ್ವಕವಾಗಿ ಕಲ್ಪಿಸಲಾಗುತ್ತಿತ್ತು. ಈ ವ್ಯವಸ್ಥೆಯಿಂದಾಗಿ ಸಂದುಗಳ ಮೂಲಕ ನೀರು ಹರಿದು ಹೋಗುವುದರ ಜೊತೆಯಲ್ಲಿ ಪ್ರವಾಹದೊಂದಿಗೆ ಬಂದ ಒಡ್ಡು ಮಣ್ಣು (Silt) ಸಹ ಹರಿದು ಹೋಗುತ್ತಿತ್ತು. ಹೀಗಾಗಿ ನಾಲ್ಕು ನೂರು ವರ್ಷಗಳಿಗಿಂತಲೂ ಹೆಚ್ಚು ಸಂದು ಹೋಗಿದ್ದರೂ. ಈ ಆಣೆಕಟ್ಟುಗಳು ಒಡ್ಡು ಮಣ್ಣಿನಿಂದ ಸಂಪೂರ್ಣವಾಗಿ ಹೂತು ಹೋಗಿರದೆ, ಈಗಲೂ ಉಪಯೋಗದಲ್ಲಿವೆ. ಅಷ್ಟೇ ಅಲ್ಲದೆ ಆಧುನಿಕ ತಂತ್ರಜ್ಞರಿಗೆ ಒಂದು ಬೋಧಪ್ರದ ಉದಾಹರಣೆಗಳಾಗಿ ಉಳಿದಬಂದಿವೆ. ಮತ್ತು ಬೃಹತ್‌ಪ್ರಮಾಣದ ಆಣೆಕಟ್ಟೆಗಳಿಗಿಂತ ಚಿಕ್ಕ ಪ್ರಮಾಣದ ಆಣೆಕಟ್ಟೆಗಳು ಉದ್ದೇಶಿತ. ಪ್ರಯೋಜನವನ್ನು ಬಹುಕಾಲದವರೆಗೆ ಒದಗಿಸುವಲ್ಲಿ ಹೆಚ್ಚು ಸಮರ್ಥನೀಯವಾಗಿವೆ ಎಂಬ ವಿಷಯವನ್ನು ದೃಢಪಡಿಸುತ್ತವೆ ಹಾಗೂ ಮಾರ್ಗದರ್ಶಿಗಳಾಗಿವೆ ಎಂಬಲ್ಲಿ ಸಂದೇಹವೇ ಇರುವದಿಲ್ಲ. ಈ ಕ್ರಮದ ಉಪಯುಕ್ತತೆಯನ್ನು ಆಧುನಿಕ ಪರಿಣತರು ಗಣನೆಗೆ ತೆಗೆದುಕೊಂಡು ಕೆಲ ಅವಶ್ಯ ಮಾರ್ಪಾಟುಗಳೊಂದಿಗೆ ಅನುಕರಿಸಲು ಆರಂಭಿಸಿರುತ್ತಾರೆಂದರೆ, ಹಿಂದಿನ ನಿರ್ಮಾಪಕರು ಪ್ರಶಂಸಾರ್ಹರಲ್ಲವೆ?

ಈ ಕಟ್ಟೆಗಳ ನಿರ್ಮಾಣದಲ್ಲಿ ಬಳಸಲಾದ ಕಲ್ಲುಗಳನ್ನು ಜೊತೆಯಾಗಿ ಬಂಧಿಸಿ ಹಿಡಿದಿಡುವುದಕ್ಕಾಗಿ ಕೆಲವೆಡೆ ಕಬ್ಬಿಣದ ಹಿಡಿಪಟ್ಟೆಗಳನ್ನು (Clamps) ಬಳಸಲಾಗಿದೆ. ಮತ್ತು ರಾಮಣ್ಣ ಆಣೆಕಟ್ಟೆ ಮುಂತಾದೆಡೆಗಳಲ್ಲಿ ಕಲ್ಲಿನ ಹಿಡಿಪಟ್ಟಿಗಳನ್ನು (stone clamps) ಉಪಯೋಗಿಸಲಾಗಿದೆ. ಕಟ್ಟೆಯ ಕಲ್ಲುಗಳು ಪ್ರವಾಹದ ರಭಸಕ್ಕೆ ಅವ್ಯವಸ್ಥೆಗೊಂಡು ಜಾರಿಹೋಗದಂತೆ, ಕಟ್ಟೆಯ ಹೊರಬದಿಯಲ್ಲಿ ಕಲ್ಲಿನ ಗೂಟಗಳನ್ನು ಅಥವಾ ಬೆಣೆಗಳನ್ನು (pegs) ಭದ್ರವಾಗಿ ಕೂಡಿಸಿರುವ ಪದ್ಧತಿಯೂ ಸಹ ಕಾಣಬರುತ್ತದೆ. ಹಲವು ಬಾರಿ ತಳದಲ್ಲಿದ್ದ ಹಾಸುಗಲ್ಲಿನಲ್ಲಿ ಸರಿಪ್ರಮಾಣದ ತೂತುಗಳನ್ನು ಕೊರೆದು, ಅದರಲ್ಲಿ ಕಲ್ಲಿನಗೂಟಗಳನ್ನು ಭದ್ರವಾಗಿ ಕೂಡಿಸಿ, ಆ ಮೂಲಕ ಆಣೆಕಟ್ಟೆಯ ಭಾಗಗಳನ್ನು ವ್ಯವಸ್ಥಿತ ರೀತಿಯಲ್ಲಿ ಹಿಡಿದಿರಿಸಲು ಏರ್ಪಡಿಸಲಾಗಿದೆ.

ಸಾಮಾನ್ಯವಾಗಿ ಈ ಆಣೆಕಟ್ಟೆಗಳ ಗೋಡೆಗಳು ತಳದಲ್ಲಿ ೬ರಿಂದ ೫ ಅಡಿಗಳವರೆಗೆ ಮತ್ತು ಮೇಲ್ಗಡೆ ೫ ರಿಂದ ೪ ಅಡಿಗಳವರೆಗೆ ದಪ್ಪವಾಗಿದೆ. ತಳದ ಮತ್ತು ಮೇಲ್ಗಡೆಯ ದಪ್ಪದಲ್ಲಿ ಅಂತರವು ಕಡಿಮೆ ಇರುವುದಕ್ಕೆ ಮುಖ್ಯ ಕಾರಣವೆಂದರೆ, ಇವುಗಳ ಎತ್ತರವು ಹೆಚ್ಚಾಗಿಲ್ಲದಿರುವುದೇ ಇವುಗಳ ಎತ್ತರ ಸುಮಾರು ನಾಲ್ಕರಿಂದ ಎಂಟು ಅಡಿಗಳವರೆಗಿದೆ. ಇವುಗಳ ಮೇಲ್ಭಾಗವು ಸಮತಟ್ಟಾಗಿದ್ದು ನೀರು ಅವುಗಳ ಮೇಲಿಂದ ನಿರಾತಂಕವಾಗಿ ಹರಿದು ಹೋಗುತ್ತದೆ.

ಈ ಆಣೆಕಟ್ಟೆಗಳ ಇನ್ನೊಂದು ಗಮನೀಯ ವೈಶಿಷ್ಟ್ಯವೆಂದರೆ ಇವುಗಳಲ್ಲಿ ತೂಬು ಅಥವಾ ಬಾಗಿಲುಗಳು (sluices) ಇಲ್ಲದೇ ಇರುವುದು ಈ ಕಟ್ಟೆಗಳ ಎತ್ತರ ಅಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿರದೆ ಇದ್ದುದರಿಂದ ತೂಬುಗಳ ಅವಶ್ಯಕತೆ ಇರಲಿಲ್ಲವಾಗಿ ತೋರುತ್ತದೆ. ಅಲ್ಲದೆ ಆಣೆಕಟ್ಟೆಗೆ ಅಪಾಯಕಾರಿಯಾಗುವಷ್ಟು ನೀರನ್ನು ತಡೆ ಹಾಕುವುದು ಈ ನಿರ್ಮಾಣ ಯೋಜನೆಯಾಗಿರಲಿಲ್ಲ. ಎಂದರೆ ಹೆಚ್ಚಾದ ನೀರು ಆಣೆಕಟ್ಟೆಯ ಸಂದುಗಳ ಮೂಲಕ ಮೇಲಿನಿಂದ ಮತ್ತು ಇತರ ಭಾಗಗಳ ಮೂಲಕ ಸುಲಭವಾಗಿ ಮತ್ತು ಶೀಘ್ರವಾಗಿ ಹರಿದುಹೋಗುವ ಅವಕಾಶವಿರುತ್ತಿತ್ತು. ತತ್ಪರಿಣಾಮವಾಗಿ ಅವುಗಳ ನಿರ್ಮಾಣವಾಗಿ ಶತಮಾನಗಳು ಗತಿಸಿದರೂ ಅವು ಇಂದಿಗೂ ಉಪಯೋಗದಲ್ಲಿವೆ. ಹಾಗೆಂದಲ್ಲಿ ಇವರಿಗೆ ತೂಬು ಅಥವಾ ಕವಾಟಗಳನ್ನು ನಿರ್ಮಿಸುವ ಮತ್ತು ಉಪಯೋಗಿಸುವ ತಂತ್ರಜ್ಞತೆ ತಿಳಿದಿಲಿಲ್ಲವೆಂದಲ್ಲ. ಕೆರೆಗಳ ನೀರನ್ನು ಉಪಯೋಗಿಸುವ ಸಂದರ್ಭಗಳಲ್ಲಿ ಅವಶ್ಯವಾಗಿ ತೂಬುಗಳನ್ನು ನಿರ್ಮಿಸಿ ಉಪಯೋಗಿಸುತ್ತಿದ್ದರು. ಆ ಕಾಲದ ಅನೇಕ ಶಿಲಾ ಶಾಸನಗಳಿಂದ[6] ಸಾಹಿತ್ಯಾಧಾರಗಳಿಂದ ಮತ್ತು ಈಗಲೂ ಉಪಯೋಗದಲ್ಲಿರುವ ಪುರಾತನ ಕೆರೆಗಳಲ್ಲಿಯ ತೂಬುಗಳಿಂದ ಈ ವಿಷಯವು ದೃಢವಾಗಿ ತಿಳಿದುಬರುತ್ತದೆ. ಅಲ್ಲದೆ ಇವೇ ಆಣೆಕಟ್ಟೆಗಳಿಂದ ನೀರನ್ನು ಕಾಲುವೆಗಳ ಮೂಲಕ ಹರಿಯಿಸಿಕೊಂಡು ಹೋಗಿ ಜಮೀನುಗಳನ್ನು ಹಂಚಿಕೊಳ್ಳುವ ಸಮಯದಲ್ಲಿ ಚಿಕ್ಕ ಪ್ರಮಾಣದ ತೂಬುಗಳ ಮತ್ತಿತರ ಕ್ರಮಗಳನ್ನು ಬಳಸಿಕೊಳ್ಳಲಾಗಿರುವುದು ಈಗಲೂ ತಿಳಿದುಬರುತ್ತದೆ. ಇಂತಹ ಕ್ರಮಗಳಿಂದಾಗಿ ನೀರನ್ನು ಬೇಕಾದ ಪ್ರಮಾಣಗಳಲ್ಲಿ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತಿತ್ತು. ಆದರೂ ವ್ಯವಸ್ಥೆಗಳು ಅಷ್ಟೊಂದು ಸಮರ್ಪಕವಾಗಿರದೆ ಇದ್ದ ಕಾರಣದಿಂದಾಗಿ, ನೀರಿನ ಕೆಲವೊಂದು ಪ್ರಮಾಣವು ಅಪವ್ಯಯವಾಗುತ್ತಿತ್ತು ಎಂಬ ವಿಷಯವನ್ನು ಅಲ್ಲಗೆಳೆಯುವಂತಿಲ್ಲ.

**ವಿತರಣಾ ವ್ಯವಸ್ಥೆ:** ನೀರನ್ನು ಜಮೀನುಗಳಲ್ಲಿ ವಿತರಣೆ ಮಾಡುವ ವಿಷಯದಲ್ಲೂ ಸಹ ಅವರದೇ ಆದ ಒಂದು ಪದ್ಧತಿ ಇತ್ತು. ಅದರ ಪ್ರಕಾರ ವಿತರಣಾ ಜವಾಬ್ದಾರಿಯನ್ನು ಪ್ರತಿಯೊಂದು ಊರಿನ ನೀರಗಂಟಿ ಎಂಬ ಅಧಿಕಾರಿಗೆ ವಹಿಸಲಾಗುತ್ತಿತ್ತು. ಆತನು ವಿತರಣಾ ಕಾರ್ಯವನ್ನು ಸಮರ್ಪಕ ರೀತಿಯಲ್ಲಿ ಜರುಗಿಸಿಕೊಂಡು ಹೋಗುತ್ತಿದ್ದನು. ಅಲ್ಲದೆ ಏನಾದರೂ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದಲ್ಲಿ, ಸಂಬಂಧಿಸಿದವರಿಗೆ ತಿಳಿಸಿ, ಆ ಕಾರ್ಯಗಳಿಗೆ ಬೇಕಾಗುವ ಏರ್ಪಾಟುಗಳನ್ನು ಮಾಡುತ್ತಿದ್ದನು. ಚಿಕ್ಕ ಪುಟ್ಟ ಕಾರ್ಯಗಳಾಗಿದ್ದಲ್ಲಿ, ತಾನೇ ಸ್ವತಃ ಅಥವಾ ನೆರೆಯ ರೈತರ ಸಹಾಯದಿಂದ ನೆರವೇರಿಸುತ್ತಿದ್ದನು. ಸಮಯ ಬಂದಾಗ ರಾತ್ರಿ ಮತ್ತು ಹಗಲು ಎನ್ನದೆ ತನ್ನ ಕಾರ್ಯದಲ್ಲಿ ನಿರತನಾಗಿರುತ್ತಿದ್ದನು. ಅವನ ಸೇವೆಗೆ ಪ್ರತಿಫಲವಾಗಿ ಸರಿಯಾದ ಏರ್ಪಾಟುಗಳಿರುತ್ತಿದ್ದವು. ಆರಂಭದಲ್ಲಿಯೇ ಸ್ವಲ್ಪ ಜಮೀನನ್ನು ದಾನವಾಗಿ ನಿರ್ಮಾಪಕರಿಂದ ಪಡೆದಿರುತ್ತಿದ್ದನಲ್ಲದೆ ರೈತರಿಂದ ಪ್ರತಿವರ್ಷ ಇಂತಿಷ್ಟೆಂದು ದವಸಧಾನ್ಯಗಳನ್ನು ತನ್ನ ಸೇವೆಗೆ ಪ್ರತಿಫಲವಾಗಿ ಪಡೆಯುತ್ತಿದ್ದನು. ಈ ವ್ಯವಸ್ಥೆಗಳು ಒಬ್ಬನ ಜೀವನಪರ್ಯಂತವಾಗಿಯಲ್ಲದೆ, ಅವನ ವಂಶಪರಂಪರಾಗತವಾಗಿ ನಡೆಯುವಂತಹುಗಳಾಗಿರುತ್ತಿದ್ದವು. ಅಂತೆಯೇ ನೀರಗಂಟಿಯೂ ತನ್ನ ಸೇವಾಕಾರ್ಯ ನಿರ್ವಹಣೆಯಲ್ಲಿ ನಾಡಿನ ಧರ್ಮ ನಿರ್ಬಂಧನೆಗಳಿಂದ ಮಾರ್ಗದರ್ಶಿತನಾಗಿರುತ್ತಿದ್ದನು.

**ದುರಸ್ತಿ ಕಾರ್ಯಗಳು:** ಈ ಆಣೆಕಟ್ಟೆಗಳಿಗೆ ಆಗಾಗ್ಗೆ ಕೆಲವು ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿರುತ್ತಿತ್ತು. ಇಂತಹ ಜವಾಬ್ದಾರಿಗಳನ್ನು, ಆಣೆಕಟ್ಟೆಯ ನಿರ್ಮಾಣವಾದ ಸಮಯದಲ್ಲಿಯೇ ಅದಕ್ಕೆ ಸಂಬಂಧಿಸಿದ ಗ್ರಾಮ ಅಥವಾ ಗ್ರಾಮಗಳ ಜನರಿಗೆ ಅಥವಾ ಸ್ಥಳೀಯ ಅಧಿಕಾರಿಗಳು ವಹಿಸಿ ಏರ್ಪಾಟು ಮಾಡಲಾಗಿರುತ್ತಿತ್ತು. ಕೆಲವು ಬಾರಿ ಈ ಜವಾಬ್ದಾರಿಗಳನ್ನು ಸ್ಥಳೀಯ ಮಠಗಳಿಗೋ ಅಥವಾ ದೇವಾಲಯಗಳಿಗೋ ವಹಿಸಿಕೊಡಲಾಗುತ್ತಿತ್ತು. ಮತ್ತೆ ಕೆಲವು ಬಾರಿ ಅಂಥಾ ದುರಸ್ತಿ ಕಾರ್ಯಗಳಿಗಾಗಿ, ಸ್ಥಳೀಯ ಜನರಿಂದ ಚಂದಾ ಅಥವಾ ತೆರಿಗೆಯನ್ನು ಕಡ್ಡಾಯವಾಗಿ ಸಂಗ್ರಹಿಸುವ ಪದ್ಧತಿಯೂ ಇತ್ತು. ಇನ್ನೂ ಕೆಲವು ಸಮಯದಲ್ಲಿ ಅಧಿಕಾರಿಗಳೋ ಅಥವಾ ಪ್ರಜೆಗಳೋ ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂತು ಅಂತಹ ದುರಸ್ತಿ ಕಾರ್ಯಗಳನ್ನು ನೆರವೇರಿಸಿ ಕೊಡುತ್ತಿದ್ದರು. ಹಾಗೆ ಮಾಡುವುದರಿಂದ ವಿಶೇಷ ಪುಣ್ಯ ಲಭಿಸುತ್ತದೆಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಈ ನಂಬಿಕೆಯನ್ನು ಸಮರ್ಥಿಸುತ್ತಾ ಕ್ರಿ.ಶ.೧೪೧೩ರಲ್ಲಿ ಹೊರಡಿಸಲಾದ ಒಂದು ಶಿಲಾಶಾಸನವು[7] ಈ ರೀತಿ ಹೇಳುತ್ತದೆ.

'.... ಭಿಂನ ತಟಾಕ ಕೂಪಂ ಭ್ರಷ್ಟಸ್ತ ರಾಜ್ಯಂ ಶರಣಾಗತ......
ಬ್ರಾಣಂ ದೇವಗೃಹಂ ಚ ಜೀರ್ಣಂಯ ಉದ್ಧರೇ ಪೂರ್ವ ಚತುರ್ಗುಣಂ.....'

ಹೀಗೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅರಸರೂ, ಅಧಿಕಾರಿಗಳೂ ಮತ್ತು ಪ್ರಜೆಗಳೂ ತುಂಗಭದ್ರಾ ನದಿಗೆ ಆಣೆಕಟ್ಟೆಗಳನ್ನು ನಿರ್ಮಿಸಿ ಜನಕಲ್ಯಾಣವನ್ನು ಸಾಧಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದರು. ಈ ದಿಶೆಯಲ್ಲಿ ಅವರು ಆದರ್ಶಪ್ರಾಯರೂ ಆಗಿದ್ದರೆಂಬಲ್ಲಿ ಸಂಶಯವೇ ಇಲ್ಲ ಅಲ್ಲದೆ ಅವರು ಈ ನಿರ್ಮಾಣ ಕಾರ್ಯಗಳಲ್ಲಿ ತೋರಿಸಿರುವ ತಾಂತ್ರಿಕ ಕುಶಲತೆ, ಜಾಣ್ಮೆ ಮತ್ತು ಪರಿಣತೆಗಳು ಸಾಮಾನ್ಯ ಗುಣಮಟ್ಟದವುಗಳಾಗಿರದೆ, ಆಧುನಿಕ ಜಲತಂತ್ರಜ್ಞರೂ ಸಹ ಗಣನೆಗೆ ತೆಗೆದುಕೊಳ್ಳಲು ಯೋಗ್ಯವಾದವುಗಳಾಗಿವೆ. ಅಲ್ಲದೆ ಆಧುನಿಕ ಅವಶ್ಯಕತೆಗಳಿಗನುಗುಣವಾಗಿ ಕೆಲವೊಂದು ಮಾರ್ಪಾಟುಗಳೊಂದಿಗೆ, ಅನುಕರಣೆ ಮತ್ತು ಅನುಷ್ಠಾನಗಳಿಗೆ ಅರ್ಹವಾದವುಗಳೆಂದು ಹೇಳಿದರೆ ಅತಿಶಯೋಕ್ತಿ ಎನ್ನಲಾಗದು ಮತ್ತು ಈ ಮೆಚ್ಚುಗೆಯ ಮಾತುಗಳಿಗೆ ಅವರು ಸರ್ವ ವಿಧದಲ್ಲಿಯೂ ಪಾತ್ರರೂ ಹೌದು.

**ಆಕರ**

ಹೇಮಕೂಟ, ಸಂ.೩, ಸಂ.೫, ೧೯೯೭, ಶ್ರೀ ಕೊಟ್ಟೂರುಸ್ವಾಮಿ ಮಠ, ಹಂಪಿ, ಆಯ್ದ ಭಾಗಗಳು.

[1] ಇದು ಆದವಾನಿ ತಾಲೂಕಿಗೆ ಸೇರಿದ್ದು, ಈಗ ಆಂಧ್ರಪ್ರದೇಶದಲ್ಲಿದೆ.

[2] ಇಲ್ಲಿ ಕೊಟ್ಟಿರುವ ಮುಖ್ಯ ವಿವರಣೆಗಳನ್ನು ಶ್ರೀವಸಂತ ಪಾಟೀಲ, ಅಸಿಸ್ಟಂಟ್ಎಂಜಿನಿಯರ್, ಮುನಿರಾಬಾದ್ ಅವರು ಸಹೃದಯದಿಂದ ಒದಗಿಸಿರುತ್ತಾರೆ.

[3] Francis: Bellary District Gazetter, pp.95

[4] ಇಲ್ಲಿ ಕೊಟ್ಟಿರುವ ನಕಾಶೆಯು ಶ್ರೀ ಷಡಕ್ಷರಯ್ಯ, ಅಸಿಸ್ಟಂಟ್ಎಂಜಿನಿಯರ ಬಳ್ಳಾರಿ ಇವರಿಂದ ತಯಾರಿಸಲ್ಪಟ್ಟುದಾಗಿದೆ.

[5] ನಕಾಶೆಯನ್ನು ನೋಡುವುದು.

[6] Butterworth and V. Chetty: Inscriptions of Nellore District, Pt. III pp. 1245 etc.

[7] E.C. Vol. VII Sh. 30 pp.42. ಈ ಶಾಸನವು, ವಿಜಯನಗರದ ಹರಿಹರ ಮಹಾರಾಯನ ಕಾಲದಲ್ಲಿ (ಕ್ರಿ.ಶ.೧೪೧೩) ಯರೆಲಖೆಯ ನಾಯಕನಿಂದ ತಟಾಕವೊಂದನ್ನು ನಿರ್ಮಿಸಿ, ಶ್ರೋತ್ರಿಯ ದಾನವನ್ನು ಕೊಡುವ ಸಂದರ್ಭದಲ್ಲಿ ಹೊರಡಿಸಿದ್ದು.

## ೪೨. ತುರ್ತಾ ಆಣೆಕಟ್ಟು: ತಾಂತ್ರಿಕ ವಿವರಗಳು

ವಿಜಯನಗರದ ಕಾಲದಲ್ಲಿ ಕೆರೆ, ಕುಂಟೆ ಮತ್ತು ಬಾವಿಗಳ ನಿರ್ಮಾಣದೊಂದಿಗೆ ಚಿಕ್ಕ ಚಿಕ್ಕ ಆಣೆಕಟ್ಟುಗಳನ್ನು ನದಿಗಳಿಗೆ ಮತ್ತು ತೊರೆಗಳಿಗೆ ನಿರ್ಮಿಸಿ ನೀರನ್ನು ಅತ್ಯಂತ ಸಮರ್ಪಕವಾಗಿ ಉಪಯೋಗಿಸುತ್ತಿದ್ದರು. ಹಂಪಿ ಸಮೀಪದ ತುಂಗಭದ್ರಾ ನದಿಗೆ ಅಡ್ಡವಾಗಿ ಆಣೆಕಟ್ಟು ನಿರ್ಮಿಸಿ ಆ ನೀರನ್ನು ಕೃಷಿಗೆ ಮತ್ತು ಕುಡಿಯುವ ಸಲುವಾಗಿ ಬಳಸುತ್ತಿದ್ದರು. ಈ ತಾಲೂಕಿನಲ್ಲಿಯೇ ತುಂಗಭದ್ರಾ ನದಿಗೆ ಅಡ್ಡಲಾಗಿ ಹನ್ನೆರಡು ಆಣೆಕಟ್ಟುಗಳನ್ನು ಕಟ್ಟಿರುವುದು ವಿಶೇಷದ ಸಂಗತಿಯೇ ಸರಿ.

[1] ಇದಕ್ಕೆ ಮತ್ತೊಂದು ಬಲವಾದ ಕಾರಣವೂ ಇದೆ.ಇದು ವಿಜಯನಗರದ ಪಟ್ಟಣ ಅಥವಾ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆಯಾಗಿದ್ದು, ಇದು ಇಂದಿನ ಹೊಸಪೇಟೆ ತಾಲೂಕಿನಲ್ಲಿದೆ. ರಾಜಧಾನಿಗೆ ನೀರಿನ ವ್ಯವಸ್ಥೆಯನ್ನು ಪೂರೈಸುವ ಸಲುವಾಗಿ ತಾಲೂಕಿನಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಅಲ್ಲಲ್ಲಿ ಕಟ್ಟೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಕಾಲದ ತಂತ್ರಜ್ಞರು ಕಟ್ಟೆಗಳನ್ನು ನಿರ್ಮಿಸುವುದರಲ್ಲಿ ಅದ್ವಿತೀಯ ನಿಪುಣತೆಯನ್ನು ಹೊಂದಿದ್ದರೆಂಬುದಕ್ಕೆ ಸಾಕ್ಷಿಯಾಗಿ ಅವರುಗಳು ಕಟ್ಟೆ ಕಟ್ಟುವುದಕ್ಕೆ ಆಯ್ಕೆ

ಮಾಡಿರುವಂತಹ ಪ್ರದೇಶವನ್ನು ಗಮನಿಸಿದಾಗ ತಿಳಿದುಬರುತ್ತದೆ. ಅತ್ಯಂತ ಕಡಿಮೆ ಖರ್ಚಿನಲ್ಲಿ ಬಹು ಸಮರ್ಪಕವಾಗಿ ಕಟ್ಟಿರುವುದು ನಿಜಕ್ಕೂ ಶ್ಲಾಘನೀಯ. ನೈಸರ್ಗಿಕವಾಗಿ ದೊರೆಯುವಂತಹ ಸಾಮಗ್ರಿಗಳನ್ನು ಬಳಸಿಕೊಂಡು ಪರಿಸರ, ನದಿಯ ನೀರಿನ ವೇಗ, ನದಿಯ ಪಾತ್ರ ಮತ್ತು ನದಿ ಪಾತ್ರದಲ್ಲಿರುವ ನೈಸರ್ಗಿಕ ರಚನೆಗಳನ್ನು ಗಮನಿಸಿ ಆಯಾ ಪ್ರದೇಶಗಳಲ್ಲಿ ಕಟ್ಟೆಗಳನ್ನು ನಿರ್ಮಿಸಿ ಕಾಲುವೆಗಳನ್ನು ಕ್ಷಿತಿಜ ಭೂಮಟ್ಟ ರೇಖೆಗೆ (ಕಾಂಟೂರ್ Contour) ಅನುಗುಣವಾಗಿ ನೀರು ಹಾಯಿಸಿರುವುದು ಅಂದಿನ ಕಾಲದ ಅವರ ಉನ್ನತ ಮಟ್ಟದ ತಾಂತ್ರಿಕ ಜ್ಞಾನವನ್ನು ಪರಿಚಯಿಸಿಕೊಡುತ್ತದೆ.


ವಿಜಯನಗರ ಕಾಲದಲ್ಲಿ ಆಣೆಕಟ್ಟುಗಳನ್ನು ಬಹಳ ಕಡಿಮೆ ಖರ್ಚಿನಲ್ಲಿ ಕಟ್ಟುತ್ತಿದ್ದರು. ಈ ಕೆಲಸಕ್ಕೆ ಬಂಡೆಗಲ್ಲು, ಆಕಾರ ಕೊಟ್ಟ ಕಲ್ಲುಗಳನ್ನು (Dressed Stone) ಆಯಾತಾಕಾರ ಮತ್ತು ಚೌಕಾಕಾರ ಮಾದರಿಯಾಗಿ ರೂಪಿಸಿ ಅವುಗಳನ್ನು ನದಿಯ ಪಾತ್ರದಲ್ಲಿ ಒಂದರ ಮೇಲೊಂದರಂತೆ ಜೋಡಿಸುತ್ತಿದ್ದರು. ಇವುಗಳಿಗೆ ಅಡಿಪಾಯವಾಗಿ ನದಿ ಪಾತ್ರದಲ್ಲಿರುವಂತಹ ನೈಸರ್ಗಿಕ ಕಲ್ಲುಬಂಡೆಗಳನ್ನೇ ಉಪಯೋಗಿಸಿಕೊಳ್ಳುತ್ತಿದ್ದರು. ನದಿಯ ತಿರುವುಗಳಲ್ಲಿಯೂ ಇಂತಹ ಕಟ್ಟೆಗಳನ್ನು ನಿರ್ಮಿಸುತ್ತಿದ್ದರು. ಈ ರೀತಿಯಾಗಿ ಪೇರಿಸಿಟ್ಟ ಕಲ್ಲಿನ ಗೋಡೆಗೆ ಯಾವುದೇ ವಿಧವಾದ ಗಚ್ಚು ಗಾರೆಗಳನ್ನು (ಮಾರ್ಟರ್ Mortar) ಬಳಸುತ್ತಿರಲಿಲ್ಲ. ಕಲ್ಲುಗಳನ್ನು ಜಾಗರೂಕತೆಯಿಂದ ಜೋಡಿಸುತ್ತಿದ್ದರು. ಇದರಿಂದಾಗಿ ಕಲ್ಲುಗಳ ನಡುವೆ ಯಾವುದೇ ವಿಧವಾದ ಜೋಡಣೆಯ ಸಾಧನಗಳ ಅವಶ್ಯಕತೆ ಇರುತ್ತಿರಲಿಲ್ಲ. ತೀರಾ ಅವಶ್ಯಕತೆ ಇದ್ದಲ್ಲಿ ಮಾತ್ರವೇ ಗಾರೆಯನ್ನು ಉಪಯೋಗಿಸುತ್ತಿದ್ದರು. ನದಿಯಲ್ಲಿ ಹರಿದು ಬರುವಂತಹ ಮಣ್ಣು, ಕಲ್ಮಶಗಳು ಮತ್ತು ಇನ್ನಿತರೆ ವಸ್ತುಗಳ ಬಂಡೆಗಲ್ಲಿನ ಸಂದುಗಳಿಂದ ನೀರು ಸದಾ ಕಾಲವು ಸ್ರವಿಸುತ್ತಿತ್ತು. ಇಂದಿಗೂ ನೀರು ಸ್ರವಿಸುವುದನ್ನು ಕಾಣಬಹುದು. ಇವುಗಳಿಂದ ಎರಡು ರೀತಿಯ ಪ್ರಯೋಜನಗಳಿವೆ. ಮೊದಲನೆಯದಾಗಿ ನೀರು ಹೆಚ್ಚಾಗಿ ಹರಿದುಬಂದಾಗ ಈ ಸಂಧಿಗಳ ಮೂಲಕ ಹರಿದುಹೋಗುತ್ತದೆ. ಇದರ ಪರಿಣಾಮವಾಗಿ ಕಟ್ಟೆಯಲ್ಲಿ ನೀರು ಯಾವಾಗಲೂ ಒಂದೇ ಮಟ್ಟದಲ್ಲಿ ನಿಲ್ಲುತ್ತದೆ. ಮತ್ತು ಕಟ್ಟೆಗೆ ಯಾವುದೇ ವಿಧವಾದ ಧಕ್ಕೆ ಉಂಟಾಗುವುದಿಲ್ಲ. ಎರಡನೆಯ ಪ್ರಯೋಜನವು ಸ್ರವಿಸಿದ ನೀರು ಹರಿದುಹೋಗಿ ಜನ ಸಾಮಾನ್ಯರಿಗೆ ಹಾಗೂ ಪಶುಪಕ್ಷಿಗಳಿಗೆ ನೀರು ದೊರಕುತ್ತದೆ. ಇದು ಅಂದಿನ ಕಾಲದ ಜನರು ದೂರದೃಷ್ಟಿ ಮತ್ತು ತಂತ್ರಜ್ಞಾನದ ಔನ್ನತ್ಯವನ್ನು ಸೂಚಿಸುತ್ತದೆ.

ಕೆಲವೊಂದು ಸಂದರ್ಭಗಳಲ್ಲಿ ಕಬ್ಬಿಣದ ಬಿಗಿ ಕೊಂಡಿ ಅಥವಾ ಬಿಗಿಹಿಡಿಕೆ (ಕ್ಲಾಂಪ್)ಗಳನ್ನು ಬಳಸಿ ಕಲ್ಲುಗಳನ್ನು ಜೋಡಿಸಿಡುತ್ತಿದ್ದರು. ಕಟ್ಟೆ ಗೋಡೆಯ ಇನ್ನೊಂದು ಬದಿಗೆ ಕೆಲವು ಕುಳಿಗಳನ್ನು ಬಂಡೆಗಲ್ಲಿನಲ್ಲಿ ಕೊರೆಯಲಾಗುತ್ತಿತ್ತು. ಪ್ರವಾಹ ಬಂದಾಗ ಆಣೆಕಟ್ಟೆಯ ಗೋಡೆಗಳು ಕೊಚ್ಚಿಕೊಂಡು ಹೋದರೂ, ಈ ಕುಳಿಗಳಲ್ಲಿ ಬಂಡೆಕಲ್ಲುಗಳು ಕುಳಿತುಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ. ಸಾಮಾನ್ಯವಾಗಿ ಆಣೆಕಟ್ಟಿನ ಗೋಡೆಗಳು ನದಿಗೆ ನೇರವಾದ ಗೋಡೆಯಂತೆ ಅಡ್ಡಲಾಗಿ ನಿರ್ಮಿಸುತ್ತಿರಲಿಲ್ಲ. ಗೋಡೆಗಳನ್ನು ಡೊಂಕಾಗಿ ಅಂದರೆ ಅರ್ಧಚಂದ್ರಾಕಾರವಾಗಿ ಕಟ್ಟುತ್ತಿದ್ದರು. ಇದರಿಂದ ನೀರಿನ ಒತ್ತಡವು ಗೋಡೆಯ ಮೇಲೆ ಬೀಳುತ್ತಿರಲಿಲ್ಲ. ಗೋಡೆ ಡೊಂಕಾಗಿರುವ ಕಾರಣದಿಂದಾಗಿ ನದಿಯ ನೀರಿನ ಒತ್ತಡವು ಸಮನಾಗಿ ಹಂಚಿಹೋಗುವ ಸಲುವಾಗಿ ಈ ರೀತಿಯ ರಚನೆಯು ಅವಶ್ಯವಾಗಿದ್ದಿತು. ಅಂಕುಡೊಂಕು ಆಣೆಕಟ್ಟು ಗೋಡೆಗಳು ಸುಭದ್ರವಾಗಿರುವುದನ್ನು ಇಂದಿಗೂ ನಾವು ಕಾಣಬಹುದು. ಕೆಲವೊಮ್ಮೆ ಕಟ್ಟೆಯ ಗೋಡೆಯು ನದಿಗೆ ಅಡ್ಡವಾಗಿ ಸ್ವಲ್ಪ ದೂರ ಮಾತ್ರವೇ ಇರುತ್ತಿದ್ದವು. ಇನ್ನು ಕೆಲವು ನಿದರ್ಶನಗಳಲ್ಲಿ ನದಿಯ ಅರ್ಧಭಾಗಕ್ಕೆ ಮಾತ್ರ ಈ ಕಟ್ಟೆಯನ್ನು ನಿರ್ಮಿಸಲಾಗುತ್ತಿತ್ತು. ಇವುಗಳು ನೀರಿನ ಅವಶ್ಯಕತೆಗಳಿಗನುಸಾರವಾಗಿ ಇರುತ್ತಿದ್ದಂತಹ ರಚನೆಗಳು ಎಂಬುದನ್ನು ಇಲ್ಲಿ ಮರೆಯಬಾರದು. ನದಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆಗಳು ಒಂದು ದೊಡ್ಡ ಕೋಡಿ ಅವುಗಳು ಕೆರೆಯ ಕೋಡಿಗಳಂತೆಯೇ ಕೆಲಸ ನಿರ್ವಹಿಸುತ್ತಿದ್ದವು ಎಂದು ಕೊಟ್ರಯ್ಯನವರು ಸರಿಯಾಗಿ ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಕೆಲವು ಮುಖ್ಯ ಆಣೆಕಟ್ಟು ಮತ್ತು ಕಾಲುವೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

**ತುರ್ತಾ ಆಣೆಕಟ್ಟು ಮತ್ತು ತುರ್ತಾ ಕಾಲುವೆ**

ತುರ್ತಾ ಆಣೆಕಟ್ಟು ವಿಜಯನಗರ ಕಾಲದಲ್ಲಿ ತುಂಗಭದ್ರಾ ನದಿಗೆ ನಿರ್ಮಿಸಲಾದ ಒಂದು ನೀರಾವರಿ ರಚನೆ. ಇತ್ತೀಚೆಗೆ ಒಂದು ಶಾಸನವು ಕಟ್ಟೆಯ ಸಮೀಪದಲ್ಲಿರುವ ಒಂದು ಬಂಡೆಯ ಮೇಲೆ ದೊರೆತಿದ್ದು, ಈ ಕಟ್ಟೆಯನ್ನು ಚಿಂತಯ್ಯಕ ದೇವಣ್ಣನೆಂಬುವನು ಕಟ್ಟಿಸಿದನು ಮತ್ತು ಆ

ಕೆಲಸವನ್ನು ಬೊಮ್ಮೋಜನು ನಿರ್ವಹಿಸಿದನು ಎಂದು ದಾಖಲಿಸಿದೆ.[2] ಈ ಆಣೆಕಟ್ಟಿನಿಂದ ಒಂದು ನಾಲೆಯು ಹೊರಡುತ್ತದೆ. ಇದನ್ನು ತುರ್ತಾ ಕಾಲುವೆಯೆಂದು ಕರೆಯುತ್ತಾರೆ. ಈ ಕಾಲುವೆಯು ಸುಮಾರು ಇಪ್ಪತ್ತೇಳು ಕಿ.ಮೀ.ಗಳಷ್ಟು ಉದ್ದವಾಗಿದ್ದು ಬಹುಶಃ ವಿಜಯನಗರಪಟ್ಟಣಕ್ಕೆ ನೀರು ಸರಬರಾಜು ಮಾಡುತ್ತಿತ್ತೆಂದು ಶೋಧಗಳಿಂದ ತಿಳಿದುಬಂದಿದೆ. ತುರ್ತಾ ಕಾಲುವೆ ಅಥವಾ ಹಿರಿಯ ಕಾಲುವೆಯನ್ನು ಕ್ರಿ.ಶ.೧೫೨೧ರ ಮುಂಚೆಯೇ ನಿರ್ಮಿಸಲಾಗಿತ್ತೆಂದು ಶಾಸನಾಧಾರಗಳು ಸೂಚಿಸುತ್ತವೆ.[3]



ತುರ್ತಾ ಆಣೆಕಟ್ಟು

ಈ ಕಾಲುವೆಯು ಹಂಪೆಯ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಪ್ರಾರಂಭವಾಗುತ್ತದೆ. ಇದನ್ನು ಹಿರಿಯ ಕಾಲುವೆಯೆಂದು ಶಾಸನಗಳು ದಾಖಲಿಸಿವೆ. ಈ ಕಾಲುವೆಯ ಬಗೆಗೆ ಹೊಸಪೇಟೆಯ ಲೋಕೋಪಯೋಗಿ ಇಲಾಖೆಯವರ ಬಳಿಯಲ್ಲಿರುವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ. ಈ ಕಾಲುವೆಯು ಕ್ಷಿತಿಜ ಭೂಮಟ್ಟದ ರೇಖೆಯಲ್ಲಿಯೇ (Contour level) ಹಾಯ್ದು ನೂರಾರು ಎಕರೆ ಭೂಮಿಗೆ ನೀರುಣಿಸಿ ನಂತರ ತುಂಗಭದ್ರೆಯನ್ನು ಸೇರಿಕೊಳ್ಳುತ್ತದೆ. ಈ ಕಾಲುವೆಯ ಉದ್ದಕ್ಕೂ ಅನೇಕ ತೂಬುಗಳನ್ನು ಜೋಡಿಸಲಾಗಿದ್ದು ಇವುಗಳಿಂದ ಆಯಕಟ್ಟು ಪ್ರದೇಶಗಳಿಗೆ ನೀರನ್ನು ಪೂರೈಸಲಾಗುತ್ತಿದೆ. ಈಗ ಈ ಕಾಲುವೆಯು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯವರ ಸುಪರ್ದಿನಲ್ಲಿ ಇದ್ದು ಹೊಸಪೇಟೆ, ಕಮಲಾಪುರ ಮತ್ತು ಹಂಪೆಯ ಕೃಷಿಕರಿಗೆ ನೀರನ್ನು ಸಮರ್ಪಕವಾಗಿ ಪೂರೈಸುತ್ತಿದೆ. ಇಂದಿಗೂ ಈ ಕಾಲುವೆಯ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿರುವುದು ಅಂದಿನ ಕಾಲದ ತಂತ್ರಜ್ಞಾನವನ್ನು ಪರಿಚಯಿಸುತ್ತದೆ.

**ತುರ್ತಾ ಆಣೆಕಟ್ಟು ವಿವರಗಳು**

ಈ ಆಣೆಕಟ್ಟು ಹಂಪೆಯು ಬಳಿಯಿಂದ ಪ್ರಾರಂಭವಾಗುತ್ತದೆ. ಇವರ ಒಟ್ಟು ಕಟ್ಟಲ್ಪಟ್ಟ ಭಾಗದ ಉದ್ದವು ಸುಮಾರು ೧,೦೦೦ ಅಡಿಗಳಷ್ಟು ಮಾತ್ರವೇ. ಇದು ಒಟ್ಟು ಹದಿನೈದು ಭಾಗಗಳಲ್ಲಿದೆ. ನೈಸರ್ಗಿಕ ಬಂಡೆ, ಕಲ್ಲು ಮತ್ತು ನದಿಪಾತ್ರದ ಕಲ್ಲುಗಳನ್ನು ಬಳಸಿಕೊಂಡು ಕಟ್ಟಲಾಗಿದೆ. ಈ ಆಣೆಕಟ್ಟು ನೇರವಾಗಿರದೆ ಅಂಕುಡೊಂಕಾಗಿದ್ದು ಇದರ ಬಲದಂಡೆಯಿಂದ ಒಂದು ಕಾಲುವೆಯು ಪ್ರಾರಂಭವಾಗುತ್ತದೆ.[4] ಈ ಆಣೆಕಟ್ಟಿನ ಒಂದು ತುದಿಯಿಂದ ಮತ್ತೊಂದ ತುದಿಯವರೆಗೆ ಇರುವ ರಚನಾ ವಿಧಾನವನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೧:**

| | ರಚನಾ ವಿಧಾನ | ಉದ್ದ (ಅಡಿಗಳಲ್ಲಿ) |
|---|---|---|
| ೧. | ಒರಟುಕಲ್ಲುಗಳ ಸಮೂಹ(ಬಲದಂಡೆಯಿಂದ) | ೨೦ |
| ೨. | ಒರಟುಕಲ್ಲುಗಳ ಹಿಂಭಾಗದ ಗೋಡೆ | ೫೩ |
| ೩. | ನದಿಪಾತ್ರದ ಕಲ್ಲು | ೧೬ |
| ೪. | ಒರಟುಕಲ್ಲು ಗೋಡೆ (ಹಿಂಬದಿಯಿಂದ ಒರಟು ಕಲ್ಲುಗಳನ್ನು ಹೊಂದಿದೆ) | ೫೩ |
| ೫. | ಚಿಕ್ಕ ಗುಡ್ಡ | ೧೩ |
| ೬. | ಚಿಕ್ಕ ಗುಡ್ಡ ಮತ್ತು ಒರಟುಕಲ್ಲು ಗೋಡೆ ಮತ್ತ ಬಂಡೆಗಲ್ಲು | ೨೧೦ |
| ೭. | ದೊಡ್ಡ ಬಂಡೆಗಳು ಮತ್ತು ಒರಟುಕಲ್ಲು ಗೋಡೆ | ೧೫ |
| ೮. | ದೊಡ್ಡ ಹಾಸುಕಲ್ಲು ಮತ್ತು ಒರಟುಕಲ್ಲು ಹಿಂಬದಿಯಲ್ಲಿ (ಚಂದ್ರಾಕೃತಿಯ ಗೋಡೆ) | ೧೫೦ |
| ೯. | ದೊಡ್ಡ ಹಾಸುಕಲ್ಲು ಮತ್ತು ಒರಟುಕಲ್ಲು ಹಿಂಬದಿಯಲ್ಲಿ ಚಂದ್ರಕೃತಿ ಚಂದ್ರಾಕೃತಿಯ ಗೋಡೆ | ೧೫೦ |
| ೧೦ | ದೊಡ್ಡ ಬಂಡೆ ಹಾಸುಗಲ್ಲು ಮತ್ತು ಒರಟುಕಲ್ಲು ಗೋಡೆಯ 'ಎಪ್ರಿನ್' | ೮೩ |
| ೧೧ | ಬಂಡೆ ಹಾಸುಗಲ್ಲು | ೭೫ |
| ೧೨ | ಒರಟುಕಲ್ಲು ಮತ್ತು ಒರಟುಕಲ್ಲು ಗೋಡೆ | ೧೫.೫ |
| ೧೩ | ಒರಟುಕಲ್ಲು ಮತ್ತು ಒರಟಕಲ್ಲು ಗೋಡೆ ಹಿಂಬದಿಯಲ್ಲಿ | ೨೧೩ |
| ೧೪ | ಬಂಡೆ ಹಾಸುಗಲ್ಲು | ೪೪.೫ |
| ೧೫ | ಬಂಡೆಕಲ್ಲು ಗೋಡೆ | ೪೮ |
| ೧೬ | ಬಂಡೆ ಹಾಸುಗಲ್ಲು | ೪೫ |
| ೧೭ | ಒರಟುಕಲ್ಲು ಗೋಡೆ | ೪೦ |
| ೧೮ | ಹಾಸುಗಲ್ಲು | ೮ |
| ೧೯ | ಹಾಸುಗಲ್ಲು | ೮ |
| ೨೦ | ಒರಟುಕಲ್ಲುಗಳು | ೧೨ |
| ೨೧ | ದೊಡ್ಡ ಗುಡ್ಡ ಮತ್ತು ಒರಟುಕಲ್ಲುಗಳ ಗೋಡೆ | ೧೦೯ (ಎಡದಂತೆ) |

ಈ ಮೇಲೆ ವಿವರಿಸಿದ ರೀತಿಯಲ್ಲಿ ಆಣೆಕಟ್ಟನ್ನು ಕಟ್ಟಿರುವ ಕಾರಣ ಈ ಆಣೆಕಟ್ಟನ್ನು ಒಂದು ದಡದಿಂದ ಯಾರೂ ಸಂಪೂರ್ಣವಾಗಿ ನೋಡಲು ಆಗುವುದಿಲ್ಲ.

ಸಾಮಾನ್ಯವಾಗಿ ಆಣೆಕಟ್ಟುಗಳು ಎರಡರಿಂದ ಐದು ಅಥವಾ ಐದೂವರೇ ಅಡಿಗಳಷ್ಟು ಎತ್ತರವಾಗಿರುತ್ತವೆ. ಇದಕ್ಕೂ ಎತ್ತರವಾದ ಗೋಡೆಗಳನ್ನು ನಿರ್ಮಿಸಿರುವುದಿಲ್ಲ. ಮತ್ತೊಂದು ವಿಶೇಷ ಸಂಗತಿಯೆಂದರೆ, ನಿಸರ್ಗದ ಕೊಡುಗೆಯನ್ನು ಉಪಯೋಗಿಸಿ ಕೆಲವು ಕಡೆಗಳಲ್ಲಿ, ಎರಡು ಅಡಿಗಳಷ್ಟು ಗೋಡೆಯನ್ನು ಮಾತ್ರವೇ ನಿರ್ಮಿಸಿದ್ದಾರೆ. ಇದರಿಂದ ಪ್ರವಾಹ ಬಂದಾಗ ಸಹ ಆಣೆಕಟ್ಟು ನಾಶವಾಗದಂತೆ ಇಂದಿಗೂ ಉಳಿದಿದೆ. ಎರಡು ಸಾವಿರ ಎಕರೆಗಳಷ್ಟು ಪ್ರದೇಶವು ನೀರಾವರಿಗೊಳಪಟ್ಟಿದೆ.

ಮತ್ತೊಂದು ಮುಖ್ಯವಾದ ಆಣೆಕಟ್ಟು ರಾಮಸಾಗರದ ಬಳಿಯಲ್ಲಿದೆ. ಇದು, ಬುಕ್ಕಸಾಗರ ಗ್ರಾಮದ ಬಳಿಯಲ್ಲಿ ತುಂಗಭದ್ರೆಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೆ, ಇದನ್ನು ಸಹ ತುರ್ತಾ ಆಣೆಕಟ್ಟು, ಕಟ್ಟಿರುವ ರೀತಿಯಲ್ಲಿಯೇ ಕಟ್ಟಿದ್ದಾರೆ. ಮತ್ತೊಂದು ಆಣೆಕಟ್ಟು ಇಂದಿನ ರಾಯಚೂರು ಜಿಲ್ಲೆಯ ಹಿರೇಜಂತುಕಲ್ಲು ಎಂಬಲ್ಲಿ ಕಟ್ಟಲಾಗಿದೆ. ಇವೆರಡೂ ಕಟ್ಟೆಗಳು ಒಂದೇ ಗೆರೆಯಲ್ಲಿರುವಂತೆ ಇದ್ದರೂ, ಇವುಗಳನ್ನು ಪೂರ್ಣವಾಗಿ ಸೇರಿಸಿಲ್ಲ. ಎರಡೂ ಕಟ್ಟೆಗಳು ನದಿಯ ಅರ್ಧಕ್ಕೆ ಬಂದು ನಿಲ್ಲುತ್ತವೆ. ಇದರಿಂದಾಗಿ ಅವುಗಳು ಪೂರ್ಣವಾಗಿ ನೀರನ್ನ ತಡೆಹಿಡಿಯುವುದಿಲ್ಲ. ಈ ಕಾರಣದಿಂದ ಇಲ್ಲಿ ಹೂಳು ಶೇಖರವಾಗುವುದಿಲ್ಲ ಮತ್ತು ಕಟ್ಟೆಗೆ ಯಾವುದೇ ವಿಧದಲ್ಲಿ ಧಕ್ಕೆ ಉಂಟಾಗುವುದಿಲ್ಲ. ಈ ಕಟ್ಟೆಯು ೨,೨೫೦ ಅಡಿಗಳಷ್ಟು ಉದ್ದವಾಗಿದೆ. ಬಳ್ಳಾರಿ ಜಿಲ್ಲೆಯ ಕಡೆಯಿಂದ ೩,೬೦೦ ಅಡಿಗಳಷ್ಟು ಉದ್ದ ಹಾಗೂ ರಾಯಚೂರು ಕಡೆಯಿಂದ ಇದರ ಅಗಲವು ೪ ಅಡಿಗಳಾಗಿವೆ. ಆಣೆಕಟ್ಟಿನಿಂದ ಹೊರಡುವ ಕಾಲುವೆಗೆ ಗಂಗಾವತಿ ಮೇಲ್ದಂಡೆ ಕಾಲುವೆಯಿಂದ ಕರೆಯುತ್ತಾರೆ. ಇದು ಸುಮಾರು ಐದು ಹಳ್ಳಿಗಳಿಗೆ ಮತ್ತು ೨,೦೭೫ ಎಕರೆಗಳಿಗೆ ನೀರನ್ನು ಪೂರೈಸುತ್ತದೆ.

**ಆಕರ**

ಹಂಪಿ ಪರಿಸರದ ಕೆರೆಗಳು, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ಆಧರಿಸಿದೆ.


[1] ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪು.೬೧-೭೫, ಧ್ರುವನಾರಾಯಣ ಎಂ. (ಅನು.) ಕೊಟ್ರಯ್ಯ ಸಿ.ಟಿ.ಎಂ. ಮೂಲ, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪು.೧೭೨-೧೭೫

[2] ವಿಜಯನಗರ ಪ್ರೋಗ್ರೆಸ್‌ಆಫ್ ರಿಸರ್ಚ್, ೧೯೮೪-೮೭, ಶಾಸನ ಸಂ. ೧, ಪು. ೨೭

[3] ಡಾಮ್‌ನಿಕ್ ಜೆ. ಡೆವಿಸನ್ ಜೆನ್‌ಕಿನ್ಸ್, ದಿ ಇರ್ರಿಗೇಶನ್ ಅಂಡ್‌ವಾಟರ್ ಸಪ್ಲೆ ಸಿಸ್ಟಮ್ಸ್ ಆಫ್ ವಿಜಯನಗರ, ಪು.೬೨

[4] ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೬೪-೬೫, ಹಂಪಿ ಪರಿಸರದ ಕೆರೆಗಳು, ೨೦೦೧ ಆಧರಿಸಿದೆ.


## ೪೩. ಹಂಪಿ ಪರಿಸರದ ಕೆರೆಗಳ ತಾಂತ್ರಿಕ ಅಂಶಗಳು (೧)

ಕರ್ನಾಟಕದಲ್ಲಿ ಅತ್ಯಧಿಕವಾಗಿ ಕೆರೆಗಳು ಏಕೆ ನಿರ್ಮಾಣಗೊಂಡವು ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಇಂದಿನ ಮತ್ತು ಪ್ರಾಚೀನ ಕಾಲದ, ಮುಖ್ಯವಾಗಿ, ಕ್ರಿ.ಶ. ಹತ್ತನೆಯ ಶತಮಾನದ ಹವಾಮಾನಗಳನ್ನು ಪರಿಶೀಲಿಸಿದಾಗ ಕಂಡುಕೊಳ್ಳಬಹುದು. ಇತ್ತೀಚೆಗೆ ನಡೆಸಿದ ಕೆಲವು ವೈಜ್ಞಾನಿಕ ಸಂಶೋಧನೆಗಳಿಂದ ಇಂದಿನ ಹವಾಮಾನವು ಮತ್ತು ಹದಿನೈದನೆಯ ಶತಮಾನದ ಹವಾಮಾನವು ಒಂದೇ ಆಗಿತ್ತೆಂದು ದೃಢಪಟ್ಟಿದೆ.

[1] ಕ್ರಿ.ಶ.ಒಂದನೆಯ ಶತಮಾನದಲ್ಲಿದ್ದಂತಹ ಹವಾಮಾನವು ಅನೇಕ ಶತಮಾನಗಳಿಂದ ಬದಲಾವಣೆಗೊಳ್ಳುತ್ತಲೇ ಬಂದಿದೆ.ಹದಿನೈದನೆಯ ಶತಮಾನದ ಹವಾಮಾನವು ಇಂದಿನ ಹವಾಮಾನದಂತಿರುವುದರಿಂದ ಈಗಿರುವಂತೆಯೇ, ಬಳ್ಳಾರಿ ಜಿಲ್ಲೆಯನ್ನು ಒಳಗೊಂಡ ಕರ್ನಾಟಕದ ಉತ್ತರ ಭಾಗಗಳನ್ನು ಮಳೆಯನ್ನು ಸಾಕಷ್ಟು ಪಡೆಯುತ್ತಿರಲಿಲ್ಲವೆಂದು ಹೇಳಬಹುದು. ಈ ಕಾರಣದಿಂದಾಗಿ ಅಂದಿನ ಕಾಲದಲ್ಲಿ ಕೃತಕ ಜಲ ಸಂಗ್ರಾಹಕಗಳ ಅವಶ್ಯಕತೆಯುಂಟಾಯಿತು. ಮತ್ತು ವಿಜಯನಗರ ಕಾಲದಲ್ಲಿ ಅಧಿಕವಾಗಿ ಕೆರೆ, ಕುಂಟೆ ಮತ್ತು ಕಾಲುವೆಗಳನ್ನು ನಿರ್ಮಿಸಲಾಯಿತು. ಇದರೊಂದಿಗೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಪೂರೈಸುವ ಸಲುವಾಗಿ ಹೆಚ್ಚುವರಿ ಭೂಮಿಯನ್ನು ಕೃಷಿಗೆ ಒಳಪಡಿಸಲಾಯಿತು. ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಾಹಕಗಳಾದ ಕೆರೆಗಳು ಹೆಚ್ಚು ಬಳಕೆಗೆ ಬಂದವು.

ಹಂಪಿ ಪರಿಸರದಲ್ಲಿ (ಇಂದಿನ) ಕಂಡುಬರುವಂತಹ ಅನೇಕ ಕೆರೆಗಳು ಮಳೆಯನ್ನೇ ಆಶ್ರಯಿಸಿವೆ. ಕೆಲವು ಕೆರೆಗಳನ್ನು ಜೀವಂತವಾಗಿರಿಸುವ ಸಲುವಾಗಿ ಸರ್ಕಾರದ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯವರು ಕೆಲವು ಮಳೆ ಆಶ್ರಿತ ಕೆರೆಗಳನ್ನು ನದಿ ಆಶ್ರಿತ ಕೆರೆಯನ್ನಾಗಿಸಿದ್ದಾರೆ. ಕಮಲಾಪುರದ ಕೆರೆ, ಅಳ್ಳಿಕೆರೆ ಕೆರೆ, ದರೋಜಿ ಕೆರೆ ಮುಂತಾದವುಗಳು ನದಿಯನ್ನು ಅವಲಂಬಿಸಿವೆ. ದಣ್ಣನಾಯಕನ ಕೆರೆ, ಜಂಭಯ್ಯನ ಕೆರೆ, ಹುಲಿಕುಂಟೆ ಕೆರೆ ಇತ್ಯಾದಿ ಕೆರೆಗಳು ಇಂದಿಗೂ ಮಳೆಯನ್ನೇ ಆಶ್ರಯಿಸಿವೆ. ವಿಜಯನಗರದ ಅರಸರ ಕಾಲದಲ್ಲಿ ಬಳ್ಳಾರಿ ಜಿಲ್ಲೆಯ ಮಳೆಯ ವೈಪರಿತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸುವಾಗ ಕೇವಲ ಒಂದು ಕೆರೆಯನ್ನು ನಿರ್ಮಿಸದೆ, ಎರಡು ಅಥವಾ ಮೂರು ಕೆರೆಗಳ ಒಂದು ಶೃಂಖಲೆಯನ್ನು ನಿರ್ಮಿಸಿರುವುದು ಗಮನಾರ್ಹ. ನಿಸರ್ಗದ ಭೌಗೋಳಿಕ ಲಕ್ಷಣ, ಮಳೆಯ ಅತೀವೃಷ್ಟಿ ಮತ್ತು ಅನಾವೃಷ್ಟಿಯ ಸ್ವಭಾವವನ್ನರಿತು ಕೆರೆಗಳನ್ನು ವಿವಿಧ ಭೂಮಟ್ಟದಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವಂತೆ ನಿರ್ಮಿಸಿರುತ್ತಾರೆ. ಇದರಿಂದಾಗಿ ಮೊದಲ ಕೆರೆಯು ಮೇಲ್ಮಟ್ಟದಲ್ಲಿದ್ದು, ಮಳೆಯ ನೀರು ಅದರಲ್ಲಿ ಸಂಗ್ರಹಗೊಳ್ಳುತ್ತದೆ. ಹೆಚ್ಚುವರಿ ನೀರು ಬಂದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಬಂದು ಎರಡನೆಯ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ವಿಶಿಷ್ಟ ಪದ್ಧತಿಯಿಂದ ಒಮ್ಮೆ ಹೆಚ್ಚುವರಿ ನೀರು ಮೊದಲ ಕೆರೆಗೆ ಬಂದರೂ, ಕೆರೆಯು ಒಡೆಯದಂತೆ ಇರುತ್ತದೆ ಹಾಗೂ ನೀರು ಪೋಲಾಗುವುದನ್ನು ಸಹ ಎರಡನೆಯ ಕೆರೆಯು ತಪ್ಪಿಸುತ್ತದೆ. ಇಂತಹ ಕೆಲವು ಕೆರೆಗಳ ಸಮೂಹವನ್ನು ಹೊಸಪೇಟೆ ತಾಲೂಕಿನ ತಿಮ್ಮಲಾಪುರ ಗ್ರಾಮದಲ್ಲಿ ನೋಡಬಹುದು.

ವಿಜಯನಗರ ಕಾಲದ ಶಾಸನಗಳ ಸಮೀಕ್ಷೆಯಿಂದ ಈ ಕೆಳಕಂಡ ಕೆಲವು ಕುತೂಹಲಕಾರಿಯಾದ ಅಂಕಿ ಅಂಶಗಳು ಬೆಳಕಿಗೆ ಬಂದಿವೆ.[2]

**ಕೋಷ್ಟಕ ೧**

| ಕೆರೆ ಕಟ್ಟಿಸಿದವರು | ಶೇಕಡಾವಾರು |
|---|---|
| ರಾಜರು | ೫.೭೨ |
| ಮಂತ್ರಿಗಳು | ೭.೯೦ |
| ರಾಜ್ಯೋದ್ಯೋಗಿಗಳು | ೫.೭೨ |
| ಮಾಂಡಲಿಕರು | ೩.೬೬ |
| ಸ್ಥಳೀಯ ಅಧಿಕಾರಿಗಳು | ೨೯.೯೦ |
| ಸಾಮಂತರು | ೨೦.೫೪ |
| (ವ್ಯಾಪಾರಿ, ಶ್ರೀಸಾಮಾನ್ಯ ಇತ್ಯಾದಿ) | |

ಮೇಲೆ ನೀಡಿರುವ ಕೋಷ್ಟಕದಲ್ಲಿ ಕಾಣಸಿಗುವಂತೆ, ಕೆರೆಯ ನಿರ್ಮಾಣಗಳನ್ನು ಸ್ಥಳೀಯ ಅಧಿಕಾರಿಗಳು ಹೆಚ್ಚಾಗಿ ನಿರ್ಮಿಸಿರುವುದನ್ನು ಕಾಣಬಹುದು. ಇವರ ನಂತರ ಜನಸಾಮಾನ್ಯರು ಈ ಕೆಲಸದಲ್ಲಿ ತೊಡಗಿರುವರೆಂಬುದು ಗಮನಿಸತಕ್ಕ ವಿಷಯ. ವಿಜಯನಗರದ ಕಾಲದಲ್ಲಿ ಕೇಂದ್ರಿಕೃತ ಆಡಳಿತವನ್ನು ವಿಕೇಂದ್ರಿಕೃತಗೊಳಿಸಿ, ನಾಯಕರು (ಅಮರನಾಯಕತ್ವ) ಆಡಳಿತ ನಡೆಸುತ್ತಿದ್ದ ಕಾರಣದಿಂದ ಇಂತಹ ಜನೋಪಯೋಗಿ ಕಾರ್ಯಗಳು ಹೆಚ್ಚಾಗಿ ಈ ಕಾಲದಲ್ಲಿ ನಡೆದವೆಂದು ಕೊಟ್ರಯ್ಯನವರು ಅಭಿಪ್ರಾಯಪಡುತ್ತಾರೆ.[3]

ವಿಜಯನಗರ ಕಾಲದಲ್ಲಿ ಕೆರೆ ಕಟ್ಟುವುದರ ಬಗೆಗಿನ ಮಾಹಿತಿಗಳು ಶಾಸನಗಳಿಂದ ತಿಳಿಯಬರುತ್ತವೆ. ಆ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ದಕ್ಷಿಣ ಭಾರತದಾದ್ಯಂತ ಲಭ್ಯವಿದೆ.[4] ಅವುಗಳಲ್ಲಿನ ಕೆಲವು ಮುಖ್ಯ ಶಾಸನಗಳ ವಿವರಗಳು ಇಂತಿವೆ. ಕೆರೆಗಳನ್ನು 'ಉಪ್ಪಾರರು' ಎಂಬ ಜನಾಂಗದವರು ನಿರ್ಮಿಸಲು ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದಕ್ಕೆ ಶಾಸನಾಧಾರವಿದೆ.[5] ಕಟ್ಟಿಗರು ಎಂಬ ಜನಾಂಗದವರು ಸಹ ಕೆರೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿದ್ದರು ಎಂಬುದು ಕೆಲವು ತೆಲಗು ಭಾಷೆಯ ಶಾಸನಗಳಿಂದ ತಿಳಿದುಬಂದಿದೆ. ಇವರುಗಳು ಉಪ್ಪಾರರೊಂದಿಗೆ ಕೂಡಿ ಕೆರೆಯನ್ನು ನಿರ್ಮಿಸುತ್ತಿದ್ದರು ಎಂದು ಅಭಿಪ್ರಾಯಪಡಬಹುದು. ಉಪ್ಪಾರರನ್ನು

ಒಳಗೊಂಡು ಬೇರೆ ವರ್ಗಗಳ ಜನರು ಸಹ ಈ ಕೆರೆ ಕಟ್ಟುವ ಕಾರ್ಯದಲ್ಲಿ ತೊಡಗಿದ್ದರಬಹುದೆಂದು ನಾವು ಊಹಿಸಬಹುದು. ಕೆರೆ ಕಟ್ಟುವಂತಹ ಕೆಲಸಕ್ಕೆ ಅನೇಕ ವ್ಯಕ್ತಿಗಳ ನೆರವು ಮತ್ತು ಸಹಕಾರಗಳು ಬೇಕಿದ್ದರಿಂದ, ಕೇವಲ ಒಂದು ಜನಾಂಗದವರು ಮಾತ್ರವೇ ಈ ಕೆಲಸವನ್ನು ಮಾಡುತ್ತಿದ್ದರು ಎಂದು ಒಪ್ಪಿಕೊಳ್ಳುವುದು ಅಷ್ಟು ಸಮಂಜಸವಾಗುವುದಿಲ್ಲ.

ಒಂದು ಶಾಸನವು ಕೆರೆಯ ನಿರ್ಮಾಣವನ್ನು ಕುರಿತು ಪೂರ್ಣ ಮಾಹಿತಿಯನ್ನು ನೀಡುತ್ತದೆ. ಕೆರೆಗಳ ಬಗೆಗಿನ ಅನೇಕ ಮಾಹಿತಿಗಳನ್ನು ಅರಿಯಲು ಸಹಕಾರಿಯಾಗಿರುವುದರಿಂದ ಈ ಶಾಸನವು ಕೆರೆಗಳ ಅಧ್ಯಯನಕ್ಕೆ ಅತೀ ಮುಖ್ಯವಾಗಿದ್ದು ಇದನ್ನು ಒಂದು ಮೈಲಿಗಲ್ಲು ಎಂದು ಹೇಳಬಹುದು. ಈ ಶಾಸನವು ಆಂಧ್ರಪ್ರದೇಶದಲ್ಲಿರುವ ಕಡಪ ಜಿಲ್ಲೆಯ ಪೊರುಮಾಮಿಳ್ಳ ಎಂಬ ಗ್ರಾಮದ ಕೆರೆಯ ದಂಡೆಯಲ್ಲಿ ದೊರಕಿದ್ದು ಯುವರಾಜ ಭಾಸ್ಕರನ ಹೆಸರನ್ನು ಉಲ್ಲೇಖಿಸುತ್ತದೆ. ಇದರ ತೇದಿಯು ಕ್ರಿ.ಶ. ೧೩೬೯ ಆಗಿದ್ದು ಮೊದಲನೆಯ ಬುಕ್ಕರಾಯನ ಕಾಲಕ್ಕೆ ಸೇರಿದುದಾಗಿದೆ.[6] ಸುತ್ತಲೂ ಇರುವ ನಾಲ್ಕು ಬೆಟ್ಟಗಳ ಸಮೂಹದಿಂದ ಕಟ್ಟಿರುವ ಈ ಕೆರೆಯನ್ನು ಅನಂತರಾಜಸಾಗರವೆಂದು ಶಾಸನವು ಉಲ್ಲೇಖಿಸುತ್ತದೆ. ಕೆರೆಯ ಉದ್ದವು ೪೫,೦೦೦ ಅಡಿಗಳು. ಆಳವು ೧೨ ಅಡಿಗಳು. ಕಟ್ಟಲ್ಪಟ್ಟ ಕೆರೆಯ ಉದ್ದವು ೧೪,೫೦೦ ಅಡಿಗಳು, ಏರಿಯ ತಳಹದಿಯ ಅಗಲ ೧೫೦ ಅಡಿ ಮತ್ತು ಏರಿಯ ಮೇಲ್ಭಾಗದ ಅಗಲ ೧೨ ಅಡಿಗಳಾಗಿವೆ.[7]

ಒಂದು ಕೆರೆಯನ್ನು ನಿರ್ಮಿಸಬೇಕಾದರೆ, ಏನೆಲ್ಲಾ ಕ್ರಮ ಮತ್ತು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸುವುದರಲ್ಲಿ ಶಾಸನದ ಮುಖ್ಯತ್ವವು ಅಡಗಿದೆ. ಆ ವಿವರಗಳು ಕೆಳಕಂಡಂತೆ ಇವೆ.

೧. (ಕೆರೆ ಕಟ್ಟುವವನಾದ) ರಾಜನು ಸಂತೃಪ್ತನಾಗಿಯೂ, ಸಂತೋಷದಿಂದ ಕೂಡಿದವನಾಗಿಯೂ ಮತ್ತು ಆಚಂದ್ರಾರ್ಕವಾಗಿ ಹೆಸರುಗಳಿಸಿಕೊಳ್ಳುವವನಾಗಿ (ಇರಬೇಕು) ಅಂತಹವನು ಕೆರೆಯ ನಿರ್ಮಾಣಕ್ಕೆ ತೊಡಗಿಕೊಳ್ಳಬೇಕು.
೨. ಜಲಶಾಸ್ತ್ರದಲ್ಲಿ (ಪಯಸ್‌ಶಾಸ್ತ್ರ)ದಲ್ಲಿ ನೈಪುಣ್ಯತೆಯನ್ನು ಹೊಂದಿದ ಬ್ರಾಹ್ಮಣನು ಈ ಕಾಯದಲ್ಲಿ ತೊಡಗಬೇಕು.
೩. ಉತ್ತಮ ಜೇಡಿಮಣ್ಣು ಕೂಡಿರುವಂತಹ ಪ್ರದೇಶವನ್ನು (ಕೆರೆ ಕಟ್ಟುವುದಕ್ಕೆ ಆಯ್ದುಕೊಳ್ಳಬೇಕು).
೪. ನದಿಯ ನೀರಿನ ಆಶ್ರಯವು ಅಥವಾ ಬುಗ್ಗೆಯ ಕೆರೆಯಿಂದ ಸುಮಾರು ಮೂರು ಯೋಜನೆಗಳಷ್ಟು ದೂರದಲ್ಲಿರಬೇಕು.
೫. ಬೆಟ್ಟಗಳ ಸಾಲುಗಳ ಇದ್ದಲ್ಲಿ, ಅವುಗಳನ್ನು ಕೆರೆಯನ್ನು ನಿರ್ಮಿಸಲು ಉಪಯೋಗಿಸಿಕೊಳ್ಳಬೇಕು.
೬. (ಬೆಟ್ಟಗಳ) ನಡುವಿನ (ಕಣಿವೆ) ಪ್ರದೇಶದಲ್ಲಿ ಅತಿ ದೊಡ್ಡದಲ್ಲದ ಮತ್ತು ಸದೃಢವಾದ ಗೋಡೆ(ಏರಿ)ಯನ್ನು (ಕಟ್ಟಬೇಕು).
೭. (ಕೆರೆಯ ಪ್ರದೇಶದಲ್ಲಿ) ಸಮೀಪದಲ್ಲಿ ಫಲ ಕೊಡುವ ಭೂಮಿಯಿರಬೇಕು.
೮. ಕೆರೆಯ ನೀರಿನ ಹರವು ವಿಸ್ತೀರ್ಣವಾಗಿರಬೇಕು, ಹಾಗೆಯೇ ಆಳವಾಗಿಯೂ ಇರಬೇಕು.
೯. ಸಮೀಪದಲ್ಲಿಯೇ ಕಲ್ಲು ಗಣಿಗಳು ಇದ್ದು ಅಲ್ಲಿ ಉದ್ದವಾದ ಮತ್ತು ಸಮನಾದ ಕಲ್ಲುಗಳು ದೊರೆಯಬೇಕು.
೧೦. (ಕೆರೆಯ) ಸಮೀಪದಲ್ಲಿರುವ ಜಮೀನು ಫಲವತ್ತಾಗಿರಬೇಕು ಹಾಗು ಅಲ್ಲಿ ಹಣ್ಣು, ಹಂಪಲುಗಳ ವನಗಳು ಇರಬೇಕು ಮತ್ತು ಜಮೀನು ಸಮನಾಗಿ ಏರಿಳಿತವಿಲ್ಲದೆ ಇರಬೇಕು.
೧೧. (ಕೆರೆಯ) ತೂಬುಗಳಲ್ಲಿನ ಕಲ್ಲು ಅಥವಾ ನಿಯಂತ್ರಕಗಳು ಭದ್ರವಾಗಿರಬೇಕು ಮತ್ತು ಇದನ್ನು ನೀರಿನ ಒತ್ತಡದಿಂದ ಕಾಪಾಡುವಷ್ಟು ಸದೃಢವಾಗಿರಬೇಕು ಹಾಗೂ ಕೊನೆಯಾದಾಗಿ,
೧೨. ಕೆರೆಗಳನ್ನು ಕಟ್ಟುವ ತಂತ್ರಜ್ಞಾನವನ್ನು ಹೊಂದಿರುವಂತಹ ಹನ್ನೆರಡು ಮಂದಿಯಿರಬೇಕು ಮತ್ತು ಅವರೆಲ್ಲರೂ ಮೇಲೆ ಉಲ್ಲೇಖಿಸಿದ ಹನ್ನೊಂದು ಅಂಶಗಳನ್ನು ಅರಿತಿರಬೇಕು. ಒಂದು ಕೆರೆಯನ್ನು ನಿರ್ಮಿಸಬೇಕಾದ ತೆಗೆದುಕೊಳ್ಳಬೇಕಾದ ಅತೀ ಮುಖ್ಯವಾದ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಇದೇ ಶಾಸನ ತಿಳಿಯುತ್ತದೆ. ಅವುಗಳು ಈ ರೀತಿಯಾಗಿವೆ.

೧. ಕೆರೆಯಿಂದ ನೀರು ಸ್ರವಿಸಬಾರದು.
೨. ಕೆರೆಯ ಪಾತ್ರದಲ್ಲಿನ ಮಣ್ಣು ಉಪ್ಪಿನಂಶದಿಂದ ಕೂಡಿರಬಾರದು.

೩. ಎರಡು ರಾಜ್ಯಗಳ ನಡುವಿನ ಗಡಿ ಪ್ರದೇಶವನ್ನು ಆಯ್ಕೆಮಾಡಬಾರದು.

೪. ಕೆರೆಯ ಮಧ್ಯಭಾಗವನ್ನು ಕೂರ್ಮ ಪ್ರದೇಶ ಗಮನಿಸಬೇಕು, ಅವು ಎತ್ತರ ಅಥವಾ ಉಬ್ಬಾಗಿರಬಾರದು.

೫. ಅತ್ಯಲ್ಪ ನೀರು ಬರುವ ಪ್ರದೇಶವನ್ನು ಆಯ್ಕೆ ಮಾಡಬಾರದು ಮತ್ತು ಅತಿಹೆಚ್ಚು ಆಯಕಟ್ಟು ಇರುವ ಜಾಗವನ್ನು ಆರಿಸಬಾರದು.

೬. ಸ್ವಲ್ಪ ಜಮೀನಿದ್ದು ಅಧಿಕ ನೀರು ಬರುವಂತಹ ಜಾಗವನ್ನು ಆಯ್ಕೆ ಮಾಡಬಾರದು.

ವಿಜಯನಗರ ಕಾಲದಲ್ಲಿ ತಂತ್ರಜ್ಞಾನವು ಎಷ್ಟರ ಮಟ್ಟಿಗೆ ಬೆಳೆದ್ದಿತು ಎಂಬುದು ನಮಗೆ ಈ ಶಾಸನದಿಂದ ತಿಳಿದುಬರುತ್ತದೆ. ಅವರು ನಿಸರ್ಗವನ್ನು ಉಪಯುಕ್ತವಾಗಿ ಬಳಸಿಕೊಂಡು ಕೆರೆ ಕಟ್ಟುವ ಕಾರ್ಯವನ್ನು ಸಾಕಷ್ಟು ಮಹತ್ವವನ್ನು ನೀಡಿದ್ದರೆಂಬುದು ಮೇಲಿನ ಶಾಸನದಿಂದ ಸ್ಪಷ್ಟವಾಗುತ್ತದೆ ಕೆರೆಗಳನ್ನು ನಿರ್ಮಿಸುವುದಕ್ಕೆ ಕಲ್ಲು, ಕಲ್ಲಿನ ತೂಬು, ಇಟ್ಟಿಗೆ, ಸುಣ್ಣ ಮತ್ತು ಗಾರೆ ಮುಂತಾದ ಸಾಮಗ್ರಿಗಳನ್ನು ಬಳಸುತ್ತಿದ್ದರು ಎಂದು ಶಾಸನವು ತಿಳಿಸುತ್ತದೆ.[8] ಕಲ್ಲು ಎಂದರೆ, ಸಾಮಾನ್ಯವಾಗಿ ಉರುಟು ಒರಟು ಕಲ್ಲು ಎಂದು ಪರಿಗಣಿಸಬೇಕು. ಇವುಗಳಲ್ಲದೇ ಮಣ್ಣು ಸಹ ಉಪಯೋಗಿಸುತ್ತಿದ್ದರು ಎಂಬುದು ನಿಸ್ಸಂಶಯವಾದ ಸಂಗತಿ.

ಕೆರೆಗಳು ವಿವಿಧ ಆಕಾರಗಳನ್ನು ಹೊಂದಿರುತ್ತಿದ್ದವು. ಕೆರೆಗಳ ಆಕಾರವು ಬಹುತೇಕವಾಗಿ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತಿದ್ದವು. ಚಕ್ರಪಾಣಿ ಮಿಶ್ರನ ವಿಶ್ವವಲ್ಲಭ ಕೃತಿಯು ವಿವಿಧ ಆಕಾರದ ಕೆರೆಗಳನ್ನು ಪ್ರಸ್ತಾಪಿಸುತ್ತದೆ. ಅವುಗಳಲ್ಲಿ ವೃತ್ತಾಕಾರ, ಚತುಷ್ಕೋನ, ಬಹುಕೋನಾಕೃತಿ, ಲಂಬಾಕಾರ, ಅರ್ಧಚಂದ್ರಕಾರಗಳು ಮತ್ತು ಆಯತಾಕಾರಗಳಲ್ಲಿ ಸೇರಿವೆ[9] ಕಶ್ಯಪನು ಕೃಷಿ ಸೂಕ್ತಿಯಲ್ಲಿ ವೃತ್ತ, ಲಂಭ ಮತ್ತು ಅರ್ಧಚಂದ್ರಾಕಾರಗಳಲ್ಲಿ ಕೆರೆಯ ಆಕಾರವು ಇರಬಹುದೆಂದು ತಿಳಿಸುತ್ತಾನೆ.[10] ಹಾವಿನಕುಂಟೆ ಎಂಬ ಕುಂಟೆ ಸರ್ಪಾಕೃತಿಯಲ್ಲಿದ್ದ ಕಾರಣದಿಂದ ಕೆಲವು ಕೆರೆಗಳು ಸರ್ಪಾಕೃತಿಯಲ್ಲಿದ್ದವು ಎಂದು ಊಹಿಸಬಹುದು. ಶಾಸ್ತ್ರಗ್ರಂಥದಲ್ಲಿರುವುದಕ್ಕಿಂತ ಭಿನ್ನಾಕಾರದ ಕೆಲವು ಕೆರೆಗಳು ವಿಜಯನಗರ ಕಾಲದಲ್ಲಿ ಮಾತ್ರವಲ್ಲದೇ ಅದಕ್ಕೂ ಮುಂಚೆಯೂ ನಿರ್ಮಾಣವಾಗಿರುವುದನ್ನು ನಾವು ಕಾಣಬಹುದು. ಇದಕ್ಕೆ ಮೂಲಭೂತ ಕಾರಣವು ಆ ಪ್ರದೇಶ ಭೌಗೋಳಿಕ ಲಕ್ಷಣಗಳು. ಆ ಪರಿಸರಕ್ಕೆ ಅನುಗುಣವಾಗಿ ಕೆರೆಗಳನ್ನು ನಿರ್ಮಿಸಿರುವುದು ಸಹಜವಷ್ಟೇ. ಕೆರೆಗಳ ರಕ್ಷಣೆ ಮತ್ತು ದೀರ್ಘಕಾಲ ಬಾಳಿಕೆ ಬರಬೇಕೆಂದು, ಕೆರೆಯ ಏರಿಯನ್ನು ಯಾವಾಗಲೂ ಅಂಕುಡೊಂಕಾಗಿ ನಿರ್ಮಿಸುತ್ತಿದ್ದರು. ಇದರಿಂದಾಗಿ ನೀರಿನ ಒತ್ತಡವು ಕೆರೆಯ ಏರಿಯ ಸಣ್ಣ ಭಾಗವು ಮಾತ್ರವೇ ಒಡೆಯುತ್ತಿತ್ತು. ಇದನ್ನು ದುರಸ್ತಿಗೊಳಿಸುವುದು ಸುಲಭವಾಗಿದ್ದ ಕಾರಣದಿಂದ ಕೆರೆಯನ್ನು ಅಂಕುಡೊಂಕಾಗಿ ನಿರ್ಮಿಸುತ್ತಿದ್ದರು.

ವಿಜಯನಗರ ಕಾಲದ ಅರಸರುಗಳಲ್ಲಿಯೇ ಮೊದಲನೆಯ ಬುಕ್ಕರಾಯನ (ಕ್ರಿ.ಶ.೧೩೫೬-೭೭) ಆಳ್ವಿಕೆಯ ಮಹತ್ವವುಳ್ಳದಾಗಿದ್ದು ಅವನು ಕೆರೆಗಳ ನಿರ್ಮಾಣ ಕಾರ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದನು ಎಂದರೆ ತಪ್ಪಾಗಲಾರದು. ಈ ಮೊದಲೇ ಚರ್ಚಿಸಿದ ಪೊರುಮಾವಿಲ್ಲ ಕೆರೆಯು ಇವನ ಕಾಲಕ್ಕೆ ಸೇರಿದ್ದು ಎಂಬುದು ಗಮನಿಸಬೇಕಾದ ಸಂಗತಿ.

ವಿರೂಪಾಕ್ಷ ಪಂಡಿತ ಮತ್ತು ವಿನಾಯಕ ಪಂಡಿತರೆಂಬ ಅಣ್ಣ ತಮ್ಮಂದಿರು ವಿಜಯನಗರ ಕಾಲದ ಹೆಸರಾಂತ ವಿದ್ವಾಂಸರುಗಳು. ಇವರು ಹಂಪೆಯಲ್ಲಿ ಒಂದು ದೇವಾಲಯವನ್ನು ನಿರ್ಮಿಸಿ ಅದರ ಸಮೀಪದಲ್ಲಿಯೇ ಒಂದು ಕೆರೆಯನ್ನು ಸಹ ಕಟ್ಟಿಸಿದರು ಎಂದು ಕ್ರಿ.ಶ. ೧೩೯೬ರ ಶಾಸನದಿಂದ ತಿಳಿದುಬರುತ್ತದೆ. ವಿರೂಪಾಕ್ಷ ಪಂಡಿತನು ಸಂಸ್ಕೃತ ಭಾಷೆಯಲ್ಲಿ ಸುಮಾರು ೧೩ ಗ್ರಂಥಗಳನ್ನು ರಚಿಸಿರುತ್ತಾನೆ.[11]

ವಿಜಯನಗರ ಕಾಲದಲ್ಲಿ ಮಹಿಳೆಯರಿಗೂ ಪೂರ್ಣ ಸ್ವಾತಂತ್ರ್ಯವಿದ್ದುದು ಕಂಡುಬರುತ್ತದೆ. ಇವರುಗಳು ಮಿಕ್ಕವರಂತೆಯೇ ಕೆರೆ ಕಟ್ಟಿಸುವಿಕೆ, ಭೂದಾನ ನೀಡುವಿಕೆ ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಅನೇಕ ಶಾಸನಗಳು ತಿಳಿಸುತ್ತವೆ. ಇದಕ್ಕೆ ಪೂರಕವಾಗಿ ಒಂದು ಕುತೂಹಲಕಾರಿಯಾದ ಶಾಸನವನ್ನು ಇಲ್ಲಿ ಉಲ್ಲೇಖಿಸುವುದು ಉಚಿತವಾಗುತ್ತದೆ. ಪೆನುಗೊಂಡೆ ರಾಜ್ಯದ ಜೊಮ್ಮದೇವಿಯು ಬುಕ್ಕರಾಯನ ಮಗಳು, ತಿರುಮಣಿಯೂರು ಎಂಬ ಗ್ರಾಮಲ್ಲಿ ಒಂದು ಕೆರೆಗೆ ನೀರು ಹರಿದುಬರಲು ಕಾಲುವೆಯನ್ನು ಅಗೆಸಬೇಕೆಂದು ಆಶಿಸಿ, ತನ್ನ ಮಂತ್ರಿಗಳಾದ ನಾಗರಾಜ ಮತ್ತು ಮಾಯಾನಯನಿಗಳಿಗೆ ಆದೇಶಿಸುತ್ತಾಳೆ. ಯುವರಾಣಿಯ ನಿರೂಪದಂತೆ

ಮಂತ್ರಿಗಳು ಪೆದ್ದ ಬಯಿರಾವೋಜ ಮತ್ತು ಪಿನ ಬಯಿರಾವೋಜರೆಂಬ ಇಬ್ಬರು ಕರ್ಮಿಗಳಿಗೆ ಆ ಕೆಲಸವನ್ನು ವಹಿಸುತ್ತಾರೆ. ಈ ಕಾರ್ಯವನ್ನು ಅವರಿಗೆ ವಹಿಸಿಕೊಡುವಾಗ, ಕೆರೆಯ ನೀರು ನಾಲೆಯಲ್ಲಿ ಸರಿಯಾಗಿ ಹರಿಯಬೇಕು ಎಂದು ಷರತ್ತನ್ನು ವಿಧಿಸುತ್ತಾರೆ. ಒಂದು ವೇಳೆ ಕೆರೆಯ ನೀರು ಸರಿಯಾಗಿ ಬಂದ ಪಕ್ಷದಲ್ಲಿ ಅವರುಗಳಿಗೆ ೧೩೦ ಸ್ವಣ ನಾಣ್ಯಗಳನ್ನು ಸಿಂಗೆಯ ಗದ್ಯಾಣ, ಭೂಮಿ, ತೂಬಿನ ಹತ್ತಿರ ಮನೆ ಮತ್ತು ಬಂಗಾರದ ಕಡಗಗಳನ್ನು ನೀಡುವುದಾಗಿಯೂ, ಒಂದು ವೇಳೆ ಕೆಲಸವು ಅಸಮರ್ಪಕವಾಗಿದ್ದಲ್ಲಿ ಅವುಗಳನ್ನು ನೀಡುವುದಿಲ್ಲವೆಂದು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಆದರೆ ಆ ಕೆರೆಯನ್ನು ಅತ್ಯಂತ ಸಮರ್ಪಕವಾಗಿ ಕಟ್ಟಿ ಆ ಬಹುಮಾನಗಳನ್ನು ಅವರಗಳು ಪಡೆಯುತ್ತಾರೆ ಎಂಬುದಾಗಿ ಕ್ರಿ.ಶ.೧೩೯೮ರ ಶಾಸನವು ತಿಳಿಸುತ್ತದೆ. ಕೆಲವು ವಿಧಿವತ್ತಾದ ಧಾರ್ಮಿಕ ಆಚರಣೆಗಳ ನಂತರವೇ ಆ ಕೆರೆಯನ್ನು ಬಳಸಿಕೊಳ್ಳಲಾಯಿತು ಎಂದು ಈ ಶಾಸನವು ಉಲ್ಲೇಖಿಸುತ್ತದೆ.[12]

ದಶವಿದ್ಯಾ ಚಕ್ರವರ್ತಿ ಸಿಂಗಯ್ಯ ಭಟ್ಟನು ಕ್ರಿ.ಶ.೧೩೮೯ರಲ್ಲಿ ಸಿರಿವುರೆ ಕೆರೆಗೆ ಒಂದು ಕಾಲುವೆಯನ್ನು ನಿರ್ಮಿಸಿದನೆಂದು ಒಂದು ಶಾಸನದಿಂದ ತಿಳಿದುಬರುತ್ತದೆ. ಅವನ ಬಿರುದಾದ 'ದಶವಿದ್ಯಾ ಚಕ್ರವರ್ತಿ'ಯಿಂದ, ಅವನು ಕೆರೆಯನ್ನು ಕಟ್ಟುವುದರಲ್ಲಿ ನಿಸ್ಸೀಮನಾಗಿದ್ದನೆಂದು ಅರಿಯಬಹುದು. ಈ ಕಾಲುವೆಗೆ 'ಪ್ರತಾಪ ಬುಕ್ಕರಾಯ ಮಂಡಲ ಕಾಲುವೆ' ಎಂದು ಹೆಸರಿಸಿರುವುದು ಗಮನಾರ್ಹವಾದ ಸಂಗತಿ.[13]

ಸಾಮಾನ್ಯವಾಗಿ ಕೆರೆಯನ್ನು ಕಟ್ಟಿಸಿದ ನಂತರ ಆ ಕೆರೆಯನ್ನು ಕಟ್ಟಿಸಿದವರಿಗೆ, ಆ ಕೆರೆಯ ಆಯಕಟ್ಟಿನ ಪ್ರದೇಶದಲ್ಲೇ ಭೂಮಿ ಗದ್ದೆಯನ್ನು ನೀಡುತ್ತಿದ್ದುದು ವಾಡಿಕೆಯಲ್ಲಿತ್ತು. ಒಂದು ನಿರ್ದಿಷ್ಟ ಅಳತೆಯಷ್ಟು ಭೂಭಾಗವನ್ನು ಕೆರೆಯನ್ನು ನಿರ್ಮಿಸಿದವನಿಗೆ ನೀಡಲಾಗುತ್ತಿತ್ತು. ಸಾಮಾನ್ಯವಾಗಿ ಮೂರರಲ್ಲಿ ಒಂದು ಭಾಗವು ಅವರಿಗೆ ಸೇರುತ್ತಿತ್ತು.[14] ಕೆಲವು ನಿದರ್ಶನಗಳಲ್ಲಿ ಕೆರೆಯು ದೇವಸ್ಥಾನಕ್ಕೆ ಒಳಪಟ್ಟಿದ್ದರೆ, ಆ ಕೆರೆಯ ಆಯಕಟ್ಟಿನ ಉತ್ಪನ್ನಗಳು ದೇವಾಲಯಕ್ಕೆ ಸೇರುತ್ತಿದ್ದವು. ತ್ರಯಂಬಕಪುರದ ಶಾಸನವು ಈ ನಿಟ್ಟಿನಲ್ಲಿ ಬೆಳಕನ್ನು ಚೆಲ್ಲುತ್ತದೆ. ಈ ಶಾಸನದಂತೆ ಒಟ್ಟು ಹದಿನೆಂಟು ಕೆರೆಗಳ ಆಯಕಟ್ಟಿನ ಉತ್ಪನ್ನಗಳು ತ್ರಯಂಬಕೇಶ್ವರ ದೇವರ ಸೇವೆಗೆ ಸಲ್ಲುತ್ತಿತ್ತು. ಹದಿನೆಂಟು ಕೆರೆಗಳ ಹೆಸರುಗಳು ಈ ರೀತಿಯಾಗಿವೆ. ಹಳಲಕೋಟೆ ಕೆರೆ, ಅರಕವಾಡಿ ಕೆರೆ, ನರಸಮಂಗಲದ ಕೆರೆ, ಹೆಗವಾಡಿಯ ಕೆರೆ, ಅಂಕೆಹಳ್ಳಿಯ ಕೆರೆ, ಹಗುಲದ ಕೆರೆ, ಕೋಡಿಹಳ್ಳಿಯ ಕೆರೆ, ಕುಂತನೂರು ಕೆರೆ, ವಿಜಯನಗರದ ಕೆರೆ, ನಲುವೂರ ಕೆರೆ, ರಾಘವಪುರದ ಕೆರೆ, ಎಡತಲೆಯ ಕೆರೆ, ಕೆಲಸೂರು ಕೆರೆ, ವೊಡೆಯನ ಕೆರೆ ಮತ್ತು ಸಗಡೆಯ ಕೆರೆ.[15]

ಕೆರೆಯನ್ನು ಕಟ್ಟಿದ ನಂತರ ಕೆಲವೊಂದು ಸಂದರ್ಭಗಳಲ್ಲಿ ಮಾರುವ ಹಕ್ಕು ಇತ್ತೆಂದು ತಿಳಿದುಬರುತ್ತದೆ. ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ವೆಂಕಟಾಪುರದ ಶಾಸನದಲ್ಲಿ ಇದರ ವಿವರಗಳು ದೊರಕುತ್ತವೆ. ಇದು ಒಂದು ಕ್ರಯ ಶಾಸನವಾಗಿರುವುದು ವಿಶೇಷವಾದ ಸಂಗತಿ. ಕೆರೆಯನ್ನು ಕಟ್ಟಿಸಿದವನು, ಬೋಯವೀಡು ಮತ್ತು ಕುಡುಚಿಲಪಾಡು ಎಂಬ ಗ್ರಾಮದಲ್ಲಿ ದಸವಂದದ ಪ್ರಕಾರವಾಗಿ ಕಟ್ಟಲಾದ ಕೆರೆಯನ್ನು ಬಯಿಚನ ಬೋಯಡು ಎಂಬುವವನಿಗೆ ಆ ಕೆರೆಯ ಸಂಬಂಧಿಸಿದ ಎಲ್ಲಾ ಸ್ವಾಮ್ಯವನ್ನು ಒಳಗೊಂಡು ಮಾರುತ್ತಾನೆಂದು ಕ್ರಿ. ಶ. ೧೪೨೯ರ ಶಾಸನವು ಹೇಳುತ್ತದೆ.[16] ಇದರಿಂದ ದಸವಂದ ಎಂಬ ಪ್ರಕಾರವು ಕೆರೆಯನ್ನು ನಿರ್ಮಿಸಿದವನಿಗೆ, ಕೆರೆಯ ಮೇಲೆ ಇದ್ದ ಹಕ್ಕನ್ನು ನಮಗೆ ತಿಳಿಸಿಕೊಡುತ್ತದೆ. ದಸವಂದವು ಒಂದು ತೆರಿಗೆಯೆಂದು ಪರಿಗಣಿಸಿದರೆ, ಈ ಮೇಲೆ ನೀಡಿದ ನಿದರ್ಶನದಲ್ಲಿ ದಸವಂದವು ಕೆರೆಯನ್ನು ಕಟ್ಟಿಸಿದವನಿಗೆ ಇದ್ದ ಹಕ್ಕು ಎಂದು ಅರ್ಥೈಸಬಹುದು.

ಹಂಪೆಯ ಬಳಿಯಲ್ಲಿ ಕನ್ನಡಿಯ ಕೆರೆ ಇತ್ತೆಂದು ವಿಜಯನಗರ ಅರಸರ ಮಂತ್ರಿಯಾದ ಲಕ್ಷ್ಮೀಧರನ ಕ್ರಿ.ಶ. ೧೪೧೦ರ ಒಂದು ಶಾಸನ ಉಲ್ಲೇಖಿಸಿರುವುದು ಗಮನಿಸತಕ್ಕ ವಿಷಯ. ಬಹುಶಃ ಈ ಕೆರೆಯು ಅತ್ಯಂತ ಸುಂದರವಾಗಿದ್ದು ಅದರ ನೀರು ತಿಳಿಯಾಗಿದ್ದಿರಬೇಕು ಎಂದು ಊಹಿಸಬಹುದು. ಈಗ ಕೆರೆಯು ಸಂಪೂರ್ಣವಾಗಿ ನಶಿಸಿಹೋಗಿದೆ.[17]

ಹಂಪೆಯ ಸಮೀಪದಲ್ಲಿಯೇ ಕೆಲವು ಕೆರೆಗಳು ಇದ್ದು ಅಂದಿನ ರಾಜಧಾನಿಯನ್ನು ಒಳಗೊಂಡು ಸುತ್ತಮುತ್ತಲ ಜನರಿಗೆ ಅವಶ್ಯಕವಾದ ನೀರನ್ನು ಪೂರೈಸುತ್ತಿತ್ತು ಎಂದು ಶಾಸನಗಳಿಂದ ತಿಳಿದುಬರುವ ವಿಷಯವಾಗಿದೆ. ಕವಕಿಯ ಕಟ್ಟೆ, ಭೂಪತಿಯ ಕೆರೆ, ಗೌರಜೀಯ ಕೆರೆ, ನಾಗಲಾಪುರ ಕೆರೆಗಳು ಹಂಪೆಯ ಸಮೀಪದಲ್ಲಿದ್ದರೆ,[18] ಚಿಕ್ಕರಾಯ ಕೆರೆ ಎಂಬ ಕೆರೆಯು ವಿಜಯನಗರ ಪಟ್ಟಣದಲ್ಲಿಯೇ ಇತ್ತು ಎಂದು ಶಾಸನಗಳು ದಾಖಲಿಸಿವೆ.[19] ಚಿಕ್ಕಹಂಸನ ಕೆರೆಯು ಸಹ ವಿಜಯನಗರ ಪಟ್ಟಣದಲ್ಲಿ ಇತ್ತೆಂಬುದಾಗಿ ಕಮಲಾಪುರದ ಕ್ರಿ.ಶ. ೧೫೨೨ರ ಶಾಸನವು ಉಲ್ಲೇಖಿಸುತ್ತದೆ.[20]

ಕೆಲವೊಂದು ಉದಾಹರಣೆಗಳಲ್ಲಿ ಚಿಕ್ಕ ಕೆರೆ ಅಥವಾ ಕುಂಟೆಗಳನ್ನು ಕಾಲಾನುಕ್ರಮದಲ್ಲಿ ವಿಸ್ತರಿಸಿದ ವಿವರಗಳು ವಿಜಯನಗರ ಕಾಲದಲ್ಲಿ ದೊರಕಿದೆ. ಸಂಡೂರು ಪ್ರದೇಶದಲ್ಲಿರುವ ತಳೂರು ಗ್ರಾಮದ ಕುಂಟೆಯ ಪ್ರವಾಹ ಬಂದು ಒಡೆಯಲಾಗಿ, ಅದನ್ನು ಜೀರ್ಣೋದ್ಧಾರ ಮಾಡುವ ಸಮಯಕ್ಕೆ ವಿಸ್ತರಿಸಲಾಯಿತು. ಈ ವಿಸ್ತರಣಾ ಕಾರ್ಯವನ್ನು ಮಹಾ ಮಂಡಲೇಶ್ವರ ಚಿಕ್ಕ ತಿಮ್ಮಯ್ಯದೇವನ ಮಗನಾದ ತಮ್ಮ ರಾಜರಸು ಮಾಡಿದನೆಂಬುದಾಗಿ ಕ್ರಿ.ಶ.೧೫೧೨ರ ಶಾಸನವು ದಾಖಲಿಸಿದೆ.[21] ಹಂಪೆಯ ಅಚ್ಯುತರಾಯ ದೇವಸ್ಥಾನ ಒಂದು ಶಾಸನವು ಭೂಪತಿ ಕೆರೆಯನ್ನು ಕುರಿತು ಉಲ್ಲೇಖಿಸುತ್ತದೆ. ಈ ಶಾಸನದ ತೇದಿಯು ಕ್ರಿ.ಶ. ೧೫೩೪. ಈ ಕೆರೆಯು ಅಚ್ಯುತರಾಯಪೇಟೆಯ ದಕ್ಷಿಣಕ್ಕೆ ಇತ್ತೆಂದು ಉಲ್ಲೇಖಿಸುವುದು ಗಮನಾರ್ಹವಾದ ವಿಷಯ. ಈ ಕೆರೆಯನ್ನು ಕುರಿತು ಮತ್ತೊಂದು ಶಾಸನವು ದಾಖಲಿಸಿದೆ.[22]

ಈ ಕೆರೆಯು ಮಾತಂಗ ಪರ್ವತದ ಕೆಳಗಿರುವ ಕಣಿವೆಯಲ್ಲಿದೆಯೆಂದು ಡಾಮ್‌ನಿಕ್‌ರವರು ಶೋಧಗಳಿಂದ ಸರಿಯಾಗಿ ಗುರುತಿಸಿದ್ದಾರೆ. ಇಂದು ಕೆರೆಯ ರೂಪದಲ್ಲಿ ಇದು ಕಂಡುಬರದಿದ್ದರೂ, ಒಂದು ಒಡ್ಡು ಕಟ್ಟಿ ಕೆರೆಯಂತೆ ನಿರ್ಮಿಸಲಾಗಿದೆ. ಅಚ್ಯುತಾಪುರದ ದಕ್ಷಿಣ ಗಡಿ ಭಾಗದಲ್ಲಿರುವ ಈ ನಿರ್ಮಿತಿಯನ್ನು ಗುರುತಿಸಲಾಗಿದೆ. ಇದು ಪೂರ್ಣ ಪ್ರಮಾಣದ ಕೆರೆಯಾಗಿರದೆ ನೀರಿನ ಸಂಗ್ರಾಹಕವಾಗಿದ್ದು, ಅಚ್ಯುತಾಪುರಕ್ಕೆ ಅಲ್ಲಿಂದಲೇ ನೀರು ಪೂರೈಸಲಾಗುತ್ತಿತ್ತು ಎಂದು ಊಹಿಸಬಹುದು. ಅಚ್ಯುತಾಪುರವು ನಿರ್ಜನಗೊಂಡ ತರುವಾಯದಲ್ಲಿ, ಅಲ್ಲಿಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಂಡಿರಬಹುದೆಂದು ಮತ್ತು ಮಣ್ಣನ್ನು ಹಿರಿಯ ಕಾಲುವೆಯನ್ನು ನಿರ್ಮಿಸುವಾಗ ಬಳಸಿಕೊಂಡಿರಬೇಕೆಂದು ಡಾಮ್‌ನಿಕ್‌ರವರು ಅಭಿಪ್ರಾಯಪಟ್ಟಿದ್ದಾರೆ.[23]

ವಿಜಯನಗರ ಅರಸರ ಆಳ್ವಿಕೆಯಲ್ಲಿ ಸರ್ವಧರ್ಮಗಳಿಗೂ ಸಮಾನ ಸ್ಥಾನಮಾನಗಳು ಇದ್ದ ವಿಷಯವನ್ನು ಎಲ್ಲರೂ ಬಲ್ಲರಷ್ಟೇ. ಒಂದು ಕುತೂಹಲಕಾರಿಯಾದ ಸಂಗತಿಯನ್ನು ಇಲ್ಲಿ ಉದಾಹರಿಸುವುದು ಸೂಕ್ತ. ವಿಜಯನಗರ ಅರಸರ ಕಾಲದ ದಿಲುವಾರಖಾನ್‌ಸೀತಾಪನಮಲುಕ್ತಪಾರುನು ಎಂಬ ಮುಸಲ್ಮಾನ ಅಧಿಕಾರಿ ಕಾರ್ಯಕರ್ತ ಕೋಡಿರಾಮ ಸಮುದ್ರಭಟ್ಟ ಅಗ್ರಹಾರವನ್ನು ವೀರಯ್ಯನೆಂಬುವನಿಗೆ ದಾನಮಾಡಿದ ವಿಷಯವನ್ನು ಕೋಲಾರ ಜಿಲ್ಲೆಯ ತಮಕು ಶಾಸನವು ತಿಳಿಸುತ್ತದೆ.[24]

ಹಂಪಿ ಪರಿಸರದಲ್ಲಿ ಸುಮಾರು ೬೦ಕ್ಕೂ ಮಿಗಿಲಾದ ಕೆರೆಗಳಿವೆ. ಇವುಗಳಲ್ಲಿ ಸುಮಾರು ೫೫ಕ್ಕೂ ಅಧಿಕವಾದ ಕೆರೆಗಳು ವಿಜಯನಗರ ಕಾಲದಲ್ಲಿ ನಿರ್ಮಿಸಿದಂತಹ ಕೆರೆಗಳೇ ಆಗಿವೆ. ಅವುಗಳಲ್ಲಿ ಕೆಲವು ಕೆರೆಗಳು ವಿಜಯನಗರ ಪೂರ್ವದಲ್ಲಿಯೇ ಇದ್ದವು. ಅಂತಹ ಕೆಲವು ಕೆರೆಗಳನ್ನು ವಿಜಯನಗರ ಅರಸರ ಕಾಲದಲ್ಲಿ ವಿಸ್ತರಿಸಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ವಿಜಯನಗರ ಕಾಲದ ಕೆರೆಗಳನ್ನು ೧. ಶಾಸನಾಧಾರ, ೨. ತೂಬಿನ ಮೇಲಿರುವ ಗಜಲಕ್ಷ್ಮಿಯ ಉಬ್ಬುಶಿಲ್ಪ, ೩. ಕೈಫಿಯತ್ತುಗಳು ಮತ್ತು ೪. ಕಟ್ಟುವಾಡಗಳ ರಚನಾ ವಿಧಾನಗಳಿಂದ ಗುರುತಿಸಬಹುದು. ಹಂಪಿ ಪರಿಸರದ ವಿಜಯನಗರ ಕಾಲದ ಕೆರೆಗಳು ಸುಮಾರು ೫೫ಕ್ಕೂ ಮಿಗಿಲಾಗಿದೆಯೆಂದು ಈ ಮುಂಚೆಯೇ ಉಲ್ಲೇಖಿಸಲಾಗಿದೆ. ಈ ಕೆರೆಗಳನ್ನು ವೈಜ್ಞಾನಿಕವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಅದರಂತೆ ಮೊದಲ ಕೆರೆಗಳ ಸಮೂಹವು ಸಮುದ್ರ ಮಟ್ಟದಿಂದ ಸುಮಾರು ೫೦೦ ಮೀಟರ್‌ಗಳಷ್ಟು ಎತ್ತರದಲ್ಲಿರುವಂತಹವುಗಳು ಮತ್ತು ಎರಡನೆಯ ಗುಂಪು ೪೦೦, ೫೦೦ ಮೀಟರ್‌ಗಳಷ್ಟು ಎತ್ತರದಲ್ಲಿರುವಂತಹವುಗಳೇ ಆಗಿವೆ. ಇವುಗಳಲ್ಲಿ ಒಂದು ಅಂಶವು ಅತ್ಯಂತ ಕುತೂಹಲಕಾರಿಯಾಗಿದೆ. ಬಹುತೇಕ ಕೆರೆಗಳು ಸುಮಾರು ೫೦೦ ಮೀಟರ್‌ನಷ್ಟು ಎತ್ತರದ ಪ್ರದೇಶಗಳಲ್ಲಿಯೇ ನಿರ್ಮಿಸಲಾಗಿದೆ. ಎಲ್ಲ

ಕೆರೆಗಳು ಒಂದೇ ಕಾಲದಲ್ಲಿ ನಿರ್ಮಾಣಗೊಂಡಿಲ್ಲ. ಅವುಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಿಸಿರುತ್ತಾರೆ. ಆದರೂ ಈ ಎಲ್ಲ ಕೆರೆಗಳ ಸರಾಸರಿ ಎತ್ತರವನ್ನು ನಾವು ಗಣನೆಗೆ ತೆಗೆದುಕೊಂಡರೆ, ಇವು ಸುಮಾರು ೫೦೦ ಮೀಟರ್‌ಗಳ ವ್ಯಾಪ್ತಿಯಲ್ಲಿಯೇ ಬರುತ್ತವೆ. ಮತ್ತೊಂದು ಸಂಗತಿಯೆಂದರೆ, ತುಂಗಭದ್ರಾ ನದಿಯು ಸಹ ಸಮುದ್ರ ಮಟ್ಟದಿಂದ ೫೦೦ ಮೀಟರ್‌ನಷ್ಟು ಎತ್ತರದಲ್ಲಿ ಹರಿಯುತ್ತದೆ. ಆ ನದಿಯ ಪಾತ್ರದ ಎತ್ತರ ಮತ್ತು ವಿಜಯನಗರ ಕಾಲದ ಕೆರೆಗಳ ಎತ್ತರವೂ ಒಂದೇ ಆಗಿದೆ. ವಿಜಯನಗರ ಕಾಲದಲ್ಲಿ ಕೆರೆ ಕಟ್ಟುವುದರಲ್ಲಿ ಇದ್ದ ನೈಪುಣ್ಯತೆ ಹಾಗೂ ಉನ್ನತ ತಾಂತ್ರಿಕ ಜ್ಞಾನಮಟ್ಟವು ಎಷ್ಟರಮಟ್ಟಿಗೆ ಇತ್ತೆಂದು ತಿಳಿಸುವುದರೊಂದಿಗೆ ಆ ಕಾಲದಲ್ಲಿ ಇಂತಹ ರಚನೆಗಳಿಗೆ ಅವರು ನೀಡುತ್ತಿದ್ದ ಪ್ರಾಮುಖ್ಯತೆಯನ್ನು ನಮಗೆ ಪರಿಚಯಿಸಿಕೊಡುತ್ತದೆ.

ಇಲ್ಲಿನ ವಿಜಯನಗರ ಕಾಲದ ಕೆರೆಗಳ ಏರಿಗಳು ಸಹ ಒಂದು ನಿರ್ದಿಷ್ಟವಾದ ದಿಕ್ಕಿಗೆ ಇರುವುದು ಸಹ ಗಮನಾರ್ಹ ಸಂಗತಿ. ಬಹುತೇಕ ಕೆರೆ ಏರಿಗಳು ಉತ್ತರದಿಕ್ಕಿನಲ್ಲಿ ಇವೆ. ಹೊಸಪೇಟೆ ತಾಲೂಕಿನ ದಕ್ಷಿಣ ಭಾಗವು ಎತ್ತರವಾಗಿದ್ದು, ಈ ಪ್ರದೇಶದಲ್ಲಿ ಬೀಳುವ ಮಳೆಯು ಸಣ್ಣ ತೊರೆಗಳಾಗಿ ಉತ್ತರ ಭಾಗಕ್ಕೆ ಹರಿಯುತ್ತವೆ ಮತ್ತು ತುಂಗಭದ್ರಾ ನದಿಯನ್ನು ಸೇರುತ್ತದೆ. ಆದ್ದರಿಂದ ಅಂತಹ ಸಣ್ಣ ತೊರೆಗಳ ಸಹಾಯದಿಂದ ಕೆರೆಗೆ ನೀರನ್ನು ಹಾಯಿಸಿಕೊಂಡು ನೈಸರ್ಗಿಕ ಕ್ಷಿತಿಜ ಭೂಮಟ್ಟಕ್ಕೆ ಅನುಗುಣವಾಗಿ ಆಯಕಟ್ಟಿನ ಕಾಲುವೆಗಳನ್ನು ನಿರ್ಮಿಸಿರುತ್ತಾರೆ. ಆದುದರಿಂದ ಕೆರೆ ಏರಿಗಳನ್ನು ಸಹ ಉತ್ತರ ದಿಕ್ಕಿಗೆ ಕಟ್ಟಲಾಗಿದೆ.

ವಿಜಯನಗರ ಕಾಲದಲ್ಲಿ ಹವಾಮಾನವು ಇಂದಿನ ಹವಾಮಾನದಂತೆಯೇ ಇದ್ದು, ಇಂದು ಬೆಳೆಯಲಾಗುತ್ತಿರುವ ಮುಖ್ಯ ಬೆಳೆಗಳಾದ ಭತ್ತ, ಜೋಳ, ಕಬ್ಬು ಮತ್ತು ಬಾಳೆಗಳನ್ನು ಅಂದು ಸಹ ಬೆಳೆಯುತ್ತಿದ್ದರು. ಆ ಕಾಲಕ್ಕೆ ಸೇರಿದ ಅನೇಕ ಶಾಸನಗಳು ಮುಖ್ಯ ಬೆಳೆಗಳನ್ನು ಕುರಿತು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಪ್ರಮುಖ ಕೃಷಿ ಹವಾಮಾನದತ್ತ ಗಮನಹರಿಸಿ ವಿಜಯನಗರ ಕಾಲದಲ್ಲಿ ಏಕೆ ನೂರಾರು ಕೆರೆಗಳು, ಕಟ್ಟೆಗಳು, ಕುಂಟೆಗಳೇ ಮುಂತಾದ ನೀರಾವರಿ ರಚನೆಗಳು ನಿರ್ಮಾಣಗೊಂಡವೆಂದು ಅರಿಯುವ ಪ್ರಯತ್ನವನ್ನು ಮಾಡಬಹುದು.

ಈ ಪ್ರದೇಶವು ಕರ್ನಾಟಕದ ಅಧಿಕ ಬಯಲು ಸೀಮೆ ಅಥವಾ ಮೈದಾನ ಭೂಭಾಗವು ಪ್ರದೇಶಗಳನ್ನು ಒಳಗೊಂಡಿದ್ದು ಶೇ. ೭೨ರಷ್ಟು ಪ್ರದೇಶವು ಕೃಷಿಗೆ ಸಹಕಾರಿಯಾಗಿದೆ. ಇಲ್ಲಿಯ ವಾರ್ಷಿಕ ಸರಾಸರಿ ಮಳೆಯು ೪೦೦ ರಿಂದ ೮೦೦ ಮಿ.ಮೀ.ಗಳಷ್ಟು ಇದ್ದು ವಾಣಿಜ್ಯ ಬೆಳೆಗಳನ್ನು ಒಳಗೊಂಡು ಭತ್ತ, ರಾಗಿ, ಮೆಣಸಿನಕಾಯಿ ಮುಂತಾದ ಅನೇಕ ಬೆಳೆಗಳನ್ನು ಈ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಈ ಪ್ರದೇಶವು ಪದೇ ಪದೇ ಕ್ಷಾಮಕ್ಕೆ ಸಹ ಒಳಗಾಗುತ್ತದೆ. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಈ ಭಾಗದಲ್ಲಿ ಸೇರಿದ್ದು ಇಲ್ಲಿಯ ಮಳೆಯು ಅತ್ಯಲ್ಪವಾಗಿದೆ. ಅಂಕಿ ಅಂಶದ ಪ್ರಕಾರ ಇಲ್ಲಿಯ ಮಳೆಯ ಪ್ರಮಾಣವು ಒಂದು ವರ್ಷದಲ್ಲಿ ೨೯ ರಿಂದ ೪೦ ಮಳೆಯ ದಿನಗಳಾಗಿವೆ. ಸರಾಸರಿ ಒಂದು ದಿನದಲ್ಲಿ ೨.೫ ಮಿ.ಮೀ.ಯಷ್ಟು ಮಳೆಯಾದ ದಿನವನ್ನು ಒಂದು ಮಳೆಯ ದಿನ ಎಂದು ಪರಿಗಣಿಸಲಾಗುತ್ತದೆ. ಮಳೆಯು ಕಡಿಮೆ ಇರುವ ಕಾರಣ ಬೇಸಿಗೆಯಲ್ಲಿ ತುಂಗಭದ್ರಾ ಮತ್ತು ಮಲಪ್ರಭಾದಂತಹ ನದಿಗಳು ಸಹ ಒಣಗುವ ಸಂಭವವೇ ಜಾಸ್ತಿಯಿದ್ದ ಕಾರಣವಾಗಿ ತುಂಗಭದ್ರಾ ನದಿಗೆ ಅಡ್ಡಲಾಗಿ ಅಲ್ಲಲ್ಲಿ ಕಟ್ಟೆಗಳನ್ನು ನಿರ್ಮಿಸಿ ನೀರನ್ನು ನಾಲೆಗಳ ಮೂಲಕ ಹಾಯಿಸಿ ಕೃಷಿಗೆ ಬಳಸಿಕೊಂಡಿರುವುದನ್ನು ಕಾಣಬಹುದು. ಅಂತರ್ಜಲವು ಕರಾವಳಿ ಮತ್ತು ಮಲೆನಾಡಿಗಿಂತಲೂ ಈ ಭಾಗದಲ್ಲಿ ಜಾಸ್ತಿಯಗಿರುತ್ತದೆ ಎಂಬುದು ಗಮನಿಸತಕ್ಕ ವಿಷಯ. ಈ ರೀತಿಯಾಗಿ ಕಟ್ಟೆಗಳನ್ನು ನಿರ್ಮಿಸುವ ಕಾರ್ಯವನ್ನು ವಿಜಯನಗರದ ಅರಸರು ಮೊಟ್ಟಮೊದಲು ೧೪ನೆಯ ಶತಮಾನದಲ್ಲಿ ಪ್ರಾರಂಭಿಸಿದರೆಂದು ಅಧ್ಯಯನದಿಂದ ತಿಳಿದುಬರುತ್ತದೆ.

ಮಳೆಯ ನೀರನ್ನು ಆಶ್ರಯಿಸಿರುವಂತಹ ಈ ಪರಿಸರದ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕನುಗುಣವಾಗಿ, ಮೂರು ಅಥವಾ ನಾಲ್ಕು ಕೆರೆಗಳನ್ನು ಸಮೀಪದಲ್ಲಿಯೇ, ಒಂದಕ್ಕೊಂದು ಹೊಂದಿಕೊಂಡಿರುವಂತೆ ಕಟ್ಟಿರುವುದನ್ನು ಗಮನಿಸಬಹುದು. ಈ ರೀತಿಯಾದ ವ್ಯವಸ್ಥೆಯಿಂದ ಎರಡು ಪ್ರಯೋಜನಗಳಿವೆ. ಮೊದಲನೆದಾಗಿ ಒಂದು ಕೆರೆ ತುಂಬಿದಾಗ, ಹೆಚ್ಚುವರಿ ನೀರು ಮತ್ತೊಂದು ಕೆರೆಗೆ ಹರಿದುಬರುತ್ತದೆ. ಇದರಿಂದಾಗಿ ಎತ್ತರದಲ್ಲಿರುವ ಕೆರೆಗೆ ಮೊದಲನೆಯ ಕೆರೆಗೆ ಹೆಚ್ಚುವರಿ ನೀರು ಬಂದ ಪಕ್ಷದಲ್ಲಿಯೂ ಏರಿಗೆ ಯಾವುದೇ ವಿಧದ ಅಪಾಯವುಂಟಾಗುವದಿಲ್ಲ. ಆ ಕೆರೆಯ ಸುರಕ್ಷಿತವಾಗಿರುತ್ತದೆ. ಎರಡನೆಯ ಪ್ರಯೋಜನವು ಏನೆಂದರೆ ಹೆಚ್ಚುವರಿ ನೀರು,

ವ್ಯರ್ಥವಾಗದಂತೆ ಎರಡನೆಯ ಕೆರೆಯಲ್ಲಿ ಶೇಖರಗೊಳ್ಳುತ್ತದೆ. ಇದು ನಮ್ಮ ಪೂರ್ವಜರು ತಮ್ಮ ದೀರ್ಘ ಅನುಭವದಿಂದ ಈ ವಿಷಯಗಳನ್ನು ಕಂಡುಕೊಂಡು ಅತ್ಯಂತ ವೈಜ್ಞಾನಿಕವಾಗಿ ತಮ್ಮ ದೈನಂದಿನ ಜೀವನದಲ್ಲಿ ಬಳಕೆಗೆ ತಂದಿರುವುದು ನಿಜಕ್ಕೂ ಶ್ಲಾಘನೀಯ. ಈ ಪರಿಸರದಲ್ಲಿ ತಾಲೂಕಿನಲ್ಲಿ ಇಂತಹ ಮಳೆ ಆಶ್ರಿತ ಕೆರೆಗಳ ಸಮುಚ್ಛಯವನ್ನು ಇಂದಿಗೂ ನಾವು ಕಾಣಬಹುದು.

ಕೆರೆಗೆ ಸಂಬಂಧಿಸಿದಂತೆ ಕೆಲವು ಮುಖ್ಯ ಭಾಗಗಳು ಈ ರೀತಿಯಾಗಿವೆ.

[1] ಈ ಮಾಹಿತಿಯನ್ನು ನೀಡಿದ ಪ್ರೊ. ಎಸ್.ಎನ್.ರಾಜಗುರು, ಮುಖ್ಯಸ್ಥ (ನಿವೃತ್ತ), ಡೆಕ್ಕನ್ ಕಾಲೇಜ್ಆಂಡ್ ಪೋಸ್ಟ್ ಗ್ರಾಜುಯೇಟ್ ರಿಸರ್ಚ್ಇನ್ಸ್‌ಟಿಟ್ಯೂಟ್, ಪುಣೆ ಅವರಿಗೆ ಕೃತಜ್ಞನಾಗಿದ್ದೇನೆ.

[2] ಐಎಸ್‌ವಿಇ, ಪು. ೬೬, ಕುಪ್ಪುಸ್ವಾಮಿ, ಜಿ.ಆ., ಕ್ಯೂಜೆಎಂಎಸ್, ಸಂ.L X X IV ಸಂ. ೪, ಪು. ೪೨೦

[3] ಐಎಸ್‌ವಿಇ, ಪು. ೬೭

[4] ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ನಾಲ್ಕು ಸಾವಿರಕ್ಕೂ ಅಧಿಕವಾದ ವಿಜಯನಗರ ಕಾಲದ ಶಾಸನಗಳು ದೊರಕಿವೆ.

[5] ನೆಲ್ಲೂರು ಇನ್ಸ್‌ಕ್ರಿಪ್ಯನ್ಸ್, ಭಾಗ ೧, ಸಂ. ೩೮೨ ಮತ್ತು ಪು. ೪೭೧, ಹೆಚ್ಎಎಸ್, ಸಂ. X III, ಸಂ. ೫೩ ಮತ್ತು ೫೪, ಪು. ೬೩ ಮತ್ತು ಐಎಸ್‌ವಿಇ, ಪು. ೬೭

[6] ಎಪ್ಇಂಡ್, ಸಂ. X IV, ಪು. ೧೦೮-೧೯, ಐಎಸ್‌ವಿಇ, ಪು. ೬೭-೬೮, ದೀಕ್ಷಿತ್, ಜಿ.ಎಸ್. ಮತ್ತು ಇತರರು, ಟ್ಯಾಂಕ್ಇರಿಗೇಷನ್ಇನ್‌ಕರ್ನಾಟಕ, ಪು. ೧೩೯-೪೨.

[7] ದೀಕ್ಷಿತ, ಜಿ.ಎಸ್ಮತ್ತು ಇತರರು, ಪೂರ್ವೋಕ್ತ, ಪು. ೧೩೯-೪೨.

[8] ಎಪ್‌ಕಾರ್ನ್(ಹಳೆ), ಸಂ. X , ಸಂ. ಎಂ.ಬಿ. ೧೭೨.

[9] ಧ್ರುವನಾರಾಯಣ ಎಂ. (ಅನು), ಕೊಟ್ರಯ್ಯ ಸಿ.ಟಿ.ಎಂ. (ಮೂಲ), ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪು. ೭೪-೭೫.

[10] ಅದೇ, ಪು. ೭೫.

[11] ಎಆರ್ ಎಸ್೧೯೩೪-೩೫, ಸಂ. ೩೫೧

[12] ಎಪ್‌ಕಾರ್ನ್, (ಹಳೆ) ಸಂ. V, ಸಂ. ಬಿಜಿ ೧೦, ಪು. ೪೪, ಧ್ರುವನಾರಾಯಣ ಎಂ. (ಅನು), ಪೂರ್ವೋಕ್ತ, ಪು. ೮೧.

[13] ಎಪ್‌ಕಾರ್ನ್(ಹಳೆಯ), ಸಂ. V, ಸಂ. ಬಿಜಿ ೧೦

[14] ಅದೇ, ಸ. X ಸಂ. ಜಿಬಿ ೬

[15] ಮಹಾಲಿಂಗಂ, ಟಿ.ವಿ., ಆಡ್‌ಮಿನಿಸ್ಟ್ರೇಟಿವ್ಅಂಡ್‌ಸೋಶಿಯಲ್ ಲೈಫ್ಅಂಡರ್ ವಿಜಯನಗರ, ಭಾಗ II, ಪು. ೭೮, ಎಪ್. ಕಾನ್, ಸಂ. III (ಹಳೆಯ) ಸಂ. ಸಿಪಿ ೧೬೯.

[16] ಎಪ್‌ಕಾನ್(ಹಳೆಯ), ಸಂ. III, ಸಂ. ಜಿಯು ೧೪೯.

[17] ಐಎಸ್‌ವಿಇ, ಪು. ೭೬

[18] ಐಎಸ್ಐಐ, ಸಂ. IV, ಸಂ. ೨೬೭

[19] ಅದೇ, ಸಂ. ೪೯೧

[20] ಅದೇ, ಸಂ. ೫೧೦

[21] ಅದೇ, ಸಂ. ೨೪೯

[22] ಅದೇ, ಸಂ. ೨೫೦

[23] ಅದೇ, ಸಂ. I X , ಭಾಗ-೨, ಸಂ. ೫೬೪, ಡಾಮ್‌ನಿಕ್‌ಜೆ. ಡೇವಿಸನ್‌ಜೆನ್‌ಕಿನ್ಸ್, ದಿ ಇರಿಗೇಶನ್ ಅಂಡ್‌ವಾಟರ್ ಸಪ್ಲೆ ಸಿಸ್ಟಮ್ಸ್‌ಆಫ್ ವಿಜಯನಗರ, ಪು. ೬೨ ಮತ್ತು ಛಾಯಾಚಿತ್ರ ೪,೮೨, ೪.೮೩ ಮತ್ತು ೪.೮೪ ರೇಖಾಚಿತ್ರ ೪.೮೫

[24] ಎಪ್‌ಕಾರ್ನ್(ಹಳೆಯ), ಸಂ. X , ಸಂ. ಕೆಎಲ್, ೧೪೭, ಪು. ೩೦-೩೧, ಧ್ರುವನಾರಾಯಣ ಎಂ. (ಅನು), ಪೂರ್ವೋಕ್ತ ಪು. ೮೬.

## ೪೩. ಹಂಪಿ ಪರಿಸರದ ಕೆರೆಗಳ ತಾಂತ್ರಿಕ ಅಂಶಗಳು (೨)

**ಜಲಾನಯನ ಪ್ರದೇಶ (ಕ್ಯಾಚ್‌ಮೆಂಟ್‌ಪ್ರದೇಶ)**

ಈ ಪ್ರದೇಶವು ಸಾಮಾನ್ಯವಾಗಿ ಕೆರೆಯ ಭಾಗಕ್ಕಿಂತ ಎತ್ತರದಲ್ಲಿರುತ್ತದೆ. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ ಮತ್ತು ಇಲ್ಲಿ ಬೀಳುವ ಮಳೆಯ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ. ಸಾಮಾನ್ಯವಾಗಿ ಗುಡ್ಡಗಳ ನಡುವಿನ ಕಣಿವೆ ಪ್ರದೇಶಕ್ಕೆ ಜಲಾನಯನ ಪ್ರದೇಶವೆಂದು ಹೆಸರು. ಇಲ್ಲಿರುವ ಕಾಡುಗಳು ಮತ್ತು ಸಸ್ಯರಾಶಿಗಳು, ಮಳೆಯ ನೀರನ್ನು ತಮ್ಮ ಬೇರುಗಳಲ್ಲಿ ಹಾಗೂ ಒಣಗಿದ ಎಲೆಗಳ ನಡುವಿನ ಪದರಗಳಲ್ಲಿ ಮತ್ತು ಮಳೆಯ ನೀರನ್ನು ತಮ್ಮ ಬೇರುಗಳಲ್ಲಿ ಹಾಗೂ ಒಣಗಿದ ಎಲೆಗಳ ನಡುವಿನ ಪದರಗಳಲ್ಲಿ ಮತ್ತು ಮಣ್ಣಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತವೆ. ಕಾಲಕ್ರಮದಲ್ಲಿ ಈ ಪ್ರದೇಶದಲ್ಲಿ ಸಂಗ್ರಹಗೊಂಡ ನೀರು ಝರಿಯಂತೆ ಹರಿದುಬಂದ ನದಿಗಳಾಗಿ ಮಾರ್ಪಾಡಾಗುತ್ತದೆ. ಕೆಲವು ಝರಿಗಳು ಹಳ್ಳಗಳಾಗ ಕೆರೆಯ ಪ್ರದೇಶಕ್ಕೆ ಬಂದು ಸೇರುತ್ತದೆ.

ಸಾಮಾನ್ಯವಾಗಿ ಈ ರೀತಿಯಾಗಿ ಹರಿದುಬರುವಂತಹ ನೀರಿಗೆ ಅಡ್ಡಲಾಗಿ ಕಟ್ಟೆಯನ್ನು ನಿರ್ಮಿಸಿ ಕೆರೆಯನ್ನು ಕಟ್ಟುತ್ತಾರೆ. ಇದರಲ್ಲಿ ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ, ಮಳೆ ಬೀಳುವ ಪ್ರದೇಶ ಮತ್ತು ಕೆರೆಗೆ ಹರಿದುಬಂದು ಸೇರುವ ನೀರಿನ ಪ್ರಮಾಣಗಳು ಪರಸ್ಪರ ಸಂಬಂಧಗಳನ್ನು ಹೊಂದಿರುತ್ತದೆ.

**ಕೆರೆಯ ತಳ (ಟ್ಯಾಂಕ್‌ಬೆಡ್)**

ಕೆರೆಯ ತಳ ಎಂದು ಗುರುತಿಸುವ ಭಾಗವು ಸಾಮಾನ್ಯ ಭೂಪ್ರದೇಶವಾಗಿದ್ದು, ಇಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ಕೆರೆಯು ಈ ಭಾಗದಲ್ಲಿ ಚಿಕ್ಕ ಹಳ್ಳಿಗಳಿಂದ ನೀರು ಹರಿದು ಬಂದು ಶೇಖರಗೊಳ್ಳುತ್ತದೆ. ಹೆಚ್ಚು ಮಳೆಯಾಗಿ ಅಧಿಕ ನೀರು ಬಂದಂತೆ, ನೀರಿನ ಹರವು ವಿಸ್ತಾರಗೊಳ್ಳುವುದರೊಂದಿಗೆ, ಕೆರೆಯ ತುಂಬುತ್ತಾ ಹೋಗುತ್ತದೆ. ಭೂಮಟ್ಟದಿಂದ ಕೆರೆ ಕಟ್ಟೆಯ ಗರಿಷ್ಠಮಟ್ಟ ಮುಟ್ಟಿದೆಯೆನ್ನುತ್ತಾರೆ. ಕನಿಷ್ಠ ಮಟ್ಟದ ನೀರು ನಿಲ್ಲುವ ಕೆರೆಯ ಭೂಭಾಗಕ್ಕೆ ಕೆರೆಯ ತಳ ಎಂದು ಹೆಸರು. ಕೆರೆಯಲ್ಲಿ ಒಬ್ಬ ವ್ಯಕ್ತಿಯ ಆಳೆತ್ತರ ಎತ್ತರದಷ್ಟೇ ನೀರು ಇರಬೇಕು ಮತ್ತು ತುಂಬಬೇಕು. ಅದಕ್ಕಿಂತ ಹೆಚ್ಚಿನ ನೀರು ಬಂದ ಪಕ್ಷದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಹೋಗಬೇಕು ಎಂದು ತಿಮ್ಮಲಾಪುರದ ಕೆರೆಯ ಸಮೀಪದಲ್ಲಿ ದೊರೆತಿರುವ ಶಾಸನವು ದಾಖಲಿಸಿರುವುದು ಪ್ರಶಂಸನಾರ್ಹ.[1] ಇದರಿಂದ ಒಂದು ಕೆರೆಯಲ್ಲಿ ಗರಿಷ್ಠ ಮಟ್ಟದ ನೀರಿನ ಪ್ರಮಾಣ ಎಷ್ಟಿರಬೇಕು ಎಂಬುದರ ಬಗೆಗೆ ತಿಳಿದುಬರುತ್ತದೆ. ಮತ್ತೊಂದು ಅಂಶವು, ಆ ಗರಿಷ್ಠ ಮಟ್ಟಕ್ಕಿಂತ (ಆಳೆತ್ತರ) ಅಧಿಕ ನೀರು ಬಂದಲ್ಲಿ ಕೆರೆ ಏರಿಗೆ ಅಪಾಯವಾಗಬಹುದು. ಈ ಪ್ರದೇಶದಲ್ಲಿ ಮೂರು ಕೆರೆಗಳು ಇದ್ದು, ಅವುಗಳು ಒಂದಕ್ಕೊಂದು ಹೊಂದಿಕೊಂಡಿವೆ. ಹೆಚ್ಚುವರಿ ನೀರು ಒಂದು ಕಡೆಗೆ ಹರಿದುಬಂದರೆ ಆ ನೀರು ಎರಡನೆಯ ಕೆರೆಯಲ್ಲಿ ಸಂಗ್ರಹವಾಗುತ್ತದೆ.

**ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶ**

ಕೆರೆಯ ಅಥವಾ ನೀರು ಸಂಗ್ರಹವಾಗುವ ವಿರುದ್ಧ ದಿಕ್ಕಿನ ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಹೆಸರು. ಸಾಮಾನ್ಯವಾಗಿ ಈ ಪ್ರದೇಶದಲ್ಲಿಯೇ ವ್ಯವಸಾಯವನ್ನು ಮಾಡುತ್ತಾರೆ. ಕೆರೆಯ ನೀರಾವರಿಗೊಳಪಟ್ಟ, ಅಂದರೆ ಕೃಷಿ ಮಾಡಲ್ಪಡುವ, ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು, ಪ್ರದೇಶವೆಂದು ಹೆಸರು. ಆಯಕಟ್ಟು ಮತ್ತು ಅಚ್ಚುಕಟ್ಟು ಎಂಬ ಪದಗಳ ಬಳಕೆಯನ್ನು ವಿಜಯನಗರ ಕಾಲದ ಅನೇಕ ಶಾಸನಗಳಲ್ಲಿ ಕಾಣಬಹುದು. ಕೆರೆಯ ಆಯಕಟ್ಟು ಪ್ರದೇಶವನ್ನು ಮತ್ತು ಅದರ ಗುಣಮಟ್ಟವನ್ನು ಒಂದು ಶಾಸನವು ದಾಖಲಿಸುತ್ತದೆ. ಈ ಶಾಸನದ ತೇದಿಯು ಕ್ರಿ.ಶ. ೧೪೯೭ ಆಗಿದ್ದು, ಇದು ಗುಂಡನಹಳ್ಳಿಯಲ್ಲಿರುವ ಹಿರಿಯಕೆರೆಯನ್ನು ಕುರಿತು ಪ್ರಸ್ತಾಪಿಸುತ್ತಾ, ಆ ಕೆರೆಯ ಹೆಸರು ಕನ್ಯಾಕೆರೆಯೆಂದು ತಿಳಿಸುತ್ತದೆ. ಈ ಕೆರೆಯನ್ನು ನರಸಿಂಹದೇವನೆಂಬುವನು ತನ್ನ ಸ್ವಂತ ಖರ್ಚಿನಲ್ಲಿ ಕಟ್ಟಿಸಿದನು. ಕೆರೆಗೆ ಬೇಕಾಗುವ ವಸ್ತುಗಳ ಗುಣಮಟ್ಟವನ್ನು ಪರೀಕ್ಷಿಸಿ ಅವುಗಳನ್ನು ಅಲ್ಲಿ ಬಳಸಿದ್ದಾನೆಂದು ತಿಳಿಸಿರುವುದು ವಿಶೇಷವಾದ ಸಂಗತಿ. ಅವನು ಕೆರೆಯ ಏರಿಯನ್ನು ಮಣ್ಣಿನಿಂದ ಬಲಪಡಿಸುವುದರೊಂದಿಗೆ ಕಲ್ಲಿನ ಕಟ್ಟುವಾಡವನ್ನು ಸಹ ನಿರ್ಮಿಸಿ ತೂಬಿಗೆ ಒಳ್ಳೆಯ ಕಲ್ಲುಗಳನ್ನು ಬಳಸಿ ಅದನ್ನು ಇಟ್ಟಿಗೆ ಮತ್ತು ಗಚ್ಚಗಾರೆಯಿಂದ ಮತ್ತಷ್ಟು ಭದ್ರಪಡಿಸಿದನೆಂದು ಶಾಸನವು ಉಲ್ಲೇಖಿಸುತ್ತದೆ.[2]

ಈ ಶಾಸನವು ಮತ್ತಷ್ಟು ಕುತೂಹಲಕಾರಿಯಾದ ಸಂಗತಿಗಳನ್ನು ಹೊರಗೆಡವುತ್ತದೆ. ಆಯಕಟ್ಟಿನ ಪ್ರದೇಶವನ್ನು ಸಮನಾಗಿಸುವ ಕಾರ್ಯದಿಂದ ಕೆರೆಯ ನೀರು ಆಯಕಟ್ಟಿಗೆ ಸಮರ್ಪಕವಾಗಿ ಒದಗಿಸುತ್ತದೆ ಎಂದು ಸಹ ತಿಳಿಸುತ್ತದೆ. ಇದಲ್ಲದೆ ಆಯಕಟ್ಟಿನ ಪ್ರದೇಶವನ್ನು ಅದರ ಗುಣದಂತೆ ಉತ್ತಮ, ಮಧ್ಯಮ ಮತ್ತು ಅಧಮ ಎಂದು ವಿಂಗಡಿಸಿ, ಆ ಕೆರೆಯ ನೀರನ್ನು ಸಮರ್ಪಕವಾಗಿ ಹಂಚಿಕೊಳ್ಳಬೇಕು ಎಂದು ಈ ಶಾಸನವು ಹೇಳುತ್ತದೆ.[3] ಕಣಿವೆ ತಮ್ಮಲಾಪುರದ ಹಿರೇಕೆರೆ ಆಯಕಟ್ಟಿನ ಪ್ರದೇಶವನ್ನು ಕುರಿತು ಹೇಳುವುದಾದರೆ ಅದು ಮಧ್ಯಮ ವರ್ಗದ ಆಯಕಟ್ಟು ಎಂದು ಹೇಳಬಹುದು. ಏಕೆಂದರೆ, ಆಯಕಟ್ಟು ಪ್ರದೇಶದ ಸಮೀಪವೇ ಒಂದು ಚಿಕ್ಕ ಗುಡ್ಡವಿದೆ. ಪೊರುಮಿಲ್ಲ ಮತ್ತು ಗುಂಡನಹಳ್ಳಿಯ ಶಾಸನಗಳಂತೆ ಆಯಕಟ್ಟು ಪ್ರದೇಶವು ಸಮತಟ್ಟಾಗಿರಬೇಕು. ಹಿರೇಕೆರೆ ಆಯಕಟ್ಟಿನಲ್ಲಿ ಸಮನಾದ ಭೂಭಾಗವು ಇಲ್ಲದ ಕಾರಣ, ನಾವು ಈ ಆಯಕಟ್ಟು ಪ್ರದೇಶವನ್ನು ಮಧ್ಯಮ ವರ್ಗವೆಂದು ನಿಸ್ಸಂಶಯವಾಗಿ ಗುರುತಿಸಬಹುದು. ಈ ಕೆರೆಯ ಅತ್ಯಂತ ದೊಡ್ಡದಾಗಿದ್ದು, ಇಂದು ಅತ್ಯಂತ ದುಸ್ಥಿತಿಯಲ್ಲಿದೆ.

**ಕೆರೆಯ ಏರಿ**

ಏರಿಯು ಕೆರೆಯ ಒಂದು ಪ್ರಮುಖ ಭಾಗ. ಇದು ಕೆರೆಯಲ್ಲಿ ಸಂಗ್ರಹವಾಗುವ ನೀರನ್ನು ತಡೆಯುತ್ತದೆ. ಆದುದರಿಂದ ಈ ಭಾಗವು ಅತ್ಯಂತ ಗಟ್ಟಿಯಾಗಿರಬೇಕಾಗುತ್ತದೆ. ಈ ಭಾಗವು ಮಣ್ಣಿನಿಂದ ಕಟ್ಟಲ್ಪಡುತ್ತದೆ. ಮಣ್ಣನ್ನು ಹಾಕಿ, ನೀರಿನಿಂದ ನೆನೆಸಿ ಗಟ್ಟಿಮಾಡಿ, ಅದರ ಮೇಲೆ ಮತ್ತಷ್ಟು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ. ಈ ರೀತಿ ಪದೇ ಪದೇ ಮಾಡುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತದೆ. ಬಹುತೇಕವಾಗಿ ಕೆರೆಯ ತಳಭಾಗದ ಮಣ್ಣನ್ನು ಅಗೆದು ಏರಿಕಟ್ಟಲು ಉಪಯೋಗಿಸುತ್ತಾರೆ. ಇದರಿಂದ ಕೆರೆಯ ತಳದಲ್ಲಿ ಹೆಚ್ಚು ನೀರು ಸಂಗ್ರಹಗೊಳ್ಳುತ್ತದೆ. ಸಾಮಾನ್ಯವಾಗಿ ಕೆರೆ ಏರಿಯ ತಳ ಭಾಗವು ವಿಶಾಲವಾಗಿದ್ದು ಅದು ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗುತ್ತದೆ. ಕೆರೆಯ ಏರಿಯ ನೀರಿರುವ ಭಾಗಕ್ಕೆ ಸಾಮಾನ್ಯವಾಗಿ ಕಲ್ಲಿನ ಜೋಡಣೆಯನ್ನು ಹೊಂದಿಸಿರುತ್ತಾರೆ. ಇದಕ್ಕೆ ಕಟ್ಟುವಾಡ ಅಥವಾ ಕಟುವಾಡವೆಂದು ಹೆಸರು. ಕಲ್ಲಿನ ಜೋಡಣೆಯು ಇದ್ದ ಪಕ್ಷದಲ್ಲಿ ಏರಿಗೆ ಆಗುವ ಧಕ್ಕೆಯನ್ನು ಮತ್ತು ಮಣ್ಣು ಕೊರತೆಯನ್ನು ಸಹ ಸಾಕಷ್ಟು ಮಟ್ಟಿಗೆ ತಡೆಯುತ್ತದೆ. ಕೆಲವೊಮ್ಮೆ ಏರಿಯ ಎರಡೂ ಕಡೆಗಳಲ್ಲಿ ಕಟ್ಟುವಾಡಗಳನ್ನು ಗಮನಿಸಬಹುದು. ಏರಿಯ ಆಯಕಟ್ಟಿನ ಭಾಗವು ಇಳಿಜಾರಾಗಿರುತ್ತದೆ. ಈ ಇಳಿಜಾರು ರಚನೆಯು ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ ತಡೆದು ಏರಿಗೆ ಸಾಕಷ್ಟು ಬಲವನ್ನು ಕೊಡುವಲ್ಲಿ ಸಹಾಯಕವಾಗಿರುತ್ತದೆ. ಇಳಿಜಾರು ಭಾಗದಲ್ಲಿ ಕೆಲವು ಸಸ್ಯಗಳನ್ನು ಬೆಳೆಸಿ ಅದನ್ನು ಮತ್ತಷ್ಟು ಬಲಪಡಿಸುವ ಪದ್ಧತಿಯು ವಾಡಿಕೆಯಲ್ಲಿ ಇರುವುದನ್ನು ಗಮನಿಸಬಹುದು.

ದರೋಜಿ ಕೆರೆಯ ಏರಿಯು ಸುಮಾರು ೩.೫ ಕಿ.ಮೀ. ಉದ್ದವಾಗಿದೆ. ಕಮಲಾಪುರದ ಕೆರೆಯು ೩.೫ ಕಿ.ಮೀ. ಉದ್ದವಾಗಿದೆ. ಕೆರೆಯ ಏರಿಯನ್ನು ಯಾವಾಗಲೂ ಲಂಬವಾಗಿ ಕಟ್ಟದೇ, ಅಂಕುಡೊಂಕಾಗಿಯೇ ಕಟ್ಟುತ್ತಾರೆ. ಇದರಿಂದ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮನಾಗಿ ಹಂಚಿಹೋಗುತ್ತದೆ ಮತ್ತು ಏರಿ ಒಡೆದಲ್ಲಿ ಅದನ್ನು ಸರಿಪಡಿಸುವುದು ಸಹ ಸುಲಭ. ಆದ್ದರಿಂದ ಈ ರೀತಿಯ ರಚನೆಯು ವೈಜ್ಞಾನಿಕವಾಗಿ ಅವಶ್ಯವು.

**ಕಾಲುವೆ**

ಕಾಲುವೆಯು ಕೆರೆಯ ಇನ್ನೊಂದು ಭಾಗವಾಗಿದೆ. ಕೆರೆಯ ನೀರನ್ನು ನಿಯಂತ್ರಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಗಳನ್ನು ನಾವು ಎರಡು ರೀತಿಯಾಗಿ ವರ್ಗೀಕರಿಸಬಹುದು. ಅದರಂತೆ ಮೊದಲನೆಯದು ಕೆರೆಗೆ ನೀರು ಬರುವ ಕಾಲುವೆ (Inlet canal) ಮತ್ತು ಎರಡನೆಯದು ಕೆರೆಯಿಂದ ಆಯಕಟ್ಟು, ಪ್ರದೇಶಕ್ಕೆ ನೀರು ಹಾಯಿಸುವ ಕಾಲುವೆಗಳು (Outlet canal) ಕೆರೆಗೆ ನೀರು ಬರುವ ಕಾಲುವೆಯನ್ನು ಕೆಲವೊಮ್ಮೆ, ವಿಜಯನಗರ ಪೂರ್ವಕಾಲದಲ್ಲಿ ಅತ್ಯಂತ ಕಲಾತ್ಮಕವಾಗಿ ಯೋಜಿಸುತ್ತಿದ್ದರು. ನೀರನ್ನು ಕಾಲುವೆಗಳ ಮೂಲಕ ಏರಿಯ ಕೆಳಭಾಗದಿಂದ ಹಾಯಿಸುತ್ತಿದ್ದರು. ಇವುಗಳಿಗೆ ತೂಬುಗಳನ್ನು ಇರಿಸಿ ಕೆರೆಯ ನೀರನ್ನು ಸಮರ್ಪಕವಾಗಿ ನಿಯಂತ್ರಿಸುತ್ತಿದ್ದರು. ಕಾಲುವೆಯ ಕೆರೆ ಏರಿಯು ಕೆಳಗಡೆಯಿಂದ ಹಾದುಬರುತ್ತದೆ. ಇವುಗಳನ್ನು ಸಹ ಕಲ್ಲುಗಳಿಂದ ಕಟ್ಟಲಾಗಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ನಾಲೆಗೆ ಮರವನ್ನು ಬಳಸುತ್ತಿದ್ದರು. ಹತ್ತಿರದ ದೇವಾಲಯಕ್ಕೆ ನೀರನ್ನು ಹಾಯಿಸುವ ನಾಲೆಗೆ ಮರವನ್ನು ಬಳಸಿದ್ದರೆಂದು ತುಮಕೂರು ಜಿಲ್ಲೆಯ ರಾಮಚಂದ್ರನಹಳ್ಳಿಯ ಶಾಸನವು ತಿಳಿಸುತ್ತದೆ.[4] ಒಂದು ಕೆರೆಗೆ ಒಂದು, ಎರಡು, ಮೂರು ಅಥವಾ ನಾಲ್ಕು ಕಾಲುವೆಗಳು ಸಹ ಇರುತ್ತವೆ. ಅವುಗಳ ವಿವಿಧ ಎತ್ತರಗಳಲ್ಲಿ ಇರುತ್ತಿದ್ದವು. ಕೆರೆಯು ತುಂಬಿದ್ದಾಗ ಮೇಲ್ಮಟ್ಟದಲ್ಲಿದ್ದ ಕಾಲುವೆಯಿಂದ ನೀರನ್ನು ಹಾಯಿಸಿಕೊಳ್ಳಲಾಗುತ್ತಿತ್ತು. ನೀರು ಕೆಳಮಟ್ಟಕ್ಕೆ ಬಂದಾಗ ಕೆಳಮಟ್ಟದ ಕಾಲುವೆಗಳಿಂದ ನೀರನ್ನು ಹಾಯಿಸಲಾಗುತ್ತಿತ್ತು. ಈ ವಾಡಿಕೆಯು ಇಂದಿಗೂ ಪ್ರಚಲಿತವಾಗಿದೆ.

**ತೂಬುಗಳು**

ತೂಬುಗಳು ಕೆರೆಯ ಒಂದು ಮುಖ್ಯ ಅವಿಭಾಜ್ಯ ಅಂಗ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆ ಹಿಡಿದಿಡುವ ಸಾಧನಗಳು. ಅವುಗಳನ್ನು ನಾವು ಇಂದಿನ ನಲ್ಲಿಗಳಿಗೆ ಹೋಲಿಸಬಹುದು. ತೂಬುಗಳನ್ನು ಸಾಮಾನ್ಯವಾಗಿ ಕಲ್ಲಿನಿಂದ ರಚಿಸಿದ್ದು, ಎರಡು ಅಥವಾ ನಾಲ್ಕು ಕಂಬಗಳಿಂದ ಕೂಡಿರುತ್ತದೆ. ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡ ಕಲ್ಲನ್ನು ಇರಿಸಲಾಗುತ್ತದೆ. ನಂತರ ಉದ್ದವಾದ ಕಲ್ಲುಗಳ ಮೇಲ್ಭಾಗದಲ್ಲಿ ಅಡ್ಡಗಲ್ಲನ್ನು ಹಾಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳು ನಡುವೆ ಸುಮಾರು ೨೫ ಸೆ.ಮೀ. ವ್ಯಾಸದ ರಂಧ್ರವಿರುತ್ತದೆ. ಇದರ ಮೂಲಕವಾಗಿ ರಂಧ್ರದ ಅಳತೆಗೆ ತಕ್ಕ ವ್ಯಾಸವುಳ್ಳ ಮರದ ತುಂಡನ್ನು ಇಟ್ಟು ರಂಧ್ರವನ್ನು ಮುಚ್ಚಲಾಗುತ್ತದೆ. ಆ ಮರದ ದಿಮ್ಮಿಯನ್ನು ಮೇಲೆಕ್ಕೆತ್ತಿದಾಗ ನೀರು ಕಾಲುವೆಯ ಮುಖಾಂತರ ಹರಿದು ಆಯಕಟ್ಟು ಪ್ರದೇಶಕ್ಕೆ ಹೋಗುತ್ತದೆ. ಮರದ ಒಂದು ವಿಶೇಷಯೇನೆಂದರೆ, ಅದು ನೀರಿನಲ್ಲಿ ನೆನೆದಾಗ, ನೀರು ಕುಡಿದು ಹಿಗ್ಗುತ್ತದೆ. ಈ ರೀತಿಯಾಗಿ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕುಳಿತು ಹೊರ ಕಾಲುವೆಯ ಮುಖಾಂತರ ನೀರು ಹರಿಯುವುದನ್ನು ಆದಷ್ಟು ಮಟ್ಟಿಗೆ ತಡೆಯುತ್ತದೆ. ಇಂದು, ಸಹ ಅನೇಕ ಕಡೆಗಳಲ್ಲಿ ಮರವನ್ನು ಬಳಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಲೋಹವನ್ನು ಬಳಕೆ ಮಾಡಲಾಗುತ್ತಿದೆ.

ತೂಬುಗಳಲ್ಲಿ ಎರಡು ವಿಧದ ತೂಬುಗಳನ್ನು ಗುರುತಿಸಲಾಗಿದೆ. ಅವುಗಳು ೧. ತೂಬು ಮತ್ತು ೨. ಗಡಿಗತೂಬು. ಮೊದಲು ಉಲ್ಲೇಖಿಸಿದಂತೆ ತೂಬು ಸಾಮಾನ್ಯವಾಗಿ ಎರಡು ಅಥವಾ ನಾಲ್ಕು ಕಂಬಗಳಿಂದ ಕೂಡಿರುತ್ತದೆ. ತೂಬಿನ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಸಾಮಾನ್ಯವಾಗಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುತ್ತದೆ. ಇದರಿಂದ ಆ ಕೆರೆಯನ್ನು ವಿಜಯನಗರ ಕಾಲದ ಕೆರೆಯೆಂದು ಗುರುತಿಸಬಹುದಾಗಿದೆ. ಗಡಿಗೆಯ ಆಕಾರದಲ್ಲಿರುವ ತೂಬಿಗೆ ಗಡಿಗತೂಬು ಎಂದು ಹೆಸರು. ಇವು ಕೆಲವು ಕಡೆಗಳಲ್ಲಿ ಇಂದಿಗೂ

ಬಳಕೆಯಲ್ಲಿವೆ. ವೃತ್ತಾಕಾರದ ಅಥವಾ ಪೀಪಾಯಿಯಂತೆ ಇರುವ ಗೂಬಹಳ ನಡುವಿನಲ್ಲಿ ಮರದ ತುಂಡನ್ನು ಹೊಂದಿಸಿ ನೀರನ್ನು ನಿಯಂತ್ರಿಸುತ್ತಾರೆ. ದರೋಜಿ ಕೆರೆಯಲ್ಲಿರುವ ನಾಲ್ಕು ತೂಬುಗಳೂ ಸಹ ನಾಲ್ಕು ಕಂಬಂಗಳಿಂದ ಕೂಡಿರುವಂತಹ ತೂಬುಗಳೇ ಆಗಿವೆ. ಜಂಭಯ್ಯನ ಕೆರೆಯಲ್ಲಿ ಗಡಿಗತೂಬು ಇರುವುದನ್ನು ಕಾಣಬಹುದು.

ತೂಬುಗಳನ್ನು ಕಾಲುವೆಗಳಿಗೆ ಅನುಗುಣವಾಗಿ ವಿವಿಧ ಎತ್ತರಗಳಲ್ಲಿ ಅಳವಡಿಸಲಾಗುತ್ತದೆ. ಒಮದು ಶಾಸನವು ನಡುವಣತೂಬು ಎಂದು ಉಲ್ಲೇಖಿಸುತ್ತದೆ.[5] ಆದ್ದರಿಂದ ಆ ಕೆರೆಗೆ ಅನೇಕ ತೂಬುಗಳು ವಿವಿಧ ಎತ್ತರಗಳಲ್ಇ ಇದ್ದಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಕೆರೆಯ ವಿಸ್ತೀರ್ಣತೆ, ನೀರು ಸಂಗ್ರಹ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು, ತೂಬುಗಳನ್ನು ಅಳವಡಿಸಿಕೊಳ್ಳಲಾಗುವುದು, ಕಮಲಾಪುರ ಮತ್ತು ದರೋಜಿ ಕೆರೆಗಳಿಗೆ ನಾಲ್ಕು ತೂಬುಗಳಿವೆ.

ತಬೂಗಳನ್ನು ಸಾಮಾನ್ಯವಾಗಿ ಕೆರೆ ಏರಿಯಿಂದ ಸುಮಾರು ಹತ್ತರಿಂದ ಹದಿನೈದು ಅಡಿ ದೂರದಲ್ಲಿ ಇರಿಸುವುದು ವಾಡಿಕೆಯಾಗಿದ್ದಿತು. ಇದರಿಂದ ಕಾಲುವೆ, ತೂಬು ಮತ್ತು ಏರಿಗೆ ಯಾವುದೇ ವಿಧವಾದ ಅಪಾಯವಿರುವುದಿಲ್ಲ. ಇಂದಿನ ಕಾಲದಲ್ಲಿ ತೂಬುಗಳನ್ನು ಏರಿಗಳಲ್ಲಿಯೇ ಅಳವಡಿಸಲಾಗುತ್ತಿದೆ. ತೂಬುಗಳಿಂದ ನೀರು ಹಾಯಿಸುವ ಕಾರ್ಯವನ್ನು ನೀರುಗಂಟಿಗಳು ನಿರ್ವಹಿಸುತ್ತಿದ್ದರು. ನೀರು ಹಾಯಿಸಬೇಕೆಂದಾಗ ಅವರು ಕೆರೆಯ ನೀರಿನಲ್ಲಿ ಈಜಿಕೊಂಡು ಹೋಗಿ ತೂಬಿನ ಮರವನ್ನು ತೆಗೆದು ನೀರನ್ನು ಹಾಯಿಸುತ್ತಿದ್ದರು. ಆಯಕಟ್ಟಿನ ಪ್ರದೇಶಕ್ಕೆ ಬೇಕಾಗುವಷ್ಟು ನೀರು ಹಾಹಿಸಿ ನಂತರ ಮರವನ್ನು ತೂಬಿನ ನಿಯಂತ್ರಿಸುತ್ತಿದ್ದರು. ಪ್ರಸ್ತುತ, ಈ ರೀತಿಯಾಗಿ ಕೆರೆಯ ನೀರನ್ನು ಹಾಯಿಸುವ ಪ್ರಮಾಣವನ್ನು ಒಂದು ಸಲುಕ್ಕಿನೀರು ಅಥವಾ ಎರಡು ಸಲುಕ್ಕಿನೀರು ಎಂದು ತಿಮ್ಮಲಾಪುರದ ನೀರುಗಂಟಿಗಳು ತಿಳಿಸುತ್ತಾರೆ. ಇವರ ಸುಪರ್ದಿಯಲ್ಲಿ ಮೂರು ಕೆರೆಗಳಿವೆ.

ಈ ಸಂದರ್ಭದಲ್ಲಿ ಬೆಂಗಳೂರು ಜಿಲ್ಲೆಯ ಅರಳಲು ಗ್ರಾಮದ ಎರಡನೆಯ ಹರಿಹರನ ಕಾಲದ ಶಾಸನವನ್ನು ಇಲ್ಲಿ ಉಲ್ಲೇಖಿಸುವುದು ಉಚಿತವಾಗುತ್ತದೆ. ಮಾರಸಮುದ್ರ ಕೆರೆಯ ತೂಬನ್ನು ನಿಲ್ಲಿಸುವ ಸಮಯದಲ್ಲಿ ಅಲ್ಲಗೌಡ ಅಲ್ಲಗೌಡ ಎಂಬಾತನು ನೀರಿನಲ್ಲಿ ಮುಳುಗಿ ಸಾಯುತ್ತಾನೆ. ಈ ಮುಂಚೆಯೂ ಸಹ ಈ ಗೂಬನ್ನು ಸರಿ ಮಾಡಲು ಆಗಿರುವುದಿಲ್ಲ. ಆದ್ದರಿಂದ ಗುಳಿಯೋಜ ಎಂಬಾತನು ಅದನ್ನು ಸರಿಪಡಿಸಲೋಸುಗ ಎರಡು ಖಂಡುಗ ಗದ್ದೆ, ಒಂದು ಖಂಡುಗ ಹೊಲ ಮತ್ತು ಮೂರು ಅಂಕಣದ ಮನೆಯನ್ನು ಒಡೆದು ಸರಿಪಡಿಸುತ್ತಾನೆ. ನಂತರದಲ್ಲಿ ಆತನೇ ಆ ಕೆರೆಯ ತೂಬಿನ ಬಾಧ್ಯತೆಯನ್ನು ವಹಿಸಿಕೊಳ್ಳುತ್ತಾನೆ ಎಂಬುದಾಗಿ ಶಾಸನವು ದಾಖಲಿಸಿದೆ. [6] ವಿಜಯನಗರ ಕಾಲದ ಅನೇಕ ಶಾಸನಗಳು ತೂಬುಗಳನ್ನು ನಿರ್ಮಿಸಿದುದನ್ನು ಕುರಿತು ತಿಳಿಸುತ್ತವೆ. ಇವುಗಳನ್ನು ಕೊಟ್ರಯ್ಯನವರು ದೀರ್ಘವಾಗಿ ಚರ್ಚಿಸಿದ್ದಾರೆ. [7]

ವಿಜಯನಗರ ಕಾಲದಲ್ಲಿ ಮೇಲೆ ವಿವರಿಸಿದ ಬಿರಡೆ ಅಥವಾ ಮಾದರಿಯ ತೂಬುಗಳು ಮಾತ್ರವೇ ಬಳಕೆಯಲ್ಲಿದ್ದವು. ಮುಚ್ಚಳ ಮತ್ತು ತೊಟ್ಟಿಯ ಮಾದರಿಯ ತೂಬುಗಳನ್ನು ಸಹ ಕೆರೆಗಳಿಗೆ ಅಳವಡಿಸಲಾಗುತ್ತಿತ್ತು. ಪ್ರಾಚೀನ ಕಾಲದ ಕೆರೆಗಳನ್ನು ಪುನರುಜ್ಜೀನಗೊಳಿಸುವ ಸಂದರ್ಭದಲ್ಲಿ ಸರ್ಕಾರದ ನೀರಾವರಿ ಇಲಾಖೆಯವರು ಮೂಲ ತೂಬಿಗೆ ಯಾವುದೇ ವಿಧದ ದಕ್ಕೆ ಉಂಟಾಗದಂತೆ ಮರದ ತುಂಡನ್ನೆ ಬಳಸಿರುತ್ತಾರೆ. ಇಲಾಖೆಯವರು ತೂಬಿನ ರಂಧ್ರಕ್ಕೆ ದಕ್ಕೆ ಉಂಟಾಗದಂತೆ ಉರದ ತುಂಡನ್ನೇ ಬಳಸಿರುತ್ತಾರೆ. ಇಲಾಖೆಯವರು ತೂಬಿನ ರಂಧ್ರಕ್ಕೆ ಉರದ ತುಂಡು ಇಟ್ಟು ಅದರ ಮೇಲ್ಭಾಗಕ್ಕೆ ಕಬ್ಬಿಣದ ಸಲಾಕೆಯನ್ನು ಅಳವಡಿಸಿ ತಿರುಚುವ ಸ್ಕ್ರೂ ಮೂಲಕ ಯಾಂತ್ರೀಕರಿಸಿದ್ದಾರೆ. ಕೆರೆ ಏರಿಯಿಂದ ತೂಬಿರುವ ಜಾಗವನ್ನು ತಲುಪುವ ಕಬ್ಬಿಣದ ಚಿಕ್ಕ ಸೇತುವೆಯನ್ನು ಸಹ ಅಳವಡಿಸಿರುತ್ತಾರೆ. ಕೆಲವೊಂದು ಸಂದರ್ಭಗಳಲ್ಇ ಮರದ ಬದಲಿಗೆ ಕಬ್ಬಿಣದ ಬಾಗಿಲುಗಳನ್ನು ಷಟ್ಟರ್ (shutter) ಅಳವಡಿಸಿದ್ದಾರೆ. ಕಮಲಾಪುರದ ಕೆರೆಯಲ್ಲಿರುವ ನಾಲ್ಕು ತೂಬುಗಳಲ್ಲಿ ಎರಡಕ್ಕೆ ಮರವನ್ನು ಅಳವಡಿಸಿದ್ದರೆ, ಮಿಕ್ಕೆರಡು ತೂಬುಗಳಿಗೆ ಕಬ್ಬಿಣದ ಬಾಗಿಲುಗಳನ್ನು ಅಳವಡಿಸಿದ್ದಾರೆ.

**ಕೋಡಿ**

ಕೋಡಿಯು ಬಹಳ ಮುಖ್ಯವಾದ ಕೆರೆಯ ಭಾಗಗಳಲ್ಲೊಂದು. ಕೋಡಿಯ ಪ್ರದೇಶವನ್ನು ಆಯ್ಕೆಮಾಡಿ ಅದನ್ನು ಅಳವಡಿಸಿವುದರಲ್ಲಿಯೇ ಕೆರೆಯನ್ನು ಕಟ್ಟುವವನಿಗೆ ಇರುವ ಸಾಮರ್ಥ್ಯವನ್ನು ತೋರಿಸಿಕೊಡುತ್ತದೆ. ಸಾಮಾನ್ಯವಾಗಿ ಕೋಡಿಯು ಕೆರೆಯ ನೀರಿರುವ ಯಾವುದಾದರೂ ಒಂದು ದಿಕ್ಕಿಗೆ ಇರುತ್ತದೆ. ಏರಿಯ ದಿಕ್ಕಿನಲ್ಲಿ ಇರುವುದಿಲ್ಲ. ಕೆರೆಯಲ್ಲಿ ನೀರು ಸಂಗ್ರಹವಾಗಿ ಗರಿಷ್ಠಮಟ್ಟ ತಲುಪಿದಾಗ ಹೆಚ್ಚುವರಿ ನೀರು ಈ ಕೋಡಿಯ ಮೂಲಕ ಹಾದುಹೋಗುತ್ತದೆ. ಅತೀ ಹೆಚ್ಚು ನೀರು ಬಂದಾಗ ಕೆರೆ ಏರಿಗೆ ಒತ್ತಡ ಬೀಳುತ್ತದೆ. ಆ ಒತ್ತಡವನ್ನು ತಡೆಯಲು ಕೋಡಿಗಳನ್ನು ಅಳವಡಿಸಲಾಗುತ್ತದೆ. ಒಂದು ಕೆರೆಯ ಕೋಡಿ ಬಿತ್ತೆಂದರೆ ಆ ಕೆರೆಗೆ ಗರಿಷ್ಠ ಮಟ್ಟದ ನೀರು ಬಂದಿದೆಯೆಂದು ಅರ್ಥ. ಕೆಲವೊಂದು ಕಡೆಯಲ್ಲಿ ಕೋಡಿ ಬಿದ್ದು ನೀರು ಹರಿದುಹೋಗುವ ಪ್ರದೇಶದ ಸಮೀಪದಲ್ಲಿಯೇ ಮತ್ತೊಂದು ಕೆರೆಯನ್ನು ನಿರ್ಮಿಸಿರುವ ಉದಾಹರಣೆಗಳು ನಮಗೆ ದೊರೆತಿದ್ದು ಅವುಗಳನ್ನು ಈಗಾಗಲೆ ಚರ್ಚಿಸಿಲಾಗಿದೆ. ಕೆರೆಯ ಗರಿಷ್ಠ ಮಟ್ಟ ಹಾಗೂ ಕೋಡಿಯ ಮಟ್ಟ ಒಂದೇ ಆಗಿರಬೇಕು. ಕೆರೆಯು ಅತೀ ದೊಡ್ಡದಾಗಿದ್ದರೆ, ಎರಡು ಕೋಡಿಗಳಿರುವುದನ್ನು ನೋಡಬಹುದು. ಇವುಗಳನ್ನು ಸಾಮಾನ್ಯವಾಗಿ ಕಲ್ಲು, ಗಾರೆಗಳಿಂದಲೇ ಕಟ್ಟುತ್ತಾರೆ. ಕೋಡಿಯ ಇಕ್ಕೆಲಗಳಲ್ಲಿ ಕೆಲವೊಮ್ಮೆ ಭದ್ರವಾದ ಕಲ್ಲಿನ ಗೋಡೆಯನ್ನು ನಿರ್ಮಿಸಿ, ಕೆರೆ ಏರಿಯು ಕೋಡಿಯ ಮೇಲೆ ಕುಸಿದಂತೆ ಕಾಪಾಡುತ್ತಾರೆ. ಕೆಲವು ಉದಾಹರಣೆಗಳಲ್ಲಿ ಕೋಡಿಯಲ್ಲಿ ಕಂಬಗಳನ್ನು ಇರಿಸುವ ವಾಡಿಕೆಯಿತ್ತು. ಕೋಡಿಬಿದ್ದ ಸಂದರ್ಭಗಳಲ್ಲಿ ಈ ಕಂಬಗಳ ಮೂಲಕ ಕೆರೆ ಏರಿಯ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಲು ಅನುಕೂಲವಾಗುವಂತೆ ಅಳವಡಿಸಲಾಗುತ್ತದೆ. ಹೆಚ್ಚು ನೀರು ಸಂಗ್ರಹ ಮಾಡಬೇಕೆಂದಾಗ ಆ ಕಂಬಗಳಿಗೆ ಅಡ್ಡಲಾಗಿ ಕೆಲವು ಮರ, ಕಲ್ಲುಗಳನ್ನು ಇರಿಸಿ ಮುಚ್ಚಿ ನೀರನ್ನು ಶೇಖರಿಸುತ್ತಾರೆ. ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಕೋಡಿಯು ಶಿವಮೊಗ್ಗ ಜಿಲ್ಲೆಯ ಮದಗ ಮಾಸೂರು ಕೆರೆಯಲ್ಲಿ ಇದೆ. ಇದರ ಉದ್ದವು ೧೫೭ ಅಡಿ ಇದ್ದು ಐದು ಅಡಿಗಳಷ್ಟು ಅಗಲವಿದೆ.

ವಿಜಯನಗರ ಕಾಲದಲ್ಲಿ ಕೆಲವು ತಜ್ಞರು ಕೋಡಿಯನ್ನು ಕಟ್ಟುವುದರಲ್ಲಿಯೇ ಪರಿಣತಿಯನ್ನು ಹೊಂದಿದ್ದರು ಎಂದು ಒಂದು ಶಾಸನವು ದಾಖಲಿಸಿದೆ. ವೆಂಕಟಪತಿರಾಯನ ಕಾಲದ ರುದ್ರಪ್ಪನಾಯಿಡು ಎಂಬಾತನು ಕೋಡಿಯನ್ನು ಕಟ್ಟುವುದರಲ್ಲಿ ಪರಿಣತಿಯನ್ನು ಹೊಂದಿದ್ದು ಅವನು ಕೊಲ್ಲೂರು ಕೆರೆಗೆ ಮೂವತ್ತಮೂರು ಕಂಬಗಳಿರುವ ಕೋಡಿಯನ್ನು ನಿರ್ಮಿಸುತ್ತಾನೆಂದು ಶಾಸನವು ಉಲ್ಲೇಖಿಸಿದೆ.[8] ಶಾಸನವನ್ನು ರಚಿಸಿರುವಾತನು ಮೂವತ್ತಮೂರು ಕಂಬಗಳನ್ನು ದೇವತೆಗಳ ರಾಜನಾದ ಇಂದ್ರನ ವೈಭವವಾದ ರಥಕ್ಕೆ ಹೋಲಿಸಿರುತ್ತಾನೆ.

ಮುಚ್ಚಿನಟ್ಲು ರಂಗಪ್ಪನಾಯನಿಯ ಮಗಳು ರಘುಪತಿ ಅಮ್ಮಗಾರು ಕೆರೆಯ ಏರಿಯನ್ನು ಬಲಪಡಿಸಿ ಮೂವತ್ತಮೂರು ಕಂಬಗಳಿರುವ ಕೋಡಿಯನ್ನು ಕಲ್ಲುಗಳಿಂದ ನಿರ್ಮಿಸುತ್ತಾಳೆ ಎಂದು ಆಂಧ್ರದ ನೆಲ್ಲೂರು ಜಿಲ್ಲೆಯ ಆತ್ಮಕೂರು ಶಾಸನವು ತಿಳಿಸುತ್ತದೆ. ಅವಳು ಕೋಡಿಯ ಇಕ್ಕೆಲಗಳನ್ನು ಕಲ್ಲಿನ ಗೋಡೆಯಿಂದ ಭದ್ರಪಡಿಸುತ್ತಾಳೆ ಎಂದು ಉಲ್ಲೇಖಿಸಿರುವುದು ವಿಶೇಷವಾದ ಸಂಗತಿ.[9] ಈ ಎಲ್ಲಾ ಶಾಸನಗಳಿಂದ ತಿಳಿದುಬರುವ ಅಂಶವೇನೆಂದರೆ, ಕೋಡಿಗಳಲ್ಲಿ ೩೩ ಕಂಬಗಳು ಇರುತ್ತಿದ್ದವು ಎಂಬುದೇ ಆಗಿದೆ. ಇವುಗಳು ನಿರ್ದಿಷ್ಟ ಸಂಖ್ಯೆಯಲ್ಲಿ ಇರುವುದಕ್ಕೆ ಮತ್ತು ಅದರ ಉಪಯುಕ್ತತೆಯನ್ನು ಇಂದು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅಂದಿನ ಕಾಲದ ಜನರಲ್ಲಿ ಈ ಸಂಖ್ಯೆಯಲ್ಲಿ ಆಳವಾದ ನಂಬಿಕೆಯು ಇದ್ದಿರಬಹುದು ಎಂದು ಅಭಿಪ್ರಾಯಪಡಬಹುದು.

**ಕೆರೆಗಳ ನಿರ್ವಹಣೆ**

ಕೆರೆಗಳನ್ನು ಯಾರು ನಿರ್ವಹಿಸುತ್ತಿದ್ದರು ಎಂಬ ಬಗೆಗೆ ಹಿಂದಿನ ಅಧ್ಯಾಯಗಳಲ್ಲಿ ಈಗಾಗಲೇ ಚರ್ಚಿಸಲಾಗಿದೆ. ಪ್ರಾಚೀನ ಭಾರತದಲ್ಲಿ ಕೆರೆಗಳ ನಿರ್ವಹಣೆಯ ಭಾದ್ಯತೆಯು ರಾಜ ಮತ್ತು ಪ್ರಜೆಗಳ ಮೇಲೆಯೇ ಇತ್ತೆಂಬುದು ತಿಳಿದ ವಿಷಯವಷ್ಟೆ. ರಾಜನ ಪ್ರತಿನಿಧಿಗಳು ಒಂದು ಗ್ರಾಮದ ಅಥವಾ ಮಂಡಲದ ಸಭೆಯ ಸದಸ್ಯರುಗಳು ಸಹ ಈ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರು. ಕೆಲವೊಂದು ಸಂದರ್ಭಗಳಲ್ಲಿ ಕೆರೆಯನ್ನು ಕಟ್ಟಿಸಿದವನಿಗೆ ಕೆರೆಯ ರಕ್ಷಣೆ ಮತ್ತು ನಿರ್ವಹಣಾ ಭಾದ್ಯತೆಯನ್ನು ಹೊರಿಸಲಾಗುತ್ತಿತ್ತು ಎಂಬುದು ಶಾಸನಗಳಿಂದ ತಿಳಿದುಬಂದಿರುವ ವಿಷಯ.

ಮಧ್ಯಕಾಲೀನ ಯುಗದಲ್ಲಿ, ಅಂದರೆ ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದ ಕೆರೆ ಕಟ್ಟುವ ಕೆಲಸವನ್ನು ಅಂದಿನ ರಾಜಮನೆತನಗಳು ಘೋಷಿಸಿದವು. ಈ ದಿಸೆಯಲ್ಲಿ ಅವರುಗಳು ಕಾರ್ಯಪ್ರವೃತ್ತರಾಗಲು ಮುಖ್ಯ ಕಾರಣವೇನೆಂದರೆ ಮೇಲೆ ಉಲ್ಲೇಖಿಸಿದ ಶತಮಾನದಲ್ಲಿ ಹವಾಮಾನವು ಬದಲಾಗುತ್ತಾ ಬಂದಿತು. ಅದನ್ನು ಇಂದಿನ ಶತಮಾನದ ಹವಾಮಾನಕ್ಕೆ ಹೋಲಿಸಬಹುದು. ಮಳೆಯು ಸಕಾಲಕ್ಕೆ ಬರುತ್ತಿರಲಿಲ್ಲ. ಮತ್ತು ಈ ಸಮಸ್ಯೆಯೊಂದಿಗೆ ಬೆಳೆಯುತ್ತಿದ್ದ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಪೂರೈಸಲು ಅಧಿಕ ಕೃಷಿ ಉತ್ಪನ್ನಗಳು ಬೇಕಾಗಿದ್ದ ಕಾರಣ ಕೃತಕ ಜಲಸಂಗ್ರಾಹಕಗಳ ಅವಶ್ಯಕತೆಯು ತಲೆದೋರಿತು. ಅಧಿಕ ಸಂಖ್ಯೆಯಲ್ಲಿ ಕೆರೆ, ಕುಂಟೆಗಳು ನಿರ್ಮಾಣಗೊಂಡಂತೆಯೇ ಅವುಗಳನ್ನು ನಿರ್ವಹಿಸಲು ಅನೇಕ ನಿರ್ವಾಹಕರ ಅವಶ್ಯಕತೆಯು ಅನಿವಾರ್ಯವಾಗಿದ್ದಿತು. ಕೆರೆಗಳ ಮೇಲೆ ತೆರಿಗೆಗಳನ್ನು ವಿಧಿಸಿ ಕೆರೆಗಳ ರಕ್ಷಣೆ ಮತ್ತು ನಿರ್ವಹಣಾ ಕಾರ್ಯಗಳಿಗೆ ಅವುಗಳನ್ನು ಬಳಸುತ್ತಿದ್ದರು.

ಈ ಮೇಲೆ ಉಲ್ಲೇಖಿಸಿದ ನಿರ್ವಾಹಕರೊಂದಿಗೆ ನೀರುಗಂಟಿಗಳೆಂಬುವವರನ್ನು ಸಹ ನಿಯೋಜಿಸುತ್ತಿದ್ದರು. ಇವರುಗಳು ಕೆರೆಯಿಂದ ನೀರನ್ನು ಆಯಕಟ್ಟು ಪ್ರದೇಶಗಳಿಗೆ, ತೂಬುಗಳನ್ನು ನಿಯಂತ್ರಿಸಿ, ಕಾಲುವೆಗಳ ಮುಖಾಂತರ ಹಾಯಿಸುತ್ತಿದ್ದರು. ಇವರ ಈ ಸೇವೆಗೆ ಪ್ರತಿಫಲವಾಗಿ ಆಯಕಟ್ಟಿನ ಉಪಯೋಗಕಾರರು ನಿರ್ದಿಷ್ಟ ವೇತನವನ್ನು ಧನ ಅಥವಾ ಧಾನ್ಯಗಳ ರೂಪದಲ್ಲಿ ನೀಡುತ್ತಿದ್ದರು.

ಹೊಸಪೇಟೆ ತಾಲೂಕಿನ ತಿಮ್ಮಲಾಪುರದಲ್ಲಿ ಇಂದಿಗೂ ನೀರುಗುಂಟಿಗಳು, ಅಲ್ಲಿಯ ಪೊತಲಕಟ್ಟೆ, ನಡುವಲಕೆರೆ ಮತ್ತು ಜಂಭಯ್ಯನ ಕೆರೆಗಳ ನೀರನ್ನು ಆ ಕೆರೆಯ ಆಯಕಟ್ಟು ಪ್ರದೇಶಗಳಿಗೆ ಹಾಯಿಸುತ್ತಾರೆ. ಇವರುಗಳು ವಂಶಪಾರಂಪರಿಕವಾಗಿ ಈ ಕೆಲಸದಲ್ಲಿ ತೊಡಗಿರುವವರು. ಜಮೀನಿನ ಅವಶ್ಯಕತೆಗನುಗುಣವಾಗಿ ಒಂದು ಸಲುಕ್ಕಿ ಅಥವಾ ಎರಡು ಸಲುಕ್ಕಿಯಷ್ಟು ನೀರನ್ನು ಕೆರೆಯಿಂದ ಹಾಯಿಸುತ್ತಾರೆ. ಸಲುಕ್ಕಿಯೆಂದರೆ ಒಂದು ರಾತ್ರಿಯಲ್ಲಿ ಒಂದು ಎಕರೆಗೆ ಬೇಕಾಗುವಷ್ಟು ನೀರು ಎಂದು ಅರ್ಥ. ಇವರುಗಳು ಕೆರೆಯ ಹೂಳನ್ನು ಎತ್ತುವುದಿಲ್ಲ. ಕೆರೆಗಳು ಭರ್ತಿಯಾಗಿ ಆ ವರ್ಷ ಆಯಕಟ್ಟಿನಲ್ಲಿ ವ್ಯವಸಾಯವನ್ನು ಕೈಗೊಂಡರೆ ಮಾತ್ರ ಇವರುಗಳಿಗೆ ಕೆಲಸ. ಇಲ್ಲದಿದ್ದರೆ ಈ ನೀರುಗಂಟಿಗಳು ಬೇರೆ ಕಡೆಗಳಲ್ಲಿ ವ್ಯವಸಾಯ ಮತ್ತು ಇತರ ಕೂಲಿ ಕೆಲಸಕ್ಕೆ ಹೋಗಿ ಹೊಟ್ಟೆಯನ್ನು ತುಂಬಿಕೊಳ್ಳುತ್ತಾರೆ.

ಹಂಪಿ ಪರಿಸರದ ಕೆಲವು ನದಿ ಆಶ್ರಿತ ಕೆರೆಗಳಾದ ಕಮಲಾಪುರ ಕೆರೆ, ಅಳ್ಳಿಕೆರೆ ಕೆರೆ ಮುಂತಾದವುಗಳು ಸರ್ಕಾರದ ನೀರಾವರಿ ಇಲಾಖೆಯವರ ಅಧೀನದಲ್ಲಿವೆ. ಇವುಗಳ ಸಂರಕ್ಷಣಾ ಕಾರ್ಯವನ್ನು ಇಲಾಖೆಯವರೇ ಮಾಡುತ್ತಾ ಬಂದಿದ್ದಾರೆ. ಈ ಕೆರೆಗಳಿಂದ ನೀರನ್ನು ಕಿರಿಯ ಸಹಾಯಕರು ಆಯಕಟ್ಟು ಪ್ರದೇಶಗಳ ಜಮೀನಿಗೆ ಹಾಯಿಸುತ್ತಾರೆ. ಇವರುಗಳಿಗೆ ಸರ್ಕಾರವೇ ವೇತನವನ್ನು ನೀಡುತ್ತಲಿದೆ. ಜಮೀನಿನ ಮಾಲೀಕರು ಸರ್ಕಾರಕ್ಕೆ ಒಂದು ಎಕರೆಗೆ ಸರ್ಕಾರ ನಿಗದಿಪಡಿಸಿದ ಮೊತ್ತವನ್ನು ಜಮೆ ಮಾಡುತ್ತಾರೆ.

ಮೇಲೆ ಉಲ್ಲೇಖಿಸಿದ ಕೆರೆಗಳು ನದಿಯಾಶ್ರವನ್ನು ಹೊಂದಿದ್ದು, ಈ ಕೆರೆಗಳಲ್ಲಿ ನೀರು ಸರ್ವಕಾಲದಲ್ಲಿಯೂ ಇರುತ್ತದೆ. ಇದರಿಂದಾಗಿ ಕೆರೆಗಳಿಗೆ ನೀರು ಬರುವಾಗ ಅದರೊಂದಿಗೆ ಅಪಾರ ಪ್ರಮಾಣದಲ್ಲಿ ಮಣ್ಣು ಸಹ ನೀರಿನೊಡನೆ ಹರಿದುಬಂದು ಕೆರೆಗಳಲ್ಲಿ ಸಂಗ್ರಹವಾಗುತ್ತದೆ. ಈ ಕೆರೆಗಳ ಹೂಳೆತ್ತುವ ಕಾರ್ಯವನ್ನು ಇಲಾಖೆಯವರು ನೆರವೇರಿಸದ ಕಾರಣ ಹೂಳು ಶೇಖರಗೊಂಡು ಕೆರೆಯನ್ನು

ನಿರ್ಮಿಸಿದಾಗ ಇದ್ದಂತಹ ಆಳವು ಇಂದು ಗಣನೀಯವಾಗಿ ಕಡಿಮೆಯಾಗಿ ನೀರು ಶೇಖರಣಾ ಸಾಮರ್ಥ್ಯವು ಕುಗ್ಗಿದೆ. ಕೆರೆಗಳನ್ನು ಸರ್ಕಾರವು ರಕ್ಷಿಸಬೇಕೆಂದಿದ್ದರೆ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ವಿಜಯನಗರ ಕಾಲದ ಕೆಲವು ಮುಖ್ಯ ಕೆರೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗುವುದು.

**ರಾಯರ ಕೆರೆ**

ಹೊಸಪೇಟೆ ನಗರದ ಹೊರಭಾಗದಲ್ಲಿರುವ ಬೆಂಗಳೂರು ಮರಿಯಮ್ಮನಹಳ್ಳಿ ರಸ್ತೆಯಲ್ಲಿ ಈ ಕೆರೆಯಿದೆ. ಇದನ್ನು ಕೃಷ್ಣದೇವರಾಯನು (ಕ್ರಿ.ಶ. ೧೫೦೦-೯೩೦) ಕಟ್ಟಿಸಿದನೆಂದು, ವಿವಿಧ ಮೂಲಗಳಲ್ಲಿಂದ ತಿಳಿಯಬರುತ್ತದೆ. ಈ ಪ್ರದೇಶವು ಇಂದು ಹೊಸಪೇಟೆಗೆ ದಕ್ಷಿಣ-ಪಶ್ಚಿಮ ದಿಕ್ಕಿನಲ್ಲಿ ಇದೆ. ಅಲ್ಲಿರುವ ಭೌಗೋಳಿಕ ಪರಿಸರ ಮತ್ತು ಜಲಾನಯನ ಪ್ರದೇಶವನ್ನು ಗಮನಿಸಿ ಎರಡು ಬೆಟ್ಟಗಳ ನಡುವೆ, ಒಂದು ಬೃಹತ್ ಪ್ರಮಾಣದ ಕೆರೆ ಮತ್ತು ಏರಿಯನ್ನು ಕಟ್ಟಿಸಿದನು. ಇದರಿಂದ ಆ ಪ್ರದೇಶಕ್ಕೆ ಕೆಲವು ಜನರು ವಲಸೆ ಹೋಗಿರುವ ಸಾಧ್ಯತೆಗಳಿವೆ. ರಾಜನು ಅಲ್ಲಿಗೆ ಅರಮನೆ ಮುಂತಾದ ವಸತಿಗೃಹಗಳನ್ನು ಸಹ ವರ್ಗಾಯಿಸದನೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಕೆರೆಯನ್ನು ರಾಯರಕೆರೆಯೆಂದು ಗುರುತಿಸಲಾಗಿದೆ.

ವಿದೇಶಿ ಪ್ರವಾಸಿಗರ ಬರಹಗಳಿಂದ ಈ ಕೆರೆಯನ್ನು ಕುರಿತು ಮಾಹಿತಿಗಳು ತಿಳಿಯಬರುತ್ತದೆ. ಅವರ ಬರಹಗಳಲ್ಲಿ ಕೆರೆಯನ್ನು ಕಟ್ಟಿಸಿದುದರ ಮಾಹಿತಿಯೊಂದಿಗೆ ಅನೇಕ ಕುತೂಹಲಕಾರಿಯಾದ ಸಂಗತಿಗಳಿವೆ. ಈ ಕೆರೆಯನ್ನು ಜೊ ಡಿ ಲ ಪೋಂಟೆ (Jao de la pante) ಬ ಪೋರ್ಚಗಲ್ಲಿನ ತಜ್ಞನು ನಿರ್ಮಿಸಿದನೆಂದು ತಿಳಿಯಬರುತ್ತದೆ. ಕೆರೆಯನ್ನು ಎರಡು ಬೆಟ್ಟಗಳ ನಡುವೆ ನಿರ್ಮಿಸಿದುದರ ಕಾರಣವಾಗಿ ಬೆಟ್ಟಗಳ ಪ್ರದೇಶದಲ್ಲಿ ಬೀಳುವ ನೀರು ಬೆಟ್ಟಗಳ ನಡುವೆ ಸಂಗ್ರಹಿಸಿ ಮೂರು ಲೀಗ್ ದೂರದಿಂದ ಕಾಲುವೆಗಳ ಮೂಲಕ ಇಲ್ಲಿಗೆ ಹಾಯಿಸಲಾಗುತ್ತಿತ್ತು ಎಂದು ಡಾಮಿಂಗೊ ಪಾಯಸ್(Damingo pass) ಎಂಬ ಪೋರ್ಚುಗೀಸನ ಪ್ರವಾಸಿಗನು ದಾಖಲಿಸಿದ್ದಾನೆ. ಇವುಗಳಲ್ಲದೆ, ಕೆರೆಯಲ್ಲಿ ಮೂರು ಚಿತ್ರಿತ ಕಂಬಗಳು ತೂಬುಗಳು ಇದ್ದು ಇವುಗಳಿಂದ ಭತ್ತದ ಅಕ್ಕಿ ಗದ್ದೆಗಳಿಗೆ ನೀರು ಬೇಕೆಂದಾಗ ಹಾಯಿಸಲ್ಪಡುತ್ತಿದ್ದವು ಎಂದು ಬರೆದಿದ್ದಾನೆ. ಕೆರೆಯನ್ನು ಹೇಗೆ ನಿರ್ಮಿಸಲಾಯಿತೆಂದು ಸಹ ತಿಳಿಸುತ್ತಾನೆ. ಅದರಂತೆ ರಾಜನು, ಒಂದು ಬೆಟ್ಟವನ್ನು ಒಡೆದು ಆ ಪ್ರದೇಶದಲ್ಲಿ ಕೆರೆಯನ್ನು ಕಟ್ಟಿಸಿದ. ಆ ಪ್ರದೇಶದಲ್ಲಿ ಸುಮಾರು ಹದಿನೈದು ಸಾವಿರ ಅಥವಾ ಇಪ್ಪತ್ತುಸಾವಿರ ಜನರು, ಇರುವೆಗಳಂತೆ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಅವರುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಸಲುವಾಗಿ ರಾಜನ ಅನೇಕ ಮಂದಿ ಉದ್ಯೋಗಸ್ಥರುಗಳು ನಿಯೋಜಿತರಾಗಿದ್ದರು. ಆದಷ್ಟು ತ್ವರಿತದಲ್ಲಿ ಕೆಲಸವನ್ನು ಪೂರೈಸುವ ಉದ್ದೇಶದಿಂದ ಅನೇಕ ಉದ್ಯೋಗಸ್ಥರು ಈ ಕೆಲಸಕ್ಕೆ ನಿಯೋಜಿಸಲ್ಪಟ್ಟಿದ್ದರು ಎಂದು ತಿಳಿಸುತ್ತಾನೆ. ಇದಲ್ಲದೆ ಕೆರೆಯನ್ನು ಕುರಿತಂತೆ ಇದ್ದ ನಂಬಿಕೆಗಳ ಬಗೆಗೆ ಸಹ ಬೆಳಕನ್ನು ಚೆಲ್ಲುತ್ತಾನೆ. ಈ ಕೆರೆಯು ಪದೇ ಪದೇ ಒಡೆಯುತ್ತಿರಲಾಗಿ, ರಾಜನು ಬ್ರಾಹ್ಮಣರನ್ನು ವಿಚಾರಿಸಿದನು. ಅವರುಗಳು, ದೇವರು (ವಿಗ್ರಹ) ಅಸಂತೃಪ್ತನಾಗಿದ್ದಾನೆಂದು, ಅವನಿಗೆ ಬಲಿಯನ್ನು ನೀಡಬೇಕು ಎಂದು ಸೂಚಿಸುತ್ತಾರೆ. ಅದರಂತೆ ರಾಜನು ನರಬಲಿಯನ್ನು ನೀಡಿ, ನರರ ರಕ್ತ, ಕುದುರೆ ಮತ್ತು ಕೋಣಗಳನ್ನು ಬಲಿಕೊಡುತ್ತಾನೆ ಎಂದು ದಾಖಲಿಸಿದ್ದಾನೆ.[10]

ಈ ಕೆರೆಯನ್ನು ಕುರಿತು ಮತ್ತೊಬ್ಬ ಪೋರ್ಚ್‌ಗಲ್ಲಿನ ಪ್ರವಾಸಿಗನಾದ ಫೆರ್ನಾವೊ ನ್ಯೂಜಿಜ್(Fernao Nuniz) ಎಂಬುವವನು ಸಹ ಬರೆದಿದ್ದಾನೆ. ಅದರಂತೆ, ರಾಜನು ಮಹಿಳೆ (ರಾಣಿ)ಯರ ಗೌರವಾರ್ಥವಾಗಿ ನಾಗಲಾಪುರವೆಂಬ ಪುರವನ್ನು ನಿರ್ಮಿಸಿ ಗೋಡೆಗಳನ್ನು ನಿರ್ಮಿಸಿ ಅರಮನೆಯನ್ನು ಕಟ್ಟಿದನೆಂದು ತಿಳಿಸುತ್ತಾನೆ. ಅಲ್ಲಿಯ ದೊಡ್ಡ ಬೆಟ್ಟಗಳ (Serras) ನಡುವೆ ಕೆರೆ ಕಟ್ಟಿಸಿದನೆಂದು ಬರೆದಿದ್ದಾನೆ. ರಾಜ್ಯದಲ್ಲಿ ಇಂತಹ ಕೆರೆಯನ್ನು ನಿರ್ಮಿಸಲು ಸಮರ್ಥರಿಲ್ಲದ ಕಾರಣ ಅವನು ಗೋವೆಯಲ್ಲಿ ಇದ್ದ ಪೋರ್ಚುಗೀಸಿನ ತಂತ್ರಜ್ಞನಾದ ಜೊ ಡಿ ಲ ಪೋಂಟೆಯನ್ನು ಆಹ್ವಾನಿಸಿ ಕೆರೆಯನ್ನು ಕಟ್ಟಿಸುತ್ತಾನೆ. ಮುಂದೆ ಈ ಕೆರೆಯು ಒಡೆಯಲಾಗಿ ಅದಕ್ಕೆ ತನ್ನ ಖೈದಿಗಳನ್ನು ಮತ್ತು ಕೋಣಗಳನ್ನು ಬಲಿಕೊಡುತ್ತಾನೆ ಎಂದು ದಾಖಲಿಸಿದ್ದಾನೆ.[11]

ಕೆರೆಯ ಕಾಲುವೆಯನ್ನು ಕುರಿತು ತಿಳಿಸುತ್ತಾ ಆ ಕೆರೆಗೆ ಅನೇಕ ಕಾಲುವೆಗಳು ಏರಿಯಿಂದ ಹೊರಬರುತ್ತಿದ್ದು, ಅವುಗಳಿಂದ ನೀರನ್ನು ಹಾಯಿಸಿ ಬೇಸಾಯಕ್ಕೆ ಬಳಸಿ ಅಧಿಕ ಕೃಷಿಯನ್ನು ಪಡೆಯುತ್ತಿದ್ದರು ಎಂದು ಬಣ್ಣಿಸಿದ್ದಾನೆ. ಅಲ್ಲಿ ಮುಖ್ಯವಾಗಿ ಭತ್ತದ ಗದ್ದೆ ಮತ್ತು ತೋಟಗಳು ಇದ್ದವು ಅವಲ್ಲದೆ ಆ ಕೆರೆಯ ಆಯಕಟ್ಟಿನ ಪ್ರದೇಶದ ಕೃಷಿಕರಿಗೆ ಒಂಬತ್ತು ವರ್ಷಗಳ ಕಾಲ ತೆರಿಗೆಯನ್ನು ವಿನಾಯಿತಿಗೊಳಿಸುತ್ತಾನೆಂದು, ಇದರಿಂದ ರಾಜನ ಬೊಕ್ಕಸಕ್ಕೆ ೨೦,೦೦೦ ಪರ್ಡೋಸ್‌ಚಿನ್ನದ ನಾಣ್ಯಗಳು ನಷ್ಟು ಹೆಚ್ಚು ಲಾಭ ಬರಬೇಕೆಂದು ರಾಜನು ಉದ್ದೇಶಿಸಿರುವುದಾಗಿ ದಾಖಲಿಸಿದ್ದಾನೆ. ಈ ಕೆರೆಯು ಅತ್ಯಂತ ದೊಡ್ಡದಾಗಿದ್ದು ಅದರಲ್ಲಿ ನೀರು ತುಂಬಿರುವುದನ್ನು ಇಲ್ಲಿಯವರೆಗೆ ಯಾರೂ ನೋಡಿಲ್ಲವೆಂದು ಸ್ಥಳೀಯರು ತಿಳಿಸಿರುತ್ತಾರೆ.

[1] ಎಪ್. ಕಾನ್, (ಹಳೆಯ) ಸಂ. VII ಸಂ. ಎಸ್‌ಎಚ್. ೩೫

[2] ಅದೇ, ಸಂ. X ಸಂ. ಎಂಬಿ ೧೭೨

[3] ಅದೇ,

[4] ಐಎಸ್‌ವಿಇ, ಪು. ೭೯

[5] ಎಪ್‌ಕಾರ್ನ್, (ಹಳೆಯ) ಸಂ. II ಸಂ. ೫೬೩

[6] ಅದೇ, ಸಂ. I X , ಕೆ.ಎನಂ. ೯೭

[7] ಐಎಸ್‌ವಿಇ, ಪು. ೧೧೫-೨೦

[8] ಐಎಸ್‌ವಿಇ, ಪು. ೧೮೩; ದೀಕ್ಷಿತ, ಜಿ.ಎಸ್. ಮತ್ತು ಇತರರು, ಪೂರ್ವೋಕ್ತ, ಪು. ೨೫೮-೬೩

[9] ನೆಲ್ಲೂರು ಇನ್ಸ್‌ಕ್ರಿಪ್ಯನ್ಸ್, ಸಂ. I ಪು. ೨೪೫-೪೯, ಐಎಸ್‌ವಿಇ, ಪು. ೧೮೩

[10] ನೆಲ್ಲೂರು ಇನ್ಸ್‌ಕ್ರಿಪ್ಯನ್ಸ್, ಸಂ. I ಪು. ೧೯೯

[11] ವಸುಂಧರಾ ಫಿಲಿಯೋಜ, ದಿ ವಿಜಯನಗರ ಎಂಪೈರ್, (ಡಿ. ಪಯಾಸ್‌ಮತ್ತು ನ್ಯೂನಿಜ್), ಪು. ೨೬ ಮತ್ತು ೧೪೨-೪೩

## ೪೩. ಹಂಪಿ ಪರಿಸರದ ಕೆರೆಗಳ ತಾಂತ್ರಿಕ ಅಂಶಗಳು (೩)

**ದಣ್ಣಾಯಕನ ಕೆರೆ**

ಇದು ಹೊಸಪೇಟೆ ತಾಲೂಕಿನಲ್ಲಿರುವ ಒಂದು ದೊಡ್ಡ ಕೆರೆಯಾಗಿದೆ. ಇಂದಿಗೂ ಅದು ಸುಸ್ಥಿತಿಯಲ್ಲಿದ್ದು ಅದರ ಪ್ರಯೋಜನವನ್ನು ಜನರು ಪಡೆಯುತ್ತಿದ್ದಾರೆ. ಇದು ಹೊಸಪೇಟೆಯ ದಕ್ಷಿಣಕ್ಕೆ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಈ ಕೆರೆಯನ್ನು ಮುದ್ದಾ ಎಂಬುವವನು ಕಟ್ಟಿಸಿದನೆಂದು ನಂತರ ಆತನು ದಣ್ಣನಾಯಕ ಅಥವಾ ದಂಡನಾಯಕನಾದನೆಂದು ತಿಳಿದುಬರುತ್ತದೆ. ಈ ಕೆರೆಯ ಜಲಾನಯನ ಪ್ರದೇಶವು ೪೭.೭೭ ಮೈಲುಗಳು ಮತ್ತು ಅಚ್ಚುಕಟ್ಟು ಪ್ರದೇಶವು ೧೫೦೭.೫ ಎಕರೆಗಳು. ಈ ಕೆರೆ ಪ್ರದೇಶದ ಮೇಲ್ಭಾಗದಲ್ಲಿ ಸುಮಾರು ೧೫ಕ್ಕೂ ಹೆಚ್ಚು ಕೆರೆಗಳು ಇದ್ದು ಅವುಗಳು ಹೆಚ್ಚುವರಿ ನೀರು ಕೆರೆಯಲ್ಲಿ ಸಂಗ್ರಹಗೊಳ್ಳುತ್ತದೆ. ಈ ಕೆರೆ ಏರಿಯ ಉದ್ದ ೨೬.೨೫ ಮೀಟರ್, ಎತ್ತರ ೭.೯೬ ಮೀ. ಮತ್ತು ಏರಿಯ ಮೇಲ್ಭಾಗದ ಅಗಲ ೭.೯೬ ಮೀ. ಮತ್ತು ೪.೫೭ ಮೀ. ಇದರ ಮೇಲೆ ಒಂದು ಎತ್ತಿನಗಾಡಿ ಹೋಗಬಹುದು. ಕೆರೆಗೆ ಎರಡು ಕಾಲುವೆಗಳಿದ್ದು ಅವುಗಳು ೨೧೦೦ ಮೀ. ಉದ್ದವಾಗಿದೆ. ಇದಕ್ಕೆ ಪಿಸ್ಟನ್‌ಮಾದರಿಯ ಎರಡು ತೂಬುಗಳು ಇವೆ. ಅವುಗಳು

ವಿವಿಧ ಎತ್ತರಗಳಲ್ಲಿ ಸುಮಾರು ಇಪ್ಪತ್ತು ಮೀಟರ್ ಅಂತರಗಳಲ್ಲಿವೆ. ತೂಬುಗಳನ್ನು ಹೊರಭಾಗದ ಇಳಿಜಾರಿನಲ್ಲಿ ಕಾಲುವೆಗೆ ಸೇರಿಸಿರುವುದು ಈ ಕೆರೆಯ ವಿಶೇಷ. ಇದರಿಂದಾಗಿ ಆಯಕಟ್ಟು ಪ್ರದೇಶಕ್ಕೆ ನೀರು ಸಮರ್ಪಕವಾಗಿ ಹರಿದುಹೋಗುತ್ತದೆ.

ಈ ಕೆರೆಯನ್ನು ಕುರಿತಂತೆ ಇರುವ ಪ್ರಚಲಿತ ದಂತಕಥೆಯಂತೆ ಕುರುಬ ಹುಡುಗನಾಗಿದ್ದ ಮುದ್ದನು ಬ್ರಾಹ್ಮಣನ ಪೋಷಣೆಯಲ್ಲಿ ದೊಡ್ಡವನಾದ. ಆ ಬ್ರಾಹ್ಮಣನು ದೊಡ್ಡ ಜ್ಯೋತಿಷ್ಯನಾಗಿದ್ದ. ಒಂದು ದಿನ ಮುದ್ದನು ಮಲಗಿರುವಾಗ ಒಂದು ಸರ್ಪವು ಹೆಡೆಯೆತ್ತಿ ಮುದ್ದನಿಗೆ ನೆರಳು ಕೊಡುತ್ತಿತ್ತು. ಅದನ್ನು ನೋಡಿದ ಬ್ರಾಹ್ಮಣನು, ಈ ಬಾಲಕನು ಮುಂದೆ ದೊಡ್ಡ ವ್ಯಕ್ತಿಯಾಗಿ ಪ್ರಜೆಗಳಿಗೆ ಹಿತಾತ್ಮಕ ಕಾರ್ಯಗಳನ್ನು ಮಾಡುತ್ತಾನೆ ಎಂದು ಭವಿಷ್ಯವನ್ನು ನುಡಿಯುತ್ತಾನೆ. ಮುದ್ದನೆ ಮುಂದೆ ಕೆರೆಯನ್ನು ಕಟ್ಟಿಸಿದನೆಂದು ಜನರು ನಂಬಿದ್ದಾರೆ. ಅವನು ಮಡಿದ ನಂತರ ಅವನ ದೇಹವನ್ನು ಇಂದಿನ ರಾಯರಕೆರೆಯ ಏರಿಯಲ್ಲಿ ಸಮಾಧಿ ಮಾಡಲಾಯಿತು ಎಂಬ ನಂಬಿಕೆಯಿದೆ.

**ದರೋಜಿ ಕೆರೆ**

ಹೊಸಪೇಟೆಯ ಪೂರ್ವಕ್ಕೆ ಸುಮಾರು ೨೫ ಕಿ.ಮೀ. ದೂರದಲ್ಲಿರುವ ಹೊಸಪೇಟೆ ಬಳ್ಳಾರಿ ರಸ್ತೆಯಲ್ಲಿ ದರೋಜಿ ಗ್ರಾಮವಿದೆ. ಇದು ಸಂಡೂರು ತಾಲೂಕಿನಲ್ಲಿದೆ. ಈ ಗ್ರಾಮದಲ್ಲಿ ಒಂದು ಕೆರೆಯಿದ್ದು, ಇದನ್ನು ಆ ಗ್ರಾಮನಾಮವಾದ ದರೋಜಿಯಿಂದ, ದರೋಜಿಕರೆಯೆಂದು ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಖಚಿತವಾದ ಮಾಹಿತಿಯು ದೊರೆಯುವುದಿಲ್ಲ. ಗ್ರಾಮದ ಜನರು ಪ್ರಚಲಿತ ನಂಬಿಕೆಗಳಂತೆ ಈ ಕೆರೆಯನ್ನು ಟೀಪುಸುಲ್ತಾನನು ಕಟ್ಟಿಸಿದ.

ದರೋಜಿ ಗ್ರಾಮದ ಕೈಫಿಯತ್ತು ಈ ಕೆರೆಯನ್ನು ಯಾರು ಕಟ್ಟಿಸಿದರು ಎಂಬುದರ ಬಗೆಗೆ ಕೆಲವು ವಿವರಗಳನ್ನು ನೀಡಿರುವುದು ಗಮನಾರ್ಹ. ಕಂಪಿಲರಾಯನ ಮಗನಾದ ಕುಮಾರರಾಮನು ಈ ಪ್ರದೇಶದಲ್ಲಿ ರಾಜ್ಯವಾಳುತ್ತಿರುವಾಗ ಸುಲ್ತಾನರು (ಪಾಛೆಯವರು) ಸುಮಾರು ಹನ್ನೆರಡು ಲಕ್ಷ ಫೌಜು ತೆಗೆದುಕೊಂಡು ದಾಳಿ ನಡೆಸಿ ಕುಮಾರರಾಮನನ್ನು ಹತ್ಯೆ ಮಾಡಿ ರಾಜ್ಯವನ್ನು ತಮ್ಮದಾಗಿಸಿಕೊಂಡು ತಮ್ಮ ದೇಶಕ್ಕೆ ಹಿಂತಿರುಗುವಾಗ ಗೆದ್ದ ರಾಜ್ಯದಲ್ಲಿ ಅವರ ಗುರುತು ಇರಬೇಕೆಂದು ಸರದಾರರನ್ನು ಕರೆಸಿ ಅವರ ಪಾಲಿನ ಭೂಪ್ರದೇಶಗಳಲ್ಲಿ ಒಂದು ಕೆರೆಯನ್ನ ನಿರ್ಮಿಸಲು ಅಪ್ಪಣೆ ಮಾಡುತ್ತಾನೆ. ಆ ಕೆರೆಗಳು ಸಮುದ್ರಕ್ಕೆ ಹೋಲುವಂತಹುಗಳಾಗಿ ಇರಬೇಕು ಎಂದು ಸಹ ತಿಳಿಸುತ್ತಾನೆ.

[1]
ಅವರ ಆದೇಶದಂತೆಯೇ ಮೂವರು ಸರದಾರರು ಮೂರು ಕೆರೆಗಳನ್ನು ದರೋಜಿಯ ಸಮೀಪದಲ್ಲಿಯೇ ಕಟ್ಟುತ್ತಾರೆ. ಸಿಂಗಸರದಾರರು ಸಿಂಗನಕೆರೆ, ಹಗಲಾಭತ್ತಾಖಾನನು ಕಟ್ಟಿಸಿದ ಕೆರೆಗೆ ಹಗಲಾಭತ್ತಾನಕೆರೆ ಮತ್ತು ಇನ್ನೊಂದು ಕೆರೆಗೆ ಖಾನ್‌ಕೆರೆಯೆಂದು ಹೆಸರಿಸಿದ್ದಾರೆ. ಮೂರನೆಯ ಕೆರೆಯನ್ನು ಬಾಹಾಳ ಸರದಾರ ಕಟ್ಟಸಿದನೆಂದು ತಿಳಿದುಬರುತ್ತದೆ. ಈ ಕೆರೆಯು ಸಮುದ್ರದಂತೆಯಿದ್ದು ‘ದರಿಯ ತಲಾಉ’ ಎಂದು ಹೆಸರಿದ್ದಾರೆ. ‘ದರಿಯ ತಲಾಉ’ ಎಂದರೆ ನೀರಿರುವ ಕೆರೆಯೆಂದು ಪರ್ಷಿಯನ್‌ಮತ್ತು ಹಿಂದಿ ಭಾಷೆಗಳಲ್ಲಿ ಅರ್ಥ. ಕನ್ನಡದಲ್ಲಿ ದರಿಯ ಕೆರೆಯೆಂದು ಕರೆಯಲ್ಪಟ್ಟು ನಂತರದಲ್ಲಿ ದರೋದಿಯಾಗಿ ನಂತರ ದರೋಜಿಯಾಯಿತು ಎಂದು ಕೈಫಿಯತ್ತು ತಿಳಿಸುತ್ತದೆ.[2]

ಈ ಕೆರೆಯ ಕೋಡಿಯು ಪಶ್ಚಿಮಕ್ಕೆ ಇದ್ದುದಾಗಿ ತಿಳಿಸುತ್ತಾ ಅಲ್ಲಿ ವೀರಭದ್ರ ದೇವಾಲಯವಿರುವುದನ್ನು ಉಲ್ಲೇಖಿಸುತ್ತದೆ. ಇಂದಿಗೂ ಅಲ್ಲಿ ಒಂದು ವೀರಭದ್ರ ದೇವಾಲಯವಿದ್ದು ಅದನ್ನು ಕೋಡಿ ವೀರಭದ್ರ ದೇವಾಲಯವೆಂದು ಜನರು ಕರೆಯುತ್ತಾರೆ. ಈ ಕೆರೆಯು ಒಮ್ಮೆ ಒಡೆದುಹೋದುದರ ಉಲ್ಲೇಖವು ಕೈಫಿಯತ್ತಿನಲ್ಲಿದೆ. ಬಹುಶಃ ಸಂಡೂರು ಪ್ರದೇಶದಲ್ಲಿ ಹೆಚ್ಚು ಮಳೆಯಾಗಿ ಅಲ್ಲಿರುವ ಕೆಲವು ಕೆರೆಗಳು ಒಡೆದು, ಆ ನೀರು ಆ ಕೆರೆಗೆ ಹರಿದುಬಂದು, ದರೋಜಿಕೆರೆಯು ಒಡೆದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.[3] ಈ ಕೆರೆಯು ಒಡೆದ ನಂತರ ಅದನ್ನು ಸರಿಪಡಿಸಲು ಸಾಕಷ್ಟು ಕಾಲವಾಯಿತು ಎಂಬುದು ಕೈಫಿಯತ್ತಿನಿಂದ ತಿಳಿಯಬಹುದಾಗಿದೆ. ಕೆರೆಯನ್ನು ಕಟ್ಟುವುದರಲ್ಲಿ ಟೀಪುಸುಲ್ತಾನನು ಸಹಾಯ ಮಾಡಿರುವುದು ಸ್ಪಷ್ಟವಾಗುತ್ತದೆ. ಇವುಗಳಲ್ಲದೇ ಇನ್ನೆರಡು ಸಂಗತಿಗಳು ಸಹ ತಿಳಿದುಬರುತ್ತದೆ.

ಅವುಗಳೆಂದರೆ, ಈ ಕೆರೆಯು ಒಡೆದ ಕಾರಣ ಹಳೇ ದರೋಜಿ ಗ್ರಾಮವು ಕೊಚ್ಚಿಕೊಂಡು ಹೋಯಿತು ಎಂಬುದೇ ಆಗಿದೆ. ಮತ್ತೊಂದು ವಿಷಯವು ಕೆರೆಯನ್ನು ಜೀರ್ಣೋದ್ಧಾರ ಮಾಡುವ ಕಾಲಕ್ಕೆ ಪಶ್ಚಿಮದ ಕೋಡಿಯ ಎತ್ತರವನ್ನು ತಗ್ಗಿಸಿದರು ಎಂಬುದಾಗಿದೆ. ಬಹುಶಃ ಇದಕ್ಕೆ ಮುಂಚೆ ಕೋಡಿಯು ಎತ್ತರವಾಗಿದ್ದು, ಕೆರೆಯಲ್ಲಿ ಈಗಿರುವ ನೀರು ಸಂಗ್ರಹ ಸಾಮರ್ಥ್ಯಕ್ಕಿಂತ ಅಧಿಕವಾಗಿತ್ತೆಂದು ಸುಲಭವಾಗಿ ಊಹಿಸಬಹುದು. ದರೋಜಿ ಕೆರೆಗೆ ನಾಲ್ಕು ತೂಬುಗಳಿದ್ದು ಅವುಗಳಲ್ಲಿ ಮೂರು ಮಾತ್ರವೇ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಕೈಫಿಯತ್ತಿನಲ್ಲಿ ದಾಖಲಾಗಿದೆ.[4] ಇಂದಿಗೂ ಮೂರು ತೂಬುಗಳು ಮಾತ್ರವೇ ಕಾರ್ಯನಿರ್ವಹಿಸುತ್ತಿವೆ. ಮಾಗಣಿಗಳಿಗೆ ದರೋಜಿ ಕೆರೆಯಿಂದ ಎಷ್ಟು ನೀರು ಉಣಿಸುತ್ತಿದ್ದವು ಎಂಬುದನ್ನು ಮಾಗಣಿಗಳ ಹೆಸರಿನೊಂದಿಗೆ ಕೈಫಿಯತ್ತು ನೀಡಿದೆ.

ಟೀಪುವಿನ ಸೇನಾಪಡೆಯು ಮರಾಠರೊಂದಿಗೆ ಯುದ್ಧ ಮಾಡುವಾಗ ಸುಮಾರು ಮೂವತ್ತುಸಾವಿರ ಸೈನಿಕರ ಈ ಕೆರೆಯು ಬತ್ತಿದಾಗ ಅದರಲ್ಲಿ ಅಡಗಿಕೊಂಡಿದ್ದರು ಎಂಬ ಜನಪದ ನಂಬಿಕೆಯಿದೆ. ಈ ಕೆರೆಯು ಟೀಪುವಿನ ಕಾಲದಲ್ಲಿ ಒಣಗಿದ್ದು ಮತ್ತು ಕೆರೆಯ ಭಾಗದಲ್ಲಿ ಮೂವತ್ತು ಸಾವಿರ ಸೈನಿಕರು ಅಡಗಿಕೊಳ್ಳವಷ್ಟು ವಿಸ್ತಾರವಾಗಿತ್ತೆಂಬ ಎರಡು ಅಂಶಗಳು ತಿಳಿಯಬರುತ್ತವೆ. ಈ ಮೇಲಿನ ಅಂಶಗಳನ್ನು ಪರಿಗಣಿಸಿದಾಗ ಈ ಕೆರೆಯನ್ನು ಟೀಪುಸುಲ್ತಾನನ ಕಾಲದಲ್ಲಿ (೧೭-೧೮ನೇ ಶತಮಾನ) ಅಥವಾ ಅದಕ್ಕೂ ಮುಂಚೆ ಕಟ್ಟಿರುವ ಸಾಧ್ಯತೆಗಳಿವೆ.

ಈ ಕೆರೆಯು ಏರಿಯು ಸುಮಾರು ೩.೫ ಕಿ.ಮೀ. ಉದ್ದ ಮತ್ತು ೪೫ ಅಡಿಗಳಷ್ಟು ಎತ್ತರವಿದೆ. ದರೋಜಿ ಕೆರೆಯು ಸುಮಾರು ೨೦೦೦ಕ್ಕೂ ಎಕರೆಗಳಿಗೆ ನೀರುಣಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಕೆರೆಗೆ ನಾರಿಹಳ್ಳದಿಂದ ನೀರು ಹರಿದುಬರುತ್ತದೆ.

ಕ್ರಿ.ಶ. ೧೮೫೧ರಲ್ಲಿ ಬಂದ ಪ್ರವಾಹದಿಂದ ಸಂಪೂರ್ಣವಾಗಿ ನಾಶವಾಗಿ ಅದನ್ನು ಎರಡು ವರ್ಷಗಳಲ್ಲಿ ಅಂದರೆ ಕ್ರಿ.ಶ. ೧೮೫೩ರಲ್ಲಿ ಪುನ್‌ನಿರ್ಮಾಣ ಮಾಡಲಾಯಿತು ಎಂಬುದಾಗಿ ದರೋಜಿ ಕೆರೆ ಕೋಡಿಯ ಸಮೀಪದಲ್ಲಿ ದೊರೆತ ಒಂದು ಶಾಸನವು ತಿಳಿಸುತ್ತದೆ. ಇದೇ ಶಾಸನವು ಪ್ರವಾಹಕ್ಕೆ ಕಾರಣವನ್ನು ತಿಳಿಸುವುದು ವಿಶೇಷ ಸಂಗತಿ. ಈ ಕೆರೆಯ ಮೇಲಣ ಭಾಗದಲ್ಲಿ ಇರುವ ಆವಿನಮಡುಗು ಎಂಬ ಕೆರೆಯು ತುಂಬಿ ಒಡೆಯಲಾಗಿ ಆ ಕೆರೆಯ ನೀರು ದರೋಜಿಕೆರೆಗೆ ನುಗ್ಗಿ ಬಂದು ಕೆರೆ ಒಡೆಯಲು ಕಾರಣವಾಯಿತೆಂದು ತಿಳಿಸುತ್ತದೆ.[5] ಇದಲ್ಲದೆ ದರೋಜಿ ಗ್ರಾಮವು ಇಂದಿನ ಹಳೇ ದರೋಜಿಗ್ರಾಮ ಇಂದಿನ ಹಳೇ ದರೋಜಿಗ್ರಾಮ ಸಹ ನಾಶವಾಯಿತು ಎಂದು ತಿಳಿದುಬರುತ್ತದೆ.[6]

**ಕಮಲಾಪುರ ಕೆರೆ**

ಕಮಲಾಪುರದ ಕೆರೆಯು ವಿಜಯನಗರ ಕಾಲದ ಕೆರೆಗಳಲ್ಲಿ ಒಂದಾಗಿದೆ. ಕಮಲಾಪುರ ಗ್ರಾಮವು ಹಂಪೆಯಷ್ಟೇ ಪ್ರಾಚೀನ ಗ್ರಾಮ. ವಿಜಯನಗರ ಶಾಸನಗಳಲ್ಲಿ ಈ ಗ್ರಾಮಕ್ಕೆ ಕಮಲಾಪುರ ಮತ್ತು ಕಮಲಾಪುರ ಎಂಬ ಎರಡೂ ಹೆಸರುಗಳನ್ನು ಬಳಸಲಾಗಿದೆ. ಕೆರೆಯು ಕಮಲಾಪುರ ಗ್ರಾಮದ ಪಶ್ಚಿಮಕ್ಕೆ ಇದೆ. ಹೊಸಪೇಟೆಗೆ ಈ ಕೆರೆ ಏರಿಯ ಮೇಲಿರುವ ರಸ್ತೆಯ ಮೂಲಕ ಹಾದುಹೋಗಬೇಕು. ಈ ಕೆರೆಯ ಏರಿಯು ಸುಮಾರು ಮೂರು ಕಿ.ಮೀ.ಗಳಷ್ಟು ಉದ್ದ ಇದ್ದು ನೀರಾವರಿ ಇಲಾಖೆಯವರು ಕೆರೆಯ ರಕ್ಷಣೆಯನ್ನು ಮಾಡುತ್ತಿದ್ದಾರೆ.

ಈ ಕೆರೆಯು, ವಿಜಯನಗರ ಪೂರ್ವಕಾಲದಲ್ಲಿ ಸಣ್ಣಕೆರೆಯಾಗಿದ್ದಿರಬೇಕು. ಕಾಲಕ್ರಮದಲ್ಲಿ ಈ ಪ್ರದೇಶವು ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟನಂತರ ಕೆರೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕು. ಈ ಕೆರೆಯನ್ನು ಯಾರು ನಿರ್ಮಾಣ ಮಾಡಿದರೆಂಬುದರ ವಿವರಗಳು ನಮಗೆ ದೊರೆಯದ ಕಾರಣವಾಗಿ ಮೇಲೆ ಉಲ್ಲೇಖಿಸಿದ ತೀರ್ಮಾನಕ್ಕೆ ಬರಬೇಕಾಗಿದೆ.

ಕಮಲಾಪುರದ ಕೈಫಿಯತ್ತು ಈ ಕೆರೆಯನ್ನು ಅಚ್ಯುತರಾಯ ಮಹಾರಾಜನ ಮಗನಾದ ಪ್ರೌಢದೇವರಾಯ ಮಹಾರಾಜನು ನಿರ್ಮಿಸಿದನೆಂದು ಉಲ್ಲೇಖಿಸಿದೆ.[7] ಈ ಕೆರೆಯ ಬಗೆಗೆ ನಮಗೆ ದೊರೆಯುವ ಏಕೈಕ ಆಧಾರವು ಇದಾಗಿದೆ. ಈ ಕೆರೆಗೆ ತುಂಗಭದ್ರಾ ನದಿಯಿಂದ ಬಸವಣ್ಣ ಕಾಲುವೆ ಮತ್ತು ವಿಜಯನಗರ ಕಾಲುವೆ (ರಾಯ ಕಾಲುವೆ) ಎಂಬ ವಿಜಯನಗರ ಕಾಲದ ಎರಡು ಕಾಲುವೆಗಳ ಮೂಲಕ ನೀರು ಬಂದು ಶೇಖರಣೆಗೊಳ್ಳುತ್ತದೆ. ಕಾಲುವೆಗಳ ರಚನಾತ್ಮಕ ಶೈಲಿಯು ವಿಜಯನಗರ ಕಾಲದ ಶೈಲಿಯನ್ನು ಹೋಲುತ್ತದೆ. ಈ ಕೆರೆಗೆ ನಾಲ್ಕು ತೂಬುಗಳು ಇದ್ದು, ಅವುಗಳಲ್ಲಿ ಎರಡಕ್ಕೆ ಮರದ ತುಂಡುಗಳನ್ನು ಅಳವಡಿಸಿದ್ದರೆ, ಮಿಕ್ಕೆರಡಕ್ಕೆ ಕಬ್ಬಿಣದ ಬಾಗಿಲುಗಳನ್ನು (ಷಟ್ಟರ್Shutter) ಅಳವಡಿಸಲಾಗಿದೆ. ಈ ನಾಲ್ಕೂ ತೂಬುಗಳು ವಿವಿಧ ಎತ್ತರಗಳಲ್ಲಿದ್ದು ಅವುಗಳಿಗೆ ಅನುಗುಣವಾಗಿ ಕಾಲುವೆಗಳು ಸಹ ವಿವಿಧ ಎತ್ತರಗಳಲ್ಲಿ ಇರುವುದನ್ನು ಗಮನಿಸಬಹುದು. ಕೆರೆಯ ಆಯಕಟ್ಟು ಪ್ರದೇಶದಲ್ಲಿ ಕಬ್ಬು, ಭತ್ತ, ಬಾಳೆಹಣ್ಣು ಮುಂತಾದವುಗಳನ್ನು ಸರ್ವಕಾಲದಲ್ಲಿಯೂ ಬೆಳೆಯುತ್ತಾರೆ.[8]

**ಅಳ್ಳಿಕೆರೆ ಕೆರೆ**

ಅಳ್ಳಿಕೆರೆಯು ಕಮಲಾಪುರದ ಪೂರ್ವಕ್ಕೆ ಇರುವ ಪಾಪಿನಾಯಕನಹಳ್ಳಿಗೆ ಹೋಗುವ ಮಾರ್ಗದಲ್ಲಿದೆ. ಇದು ತುಂಗಭದ್ರಾ ನದಿಯಾಶ್ರಿತ ವಿಜಯನಗರ ಕಾಲದ ಕೆರೆಯಾಗಿದೆ. ಕಮಲಾಪುರ ಊರಿನಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಬಟ್ಟಗಳ ಸಾಲಿನ ಮಧ್ಯೆ ಇದ್ದು ಪಾಪಿನಾಯಕನಹಳ್ಳಿ ಹಾಗೂ ಕಮಲಾಪುರ ನಿವಾಸಿಗಳು ಇದರ ಪ್ರಯೋಜನವನ್ನು ಹೊಂದುತ್ತಿದ್ದಾರೆ. ಈ ಕೆರೆಗೆ ತುಂಗಭದ್ರಾ ನದಿಯ ಉನ್ನತ ಮಟ್ಟದ ಕಾಲುವೆಯಿಂದ ನೀರು ಬಂದು ಸಂಗ್ರಹಗೊಳ್ಳುತ್ತದೆ. ಅಳ್ಳಿಕೆರೆ ಕೆರೆಯು ಸಹ ನೀರಾವರಿ ಇಲಾಖೆಯವರ ಅಧೀನದಲ್ಲಿಯೇ ಇದೆ. ಸಾಕಷ್ಟು ಆಧಾರಗಳು ದೊರೆಯದ ಕಾರಣ ಈ ಕೆರೆಯ ನಿರ್ಮಾತೃ, ಕಮಲಾಪುರದ ಕೆರೆಯಂತೆಯೇ, ಯಾರೆಂಬುದನ್ನು ಖಚಿತತೆಯಿಂದ ಹೇಳಲು ಸಾಧ್ಯವಿಲ್ಲ. ಆದರೆ ಈ ಕೆರೆಯು ವಿಜಯನಗರ ಕಾಲದಲ್ಲಿಯೇ ಇತ್ತೆಂಬುದಕ್ಕೆ ಆಧಾರಗಳಿವೆ.

ಶ್ರೀಕೃಷ್ಣದೇವರಾಯನು ಆಳ್ವಿಕೆಯಲ್ಲಿ (ಕ್ರಿ.ಶ.೧೫೦೯-೩೦) ಡಾಮಿಂಗೋ ಪಯಾಸ್ವಿಜಯನಗರಕ್ಕೆ ಭೇಟಿಯನ್ನಿತ್ತ ವಿದೇಶಿ ಪ್ರವಾಸಿಗರಲ್ಲಿ ಒಬ್ಬನು. ಈತ ವಿಜಯನಗರ ಪಟ್ಟಣಕ್ಕೆ ಬಂದಾಗ ಅಂದಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ವಿಷಯಗಳನ್ನು ದಾಖಲಿಸುವಾಗ ಈ ಕೆರೆಯನ್ನು ಕುರಿತಂತೆ ಪ್ರಸ್ತಾಪಿಸಿದ್ದಾನೆ.[9] ಅದರಂತೆ ನವರಾತರಿ ಅಥವಾ ಮಹಾನವಮಿಯ ಹಬ್ಬಗಳು ಹತ್ತು ದಿನಗಳ ಕಾಲ ನಡೆಯುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಒಂಬತ್ತು ದಿನಗಳಾದ ನಂತರ ಹತ್ತನೆಯ ದಿನದಂದು ರಾಜನು ಆನೆಯ ಅಂಬಾರಿ ಮೇಲೆ ವಿಜಯನಗರ ಪಟ್ಟಣದ ಕೋಟೆ ಗೋಡೆಗಳ ಹೊರಗೆ ಸುಮಾರು ಒಂದು ಲೀಗ್‌ನಷ್ಟು ದೂರ ಪೂರ್ವಕ್ಕೆ ಬರುತ್ತಾನೆ. ಅಲ್ಲಿ ಒಂದು ವಿಶೇಷ ಗುಡಾರದಲ್ಲಿ ಒಂದು ದೇವತೆಯ ಪೂಜೆಯನ್ನು ಮಾಡುತ್ತಾನೆ. ದಾರಿಯ ಇಕ್ಕೆಲಗಳಲ್ಲಿಯೂ ಸೈನಿಕರು, ವಿವಿಧ ಅಧಿಕಾರಿಗಳು ಮತ್ತು ಜನಸಮೂಹವೇ ಇರುತ್ತದೆ. ರಾಜನು ದಾರಿಯಲ್ಲಿ ಈ ಸ್ಥಳವನ್ನು ತಲುಪುವಾಗ ಒಂದು ಕೆರೆಯನ್ನು ಹಾದುಹೋಗುತ್ತಾನೆ ಎಂದು ಬರೆದಿದ್ದಾನೆ.

ಜಾನ್‌ಫ್ರಿಟ್ಜ್‌ರವರು, ಪಯಾಸ್‌ವರ್ಣಿಸಿ ವಿವರಿಸಿರುವ ಸ್ಥಳದ ಪರಿವೀಕ್ಷಣೆಯನ್ನು ನಡೆಸಿ ಪಯಾಸ್‌ವರ್ಣಿಸಿರುವ ಕೆರೆಯು ಆಳ್ವಿಕೆರೆಯೆಂದು ಸರಿಯಾಗಿ ಗುರುತಿಸಿರುತ್ತಾರೆ.[10] ಈ ಕೆರೆಯ ಸಮೀಪವೇ ದೇವತೆಯ ಪೂಜೆಗೆಂದು ಗುಡಾರವನ್ನು ಹಾಕಲಾಗುತ್ತಿತ್ತು ಎಂದು, ಆ ಗುಡಾರವು ಪಯಾಸ್‌ವರ್ಣಿಸಿರುವಂತೆ ಬಟ್ಟೆಯದಲ್ಲವೆಂದು ಆದರೆ ಕಲ್ಲಿನಿಂದ ರಚಿಸಲ್ಪಟ್ಟ ಕಟ್ಟಡ ಎಂದು ಅಭಿಪ್ರಾಯಪಡುತ್ತಾರೆ. ಇಂದಿಗೂ ಒಂದು ಮಂಟಪವು ಕಮಲಾಪುರದ ಪೂರ್ವಕ್ಕೆ ಕೆರೆಯ ಪಶ್ಚಿಮಕ್ಕೆ ಇದೆ. ಈ ಮಂಟಪದ ಸಮೀಪವೇ ಒಂದು ಚಿಕ್ಕ ಗುಡಿಯೂ ಇದೆ. ಈ ಮಂಟಪಕ್ಕೆ ಯಾವುದೇ ಮೆಟ್ಟಿಲುಗಳು ಇಲ್ಲದ ಕಾರಣ, ಬಹುಶಃ ಎತ್ತರ ವಾಹನ-ಸವಾರಿಗಳ ಮೇಲಿನಿಂದ ಮಂಟಪಕ್ಕೆ ಪ್ರವೇಶ ಮಾಡುತ್ತಿದ್ದರು ಎಂದು ತಿಳಿಸುತ್ತಾರೆ.

ಮಂಟಪವಿರುವ ಸ್ಥಳವು ವಿಜಯನಗರ ಪಟ್ಟಣದಿಂದ ಒಂದು ಲೀಗ್ ದೂರದಲ್ಲಿದೆ ಎಂದು ಪಯಾಸ್‌ಬರೆದಿದ್ದಾನೆ. ಈ ದೂರವು ಪೋರ್ಚ್‌ಗೀಸ್‌ಭಾಷೆಯ ಲೇಗಾವ್‌ಇರಬಹುದು. ಇದು ಸುಮಾರು ೬.೨೦ ಕಿ.ಮೀ.ಯಷ್ಟು ದೂರವೆಂದು, ೧೬ನೆಯ ಶತಮಾನದ ಸ್ಪಾನಿಶ್ ಭಾಷೆಯಲ್ಲಿ ಒಂದು ಲೀಗವು ೪.೨೪ ಕಿ.ಮೀ. ದೂರಕ್ಕೆ ಸಮನಾಗಿರುತ್ತದೆ ಎಂದು ಜಾನ್‌ಫ್ರಿಟ್ಜ್‌ಅಭಿಪ್ರಾಯಿಸುತ್ತಾರೆ. ಪಾಯಸ್‌ನು ಬಳಸಿರುವ ಲೀಗ್‌೪.೨೪ ಅಥವಾ ೬.೨೦ ಯಾವುದೆಂದು ಸ್ಪಷ್ಟವಿಲ್ಲ ಮತ್ತು ಈ ದೂರವು ರಾಜಧಾನಿಯಾದ ವಿಜಯನಗರ ಪಟ್ಟಣಕ್ಕೆ ಸುಮಾರು ನಾಲ್ಕರಿಂದ ಐದು ಕಿ.ಮೀ.ಗಳಷ್ಟು ದೂರದಲ್ಲಿರುವುದರಿಂದ ಈ ಮಂಟಪವು ಪಯಾಸ್‌ವಿವರಿಸುವ ಸ್ಥಳವೆಂದೇ ಜಾನ್‌ರವರು ಅಭಿಪ್ರಾಯಪಡುತ್ತಾರೆ.[11] ಪಯಾಸ್‌ನು ಉಲ್ಲೇಖಿಸಿದ ಕೆರೆಯು ಇದುವೇ ಆಗಿತ್ತೆಂದು ಮೇಲಿನ ಆಧಾರಗಳಿಂದ ಯಾವುದೇ ಅನುಮಾನವಿಲ್ಲದೆ ಹೇಳಬಹುದು. ಮೇಲೆ ವಿವರಿಸಿದ ಸ್ಥಳದಲ್ಲಿ ಕಬ್ಬಿಣದ ಅಂಶವಿರುವ ಪದಾರ್ಥ (Slag) ಇಂದಿಗೂ ದೊರಕುತ್ತವೆ.

ಈ ಕೆರೆಗೆ ಎರಡು ತೂಬುಗಳಿವೆ. ನೀರಾವರಿ ಇಲಾಖೆಯವರು ಯಾಂತ್ರಿಕ ಸಲಕರಣೆಯನ್ನು ಪ್ರಾಚೀನ ತೂಬಿಗೆ ಜೋಡಿಸಿ ಉಪಯೋಗಿಸುತ್ತಿದ್ದಾರೆ. ಅದರಲ್ಲಿ ಮರವನ್ನು ಅಳವಡಿಸಲಾಗಿದೆ. ಮತ್ತೊಂದು ತೂಬನ್ನು ಉಪಯೋಗಸದೆ, ಹೊಸ ಮಾದರಿಯ ತೂಬನ್ನು ಏರಿಗೆ ಅಳವಡಿಸಿದ್ದಾರೆ. ಈ ಕೆರೆಯ ಏರಿಯು ಸುಮಾರು ೧.೫ ಕಿ.ಮೀ.ಯಷ್ಟು ಉದ್ದವಿದೆ. ಇದರ ನೀರು ಸಂಗ್ರಹಣ ಸಾಮರ್ಥ್ಯವು ೧.೫ ಟಿ.ಎಂ.ಸಿ.ಯ (೪೫.೭ ಅಡಿಗಳು) ಈ ಕೆರೆಯು ಸುಮಾರು ಮುನ್ನೂರ ಐವತ್ತು ಎಕರೆಗೆ ನೀರುಣಿಸುತ್ತದೆ. ಕಬ್ಬು, ಬಾಳೆ, ಭತ್ತವನ್ನು ಇಲ್ಲಿ ಬೆಳೆಯಲಾಗುತ್ತಿದೆ.

ಇತ್ತೀಚೆಗೆ ಬಯಲುವದ್ದಿಗೇರಿಯ ಕೆರೆ ಏರಿಯಲ್ಲಿ ಒಂದು ಶಾಸನವು ಪತ್ತೆಯಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಆ ಕೆರೆಯನ್ನು ನಿರ್ಮಿಸಲಾಯಿತೆಂದು ಅದು ತಿಳಿಸುತ್ತದೆ.[12] ಅದರಂತೆಯೇ ಹೊಸಪೇಟೆಯ ಹೃದಯ ಭಾಗವಾದ ಬಸವಣ್ಣ ಬಡಾವಣೆಯಲ್ಲಿ ಶಾಸನ ಮತ್ತು ತೂಬು ಪತ್ತೆಯಾಗಿದೆ. ಈ ಭಾಗವು ವಿಜಯನಗರ ಕಾಲದಲ್ಲಿ ಕೆರೆಯಾಗಿತ್ತೆಂದು ಸಾಬೀತುಪಡಿಸುತ್ತದೆ.[13]

ಹಂಪಿ ಪರಿಸರದ ಕೆರೆಗಳನ್ನು ಕುರಿತು ಚರ್ಚಿಸುವಾಗ ಈ ದಿಸೆಯಲ್ಲಿ ಬಯಕಾರ ರಾಮಪ್ಪನ ಸಾಧನೆಗಳನ್ನು ಉಲ್ಲೇಖಿಸದಿದ್ದರೆ ಚರ್ಚೆಯು ಅಪೂರ್ಣವಾಗುತ್ತದೆ. ಬಯಕಾರ ರಾಮಪ್ಪನ ವಿಜಯನಗರದ ಅರಸನಾದ ಅಚ್ಯುತದೇವರಾಯನ ಕಾಲದಲ್ಲಿ ಕಂಡವೀಡು ರಾಜ್ಯದ ಅಧಿಪತಿಯಾಗಿದ್ದನು. ಈತ ಮೂಲತಃ ಆಂಧ್ರಪ್ರದೇಶದವನಾಗಿರಬೇಕು. ರಾಮಪ್ಪನು ಕೊಂಡವೀಡು ರಾಜ್ಯದ ಅಧಿಪತಿಯಾಗಿದ್ದರೂ ಹಂಪೆಯ ಬಳಿಯ ತಿಮ್ಮಲಾಪುರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೇ ಅವನ ಕಾರ್ಯಚಟುವಟಿಕೆಗಳು ಇದ್ದವು. ರಾಮಪ್ಪನು ಕೆಲವು ಅಗ್ರಹಾರಗಳನ್ನು ಸ್ಥಾಪಿಸಿ ದೇವಾಲಯಗಳನ್ನು ನಿರ್ಮಿಸಿ, ಕೆರೆಗಳನ್ನು ಕಟ್ಟಿಸಿದನೆಂದು ತನ್ನ ಶಾಸನಗಳಲ್ಲಿ ಹೇಳಿಕೊಂಡಿದ್ದಾನೆ.[14]

ಬಯಕಾರ ರಾಮಪ್ಪನು ತನ್ನ ರಕ್ತ ಸಂಬಂಧಿಗಳಿಗೆ ಪುಣ್ಯವಾಗಬೇಕೆಂದು ಅವರ ಹೆಸರಿನಲ್ಲಿ ಒಟ್ಟು ಹದಿನಾರು ಕೆರೆಗಳನ್ನು ಕಟ್ಟಿಸಿದ್ದಾನೆ. ಇವನ ಶಾಸನಗಳು ಬೇರೆ ಶಾಸನಗಳಿಗಿಂತ ಭಿನ್ನವಾಗಿದ್ದು ಶಾಸನದ ಮೊದಲ ಭಾಗವು ಕನ್ನಡ ಲಿಪಿ ಮತ್ತು ಭಾಷೆಯಲ್ಲಿದ್ದು ಕೆರೆಯನ್ನು ಯಾರ ಹೆಸರಿನಲ್ಲಿ ಕಟ್ಟಿಸಿದನೆಂದು ದಾಖಲಿಸಿರುತ್ತದೆ. ಶಾಸನದ ಎರಡೆಯ ಭಾಗವು ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದ್ದು ಅವನ ವಂಶಾವಳಿ, ಧರ್ಮ ಕಾರ್ಯಗಳ ವಿವರಣೆಯನ್ನು ನೀಡುತ್ತದೆ.

ಬಯಕಾರ ರಾಮಪ್ಪನ ಕಟ್ಟಲಾದ ಹದಿನಾರು ಕೆರೆಗಳು ಈ ರೀತಿಯಾಗಿವೆ.[15]

೧. ಬಾಚ ಸಮುದ್ರಂ, ೨. ರಾಮು ಸಮುದ್ರಮಂ, ೩. ಅಕ್ಕ ಸಮುದ್ರಂ, ೪. ಕಾಮು ಸಮುದ್ರಂ, ೫. ಅಮ್ಮ ಸಮುದ್ರಂ, ೬.ವೀರ ಸಮುದ್ರಂ, ೭. ಅಚ್ಯುತೇಂದ್ರ ಸಮುದ್ರಂ, ೮. ವೆಂಕಟೇಂದ್ರ ಸಮುದ್ರಂ, ೯. ಪಿಲನಕ್ಕ ಸಮುದ್ರಂ, ೧೦, ಚಿನತಿಪ್ಪ ಸಮುದ್ರಂ, ೧೧. ಪೇದಲಕ್ಕ ಸಮುದ್ರಂ,

೧೨. ಅಚ್ಯುತಮ್ಮ ಸಮುದ್ರಂ, ೧೩. ಲಿಂಗಾಲಯ್ಯ ತಾಟಕಂ, ೧೪. ವೆಂಕಟಯ್ಯ ತಟಾಕಂ, ೧೫. ಪೆದತಿಮ್ಮ ಸಮುದ್ರಂ, ೧೬. ಚಿನಬಾಚ ಸಮುದ್ರಂ.

ಮೇಲೆ ಉಲ್ಲೇಖಿಸಿದ ಕೆರೆಗಳಲ್ಲಿ ಕೆಲವೊಂದು ಇಂದಿಗೂ ಬಳಕೆಯಲ್ಲಿವೆ. ಕೆರೆಯ ಸಮೀಪವೇ ದೊರೆತ ಶಾಸನಗಳ ಆಧಾರದಿಂದ ಶಾಸನದಲ್ಲಿ ಹೆಸರಿಸಿರುವ ಕೆರೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಇತ್ತೀಚೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪುರಾತತ್ವಜ್ಞರಾದ ನರಸಿಂಹಮ್ ಅವರು ಬಯಕಾರ ರಾಮಪ್ಪನ ಹೊಸ ಶಾಸನಗಳನ್ನು ಸಂಶೋಧಿಸಿದ್ದಾರೆ.[16] ಅವರು ಕೆರೆಗಳನ್ನು ಶಾಸನಗಳ ಆಧಾರದಿಂದ ಸರಿಯಾಗಿ ಗುರುತಿಸಿರುತ್ತಾರೆ. ಈಗಾಗಲೇ ಪ್ರಕಟವಾಗಿರುವ ಸಂಡೂರು ತಾಲೂಕಿನ ಚಿಕ್ಕಕೆರೆಯಾಗಿನ ಹಳ್ಳಿಯ ಕೆರೆಯನ್ನು ಬಯಕಾರ ರಾಮಪ್ಪನ ತಾಯಿ ಹಿರಿಯ ಲಕ್ಕರಸಮ್ಮನಿಗೆ ಪುಣ್ಯವಾಗಬೇಕೆಂದು ಕ್ರಿ.ಶ. ೧೫೩೯ರಲ್ಲಿ ಕಟ್ಟಿಸಿದ್ದಾನೆ.[17] ಈ ಕೆರೆಯೇ ಹಿರಿಯಲಕ್ಕ (ಪೆದಲಕ್ಕ) ಸಮುದ್ರ ಕೆರೆ. ಇದೇ ತಾಲೂಕಿನ ಹುಲಿಕುಂಟೆ ಗ್ರಾಮದ ಕೆರೆಯನ್ನು ಅವನ ಮಗಳಾದ ಅಚ್ಯುತಮ್ಮನ ಹೆಸರಿನಲ್ಲಿ ನಿರ್ಮಿಸಲಾಗಿದೆ.[18] ಈ ಕೆರೆಯೇ ಅಚ್ಯುತ್ತಮ್ಮ ಸಮುದ್ರ. ಹೊಸಪೇಟೆ ತಾಲೂಕಿನ ಮಗಿಮಾವಿನ ಹಳ್ಳಿಯ ಶಾಸನವು ಅವನ ಇನ್ನೊಬ್ಬ ಮಗಳಾದ ಕಾಮಮ್ಮನ ಹೆಸರಿನಲ್ಲಿ ಕ್ರಿ.ಶ. ೧೫೪೪ರಲ್ಲಿ ಕಾಮಸಮುದ್ರವನ್ನು ನಿರ್ಮಿಸಿದನೆಂದು ಉಲ್ಲೇಖಿಸುತ್ತದೆ.

ಇತ್ತೀಚೆಗೆ ಸಂಶೋಧಿತ ನಾಲ್ಕು ಶಾಸನಗಳಿಂದ ಬಯಕಾರ ರಾಮಪ್ಪನ ಕಟ್ಟಿಸಿದ ನಾಲ್ಕು ಕೆರೆಗಳನ್ನು ನಾವು ಗುರುತಿಸಬಹುದಾಗಿದೆ. ಪೋತಲಕಟ್ಟೆ ಗ್ರಾಮದ ಕೆರೆ ಕೋಡಿಯ ಸಮೀಪ ದೊರೆತ ಶಾಸನವು ಅವನ ಮಗ ಆಕಪ್ಪನಿಗೆ ಪುಣ್ಯವಾಗಬೇಕೆಂದು ಕ್ರಿ.ಶ. ೧೫೩೯ರಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ.[19] ಈ ಕೆರೆಗೆ ಆಕ ಸಮುದ್ರವೆಂದು ಹೆಸರಿಡುತ್ತಾನೆ. ತಿಮ್ಮಲಾಪುರದ ಜಂಭಯ್ಯನ ಕೆರೆ ಶಾಸನದಿಂದ ಅದನ್ನು ಅವನ ಚಿಕ್ಕಪ್ಪ ಬಾಚರಸಯ್ಯನ ಹೆಸರಿನಲ್ಲಿ ಬಾಚಸಮುದ್ರ ಕೆರೆಯನ್ನು ಕ್ರಿ.ಶ. ೧೫೩೯ರಲ್ಲಿ ಕಟ್ಟಿಸಿದನು ಎಂದು ತಿಳಿಯಬಹುದು.[20] ಒಂಟಿಗೋಡು ತಾಂಡದ ಕೆರೆಯ ಸಮೀಪದ ಶಾಸನದಿಂದ ಬಯಕಾರ ರಾಮಪ್ಪನು ಅವನ ಪತ್ನಿ ವೀರಮ್ಮನಿಗೆ ಪುಣ್ಯವಾಗಲೋಸುಗ ವೀರಸಮುದ್ರ ಕೆರೆಯನ್ನು ಕ್ರಿ.ಶ. ೧೫೩೯ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ.[21] ನಂದಿಬಂಡೆ ಕೆರೆಯ ಶಾಸನವು ಅವನ ತಂದೆ ತಿಮ್ಮರಸಯ್ಯನಿಗೆ ಪುಣ್ಯವಾಗಬೇಕೆಂದು ಅವರ ಹೆಸರಿನಲ್ಲಿ ತಿಮ್ಮಸಮುದ್ರ ಕೆರೆಯನ್ನು ಕ್ರಿ.ಶ. ೧೫೩೯ರಲ್ಲಿ ಕಟ್ಟಿಸಿದನೆಂದು ದಾಖಲಿಸುತ್ತದೆ.[22] ಹೊಸಪೇಟೆ ತಾಲೂಕಿನ ಹರಪನಹಳ್ಳಿಯ ಮಾರುತಿ ಕೆರೆಯ ಸಮೀಪ ಒಂದು ಶಾಸನವು ದೊರಕಿದ್ದು ಅದರ ಕೆಳಭಾಗದ ೧೯ ಸಾಲುಗಳು ಮಾತ್ರವೆ ಇವೆ.[23] ಶಾಸನದ ಮೇಲ್ಭಾಗವು ಒಡೆದಿರುವ ಕಾರಣ, ಈ ಕೆರೆಯನ್ನು ಯಾರ ಹೆಸರಿನಲ್ಲಿ ನಿರ್ಮಿಸಿದನೆಂಬುದು ತಿಳಿದುಬಂದಿಲ್ಲ.

**ಕೋಷ್ಟಕ ೧: ಹಂಪಿ ಪರಿಸರದಲ್ಲಿರುವ ಕೆಲವು ಮುಖ್ಯ ಕೆರೆಗಳು**

| **ಕ್ರ.ಸಂ** | **ಕೆರೆಯ ಹೆಸರು** | **ತೂಬುಗಳು** | **ವಿವರಣೆ** |
|---|---|---|---|
| ೧. | ಪೋತಲಕಟ್ಟೆ ಕೆರೆ | ೧ | – |
| ೨. | ನಡುವಲ ಕೆರೆ | ೧ | – |
| ೩. | ಒಂಟಿಕೋಡು ತಾಂಡ ಕೆರೆ | ೧ | – |
| ೪. | ಜಂಭಯ್ಯನ ಕೆರೆ | ೧ | – |
| ೫. | ಚಿಕ್ಕಕೆರೆಯಾಗಿನಹಳ್ಳಿ ಕೆರೆ | ೨ | ಸಂಡೂರು ತಾಲೂಕು |
| ೬. | ಹುಲಿಕುಂಟೆ ಕೆರೆ | ೩ | ಸಂಡೂರು ತಾಲೂಕು |
| ೭. | ನಾಗೇನಹಳ್ಳಿ ಕೆರೆ | ೨ | – |
| ೮. | ರಾಯರ ಕೆರೆ | ೨ | – |

| | | | |
|---|---|---|---|
| ೯. | ಪೋತಲಕಟ್ಟೆ ಕೆರೆ | ೧ | ಶಿಥಿಲ |
| ೧೦. | ಗೌರಮ್ಮನ ಕೆರೆ | ೨ | – |
| ೧೧. | ವಿಠ್ಠಲಾಪುರ ಕೆರೆ | – | – |
| ೧೨. | ದರೋಜಿ ಕೆರೆ | ೪ | ಸಂಡೂರು ತಾಲೂಕು |
| ೧೩. | ಹಿರೇಕೆರೆ | ೪ | ಸಂಡೂರು ತಾಲೂಕು |
| ೧೪. | ದೇವಸಮುದ್ರ ಕೆರೆ | ೨ | – |
| ೧೫. | ದೇವಲಾಪುರ ಕೆರೆ | ೧ | – |
| ೧೬. | ಕಮಲಾಪುರ ಕೆರೆ | ೪ | – |
| ೧೭. | ಅಳ್ಳಿಕೆರೆ ಕೆರೆ | ೨ | – |
| ೧೮. | ಅಮ್ರುವತಿ ಕೆರೆ | ೧ | – |
| ೧೯. | ಭೈಲಗುಂದಿ ಕೆರೆ | ೧ | – |
| ೨೦. | ಕೂಡನಾಯಕನಹಳ್ಳಿ ಕೆರೆ | – | ಕೆರೆ ಕಟ್ಟೆ |
| ೨೧. | ಬಸವನದುರ್ಗ ಕೆರೆ | ೧ | – |
| ೨೨. | ಗುಡಿ ಓಬಳಾಪುರ ಕೆರೆ | ಇಲ್ಲ | – |
| ೨೩. | ಈಡಿಗರ ಕುಂಟೆ ಕೆರೆ | ೧ | – |
| ೨೪. | ವೆಂಕಟಾಪುರ ಕೆರೆ | ೧ | – |
| ೨೫. | ಸೀತಾರಾಂಪುರ ತಾಂಡಾ ಕೆರೆ | – | ಇಲ್ಲ |
| ೨೬. | ನಂದಿಬಂಡೆ ಕೆರೆ | ೧ | – |
| ೨೭. | ಉಪ್ಪಾರಹಳ್ಳಿ ಕೆರೆ | ೧ | – |
| ೨೮. | ಮಲಪನಗುಡಿ ಕೆರೆ | ೧ | – |
| ೨೯. | ವ್ಯಾಸನ ಕೆರೆ | – | – |
| ೩೦. | ನಾರಾಯಣದೇವನ ಕರೆ | – | – |
| ೩೧. | ಗೊಲ್ಲರಹಳ್ಳಿ ಹಿರೇಕೆರೆ | ೧ | – |
| ೩೨. | ಗೊಲ್ಲರಹಳ್ಳಿ ಚಿಕ್ಕಕೆರೆ | ೧ | – |
| ೩೩. | ಬುಕ್ಕಸಾಗರ ಬೆಳ್ಳಿಕೆರೆ | ೧ | – |
| ೩೪. | ಕಂಪ್ಲಿ ಸೋಮಪ್ಪ ಕೆರೆ | ೨ | – |
| ೩೫. | ಗರಗ ಸಣ್ಣ ಕೆರೆ | ೧ | – |
| ೩೬. | ಗರಗ ದೊಡ್ಡ ಕೆರೆ | ೧ | – |
| ೩೭. | ಇಂಗಳಗಿ ಚಿಕ್ಕಕೆರೆ | ೧ | – |
| ೩೮. | ಕಾಕಬಾಳು ಸಿಗಟ್ಟೆಕೆರೆ | ೧ | – |
| ೩೯. | ಚಿಲಕನ ಹಟ್ಟಿ ಜಾಮಿಗುಡ್ಡೆ ಕೆರೆ | ೧ | – |

| | | | |
|---|---|---|---|
| ೪೦. | ಡಣಾಯಕನ ಕೆರೆ | ೪ | ಅತೀ ದೊಡ್ಡ ಕೆರೆ |
| ೪೧. | ಮೆಟ್ರಿ ಈರಣ್ಣನ ಕೆರೆ | ೧ | – |
| ೪೨. | ಬೈಲುವದ್ದಿಗೇರಿ ಗಂಜಿನಗುಂಟೆ ಕೆರೆ | ೧ | – |
| ೪೩. | ಬೈಲುವದ್ದಿಗೇರೆ ಹಿರೇಕೆರೆ | ೧ | – |
| ೪೪. | ಬೈಲುವದ್ದಿಗೇರೆ ಚಿಕ್ಕ ಕೆರೆ | – | – |
| ೪೫. | ಅಯ್ಯನಹಳ್ಳಿ ಕೆರೆ | ೧ | – |
| ೪೬. | ಕೆ.ತಿಮ್ಮಾಪುರ ಹಿರೇಕೆರೆ | ೧ | – |
| ೪೭. | ಹಾರೋನಹಳ್ಳಿ ಕೆರೆ (ಅಮ್ಮಸಮುದ್ರ ಕೆರೆ) (ಮಾರಗಪಯನ ಕೆರೆ) | ೧ | – |
| ೪೮. | ಡಾಣಪುರ ಮೌದನಾಯಕನ ಕೆರೆ | ೧ | – |
| ೪೯. | ತಾಳೆ ಬಸಾಪುರಕೆರೆ | ೧ | – |
| ೫೦. | ತಾಳೆ ಬಸಾಪುರ ಒಂಟಿಕೆರೆ | ೧ | – |
| ೫೧. | ನಾಗಲಾಪುರ ಕಾಟ್ವಣಕೆರೆ | ೧ | – |
| ೫೨. | ನಾಗಲಾಪುರ ಕೆರೆ | ೧ | – |
| ೫೩. | ಭೂಪತಿ ಕೆರೆ | – | – |
| ೫೪. | ಯಲ್ಲಪ್ಪಣ್ಣ ಕೆರೆ | ೧ | – |
| ೫೫. | ಚಿಕ್ಕಹಂಸನ ಕೆರೆ | – | – |

**ಆಕರ**

ಹಂಪಿ ಪರಿಸರದ ಕೆರೆಗಳು, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ಆಧರಿಸಿದೆ.

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಕಲಬುರ್ಗಿ ಎಂ.ಎಂ., (ಸಂ.), ಕರ್ನಾಟಕದ ಕೃಫಿಯತ್ತುಗಳು, ಪು. ೫೦೮

[2] ಅದೇ, ಪು. ೫೦೯

[3] ಅದೇ, ಪು. ೫೧೧

[4] ಅದೇ, ಪು. ೫೧೭

[5] ಫ್ರಾನ್ಸ್‌ಸ್, ಡಬ್ಲ್ಯು, (ಸಂ.), ಮದ್ರಾಸ್‌ಡಿಸ್ಟ್ರಿಕ್ಟ್‌ಗ್ಯಾಸೆಟಿಯ್, ಬಳ್ಳಾರಿ

[6] ದೀಕ್ಷಿತ ಜಿ.ಎಸ್. ಮತ್ತು ಇತರರು, ಪೂರ್ವೋಕ್ತ, ಪು. ೨೬೪

[7] ಕಲಬುರ್ಗಿ ಎಂ.ಎಂ., (ಸಂ.), ಪೂರ್ವೋಕ್ತ, ಪು. ೫೧೭

[8] ಡಾಮ್‌ನಿಕ್‌ಜೆ., ಡೆವಿಸನ್‌ಜೆನ್‌ಕಿನ್ಸ್, ಪೂರ್ವೋಕ್ತ, ಪು. ೪೯-೫೬

[9] ಸಿವೆಲ್ ಆ., ಎ ಫರ್ಗಾಟೆನ್‌ಎಂಪೈರ್, ಪು. ೨೩೬-೯೦

[10] ಜಾನ್ ಎಂ. ಫ್ರಿಟ್ಜ್, "ಎಲಿವೇಟೆಡ್‌ಫ್ಲಾಟ್‌ಫಾರಂ ನಿಯರ್ ಕಮಲಾಪುರಂ", ವಿಜಯನಗರ ಪ್ರೋಗೇಸ್‌ಆಫ್‌ರಿಸರ್ಚ್, ೧೯೮೭-೮೮, ಪು. ೧೦೫-೧೧೨

[11] ಅದೇ, ಪು. ೧೧೧

[12] ಈ ಶಾಸನವನ್ನು ಡಾ. ಬಾಲಸುಬ್ರಮಣ್ಯ ಪತ್ತೆ ಹಚ್ಚಿದ್ದಾರೆ. ಅವರು ನೀಡಿದ ಮಾಹಿತಿಗೆ ಕೃತಜ್ಞನಾಗಿದ್ದೇನೆ.

[13] ವಿಜಯನಗರ ಅರಸ ಕೃಷ್ಣದೇವರಾಯನ ಶಾಸನವನ್ನು ಮತ್ತೆ ಹಚ್ಚಿ ಅದರ ಪಾಠವನ್ನು ಪ್ರೊ. ಲಕ್ಷ್ಮಣ್ ತೆಲಗಾವಿಯವರು ಪ್ರಕಟಿಸಿರುತ್ತಾರೆ. ಈ ಶಾಸನಕ್ಕೆ ಗುಡಿಯನ್ನು ಕಟ್ಟಿ ಪೂಜಿಸಲಾಗುತ್ತಿದೆ. ಶ್ರೀ ಕೃಷ್ಣದೇವರಾಯನು ತಿರುಮಲದೇವಿಯರ ಪಟ್ಟಣದ ನಾಲ್ಕು ಬಾಗಿಲ ಬಳಿಯ ಶ್ರೀ ಕಾಶಿವಿಶ್ವೇಶ್ವರನ (ಶ್ರೀ ಕಾಶಿವಿಶ್ವನಾಥನ ದೇವರ) ಪ್ರತಿಷ್ಠಾ ಕಾಲದಲ್ಲಿ ಆ ದೇವರ ಪೂಜೆ ನೈವೇದ್ಯಗಳಿಗಾಗಿ ಆ ಪಟ್ಟಣದ ಕೋಟೆ ಪಶ್ಚಿಮಕ್ಕೆಯಿದ್ದ ಯಲ್ಲಪ್ಪಣ್ಣ ಕೆರೆಯನ್ನು ಆ ದೇವರಿಗೆ ಧಾರೆಯನೆರೆದು ಕೊಟ್ಟನೆಂದು ಶಾಸನ ಹೇಳುತ್ತದೆ. ಇದರಿಂದ ಈ ಕೆರೆಯು ಕೃಷ್ಣದೇವರಾಯನ ಆಳ್ವಿಕೆಯ ಪೂರ್ವದ ಕೆರೆಯಿರಬೇಕೆಂದು ಲಕ್ಷ್ಮಣ್ ತೆಲಗಾವಿಯವರು ಸರಿಯಾಗಿ ಅಭಿಪ್ರಾಯಪಟ್ಟಿದ್ದಾರೆ. ಶಾಸನದಂತೆ ಈ ಕೆರೆಯ ದಕ್ಷಿಣ ದಿಕ್ಕಿನ ದಂಡೆ ಮತ್ತು ಕೆರೆಯ ಹಿಂಬದಿಯ ಜಲಾವೃತ ಮೇರೆಯಲ್ಲಿ ತಿರುಮಲ ದೇವಿಯವರ ಪಟ್ಟಣದ ಕೋಟೆಯ ಅಗಳಿನವರೆಗೆ ವಿಸ್ತರಿಸಿತ್ತು. ಕೋಟೆ ಅಗಳಿಯ ಪ್ರಸ್ತಾಪಿಸಿರುವುದರಿಂದ ಅಗಳಿಗೆ ಈ ಕೆರೆಯ ನೀರನ್ನು ಅವಶೇಷ ಮತ್ತು ಇತರ ರಚನೆಗಳನ್ನು ಇಂದಿಗೂ ಕಾಣಬಹುದು. ನೋಡಿ ಲಕ್ಷ್ಮಣ್ ತೆಲಗಾವಿ, 'ಕೃಷ್ಣದೇವರಾಯನ ಇನ್ನೊಂದು ಹೊಸ ಶಾಸನ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೭೫, ಸಂಚಿಕೆ ೨, ದೀಪಾವಳಿ ಸಂಚಿಕೆ, ೧೯೯೭, ಪು. ೨೨-೨೭, ಇದನ್ನು ನನ್ನ ಗಮನಕ್ಕೆ ತಂದ ಪ್ರೊ. ಲಕ್ಷ್ಮಣ ತೆಲಗಾವಿ ಅವರಿಗೆ ಕೃತಜ್ಞನಾಗಿದ್ದೇನೆ.

[14] ಎಸ್‌ಐಐ, ಸಂ. ಭಾಗ ಸಂ. ೫೯೩ ಮತ್ತು ೬೮೦ ಎಆರ್ ಎಪ್, ೧೯೧೫, ಭಾಗ.. ಪ್ಯಾರ ೫೧, ಶಿವರುದ್ರಸ್ವಾಮಿ ಎಸ್.ಎನ್., ಬಯಕಾರ ರಾಮಪ್ಪ, ಪು. ೧೦೧೨ ಇವನಿಗೆ ಸ್ವರಮೇಳ ಕಳಾನಿಧಿ ಎಂಬ ಬಿರುದನ್ನು ಹೊಂದಿದ್ದ. ಅವನು ದಕ್ಷ ಆಡಳಿತಗಾರನಾಗಿ ಅನೇಕ ಪ್ರಜಾಹಿತ್ಮಾಕ ಕೆಲಸಗಳನ್ನು ಮಾಡಿದ್ದಾನೆ.

[15] ಎಸ್‌ಐಐ. ಸಂ. I X ಭಾಗ II ಸಂ. ೫೯೩

[16] ಶಾಸನ ಪಾಠವನ್ನು ಶ್ರೀ ನರಸಿಂಹಮ್‌ರವರು ನನಗೆ ಒದಗಿಸಿದ್ದಾರೆ.

[17] ಎಸ್‌ಐಐ, ಸಂ. I X ಭಾಗ II ಸಂ. ೫೯೩

[18] ಅದೇ, ಸಂ. ೬೮೦

[19] ನರಸಿಂಹಮ್, ಡಬ್ಲ್ಯು ವಿ.ಎಸ್., "ಬಯಕಾರ ರಾಮಪ್ಪನ ೧೬ನೆಯ ಶತಮಾನದ ಕೆಲವು ಹೊಸ ಶಾಸನಗಳು"...., ಇತಿಹಾಸ ದರ್ಶನ, ಸಂ. ೧೧, ಪು. ೧೨೫

[20] ಅದೇ,

[21] ಅದೇ,

[22] ಅದೇ,

[23] ಹೊಸಪೇಟೆ ತಾಲೂಕನ್ನು ಆವರಿಸಿರುವ ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡರೆ, ಬಯಕಾರ ರಾಮಪ್ಪನ ಇನ್ನೂ ಕೆಲವು ಶಾಸನಗಳು ದೊರಕುವ ಸಾಧ್ಯತೆಗಳಿವೆ.

# ೪೪. ಬಾವಿ ಮತ್ತು ಊಟೆ ಬಾವಿ ನೀರಾವರಿ

ವಿಜಯನಗರ ಸಾಮ್ರಾಜ್ಯದ ಬಹುಪಾಲು ಭೂಪ್ರದೇಶವು ಅಲ್ಪಾವಧಿಯ ಮುಂಗಾರು (ಮಾನ್‌ಸೂನ್) ಮಳೆಯ ಮೇಲೆ ಅವಲಂಬಿತವಾಗಿತ್ತು. ತುಂಗಭದ್ರೆ ಹಾಗೂ ಕಾವೇರಿ ಎರಡೇ ಸರ್ವಋತು ನದಿಗಳಾಗಿದ್ದು ಮಿಕ್ಕ ನದಿಗಳು, ಹಳ್ಳಗಳು ಕೇವಲ ಮಳೆಗಾಲದಲ್ಲಿ ಹರಿಯುತ್ತಿದ್ದವು. ಈ ಕಾರಣದಿಂದಾಗಿ ನೀರಾವರಿ ಕಾರ್ಯಗಳಿಗೆ ಅಂದಿನವರು ವಿವಿಧ ಕ್ರಮ ಕೈಗೊಂಡರು. ಮೇಲೆ ವಿವರಿಸಿದ ನದಿ ಮತ್ತು ಕೆರೆ ನೀರಾವರಿಯ ವಿಧಾನದಿಂದ ನೀರಾವರಿ ಕಾರ್ಯಗಳ ಅವಶ್ಯಕತೆ ಸಂಪೂರ್ಣವಾಗಿ ನಿವಾರಿಸಲಾಗುತ್ತಿದ್ದಿಲ್ಲ. ಹೀಗಾಗಿ ಅವರು ಅಂತರ್ಜಲ ಮೂಲಗಳನ್ನೂ ಅವಲಂಬಿಸಲೇಬೇಕಾಯಿತು. ಇದರಿಂದ ಪ್ರದೇಶ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಬಾವಿಗಳನ್ನು ಅಗೆದು ಬೇಸಾಯಕ್ಕೆ ಬಳಸಿಕೊಂಡರು. ವಿಧವಾದ ಬಾವಿ ನೀರಾವರಿಯಿಂದ ಒಂದರಿಂದ ಇಪ್ಪತ್ತು ಎಕರೆ ಭೂಮಿಗೆ ನೀರುಣಿಸಬಹುದಾಗಿತ್ತು. ಹೀಗೆ ಬಾವಿ ನೀರಾವರಿ ಕಾರ್ಯ ಸ್ಥಳೀಯ ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಸಾಧ್ಯವಾಗುತ್ತಿತ್ತು. ಆದರೂ ಅದು ಅನಿವಾರ್ಯವಾಗಿತ್ತು. ಹೀಗಾಗಿ ನದಿ ಮತ್ತು ಕಾಲುವೆಗಳಿಂದ ದೂರದಲ್ಲಿರುವ ಪ್ರದೇಶಗಳಲ್ಲಿ ನೂರಾರು ಬಾವಿಗಳು ತಲೆ ಎತ್ತಿದವು. ಇದಲ್ಲದೆ ಭಾರತೀಯ ಧರ್ಮದಲ್ಲಿ ಬಾವಿಗಳಿಗೆ ಪವಿತ್ರ ಸ್ಥಾನವೂ ಇದ್ದುದರಿಂದ ಅವು ಅಧಿಕ ಸಂಖ್ಯೆಯಲ್ಲಿ ಜಾರಿಯಲ್ಲಿದ್ದವು.

ಹೀಗೆ ತೋಡಲಾದ ಬಾವಿಗಳಿಂದ ನೀರನ್ನು ತಾಂತ್ರಿಕ ವಿಧಾನಗಳಿಂದ ಮೇಲೆತ್ತಿ ಸಾಗುವಳಿಗೆ ಬೇಕಾದ ನೀರನ್ನು ಪಡೆಯಲಾಗುತ್ತಿತ್ತು. ಕ್ರಿ.ಶ. ೧೯೦೭ರಲ್ಲಿಯ ಸರ್ವೇಕ್ಷಣ (ಸರ್ವೇ) ಕಾರ್ಯದಂತೆ ಭಾರತದ ಶೇಕಡಾ ೩೦ ನೀರಾವರಿ ಕಾರ್ಯಗಳು ಬಾವಿಗಳಿಂದಲೇ ಜರುಗುತ್ತಿತ್ತು.[1] ಈ ಅಂಕಿಸಂಖ್ಯೆಗಳು ಭಾರತದ ನೀರಾವರಿಯಲ್ಲಿ ಬಾವಿಗಳಿಗೆ ಇದ್ದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ನಮ್ಮ ಈ ಅಧ್ಯಯನದಲ್ಲಿ ಎರಡು ವಿಧವಾದ ಬಾವಿಗಳನ್ನು ಕಾಣಬಹುದು. ಮೊದಲನೆಯ ವರ್ಗವೆಂದರೆ ಖಾಯಂ ಆಗಿ ನೀರು ದೊರೆಯುವ ಸರ್ವಋತು ಬಾವಿಗಳು, ಎರಡನೆಯ ವರ್ಗದ ಬಾವಿಗಳೆಂದರೆ ನದಿ ಹಾಗೂ ಹಳ್ಳಗಳಲ್ಲಿ ತಾತ್ಕಾಲಿಕವಾಗಿ ತೋಡಲಾದ ಬಾವಿಗಳು, ಇವನ್ನು 'ಒರತೆಗಳು' ಎಂದೂ ಕರೆಯುತ್ತಾರೆ. ಯಾವುದೇ ಬಗೆಯ ಬಾವಿಗಳೇ ಇದ್ದರೂ ಅವು ಅಧಿಕ ಪ್ರದೇಶಗಳಿಗೆ ನೀರು ನೀಡುವ ಸಾಮರ್ಥ್ಯ ಹೊಂದಿರುತ್ತಿರಲಿಲ್ಲ. ಹೀಗಾಗಿ ಈ ದಿಶೆಯಲ್ಲಿ ನಮಗೆ ನದಿ ನೀರಾವರಿಯಲ್ಲಿ ದೊರಕಿದಂತೆ ವಿಫುಲ ಮಾಹಿತಿ ದೊರೆಯುವುದಿಲ್ಲ.

ಈಗಾಗಲೇ ವಿವರಿಸಿದ ನೀರಾವರಿ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕವಾಗಿ ಬಾವಿಗಳಿಗೆ ತನ್ನದೇ ಆದ ಸ್ಥಾನ ಇದೆ ಎಂಬುದನ್ನು ಮರೆಯಲಾಗದು. ಏಕೆಂದರೆ ವಿಷ್ಣುಧರ್ಮೋತ್ತರದಲ್ಲಿ ಸಾರ್ವಜನಿಕರ ಹಿತಕ್ಕಾಗಿ ಬಾವಿ ಅಗೆಸಿದವನು ವರುಣ ಲೋಕದಲ್ಲಿ ಸ್ಥಾನ ಪಡೆಯುತ್ತಾನೆ ಎಂದು ತಿಳಿಸಿದೆ.[2] ಸಾಹಿತ್ಯ ಕೃತಿಗಳಾದ ಬಾಣನ ಬರಹ ಹಾಗೂ ಮಿಶ್ರ ಚಕ್ರಪಾಣಿಯ ವಿಶ್ವವಲ್ಲಭ ಮುಂತಾದ ಪುರಾತನ ಗ್ರಂಥಗಳಲ್ಲಿ ಬಾವಿಗಳ ಬಗೆಗೆ ಪವಿತ್ರ ಮತ್ತು ಪುಣ್ಯಭಾವನೆಗಳನ್ನು ವ್ಯಕ್ತಪಡಿಸಿದೆ.[3] ವಿವಿಧ ಹೆಸರಿನ ಬಾವಿಗಳನ್ನು ತಿಳಿಸಲಾಗಿದ್ದು, ಅವು ಹೀಗಿವೆ ಶ್ರೀಮುಖ, ವಿಜಯ, ಪ್ರಾಂತ, ಧುಂದುಬಿ, ಮನೋಹರ, ಚೂಡಾಮಣಿ, ಭದ್ರ, ಜಯ, ಮಂದ ಮತ್ತು ಶಂಕರ.[4]

ಬಾವಿಗಳು, ನೀರಾವರಿ ಉಪಯೋಗಕ್ಕಲ್ಲದೆ, ಮಾನವರ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಅಂಗಗಳಾಗಿದ್ದವು. ಅನೇಕ ವೇಳೆ ಅವು ದೇವಾಲಯದ ಹಾಗೂ ದೇವರುಗಳ ವಿವಿಧ ಕಾರ್ಯಗಳಿಗೆಂದೇ ನಿರ್ಮಿಸಲಾಗಿದ್ದವು. ಅನೇಕ ಶುಭ ಕಾರ್ಯಗಳಿಗೆಂದೇ ಜನರು ಇಂದಿಗೂ ಬಾವಿಗಳನ್ನು ಅವಲಂಬಿಸಿದ್ದಾರೆ. ಬಾವಿಯಲ್ಲಿ ಗಂಗಮ್ಮ ಇರುತ್ತಾಳೆ ಎಂದೇ ಅನೇಕರು ಭಾವನೆಯಾಗಿದೆ. ವಿಜಯನಗರ ಅವಧಿಯ ಒಂದು ಶಾಸನವು ಬಾವಿಗಳನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ. ಈ ದಿಶೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಲಕ್ಷ್ಮಣ, ಅಮಾತ್ಯಗೆ ಅವನ ತಾಯಿಯ ಉಪದೇಶ 'ಕೆರೆಯಂ ನಿರ್ಮಿಸು ಬಾವಿಯಂ ಸವೆಯಿಸು' ಎಂಬುದನ್ನು ಸ್ಮರಿಸಬಹುದು.[5]

ಹಿಂದಿನ ಕಾಲದಲ್ಲಿ ನೀರು ಎಲ್ಲಿ ದೊರೆಯಬಹುದು ಎಂಬುದನ್ನು ತಿಳಿಯಲು ವಿವಿಧ ಮಾರ್ಗಗಳನ್ನು, ಜನರು ತಮ್ಮ ಅನುಭವದಿಂದ ಅರಿತಿದ್ದರು. ಈ ವಿಧಾನಗಳು ಪ್ರದೇಶದಿಂದ, ಪ್ರದೇಶಕ್ಕೆ ವಿಭಿನ್ನವಾಗಿದ್ದವು. ಜಲ ಸಂಶೋಧಕರು ತಮ್ಮದೇ ಆದ ವಿಧಾನಗಳಿಂದ, ಎಲ್ಲಿ

ನೀರು ದೊರೆಯಬಹುದು ಎಂಬ ಸ್ಥಳಗಳನ್ನು ಗುರುತಿಸುತ್ತಿದ್ದರು. ಆ ಸ್ಥಳಗಳಲ್ಲಿ ಬಾವಿಯನ್ನು ತೋಡುತ್ತಿದ್ದರು. ಹಲವು ಜನ ಸಂಶೋಧಕರು ಆಲದ ಮರದ ಕವಲು ರೆಂಬೆಯ ಸಹಾಯದಿಂದ ನೀರಿರುವ ಜಾಗವನ್ನು ಪತ್ತೆ ಹಚ್ಚುತ್ತಿದ್ದರು. ಹನ್ನೊಂದನೆಯ ಶತಮಾನಕ್ಕೆ ಸೇರಿದ 'ಲೋಕೋಪಕಾರ' ಎಂಬ ಕನ್ನಡ ಕೃತಿಯಲ್ಲಿ ಜಲಸಂಶೋಧನೆಯ ಕುರಿತು ಒಂದು ಅಧ್ಯಾಯವನ್ನೇ ಹೊಂದಿದೆ. ಅದು ಹಲವಾರು ಗಿಡ, ಬಳ್ಳಿಗಳು ಬೆಳೆದಿದ್ದರೆ ಅದರಡಿಯಲ್ಲಿ ನೀರು ದೊರೆಯುತ್ತದೆ ಎಂಬುದನ್ನು ಸೂಚಿಸಿದೆ. ಅದು ಹೇಳುವಂತೆ ಆಲದ ಮರ, ಅಂಜೂರಗಿಡ ಮತ್ತು ಹಾವಿನ ಹುತ್ತು, ಪಚ್ಚೆಕಲ್ಲು, ಅಭ್ರಕ ಹಾಗೂ ಪಾದರಸ, ಲೋಹಗಳು ಇರುವ ಸ್ಥಾನದಲ್ಲಿ ನೀರು ಇರುತ್ತದೆ ಎಂದು ಹೇಳಿದೆ.[6] ಕೊಯಂಬತ್ತೂರು ಪ್ರದೇಶದಲ್ಲಿ ಒಂದು ವಿಚಿತ್ರ ವಿಧಾನವಿದೆ. ಅದೇನೆಂದರೆ ಒಂದು ವಿಶೇಷ ಮಾದರಿಯ ಕುರಿಯ ತಲೆಯ ಮೇಲೆ ನೀರು ಸುರಿಯಲಾಗುತ್ತದೆ. ಆ ಕುರಿ ಯಾವ ಜಾಗದಲ್ಲಿ ನಿಂತು ತನ್ನ ತಲೆಯ ಮೇಲಿನ ನೀರನ್ನು ಕೊಡಸಿಕೊಳ್ಳುವುದೋ ಆ ಸ್ಥಳ ಜಲಸಂಪನ್ಮೂಲದಿಂದ ಕೂಡಿದೆ ಎಂದು ಭಾವಿಸಬೇಕು. ಹಾಗೂ ಅಲ್ಲಿ ಬಾವಿಯನ್ನು ಅಗೆಸಬೇಕು.[7] ಹೀಗೆ ಜನರಲ್ಲಿ ಜಲಸಂಪನ್ಮೂಲಗಳ ಬಗೆಗೆ ವಿವಿಧ ನಂಬಿಕೆಗಳಿದ್ದವು. ಆದರೆ ಈ ವಿಧಾನಗಳೆಲ್ಲವೂ ನಿಜವೆಂದೇ ಭಾವಿಸಬಾರದು. ಅನೇಕ ಬಾರಿ ನಾವು ಎಣಿಸಿದ ಫಲ ದೊರೆಯದೇ ಹೋಗಲೂಬಹುದು.

ಸಾಮಾನ್ಯವಾಗಿ, ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿನಿಂದ ಹೊರಗಡೆಯ ಪ್ರದೇಶಗಳಾದ ಹೊಲ, ತೋಟ ಗದ್ದೆಗಳಲ್ಲಿರುತ್ತಿದ್ದವು. ಆದರೆ ಜನರಿಗೆ ಕುಡಿಯಲು ಮತ್ತು ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಗಳಿಗೆಂದೇ ತೆಗೆಸಿದ ಬಾವಿಗಳು ಜನವಸತಿ ಪ್ರದೇಶದಲ್ಲಿರುತ್ತಿದ್ದವು. ಇವುಗಳ ರಚನೆ ಸಂಕಿರಣತೆಯಿಂದ ಒಡಗೂಡಿರುತ್ತಿತ್ತು. ಏಕೆಂದರೆ ಕೆಲವು ಬಾವಿಗಳು ದೇವತಾ ಮೂರ್ತಿಗಳಿಂದಲೂ, ಮಂಟಪಗಳಿಂದಲೂ, ನಾಲ್ಕೂ ಬದಿಯಲ್ಲಿ ಪಾವಟಿಗೆಗಳಿಂದಲೂ ಒಡಗೂಡಿರುತ್ತಿದ್ದವು. ಅದೇ ಸಮಯದಲ್ಲಿ ಅವು ದೇವಸ್ಥಾನದ ಹೂದೋಟಕ್ಕೆ ನೀರುಣಿಸುತ್ತಿದ್ದುದ್ದುಂಟು. ಈಚಿನ ದಿನಗಳಲ್ಲಿ ವಿಜಯನಗರ ಪಟ್ಟಣದಲ್ಲಿ ಈ ಬಗೆಗೆ ಹಲವಾರು ಶಾಸನಗಳು ದೊರೆತಿವೆ. ಅವು ಅನೇಕ ವಿವರಗಳಿಂದ ಕೂಡಿವೆ.

ಕ್ರಿ.ಶ. ೧೩೮೦ ಎರಡನೆ ಹರಿಹರರಾಯನು ಅಳುತ್ತಿದ್ದಾಗ ಒಂದು "ಒರ್ತೆಕುಂಡ"ವನ್ನು ಬಡ್ಡೆಯ ನಾಯಕ ಎಂಬ ಬೇಟೆಗಾರ ಯಡವಂಕ ಎಂಬಲ್ಲಿದ್ದ ಊಟೆಯ ಬಳಿ ಕೊಳ ಒಂದನ್ನು ನಿರ್ಮಿಸಿದ. ಅವನು ಅರಸನ ಆಸ್ಥಾನದ ಸೇವಕನಾಗಿದ್ದ. ಈ ಊಟೆಯ ಬಾವಿಯನ್ನು ಮೈಲಾರ ದೇವನ ಪವಿತ್ರ ಅಭಿಷೇಕದ ನೀರಿಗೆಂದೇ ಅಗೆಸಲಾಗಿತ್ತು ಹೀಗಾಗಿ ಆ ದೇವರನ್ನು 'ವರ್ತಿಯ ಮೈಲಾರದೇವ'ನೆಂದೇ ಕರೆಯಲಾಯಿತು. ಅದೇ ಸಮಯದಲ್ಲಿ ದೇವಸ್ಥಾನದ ಆಗ್ನೇಯ ಭಾಗದಲ್ಲಿ ಆಲದ ಮರಗಳನ್ನೂ ನೆಡಲಾಯಿತು. ಮೇಲೆ ಹೇಳಿದಂತೆ ಈ ಬಾವಿಯನ್ನು ದೇವಸ್ಥಾನದ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಉಪಯೋಗಿಸಲಾಗುತ್ತಿತ್ತು. ಈ ಶಾಸನವು ಹಂಪಿಯಲ್ಲಿದೆ.[8] ಮತ್ತೊಂದು ಕ್ರಿ.ಶ. ೧೩೭೭ರ ಶಾಸನವು ಭಕ್ತರನಾಗಪ್ಪ ಎಂಬುವನು ಒಂದು ಬಾವಿಯನ್ನು ಹಾಗೂ ಅದರ ಬಳಿಯಲ್ಲಿ ಒಂದು ಅಶ್ವತ್ಥ ವೃಕ್ಷವನ್ನೂ ನೆಡಿಸಿದನು. ಈ ಕಾರಣದಿಂದಾಗಿ ಈ ಸ್ಥಳವನ್ನು ಒಂದು ತೀರ್ಥವೆಂದೇ ಭಾವಿಸಿದರು. ಈ ದಾಖಲೆಯನ್ನೂ ಹಂಪೆಯಿಂದಲೇ ಪಡೆಯಲಾಗಿದೆ.[9] ಕ್ರಿ.ಶ. ೧೩೯೦ರ ಒಂದು ಹಂಪೆಯ ಶಾಸನದಂತೆ ಈ ಭಕ್ತರ ನಾಗಪ್ಪನು ಕ್ರಿಯಾಶಕ್ತಿ ಒಡೆಯರ ಶಿಷ್ಯನಾಗಿದ್ದು ಮತ್ತೊಂದು ಬಾವಿಯನ್ನು ಕಟ್ಟಿಸಿದ್ದನು. ಈ ಬಾವಿಯು ಗಣೇಶ ಮಂದಿರ ಮತ್ತು ಅಶ್ವಥ್ ವೃಕ್ಷವನ್ನು ಹೊಂದಿತ್ತು. ಈ ಎಲ್ಲಾ ಕಾರ್ಯಗಳೂ ಒಂದೇ ಸಮಯದಲ್ಲಿ ಜರುಗಿರಬಹುದು.[10] ಹಂಪಿಯ ಎರಡು ತೇದಿಗಳಲ್ಲಿದ್ದ ಶಾಸನಗಳು ಲಿಂಗಬಾವಿ ಹಾಗೂ ರಂಗನಾಥುನಿ ಬಾವಿ ಎಂಬ ಎರಡು ಬಾವಿಗಳನ್ನು ಪ್ರಸ್ತಾಪಿಸಿದೆ. ಬಹುಶಃ ಈ ಎರಡು ಬಾವಿಗಳು ಅವು ಹೊಂದಿದ್ದ ದೇವರುಗಳನ್ನು ಸೂಚಿಸುತ್ತವೆ.[11] ಅದೇ ಸ್ಥಳದಲ್ಲಿ ಮತ್ತೊಂದು ಶಾಸನವು ಪಿಲಿಕುಮಚಲಕನು, ಭೈರವನಿಗೆ ಒಂದು ಬಾವಿಯನ್ನು ನೀಡಿರುವುದನ್ನು ತಿಳಿಸುತ್ತದೆ.[12]

ಅದೇ ಸ್ಥಲದಲ್ಲಿ ದೊರೆತ ಮತ್ತೊಂದು ಶಾಸನವು ನಾರಸಿಮಠದ ನಂಜದೇವನೆಂಬ ಗುರುವಿಗೆ ದೇವರಪಲ್ಲಿ ಮುಮ್ಮಡಿಶೆಟ್ಟಿ ಎಂಬ ವರ್ತಕನು ಭೂಮಿ ಹಾಗೂ ಒಂದು ಬಾವಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.[13]

ತುಮಕೂರು ಜಿಲ್ಲೆಯ ತಟಸಂದ್ರ ಹಳ್ಳಿಯ ಬಳ್ಳಿಯ ತೇದಿಯಿಲ್ಲದ ಒಂದು ಶಾಸನವು ಒಕ್ಕರಣೆ ಬಾವಿಯ ಬಗೆಗೆ ಪ್ರಸ್ತಾಪಿಸಿದೆ. ಒಕ್ಕರಣೆ ಪದವು ಕನ್ನಡದಲ್ಲಿ ಪುಷ್ಕರಣಿಗೆ ಸರಿಸಮವಾದುದು. ಪುಷ್ಕರಣಿ ಎಂದರೆ ದೇವಸ್ಥಾನದ ಬದಿಯಲ್ಲಿರುವ ಬಾವಿ. ಇದನ್ನು ಕೇವಲ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಉಪಯೋಗಿಸುತ್ತಾರೆ. ತಟಸಂದ್ರ ಹೆಸರೇ ಒಂದು ಕೆರೆಯನ್ನು ಸೂಚಿಸುತ್ತದೆ. ಕೆರೆಯ ಹೆಸರನ್ನೇ ಊರಿಗೆ ಇಡಲಾಗಿದೆ. ಈ ಒಕ್ಕರಣೆ ಬಾವಿಯನ್ನು, ಓರ್ವ ಅಧಿಕಾರ ಗಿರಿಯಣ್ಣ ನಾಯಕನು ಆನಂದ ಸಂವತ್ಸರದಲ್ಲಿ ನಿರ್ಮಿಸಿದನಂತೆ.[14]

ಈ ಒಂದು ಹಿನ್ನೆಲೆಯಲ್ಲಿ ಮಲಪನಗುಡಿಯ ಒಂದು ದಾಖಲೆಯ ತುಂಬಾ ಕುತೂಹಲಕಾರಿಯಾಗಿದೆ. ಮಲಪನಗುಡಿಯು ಹಿಂದೆ ವಿಜಯನಗರದ ಪರಿಮಿತಿಯಲ್ಲಿದ್ದುದರಿಂದ ಈ ಶಾಸನಕ್ಕೆ ಅಧಿಕ ಮಹತ್ವ. ಈ ಶಾಸನವು ಕ್ರಿ.ಶ. ೧೪೧೨ಕ್ಕೆ ಸೇರಿದೆ. ಇದು ಹೇಳುವಂತೆ ಮಾಳಿಕೆ-ಕೂಪ-ಆರಾಮ ಅಂದರೆ ಬಾವಿತೋಟದಿಂದೊಡಗೂಡಿದ ವಿಶ್ರಾಂತಿ ಧಾಮ. ಈ ಬಾವಿಯನ್ನು ನಾವು ಇಂದಿಗೂ ಈ ಹಳ್ಳಿಯ ಹೊರವಲಯದಲ್ಲಿ ಕಾಣಬಹುದು. ಈ ಬಾವಿಯ ಉದ್ದೇಶವೆಂದರೆ, ವಿಜಯನಗರದ ಹೆದ್ದಾರಿಯಲ್ಲಿ ಹೋಗುವ ಪ್ರಯಾಣಿಕರಿಗೆ ಅರವಟ್ಟಿಗೆಯನ್ನು ರಚಿಸಿ ಬಾಯಾರಿಕೆಯನ್ನು ಹಿಂಗಿಸುವುದು ಹಾಗೂ ಅವರ ಮಾರ್ಗಾಯಾಸ ಪರಿಹಾರಕ್ಕೆ ತೋಟ ನಿರ್ಮಿಸಿದ್ದರು. ಹೀಗಾಗಿ ಬಾವಿಯ ಬಳಿ ಗಿಡಮರಗಳ ತೋಪನ್ನು ನಿರ್ಮಿಸಲಾಗಿತ್ತು. ಹೀಗೆ ಈ ಅರವಟ್ಟಿಗೆ ಹಾಗೂ ತೋಟದ ಉಸ್ತುವಾರಿಗೆಂದೇ ಬುಳ್ಳಯ್ಯ ನಾಯಕನ ಮಗನಾದ ಹೆಗಡೆ ಸೋವನ್ನನೆಂಬ ದಾನಿಯು ಭೂಮಿಯನ್ನು ನೀಡಿದ್ದನು. ಹೀಗೆ ಭೂಮಿಯಿಂದ ಬಂದ ಆದಾಯವನ್ನು ಹಲವಾರು ಮಂದಿ ಹಂಚಿಕೊಳ್ಳಬೇಕೆಂಬ ಕರಾರಿನಂತೆ, ಅರವಟ್ಟಿಗೆಯ ಮಾಲಿಕನಾದ ವಿರುಪಣ್ಣ ಆದಾಯದ ಒಂದು ಮೂರಾಂಶವನ್ನು, ಮಿಕ್ಕ ಎರಡು ಮೂರಾಂಶ ಆದಾಯವನ್ನೂ ಅರವಟ್ಟಿಗೆಗೆ ನೀರು ಹೊತ್ತು ಹಾಕುವರ, ಗಡಿಗೆ ಮುಂತಾದ ಸಾಮಗ್ರಿಗಳ ಖರೀದಿ ಮಾಡಲು, ತೋಟಕ್ಕೆ ನೀರು ಹಾಕುವರ ಕೂಲಿ ಹಾಗೂ ಇತರ ದುರಸ್ತಿ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಅಲ್ಲದೆ ಹೀಗೆ ದಾನ ಪಡೆದ ವಿರುಪಣ್ಣ ಮತ್ತು ಅವನ ವಂಶಜರು ಈ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕು. ಒಂದು ವೇಳೆ ಅವರು ಈ ಕಾರ್ಯದಲ್ಲಿ ತಪ್ಪಿದರೆ, ಯಾವ ಧರ್ಮಿಷ್ಟನಾದರೂ ಈ ಶಾಸನವನ್ನು ಬಹಿರಂಗವಾಗಿ ಓದಿ, ಜನತೆಗೆ ತಿಳಿಸಿ, ಈ ಧಾರ್ಮಿಕ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬಹುದು ಹಾಗೂ ಉತ್ಪನ್ನದ ಆದಾಯವನ್ನೂ ಪಡೆಯಬಹುದು ಎಂದೇ ಸೂಚಿಸಿದೆ. ಇದು ಬಾವಿಗಳ ಬಗೆಗೆ ಹಾಗೂ ಅವುಗಳ ಉಪಯುಕ್ತತೆಗೆ ಉತ್ತಮ ಉದಾಹರಣೆಯಾಗಿದೆ. ಈ ದೃಷ್ಟಾಂತವು ಅಂದಿನ ದಿನಗಳಲ್ಲಿಯ ಸಮಾಜದಲ್ಲಿ ದಾರಿಹೋಕರಿಗೂ, ಪ್ರಯಾಣಿಕರ ಬಗೆಗೂ ಇದ್ದ ಸದ್ಭಾವನೆಯನ್ನು ಸೂಚಿಸುತ್ತದೆ.[15] ವಿಜಯನಗರದ ಆಡಳಿತದಲ್ಲಿ ಜನ ಜೀವನದಲ್ಲಿ ಬಾವಿಗಳ ಪಾತ್ರವನ್ನು ಎತ್ತಿತೋರಿಸಲು ಇದೊಂದು ಉತ್ತಮ ನಿದರ್ಶನ.

ಕ್ರಿ.ಶ. ೧೪೩೦ರ ಒಂದು ಶಾಸನವು ಸೋಮಯಾಜಿಲು ಎಂಬುವರು ಮೂರು ಕಲ್ಲುಕಟ್ಟೆಯಿಂದ ಕೂಡಿದ ಬಾವಿಗಳನ್ನು, ನಾಲ್ಕು ಕೆರೆಗಳನ್ನು ಹಾಗೂ ಒಂದು ದೇವಾಲಯವನ್ನು ನಿರ್ಮಿಸಿದ ವಿಷಯವನ್ನು ಅರುಹುತ್ತದೆ.[16]

ಹಾಳು ಹಂಪೆಯಲ್ಲಿಯ ಒಂದು ಶಾಸನವು ಧಾರ್ಮಶಾಲೆಯ ಬಳಿ ಕಟ್ಟಲಾದ ಬಾವಿಯ ಬಗ್ಗೆ ತಿಳಿಸುತ್ತದೆ. ಸೋಜಿಗದ ಸಂಗತಿ ಎಂದರೆ ಈ ಧರ್ಮಶಾಲೆ ಹಾಗೂ ಬಾವಿಯ ಕಾರ್ಯಕ್ಕೆ ದಾನ ನೀಡಿದವನು ಅಹಮದ್‌ಖಾನ್‌ಎಂಬ ಓರ್ವ ಮುಸ್ಲಿಂ ಅಧಿಕಾರಿ. ಇದನ್ನು ಸಾರ್ವಜನಿಕರ ಸೌಖ್ಯಕ್ಕಾಗಿ ಹಾಗೂ ಅವನ ಒಡೆಯನಾದ ಎರಡನೆಯ ದೇವರಾಯನ ಪುಣ್ಯಸ್ಮರಣೆಗಾಗಿ ಕ್ರಿ.ಶ. ೧೪೩೯ರಲ್ಲಿ ನಿರ್ಮಿಸಿದ.[17]

ಕ್ರಿ.ಶ. ೧೪೭೩ರಲ್ಲಿ ಸಾಳುವ ನರಸಿಂಹರಾಜ ಒಡೆಯರು ಒಂದು ಕೋನೇರಿಯನ್ನು ನಿರ್ಮಿಸಿದ. ಕೋನೇರಿ ಎಂದರೆ ನಾಲ್ಕೂ ನಿಟ್ಟಿನಲ್ಲಿ ಪಾವಟಿಗೆಗಳನ್ನು ಹೊಂದಿರುವ ಒಂದು ಚಿಕ್ಕ ಕೊಳ. ಅದೊಂದು ಪುಷ್ಕರಣಿ ಎಂದೇ ಹೇಳಬಹುದು. ಈ ಬಗೆಯ ಕೋನೇರಿಗಳನ್ನು ದೇವಾಲಯದ ಪಕ್ಕದಲ್ಲಿಯೇ ಕಟ್ಟಲಾಗುತ್ತಿತ್ತು. ಹೀಗಾಗಿ ದೇವರ ಅಭಿಷೇಕಕ್ಕೆ, ದರ್ಶನಾರ್ಥಿಗಳು ಮೀಯಲಿಕ್ಕೆ ಹಾಗೂ ದೇವಸ್ಥಾನದ ಉದ್ಯಾನಗಳಿಗೆ ನೀರು ಹಾಯಿಸುವ ಮುಂತಾದ ಅನೇಕ ಕಾರ್ಯಗಳಿಗೆ ನೆರವಾಗುತ್ತಿದ್ದವು.

ಬಳ್ಳಾರಿ ಜಿಲ್ಲೆಯ ಕುರುಗೋಡು ಹಳ್ಳಿಯ ಶಾಂತ ಮಲ್ಲಿಕಾರ್ಜುನ ದೇವಾಲಯದ ಬಾವಿಯನ್ನು ಮಲ್ಲಪ್ಪ ನಾಯಕನೆಂಬ ಅಧಿಕಾರಿಯ ಪತ್ನಿ ಮಲ್ಲಮ್ಮ, ಬಲಕುಂದಿ ಅಧಿಕಾರಿಯಾದ ಮಾದಪ್ಪ ನಾಯಕನ ಮಗಳು, ದುರಸ್ತಿ ಮಾಡಿಸಿದ್ದನ್ನು ವಿವರಿಸುತ್ತದೆ. ಹೀಗೆ ರಿಪೇರಿ ಮಾಡಿಸಿದ ಬಾವಿಯನ್ನು, ಮಲ್ಲಿಕಾರ್ಜುನ ದೇವಾಲಯದ ಹೂದೋಟದ ಉಪಯೋಗಕ್ಕೆಂದು ಕ್ರಿ.ಶ. ೧೫೧೨ರಲ್ಲಿ ದಾನ ಮಾಡಲಾಯಿತು.[18]

ಕ್ರಿ.ಶ. ೧೫೩೧ರ ಒಂದು ದಾಖಲೆ ಹಂಪಿಯ ಬಳಿಯ ಕಾಮಲಾಪುರದ ಬಳಿಯಲ್ಲಿ ದೊರೆತಿದ್ದು ಅದು ಎರಡು ವಿಧವಾದ ಬಾವಿಗಳನ್ನು ಸೂಚಿಸುತ್ತದೆ. ನಡಬಾವಿ, ಕಪ್ಪಿಲೆ ಬಾವಿ. ಇದು ಅಂದಿನ ಬಾವಿಗಳ ರಚನೆಯ ವಿಧಾನವನ್ನು ಸೂಚಿಸುತ್ತದೆ. ಮೊದಲನೆಯ ವಿಧವಾದ ಬಾವಿಯನ್ನು ತಮಿಳು ಭಾಷೆಯಲ್ಲಿ ನಡೈಬಾವಿ ಎಂದು ಕರೆಯಲಾಗಿದೆ. ಕನ್ನಡದಲ್ಲಿ ನಡೆ ಬಾವಿ ಅಂದರೆ ಸುತ್ತಲೂ ಪಾವಟಿಗೆ ಅಥವಾ ಸೋಪಾನಗಳ ಬಾವಿ ಎಂದೇ ತಿಳಿಯಬೇಕು. ಮತ್ತೊಂದು ವಿಧವಾದ ಕಪ್ಪಿಲೆ ಬಾವಿಯಲ್ಲಿ ನೀರನ್ನು ಸಾಮಾನ್ಯವಾಗಿ ಯಂತ್ರ ಸಹಾಯದಿಂದ ಮೇಲೆ ಎತ್ತಲಾಗುವುದು. ದೊಡ್ಡ ತೊಗಲಿನ ಚೀಲವನ್ನು ನಿರ್ಮಿಸಿ, ಹಗ್ಗದ ಸಹಾಯದಿಂದ ನೀರನ್ನು ಎತ್ತಿ ತೋಟಗಳಲ್ಲಿ ಹರಿಸಲಾಗುವುದು. ವಿವರಗಳನ್ನು ಬೇರೆ ಎಡೆಯಲ್ಲಿ ನೀಡಿದೆ. ಈ ಬಾವಿಗಳ ಬಗೆಗೆ ತಿಳಿಸಲಾದ ವಿವರದಂತೆ, ಕಪ್ಪಿಲೆ ಬಾವಿಯನ್ನು ಕೊಂಡಮಾರಸಯ್ಯನೂ, ನಡದ ಬಾವಿಯನ್ನು ವಲ್ಲಭಯ್ಯನು ನಿರ್ಮಿಸಿದರು. ನರಸಿಂಹದೇವರಿಗೆ ಭೂಮಿ ದಾನ ನೀಡಿದ್ದನ್ನೂ ನಾವು ಕಾಣಬಹುದು.[19] ಕೊಯಂಬತ್ತೂರು ಜಿಲ್ಲೆಯ ಯರಗನಹಳ್ಳಿಯ ಕ್ರಿ.ಶ. ೧೫೩.೨ರ ಒಂದು ಶಾಸನವು ದೋಣಿಬಾವಿಯನ್ನು ಸೂಚಿಸಿದೆ. ಇದೊಂದು ಕುಂಟೆಯಂತೆ ಚಿಕ್ಕಬಾವಿಯಾಗಿದ್ದು ಗುಡ್ಡದ ಮೇಲೆ ಹರಿದು ಬಂದ ನೀರನ್ನು ಸಂಗ್ರಹಿಸಿ ನೀರಾವರಿ ಕಾರ್ಯಕ್ಕೆ ಬಳಸಲಾಗುತ್ತಿತ್ತು.[20]

ಬರಗಾಲದಲ್ಲಿ ನೀರಿನ ಅಭಾವದಿಂದ ಕಷ್ಟಕ್ಕೆ ಈಡಾದ ಜನರಿಗೆಂದೇ ಒಂದು ಬಾವಿಯನ್ನು ದುರಸ್ತಿ ಮಾಡಿದ ಬಗ್ಗೆ ಪ್ರಸ್ತಾಪಿಸಲಾಗಿದೆ. ಕ್ರಿ.ಶ. ೧೫೪೦ರಲ್ಲಿ ಈರ್ವರು ಕಾಳ ಮಲ್ಲಿಕಾರ್ಜುನ ದೇವ, ಮತ್ತು ಕೆಂಪಿನ ಲಿಂಗಣ್ಣ ಒಡೆಯ ದೇವರುಗಳು ಉಮ್ಮತ್ತೂರು ಸಿಂಹಾಸನದ ಮಠದ ಗುರುಗಳಾದ ಚೆನ್ನಬಸವರಾಜ ದೇವರ ಆದೇಶದಂತೆ ಒಂದು ಬಾವಿಯನ್ನು ಕಟ್ಟಿಸಿದರು. ಬರಗಾಲ ಎಷ್ಟು ಭೀಕರವಾಗಿತ್ತೆಂದರೆ ಒಂದು ಬಂಗಾರದ ನಾಣ್ಯಕ್ಕೆ ಏಳುಮಣ ಧಾನ್ಯ ನೀಡಲಾಗುತ್ತಿತ್ತು ಹಾಗೂ ಮನುಷ್ಯರನ್ನೇ ಮನುಷ್ಯರು ಭಕ್ಷಿಸುವಷ್ಟು ಬರ ತೀಕ್ಷಣವಾಗಿತ್ತು.

ಕ್ರಿ.ಶ.೧೫೪೪ರ ಒಂದು ಶಾಸನದ ದಾಖಲೆಯು ತಿಳಿಸುವಂತೆ ಬಳ್ಳಾರಿ ಜಿಲ್ಲೆಯ ಛತ್ರದಹಳ್ಳಿಯ ಯಲ್ಲವಣ್ಣನು ಪ್ರಯಾಣಿಕರ ಸೌಕರ್ಯಕ್ಕೆಂದೇ ಒಂದು ಬಾವಿ ಹಾಗೂ ತೋಪನ್ನು ನಿರ್ಮಿಸಿದ ವಿವರವನ್ನು, ಬಾವಿಯ ಪ್ರವೇಶ ಮಾರ್ಗದ ಬಂಡೆಯ ಮೇಲೆ ಕೆತ್ತಲಾಗಿದೆ.[21]

ಚಿಕ್ಕ ಬಾವಿಗಳು, ನೀರು ಶೇಖರಿಸಿಡುವ ಚಿಕ್ಕ ದೊಣೆಗಳನ್ನು ಕುಡಿಯಲು, ಬಟ್ಟೆ, ಒಗೆಯಲು, ಸ್ನಾನ ಮುಂತಾದ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಅಲ್ಲದೆ ಉಲ್ಲಾಸಕ್ಕೆಂದೇ ಚಿಕ್ಕ ಉದ್ಯಾನಗಳನ್ನು, ಅದರಲ್ಲಿಯೂ ಅರಮನೆಗಳ ಹತ್ತಿರದಲ್ಲಿ ನಿರ್ಮಿಸಲಾಗುತ್ತಿತ್ತು. ಈ ಬಗೆಯ ಅನೇಕ ಕೆರೆ ಕುಂಟೆಗಳನ್ನು ನಾವು ಇಂದು ಹಾಳು ಬಿದ್ದ ವಿಜಯನಗರದಲ್ಲಿ ನೋಡಬಹುದಾಗಿದೆ.

ಹಂಪೆಯಲ್ಲಿ ಈ ವಿಧವಾಗಿ ನೀರನ್ನು ಸಂಗ್ರಹಿಸಿಡುತ್ತಿದ್ದ ಸ್ಥಳಗಳನ್ನು ರಾಣಿಯರ ಸ್ನಾನಗೃಹ, ಅಷ್ಟಕೋನ ಸ್ನಾನಗೃಹ, ಸಾರ್ವಜನಿಕ ಸ್ನಾನಗೃಹ, ಇಳಿಯುವ ಬಾವಿ, ಜಲಮಂಟಪ, ವಿಹಾರ ಮಂಟಪ ಮುಂತಾದ ನೂತನ ಹೆಸರಿನಿಂದ ಕರೆಯುತ್ತಿರುವುದನ್ನು ಕಾಣಬಹುದಾಗಿದೆ. ಈ ಎಲ್ಲಾ ಸ್ಥಳಗಳಿಗೂ ಕಾಮಲಾಪುರದ ಕೆರೆಯಿಂದಲೇ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಈ ಕೆರೆಗೆ ರಾಯರ ಕಾಲುವೆಯಿಂದ ನೀರನ್ನು ಬಿಡಲಾಗುತ್ತಿತ್ತು. ಈ ಎಲ್ಲಾ ಸ್ನಾನ ಕುಂಡಗಳಿಗೆ ನೀರನ್ನು ಒಳಗೆ ಹರಿಸುವ ಹಾಗೂ ಹೊರಗಡೆ ಹೋಗುವ ಕಿಂಡಿ ಮಾರ್ಗಗಳನ್ನು ಬುದ್ಧಿವಂತಿಕೆಯಿಂದ ರಚಿಸಿದ್ದರು. ಈ ದಿಶೆಯಲ್ಲಿ ನೀರಿನ ಕೊಳವೆ, ಕಾಲುವೆ, ಕಲ್ಲು ಕಾಲುವೆ ಅಥವಾ ಗಾರೆ ನಿರ್ಮಿತ ಕಾಂಕ್ರಿಟ್ ಕಾಲುವೆಗಳ ಮುಖಾಂತರ ನೀರು ಹರಿಸುವ ದೃಶ್ಯವು ಮನಮೋಹಕವಲ್ಲದೆ, ಅವರ ನೀರು ಹಾಯಿಸುವ ಉತ್ತಮ ತಂತ್ರಜ್ಞಾನದ ಮಟ್ಟವನ್ನೂ ಎತ್ತಿ ತೋರಿಸುತ್ತದೆ. ಈ ಕಾರ್ಯಗಳಲ್ಲಿ ಅಂದಿನವರು, ಭೂಮಟ್ಟ ಶಾಸ್ತ್ರದ ಬಗೆಗೆ ಹೊಂದಿದ್ದ ಜ್ಞಾನವನ್ನೂ ವಿವರಿಸುತ್ತದೆ.

ಏಕೆಂದರೆ ಭೂಮಿಯ ಗುರುತ್ವಾಕರ್ಷಣೆ ಹಾಗೂ ಏರುಪೇರುಗಳನ್ನು ಅರಿತಿದ್ದುದರಿಂದಲೇ ಅವರು ಕಂಬಗಳ ಮೇಲೆ ನೀರನ್ನು ಹರಿಸುವ ಕ್ರಮ ಕೈಗೊಂಡಿದ್ದರು. ಅಲ್ಲದೆ ಅವರು ನೀರು ಹಾಯಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಉಪಯೋಗಿಸಿದ್ದು, ಉತ್ತಮ ಮಟ್ಟದ ತಂತ್ರಜ್ಞಾನವನ್ನು ಅವರು ಅಂದೇ ಅರಿತಿದ್ದರು ಎಂದು ತೋರುತ್ತದೆ. ಅಂದಿನ ತಂತ್ರಜ್ಞರು ನೀರಿನ ಹಂಚಿಕೆಯನ್ನು ಬಹು ಸಮರ್ಥ ರೀತಿಯಿಂದ ಜರುಗಿಸುತ್ತಿದ್ದರು. ಏಕೆಂದರೆ ಸುಟ್ಟ ಮಣ್ಣಿನ ಪೈಪುಗಳನ್ನು ಸುಣ್ಣದಕಲ್ಲಿನ ಕಾಂಕ್ರೀಟ್‌ಮಧ್ಯದಲ್ಲಿ ಭದ್ರಗೊಳಿಸಿ ತಮಗೆ ಬೇಕಾದೆಡೆಗೆ ನೀರನ್ನು ಹರಿಸಿಕೊಂಡು ಹೋಗುತ್ತಿದ್ದರು. ಹಲವು ಬಾರಿ ಕೇವಲ ಒಂದೇ ಪೈಪಲ್ಲದೆ, ಅನೇಕ ಪೈಪುಗಳ ಮೂಲಕ ನೀರನ್ನು ಹರಿಸುತ್ತಿದ್ದರು. ಇದರ ಉದ್ದೇಶವೆಂದರೆ, ಒಂದು ಪೈಪು ಒಡೆದರೆ, ಇತರ ಪೈಪುಗಳ ಮೂಲಕ ನೀರಿನ ಸರಬರಾಜು ಯಾವ ಅಡೆತಡೆಯಿಲ್ಲದೆ ಮುಂದುವರಿಯುತ್ತಿತ್ತು. ಮುಂದುವರಿದ ಅವರ ತಂತ್ರಜ್ಞಾನಕ್ಕೆ ಉತ್ತಮ ನಿದರ್ಶನವೆಂದರೆ, ಅವರು ಸಮಾನಾಂತರವಾಗಿ ಮಣ್ಣಿನ ಕೊಳವೆ ಪೈಪುಗಳ ಮುಖಾಂತರ ನೀರು ಹರಿಸುತ್ತಿದ್ದರು. ಇದರ ಉದ್ದೇಶವೆಂದರೆ, ಒಂದೇ ಪೈಪಿನಲ್ಲಿ ನೀರು ಹರಿಸಿದರೆ ನೀರಿನ ಅಧಿಕ ಒತ್ತಡವನ್ನು ನಿವಾರಿಸಲೆಂದೇ ಸಮಾನಾಂತರವಾಗಿ ಮತ್ತೊಂದು ಪೈಪಿನಲ್ಲಿ ನೀರನ್ನು ಹರಿಸಿಕೊಂಡು ಬರಲಾಗುತ್ತಿತ್ತು. ಈ ವಿಧಾನವು ಪೈಪುಗಳಿಗೆ ಧಕ್ಕೆಯಾಗದಂತೆ ರಕ್ಷಣೆ ಒದಗಿಸುತ್ತಿತ್ತು. ಇದು ಅವರು ಹೊಂದಿದ ಉನ್ನತಮಟ್ಟದ ಜಲವಿತರಣೆಯ ತಂತ್ರದ ದ್ಯೋತಕವಾಗಿತ್ತು.

ಅಂದಿನ ದಿನಗಳಲ್ಲಿ ನೀರನ್ನೂ ಸಂಗ್ರಹಿಸುವ ವಿಧಾನ ಹಾಗೂ ಅದನ್ನು ಸಂಗ್ರಹಿಸುತ್ತಿದ್ದ ರಚನೆಗಳು ಇಂದು ಹಾಳು ಬಿದ್ದಿವೆ. ೧೫೬೫ರ ಯುದ್ಧದ ನಂತರ ಇವು ಹಾಳಾಗಿ ಹೋದುದ್ದು ಎಲ್ಲರಿಗೂ ತಿಳಿದ ವಿಷಯ. ಆದರೂ ಅಲ್ಲಲ್ಲಿ ಕಂಡುಬರುವ ಕೆಲವು ಉದಾಹರಣೆಗಳಿವೆ. ಅವನ್ನು ನೋಡಿದಾಗ ಅಂದಿನ ವಿಶಿಷ್ಟ ವ್ಯವಸ್ಥೆಯ ಬಗೆಗೆ ಕುತೂಲಹ ಮೂಡದೇ ಇರಲಾರದು.[22] ವಿಜಯನಗರದ ಹಾಳುಬಿದ್ದ ಪ್ರದೇಶಗಳಿಗೆ ಅತಿ ಸನಿಹದಲ್ಲಿ, ಹೊಸಪೇಟೆಯ ಬಳಿ ಇರುವ ಜಂಬುನಾಥ ಇದಕ್ಕೆ ಉದಾಹರಣೆಯಾಗಿದೆ. ಈ ಜಂಬುನಾಥ ಗುಡ್ಡದಲ್ಲಿ ಒಂದು ಬಾವಿ ಇದೆ. ಈ ಬಾವಿ ಮತ್ತು ಅದರ ವಿನ್ಯಾಸವನ್ನು ನೋಡಿದಾಗ ವಿಜಯನಗರದ ಕಾಲದವರು ಹೊಂದಿದ್ದ ಅಗಾಧ ಜಲತಂತ್ರ ವಿಷಯದ ಬಗ್ಗೆ ತಿಳಿದುಬರುತ್ತದೆ. ಈ ಬಾವಿಯಲ್ಲಿ ಗುಡ್ಡಗಳ ಶಿಲಾಬಂಡೆಗಳಿಂದ ಒಸರಿ ಬರುವ ಊಟೆಯಿಂದ ಹೊರ ಹೊಮ್ಮಿದ ನೀರು ಸಂಗ್ರಹವಾಗುತ್ತದೆ. ಇದಕ್ಕೆಂದೇ ಒಂದು ಚೌಕಾಕಾರದ ಕಣಶಿಲೆ ಬಂಡೆಗಳ ಕುಂಡವನ್ನು ರಚಿಸಿದೆ. ಇಲ್ಲಿ ನಾವು ಗಮನಿಸಬೇಕಾದ ವಿಷಯ ಎಂದರೆ, ಈ ಕುಂಡದಲ್ಲಿ ನೀರಿನ ಮಟ್ಟವು ಒಂದು ಎತ್ತರಕ್ಕೆ ಬಂದ ಮೇಲೆ ಹೆಚ್ಚುವರಿ ನೀರು ತಾನೇ ತಾನಾಗಿ ಹರಿದು ಹೋಗುವ ವ್ಯವಸ್ಥೆ. ಇದೊಂದು ಅಘಾದವಾದ ತಂತ್ರ, ನೀರಿನ ಮಟ್ಟವನ್ನು ಕಾಪಾಡಿಕೊಂಡು ಬಂದಿದೆ. ಮತ್ತೊಂದು ಕುತೂಹಲಕಾರಿ ಸಂಗತಿ ಎಂದರೆ, ಕಡು ಬೇಸಿಗೆಯಲ್ಲಿಯೂ ಇದು ತನ್ನ ಮಟ್ಟವನ್ನು ಕಾದುಕೊಂಡು ಬರುತ್ತದೆ. ಎಂದೂ ಇದು ಬತ್ತಿ ಹೋಗದ ಸರ್ವಋತು ಚಿಲುಮೆಯಾಗಿದೆ. ಇದರ ನೀರು ಸಿಹಿಯಾಗಿದ್ದರೂ ಅನೇಕ ಖನಿಜ ಲವಣಗಳಿಂದ ಕೂಡಿದ್ದು, ರೋಗ ನಿವಾರಕ ಶಕ್ತಿಯನ್ನು ಹೊಂದಿದೆ. ಈ ನೀರನ್ನು ದೇವರ ಅಭಿಷೇಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಲಾಗುತ್ತದೆ. ಈ ಬಾವಿಯ ಮೇಲ್ಭಾಗದಲ್ಲಿ ಶಿಖರವನ್ನು ರಚಿಸಿರುವುದರಿಂದ ಸೂರ್ಯನ ಬಿಸಿಲು ಈ ಬಾವಿಯಲ್ಲಿ ಪಕ್ಕದಲ್ಲಿ ಜಂಬುಕೇಶ್ವರನ ಗುಡಿ ಇದೆ. ಇದು ವಿಜಯನಗರದ ಸಮಯದಲ್ಲಿ ನಿರ್ಮಿಸಿದ್ದು ಎಂದು ತಿಳಿದುಬಂದಿದೆ.

೧೫೬೫ರ ಅವಧಿಯವರೆಗೂ ಪೆನುಗೊಂಡೆಯು ವಿಜಯನಗರ ಸಾಮ್ರಾಜ್ಯದ ಪ್ರಾಂತೀಯ ಮುಖ್ಯ ಪಟ್ಟಣಗಳಲ್ಲಿ ಒಂದಾಗಿತ್ತು. ರಕ್ಕಸತಂಗಡಿ ಕದನದ ನಂತರ ಅದೇ ರಾಜಧಾನಿಯಾಗಿ, ಸಾಮ್ರಾಜ್ಯ ಅಧಿಕಾರ ಅಲ್ಲಿಂದಲೇ ನಡೆಯಿತು. ಹೀಗಾಗಿ ರಾಜಧಾನಿಯ ವಿವಿಧ ಅವಶ್ಯಕತೆಗಳನ್ನು ಪೂರೈಸಲು ಆ ನಗರದಲ್ಲಿ ಅನೇಕ ಬಾವಿಗಳನ್ನು ನಿರ್ಮಿಸಲಾಯಿತು. ಇಂದಿಗೂ ಅಲ್ಲಿ ನಾವು ಗಚ್ಚಿನ ಗೋಡೆಗಳನ್ನು ಹೊಂದಿರುವ ಅನೇಕ ಪುರಾತನ ಬಾವಿಗಳನ್ನು ಕಾಣಬಹುದು. ಕೌತುಕದ ಸಂಗತಿ ಎಂದರೆ ಒಂದು ಬಾವಿಗೆ ವಿಶೇಷ ಮಾದರಿಯ ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ. ಅದು ನಂದಿಯ ಆಕಾರ ಹೊಂದಿದ್ದು ಇಟ್ಟಿಗೆ ಮತ್ತು ಗಾರೆಯ ಕಾರ್ಯದಿಂದ ಒಡಗೂಡಿದೆ. ನಂದಿಯ ನಾಲ್ಕು ಕಾಲುಗಳ ಅಡಿಯಲ್ಲಿ ಕಮಾನುಗಳನ್ನು ರಚಿಸಿ, ಈ ಕಮಾನುಗಳಿಂದ ನಾಲ್ಕು ದಿಕ್ಕಿನಲ್ಲಿಯೂ ಬಾವಿಯ ಒಳಗಡೆ ಇಳಿದು ಹೋಗಲು ಸೋಪಾನಗಳಿವೆ. ಬಹುಶಃ ಈ ಬಾವಿಯನ್ನೂ ಕೇವಲ ಧಾರ್ಮಿಕ ಹಾಗೂ ಕುಡಿಯುವ ನೀರಿಗೆಂದೇ ರಚಿಸಿರಬಹುದು. ಸಾಂಪ್ರದಾಯಿಕ

ಹೇಳಿಕೆಯಂತೆ ಈ ನಗರದ ಬಾವಿಗಳನ್ನು ವಿಜಯನಗರದ ಚಕ್ರವರ್ತಿಯಾಗಿದ್ದ ಕೃಷ್ಣದೇವರಾಯನು ಕಟ್ಟಿಸಿದನೆಂದೇ ಹೇಳಲಾಗುತ್ತದೆ. ಏಕೆಂದರೆ ಅರಸನ ವಸತಿ ನಗರಗಳಲ್ಲಿ ಇದೂ ಒಂದಾಗಿತ್ತು.[23]

ವಿಜಯನಗರದ ಅವಧಿಯಲ್ಲಿಯ ಎರಡನೆ ವರ್ಗದ ಬಾವಿಗಳೆಂದರೆ ಊಟಿಬಾವಿಗಳು. ಬೇಸಾಯಗಾರರು ಇವುಗಳನ್ನು ಉಪಯೋಗಿಸುತ್ತಿದ್ದರು. ಕೃಷ್ಣದೇವರಾಯನ ಅಧಿಕಾರಾವಧಿಯಲ್ಲಿ ಹಂಪೆಗೆ ಭೇಟಿ ನೀಡಿದ್ದ ಪೋರ್ಚುಗೀಸ್‌ವರದಿಗಾರನಾದ ಪೇಸ್‌ನು ಇದರ ಬಗ್ಗೆ ಹೇಳಿರುವನು. '…. ಈ ದೇಶವು ಅಂದರೆ ವಿಜಯನಗರ ಸಾಮ್ರಾಜ್ಯಕ್ಕೆ ನೀರು ಬೇಕು ಏಕೆಂದರೆ ಈ ದೇಶವು ತುಂಬಾ ವಿಶಾಲವಾಗಿದ್ದು, ಇದರಲ್ಲಿ ನದಿಗಳು ಅಧಿಕವಾಗಿಲ್ಲ. ಅದುದರಿಂದ ಅವರು ಸರೋವರಗಳನ್ನು ನಿರ್ಮಿಸಿದ್ದಾರೆ….' ಅಲ್ಲದೆ ಜನರು ನದೀ ತಳಗಳಲ್ಲಿ ಸಂಚರಿಸಿ ತೂತುಗಳನ್ನು ತೆಗೆದು ನೀರನ್ನು ಪಡೆಯುತ್ತಾರೆ….'[24]

ಈಗಾಗಲೇ ವಿವರಿಸಿದಂತೆ, ಎರಡೂ ವರ್ಗದ ಬಾವಿಗಳು, ಭೂಮಿಯಡಿಯಲ್ಲಿಯ ಅಂತರ್ಜಲದಿಂದಲೇ ನೀರನ್ನು ಪಡೆಯಲು ಆಳವಾದ ಬಾವಿ ಮತ್ತು ಊಟಿ ಬಾವಿಗಳನ್ನು ತೋಡಿದ್ದರು. ಆದರೆ ಊಟೆ ಬಾವಿಗಳು ತಾತ್ಕಾಲಿಕ ಹಾಗೂ ಭೂ ತಳದ ಮೇಲಿಂದ ಹೆಚ್ಚು ಆಳವಾಗಿರದ ಬಾವಿಗಳು. ಇನ್ನೊಂದು ಮಾದರಿಯ ಬಾವಿಗಳು ಅಧಿಕ ಆಳವಾಗಿದ್ದು ಸರ್ವಋತು ಬಾವಿಗಳಾಗಿದ್ದವು. ಈ ಮಾದರಿಯ ಬಾವಿಗಳ ನಿರ್ಮಾಣ ಕಾಯಕ್ಕೆ ಅಧಿಕ ಶ್ರಮವಹಿಸಬೇಕಾಗಿತ್ತು. ಸಾಮಾನ್ಯವಾಗಿ ಊಟೆ ಬಾವಿಗಳನ್ನು ನದಿಯು ಹರಿಯುವ ಪಾತ್ರದಲ್ಲಿಯ ಉಸುಕು ಅಥವಾ ಮರಳಿನ ಭೂಮಿಯಲ್ಲಿ ಸುಲಭವಾಗಿ ತೋಡಬಹುದಾಗಿತ್ತು. ಹೀಗೆ ನೆಲದ ಮೇಲ್ಮಟ್ಟದಿಂದ ಶೀಘ್ರವಾಗಿ ದೊರೆಯುವ ಜಲವನ್ನು ಹೊಲಗಳಿಗೆ ಹರಿಸಿ ಬೇಸಾಯ ಕಾರ್ಯ ಜರುಗಿಸುತ್ತಿದ್ದರು. ಇದು ಒಂದು ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಇನ್ನೊಂದು ಮಾದರಿಯ ಊಟೆ ಬಾವಿಗಳೆಂದರೆ ಪರ್ವತದ ಬದಿಯಲ್ಲಿಯೇ ಗಟ್ಟಿಯಾಗಿರದ ಬಂಡೆಳ ಪೊದರುಗಳಲ್ಲಿ ರಂಧ್ರ ನಿರ್ಮಿಸಿ ಅದರಡಿಯಲ್ಲಿದ್ದ ನೀರನ್ನು ಪಡೆಯಲಾಗುತ್ತಿತ್ತು. ಈ ಎಲ್ಲಾ ಕಾರ್ಯಗಳು ವ್ಯಕ್ತಿಗತ ಮಟ್ಟದಲ್ಲಿ ಜರುಗುತ್ತಿದ್ದವು. ಹೀಗಾಗಿ ಈ ಬಾವಿಗಳ ಬಗೆಗೆ ಹೆಚ್ಚು ದಾಖಲೆಗಳು ಲಭ್ಯವಿಲ್ಲ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಈ ಮಾದರಿಯ ಬಾವಿಗಳನ್ನು ಸರವುಬಾವಿಗಳೆಂದೇ ಕರೆಯುತ್ತಾರೆ ಮತ್ತು ಅವುಗಳಿಗೆ ನದಿಯ ಬಳಿ ಇರುವ ಮರಳಿನ ತಳದಿಂದಲೇ ನೀರನ್ನು ಪಡೆಯುತ್ತಾರೆ.[25] ಕರ್ನಾಟಕದಲ್ಲಿ ಈ ಬಾವಿಗಳಿಗೆ ಜಲಪರಿಗೆ ಎಂದೇ ಕರೆಯುತ್ತಾರೆ. ಹೀಗೆ ಸಂಗ್ರಹವಾದ ನೀರನ್ನು ಅಸುಪಾಸಿನಲ್ಲಿಯ ಜಮೀನುಗಳಿಗೆ ಏತದ ಸಹಾಯದಿಂದ ಅಥವಾ ಕಪ್ಪಿಲೆಯಿಂದ ಪಡೆದು ಹರಿಸಿ, ನೀರಾವರಿಯ ಕಾರ್ಯ ಕೈಗೆತ್ತಿಕೊಳ್ಳುತ್ತಿದ್ದರು.

ಹಲವು ಎಡೆಗಳಲ್ಲಿ ಈ ಊಟೆಬಾವಿಗಳ ಸುತ್ತಲೂ ಗೋಡೆಯನ್ನು ನಿರ್ಮಿಸಿ ಅದರಲ್ಲಿ ಉಸುಗು ಅಥವಾ ಮರಳು ಹರಿದು ಬಾರದಂತೆ ರಕ್ಷಿಸಲಾಗುತ್ತಿತ್ತು. ತಮಿಳು ಪ್ರಾಂತದ ರಾಮನಾಡು ಜಿಲ್ಲೆಯ ಒಂದು ದಾಖಲೆ ತಿಳಿಸುವಂತೆ, ಒಂದು ಊಟೆ ಬಾವಿಗೆ ಕಟ್ಟಡದ ರಚನೆಯನ್ನೂ ಮಾಡಲಾಗಿತ್ತಂತೆ. ಇದನ್ನು ಕಟ್ಟಿಸಿದವನು ಸುಂದರಸೋಳಪುರದ ಅಧಿಕಾರಿ, ಪಂಬಿಯೂರುಡಿಯನ್ ಪೊನ್ನದೂರು ತಿರಕ್ಕಾವೇಲ.

ಹೊಸಕೋಟೆ ಬಳಿಯಲ್ಲಿ ಒಂದು ಮರವನ್ನು ಚಿಲುಮೆ ಮರವೆಂದೇ ಕರೆಯುತ್ತಾರೆ. ಏಕೆಂದರೆ ಆ ಮರಕ್ಕೆ ಬೇಕಾದ ನೀರನ್ನು ಅದರ ಬಳಿಯಲ್ಲಿದ್ದ ಚಿಲುಮೆಯಿಂದಲೇ ಪಡೆಯಲಾಗುತ್ತಿತ್ತು.[26]

**ಆಕರ**

ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಆಯ್ದ ಭಾಗಗಳು.

**—-**

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] Imperial Gazetteer of India, Vol, III, p. 318
[2] Neumbaurer J.J. : The Setp Wells of Gujarat, Delhi 1981, p.6
[3] Ibid
[4] Dikshit D.D.: Agriculture, Irrigaion and Horticulture in Ancient Sri Lanka, Delhi, 1986: p. 217, fn. 520 quoted from Agriculture in Ancient India'
[5] S.I.I. Vol. IV, 267, p.65 dated 1410 A.D. Details already referred above.
[6] Karnataka State Gazetteer, pt. I, p. 669
[7] Coimbatore District Gazetteer, p. 192
[8] Vijayanagara – Progress of Research, Vol. III, Mysore 1991, 105. P. 49 & 50
[9] Ibid. No. 27, p.33
[10] Ibid, No. 26. P.32
[11] Ibid. No. 108 and 110, p. 50 & 51
[12] Ibid. No. 99. p.48
[13] Ibid. No. 98, p.48
[14] Epi Carn., Vol. X II, Kunigal, 21. p.93
[15] S.I.I. Vol. I X , pt. II, 436, p. 445-46; for detailed study refer-patil C.S.: Malige-Kupa-Arama at Malapangudi in Vijayanagara Progress of Research. 1984-87, Mysore 1991, p. 177, ff.
[16] Nellore Inscriptions, pt. I, p.496
[17] S.I.I. Vol. I X pt. II 447, p. 457 & Vijayagara Progress of Research (1979). P.63
[18] S.I.I. Vol. I X , pt. II, 477, p. 492
[19] S.I.I. Vol. I X , pt. II, 533, p. 584
[20] Ibid, 545, p. 564
[21] Topo List, NO. 151, p. 276 & A.R.S.I. Ep., 1915, 909. P.51
[22] Annual Report – A.S.I 1) 1904-05, p.30,2) 1908-09, p.24
[23] Ananthapur District Gazetter, 1905, p. 191
[24] Fillozat, V: Vijayagara Empire: D. Pacs & F. Nuniz, N. Delhi, 1977, p.20
[25] Op. Cit., (48), p.49
[26] My. A.R. Mysore, 1919, p.6

## ೪೫. ಹಂಪೆಯ ಸ್ಮಾರಕಗಳ ಶಿಲೆ ಮತ್ತು ಸಂರಕ್ಷಣೆ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಹಲವಾರು ಐತಿಹಾಸಿಕ ಅವಶ್ಯಕತೆಗಳನ್ನು ಇತಿಹಾಸಕಾರರು ಹೇಳುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಹಿಂದು ಧರ್ಮದ ಸಂರಕ್ಷಣೆ ಮತ್ತು ಸಂವರ್ಧನೆಯಾಗಿತ್ತು. ಉತ್ತರದಿಂದ ದಾಳಿ ಮಾಡುತ್ತಿದ್ದ ಮುಸ್ಲಿಂ ರಾಜ ಮತ್ತು ಧರ್ಮಾಂತರದ ಪ್ರಕ್ರಿಯೆಗೆ ತಡೆ ಹಾಕುವುದು ಈ ಅವಶ್ಯಕತೆಗಳಲ್ಲಿ ಒಂದಾಗಿತ್ತು. ಈ ಗುರಿ ಸಾಧನೆಗೆ ನೈಸರ್ಗಿಕವಾಗಿ ಸಂರಕ್ಷಿತ ಸ್ಥಳದ ಅವಶ್ಯಕತೆ ಇತ್ತು. ಇಂತಹ ಸ್ಥಳ ಹಂಪೆ ಎಂಬುದನ್ನು ಸಂಗಮ ವಂಶದ ಮೊದಲ ಅರಸು ಮೊದಲನೆಯ ಹರಹರನು ಗುರ್ತಿಸಿದನು.

ಉತ್ತರದಲ್ಲಿ ತುಂಬಿ ಹರಿಯುತ್ತಿದ್ದ ತುಂಗಭದ್ರಾ ನದಿ, ಸುತ್ತಲೂ ಹರಡಿರುವ ಎತ್ತರದ ಕಣ ಶಿಲೆಯ (Granite) ಶೈಲ ಮಾಲೆ; ಇವು ನೈಸಗಿಕ ಕಂದಕ ಮತ್ತು ಕೋಟೆಯ ರಕ್ಷಣೆಗಳನ್ನು ನೀಡಿದವು. ಹೀಗೆ ಕಣಶಿಲೆಯು ಹಂಪೆಯಲ್ಲಿ ಸಾಮ್ರಾಜ್ಯ ಸ್ಥಾಪನೆಗೆ ಅಪ್ರತ್ಯಕ್ಷವಾಗಿ ಕಾರಣವಾಯಿತು. ಇದೇ ಶಿಲೆಯ ಇಲ್ಲಿಯ ಬಹುಪಾಲು ಸಂಖ್ಯೆ ಸ್ಮಾರಕಗಳಿಗೆ (Monuments) ಮಾಧ್ಯಮವಾಯಿತು.

**ಹಂಪೆಯಲ್ಲಿರುವ ಸ್ಮಾರಕಗಳ ವರ್ಗೀಕರಣ**

ಹಂಪೆಯಲ್ಲಿರುವ ಸ್ಮಾರಕಗಳನ್ನು ಕಾಲಮಾನದ ದೃಷ್ಟಿಯಿಂದ ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪೂರ್ವ ಸ್ಮಾರಕಗಳು, ಎರಡು ವಿಜಯನಗರ ಸಾಮ್ರಾಜ್ಯದ ಅವಧಿಯ ಸ್ಮಾರಕಗಳು. ಅಂದರೆ ಮೊದಲನೇ ವರ್ಗದ ಸ್ಮಾರಕಗಳು ಕ್ರಿ.ಶ. ೧೩೩೬ ಕ್ಕಿಂತಲೂ ಪೂರ್ವದಲ್ಲಿ ನಿರ್ಮಿಸಲ್ಪಟ್ಟ ಕದಂಬ ನಾಗರ ಅಥವಾ ಕಳಿಂಗ ಶೈಲಿಯ ಸ್ಮಾರಕಗಳು. ಇವು ಪ್ರಮುಖವಾಗಿ ಹೇಮಕೂಟ ಬೆಟ್ಟದ ಮೇಲೆ ಇರುವ ರಚನೆಗಳು (Structures) ವಾಸ್ತುಶಿಲ್ಪದ ದೃಷ್ಟಿಯಿಂದ ಅಂಥ ಮಹತ್ವದ ಕಟ್ಟಡಗಳಲ್ಲವಾದರೂ ಕರ್ನಾಟಕದಲ್ಲಿರುವ ಕೆಲವೇ ಕೆಲವು ಕಳಿಂಗ ಶೈಲಿ ಕಟ್ಟಡಗಳು; ಆದ್ದರಿಂದಲೇ ಇವುಗಳನ್ನು ಗಮನಿಸಬೇಕಾಗುತ್ತದೆ. ಎರಡನೇ ವರ್ಗದ ರಚನೆಗಳು ಕರ್ನಾಟಕ ಅಷ್ಟೇ ಅಲ್ಲ. ಭಾರತದ ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ವಿಜಯನಗರ ಶೈಲಿಗೆ ಸೇರಿದಂಥ ರಚನೆಗಳು. ಈ ಶೈಲಿಯ ರಚನೆಗಳು ಇಂದಿನ ಹಂಪೆಯ ತುಂಬ ಹರಡಿವೆ. ಅವುಗಳಲ್ಲಿ ವಿರೂಪಾಕ್ಷ ದೇವಾಲಯ, ಹಜಾರರಾಮ ದೇವಾಲಯ, ವಿಜಯವಿಠ್ಠಲ ದೇವಾಲಯ, ಮಹಾನವಮಿ ದಿಬ್ಬ ಇತ್ಯಾದಿ ಸ್ಮಾರಕಗಳು ಪ್ರಮುಖ ರಚನೆಗಳು. ಉಗ್ರನರಸಿಂಹ (ಲಕ್ಷ್ಮೀ ನರಸಿಂಹ), ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಉದ್ದಾನ ವೀರಭದ್ರ ಮತ್ತು ಬಡವಿ ಲಿಂಗ ಇವುಗಳು ಪ್ರಮುಖ ಶಿಲ್ಪಗಳು.

**ಮೂರು ಬಗೆಯ ಶಿಲೆಗಳು**

ಈ ಎರಡೂ ಶೈಲಿಗಳ ರಚನೆಗಳಿಗೆ ಪ್ರಮುಖ ಶಿಲೆ ಕಣಶಿಲೆ (ಚಿತ್ರ ೧, ೧ಎ, ಮತ್ತು ೨) ಅಪರೂಪವಾಗಿ ಒಡ್ಡು ಶಿಲೆಯನ್ನು (Dyke rock) ಬಳಸಲಾಗಿದೆ. ಬಡವಿ ಲಿಂಗವನ್ನು ಒಡ್ಡು ಶಿಲೆಯಲ್ಲಿ ಕಡೆಯಲಾಗಿದೆ (ಚಿತ್ರ ೩). ಹಜಾರ ರಾಮದೇವಾಲಯದ ರಂಗ ಮಂಟಪದ ಮಧ್ಯದಲ್ಲಿ ನಿಲ್ಲಿಸಲಾಗಿರುವ ಕಪ್ಪು ಶಿಲೆಯ ಕಂಬಗಳನ್ನು ಒಡ್ಡು ಶಿಲೆಯಲ್ಲಿ ಕಡೆಯಲಾಗಿದೆ.

ಮಹಾನವಮಿ ದಿಬ್ಬದ ಮಧ್ಯಭಾಗದಲ್ಲಿ ಸೂಕ್ಷ್ಮ ಉಬ್ಬುಶಿಲ್ಪಗಳಿಗಾಗಿ ಹಸಿರು ಮಿಶ್ರಿತ ಕಪ್ಪು ಬಣ್ಣದ ಶಿಲೆಯ ಫಿಲ್ಲೈಟ್(Phylite) ಬಳಸಲಾಗಿದೆ. ಹಾಗೆಯೇ ಇದೇ ಆವರಣದಲ್ಲಿರುವ ಕಲ್ಲಿನ ಪುಷ್ಕರಣಿಯನ್ನು ಕಪ್ಪು ಬಣ್ಣದ ಫಿಲೈಟಿನಲ್ಲಿ ಕಟ್ಟಲಾಗಿದೆ. ಉಗ್ರನರಸಿಂಹ, ಗಣಪತಿ ವಿಗ್ರಹಗಳೂ ಸೇರಿದಂತೆ ಎಲ್ಲಾ ದೇವಾಲಯಗಳ ರಚನೆಗೆ ಕಣಶಿಲೆಯನ್ನು ಬಳಸಲಾಗಿದೆ.

ಹಂಪಿ ದೇವಾಲಯಗಳ ಮಹಾದ್ವಾರಗಳ ಮೇಲೆ ಕಟ್ಟಲಾಗಿರುವ ವಿಮಾನಗಳು, ಕಮಲಮಹಲ್ಮತ್ತು ವಿಜಯನಗರ ಶೈಲಿಯ ವಿಶಿಷ್ಟ ಶಿಲ್ಪಗಳಾದ ಗಾರೆ ಶಿಲ್ಪಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಸುಣ್ಣದ ಗಚ್ಚಿನಲ್ಲಿ (Lime Mortar) ಕಟ್ಟಲಾಗಿದೆ (ಚಿತ್ರ ೪), ಈ ಗಚ್ಚನ್ನು ಸುಣ್ಣ ಮತ್ತು ಮರಳನ್ನು ಕೆಲ ಅಂಟಿನ ಪದಾರ್ಥಗಳೊಂದಿಗೆ ಮಿಶ್ರಣ ಮಾಡಿ ಗಾಣದಲ್ಲಿ ರುಬ್ಬಿ ಸಿದ್ಧಪಡಿಸಲಾಗುತ್ತಿತ್ತು. ಅನುಭವದ ಮೇಲೆ ಅವುಗಳ ಮಿಶ್ರಣ ಮತ್ತು ರುಬ್ಬುವ ಕಾಲವನ್ನು ನಿರ್ಧರಿಸಲಾಗುತ್ತಿತ್ತು. ತುಂಗಭದ್ರಾ ನದಿಯಲ್ಲಿ ಸೂಕ್ತವಾದ ಮರಳು ಮತ್ತು ಹಂಪಿಯ ಸುತ್ತಮುತ್ತಲ ಪ್ರದೇಶದಲ್ಲಿ ಸುಣ್ಣದ ಉಂಡೆ (Lime Kankar) ಸಿಗುತ್ತದೆ. ಇವುಗಳನ್ನು ಉಪಯೋಗಿಸಿ ತಮಗೆ ಬೇಕಾದ ಗಚ್ಚನ್ನು ಅಂದಿನ ಸ್ಥಪತಿಗಳು ಸ್ಥಳೀಯವಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದರು.

ವಿಜಯನಗರದ ಅರಸರಿಗಿಂತ ಪೂರ್ವದಲ್ಲಿ ಕರ್ನಾಟಕವನ್ನಾಳಿದ ಹೊಯ್ಸಳರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದ ರಚನೆಗಳ ನಿರ್ಮಾಣಕ್ಕೆ ಹೆಚ್ಚಾಗಿ ಬಳಪದ ಕಲ್ಲನ್ನೇ (Soapstone) ಬಳಸಲಾಗಿದೆ. ಬಳ್ಳಾರಿ ಜಿಲ್ಲೆಯ ಹಡಗಲಿ, ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿರುವ ಚಾಳುಕ್ಯರ ಹಲವು ದೇವಾಲಯಗಳು (ಬಾಗಳಿ, ನೀಲಗುಂದ, ಹಡಗಲಿ, ಕುರುವತ್ತಿ, ಇತ್ಯಾದಿ) ಬಳಪದ ಕಲ್ಲಿನಲ್ಲಿ ನಿರ್ಮಿತವಾದ ಶ್ರೇಷ್ಠ ಮಟ್ಟದ ಕಲಾಕೃತಿಗಳು. ಇವು ಬೃಹತ್ರಚನೆಗಳಲ್ಲವಾದರೂ ಸೂಕ್ಷ್ಮ ಕೆತ್ತನೆಗೆ ಹೆಸರುವಾಸಿ.

ಸಂಗಮ ವಂಶದ ಅರಸರಿಗೂ ನಂತರ ಬಂದ ಇತರ ವಂಶದ ವಿಜಯನಗರದ ಅರಸರಿಗೂ ಬಹುಶಃ ತಮ್ಮ ಹಿಂದಿನ ವಂಶದ ಅರಸರ ಕಾಲದಲ್ಲಿ ಬೆಳೆದು ಬಂದಂಥ ಶೈಲಿಗಿಂತಲೂ ಭಿನ್ನವಾದ ಶೈಲಿಯಲ್ಲಿ ವಿಶಿಷ್ಟವಾದ ರಚನೆಗಳ ನಿರ್ಮಾಣದಲ್ಲಿ ಆಸಕ್ತಿ ಇದ್ದಂತೆ ಕಾಣುತ್ತದೆ. ಅದೂ ಅಲ್ಲದೆ ಸಂಗಮ ವಂಶದ ಅರಸರಿಗೆ ಬೃಹತ್‌ರಚನೆಗಳನ್ನು ರಚಿಸಿ ತಮ್ಮ ವೈಶಿಷ್ಟ್ಯತೆಯನ್ನು ಮೆರೆಸುವಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಆಸಕ್ತಿ ಇತ್ತು. ದಕ್ಷಿಣ ಭಾರತದ (ತಮಿಳುನಾಡಿನ) ಸ್ಥಪತಿಗಳನ್ನು ಕರೆಸಿ, ಅವರಿಂದ ದ್ರಾವಿಡ ಶೈಲಿಗೆ ಪ್ರಾಮುಖ್ಯತೆಯನ್ನು ನೀಡಿ ದೇವಾಲಯಗಳನ್ನು ರಚಿಸಲಾಯಿತೆಂದು ಕೆಲ ಇತಿಹಾಸಕಾರರ ಅಭಿಮತ. ಈ ಮಾತು ಚರ್ಚಾಸ್ಪದವೆನಿಸಬಹುದು. ಆದರೆ ಈ ದ್ರಾವಿಡ ಶೈಲಿಯನ್ನು ಅಳವಡಿಸಿಕೊಂಡು ಬೃಹತ್ ರಚನೆಗಳ ನಿರ್ಮಾಣ ಮಾಡಲು ಭೂವೈಜ್ಞಾನಿಕ ಕಾರಣಗಳೇ ಮೂಲ ಎಂಬುದು ನಿರ್ವಿವಾದ.

**ಭೂವೈಜ್ಞಾನಿಕ ಕಾರಣಗಳು**

ಹಂಪೆಯ ಸುತ್ತಮುತ್ತಲೂ ಹಾಗೂ ಸಮೀಪದಲ್ಲಿ ಬಳಪದ ಕಲ್ಲಿನ ನಿಕ್ಷೇಪಗಳಿಲ್ಲ. ಅತಿ ಸಮೀಪದ ಬಳಪದ ಕಲ್ಲಿನ ನಿಕ್ಷೇಪವೆಂದರೆ ನೀಲಗುಂದದ ನಿಕ್ಷೇಪ. ಇದು ಹಂಪೆಗೆ ಸುಮಾರು ೧೦೦ ಕಿ.ಮೀ. ದೂರದಲ್ಲಿದೆ. ಅದೂ ಅಲ್ಲದೆ ಬಳಪದ ಕಲ್ಲಿನ ನಿಕ್ಷೇಪದ ಪರಿಮಾಣ (Quantity) ಅಲ್ಲ.

ಬಳಪದ ಕಲ್ಲನ್ನು ಗಣಿ ಮಾಡಿ ಹೊರತೆಗೆದು, ಅದರಲ್ಲಿ ಕೆತ್ತನೆಗೆ ಉಪಯುಕ್ತವಾಗಬಹುದಾದಂಥ, ನ್ಯೂನ್ಯತೆಗಳಿಲ್ಲದ (Defect free) ದಿಮ್ಮಿಗಳನ್ನು (Blocks) ಆರಿಸಬೇಕಾಗುತ್ತದೆ. ಬಳಪದ ಕಲ್ಲಿನಲ್ಲಿ ಉಪಯುಕ್ತ ನ್ಯೂನತೆಗಳಿರುವ ಭಾಗ ಹೆಚ್ಚು. ಅದು ಅಲ್ಲದೆ ಬಳಪದ ಕಲ್ಲು ಅತಿ ಮೃದು ಮೆತ್ತನೆಯ ಶಿಲೆಯಾದುದರಿಂದ ಅದರಲ್ಲಿರುವ ನೀರಿನ ಅಂಶವನ್ನು ಹೊರಹಾಕಬೇಕಾಗುತ್ತದೆ. ಇಲ್ಲವಾದರೆ ಕಟ್ಟಡ ಬೇಗ ಶಿಥಿಲಗೊಳ್ಳುತ್ತದೆ. ಆದ್ದರಿಂದ ಬೃಹತ್ ರಚನೆಗಳಿಗೆ ಬೇಕಾಗುವಷ್ಟು ಪ್ರಮಾಣದ ಕಲ್ಲು, ಈ ಶಿಲೆಯಲ್ಲಿ ಸಿಗುವುದು ಕಷ್ಟ. ಹೀಗೆ ವಿಜಯನಗರದ ಕಾಲದ ಶಿಲ್ಪಗಳು ಮತ್ತು ಸ್ಥಪತಿಗಳು ತಮ್ಮ ಹಿಂದಿನ ಕಾಲದಲ್ಲಿ ಬಳಸಲಾದ ಶಿಲೆಯ ಗುಣಾವಗುಣಗಳನ್ನು ಅರಿತಿದ್ದರು.

ಆದರೆ, ಇದಕ್ಕೆ ಬದಲಾಗಿ ಹಂಪೆಯಲ್ಲಿಯೇ ಸಿಗುವ ಅಪಾರ ಪ್ರಮಾಣದ ಕಣಶಿಲೆಯನ್ನು ಈ ಸ್ಥಪತಿಗಳು ಸಹಜವಾಗಿಯೇ ಆರಿಸಿಕೊಂಡರು. ಕಣಶಿಲೆಯು ಬೃಹತ್ ರಚನೆಗಳಿಗೆ ಬೇಕಾಗುವ ದಿಮ್ಮಿಗಳನ್ನು ನೀಡಬಲ್ಲದು. ಹಂಪೆಯಲ್ಲಿ ಸಿಗುವ ಶಿಲೆ ಬೂದು (Grey Granite) ಬಣ್ಣದ ಮಧ್ಯಮ ಗಾತ್ರದ ಹರಳುಗಳನ್ನು (Meduim grained) ಹೊಂದಿರುವ ಕಣ ಶಿಲೆ (Grey Granite), ಸಮನಾದ ಹರಳುಗಳು ಮತ್ತು ಬೂದು ಬಣ್ಣ, ಸ್ಥಪತಿಗಳನ್ನು ಆಕರ್ಷಿಸಿರಬೇಕು. ಅತಿ ಸೂಕ್ಷ್ಮ ಕೆತ್ತನೆಯ ರಚನೆಗಳನ್ನು (ತುಲನಾತ್ಮಕವಾಗಿ) ಈ ಶಿಲೆಯಲ್ಲಿ ನಿರ್ಮಿಸಲು ಸಾಧ್ಯವಾಗದಿದ್ದರೂ, ಸಮನಾದ ಹರಳು ಮತ್ತು ಕಂದು ಬಣ್ಣದಿಂದಾಗಿ ಈ ಶಿಲೆಯು ಬೃಹತ್, ಭವ್ಯ ಹಾಗೂ ಕಲಾತ್ಮಕ ರಚನೆಗಳಿಗೆ ಸೂಕ್ತ ಎಂಬುದನ್ನು ಈ ಸ್ಥಪತಿಗಳು ಅರಿತಿದ್ದರು. ಅಲ್ಲದೆ, ಕಣ ಶಿಲೆ ಬಳಪದ ಶಿಲೆಗಿಂತ ತುಂಬಾ ಕಠಿಣ ಹಾಗೂ ಶಕ್ತಿಶಾಲಿ, ಈ ಬಗೆಯ ಕಾರಣಗಳಿಂದಾಗಿ ಸಹಜವಾಗಿಯೇ ಸ್ಥಪತಿಗಳು ಇಲ್ಲಿಯೇ ಲಭ್ಯವಿರುವ ಕಣ ಶಿಲೆಯನ್ನು ಸಾರ್ಥಕವಾಗಿ ಬಳಸಿದರು.

**ಶಿಲೆಗಳ ವಿವರಣೆ**

ಈ ಕಣಶಿಲೆಯು ಮಧ್ಯಮ ಗಾತ್ರದ ಖನಿಜಗಳ ಹರಳುಗಳುಳ್ಳ ೦.೫ ಮಿ.ಮೀ. ೧೦ ಮಿ.ಮೀ. ಶಿಲೆ. ಈ ಶಿಲೆಯಲ್ಲಿ ಕ್ವಾಟ್ಜ್(Quartz) ಬಯೋಟೈಟ್(Biotite) ಮತ್ತು ಹಾರ್ನಬ್ಲೆಂಡ್(Hornblende) ಕಡಿಮೆ ಪ್ರಮಾಣದಲ್ಲಿರುವ ಉಪ ಖನಿಜಗಳು. ಕಣ ಶಿಲೆಯು ಅಗ್ನಿಜನ್ಮ ಶಿಲೆ (Igneousrock). ಈ ಶಿಲೆಯು ಶಿಲಾಪಾಕವು (Magma) ಗಟ್ಟಿಗೊಳ್ಳುವುದರಿಂದ ಜನಿಸುತ್ತದೆ. ಗಟ್ಟಿಗೊಳ್ಳುವ ಪ್ರಕ್ರಿಯೆಯಲ್ಲಿಯೇ ಈ ಶಿಲೆಯ ಖನಿಜಗಳು ಜನಿಸುವುದರಿಂದ ಒಂದಕ್ಕೊಂದು ಸಹಜವಾಗಿಯೇ ಗಟ್ಟಿಯಾಗಿ ಬೆಸೆದುಕೊಂಡಿರುತ್ತದೆ.

ಹಂಪೆಯ ಸ್ಮಾರಕಗಳಲ್ಲಿ ತೀರ ಅಪರೂಪವಾಗಿ ಬಳಸಲಾದ ಶಿಲೆ ಡಾಲೋರೈಟ್ಒಡ್ಡು ಶಿಲೆ (Dolerite dyke rock). ಇದು ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ. ಇದರ ಬಣ್ಣ ಕಪ್ಪು ಅಥವಾ ಹಸಿರು ಮಿಶ್ರಿತ ಕಪ್ಪು. ಇದು ಅತಿ ಸೂಕ್ಷ್ಮ ಕಣಗಳ ಶಿಲೆ. ಇದರಲ್ಲಿರುವ ಖನಿಜಗಳನ್ನು ಸಾಮಾನ್ಯವಾಗಿ ಬರಿಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಈ ಶಿಲೆಯ ಅತಿ ತೆಳುವಾದ ಸ್ಲೈಡನ್ನು ಸಿದ್ಧಪಡಿಸಿ, ಆ ಸ್ಲೈಡನ್ನು ವಿಶೇಷ ಬಗೆಯ ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಮಾತ್ರ ಇದರ ಖನಿಜಗಳನ್ನು ನೋಡಲು ಸಾಧ್ಯ. ಪೈರಾಕ್ಸೀನ್ ಗುಂಪಿಗೆ ಸೇರಿದ ಖನಿಜಗಳು ಮತ್ತು ಫೆಲ್‌ಫ್‌ಖನಿಜಗಳು ಪ್ರಮುಖ ಖನಿಜಗಳು ಉಪಖನಿಜಗಳು. ಬಡವಿಲಿಂಗ ಮತ್ತು ಹಜಾರರಾಮ ದೇವಾಲಯದ ರಂಗಮಂಟಪದ ಇವುಗಳನ್ನು ಕಡೆಯಲು ಡಾಲೊರೈಟ್ಒಡ್ಡು ಶಿಲೆಯನ್ನು ಬಳಸಲಾಗಿದೆ. (ಚಿತ್ರ ೩)

**ಶಿಲೆಯ ಶಿಥಿಲೀಕರಣ ಪ್ರಕ್ರಿಯೆ**

ಯಾವುದೇ ಶಿಲೆಯು, ಎಷ್ಟೇ ಗಟ್ಟಿಯಾದರೂ ನೈಸರ್ಗಿಕ ನಿಯೋಗಿಗಳಾದ (Natural Agents) ಮಳೆ, ಬಿಸಿಲು, ಚಳಿ, ನೀರು ಮತ್ತು ಗಾಳಿಯ ಕ್ರಿಯೆಗಳಿಂದಾಗಿ ಕಾಲಾನುಕ್ರಮದಲ್ಲಿ ಶಿಥಿಲಗೊಳ್ಳುತ್ತದೆ. ಈ ನೈಸರ್ಗಿಕ ನಿಯೋಗಿಗಳ ಶಿಥಿಲೀಕರಣ ಕ್ರಿಯೆ (Weathering process) ಶಿಲೆಯ ಮೇಲೆ ಪರಿಣಾಮಗಳನ್ನು ಸಂಕ್ಷಿಪ್ತದಲ್ಲಿ ನೋಡೋಣ.

೧. ಶಿಲೆಯು ಒಂದು ಬಣ್ಣದಾಗಿದ್ದರೂ ಹೊರಮೈಮೇಲೆ ತಿಳಿ ಕೆಂಪು ಬಣ್ಣದ ಪೊರೆ (Layer) ಬರುತ್ತದೆ. ಶಿಲೆಯಲ್ಲಿರುವ ಕಬ್ಬಿಣಾಂಶವನ್ನು ಹೊಂದಿರುವ ಖನಿಜಗಳು ಶಿಥಿಲಗೊಳ್ಳುವುದರಿಂದ ಈ ಕೆಂಪು ಬಣ್ಣದ ಪೊರೆ ನೈಸರ್ಗಿಕ ಪೊರೆ ಕಟ್ಟಿಕೊಳ್ಳುತ್ತದೆ.

೨. ಶಿಲೆಯಲ್ಲಿರುವ ಛೇದಗಳು (Fractures) ಶಿಥೀಲಕರಣ ಕ್ರಿಯೆಯಿಂದ ದೊಡ್ಡದಾಗಿ ಶಿಲೆಯನ್ನು ಅಭದ್ರಗೊಳಿಸುತ್ತದೆ.

೩. ಉಷ್ಣಾಂಶದ ವ್ಯತ್ಯಾಸದಿಂದ ಶಿಲೆಯು ಸಿಪ್ಪೆಯಂತೆ ಸುಲಿಯಲ್ಪಡುತ್ತದೆ (E x foliation).

೪. ಧೂಳು ಸೇರಿಕೊಂಡು ಶಿಲೆಯ ನೈಸರ್ಗಿಕ ಬಣ್ಣ ಮಸಕಾಗುತ್ತದೆ.

ಈ ಮೇಲ್ಕಾಣಿಸಿದ ಪರಿಣಾಮಗಳನ್ನು ಗುಡ್ಡಗಳಲ್ಲಿರುವ ಶಿಲೆಯ ಮೇಲೆ ಕಂಡಂತೆ, ಈ ಶಿಲೆಗಳನ್ನು ಬಳಸಿದ ಶಿಲ್ಪಗಳ ಮೇಲೂ ಕಾಣಬಹುದು. ದೇವಾಲಯಗಳ ಮೇಲೆ ಮತ್ತು ಶಿಲ್ಪಗಳ ಮೇಲೆ ನೈಸರ್ಗಿಕ ನಿಯೋಗಿಗಳಿಗಿಂತಲೂ ಮಾನವನ ಕೈಗಳು ಮಾಡುವ ದುಷ್ಪರಿಣಾಮಗಳು ಅತ್ಯಂತ ಘೋರ ಹಾಗೂ ಗಂಭೀರ ಎಂಬುದಕ್ಕೆ ಹಂಪೆಯಲ್ಲಿ ಭಗ್ನಗೊಂಡಿರುವ ಮತ್ತು ವಿರೂಪಗೊಂಡಿರುವ ಸ್ಮಾರಕಗಳೇ ಸಾಕ್ಷಿ.

**ಸಂರಕ್ಷಣಾ ಕ್ರಮಗಳು**

ಯಾವುದೇ ಐತಿಹಾಸಿ ಸ್ಮಾರಕಗಳನ್ನು ನಮ್ಮ ಐತಿಹಾಸಿಕ ಪರಂಪರೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಸಂರಕ್ಷಿಸಬೇಕಾಗುತ್ತದೆ. ಹೀಗೆ ಸ್ಮಾರಕಗಳನ್ನು ಸಂರಕ್ಷಿಸುವಾಗ, ಆ ಸ್ಮಾರಕದ ನೈಸರ್ಗಿಕ ರೂಪ ಮತ್ತು ಬಣ್ಣ ಅಂದಗೆಡದಂತೆ ನೋಡಿಕೊಳ್ಳಬೇಕು. ಇದೇ ಸಂರಕ್ಷಣಾ ಕ್ರಮದ ಮೂಲತತ್ವ. ಈ ತತ್ವಕ್ಕೆ ಅನುಗುಣವಾಗಿ ಕೆಲವು ಸಾಮಾನ್ಯ ಕ್ರಮಗಳನ್ನು ಈ ಕೆಳಗೆ ನೀಡಲಾಗಿದೆ.

೧. ಸ್ಮಾರಕಗಳ ಮೇಲೆ ಕೂತಿರುವ ಧೂಳನ್ನು ಒಣ ಆದರೆ ಮೃದುವಾದ ಬಟ್ಟೆಯಿಂದ ಒರೆಸಬೇಕು.

೨. ಅಪರೂಪಕ್ಕೆ ನೀರು ಮತ್ತು ಸಾಬೂನಿನಿಂದ ತೊಳೆಯಬಹುದು. ಆದರೆ ತೊಳೆದ ನಂತರ ತೇವಾಂಶವಿಲ್ಲದೆ ಒರೆಸಬೇಕು.

೩. ತುಕ್ಕು ಹತ್ತಿದಂತೆ ಕಾಣುವ ಪೊರೆಯನ್ನು ದುರ್ಬಲ ಆಮ್ಲದಿಂದ (ಉದಾಹರಣೆಗೆ ೨% ಹೈಡ್ರೋಫ್ಲೋರಿಕ್ಆಮ್ಲ) ತೊಳೆದು ತೆಗೆಯಬಹುದು. ನಂತರ ಪುನಃ ನೀರನಿಂದ ತೊಲೆದು ಆಮ್ಲದಂಶ ಸ್ಮಾರಕದ ಮೇಲೆ ಉಳಿಯದಂತೆ ಒರೆಸಬೇಕು.

೪. ದೊಡ್ಡ ಗಾತ್ರದ ಸ್ಮಾರಕದ ಮೇಲೆ, ತುಂಬಾ ಗಟ್ಟಿಯಾದ ಪೊರೆ ಅಥವಾ ಧೂಳು ಕೂತಿದ್ದರೆ ಅದನ್ನು ಮರಳನ್ನು ಬ್ಲಾಸ್ಟ್‌ಮಾಡಿ (Send blasting) ಅಥವಾ ಒತ್ತಡದಿಂದ ಗಾಳಿಯನ್ನು ಕೊಳವೆ ಮೂಲಕ ಹಾಯಿಸುವುದರಿಂದ ಸ್ವಚ್ಛಗೊಳಿಸಬಹುದು.

೫. ಮಳೆಗಾಲಕ್ಕಿಂತ ಪೂರ್ವದಲ್ಲಿ ಅಥವಾ ಮಸ್ತಕಾಭಿಷೇಕಕ್ಕಿಂತ ಪೂರ್ವದಲ್ಲಿ ಲಿಕ್ವಿಡ್‌ಪ್ಯಾರಾಫಿನ್(Liquid Paraffin) ಲೇಪನ ಮಾಡಬೇಕು. ಆದರೆ ಈ ಪ್ಯಾರಾಫಿನ್‌ಲೇಪನಕ್ಕಿಂತ ಮುಂಚೆ ಶಿಲ್ಪದೊಳಗೆ ತೇವಾಂಶವಿರಕೂಡದು.

೬. ಸ್ಮಾರಕಗಳು ಅಥವಾ ಶಿಲ್ಪಗಳು ತುಂಡುಗಳಾಗಿ ಒಡೆದು ಹೋದರೆ ತುಂಡುಗಳನ್ನು ಕೆಲ ವಿಶೇಷ ಬಗೆಯ ರೆಸಿನ್‌ಮತ್ತು ಹಾರ್ಡನರ್ ಗಳನ್ನು ಬಳಸಿ ಜೋಡಿಸಿ ಪುನರ್ ರಚಿಸಬೇಕು.

೭. ನಮ್ಮ ಜನರಲ್ಲಿ ಶಿಲ್ಪಗಳಿಗೆ ಮತ್ತು ದೇವಾಲಯಗಳ ಕಂಬಗಳಿಗೆ ಎಣ್ಣೆ ಸುರಿವ ಕೆಟ್ಟ ಪದ್ಧತಿ ಇದೆ. ಇದರಿಂದ ಕೆಲವೇ ವರ್ಷಗಳಲ್ಲಿ ಶಿಲ್ಪದ ಮೇಲೆ ಕಪ್ಪು ಮೇಣದಂತೆ ಜಿಡ್ಡಿನ ದಪ್ಪನೆಯ ಪೊರೆ ಬೆಳೆಯುತ್ತದೆ. ಕಲೆ ಕಾಣದೆ, ಅಸಹ್ಯಕರವಾಗಿ ಕಾಣುವ ಒಂದು ಕಪ್ಪು ಮುದ್ದೆಯಂತೆ ಕಾಣುತ್ತದೆ. ಸುಂದರ ಶಿಲ್ಪ, ಈ ಪದ್ಧತಿಯನ್ನು ಜನರು ವರ್ಜಿಸಬೇಕು. ಅವಶ್ಯವೆನಿಸಿದರೆ ಕಾನೂನಿನ ರೀತಿ ಕ್ರಮಕೈಗೊಳ್ಳಬೇಕು.

ಕೊನೆಯಲ್ಲಿ ಒಂದು ಮಾತು. ನಾನು ಮೇಲೆ ಹೇಳಿದ ಸಂರಕ್ಷಣಾ ಕ್ರಮಗಳೆಲ್ಲಾ ಸರ್ಕಾರಿ ಇಲಾಖೆ ಅಥವಾ ಒಂದು ಸಂಬಂಧಪಟ್ಟ ಸಂಸ್ಥೆ ತೆಗೆದುಕೊಳ್ಳಬಹುದಾದ ಕ್ರಮಗಳು. ಇದಕ್ಕಿಂತಲೂ ದೊಡ್ಡ ಜವಾಬ್ದಾರಿ ಸಾಮಾನ್ಯ ಜನರ ಮೇಲೆ ಇದೆ. ಸ್ಮಾರಕಗಳ ಮೇಲೆ ಹೆಸರನ್ನು ಕೆತ್ತುವುದು, ಬಣ್ಣ ಹಚ್ಚುವುದು, ತಾರೀಖುಗಳನ್ನು ಕೆತ್ತುವುದು ಇತ್ಯಾದಿ ವಿರೂಪಗಳಿಸುವ ಕೆಲಸಗಳನ್ನು ನಮ್ಮ ಸ್ಮಾರಕಗಳಿಗೆ ಅಪಾರ ಹಾಗೂ ಪರಿಹರಿಸಲಾಗದಂಥ ಹಾನಿ ಉಂಟಾಗುತ್ತದೆ. ಈ ವಿರೂಪಗೊಳಿಸುವ ದುಷ್ಟ ಕೆಲಸಗಳಿಗೆ ನಾವು ಎಷ್ಟು ಬೇಗ ಪೂರ್ಣ ವಿರಾಮ ಹಾಕುತ್ತೇವೆಯೋ ಅಷ್ಟು ಒಳ್ಳೆಯದು. ಹಂಪೆಯ ಸ್ಮಾರಕಗಳಿಗೂ ಈ ಮಾತು ಅನ್ವಯವಾಗುತ್ತದೆ. ಹಲವಾರು ಚದುರ ಕಿ.ಲೋ. ಮೀಟರುಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿರುವ ಹಂಪೆಯ ಸ್ಮಾರಕಗಳು ನಮ್ಮೆಲ್ಲರ ಅಮೂಲ್ಯ ಆಸ್ತಿ. ಇಲ್ಲಿಯ ಸ್ಮಾರಕಗಳು ಕೇವಲ ನಮ್ಮ ಹೆಮ್ಮೆಯ ಆಸ್ತಿಯಲ್ಲ. ಇಡೀ ಮಾನವ ಜನಾಂಗವೇ ಹೆಮ್ಮೆ ಪಡಬಹುದಾದಂಥ ಕಲಾ ಪರಂಪರೆ. ಅದರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಈ ಅರಿವು ಶ್ರೀಸಾಮಾನ್ಯನಲ್ಲಿ ಮೂಡಿಬರಲಿ ಎಂದು ಹಾರೈಸುತ್ತೇನೆ.

**ಆಕರ**

ವಿಜಯನಗರ ಅಧ್ಯಯನ, ಸಂ. ೧೦, ೨೦೦೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೧೫೩-೧೫೯.

# ಲೇಖಕರ ವಿಳಾಸಗಳು

**೧. ಡಾ.ಆರ್.ಎಚ್. ಕುಲಕರ್ಣಿ**

ಕಲಾ ಇತಿಹಾಸಕಾರ, ೧೦೧೪-೧, ૩ನೇ ಅಡ್ಡರಸ್ತೆ, ಆಶ್ರಮ ಶಾಲೆ, ಹಿನಕಲ್, ಮೈಸೂರು

**೨. ಡಾ. ಎಂ. ಕೊಟ್ರೇಶ್**

ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೩. ಶ್ರೀ ಸಿ.ಟಿ.ಯಂ. ಕೊಟ್ರಯ್ಯ**

೩೪೦ ಎಂ.ಬ್ಲಾಕ್, ಕುವೆಂಪು ನಗರ, ಮೈಸೂರು ೫೭೦ ೦೨೩

**೪. ಡಾ. ಎಚ್.ಚಂದ್ರಶೇಖರಶಾಸ್ತ್ರಿ**

ಉಪನ್ಯಾಸಕರು, ವಿಜಯನಗರ ಕಾಲೇಜು, ಹೊಸಪೇಟೆ

**೫. ಡಾ.ಎಚ್.ಚಂದ್ರಶೇಖರ್**

ಸಂಗಮ, ಎಮ್.ಐ.ಜಿ. ೭೭, ಕೆ.ಹೆಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರ ನಗರ, ಬೆಂಗಳೂರು

**೬. ಡಾ. ಚಲುವರಾಜು**

ಹಿರಿಯಶ್ರೇಣಿ ಅಧ್ಯಾಪಕರು, ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೭. ಡಾ. ಜಗದೀಶ್**

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಪಕ್ಕೆ ಅನಿನಿ, ಯಾದವಗಿರಿ, ಮೈಸೂರು ೫೭೦ ೦೨೦

**೮. ಡಾ. ಜಾಜಿ ದೇವೇಂದ್ರಪ್ಪ**

ಉಪನ್ಯಾಸಕರು, ಗುಡ್‌ನ್ಯೂಸ್‌ಪದವಿಪೂರ್ವ ಕಾಲೇಜು, ಕಲಘಟಗಿ, ಧಾರವಾಡ ಜಿಲ್ಲೆ

**೯. ಡಾ. ಜೈನುಲ್ಲಾ ಬಳ್ಳಾರಿ**

ಸಹಾಯಕ ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೧೦. ಶ್ರೀ ಎಚ್.ಟಿ. ತಳವಾ**

ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

**೧೧. ಶ್ರೀ ದಯಾನಂದ ಪಾಟೀಲ**

ನಿವೃತ್ತ ಕ್ಯೂರೇಟರ್, ವಸ್ತು ಸಂಗ್ರಹಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**೧೨. ಶ್ರೀಮತಿ ಕೆ. ನಾಗಪುಷ್ಪಲತಾ**

ಉಪನ್ಯಾಸಕರು, ಸರಕಾರಿ ಬಾಲಕೀಯರ ಪದವಿಪೂರ್ವ ಕಾಲೇಜು, ಹೊಸಪೇಟೆ

**೧೩. ಡಾ. ಪುರುಷೋತ್ತಮ ಬಿಳಿಮಲೆ**

ಡೈರೆಕ್ಟರ್, ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಗುಡಗಾವ್, ಹರಿಯಾಣ

**೧೪. ಡಾ. ಕೆ.ಪಿ. ಪೂಣಚ್ಚ**

ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಜನಪಥ್, ನವದೆಹಲಿ

**೧೫. ಡಾ.ಸಿ. ಮಹದೇವ**

ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೧೬. ಡಾ. ಯು. ಮಲ್ಲಿಕಾರ್ಜುನ**

ಗ್ರಂಥಾಲಯ ಸಹಾಯಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೧೭. ಡಾ.ಎಸ್.ರಾಜಶೇಖರ**

ನಿವೃತ್ತ ಪ್ರಾಧ್ಯಾಪಕರು, ಸೌರಭ, ಪ್ಲಾಟ್‌ನಂ. ೧೧, ೧೪ನೇ ಕ್ರಾಸ್, ರಾಣಿಚೆನ್ನಮ್ಮ ನಗರ, ಧಾರವಾಡ

**೧೮. ಡಾ. ಸಿ.ಎಸ್. ವಾಸುದೇವನ್**

ಪ್ರವಾಚಕರು ಮತ್ತು ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಹಿರಿಯಶ್ರೇಣಿ ಅಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೨೦. ಡಾ. ಎಸ್.ವಿ. ವೆಂಕಟೇಶಯ್ಯ**

ಅಧೀಕ್ಷಕರು, ಧಾರವಾಡ ವಲಯ, ಭಾರತೀಯ ಪುರಾತತ್ವ, ಸರ್ವೇಕ್ಷಣಾ ಇಲಾಖೆ, ಧಾರವಾಡ

**೨೧. ಡಾ. ಶರಣಬಸಪ್ಪ ಕೋಲ್ಕಾರ್**

ಪ್ರಾಂಶುಪಾಲರು, ಕಲ್ಮಠ ಶ್ರೀ ಚನ್ನಬಸವ ಸ್ವಾಮಿ ಮಹಿಳಾ ಮಹಾವಿದ್ಯಾಲಯ, ಗಂಗಾವತಿ

**೨೨. ಶ್ರೀ ವಿ.ಎಸ್. ಸಂಪತ್ಕುಮಾರಾಚಾರ್ಯ**

೯೨೭/೧, ಶ್ರೀ ಘನಶ್ಯಾಮ್, ೧ನೇ ಮುಖ್ಯರಸ್ತೆ, ಲಕ್ಷ್ಮೀಪುರ, ಮೈಸೂರು ೫೭೦ ೦೦೪

**೨೩. ಡಾ. ಅ. ಸುಂದರ**

ನಿವೃತ್ತ ಪ್ರಧ್ಯಾಪಕರು, ಸೌಂದರ್ಯ ಶ್ರೀ ಭಾರತಿನಗರ, ಧಾರವಾಡ

**೨೪. ಡಾ. ಎಸ್.ವೈ. ಸೋಮಶೇಖರ**

ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ